3.4.6.

ISBN/~~ISSN~~

others

Scanned with CamScanner



ಲೇಖನ: ಕುಮೆಪು ದರ್ಶನದಲ್ಲಿ ಭಾಷೆ, ಕ್ಷೇತ್ರ ಮತ್ತು ಸಂಸ್ಕೃತಿ:

ISBN : 978-81-950000-3-6

ಡಿಸೆಂಬರ್ 2020

Scanned with CamScanner

ಮುನ್ನುಡಿ

ಅನುಸೃಷ್ಟಿ ಸಂಕಲನಕ್ಕೆ ಕೆಲವು ಮಾತುಗಳು

ಅನುಸೃಷ್ಟಿ ಸಂಕಲನವು ಒಟ್ಟು ೨೨ ಲೇಖನಗಳ ಸಂಕಲನ. ಇದರ ಸಂಪಾದಕರು ಗೆಳೆಯರಾದ ಡಾ. ವೆಂಕಟೇಶ್ ಎಚ್. ಮತ್ತು ಪ್ರಹ್ಲಾದ ಡಿ.ಎಂ. ಇದಕ್ಕೆ ನನ್ನಿಂದ ಮುನ್ನುಡಿ ರೂಪದ ಮಾತುಗಳನ್ನು ಬಯಸಿದ್ದಾರೆ. ಇಂತಹ ಸಂಕಲನಗಳಿಗೆ ಮುನ್ನುಡಿ ಅಗತ್ಯ ಕಡಿಮೆ. ಸಂಪಾದಕರೇ ಇದಕ್ಕೆ ಪ್ರಸ್ತಾವನೆ ಬರೆಯಬೇಕು. ಅವರು ಬರೆಯುವ ಸಂಪಾದನೆಯೇ ಇಂತಹ ಸಂಕಲನಕ್ಕೆ ಮುನ್ನುಡಿಯಂತೆ ಇರುತ್ತದೆ. ಯಾಕೆಂದರೆ ಈ ಲೇಖನಗಳನ್ನು ತರಿಸಿಕೊಂಡ ರೀತಿ, ಆಯ್ಕೆ ಮಾಡಿದ ವಿಧಾನ ಈ ಎಲ್ಲವೂ ಸಂಪಾದಕರಿಗೆ ಗೊತ್ತಿರುತ್ತದೆಯೇ ಹೊರತು ಹೊರಗಿನವರಿಗೆ ಗೊತ್ತಿರುವುದಿಲ್ಲ. ಜೊತೆಗೆ ಒಟ್ಟಾರೆ ಈ ಸಂಕಲನದ ಉದ್ದೇಶ ಏನು ಎಂಬುದೂ ಕೂಡ ಸಂಪಾದಕರಿಗೆ ಗೊತ್ತಿರುತ್ತದೆ. ಅಂತಹ ವಿವರಗಳನ್ನು ಅವರೇ ಬರೆಯುವುದು ಸೂಕ್ತ ಮತ್ತು ಸರಿಯಾದ ಕ್ರಮ. ಒಂದು ವರ್ಷಕ್ಕೆ ಇಂತಹ ಹಲವಾರು ಸಂಕಲನಗಳು, ಸಂಪಾದನ ಕೃತಿಗಳು ಪ್ರಕಟವಾಗುತ್ತಲೇ ಇರುತ್ತವೆ. ಸಂಪಾದಕರಿಗೆ ಅವುಗಳ ಉದ್ದೇಶ, ವ್ಯಾಪ್ತಿ ಇತ್ಯಾದಿಗಳು ಸ್ಪಷ್ಟವಿರುತ್ತವೆ. ಅಂತಹ ಸ್ಪಷ್ಟತೆಯನ್ನು ಅವರೇ ವಿವರಿಸುವುದು ಒಳ್ಳೆಯದು. ಏನೇ ಇರಲಿ, ಡಾ. ವೆಂಕಟೇಶ್ ಅವರ ಗೆಳೆತನದ ಪ್ರೀತಿಯ ಬಲೆಯಿಂದ ತಪ್ಪಿಸಿಕೊಳ್ಳಲು ಆಗದೆ ಕೆಲವು ಮಾತು ಬರೆಯಲು ಒಪ್ಪಿಕೊಂಡೆ ಅಷ್ಟೆ.

ಈ ಸಂಕಲನದಲ್ಲಿ ಒಟ್ಟು ೨೨ ಲೇಖನಗಳಿವೆ. ಇವು ಸಾಂಪ್ರದಾಯಿಕವಾಗಿ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಪರಂಪರೆ ಮುಂತಾದ ವಿಷಯಗಳನ್ನು ಒಳಗೊಂಡಿವೆ. ವಚನಗಳು, ತತ್ವಪದಗಳು, ಸಣ್ಣಕತೆಗಳು, ಕಾದಂಬರಿ, ಬುಡಕಟ್ಟು, ಕೃಷಿ ಉಪಕರಣಗಳು, ಜನಪದ ಈ ಮುಂತಾದ ವಿಷಯಗಳನ್ನು ಕುರಿತ ಲೇಖನಗಳಿವೆ. ಈ ಲೇಖನಗಳಲ್ಲಿ ಪ್ರಧಾನವಾಗಿ ಮಾಹಿತಿಗಳು, ವಿವರಣೆಗಳು ಇವೆ. ಕೆಲವು ಆಯ್ಕೆಮಾಡಿಕೊಂಡ ವಿಷಯದ ಪರಿಚಯಾತ್ಮಕ ಬರಹಗಳಾಗಿವೆ. ಹಾಗಾಗಿ ಇದರ ಓದುಗರು ಈ ಲೇಖನಗಳಲ್ಲಿ ಆಳವಾದ ಒಳನೋಟಗಳಿಗಿಂತಲೂ ಹೆಚ್ಚಾಗಿ ಮಾಹಿತಿಗಳು ಹಾಗೂ ವಿವರಣೆಗಳ ನೆಲೆಯಲ್ಲಿ ಓದಬೇಕಾಗುತ್ತದೆ. ಇದರಲ್ಲಿರುವ ಲೇಖನಗಳನ್ನು ಬರೆದಿರುವವರು ಸಾಹಿತ್ಯ ವಿಮರ್ಶೆಯಲ್ಲೊ, ಸಂಶೋಧನಾ ಬರವಣಿಗೆಯಲ್ಲೊ, ಕನ್ನಡದ ವೈಚಾರಿಕ ಚಿಂತನೆಗಳಲ್ಲೊ ನುರಿತ ಹಾಗೂ ಪಳಗಿದವರು ಅಲ್ಲ; ಈಗ ಸಾಹಿತ್ಯವನ್ನು ಪ್ರವೇಶ ಮಾಡುತ್ತಿರುವವರು ಮತ್ತು ಬರೆಯುವ ಧೈರ್ಯವನ್ನು

Scanned with CamScanner

ಕಟ್ಟಿಕೊಳ್ಳುತ್ತಿರುವವರು. ಹಾಗಾಗಿ ಇವರ ಬರವಣಿಗೆಯನ್ನು ಓದುಗರು ಪ್ರೋತ್ಸಾಹಿಸಬೇಕು ಮತ್ತು ಬೆಂಬಲಿಸಬೇಕು; ಹುರಿದುಂಬಿಸಬೇಕು. ಕೆಲವೊಮ್ಮೆ ಸಂಶೋಧನೆಯ, ವಿಮರ್ಶೆಯ ಗುಣಮಟ್ಟಕ್ಕಿಂತಲೂ ಹೆಚ್ಚಾಗಿ ಶೈಕ್ಷಣಿಕ ಪದವಿಯ ಅಗತ್ಯಕ್ಕಾಗಿ ಇಂತಹ ಬರವಣಿಗೆ ಮಾಡಿಸುವುದು, ಅವನ್ನು ಒಂದು ಕಡೆ ಸಂಕಲಿಸಿ ಪ್ರಕಟಿಸುವುದು ಅನಿವಾರ್ಯ ಹಾಗೂ ಅಗತ್ಯವಾಗಿದೆ. ಈ ಅನಿವಾರ್ಯ ಹಾಗೂ ಅಗತ್ಯಗಳ ಭಾಗವಾಗಿ ಈ ಸಂಕಲನ ರೂಪುಗೊಂಡಂತಿದೆ. ಹಾಗಾಗಿ ಇದನ್ನು ಶೈಕ್ಷಣಿಕ ಅಗತ್ಯದ ಒಂದು ದಾಖಲೆ ಎಂದು ಪರಿಗಣಿಸಬೇಕಾಗಿದೆ. ಈಚಿನ ವರ್ಷಗಳಲ್ಲಿ ಇಂತಹ ಸಂಪಾದನಾ ಸಾಹಿತ್ಯದ ಒಂದು ಪ್ರಕಾರವೇ ಸೃಷ್ಟಿಯಾಗಿದೆ. ಅಭಿನಂದನಾ ಗ್ರಂಥಗಳು ಇಂತಹ ಸಾಹಿತ್ಯ ಪ್ರಕಾರದ ಮತ್ತೊಂದು ರೂಪ. ಅವುಗಳಲ್ಲಿಯೂ ಕೂಡ ಶೈಕ್ಷಣಿಕ ಹಾಗೂ ಅಕಾಡೆಮಿಕ್ ಗುಣಮಟ್ಟಕ್ಕಿಂತಲೂ ಹೆಚ್ಚಾಗಿ ಅದರ ಸುತ್ತಮುತ್ತ ಹೆಪ್ಪುಗಟ್ಟುವ ಬೇರೆ ಸಂಗತಿಗಳನ್ನೆ ಮುಖ್ಯವೆಂದು ಪರಿಗಣಿಸಬೇಕಾಗುತ್ತದೆ.

ಯುವ ಸಂಶೋಧಕರಿಂದ ಇಂತಹ ಬರವಣಿಗೆ ಮಾಡಿಸುವುದು, ಸಾಹಿತ್ಯವನ್ನು ಕುರಿತ ಅವರ ಆಲೋಚನೆ ಹಾಗೂ ಬರವಣಿಗೆಯಲ್ಲಿ ಅವರನ್ನು ತೊಡಗಿಸುವ ಡಾ. ವೆಂಕಟೇಶ ಎಚ್ ಇವರ ಪ್ರಯತ್ನ ಶ್ಲಾಘನೀಯ. ಇಲ್ಲಿ ಸಂಕಲನಗೊಂಡಿರುವ ಲೇಖನಗಳು ಯುವ ಸಂಶೋಧಕರ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಕುರಿತಂತೆ ಅವರ ಆಸಕ್ತಿ ಹಾಗೂ ಕುತೂಹಲವನ್ನು ತೋರಿಸುತ್ತವೆ. ಸಾಹಿತ್ಯ, ಸಂಸ್ಕೃತಿಯ ಓದು ಹಾಗೂ ಬರವಣಿಗೆಯಲ್ಲಿ ಆಸಕ್ತಿ ಮೂಡಿಸುವುದೂ ಕೂಡಾ ಇಂದಿನ ಶೈಕ್ಷಣಿಕ ವಾತಾವರಣದಲ್ಲಿ ಬಹಳ ಮುಖ್ಯವಾದ ಕೆಲಸ. ಆದರೆ ಲೇಖನ ಬರೆಯುವವರು ಮತ್ತೊಂದಿಷ್ಟು ಅಧ್ಯಯನ ಮಾಡುವ ಅಗತ್ಯವಿದೆ ಎಂದೆನಿಸುತ್ತದೆ. ಜೊತೆಗೆ ತಾವು ಆಯ್ಕೆಮಾಡಿಕೊಂಡ ವಿಷಯದಲ್ಲಿ ಈಗಾಗಲೇ ಕೆಲಸ ಮಾಡಿರುವಂತಹ ವಿದ್ವಾಂಸರ ಜೊತೆಯಲ್ಲಿ ಚರ್ಚೆ ಮಾಡುವಂತಹ ಅಗತ್ಯವಿತ್ತು ಎಂದೆನಿಸುತ್ತದೆ. ಆದಾಗ್ಯೂ ಇಲ್ಲಿ ಬರೆದಿರುವ ಯುವ ಸಂಶೋಧಕರು ಮುಂದೆ ಸಾಹಿತ್ಯ, ಸಂಸ್ಕೃತಿಯನ್ನು ಕುರಿತಂತೆ ಇನ್ನಷ್ಟು ಓದಬಲ್ಲ; ಮತ್ತಷ್ಟು ಬರೆಯಬಲ್ಲರು ಎಂಬುದನ್ನು ಇಲ್ಲಿರುವ ಲೇಖನಗಳು ತೋರಿಸಿವೆ. ಲೇಖನ ಬರೆದಿರುವ ಯುವ ಸಂಶೋಧಕರಿಗೆ ಮತ್ತು ಇವನ್ನು ಸಂಪಾದಿಸಿ, ಪ್ರಕಟಿಸುತ್ತಿರುವ ಡಾ. ವೆಂಕಟೇಶ ಎಚ್. ಮತ್ತು ಪ್ರಹ್ಲಾದ ಡಿ.ಎಂ ಅವರಿಗೆ ಅಭಿನಂದನೆಗಳನ್ನು ಹೇಳುತ್ತಿದ್ದೇನೆ.

೧೦, ಡಿಸೆಂಬರ್ ೨೦೨೦

ಡಾ. ಬಿ.ಎಂ. ಪುಟ್ಟಯ್ಯ
ಪ್ರಾಧ್ಯಾಪಕರು,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

Scanned with CamScanner

ISBN-978-81-950000-3-6

Annexure - 5



ಲೇಖನ: ಕುಮಾರ ದರ್ಶನದಲ್ಲಿ ಭಾಷೆ, ಕ್ಷಣ ಮತ್ತು ಸಂಸ್ಕೃತಿ:

ISBN : 978-81-950000-3-6

ಡಿಸೆಂಬರ್ 2020

Scanned with CamScanner

ಪರಿವಿಡಿ

೧. ಕುವೆಂಪು ದರ್ಶನದಲ್ಲಿ ಭಾಷೆ, ಶಿಕ್ಷಣ ಮತ್ತು ಸಂಸ್ಕೃತಿ 1
– ಡಾ. ಬಿ.ಎಂ. ಪುಟ್ಟಯ್ಯ

೨. ಅನುಭವ ಸಾಹಿತ್ಯದಲ್ಲಿ ಅರಿವಿನ ಪ್ರಜ್ಞೆ 13
– ಡಾ. ವೆಂಕಟೇಶ. ಹೆಚ್

೩. ಸಂತ ಶಿಶುನಾಳ ಶರೀಫರ ತತ್ವಪದಗಳಲ್ಲಿ ಹಿಂದೂ-ಮುಸ್ಲಿಂ ಸಾಮರಸ್ಯ -19
– ಓಬಳಯ್ಯ. ಆರ್

೪. ವಚನ ಸಾಹಿತ್ಯದಲ್ಲಿ: ಸೂತಕವೆಂಬುದು ಸೂತಕವಲ್ಲವೆನ್ನುವ ಪರಿಕಲ್ಪನೆಯ ನೆಲೆಗಳು -32
– ದೇವಿಂದ್ರಪ್ಪ

೫. ದಲಿತ ಸಣ್ಣಕತೆಗಳು: ತಾತ್ವಿಕತೆ -37
– ಬೋಮ್ಮಯ್ಯ. ಆರ್

೬. ಫಣಿಯಮ್ಮ ಕಾದಂಬರಿಯಲ್ಲಿ ಪ್ರತಿಭಟನೆ -41
– ಹನುಮಂತಪ್ಪ

೭. ಕುಸುಮಬಾಲೆ ಕಾದಂಬರಿಯ ಜಾತಿಕೇಂದ್ರಿತ ವಿನ್ಯಾಸಗಳು -49
– ನಾಗೇಶ ಎನ್.ಎಸ್

೮. ವಿಜಯನಗರ ಕಾಲದ ನರ್ತಕಿಯರು -55
– ಪ್ರಭಾಕರ. ಪಿ

೯. ಚದುರಂಗರ ಕಥಾ ಅಭಿವ್ಯಕ್ತಿ -61
– ಡಾ. ಗಂಗಾಧರ ಆರ್.ಹೆಚ್.

೧೦. ವಾಸ್ತವದ ನೆಲೆಯಲ್ಲಿ ಮಾಸ್ತಿಯವರ ಜೋಗ್ಯೋರ ಅಂಜಪ್ಪನ ಕೋಳಿ ಕಥೆಯ ವಿಶ್ಲೇಷಣೆ -69
–ಪಾಂಡುರಂಗ ಎಂ.ಪಿ.

೧೧. ದ್ವಿಚಕ್ರ ವಾಹನಗಳ ಮೇಲಿನ ಬರಹಗಳ ಭಾಷಾ ವೈಶಿಷ್ಟ್ಯತೆ -77
– ಹನುಮಂತ

Scanned with CamScanner

೧. ಕುವೆಂಪು ದರ್ಶನದಲ್ಲಿ ಭಾಷೆ, ಶಿಕ್ಷಣ ಮತ್ತು ಸಂಸ್ಕೃತಿ

– ಡಾ. ಬಿ.ಎಂ. ಪುಟ್ಟಯ್ಯ
ಪ್ರಾಧ್ಯಾಪಕರು,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕುವೆಂಪು ಅವರನ್ನು ಕವಿ, ಮಹಾಕವಿ, ಕಾದಂಬರಿಕಾರ, ನಾಟಕಕಾರ ಇಂತಹ ಪದಗಳ ಮೂಲಕ ಕರೆಯಲಾಗಿದೆ. ಕುವೆಂಪು ಅವರ ಬದುಕು ಮತ್ತು ಅವರ ಬರಹಗಳನ್ನು ಒಟ್ಟಾಗಿ ಗ್ರಹಿಸಿದಾಗ ಕುವೆಂಪು ಅವರು ಇಷ್ಟಕ್ಕೆ ಮಾತ್ರ ಸೀಮಿತರಾಗುವುದಿಲ್ಲ. ಸಿದ್ಧಮಾದರಿಯ ಸಾಹಿತ್ಯ ಪ್ರಕಾರಗಳ ಆಚೆಗೂ ಕುವೆಂಪು ಅವರ ಪ್ರತಿಭೆ ಮತ್ತು ದರ್ಶನ ವಿಸ್ತರಿಸಿ ಬೆಳೆದಿದೆ. ಕುವೆಂಪು ಅವರು ಭಾಷೆ, ಶಿಕ್ಷಣ ಮತ್ತು ಸಂಸ್ಕೃತಿಯನ್ನು ಕುರಿತು ಆಲೋಚಿಸಿರುವ ದರ್ಶನವನ್ನು ಇಲ್ಲಿ ಪರಿಶೀಲಿಸಲಾಗುವುದು.

ಕುವೆಂಪು ಅವರು ಸೃಜಿಸಿದ ಸಾಹಿತ್ಯ ಸಂಕೀರ್ಣವಾದುದು, ವಿಸ್ತಾರವಾದುದು ಮತ್ತು ಅತ್ಯಂತ ಆಳವಾದುದು. ಅವರು ವೇದ ಉಪನಿಷತ್ತುಗಳಿಂದ, ಭಾರತೀಯ ಕೆಲವು ದರ್ಶನಗಳಿಂದ ಮತ್ತು ಪಾಶ್ಚಾತ್ಯ ಕಾವ್ಯ ಹಾಗೂ ಕಾವ್ಯ ಚಿಂತನೆಗಳಿಂದ ಪ್ರಭಾವಿತರಾಗಿದ್ದಾರೆ. ಅವರ ಸಾಹಿತ್ಯವನ್ನು ಕುರಿತೋದು ಮತ್ತು ಅಧ್ಯಯನಗಳು ಪ್ರಾರಂಭವಾಗಿ ಸರಿಸುಮಾರು ಒಂದು ಶತಮಾನ ಆಗುತ್ತಾ ಬರುತ್ತಿದೆ. ೧೯೨೨ರಲ್ಲಿ ಕುವೆಂಪು ಅವರು ಇಂಗ್ಲಿಷ್‌ನಲ್ಲಿ ಬರೆದು ಪ್ರಕಟಿಸಿದ್ದ Beginners Muse ಕೃತಿಯನ್ನು ಜೇಮ್ಸ್ ಎಚ್.ಕಸಿನ್ಸ್ ಅವರು ಓದಿದರು. ಅವರು ಕುವೆಂಪು ಅವರಿಗೆ ಇಂಗ್ಲಿಷ್ ಭಾಷೆಯಲ್ಲಿ ಬರೆಯುವ ಮೊದಲು ನಿಮ್ಮ ನುಡಿಯಾದ ಕನ್ನಡದಲ್ಲೆ ಬರೆಯಿರಿ ಎಂಬ ಸಲಹೆ ಕೊಟ್ಟರು. ಅಲ್ಲಿಂದ ಮುಂದೆ ಕುವೆಂಪು ಅವರು ಕನ್ನಡದಲ್ಲಿ ಬರವಣಿಗೆ ಮಾಡಿದರು. ಈ ದೃಷ್ಟಿಯಲ್ಲಿ ಜೇಮ್ಸ್ ಎಚ್.ಕಸಿನ್ಸ್ ಅವರು ಕುವೆಂಪು ಅವರ ಸಾಹಿತ್ಯದ ಮೊದಲ ಓದುಗರು. ಕುವೆಂಪು ಅವರ ಸಾಹಿತ್ಯ ಸೃಷ್ಟಿಯನ್ನು ಸಮಗ್ರವಾಗಿ ಬದಲಿಸಿದ ಕೀರ್ತಿ ಕಸಿನ್ಸ್ ಅವರಿಗೆ ಸಲ್ಲುತ್ತದೆ. ಬಹುಶಃ ಯಾವ ದೊಡ್ಡ ಲೇಖಕರಿಗೂ ಇಂತಹ ಒಬ್ಬ ಓದುಗ ಸ್ಫೂರ್ತಿಗಲಾರ ಎಂದು ಕಾಣುತ್ತದೆ. ಈ ಕಾರಣಕ್ಕಾಗಿ ಇವರೊಬ್ಬ ಮಹತ್ವದ ಓದುಗನೆಂದು ನಿರ್ಧರಿಸಬಹುದು. ಅಲ್ಲಿಂದ ಇಲ್ಲಿಯವರೆಗೆ ಕುವೆಂಪು ಸಾಹಿತ್ಯವನ್ನು ಕನ್ನಡ ಓದುಗರು ಮತ್ತು ಬೇರೆ ಭಾಷೆಗೆ ಅನುವಾದಗೊಂಡ ಅವರ ಸಾಹಿತ್ಯವನ್ನು ಆ ಭಾಷೆಯ ಓದುಗರು ಓದುತ್ತಾ, ಅದರ ಬಗೆಗೆ ಆಲೋಚಿಸುತ್ತಾ,

Scanned with CamScanner

ತಮಗೆ ಬೇಕಾದ ವೈಚಾರಿಕತೆಯನ್ನು ಕಟ್ಟಿಕೊಳ್ಳುತ್ತಾ ಬಂದಿದ್ದಾರೆ. ಕುವೆಂಪು ಅವರು ಬೆರಳ್‌ಗೆ ಕೊರಳ್ ಮತ್ತು ಶೂದ್ರ ತಪಸ್ವಿ ನಾಟಕಗಳನ್ನು ಬರೆದಾಗ, ಮಾಸ್ತಿ, ಡಿ.ವಿ.ಜಿ. ಇವರು ಅವುಗಳ ವಸ್ತು ಮತ್ತು ಮರುಕಟ್ಟುವಿಕೆಗೆ ಸಂಬಂಧಿಸಿದಂತೆ ಭಿನ್ನಮತವನ್ನು ಹೂಡಿದ್ದರು. ಉಳಿದಂತೆ ನವೋದಯದ ಬಹುತೇಕ ಲೇಖಕರು ಇಂತಹ ಭಿನ್ನಮತವನ್ನು ಹೂಡಲಿಲ್ಲ. ಮೈಸೂರು ಕೇಂದ್ರದ ಕುವೆಂಪು ಅವರ ಶಿಷ್ಯರು ಕುವೆಂಪು ಅವರ ಸಾಹಿತ್ಯದ ಬಗೆಗೆ ಉದಾರವಾದ ಸಮರ್ಥನೆಯನ್ನು ವಿವರಣಾತ್ಮಕವಾಗಿ ನೀಡತೊಡಗಿದರು. ಕೆಲವು ನವ್ಯ ವಿಮರ್ಶಕರು ಕುವೆಂಪು ಕಾವ್ಯದ ವೈಚಾರಿಕತೆಯನ್ನು ಪರಿಶೀಲಿಸಿದರು. ಅವರ ಕಾದಂಬರಿಗಳಲ್ಲಿ ಸಾವಯವ ಶಿಲ್ಪ ಇಲ್ಲ, ಕೇಂದ್ರ ಪಾತ್ರ ಇಲ್ಲ, ವಿವರಗಳಿಂದ ಸೊಕ್ಕಿವೆ ಎಂಬ ತೀರ್ಮಾನ ಕೊಟ್ಟರು. ದಲಿತ ಬಂಡಾಯದ ವಿಚಾರವಿಮರ್ಶಕರು ತಮಗೆ ಬೇಕಾದ ಕುವೆಂಪು ಅವರನ್ನು ಕಟ್ಟಿಕೊಂಡರು. ತಮ್ಮ ಕಾಲದ ಹಾಗೂ ತಮ್ಮ ಧೋರಣೆಯ ಆಯ್ಕೆ ಮತ್ತು ಆದ್ಯತೆಗಳನ್ನು ಕುವೆಂಪು ವೈಚಾರಿಕತೆಯ ಮೂಲಕ ಕಟ್ಟಿಕೊಂಡರು. ಜಾತಿ, ಧರ್ಮ, ಪ್ರಜಾಪ್ರಭುತ್ವ, ಪ್ರಭುತ್ವ, ಆಳುವ ವರ್ಗ, ಸಾಮಾಜಿಕ ನ್ಯಾಯ, ಸಂಸ್ಕೃತಿ, ಉಪಸಂಸ್ಕೃತಿ, ಶೋಷಣೆ, ಅಪಮಾನ, ಊಳಿಗಮಾನ್ಯಶಾಹಿ ಈ ಎಲ್ಲವೂ ದಲಿತ ಬಂಡಾಯ ಲೇಖಕರ ಆದ್ಯತೆಯ ವಿಷಯಗಳಾಗಿದ್ದವು. ಅವರು ತಮ್ಮ ತೀರ್ಮಾನಗಳಿಗೆ ಕುವೆಂಪು ವೈಚಾರಿಕತೆಯನ್ನು ಗುರಾಣಿಯಂತೆ ಬಳಸಿಕೊಂಡರು. ಕೆಲವರು ಸ್ತ್ರೀವಾದಿ ವಿಮರ್ಶಕಿಯರು ತಮಗೆ ಬೇಕಾದ ಆಶಯಗಳನ್ನು ಕುವೆಂಪು ಸಾಹಿತ್ಯದ ಮೂಲಕ ಕಾಣತೊಡಗಿದರು. ಈಗಲೂ ಕೂಡ ಕುವೆಂಪು ಸಾಹಿತ್ಯವನ್ನು ಇಡಿಯಾಗಿ ಮತ್ತು ಬಿಡಿಯಾಗಿ ಓದುತ್ತಲೇ ಬರಲಾಗುತ್ತಿದೆ. ಪ್ರಾಥಮಿಕ ಶಾಲಾ ಹಂತದಿಂದ ವಿಶ್ವವಿದ್ಯಾನಿಲಯಗಳ ಪಠ್ಯವಸ್ತುವಿನಲ್ಲಿ ಕುವೆಂಪು ಅವರ ಒಂದಲ್ಲ ಒಂದು ಬರವಣಿಗೆ ಇದ್ದೆ ಇರುತ್ತದೆ. ಈ ಕಾರಣದಿಂದಾಗಿ ಕುವೆಂಪು ಅವರು ಔಪಚಾರಿಕ ಶಿಕ್ಷಣದ ಓದಿನ ವಸ್ತುವಾಗಿದ್ದಾರೆ. ಅವರ ಪ್ರಜ್ಞೆಯ ಭಾಗವಾಗಿದ್ದಾರೆ.

ಕೇವಲ ಶೈಕ್ಷಣಿಕ ವಲಯಕ್ಕೆ ಕುವೆಂಪು ಸಾಹಿತ್ಯವನ್ನು ಸೀಮಿತಗೊಳಿಸಿ ನೋಡಿದರೆ ಸಾಲದು. ಔಪಚಾರಿಕ ಶಿಕ್ಷಣದ ಆಚೆಗೂ ಕುವೆಂಪು ಸಾಹಿತ್ಯದ ಓದುಗರಿದ್ದಾರೆ. ಅವರ ಭಾವಗೀತೆಗಳನ್ನು ಹಾಡುವವರು, ಶ್ರೀ ರಾಮಾಯಣ ದರ್ಶನಂ ಅನ್ನು ಗಮಕ ಮಾಡುವವರು, ಅವರ ನಾಟಕಗಳನ್ನು ರಂಗದಲ್ಲಿ ಪ್ರಯೋಗ ಮಾಡುವವರು ಇದ್ದಾರೆ. ಸಿನಿಮಾದಲ್ಲೂ ಅವರ ಕವಿತೆಗಳು ಹಾಡಾಗಿರುವುದು ವಿಶೇಷ. ಎಸ್. ಲೀಲಾವತಿ ಸಿನಮಾದ 'ದೋಣಿ ಸಾಗಲಿ ಮುಂದೆ ಹೋಗಲಿ' ಎಂಬ ಹಾಡು ಕನ್ನಡ ಸಿನಿಮಾ ನೋಡುಗರ ಮನದಾಳದಲ್ಲಿ ಅಚ್ಚೊತ್ತಿ ನಿಂತಿದೆ. ರಂಗಕರ್ಮಿ ಸಿ. ಬಸವಲಿಂಗಯ್ಯ ಅವರು ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ೯ ಗಂಟೆಗಳ ನಾಟಕ ಮಾಡಿ ದಾಖಲೆ ನಿರ್ಮಿಸಿದ್ದಾರೆ.

ಕನ್ನಡ ಸಮಾಜ, ಕನ್ನಡ ಸಂಸ್ಕೃತಿ ಅಥವಾ ಕನ್ನಡ ನಾಡು ತನ್ನ ಅಗತ್ಯತೆಯ ವಿಷಯಗಳನ್ನು ಕುವೆಂಪು ಸಾಹಿತ್ಯದಲ್ಲಿ ಕಂಡುಕೊಳ್ಳುತ್ತಾ ಬಂದಿದೆ. ನಾಡಿನ ಹಲವು

Scanned with CamScanner

ಪ್ರಗತಿಪರ ಹೋರಾಟಗಳು, ಹೋರಾಟಗಾರರು, ಪತ್ರಕರ್ತರು ಕುವೆಂಪು ವೈಚಾರಿಕತೆಯ ಪ್ರಭಾವದಿಂದ ಹೊರಗೆ ಉಳಿದಿಲ್ಲವೇನೋ ಎಂದು ಅಂದಾಜು ಮಾಡಬಹುದು. ಮೇಲಿ ಚರ್ಚೆಯ ಮೂಲಕ ಒತ್ತಿ ಹೇಳಬೇಕಾದುದು ಏನೆಂದರೆ, ಈ ನಾಡಿನ ಓದುಗ ಸಮುದಾಯ ಮತ್ತು ನೋಡುಗ ಸಮುದಾಯ ಮತ್ತೆ ಮತ್ತೆ ಕುವೆಂಪು ಕಡೆಗೆ ಹೋಗುತ್ತಿರುವುದು ಈ ನಾಡಿನ ಭಾಗ್ಯವೆಂದೇ ಹೇಳಬಹುದು. ಕಸಿನ್ಸ್ ಅವರಿಂದ ಶುರುವಾಗಿ ಸಿನಿಮಾ ರಂಗದವರೆಗೂ, ಗಂಭೀರ ಓದಿನಂದ ಗಮಕಿಗಳವರೆಗೂ, ಹಾಡುಗಾರರವರೆಗೂ ಕುವೆಂಪು ಸಾಹಿತ್ಯ ತಲುಪಿತು. ಕುವೆಂಪು ಅವರ ವೈಚಾರಿಕತೆಯು ಅಗಲವಾಗಿ, ಸಂಕೀರ್ಣವಾಗಿ, ಹಾಡಾಗಿ, ಲಯವಾಗಿ, ಗೇಯತೆಯಾಗಿ, ಸಂಗೀತವಾಗಿಯೂ ಕೂಡ ಜನರನ್ನು ತಟ್ಟಿತು. ಈ ಮೂಲಕ ಈ ನಾಡಿನ ಬೇರೆ ಬೇರೆ ವಲಯದವರು, ರಂಗಕರ್ಮಿಗಳು, ಸಂಗೀತಗಾರರು, ಗಮಕಿಗಳು, ವ್ಯಾಖ್ಯಾನಕಾರರು, ಪಂಡಿತರು ಇವರೆಲ್ಲರೂ ಅವರಿಂದ ನಿರಂತರವಾಗಿ ಪಡೆದುಕೊಂಡು ಹೋಗುತ್ತಿದ್ದಾರೆ. ಹೀಗಾಗಿ ಕುವೆಂಪು ಸಾಹಿತ್ಯವು ಎಂದೆಂದೂ ಮುಗಿಯದ ಅತ್ಯಂತ ಶ್ರೀಮಂತವಾದ ವೈಚಾರಿಕ ಗಣಿ, ಬೌದ್ಧಿಕ ಗಣಿಯಾಗಿದೆ. ಇದನ್ನು ತೋಡಿದಷ್ಟು ಆಳವಾಗುವ, ಬಗೆದಷ್ಟು ಅಗಲವಾಗುವ ಸೃಜನಶೀಲ ಗುಣವನ್ನು ಹೊಂದಿದೆ.

ಭಾಷೆ

ಕುವೆಂಪು ಅವರು ಭಾಷೆಯ ಬಗೆಗೆ ಆಲೋಚನೆ ಮಾಡಿದ್ದಾರೆ. ಔಪಚಾರಿಕವಾಗಿ ನೋಡಿದರೆ ಇವರು ಭಾಷಾಶಾಸ್ತ್ರಜ್ಞರಲ್ಲ. ಈ ದೃಷ್ಟಿಯಲ್ಲಿ ಇವರನ್ನು ಭಾಷಾಶಾಸ್ತ್ರಜ್ಞರು ಎಂದು ಕರೆಯಬೇಕಿಲ್ಲ. ಆದರೂ ಕುವೆಂಪು ಅವರ ದರ್ಶನವನ್ನು ಭಾಷಾವಿಜ್ಞಾನದ ತಿಳುವಳಿಕೆಯಿಂದ ಹೊರಗಿಡಲು ಬರುವುದಿಲ್ಲ. ಕನ್ನಡವನ್ನು ಅವರು "ಮಂತ್ರ ಕಣಾ! ಶಕ್ತಿ ಕಣಾ! ತಾಯಿ ಕಣಾ! ದೇವಿ ಕಣಾ! (ಅಖಂಡ ಕರ್ನಾಟಕ!) ಎಂದು ವ್ಯಾಖ್ಯಾನಿಸಿದರು. ಇದು ಔಪಚಾರಿಕ ಭಾಷಾಶಾಸ್ತ್ರವನ್ನು ಮೀರಿಸಿದ ಆಲೋಚನೆ. ಈ ರೀತಿ ಭಾಷೆಯನ್ನು ನೋಡಲು ಅಸಾಮಾನ್ಯವಾದ ಪ್ರತಿಭಾವಂತರಿಗೆ ಮಾತ್ರ ಸಾಧ್ಯ. ಈ ಆಲೋಚನೆ ಕುವೆಂಪು ಅವರಿಗೆ ಸಿದ್ಧಿಸಿರುವುದು ವಿಶೇಷ. ಭಾಷೆಯ ಬಗೆಗಿನ ಈ ತರದ ಹಿಡಿತದಿಂದಾಗಿ ಭಾಷೆಯನ್ನು ಜನಮಾನಸದಿಂದ ದೈವತ್ವದ ಕಡೆಗೆ ಕೊಂಡೊಯ್ಯಲು ಸಾಧ್ಯವಾಗಿದೆ. ಇಂತಹ ನಡಿಗೆ ಅವರ ಇಡೀ ಸಾಹಿತ್ಯದಲ್ಲಿ ಕಂಡುಬರುತ್ತದೆ. ಜೊತೆಗೆ ಭಾಷೆಯನ್ನು ಕುರಿತ ಬರವಣಿಗೆಯಲ್ಲಿಯೂ ಕಂಡುಬರುತ್ತದೆ.

ಕುವೆಂಪು ಅವರ 'ಭಾಷೆ ಭಾವೋಪಯೋಗಿ ಮತ್ತು ಲೋಕೋಪಯೋಗಿ' ಎಂಬ ಲೇಖನವಿದೆ. ಇವರಲ್ಲಿ ಭಾಷೆಯ ಎರಡು ಬಗೆಯ ಬಳಕೆಯನ್ನು ಕುರಿತು ಹೇಳುತ್ತಾರೆ. ಒಂದು ಲೋಕದ ವ್ಯವಹಾರವಾಗಿ ಮತ್ತು ಎರಡನೆಯದು ಭಾವನೆಗಳ ವಿನಿಮಯವಾಗಿ. ಭಾಷೆಯನ್ನು ಭಾವನಾತ್ಮಕವಾಗಿ ಬಳಸಿದರೆ ಕಲೆ ಮತ್ತು ಸಾಹಿತ್ಯ ಸೃಷ್ಟಿಯಾಗುತ್ತದೆ ಎಂಬ ಗ್ರಹಿಕೆ ಅಲ್ಲಿದೆ. ಭಾಷೆಯೆಂಬ ಶಿಲೆಯನ್ನು 'ಕಲೆ' ಮಾಡುವುದೇ ಭಾವನೆ. ಅಂದರೆ ಭಾಷೆಗಿರುವ ಭಾವದೀಪ್ತಿಯನ್ನು ಗುರುತಿಸಬೇಕು ಮತ್ತು ಬೆಳೆಸಬೇಕು.

Scanned with CamScanner

'ಕನ್ನಡಕ್ಕಾಗಿ ಕೈಯೆತ್ತು, ನನ್ನ ಕೈ ಕಲ್ಪವೃಕ್ಷವಾಗುತ್ತದೆ' ಎಂದು ಹೇಳುವುದರಲ್ಲಿ ಕುವೆಂಪು ಅವರಿಗೆ ಇದ್ದ ಕನ್ನಡದ ಬಗೆಗಿನ ಶ್ರದ್ಧೆ, ಕಾಳಜಿ ಮತ್ತು ಬದ್ಧತೆಯನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. ಇವಷ್ಟೇ ಅಲ್ಲದೆ, ಕುವೆಂಪು ಕನ್ನಡವನ್ನು ಕೇವಲ ಭಾಷೆ ಎಂದು ಗ್ರಹಿಸಲಿಲ್ಲ. ಕನ್ನಡವೆಂಬುದು ನಾಡು, ಬದುಕು, ಜೀವನ, ಬಾಳು, ಪರಿಸರ, ಪ್ರಕೃತಿ, ಸಸ್ಯ, ಪ್ರಾಣಿ ಪಕ್ಷಿ, ಸಕಲ ಜೀವಕೋಟಿ, ಅನ್ನ, ರೈತ, ನೇಗಿಲು, ಹೀಗೆ ಜೀವನದ ಹಲವು ಸ್ತರಗಳಿಗೆ ಅದು ಹಾಸುಹೊಕ್ಕಿದೆ. ಅವರ ಪ್ರಕಾರ ಕನ್ನಡದ ಬಗೆಗಿನ ಪ್ರೀತಿ ಕಾಳಜಿ ಎಂದರೆ; ಕನ್ನಡಿಗರಾದವರು ಸಂಸ್ಕಾರಯುತವಾದ ಬದುಕನ್ನು ಕಟ್ಟಿಕೊಳ್ಳುವುದಾಗಿದೆ.

ಕೆಲವರು ಕನ್ನಡ ಭಾಷಾ ಬಳಕೆ ಮತ್ತು ಬೆಳವಣಿಗೆ ಎಂದರೆ ಸೋದರ ಭಾಷೆಗಳನ್ನು, ಸೋದರ ಭಾಷಿಕರನ್ನು ವಿರೋಧಿಸುವುದು ಎಂಬ ಅಭಿಪ್ರಾಯವನ್ನು ಸಮಾಜದಲ್ಲಿ ಗಟ್ಟಿಗೊಳಿಸಿದ್ದಾರೆ. ಆದರೆ, ಕನ್ನಡ ಸೋದರ ಭಾಷೆಗಳನ್ನು ವಿರೋಧಿಸಬಾರದು, ನಿರಾಕರಿಸಬಾರದು ಮತ್ತು ಶತ್ರುಗಳಂತೆ ಕಾಣಬಾರದು ಎಂಬುದು ಕುವೆಂಪು ಅವರ ನಿಲುವು. ಕನ್ನಡದ ಅಭಿವೃದ್ಧಿ ಅಂದರೆ, ಕನ್ನಡವಲ್ಲದ ಭಾಷೆಗಳಿಂದ, ಆ ಸಾಹಿತ್ಯದಿಂದ ಅಪಾರವಾದುದನ್ನು ಕಲಿಯಬೇಕು ಎಂಬುದೇ ಕುವೆಂಪು ಅವರ ನಿಲುವಾಗಿತ್ತು. ಇದು ಇವತ್ತಿಗೆ ಬಹಳ ಮುಖ್ಯವಾದ ಸಂಗತಿ. ಕುವೆಂಪು ಅವರಿಗೆ ಸಂಸ್ಕೃತ, ಇಂಗ್ಲೀಷ್ ತಿಳಿದಿತ್ತು. ಆದರೆ ಅವರು ಆ ಭಾಷೆಗಳಿಂದ ಯಾವುದನ್ನೂ ಕನ್ನಡಕ್ಕೆ ಎರವಲು ತರಲಿಲ್ಲ. ಆ ಎರಡೂ ಭಾಷೆಗಳಿಂದ ಜ್ಞಾನವನ್ನು ಪಡೆದುಕೊಂಡರು. ಹೀಗೆ ಪಡೆದುಕೊಂಡ ಭವ್ಯ ಶ್ರೀಮಂತಿಕೆಯನ್ನು ಕನ್ನಡೀಕರಿಸಿದರು. ಸಂಸ್ಕೃತದ ಅನುವಾದ ಮಾಡಲಿಲ್ಲ. ಆದರೆ ಇದರ ಮೂಲ ಸಂವೇದನೆಯನ್ನು ಕನ್ನಡಿಗರ ಬದುಕಿನ ಮೌಲ್ಯವಾಗಿ ಮಾರ್ಪಡಿಸಿದರು. ಅದು ಸಾಹಿತ್ಯ, ಸೃಜನಶೀಲತೆ, ಕಾವ್ಯ, ಮಹಾಕಾವ್ಯ, ಕಾವ್ಯಮೀಮಾಂಸೆ ಮೂಲಕವೂ ಇರಬಹುದು. ಇವರು 'ಭಾರತೀಯ ಕಾವ್ಯ ಮೀಮಾಂಸೆ'ಗೆ ಮುನ್ನುಡಿ ಬರೆಯುವಾಗ "ಮುಂಬರಲಿರುವ ಕನ್ನಡದ ಕಾವ್ಯಮೀಮಾಂಸೆಯ ಮತ್ತು ಸಾಹಿತ್ಯ ವಿಮರ್ಶೆಯ ಸಾಹಸಕ್ಕೆ ಶ್ರೀಮಾನ್ ತೀ.ನಂ. ಶ್ರೀಕಂಠಯ್ಯನವರು ಸಮರ್ಥವೂ, ಮಾರ್ಗದರ್ಶಕವೂ ಆಗಿರುವ ಒಂದು ಆಚಾರ್ಯ ಕೃತಿಯನ್ನು ಒದಗಿಸಿದ್ದಾರೆ" ಎಂದು ಬರೆದಿದ್ದಾರೆ. ಕಾರಣವೇನೆಂದರೆ, ಈ ತರಹದ ಅಗತ್ಯವೊಂದು ಕನ್ನಡಕ್ಕೆ ಬೇಕಿತ್ತು ಎಂಬುದು ಇವರ ಅಭಿಪ್ರಾಯವಾಗಿತ್ತು.

ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಮತ್ತು ಪ್ರಸಾರಾಂಗದ ನಿರ್ದೇಶಕರಾಗಿ ಮೈಸೂರು ಭಾಗದಲ್ಲಿ ಕನ್ನಡವನ್ನು ಕಟ್ಟಿದ್ದು, ಬೆಳೆಸಿದ್ದು ಮತ್ತು ವಿವಿಧ ಜ್ಞಾನಶಾಖೆಗಳಿಗೆ ಕನ್ನಡವನ್ನು ವಿಸ್ತರಿಸಿದ್ದು ದೊಡ್ಡ ಕೊಡುಗೆ. ನಾವು ಕುವೆಂಪು ಅವರ ಕನ್ನಡ ಪ್ರೇಮ ಅಂದಾಗ, 'ಎಲ್ಲಾದರು ಇರು, ಎಂತಾದರೂ ಇರು; ಎಂಬ ಕವನದ ಸಾಲಿಗೆ ಅವರನ್ನು ಸೀಮಿತ ಮಾಡುತ್ತೇವೆ; ಇದು ಸರಿಯಲ್ಲ. ಆದರೆ ಇದರಾಚೆಗೆ ಕುವೆಂಪು ಅವರನ್ನು ಗ್ರಹಿಸಬೇಕಿದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಲ್ಲಿ ವಿವಿಧ ಜ್ಞಾನಶಿಸ್ತುಗಳ ಪುಸ್ತಕಗಳನ್ನು ಕನ್ನಡದಲ್ಲಿ ಬರೆಸಿದರು. ಅರ್ಥಶಾಸ್ತ್ರ, ಸಮಾಜಶಾಸ್ತ್ರ, ವಿಜ್ಞಾನ ಹಾಗೂ ಇನ್ನೂ ಅನೇಕ ವಿಷಯಗಳ ಮೇಲೆ ಸ್ವತಂತ್ರ ಕೃತಿಗಳು

Scanned with CamScanner

ಬರಲು ಕಾರಣರಾದರು. ಮತ್ತು ಇಂಗ್ಲೀಷ್‌ನಲ್ಲಿದ್ದ ಅಪಾರವಾದ ಜ್ಞಾನ ಸಂಪತ್ತನ್ನು ಕನ್ನಡಕ್ಕೆ ತಂದರು. ಪ್ರಸಾರಾಂಗದಲ್ಲಿ ಅವರು ಮಾಡಿದ ಕೆಲಸ ಕನ್ನಡವನ್ನು ಕಟ್ಟುವ, ಬೆಳೆಸುವ ಮತ್ತು ಸಮಾಜ ವಿಜ್ಞಾನವನ್ನು ಕೂಡ ಬರೆಯುವ, ಪ್ರಕಟಿಸುವ, ಓದುವ ಸಾಧ್ಯತೆ ಇದೆ ಎಂಬುದನ್ನು ಮೊಟ್ಟಮೊದಲಿಗೆ ತೋರಿಸಿಕೊಟ್ಟ ಕೀರ್ತಿ ಕುವೆಂಪು ಅವರಿಗೆ ಸಲ್ಲುತ್ತದೆ. ಕನ್ನಡ ಜ್ಞಾನವನ್ನು ಸಮಾಜ ವಿಜ್ಞಾನಗಳ ಜ್ಞಾನಕ್ಕೆ ವಿಸ್ತರಿಸಿದರು. ಇಂಗ್ಲೀಷ್ ಭಾಷೆಯಲ್ಲಿನ ಸಮಾಜ ವಿಜ್ಞಾನದ ಜ್ಞಾನವನ್ನು ಅತ್ಯಂತ ಸೃಜನಶೀಲವಾಗಿ ಕನ್ನಡಕ್ಕೆ ತಂದರು. ಇದು ಭಾಷಾ ನೆಲೆಯಲ್ಲಿ ಕುವೆಂಪು ಮಾಡಿರುವ ಬಹಳ ದೊಡ್ಡ ಸಾಧನೆ. ಪ್ರಸ್ತುತ ಸಂದರ್ಭದಲ್ಲಿ ರಾಷ್ಟ್ರೀಯ ಮಟ್ಟದ ಮತ್ತು ರಾಜ್ಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳು ಕನ್ನಡದಲ್ಲಿರಬೇಕು ಎಂಬ ಸಾವಿರಾರು ಅಭ್ಯರ್ಥಿಗಳ ಅಪೇಕ್ಷೆ ಕುವೆಂಪು ಅವರ ಮುಂಗಾಣುವಿಕೆ ಎಂದು ಹೇಳಬಹುದು. ಗ್ರಾಮೀಣ ಪ್ರದೇಶದವರಿಗೆ, ಶೈಕ್ಷಣಿಕ ಹಿನ್ನೆಲೆ ಇಲ್ಲದವರಿಗೆ ಇದು ವರದಾನವಾಗಿರುವುದು ಬಹಳ ವಿಶೇಷ.

ಕುವೆಂಪು ಅವರ ಭಾಷಾ ಚಿಂತನೆಗಳು ಸ್ವತಂತ್ರವಾದ ಅಧ್ಯಯನವನ್ನೇ ಅಪೇಕ್ಷಿಸುತ್ತವೆ. ಅಂದರೆ ಕನ್ನಡದ ಬದುಕನ್ನು ಅಭ್ಯುದಯಕ್ಕೆ ತೆಗೆದುಕೊಂಡು ಹೋಗುವುದು ಹೇಗೆ? ಶ್ರೀಮಂತಗೊಳಿಸುವುದು ಹೇಗೆ? ಎಂದು ಕನ್ನಡ ಭಾಷೆಯ, ಕನ್ನಡ ಸಂವೇದನೆ, ಕನ್ನಡವೆಂಬ ವಿಶ್ವಪ್ರಜ್ಞೆಯಿಂದ ಏನನ್ನಾದರೂ ಸೃಜಿಸಬಹುದು; ಏನನ್ನಾದರೂ ಕಟ್ಟಬಹುದು ಎಂದು ತಪಸ್ಸನ್ನು ಮಾಡಿ ಕನ್ನಡವನ್ನು ರೂಪುಗೊಳಿಸಿದರು. ಮತ್ತು ಅವರು ಸೃಷ್ಟಿಸಿದ ಕನ್ನಡ ಅನೇಕರಿಗೆ ಮಾದರಿಯಾಯಿತು. ಆಶ್ಚರ್ಯವಾಗಬಹುದು; 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಭಾಷಿಕ ಅಭಿವ್ಯಕ್ತಿ ದೇವನೂರ ಮಹಾದೇವರ ಕಥೆ, ಕಾದಂಬರಿಗಳಲ್ಲಿ ಅನುರಣಿಸುತ್ತದೆ. ಆದರೆ ಒಬ್ಬ ಕನ್ನಡವನ್ನು ಪ್ರೀತಿಸಿದ, ಗೌರವಿಸಿದ, ಸೃಜನಶೀಲವಾಗಿ ಕಟ್ಟಿದ, ಆಡಳಿತ, ಸಾಂಸ್ಕೃತಿಕ ಮತ್ತು ಪತ್ರಿಕಾ ವಲಯದಲ್ಲಿಯೂ ಕೂಡ ಕನ್ನಡವನ್ನು ಕಟ್ಟಿ ಬೆಳೆಸಿದ ಕುವೆಂಪು ಪ್ರಯತ್ನ, ಕೈಗೊಂಡ ತಪಸ್ಸು, ಕೈಗೂಡಿದ ಕನಸು ಇಡೀ ನಾಡಿನ ಎಲ್ಲರನ್ನೂ ಪ್ರಭಾವಿಸುತ್ತಾ ಬಂದಿದೆ ಮತ್ತು ಕುವೆಂಪು ಅವರ ಇಂತಹ ತಪಸ್ಸಿನ ಪರವಾಗಿ ಸಿದ್ಧಿಪಡೆದುಕೊಂಡವರು ಹಲವರಿದ್ದಾರೆ. ಉದಾ: ದಲಿತ ಬಂಡಾಯದವರು ಬರೆದಂತಹ ಕಾವ್ಯದಲ್ಲಿ ಅವರ ಕೇರಿ ಭಾಷೆಗಿಂತಲೂ ಹೆಚ್ಚಾಗಿ ಕುವೆಂಪು ಅವರು ಸೃಷ್ಟಿಸಿದ ವೈಚಾರಿಕ ಭಾಷೆ ಇದೆ. 'ಇಕ್ರಲಾ ವದಿರ್ಲಾ' ಎಂದು ಸಿದ್ಧಲಿಂಗಯ್ಯ ಬರೆಯಬೇಕಾದರೆ, ಈ ಕವಿತೆಯ ಒಟ್ಟು ಧ್ವನಿ ಕಲ್ಕಿ ಕವನದ ಆಶಯವನ್ನೇ ಪರೋಕ್ಷವಾಗಿ ಹೊಂದಿದೆ. ಜೊತೆಗೆ 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' ಕವನ ಸಂಕಲನದ ಆಶಯದ ಪ್ರಭಾವವನ್ನೂ ಹೊಂದಿದೆ.

ಶಿಕ್ಷಣ

ಕುವೆಂಪು ಅವರಂತೆ ಶಿಕ್ಷಣದ ಬಗೆಗೆ ಗಂಭೀರವಾಗಿ, ಸೂಕ್ಷ್ಮವಾಗಿ ಆಲೋಚನೆ ಮಾಡಿದವರು ನಮಗೆ ಮತ್ತೊಬ್ಬರು ಸಿಗುವುದಿಲ್ಲ. ಇವರಿಗೆ ಶಿಕ್ಷಣ ತಜ್ಞರು, ಚಿಂತಕರು ಎಂಬ ಹೆಸರಿಲ್ಲದೆ ಹೋದರೂ ಅವರ ಪ್ರತಿಯೊಂದು ಬರವಣಿಗೆ ಕೂಡ ಶೈಕ್ಷಣಿಕ

Scanned with CamScanner

ಮಹತ್ವವುಳ್ಳದ್ದು. ನೀರನ್ನು ತೀರ್ಥವಾಗಿಸುವ, ಬಂಗಾರವನ್ನು ಒಡವೆ ಮಾಡುವ, ಮಾಂಸದ ಮುದ್ದೆಯಾಗಿರುವ ಮಗುವನ್ನು ವಿಶ್ವಮಾನವನನ್ನಾಗಿ ಮಾಡುವುದೇ ಶಿಕ್ಷಣ. ಆದ್ದರಿಂದ ಮತದ ಮನೆ, ಧರ್ಮದ ಮನೆ, ಯಾವ ಮನೆಯನ್ನು ಕಟ್ಟಬೇಡ ಎಂದು ಹೇಳಿರುವುದು.

ಕುವೆಂಪು ಅವರ ಪ್ರಕಾರ ಶಿಕ್ಷಣ ಎನ್ನುವುದು ಅಕ್ಷರ ಶಿಕ್ಷಣ ಮಾತ್ರವಲ್ಲ. 'ಉಳುವ ಯೋಗಿಯ ನೋಡಲ್ಲಿ', 'ನೇಗಿಲ ಕುಳದೊಳಡಗಿದೆ ಕರ್ಮ, ನೇಗಿಲ ಮೇಲೆಯೇ ನಿಂತಿದೆ ಧರ್ಮ' ಎಂದಾಗ ಅಲ್ಲಿ ವಿದ್ಯೆ ಇದೆ. ನೇಗಿಲಿನಿಂದ ಉಳುಮೆ ಮಾಡಿ ಅನ್ನವನ್ನು ಕೊಡುವುದು ಒಂದು ವಿದ್ಯೆಯೆ. "ನಮ್ಮ ವಿದ್ಯಾರ್ಥಿಗಳು ಬತ್ತವನ್ನು ತುಂಬುವ ಗೋಣಿಚೀಲಗಳಾಗಬಾರದು. ಬತ್ತವನ್ನು ಬೆಳೆಯುವ ಗದ್ದೆಗಳಾಗಬೇಕು" ಎಂದು ಹೇಳಿರುವುದರ ಹಿಂದೆ ಶಿಕ್ಷಣದ ಉದ್ದೇಶವನ್ನು ಸೃಷ್ಟಿಮಾಡಿಸಿದ್ದಾರೆ. ಈ ಮೂಲಕ ಹೊಸ ಪ್ರಜೆಗಳು ಸೃಷ್ಟಿಯಾಗುತ್ತಾರೆ. ತಮ್ಮ ಬದುಕಿನಲ್ಲಿ ಶಿಕ್ಷಣವನ್ನು ಅನುಭವವಾಗಿ, ಬದುಕಾಗಿ, ಬಾಳಾಗಿ ಅರಳಿಸಿಕೊಳ್ಳುತ್ತಾರೆ. ಇದು ಕುವೆಂಪು ಅವರಿಗಿದ್ದ ಶಿಕ್ಷಣದ ಬಗೆಗಿನ ಬಹುದೊಡ್ಡ ಆಶಯ.

ಕುವೆಂಪು ಬರಹಗಳಲ್ಲಿ ಶಿಕ್ಷಣ ಎಂಬ ಹೆಸರಿನ ಲೇಖನಗಳು ಇರಬಹುದು ಇಲ್ಲದೆಯೂ ಇರಬಹುದು. ಆದರೆ ಅವಷ್ಟೇ ಅಲ್ಲ. ಅವರ ಇಡಿಯಾದ ಸೃಜನಶೀಲತೆಯೇ ಬಹಳ ದೊಡ್ಡಶಿಕ್ಷಣ. ಅವರು ಸಂಸ್ಕೃತದ ವಾಲ್ಮೀಕಿ ರಾಮಾಯಣವನ್ನು, ವೇದಗಳನ್ನು, ಉಪನಷತ್ತುಗಳನ್ನು ಕನ್ನಡಕ್ಕೆ ಅನುವಾದ ಮಾಡಬಹುದಿತ್ತು. ಅವರಿಗೆ ಅಪಾರವಾದ ಇಂಗ್ಲೀಷ್ ಸಾಹಿತ್ಯ ಗೊತ್ತಿತ್ತು. ಈ ಮೂಲಕ ಎಷ್ಟೋ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದ ಮಾಡಬಹುದಿತ್ತು. ಆದರೆ ಕನ್ನಡದಲ್ಲಿ ಹೊಸದಾಗಿ ರೂಪಿಸಿದರು. ಏಕೆಂದರೆ ಅವರು ಬತ್ತ ತುಂಬುವ ಗೋಣಿ ಚೀಲವಾಗಿರಲಿಲ್ಲ; ಬತ್ತ ಬೆಳೆಯುವ ಗದ್ದೆಯಾಗಿದ್ದರು. ಹಾಗಾಗಿಯೇ ಕುವೆಂಪು ಇಷ್ಟೆಲ್ಲಾ ಸಾಹಿತ್ಯವನ್ನು ಸೃಜಿಸಿದರು. ಟಾಲ್‌ಸ್ಟಾಯ್‌ನ 'ಒಬ್ಬನಗೆ ಎಷ್ಟು ನೆಲ ಬೇಕು' ಎಂಬ ಕಥೆಯನ್ನು ಭಾವಾನುವಾದ ಅಂತ ಹೇಳುತ್ತಾರೆ. ಅಂದರೆ ಅವರ ಇಡೀ ಸಾಹಿತ್ಯವೇ ಒಂದು ರೀತಿಯಲ್ಲಿ ಅಘೋಷಿತವಾದ ಶೈಕ್ಷಣಿಕ ಚಿಂತನೆಗಳೇ. ಶಿಕ್ಷಣದ ಬಗೆಗಿನ ಮೂಲ ಸಂವೇದನೆ ಏನೆಂದರೆ, ಮಾಂಸದ ಮುದ್ದೆಯಾಗಿರುವ ಮಗುವನ್ನು ವಿಶ್ವಮಾನವನನ್ನಾಗಿ ರೂಪಿಸುವ ವಿಧಾನ ಶಿಕ್ಷಣದ ಮೇಲೆಯೇ ನಂತಿದೆ. 'ನಮಗೆ ಬೇಕಾದ ಕನ್ನಡ' ಎಂಬ ಲೇಖನದಲ್ಲಿ ಇಂಗ್ಲೀಷ್ ಪದಗಳನ್ನು ಕನ್ನಡೀಕರಿಸುವ ಕ್ರಮವನ್ನು ಒಪ್ಪಿಕೊಳ್ಳುತ್ತಾರೆ. ಉದಾ: ಪೆನ್, ಪೆನ್ನು, ಬುಕ್, ಬುಕ್ಕು, ಬಸ್, ಬಸ್ಸು, ಹೀಗೆ ಬೇರೆ ಭಾಷೆಯ ಬಿಡಿ ಪದಗಳ ಕನ್ನಡ ಜನರಿಗೆ ಒಗ್ಗುತ್ತವೆ ಎಂದರೆ, ಸಾಹಿತ್ಯವನ್ನು ಅದೇ ರೀತಿಯಲ್ಲಿ ರೂಪಿಸುವುದರ ಮೂಲಕ ಹೊಸತನ್ನು ಕಟ್ಟಲು ಸಾಧ್ಯವಿದೆ ಎಂದು ಹೇಳುತ್ತಾರೆ.

ವರ್ತಮಾನಕ್ಕೆ ಯಾವುದು ಅಗತ್ಯವಿದೆಯೋ ಅಂತಹ ತಿಳುವಳಿಕೆ ಕೊಡಬೇಕು. ಯಾವುದನ್ನೂ ನಿರಾಕರಿಸಬಾರದು ಎಂಬುದು ಕುವೆಂಪು ನಲುವಾಗಿತ್ತು. ಹಾಗಾಗಿ,

Scanned with CamScanner

ಕುವೆಂಪು ಅವರಿಗೆ ವಿಜ್ಞಾನ ಎಷ್ಟು ಮುಖ್ಯವೋ, ವೇದ, ಉಪನಿಷತ್ತುಗಳು ಅಷ್ಟೇ ಮುಖ್ಯ. ಇದೆಲ್ಲವೂ ನಮ್ಮ ಶಿಕ್ಷಣದಲ್ಲಿ ಕಲಿಸುವವರ ಮತ್ತು ಕಲಿಯುವವರ ಆಯ್ಕೆ ಮತ್ತು ಆದ್ಯತೆ ಆಗಬೇಕು. ಶಿಕ್ಷಣ ಕೇವಲ, ಬುದ್ಧಿಗೆ, ಮನಸ್ಸಿಗೆ ಮೆದುಳಿಗೆ ಮಾತ್ರ ಸೀಮಿತವಾಗಬಾರದು. ಅದು ಹೃದಯಕ್ಕೆ, ಭಾವಕ್ಕೆ ಮತ್ತು ಕರುಳಿಗೆ ಸೇರಬೇಕು. ನಮ್ಮ ಬದುಕಿನ ಭಾಗವಾಗಬೇಕು. ಇದು ಕುವೆಂಪು ಅವರ ಕನಸು ಮತ್ತು ಆಶಯವಾಗಿತ್ತು. ಆದರೆ ಇದರ ವಿರುದ್ಧ ಇಂದಿನ ಶಿಕ್ಷಣವಿದೆ. ಇವತ್ತು ಹೃದಯಹೀನವಾದ ಬುದ್ಧಿ ಪ್ರಧಾನ ಶಿಕ್ಷಣವಿದೆ. ಕರುಳಿಲ್ಲದ ಮನಸ್ಸು ಪ್ರಧಾನ ಶಿಕ್ಷಣವಿದೆ. ಮನಸ್ಸು ಸಂವೇದನೆ ಇಲ್ಲದ ನೆನಪಿನ ಶಕ್ತಿಯನ್ನು ಅಳತೆ ಮಾಡುವ ಶಿಕ್ಷಣವಿದೆ. ಇಂತಹ ಶಿಕ್ಷಣ ಕುವೆಂಪು ಅವರ ಆಯ್ಕೆ ಆಗಿರಲಿಲ್ಲ. ಒಪ್ಪಿಗೆಯೂ ಆಗಿರಲಿಲ್ಲ. ಆದ್ದರಿಂದ ಕುವೆಂಪು ಅವರ ಶೈಕ್ಷಣಿಕ ಚಿಂತನೆಗಳು ನಮಗೆ ಯಾಕೆ ಅಗತ್ಯವೆಂದರೆ, ಇವತ್ತಿನ ಶಿಕ್ಷಣ ಕ್ರಮದಲ್ಲಿ ಏನೆಲ್ಲಾ ಪರಿಣಾಮ ಅನುಭವಿಸುತ್ತಿದ್ದೇವೆ. ಅಂತಹ ಪರಿಣಾಮದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲಿಕ್ಕೆ, ಆ ಸಮಸ್ಯೆಯಿಂದ ಪಾರಾಗಲಿಕ್ಕೆ ನಮಗೆ ಕುವೆಂಪು ಶೈಕ್ಷಣಿಕ ಚಿಂತನೆಗಳು ಬಹಳ ಬಹಳ ಮುಖ್ಯ.

ಸಂಸ್ಕೃತಿ

'ಕುವೆಂಪು ಅವರು ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ' ಎಂಬ ಶೀರ್ಷಿಕೆಯ ಒಂದು ಲೇಖನ ಬರೆದಿದ್ದಾರೆ. ನವೋದಯದ ಕೆಲವು ಬರಹಗಾರರು ಉದಾಹರಣೆಗೆ, ದೇವುಡು, ಡಿ.ವಿ.ಜಿ., ಮಾಸ್ತಿ, ಸಿಂಪಿ ಲಿಂಗಣ್ಣ ಮುಂತಾದವರು ಸಂಸ್ಕೃತಿ ಎಂಬ ಶೀರ್ಷಿಕೆಯ ಸ್ವತಂತ್ರ ಪುಸ್ತಕಗಳನ್ನು ಬರೆದಿದ್ದಾರೆ. ಸಂಸ್ಕೃತಿ ಕುರಿತಂತೆ ಕುವೆಂಪು ಅವರ ಮೂಲ ಗ್ರಹಿಕೆಗಳು ಏನು ಎಂದು ಆಲೋಚಿಸಬಹುದು. ಈ ಆಲೋಚನೆಯನ್ನು ಅವರು ಬರೆದಿರುವ ಸಂಸ್ಕೃತಿ ಶೀರ್ಷಿಕೆಯುಳ್ಳ ಬರವಣಿಗೆಗೆ ಮಾತ್ರ ಸೀಮಿತ ಮಾಡಬೇಕಿಲ್ಲ. ಅವರ ಒಟ್ಟಾರೆ ಆಲೋಚನೆಗಳ ವ್ಯಾಪ್ತಿಯಲ್ಲಿ ಕುವೆಂಪು ಅವರ ಸಂಸ್ಕೃತಿ ಗ್ರಹಿಕೆಗಳನ್ನು ಪರಿಶೀಲನೆ ಮಾಡಬಹುದು.

ಕುವೆಂಪು ಅವರ ಪ್ರಕಾರ ಸಂಸ್ಕೃತಿಗೆ ಬೇರೆ ಬೇರೆ ಸ್ತರ ವಿನ್ಯಾಸಗಳಿವೆ ಮತ್ತು ಬೇರೆ ಬೇರೆ ವಲಯಗಳಿವೆ. ಒಂದು ಕನ್ನಡ ಸಂಸ್ಕೃತಿ ಮತ್ತು ಕನ್ನಡದ ಭಾಷಿಕ ಸಂಸ್ಕೃತಿ. ಎರಡು ಭಾರತೀಯ ಸಂಸ್ಕೃತಿ. ಮೂರು ವಿಶ್ವಸಂಸ್ಕೃತಿ. ಆದರೆ ಈ ಮೂರು ಬಗೆಯ ಗ್ರಹಿಕೆಗಳು ಇದ್ದಾಗಲೂ ಇದಕ್ಕೆ ಒಂದು ಅನುಕ್ರಮಣಿಕೆ ಎಂಬುದು ಇಲ್ಲ. ಆದರೆ ನಮ್ಮ ಅನುಕೂಲಕ್ಕಾಗಿ ಅನುಕ್ರಮಣಿಕೆ ರೀತಿಯಲ್ಲಿ ಮಾಡಿಕೊಳ್ಳಬಹುದು ಅಷ್ಟೆ. ಇದನ್ನು ಬಿಡಿಯಾಗಿ ಗುರುತಿಸಬಹುದು. ಆದರೆ ಕುವೆಂಪು ಅವರಿಗೆ ವಿಶ್ವಪ್ರಜ್ಞೆ ಅಥವಾ ವಿಶ್ವಸಂಸ್ಕೃತಿಯೇ ಮುಖ್ಯವಾಗಿದೆ. ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು ಅಲ್ಪಮಾನವನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು ವಿಶ್ವಮಾನವನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯ. ಇದು ಕುವೆಂಪು ಅವರ ವಿಶ್ವಮಾನವ ಸಂದೇಶದ ಕೇಂದ್ರ ವಿಚಾರ. ಸಂಸ್ಕೃತಿಯನ್ನು ಕಟ್ಟುವ ಗುರಿ

Scanned with CamScanner

ಶಿಕ್ಷಣ ಮತ್ತು ವಿದ್ಯೆಗೆ ಇದೆ. ಈ ಮೂಲಕ ಒಂದು ನಾಡಿನ, ದೇಶದ, ವಿಶ್ವದ ಸಂಸ್ಕೃತಿಯನ್ನು ಕಟ್ಟುತ್ತೇವೆ. ಇವುಗಳ ಒಳಗೆ ಯಾವುದು ಮೊದಲು, ಯಾವುದು ಕೊನೆ ಎಂಬುದರಲ್ಲಿ ಕುವೆಂಪು ಅವರಿಗೆ ಆಯ್ಕೆ ಇಲ್ಲ. ಯಾವುದು ಶ್ರೇಷ್ಠ, ಯಾವುದು ಕನಿಷ್ಠ ಎಂಬುದರಲ್ಲೂ ಆಯ್ಕೆಗಳಿಲ್ಲ. ಒಂದರ ಕೆಳಗೆ ಒಂದು; ಒಂದರ ಮೇಲೆ ಒಂದು ಇಲ್ಲ. ಒಂದರ ಪಕ್ಕ ಒಂದು. ಈ ರೀತಿಯಲ್ಲಿ ಕಂಡುಬರುತ್ತವೆ. 'ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ'. ಇಲ್ಲಿ ಭಾರತವನ್ನು ಮೊದಲು ನೆನೆದು, ಅನಂತರ ಕರ್ನಾಟಕಕ್ಕೆ ಬರುತ್ತಾರೆಯೇ ಹೊರತು ಕರ್ನಾಟಕವನ್ನು ಮೊದಲು ನೆನೆದು ನಂತರ ಭಾರತಕ್ಕೆ ಹೋಗುವುದಿಲ್ಲ. ಈ ದೃಷ್ಟಿಯಿಂದ ಇವರ ಮಹಾಕಾವ್ಯದ ಅರ್ಪಣೆ ಬಹಳ ಮುಖ್ಯವಾದದ್ದು.

"ಹೋಮರಗೆ ವರ್ಜಿಲಗೆ ಡಾಂಟೆಗೆ ಮೇಣ್ ಮಿಲ್ಟನಗೆ
ನಾರಣಪ್ಪಂಗೆ ಮೇಣ್ ಪಂಪನಿಗೆ, ಋಷಿವ್ಯಾಸ
ಭಾಸ ಭವಭೂತಿ ಮೇಣ್ ಕಾಳಿದಾಸಾದ್ಯರಿಗೆ,
ನರಹರಿ ತುಲಸಿದಾಸ ಮೇಣ್ ಕೃತ್ತಿವಾಸಾದಿ
ನನ್ನಯ್ಯ ಫಿರ್ದೂಸಿ ಕಂಬಾರವಿಂದರಿಗೆ
ಹಳಬರಿಗೆ ಹೊಸಬರಿಗೆ ಹಿರಿಯರಿಗೆ ಕಿರಿಯರಿಗೆ
ಕಾಲದೇಶದ ನುಡಿಯ ಜಾತಿಯ ವಿಭೇದಮಂ
ಲೆಕ್ಕಿಸದೆ ಜಗತೀ ಕಲಾಚಾರ್ಯರೆಲ್ಲರ್ಗೆ,
ಜ್ಯೋತಿಯಿರ್ಪೆಡೆಯಲ್ಲಿ ಭಗವದ್ ವಿಭೂತಿಯಂ
ದರ್ಶಿಸುತೆ, ಮುಡಿಬಾಗಿ ಮಣಿದು ಕೈಜೋಡಿಸುವೆನಾಂ."

ಹೀಗೆ ಕನ್ನಡ, ಸಂಸ್ಕೃತ ಕವಿಗಳ ಜೊತೆಗೆ ಜಾಗತಿಕ ಕವಿಗಳನ್ನು ನೆನೆಯುತ್ತಾರೆ. ಇದರಿಂದ ಕುವೆಂಪು ಗ್ರಹಿಕೆಯ ನೆಲೆ ಸಮನ್ವಯ ಮತ್ತು ಸಾಮರಸ್ಯವಾಗಿತ್ತು ಎಂಬುದು ಗೊತ್ತಾಗುತ್ತದೆ. ಎಲ್ಲರನ್ನು ಒಳಗೊಳ್ಳಬೇಕು; ಯಾರನ್ನೂ ಹೊರಗಿಡಬಾರದು ಎಂಬುದು ಕುವೆಂಪು ನಿಲುವಾಗಿತ್ತು. ಸಂಸ್ಕೃತಿ ಎಂಬುದು ಜಡರೂಪದ್ದಲ್ಲ. ಸಂಸ್ಕೃತಿ ಚಿಂತಕರು ಸಂಸ್ಕೃತಿ ಎಂದರೆ ವಸ್ತು ಸಂಗ್ರಹಾಲಯದಲ್ಲಿರುವ ಹಳೆ ಪರಿಕರಗಳು ಎಂದು ವಿವರಿಸಿದ್ದಾರೆ. ಆದರೆ ಕುವೆಂಪು ಅವರ ಸಂಸ್ಕೃತಿ ಚಿಂತನೆ ಉಳಿದ ಸಂಸ್ಕೃತಿ ಚಿಂತಕರಿಗಿಂತ ಭಿನ್ನ. ಹೇಗೆಂದರೆ ಕುವೆಂಪು ಪ್ರಕಾರ ಸಂಸ್ಕೃತಿ ಎಂಬುದು ಆಗಿ ಹೋದ ಘಟನೆಗಳಲ್ಲ. ಘಟನೆಗಳ ಮೊತ್ತವೂ ಅಲ್ಲ. ವಸ್ತು ಸಂಗ್ರಹಾಲಯದಲ್ಲಿ ಇಟ್ಟಿರುವ ಜಡ ವಸ್ತುವಲ್ಲ. ಸಂಸ್ಕೃತಿ ಎಂಬುದು ಆಗಬೇಕಾದದ್ದು, ಕಟ್ಟಬೇಕಾದದ್ದು ಮತ್ತು ನಾವು ಒಟ್ಟಾಗಿ ಸೃಷ್ಟಿಸಬೇಕಾದದ್ದು ಸಂಸ್ಕೃತಿ. ನಾವು ಕಟ್ಟುವ, ಉತ್ಪಾದಿಸುವ, ನಿರ್ಮಾಣ ಮಾಡುವುದು ಸಂಸ್ಕೃತಿ. ಅದಕ್ಕಾಗಿಯೇ, ಅವರು, 'ಮನೆಯನೆಂದು ಕಟ್ಟದಿರು, ಕೊನೆಯನೆಂದು ಮುಟ್ಟದಿರು ಓ ಅನಂತವಾಗಿರು!... ಅನಂತ ನೀ ಅನಂತವಾಗು; ಆಗು, ಆಗು, ಆಗು, ಓ ನನ್ನ ಚೇತನ, ಆಗು ನೀ ಅನಿಕೇತನ!" ಎಂದಾಗ ನಮ್ಮ ಭಾರತೀಯ

Scanned with CamScanner

ಸಂಸ್ಕೃತಿಯ ನಿರಂತರ ಧಾತು ಏನು ಅಂದರೆ, ಮುಗಿಯುವುದೇ ಇಲ್ಲ; ಆಗ್ತಾನೇ ಇರುತ್ತೆ. ಇಲ್ಲಿ ಕೊನೆ ಎಂಬುದೇ ಇಲ್ಲ. ಉದಾ: ಒಬ್ಬ ವ್ಯಕ್ತಿ ಸತ್ತರೆ, ಅವನ ವಿಚಾರ ಅಲ್ಲಿಗೆ ಮುಗಿಯುವುದಿಲ್ಲ. ನಿರಂತರವಾಗಿ ಆ ಕುಟುಂಬದ ಪ್ರತಿ ಸಂದರ್ಭದಲ್ಲೂ ನೆನಪಾಗ್ತಾ ಇರ್ತಾನೆ. ಆಚರಣೆಗೆ ಒಳಪಡುತ್ತಾನೆ. ಭಾರತೀಯರು ಮತ್ತು ಕವಿ ಕುವೆಂಪು ಪ್ರಕಾರ ಸಂಸ್ಕೃತಿ ಎಂಬುದು ಕಳೆದುಹೋಗಿರುವ, ಆಗಿ ಹೋಗಿರುವ ವಸ್ತು ಸಂಗ್ರಹಾಲಯದ ಜಡ ವಸ್ತುವಲ್ಲ. ಅದು ನಿತ್ಯನೂತನ, ನಿತ್ಯ ನಿರಂತರ. ಆ ಕಾರಣಕ್ಕಾಗಿ ಪ್ರತಿಯೊಬ್ಬ ಮನುಷ್ಯನೂ ಅವನದ್ದೇ ಆಗಿರುವ ಸಂಸ್ಕೃತಿಯನ್ನು ಕಟ್ಟಿಕೊಳ್ಳಬೇಕೆಂಬ ಚಿಂತನೆ ಕುವೆಂಪು ಅವರದ್ದು. ಅಂದರೆ ಪ್ರತಿಯೊಬ್ಬನಿಗೂ ಅವನದ್ದೇ ಆಗಿರುವ ಮತ, ಧರ್ಮ ಇರುವಂತೆ ಸಂಸ್ಕೃತಿಯೂ ಇರಬೇಕು. ಒಂದು ಸಂಸ್ಕೃತಿಯು ಇನ್ನೊಂದು ಸಂಸ್ಕೃತಿಯ ಮೇಲೆ ದಬ್ಬಾಳಿಕೆ ಮಾಡುವುದು, ದಾಳಿ ಮಾಡುವುದು ಸಂಸ್ಕೃತಿಯೇ ಅಲ್ಲ ಎಂಬುದು ಕುವೆಂಪು ಅವರ ಮೂಲಗ್ರಹಿಕೆ. ಹಾಗಾಗಿ ಅವರ ವ್ಯಾಖ್ಯಾನ ಏನೆಂದರೆ ಜಗತ್ತಿನಲ್ಲಿ ಎಷ್ಟು ಮತಧರ್ಮಗಳಿವೆಯೋ ಅವೆಲ್ಲವೂ ಕೂಡ ಸಹಬಾಳ್ವೆಯಿಂದ ಬದುಕಬೇಕು. ಭಾರತದಲ್ಲಿ ಎಷ್ಟು ಮತ ಧರ್ಮಗಳಿವೆಯೋ ಅವೆಲ್ಲವೂ ಕೂಡ ಸಹಬಾಳ್ವೆಯಿಂದ ಬದುಕಬೇಕು. ಭಾರತದಲ್ಲಿ ಎಷ್ಟು ಮತಧರ್ಮಗಳಿವೆಯೋ ಅವೆಲ್ಲವೂ ಕೂಡ ಸಹಬಾಳ್ವೆಯಿಂದ ಬದುಕಬೇಕು. ಅಷ್ಟೇ ಅಲ್ಲ ಕರ್ನಾಟಕದಲ್ಲಿ ಎಷ್ಟು ಮತಧರ್ಮಗಳಿವೆಯೋ ಅವೆಲ್ಲವೂ ಸಹಬಾಳ್ವೆಯಿಂದ ಬದುಕಬೇಕು ಎಂಬುದು. ಇದು ಎಲ್ಲರನ್ನು ಸಹಬಾಳ್ವೆಯಿಂದ, ಮಾನವೀಯತೆಯಿಂದ ಕಾಣುವ ಬಹಳ ದೊಡ್ಡ ದರ್ಶನ. ಕುವೆಂಪು ಪ್ರಕಾರ ಸಂಸ್ಕೃತಿಯಲ್ಲಿ ಮೇಲು-ಕೀಳು ಇಲ್ಲ. ಆದರೆ ಅವರ ಒಟ್ಟು ಬರೆಹ, ಕಾದಂಬರಿಗಳಲ್ಲಿ ಸೂಚಿತವಾಗುವುದು ಏನೆಂದರೆ; ಯಾವ ಸಂಸ್ಕೃತಿ ಅಧಿಕಾರ ರೂಪವನ್ನು ಪಡೆಯುತ್ತದೆಯೋ ಅದು ಯಜಮಾನಿಕೆಯ, ಆಡಳಿತದ ಸಂಸ್ಕೃತಿ ಆಗುತ್ತದೆ. ಇದನ್ನು ಗುರುತಿಸಿದ್ದು, ಕ್ರಿಶ್ಚಿಯಾನಟಿಯ ಒಳಗಡೆ. ಅವರ ಕಾದಂಬರಿಗಳಲ್ಲಿ ಪಾದ್ರಿಗಳು, ಮತಾಂತರವ ವಿಷಯಗಳು ಬರುತ್ತವೆ. ಮಲೆನಾಡಿನ ಕೃಷಿ ಸಂಸ್ಕೃತಿಯನ್ನು ಅನುಮಾನದಿಂದ ಸಂದೇಹದಿಂದ, ಒಂದು ಬಗೆಯ ಅವಗಣನೆಯಿಂದ ಕಾಣುತ್ತಾರೆ. ಏಕೆಂದರೆ ವಸಾಹತುಶಾಹಿ ಕಾಲದಲ್ಲಿ ಹಳ್ಳಿ ಹಳ್ಳಿಗೆ ಬಂದಂತಹ ಪಾದ್ರಿಗಳು ಇಲ್ಲಿ ಸ್ಥಳೀಯರ ಕೃಷಿ ಸಂಸ್ಕೃತಿಯ ಮೇಲೆ ದಾಳಿ ಮಾಡಿ ಏಕಾಏಕಿ ಮತಾಂತರ ಮಾಡುತ್ತಿದ್ದರು. ಇದನ್ನು ಕುವೆಂಪು ತಮ್ಮ ಕಾದಂಬರಿ ಮೂಲಕ ಗ್ರಹಿಸುತ್ತಾರೆ ಎಂಬುದು ಬಹಳ ಮುಖ್ಯ. ಅದು ಆಳುವವರ ಸಂಸ್ಕೃತಿ ಆಗಿತ್ತು. ಸಾಮ್ರಾಜ್ಯಶಾಹಿಯ ಸಂಸ್ಕೃತಿ ಆಗಿತ್ತು. ಹಾಗಾಗಿಯೇ ಒಂದು ಸಂಸ್ಕೃತಿಯ ಒಳಗಡೆ ಇರುವ ವಿಕಾರವನ್ನು, ಕ್ರೌರ್ಯವನ್ನು, ಕುವೆಂಪು ಯಾವುದೇ ಅಂಜಿಕೆ ಅಳುಕು ಭಯವಿಲ್ಲದೆ ದಾಖಲಿಸುತ್ತಾರೆ. ಕುವೆಂಪು ಅವರಿಗೆ ಆಳುವವರ ವಿರುದ್ಧ, ಧಣಿಗಳ ವಿರುದ್ಧ ಎಂತಹ ಪ್ರತಿಭಟನಾತ್ಮಕ ನಂಬಿಕೆ ಮತ್ತು ಬದ್ಧತೆ ಇತ್ತು ಎಂದರೆ, ಮೈಸೂರು ಮಹಾರಾಜರೇ ಸ್ವತಃ 'ನಮ್ಮ ಮನೆಗೆ ಬಂದು ಪಾಠ ಮಾಡಿ' ಅಂತ ಪತ್ರ ಬರೆದಾಗಲೂ ಕುವೆಂಪು

Scanned with CamScanner

ಅವರು ಅದನ್ನು ನಿರಾಕರಿಸಿದರು.

ಸಂಸ್ಕೃತಿಯ ಆಲೋಚನೆಗೆ ಸಂಬಂಧಿಸಿದಂತೆ ಇನ್ನೊಂದು ಬಹಳ ಮುಖ್ಯವಾದ ಸಂಗತಿಯನ್ನು ಕುವೆಂಪು ಅವರು ಪ್ರಸ್ತಾಪ ಮಾಡಿದ್ದಾರೆ. ಅದು 'ಒಡವೆ ಮತ್ತು ಬಂಗಾರದ ಪರಿಕಲ್ಪನೆ'. ಇದು ಅವರ ಲೋಕದರ್ಶನದ, ಸಂಸ್ಕೃತಿ ಚಿಂತನೆಯ ತಾಯಿ ಬೇರು. ಬಂಗಾರ ಮೂಲ ವಸ್ತು. ಅದನ್ನು ಕರಗಿಸಿ ನಮಗೆ ಬೇಕಾದಂತಹ ಒಡವೆ ಮಾಡಿಸಿಕೊಳ್ಳಬಹುದು. ಒಡವೆಗಳು ಅವನ್ನು ಹಾಕಿಕೊಳ್ಳುವವರ ಆಸಕ್ತಿ, ಅಭಿರುಚಿಗೆ ಸಂಬಂಧಿಸಿದಂತೆ ಬೇರೆ ಬೇರೆ ರೂಪದಲ್ಲಿ ಅವನ್ನು ತಯಾರು ಮಾಡಲಾಗುತ್ತದೆ. ಮೂಲ ವಸ್ತುವಾದ ಬಂಗಾರವನ್ನು ಒಡವೆಯನ್ನಾಗಿ ರೂಪಾಂತರ ಮಾಡುವಾಗ ಅದನ್ನು ಹಾಕಿಕೊಳ್ಳುವವರ ಆಸಕ್ತಿ, ಅಭಿರುಚಿಗೆ ತಕ್ಕಂತೆ ಅದರ ರೂಪ ಮತ್ತು ವಿನ್ಯಾಸಗಳನ್ನು ಮಾಡಲಾಗುತ್ತದೆ. ಒಂದು ಕಾಲದ ಒಡವೆಗಳನ್ನು ಮತ್ತೊಂದು ಕಾಲದಲ್ಲಿ ಬದಲಿಸಲು ನಾವು ಸ್ವತಂತ್ರರು. ಅದಕ್ಕೆ ಆಯ್ಕೆ ಮತ್ತು ಆದ್ಯತೆ ಇರುತ್ತೆ. ಇಲ್ಲಿ ಬಂಗಾರವೇ ಸಂಸ್ಕೃತಿ ಅಲ್ಲ. ಒಡವೆ ರೂಪುಗೊಳ್ಳಲು ಇರುವ ಮೂಲ ಆಕರ ಬಂಗಾರವಾದ್ದರಿಂದ ಒಡವೆಗಳು ಇಲ್ಲಿ ಸಂಸ್ಕೃತಿಯಾಗಿ ಕಂಡುಬರುತ್ತವೆ. ಕುವೆಂಪು ಅವರ ಪ್ರಕಾರ ಸಂಸ್ಕೃತಿ ಎಂಬುದು ಮ್ಯೂಸಿಯಂನ ವಸ್ತುವಲ್ಲ. ಮೂಲವಸ್ತುವನ್ನು ಕರಗಿಸಿ ನಮಗೆ ಬೇಕಾದ ರೂಪದಲ್ಲಿ ಮಾಡಿಕೊಳ್ಳುವುದೇ ಸಂಸ್ಕೃತಿ. ಕುವೆಂಪು ಅವರು ಶ್ರೀರಾಮಾಯಣ ದರ್ಶನಂ, ಬೆರಳ್‌ಗೆ-ಕೊರಳ್, ಶೂದ್ರತಪಸ್ವಿ, ಕೃತಿಗಳ ಮೂಲವಸ್ತುವನ್ನು ಸೃಜನಶೀಲವಾಗಿ ರೂಪಾಂತರಿಸಿದ್ದು ಹೀಗೆ. ಈ ಕೃತಿಗಳ ಮೂಲ ವಸ್ತುಗಳು ಪ್ರಾಚೀನ ಕಾಲದವು. ಅವು ಸಂಸ್ಕೃತದಲ್ಲಿವೆ, ಅವು ವೈದಿಕ ಮೂಲದವು ಎಂದು ಅವರು ನಿರಾಕರಿಸಲಿಲ್ಲ. ಅಲ್ಲಿಯ ವಸ್ತುಗಳನ್ನು ಆಯ್ಕೆ ಮಾಡಿಕೊಂಡು ತಮಗೆ ಬೇಕಾದಂತೆ; ಸಮಕಾಲೀನ ಮೌಲ್ಯಗಳ ಮೂಸೆಯಲ್ಲಿ ಅವಕ್ಕೆ ಮರುಜೀವ ಕೊಟ್ಟರು. ಇದಕ್ಕೆ ಬೇಕಾದ ಬಹಳ ದೊಡ್ಡ ದರ್ಶನವನ್ನು ರೂಪಿಸಿದರು ಮತ್ತು ರಚಿಸಿದವರು. ಇದು ಕುವೆಂಪು ಅವರ ಮೂಲ ಬೇರು ಮತ್ತು ದರ್ಶನ. ಕುವೆಂಪು ಅವರ ಸಂಸ್ಕೃತಿ ಚಿಂತನೆಯಲ್ಲಿ ಉಪನಿಷತ್ತು, ವೇದ, ರಾಮಾಯಣ, ಮಹಾಭಾರತ ಇವು ಮಾತ್ರ ಬರುವುದಿಲ್ಲ. ಇವುಗಳ ಜೊತೆಗೆ ಸಾಮಾನ್ಯರಾದ ಕರಿಸಿದ್ಧ, ನಾಗಿ, ಓಡು ಹುಳ, ಗೊಬ್ಬರ, ಹಿರೇ ಹೂವಿಗೂ ಮಹತ್ವ ಕೊಡುತ್ತಾರೆ. ವಸ್ತು, ವ್ಯಕ್ತಿ, ಕಾವ್ಯ, ದಾರ್ಶನಿಕರು, ವಿಷಯಕ್ಕೆ ಸಂಬಂಧಪಟ್ಟಂತೆ ಮೇಲು ಕೀಳು ಎಂಬುದು ಕುವೆಂಪು ಸಂಸ್ಕೃತಿ ಚಿಂತನೆಯಲ್ಲಿ ಇಲ್ಲ. ಎಲ್ಲರನ್ನೂ ಸಮಾನವಾಗಿ ಕಾಣುತ್ತಾರೆ. ಅವರಿಗೆ ವೇದ ಉಪನಿಷತ್ತು ಎಷ್ಟು ಮುಖ್ಯವೋ, ಕಾಡಲ್ಲಿ ಕೊಳಲನೂದುವ ಗೊಲ್ಲನೂ ಅಷ್ಟೇ ಮುಖ್ಯನಾಗುತ್ತಾನೆ. ಅಂದರೆ ಋಷಿಮುನಿಗಳ, ವೇದೋಪನಿಷತ್ತುಗಳ ಗಾನವನ್ನು, ಮಂತ್ರವನ್ನು ಅಪೇಕ್ಷೆ ಪಡುವ, ಆಸೆ ಪಡುವ, ಕಾಡಲ್ಲಿ ಉಲಿವ ಗೊಲ್ಲನ ನಾದವೂ ಮುಖ್ಯವಾಗುತ್ತದೆ. ಇಲ್ಲಿ ಯಾವುದನ್ನೂ, ಯಾರನ್ನೂ ನಿರಾಕರಿಸಿದೆ ಎಲ್ಲಾ ಕೃತಿಗಳಲ್ಲಿ ಕಟ್ಟುತ್ತಾ ಹೋಗುತ್ತಾರೆ. ಅವರಿಗೆ ರಾಮಾಯಣದ ಬಹುಮುಖ್ಯವಾದ ಎಲ್ಲಾ ಪಾತ್ರಗಳ

Scanned with CamScanner

ಜೊತೆಗೆ, ಹೊಸದಾಗಿ ಸೃಷ್ಟಿಯಾಗುವ ಅನಲೆಯೂ ಬೇಕು. ಕರಿಸಿದ್ಧ, ಗುತ್ತಿ ತಿಮ್ಮಿ, ಚಂದ್ರೇಗೌಡ, ಸೀತೆ, ಹೂವಯ್ಯ ಪ್ರತಿಯೊಬ್ಬರೂ ಬೇಕು.

'ಇಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ;
ಯಾವುದೂ ಯಕಶ್ಚಿತವಲ್ಲ !...
ಇಲ್ಲಿ ಎಲ್ಲಕ್ಕೂ ಇದೆ ಅರ್ಥ;
ಯಾವುದೂ ಅಲ್ಲ ವ್ಯರ್ಥ;
ನೀರೆಲ್ಲ ಊ ತೀರ್ಥ !

ಇಲ್ಲಿ ನೀರೂ ಬೇಕು, ತೀರ್ಥವೂ ಬೇಕು. ಎಲ್ಲಾ ನೀರನ್ನು ತೀರ್ಥವಾಗಿ ಮಾರ್ಪಡಿಸುವುದೇ ಸಂಸ್ಕೃತಿಯ ಬಹಳ ದೊಡ್ಡ ಆಶಯ ಮತ್ತು ಕನಸು. ಬಂಗಾರದಿಂದ ನಮಗೆ ಬೇಕಾದ ಒಡವೆಗಳನ್ನು ನಮಗೆ ಹೇಗೆ ಬೇಕು ಹಾಗೆ ಮಾಡಿಕೊಳ್ಳುತ್ತೇವೆಯೋ ಹಾಗೆಯೇ ನೀರು ಮತ್ತು ತೀರ್ಥವೂ ಮುಖ್ಯ. ಬಂಗಾರವನ್ನು ಒಡವೆಯಾಗಿ, ನೀರನ್ನು ತೀರ್ಥವಾಗಿ ಮಾಡುವುದು ಸಂಸ್ಕೃತಿಯೇ. ಕುವೆಂಪು ಚಿಂತನೆಯಲ್ಲಿ ನೀರು ಎಷ್ಟು ಮುಖ್ಯವೋ; ತೀರ್ಥವೂ ಅಷ್ಟೇ ಮುಖ್ಯ. ಇದು ಕುವೆಂಪು ಅವರ ಸಂಸ್ಕೃತಿ ಚಿಂತನೆಯ ಒಟ್ಟು ವಿನ್ಯಾಸ.

Scanned with CamScanner

Annexure- 6



ಡಾ. ಈಶ್ವರಯ್ಯ ಮಠ ಅವರ ಸಂಸ್ಮರಣ ಸಂಪುಟ

Scanned with CamScanner

NENAPE NANDADEEPA : (A Commemorative Volume on Dr. Eshwarayya Math)

Chief Editors : Dr Kalyanrao G Patil, Dr. Jagannath Hebbale
Editors : Prof. Shivananda S.Viraktamath, Prof. Linganna Gonal

First Impression: 2021
Copies : 500
Pages : xviii+ 8+526
Price : 600/-
© : Publisher
DTP : Vachan Chetan Computers, Bidar Mob :9916424411
Cover Design : Shwetha
Paper used : 80 GSM NS Maplitho

ISBN : 978-93-81718-63-6

Published by
Pavitra Prakashana
Akshar-Vikas, Plot No. 11 & 12
Saraswatipura, University post
Kalburagi-585 106
Mob : 90081 18448

ನೆನಪೇ ನಂದಾದೀಪ (ಡಾ. ಈಶ್ವರಯ್ಯ ಮಠ ಅವರ ಸಂಸ್ಮರಣ ಸಂಪುಟ)
ಪ್ರಧಾನ ಸಂಪಾದಕರು : ಡಾ. **ಕಲ್ಯಾಣರಾವ ಜಿ. ಪಾಟೀಲ, ಡಾ. ಜಗನ್ನಾಥ ಹೆಬ್ಬಾಳೆ**
ಸಂಪಾದಕರು : **ಪ್ರೊ. ಶಿವಾನಂದ ಎಸ್. ವಿರಕ್ತಮಠ, ಪ್ರೊ. ಲಿಂಗಣ್ಣ ಗೋನಾಲ**
© : ಪ್ರಕಾಶಕರು
ಪ್ರಥಮ ಮುದ್ರಣ : ೨೦೨೧
ಪ್ರತಿಗಳು : ೫೦೦
ಪುಟಗಳು: ೧೮+೮+೫೨೬
ಬೆಲೆ : ೬೦೦/-
ಛಾಯಾಕ್ಷರ ವಿನ್ಯಾಸ: ವಚನಚೇತನ ಕಂಪ್ಯೂಟರ್ಸ್, ಬೀದರ, ಮೊ: ೯೯೧೬೪೨೬೪೪೧೧
ಬಳಸಿದ ಕಾಗದ : ೮೦ ಜಿಎಸ್‌ಎಂ ಎನ್‌ಎಸ್ ಮ್ಯಾಪ್‌ಲಿಥೊ
ಪ್ರಕಾಶಕರು: **ಪವಿತ್ರ ಪ್ರಕಾಶನ** ಅಕ್ಷರ-ವಿಕಾಸ, ಪ್ಲಾಟ್ ಸಂಖ್ಯೆ: ೧೧ & ೧೨, ಸರಸ್ವತಿಪುರ,
ವಿಶ್ವವಿದ್ಯಾಲಯ ಅಂಚೆ, ಕಲಬುರಗಿ-೫೮೫೧೦೫ ದೂ: ೯೦೦೮೧ ೧೮೪೪೮

ಸ್ವಾನ್ ಪ್ರಿಂಟರ್ಸ್
www.svanprinters.com
☎ 080-26742233

Scanned with CamScanner

೭೭. ಸಾಹಿತ್ಯ ಸೌರಭಕ್ಕೆ ಕನ್ನಡಿ ಹಿಡಿಯುವ 'ಅರಿವು' – ಡಾ. ಸಂಗೀತಾ ಎಂ. ಹಿರೇಮಠ / ೩೨೭
೭೮. ಕರಿಯು ಕನ್ನಡಿಯೊಳಗೆ – ಪ್ರೊ. ರಾಜಶೇಖರ ಬಿರಾದಾರ ಬೋನ್ಹಾಳ್ / ೩೩೩
೭೯. ನರ ವಾಙ್ಮನಗಳಿಗೆ ಗೋಚರಿಸದಿಹ ಪರತತ್ವ – ಪ್ರೊ. ರಾಜಶೇಖರ ಬಿರಾದಾರ ಬೋನ್ಹಾಳ / ೩೩೮
೮೦. ಬಸವ ಸಾಗರ: ಒಂದು ಅವಲೋಕನ – ಡಾ. ಚನ್ನಬಸವಯ್ಯ ಹಿರೇಮಠ / ೩೪೨
೮೧. ಅದ್ವೀತಿಯ ಸಂಪಾದಕ – ಡಾ. ಮಹಾದೇವಿ ಹೆಬ್ಬಾಳೆ / ೩೪೫
೮೨. ವಿಚಿತ್ರ ವ್ರತಗಳ ಪವಿತ್ರ ಚರಿತ್ರೆ : ಶ್ರೀ ವಿಶ್ವನಾಥರಡ್ಡಿ ಮುದ್ನಾಳ – ಡಾ. ಪ್ರೇಮಾ ಅಪಚಂದ / ೩೪೮
೮೩. ಬಂಧುಗಳೇ : ಮುದ್ನಾಳರ ವ್ಯಕ್ತಿತ್ವದ ಕೈಗನ್ನಡಿ – ಬಿ.ಎಚ್. ನಿರಗುಡಿ / ೩೫೩
೮೪. 'ಗುರು ಪಥ' ಶಿಕ್ಷಣದ ನಿಜ ಪಥ – ಡಾ. ಚಿತ್ಕಳಾ ಮಠಪತಿ / ೩೫೭
೮೫. 'ಲೋಕಸಿರಿ' ಸ್ಮರಣ ಸಂಚಿಕೆ ಒಂದು ಟಿಪ್ಪಣಿ – ಡಾ. ಚಂದ್ರಪ್ಪ ಭತಮುರ್ಗೆ / ೩೬೩
೮೬. 'ಲೋಕ ಸಿರಿ'ಯ ಲೋಕಾರ್ಥ ಚಿಂತನೆ – ಪ್ರೊ. ಅಶೋಕ ಎಸ್. ಕೋರೆ / ೩೬೫
೮೭. 'ಲೋಕಸಿರಿ' ಸಂಪಾದನೆ – ಡಾ. ಚಿ.ಸಿ. ನಿಂಗಣ್ಣ / ೩೭೧
೮೮. 'ನೆನಹು ತುಂಬಿ' ನೋಡ ನೋಡುತ್ತಲೇ ಲಯವಾದ ಮಾಯಾವಿ
– ಶಿವಕುಮಾರ ಅಮ್ಮಾಪುರ / ೩೭೪
೮೯. ಶರಣ ಕಲ್ಯಾಣ : ಒಂದು ಅವಲೋಕನ – ಡಾ. ಸಿದ್ಧಲಿಂಗ ದಬ್ಬಾ / ೩೭೭
೯೦. ಗಿರಿ ಸಂಪದ : ವಿಶ್ಲೇಷಣೆ – ಡಾ. ಬಸವರಾಜ ಎಸ್. ಕಲೆಗಾರ / ೩೮೬
೯೧. ಗಿರಿಸಂಪದ – ಪ. ಮಾನು ಸಗರ / ೩೯೭
೯೨. ಅರಿವ ಸಿರಿ : ಸಂಪಾದನೆಯ ಸೂತ್ರಗಳು – ಡಾ. ನಾಗೇಂದ್ರ ಮಸೂತಿ / ೩೯೯
೯೩. 'ದೀಪ್ತಿ' : ಒಂದಿಷ್ಟು ಆಲೋಚನೆ – ಡಾ. ರಘುಶಂಖ ಭಾತಂಬ್ರಾ / ೪೦೧
೯೪. ಕನ್ನಡ ಸಾಹಿತ್ಯ ಮತ್ತು ಆಧುನಿಕೋತ್ತರವಾದ – ಶೈಲಜಾ ಶರಣಗೌಡ / ೪೦೫
೯೫. ಕವಿಜನಮಾರ್ಗ : ಒಂದು ಮಾದರಿ ನೆನಪಿನ ಹೊತ್ತಿಗೆ – ಡಾ. ಗುರುಲಿಂಗಪ್ಪ ಧಬಾಲೆ / ೪೧೩
೯೬. ಅನಂತ ವಿನಾಯಕ – ಡಾ. ಶೀಲಾ ದಾಸ / ೪೨೧

ಭಾಗ : ಮೂರು – ಕಾವ್ಯ ನಮನ

೯೭. ನುಡಿ ಸನ್ಮಾನ – ಬಸವೇಶ್ವರನಾಥ ಸೂಗೂರಮಠ / ೪೨೭
೯೮. ಹನಿಗವನಗಳು – ಬಸವೇಶ್ವರನಾಥ ಸೂಗೂರಮಠ / ೪೨೮
೯೯. ಅದೆಷ್ಟು ದಿನದಿಂದ ಕಾಯುತ್ತಿದ್ದೆ ನೀನು? – ಡಾ. ಬಿ.ಎಂ. ಪುಟ್ಟಯ್ಯ / ೪೩೦
೧೦೦. ಬಯಲು ದೀಪ – ಗೊಂದಡಗಿ ವಿಶ್ವನಾಥ ರೆಡ್ಡಿ / ೪೩೨
೧೦೧. ಈಶ್ವರನಿಲ್ಲದ ಸಗರನಾಡು – ಸಾಹೇಬಗೌಡ ಬಿರಾದಾರ / ೪೩೪
೧೦೨. ಅಶ್ರುತರ್ಪಣ – ಡಾ. ಕಲ್ಯಾಣರಾವ ಜಿ. ಪಾಟೀಲ / ೪೩೩
೧೦೩. ಮಿತ್ರ ಈಶ್ವರಯ್ಯ ಮಠ – ಸಬಿಲಾಲ್ ಮಕಾನ್ದಾರ್ / ೪೩೪

Scanned with CamScanner

೯೯. ಅದೆಷ್ಟು ದಿನದಿಂದ ಕಾಯುತ್ತಿದ್ದೆ ನೀನು?

❊ ಡಾ. ಬಿ.ಎಂ. ಪುಟ್ಟಯ್ಯ

ಕಾಲವೆ
ಅದೆಷ್ಟು ದಿನದಿಂದ ಕಾಯುತ್ತಿದ್ದೆ ನೀನು
ಹೀಗೆ ಸೇಡು ತೀರಿಸಿಕೊಳ್ಳಲು
ಬದುಕು ಮುಗಿಸುವ ಮುನ್ನವೆ ಬದುಕ ಕಿತ್ತುಕೊಳ್ಳಲು
ಹೇಳಲು, ಬರೆಯಲು ಪದ ಹುಟ್ಟದ ಸ್ಥಿತಿಗೆ ನಮ್ಮನ್ನು ತಳ್ಳಲು।

ಮೈ ತುಂಬ ಮನ ತುಂಬ
ಭಾವತುಂಬಿ ನಗುತ್ತಿದ್ದವನ
ನಗಿಸುತ್ತಿದ್ದವನ
ಒಮ್ಮೆಲೆ ಮುಕ್ಕಿ ಮುಗಿಸಲು
ಅದೆಷ್ಟು ದಿನದಿಂದ ಕಾಯುತ್ತಿದ್ದೆ ನೀನು?।

ಹುಲ್ಲು – ಪರ್ವತಗಳ ನಡುವೆ
ಹನಿ – ಸಾಗರಗಳ ನಡುವೆ
ಹೆಣ್ಣು – ಗಂಡುಗಳ ನಡುವೆ
ಆ ಜಾತಿ – ಈ ಜಾತಿ ನಡುವೆ
ಬೇಧವೆಣಿಸದವನ
ಸದ್ದಿಲ್ಲದೆ ಸೆಳೆದೊಯ್ಯಲು
ಅದೆಷ್ಟು ದಿನದಿಂದ ಕಾಯುತ್ತಿದ್ದೆ ನೀನು?।

ಹೃದಯ ಹೊಕ್ಕಿದ್ದರೆ ಕಾಣುತ್ತಿತ್ತು
ನೊಂದವರ, ಬೆಂದವರ
ಉರಿತಾಪಗಳು ಮನೆಮಾಡಿದ್ದು
ಅವು ಅಲ್ಲೆ ಕೊರಗಿ, ಕರಗಿ

Scanned with CamScanner

ಮಾತುಕೃತಿಯಲಿ ಹೊರಬಂದಿದ್ದು
ಇಂತಹವನ ಇದ್ದಂತೆಯೇ ಇಲ್ಲವಾಗಿಸಲು
ಅದೆಷ್ಟು ದಿನದಿಂದ ಕಾಯುತ್ತಿದ್ದೆ ನೀನು?।

ಬೆವರಿನ ಬೆಲೆ ಕಂಡವನ
ಕಣ್ಣೀರ ಹನಿ ಅರಿತವನ
ಹಸಿದವರ ಹಾಹಾಕಾರ ಬಲ್ಲವನ
ವೃತ್ತಿಯಲಿ ಸುಖ ಕಂಡವನ
ಕದ್ದುಮುಚ್ಚಿ ಕರಕೊಂಡು ಹೋಗಲು
ಅದೆಷ್ಟು ದಿನದಿಂದ ಕಾಯುತ್ತಿದ್ದೆ ನೀನು?।

ಜೀವ ಕಿತ್ತುಕೊಂಡು ನಗಬಹುದು ನೀನು
ಅಣ್ಣ ನಮ್ಮೊಳಗೇ ನಗುತ್ತಿದ್ದಾನೆ ಬಲ್ಲೆಯಾ ನೀನು?
ಸಮತೆಯ ಕನಸು ಕಂಡವನ
ಸಮತೆಯ ಉಸಿರಾಡಿದವನ
ಒಮ್ಮೆಲೇ ಉಸಿರು ನಿಲ್ಲಿಸಲು
ಅದೆಷ್ಟು ದಿನದಿಂದ ಕಾಯುತ್ತಿದ್ದೆ ನೀನು?।
ಅಣ್ಣ ನಮ್ಮೊಳಗೇ ನಗುತ್ತಿದ್ದಾನೆ ಬಲ್ಲೆಯಾ ನೀನು?
ಅಣ್ಣ ನಮ್ಮೊಳಗೇ ನಗುತ್ತಿರುತ್ತಾನೆ ಬಲ್ಲೆಯಾ ನೀನು?

□□

ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

Scanned with CamScanner

Annexure - 7

ಸಾರ್ಥಕ ಬದುಕು

ವಚನಗಳು - ವಚನಕಾರರು : ಸಂಶೋಧನಾತ್ಮಕ ದೃಷ್ಟಿಕೋನ

ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ

ಅವರ ಎಂಬತ್ತರ ಸಂಭ್ರಮ

ಗೌರವ ಸಂಪುಟ ೨

ಸಂಪಾ

ಡಾ. ಅಮರೇಶ ಯತಗಲ್

Scanned with CamScanner

SAARTHAKA BADUKU

A Felicitation Volume-2
In Honour of Justice Shivaraj V. Patil

Editor
Dr. Amaresh Yatagal
HOD, Dept. of Epigraphy
Kannada University, Hampi
Vidyaranya -583276
Mob: 9972841256
E-mail: dryatagal@gmail.com

Published by
Justice Shivaraj V. Patil Foundation (Reg.), Rayachur
Mob : 9845083177

First Edition : January 2020

Copyright : Publishers

Pages : xvi+696+16

Price : Rs. 1000/-

Size : Crown 1/4

Paper used : 70 GSM NS Maplitho

ISBN : 978-93-5406-365-7

Anubhavamantapa Photo Art : Nadoja Dr. J.S. Khande Rao

Cover Page Design : S. Manjunath

Inner Layout : Sunitha V.D., K.L. Rajashekhar

ಸ್ವಾನ್ ಪ್ರಿಂಟರ್ಸ್
www.svanprinters.com
☎ 080-26742233

Scanned with CamScanner

೨೨. ಅಲ್ಲಮ: ಅರಿವಿನೊಳಗಿನ ಅರಿವು – ಪ್ರೊ. ನುಲ್ಲೇಸುರಂ ಜಿ. ವೆಂಕಟೇಶ / ೧೫೦
೨೩. ಅಲ್ಲಮನ ತತ್ವಮೀಮಾಂಸೆಯನ್ನು ಅರಿಯುವ ಕಡೆಗೆ – ಡಾ. ಬಿ.ಎಂ. ಪುಟ್ಟಯ್ಯ / ೧೫೬
೨೪. ಅಲ್ಲಮನನ್ನು ಅರಿಯುವ ದಾರಿ – ಡಾ. ವೆಂಕಟಗಿರಿ ದಳವಾಯಿ / ೧೭೬
೨೫. ಅಲ್ಲಮಪ್ರಭು ಮತ್ತು ಬಸವಣ್ಣನ ರೂಪಾಂತರದ ತಾತ್ವಿಕ ನೆಲೆಗಳು – ಡಾ. ಎಸ್.ಎಂ. ಗಿರಿಜಾಪತಿ / ೧೭೯
೨೬. ಬೌದ್ಧಧರ್ಮ ಮತ್ತು ಅಲ್ಲಮಪ್ರಭುವಿನಲ್ಲಿ ಶೂನ್ಯತೆ – ಡಾ. ಎಸ್. ನಟರಾಜ ಬೂದಾಳು / ೧೯೮
೨೭. ಚೆನ್ನಬಸವಣ್ಣನ ವಚನಗಳಲ್ಲಿ ಮಾನವೀಯ ಮೌಲ್ಯಗಳು – ಡಾ. ಎಸ್.ವೈ. ಮಟ್ಟಿಹಾಳ / ೨೧೩
೨೮. ಶಿವಯೋಗಿ ಸಿದ್ಧರಾಮ – ಡಾ. ಶಾಂತಾದೇವಿ ಸಣ್ಣೆಲ್ಲಪ್ಪನವರ / ೨೨೩
೨೯. ವಚನಕಾರ ಸಿದ್ಧರಾಮ ಮತ್ತು ರಾಘವಾಂಕನ ಸಿದ್ಧರಾಮ – ಡಾ. ಎಸ್. ಜಿ. ಮಹಾದೇವಪ್ಪ / ೨೨೭
೩೦. ಸಿದ್ಧರಾಮನ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ – ಡಾ. ರೋಳೆಕರ ನಾರಾಯಣ / ೨೩೩
೩೧. ಸಿದ್ಧರಾಮನ ವಚನಗಳಲ್ಲಿ ಸಾಂಸ್ಕೃತಿಕ ಅನುಸಂಧಾನ – ಶ್ರೀ ಹನುಮೇಶ ಮೇಟಿ / ೨೩೭
೩೨. ಅಲಕ್ಷಿತ ವಚನಕಾರರು ಮತ್ತು ಅವರ ಸಂದೇಶ – ಡಾ. ಧನವಂತ ಹಾಜವಗೋಳ / ೨೪೪
೩೩. ನಗೆಮಾರಿ ತಂದೆ–ಆತುರವೈರಿ ಮಾರೇಶ್ವರ: ತೌಲನಿಕ ನೋಟ – ಡಾ. ವಸಂತ ಕುಷ್ಟಗಿ / ೨೫೦
೩೪. ಶರಣ ಚಿಕ್ಕಯ್ಯ ಪಂಡಿತನ ದೇವರಗುಡಿ ಶಾಸನ – ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ / ೨೭೧
೩೫. ಭೀಮಾ ಕೃಷ್ಣವೇಣ್ಣಾ ಸಂಗಮೇಶ್ವರನ ಭಕ್ತ ಶಿವಶರಣರು – ಶ್ರೀ ಸೀತಾರಾಮ ಜಾಗೀರ್‌ದಾರ್ / ೨೭೯
೩೬. ಮರಾತರೊಳಗೆ ಚೆನ್ನ – ಪ್ರಮಥರೊಳಗೆ ಚೆನ್ನ – ಡಾ. ಬಸವಲಿಂಗ ಸೊಪ್ಪಿಮಠ / ೨೮೮
೩೭. ಕುಲಕ್ಕೆ ತಿಲಕ ಶರಣ ಮಾದಾರ ಚೆನ್ನಯ್ಯ – ಡಾ. ಶಿವಾನಂದ ಕೆಳಗಿನಮನಿ / ೨೯೨
೩೮. ಅನುಭಾವಿ ಮಾದಾರ ಧೂಳಯ್ಯನ ವಚನಗಳು – ಪ್ರೊ. ಎಚ್. ಲಿಂಗಪ್ಪ / ೩೦೦
೩೯. ಅರಿವಿನ ಮಾರಿತಂದೆಯ ವಚನಗಳಲ್ಲಿ ಮನೋವಿಜ್ಞಾನ – ಡಾ. ವಿಷ್ಣು ಎಂ. ಶಿಂದೆ / ೩೨೧
೪೦. ಶರಣ ತುರುಗಾಹಿ ರಾಮಣ್ಣನ ನಿಜದ ನೆಲೆ – ಡಾ. ಡಿ.ಕೆ. ಚಿತ್ತಯ್ಯ ಪೂಜಾರ್ / ೩೨೫
೪೧. ಬಾಚಿಕಾಯಕದ ಬಸವಯ್ಯನ ವೃತ್ತಿ ಹಾಗೂ ತತ್ವಮೀಮಾಂಸೆ – ಡಾ. ವೀರೇಶ ಬಡಿಗೇರ / ೩೩೩
೪೨. ಕುರಿಗಾಯಿ ವೀರಗೊಲ್ಲಾಳನ ವಚನಗಳ ವಿಶ್ಲೇಷಣೆ – ಡಾ. ಶಾಂತಪ್ಪ ಎನ್. ಡಂಬಳ / ೩೪೭
೪೩. ಮಡಿವಾಳ ಮಾಚಿದೇವ: ವೈಚಾರಿಕ ನಿಲುವು – ಡಾ. ಎಂ. ನಾಗರಾಜ / ೩೫೨
೪೪. ಉರಿಲಿಂಗಪೆದ್ದಿಯ ವಚನಗಳ ತಾತ್ವಿಕತೆ – ಡಾ. ಗವಿಸಿದ್ಧಪ್ಪ ಎಚ್. ಪಾಟೀಲ / ೩೫೬
೪೫. ಘಟ್ಟಿವಾಳಯ್ಯನ ವಚನಗಳಲ್ಲಿ ಜಂಗಮ ಪರಿಕಲ್ಪನೆ – ಡಾ. ಮೀನಾಕುಮಾರಿ ಎಸ್. ಪಾಟೀಲ್ / ೩೬೨
೪೬. ಅಜ್ಞಾತರ ಸಾಲಿನಲ್ಲಿ ಸೊಡ್ಡಳ ಬಾಚರಸನ ವಚನಗಳು – ಡಾ. ಎಸ್.ಆರ್. ಗುಂಜಾಳ / ೩೭೨
೪೭. ಹಡಪದ ಅಪ್ಪಣ್ಣನ ವಚನಗಳ ವೈಶಿಷ್ಟ್ಯ – ಡಾ. ಹನುಮಂತಪ್ಪ ಸಂಜೀವಣ್ಣನವರ / ೩೭೮
೪೮. ಅಂಬಿಗರ ಚೌಡಯ್ಯನ ಶರಣ ಚಿಂತನೆ – ಡಾ. ನಾಗಾಬಾಯಿ ಬಿ. ಬುಳ್ಳಾ / ೩೯೦
೪೯. ಗೊಬ್ಬೂರಿನ ಬಿಬ್ಬಿ ಬಾಚರಸನ ವಚನಗಳ ವೈಶಿಷ್ಟ್ಯ – ಪ್ರೊ. ರಾಮರೆಡ್ಡಿ ಕೆ. / ೩೯೪
೫೦. ಮೋಳಿಗೆ ಮಾರಯ್ಯನ ವಚನಗಳಲ್ಲಿ ಸಮಕಾಲೀನ ಚಿಂತನೆ – ಡಾ. ರಾಜಶೇಖರ ಜಮದಂಡಿ / ೪೦೪
೫೧. ಹೆಂಡದ ಮಾರಯ್ಯನ ವಚನಗಳಲ್ಲಿ ಇಹ–ಪರ ಹಾದಿ – ಡಾ. ಸುರೇಂದ್ರಕುಮಾರ ಕೆರಮಗಿ / ೪೧೧

Scanned with CamScanner

ಅಲ್ಲಮನ ತತ್ವಮೀಮಾಂಸೆಯನ್ನು ಅರಿಯುವ ಕಡೆಗೆ

ಡಾ. ಬಿ.ಎಂ. ಪುಟ್ಟಯ್ಯ

ಅಲ್ಲಮನ ವಚನಗಳೊಂದಿಗಿನ ನಮ್ಮ ಒಡನಾಟವನ್ನು ಎಲ್ಲಿಂದಲಾರದೂ ಪುರುಮಾಡಬಹುದು. ಅಂದರೆ, ಅಲ್ಲಮನನ್ನು ಪ್ರವೇಶ ಮಾಡಲು ಹತ್ತಾರು ಬಾಗಿಲುಗಳಿವೆ. ಅಲ್ಲಮ ನಮ್ಮ ಸಿದ್ಧಮಾದರಿಯ ಗ್ರಹಿಕೆಗೆ ಸಿಗುವವನಲ್ಲ. ಸಿದ್ಧಮಾದರಿಯ ಗ್ರಹಿಕೆಯು ಅಲ್ಲಮನಿಗೆ ಒಪ್ಪುವುದಿಲ್ಲ. ನಾವು ಅಲ್ಲಮನೊಂದಿಗೆ ಸಂವಾದವನ್ನು ನಡೆಸುವುದು, ಅವನು ಸೃಷ್ಟಿಸಿದ ತತ್ವಮೀಮಾಂಸೆಯನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಅವನು ಸೃಷ್ಟಿಸಿದ ದಾರ್ಶನಿಕತೆಯನ್ನು ವಿವರಿಸಿಕೊಳ್ಳುವುದು ಬಹಳ ಸಂಕೀರ್ಣವಾದ ಕೆಲಸ. ನಾವು ಎಷ್ಟೇ ಪ್ರಯತ್ನ ಮಾಡಿದರೂ ಅಲ್ಲಮ ನಮಗೆ ಪೂರ್ಣ ಸ್ವರೂಪದಲ್ಲಿ ಸಿಗುವುದಿಲ್ಲ ಎಂಬ ಪ್ರಾಥಮಿಕ ಅರಿವು ನಮಗಿರುವುದು ಒಳ್ಳೆಯದು. ಅಲ್ಲಮನೊಂದಿಗಿನ ಇಂತಹ ಪ್ರಯತ್ನವನ್ನು ಕುರಿತು ಬಾಲಲೀಲಾ ಮಹಾಂತ ಶಿವಯೋಗಿಗಳು ಈ ರೀತಿ ಹೇಳಿದ್ದಾರೆ: "ಇರುವುದೊಂದು ಕನ್ನಡಿಯ ನೂರಾರು ಜನ ಪಿಡಿಯೆ ಅವರವರ ರೂಪನು ಅವರವರು ಕಾಂಬಂತೆ." ಹಾಗಾಗಿ ಅಲ್ಲಮನನ್ನು ಎದುರಾದರೆ. ಅಲ್ಲಮನೊಂದಿಗೆ ಒಡನಾಡಿದರೆ ನಮ್ಮ ಮಿತಿಗಳು ಪ್ರಕಟವಾಗುತ್ತವೆ. ನಮ್ಮ ತಿಳವಳಿಕೆ ಎಷ್ಟು ಅಂತ ಮಾತ್ರ ಗೊತ್ತಾಗುತ್ತೆ; ಆದರೆ ಅಲ್ಲಮ ಏನು, ಎತ್ತ, ಎಷ್ಟು ಅಂತ ಗೊತ್ತಾಗಲ್ಲ. ಇದಕ್ಕೆ ಒಂದು ಕಡೆ ಅಲ್ಲಮ ತನ್ನ ವಚನಗಳ ಮೂಲಕ ರೂಪಿಸಿದ ತತ್ವಮೀಮಾಂಸೆ, ದರ್ಶನ ಕಾರಣವಾದರೆ; ಮತ್ತೊಂದು ಕಡೆ, ನಮ್ಮ ಆಲೋಚನೆಗಳ ಸ್ವರೂಪ ಮತ್ತು ಸ್ವಭಾವಗಳು ಕಾರಣ. ಅಲ್ಲಮನನ್ನು ಓದಲು ಅಥವಾ ಅವನೊಂದಿಗೆ ಒಡನಾಡಲು ಎರಡು ಬಗೆಯ ಆಕರಗಳು ಇವೆ. ಒಂದು: ಅಲ್ಲಮನ ವಚನಗಳು; ಎರಡು: ಅಲ್ಲಮನನ್ನು ಕುರಿತು ಪ್ರಕಟವಾಗಿರುವ ಕೃತಿಗಳು. ಇವುಗಳಲ್ಲಿ ಮುಖ್ಯವಾದ ಕೆಲವನ್ನು ಹೆಸರಿಸಬಹುದು. ಕಾವ್ಯಾನುಸಂಧಾನಗಳು ೩೩,

Scanned with CamScanner

ಶೂನ್ಯಸಂಪಾದನೆಗಳು ೭, ಸ್ಥಳಕಟ್ಟು ಸಂಪಾದನೆಗಳು ೨೯, ಸ್ತೋತ್ರ ಸಂಪಾದನೆಗಳು ೧೪, ಅನುವಾದಗಳು ೧೦, ಸಂಕೀರ್ಣ ಸಂಪಾದನೆಗಳು ೧೧, ಅಲ್ಲಮನ ಜೀವನ ವಚನ ಕುರಿತ ಕೃತಿಗಳು ೩೭, ಕಾದಂಬರಿಗಳು ೨, ಭಾಷಿಕ ಅಧ್ಯಯನಗಳು ೪, ಮಧ್ಯಕಾಲೀನ ಸಾಹಿತ್ಯದ ಅಧ್ಯಯನಗಳು ೧೧, ಶೈವ, ವೀರಶೈವ ಮೀಮಾಂಸೆ ಸಿದ್ಧಾಂತ ಕುರಿತ ಅಧ್ಯಯನಗಳು ೮, ದೃಶ್ಯ ಪ್ರಕಾರಗಳು, ಸಣ್ಣಾಟ, ದೊಡ್ಡಾಟ ೪, ಮೌಖಿಕ ಕಾವ್ಯಗಳು ೨, ಅನುಭಾವ ಸಾಹಿತ್ಯ, ಗತ್ವಪದಕಾರರು ೭, ಸಂಕೀರ್ಣ ರಚನೆಗಳು ೮, ವಿಚಾರ, ವಿಮರ್ಶೆ ಕೃತಿಗಳು ೧೩, ಶೂನ್ಯಸಂಪಾದನೆ ಆಧರಿಸಿದ ಅಧ್ಯಯನಗಳು ೩೧.

ಮೇಲಿನ ೨೨೦ ಕೃತಿಗಳು ನನ್ನ ಗಮನಕ್ಕೆ ಬಂದಿರುವಂತಹವು. ಇವನ್ನು ಬಿಟ್ಟು ಇನ್ನು ಅನೇಕ ಗ್ರಂಥಗಳು ಅಲ್ಲಮನ ಮೇಲೆ ಬಂದಿವೆ. ಆಧುನಿಕ ಕನ್ನಡ ಸಾಹಿತ್ಯದ ಸೃಜನಶೀಲ ಪ್ರಕಾರಗಳಲ್ಲಿ ಅಲ್ಲಮನ ಬಿಡಿ ವಚನಗಳನ್ನು ಬೇರೆ ಬೇರೆ ಬಗೆಯಲ್ಲಿ ಮತ್ತು ಬೇರೆ ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳಲಾಗಿದೆ. ಉದಾಹರಣೆಗೆ, ಕನ್ನಡದ ಕುಸುಮಬಾಲೆ ಕೃತಿಯು ಅಲ್ಲಮನ ಪ್ರ[illegible] ವಚನವಾದ "ಎತ್ತಣ ಮಾಮರ ಎತ್ತಣ ಕೋಗಿಲೆ" ಎಂಬ ವಚನದಿಂದ ಪ್ರಾರಂಭವಾಗುತ್ತದೆ. ಇನ್ನು ತನು ಕರಗದವರಲ್ಲಿ [illegible]ಾದ ಸಾಲುಗಳನ್ನು ಸ್ವತಂತ್ರ ಪುಸ್ತಕಗಳಿಗೆ ಹೆಸರು ಇಡಲು ಬಳಸಲಾಗಿದೆ.

ವಚನ ಸಾಹಿತ್ಯ ಮತ್ತು ಚಳ[illegible]ು ಮೇಲೆ ಹೇರಿರುವ ಹೇಳಿಕೆಗಳಿಗೆ ಮತ್ತು ತೀರ್ಮಾನಗಳಿಗೆ ಅಲ್ಲಮ ಸಿಗುವುದಿಲ್ಲ; ಅವನು ನಿಲುಕುವುದೂ ಇಲ್ಲ. [illegible]ತಹ ತೀರ್ಮಾನಗಳ ಆಚೆ ಅಲ್ಲಮ ಮತ್ತೆಲ್ಲೋ ತಿರುಗಾಡುತ್ತಾ, ಈ ಎಲ್ಲಾ ತೀರ್ಮಾನಗಳನ್ನು ಓರೆಗಣ್ಣಿನಿಂದ ಮತ್ತು [illegible]ಂತ ದಯಾಪರತೆಯಿಂದ ನೋಡುತ್ತಾ, ಪರಿಪಕ್ವವಾಗಿ ವ್ಯಂಗ್ಯ ಮಾಡುತ್ತಾ "ಅಯ್ಯೋ ಐಕಳಾ!" "ಅಯ್ಯೋ ಅಪ್ಪಿಗಳಾ! [illegible]ನ್ನುತ್ತಿರಬಹುದೇ ಎಂದೂ ನನಗೆ ಅನೇಕ ಸಲ ಅನಿಸಿದೆ. "ಈ ಇಡೀ ಚಳವಳಿ ಮತ್ತು ಅಷ್ಟೂ ವಚನಗಳ ಸಾರ ಇದು" [illegible]ು ಹೇಳುವ ಧೈರ್ಯವಾದರೂ ಕನ್ನಡ ಚಿಂತನೆಗೆ ಹೇಗೆ ಸಾಧ್ಯವಾಯಿತು ಎಂದು ನನಗೆ ಅನುಮಾನ ಬಂದುದೂ ಇ[illegible] ವಚನ ಸಾಹಿತ್ಯ ಚಳವಳಿಯ ಬಗೆಗೆ ಕನ್ನಡದ ವ್ಯಚಾರಿಕತೆ ಮತ್ತು ಸಂಶೋಧನೆಗಳು ಕಟ್ಟಿರುವ ಎಲ್ಲಾ ತೀರ್ಮಾನಗಳ[illegible] ಅಲ್ಲಮನ ಒಂದೊಂದು ವಚನವೂ ತೀಕ್ಷ್ಣವಾಗಿ ಗೇಲಿ ಮಾಡುತ್ತಾ, ವಿರೋಧಿಸುತ್ತಾ ಬಂದಿದೆ. ಹೀಗೆ ಹೇಳುವುದು [illegible] ಎನಿಸುವುದಿಲ್ಲ. ಅಲ್ಲಮನನ್ನು ಮೂರ್ತಿ ಹೊರಗಿಟ್ಟು, ನಮ್ಮ ತೀರ್ಮಾನ ಮತ್ತು ಆಶಯಗಳನ್ನು ವಚನ ಸಾಹಿತ್ಯ ಚಳವಳಿಯ [illegible] ಆರೋಪಿಸಿರುವಂತೆ ನನಗೆ ಕಾಣುತ್ತಿದೆ. ಹಾಗಾಗಿ ಅಲ್ಲಮನ ದಾರ್ಶನಿಕತೆಯ ಮೂಲಕ ಆ ಇಡೀ ಸಾಹಿತ್ಯ ಚಳ[illegible]ನ್ನು ಗ್ರಹಿಸಲು ಸಾಧ್ಯವೇ? ಅದಕ್ಕಿರುವ ದಾರಿಗಳಾದರೂ ಯಾವುವು ಎಂಬುದು ನನ್ನ ತಾತ್ವಿಕ ಕುತೂಹಲದ ಪ್ರಶ್ನೆ.

ಈ ವಿಷಯದ ಚರ್ಚೆಗೆ ಎರಡು ವಿಧಾನಗಳಿವೆ. ಒಂದು: ಸಿದ್ಧ ವಸ್ತು, ಉತ್ಪಾದಿತ ವಸ್ತು ಅಥವಾ ಇರುವಿಕೆ. ಇನ್ನೊಂದು ಬದಲಾಗುವಿಕೆ ಅಥವಾ ಚಲನಶೀಲತೆ. ಇದನ್ನು ಆಗುವಿಕೆ ಎಂದು ಕರೆಯಬಹುದು. ಇದರ ಪ್ರಕಾರ ಪ್ರತಿಯೊಂದು ವಸ್ತುವೂ, ಪ್ರತಿಯೊಂದು ವಿಷಯವೂ ನಿರಂತರವಾಗಿ ಬದಲಾಗುತ್ತಾ ಇರುತ್ತದೆ. ಅದನ್ನು ಕುರಿತ ನಮ್ಮ ಗ್ರಹಿಕೆ, ಆಲೋಚನೆ, ಅಭಿವ್ಯಕ್ತಿಯೂ ಕೂಡ ಬದಲಾಗಬೇಕಾಗುತ್ತದೆ. ಇದು ನಡೆಯದಿದ್ದರೆ ನಮ್ಮ ಆಲೋಚನೆ ಯಾಂತ್ರಿಕವಾಗುತ್ತದೆ ಮತ್ತು ಮಾಹಿತಿ ಪ್ರಧಾನವಾಗುತ್ತದೆ. ಆದರೆ ಅಲ್ಲಮ ಈ ಯಾಂತ್ರಿಕ ಆಲೋಚನೆಗೆ ಭಿನ್ನವಾದವನು. ನಾವು ಅಲ್ಲಮನನ್ನು ಅರಿಯಲು ಅದಕ್ಕೆ ಪೂರ್ವಭಾವಿಯಾಗಿ ಸತ್ಯದ ಸ್ವರೂಪ ಏನು ಎಂಬುದನ್ನು ವಿವರಿಸಿ ಕೊಳ್ಳಬೇಕಾಗುತ್ತದೆ. ಕೆಲವರು "ನಾನು ಸತ್ಯವನ್ನು ಹೇಳುತ್ತೇನೆ" ಎಂದು ಹೇಳುವುದನ್ನು ಕೇಳಿದ್ದೇವೆ. ಇನ್ನು ಕೆಲವರು "ನಾನು ಇದ್ದುದನ್ನು ಇದ್ದಂತೆಯೇ ಹೇಳುತ್ತೇನೆ" ಎಂದು ಹೇಳುತ್ತಾರೆ. ಅವರ ಪ್ರಕಾರ ಇದ್ದುದನ್ನು ಇದ್ದಂತೆಯೇ ಹೇಳುವುದು ಎಂದರೆ ಏನು, ಹೇಗೆ?

ಹಳ್ಳ, ನದಿ, ಕಾಲುವೆಯಲ್ಲಿ ಹರಿಯುವ ನೀರಿನ ಎದುರಿಗೆ ನಾವು ಇದ್ದೇವೆ ಎಂದುಕೊಳ್ಳೋಣ. ಹರಿಯುವ ನೀರನ್ನು ನೋಡಿದ ನಾವು ಅದನ್ನು "ಇದ್ದುದನ್ನು ಇದ್ದಂತೆಯೇ ಹೇಳಬೇಕು". ಇದನ್ನು ನೋಡೋಣ. "೧. ನೀರು ಹರಿದು ಹೋಗುತ್ತಿದೆ. ೨. ನೀರು ಹರಿದು ಬರುತ್ತಿದೆ. ೩. ನೀರು ಹರಿದು ಹೋಗುತ್ತಿದೆ ಮತ್ತು ಹರಿದು ಬರುತ್ತಿದೆ. ೪. ನೀರು ಹರಿದು ಬರುತ್ತಿದೆ ಮತ್ತು ಹರಿದು ಹೋಗುತ್ತಿದೆ. ಇವುಗಳಲ್ಲಿ ಯಾವುದು ಸರಿ, ಯಾವುದು ತಪ್ಪು? ಇವುಗಳಲ್ಲಿ

Scanned with CamScanner

ಯಾವುದಾದರೂ ಒಂದನ್ನು ಸರಿ ಎಂತಲೂ ಅಥವಾ ಯಾವುದಾದರೂ ಒಂದನ್ನು ತಪ್ಪು ಎಂತಲೂ ಹೇಳಲು ಆಗುವುದಿಲ್ಲ. ಯಾಕೆಂದರೆ ನೀರು ನಿಂತಿಲ್ಲ; ಹರಿಯುತ್ತಿದೆ ಅದಕ್ಕಾಗಿ. ಇದರ ಬಗೆಗೆ ನಾಲ್ಕು ರೀತಿಯಲ್ಲಿ ಹೇಳಲು ಸಾಧ್ಯವಾಗಿದ್ದು ಯಾಕೆ ಎಂದರೆ ಅಲ್ಲಿ ನೀರು ಹರಿಯುತ್ತಿರುವುದರಿಂದ. ನಿಂತ ನೀರಾಗಿದ್ದರೆ ಇಷ್ಟು ಬಗೆಯಲ್ಲಿ ಹೇಳುವ ಅಗತ್ಯ ಬರುತ್ತಿರಲಿಲ್ಲ.

ಒಂದು ಬೀಜ ಇದೆ. ಒಂದು ಮೊಟ್ಟೆ ಇದೆ. ಒಂದು ಪಾತ್ರೆಯಲ್ಲಿ ಮೊಸರು ಇದೆ. ಈ ಮೂರು ವಾಕ್ಯಗಳ ಕೊನೆಯಲ್ಲಿ ಇದೆ ಎಂಬ ಪದವಿದ್ದು, ಇದೆ ಎಂಬ ಪದದಿಂದಲೆ ವಾಕ್ಯಗಳು ಕೊನೆಯಾಗಿವೆ. ನಮ್ಮ ದೈನಂದಿನ ವ್ಯಾವಹಾರಿಕ ಮಾತಿನಲ್ಲಿ "ಇದೆ" ಎಂಬ ಪದವನ್ನು ಅನೇಕ ಕಾರಣಗಳಿಗೆ, ಅನೇಕ ಉದ್ದೇಶಗಳಿಗೆ ಅನೇಕ ಸನ್ನಿವೇಶಗಳಿಗೆ ಬಳಸುತ್ತಿರುತ್ತೇವೆ. ಇನ್ನೂ ಎರಡು ಮೂರು ಉದಾಹರಣೆ ನೋಡೋಣ. ಪಾತ್ರೆಯಲ್ಲಿ ಅನ್ನ ಬೇಯುತ್ತಾ ಇದೆ. ಬಿಸಿಲಿನಲ್ಲಿ ತೊಳೆದ ಬಟ್ಟೆ ಒಣಗುತ್ತಾ ಇದೆ. ಅಲ್ಲೊಂದು ನಾಯಿ ಈ ಕಡೆಗೆ ಓಡಿ ಬರುತ್ತಾ ಇದೆ. ಈ ವಾಕ್ಯಗಳಲ್ಲಿ ಕೇವಲ "ಇದೆ" ಎಂಬ ಪದವಿಲ್ಲ. ಈ ಪದಕ್ಕಿಂತ ಮೊದಲು ಬೇಯುತ್ತಾ, ಒಣಗುತ್ತಾ, ಬರುತ್ತಾ ಎಂಬ ಪದಗಳಿವೆ. ಇವು ಕೆಲಸ ನಡೆಯುತ್ತಿರುವುದನ್ನು ಸೂಚಿಸುತ್ತವೆ ಅಥವಾ ಕೆಲಸ ಆಗುತ್ತಿರುವುದನ್ನು ಸೂಚಿಸುತ್ತವೆ. ನಮಗೆ ಇಲ್ಲಿ ಆಗುತ್ತಿರುವುದು ಆಗುವುದು ಬಹಳ ಮುಖ್ಯ. ಅಂದರೆ ವ್ಯಾವಹಾರಿಕ ಮಾತಿನಲ್ಲಿ ಯಾವುದನ್ನು "ಇದೆ" ಎಂದು ಹೇಳುತ್ತೇವೋ ಅದು ಕೇವಲ ಇರುವುದಿಲ್ಲ. ಅದು ಇನ್ನೇನೇನೋ ಆಗುತ್ತಿರುತ್ತದೆ. ಒಂದು ವಸ್ತುವು ಇರುವುದು ಎಷ್ಟು ನಿಜವೋ, ಆ ವಸ್ತು ಆಗುತ್ತಿರುವುದು ಕೂಡಾ ಅಷ್ಟೇ ನಿಜ.

ಹೆಣ್ಣು ಎನ್ನುತ್ತೇವೆ. ಹೆಣ್ಣಿನೊಳಗೆ ಗಂಡಿನ ಗುಣಗಳು, ಸ್ವಭಾವಗಳು ಇರಬಹುದು. ಹಾಗೆಯೇ ಗಂಡಿನೊಳಗೂ ಹೆಣ್ಣಿನ ಗುಣಗಳು, ಸ್ವಭಾವಗಳು ಇರಬಹುದು. ಹೆಣ್ಣಿಗೆ ಗಂಡಿನೊಂದಿಗೆ ಬೆರೆಯುವ, ಬೆಸೆಯುವ ಗುಣವಿದೆ. ಜೊತೆಗೆ ಗಂಡಿನೊಂದಿಗೆ ದೂರ ಇರುವ ಮತ್ತು ಗಂಡನ್ನು ದೂರುವ ಗುಣವಿದೆ. ಗಂಡಿಗೆ ಹೆಣ್ಣಿನೊಂದಿಗೆ ಬೆರೆಯುವ ಬೆಸೆಯುವ ಗುಣವಿದೆ. ಜೊತೆಗೆ ಹೆಣ್ಣಿನೊಂದಿಗೆ ದೂರ ಇರುವ ಮತ್ತು ಹೆಣ್ಣನ್ನು ದೂರುವ ಗುಣ ಇದೆ. ಇದರ ಅರ್ಥ ಹೆಣ್ಣು ಗಂಡಿಲ್ಲದೆ ಪರಿಪೂರ್ಣ ಅಲ್ಲ; ಗಂಡು ಹೆಣ್ಣಿಲ್ಲದೆ ಪರಿಪೂರ್ಣ ಅಲ್ಲ. ಭಾರತದ ಪ್ರತಿಮಾ ಜಗತ್ತು ಈ ದ್ವಂದ್ವಾತ್ಮಕ ಸತ್ಯವನ್ನು ಮತ್ತು ಅದರ ಸಂಬಂಧವನ್ನು ಅತ್ಯಂತ ಶಕ್ತಿಶಾಲಿಯಾಗಿ ಸಂಕೇತಿಸಿವೆ.

ಐದಕ್ಕೆ ಐದನ್ನು ಕೂಡಿದರೆ ಹತ್ತು ಆಗುತ್ತದೆ. ಇದು ಸರಿ, ಇದು ನಿಜ. ಆದರೆ ೧೦ ಆಗಬೇಕಾದರೆ ೫ಕ್ಕೆ ೫ನ್ನು ಕೂಡಲೇಬೇಕು ಎಂದೇನೂ ಇಲ್ಲ. ೧೫ರಿಂದ ೫ನ್ನು ಕಳೆದರು ೧೦ ಆಗುತ್ತದೆ. ೨ನ್ನು ೫ರಿಂದ ಗುಣಿಸಿದರು ೧೦ ಆಗುತ್ತದೆ. ೨೦ನ್ನು ೨ರಿಂದ ಭಾಗಿಸಿದರು ೧೦ ಆಗುತ್ತದೆ. ಇದು ಅಂಕಗಣಿತದ ಚಮತ್ಕಾರ ಎಂತಲೂ ಅಥವ ಗಣಿತ ಮನರಂಜನೆ ಎಂತಲೋ ತಳ್ಳಿಬಿಡಬಹುದು. ಪ್ರಶ್ನೆ ಅದಲ್ಲ. ನಮ್ಮ ಗ್ರಹಿಕೆ ಯಾವಾಗಲೂ ಸರಳರೇಖೆಯ ರೀತಿಯಲ್ಲಿ ಇರುತ್ತದೆ. ಆದರೆ ಪ್ರಕೃತಿ ಮತ್ತು ಸಾಮಾಜಿಕ ಜೀವನ ಆ ರೀತಿ ಇರುವುದಿಲ್ಲ. ಅದು ನಿರಂತರವಾಗಿ ಬದಲಾಗುತ್ತಿರುತ್ತದೆ. ನಾವು ಬೆಳಿಗ್ಗೆ ಎನ್ನುತ್ತೇವೆ. ಆದರೆ ಬೆಳಿಗ್ಗೆ ಇದೆ ಎನ್ನುವುದಿಲ್ಲ. ಯಾಕೆಂದರೆ ಬೆಳಿಗ್ಗೆ ಎಂಬುದು ಇರುವುದಿಲ್ಲ. ಅದು ಆಗುತ್ತಿರುತ್ತದೆ. ಬೆಳಿಗ್ಗೆಯು ಕಡಿಮೆಯಾಗುತ್ತಾ ಕಡಿಮೆಯಾಗುತ್ತಾ ಆ ಬೆಳಗ್ಗೆ ಎಂಬುದೇ ಮಧ್ಯಾಹ್ನವಾಗುತ್ತದೆ. ಆಗ ಮಧ್ಯಾಹ್ನ ಇದೆ ಎನ್ನುವುದಿಲ್ಲ. ಯಾಕೆಂದರೆ ಮಧ್ಯಾಹ್ನ ಎನ್ನುವುದು ಇರುವುದಿಲ್ಲ. ಮಧ್ಯಾಹ್ನ ಎಂಬುದು ತನ್ನನ್ನು ತಾನು ಕಳೆದುಕೊಳ್ಳುತ್ತಾ ಅದು ಸಂಜೆ ಆಗುತ್ತಾ, ಆಗುತ್ತಾ ಸಾಗುತ್ತದೆ. ಇದೇ ರೀತಿಯಲ್ಲಿ ಸಂಜೆ ಎಂಬುದು ಇರುವುದಿಲ್ಲ. ಈ ಸಂಜೆಯು ತನ್ನ ಸಂಜೆತನವನ್ನು ಕಳೆದುಕೊಳ್ಳುತ್ತಾ, ಕಳೆದುಕೊಳ್ಳುತ್ತಾ ಈ ಸಂಜೆಯೇ ಕತ್ತಲೆ ಆಗುತ್ತಾ, ಆಗುತ್ತಾ ಸಾಗುತ್ತದೆ. ಹಾಗಿದ್ದರೆ ಒಂದು ಇಡೀ ದಿನದಲ್ಲಿ ನಾವು ಯಾವ ಸಮಯವನ್ನು ಇದೆ ಎನ್ನುತ್ತೇವೆ? ಇದೆ ಎನ್ನುವುದಿಲ್ಲ ಯಾಕೆಂದರೆ ಸಮಯ ಹಾಗೂ ಕಾಲ ಇವು ಇರುವುದಿಲ್ಲ. ಇರುವುದಿಲ್ಲ ಎಂದರೆ ಅರ್ಥ ಅದು ಇನ್ನೇನೋ ಆಗುತ್ತಿರುತ್ತದೆ.

ನಾವು ದುಃಖ ಎನ್ನುತ್ತೇವೆ. ಇದನ್ನು ಸುಖದ ಗೈರುಹಾಜರಿ ಅಂತಲೂ ಹೇಳಬಹುದು. ಅದೇ ರೀತಿ ಸಂತೋಷವನ್ನು ಸಂಕಟದ ಗೈರುಹಾಜರಿ ಎಂದು ಹೇಳಬಹುದು. ಬೆಳಕನ್ನು ಕತ್ತಲೆ ಇಲ್ಲದ ಸ್ಥಿತಿ ಎನ್ನಬಹುದು. ಕತ್ತಲೆಯನ್ನು ಬೆಳಕು

Scanned with CamScanner

ಇಲ್ಲದ ಸ್ಥಿತಿ ಎನ್ನಬಹುದು. ಯಾಕೆಂದರೆ ಕತ್ತಲೆ ಕಡಿಮೆಯಾದಂತೆ ಬೆಳಕು ಜಾಸ್ತಿಯಾಗುತ್ತ ಹೋಗುತ್ತದೆ. ಬೆಳಕು ಜಾಸ್ತಿಯಾಗುತ್ತಾ ಕತ್ತಲೆ ಕಡಿಮೆಯಾಗುತ್ತದೆ. ಇದು ನಿರಂತರ ಪ್ರಕ್ರಿಯೆ.

ಇಡೀ ಪ್ರಪಂಚ, ನಿಸರ್ಗ ಮತ್ತು ಮನುಷ್ಯ ಜೀವನ ಇವು ನಿರಂತರವಾಗಿ ಬದಲಾಗುತ್ತಾ ಇರುತ್ತವೆ. ಯಾವುದೂ ಜಡವಾಗಿರುವುದಿಲ್ಲ. ಹಾಗೆ ಜಡವಾಗಿರುತ್ತವೆ ಎಂದು ತಿಳಿದರೆ ಆ ತಿಳಿವಳಿಕೆ ಜಡವೆ ಹೊರತು ಅದರ ವಸ್ತುಸ್ಥಿತಿ ಜಡ ಅಲ್ಲ. ಪ್ರಪಂಚ, ನಿಸರ್ಗ ಮತ್ತು ಮನುಷ್ಯ ಜೀವನ ಇವು ನಿರಂತವಾಗಿ ಬದಲಾಗುತ್ತಾ ಇರುವುದರಿಂದ ಈ ಬದಲಾಗುವ ಬಗೆಯನ್ನು ಬದಲಾಗುವ ಕ್ರಮದಲ್ಲಿ ತಿಳಿಯಬೇಕಾಗುತ್ತದೆ. ಹಾಗೆ ತಿಳಿದರೆ ಅಂತಹ ತಿಳಿವಳಿಕೆ ಜಡ ಅಲ್ಲ. ಅದು ಜಲನಶೀಲ; ಅಂದರೆ ಬದಲಾಗುವ ಪರಿಯಲ್ಲೇ ಗ್ರಹಿಸಬೇಕು, ತಿಳಿಯಬೇಕು ಮತ್ತು ಅಭಿವ್ಯಕ್ತಿಸಬೇಕು. ಜಗತ್ತಿನ ತತ್ವಶಾಸ್ತ್ರದಲ್ಲಿ ಲೋಕವನ್ನು ಗ್ರಹಿಸುವ ಈ ಕ್ರಮಗಳ ಬಗೆಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಜೈನ ತತ್ವಜ್ಞಾನದಲ್ಲಿ ಅನೇಕಾಂತವಾದ, ಸ್ಯಾದ್‌ವಾದ ಎಂಬ ಪರಿಕಲ್ಪನೆಗಳಿವೆ. ಬೌದ್ಧ ತತ್ವಜ್ಞಾನದಲ್ಲಿ ಪ್ರತೀತ್ಯ ಸಮುತ್ಪಾದ ಸಿದ್ಧಾಂತ ಇದೆ. ಈ ಪರಿಕಲ್ಪನೆಗಳು ಜಗತ್ತು ಹಾಗೂ ನಿಸರ್ಗ ಬದಲಾಗುವ ಪರಿಯನ್ನು, ಆ ಬದಲಾಗುವ ಕ್ರಮದಲ್ಲೇ ಅರಿಯುವ ಜ್ಞಾನಮೀಮಾಂಸೆ. ವಿಶೇಷವೆಂದರೆ ವಚನಗಳಲ್ಲಿ ಕೂಡ ಈ ಪರಿಕಲ್ಪನೆಯ ಅರಿವಿನ ಬೀಜಗಳು ಇವೆ. ನಿದಾ: ಬಯಲು ಇತ್ಯಾದಿ ಮಾತುಗಳು ವಚನಗಳಲ್ಲಿ ಅದರಲ್ಲೂ ವಿಶೇಷವಾಗಿ ಅಲ್ಲಮನಲ್ಲಿ ಮತ್ತೆ ಮತ್ತೆ ಬರುತ್ತವೆ.

ಅಲ್ಲಮ ನಮಗೆ ಕಗ್ಗಂಟಾಗುವುದು ಎಲ್ಲಿ ಮತ್ತು ಯಾಕೆ ಎಂಬ ಬಗೆಗೆ ಆಲೋಚನೆ ಮಾಡಬಹುದು. "ಸಂಬಂಧವೆ ಅಸಂಬಂಧವಾಗಿ, ಅಸಂಬಂಧವೆ ಸಂಬಂಧವಾಗಿ", "ಉತ್ತಮಾಂಗ ಎಂಬುದು ನೆತ್ತಿಯ ಮೃತ್ಯು", "ಸ್ವರೂಪ ನಿರೂಪ ಎಂದರಿಯರು ಹೆಸರಿಟ್ಟು ಕರೆವ ಕಷ್ಟವ ನೋಡಾ", "ನೋಡಲಿಲ್ಲದ ಶೃಂಗಾರ, ಮಾತಾಡಲಿಲ್ಲದ ಶಬ್ದ", "ಧ್ಯಾನ ಧ್ಯಾನಿಸಲರಿಯದು" ಎಂಬ ರೂಪದ ವಚನಗಳು ನಮ್ಮ ಗ್ರಹಿಕೆಯ ಸ್ವರೂಪವನ್ನು ಅಲ್ಲಾಡಿಸುತ್ತವೆ. ಸ್ವರೂಪನ್ನು ವಿವರಿಸಲು ಸಾಧ್ಯವೇ? ಅಥವಾ ನಿರೂಪವನ್ನು ವಿವರಿಸಲು ಸಾಧ್ಯವೇ? ಇವೆಲ್ಲವೂ ಅವಕ್ಕೆ ಆ ಹೆಸರನ್ನು ಇಟ್ಟು ಕರೆಯುವ ಕಷ್ಟ ಎಂಬುದಾಗಿ ಅಲ್ಲಮನು ಅತ್ಯಂತ ಉತ್ತುಂಗದಲ್ಲಿ ನಿಂತು ಗೇಲಿಯ ಧ್ವನಿಯಲ್ಲಿ ವ್ಯಂಗ್ಯ ಮಾಡುತ್ತಾನೆ. ಲೋಗರ ನೆಲೆಯಲ್ಲಿ ಸ್ವರೂಪ ಎಂಬುದು ಸ್ಪಷ್ಟ ಮತ್ತು ಖಚಿತ. ಅದೇ ರೀತಿಯಲ್ಲಿ ನಿರೂಪ ಎಂಬುದು ಸ್ಪಷ್ಟ ಮತ್ತು ಖಚಿತ. ಅಲ್ಲಮನ ಪ್ರಕಾರ ಈ ಎರಡು ಸ್ಪಷ್ಟವೂ ಅಲ್ಲ; ಖಚಿತವೂ ಅಲ್ಲ. ಅವನ್ನು ಅರಿಯಲು ಸಾಧ್ಯವೇ ಇಲ್ಲ. ಆದರೂ ಬರಿ ಹೆಸರು ಇಡಬಹುದು ಅಷ್ಟೇ. ಈ ತರ್ಕದಲ್ಲೇ ಇನ್ನೊಂದು ಅಂಶವನ್ನು ಚರ್ಚಿಸುವುದಿದೆ. ಅದೇನೆಂದರೆ ವಸ್ತುಸ್ಥಿತಿಗೂ ಮತ್ತು ಅದರ ಹೆಸರಿಗೂ ನಾವು ನೇರಾನೇರಾ ಸಕಾರಾತ್ಮಕ ಸಂಬಂಧವನ್ನು ಮಾತ್ರ ಕಲ್ಪಿಸುತ್ತೇವೆ. ಅಲ್ಲಮನ ಲೋಕಗ್ರಹಿಕೆ, ಅವನ ಅರಿವಿನ ಸ್ವರೂಪ ಮತ್ತು ಅವನು ರೂಪಿಸಿದ ಜ್ಞಾನಮೀಮಾಂಸೆಯಲ್ಲಿ ಈ ಸರಳರೇಖಾ ಮಾದರಿಯ ಗ್ರಹಿಕೆಗೆ ಜಾಗವೇ ಇಲ್ಲ.

ಅಲ್ಲಮನ ತತ್ವವನ್ನು ಅರಿಯುವ ಸಾಧ್ಯತೆ ಯಾವುದು ಅಥವಾ ಸಾಧ್ಯತೆಗಳು ಯಾವುವು ಎಂಬುದನ್ನು ಕುರಿತು ಈ ಭಾಗದಲ್ಲಿ ಕೆಲವು ವಿಚಾರಗಳನ್ನು ಹಂಚಿಕೊಳ್ತೀನಿ. ತತ್ವವನ್ನು ಅರಿಯುವುದು ಎಂದರೆ ಅದನ್ನು ರೂಪಿಸುವ, ಅದನ್ನು ಕಟ್ಟುವ ಆಲೋಚನಾ ವಿಧಾನದ ಸ್ವರೂಪ ಹಾಗೂ ಸ್ವಭಾವವನ್ನು ಅರಿಯಬೇಕಾಗುತ್ತದೆ. ಆಲೋಚನಾ ವಿಧಾನದ ಸ್ವರೂಪ ಹಾಗೂ ಅದರ ಸ್ವಭಾವವನ್ನು ಎರಡು ಬಗೆಯಲ್ಲಿ ವಿವರಿಸಿಕೊಳ್ಳಬಹುದು. ಆಲೋಚನೆಗಳನ್ನು ದ್ರವ್ಯ, ದ್ರವ್ಯಸಾಮಗ್ರಿ ಎಂದು ತಿಳಿಯುವುದು. ಇದನ್ನು Product ಎಂದು ಕರೆಯಲಾಗುತ್ತದೆ. ಇದರಲ್ಲಿ ಆಲೋಚನೆಗಳು ಗ್ರಹಿಕೆಯಲ್ಲಿ ಇರುತ್ತವೆ. ಅಥವಾ ವಸ್ತುಸ್ಥಿತಿಯ ಜಡಸ್ಥಿತಿಯನ್ನು ಇದು ಗ್ರಹಿಸುತ್ತದೆ. ಅಂದರೆ ಲೋಕವು ಪರಿವರ್ತನೆ ಆಗುತ್ತಿಲ್ಲ, ಬದಲಾಗುತ್ತಿಲ್ಲ, ಅದು ಇದ್ದಂತೆಯೇ ಇದೆ ಎಂಬ ನಂಬಿಕೆ ಇಲ್ಲಿ ಮುಖ್ಯವಾದುದು. ಹಾಗಾಗಿ ಇದನ್ನು ಇರುವಿಕೆಯನ್ನು ಕುರಿತ ಗ್ರಹಿಕೆ ಎನ್ನುತ್ತೇವೆ. ಇದಲ್ಲದೆ ಮತ್ತೊಂದು ಆಲೋಚನಾ ವಿಧಾನ ಇದೆ. ಇದರ ಪ್ರಕಾರ ಲೋಕದಲ್ಲಿ ಪ್ರತಿಯೊಂದೂ ಬದಲಾಗುತ್ತಿರುತ್ತದೆ, ಪ್ರತಿಯೊಂದೂ ಪರಿವರ್ತನೆಯಾಗುತ್ತಿರುತ್ತದೆ. ಇದು ಭೌತಿಕ

Scanned with CamScanner

ನೆಲೆ ಮತ್ತು ಅಭೌತಿಕ ನೆಲೆ ಎರಡರಲ್ಲೂ ಸದಾ ನಡೆಯುತ್ತಿರುತ್ತದೆ. ನಿಸರ್ಗ, ಪರಿಸರ, ಪ್ರಕೃತಿ, ಮಾನವರ ಬಹಿರಂಗ ಹಾಗೂ ಅಂತರಂಗ-ಈ ಎಲ್ಲದರಲ್ಲೂ ನಮ್ಮ ಊಹೆಗೂ ಮೀರಿದ ಬದಲಾವಣೆಗಳು, ಪರಿವರ್ತನೆಗಳು ನಡೆಯುತ್ತಿರುತ್ತವೆ. ಇದನ್ನು ಆಗುವಿಕೆ ಎನ್ನುತ್ತಾರೆ. ಬೇರೆ ಮಾತುಗಳಲ್ಲಿ ಇದನ್ನು process ಎನ್ನುತ್ತೇವೆ. ಈ ಬಗೆಯ ಆಲೋಚನೆಗಳನ್ನು ಆಗುವಿಕೆಯನ್ನು ಕುರಿತ ಗ್ರಹಿಕೆ ಎನ್ನುತ್ತೇವೆ. ಇದರ ಪ್ರಕಾರ ಪ್ರತಿಯೊಂದು ವಸ್ತುವೂ, ಅಭೌತಿಕ ಸಂಗತಿಗಳೂ ನಿತ್ಯ ಚಲನಶೀಲವಾಗಿರುತ್ತವೆ. ಈ ಚಲನಶೀಲತೆಯನ್ನು ಕುರಿತ ನಮ್ಮ ಗ್ರಹಿಕೆಗಳೂ, ಅದರ ಬಗೆಗಿನ ಆಲೋಚನೆಗಳೂ, ಅವುಗಳ ಅಭಿವ್ಯಕ್ತಿಗಳೂ ಕೂಡಾ ಚಲನಶೀಲವಾಗಬೇಕಾಗುತ್ತದೆ. ಚಲನಶೀಲತೆಯನ್ನು ಗ್ರಹಿಸದೆ ಅದನ್ನು ಕೇವಲ ಜಡವಾಗಿ ಗ್ರಹಿಸಿದರೆ, ಅದನ್ನು ಯಾಂತ್ರಿಕ ಗ್ರಹಿಕೆ ಎನ್ನುತ್ತೇವೆ. ಅಲ್ಲಮನೊಂದಿಗೆ ಒಡನಾಡಬೇಕಾದರೆ, ಅವನನ್ನು ಅರಿಯಬೇಕಾದರೆ, ಅವನ ತತ್ವಗಳನ್ನು ಗ್ರಹಿಸಬೇಕಾದರೆ ಅಲ್ಲಮನ ವಚನಗಳನ್ನು, ಆತನ ಲೋಕಗ್ರಹಿಕೆಯನ್ನು ಜಡ ಎಂದು ತಿಳಿದರೆ ಅವನು ನಮಗೆ ದಕ್ಕುವುದಿಲ್ಲ. ಜಡಗೊಂಡಿರುವ ನಮ್ಮ ಲೋಕಗ್ರಹಿಕೆಯನ್ನು ಅಲ್ಲಮ ಬುಡಮೇಲು ಮಾಡುತ್ತಾನೆ. ಹಾಗಾಗಿ ಅಲ್ಲಮನೊಂದಿಗಿನ ಒಡನಾಟ ಸುಲಭವಲ್ಲ, ಬಹಳ ಸಂಕೀರ್ಣ ಮತ್ತು ಸೂಕ್ಷ್ಮ. ಅದಕ್ಕಿಂತ ಹೆಚ್ಚಾಗಿ ನಮ್ಮ ಯಾಂತ್ರಿಕ ಗ್ರಹಿಕೆಗಳನ್ನು ನಮಗೆ ನಾವೇ ಬುಡಮೇಲು ಮಾಡಿಕೊಂಡರೆ ಮಾತ್ರ ನಾವು ಅಲ್ಲಮನೊಂದಿಗೆ ಒಡನಾಡಲು ಸಾಧ್ಯವಾಗುತ್ತದೆ. ಈ ಚರ್ಚೆಯ ಮುಂದುವರಿಕೆಯಾಗಿ ಸತ್ಯದ ಸ್ವರೂಪ ಯಾವುದು ಎಂಬ ಅಂಶವನ್ನು ಕೇಂದ್ರೀಕರಿಸಿ ಕೆಲವು ಮಾತುಗಳನ್ನು ಆಡ್ತೀನಿ.

ನನ್ನ ಮಾತುಗಳ ಮುಂದಿನ ಭಾಗದಲ್ಲಿ ಅಲ್ಲಮನ ವಚನಗಳಲ್ಲಿ ಆಲೋಚನೆಗಳ ಪ್ರಧಾನ ವಿಷಯಗಳಾಗಿ ಬರುವ ಕೆಲವು ಅಂಶಗಳನ್ನು ವಚನಗಳ ಚರ್ಚೆಯ ಮೂಲಕ ಹಂಚಿಕೊಳ್ತೀನಿ. ಅವು ಯಾವುವು ಎಂದರೆ, ೧. ಭಾಷೆ, ೨. ಅರಿವು, ೩. ನೋಟ, ೪. ವಿರುದ್ಧಗಳ ನಡುವೆ ಸಂಘರ್ಷ ಮತ್ತು ಐಕ್ಯತೆ, ೫. ನಿರಾಳ, ೬. ಪಂಚೇಂದ್ರಿಯಗಳ ಹತೋಟಿ, ೭. ಬಯಲು, ೮. ನಿರಾಳ, ೯. ಆಲೋಚನೆಯ ಪರಿ, ರೀತಿ, ಸ್ವಭಾವ, ಸ್ವರೂಪ, ೧೦. ಗಾಂಧಿ, ಅಂಬೇಡ್ಕರ್ ಮತ್ತು ಮಾವೊತ್ಸೆ ತುಂಗ್ – ಇವರ ಆಲೋಚನೆಗಳ ಜೊತೆಯಲ್ಲಿ ಅಲ್ಲಮನ ಆಲೋಚನೆಗಳನ್ನು ಪರಿಭಾವಿಸುವುದು.

೧. ಭಾಷೆ:

ಕವಿಗಳು ತಮ್ಮ ಕಾವ್ಯ ಸೃಷ್ಟಿಗೆ ಭಾಷೆಯನ್ನು ಬಳಸುತ್ತಾರೆ. ಇನ್ನು ಕೆಲವರು ಕಾವ್ಯವನ್ನು ರೂಪಿಸಲು ತಮ್ಮದೇ ಆದ ಭಾಷೆಯನ್ನು ಸೃಷ್ಟಿಸುತ್ತಾರೆ. ಕವಿಗಳು ಭಾಷೆಯನ್ನು ಬಳಸುವವರಾದರೆ ಅವರ ಕಾವ್ಯದ ಶಿಲ್ಪ ಮತ್ತು ಅಭಿವ್ಯಕ್ತಿಯ ಕ್ರಮ ಒಂದು ಬಗೆಯದು. ಇಲ್ಲವೆ ಕವಿಗಳು ತಮ್ಮ ಕಾವ್ಯಸೃಷ್ಟಿಗೆ ತಮ್ಮದೇ ಆದ ಭಾಷೆಯನ್ನು ಸೃಷ್ಟಿಸುವವರಾದರೆ ಆ ಕಾವ್ಯದ ಶಿಲ್ಪ ಮತ್ತು ಅಭಿವ್ಯಕ್ತಿಯ ಕ್ರಮ ಬೇರೊಂದು ಬಗೆಯದು. ತತ್ವಮೀಮಾಂಸಕರು ರೂಪಿಸುವಾಗಲೂ ಭಾಷಿಕ ನೆಲೆಯ ಈ ತೊಡಕು ಎದುರಾಗುತ್ತದೆ. ಇವೆರಡರ ನಡುವಿನ ವ್ಯತ್ಯಾಸದ ಬಗ್ಗೆ ಇಲ್ಲಿ ಮಾತಾಡಲು ಹೋಗುವುದಿಲ್ಲ. ಅಲ್ಲಮ ಒಂದು ಕಡೆ ಕವಿ; ಮತ್ತೊಂದು ಕಡೆ ತತ್ವಮೀಮಾಂಸಕ ಅಥವಾ ಕವಿ-ತತ್ವಮೀಮಾಂಸಕ. ಇವನ ವಚನಗಳಲ್ಲಿ ತತ್ವಮೀಮಾಂಸೆಯೂ, ಕವಿತ್ವವು ಒಟ್ಟಿಗೇ ಬೆರೆತಿವೆ. ಇವನ ವಚನಗಳ ಮಟ್ಟಿಗೆ ಈ ಎರಡನ್ನೂ ಬೇರ್ಪಡಿಸಲು ಆಗುವುದಿಲ್ಲ.

ಅಲ್ಲಮ ಕವಿಯಾಗಿ, ತತ್ವಮೀಮಾಂಸಕನಾಗಿ ತನ್ನದೇ ಭಾಷೆಯನ್ನು ಸೃಷ್ಟಿಕೊಂಡಿರುವುದು ಒಂದು ಬಗೆಯ ಕೆಲವು ಕವಿಗಳಲ್ಲಿ ಹಾಗೂ ತತ್ವಮೀಮಾಂಸಕರಲ್ಲಿ ಕ್ರಿಯಾಶೀಲವಾಗಿರುತ್ತದೆ. ಆದರೆ ಅಲ್ಲಮ ಈ ನೆಲೆಯಲ್ಲಿ ಮತ್ತೊಂದು ಭಿನ್ನವಾದ ಪ್ರತಿಭೆಯುಳ್ಳವನು. ಅದು ಏನು ಎಂದರೆ, ಅಲ್ಲಮ ಭಾಷೆಯ ಬಗೆಗೆ ಆಲೋಚನೆ ಮಾಡಿದ್ದು, ಅದರ ಸ್ವರೂಪ, ಅದು ಕ್ರಿಯಾಶೀಲಗೊಳ್ಳುವ ಬಗೆ, ಅದರ ಕ್ರಿಯಾಶೀಲತೆಯ ನಂತರದ ಪರಿಣಾಮ ಇವುಗಳ ಬಗ್ಗೆ ಅಲ್ಲಮನಿಗೆ ವಿಶೇಷವಾದ ಆಸಕ್ತಿ. ಆತನ ಕೆಲವು ವಚನಗಳು ಭಾಷೆಯನ್ನು ಕೇಂದ್ರೀಕರಿಸಿವೆ. ಅಂತಹ ಕೆಲವು ಮಾತಿನ ಭಾಗಗಳನ್ನು ಇಲ್ಲಿ ಚರ್ಚೆ ಮಾಡುತ್ತೇನೆ.

Scanned with CamScanner

*

ಆಶೆಯ ವೇಷ ಧರಿಸಿ ಭಾಷೆ ಪಲ್ಲಟವಾದರೆ
ಎಂತಯ್ಯಾ ಶರಣ ಪಥವೇದ್ಯವಹುದು – ೧೪೩

*

ಆಶೆಯ ವೇಷದ ಭಾಷೆಗೆ ಗುಹೇಶ್ವರ ನೀ ಸಾಕ್ಷಿಯಾಗಿ ಛೀ ಎಂಬೆನು – ೧೪೪

*

ಭಾಷೆಯೆಂಬುದು ಪ್ರಾಣಘಾತುಕ

*

ಶಬ್ದದ ಲಜ್ಜೆಯ ನೋಡಾ

*

ಮಾತೆಂಬುದು ಜ್ಯೋತಿರ್ಲಿಂಗ

*

ಶಬ್ದ ಸಂಭ್ರಮದಲ್ಲಿ ಹಿಂದುಗಾಣರು, ಮುಂದುಗಾಣರು – ೧೬೫

*

ಶಬ್ದವು ಶ್ರೋತ್ರದೆಂಜಲು
ನೋಡಲಿಲ್ಲದ ಶೃಂಗಾರ, ಮಾತಾಡಲಿಲ್ಲದ ಶಬ್ದ
ಬೇಡಲಿಲ್ಲದ ಶಬ್ದ ನೋಡಿರೆ – ನಿರಾಳ

*

ಆಳವನರಿಯದ ಭಾಷೆ ಬಹುಕುಳವಾದ ನುಡಿ
ಇಂತೆರಡರ ನುಡಿ ಹುಸಿಯಯ್ಯಾ
ಬಹುಭಾಷಿತರು ಸುಭಾಷಿತ ವರ್ಜಿತರು
ಶರಣಸತಿ ಲಿಂಗಪತಿ ಎಂಬರು ಹುಸಿಯಯ್ಯ – ೪೧

*

ಶಬ್ದ ಸಂಭ್ರಮದ ಮದವಳಿಯದೆ – ೧೬೬

ಇಲ್ಲಿ ಉಲ್ಲೇಖಿಸಿರುವ ವಚನದ ಸಾಲುಗಳಲ್ಲಿ ಅಲ್ಲಮ ಭಾಷೆಯ ಪ್ರಾಥಮಿಕ ಘಟಕವಾದ ಪದಗಳ ನೆಲೆಯಲ್ಲಿ ಮಾತಾಡುತ್ತಿದ್ದಾನೆ. ಭಾಷೆಯನ್ನು ಕುರಿತ ವಿಚಾರದಲ್ಲಿ ಈ ವಿಧಾನ ಬಹಳ ಮುಖ್ಯವಾದುದು. ಭಾಷೆಯಲ್ಲಿ ಪದಗಳು ಕಟ್ಟಡದ ಗೋಡೆಗೆ ಇಟ್ಟಿಗೆಗಳು ಇದ್ದಂತೆ. ಒಂದು ಕಡೆ "ಮಾತೆಂಬುದು ಜ್ಯೋತಿರ್ಲಿಂಗ" ಎನ್ನುವ ಅಲ್ಲಮ ಮತ್ತೊಂದು ಕಡೆ "ಭಾಷೆ ಎಂಬುದು ಪ್ರಾಣಘಾತುಕ" ಎನ್ನುತ್ತಾನೆ. "ಭಾಷೆ ಎಂಬುದು ಪ್ರಾಣಘಾತುಕ" ಎನ್ನುತ್ತಿರುವಾಗಲೇ "ಶಬ್ದವು ಶ್ರೋತ್ರದ ಎಂಜಲು" ಎನ್ನುತ್ತಾನೆ. ಅಲ್ಲಮನ ಆಲೋಚನೆಯ ವಿಧಾನವೇ ಇದು. ಯಾವುದನ್ನೂ, ಎಲ್ಲಿಯೂ ಸರಳಗೊಳಿಸದೆ, ಯಾಂತ್ರಿಕಗೊಳಿಸದೆ ಅದನ್ನು ಸಂಕೀರ್ಣ ನೆಲೆಯಲ್ಲಿ ಗ್ರಹಿಸಿ ಅಭಿವ್ಯಕ್ತಿಸುವುದು ಅಲ್ಲಮನ ದೃಷ್ಟಿಕೋನದ ಸ್ವಭಾವ. ಪರಸ್ಪರ ವಿರುದ್ಧ ಸಂಗತಿಗಳನ್ನು ಒಂದಾಗಿ ಗ್ರಹಿಸುವ ಮತ್ತು ಒಂದೇ ಸ್ವಭಾವದ ಸಂಗತಿಗಳನ್ನು ಪರಸ್ಪರ ವಿರುದ್ಧ ಸಂಬಂಧದ ನೆಲೆಯಲ್ಲಿ ಗ್ರಹಿಸಿ ಅಭಿವ್ಯಕ್ತಿಸುವುದು ಅಲ್ಲಮನ ದೃಷ್ಟಿಕೋನದ ಮೂಲ ಸ್ವಭಾವ. ಅಲ್ಲಮನ ಈ ದೃಷ್ಟಿಕೋನದ ಸ್ವಭಾವ ಮತ್ತು ಸ್ವರೂಪ ತಿಳಿಯದೇ ಹೋದರೆ "ಅಲ್ಲಮನಲ್ಲಿ ಯಾಕೆ ಇಂತಹ ವೈರುಧ್ಯ?" ಎಂದು ಒಂದಾಯ ಸಾಹಿತ್ಯ ಚಿಂತಕರಂತೆ ಅಲ್ಲಮನಿಗೆ ಯಾಂತ್ರಿಕವಾದ ಭಿನ್ನಮತವನ್ನು ಹೂಡಬೇಕಾಗುತ್ತದೆ. ಹೌದು, ಅಲ್ಲಮ ಆಲೋಚನೆಯ ಸಂಬಂಧದಲ್ಲಿ ಯಾಕೆ ಹೀಗೆ ಮಾಡುತ್ತಾನೆ? ಮನುಷ್ಯರ ಬದುಕು ಮತ್ತು ಮನುಷ್ಯ ಲೋಕ

Scanned with CamScanner

ಸರಳವಾಗಿಲ್ಲ. ಯಾಂತ್ರಿಕವಾಗಿಲ್ಲ. ಅದರಲ್ಲಿ ಪರಸ್ಪರ ಪೂರಕ ಸಂಗತಿಗಳು, ಪೂರಕ ಸ್ವಭಾವಗಳು ಅವುಗಳ ಪರಿಣಾಮದ ನೆಲೆಯಲ್ಲಿ ವಿರುದ್ಧ ಫಲಿತಗಳನ್ನು ಕೊಡಬಹುದು. ಅದೇ ರೀತಿಯಲ್ಲಿ ಬದುಕಿನ ಪರಸ್ಪರ ವಿರುದ್ಧ ಸಂಗತಿಗಳು, ವಿರುದ್ಧ ಸ್ವಭಾವಗಳು ಅವುಗಳ ಪರಿಣಾಮದ ನೆಲೆಯಲ್ಲಿ ಪೂರಕ ಫಲಿತಗಳನ್ನು ಕೊಡಬಹುದು. ಇದೆಲ್ಲವೂ ಬದುಕಿನ ನಿತ್ಯ ಚಲನಶೀಲತೆಯ ವಿನ್ಯಾಸ. ಮೂಲಭೂತವಾಗಿ ಇದು ದ್ವಂದ್ವಾತ್ಮಕ ತತ್ವಶಾಸ್ತ್ರದ ಅರಿವಿನ ಸ್ವರೂಪ.

ನಮ್ಮ ಸಾಮಾನ್ಯ ಗ್ರಹಿಕೆಯ ಸ್ವರೂಪವನ್ನು ಮತ್ತು ಸ್ವಭಾವವನ್ನು ಅಲ್ಲಮನ ಪ್ರತಿಯೊಂದು ಆಲೋಚನೆಯೂ ಬುಡಮೇಲು ಮಾಡುತ್ತದೆ. ಹೀಗೆ ನಮ್ಮ ಸ್ಥಾಪಿತ ಗ್ರಹಿಕೆಯಲ್ಲಿ ಪೂರ್ಣ ಜಡಗೊಂಡು ಹೋಗಿರುವ ಗ್ರಹಿಕೆಯನ್ನು ಬುಡಮೇಲು ಮಾಡುವುದರಲ್ಲೇ ಅಲ್ಲಮನಿಗೆ ಅದಮ್ಯವಾದ ತಾತ್ವಿಕ ಉತ್ಸಾಹ. ಅಲ್ಲಮನ ಇಂತಹ ವಚನಗಳನ್ನು ಓದಿದರೆ ಒಂದು ಅರಗಳಿಗೆ ನಿಂತು ನೋಡಿ ಮುಂದೆ ಸಾಗಬೇಕಾಗುತ್ತದೆ. ಹಾಗಾಗಿ ಅಲ್ಲಮನೊಂದಿಗೆ ಒಡನಾಡುವುದು ಅಷ್ಟು ಸುಲಭದ ದಾರಿಯಲ್ಲ. "ನೋಡಲಿಲ್ಲದ ಶೃಂಗಾರ, ಮಾತಾಡಲಿಲ್ಲದ ಶಬ್ದ", ಈ ಬಗೆಯ ಭಾಷಿಕ ರಚನೆ ಹಾಗೂ ಅಭಿವ್ಯಕ್ತಿಗಳು ಅಲ್ಲಮನಿಗೆ ಮಾತ್ರವೇ ಸಾಧ್ಯ ಎಂದು ಧೈರ್ಯದಿಂದ ಹೇಳಬಹುದು. ಹೀಗೆ ಒಂದರಿಂದ ಒಂದಕ್ಕೆ ನೇರವಾದ ಮತ್ತು ಸರಳವಾದ ಸಂಬಂಧವಿಲ್ಲದ ಅಲ್ಲಮನ ಗ್ರಹಿಕೆಯ ಸ್ವರೂಪವು ಮುಂದುವರಿಯುತ್ತದೆ. ಇದು ಮುಂದುವರಿದು, "ಶರಣಸತಿ ಲಿಂಗಪತಿ ಎಂಬರು ಹುಸಿಯಯ್ಯ" ಎಂಬ ಬಹಳ ದೊಡ್ಡ ತಾತ್ವಿಕ ಆಶಯವನ್ನು ನಮ್ಮ ಮುಂದೆ ಮಂಡಿಸುತ್ತಿದೆ. ವಾಸ್ತವವಾಗಿ "ಶರಣಸತಿ ಲಿಂಗಪತಿ ಎಂಬರು ಹುಸಿಯಯ್ಯ" ಇದು ಶರಣ ಪಂಥದ ಬಹಳ ಮುಖ್ಯವಾದ ತಾತ್ವಿಕ ಆಶಯವಾಗಿದೆ. ವಿಚಿತ್ರವೆಂದರೆ ಅಲ್ಲಮ ಅದರ ಒಳಗೆ ಇದ್ದುಕೊಂಡೇ ಅದರ ಮುಖ್ಯವಾದ ಆಶಯವೊಂದನ್ನು ಸುಳ್ಳು ಎಂದು ಸಾರುತ್ತಿದ್ದಾನೆ. ಇದಕ್ಕೆ ಅತ್ಯಂತ ಶಕ್ತಿಶಾಲಿಯಾದ ತಾತ್ವಿಕ ತಾಕತ್ತು ಬೇಕಾಗುತ್ತದೆ. ಅಲ್ಲಮನಿಗೆ ತಾತ್ವಿಕವಾಗಿ ಈ ತಾಕತ್ತು ಇದೆ ಎಂಬುದೇ ನಮಗೆ ಇಲ್ಲಿ ಮುಖ್ಯ. ಭಾಷಿಕ ನೆಲೆಯ ಪರಿಣಾಮದ ಬಗ್ಗೆ ಮಾತಾಡುವ ಅಲ್ಲಮ ಅದನ್ನು ಎಲ್ಲಿಯೂ ಸರಳಗೊಳಿಸಿಲ್ಲ ಎಂಬುದು ಮುಖ್ಯ.

೨. ಅರಿವು

"ಅರಿವು" ಕುರಿತ ವಿಚಾರ ಅಲ್ಲಮನ ಬಹುತೇಕ ವಚನಗಳಲ್ಲಿ ಬರುತ್ತದೆ. ಅರಿವು ಮತ್ತು ತಿಳಿವು ಈ ಎರಡು ಪದಗಳು ಹಾಗೂ ಅವುಗಳು ಕೊಡುವ ಅರ್ಥದ ಸಾಧ್ಯತೆಗಳನ್ನು ಕನ್ನಡ ಚಿಂತನೆಯಲ್ಲಿ ಒಂದು ಹಂತದಲ್ಲಿ ಸಂವಾದ ನೆಲೆಯಲ್ಲಿ ಒಪ್ಪಲಾಗಿದೆ. ಆದರೆ ಅವೆರಡಕ್ಕೂ ಸೂಕ್ಷ್ಮವಾದ ವ್ಯತ್ಯಾಸಗಳಿವೆ. ಅದರ ಚರ್ಚೆಗೆ ಇಲ್ಲಿ ಹೋಗುವುದಿಲ್ಲ. ಇವೆರಡಕ್ಕೂ ತಾತ್ವಿಕ ನೆಲೆಯಲ್ಲಿ ಇರುವ ಒಂದು ಸಾಮ್ಯತೆ ಎಂದರೆ ಇವೆರಡೂ ಕೂಡಾ ಪ್ರಕ್ರಿಯೆಗಳು. ಅರಿಯುವುದು. ತಿಳಿಯುವುದು – ಹೀಗೆ ಇವೆರಡೂ ಪ್ರಕ್ರಿಯೆಗಳು. ಅರಿಯುವುದರಿಂದ ಅರಿವು ಸೃಷ್ಟಿಯಾಗುತ್ತದೆ. ತಿಳಿಯುವುದರಿಂದ ತಿಳಿವು ಸೃಷ್ಟಿಯಾಗುತ್ತದೆ. ಅದು ತಿಳಿವಳಿಕೆಯಾಗುತ್ತದೆ. ಆದರೆ ಜ್ಞಾನ ಎಂಬುದಕ್ಕೆ ಈ ಸ್ವರೂಪ ಇಲ್ಲ. ಹಾಗಾಗಿಯೇ ಅಲ್ಲಮ ಅರಿವು ಮತ್ತು ತಿಳಿವು ಈ ಎರಡನ್ನೂ ಜ್ಞಾನ ಎಂಬ ಚೌಕಟ್ಟಿನಿಂದ ಅತ್ಯಂತ ಪ್ರಜ್ಞಾಪೂರ್ವಕವಾಗಿ ಬೇರ್ಪಡಿಸುತ್ತಾನೆ. ಇದು ತತ್ವಜ್ಞಾನದ ಬಹಳ ದೊಡ್ಡ ಪ್ರಖರವಾದ ಶಕ್ತಿ. ಅಲ್ಲಮನಲ್ಲಿ ಜ್ಞಾನ ಕುರಿತ ಸಾಲುಗಳಿಗಿಂತ ಅರಿವು ಕುರಿತ ಸಾಲುಗಳು ಜಾಸ್ತಿ. ಇದಕ್ಕೆ ಸಂಬಂಧಿಸಿದಂತೆ ಕೆಳಗಿನ ವಚನದ ಸಾಲುಗಳನ್ನು ಗಮನಿಸಬಹುದು.

*

ಅರಿದು ಅರಿದು ಅರಿವು ಬಂಜೆಯಾಯಿತ್ತು
ಮರೆ ಮರೆದು ಮರಹು ಬಂಜೆಯಾಯಿತ್ತು – ೧೬೯

*

ಅರಿದೆ ಎಂಬುದು ಬಯಲು
ಅರಿಯೆ ಎಂಬುದು ಬಯಲು – ೧೬೮

*

Scanned with CamScanner

ಉಪಮೆ ಉಪಮಿಸಲರಿಯದೆ ಉಪಮಾತೀತವೆನುತ್ತಿದ್ದಿತ್ತು
ಅರಿವು ಅರಿವಿನ ಮರೆಯಲಿರ್ದುದನರಿಯಲರಿಯದೆ
ಪರಾಪರವೆಂದು ನುಡಿಯುತ್ತಿದ್ದಿತ್ತು
ಧ್ಯಾನ ಧ್ಯಾನಿಸಲರಿಯದು – ೧೭೫

*

ತನ್ನರಿದವಂಗೆ ಇದಿರೆಂಬುದಿಲ್ಲ
ತನ್ನರಿದವಂಗೆ ಇದಿರೆಂಬುದುಂಟು – ೧೬೧

*

ಅವ ಸಂಬಂಧವನೂ ಅರಿಯರು – ೯೮

*

ಇದೇನೊ ಇದೆಂತೊ ಅರಿಯಲೆಬಾರದು – ೯೯

*

ಇದೇನೊ ಇದೆಂತೊ ಅರಿಯಲೆಬಾರದು – ೪೮೧

*

ಅರಿವು ತೋರದೆ ಇರಬೇಕು – ೪೮೪

*

ಪಿರಿಯರು ತಮ್ಮ ತಮ್ಮ ಅರಿಯದೆ ಕೆಟ್ಟರು – ೯೬

*

ತನ್ನನರಿಯದ ಅರಿವೆಂತುಟೊ? ತನ್ನ ಮರೆದ ಮರಹೆಂತುಟೊ?
ಅರಿದವರು ಮರೆದವರು – ೧೦೭

*

ನಿಮ್ಮಲ್ಲಿ ನೀವು ತಿಳಿದು ನೋಡಿದರೆ ಅನ್ಯವಿಲ್ಲ
ಅರಿವು ನಿಮ್ಮಲ್ಲಿಯೇ ತದ್ಗತವಾಗಿದೆ – ೧೦೮

*

ಭ್ರಮೆಯಳಿದು ನಿಜವು ಸಾಧ್ಯವಾದ ಬಳಿಕ
ಅವರಿವುದಿನ್ನಾರನು ಗುಹೇಶ್ವರಾ? – ೧೧೯

*

ಆದಿಯನರಿಯರು, ಅನಾದಿಯನರಿಯರು
ಒಂದರೊಳಗಿಪ್ಪ ಎಡನರಿಯರು
ಎರಡೊಳಗಿಪ್ಪ ಮೂರರ ಕೀಲನರಿಯರು – ೧೦೩

ತತ್ವಶಾಸ್ತ್ರವು ಅರಿವನ್ನು ಮತ್ತು ಅದರ ಸ್ವರೂಪವನ್ನು ಕುರಿತು ಆಲೋಚನೆ ಮಾಡುತ್ತದೆ. ಅಲ್ಲಮ ಆಧುನಿಕ ತತ್ವಶಾಸ್ತ್ರವನ್ನು ಅಧ್ಯಯನ ಮಾಡಿದವನಲ್ಲ. ಆದರೆ ಅಲ್ಲಮನ ಈ ಬಗೆಯ ವಚನದ ಸಾಲುಗಳನ್ನು ನಾವು ಆಧುನಿಕ ತತ್ವಶಾಸ್ತ್ರದ ನೆರವಿನಿಂದ ವಿಶ್ಲೇಷಣೆ ಮಾಡಬಹುದು. ಆಧುನಿಕ ತತ್ವಶಾಸ್ತ್ರದಲ್ಲಿ ಹಲವು ಧಾರೆಗಳಿವೆ. ಅವುಗಳಲ್ಲಿ ದ್ವಂದ್ವಾತ್ಮಕ ವಿಧಾನವು ಮಾರ್ಕ್ಸ್‌ವಾದಿ ತತ್ವಶಾಸ್ತ್ರದ ಮುಖ್ಯವಾದ ಧಾರೆ. ತತ್ವಶಾಸ್ತ್ರದ ಈ ಧಾರೆಯನ್ನು ಹಿಡಿದು ನಾವು ಮೇಲಿನ ವಚನದ ಸಾಲುಗಳನ್ನು ವಿಶ್ಲೇಷಣೆ ಮಾಡಬಹುದು.

Scanned with CamScanner

"ತನ್ನರಿದವಂಗೆ ಇದಿರೆಂಬುದಿಲ್ಲ, ತನ್ನರಿದವಂಗೆ ಇದಿರೆಂಬುದುಂಟು" ಇಂತಹ ರಚನೆಗಳ ಮೂಲಕ, ಇಂತಹ ಸಂಬಂಧಗಳನ್ನು ಕಲ್ಪಿಸುವುದರ ಮೂಲಕ ನಮ್ಮ ಜಾಡಿಗೆ ಬಿದ್ದಿರುವ ಗ್ರಹಿಕೆಯ ನೆಲೆಗಳನ್ನು ಅಲ್ಲಮ ಒಂದೇ ಸಲ ಛೇದಿಸಿಬಿಡುತ್ತಾನೆ. "ಅರಿದು ಅರಿದು ಅರಿವು ಬಂಜೆಯಾಯಿತ್ತು, ಮರೆ ಮರೆದು ಮರಹು ಬಂಜೆಯಾಯಿತ್ತು" ಮೇಲಿನ ವಚನದ ಸಾಲುಗಳ ಗ್ರಹಿಕೆಯ ಮುಂದುವರಿಕೆಯಂತೆ ಇವೆ ಈ ಸಾಲುಗಳು. "ಬಂಜೆ" ಎನ್ನುವುದು ನಮ್ಮ ಸಾಮಾನ್ಯ ಗ್ರಹಿಕೆಯಲ್ಲಿ ಒಂದು ಜೈವಿಕ ಪರಿಣಾಮದ ವಸ್ತುಸ್ಥಿತಿ. ಅದು ಏನನ್ನೂ ಸೃಷ್ಟಿಸುವುದಿಲ್ಲ, ಉತ್ಪಾದಿಸುವುದಿಲ್ಲ ಎಂಬುದು ಸಾಮಾನ್ಯ ಗ್ರಹಿಕೆ. ಆದರೆ ಇಲ್ಲಿ ಅಲ್ಲಮ ಈ ಜೈವಿಕ ಸ್ಥಿತಿಯಿಂದ ಅದನ್ನು ಅರಿವು ಎಂಬುದಕ್ಕೆ ವರ್ಗಾಯಿಸಿದ್ದಾನೆ. "ಅರಿದು ಅರಿದು ಅರಿವು ಬಂಜೆಯಾಯಿತು" ಎಂಬ ಮಾತಾಗಲಿ, "ಮರೆ ಮರೆದು ಮರಹು ಬಂಜೆಯಾಯಿತ್ತು" ಎಂಬ ಮಾತಾಗಲಿ ನಮಗೆ ಹೊಸವು. ಇದರ ಮೂಲಕ ಹುಟ್ಟುವ ವಸ್ತುಸ್ಥಿತಿಯನ್ನು ನಾವು ಕಷ್ಟಪಟ್ಟು ಊಹಿಸಿಕೊಳ್ಳಬೇಕಾಗುತ್ತದೆ. ಈ ಮೂಲಕ ಇದು ಹೊಸ ಬಗೆಯ ಊಹೆಗೂ, ಹೊಸ ಬಗೆಯ ಆಲೋಚನೆಗೂ ನಮ್ಮನ್ನು ಹಚ್ಚುತ್ತದೆ. ಅಲ್ಲಮನ ಇಂತಹ ವಚನದ ಸಾಲುಗಳು ಹುಟ್ಟಿಸುವ ಅರಿವು ನಮ್ಮಲ್ಲಿರುವ ಅಥವಾ ನಮ್ಮಲ್ಲಿ ಜಡಗಟ್ಟಿರುವ ಅರಿವಿನ ಜೊತೆಯಲ್ಲಿ ಹತ್ತರಲ್ಲಿ ಹನ್ನೊಂದನೆಯದಾಗಿ ಸೇರಿಕೊಳ್ಳುವುದಿಲ್ಲ. ಬದಲಾಗಿ ಅದು ನಮ್ಮ ಗ್ರಹಿಕೆಯನ್ನು ಅಲ್ಲಾಡಿಸಿ, ಹೊಸ ಆಲೋಚನೆಗೆ ಹಚ್ಚುತ್ತದೆ. "ಇದೇನೊ ಇದೆಂತೊ ಅರಿಯಲೆಬಾರದು" (೯೧), "ಇದೇನೊ ಇದೆಂತೊ ಅರಿಯಲೆಬಾರದು" (೪೮೧) ವಚನದ ಈ ಸಾಲುಗಳಲ್ಲಿ ಅಲ್ಲಮ ಅರಿಯಬೇಕು ಎಂಬುದನ್ನೇ ನಿರಾಕರಿಸುತ್ತಿದ್ದಾನೆ. ಜೊತೆಗೆ "ಅರಿವು ತೋರದೆ ಇರಬೇಕು" ಎಂಬುದಾಗಿ ಮತ್ತೊಂದು ವಚನದಲ್ಲಿ ಹೇಳಿದ್ದಾನೆ. ಅರಿಯಬೇಕು, ಅರಿಯಬೇಕು, ತಿಳಿದುಕೊಳ್ಳಬೇಕು, ತಿಳಿದುಕೊಳ್ಳಬೇಕು ಎಂಬ ನಮ್ಮ ಸಾಮಾನ್ಯ ಹಂಬಲವನ್ನು, ಅಪೇಕ್ಷೆಯನ್ನು ಅಲ್ಲಮ ಇಲ್ಲಿ ನಿರಾಕರಿಸಿದ್ದಾನೆ. ಇದೇ ಅಲ್ಲಮನ ಗ್ರಹಿಕೆಯ ಹೆಚ್ಚುಗಾರಿಕೆ ಎಂದು ಹೇಳಬೇಕು.

ನನ್ನ ಮುಂದಿನ ಮಾತುಗಳಲ್ಲಿ ಅಲ್ಲಮನಲ್ಲಿ ಬರುವ "ನೋಟ" ಎಂಬುದರ ಕುರಿತು ಕೆಲವು ವಿಚಾರಗಳನ್ನು ಹಂಚಿಕೊಳ್ತೀನಿ. ನೋಟ ಎಂಬುದು ನೋಡುವ ಕ್ರಿಯೆಗೆ ಸಂಬಂಧಿಸಿದ್ದು. ನೋಡುವುದು ಕ್ರಿಯೆ ಮಾತ್ರ ಅಲ್ಲ ಯಾಕೆಂದರೆ ಇದನ್ನು ಕ್ರಿಯೆ ಎಂದು ಹೇಳಿದರೆ ಅಲ್ಲಮನ ಗ್ರಹಿಕೆಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಹಾಗಾಗಿ ಇದನ್ನು ಪ್ರಕ್ರಿಯೆ ಎನ್ನಬೇಕು. ನೋಡುವುದರ ಮೂಲಕ ಮತ್ತು ನೋಡುವುದರಿಂದ ಕಾಣುತ್ತದೆ. ನಾವು ನೋಡುವುದಕ್ಕೆ ನೋಡುತ್ತೇವೆ ಮತ್ತು ಕಾಣುವುದಕ್ಕಾಗಿ ನೋಡುತ್ತೇವೆ. ಆದರೆ ಇದರ ಉದ್ದೇಶ ಮೊದಲೇ ಫಿಕ್ಸ್ ಆಗಿರುವುದಿಲ್ಲ. ಯಾಕೆಂದರೆ ಕನ್ನಡದಲ್ಲಿ ಒಂದು ಮಾತಿದೆ. "ನೋಡಿದೆ; ಕಾಣಲಿಲ್ಲ" ಎಂದು. ಅಂತಹ ಸಮಯದಲ್ಲಿ "ಇನ್ನೊಂದ ಸಲ ಸರಿಯಾಗಿ ನೋಡು" ಎಂಬ ಸಲಹೆ ಬರುತ್ತದೆ. ನೋಟ ಎಂಬುದು ವ್ಯಾಕರಣದ ಪ್ರಕಾರ ಧಾತು. ನೋಡ ಎಂಬುದು ಕ್ರಿಯಾಪದ. ಆದರೆ ಕಾಣು ಎಂಬುದು ಧಾತು ಅಲ್ಲ; ಕ್ರಿಯಾಪದವೂ ಅಲ್ಲ. ಇದಕ್ಕೆ ಸಂಬಂಧಿಸಿದಂತೆ ಅಲ್ಲಮನ ನೋಟ ಯಾವುದು ಎಂಬುದರ ಬಗೆಗೆ ಅಲ್ಲಮನ ಕೆಲವು ವಚನಗಳ ಸಾಲುಗಳು.

೩. ನೋಟ

ನೋಡೂದ ನೋಡಲರಿಯದೆ ಕೆಟ್ಟತ್ತೀ ಲೋಕವೆಲ್ಲ
ನೋಡೂದ ನೋಡಬಲ್ಲಡೆ ಕೂಡಲಿಲ್ಲ ಆಗಲಿಲ್ಲ
ನೋಟದ ಕೂಟದ ಅದಲದ ಸುಖವನು
ನಿಮ್ಮ ಶರಣ ಬಲ್ಲ – ೧೫೬

*

ಅಕ್ಷರದಲಭ್ಯಾಸವ ಮಾಡಿ ಬರೆವ ತೊಡೆವ ಪರಿಯಿನ್ನೆಂತೊ?
ಸ್ವರೂಪವೆಂಬುದಾವುದು ನಿರೂಪವೆಂಬುದಾವುದು ಅರಿಯರಾಗಿ
ಆದಿನಿರಾಳ, ಮಧ್ಯನಿರಾಳ, ಊರ್ಧ್ವನಿರಾಳ – ೧೭೩

Scanned with CamScanner

*

ತೊಡೆಯಬಾರದ ಲಿಪಿಯ ಬರೆಯಬಾರದು ನೋಡಾ – ೧೮೩

ತಾ ನಡೆವಡೆ ನಡೆಗೆಟ್ಟ ನಡೆಯ ನಡೆವುದಯ್ಯ

ತಾ ನುಡಿವಡೆ ನುಡಿಗೆಟ್ಟ ನುಡಿಯ ನುಡಿವುದಯ್ಯ

ರೂಹಿಲ್ಲದ ಸಂಗವ ಮಾಡಬೇಕು – ೧೨೫

*

ನುಡಿಯಿಂದ ನಡೆಗೆಟ್ಟಿತ್ತು, ನಡೆಯಿಂದ ನುಡಿಗೆಟ್ಟಿತ್ತು – ೧೮೬

ಮೇಲಿನ ವಚನದ ಸಾಲುಗಳಲ್ಲಿ ಅಲ್ಲಮ ಬಹುತೇಕ ನಿಷೇಧಾರ್ಥದ ಮೂಲಕ ಮಾತಾಡುತ್ತಿದ್ದಾನೆ. ಎರಡು ನಿಷೇಧಾರ್ಥಗಳನ್ನು ಒಮ್ಮೆಗೇ ಸೇರಿಸುವುದು ಅಲ್ಲಮನ ಒಂದು ಗಂಭೀರವಾದ ಶೈಲಿ. ಹಾಗಾಗಿ ಮೊದಲ ನೋಟಕ್ಕೆ ಇದು ನಮ್ಮ ಗ್ರಹಿಕೆಗೆ ಸಿಗುವುದಿಲ್ಲ. ಇದು ಕೇವಲ ಭಾಷಿಕ ನೆಲೆಯಲ್ಲಿ ವಿರಮಿಸಿದ್ದರೆ ಇದಕ್ಕೆ ಕವಿತ್ವದ ಅಸಾಧ್ಯ ಶಕ್ತಿಯೊಂದು ಒದಗುತ್ತಿತ್ತು. ಕನ್ನಡದ ಬೇಂದ್ರೆ ಮತ್ತು ಗೋಪಾಲಕೃಷ್ಣ ಅಡಿಗ ಮುಂತಾದ ಕೆಲವೇ ಜನ ಕವಿಗಳು ಈ ಬಗೆಯಲ್ಲಿ ಕವಿತೆಗಳನ್ನು ಕಟ್ಟಿದ್ದಾರೆ. ಆದರೆ ಅಲ್ಲಮನ ಪ್ರತಿಯೊಂದು ಅಭಿವ್ಯಕ್ತಿಯೂ ಅಸಾಮಾನ್ಯ ಕವಿತ್ವದಿಂದ ಶಕ್ತಿಶಾಲಿ ತತ್ವಮೀಮಾಂಸೆಗೆ ದಾಟುತ್ತದೆ ಅಥವಾ ಇದನ್ನು ಹೀಗೂ ಹೇಳಬಹುದು. ಅಲ್ಲಮ ತನ್ನ ಶಕ್ತಿಶಾಲಿ ತತ್ವಮೀಮಾಂಸೆಯನ್ನು ವಚನವನ್ನಾಗಿ, ಕವಿತ್ವವನ್ನಾಗಿ ಅರಳಿಸುತ್ತಾನೆ. ಇದಕ್ಕೆ ಒಂದು ಕಡೆ ಭಾಷೆಯನ್ನು ಸೃಷ್ಟಿಸುವ ಮಹಾನ್ ಪ್ರತಿಭೆಯೂ, ಅಗಾಧವಾದ ಹಿಡಿತವೂ, ಜೊತೆಗೆ ತತ್ವಮೀಮಾಂಸೆಯ ಬಗೆಗೆ ಅತ್ಯಂತ ಮೇರು ಹಂತದ ಸಾಧನೆಯೂ ಸಾಧ್ಯವಾದಾಗ ಮಾತ್ರ ಇಂತಹದ್ದು ಹುಟ್ಟುತ್ತದೆ. ಇಲ್ಲದಿದ್ದರೆ ವಚನವೂ ಹುಟ್ಟುವುದಿಲ್ಲ; ಅದು ಕವಿತ್ವವೂ ಆಗುವುದಿಲ್ಲ; ತತ್ವಮೀಮಾಂಸೆಯಂತೂ ಆಗುವುದೇ ಇಲ್ಲ. ಕೇವಲ ಒಣ ಹೇಳಿಕೆಗಳನ್ನು, ಒರಟು ವಾಕ್ಯಗಳನ್ನು ಒಂದರ ಕೆಳಗೆ ಒಂದನ್ನು ಬರೆದು "ನೋಡಿ, ಇದು ನನ್ನ ಕವಿತೆ" ಎಂದು ಪ್ರಚಾರ ಪಡೆಯುವಂತೆ ಆಗುತ್ತದೆ. ಶಕ್ತಿಕವಾದ ಮತ್ತು ಕಾವ್ಯಾತ್ಮಕವಾದ ಈ ವಿಚಾರದಲ್ಲೆ ಅಲ್ಲಮ ಇಡೀ ವಚನ ಚಳವಳಿಯಲ್ಲಿ, ಇಡೀ ವಚನಕಾರರಲ್ಲಿ ಶಕ್ತಿಕ ಹಾಗೂ ತಾನು ಮೂಡಿಸುವ ದಾರ್ಶನಿಕತೆಯ ಕಾರಣಕ್ಕೆ ಅತ್ಯಂತ ಭಿನ್ನನಾಗಿ, ಅತ್ಯಂತ ಶಕ್ತಿಶಾಲಿಯಾಗಿ ರೂಪುಗೊಂಡಿದ್ದಾನೆ.

ವಚನ ಚಳವಳಿಯನ್ನು ಮತ್ತು ವಚನಕಾರರ ವಚನಗಳನ್ನು ಅಧ್ಯಯನ ಮಾಡಿರುವ ಕೆಲವು ಪ್ರಮುಖ ಅಧ್ಯಯನಗಳು ಇಡೀ ವಚನಗಳ ಮತ್ತು ವಚನ ಚಳವಳಿಯ ಮುಖ್ಯ ವೈಚಾರಿಕ ಕೇಂದ್ರಗಳನ್ನು ಗುರುತಿಸಿದ್ದಾರೆ. ಅವುಗಳನ್ನು ಜನಪ್ರಿಯಗೊಳಿಸಿದ್ದಾರೆ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ, ಈಗ ವಚನಗಳನ್ನು ಮುಕ್ತವಾಗಿ ಓದಲಾರದಂತಹ, ಅರ್ಥೈಸಲಾರದಂತಹ ಅಕಾಡೆಮಿಕ್ ನಿರ್ಬಂಧವನ್ನು ನಿರ್ಮಾಣ ಮಾಡಲಾಗಿದೆ. ಹಿಂದಿನ ಪ್ರಮುಖ ಅಧ್ಯಯನಗಳು ಕೇಳುವ ಹೇಳಿಕೆಗಳನ್ನು ಮತ್ತು ಅವು ಮಾಡಿರುವ ಯಾಂತ್ರಿಕ ತೀರ್ಮಾನಗಳನ್ನು ಬೆನ್ನು ಹತ್ತಿ ಅವುಗಳ ಮೂಲಕ ವಚನಗಳನ್ನು ಹಾಗೂ ಆ ಇಡೀ ಚಳವಳಿಯನ್ನು ವಿಶ್ಲೇಷಣೆ ಮಾಡುವ ಮಾದರಿಯೊಂದು ನಿರ್ಮಾಣವಾಗಿದೆ. ಅಕಾಡೆಮಿಕ್ ಆಗಿ ಈ ರೀತಿ ಮಾಡುವವರು ಮೊದಲು ಒಂದು ಸಲ ಅಲ್ಲಮನನ್ನು ಅಧ್ಯಯನ ಮಾಡುವ ಅಗತ್ಯ ಇದೆ. ನನ್ನ ಓದಿನಲ್ಲಿ ಅಧ್ಯಯನಗಳು ಅಲ್ಲಮನನ್ನು ಆಂಶಿಕವಾಗಿಯಾದರೂ ನೋಡಿಯೇ ಇಲ್ಲ ಎಂಬುದು ತಾತ್ವಿಕವಾಗಿ ಇರುವ ಸಂಗತಿ.

ಎರಡು ನಿಷೇಧಾರ್ಥಗಳನ್ನು ಒಟ್ಟಿಗೆ ಸೇರಿಸುವುದು ಅಲ್ಲಮನ ಒಂದು ಗಂಭೀರವಾದ ಶೈಲಿ ಎಂದು ಆಗಲೇ ಹೇಳಿದೆ. ಈ ಸಾಲನ್ನು ಗಮನಿಸಬೇಕು. "ತೊಡೆಯಬಾರದು ಲಿಪಿಯ ಬರೆಯಬಾರದು". ತೊಡೆಯಬಾರದು, ಬರೆಯಬಾರದು ಎನ್ನುವ ಎರಡೂ ಕೂಡ ನಿಷೇಧಾರ್ಥಕ ಪದಗಳು. ವಚನದ ಸೌಷ್ಠವಕ್ಕಾಗಿಯೋ, ಕವಿತ್ವ ಶಕ್ತಿಯ ಹೆಚ್ಚುಗಾರಿಕೆಗಾಗಿಯೋ

Scanned with CamScanner

ಅಲ್ಲಮ ಇಂತಹ ಪದಗಳನ್ನು ಜೋಡಿಸುತ್ತಿಲ್ಲ. ಇದರ ಮೂಲಕ ದರ್ಶನವೊಂದನ್ನು ಕಟ್ಟುತ್ತಿದ್ದಾನೆ. ಇದನ್ನು ಓದುವವರು ತಮಗಿರುವ ತೀರ್ಮಾನದ ಮೂಲಕ ಪ್ರವೇಶ ಮಾಡಲು ಆಗುವುದಿಲ್ಲ ಅಥವಾ ತಮ್ಮ ತೀರ್ಮಾನವನ್ನೆ ಇದಕ್ಕೆ ಹಚ್ಚಿ ಕೈತೊಳೆದುಕೊಳ್ಳಲು ಆಗುವುದಿಲ್ಲ. ಇಂತಹ ಕಡೆಗೇ ಅಲ್ಲಮ ನಮ್ಮ ಕೈಗೆ ಸುಲಭವಾಗಿ ಸಿಗುವುದಿಲ್ಲ. ಇದೇ ವಚನದ ಮುಂದಿನ ಸಾಲುಗಳನ್ನು ಪರಿಶೀಲಿಸಬೇಕು. "ತಾ ನಡೆವಡೆ ನಡೆಗೆಟ್ಟ ನಡೆಯ ನಡೆವುದಯ್ಯ, ತಾ ನುಡಿವಡೆ ನುಡಿಗೆಟ್ಟ ನುಡಿಯ ನುಡಿವುದಯ್ಯ" ಇಂತಹ ಭಾಷಿಕ ಸೃಷ್ಟಿಯ ಜೊತೆಯಲ್ಲಿ ಮತ್ತು ಅದರ ಪರಿಣಾಮದ ನೆಲೆಯಲ್ಲಿ ನಾವು ಒಡನಾಡುವ ಬಗೆಯಾದರೂ ಯಾವುದು? "ನಡೆಗೆಟ್ಟ ನಡೆ, ನುಡಿಗೆಟ್ಟ ನುಡಿ"ಯ ಬಗೆಗೆ ಅಲ್ಲಮ ಪ್ರಸ್ತಾಪ ಮಾಡುತ್ತಿದ್ದಾನೆ. ಎಲ್ಲದರಲ್ಲೂ ಶುದ್ಧತೆಯನ್ನು, ಪಕ್ಕಾ ಇರಬೇಕು ಎಂಬುದನ್ನು ನಾವು ಅಪೇಕ್ಷಿಸುತ್ತಿದ್ದೇವೆ. ಎಷ್ಟೋ ಸಲ ಇಂತಹ ಅಪೇಕ್ಷೆಗಳು ಕೇವಲ ಅಪೇಕ್ಷೆಗಳಾಗಿ ಮಾತ್ರ ಉಳಿದುಹೋಗುತ್ತವೆ. ಅವು ಎಂದೂ ಕೈಗೂಡುವುದಿಲ್ಲ. ಮನುಷ್ಯರ ಬದುಕು ಶುದ್ಧವಾಗಿಲ್ಲ, ಅದು ಪಕ್ಕಾ ಇಲ್ಲ. ಅದು ಕಚ್ಚಾ ಇದೆ, ಅದು ಅಶುದ್ಧವಾಗಿದೆ. ನಡೆಗೆಟ್ಟ ನಡೆಯನ್ನು ಮತ್ತು ನುಡಿಗೆಟ್ಟ ನುಡಿಯನ್ನು ಸಮಾಜದ ಕೆಳ ಅಂತಸ್ತಿನಲ್ಲಿ ಇರುವವರ ಮೇಲೆ ಆರೋಪಿಸಲಾಗಿದೆ. ನುಡಿಗೆಡದ ನುಡಿ ಮತ್ತು ನಡೆಗೆಡದ ನಡೆಯನ್ನು ಅಲ್ಲಮ ಒಪ್ಪುತ್ತಿಲ್ಲ ಅಥವಾ ಅವನ ಪ್ರಕಾರ ಇವು ಕೇವಲ ಆದರ್ಶಗಳು ಮಾತ್ರ ಆಗಿರಬಹುದೆಂದು ಕಾಣುತ್ತದೆ.

"ನೋಡೂದ ನೋಡಲರಿಯದೆ ಕೆಟ್ಟಿತ್ತೀ ಲೋಕವೆಲ್ಲ" ತನ್ನ ವಚನದ ಈ ಸಾಲಿನಲ್ಲಿ ಅಲ್ಲಮ ಬಹಳ ದೊಡ್ಡ ತತ್ವಮೀಮಾಂಸೆಯನ್ನು ನಿರೂಪಿಸುತ್ತಿದ್ದಾನೆ. ನೋಡುವುದನ್ನು ಅರಿಯಬೇಕು ಎಂಬುದು ಅಲ್ಲಮನ ಪ್ರಾಥಮಿಕ ಸೂಚನೆ. ಒಂದು ವೇಳೆ ನೋಡುವುದನ್ನು ಅರಿಯದಿದ್ದರೆ ಆಗ ಲೋಕವೆಲ್ಲ ಕೆಟ್ಟುಹೋಗುತ್ತದೆ ಎಂಬುದು ಅತನ ತೀರ್ಮಾನ. ಈ ಒಂದೇ ಸಾಲಿನ ಬಗೆಗೆ ಬಹಳಷ್ಟು ತಾತ್ವಿಕ ವಿವರಣೆ ಮಾಡಬಹುದು, ವಿಶ್ಲೇಷಣೆ ಮಾಡಬಹುದು; ವ್ಯಾಖ್ಯಾನವನ್ನೂ ಮಾಡಬಹುದು. ಈ ಲೋಕವನ್ನು ಹೇಗೆ ನೋಡಬೇಕು ಮತ್ತು ಹೇಗೆ ನೋಡಬಾರದು ಎಂಬುದು ಅಲ್ಲಮನ ದರ್ಶನ. ಇದು ದ್ವಂದ್ವಾತ್ಮಕ ತತ್ವಜ್ಞಾನದ ದೃಷ್ಟಿಕೋನವೂ ಹೌದು; ವಿಧಾನವೂ ಹೌದು. ನಾವು ಲೋಕವನ್ನು, ಸಮಾಜವನ್ನು, ಕುಟುಂಬವನ್ನು, ನಮ್ಮ ಸಹಜೀವಿಗಳನ್ನು ಹೇಗೆ ನೋಡುತ್ತಿದ್ದೇವೆ ಎಂದು ಒಂದು ಸಲ ಆಲೋಚನೆ ಮಾಡಿಕೊಳ್ಳುವ, ವಿಮರ್ಶೆ ಮಾಡಿಕೊಳ್ಳುವ ಅಗತ್ಯವಿದೆ. ನಾವು ಲೋಕವನ್ನು ಹೇಗೆ ನೋಡುತ್ತೇವೋ ಅದು ಹಾಗೆಯೇ ಕಾಣುತ್ತದೆ. ಕಾರ್ಮಿಕರು ಕಾರ್ಮಿಕರಾಗಿ ನೋಡುವ ಮತ್ತು ತಮ್ಮನ್ನು ನೋಡಿಕೊಳ್ಳುವ; ಮಹಿಳೆಯರು ಮಹಿಳೆಯರಾಗಿ ನೋಡುವ ಮತ್ತು ತಮ್ಮನ್ನು ನೋಡಿಕೊಳ್ಳುವ; ಅಸ್ಪೃಶ್ಯರು ಅಸ್ಪೃಶ್ಯರಾಗಿ ನೋಡುವ ಮತ್ತು ನೋಡಿಕೊಳ್ಳುವ ಕ್ರಮವು ಮತ್ತೆ ಮತ್ತೆ ಹುಟ್ಟುತ್ತಾ, ಬೆಳೆಯುತ್ತಾ ಬರಬೇಕು; ಬರುತ್ತಿದೆ. ಅಲ್ಲಮ ಹೇಳುತ್ತಿರುವ "ನೋಡುವುದ ನೋಡಲು ಅರಿಯುವುದು" ಎಂಬುದು ನೋಡುವ ದೃಷ್ಟಿಕೋನಕ್ಕೆ ಮತ್ತು ತಾತ್ವಿಕತೆಗೆ ಸಂಬಂಧಿಸಿದ್ದು. ಅಲ್ಲಮ ಎಷ್ಟೋ ವರ್ಷಗಳ ಹಿಂದೆ ಬರೆದಿರುವ ಈ ಸಾಲು ಇವತ್ತಿಗೂ ಮುಂದಿನ ಅದೆಷ್ಟೋ ಯುಗಗಳಿಗೂ ಅನ್ವಯ ಆಗುವಷ್ಟು ಶಕ್ತಿಶಾಲಿಯಾಗಿದೆ. ತತ್ವಶಾಸ್ತ್ರದಲ್ಲಿ ಇದಕ್ಕೆ ಸಂಬಂಧಿಸಿದ ಬಹು ದೊಡ್ಡ ಚರ್ಚೆ ಇದೆ. ಆದರೆ ಕವಿತ್ವದಲ್ಲಿ ಇದನ್ನು ವರ್ಣಿಸುವುದು, ಸಾಧಿಸುವುದು ಅಷ್ಟು ಸುಲಭ ಅಲ್ಲ. ಅದಕ್ಕೆ ನಾನು ಈ ಮೊದಲು ಹೇಳಿದ್ದು, ಅಲ್ಲಮನಲ್ಲಿ ಕವಿತ್ವವೂ; ತತ್ವಮೀಮಾಂಸೆಯೂ ಒಂದರೊಳಗೆ ಒಂದು ಬೆರೆತು ಬರುತ್ತವೆ ಎಂದು. ಅಲ್ಲಮನ ವಚನಗಳಲ್ಲಿ ಇವೆರಡೂ ಪರಸ್ಪರ ಬೆರೆತು ಹೊಸ ದರ್ಶನವೊಂದು ಸೃಷ್ಟಿಯಾಗುತ್ತದೆ. ಈ ದೃಷ್ಟಿಯಿಂದ ಜಾಗತಿಕ ತತ್ವಜ್ಞಾನಕ್ಕೆ ಅಲ್ಲಮನ ಕೊಡುಗೆ ಬಹಳ ದೊಡ್ಡದು ಎಂದು ಹೇಳಬಹುದು.

ಅಲ್ಲಮನನ್ನು ಬಿಟ್ಟರೆ ಉಳಿದ ವಚನಕಾರರ ವಚನಗಳಲ್ಲಿ "ನುಡಿಯನ್ನು ನಡೆಯು ಅನುಸರಿಸಬೇಕು", "ನುಡಿಯು ನಡೆಯನ್ನು ಪ್ರಭಾವಿಸುತ್ತದೆ, ರೂಪಿಸುತ್ತದೆ" ಎಂಬ ವಚನದ ಸಾಲುಗಳು ಬರುತ್ತವೆ. ನಡೆಯನ್ನು ನುಡಿಯು ಪ್ರಭಾವಿಸುತ್ತದೆ, ರೂಪಿಸುತ್ತದೆ ಮತ್ತು ನಿರ್ಮಿಸುತ್ತದೆ ಎಂಬ ನಂಬಿಕೆಯ ನಮ್ಮಲ್ಲಿ ಬಲವಾಗಿ ಬೇರುಬಿಟ್ಟಿದೆ. ಇದಕ್ಕಾಗಿ ಧರ್ಮದ ನೆಲೆಯಿಂದ, ಧಾರ್ಮಿಕ ಗ್ರಂಥಗಳ ನೆರವಿನಿಂದ ಉಪದೇಶ ಮಾಡಲಾಗುತ್ತದೆ. ಇದರ ಅತಿ ಕೆಟ್ಟ ಪರಿಣಾಮವೆಂದರೆ ಸಾಹಿತ್ಯವನ್ನು ಕೂಡ ಅದೇ ರೀತಿಯಲ್ಲಿ ಓದಲಾಗುತ್ತಿದೆ. ಅದರಲ್ಲೂ ವಚನ ಸಾಹಿತ್ಯವನ್ನಂತೂ ಸುಭಾಷಿತಗಳ ಹಾ

Scanned with CamScanner

ಎಂಬಂತೆ, ಉಪದೇಶಗಳ ಸಂಕಲನ ಎಂಬಂತೆ ಉಪಯೋಗಿಸಲಾಗುತ್ತಿದೆ. ವಾಸ್ತವವಾಗಿ ಈ ಬಗೆಯ ಉಪದೇಶದ ಯುಮಾನಿಕೆಗೆ ಹಾಗೂ ಜಡವಾದ ಗ್ರಹಿಕೆಗೆ ಅಲ್ಲಮ ಸಂಪೂರ್ಣ ಭಿನ್ನವಾಗಿದ್ದಾನೆ. ಹೀಗೆ ಹೇಳಿದರೆ ಅಲ್ಲಮನ ಪ್ರಕಾರ ತಪ್ಪಾಗುತ್ತದೆ. ನಾವು ಅಲ್ಲಮನ ದೃಷ್ಟಿಕೋನಕ್ಕೆ ಸಂಪೂರ್ಣ ವಿರುದ್ಧವಾಗಿ ವಚನಗಳನ್ನು ಓದಿದ್ದೇವೆ. "ನುಡಿಯಿಂದ ನಡೆಗೆಟ್ಟಿತ್ತು, ನಡೆಯಿಂದ ನುಡಿಗೆಟ್ಟಿತ್ತು". ಅಲ್ಲಮನ ವಚನದ ಈ ಸಾಲನ್ನು ನಾವು ಹತ್ತಾರು ಸಲ ಮನನ ಮಾಡಿಕೊಳ್ಳುವ ಅಗತ್ಯವಿದೆ. ಯಾಕೆಂದರೆ "ನುಡಿಯಿಂದ ನಡೆಯು ಸುಧಾರಿಸುತ್ತದೆ; ನಡೆಯಿಂದ ನುಡಿಯು;ಸುಧಾರಿಸುತ್ತದೆ" ಎಂಬ ನಂಬಿಕೆ ನಮ್ಮಲ್ಲಿ ಗಟ್ಟಿಯಾಗಿ ಬೇರೂರಿದೆ. ಈ ನಂಬಿಕೆಯ ಕಾರಣಕ್ಕೆ ನಡೆಗೂ ಮತ್ತು ನುಡಿಗೂ; ನುಡಿಗೂ ಮತ್ತು ನಡೆಗೂ ಸರಳವಾಗಿ ಸಮೀಕರಣ ಮಾಡುತ್ತೇವೆ. ಅವು ಪರಸ್ಪರ ಒಂದನ್ನೊಂದು ಪ್ರಭಾವಿಸುತ್ತಾ, ಸೃಷ್ಟಿಯಾಗುತ್ತಾ, ಬೆಳೆಯುತ್ತಾ ಹೋಗುತ್ತವೆ ಎಂಬ ನಂಬಿಕೆ ನಮ್ಮದು. "ನಾನು ಅವನಿಗೆ/ ಅವಳಿಗೆ ಗಿಣಿಗೆ ಹೇಳಿದ ಹಾಗೆ ಹೇಳಿದೆ; ನನ್ನ ಮಾತನ್ನು ಕೇಳಲಿಲ್ಲ. ಕೇಳಿದ್ದರೆ ಈ ರೀತಿ ಆಗ್ತಾ ಇರಲಿಲ್ಲ" ಎಂದು ನಾವು ದೈನಂದಿನ ವ್ಯಾವಹಾರಿಕ ಬದುಕಿನಲ್ಲಿ ಎಷ್ಟೋ ಸಲ ಹೇಳುತ್ತೇವೆ; ಅಥವಾ ಯಾರಾದರೂ ಈ ರೀತಿ ಹೇಳಿದ್ದನ್ನು ಕೇಳಿದ್ದೇವೆ. ಇಲ್ಲೆಲ್ಲ ನುಡಿಯು ನಡೆಯನ್ನು ಪ್ರಭಾವಿಸುತ್ತದೆ ಮತ್ತು ನಿಯಂತ್ರಿಸುತ್ತದೆ ಎಂದು ನಾವು ನಂಬಿದ್ದೇವೆ. ಇದು ಸಾಧ್ಯವೇ? ಇದು ನಮ್ಮ ಮುಂದಿರುವ ಮೊದಲ ಪ್ರಶ್ನೆ ಹಾಗೂ ದೊಡ್ಡ ಸವಾಲು.

"ನಡೆಯು ಕೆಟ್ಟು ಹೋಗಬೇಕಾದರೆ ಅದಕ್ಕೆ ನುಡಿಯೇ ಕಾರಣ; ನುಡಿಯು ಕೆಟ್ಟು ಹೋಗಬೇಕಾದರೆ ಅದಕ್ಕೆ ನಡೆಯೇ ಕಾರಣ" ಎಂದು ಹೇಳುವುದರ ಮೂಲಕ ಅಲ್ಲಮ ನಮ್ಮ ಸ್ಥಾಪಿತ ಗ್ರಹಿಕೆ ಹಾಗೂ ಸ್ಥಾಪಿತ ನಂಬಿಕೆಯನ್ನು ಸರಳ ಮಾಡುತ್ತಾನೆ. ನಡೆಗೂ-ನುಡಿಗೂ, ನುಡಿಗೂ-ನಡೆಗೂ ಸರಳ ಸಮೀಕರಣ ಮಾಡುವ ನಮ್ಮ ಯಾಂತ್ರಿಕ ಗ್ರಹಿಕೆ ಹಾಗೂ ಜಡಗೊಂಡಿರುವ ನಂಬಿಕೆಯನ್ನು ಬದಲಿಸಿಕೊಳ್ಳಲು ಅಲ್ಲಮನ ಈ ದೃಷ್ಟಿಕೋನ ನಮ್ಮನ್ನು ಒತ್ತಾಯಿಸುತ್ತದೆ.

೪. ವಿರುದ್ಧಗಳ ನಡುವೆ ಸಂಘರ್ಷ ಮತ್ತು ಐಕ್ಯತೆ

*

ಭಾವವಳಿಯದೆ ಬಯಕೆ ಸವೆಯದೆ
ಐಕ್ಯವು ಆವ ಘನವೆಂದಹುದೆ
ಶಬ್ದ ಸಂಭ್ರಮದ ಮದವಳಿಯದೆ
ತನ್ನ ಇದಿರಲ್ಲಿ ಪ್ರತಿಯುಳ್ಳಡೆ ಏನೆಂದಡೂ ಅಹುದೆ
ಗುಹೇಶ್ವರನೆಂಬ ಶಬ್ದ ಸಂದಳಿಯದೆ
ಬೇಸತ್ತು ಬಯಲಾದಡೆ ಆಯವಹುದೆ? – ೧೬೬

*

ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ
ಬೀಜದೊಳಗಣ ವೃಕ್ಷದಂತೆ ಶಬ್ದದೊಳಗಣ ನಿಶ್ಶಬ್ದದಂತೆ
ಗುಹೇಶ್ವರ ನಿಮ್ಮ ಶರಣರ ಸಂಬಂಧ – ೧

*

ಸಂಬಂಧವೆ ಅಸಂಬಂಧವಾಗಿ ಅಸಂಬಂಧವೆ ಸಂಬಂಧವಾಗಿ
ಎರಡೂ ಒಂದಾಗಿ ಗುಹೇಶ್ವರ ಲಿಂಗಸಂಬಂಧಿ

*

ಸುಖವ ಬಲ್ಲಾತ ಸುಖಿಯಲ್ಲ ದುಃಖವ ಬಲ್ಲಾತ ದುಃಖಿಯಲ್ಲ
ಸುಖ ದುಃಖವೆರಡನೂ ಬಲ್ಲಾತ ಜ್ಞಾನಿಯಲ್ಲ – ೧೦೨

Scanned with CamScanner

*

ಹುಟ್ಟಿದ ಮುನ್ನ ಸತ್ತವರ ಕುರುಹ ಬಲ್ಲಡೆ
ಬಲ್ಲ ಗುಹೇಶ್ವರ – ೧೦೨

*

ಹಗಲ ಇರುಳ ಮಾಡಿ, ಇರುಳ ಹಗಲ ಮಾಡಿ
ಆಚಾರವ ಅನಾಚಾರವ ಮಾಡಿ, ಅನಾಚಾರವ ಆಚಾರವ ಮಾಡಿ
ಭಕ್ತನ ಭವಿಯ ಮಾಡಿ, ಭವಿಯ ಭಕ್ತನ ಮಾಡಿ
ನುಡಿವವರ ಮಾತ ಕೇಳಲಾಗದು

*

ಅಪರಿಮಿತ ಕತ್ತಲೆಯೊಳಗೆ ಪರಿಮಿತದ ಬೆಳಗನಿಕ್ಕಿದಡೆ
ಬೆಳಕೂ ಅದೆ ಕತ್ತಲೆಯೂ ಅದೆ
ಇದೇನು ಚೋದ್ಯವೊ? ಒಂದಕ್ಕೊಂದಂಜದು
ಆನೆಯೂ ಸಿಂಹವೂ ಒಂದಾಗಿ ಉಂಬುದ ಕಂಡು
ಬೆರಗಾದೆನು – ೧೩೭

ಇದು ಮಾರ್ಕ್ಸ್‌ವಾದಿ ತತ್ವಜ್ಞಾನದ ಬಹಳ ಮುಖ್ಯವಾದ ಒಂದು ದೃಷ್ಟಿಕೋನ ಹಾಗೂ ಮುಖ್ಯವಾದ ವಿಧಾನ. ಪರಸ್ಪರ ವಿರುದ್ಧ ಶಕ್ತಿಗಳ ನಡುವೆ, ಪರಸ್ಪರ ವಿರುದ್ಧ ಸ್ವಭಾವಗಳ ನಡುವೆ ಸಂಘರ್ಷ ಏರ್ಪಡುತ್ತದೆ. ಸಂಘರ್ಷ ಸ್ಥಾಯಿಯಾಗಿ ಇರುವುದಿಲ್ಲ. ಯಾಕೆಂದರೆ ಇದು ಆಗುವ ಮತ್ತು ಬದಲಾಗುವ ಚಲನಶೀಲ ಹಾಗೂ ಪರಿವರ್ತನಾಶೀಲ ಪ್ರಕ್ರಿಯೆ. ಹೀಗೆ ಇಂತಹ ಸಂಘರ್ಷದ ಮುಂದಿನ ಪರಿಣಾಮದ ಹಂತವು ಐಕ್ಯತೆ. ಹಾಗೆ ನೋಡಿದರೆ ಐಕ್ಯತೆಗೂ ಮತ್ತು ಸಂಘರ್ಷಕ್ಕೂ ಪರಸ್ಪರ ವಿರುದ್ಧ ಸಂಬಂಧ ಎಂದು ನಾವು ಕಲ್ಪಿಸಿಕೊಂಡಿದ್ದೇವೆ. ನಿಜಕ್ಕೂ ಇದು ಕಲ್ಪನೆಯೇ ಹೊರತು ವಾಸ್ತವ ಅಲ್ಲ. ಐಕ್ಯತೆಗೂ ಚಲನಶೀಲತೆ ಇರುತ್ತದೆ. ಅದೇನೂ ಸ್ಥಾಯಿ ಅಲ್ಲ. ಅಂದರೆ ಐಕ್ಯತೆಯು ಸಂಘರ್ಷವಾಗಿ ಮತ್ತು ಸಂಘರ್ಷವು ಐಕ್ಯತೆಯಾಗುವ ಒಂದು ದೊಡ್ಡ ಪ್ರಕ್ರಿಯೆ ಇದು. ಅಲ್ಲಮನ ವಚನಗಳನ್ನು ಈ ದೃಷ್ಟಿಕೋನದಲ್ಲಿ ವಿಶ್ಲೇಷಿಸಿಕೊಳ್ಳಬಹುದು.

ಅಲ್ಲಮನ ಪ್ರಕಾರ, "ಸಂಬಂಧವು ಅಸಂಬಂಧವಾಗುತ್ತದೆ; ಅಸಂಬಂಧವು ಸಂಬಂಧವಾಗುತ್ತದೆ" ಹೀಗೆ ಸಂಬಂಧದ ಬಗ್ಗೆ ಮಾತಾಡುತ್ತಾ, ಈ ಸಂಬಂಧದ ವಿಚಾರವನ್ನು ಅಲ್ಲಮ ಒಂದೇ ಸಲ ಜೈವಿಕ ನೆಲೆಗೆ ಕೊಂಡೊಯ್ಯುತ್ತಾನೆ. "ಲಿಂಗಸಂಬಂಧಿ" ಎಂಬ ಬಹಳ ಮುಖ್ಯವಾದ ಮಾತನ್ನು ಹೇಳಿದ್ದಾನೆ. ಲಿಂಗಸಂಬಂಧಿ ನೆಲೆಯು "ಸಂಬಂಧವು ಅಸಂಬಂಧವಾಗಿ, ಅಸಂಬಂಧವು ಸಂಬಂಧವಾಗಿ" ಆಗುವಂತೆ ಮಾಡಿರಬಹುದೆ? ಎಂದು ಆಲೋಚಿಸಲು ಸಾಧ್ಯವಿದೆ. ಚಲನಶೀಲತೆಯನ್ನು ಮತ್ತು ಪರಿವರ್ತನೆಯನ್ನು ಪ್ರತಿಪಾದಿಸುವ ಆಲೋಚನೆಗಳು ಯಾವುದನ್ನೂ ಸ್ಥಾಯಿ ಪಾಪ ಜಡ ಎಂದು ಭಾವಿಸುವುದಿಲ್ಲ; ತಿಳಿಯುವುದಿಲ್ಲ. ಅಲ್ಲಮ ಎಲ್ಲವನ್ನೂ ಚಲನಶೀಲ ಸಂಗತಿಗಳೆಂದು ನಂಬಿದವನು, ತಿಳಿದವನು. ಹಾಗಾಗಿ ಅಲ್ಲಮನ ಆಲೋಚನೆಯಲ್ಲಿ, ಆತನ ಗತಿತರ್ಕದ ಚಿಂತನೆಯಲ್ಲಿ ಸಂಬಂಧವು ಅಸಂಬಂಧವಾಗಿಯೂ ಅಸಂಬಂಧವು ಸಂಬಂಧವಾಗಿಯೂ ಚಲನಶೀಲಗೊಳ್ಳುತ್ತದೆ, ಪರಿವರ್ತನೆಯಾಗುತ್ತದೆ.

ಅಪರಿಮಿತ ಕತ್ತಲು ಮತ್ತು ಪರಿಮಿತ ಬೆಳಕು ಇವೆರಡೂ ಒಂದೇ ಕಡೆ ಇರುವುದಾದರೆ, ಬೆಳಕೂ ಕತ್ತಲೆಯೂ ಅದೆ ಎಂದು ತೀರ್ಮಾನಿಸುತ್ತಾನೆ. ಅಲ್ಲಮನ ಈ ವಚನವನ್ನು ಗಮನಿಸಬೇಕು. "ಹಗಲ ಇರುಳ ಮಾಡಿ, ಇರುಳ ಹಗಲ ಮಾಡಿ, ಆಚಾರವ ಅನಾಚಾರವ ಮಾಡಿ, ಅನಾಚಾರವ ಆಚಾರವ ಮಾಡಿ, ಭಕ್ತನ ಭವಿಯ ಮಾಡಿ, ಭವಿಯ ಭಕ್ತನ ಮಾಡಿ, ನುಡಿವವರ ಮಾತ ಕೇಳಲಾಗದು" ಅಲ್ಲಮನ ಈ ವಚನವಂತೂ ಇಡೀ ಶರಣ ಚಳವಳಿ

Scanned with CamScanner

ನಿರ್ವಾಕ್ಷಿಣ್ಯವಾಗಿ ಭಾಷ್ಯ ಬರೆದಂತೆ ಇದೆ. ಕೇವಲ ಹಗಲನ್ನು, ಕೇವಲ ಆಚಾರವನ್ನು, ಕೇವಲ ಭಕ್ತನನ್ನು ಕೇಂದ್ರವನ್ನಾಗಿ ಮಾಡುವವರ ನುಡಿಯನ್ನು ಕೇಳಲಾಗದು ಎಂಬ ಅತ್ಯಂತ ಕಟುವಾದ ವಿಮರ್ಶೆಯನ್ನು ಮಂಡಿಸಿದ್ದಾನೆ. ಈ ವಚನವನ್ನು ಐತಿಹಾಸಿಕ ನೆಲೆಯಲ್ಲಿ ಚರ್ಚಿಸುವುದು ಒಂದು ಸಾಧ್ಯತೆಯಾದರೆ; ಅದನ್ನು ಹಾಗೆ ಕಾಲಕ್ಕೆ ನಿರ್ಬಂಧಗೊಳಿಸದೆ, ಎಲ್ಲಾ ಕಾಲಕ್ಕೂ ಸಲ್ಲುವಂತೆಯೂ ಓದಬಹುದು. ಮನುಷ್ಯ ಬದುಕಿನಲ್ಲಿ ಹಗಲು-ರಾತ್ರಿ, ಆಚಾರ-ಅನಾಚಾರ, ಭಕ್ತ-ಭವಿ ಈ ಎರಡೂ ಸ್ಥಿತಿಗಳು ಆಗುತ್ತಿರುತ್ತವೆ. ಇವುಗಳಲ್ಲಿ ಒಂದನ್ನು ಬಿಟ್ಟು ಒಂದನ್ನು ಮಾತ್ರ ಪರಿಗಣಿಸುವುದರ ಬಗೆಗೆ ಅಲ್ಲಮನಿಗೆ ತಾತ್ವಿಕವಾದ ಆಕ್ರೋಶ ಇದೆ. ಹಾಗಾಗಿ ಅಂತವರ ನುಡಿಯನ್ನು ಕೇಳಲಾಗದು ಎಂದು ಮುಕ್ತವಾಗಿ ಹೇಳಿದ್ದಾನೆ.

೫. ಪಂಚೇಂದ್ರಿಯಗಳ ಹತೋಟಿ

ಕಂಗಳೇಕೆ ನೋಡಬೇಡಾ ಎಂದರೆ ಮಾಣವು
ಶ್ರೋತ್ರಂಗಳೇಕೆ ಆಲಿಸಬೇಡಾ ಎಂದರೆ ಮಾಣವು
ಜಿಹ್ವೆ ಏಕೆ ರುಚಿಸಬೇಡಾ ಎಂದರೆ ಮಾಣವು
ನಾಸಿಕವೇಕೆ ವಾಸಿಸಬೇಡಾ ಎಂದರೆ ಮಾಣವು
ತ್ವಕ್ಕು ಏಕೆ ಸೋಂಕಬೇಡಾ ಎಂದರೆ ಮಾಣವು
ಈ ಭೇದವನರಿದು ನುಡಿಯಲು ಸಮಧಾತುವಾಯಿತ್ತು
ಗುಹೇಶ್ವರಲಿಂಗಕ್ಕೆ ಒಲಿದ ಕಾರಣ
ಅಭಿಮಾನ ಲಜ್ಜೆ ಬೇಸತ್ತು ಹೋಯಿತು – ೩೧

ಪಂಚೇಂದ್ರಿಯಗಳು ನಮ್ಮ ಹತೋಟಿಯಲ್ಲಿ ಇರಬೇಕು ಅಥವಾ ಅವನ್ನು ನಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಬೇಕು ಎಂಬುದು ಭಾರತೀಯ ಉದಾರವಾದಿ ನೈತಿಕತೆಯ ದೊಡ್ಡ ಆಶಯ ಹಾಗೂ ಸಂದೇಶ. ಋಷಿಮುನಿಗಳು ಇದನ್ನು ಪ್ರತಿಪಾದನೆ ಮಾಡಿದ್ದಾರೆ. ಭಗವದ್ಗೀತೆ ಇದನ್ನು ಸಮರ್ಥಿಸಿದೆ. ಎಂ.ಕೆ. ಗಾಂಧಿ ಅವರ "ಹಿಂದ್ ಸ್ವರಾಜ್" ಕೃತಿಯ ಮುಖ್ಯ ತಿರುಳು ಇದೇ ಆಗಿದೆ. ಪಂಚೇಂದ್ರಿಯಗಳನ್ನು ನಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಬೇಕು, ಅವಕ್ಕೆ ನಾವು ಗುಲಾಮರಾಗಬಾರದು ಎಂಬ ಅಪೇಕ್ಷೆ ಹಾಗೂ ಆಶಯಗಳು ಒಂದು ಕಡೆ ಪ್ರಸ್ತಾಪವಾಗುತ್ತಿದ್ದರೂ ಮತ್ತೊಂದು ಕಡೆ ಅವುಗಳೇ ದೊಡ್ಡ ಜೀಡೆಯಾಗಿ ಮನುಷ್ಯನನ್ನು ನೇರವಾಗಿ ತಮ್ಮ ಹತೋಟಿಗೆ ತೆಗೆದುಕೊಂಡಿರುವುದು ಇಂದಿನ ವೈಚಿತ್ರ್ಯ ಮತ್ತು ವಾಸ್ತವ. ಸಾಮಾಜಿಕ ಹಾಗೂ ಧಾರ್ಮಿಕ ನೆಲೆಯಲ್ಲಿ ಪಂಚೇಂದ್ರಿಯಗಳನ್ನು ನಿಯಂತ್ರಿಸಬೇಕು ಎಂಬ ಸಹಿರಿ ಸಂದೇಶಗಳ ನಡುವೆಯೇ ಅವುಗಳಿಗೆ ಗುಲಾಮರಾಗಿರುವ ವಸ್ತುಸ್ಥಿತಿ ನಮ್ಮ ಮುಂದಿದೆ. ಹಾಗಾಗಿ ಇಂತಹ ಸಂದೇಶಗಳಿಗೆ ಮೂರು ಕಾಸಿನ ಬೆಲೆ ಇಲ್ಲದಂತಾಗಿದೆ. ಇದಕ್ಕಿಂತ ಅಪಾಯಕಾರಿ ಸ್ಥಿತಿ ಯಾವುದು ಎಂದರೆ, ಯಾರು ಇವಕ್ಕೆ ಕರೆ ಕೊಡುತ್ತಾರೊ ಅವರೇ ಇವುಗಳಿಗೆ ಗುಲಾಮರಾಗಿ ಸಮಾಜದ ಸಾಮಾನ್ಯ ಸ್ವಾಸ್ಥ್ಯವನ್ನು ಹಾಗೂ ಸಾಮಾನ್ಯ ನೈತಿಕತೆಯನ್ನು ಕೆಡಿಸಿದ್ದಾರೆ. ಹೀಗೆ ಕೆಟ್ಟು ಕೆರಹಿಡಿದು ಹೋಗಿರುವ "ಮಹಾತ್ಮರು" ಉಳಿದವರಿಗೆ ಉಪದೇಶ ಮಾಡುತ್ತಿದ್ದಾರೆ.

ಪಂಚೇಂದ್ರಿಯಗಳಿಂದ ಸುಖಪಡಬಹುದು, ಪಂಚೇಂದ್ರಿಯಗಳು ಸುಖ ಕೊಡುತ್ತವೆ ಎಂಬ ಭಾವನೆ ಬಲವಾಗಿ ಕಾರಣವಿದೆ. ಹಾಗಾಗಿ ಅವನ್ನು ಸುಖ ಕೊಡಲು ಮತ್ತು ಪಡೆಯಲು ಮುಕ್ತವಾಗಿ ಬಿಡಲಾಗಿದೆ. ಜಾಗತೀಕರಣದ ಮಾರುಕಟ್ಟೆಯು ಪಂಚೇಂದ್ರಿಯಗಳಿಗೆ ಸುಖ ಕೊಡುವ ವಸ್ತುಗಳನ್ನು ಉತ್ಪಾದಿಸಿ ಮಾರಾಟಕ್ಕೆ ಇಟ್ಟಿದೆ. ಗ್ರಾಹಕರನ್ನು ಮತ್ತು ಆದರಲ್ಲಿ ಗ್ರಾಹಕತನವನ್ನು ಸಯವಾದ ಬಲಾತ್ಕಾರದಿಂದ ನಿರ್ಮಾಣ ಮಾಡಿದೆ. ಇದರಿಂದ ಮಾರುಕಟ್ಟೆಗೆ ಸಾಕಷ್ಟು ಪೆಟ್ಟಾಗಿದೆ. ಇಂತಹ ಮಾರುಕಟ್ಟೆಗೆ ಪರ್ಯಾಯ ಎಂಬ ಹೆಸರಿನಲ್ಲಿ ಮೂಲಭೂತವಾದಿ ಹಿತಾಸಕ್ತಿಗಳು

Scanned with CamScanner

ಬೇರೊಂದು ಬಗೆಯಲ್ಲಿ ಕೆಲಸ ಮಾಡುತ್ತಿವೆ. ಅವು ಧಾರ್ಮಿಕ ಮೂಲಭೂತ ಶಕ್ತಿಗಳನ್ನು ಯಶಸ್ವಿಯಾಗಿ ಬಳಸಿಕೊಳ್ಳುತ್ತಿವೆ. ಯೋಗ, ಭಕ್ತಿ, ಭಜನೆ, ಪ್ರಾರ್ಥನೆ ಇವೇ ಮುಂತಾದ ರೂಪಗಳಲ್ಲಿ ಜನರನ್ನು ಮುಳುಗಿಸುತ್ತಿವೆ. ಈ ಎಲ್ಲಾ ಕಠೋರ ವಾಸ್ತವಗಳ ನಡುವೆ ಪಂಚೇಂದ್ರಿಯಗಳ ಬಗೆಗೆ ಅಲ್ಲಮನ ವಚನಗಳನ್ನು ವಿಶ್ಲೇಷಣೆ ಮಾಡಬೇಕಾಗುತ್ತದೆ.

ಮೇಲೆ ಉಲ್ಲೇಖಿಸಿರುವ ಅಲ್ಲಮನ ವಚನದ ಪ್ರಕಾರ, ಕಣ್ಣುಗಳು ನೋಡಬೇಡಾ ಎಂದರೆ ಅವು ನೋಡುವುದನ್ನು ಬಿಡುವುದಿಲ್ಲ. ಕಿವಿಗಳು ಆಲಿಸಬೇಡಾ ಎಂದರೆ ಅವು ಆಲಿಸುವುದನ್ನು ಬಿಡುವುದಿಲ್ಲ. ನಾಲಿಗೆ ರುಚಿಯನ್ನು ಸವಿಯಬೇಡಾ ಎಂದರೆ, ಅವು ರುಚಿ ನೋಡುವುದನ್ನು ಬಿಡುವುದಿಲ್ಲ. ಮೂಗು ಮೂಸಬೇಡಾ ಎಂದರೆ, ಮೂಸುವುದನ್ನು ಬಿಡುವುದಿಲ್ಲ. ಚರ್ಮ ಸೋಂಕಬೇಡಾ ಎಂದರೆ, ಸೋಂಕುವುದನ್ನು ಬಿಡುವುದಿಲ್ಲ.

ಪಂಚೇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು ಎಂಬ ಉಪದೇಶವು ಕೇವಲ ಉಪದೇಶವಾಗಿದೆ. ಭಗವದ್ಗೀತೆ ಮತ್ತು ಎಂ.ಕೆ. ಗಾಂಧಿ ಅವರ "ಹಿಂದ್ ಸ್ವರಾಜ್" ಕೃತಿಗಳು ಇಂದ್ರಿಯ ನಿಗ್ರಹದ ಕುರಿತು ಚರ್ಚೆ ಮಾಡಿವೆ. ಆದರೆ ಮನುಷ್ಯನಾದವನಿಗೆ ಇದು ಸಾಧ್ಯವಾಗಿಲ್ಲ. ವಿಷಯಾಸಕ್ತಿಯು ಜೀವಿಯ ಅದರಲ್ಲೂ ಮನುಷ್ಯ ಜೀವಿಯ ಮೂಲಪ್ರವೃತ್ತಿಯಾಗಿದೆ. ಈ ಮೂಲಪ್ರವೃತ್ತಿಯನ್ನು ಕಳೆದುಕೊಳ್ಳುವುದು ಅಷ್ಟು ಸುಲಭದ ಕೆಲಸ ಅಲ್ಲ. ಇಲ್ಲಿ ಇನ್ನೂ ಒಂದು ಮುಖ್ಯವಾದ ವಿಚಾರವಿದೆ. "ನಾನು ಇಂದ್ರಿಯನಿಗ್ರಹ ಮಾಡಿಕೊಂಡಿದ್ದೇನೆ" ಎಂತಲೋ ಅಥವಾ "ನಾನು ವಿಷಯಾಸಕ್ತಿಯಿಂದ ಮುಕ್ತಿ ಹೊಂದಿದ್ದೇನೆ" ಎಂತಲೋ ಯಾರಾದರೂ ಹೇಳಿದರೆ, ನಾವು ಅದರ ಬಗೆಗೆ ಅನುಮಾನ ವ್ಯಕ್ತಪಡಿಸಬೇಕಾಗುತ್ತದೆ. ಯಾಕೆಂದರೆ ವಿಷಯಾಸಕ್ತಿಯನ್ನು ಬಿಟ್ಟಿದ್ದೇನೆ ಎಂಬುದರ ಬಗೆಗಾಗಲಿ ಅಥವಾ ನಾನು ಇಂದ್ರಿಯ ನಿಗ್ರಹ ಮಾಡಿಕೊಂಡಿದ್ದೇನೆ ಎಂಬುದರ ಬಗೆಗಾಗಲಿ ಸಾಕ್ಷಿ ಒದಗಿಸಲು, ಪುರಾವೆ ಒದಗಿಸಲು ಆಗುವುದಿಲ್ಲ.

೬. ಬಯಲು

*

ಗುಹೇಶ್ವರ ಲಿಂಗವು ನಿರಾಳ ನಿರಾಕಾರ ಬಯಲು ಆಕಾರವಾದಡೆ
ಎನ್ನನೂ ಬಯಲು ಮಾಡು – ೩೨

*

ಗುಹೇಶ್ವರನೆಂಬುದು ಬಯಲು ವಿಕಾರ – ೧೫೭

*

ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತ್ತಯ್ಯ
ಬಯಲ ಜೀವನ ಬಯಲು ಭಾವನೆ
ಬಯಲು ಬಯಲಾಗಿ ಬಯಲಾಯಿತ್ತಯ್ಯ
ನಿಮ್ಮ ಪೂಸಿದವರು ಮುನ್ನವೆ ಬಯಲಾದರು
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ – ೧೭೨

ಚಲನಶೀಲತೆಯನ್ನು, ಪರಿವರ್ತನೆಯನ್ನು ಗುರುತಿಸುವ ಮತ್ತು ತಾನೇ ಚಲನಶೀಲವಾಗಿರುವ ಆಲೋಚನೆಯ ಯಾವುದನ್ನೂ ಜಡವೆಂದು, ಸ್ಥಾಯಿಯೆಂದು ತಿಳಿಯುವುದಿಲ್ಲ; ಹಾಗೆಂದು ಹೇಳುವುದಿಲ್ಲ. ಹಾಗಾಗಿ ಅಲ್ಲಮನ ವಚನಗಳು ಮತ್ತೆ ಮತ್ತೆ ಬದಲಾಗುವ, ಚಲನಶೀಲಗೊಳ್ಳುವ, ಪರಿವರ್ತನೆಯಾಗುವ ಗುಣಸ್ವಭಾವಗಳು ಅಭಿವ್ಯಕ್ತಿಯಾಗಿವೆ. ಅಲ್ಲಿ ಆಲಯವನ್ನಾಗಲಿ, ಬಯಲನ್ನಾಗಲಿ, ಆಕಾರವನ್ನಾಗಲಿ, ನಿರಾಕಾರವನ್ನಾಗಲಿ–ಯಾವುದನ್ನೇ ಆಗಲಿ, ಶಾಶ್ವತ ಎಂದು

Scanned with CamScanner

ತಿಳಿಯುವುದಿಲ್ಲ; ಹಾಗೆಂದು ಹೇಳುವುದಿಲ್ಲ. ಈತನ ಅಭಿವ್ಯಕ್ತಿಗಳನ್ನು ವಿವರಣೆಯ ಮಟ್ಟದಲ್ಲಿ ಗ್ರಹಿಸುವುದು ಒಂದು ಬಗೆಯಾದರೆ ಈತನ ಅಭಿವ್ಯಕ್ತಿಗಳ ಗುಣಸ್ವಭಾವದ ಸ್ವರೂಪವನ್ನು ಬಗೆದು ನೋಡುವುದು ಮತ್ತೊಂದು ಕ್ರಮ. ನನ್ನ ಮಾತುಗಳಲ್ಲಿ ಹುತೇಕ ಈ ಎರಡನೇ ಕ್ರಮವನ್ನು ಕ್ರಿಯಾಶೀಲಗೊಳಿಸಲಾಗಿದೆ. ಹಾಗಾಗಿ ಅಲ್ಲಮನಿಗೆ ಕುರುಹು ಎಂಬುದು ಮುಖ್ಯವಾಗುವುದಿಲ್ಲ. ಅವನಿಗೆ ನಿರಾಳ, ನಿರಾಕಾರ, ಬಯಲು ಇವು ಮುಖ್ಯವಾಗುತ್ತವೆ. ಒಂದು ವೇಳೆ "ಆಕಾರವಾದರೆ ನನ್ನನ್ನೂ ಬಯಲು ಮಾಡು" ಎಂದು ನಿವೇದಿಸುತ್ತಾನೆ. ಬಯಲು ಎಂಬುದು ಯಾವುದೇ ನಿರ್ಬಂಧಗಳು ಇಲ್ಲದ, ಯಾವುದೇ ತಡೆ ಇಲ್ಲದ, ಹತೋಟಿ ಇಲ್ಲದ, ನಿಯಂತ್ರಣ ಇಲ್ಲದ ಒಂದು ಸ್ಥಿತಿ. ಆಲೋಚನೆಗೆ ಸಂಬಂಧಿಸಿದಂತೆ ಯಾವುದೇ ಪೂರ್ವ ಚೌಕಟ್ಟು ಇಲ್ಲದ ಮುಕ್ತವಾದ ಚಿಂತನೆ. ಆದರೆ ನಮ್ಮ ವೈಚಾರಿಕತೆಯ ಮತ್ತು ಇದರ ವೈಧಾನಿಕತೆಯ ಸಮಸ್ಯೆ ಏನಿದೆ ಎಂದರೆ ನಾವು ಎಲ್ಲವನ್ನೂ ಚೌಕಟ್ಟುಗಳ ಮೂಲಕ ಇಲ್ಲವೆ ಎಲ್ಲವನ್ನೂ ಚೌಕಟ್ಟುಗಳಲ್ಲೇ ಗ್ರಹಿಸುತ್ತೇವೆ; ವಿವರಿಸುತ್ತೇವೆ; ನಿರೂಪಿಸಿ, ವ್ಯಾಖ್ಯಾನಿಸುತ್ತೇವೆ. ಇದು ನಮ್ಮ ಸ್ಥಿತಿ ಮತ್ತು ಪರಿಸ್ಥಿತಿ. "ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯ" ಎಂಬಷ್ಟರಮಟ್ಟಿಗೆ ಅಲ್ಲಮ ಆಲಯಾತೀತ. ನಿರ್ಬಂಧ ಮುಕ್ತ. ಈ ನಿರ್ಬಂಧ ಮುಕ್ತತನ ಬಹುಶಃ ಮಗುವಿನಲ್ಲಿ ಇರಬಹುದೇನೋ. ಅದಕ್ಕೆ ಯಾವುದೇ ಪೂರ್ವಗ್ರಹಗಳು, ಸ್ಥಾಪಿತ ಜಡನಂಬಿಕೆಗಳು, ನಿಯಂತ್ರಣಗಳು ಇರುವುದಿಲ್ಲ. ಕುವೆಂಪು ಅವರು ಹೇಳುವಂತೆ, "ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ. ಬೆಳೆಯುತ್ತ ನಾವು ಅದನ್ನು ಅಲ್ಪಮಾನವನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು ವಿಶ್ವಮಾನವನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯ" ಇದು ಸಂಶೋಧನೆಯ ಕರ್ತವ್ಯವೂ ಆಗಬೇಕೋ ಏನೋ. ಆದರೆ ಎಲ್ಲಾ ಬಗೆಯ ನಿಯಂತ್ರಣಗಳಿಂದ ಬಂಧಿಸಲ್ಪಟ್ಟಿರುವ ನಾವು ಯಾವ ಆಯಾಮದಲ್ಲಿ, ಯಾವ ನೆಲೆಯಲ್ಲಿ ಬಂಧಮುಕ್ತರಾಗಬೇಕು? ಇದು ಬಹಳ ದೊಡ್ಡ ಪ್ರಶ್ನೆ. ಆದರೆ ಅಲ್ಲಮ ತನ್ನ ಅರಿವು ಮತ್ತು ಅನುಭವದಲ್ಲಿ ಎಲ್ಲಾ ಬಗೆಯ ಮುಕ್ತತೆಯನ್ನು ಸಾಧಿಸಲು ಹವಣಿಸಿದ್ದಾನೆ; ಅದಕ್ಕೆ ಬೇಕಾದ ಸೃಜನಶೀಲ ಹತಾರಗಳನ್ನು ಸೃಜಿಸಿದ್ದಾನೆ. ಆ ಮೂಲಕ ಭಿನ್ನವಾದ ಕನ್ನಡ ಚಿಂತನೆಯೊಂದನ್ನು ರೂಪಿಸಿದ್ದಾನೆ ಎಂಬುದು ನಮಗೆ ಬಹಳ ಮುಖ್ಯ.

೭. ನಿರಾಳ

ನಿರಾಳ, ನಿರಾಕಾರ, ಬಯಲು ಇವು ಅಲ್ಲಮನ ಆಲೋಚನೆಯ ವಿಧಾನ, ಆಲೋಚನೆಯ ಗುಣ. ಇವನ್ನು ಅಲ್ಲಮ ತನ್ನ ವಚನಗಳ ಮೂಲಕ ವಿವರಿಸುತ್ತಾನೆ, ವ್ಯಾಖ್ಯಾನಿಸುತ್ತಾನೆ ಮತ್ತು ಅವುಗಳ ಪರಿಣಾಮದ ಸಾಧ್ಯತೆಗಳನ್ನು ಸೂಚಿಸುತ್ತಾನೆ. ಆಕಾರಕ್ಕೂ–ನಿರಾಕಾರಕ್ಕೂ, ಬಯಲಿಗೂ–ಆಲಯಕ್ಕೂ ಇರುವ ಮತ್ತು ಆಗುವ ಸಂಬಂಧದ ಪರಿಣಾಮಗಳನ್ನು ಬಿತ್ತುತ್ತಾನೆ. ಬೆಳೆ ಕೊಯ್ದುಕೊಳ್ಳುವುದು ನಮಗೆ ಬಿಟ್ಟಿದ್ದು. ಅಲ್ಲಮ ಬಿತ್ತಿದ್ದನ್ನೇ ನಾವು ಬೆಳೆ ಎನ್ನಬಾರದು. ಆತ ಬಿತ್ತುತ್ತಾನೆ; ಅದು ನಮ್ಮಲ್ಲಿ ಬೆಳೆಯಾಗಬೇಕು. ನಮ್ಮ ಅರಿವಿನಲ್ಲಿ, ನಮ್ಮ ಸೃಜನಶೀಲ ವೈಚಾರಿಕತೆಯಲ್ಲಿ, ನಮ್ಮ ಅನುಭವದಲ್ಲಿ ಅದು ಬೆಳೆಯಾಗಬೇಕು. ಮುಂದಿನ ವಚನಗಳನ್ನು ಈ ದೃಷ್ಟಿಯಿಂದ ಪ್ರವೇಶ ಮಾಡಬಹುದು.

*

ಇಹಲೋಕವೇನು ಪರಲೋಕವೇನು

ಅಲ್ಲಿಂದತ್ತ ಅಗಮ್ಯ ನಿರಾಳ – ೧೦೮

ಇಹಲೋಕ, ಪರಲೋಕ ಎಂಬುವು ಒಂದು ಕಡೆ ನಮ್ಮ ಊಹೆಗಳು, ಮತ್ತೊಂದು ಕಡೆ ನಮ್ಮ ಕಲ್ಪನೆಗಳು. ಅಲ್ಲಿಂದ ಮುಂದೇನು ಎಂಬ ಪ್ರಶ್ನೆ ಭಾರತೀಯ ಶಾಸ್ತ್ರೀಯ/ ಸಾಂಪ್ರದಾಯಿಕ ತತ್ವಶಾಸ್ತ್ರಕ್ಕೆ ಬಹಳ ಮುಖ್ಯವಾದ ಪ್ರಶ್ನೆ. ವೇದಗಳು, ಉಪನಿಷತ್ತುಗಳು ಈ ಬಗೆಗೆ ಚಿಂತನೆ ನಡೆಸಿವೆ. ಇವುಗಳ ದಾರ್ಶನಿಕ ಪ್ರಭೆಯಿಂದ ಕಾವ್ಯ ರಚಿಸಿದ ಡಿ.ವಿ. ಗುಂಡಪ್ಪನವರು ಈ ಬಗೆಗೆ ತಮ್ಮ "ಮಂಕುತಿಮ್ಮನ ಕಗ್ಗ"ದಲ್ಲಿ ಅಭಿವ್ಯಕ್ತಿ ಮಾಡಿದ್ದಾರೆ. ಇದು ಏನೇ ಇರಲಿ. ಅಲ್ಲಮನ ಪ್ರಕಾರ ಇಹಲೋಕ, ಪರಲೋಕದ ನಂತರ ಅಗಮ್ಯ ನಿರಾಳ. ಮುಂದುವರಿದು ಅಲ್ಲಮ ಹೇಳುತ್ತಾನೆ. ಗುಹೇಶ್ವರಲಿಂಗವು ಚಿಕ್ಕನ್ನ ಇರಬಹುದು; ಆದರೆ ಅದೂ ಕೂಡ ನಿರಾಳವೆ.

Scanned with CamScanner

*

ಗುಹೇಶ್ವರಲಿಂಗ ನಿರಾಳ ಚೈತನ್ಯ – ೪೪

*

ಆದಿ ಅನಾದಿಯಿಲ್ಲದಂದು ಗುಹೇಶ್ವರಲಿಂಗ ನಿರಾಳನು – ೬೪

*

ಮನದ ಬಗೆಯನವಗ್ರಹಿಸಿ ಜಗದ ಬಣ್ಣವ ನುಂಗಿ
ಗುಹೇಶ್ವರನೆಂಬ ಲಿಂಗದಲ್ಲಿ ನಿರಾಳವಾಯಿತ್ತು – ೮೫

*

ಗುಹೇಶ್ವರನೆಂಬ ನಿರಾಳ ಘನವ
ಪಂಚೇಂದ್ರಿಯಕನೆತ್ತ ಬಲ್ಲನು ಹೇಳಾ? – ೧೩೫

*

ಲಿಂಗವೆಂಬುದೊಂದು ಅನಂತದ ಹೆಸರು – ೧೪೩

*

ನೋಡಲಿಲ್ಲದ ಶೃಂಗಾರ, ಮಾತಾಡಲಿಲ್ಲದ ಶಬ್ದ
ಬೇಡಲಿಲ್ಲದ ವರ ನೋಡಿರೆ ನಿರಾಳ – ೧೫೫

ಅಲ್ಲಮನ ಪ್ರಕಾರ ಗುಹೇಶ್ವರ, ಶೃಂಗಾರ, ಶಬ್ದ ಈ ಎಲ್ಲವೂ ನಿರಾಳವೆ. ಈ ನಿರಾಳ ಘನವ ಪಂಚೇಂದ್ರಿಯ ಉಳ್ಳವನು ಅರಿಯಲು ಆಗುವುದಿಲ್ಲ ಎಂಬುದು ಅಲ್ಲಮನ ಅಭಿಮತ. ಪಂಚೇಂದ್ರಿಯಗಳನ್ನೂ ಮೀರಿದ, ಅತೀತವಾದ ನೆಲೆಯನ್ನು ಸೂಚಿಸುತ್ತಿದ್ದಾನೆ. ಅಲ್ಲಮನ ನಿರೂಪಣೆಯ ನಿರಾಳಕ್ಕೆ ಆದಿಯೂ ಇಲ್ಲ, ಅಂತ್ಯವೂ ಇ ಯಾಕೆಂದರೆ ಅದು ನಿರಾಳ. ಈ "ನಿರಾಳ" ಎಂಬುದು ಕನ್ನಡದ ಜನಭಾಷೆಯಲ್ಲಿ ಒಂದು ಮಾನಸಿಕ ಹಾಗೂ ಭೌ ಸ್ಥಿತಿ. ಯಾವುದಾದರೂ ಕಠಿಣ ಸಮಸ್ಯೆ ಎದುರಾಗಿ, ಅದನ್ನು ಬಗೆಹರಿಸಲಾಗದೆ ಒದ್ದಾಡಿ, ಬಗೆಹರಿಸಿದ ನಂತರ "ಹ ಒಂತರಾ ನಿರಾಳ ಆಯ್ತು" ಎಂದು ಸಮಾಧಾನದ ಉಸಿರು ತೆಗೆಯುವುದು ಇದೆ. ಇಂತಹ ನೂರಾರು ಕಠಿಣತೆಗಳಿಂದ ಹೊರಬರಬೇಕು, ಹೊರಬಂದು ನಿರಾಳ ಆಗಬೇಕು ಎಂಬುದು ಅಲ್ಲಮನ ಆಶಯ.

೮. ಆಲೋಚನೆಯ ಪರಿ, ರೀತಿ, ಸ್ವಭಾವ, ಸ್ವರೂಪ

ಅಲ್ಲಮನ ಆಲೋಚನೆಯ ಪರಿ, ರೀತಿ, ಅದರ ಸ್ವಭಾವ, ಸ್ವಭಾವಗುಣ ಮತ್ತು ಅದರ ಸ್ವರೂಪವನ್ನು ವಿವರಿಸಿಕೊಳ್ಳ ಅಗತ್ಯವಿದೆ. ಅಲ್ಲಮ ಇರುವಿಕೆಯನ್ನು ಒಪ್ಪುವುದಿಲ್ಲ. ಅಲ್ಲಮನ ಪ್ರಕಾರ ಇದೆ ಎಂಬುದೆಲ್ಲವೂ ಆಗುತ್ತಿರುತ್ತದೆ. ಯಾವುದೂ ಇರುವುದಿಲ್ಲ. ಅದು ಸದಾ ಆಗುತ್ತಿರುತ್ತದೆ. ಜಡವಾಗಿರುವುದಿಲ್ಲ; ಚಲನಶೀಲವಾಗಿರುತ್ತದೆ. ಅಲ್ಲಮ ತನ್ನ ಮಹಾನ್ ಅರಿವಿನಲ್ಲಿ ಈ ನಿರಂತರವಾದ ಚಲನಶೀಲತೆಯನ್ನು, ನಿತ್ಯ ಆಗುವಿಕೆಯನ್ನು ನಿರೂಪಿಸಿದ್ದಾನೆ. ಇದಕ್ಕೆ ಅಲ್ಲಮನ ಈ ವಚನಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಬೇಕಿಲ್ಲ. ಇಡಿಯಾಗಿ ಅಲ್ಲಮನ ದಾರ್ಶನಿಕ ಪ್ರತಿಭೆಯೇ, ಆತ ರೂಪಿಸಿ ಮಂಡಿಸಿರುವ ಅರಿವಿನ ಸ್ವರೂಪವೇ ಆ ಬಗೆಯದು. ಆದರೆ ಅನಿವಾರ್ಯವಾಗಿ ಕೆಲವು ವಚನಗಳನ್ನು ಮಾತ್ರ ಕೊಡಲಾಗಿದೆ. ಆತನ ಈ ದಾರ್ಶನಿಕತೆ ಕೆಳಗಿನ ವಚನಗಳಲ್ಲಿ ಮಾತ್ರ ಅಭಿವ್ಯಕ್ತಿಯಾಗಿದೆ ಎಂದು ಸರಳೀಕರಿಸಬೇಕು

*

ಶಿಲೆಯೊಳಗಣ ಪಾವಕನಂತೆ
ಉದಕದೊಳಗಣ ಪ್ರತಿಬಿಂಬದಂತೆ
ಬೀಜದೊಳಗಣ ವೃಕ್ಷದಂತೆ

Scanned with CamScanner

ಶಬ್ದದೊಳಗಣ ನಿಶ್ಶಬ್ದದಂತೆ

ನಿಶ್ಶಬ್ದದೊಳಗಣ ಶಬ್ದದಂತೆ

ಮೇಲಿನ ವಚನದಲ್ಲಿ ಬಂದಿರುವ ಪಾವಕ, ಪ್ರತಿಬಿಂಬ, ವೃಕ್ಷ, ನಿಶ್ಶಬ್ದ, ಶಬ್ದ ಎಲ್ಲವೂ ಆಗುವಂತಹವು. ಯಾವುವೂ ಜಡವಾಗಿ ಇರುವುವಲ್ಲ. ವೃಕ್ಷವನ್ನು ಇಡಿಯಾಗಿ ನೋಡಿದಾಗ ಅದರಲ್ಲಿ ಚಲನಶೀಲವಾದುದು ಏನಿದೆ ಎಂದು ಅನಿಸಬಹುದು. ಆದರೆ ಮರದ ಪ್ರತಿಯೊಂದು ಭಾಗವು ಪ್ರತಿ ಕ್ಷಣವೂ ಆಗುತ್ತಿರುತ್ತದೆ. ಇನ್ನು ಬೆಂಕಿ, ಪ್ರತಿಬಿಂಬ, ಶಬ್ದ, ನಿಶ್ಶಬ್ದ ಇವನ್ನು ಜಡಗೊಳಿಸಲು, ಸ್ಥಾಯಿಯಾಗಿಸಲು ಯಾರಿಗೂ ಆಗುವುದಿಲ್ಲ; ಅದನ್ನು ಸ್ಥಾಯಿ ಎಂದು ಕರೆಯಲು ಆಗುವುದಿಲ್ಲ. ಭೌತಿಕ ಹಾಗೂ ಅಭೌತಿಕವಾದ ವಸ್ತುಸ್ಥಿತಿಯು ನಿರಂತರವಾಗಿ ಆಗುತ್ತಿರುತ್ತದೆ. ಈ ಆಗುವಿಕೆಯನ್ನು ನಮ್ಮ ಅರಿವು ಹಾಗೂ ತಿಳಿವಳಿಕೆಯು ಹಿಡಿಯಬೇಕು, ಅದೇ ತಾನಾಗಬೇಕು ಎಂಬುದು ಅಲ್ಲಮನ ಆಲೋಚನೆಯ ಪರಿ. ರೀತಿ.

*

ಆದಿ ಆಧಾರವಿಲ್ಲದಂದು ಹಮ್ಮು ಬಿಮ್ಮುಗಳಿಲ್ಲದಂದು

ಸುರಾಳ ನಿರಾಳವಿಲ್ಲದಂದು ಸಚರಾಚರವೆಲ್ಲ ರಚನೆಗೆ ಬಾರದಂದು

ಗುಹೇಶ್ವರ ನಿಮ್ಮ ಶರಣನುದಯಿಸಿದಂದು – ೪

ಗುಹೇಶ್ವರನ ಶರಣನು ಬ್ರಹ್ಮಾಂಡದ ಚರಾ–ಅಚರಗಳು ರಚನೆಯಾಗುವ ಮೊದಲೇ ಹುಟ್ಟಿದ ಎಂದು ಹೇಳುವ ಮೂಲಕ ವಿಶ್ವದ ಆದಿಯ ಬಗೆಗೆ ಸ್ಥಾಪಿತವಾಗಿರುವ ಆಲೋಚನೆಯನ್ನು ಅಲ್ಲಮ ಪಲ್ಲಟಿಸುತ್ತಿದ್ದಾನೆ. ಆದಿಗೆ ಆಧಾರವೇ ಇಲ್ಲದಂದು ಎಂಬ ಪದವು ಇದನ್ನು ಮತ್ತಷ್ಟು ಪರಿಪಕ್ವ ರೀತಿಯಲ್ಲಿ ಗಟ್ಟಿಗೊಳಿಸುತ್ತಿದೆ.

೯. ಗಾಂಧಿ, ಅಂಬೇಡ್ಕರ್ ಮತ್ತು ಮಾವೋತ್ಸೆ ತುಂಗ್ ಆಲೋಚನೆಗಳ ಜೊತೆಯಲ್ಲಿ

ನನ್ನ ಮಾತುಗಳ ಕೊನೆಯಲ್ಲಿ, ಅಲ್ಲಮನ ಆಲೋಚನೆ ಹಾಗೂ ಅರಿವಿನ ಸ್ವರೂಪವನ್ನು ಗಾಂಧಿ, ಅಂಬೇಡ್ಕರ್ ಮತ್ತು ಚೀನಾ ದೇಶದ ಕ್ರಾಂತಿಯ ನಾಯಕ ಮತ್ತು ತತ್ವಜ್ಞಾನಿ ಮಾವೋತ್ಸೆ ತುಂಗ್ ಅವರ ಆಲೋಚನೆಯ ಸ್ವರೂಪದ ಜೊತೆಗಿಟ್ಟು ವ್ಯಾಖ್ಯಾನಿಸುವ ಪ್ರಯತ್ನ ಮಾಡುತ್ತೇನೆ. ತಾತ್ವಿಕವಾಗಿ ಇದು ಬಹಳ ದೊಡ್ಡ ಕೆಲಸ. ಆ ವಿಸ್ತೃತವಾದ ಕೆಲಸ ಇಲ್ಲಿ ಸಾಧ್ಯವಿಲ್ಲವಾದರೂ ನನಗೆ ಇರುವ ತಾತ್ವಿಕ ಕುತೂಹಲದ ಕಾರಣಕ್ಕೆ ಒಂದು ಸಣ್ಣ ಪ್ರಯತ್ನವನ್ನು ಮಾಡುತ್ತೇನೆ.

ಮನುಷ್ಯರ ಮೂಲಪ್ರವೃತ್ತಿಗಳಿಗೂ, ಅವರ ಅರಿವು–ಸ್ವಭಾವ–ನಂಬಿಕೆ ಹಾಗೂ ಆಚರಣೆಗೂ ನೇರವಾದ ಸಂಬಂಧವಿದೆ. ಅರಿವು–ಸ್ವಭಾವ–ನಂಬಿಕೆ–ಆಚರಣೆಗಳು ಮನುಷ್ಯರ ಮೂಲಪ್ರವೃತ್ತಿಗಳನ್ನು ಸೃಷ್ಟಿಸಬಲ್ಲವು. ಅದೇ ರೀತಿಯಲ್ಲಿ ಮೂಲಪ್ರವೃತ್ತಿಗಳು ಮನುಷ್ಯರ ಅರಿವು–ಸ್ವಭಾವ–ನಂಬಿಕೆ–ಆಚರಣೆಗಳನ್ನು ಸೃಷ್ಟಿಸಬಲ್ಲವು. ಜಗತ್ತಿನ ಶಕ್ತಿಶಾಲಿ ಚಿಂತಕರು, ಕವಿಗಳು, ಕಲಾವಿದರು, ನಾಟಕಕಾರರು, ಕ್ರಾಂತಿಕಾರಿಗಳು, ತತ್ವಜ್ಞಾನಿಗಳು ಈ ಸಂಬಂಧದ ಆಳವನ್ನು ಹಾಗೂ ಇದರ ಸೂಕ್ಷ್ಮವನ್ನು ಹಿಡಿಯಲು ಶ್ರಮಿಸಿದ್ದಾರೆ. ಇದು ಭಾಷಿಕ ಹಾಗೂ ಭಾಷಿಕವಲ್ಲದ ಅಭಿವ್ಯಕ್ತಿಗಳಲ್ಲಿ ಮೂಡಿದೆ. ಭಾಷಿಕ ಅಭಿವ್ಯಕ್ತಿಯಾದ ತತ್ವಮೀಮಾಂಸೆ, ಕಾವ್ಯ ಹಾಗೂ ಸಾಹಿತ್ಯ ಈ ಕೆಲಸವನ್ನು ಮಾಡಿದೆ. ಭಾಷಿಕವಲ್ಲದ ಕಲೆಯ ಅಭಿವ್ಯಕ್ತಿಯೂ ಈ ಕೆಲಸವನ್ನು ಮಾಡಿದೆ.

ಎಂ.ಕೆ. ಗಾಂಧಿ ಅವರು, ತಮ್ಮ "ಹಿಂದ್ ಸ್ವರಾಜ್" ಕೃತಿಯಲ್ಲಿ ಭಾರತೀಯರ ಮೂಲಪ್ರವೃತ್ತಿಗಳು ಇಂಗ್ಲಿಷರ ಸಂಸ್ಕೃತಿಯಿಂದ ಕಲುಷಿತಗೊಂಡಿವೆ; ಅವರ ಸಂಸ್ಕೃತಿಯನ್ನು ಅನುಸರಿಸದೆ, ಅನುಕರಿಸದೆ ಭಾರತದ ಪಾರಂಪರಿಕ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು ಎಂಬ ಚಿಂತನೆಯನ್ನು ಮಂಡಿಸಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್ ಅವರು, ಬೆಂಗಾಲಿ ಧರ್ಮದ ಹಾಗೂ ಅದನ್ನು ಪೋಷಿಸಿಕೊಂಡು ಬಂದಿರುವ ಗ್ರಂಥ ಸಮೂಹವನ್ನು ಆಳವಾಗಿ ಅಧ್ಯಯನ ಮಾಡಿ, ಅವರ ತಾತ್ವಿಕತೆ ಭಾರತೀಯರ ಮೂಲಪ್ರವೃತ್ತಿಗಳನ್ನು ತನ್ನ ಉದ್ದೇಶಕ್ಕೆ ಅನುಗುಣವಾಗಿ ಮಾರ್ಪಡಿಸಿಕೊಂಡಿರುವ

Scanned with CamScanner

ಬಗೆಗೆ ತಮ್ಮ ಪ್ರಖರವಾದ ಸಿದ್ಧಾಂತವನ್ನು ಮಂಡಿಸಿದ್ದಾರೆ. ಈ ಇಬ್ಬರೂ ಮನುಷ್ಯರ ಮೂಲಪ್ರವೃತ್ತಿಗಳನ್ನು ಕೇಂದ್ರೀಕರಿಸಿದ್ದಾರೆ. ಮನುಷ್ಯರ ಇಂದ್ರಿಯಗಳನ್ನು ಕೇಂದ್ರೀಕರಿಸಿದ್ದಾರೆ. ಅಲ್ಲಮ ಸೃಷ್ಟಿಸಿರುವ ಅರಿವಿನ ಮೂಲದಲ್ಲಿ ಮತ್ತು ಅದರ ಗುಣಸ್ವಭಾವದಲ್ಲಿ ಅತ ಮನುಷ್ಯರ ಈ ಮೂಲಪ್ರವೃತ್ತಿಗಳ ಬಗೆಗೇ ಮಾತಾಡಿದ್ದಾನೆ. ಇಂದ್ರಿಯಗಳ ಹಿಡಿತಕ್ಕೆ ಸಿಲುಕುವ ಬಗೆಗೆ, ಅವುಗಳಿಂದ ಮುಕ್ತವಾಗುವ ಬಗೆಗೆ, ನಿರಾಳವಾಗುವ ಬಗೆಗೆ, ಬಯಲಾಗುವ ಬಗೆಗೆ, ಶೂನ್ಯವಾಗುವ ಬಗೆಗೆ ಅಲ್ಲಮನಿಗೆ ಅದಮ್ಯವಾದ ತಾತ್ವಿಕ ಉತ್ಸಾಹ. ಈ ಉತ್ಸಾಹವೇ ಅವನ ಸೃಜನಶೀಲತೆಯಾಗಿ, ತಾತ್ವಿಕತೆಯಾಗಿ, ದರ್ಶನವಾಗಿ ಆತನ ವಚನಗಳಲ್ಲಿ ಅಭಿವ್ಯಕ್ತಿಯಾಗಿದೆ.

ಗಾಂಧಿ ಮತ್ತು ಅಂಬೇಡ್ಕರ್ ಭಾರತದವರು. ಅಲ್ಲಮ ಭಾರತದ ಕರ್ನಾಟಕದವನು. ಆದರೆ ನಾನು ಸೂಚಿಸಿದ ಮೂರನೇ ಚಿಂತಕ ಮಾವೋತ್ಸೆ ತುಂಗ್ ಚೀನಾ ದೇಶದವನು. ಈತ ೨೦ನೇ ಶತಮಾನದ ಜಗತ್ತಿನ ಬಹುದೊಡ್ಡ ಕ್ರಾಂತಿಕಾರಿ. ಅಂತಹ ಕ್ರಾಂತಿಕಾರಿಯೊಂದಿಗೆ, ಆತನ ಕ್ರಾಂತಿಕಾರಿ ಚಿಂತನೆಗಳೊಂದಿಗೆ ಅಲ್ಲಮನ ವಚನಗಳನ್ನು ಇಡುವುದು ಸರಿಯೇ ಎಂದು ಯಾರಿಗಾದರೂ ಅನಿಸಬಹುದು ಅಥವಾ ಅಲ್ಲಮನನ್ನು ಎತ್ತಿ ಕೊಂಡಾಡಲು ಮಾಡುತ್ತಿರುವ ವೈಚಾರಿಕ ಕಸರತ್ತು ಎನಿಸಲೂಬಹುದು. ನನ್ನ ಈ ಪ್ರಯತ್ನಕ್ಕೆ ಈ ಯಾವ ಪೂರ್ವಗ್ರಹಗಳೂ ಇಲ್ಲ.

ಮಾವೋತ್ಸೆ ತುಂಗ್ ಜಗತ್ತಿನ ಬಹುದೊಡ್ಡ ಕ್ರಾಂತಿಕಾರಿ ಕಮ್ಯುನಿಷ್ಟ್ ಚಿಂತಕ ಮತ್ತು ಕ್ರಾಂತಿಯ ನಾಯಕ. ಈತ ಚೈನಾ ದೇಶದಲ್ಲಿ, ಚೈನಾದ ನೆಲದಲ್ಲಿ, ಚೈನಾದ ಸಂಸ್ಕೃತಿಯಲ್ಲಿ ಮಾರ್ಕ್ಸ್‌ವಾದನ್ನು ಬಿತ್ತಿ ಬೆಳೆದವನು. ಅವನ ನಾಯಕತ್ವದಲ್ಲಿ ೧೯೪೯ರಲ್ಲಿ ಚೈನಾದಲ್ಲಿ ರಾಜಕೀಯ ಕ್ರಾಂತಿ ನಡೆಸಿದ. ಅಲ್ಲಿ ರಾಜ್ಯಾಧಿಕಾರ ಜನತೆಯ ಕೈಗೆ ಬಂತು. ಅದಕ್ಕಿಂತ ಮೊದಲು ಅಲ್ಲಿಯ ಜನರ ಪ್ರವೃತ್ತಿಗಳಲ್ಲಿ ಎಲ್ಲಾ ಬಗೆಯ ಅಸಮಾನತೆಗಳು ಇದ್ದವು. ರಾಜಕೀಯ ಕ್ರಾಂತಿಯ ನಂತರವೂ ಮನುಷ್ಯರ ಈ ಮೂಲಪ್ರವೃತ್ತಿಗಳು, ಈ ಸ್ವಭಾವಗಳು ಬದಲಾಗಲಿಲ್ಲ. ಇದರ ಬಗೆಗೆ ಮಾವೋ ಬಗೆಬಗೆಯಾಗಿ ಆಲೋಚನೆ ಮಾಡಿದ. ಮನುಷ್ಯರ ಒಳಗಿರುವ ಮೂಲಪ್ರವೃತ್ತಿಗಳನ್ನು, ಮೂಲಸ್ವಭಾವಗಳನ್ನು ಬದಲಿಸುವುದು ಹೇಗೆ ಎಂದು ಚಿಂತಿಸಿದ. ಈ ಆಲೋಚನೆಯ ಪರಿಣಾಮದ ಫಲವಾಗಿ ೧೯೬೫ರಿಂದ ೭೭ರವರೆಗೆ, ಮಾವೋತ್ಸೆ ತುಂಗ್ ಚೈನಾದಲ್ಲಿ, "ಚೈನಾ ಜನತೆಯ ಮಹಾನ್ ಸಾಂಸ್ಕೃತಿಕ ಕ್ರಾಂತಿ" ಎಂಬ ಜನತಾ ಚಳವಳಿಯನ್ನು ನಡೆಸಿದ. ಜಗತ್ತಿನ ರಾಜಕೀಯ ಕ್ರಾಂತಿಗಳ ಇತಿಹಾಸದಲ್ಲಿ ಇದು ಅತ್ಯಂತ ಅಭೂತಪೂರ್ವವಾದುದು. ನನ್ನ ಈ ಚರ್ಚೆಗೆ ಪೂರಕವಾಗಿ ಮಾವೋತ್ಸೆ ತುಂಗ್ ಬರೆದಿರುವ "ವೈರುಧ್ಯವನ್ನು ಕುರಿತು" ಮತ್ತು "ಆಚರಣೆ" ಎಂಬ ಬರವಣಿಗೆಯನ್ನು ಓದಲು ವಿನಂತಿಸುತ್ತೇನೆ.

ಇದೇ ಸಂದರ್ಭದಲ್ಲಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ಬುದ್ಧನ ಬಗೆಗಿನ ಅಧ್ಯಯನದ ಬಗೆಗೆ ಪ್ರಸ್ತಾಪ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಡಾ. ಅಂಬೇಡ್ಕರ್ ಮೂಲತಹ ತತ್ವಜ್ಞಾನಿ. ಸಮಾಜಶಾಸ್ತ್ರಜ್ಞ. ರಾಜಕೀಯ ಚಿಂತಕ. ಅವರು ಭಾರತದ ಸಂವಿಧಾನ ರಚನೆಯಲ್ಲಿ ಮುಖ್ಯ ಪಾತ್ರ ವಹಿಸಿದವರು. ಆದರೆ ರಾಜಕೀಯ ಸಂವಿಧಾನವು ಭಾರತದ ಸಾಮಾಜಿಕ-ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಖಂಡಿತಾ ಸಾಧ್ಯವಿಲ್ಲ ಎಂದು ತೀರ್ಮಾನಿಸಿದ್ದ. ಅದು ಇವತ್ತಿಗೂ ನಿಜವಾಗಿದೆ. ಈ ರಾಜಕೀಯ ಸಂವಿಧಾನದ ಜಾರಿಯ ವಿಫಲ ಪರಿಣಾಮದ ಬಗೆಗೆ ಅಂಬೇಡ್ಕರ್ ಅವರಿಗೆ ಅತ್ಯಂತ ಖಚಿತವಾದ ನಿರ್ಧಾರವಿತ್ತು. ಹಾಗಾಗಿ ಅವರು ಬೌದ್ಧ ಧರ್ಮವನ್ನು ಆಳವಾಗಿ ಮತ್ತು ಸಮರ್ಥವಾಗಿ ಅಧ್ಯಯನ ಮಾಡಿದರು. ಅದನ್ನು ಸಾಂಪ್ರದಾಯಿಕ ನೆಲೆಯಲ್ಲಿ, ಯಾಂತ್ರಿಕವಾಗಿ ಕೇವಲ ಧರ್ಮ ಎಂದು ಪರಿಗಣಿಸದೆ ಅದನ್ನು ರಾಜಕೀಯ ಅರ್ಥಶಾಸ್ತ್ರ ಎಂದು ತಾತ್ವೀಕರಿಸಿದರು. ಅದನ್ನು ಸಾಮಾಜಿಕ ಬದುಕು ಎಂದು ತೀರ್ಮಾನಿಸಿದರು. ಬುದ್ಧನ ವಿಚಾರಗಳನ್ನು ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತದೊಂದಿಗೆ ಇಟ್ಟು ಆಳವಾಗಿ ಅಧ್ಯಯನ ಮಾಡಿದರು. ಕಾರ್ಲ್ ಮಾರ್ಕ್ಸ್‌ನ ಪ್ರಕಾರ ಖಾಸಗಿ ಆಸ್ತಿ ಅಸಮಾನತೆ ಮತ್ತು ಶೋಷಣೆಗೆ ಮೂಲ ಕಾರಣ. ಬುದ್ಧನ ಪ್ರಕಾರ ಆಸೆಯೇ ದುಃಖಕ್ಕೆ ಕಾರಣ. ದುಃಖಕ್ಕೆ ಕಾರಣವಾಗಿರುವ ಆಸೆಯನ್ನೂ, ಅಸಮಾನತೆ ಮತ್ತು ಶೋಷಣೆಗೆ ಕಾರಣವಾಗಿರುವ ಖಾಸಗಿ ಆಸ್ತಿಯನ್ನೂ ತೊಡೆದುಹಾಕಬಹುದು. ಖಾಸಗಿ ಆಸ್ತಿಯನ್ನು ಜಗತ್ತಿನ ಕ್ರಾಂತಿಕಾರಿ ಶ್ರಮಜೀವಿಗಳ ಕ್ರಾಂತಿಯ ಹೋರಾಟದ ಮೂಲಕವೂ, ಆಸೆಯನ್ನು ಬುದ್ಧ ಧಮ್ಮದ ಮೂಲಕವೂ ತೊಡೆದುಹಾಕಬಹುದು. ಒಂದು ಕಡೆ ಹೊರ

Scanned with CamScanner

ಆಸ್ತಿ ಮತ್ತೊಂದು ಕಡೆ ಆಸೆ–ಈ ಎರಡೂ ಮನುಷ್ಯರ ಮೂಲಪ್ರವೃತ್ತಿಗಳನ್ನು ಸೇರಿಬಿಟ್ಟಿವೆ. ಅದಕ್ಕಾಗಿ ಮನುಷ್ಯರ ಮೂಲಪ್ರವೃತ್ತಿಗಳನ್ನು ಬದಲಾಯಿಸಬೇಕು ಎಂಬುದು ಇಲ್ಲಿಯ ಮುಖ್ಯ ದರ್ಶನ ಹಾಗೂ ಬದುಕು. ಇವೆರಡರ ಪ್ರಯತ್ನ ದುಃಖ ಹಾಗೂ ಶೋಷಣೆಯಿಂದ ಕೂಡಿರುವ ಬದುಕನ್ನು ಬದಲಿಸುತ್ತವೆ ಎಂಬುದು ತಾತ್ವಿಕ ದರ್ಶನ.

ಈ ನಿಟ್ಟಿನಲ್ಲಿ ಅಲ್ಲಮನ ಆಲೋಚನೆಗಳನ್ನು, ಆತ ಸೃಷ್ಟಿಸಿದ ತತ್ವಮೀಮಾಂಸೆಯನ್ನು ಗಾಂಧಿ, ಅಂಬೇಡ್ಕರ್ ಮತ್ತು ಮಾವೋತ್ಸೆ ತುಂಗ್ ಇವರ ತತ್ವಚಿಂತನೆಗಳ ಜೊತೆಯಲ್ಲಿಟ್ಟು ಅಧ್ಯಯನ ಮಾಡಬಹುದು. ಅಲ್ಲಮ ಮನುಷ್ಯರ ಮನುಷ್ಯ ವಿರೋಧಿ ಪ್ರವೃತಿಗಳನ್ನು ಬದಲಾಯಿಸಬೇಕು ಎನ್ನುವ ದಾರ್ಶನಿಕರ ಜೊತೆಯಲ್ಲಿದ್ದಾನೆ.

* ವಚನಗಳ ಮುಂದೆ ಹಾಕಿರುವ ಸಂಖ್ಯೆಗಳು: ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿರುವ 'ಅಲ್ಲಮನ ವಚನಗಳು' ಸಂಪುಟದ ವಚನಗಳ ಸಂಖ್ಯೆ.

□ □ □

ಅಗ್ನಿಗೆ ತಂಪುಂಟೆ ವಿಷಕ್ಕೆ ರುಚಿಯುಂಟೆ
ಹೇಳಾ
ಕಂಗಳಿಗೆ ಮರೆಯುಂಟೆ ಹೇಳೈ ಅಂಗವೆ
ದಾಳಿಕಾರಂಗೆ ಧರ್ಮವುಂಟೆ
ಕಂಗಳಿಗೆ ಕರುಳುಂಟೆ ಗುಹೇಶ್ವರ
ನಿಮ್ಮ ಶರಣರು ಮೂರುಲೋಕವರಿಯೆ
ನಿಶ್ಚಿತರಯ್ಯ

- **ಅಲ್ಲಮಪ್ರಭು**

□ □ □

ಗುರಿಯಿಲ್ಲದ ಜೀವನ ದಿಕ್ಸೂಚಿಯಿಲ್ಲದ ಹಡಗಿನಂತೆ, ಶಿಸ್ತಿಲ್ಲದ ಬದುಕು ನಾವಿಕನಿಲ್ಲದ ನಾವೆಯಂತೆ ಶೀಲವಿಲ್ಲದ ನಡೆ ಸುಂಟರಗಾಳಿಯಂತೆ ಮತ್ತು ಅನುಕಂಪವಿಲ್ಲದ ಜೀವನ ಸುವಾಸನೆರಹಿತ ಪುಷ್ಪವಿದ್ದಂತೆ.

- **ನ್ಯಾಯಮೂರ್ತಿ ಶಿವರಾಜ ವಿ. ಪಾಣೀಲ**

ಡಾ. ಬಿ.ಎಂ. ಪುಟ್ಟಯ್ಯ, ಪ್ರಾಧ್ಯಾಪಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸಿದ್ದಾಪುರ-೫೮೩೨೭೬, ತಾ: ಹೊಸಪೇಟೆ, ಜಿ: ಬಳ್ಳಾರಿ, ಮೊ: ೯೪೪೮೯೦೧೦೫.

Scanned with CamScanner

Annexure - 8

(ವಾರ ವಾರ ಬೇಂದ್ರೆ ವೆಬಿನಾರ್ ಸರಣಿ ಉಪನ್ಯಾಸಗಳ ಸಂಗ್ರಹ)

ಕಿಕ್ಕ ಕಾರುತಿದೆ...

ಸಂಪಾದಕರು
ಬಸವರಾಜ ಡೋಣೂರ

Scanned with CamScanner

ದಿನಾಂಕ 17.08.2021 ರಂದು
ಅಂಚೆಯಲ್ಲಿ ಬಂತು.
ವಿಜಯಶ್ರೀ..
17/08/2021

ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಗ್ರಂಥಮಾಲೆ : ಹದಿನೇಳು

ಹಕ್ಕಿ ಹಾರುತಿದೆ...

ಡಾ. ದ.ರಾ.ಬೇಂದ್ರೆಯವರ 125ನೇ ವರ್ಷದ ಜಯಂತ್ಯುತ್ಸವದ
ಆಚರಣೆಯ ಸಂದರ್ಭದಲ್ಲಿ ಪ್ರಕಟವಾದ ಪುಸ್ತಕ.

(ವಾರ ವಾರ ಬೇಂದ್ರೆ ವೆಬಿನಾರ್ ಸರಣಿ ಉಪನ್ಯಾಸಗಳ ಸಂಗ್ರಹ)

ಸಂಪಾದಕರು
ಬಸವರಾಜ ಡೋಣೂರ

ಪ್ರಸಾರಾಂಗ
ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ
2021

Scanned with CamScanner

ಪರಿವಿಡಿ

		ಪುಟ ಸಂಖ್ಯೆ
1.	ಬೇಂದ್ರೆ ಕಾವ್ಯದ ಅಭ್ಯಾಸ : ಕೆಲವು ಟಿಪ್ಪಣಿಗಳು ರಾಜೇಂದ್ರ ಚೆನ್ನಿ	...1
2.	ಬೇಂದ್ರೆ ಕಾವ್ಯದಲ್ಲಿ ಜ್ಞಾನಮೀಮಾಂಸೆ ರಾಘವೇಂದ್ರ ಪಾಟೀಲ	...9
3.	ಬೇಂದ್ರೆ ಮತ್ತು ಗುರುಪರಂಪರೆ ರಹಮತ್ ತರೀಕೆರೆ	...28
4.	ವರ್ತಮಾನದಲ್ಲಿ ಬೇಂದ್ರೆ ಕಾವ್ಯ ಶ್ರೀನಿವಾಸ ವಾಡಪ್ಪಿ	...37
5.	ಬೇಂದ್ರೆಯವರ ಸಾಹಿತ್ಯ ವಿಮರ್ಶೆಯ ಸ್ವರೂಪ ಬಿ.ಎಂ.ಪುಟ್ಟಯ್ಯ	...47
6.	ಬೇಂದ್ರೆ ಕಾವ್ಯದಲ್ಲಿ ಮಾತೃತ್ವದ ಐದು ಮುಖಗಳು ಬಸವರಾಜ ವಕ್ಕುಂದ	...68
7.	ಬೇಂದ್ರೆ ನಾಟಕಗಳ ರಂಗಸಾಧ್ಯತೆ ಶ್ರೀಪತಿ ಮಂಜನಬೈಲ್	...99
8.	ಬೇಂದ್ರೆಯವರ ಅನುವಾದಗಳ ಅನುಸಂಧಾನ ಆರ್. ತಾರಿಣಿ ಶುಭದಾಯಿನಿ	...109
9.	ಬೇಂದ್ರೆ ಕಾವ್ಯದಲ್ಲಿ ವಿಶ್ವಮೈತ್ರಿ ಗೀತಾ ವಸಂತ	...124
10.	ಹಕ್ಕಿ ಹಾರುತಿದೆ ನೋಡಿದಿರಾ ? ಬಸವರಾಜ ಕೋಡಗುಂಟಿ	...134
11.	ಬೇಂದ್ರೆಯವರ ಸಾಹಿತ್ಯದಲ್ಲಿ ಹಾಸ್ಯಪ್ರಜ್ಞೆ ಸಂಗಮನಾಥ ಲೋಕಾಪೂರ	...163

Scanned with CamScanner

ಬೇಂದ್ರೆಯವರ ಸಾಹಿತ್ಯ ವಿಮರ್ಶೆಯ ಸ್ವರೂಪ

– ಬಿ.ಎಂ. ಪುಟ್ಟಯ್ಯ

ಬೇಂದ್ರೆಯವರ ಕಾವ್ಯವನ್ನು ಕುರಿತು ಬಹಳಷ್ಟು ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ ಮತ್ತು ನಡೆಯುತ್ತವೆ; ಆದರೆ ಆ ಪ್ರಮಾಣದಲ್ಲಿ ಇವರ ಗದ್ಯದ ಬಗೆಗೆ ಅಧ್ಯಯನ ಹಾಗೂ ಮಾತುಕತೆಗಳು ನಡೆದಿಲ್ಲ. ಇದು ಯಾಕೊ ಗೊತ್ತಿಲ್ಲ. ಕಾವ್ಯದಲ್ಲಿ ಬೇಂದ್ರೆಯವರನ್ನು ಸ್ವೀಕರಿಸಿದ ಕನ್ನಡ ಸಾಹಿತ್ಯ ಸಂಸ್ಕೃತಿ ಬೇಂದ್ರೆಯವರ ಗದ್ಯ ಬರಹಗಳು ಅಥವಾ ವಿಮರ್ಶಾ ಬರಹಗಳನ್ನು ಬದಿಗಿಟ್ಟಿದ್ದು ಯಾಕೆ ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿದೆ. ಇದು ನನಗೆ ಒಬ್ಬನಿಗೇ ಅಲ್ಲ; ಬೇಂದ್ರೆಯವರ ಸಾಹಿತ್ಯವನ್ನು ಮುಕ್ತವಾಗಿ ಓದಿದಂಥ ಮನಸ್ಸುಗಳಿಗೆ ಹೀಗೆ ಅನಿಸುತ್ತದೆ.

ಬೇಂದ್ರೆಯವರ ಸಾಹಿತ್ಯ ವಿಮರ್ಶೆಯನ್ನು ಕುರಿತು ಮಾತನಾಡಲು ಇವರ 'ಸಾಹಿತ್ಯದ ವಿರಾಟ್ ಸ್ವರೂಪ' ಗ್ರಂಥವು ಮೂಲ ಆಕರ. ಅದರಲ್ಲಿ ಕಾವ್ಯ, ಕಾವ್ಯ ಕಲೆ, ನಟನೆ, ನಾಟ್ಯ, ದೃಶ್ಯ ಕಾವ್ಯ, ಶ್ರವ್ಯ ಕಾವ್ಯ, ಕಾವ್ಯಮೀಮಾಂಸೆ, ಸಾಹಿತ್ಯ ವಿಮರ್ಶೆ, ಸಾಹಿತ್ಯದ ಕೆಲಸ, ಸಾಹಿತ್ಯ ವಿಮರ್ಶೆಯ ಕೆಲಸ, ಸಹೃದಯ, ಕವಿ ಈ ಮುಂತಾದ ವಿಷಯಗಳನ್ನು ಕುರಿತು ಇವರು ಬರೆದ ಬರಹಗಳಿವೆ. ಮುಖ್ಯವಾಗಿ ಆಧುನಿಕ ಪೂರ್ವ ಕಾವ್ಯಗಳ ಬಗೆಗೆ ಅವರಿಗೆ ವಿಶೇಷವಾದ ಆಸಕ್ತಿ. ಹಾಗಾಗಿ ಅದರ ಬಗೆಗೆ ಹೆಚ್ಚು ಬರೆದಿದ್ದಾರೆ.

ಬೇಂದ್ರೆಯವರ ಸಾಹಿತ್ಯ ವಿಮರ್ಶೆಯು ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಯಾವ ಪಂಥದ್ದು ಎನ್ನುವ ಪ್ರಶ್ನೆಯನ್ನು ನಾವು ಎತ್ತಿದರೆ; ಅಂದರೆ ಇವರ ಸಾಹಿತ್ಯ ವಿಮರ್ಶೆ ನವೋದಯನಾ, ನವ್ಯನಾ, ದಲಿತ ಬಂಡಾಯನಾ, ಮಾರ್ಕ್ಸ್‌ವಾದಿನಾ, ಸ್ತ್ರೀವಾದಿನಾ, ನವ್ಯೋತ್ತರನಾ ಹೀಗೆ ಕೇಳಬಹುದು. ಇವರ ಸಾಹಿತ್ಯ ವಿಮರ್ಶೆ ಈ ಯಾವುದೂ ಅಲ್ಲ; ಆದರೆ ಈ ಎಲ್ಲವೂ ಹೌದು. ಇವರ ವಿಮರ್ಶೆಯು ಯಾವುದೇ ಒಂದು ಪಂಥದ ವಿಮರ್ಶೆ ಅಲ್ಲ; ಆದರೆ ಎಲ್ಲಾ ಪಂಥದ ವಿಮರ್ಶೆಯ ಒಳತಿರುಳು ಅದರಲ್ಲಿ ಇದೆ ಅಂತ ಹೇಳಬಹುದು.

Scanned with CamScanner

ನಮ್ಮಲ್ಲಿ ಬಿ.ಎ. ಮತ್ತು ಎಂ.ಎ. ಪದವಿ ತರಗತಿಗಳಿಗೆ ಸಾಹಿತ್ಯ ವಿಮರ್ಶೆಯನ್ನು ಓದಲು ಇಟ್ಟಿರುತ್ತೇವೆ. ನವೋದಯ ವಿಮರ್ಶೆ, ಪ್ರಾಯೋಗಿಕ ವಿಮರ್ಶೆ, ಪಠ್ಯಕೇಂದ್ರಿತ ವಿಮರ್ಶೆ, ಕವಿಕೇಂದ್ರಿತ ವಿಮರ್ಶೆ, ಮಾರ್ಕ್ಸವಾದಿ ವಿಮರ್ಶೆ, ಸ್ತ್ರೀವಾದಿ ವಿಮರ್ಶೆ ಇಂತಹ ವಿಷಯಗಳನ್ನು ಅಲ್ಲಿ ಸೇರಿಸಲಾಗಿರುತ್ತದೆ. ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ಕೇಳುತ್ತೇವೆ ಮತ್ತು ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುತ್ತಾರೆ. ಆದರೆ ವಿದ್ಯಾರ್ಥಿಗಳು ಬರೆದ ಉತ್ತರಗಳು ಮಾತ್ರ ಇವು ಯಾವುವೂ ಆಗಿರುವುದಿಲ್ಲ. ಉದಾಹರಣೆಗೆ: ನವ್ಯ ವಿಮರ್ಶೆಯನ್ನು ಕುರಿತು ಉತ್ತರವನ್ನು ಬರೆಯಿರಿ ಎಂದು ಪ್ರಶ್ನೆ ಕೇಳಿದಾಗ, ಅವರು ಬರೆದಿರಬಹುದಾದ ಉತ್ತರ ಅದಾಗಿರುವುದಿಲ್ಲ. ನಿಜವಾಗಲೂ ಕನ್ನಡ ವಿಮರ್ಶೆಯ ದುಃಸ್ಥಿತಿಗಳಲ್ಲಿ ಇದೂ ಒಂದು. ಪಠ್ಯವಸ್ತುವಿನಲ್ಲಿ ವಿಮರ್ಶೆ ಶೀರ್ಷಿಕೆಯ ಬೇರೆ ಬೇರೆ ಘಟಕಗಳಾಗಿ ವಿಮರ್ಶೆಯ ಪಂಥಗಳನ್ನು ಇಡುತ್ತೇವೆಯೇ ಹೊರತು ಇಡಿಯಾಗಿ ವಿದ್ಯಾರ್ಥಿಸಮೂಹಕ್ಕೆ ಅಥವಾ ಸಂಶೋಧನಾಸಮೂಹಕ್ಕೆ ಅದನ್ನು ಮನವರಿಕೆ ಮಾಡುವುದಕ್ಕೆ ನಮಗೆ ಇನ್ನೂ ಸಾಧ್ಯವಾಗಿಲ್ಲ. ಹಾಗಾಗಿ ಸಾಹಿತ್ಯ ವಿದ್ಯಾರ್ಥಿಗಳು, ಸಂಶೋಧಕರು ಬೇಂದ್ರೆಯವರ ಸಾಹಿತ್ಯ ವಿಮರ್ಶೆಯನ್ನು ಆಯ್ಕೆ ಮಾಡಿಕೊಂಡು ಅಭ್ಯಾಸ ಮಾಡುವುದು ಕಡಿಮೆ. ಅದಕ್ಕೆ ಸಮಸ್ಯೆಗಳು ಬೇರೆ ಬೇರೆ ಇರಬಹುದು.

ಬೇಂದ್ರೆಯವರ ಗದ್ಯ ಬರವಣಿಗೆಯಲ್ಲಿ ಗಮನ ಸೆಳೆಯುವ ಮತ್ತು ಎದ್ದು ಕಾಣುವ ಮುಖ್ಯ ಗುಣವೆಂದರೆ ಇವರ ಬರವಣಿಗೆಯ ಭಾಷೆ. ಗದ್ಯದ ನವಿರಾದ, ಸರಳವಾದ, ಸುಲಲಿತವಾದ ಶೈಲಿ; ಅದರ ಅಭಿವ್ಯಕ್ತಿ. ಇವರ ಗದ್ಯ ಶೈಲಿ ಎಂತಹದ್ದೇ ಓದುಗರನ್ನು ಬಹಳ ಸುಲಭವಾಗಿ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ತನ್ನೊಳಗೆ ಮಾಡಿಕೊಳ್ಳುತ್ತದೆ. ಇವರ ವಿಚಾರ ಗ್ರಹಿಕೆ, ಮಂಡನೆಯ ಕ್ರಮ, ಅಭಿವ್ಯಕ್ತಿ, ಶೈಲಿ, ಅಲ್ಲಲ್ಲಿ ಗಾದೆಗಳನ್ನು, ಮತ್ತು ಇನ್ನಿತರೆ ನಾಣ್ಣುಡಿಗಳನ್ನು ಬಳಸುವುದು, ಅತ್ಯಂತ ಸ್ಥಳೀಯವಾದ ಉದಾಹರಣೆ, ಉಪಮೆ, ಹೋಲಿಕೆಗಳನ್ನು ಕೊಡುವುದು, ಗ್ರಾಮ್ಯ ಭಾಷೆಯಲ್ಲೆ ರೂಪಕಗಳನ್ನು ಸೃಷ್ಟಿಸುವುದು ಇವೆಲ್ಲವೂ ಬೇಂದ್ರೆಯವರ ಗದ್ಯದ ಮುಖ್ಯ ಗುಣಗಳು. ಕನ್ನಡದ ಬೇರೆ ವಿಮರ್ಶಕರ ಬರವಣಿಗೆಯ ಜೊತೆಯಲ್ಲಿ ಬೇಂದ್ರೆಯವರ ವಿಮರ್ಶೆಯನ್ನು ಓದಿದರೆ ಬೇಂದ್ರೆಯವರ ಬರವಣಿಗೆಯ ತಿರುಳು ಮತ್ತು ತೊಗಟೆ ಭಿನ್ನವಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಅಥವಾ ಸಾಹಿತ್ಯ ವಿಮರ್ಶೆಯ ಬರವಣಿಗೆಯನ್ನು ಹೀಗೂ ಬರೆಯಬಹುದಾ ಅನಿಸುತ್ತದೆ. ಏಕೆಂದರೆ ಬೇಂದ್ರೆಯವರ ಸಾಹಿತ್ಯ ವಿಮರ್ಶೆಯಲ್ಲಿ ಪರಿಕಲ್ಪನೆಗಳು ಇಲ್ಲ, ಶಬ್ದಗಳ ಆಡಂಬರವಿಲ್ಲ, ಕೂದಲು ಸೀಳುವ ತರ್ಕವಿಲ್ಲ, ಗೊಂದಲಗಳಿಲ್ಲ, ಸಂಕೀರ್ಣತೆಗಳಿಲ್ಲ, ಸಂಸ್ಕೃತ ಭೂಯಿಷ್ಠ ಪದಗಳಿಲ್ಲ, ಇಂಗ್ಲಿಷ್ ವಿಮರ್ಶೆಯ ಪರಿಭಾಷೆಗಳಿಲ್ಲ. ತಮ್ಮ ಆಲೋಚನೆಗಳನ್ನು ಅತ್ಯಂತ ಸ್ಪಷ್ಟವಾಗಿ ಮತ್ತು ಖಚಿತವಾಗಿ ಬರೆದಿದ್ದಾರೆ.

ಈ ದೃಷ್ಟಿಯಲ್ಲಿ ಇವರದು ಕನ್ನಡದ್ದೇ ಆದ ಸ್ವಾಭಾವಿಕ ಆಲೋಚನೆ. ಇದಕ್ಕೆ ಒಂದು ಉದಾಹರಣೆಯಾಗಿ ಮುಂದಿನ ಭಾಗವನ್ನು ಗಮನಿಸಬಹುದು. 'ಆಧುನಿಕ ಕವಿತೆ ಮತ್ತು ವಿಮರ್ಶಕರು' ಎಂಬ ಲೇಖನ.. '. . . ಆಧುನಿಕ ಕವಿತೆ ಹೀಗೆ ಹುಟ್ಟುವುದೇನೋ ಸರಿ. ಆದರೆ ಅದರ ಕೊನೆಯು ಇಲ್ಲಿಗೇ ಆಗದು. ಜೀವನದೊಡನೆ ಇನ್ನೂ ಅದು ಕಲೆಯಬೇಕಾಗಿದೆ, ಬೆರೆಯಬೇಕಾಗಿದೆ. ತನ್ನ ಜೀವಭಾವಗಳನ್ನು ಆಡಿತೋರಿಸುವ ಮಾತನ್ನು ಕಲಿಯಬೇಕಾಗಿದೆ; ಅದರಲ್ಲಿ ಮುಡಿಯಬೇಕಾಗಿದೆ. ನಮ್ಮ ನಾಡಿಗೆ ತಕ್ಕ ನಿಸರ್ಗವರ್ಣನಾ ಕಾವ್ಯವಿನ್ನೂ ಮೈದೋರಬೇಕು. ನಮ್ಮ ಸಂಸ್ಕೃತಿಗೆ ತಕ್ಕ ಆತ್ಮಾನುಭವದ ಕವಿತೆ ಇನ್ನೂ ತಲೆದೋರಲಿಲ್ಲ. ಆಧುನಿಕ ಕವಿತೆ ಈಗ ಆಡುತ್ತಿರುವುದು ಎಲ್ಲಿಯೋ ಗಿಳಿಮಾತು, ಗುಹಾಧ್ವನಿ. ಅಣಕ, ಅನುಕರಣ, ತೊದಲು. ಅದರ ಛಂದವೂ, ಬಂಧವೂ, ಆನಂದವೂ ಇನ್ನೂ ಸಾಕಷ್ಟು ಪರಿಸ್ಫುಟವಾಗಿಲ್ಲ. ಕಟ್ಟಿನಿಂದ ಸ್ವತಂತ್ರವಾಗಲೆಣಿಸುವಂತೆ ಪ್ರಾಸವನ್ನು ತೆಗೆದೊಗೆದು, ವೃತ್ತಗಳ ಸೀಮೆಯನ್ನು ಮೀರಿ ಹೋಗುವಂತೆ ಕಂಡರೂ, ಕಟ್ಟಿನಲ್ಲಿ ಇದು ಸ್ವಾತಂತ್ರ್ಯವನ್ನು ಕಂಡುಕೊಳ್ಳುತ್ತಲಿದೆ. ಹಳೆಯ ಕವಿತೆಯ ಬಂಧವು ಹೂಗಾರನು ಕಟ್ಟಿದ ಬಾಸಿಂಗದಂತಹದು. ಹೊಸದರದೋ ನರ್ತಕಿಯು ರಂಗದಲ್ಲಿ ಎರಚಿದ ಹೂಗಳಂತೆ. ಬಂಧವು ಅನಿರ್ಬಂಧ! ಛಂದವು ಸ್ವಚ್ಛಂದ! ಅದರಂತೆಯೇ ಇದರ ಅಂದವೂ ಬೇರೆ. ಜಕಣಾಚಾರ್ಯರ ಗುಡಿಗಳಂತೆ ಭವ್ಯವಾದವು ನಮ್ಮ ಮಹಾಕಾವ್ಯಗಳು. ಜನ್ಮಗಳ ಮೆಟ್ಟಿಲುಗಳಿಂದ ಮೃತ್ಯುವನ್ನು ದಾಟುವ ಅವರ ಕೃತಿನಾಯಕರು ಗೊಮ್ಮಟೇಶ್ವರನಂತೆ ಗಂಭೀರ ಸೌಂದರ್ಯಶಾಲಿಗಳು. ಆಧುನಿಕ ಕವಿತೆಯೂ ಹಸುಮಕ್ಕಳಂತಾಡುವದು, ಹೊಸವೆಂಡಿರಂತೆ ನಗುವದು, ಉದಾರಸತ್ವದ ವಿಶಾಲ ಸಹಾನುಭೂತಿ ಯಿಂದೊಮ್ಮೊಮ್ಮೆ ಹಿಗ್ಗುವದು, ತಗ್ಗುವದು. ಹೀಗೆ ಆಧುನಿಕ ಕವಿತೆಯಿನ್ನೂ ಲೌಕಿಕರ ಹುಡುಗಾಟದಲ್ಲಿದೆ. ಇನ್ನು ಮುಂದೆ? ಮುಂದಿನದನ್ನು ಯಾರು ಹೇಳಬೇಕು?' (ಸಾಹಿತ್ಯದ ವಿರಾಟ್ ಸ್ವರೂಪ, ಪುಟ 243) ಇಲ್ಲಿಯ ಚಿಂತನೆ, ರೂಪಕ, ಉಪಮೆ ಇವೆಲ್ಲ ಕನ್ನಡದವು. ಈ ಬಗೆಯ ಗ್ರಹಿಕೆ ಮತ್ತು ಅಭಿವ್ಯಕ್ತಿ ಇಂದಿನ ಸಾಹಿತ್ಯ ವಿಮರ್ಶೆಗೆ ಬೇಕಾಗಿದೆ.

ಇನ್ನೊಂದು ಲೇಖನದಿಂದ ಒಂದು ಭಾಗ: "ಬಡತನದ ಬಾಳು ಎಂದರೆ ಮೈಗೆ ಮುಳ್ಳು ಬರುವವು. ಮಹಾರೋಗಿಯನ್ನು ಮುಟ್ಟಿಸಿಕೊಳ್ಳದಂತೆ ಬಡತನದ ಸ್ಪರ್ಶವು ತಮಗಾಗಬಾರದೆಂದು ಎಲ್ಲರೂ ಯತ್ನಿಸುವರು. ಆದರೆ ಬಡತನವೆಂಬುದು ಕಡೆತನಕಿರಲಿ ಎಂದು ಹಾಡಿಕೊಂಡ ದಾಸರುಂಟು. ಇದು ದಾಸರ ಮಾತು ಎಂದು ನಾವು ಮರೆಯಬಾರದು. 'ಎಲ್ಲರಿಗೂ ಬಡತನವು ಬಡಿದುಕೊಳ್ಳಲಿ ದೇವಾ" ಎಂದು ಅವರು ಹಾಡಿಲ್ಲ. ಸಮಾಜದ ಕಣ್ಣೊಳಗಿಂದ ಒಂಟೆ ಹಾಯ್ದು ಹೋಗಬಹುದು; ಆದರೆ ಸ್ವರ್ಗದ ಹೆಬ್ಬಾಗಿಲೊಳಗಿಂದ ಸಿರಿವಂತನು ಹಾಯ್ದು

Scanned with CamScanner

ಹೋಗಲಾರನು ಎಂದುಸುರಿಸಿ ಮಾತಿನಲ್ಲಿ ಮೂಡಿದ್ದು ಬಡತನದ ಮೇಲುತನವಲ್ಲ; ಸಿರಿವಂತಿಕೆಯ ಕೀಳುತನ. ಬೇರೆ ಮನೆಗಳು ಹಾಳು ಆದಂತೆ, ಒಂದು ಮನೆಯ ಅಂತಸ್ತು ಏರುವುದು. ಹೀಗೆ ಉಳ್ಳವರಾಗುವುದಕ್ಕಿಂತ ಇಲ್ಲದವರಿರುವುದು ಲೇಸು ಎಂಬುದು ತಾರತಮ್ಯದ ಮಾತು. 'ಬಡತನವು ನನಗಿರಲಿ, ಬಾಳ ಮಕ್ಕಳಿರಲಿ, ಮೇಲೆ ಗುರುವಿನ ದಯವಿರಲಿ' ಎಂಬ ಕರುಣಾಗೀತದಲ್ಲಿ ಗುರುವಿನ ದಯವಿಲ್ಲದಿದ್ದರೆ ಬಡತನವು ದಕ್ಕುವುದಿಲ್ಲವೆಂದೇ ಸೂಚಿತವಾಗಿದೆ. ಇಷ್ಟೇಕೆ? ಬಡತನವೇ ದಿವ್ಯ ಎಂದು ಹೇಳುವುದಿದ್ದರೆ ವಿಷ್ಣುವಿನ ಹೆಂಡತಿಯು 'ಇದಿ'ಯಾಗಿರಬೇಕಾಗುತ್ತಿತ್ತು; ಲಕ್ಷ್ಮಿಯಲ್ಲ.

ಬಡತನವು ಅವರವರ ಪಾಪದ ಫಲವೆಂಬ ಒಂದು ಗ್ರಹಿಕೆಯಾಗಿ ಬಿಟ್ಟಿದ್ದರಿಂದಲೇ ಇದುವರೆಗೂ ಯಾರೂ ಅದನ್ನು ನಿರ್ನಾಮ ಮಾಡಲು ಪ್ರಯತ್ನ ಪಟ್ಟಿಲ್ಲ. ಒಂದು ಸಮಾಜದಲ್ಲಿ ಬಡವರು ಇರುವುದು ಆ ಸಮಾಜಕ್ಕೆ ಕೊರತೆ. ಬಡತನವು ಸಾಂಕ್ರಾಮಿಕ ರೋಗ; ಆದರೆ ಪ್ಲೇಗು–ಗೀಗುಗಳಂತಲ್ಲ. ಪ್ಲೇಗಿನ ಸಂಪರ್ಕದಿಂದ ಪ್ಲೇಗೇ ಬರುವುದಲ್ಲದೆ ಕಾಲರಾ ಬರಲಾರದು. ಆದರೆ ಬಡತನವು ಒಂದು ವಿಚಿತ್ರ ರೋಗ. ಬಡವರು ದೀನರಾದಂತೆ ಬಲ್ಲಿದರಲ್ಲಿ ಸೊಕ್ಕು ಹೆಚ್ಚು. ಅವರು ದಿಟ್ಟರಾದರೆ ಇವರಿಗೆ ಹೆದರಿಕೆ. ಅವರು ಹಕ್ಕಿನ ತಿರುಕರಾದರೆ ಇವರು ಶಾಸ್ತ್ರದ ಧಾರ್ಮಿಕರು. ಅವರು ನಿರುಪದ್ರವಿಗಳಾದ ಕೂಲಿಕಾರರಾದರೆ ಇವರು ಜಂಬದ ಪರೋಪಕಾರಿಗಳು. ಅಂತೂ ಅವರಿಗೊಂದು ವಿಕಾರ; ಇವರಿಗೊಂದು ವಿಕಾರ. ಒಂದು ಗುಣವಾಗದೆ ಇನ್ನೊಂದು ಗುಣವಾಗದು. ಬಡತನವು ಸಾಮಾಜಿಕ ಪಾಪವೆಂದು ತಿಳಿಯದ ಹೊರ್ತು ಮನುಷ್ಯನಿಗೆ ಮುಂದೆ ಗತಿಯಿಲ್ಲ. ಬಡತನವು ಅವರವರ ಪಾಪದ ಫಲವೆಂಬುದು ತ್ರೇತಾಯುಗದಲ್ಲಿರಬಹುದು. ಈ ಯುಗದಲ್ಲಿ ಅಲ್ಲ. ಭೂಮಿತಾಯಿಯು ಬಡವಿಯಲ್ಲ. ಅವಳು ಕಾಳಿನ ಕಣಜ; ಹಣದ ಖಣಿ. ಅವಳ ಮಕ್ಕಳಿಗೆ ಬಡತನವೆಂದರೇನು?' (ಸಾಹಿತ್ಯದ ವಿರಾಟ್ ಸ್ವರೂಪ, ಪುಟ 169)

ಮೇಲಿನ ಬರವಣಿಗೆಯು ಸರಳವಾಗಿದೆ, ಸ್ಪಷ್ಟವಾಗಿದೆ. ಇದರಲ್ಲಿ ಅನೇಕ ಗ್ರಾಮ್ಯ ಪದಗಳೂ ಇವೆ. ಇದು ಜನರಾಡುವ ಮಾತಿಗೆ ಹತ್ತಿರವಾದುದು. ಇದು ಬೇಂದ್ರೆಯವರ ಗದ್ಯದ ಮೂಲ ಗುಣ. ಇದು ಬೇಂದ್ರೆಯವರ ಸಾಹಿತ್ಯ ವಿಮರ್ಶೆಯ ಸ್ಥಾಯೀ ಸ್ವಭಾವ. ಬೇಂದ್ರೆಯವರ ಇಂತಹ ಬರವಣಿಗೆಯನ್ನು ಬಿಟ್ಟರೆ, ಕನ್ನಡ ವಿಮರ್ಶೆಯಲ್ಲಿ ಈ ಬಗೆಯ ಗದ್ಯ ಬೇರೆ ವಿಮರ್ಶಕರಲ್ಲಿ ಕಾಣುವುದಿಲ್ಲ. ಬೇರೆ ವಿಮರ್ಶಕರ ವಿಮರ್ಶಾ ಬರವಣಿಗೆ ಶಿಷ್ಟ ಭಾಷೆಯ ಜಾಯಮಾನಕ್ಕೆ ಜೋತುಬಿದ್ದಿದೆ; ಅದಕ್ಕೆ ದಾಸನಾಗಿದೆ. ಬೇಂದ್ರೆಯವರು ಪ್ರಯೋಗ ಮಾಡಿರುವ ಈ ಅಭಿವ್ಯಕ್ತಿಯು ಸಾಹಿತ್ಯ ವಿಮರ್ಶೆಗೆ ಯಾಕೆ ಮೇಲ್ಪಂಕ್ತಿಯಾಗಬಾರದು? ಯಾಕೆ ಬೇಂದ್ರೆಯವರು

ಇಂತಹ ಸುಲಲಿತವಾದ ಶೈಲಿಯನ್ನು ಶಕ್ತಿಶಾಲಿಯಾಗಿ ಮುಂಚೂಣಿಗೆ ತರಲಿಲ್ಲ? ಯಾಕೆ ನಮ್ಮ ಸಂಶೋಧಕರಿಗೆ, ಯುವ ವಿಮರ್ಶಕರಿಗೆ ಬೇಂದ್ರೆಯವರ ಇಂತಹ ಬರವಣಿಗೆಯನ್ನು ಪರಿಚಯಿಸಲಿಲ್ಲ? ಕನ್ನಡ ಎಂ.ಎ. ತರಗತಿಗಳಲ್ಲೂ, ಪಿಎಚ್.ಡಿ. ಕೋರ್ಸ್‌ವರ್ಕ್ ಸಿಲೆಬಸ್‌ನಲ್ಲೂ ಯಾಕೆ ಇಡಲಿಲ್ಲ? ಬೇಂದ್ರೆಯವರ ಸಾಹಿತ್ಯ ವಿಮರ್ಶೆಯ ಬರವಣಿಗೆಯನ್ನು ಸಂಪೂರ್ಣ ಮೂಲೆಗುಂಪು ಮಾಡಲಾಗಿದೆ. ಇಂಗ್ಲಿಷ್ ಸಾಹಿತ್ಯ ವಿಮರ್ಶೆಯ ಪ್ರಭಾವದಿಂದ, ಅದರ ಯಜಮಾನಿಕೆಯನ್ನು ಒಪ್ಪಿಕೊಂಡ ಪರೋಪಜೀವಿ ಸಾಹಿತ್ಯ ವಿಮರ್ಶೆಯು, ಸಾಹಿತ್ಯ ವಿದ್ಯಾರ್ಥಿಗಳ ಮುಂದೆ ಅಧಿಕಾರ ನಡೆಸಿದೆ, ಯಜಮಾನಿಕೆ ಮಾಡಿದೆ, ಅವರಲ್ಲಿ ಕೀಳರಿಮೆ ಹುಟ್ಟು ಹಾಕಿದೆ. ಸಾಹಿತ್ಯವನ್ನು ಓದುವ, ಅದಕ್ಕೆ ಪ್ರತಿಕ್ರಿಯಿಸುವ ಅವರ ಸ್ವಂತಿಕೆಯನ್ನು ಕಿತ್ತುಕೊಂಡಿದೆ. ಅವರನ್ನು ಅತ್ಯಂತ ಕ್ರೂರವಾಗಿ ಮತ್ತು ಅಮಾನವೀಯವಾಗಿ ಸಾಹಿತ್ಯ ವಿಮರ್ಶೆಯ ಬೌದ್ಧಿಕ ಚಟುವಟಿಕೆಯಿಂದ ದೂರ ಇಟ್ಟಿದೆ. ಇದು ಕನ್ನಡ ಸಾಹಿತ್ಯ ವಿಮರ್ಶೆಯ ಬಹುದೊಡ್ಡ ವೈಚಾರಿಕ ದ್ರೋಹ ಮತ್ತು ಸಾಂಸ್ಕೃತಿಕ ಯಜಮಾನಿಕೆ ಎಂದು ಧೈರ್ಯವಾಗಿ ಹೇಳಬೇಕಾಗಿದೆ.

ಬೇಂದ್ರೆಯವರ ವಿಮರ್ಶಾ ಬರವಣಿಗೆ ಸಲೀಸು, ಸರಳ ಮತ್ತು ಅದು ಮಾತಿಗೆ ಹತ್ತಿರವಾದದ್ದು. ಅವರ ಬರವಣಿಗೆಯನ್ನು ಬಾಯಿಬಿಟ್ಟು ಓದಿದರೆ ನಾವೇ ಮಾತನಾಡುತ್ತಿದ್ದೇವಾ ಅಥವಾ ನಮ್ಮ ಜೊತೆ ಯಾರಾದರೂ ಮಾತನಾಡುತ್ತಿದ್ದಾರಾ ಎಂದೆನಿಸುತ್ತದೆ. ಇವರ ಬರವಣಿಗೆಗಳನ್ನು ಓದುವ ಸಂದರ್ಭದಲ್ಲಿ ಬೇರೆಯವರು ಬರೆದ ಬರವಣಿಗೆಗಳು ನೆನಪಿಗೆ ಬರುತ್ತವೆ. ಉದಾಹರಣೆಗೆ, ದೇವನೂರರ, ಕೆ.ಬಿ. ಸಿದ್ದಯ್ಯನವರ, ಮುಳ್ಳೂರು ನಾಗರಾಜ್ ಅವರ ಗದ್ಯ. ಬಹಳ ಮುಖ್ಯವಾದ ಹೋಲಿಕೆಗಳನ್ನು ನಾನು ಕೊಡ್ತಾ ಇದ್ದೇನೆ. ಇದೇ ರೀತಿಯಾಗಿ ಬೇಂದ್ರೆಯವರ ಗದ್ಯವನ್ನು ಬೇರೆ ಬೇರೆ ಓದುಗರು ಓದುವಾಗ ಬೇರೆಯವರ ಗದ್ಯ ಬರವಣಿಗೆಗಳು ಹೋಲಿಕೆಯಾಗಿ ಕಂಡುಬರಬಹುದು.

ಬೇಂದ್ರೆಯವರು ಸಾಹಿತ್ಯ ಎಂದರೆ ಏನು ಎನ್ನುವ ಪ್ರಶ್ನೆಯನ್ನು ಕೇಳಿಕೊಂಡು ಅದನ್ನು ವಿವರಿಸಿದ್ದಾರೆ. ಇವರ ಕೆಲವು ಸಾಲುಗಳನ್ನು ಗಮನಿಸಬಹುದು– 'ಸಾಹಿತ್ಯದ ವಿರಾಟ್ ಸ್ವರೂಪ'ದ ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ: "ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥ ವಿಚಾರದಲ್ಲಿ ಮೋಕ್ಷ ವಿಚಾರಕ್ಕೆ ಪ್ರಾಧಾನ್ಯ ಕೊಡಲಾಗಿದೆ. ಇಹ ಜೀವನವು ಬಂಧ, ಸಂಸಾರ ಹೇಯಸ್ಥಲ, ತ್ಯಾಜ್ಯ ಎಂದು ಬೋಧಿಸಲಾಗಿದೆ. ಉಗುಳಲಿಕ್ಕೂ ಬಾರದ, ನುಂಗಲಿಕ್ಕೂ ಬಾರದ ತುತ್ತು ಇದು. ಹುಟ್ಟು–ಸಾವು ಇರುವವರೆಗೆ ಹೋರಾಟ ನಡೆಯಲೇಬೇಕು. ಇವುಗಳಿಂದ ಪರಿಹಾರ ಮಾರ್ಗ, ಭಕ್ತಿಮಾರ್ಗ. ಇದು ಪಂಚಮ ಪುರುಷಾರ್ಥ ಎಂಬ ವಿಚಾರವು

Scanned with CamScanner

ಪ್ರಚಾರಕ್ಕೆ ಬಂದಿತು. ಈ ಮಾರ್ಗದಲ್ಲಿಯೂ ಗುರುಮಾರ್ಗ, ದೇವಮಾರ್ಗ ಮತ್ತು ಪಾರಮ್ಯವಾದದ ಬಿರುಗಾಳಿ ಬೀಸಲು ಪ್ರಾರಂಭವಾಯಿತು. ಅದು ಇಂದಿಗೂ ಇದೆ. ಈ ಐದೂ ಪುರುಷಾರ್ಥಪ್ರಿಯ ಜನರಿಂದ ವಿಪುಲ ಸಾಹಿತ್ಯ ನಿರ್ಮಾಣಗೊಂಡಿದೆ ಎಂಬುದೇನೊ ನಿಜ. ಆದರೆ ಇದರಿಂದ ಭೂತಲದಲ್ಲಿ ದ್ವೇಷದ ಬೇಗೆ ಹೊತ್ತುತ್ತಿದೆಯೆ ಹೊರತು, ಶಾಂತಿಯ ಸೋಮ ಸೃಷ್ಟಿಯಾಗುತ್ತಿಲ್ಲ. . . . . ಈವರೆಗೆ ನಾವು ಹೇಳಿದುದು ಶಬ್ದದ ಆಡಂಬರವೆ, ಶಬ್ದಾರ್ಥ ಸಾಹಿತ್ಯದಿಂದ ಆಗಬೇಕಾದ ಕಾರ್ಯ ಆಗುತ್ತಿಲ್ಲ. ಅಭಿರುಚಿಗೆ ತಕ್ಕಂತೆ ಅರ್ಥವಾಗಿ ಅನರ್ಥಕ್ಕೆ ಹಾದಿಯಾಗುತ್ತಿದೆ. ಆದುದರಿಂದ ಇದಕ್ಕೆ ಸಾಂಖ್ಯ ಮಾರ್ಗವೇ ಪರಿಹಾರ." (ಸಾಹಿತ್ಯದ ವಿರಾಟ್ ಸ್ವರೂಪದ ಮುನ್ನಡಿ) ಇದು ಬಹಳ ಮುಖ್ಯವಾದ ವ್ಯಾಖ್ಯಾನ ಮತ್ತು ವಿವೇಚನೆ. ಬೇಂದ್ರೆಯವರ ಒಟ್ಟು ದರ್ಶನದ ಮೇಲೆ ಸಾಂಖ್ಯ ದರ್ಶನದ ಪ್ರಭಾವ ಆಗಿರುವುದನ್ನು ನನ್ನ ಮಾತುಗಳ ಕೊನೆಯ ಭಾಗದಲ್ಲಿ ಪ್ರಸ್ತಾಪ ಮಾಡುತ್ತೇನೆ. ಮೇಲಿನ ಉಲ್ಲೇಖದ ಮಾತುಗಳನ್ನು ಹೋಲುವಂತಹ ಕೆಲವು ಮಾತುಗಳನ್ನು ಬೇರೊಂದು ಭಾಗದಲ್ಲಿ ಅವರು ಹೀಗೆ ಬರೆದಿದ್ದಾರೆ: "ಪ್ರಾಣಿಗಳಂತೆ ಒಬ್ಬರನ್ನೊಬ್ಬರು ತಿಂದು ಬದುಕುವುದು ಬದುಕಲ್ಲ: ಅದು ಸಾವು. ಆದರೆ ಒಬ್ಬರನ್ನೊಬ್ಬರು ತಿನ್ನದೆಯೇ ಪರಸ್ಪರ ತಿಳಿದು ಬದುಕುವುದು ಬಾಳು ಎಂದು ಸಾಹಿತ್ಯ ಹೇಳುತ್ತದೆ ಮತ್ತು ಹೇಳಬೇಕು". ಈ ಮಾತುಗಳಲ್ಲಿ ಬೇಂದ್ರೆಯವರು ಸಾಹಿತ್ಯದ ಕೆಲಸ ಎಂದರೆ ಏನು ಎಂಬುದನ್ನು ಅತ್ಯಂತ ಖಚಿತವಾಗಿ ಹೇಳಿದ್ದಾರೆ. ಬೇಂದ್ರೆಯವರ ಬರವಣಿಗೆಯಲ್ಲಿ ಕೆಲವು ಕಡೆ ಸಾಹಿತ್ಯದ ಬಗೆಗೆ ವಿವರಣೆ ಇದೆ, ಕೆಲವು ಕಡೆ ವಿಶ್ಲೇಷಣೆ ಇದೆ, ಇನ್ನೂ ಕೆಲವು ಕಡೆ ವ್ಯಾಖ್ಯಾನ ಮಾಡಿದ್ದಾರೆ. ಇವರು ವಿವರಣೆ ಹಾಗೂ ವಿಶ್ಲೇಷಣೆ ಮಾಡುವಾಗ ಬೇರೆ ಕೃತಿಗಳನ್ನು ಉಲ್ಲೇಖ ಮಾಡಿದ್ದಾರೆ. ಆದರೆ ಸಾಹಿತ್ಯ, ಕಾವ್ಯ ಮತ್ತು ವಿಮರ್ಶೆಗಳಿಗೆ ಮೌಲ್ಯಮಾಪನ ಮಾಡುವಾಗ ತಮ್ಮ ಕಾವ್ಯಕ್ಕೆ ತಾವೇ ಸ್ವತಃ ವ್ಯಾಖ್ಯಾನ ಮಾಡುತ್ತಿರುವಂತೆ ಭಾಸವಾಗುತ್ತದೆ. ಅವರು ಕೆಲವು ಕಡೆ ಪ್ರತ್ಯಕ್ಷವಾಗಿ ಮತ್ತೆ ಕೆಲವು ಕಡೆ ಪರೋಕ್ಷವಾಗಿ ತಮ್ಮ ಕಾವ್ಯವನ್ನೇ, ತಮ್ಮ ಸಾಹಿತ್ಯವನ್ನೇ, ತಮ್ಮ ಸಾಹಿತ್ಯ ವಿಮರ್ಶೆಯನ್ನೇ ವ್ಯಾಖ್ಯಾನಿಸಿಕೊಳ್ಳುತ್ತಾರೆ. ಇವರು ಹೇಳುತ್ತಾರೆ: "ಸಾಹಿತ್ಯವು ಸೊಗಸಲ್ಲ, ರಂಜನೆಯ ರಸವಸ್ತು ಅಲ್ಲ, ಶೃಂಗಾರದ ಸಡಗರವೂ ಅಲ್ಲ, ಮಹಾಪುರುಷರ ಮಹಾ ಪ್ರಕೃತಿಯ ಆತ್ಮರತಿ, ಆತ್ಮಕ್ರೀಡೆಯ ಮಹಾರಸಗಳು, ನಲಿದಾಟ ಒಲಿದಾಟದ ಸತ್ಯವು ಅಮೃತವಾಗುವುದು ಇಲ್ಲಿ. ಬುದ್ಧಿಯೋಗ ಭಾವಯೋಗ ಸಾಹಿತ್ಯದ ಎರಡೂ ಪಕ್ಷಗಳು. ಸಾಹಿತ್ಯವು ಮತಧರ್ಮದ ದಾಸನಾಗಬಾರದು, ರಾಜ್ಯಾಂಗದ ದಾಸಿಯೂ ಆಗಬಾರದು'. ಇದು ಬೇಂದ್ರೆಯವರು ಕೊನೇತನಕ ಕಾಪಿಟ್ಟುಕೊಂಡು ಬಂದ ಬದ್ಧತೆ. "ರಾಜ್ಯಾಂಗದ ದಾಸಿಯಾಗಬಾರದು" ಎನ್ನುವಂತಹ ಸಾಲನ್ನು, ಬಹಳ

ಸೂಕ್ಷ್ಮವಾಗಿ ಗ್ರಹಿಸಿಕೊಳ್ಳಬೇಕು. ಇದರ ಸಾಮಾನ್ಯ ವಿವರಣೆ ಏನು ಎಂದರೆ, ಸಾಹಿತ್ಯವು ಆಳುವವರ ತುತ್ತೂರಿಯಾಗಬಾರದು ಎಂಬುದೇ ಇದರ ಇಂಗಿತ.

ಸಾಹಿತ್ಯ ಎಂದರೆ ಏನು ಎಂದು ಕೇಳುವ ಬೇಂದ್ರೆಯವರು ಸಾಹಿತ್ಯದ ಕೆಲಸ ಏನು ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಅದಕ್ಕೆ ವಿವರಣೆ ಕೊಟ್ಟಿದ್ದಾರೆ. ಸಾಹಿತ್ಯದ ಕೆಲಸ ಏನು ಎಂದು ಕೇಳಿದರೆ ಇವರು ಬರೆಯುತ್ತಾರೆ; "ಇಂದ್ರಿಯದ ಚಟಗಳು ಇದ್ದಂತೆ ಮನದ ಚಟಗಳು ಇವೆ. ಇಂದ್ರಿಯದ-ಒಳ್ಳೆಯ ಚಟಗಳೇ ಕಲೆಗಳ ರೂಪ ತಾಳುವಂತೆ ಮನದ ಒಳ್ಳೆಯ ಚಟವೇ ಸಾಹಿತ್ಯ ವಾಙ್ಮಯವಾಗುವುದು. ಸ್ವದೇಶಿಯ ವ್ರತದಂತೆ ಸ್ವಭಾಷಾಸಾಹಿತ್ಯದ ಬಗ್ಗೆ ವ್ರತನಿಷ್ಠರಾಗದಿದ್ದರೆ ಸಾಹಿತ್ಯವು ಹುಟ್ಟಲಾರದು, ಬೆಳೆಯಲಾರದು ಮತ್ತು ಬಾಳಲಾರದು". (ಸಾ.ವಿ.ಸ್ವ, ಪುಟ, 343) ಮನದ ಒಳ್ಳೆಯ ಚಟಗಳು ಕಲೆಯ ರೂಪ ತಾಳಿದಾಗಲೇ ಸಾಹಿತ್ಯ. ಮತ್ತು ಅದು ಸ್ವಭಾಷಾ ಸಾಹಿತ್ಯಕ್ಕೆ ವ್ರತನಿಷ್ಠವಾಗಬೇಕು ಎಂಬ ಮಾತು ಬಹಳ ಮುಖ್ಯ. ಕುವೆಂಪು ಅವರು ತಮ್ಮ ಮೊದಲ ಬರೆವಣಿಗೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಮಾಡಿದ್ದರು. ಜೆ.ಎಂ. ಕಸಿನ್ಸ್ ಅವರು, ಕುವೆಂಪು ಅವರಿಗೆ ಸ್ವಭಾಷೆಯಲ್ಲೆ ಬರೆಯಲು ಸೂಚನೆ ಕೊಟ್ಟಿದ್ದರು. ಇದು ಎಲ್ಲರಿಗೂ ಗೊತ್ತಿರುವ ಸಂಗತಿ. ಬಹುಶಃ ಬೇಂದ್ರೆಯವರು ಕಸಿನ್ಸ್ ಅವರ ಧೋರಣೆಗೆ ಹತ್ತಿರದವರು.

ಸಾಹಿತ್ಯವು ಇದುವರೆಗೆ ಯಾವ ಕೆಲಸವನ್ನು ಮಾಡಿದೆ ಎಂಬುದನ್ನು ಬೇಂದ್ರೆಯವರು ಹೀಗೆ ವಿವರಿಸಿದ್ದಾರೆ: "ಸಾಹಿತ್ಯವು ಮತಧರ್ಮಗಳ ದಾಸನಾಗಿಯೊ, ರಾಜ್ಯಾಂಗಗಳ ದಾಸಿಯಾಗಿಯೊ ಬಾಳಿದೆ. ಇಂತಹ ಬಾಳಿನಲ್ಲಿ ಅದು ಆಡಿದ ಮಾತೆಲ್ಲ ತನ್ನ ಪಾರತಂತ್ರ್ಯಕ್ಕೆ ಸ್ವಾತಂತ್ರ್ಯದ ಗಿಲೀಟು ಕೊಟ್ಟ ನುಡಿ. ಸಾಹಿತ್ಯವು ಸ್ವಾತಂತ್ರ್ಯವನ್ನು ವಹಿಸಿ ಮಾತನಾಡಿದಾಗ ಮತಧರ್ಮಗಳಿಗೂ, ರಾಜ್ಯಾಂಗಗಳಿಗೂ ಚಕ್ರ ಬಂದಿದೆ. ಅವುಗಳಿಂದಲೂ ಅದು ಬಹಿಷ್ಕೃತವೂ, ತಿರಸ್ಕೃತವೂ ಆಗಿದೆ. ಇಂದಿನ ಜಾಗತಿಕ ಸಾಹಿತ್ಯವು ಉಭಯ ಸಂಕಟದಲ್ಲಿ ಸಿಕ್ಕಿದೆ. ರಷ್ಯಾ, ಜರ್ಮನಿ, ಇಟಲಿ ದೇಶಗಳಲ್ಲಿ ಅದು ಅಲ್ಲಿಯ ರಾಜ್ಯಾಂಗದ ಮುಖವಿದಂತೆ ಮಾತನಾಡುವುದು ಅಲ್ಲಿಯ ರಾಜ್ಯಾಂಗಗಳೇ ಅಲ್ಲಿಯ ಸಾಹಿತ್ಯಸಾರದ ದೇಹಗಳಾಗಿರುವವೋ ಹೇಳುವುದು ಕಷ್ಟ. ಅಲ್ಲಿಯ ಸರ್ವಘೋತ್ಕಾರಗಳಿಂದ ಎದ್ದ ವಿಷಧೂಮವೂ ಜಗತ್ತಿನ ಮೂಗನ್ನೆ ಮುಸುಕುತ್ತಿದೆ. ಯಾವ ಶಿವನು ಇದನ್ನು ತಪ್ಪಿಸುವನೊ ಯಾರು ಬಲ್ಲರು?" (ಸಾ.ವಿ.ಸ್ವ, ಪುಟ, 346)

"ಜನಾಭಿರುಚಿಯನ್ನು ತಿದ್ದಬೇಕಾಗಿದೆ. ತಿದ್ದುವ ಪೂರ್ವದಲ್ಲಿ ಅದನ್ನು ತಿಳಿದುಕೊಳ್ಳಬೇಕಾಗಿದೆ. ಇಂದಿನ ವಿಜ್ಞಾನವು ಆ ಕಾರ್ಯದಲ್ಲಿ ಸಾಹಿತಿಗಳಿಗೆ ಸಹಕಾರಿಯಾಗಿದೆ. ಮನದ ಮೇರೆಯ ವಿಶುದ್ಧ ಸ್ವರ್ಗಗಳ ರೂಪರೇಖೆಗಳನ್ನು

Scanned with CamScanner

ಮಾನವ ಸಮಾಜದಲ್ಲಿ ಹುಡುಕಿ ತೆಗೆದು ಅದರಿಂದ ಬರೆಯಬೇಕಾಗಿದೆ ಚಿತ್ರಗಳನ್ನು. ಇದನ್ನು ರಸವತ್ತಾಗಿ ಮಾಡಬೇಕಾದರೆ, ಆ ರಸವು ಸುಲಭ ರಮ್ಯವಾಗಿ ಆಗಬೇಕಾದರೆ ರಾಜ್ಯ ನಿಯಂತ್ರಣವೂ, ಮತಧರ್ಮ ನಿಯಂತ್ರಣವೂ ಜನ್ಮಾಂತರ ಹೊಂದಬೇಕು. ವೇಷಾಂತರವಿರಲಿ, ದೇಹಾಂತರವೂ ಸಾಲದು. ಮನುಷ್ಯನ ಮನಸ್ಸೆ ಇನ್ನೂ ಮಾನವರಿಗೆ ತಿಳಿದಿಲ್ಲ. ಅದೇ ಬ್ರಹ್ಮದಂತೆ ಅಗಮ್ಯವೂ, ಮಾಯೆಯಂತೆ ಅನಿರ್ವಚನೀಯವೂ ಆಗಿಬಿಟ್ಟಿದೆ. ಇದರ ಅನುಭಾವಿಗಳೆ ಭವಿಷ್ಯ ಸಾಹಿತ್ಯದ ನೂತನ ಬ್ರಹ್ಮರು. ಸಾಗರ ಮಂಥನದ ಕಾಲದಲ್ಲಿ ಪ್ರಳಯವಿಲ್ಲದೆ ಸೃಷ್ಟಿಯುಂಟೆ? ಪ್ರಳಯಕ್ಕೆ ರುದ್ರರೂ ಬೇಕು; ಸೃಷ್ಟಿಗೆ ಬ್ರಹ್ಮರೂ ಬೇಕು". (ಸಾ.ವಿ. ಸ್ವ, ಪುಟ, 349)

ಬೇಂದ್ರೆ ಅವರು ಕಾವ್ಯದ ಚರ್ಚೆಯನ್ನು ಹೀಗೆ ಮಾಡಿದ್ದಾರೆ: "ಕಾವ್ಯಯೋಗ ಎಂಬ ಹೆಸರನ್ನು ಕೇಳಿ ಯಾರೂ ಬೆಚ್ಚಕೂಡದು. ಹೆಸರಿನಲ್ಲಿ ಅಚ್ಚರಿಯೇನೂ ಇಲ್ಲ. ಕಾವ್ಯಯೋಗವೆಂದರೆ ಕವಿಯ ಕರ್ಮಯೋಗ. ಲೋಕಸಂಗ್ರಹದ ಇಚ್ಛೆಯಿಂದ ಜಗತ್ತಿನ ಕಲ್ಯಾಣಕ್ಕಾಗಿ ಕುಶಲತೆಯಿಂದ ಮಾಡಿದ ಕೆಲಸವದು. ಕರ್ಮಕುಶಲತೆಗೆ ಯೋಗವೆಂದು ಹೆಸರು.

ಸಹೃದಯರಿಗೆ, ರಸಿಕರಿಗೆ ಆನಂದವನ್ನು ಉಣಿಸಲು ಇರಿಸಿದ ಅರವಂಟಿಗೆ ಎಂದರೆ ಕಾವ್ಯ. ಭಕ್ತಿಯೋಗ, ಕರ್ಮಯೋಗಗಳಂತೆ ಇದು ಕಾವ್ಯಯೋಗ, ಕಾವ್ಯಯೋಗ ಎಂಬ ಪದವನ್ನು ಯಾರೂ ಪ್ರಯೋಗಿಸಿರದಿದ್ದರೂ 'ಕಾವ್ಯಸಮಾಧಿ' ಎಂಬ ಮಾತನ್ನು ರುದ್ರಭಟ್ಟನು ತನ್ನ ಜಗನ್ನಾಥ ವಿಜಯದಲ್ಲಿ ಪ್ರಯೋಗಿಸಿದ್ದಾನೆ. ಕಾವ್ಯಸಮಾಧಿಯ ಧ್ಯಾನ, ಧಾರಣೆಗಳನ್ನೊಳಗೊಂಡ ದರ್ಶನವು ಕಾವ್ಯಯೋಗ ಎನಿಸುವುದು." (ಸಾ.ವಿ.ಸ್ವ, ಪುಟ, 183)

ಬೇಂದ್ರೆಯವರ ಪ್ರಕಾರ ಕಾವ್ಯವೆಂದರೆ ಅನುಭಾವವನ್ನು ಸೃಷ್ಟಿಸುವುದು, ಆನಂದವನ್ನು ನೀಡುವುದು ಮತ್ತು ಓದುಗರು ಅಥವಾ ಸಹೃದಯರು ಆನಂದವನ್ನು ಪಡೆಯುವುದು. ಅದರಲ್ಲಿ ಭಕ್ತಿರಸ ಮುಖ್ಯ ಮತ್ತು ಕಾವ್ಯವನ್ನು ನಾವು ಅನುಭವಿಸಬೇಕು ಎಂದು ಅವರು ಪ್ರತಿಪಾದನೆ ಮಾಡಿದ್ದಾರೆ. ಇದು ಬಹುತೇಕ ಭಾರತೀಯ ಕಾವ್ಯಮೀಮಾಂಸೆಗೆ ಹತ್ತಿರವಾದುದು. ಅದನ್ನು ಸ್ವಲ್ಪ ಅವರು ವಿಸ್ತರಿಸುತ್ತಾರೆ. ಇಂದ್ರಿಯ ಅನುಭಾವವನ್ನು ನೀಡಬೇಕು ಮತ್ತು ಪಡೆಯಬೇಕು, ಕೊಡಬೇಕು ಇತ್ಯಾದಿಗಳು ಇದ್ದೇ ಇದೆ. ಇದು ಭಾರತೀಯ ಕಾವ್ಯಮೀಮಾಂಸೆಯ ಮತ್ತೊಂದು ರೂಪವೇ ಆಗಿದೆ. ಭಾರತೀಯ ಕಾವ್ಯ ಮೀಮಾಂಸಕರು ಹೇಳಿದ ರೂಪವೇ ಆಗಿದೆ. ಒಂದು ಆಸಕ್ತಿದಾಯಕ ಸಂಗತಿ ಏನೆಂದರೆ ಅವರು ಕಾವ್ಯದ ಜೊತೆಗೆ ನಾಟಕವನ್ನು ಕೂಡ ಸೇರಿಸುತ್ತಾರೆ. ಹಾಗಾಗಿ ನಾಟಕ ಅಥವಾ ನಾಟ್ಯವು ಒಂದು ಹೊಸ ಭೋಗ. ಪ್ರೇಕ್ಷಕನು ನಾಟಕ ನೋಡುತ್ತಿರುವಾಗಲೇ ಆ ಕ್ಷಣದಲ್ಲಿ ದೃಶ್ಯದ

ಅಥವಾ ಆಯಾ ಪಾತ್ರದ ಒಂದು ಭೋಗವನ್ನು ಅನುಭವಿಸುತ್ತಾ ಇರುತ್ತಾನೆ ಹಾಗೂ ಆ ರಸದ ಪ್ರವಾಹದೊಂದಿಗೆ ಅವನು ಪ್ರವಾಸ ಮಾಡುತ್ತಾನೆ ಎನ್ನುವ ವ್ಯಾಖ್ಯಾನವನ್ನು ಕೊಟ್ಟಿದ್ದಾರೆ.

ಕಾವ್ಯ ಓದುಗರ ಮನೋಲೋಕದಲ್ಲಿ ಪುನರ್‌ಸೃಷ್ಟಿಯಾಗುತ್ತದೆ ಅಥವಾ ಸಹೃದಯರ ಮನೋಭೂಮಿಕೆಯಲ್ಲಿ ಮರುಸೃಷ್ಟಿಯಾಗುತ್ತದೆ. ಕಾವ್ಯವು ಸಹೃದಯರಲ್ಲಿ ಮರುಸೃಷ್ಟಿಯಾಗುವುದು ಒಂದು ಪ್ರಕ್ರಿಯೆ. ಬೇಂದ್ರೆಯವರ ಈ ಗ್ರಹಿಕೆಯ ಬಗೆಗೆ ಅಧ್ಯಯನ ಮಾಡಿರುವ ಕೆ.ವಿ. ನಾರಾಯಣ ಅವರು 'ಕಾವ್ಯ ಸಹೃದಯರಲ್ಲಿ ಮರುಹುಟ್ಟು ಪಡೆಯುತ್ತದೆ ಎನ್ನುವುದಕ್ಕೆ ಮಾನದಂಡ ಎಲ್ಲಿದೆ' ಎನ್ನುವ ಭಿನ್ನಮತವನ್ನು ತೆಗೆದಿದ್ದಾರೆ. ಅಂದರೆ ಕಾವ್ಯ ಅಥವಾ ನಾಟಕ ನೋಡುಗರಿಗೆ, ಓದುಗರಿಗೆ ಅಥವಾ ಪ್ರೇಕ್ಷಕರಿಗೆ ರಸಭೋಗ ಉಂಟುಮಾಡಬೇಕು. ಅವರು ಅದರಲ್ಲಿ ತಲ್ಲೀನರಾಗುತ್ತಾರೆ. ಇಂದ್ರಿಯಗಳ ಅನುಭವವನ್ನು ಪಡೆಯುತ್ತಾರೆ ಎನ್ನುವುದನ್ನು ಅಳತೆ ಮಾಡುವ ಮಾನದಂಡ ಯಾವುದು ಎನ್ನುವುದಕ್ಕೆ ಡಾ. ಕೆ.ವಿ. ನಾರಾಯಣ ಅವರದು ಭಿನ್ನಮತ. ನಾನು ಅದನ್ನು ಬೆಳೆಸುವುದಕ್ಕೆ, ವಿಸ್ತರಿಸುವುದಕ್ಕೆ ಹೋಗುವುದಿಲ್ಲ. ಒಟ್ಟು ಕಾವ್ಯವೇ ಆಗಿರಲಿ, ಸಾಹಿತ್ಯವೇ ಆಗಿರಲಿ, ಅದನ್ನು ಸೂಕ್ಷ್ಮವಾಗಿ ದಿಟ್ಟಿಸಿ ನೋಡಿದ ಬೇಂದ್ರೆ ಅದನ್ನು ಭೌತಿಕ ಸಂಸ್ಕೃತಿ, ಕಲ್ಪನಾಸೃಷ್ಟಿ, ಕಲಾಸೃಷ್ಟಿ, ಸ್ವಪ್ನಸೃಷ್ಟಿ, ಚಾಲಕ ಸೃಷ್ಟಿ ಇತ್ಯಾದಿ ಅನೇಕ ಸೃಷ್ಟಿಗಳು ಎಂದು ವಿಭಾಗ ಮಾಡಿ ವಿವರಿಸಿದ್ದಾರೆ.

ಕವಿ ಮತ್ತು ಸಹೃದಯ ಇವರ ಪ್ರತಿಭೆಯ ಬಗೆಗೆ ಬೇಂದ್ರೆಯವರ ವ್ಯಾಖ್ಯಾನ ಹೀಗಿದೆ: "ದರ್ಶನವು ಶಾಬ್ದಿಕ ವರ್ಣನೆಯನ್ನು ಪಡೆದು ಸಾಹಿತ್ಯರೂಪದಲ್ಲಿ ಸೇರುವುದು. ಈ ವರ್ಣನೆಯಲ್ಲಿ ಕೀಳು ಮೇಲು ತರಗತಿಗಳು ಇವೆ. ತೋರುವುದಕ್ಕಿಂತ ಹೆಚ್ಚು ಕಾಣುವ ಹಾಗೆ ಮಾಡುವುದು. ಶಬ್ದದೊಳಗಿನ ಮಂತ್ರಶಕ್ತಿ ದೃಕ್‌ಶಕ್ತಿಯನ್ನು ಜಾಗೃತಗೊಳಿಸುವ ಮಂತ್ರಶಕ್ತಿಯು. ನಾಲಿಗೆಯಿಂದೊಡನುಡಿಯಬೇಕಾದರೆ ಅದಕ್ಕೆ ಸರಿಯಾದ ಪ್ರಜ್ಞೆಯು ಆಡುವವನಲ್ಲಿ ಬೇಕು. ಕಾಣಬೇಕೆಂಬ ಕುತೂಹಲಸಿದ್ಧಿ ನೋಡುವವನಲ್ಲಿ ಬೇಕು. ತೋರಿಸುವ ಹಾಗೂ ನೋಡಬಲ್ಲ ಪ್ರಜ್ಞೆಗಳೆರಡೂ ಪ್ರತಿಭೆಯ ಪ್ರಕಾರಗಳು. ಮೊದಲನೆಯವ ಕವಿ; ಎರಡನೆಯವ ಸಹೃದಯ." (ಸಾ.ವಿ.ಸ್ವ, ಪುಟ, 180) ಇದು ಭಾರತೀಯ ಕಾವ್ಯಮೀಮಾಂಸೆ ಪ್ರತಿಪಾದನೆ ಮಾಡುವ ತತ್ವವೇ ಆಗಿದೆ. ಮುಂದುವರಿದು ಬೇಂದ್ರೆಯವರು ಏಳು ಬಗೆಯ ಸೃಷ್ಟಿಗಳನ್ನು ವಿವರಿಸಿದ್ದಾರೆ: 'ನಮಗೆ ಸಹಜವಾಗಿಯೇ ತೋರುವ ಸೃಷ್ಟಿಯ ವೈಶಾಲ್ಯವು ಅಷ್ಟಿಷ್ಟಲ್ಲ. ಚರ್ಮೇಂದ್ರಿಯಗಳಿಗೆ ಗೋಚರಿಸುವ ಮಹಾಭೌತಿಕ ಸೃಷ್ಟಿ, ಶಬ್ದಗಳಿಂದ ಸೂಚಿತವಾಗುವ ಸಾಹಿತ್ಯ ಸೃಷ್ಟಿ, ಮನಸ್ಸಿಗೆ ಹೊಳೆಯುವ ಕಲ್ಪನಾಸೃಷ್ಟಿ, ಚಿತ್ರ ಲೇಪಾದಿಗಳಲ್ಲಿ ಸುಳಿದಾಡುವ ಕಲಾಸೃಷ್ಟಿ, ದೃಷ್ಟಾತ್ರವಾಗಿ ಬಿದ್ದುಕೊಂಡ ಸುಪ್ತ

Scanned with CamScanner

ಜೀವದಿದಿರು ಸುಳಿದಾಡುವ ಸ್ವಪ್ನ ಸೃಷ್ಟಿ, ರೋಗಿ ಜೀವಕ್ಕೆ ಭಾಸವಾಗುವ ಮಂಕುಸೃಷ್ಟಿ, ನಮ್ಮ ಅಶಕ್ತ ದೃಷ್ಟಿಯನ್ನು ಕೂಸಾಡಿಸುವ ಇಂದ್ರಜಾಲಕ ಸೃಷ್ಟಿ, ಸಾಮಾನ್ಯ ಜನರಿಗೂ ಅನುಭವಕ್ಕೆ ಬರುವ ಈ ಸೃಷ್ಟಿಗಳಲ್ಲದೆ ಸಿದ್ಧಸಾಧ್ಯವಾದ ಗಾಂಧರ್ವ ಸೃಷ್ಟಿ, ಋಷಿಗಳಿಗೆ ಮೈದೋರುವ ಸತ್ಯ ಸೃಷ್ಟಿ ಮೊದಲಾದುವು ಇರುವಂತೆ ಅಂತೂ ಏನೊ ನಮ್ಮ ದೃಷ್ಟಿಯಂತೆ ನಮ್ಮ ಸೃಷ್ಟಿ ಇರುವುದಾದರೂ ನಮ್ಮ ಶಕ್ತಿಯಷ್ಟೇ ನಮಗೆ ದರ್ಶನವೆಂಬ ಮಾತು ಸುಳ್ಳಲ್ಲ." (ಸಾ.ವಿ.ಸ್ವ. ಪುಟ, 179) ಮುಂದುವರಿದು ಅದು ಗಾಂಧರ್ವ ಸೃಷ್ಟಿ ಮತ್ತು ಸತ್ಯ ಸೃಷ್ಟಿಯೆಂದು, ಈ ಸತ್ಯ ಸೃಷ್ಟಿಯು ಕವಿಗಳಿಗೆ ಸಾಧ್ಯವಿಲ್ಲ; ಋಷಿಗಳಿಗೆ ಮಾತ್ರ ಸಾಧ್ಯ ಎಂದು ಹೇಳಿದ್ದಾರೆ. ನಮ್ಮ ದೃಷ್ಟಿಯಂತೆ ಸೃಷ್ಟಿ ಎಂದು ಹೇಳಿದ್ದಾರೆ. ಇದು ಕೂಡ ಹೊಸ ಬಗೆಯ ವ್ಯಾಖ್ಯಾನ ಎಂದು ಅನಿಸುವುದಿಲ್ಲ.

ರತ್ನಾಕರನ ಭರತೇಶ ವೈಭವದ ಭರತೇಶನ ಬಗೆಗೆ ಬೇಂದ್ರೆಯವರಿಗೆ ವಿಶೇಷ ಆಸಕ್ತಿ. ಇದನ್ನು ಇವರ ಮಾತುಗಳಲ್ಲೇ ಹೇಳುವುದಾದರೆ, "ಜೈನರ ತ್ಯಾಗ, ಶೈವರ ಯೋಗ, ವೈಷ್ಣವರ ಭೋಗ ಇವುಗಳ ಅಪೂರ್ವ ಸಂಗಮದಿಂದ ಉಂಟಾದ ಅದ್ಭುತ ರಸಾಯನವೇ ಭರತೇಶ ವೈಭವದ ಅಮೃತ." ಮುಂದುವರಿದು ಅವರು ಬರೆಯುತ್ತಾರೆ; "ಆದಿತೀರ್ಥಂಕರರು ಜೀವನದಲ್ಲಿ ಕಾಣದ ಸಾರ್ಥಕತೆಯನ್ನು ಭರತನು ಕಾಣುತ್ತಾನೆ. ಇವನ ಮಕ್ಕಳಲ್ಲಿ ಬಂಧುವೈರವಿಲ್ಲ, ಅಹಂಕಾರದಿಂದ ಬರುವ ವಿರಕ್ತಿ ಇಲ್ಲ. ಭರತನು ಭಾರತೀಯ ಸಂತತಿಗೆ ಬಿಟ್ಟುಹೋದ ಆಸ್ತಿ ಇದು. ....ರಾಮಾಯಣ, ಮಹಾಭಾರತ, ಆದಿಪುರಾಣ ಸಾಧ್ಯ ಮಾಡದ ಸಿದ್ಧಿ ಭರತೇಶ ವೈಭವಕ್ಕೆ ಕಾಣ್ಕೆ. ರತ್ನಾಕರನ ಕಾವ್ಯಯೋಗ ದರ್ಶನ. "ರತ್ನಾಕರನ ಭರತ" ಎನ್ನುವುದೇ ಈ ಲೇಖನದ ಶೀರ್ಷಿಕೆ. ಇವರು ಮೊದಲಿಗೆ ಒಂದು ವ್ಯಾಖ್ಯಾನ ಮಾಡುತ್ತಾರೆ. ಅದು ಏನು ಎಂದರೆ, ಜೈನರ ತ್ಯಾಗ, ಶೈವರ ಯೋಗ, ವೈಷ್ಣವರ ಭೋಗ ಈ ಅಪೂರ್ವ ಸಂಗಮದಿಂದ ಉಂಟಾದ ಅದ್ಭುತ ರಸವೇ ಭರತೇಶ ವೈಭವದ ಅಮೃತ ಎಂದು. ಜೈನ, ಶೈವ ಮತ್ತು ವೈಷ್ಣವ ಇವುಗಳ ಹದವಾದ ಸಾಮರಸ್ಯವನ್ನು ಇದರಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಕಾವ್ಯರಸ, ಕಾವ್ಯ ಅಮೃತ ಸೃಷ್ಟಿಯಾಗಬೇಕಾದರೆ ತಾರತಮ್ಯಗಳಿಲ್ಲದೆ ಇವು ಪರಸ್ಪರ ಮಿಲನವಾಗಿವೆ ಎಂದು ಹೇಳುವುದರ ಮೂಲಕ; ಅವು ಪರಸ್ಪರ ತಾರತಮ್ಯಗಳನ್ನು ಕಳೆದುಕೊಂಡು ಒಂದುಗೂಡಬೇಕೆಂಬ ಆಶಯ ಕೂಡಾ ಇದೆ. ಇದು ಬಹಳ ಮುಖ್ಯ ಎಂದು ನನಗನಿಸಿದೆ.

ಆದಿ ತೀರ್ಥಂಕರರು ಜೀವನದಲ್ಲಿ ಕಾಣದೆ ಇರುವ ಸಾರ್ಥಕತೆಯನ್ನು ಭರತ ಕಾಣುತ್ತಾನೆ. ಇವರ ಮಕ್ಕಳಲ್ಲಿ ವೈರತ್ವ ಇಲ್ಲ. ಅಹಂಕಾರದಿಂದ ಬರುವ ವಿರಕ್ತಿ ಇಲ್ಲ. ಭರತನು ಭಾರತೀಯ ಸಂತತಿಗೆ ಬಿಟ್ಟುಹೋದ ಬಹಳ ದೊಡ್ಡ ಆಸ್ತಿ ಇದು ಎಂದು ಮೌಲ್ಯಮಾಪನ ಮಾಡಿದ್ದಾರೆ. ರಾಮಾಯಣ, ಮಹಾಭಾರತ,

ಆದಿಪುರಾಣಗಳು ಸಾಧ್ಯ ಮಾಡದ ಸಿದ್ಧಿಯನ್ನು ನೀಡಿರುವುದು ಭರತೇಶ ವೈಭವದ ಕಾಣಿಕೆಯಾಗಿದೆ. ಅದು ರತ್ನಾಕರನ ಕಾವ್ಯದ ಯೋಗದ ದರ್ಶನವಾಗಿದೆ ಎಂದು ಹೇಳಿದ್ದಾರೆ. ತಮಗೆ ಇಷ್ಟವಾದ ಕೆಲವು ಪದ್ಯಗಳನ್ನು ಇವರು ಉಲ್ಲೇಖ ಮಾಡಿದ್ದಾರೆ.

ದಾಯಾದಿ ಮತ್ಸರ, ಸೋದರ ಕಾಳಗ ಇವು ನಡೆದುಬಂದ ಇತಿಹಾಸ. ಈ ಇತಿಹಾಸವನ್ನು ಅಳಿಸಿಬಿಡುವುದೇ ರತ್ನಾಕರನ ಉದ್ದೇಶ. ಆದುದರಿಂದ ಭರತ ಬಾಹುಬಲಿ ಇವರು ರಣರಂಗದಲ್ಲಿ ಬಂದು ನಿಂತ ಮೇಲೆ ಯುದ್ಧ ನಡೆಯದೆ, ಮನಸ್ಸು ತಿದ್ದುವ ಪ್ರಯತ್ನ ನಡೆಯುತ್ತದೆ.

"ನಿನಗಾನು ಪಗೆಯೇ? ನೀನೆನಗೆ ಪಗೆಯೇ? ಹೇಳು
ಜಿನಪುತ್ರರಿದನು ನಾವಿಂದು
ನೆನೆದಾಗ ಮುಂದೆ ಸಮಸ್ತರ್ಗೆ ದ್ರೋಹಶಾ
ಸನವ ಬರೆದು ಕೊಟ್ಟೆವಲ್ತೆ?
ನೀನು ಎನಗೆ ಬಗೆಯೇ
ಹೇಳು ದಿನಕರ ಇದನ್ ನಾವಿಂದು
ನೆನೆದಾಗ ಮುಂದೆ ಸಮಸ್ತರಿಗೆ ದ್ರೊಹ ಬರೆದು ಕೊಟ್ಟೆವಲ್ತೆ? ।

ಎಂದು ಭರತನು ಕೇಳುವಲ್ಲಿ ಈ ಕಾವ್ಯದ ಜೀವಾಳ ತುಂಬಿ ನಿಂತಿದೆ. ಆಗಿ ಹೋದ ಅನೇಕ ರಾಜರಂತೆ ಸೋದರ ಕಾಳಗ ಮಾಡುವುದು ಭರತನಿಗೆ ಒಪ್ಪದ ವಿಷಯ. ಇದು ನಿಲ್ಲಬೇಕು. ಸಹೋದರರಲ್ಲಿ ಆದರ್ಶಪ್ರೀತಿ ಬೆಳೆಯಬೇಕು ಎಂಬುದೇ ಭರತನ ಆಶಯ. ಸಹೋದರ ಕಾಳಗವನ್ನು ನಿಲ್ಲಿಸಿ, ಮುಂಬರುವ ಪೀಳಿಗೆಗಾಗಿ ಸ್ನೇಹಶಾಸನವನ್ನು ನಿರ್ಮಿಸಿದನು ಭರತ." (ಸಾ.ವಿ.ಸ್ವ. ಪುಟ 631) ಮುಂದುವರಿದು, "ಈ ಭೋಗಿಯೋಗಿಯಾದ ಭರತನ ಅಂತಃಕರಣ ಅತಿಮೃದು. ಬಾಹುಬಲಿಯು ಹೊರಟುಹೋದ ಮೇಲೆ ಅರಮನೆಯೆಲ್ಲ ಶೋಕಸಾಗರದಲ್ಲಿ ಮುಳುಗಿತು. ಆಗ ಭರತನು ಆಡುವ ಮಾತುಗಳು ಇವು:

ಶೋಕನಾದವ ಕೇಳಿ ಭರತೇಶ ಮನವಲ್ಲಿ
ವ್ಯಾಕುಲಬಟ್ಟು ಕೂಡೆನಗೆ
ಏಕೆ ಬಂದಿತು ಚಕ್ರವೀ ರಾಜ್ಯಪದವಿ?
ಮಹಾಕಷ್ಟ ಹಾಹಾ ಸುಡೆಂದಾ ॥
ಫಲವಾವುದೈಸಿರಿ ಬಂದರೆ ತನ್ನುಳ್ಳ
ಬಳಗ ಸಂತಸ ಮಾಡಬೇಡಾ?
ಕುಲವ ಗೋಳ್ಗಿಡಿಸುವ ಸಿರಿಯ ಸುಡೆಂದು ಭೂ
ತಳಪತಿ ನೋವ ತನ್ನೊಳಗೆ ॥

Scanned with CamScanner

ಪಲರ ನೋಯಿಪ ಮೊರೆತನದಿಂದ ಪಸರದ
ಪಲರ ಬಾಳುವ ಲೇಸು, ಮತ್ತೆ
ಕಲಕದ ಚಿತ್ತದಿಂದಾತ್ಮನ ನೋಡುತ
ಮಲೆಯೊಳಹುದೆ ಸುಖವೆಂದಾ॥

ಭರತೇಶ ವೈಭವದಿಂದ ಬೇಂದ್ರೆಯವರು ಆಯ್ಕೆ ಮಾಡಿರುವ ಮೇಲಿನ ಪದ್ಯಗಳು ಒಂದು ಕಡೆ ಕಾವ್ಯವನ್ನು ನೋಡುವ, ಅನುಭವಿಸುವ ಅವರ ಮನೋಧರ್ಮವನ್ನು, ಮತ್ತೊಂದು ಕಡೆ ಇಡೀ ಅವರ ವ್ಯಕ್ತಿತ್ವವನ್ನು ನಮಗೆ ತೆರೆದು ತೋರಿಸುತ್ತವೆ. ಇದರ ಜೊತೆಗೆ ಇವರು ಪ್ರತಿಪಾದಿಸುತ್ತಿರುವ ಸಮರಸ, ಸಾಮರಸ್ಯದ ತತ್ವವನ್ನು ಒತ್ತಿ ಹೇಳುತ್ತಿವೆ.

ಸಾಹಿತ್ಯ ವಿಮರ್ಶಕರು, ಚಿಂತಕರು ನನ್ನ ಮೇಲೆ ಪ್ರಭಾವ ಬೀರಿದ್ದಾರೆ ಎಂದು ಬೇರೆ ಬೇರೆ ಲೇಖನಗಳಲ್ಲಿ ಹಲವರ ಹೆಸರುಗಳನ್ನು ಇವರು ಉಲ್ಲೇಖ ಮಾಡಿದ್ದಾರೆ. ಅದರ ಬಗೆಗೆ ವಿವರಣೆ ಮತ್ತು ವಿಶ್ಲೇಷಣೆಗಳನ್ನು ಕೊಟ್ಟಿದ್ದಾರೆ. ಭರತಮುನಿ, ಕಾಳಿದಾಸ, ಅಭಿನವಗುಪ್ತ ಅಲ್ಲಮ, ಶೆಲ್ಲಿ, ಖಲೀಲ್‌ಗಿಬ್ರಾನ್, ರವೀಂದ್ರನಾಥ ಠಾಗೂರ್, ಮಹಾತ್ಮಾಗಾಂಧಿ, ಶ್ರೀ ಅರವಿಂದರು ಮುಂತಾದವರು. ಕಾವ್ಯದಲ್ಲಿ ಬಹಳ ಇಷ್ಟ ಎಂದು ಪದೇ ಪದೇ ಹೇಳುವ ಹೆಸರು ಕೃಷ್ಣ ಮತ್ತು ಅಲ್ಲಮ.

ಬೇಂದ್ರೆಯವರ ಸಾಹಿತ್ಯ ವಿಮರ್ಶೆಯಲ್ಲಿ ಶಕ್ತಿಶಾಲಿ ವೈಚಾರಿಕತೆ ಇದೆ. ಆ ವೈಚಾರಿಕತೆಯನ್ನು ಬೇರೆ ಪದದಲ್ಲಿ ಅಥವಾ ಅಭಿವೃದ್ಧಿಗೊಂಡ ಮಾತಿನಲ್ಲಿ ಕರೆಯುವುದಾದರೆ ಅದು ದೃಷ್ಟಿ, ಅದು ತಾತ್ವಿಕತೆ ಮತ್ತು ಅದು ದರ್ಶನ. ಭಾರತದಲ್ಲಿ ಈ ಬಗೆಯ ದರ್ಶನಗಳನ್ನು ಅವುಗಳ ಹಿತಾಸಕ್ತಿ ಮತ್ತು ಗುರಿಗಳನ್ನು ಇಟ್ಟುಕೊಂಡು ಎರಡು ಭಾಗ ಮಾಡಬಹುದು. ಒಂದು: ಸಮನ್ವಯ, ಸಮರಸ, ಸಾಮರಸ್ಯ ಮತ್ತು ಸಮಾನತೆಯ ಅಪೇಕ್ಷೆಯ ಒಂದು ಚಿಂತನಧಾರೆ. ಅದು ಸಹಬಾಳ್ವೆ, ಸೋದರತೆ ಈ ಮೌಲ್ಯಗಳಿಗೆ ಸಮೀಪ ಇದೆ. ಮತ್ತೊಂದು ಸಂಘರ್ಷದ ವಿಚಾರಧಾರೆ. ಅನೇಕ ಬಗೆಯ ಸಂಘರ್ಷಗಳು, ಕೀಳೂ–ಮೇಲು, ಮಹಿಳೆ–ಪುರುಷ ಮುಂತಾದ ವೈರುದ್ಧ್ಯಗಳನ್ನು ಗುರುತಿಸುತ್ತಾ ಇವನ್ನು ಪರಿವರ್ತಿಸುವ ಚಿಂತನಧಾರೆ.

ಬೇಂದ್ರೆಯವರ ವೈಚಾರಿಕತೆಯಲ್ಲಿ ಸಂಘರ್ಷದ ವಿಚಾರಧಾರೆ ಅತ್ಯಂತ ಸೂಕ್ಷ್ಮವಾಗಿ ಕಾಣಿಸುತ್ತದೆ. ಆದರೆ ಅವರಿಗೆ ಇದು ಪ್ರಜ್ಞಾಪೂರ್ವಕವಾದ ಆಯ್ಕೆಯಾಗಿ ಬಂದಿರುವುದಲ್ಲ; ಇದು ಅನಿವಾರ್ಯವಾಗಿ ಬಂದಿರುವುದು. ಸಮರಸ ಮತ್ತು ಸಮನ್ವಯಗೊಳಿಸುವುದು ಬೇಂದ್ರೆಯವರ ವಿಚಾರಧಾರೆಯಾಗಿದೆ. ಅದಕ್ಕೆ ಇವರು ಪದೇಪದೇ ಏನೆಂದು ಹೇಳುತ್ತಾರೆ ಎಂದರೆ, ನನಗೆ ಅರವಿಂದರ ಬರೆವಣಿಗೆ ಹಾಗೂ ಅವರ ಪುಸ್ತಕಗಳು ಪ್ರಭಾವ ಬೀರಿವೆ ಎಂದು. ಅರವಿಂದರ ಬರೆವಣಿಗೆಯನ್ನು

ಉಲ್ಲೇಖ ಮಾಡುತ್ತ ಪ್ರಕೃತಿಯಲ್ಲಿ ಮಾನವನೇ ಪ್ರಧಾನವಾಗಿ ಇರಬಹುದು. ಜೀವಿಗಳಲ್ಲಿ ಮಾನವನಿಗಿಂತ ಹೆಚ್ಚಿನ ಶಕ್ತಿಯುಳ್ಳ ಜೀವಿಗಳು ಇಲ್ಲಿಯ ಜೀವರಾಶಿಯನ್ನು ಆನಂದಮಯ ಮಾಡಬಲ್ಲವು. ಅಂತಹ ಜೀವರಾಶಿಗಳ ಉದಯ ಆಗುವಂತೆ ಮಾಡುವುದೇ ಈ ಸೃಷ್ಟಿಯ ಗುರಿಯಾಗಿದೆ. ಈ ಎಲ್ಲಾ ಮಾತುಗಳು ಬೇಂದ್ರೆಯವರ ವಿಚಾರಧಾರೆಯ ಹಿಂದೆ ಇರುವ ವಿಚಾರಗಳನ್ನು ಹೇಳುವುದಾಗಿವೆ.

ಬೇಂದ್ರೆಯವರ ಕಾವ್ಯತತ್ವದ ಹಿಂದೆ, ವಿಮರ್ಶೆಯ ಹಿಂದೆ ಒಂದು ದರ್ಶನ ಇದೆ. ಆ ದರ್ಶನದ ಸ್ವರೂಪ ಯಾವುದು ಎಂಬುದನ್ನು ಚರ್ಚೆ ಮಾಡಬೇಕಾಗಿದೆ. ಬೇಂದ್ರೆಯವರು ಹೀಗೆ ಹೇಳಿದ್ದಾರೆ: ಪ್ರಾಣ ಆವರಣಗೊಂಡಿದೆ ಮತ್ತು ಜಡವಾಗಿದೆ. ಮನಸ್ಸು ಆವರಣಗೊಂಡಿದೆ ಮತ್ತು ಅದು ಕೂಡ ಜಡವಾಗಿದೆ. ಹೀಗೆ ಆವರಣಗೊಂಡಿರುವ ಪ್ರಾಣ ಮತ್ತು ಮನಸ್ಸನ್ನು ಅರಿಯಬೇಕು. ಆಗ ಅನುಗಮ್ಯವಾಗುತ್ತದೆ, ಇದನ್ನು ಜ್ಞಾನ ಎಂದೂ ಕರೆಯುತ್ತಾರೆ. ಬಹುಶಃ ಇದನ್ನು ಮನವರಿಕೆ ಮಾಡುವುದಾದರೆ, 'ಹುಟ್ಟುತ್ತಲೇ ವಿಶ್ವಮಾನವ, ಬೆಳೆಯುತ್ತಾ ನಾವು ಅದನ್ನು ಅಲ್ಪ ಮಾನವನನ್ನಾಗಿ ಮಾಡುತ್ತೇವೆ. ಜಾತಿ, ಧರ್ಮ, ಮತಗಳು ಇವುಗಳೇ ಮನುಷ್ಯನನ್ನು ಪಶುವಾಗಿ ಮಾಡುತ್ತವೆ' ಎನ್ನುವ ವಿಚಾರದ ಜೊತೆಯಲ್ಲಿ ಇದರ ಹೋಲಿಕೆ ಇದೆ. ಅನುಭವಗಮ್ಯ ಆಗಬೇಕಾದರೆ ಒಂದು ಜ್ಞಾನಯಾತ್ರೆ ಆರಂಭವಾಗುತ್ತದೆ. ಅಂದರೆ ಪ್ರಾಣವನ್ನು, ಮನಸ್ಸನ್ನು ಯಾವುದು ಆವರಣ ಮಾಡಿದೆಯೋ ಅದನ್ನು ಕಿತ್ತು ಎಸೆಯಬೇಕು. ಅದನ್ನು ಕಿತ್ತು ಎಸೆದಾಗ ಜ್ಞಾನ ಯಾತ್ರೆ ಆರಂಭವಾಗುತ್ತದೆ. ಈ ಜ್ಞಾನ ಯಾತ್ರೆ ಒಂದು ಪ್ರಕ್ರಿಯೆ. ಅದರಲ್ಲಿ ಗೇಯ, ಅನಂತ, ಜ್ಯೋತಿ, ಮುಕ್ತಿ, ಅಮರತ್ವಗಳ ದರ್ಶನವಾಗುತ್ತದೆ. ಅಮೃತತ್ವದ ದರ್ಶನವೇ ಬೇಂದ್ರೆಯವರ ತತ್ವದರ್ಶನದ ಮೂಲ ತಿರುಳು ಮತ್ತು ಮೂಲ ಗುಣ. ಈ ಅಮೃತತತ್ವಗಳ ದರ್ಶನ ಯಾರಿಗೆ ಆಗುತ್ತದೆಯೆಂದರೆ ಶ್ರೇಷ್ಠರಿಗೆ ಜೀವನದಲ್ಲಿ ಆಗುತ್ತದೆ ಎಂದು ಬೇಂದ್ರೆಯವರು ಹೇಳುತ್ತಾರೆ. ಸಾಮಾನ್ಯರಿಗೆ ಅಮೃತತ್ವ ಆಗುವುದಿಲ್ಲ ಎಂದು ಹೇಳುತ್ತಾರೆ. ಅದಕ್ಕೆ ಎರಡು ರೀತಿಯ ಸಾಧ್ಯತೆಗಳನ್ನು ಗುರುತಿಸುತ್ತಾರೆ. ಒಂದು ಶ್ರೇಷ್ಠ ಮಾನವರಲ್ಲೇ ಅಮೃತತತ್ವ ಆಗಬಹುದು ಅಥವಾ ಇಡಿಯಾಗಿ ಮಾನವ ಜಾತಿಯೇ ತನ್ನ ಸಾಮೂಹಿಕ ಪ್ರಯತ್ನದ ಉತ್ಕ್ರಾಂತಿಯಲ್ಲಿ ತೊಡಗಿ ವಿಕಾಸದಲ್ಲಿ ಅದನ್ನು ಸಾಧಿಸಬಹುದು. ಈ ಸಂದರ್ಭದಲ್ಲಿ ಬಹಳ ಮುಖ್ಯವಾದ ತಿರುವು ಎಲ್ಲಿ ಸಿಗುತ್ತದೆ ಎಂದರೆ ಬೇಂದ್ರೆ ಅವರು ಕಾವ್ಯವನ್ನು ಅಮೃತಕ್ಕೆ ಹಾರುವ ಗರುಡ ಎಂದು ಕರೆಯುತ್ತಾರೆ. ಹಾಗಿದ್ದರೆ ಅವರ ಈ ದಾರ್ಶನಿಕ ಚರ್ಚೆ ಒಳಗೆ ಏನು ಬರುತ್ತದೆಯೆಂದರೆ ಮನುಷ್ಯರು ಅಮೃತತ್ವದ ಕಡೆಗೆ ಸಾಗಬೇಕು ಎಂದು. ಮನುಷ್ಯ ಅಮೃತತ್ವದ ಕಡೆಗೆ ಸಾಗಬೇಕಾದರೆ ಅವರು, ಅವರಿಗೆ ಆವರಿಸಿರುವ ಪೊರೆಯಿಂದ ಹೊರಗಡೆ ಬರಬೇಕು. ಹೊರಗಡೆ ಬರುವುದಕ್ಕೆ ಇರುವ ದಾರಿಗಳು

Scanned with CamScanner

ಯಾವುವು ಎಂದರೆ ಬೇಂದ್ರೆಯವರ ಪ್ರಕಾರ, ಭಾರತೀಯರಿಗೆ ಎರಡು ಬಗೆಯ ಜ್ಞಾನಗಳು ಇವೆ. ಒಂದು ಪರೋಕ್ಷಜ್ಞಾನ, ಇನ್ನೊಂದು ಅಪರೋಕ್ಷ ಜ್ಞಾನ. ಈ ಪರೋಕ್ಷ ಜ್ಞಾನದಲ್ಲಿ ಇಂದ್ರಿಯ ಅನುಭವ ಮತ್ತು ವೈಚಾರಿಕ ಹಾಗೂ ಊಹೆ ಮುಖ್ಯವಾಗುತ್ತದೆ. ಅಪರೋಕ್ಷ ಜ್ಞಾನದಲ್ಲಿ ಆತ್ಮಜ್ಞಾನ ಮುಖ್ಯವಾಗುತ್ತದೆ. ಇದಲ್ಲದೆ ಇದೇ ಜ್ಞಾನವನ್ನು ಅನುಭವ ಜ್ಞಾನ ಮತ್ತು ಭೌತಿಕ ಜ್ಞಾನ ಹಾಗೂ ತಾರ್ಕಿಕ ಜ್ಞಾನ ಎಂತಲೂ ವಿಂಗಡಿಸಿದ್ದಾರೆ. ಅನುಭವ ಜ್ಞಾನ ವಸ್ತುವಿನೊಂದಿಗೆ ಒಳಗಾಗುವುದರಿಂದ ಬರುತ್ತದೆ.

ಇಂದ್ರಿಯ ಅನುಭವ ಜ್ಞಾನ ತನ್ಮಯತೆಯಿಂದ ಬರುತ್ತದೆ. ಭಾರತೀಯರ ಪ್ರಕಾರ ಮನಸ್ಸು ಆರನೇ ಇಂದ್ರಿಯ ಎಂದು ಹೇಳುತ್ತಾರೆ. ಇದನ್ನು ನಾನು ನಿಧಾನವಾಗಿ ನಿಮ್ಮ ಜೊತೆ ಹಂಚಿಕೊಳ್ಳುತ್ತೇನೆ. ಪರೋಕ್ಷ ಮತ್ತು ಅಪರೋಕ್ಷ ಜ್ಞಾನ ಇದರ ಮೂಲ ಯಾವುದು ಎಂಬುದು ಬೇಂದ್ರೆಯವರ ಪ್ರಶ್ನೆ. ಇದು ಬೇಂದ್ರೆಯವರು ತಮ್ಮ ಮೇಲೆ ಪ್ರಭಾವ ಬೀರಿದ್ದಾರೆ ಎಂದು ಉಲ್ಲೇಖ ಮಾಡುವ ಶ್ರೀ ಅರವಿಂದರ ಪ್ರಶ್ನೆ ಕೂಡಾ ಹೌದು. ಅರವಿಂದರ ಪ್ರಶ್ನೆ ಮತ್ತು ಬೇಂದ್ರೆಯವರ ಪ್ರಶ್ನೆ ನಮ್ಮನ್ನು ಎಲ್ಲಿಗೆ ಕರೆಮಕೊಂಡು ಹೋಗುತ್ತದೆಂದರೆ ತತ್ವಶಾಸ್ತ್ರದ ಮೂಲಭೂತ ಪ್ರಶ್ನೆಗೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ. ಇಡೀ ಪ್ರಪಂಚದಲ್ಲಿ ಯಾವುದು ಯಾವುದಕ್ಕೆ ಆಧಾರ ಎಂಬುದು ತತ್ವಶಾಸ್ತ್ರದ ಮೂಲಭೂತ ಪ್ರಶ್ನೆ. ಭೌತವಸ್ತು ಆಧಾರವೊ, ಭೌತವಸ್ತುವನ್ನು ಕುರಿತ ಮನಸ್ಸು ಆಧಾರವೊ ಎಂಬುದು ಮೂಲಭೂತ ಪ್ರಶ್ನೆ. ಅಥವಾ ಭೌತವಸ್ತು ಆಧಾರವೋ, ಪ್ರಜ್ಞೆ ಅಥವಾ ಭಾವನೆ ಆಧಾರವೊ? ಇವುಗಳಲ್ಲಿ ಯಾವುದು ಮೊದಲು? ಭಾವನೆ ಮೊದಲೊ, ವಸ್ತು ಮೊದಲೊ? ಇದು ತತ್ವಶಾಸ್ತ್ರದ ಅತ್ಯಂತ ಮೂಲಭೂತವಾದ ಪ್ರಶ್ನೆ. ಈ ಚರ್ಚೆ ಬೇಂದ್ರೆಯವರಿಗೆ ಎಷ್ಟು ಮುಖ್ಯವಾಗಿದೆ ಎಂದರೆ, ಇವರು "ದಿವ್ಯ ದರ್ಶನ" ಎನ್ನುವ ಶೀರ್ಷಿಕೆಯ ಎಂಟು ಲೇಖನಗಳನ್ನು ಬರೆದಿದ್ದಾರೆ. ಇವರ ಸಾಹಿತ್ಯದ ವಿರಾಟ್ ಸ್ವರೂಪದಲ್ಲಿ ಈ ಲೇಖನಗಳು ನಮಗೆ ಸಿಗುತ್ತವೆ. ಈ ಲೇಖನಗಳ ಮೂಲಭೂತ ಚರ್ಚೆ ಏನು ಎಂದರೆ ಅನುಭವವನ್ನು ಪಡೆಯುವ ವಿಧಾನ ಯಾವುದು, ತಿಳಿವಳಿಕೆಯನ್ನು ಪಡೆಯುವ ವಿಧಾನ ಯಾವುದು, ಜ್ಞಾನವನ್ನು ಪಡೆಯುವ ವಿಧಾನ ಯಾವುದು, ಆ ಮೂಲಕ ಮನುಷ್ಯಕುಲ ಅಮೃತತ್ವವನ್ನು ಪಡೆಯುವುದು ಹೇಗೆ ಎಂಬುದು. ಬೇಂದ್ರೆಯವರು ಮೇಲಿಂದ ಮೇಲೆ ಉಲ್ಲೇಖ ಮಾಡುವುದು ಅರವಿಂದರನ್ನು. ಆದರೆ ಇವರ "ಸಾಹಿತ್ಯದ ವಿರಾಟ್ ಸ್ವರೂಪ" ಕೃತಿಯ ಮುನ್ನುಡಿಯಲ್ಲಿ ಪ್ರಾಚೀನ ಭಾರತದ ಕಪಿಲಮುನಿಯನ್ನು ಉಲ್ಲೇಖ ಮಾಡಿದ್ದಾರೆ. ಮುಂದೆ 'ದಿವ್ಯದರ್ಶನ' ಎನ್ನುವ ಎಂಟು ಲೇಖನಗಳಲ್ಲಿ ಕಪಿಲಮುನಿಯ ವಿಚಾರಗಳನ್ನು ಅಲ್ಲಲ್ಲಿ ಸಂಕ್ಷಿಪ್ತವಾಗಿ ಮತ್ತು ಬಹಳ ಸೂಕ್ಷ್ಮವಾಗಿ ಚರ್ಚೆ ಮಾಡಿದ್ದಾರೆ. ಅವುಗಳಲ್ಲಿ ಬೇಂದ್ರೆಯವರು

ಏನನ್ನು ಗುರುತಿಸುತ್ತಾರೆ ಎಂದರೆ, ಅರವಿಂದರ ಪ್ರಕಾರ ದುಃಖ ಎಂದು ಏನೆಂದು ಕೇಳಿದರೆ, ಇಚ್ಛೆಗೂ ಅಥವಾ ಜ್ಞಾನಕ್ಕೂ ಅಂತರವುಂಟಾದರೆ ಆಗ ದುಃಖ ಉಂಟಾಗುತ್ತದೆ ಎಂದು ಅರವಿಂದರು ಹೇಳುತ್ತಾರೆ ಎಂದು ಬೇಂದ್ರೆಯವರು ಹೇಳುತ್ತಾರೆ. ಇದು ಬೇಂದ್ರೆಯವರು ಗ್ರಹಿಸಿರುವ ಅರವಿಂದರ ತತ್ವಶಾಸ್ತ್ರ. ಆದರೆ ಸ್ವತಃ ಬೇಂದ್ರೆಯವರೇ ಉಲ್ಲೇಖ ಮಾಡಿರುವ ಕಪಿಲಮುನಿಯ ವ್ಯಾಖ್ಯಾನ ಏನೆಂದರೆ, ಅಸಮಾನತೆಯಿಂದ ದುಃಖವುಂಟಾಗುತ್ತದೆ. ಅರವಿಂದರು ಹೇಳುವುದು ಇಚ್ಛೆಗೂ ಮತ್ತು ಜ್ಞಾನಕ್ಕೆ ಅಂತರ ಉಂಟಾದಾಗ ದುಃಖ ಉಂಟಾಗುತ್ತದೆ. ಮುಂದುವರಿದು ಬೇಂದ್ರೆಯವರು ಹೇಳುತ್ತಾರೆ, ಭಾರತೀಯರ ಆಚಾರ ಕಲೆ ವಿಜ್ಞಾನ ಸಾಹಿತ್ಯ ಸಮಾಜ ರಾಜನೀತಿ ಇವುಗಳಿಗೆ ತತ್ವಶಾಸ್ತ್ರ ಹಂತದ ನನ್ನ ಮಾತುಗಳು ಅಥವಾ ನನ್ನ ಚರ್ಚೆ ಅಮೂರ್ತವಾಯಿತೆಂದು ಕಾಣುತ್ತದೆ. ಆದರೆ ಬೇಂದ್ರೆಯವರ ಪ್ರಕಾರ ಇದು ಅಮೂರ್ತವಲ್ಲ. ನಾನು ಮಾತನಾಡುತ್ತಿರುವ ರೀತಿಯಲ್ಲೂ ಅಮೂರ್ತವಲ್ಲ. ಯಾಕೆಂದರೆ ಸಾಹಿತ್ಯದ ಕೆಲಸ ಯಾವತ್ತೂ ಅಮೂರ್ತವೇ. ಜೊತೆಗೆ, ಕಲೆ, ನಾಟಕ, ಸಾಹಿತ್ಯ ವಿಮರ್ಶೆ ಇವೂ ಕೂಡ ಅಮೂರ್ತವೆ. ಬೇಂದ್ರೆಯವರ ಪ್ರಕಾರ ಇವೆಲ್ಲವೂ ಕೂಡ ಮನುಷ್ಯರನ್ನು ಅಮೃತತ್ವದ ಕಡೆಗೆ ಸಾಗಿಸಬೇಕು ಅಥವಾ ಮನುಷ್ಯರನ್ನು ಅಮೃತತ್ವದ ಕಡೆಗೆ ಕೊಂಡೊಯ್ಯಬೇಕು.

ಹಾಗಿದ್ದರೆ ಅಮೃತತ್ವವನ್ನು ಪಡೆಯುವ ವಿಧಾನ ಯಾವುದು? ನಮ್ಮ ಎಲ್ಲ ಕುಟಿಲತೆಗಳನ್ನು, ಕಶ್ಮಲಗಳನ್ನು ಹೃದಯ ಮತ್ತು ಮನಸ್ಸಿನಿಂದ ತೆಗೆದುಹಾಕಬೇಕು. ಇದು ಅಷ್ಟು ಸುಲಭಾನಾ? ಇದು ಎಲ್ಲಿಂದ ಬರುತ್ತದೆ? ಹೇಗೆ ಬರುತ್ತದೆ? ನಾವು ನಮ್ಮ ಸುತ್ತಮುತ್ತಲಿನ ಪರಿಸರವನ್ನು ನೋಡ್ತೀವಿ. ಸುತ್ತಮುತ್ತಲಿನ ಚಟುವಟಿಕೆಗಳನ್ನ ನೋಡ್ತೀವಿ. ಪ್ರಕೃತಿಯನ್ನು ನೋಡ್ತೀವಿ. ಅದಕ್ಕೆ ನಾವು ಪ್ರತಿಕ್ರಿಯಿಸುತ್ತೇವೆ ಮತ್ತು ಅದಕ್ಕೆ ಪ್ರತಿಕ್ರಿಯಿಸುವಾಗ ಕೆಲವಕ್ಕೆ ಭಾಷೆಯನ್ನು ಬಳಸುತ್ತೇವೆ, ಕೆಲವಕ್ಕೆ ಭಾಷೆಯನ್ನು ಬಳಸುವುದಿಲ್ಲ. ಇದಕ್ಕೆ ಸಂಬಂಧಿದಂತೆ ಕಪಿಲಮುನಿ ತನ್ನ ಸಾಂಖ್ಯದರ್ಶನದಲ್ಲಿ ಒಂದು ಉದಾಹರಣೆಯನ್ನು ಕೊಡುತ್ತಾನೆ. ಇದು ಬಹಳ ಮುಖ್ಯವಾದದ್ದು. ಏನು ಅಂದರೆ, ನಾವು ಹರಿಯುವ ಹಳ್ಳ ಅಥವಾ ಹರಿಯುವ ನದಿ ಅಥವಾ ಕಾಲುವೆಯ ದಡದಲ್ಲಿ ಇದ್ದೇವೆ ಎಂದಿಟ್ಟುಕೊಳ್ಳೋಣ. ನಮ್ಮ ಎಡಭಾಗದಿಂದ ಬಲಭಾಗದ ಕಡೆಗೆ ನೀರು ಹರಿದುಹೋಗುತ್ತಿದೆ ಎಂಬ ಸನ್ನಿವೇಶವನ್ನು ಮತ್ತು ಚಿತ್ರಣವನ್ನು ಕಲ್ಪನೆ ಮಾಡಿಕೊಳ್ಳೋಣ. ನಮ್ಮ ಎದುರಿಗೆ ಎಡಗಡೆಯಿಂದ ಬಲಗಡೆಗೆ ಹರಿಯುವ ನೀರನ್ನು ನೋಡಿ ನಾವು ಏನೆಂದು ಏಳಬಹುದು? 1. 'ನೀರು ಹರಿದು ಹೋಗುತ್ತಿದೆ' ಎಂದು ಹೇಳುತ್ತೇವೆ. ಇದು ಎಡಭಾಗವನ್ನು ಗೌಣ ಮಾಡಿ, ಕೇವಲ ಬಲಭಾಗವನ್ನು ಮಾತ್ರ ನೋಡಿ ಕಟ್ಟಿರುವ ಹೇಳಿಕೆ. ಬಲಭಾಗವನ್ನು ಗೌಣ ಮಾಡಿ ಕೇವಲ ಎಡಭಾಗವನ್ನು ಮಾತ್ರ ನೋಡಿ ಹೇಳಿದರೆ, 2. ನೀರು ಹರಿದು ಬರುತ್ತಿದೆ ಎಂದು

Scanned with CamScanner

ಹೇಳುತ್ತೇವೆ. ನೀರು ಹರಿದು ಹೋಗ್ತಾ ಇರೋದು–ನೀರು ಹರಿದು ಬರ್ತಾ ಇರೋದು; ಇದು ಒಂದು ಸಾಧ್ಯತೆ. 3. ನೀರು ಹರಿದು ಬರ್ತಾ ಇದೆ; ಆದ್ದರಿಂದ ಅದು ಹರಿದು ಹೋಗುತ್ತಿದೆ. 4. ನೀರು ಹರಿದು ಹೋಗುತ್ತಿದೆ, ಯಾಕೆಂದರೆ ಅದು ಹರಿದು ಬರುತ್ತಿದೆ. ಇದು ಮತ್ತೊಂದು ಸಾಧ್ಯತೆ. ಇದು ಕಪಿಲಮುನಿಯ ಸಾಂಖ್ಯ ದರ್ಶನದ ಪ್ರಕಾರ ಅನುಭವವು ಜ್ಞಾನವಾಗುವ–ಜ್ಞಾನವು ಅನುಭವವಾಗುವ ನಿರಂತರ ಪ್ರಕ್ರಿಯೆ. ಅಂದರೆ ನಮ್ಮ ಮುಂದೆ ಆಗುತ್ತಿರುವ, ಬದಲಾಗುತ್ತಿರುವ ವಸ್ತುಸ್ಥಿತಿಯನ್ನು ನಾವು ನಮ್ಮ ಊಹೆಗೆ ತಂದುಕೊಳ್ಳುವುದು, ನಮ್ಮ ಕಲ್ಪನೆಗೆ ತಂದುಕೊಳ್ಳುವುದು, ನಮ್ಮ ಅನುಭವಕ್ಕೆ ತಂದುಕೊಳ್ಳುವುದು. ಇದು ನಮ್ಮ ಮನಸ್ಸು, ನಮ್ಮ ಭಾವನೆ, ನಮ್ಮ ಕಲ್ಪನೆ, ನಮ್ಮ ಪಂಚೇಂದ್ರಿಯಗಳು ಕ್ರಿಯಾಶೀಲವಾಗುವ ಹಲವು ಸಾಧ್ಯತೆಗಳನ್ನು ಬಿಡಿಸಿಟ್ಟಿದೆ.

ಕಪಿಲಮುನಿಯ ಸಾಂಖ್ಯ ದರ್ಶನದಲ್ಲಿ ಮತ್ತೊಂದು ಮುಖ್ಯವಾದ ತತ್ವ ಪ್ರತಿಪಾದಿತವಾಗಿದೆ. ಅದು ಕಾರಣ ಮತ್ತು ಪರಿಣಾಮಗಳ ಸಂಬಂಧವನ್ನು ಕುರಿತ ನಮ್ಮ ಅನುಭವ ಹಾಗೂ ಜ್ಞಾನಕ್ಕೆ ಸಂಬಂಧಿಸಿದ್ದು. ನಾವು ಎಲ್ಲೋ ಒಂದು ಕಡೆ ಇದ್ದೇವೆ. ಮೋಡ ಒಟ್ಟುಗೂಡಿದ್ದನ್ನು ನೋಡಿ, ಮಳೆ ಬರುತ್ತದೆ ಎಂದು ಊಹಿಸುತ್ತೇವೆ ಅಥವಾ ಹೇಳುತ್ತೇವೆ. ಮೋಡ ಒಟ್ಟುಗೂಡಿರುವುದು ಕಾರಣ; ಮಳೆ ಬರುತ್ತದೆ ಎನ್ನುವುದು ಪರಿಣಾಮ. ಇದು ಕಾರಣವನ್ನು ನೋಡಿ ಪರಿಣಾಮವನ್ನು ಊಹೆ ಮಾಡುವುದು. ಇನ್ನೊಂದು ಸಾಧ್ಯತೆ ಇದೆ. ಅದು ಪರಿಣಾಮವನ್ನು ನೋಡಿ ಕಾರಣವನ್ನು ಊಹೆ ಮಾಡುವುದು. ಮೊದಲನೆಯದಕ್ಕೆ ಇದು ತದ್ವಿರುದ್ಧ. ಎಲ್ಲೋ ಒಂದು ಕಡೆ ನದಿಯಲ್ಲಿ ಹೆಚ್ಚು ನೀರು, ಸ್ವಲ್ಪ ಹೊಸ ನೀರು ಹರಿದುಬರುತ್ತಿದೆ ಅಂತ ಇಟ್ಟುಕೊಳ್ಳೋಣ. ಅದನ್ನು ನೋಡಿ, ನಾವು ಏನನ್ನು ಊಹೆ ಮಾಡುತ್ತೇವೆ ಅಂದರೆ, ಈ ನದಿಯಲ್ಲಿ ನಿನ್ನೆ ಮೊನ್ನೆಗಿಂತ ಇವತ್ತು ಜಾಸ್ತಿ ಪ್ರಮಾಣದಲ್ಲಿ ನೀರು ಬರುತ್ತಿದೆ. ಎಲ್ಲೋ ಮೇಲೆ ಮಳೆಯಾಗಿರಬಹುದು ಎಂದು ಊಹೆ ಮಾಡುತ್ತೇವೆ. ಇದು ಪರಿಣಾಮವನ್ನು ನೋಡಿ ಕಾರಣವನ್ನು ಊಹೆ ಮಾಡುವುದು. ಮೊದಲನೆಯದು ಕಾರಣವನ್ನು ನೋಡಿ ಪರಿಣಾಮವನ್ನು ಊಹೆ ಮಾಡುವುದು.

ಮೇಲೆ ಚರ್ಚಿಸಿದ ಗ್ರಹಿಕೆಯ ವಿಧಾನವನ್ನು ಗತಿತಾರ್ಕಿಕ ವಿಧಾನ ಎಂದು ಕರೆಯುತ್ತೇವೆ. ಇದು ಬೇಂದ್ರೆಯವರ ಒಟ್ಟು ಗ್ರಹಿಕೆಯ ಕೇಂದ್ರೀಯ ಬಗೆಯ ಗ್ರಹಿಕೆ ಮತ್ತು ಅಭಿವ್ಯಕ್ತಿ ಬೇಂದ್ರೆಯವರಲ್ಲಿದೆ. ಅಂತಹ ಕೆಲವು ಉಲ್ಲೇಖಗಳನ್ನು ಗಮನಿಸಬಹುದು.

'ಜೀವನ ಈ ಶಬ್ದವು ಸರ್ವಮಾನ್ಯವಾಗಿ ಎಲ್ಲರಿಗೂ ನಿತ್ಯದ ರೂಢಿಯೊಳಗಿನ ಮಾತಾಗಿಬಿಟ್ಟಿದೆ. ಆದುದರಿಂದ ಅದು ಎಲ್ಲರಿಗೂ ಗೊತ್ತಿರುವಂತೆ

ತೋರುತ್ತದೆ. ಆದರೆ ವಿಚಾರವಂತರು ಮಾತ್ರ ಅದರ ಅರ್ಥವೇನೆಂಬುದನ್ನು ಯಾವಾಗಲೂ ಆಲೋಚನೆ ಮಾಡುತ್ತಿರುತ್ತಾರೆ. ಜೀವನದ ಅರ್ಥವನ್ನು ಅರಿತುಕೊಂಡವನಿಗೆ ಮಾತ್ರ ಅವನ ಜೀವನವು ಸಾರ್ಥಕವಾಗುವುದು. . . . ಜೀವನ ಶಬ್ದವನ್ನು ನಾನು ಯಾವ ಅರ್ಥದಲ್ಲಿ ಉಪಯೋಗಿಸುತ್ತಿರುವೆನೆಂಬುದನ್ನು ಸ್ಪಷ್ಟಪಡಿಸುವೆನು. ಜೀವನವೆಂಬ ಶಬ್ದದೊಳಗೆ ಯಾವತ್ತೂ ನೈಸರ್ಗಿಕ ಏರಿಳಿತಗಳೂ, ಸ್ಥಿತಿಗತಿಗಳೂ ಬರುತ್ತವೆ. ಆದರೆ ಇದು ಜೀವನದ ಕಚ್ಚಾಮಾಲು. . . . . ಮೊದಲನೆಯದು ಪ್ರಾಕೃತಿಕ ಜೀವನ, ಎರಡನೆಯದು ಪೌರುಷೇಯ ಜೀವನ, ಮೂರನೆಯದು ಸಿದ್ಧ ದೈವೀ ಜೀವನ. ಈ ಮೂರು ಹಂತಗಳೆಂದರೆ ಜೀವನದ ಪ್ರಾರಂಭ, ಪ್ರಯತ್ನ ಹಾಗೂ ಪರಿಪೂರ್ಣತೆ. . . . . ಸೂರ್ಯನನ್ನು ಉದಯದ ಕಾಲಕ್ಕೆ ನೋಡಿದರೇನು, ಮಧ್ಯಾಹ್ನ ತಲೆಯ ಮೇಲೆ ಬಂದಾಗ ನೋಡಿದರೇನು? ಅಥವಾ ಅವನನ್ನು ಅಸ್ತಮಯ ಕಾಲದಲ್ಲಿ ನೋಡಿದರೂ ಏನು? ಅವು ಸೂರ್ಯನ ಸ್ಥಿತ್ಯಂತರಗಳಾಗಿರದೆ, ಕೇವಲ ಪೃಥ್ವಿಯ ಪರಿಭ್ರಮಣದ ಪರಿಣಾಮವೇ ಆಗಿರುವುವಲ್ಲವೆ? ಅದರಂತೆ ಜೀವನದೊಳಗಿನ ಈ ಮೂರು ಅವಸ್ಥೆಗಳು ಕಾಲವಿಸ್ತಾರದ ಮೂಲಕವಾಗಿ ಒಂದರಿಂದೊಂದು ಭಿನ್ನವಾಗಿ ತೋರುತ್ತಿದ್ದರೂ, ಅವು ಹಾಗಿಲ್ಲ.' (ಸಾ.ವಿ.ಸ್ವ. ಪುಟ, 239, 240)

'ವ್ಯಾಖ್ಯೆಗಳಿಂದ ವಸ್ತುವನ್ನು ಹುಡುಕಬಾರದು.' (ಸಾ.ವಿ.ಸ್ವ. ಪುಟ, 190). ಏಕೀಕರಣವನ್ನು ಏಕಾಕಾಲದಲ್ಲಿ ಗ್ರಹಿಸಬಾರದು. 'ಕನ್ನಡದ ಏಕೀಕರಣ, ಕನ್ನಡಿಗರ ಏಕೀಕರಣ ಮತ್ತು ಕರ್ನಾಟಕದ ಏಕೀಕರಣ.' (ಸಾ.ವಿ.ಸ್ವ. ಪುಟ, 8). 'ಹೃದಯ ಸಾಹಿತ್ಯದ ಗರ್ಭಗುಡಿ. ಸಾಹಿತ್ಯವು ಜನಾಂಗ ಹೃದಯದ ಮಹಾದ್ವಾರ. ಜೀವನದ ಒಂದು ಸಿದ್ಧಿ ಸಾಹಿತ್ಯದಲ್ಲಿ; ಸಾಹಿತ್ಯದ ಒಂದು ಸಿದ್ಧಿ ಜೀವನದಲ್ಲಿ. (ಸಾ.ವಿ.ಸ್ವ. ಪುಟ, 24). 'ಸತ್ಯ ಹೇಳಲು ಹೊಸ ಮನಸ್ಸೇ, ಹೊಸ ಮನುಷ್ಯರೇ ಬೇಕು. '(ಸಾ.ವಿ.ಸ್ವ. ಪುಟ, 26). 'ಸಾಮಾಜಿಕರು ಎಚ್ಚರಾಗದಿದ್ದರೆ, ಸಾಹಿತ್ಯದ ಧ್ವನಿ ನಿದ್ದೆ ಹೊಡೆಯುವವರ ಗೊರಕೆಯಾಗುತ್ತದೆ.' (ಸಾ.ವಿ.ಸ್ವ. ಪುಟ, 27). 'ಸಾಹಿತ್ಯಕ್ಕೆ ಜೀವನವು ಬಿಂಬ; ಜೀವನವು ಸಾಹಿತ್ಯಕ್ಕೆ ಬಿಂಬ'. (ಸಾ.ವಿ.ಸ್ವ. ಪುಟ, 27). 'ಶಬ್ದದಿಂದ ಭಾವನೆಯೂ, ಭಾವನೆಯಿಂದ ಶಬ್ದವೂ ಪ್ರಕಟವಾಗುವುದು'. (ಸಾ.ವಿ.ಸ್ವ. ಪುಟ, 97). 'ಶೃತಿಯು ದಿಟವನ್ನು ಕೀರ್ತಿಸುವುದು; ಕೃತಿಯು ಸಟೆಯನ್ನು ಬಣ್ಣಿಸುವುದು. ಶೃತಿಯಲ್ಲಿ ಚೆಲುವೂ ಸತ್ಯವೂ ತಾನೇ ತಾನಾಗಿರುವುದು. ಕೃತಿಯಲ್ಲಿ ಸುರೂಪ, ಕುರೂಪಗಳು ಸತ್ಯ, ಮಿಥ್ಯೆಗಳು ಕಲೆಬೆರೆತುಹೋಗುವುವು '. (ಸಾ.ವಿ.ಸ್ವ. ಪುಟ, 172). 'ಇಂದಿನ ವಿಮರ್ಶನ ಪ್ರಕಾರವು ಆಂಗ್ಲ ಸಾಹಿತ್ಯ ಸಂಸ್ಕಾರದಿಂದ ಬಂದುದು. . . . ಗಾಳಿ, ಬೆಳಕುಗಳಷ್ಟೇ ಪಶ್ಚಿಮದವು. ಆದರೆ ಕಣ್ಣು, ಮೂಗುಗಳು ನಮ್ಮವೇ. . '.(ಸಾ.ವಿ.ಸ್ವ. ಪುಟ, 303). 'ಇಂದಿನ ಜನಸಾಮಾನ್ಯಕ್ಕೆ ಇರುವ ಚಿಂತೆ

Scanned with CamScanner

ಹೊಟ್ಟೆಯ ಚಿಂತೆ, ಹೊಟ್ಟೆಗೆ ಬದಂವರ ಚಿಂತೆ, ಪರಸ್ಪರರ ಹೊಟ್ಟೆಕಿಚ್ಚಿನ ಚಿಂತೆ. ಮಾನವಕುಲದಲ್ಲಿ ಅಸೂಯೆಯ ಆಚಾರ ವಿಪರೀತವಾಗಿದೆ. ಮೈತ್ರಿಯ ಬಾಯ್ಪಡುಕತನ ಸಾಕಷ್ಟಿದೆ. ಇದು ಜೀವನ ಧರ್ಮ ಎನಿಸುವುದಿಲ್ಲ. ಇದು ಸಾವಿನ ಧರ್ಮ ಆಗಬಹುದು. ಸಾವಿಗೆ ಉತ್ತರ ಪ್ರೇಮದ ಅಮೃತ ಧರ್ಮದಲ್ಲಿದೆ. ಆದರೆ, ಆ ಬೆಳಕು ಇಂದಿನ ಭೂಮಂಡಲದಲ್ಲಿ ಮಾನವ ಜಾತಿ ವೈವಿಧ್ಯವನ್ನು ಒಪ್ಪಿಕೊಂಡೂ ಹೃದಯ ಸಾಮಂಜಸ್ಯ ಬಳಕೆಗೆ ತರಲು ಸಮರ್ಥವಿಲ್ಲ. ಇಲ್ಲಿ ಬೆಳಕು–ಕತ್ತಲೆಯ ಸಂಧಿಕಾಲದ ಜೂಜಿನ ಆಟ ನಡೆದಿದೆ.' (ಸಾ.ವಿ.ಸ್ವ. ಪುಟ, 729)

ನಮ್ಮ ಮುಂದೆ ಇರುವ ವಸ್ತುಸ್ಥಿತಿಯನ್ನು ನಾವು ನಮ್ಮ ಊಹೆಗೆ, ಕಲ್ಪನೆಗೆ, ಮನಸ್ಸಿಗೆ, ಬುದ್ಧಿಗೆ, ಪಂಚೇಂದ್ರಿಯಗಳಿಗೆ ತಂದುಕೊಳ್ಳುವುದು ಹೇಗೆ ಎಂಬುದು. ಇದು ಅನುಭವ ಹಾಗೂ ಜ್ಞಾನಕ್ಕೆ ಸಂಬಂಧಿಸಿದಂತೆ ಅತ್ಯಂತ ಮೂಲಭೂತ ಗ್ರಹಿಕೆಯಾಗಿದೆ. ಈ ನಿಟ್ಟಿನಲ್ಲಿ ಬೇಂದ್ರೆ ಅವರು ಅರವಿಂದರಿಂದ ಪಡೆದುದನ್ನು ಮತ್ತು ಕಪಿಲಮುನಿಯಿಂದ ಪಡೆದುದನ್ನು ಸಾಮರಸ್ಯಗೊಳಿಸುತ್ತಾರೆ. ಹೇಗೆ ಎಂದರೆ ಜಡ–ಚೇತನ, ಅಂತರಂಗ–ಬಹಿರಂಗ, ಪೂರ್ವ–ಪಶ್ಚಿಮ, ಅನುಭವ ಮತ್ತು ತರ್ಕ, ಊಹೆ ಮತ್ತು ಕಲ್ಪನೆ. ಇವು ಪ್ರತ್ಯೇಕ ಪ್ರತ್ಯೇಕ ಅಲ್ಲ; ಒಂದರ ಒಳಗಡೆ ಒಂದು ಇವೆ ಮತ್ತು ಒಂದರ ಒಳಗಡೆ ಒಂದು ಇರಲೇಬೇಕು. ಹೀಗಿರುವುದೇ ನಿಜವಾದ ದರ್ಶನ. ಯಾವುದನ್ನೂ ಒಂದು ದಿಕ್ಕಿನಿಂದ ಮತ್ತು ಜಡ ಎನ್ನುವ ಸ್ಥಿತಿಯಲ್ಲಿ ಗ್ರಹಿಸಬಾರದು ಎಂಬುದು ಇಲ್ಲಿ ಬಹಳ ಮುಖ್ಯವಾದುದು. ಕಪಿಲಮುನಿ ತನ್ನ ಸಾಂಖ್ಯ ದರ್ಶನದಲ್ಲಿ ಬಹಳ ಮುಖ್ಯವಾಗಿ ಪ್ರತಿಪಾದನೆ ಮಾಡಿದ್ದು, ಇಡೀ ಜಗತ್ತು ನಿತ್ಯ ಚಲನಶೀಲ ಮತ್ತು ನಿತ್ಯ ಪರಿವರ್ತನಾಶೀಲ ಎಂದು. ಮತ್ತೊಂದು ಮುಖ್ಯವಾದ ವ್ಯಾಖ್ಯಾನ ಈ ಸೃಷ್ಟಿಗೆ ಸೃಷ್ಟಿಕರ್ತ ಇಲ್ಲ; ಮತ್ತು ಸೃಷ್ಟಿಕರ್ತನಿಂದ ಬ್ರಹ್ಮಾಂಡ ಸೃಷ್ಟಿಯಾಗಿಲ್ಲ. ಪರಿವರ್ತನೆಯ ಬಗೆಗೆ ನಂಬಿಕೆ ಇರುವವರು ಸಮಾಜದಲ್ಲಿ ಹಾಗೂ ಇಡೀ ವ್ಯವಸ್ಥೆಯಲ್ಲೂ ಕೂಡಾ ಪರಿವರ್ತನೆಯನ್ನು ಬಯಸುತ್ತಾರೆ. ಅಂತಹ ಆಲೋಚನೆಗಳನ್ನು, ಚಿಂತನೆ ಹಾಗೂ ಬರವಣಿಗೆಯನ್ನು ಸೃಷ್ಟಿ ಮಾಡುತ್ತಾರೆ.

ಬೇಂದ್ರೆಯವರು 'ನಾವೆಲ್ಲರೂ ಒಂದೇ' ಎನ್ನುವ ಲೇಖನದಲ್ಲಿ ಹೀಗೆ ಬರೆದಿದ್ದಾರೆ: "ಭಾರತದಲ್ಲಿ ವಿವಿಧ ಜಾತಿಗಳಿವೆ, ವಿವಿಧ ಪಂಥಗಳಿವೆ, ವಿವಿಧ ಭಾಷೆಗಳಿವೆ. ಆದರೆ ಒಂದೇ ಮತವನ್ನು ಉಳಿಸಿ ಎಲ್ಲ ಮತಗಳನ್ನು ಒಡೆದು ಹಾಕುವ ಸಂಕಲ್ಪವನ್ನು ಭಾರತ ರಾಷ್ಟ್ರವು ಎಂದಿಗೂ ಮಾಡಬಾರದು." ಈ ಮಾತು ಇಂದಿಗೆ ಬಹಳ ಮುಖ್ಯವಾದುದು. ಬೇಂದ್ರೆಯವರ ಸಾಹಿತ್ಯ ಕುರಿತಾದ ವ್ಯಾಖ್ಯಾನ ನಮಗೆ ಕೆಲವು ಕಡೆ ಮಾಹಿತಿ ಪ್ರಧಾನವಾಗಿ, ಮತ್ತೆ ಕೆಲವು ಕಡೆ ವಿವರಣೆ ಪ್ರಧಾನವಾಗಿ, ಇನ್ನು ಕೆಲವು ಕಡೆ ವಿಶ್ಲೇಷಣೆ ಪ್ರಧಾನವಾಗಿ ಮತ್ತು ವ್ಯಾಖ್ಯಾನ ಪ್ರಧಾನವಾಗಿ

ಕಾಣಿಸುತ್ತದೆ. ಬೇಂದ್ರೆಯವರ ವ್ಯಾಖ್ಯಾನಪ್ರಧಾನ ಬರವಣಿಗೆಯಲ್ಲೂ ಕೂಡಾ ವಿಷಯ ಗ್ರಹಿಕೆ, ವಾಕ್ಯ ರಚನೆ ಮತ್ತು ಮಂಡನೆ ಸಂಕೀರ್ಣವಾಗಿಲ್ಲ. ಸರಳ ಮತ್ತು ನೇರ. ಇದು ಬೇಂದ್ರೆಯವರದೇ ವಿಶಿಷ್ಟವಾದ ಪಾಂಡಿತ್ಯ, ಪ್ರತಿಭೆ ಹಾಗೂ ಲೇಖನ ಕಲೆ.

ಅತ್ಯಂತ ಸರಳವಾಗಿ ಬರೆಯುವುದು ಸುಲಭದ ಕೆಲಸವಲ್ಲ. ವಿಷಯವನ್ನು ಆಳವಾಗಿ ಗ್ರಹಿಸಿ, ಅದನ್ನು ತಮ್ಮ ಅನುಭವವನ್ನಾಗಿ, ತಿಳಿವಳಿಕೆಯನ್ನಾಗಿ ಮಾಡಿಕೊಂಡಾಗ ಮಾತ್ರ ಇದು ಸಾಧ್ಯವಾಗುತ್ತದೆ. ಆದರೆ ಒಂದೇ ಒಂದು ಅಪವಾದ ಎಂದರೆ ಕಪಿಲಮುನಿ ಮತ್ತು ಅರವಿಂದರನ್ನು ಒಟ್ಟೊಟ್ಟಿಗೆ ಚರ್ಚೆ ಮಾಡುವಾಗ ಅಲ್ಲಿ ನಿರೂಪಣೆ ಮತ್ತು ಮಂಡನೆ ಸಂಕೀರ್ಣವಾಗಿದೆ. ಕೆಲವು ಕಡೆ ಇದು ಗೊಂದಲವಾಗಿಯೂ ಕಾಣಿಸುತ್ತದೆ. ಈ ಸಂಕೀರ್ಣತೆ ಮತ್ತು ಗೊಂದಲಗಳು ಕೇವಲ ಗೊಂದಲಗಳಾಗಿರದೆ ತತ್ವಶಾಸ್ತ್ರದ ಆಳಕ್ಕೆ ಹೋದಂತೆ ಸ್ವತಃ ಬೇಂದ್ರೆಯವರಿಗೇ ಕೆಲವು ಗೊಂದಲ, ಅಸ್ಪಷ್ಟತೆಗಳು ಎದುರಾದವೇನೊ ಎನಿಸುವಂತಿದೆ.

ಬೇಂದ್ರೆಯವರು ಕನ್ನಡ ಚಿಂತನೆ ಹಾಗೂ ವೈಚಾರಿಕತೆಗೆ ಹಾಗೂ ಕನ್ನಡ ಸಾಹಿತ್ಯಸಂಸ್ಕೃತಿಗೆ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಆದರೆ ಬೇಂದ್ರೆಯವರನ್ನು ಕನ್ನಡ ವಿಮರ್ಶೆಯು ಕನ್ನಡದ ಮುಖ್ಯ ವಿಮರ್ಶಕ ಎಂದು ಏಕೆ ಪರಿಗಣಿಸಲಿಲ್ಲ? ಇದು ಬಹಳ ಮುಖ್ಯವಾದ ಪ್ರಶ್ನೆ ಮತ್ತು ತುಂಬಾ ವಿಷಾದದ ಪ್ರಶ್ನೆಯು ಕೂಡ ಆಗಿದೆ. ನಮ್ಮ ಜೊತೆಯಲ್ಲಿ ಇರುವ ಬಸವರಾಜ ಡೋಣೂರ್ ಬೇಂದ್ರೆಯವರನ್ನು ಪಾಶ್ಚಾತ್ಯ ವಿಮರ್ಶಕರ ಜೊತೆಗಿಟ್ಟು ಓದಿದ್ದಾರೆ. ಬೇಂದ್ರೆಯವರು ಬಹಳ ದೊಡ್ಡ ಕವಿಯೆಂಬ ವಿವರಣೆ, ವಿಶೇಷಣಗಳನ್ನು ಕೊಡಬೇಕಾಗಿಲ್ಲ; ಅವರು ದೊಡ್ಡ ಕವಿಯೇ. ಆದರೆ ಇದರ ಜೊತೆಗೆ ನಾವು ಒತ್ತಿ ಹೇಳಬೇಕಾದುದು ಬೇಂದ್ರೆಯವರು ಶಕ್ತಿಶಾಲಿ ಗದ್ಯ ಬರಹಗಾರರು ಎಂದು. ಅವರ ಕಾವ್ಯಕ್ಕೆ ಕೊಟ್ಟ ಮಹತ್ವವನ್ನು, ಒತ್ತನ್ನು ಅವರ ವಿಮರ್ಶೆ ಮತ್ತು ಗದ್ಯಬರಹಗಳಿಗೆ ಕೊಡಬೇಕು. 'ಸಾಹಿತ್ಯದ ವಿರಾಟ್ ಸ್ವರೂಪ' ಎನ್ನುವ ಲೇಖನವು ಶಿವಮೊಗ್ಗ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಭಾಷಣ. ಅದರ ಒಂದೊಂದು ಭಾಗವೂ, ಒಂದೊಂದು ವಾಕ್ಯವೂ ಇವತ್ತಿಗೂ ಸಹ ಪ್ರಸ್ತುತ. ಭಾಷೆ, ಸಾಹಿತ್ಯ, ಸಮಾಜ, ಸಂಸ್ಕೃತಿ ಮುಂತಾದ ಹಲವು ವಿಷಯಗಳ ಬಗೆಗೆ ಅತ್ಯಂತ ಸೂಕ್ಷ್ಮ ಒಳನೋಟಗಳನ್ನು ಅದು ಹೊಂದಿದೆ. ಇವರ ಗದ್ಯ ಬರವಣಿಗೆಯನ್ನು ನಮ್ಮ ಸಾಹಿತ್ಯ ವಿಮರ್ಶೆ ತನ್ನೊಳಗೆ ತೆಗೆದುಕೊಳ್ಳಬೇಕು. ಅವರು ಏನಾದರೂ ಶಿಷ್ಟ ಕನ್ನಡವನ್ನು ಬಳಸಿದ್ದರೆ ಗದ್ಯ ಬರವಣಿಗೆಗೆ ಇನ್ನಷ್ಟು ದೂರ ಆಗುತ್ತಿದ್ದರು. ನವೋದಯ ಸಂದರ್ಭದಲ್ಲಿ ಧಾರವಾಡ, ಮೈಸೂರು, ಬೆಂಗಳೂರು ಮತ್ತು ಮಂಗಳೂರು ಹೀಗೆ ಪ್ರಧಾನವಾಗಿ ನಾಲ್ಕು ಕೇಂದ್ರಗಳಿದ್ದವು.

Scanned with CamScanner

ಹೊಟ್ಟೆಯ ಚಿಂತೆ, ಹೊಟ್ಟೆಗೆ ಬದಂವರ ಚಿಂತೆ, ಪರಸ್ಪರರ ಹೊಟ್ಟೆಕಿಚ್ಚಿನ ಚಿಂತೆ. ಮಾನವಕುಲದಲ್ಲಿ ಅಸೂಯೆಯ ಆಚಾರ ವಿಪರೀತವಾಗಿದೆ. ಮೈತ್ರಿಯ ಬಾಯ್ಬಡುಕತನ ಸಾಕಷ್ಟಿದೆ. ಇದು ಜೀವನ ಧರ್ಮ ಎನಿಸುವುದಿಲ್ಲ. ಇದು ಸಾವಿನ ಧರ್ಮ ಆಗಬಹುದು. ಸಾವಿಗೆ ಉತ್ತರ ಪ್ರೇಮದ ಅಮೃತ ಧರ್ಮದಲ್ಲಿದೆ. ಆದರೆ, ಆ ಬೆಳಕು ಇಂದಿನ ಭೂಮಂಡಲದಲ್ಲಿ ಮಾನವ ಜಾತಿ ವೈವಿಧ್ಯವನ್ನು ಒಪ್ಪಿಕೊಂಡೂ ಹೃದಯ ಸಾಮಂಜಸ್ಯ ಬಳಕೆಗೆ ತರಲು ಸಮರ್ಥವಿಲ್ಲ. ಇಲ್ಲಿ ಬೆಳಕು–ಕತ್ತಲೆಯ ಸಂಧಿಕಾಲದ ಜೂಜಿನ ಆಟ ನಡೆದಿದೆ.' (ಸಾ.ವಿ.ಸ್ವ, ಪುಟ, 729)

ನಮ್ಮ ಮುಂದೆ ಇರುವ ವಸ್ತುಸ್ಥಿತಿಯನ್ನು ನಾವು ನಮ್ಮ ಊಹೆಗೆ, ಕಲ್ಪನೆಗೆ, ಮನಸ್ಸಿಗೆ, ಬುದ್ಧಿಗೆ, ಪಂಚೇಂದ್ರಿಯಗಳಿಗೆ ತಂದುಕೊಳ್ಳುವುದು ಹೇಗೆ ಎಂಬುದು. ಇದು ಅನುಭವ ಹಾಗೂ ಜ್ಞಾನಕ್ಕೆ ಸಂಬಂಧಿಸಿದಂತೆ ಅತ್ಯಂತ ಮೂಲಭೂತ ಗ್ರಹಿಕೆಯಾಗಿದೆ. ಈ ನಿಟ್ಟಿನಲ್ಲಿ ಬೇಂದ್ರೆ ಅವರು ಅರವಿಂದರಿಂದ ಪಡೆದುದನ್ನು ಮತ್ತು ಕಪಿಲಮುನಿಯಿಂದ ಪಡೆದುದನ್ನು ಸಾಮರಸ್ಯಗೊಳಿಸುತ್ತಾರೆ. ಹೇಗೆ ಎಂದರೆ ಜಡ–ಚೇತನ, ಅಂತರಂಗ–ಬಹಿರಂಗ, ಪೂರ್ವ–ಪಶ್ಚಿಮ, ಅನುಭವ ಮತ್ತು ತರ್ಕ, ಊಹೆ ಮತ್ತು ಕಲ್ಪನೆ. ಇವು ಪ್ರತ್ಯೇಕ ಪ್ರತ್ಯೇಕ ಅಲ್ಲ; ಒಂದರ ಒಳಗಡೆ ಒಂದು ಇವೆ ಮತ್ತು ಒಂದರ ಒಳಗಡೆ ಒಂದು ಇರಲೇಬೇಕು. ಹೀಗಿರುವುದೇ ನಿಜವಾದ ದರ್ಶನ. ಯಾವುದನ್ನೂ ಒಂದು ದಿಕ್ಕಿನಿಂದ ಮತ್ತು ಜಡ ಎನ್ನುವ ಸ್ಥಿತಿಯಲ್ಲಿ ಗ್ರಹಿಸಬಾರದು ಎಂಬುದು ಇಲ್ಲಿ ಬಹಳ ಮುಖ್ಯವಾದುದು. ಕಪಿಲಮುನಿ ತನ್ನ ಸಾಂಖ್ಯ ದರ್ಶನದಲ್ಲಿ ಬಹಳ ಮುಖ್ಯವಾಗಿ ಪ್ರತಿಪಾದನೆ ಮಾಡಿದ್ದು, ಇಡೀ ಜಗತ್ತು ನಿತ್ಯ ಚಲನಶೀಲ ಮತ್ತು ನಿತ್ಯ ಪರಿವರ್ತನಾಶೀಲ ಎಂದು. ಮತ್ತೊಂದು ಮುಖ್ಯವಾದ ವ್ಯಾಖ್ಯಾನ ಈ ಸೃಷ್ಟಿಗೆ ಸೃಷ್ಟಿಕರ್ತ ಇಲ್ಲ; ಮತ್ತು ಸೃಷ್ಟಿಕರ್ತನಿಂದ ಬ್ರಹ್ಮಾಂಡ ಸೃಷ್ಟಿಯಾಗಿಲ್ಲ. ಪರಿವರ್ತನೆಯ ಬಗೆಗೆ ನಂಬಿಕೆ ಇರುವವರು ಸಮಾಜದಲ್ಲಿ ಹಾಗೂ ಇಡೀ ವ್ಯವಸ್ಥೆಯಲ್ಲೂ ಕೂಡಾ ಪರಿವರ್ತನೆಯನ್ನು ಬಯಸುತ್ತಾರೆ. ಅಂತಹ ಆಲೋಚನೆಗಳನ್ನು, ಚಿಂತನೆ ಹಾಗೂ ಬರವಣಿಗೆಯನ್ನು ಸೃಷ್ಟಿ ಮಾಡುತ್ತಾರೆ.

ಬೇಂದ್ರೆಯವರು 'ನಾವೆಲ್ಲರೂ ಒಂದೇ' ಎನ್ನುವ ಲೇಖನದಲ್ಲಿ ಹೀಗೆ ಬರೆದಿದ್ದಾರೆ: "ಭಾರತದಲ್ಲಿ ವಿವಿಧ ಜಾತಿಗಳಿವೆ, ವಿವಿಧ ಪಂಥಗಳಿವೆ, ವಿವಿಧ ಭಾಷೆಗಳಿವೆ. ಆದರೆ ಒಂದೇ ಮತವನ್ನು ಉಳಿಸಿ ಎಲ್ಲ ಮತಗಳನ್ನು ಒಡೆದು ಹಾಕುವ ಸಂಕಲ್ಪವನ್ನು ಭಾರತ ರಾಷ್ಟ್ರವು ಎಂದಿಗೂ ಮಾಡಬಾರದು." ಈ ಮಾತು ಇಂದಿಗೆ ಬಹಳ ಮುಖ್ಯವಾದುದು. ಬೇಂದ್ರೆಯವರ ಸಾಹಿತ್ಯ ಕುರಿತಾದ ವ್ಯಾಖ್ಯಾನ ನಮಗೆ ಕೆಲವು ಕಡೆ ಮಾಹಿತಿ ಪ್ರಧಾನವಾಗಿ, ಮತ್ತೆ ಕೆಲವು ಕಡೆ ವಿವರಣೆ ಪ್ರಧಾನವಾಗಿ, ಇನ್ನು ಕೆಲವು ಕಡೆ ವಿಶ್ಲೇಷಣೆ ಪ್ರಧಾನವಾಗಿ ಮತ್ತು ವ್ಯಾಖ್ಯಾನ ಪ್ರಧಾನವಾಗಿ

ಕಾಣಿಸುತ್ತದೆ. ಬೇಂದ್ರೆಯವರ ವ್ಯಾಖ್ಯಾನಪ್ರಧಾನ ಬರವಣಿಗೆಯಲ್ಲೂ ಕೂಡಾ ವಿಷಯ ಗ್ರಹಿಕೆ, ವಾಕ್ಯ ರಚನೆ ಮತ್ತು ಮಂಡನೆ ಸಂಕೀರ್ಣವಾಗಿಲ್ಲ. ಸರಳ ಮತ್ತು ನೇರ. ಇದು ಬೇಂದ್ರೆಯವರದೇ ವಿಶಿಷ್ಟವಾದ ಪಾಂಡಿತ್ಯ, ಪ್ರತಿಭೆ ಹಾಗೂ ಲೇಖನ ಕಲೆ.

ಅತ್ಯಂತ ಸರಳವಾಗಿ ಬರೆಯುವುದು ಸುಲಭದ ಕೆಲಸವಲ್ಲ. ವಿಷಯವನ್ನು ಆಳವಾಗಿ ಗ್ರಹಿಸಿ, ಅದನ್ನು ತಮ್ಮ ಅನುಭವವನ್ನಾಗಿ, ತಿಳಿವಳಿಕೆಯನ್ನಾಗಿ ಮಾಡಿಕೊಂಡಾಗ ಮಾತ್ರ ಇದು ಸಾಧ್ಯವಾಗುತ್ತದೆ. ಆದರೆ ಒಂದೇ ಒಂದು ಅಪವಾದ ಎಂದರೆ ಕಪಿಲಮುನಿ ಮತ್ತು ಅರವಿಂದರನ್ನು ಒಟ್ಟೊಟ್ಟಿಗೆ ಚರ್ಚೆ ಮಾಡುವಾಗ ಅಲ್ಲಿ ನಿರೂಪಣೆ ಮತ್ತು ಮಂಡನೆ ಸಂಕೀರ್ಣವಾಗಿದೆ. ಕೆಲವು ಕಡೆ ಇದು ಗೊಂದಲವಾಗಿಯೂ ಕಾಣಿಸುತ್ತದೆ. ಈ ಸಂಕೀರ್ಣತೆ ಮತ್ತು ಗೊಂದಲಗಳು ಕೇವಲ ಗೊಂದಲಗಳಾಗಿರದೆ ತತ್ವಶಾಸ್ತ್ರದ ಆಳಕ್ಕೆ ಹೋದಂತೆ ಸ್ವತಃ ಬೇಂದ್ರೆಯವರಿಗೇ ಕೆಲವು ಗೊಂದಲ, ಅಸ್ಪಷ್ಟತೆಗಳು ಎದುರಾದವೇನೊ ಎನಿಸುವಂತಿದೆ.

ಬೇಂದ್ರೆಯವರು ಕನ್ನಡ ಚಿಂತನೆ ಹಾಗೂ ವೈಚಾರಿಕತೆಗೆ ಹಾಗೂ ಕನ್ನಡ ಸಾಹಿತ್ಯಸಂಸ್ಕೃತಿಗೆ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಆದರೆ ಬೇಂದ್ರೆಯವರನ್ನು ಕನ್ನಡ ವಿಮರ್ಶೆಯು ಕನ್ನಡದ ಮುಖ್ಯ ವಿಮರ್ಶಕ ಎಂದು ಏಕೆ ಪರಿಗಣಿಸಲಿಲ್ಲ? ಇದು ಬಹಳ ಮುಖ್ಯವಾದ ಪ್ರಶ್ನೆ ಮತ್ತು ತುಂಬಾ ವಿಷಾದದ ಪ್ರಶ್ನೆಯು ಕೂಡ ಆಗಿದೆ. ನಮ್ಮ ಜೊತೆಯಲ್ಲಿ ಇರುವ ಬಸವರಾಜ ಡೋಣೂರ್ ಬೇಂದ್ರೆಯವರನ್ನು ಪಾಶ್ಚಾತ್ಯ ವಿಮರ್ಶಕರ ಜೊತೆಗಿಟ್ಟು ಓದಿದ್ದಾರೆ. ಬೇಂದ್ರೆಯವರು ಬಹಳ ದೊಡ್ಡ ಕವಿಯೆಂಬ ವಿವರಣೆ, ವಿಶೇಷಣಗಳನ್ನು ಕೊಡಬೇಕಾಗಿಲ್ಲ; ಅವರು ದೊಡ್ಡ ಕವಿಯೇ. ಆದರೆ ಇದರ ಜೊತೆಗೆ ನಾವು ಒತ್ತಿ ಹೇಳಬೇಕಾದುದು ಬೇಂದ್ರೆಯವರು ಶಕ್ತಿಶಾಲಿ ಗದ್ಯ ಬರಹಗಾರರು ಎಂದು. ಅವರ ಕಾವ್ಯಕ್ಕೆ ಕೊಟ್ಟ ಮಹತ್ವವನ್ನು, ಒತ್ತನ್ನು ಅವರ ವಿಮರ್ಶೆ ಮತ್ತು ಗದ್ಯಬರಹಗಳಿಗೆ ಕೊಡಬೇಕು. 'ಸಾಹಿತ್ಯದ ವಿರಾಟ್ ಸ್ವರೂಪ' ಎನ್ನುವ ಲೇಖನವು ಶಿವಮೊಗ್ಗ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಭಾಷಣ. ಅದರ ಒಂದೊಂದು ಭಾಗವೂ, ಒಂದೊಂದು ವಾಕ್ಯವೂ ಇವತ್ತಿಗೂ ಸಹ ಪ್ರಸ್ತುತ. ಭಾಷೆ, ಸಾಹಿತ್ಯ, ಸಮಾಜ, ಸಂಸ್ಕೃತಿ ಮುಂತಾದ ಹಲವು ವಿಷಯಗಳ ಬಗೆಗೆ ಅತ್ಯಂತ ಸೂಕ್ಷ್ಮ ಒಳನೋಟಗಳನ್ನು ಅದು ಹೊಂದಿದೆ. ಇವರ ಗದ್ಯ ಬರವಣಿಗೆಯನ್ನು ನಮ್ಮ ಸಾಹಿತ್ಯ ವಿಮರ್ಶೆ ತನ್ನೊಳಗೆ ತೆಗೆದುಕೊಳ್ಳಬೇಕು. ಅವರು ಏನಾದರೂ ಶಿಷ್ಟ ಕನ್ನಡವನ್ನು ಬಳಸಿದ್ದರೆ ಗದ್ಯ ಬರವಣಿಗೆಗೆ ಇನ್ನಷ್ಟು ದೂರ ಆಗುತ್ತಿದ್ದರು. ನವೋದಯ ಸಂದರ್ಭದಲ್ಲಿ ಧಾರವಾಡ, ಮೈಸೂರು, ಬೆಂಗಳೂರು ಮತ್ತು ಮಂಗಳೂರು ಹೀಗೆ ಪ್ರಧಾನವಾಗಿ ನಾಲ್ಕು ಕೇಂದ್ರಗಳಿದ್ದವು.

Scanned with CamScanner

ಬೇಂದ್ರೆಯವರು ಔಪಚಾರಿಕವಾಗಿ ವಿಶ್ವವಿದ್ಯಾಲಯದಿಂದ ಹೊರಗಿದ್ದರು. ಕರ್ನಾಟಕದಿಂದಲೂ ಹೊರಗಿದ್ದರು. ಆದರೆ ಅವರು ಕನ್ನಡ ಅರಿವನ್ನು, ತಿಳಿವಳಿಕೆಯನ್ನು, ವಿವೇಕವನ್ನು ಕಟ್ಟಿದ ಕ್ರಮ ಅತ್ಯಂತ ಶಕ್ತಿಶಾಲಿಯಾದುದು. ಈ ವಿಷಯದಲ್ಲಿ ಬೇಂದ್ರೆಯವರಿಗೆ ಬೇಂದ್ರೆಯವರೇ ಸಾಟಿ.

ಸ್ನಾತಕೋತ್ತರ ಪದವಿಗಳಲ್ಲಿ ಮತ್ತು ಪಿಎಚ್.ಡಿ. ಅಧ್ಯಯನಗಳಲ್ಲಿ ಇಂಗ್ಲಿಷ್ ಸಾಹಿತ್ಯ ವಿಮರ್ಶೆಯ ಪ್ರಸ್ಥಾನಗಳನ್ನು ಬಲಾತ್ಕಾರವಾಗಿ ಮತ್ತು ಯಜಮಾನಿಕೆಯಿಂದ ಹೇರಲಾಗಿದೆ. ಅಲ್ಲಿ ವಿದ್ಯಾರ್ಥಿಗಳಿಗೆ ಆಯ್ಕೆಯೇ ಇಲ್ಲದಂತೆ ಮಾಡಲಾಗಿದೆ. ಸಾಹಿತ್ಯ ವಿಮರ್ಶೆಯ ಬಗೆಗೆ ಅವರಲ್ಲಿ ಕೀಳರಿಮೆಯನ್ನು ಹುಟ್ಟುಹಾಕಲಾಗಿದೆ. ಅವರನ್ನು ಪರಾವಲಂಬಿಗಳನ್ನಾಗಿ, ಅಸಹಾಯಕರನ್ನಾಗಿ ಮಾಡಲಾಗಿದೆ. ಅವರ ಸ್ವತಂತ್ರ ಆಲೋಚನೆಯನ್ನು ನಾಶ ಮಾಡಲಾಗಿದೆ. ಈ ದುಃಸ್ಥಿತಿಯಿಂದ ಹೊರಬರಬೇಕಾದರೆ ಬೇಂದ್ರೆಯವರ ಸಾಹಿತ್ಯ ವಿಮರ್ಶೆಯ ಬರವಣಿಗೆಗಳನ್ನು ಅಗತ್ಯವಾಗಿ ಮತ್ತು ಕಡ್ಡಾಯವಾಗಿ ಓದಿಸಬೇಕು; ಓದಲು ಅನುವು ಮಾಡಿಕೊಡಬೇಕು. 1980ರ ದಶಕದಲ್ಲೆ ಡಾ. ಕೆ.ವಿ. ನಾರಾಯಣ ಅವರು "ಕನ್ನಡಿಗಳು ಇನ್ನು ಸಾಕು" ಎಂಬ ಲೇಖನವನ್ನು ಬರೆದಿದ್ದರು. ಅದನ್ನೂ ಕೂಡ ಕನ್ನಡ ವಿಮರ್ಶೆ ಬದಿಗೆ ಸರಿಸಿತು.

ಡಾ. ಸಿ.ಪಿ. ಕೃಷ್ಣಕುಮಾರ್ "ಮಹಾಕವಿಯೊಡನೆ ಮಾತುಕತೆ" ಎಂಬ ಒಂದು ಕಿರುಪುಸ್ತಕ ಬರೆದಿದ್ದಾರೆ. ಇದು ಆಗಾಗ ಕುವೆಂಪು ಅವರ ಜೊತೆ ಸಾಹಿತ್ಯ ಸಂಸ್ಕೃತಿ ಕುರಿತು ಅವರು ನಡೆಸಿರುವ ಸಂಭಾಷಣೆಯ ಭಾಗ. ಅದರಲ್ಲಿ ಒಂದು ಕಡೆ, ಸಿ.ಪಿ.ಕೆ. 'ಸಾಹಿತ್ಯ ವಿಮರ್ಶೆ ಎಂದರೆ ಏನು' ಎಂದು ಕುವೆಂಪು ಅವರನ್ನು ಕೇಳುತ್ತಾರೆ. ಅದಕ್ಕೆ ಕುವೆಂಪು ಪ್ರತಿಕ್ರಿಯಿಸುತ್ತಾ, 'ಕನ್ನಡದಲ್ಲಿ ಎರಡೇ ತರ ವಿಮರ್ಶೆ ಇರುವುದು. ಒಂದು ಜೈ ವಿಮರ್ಶೆ ಮತ್ತು ಬೈ ವಿಮರ್ಶೆ' ಎಂದು ಹೇಳಿದ್ದಾರೆ. ಕುವೆಂಪು ಅವರ ಪ್ರಕಾರ, ಜೈ ವಿಮರ್ಶೆಯೆಂದರೆ ಸಾಹಿತ್ಯವನ್ನೂ, ಸಾಹಿತಿಯನ್ನೂ ಹೊಗಳುತ್ತಾ ಹೋಗುವುದು. ಬೈ ವಿಮರ್ಶೆಯೆಂದರೆ ಸಾಹಿತ್ಯವನ್ನೂ, ಸಾಹಿತಿಯನ್ನೂ ಬೈಯ್ಯುತ್ತಾ ಹೋಗುವುದು. ಆದರೆ ಬೇಂದ್ರೆಯವರ ಸಾಹಿತ್ಯ ವಿಮರ್ಶೆ ಜೈ ವಿಮರ್ಶೆಯೂ ಅಲ್ಲ; ಬೈ ವಿಮರ್ಶೆಯೂ ಅಲ್ಲ. ಇದು ಇಡೀ ಬದುಕನ್ನು ಭಾಷೆ, ಕಾವ್ಯ ಹಾಗೂ ಸಾಹಿತ್ಯದ ನೆಲೆಯಿಂದ ಅತ್ಯಂತ ಆಳವಾಗಿ ನೋಡುವ, ಅದರ ಒಳ ಪದರುಗಳ ಒಳಸೂಕ್ಷ್ಮಗಳ ಅನಂತ ವೈರುದ್ಧ್ಯಗಳನ್ನು ಬಿಡಿಸಿಟ್ಟಿರುವ ಕಲೆ. ಬದುಕನ್ನು, ಕಾವ್ಯ ಕಲೆಯನ್ನು ಅಭಿನ್ನಗೊಳಿಸಿ, ಭಾಷಿಕ ಮತ್ತು ಭಾಷಿಕವಲ್ಲದ ಅಭಿವ್ಯಕ್ತಿ ಕ್ರಮಗಳ ಒಳಹೊಕ್ಕು ಹೃದಯ, ತನು, ಮನಗಳ ಜೊತೆಗೆ ಬೆರೆಯುವಂತೆ ತೋರಿರುವ ಹಾದಿ.

ಬೇಂದ್ರೆಯವರ ಸಾಹಿತ್ಯ ವಿಮರ್ಶೆಯಿಂದ 'ಸಾಹಿತ್ಯ ವಿಮರ್ಶೆ' ಎಂಬ ಗುಣಪಾಠವನ್ನು ಮಾತ್ರ ಕಲಿಯಬೇಕಾಗಿಲ್ಲ. ಅದನ್ನು ಓದುತ್ತಾ ಇದ್ದರೆ ಕಾವ್ಯವು ನಾಟಕವಾಗುವ, ನಾಟಕವು ಕಾವ್ಯವಾಗುವ ಪ್ರಕ್ರಿಯೆ ಕಾಣುತ್ತದೆ. ಬದುಕಿನೆಲ್ಲ ಸಂಕಟಗಳನ್ನು ದಾಟುವ ಉಪಕ್ರಮ ಕಾಣುತ್ತದೆ. ಮಾನವೀಯ ನೈತಿಕತೆಯನ್ನು ಕಾಣುತ್ತೇವೆ.

ಬೇಂದ್ರೆಯವರು ಬ್ರಾಹ್ಮಣರ ಕವಿ ಅಲ್ಲ; ಬ್ರಾಹ್ಮಣಕವಿಯೂ ಅಲ್ಲ. ಬೇಂದ್ರೆಯವರು ಶೂದ್ರರ ಕವಿ ಅಲ್ಲ; ಶೂದ್ರಕವಿಯೂ ಅಲ್ಲ. ಹಾಗಾದರೆ ಬೇಂದ್ರೆಯವರು ಏನು ಎಂದು ಕೇಳಿದರೆ, ಪ್ರಾಚೀನ ಭಾರತದ ಕಪಿಲಮುನಿಯ ವಾರಸುದಾರ; ಕಪಿಲಮುನಿಯ ದರ್ಶನದ ವಾರಸುದಾರ. ಈ ವಾರಸುದಾರಿಕೆಯ ದರ್ಶನದಲ್ಲಿ ನಾವೆಲ್ಲರೂ ಸಮಾನತೆಯಿಂದ, ಸಾಮರಸ್ಯದಿಂದ, ಸಹೋದರತೆಯಿಂದ ಬದುಕಬೇಕು. ಇದು ಬೇಂದ್ರೆಯವರ ದರ್ಶನದ ಬಹಳ ದೊಡ್ಡ ಕಾಳಜಿ ಮತ್ತು ಕಾಣಿಕೆ. ಈ ದೃಷ್ಟಿಯಲ್ಲಿ ಕವಿಬೇಂದ್ರೆಯವರು ನಾಡಿನ ಜನತೆಯ ಕವಿ; ನಾಡಿನ ಜನತಾಕವಿ.

Scanned with CamScanner

Annexure – 13

ವಿಜಯಲಕ್ಷ್ಮೀ ನುಗ್ಗೇಹಳ್ಳಿ
ಜಲವೆ ಸಿರಿ
ಗರಿಕೆ

Scanned with CamScanner

Olava Siri Garike - Collection of Poems

Written by **Vijayalakshmi Nuggehalli,** Secretary (Deputy Director), APMC
Sirsi, Uttara Kannada Dist-581402
E-mail : vijaylakshmikms@gmail.com Cell : 9481608716

.....

Published by **ONE STEP AHEAD**
G. N. Shivalingappa, G.N. Koppalu, Nuggehalli post,
Channarayapatna Tq, Hasana Dist-573131.
Mob: 8861508776 / 8660637397 9448684666

.....

Copy Right : Author
Price : 120
Pages : 136
Copies : 2000
First Edition : 2020
Paper used : 80 GSM Book Print
Book size : 1/8 Demy
Cover Design : Sowmya kalyankar
Inner Design : Sheshadri Dhanagur
Edited & Processed By
VESTACRAFT, Bengaluru

.....

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

Scanned with CamScanner

ಮುನ್ನುಡಿ

ಕೆ.ಎಂ.ಎಸ್. ಅಧಿಕಾರಿ ವಿಜಯಲಕ್ಷ್ಮೀ ನುಗ್ಗೇಹಳ್ಳಿ ಇವರು ತಮ್ಮ ಅಭಿವ್ಯಕ್ತಿಗಳನ್ನು ಮೊದಲ ಕವನ ಸಂಕಲನವಾಗಿ ಪ್ರಕಟಿಸಿದ್ದಾರೆ. ಇವುಗಳಲ್ಲಿ ಕೆಲವು ಕವನಗಳು ಮೊದಲಿನವು ಅಂತ ಅನಿಸುವುದಿಲ್ಲ. ಕವಪ ಕಟ್ಟಲು ಭಾವ–ಮನಸು ಹುರಿಗೊಂಡಾಗ ಈಗಾಗಲೇ ಓದಿದ ರೂಪಗಳು ಸಿದ್ಧಗೊಂಡ ದಾರಿಯಂತೆ ತೋರಬಹುದು; ತೋರದಿರಲೂಬಹುದು. ಸಿದ್ಧರೂಪಗಳನ್ನು ಅನುಕರಿಸಿ ಬರೆಯುವುದು ಸುಲಭ; ಆದರೆ ಹೊಸರೂಪ ಹುಟ್ಟಿಸುವುದು ಕಷ್ಟ. ಈ ಸಂಕಲನದ ಹಲವು ಕವನಗಳು ಹೊಸರೂಪ ಕಾಣಲು ಹವಣಿಸಿವೆ. ಆದ್ದರಿಂದ ಇವು ಭರವಸೆಯ ರಚನೆಗಳು.

ಅನುಭವಗಳನ್ನು ತನ್ನದು ಮತ್ತು ತನ್ನದಲ್ಲದ್ದು ಎಂದು ವಿಂಗಡಿಸಿ, ಅವನ್ನು ಪರಸ್ಪರ ಮುಖಾಮುಖಿ ಮಾಡುವ, ಒಂದರ ಕಣ್ಣಿನಿಂದ ಮತ್ತೊಂದನ್ನು ನೋಡುವ ವಿನ್ಯಾಸ ಈ ರಚನೆಗಳ ಮುಖ್ಯ ಭಿತ್ತಿಯಾಗಿದೆ. ಹೆಣ್ಣಿನ ಮನಸ್ಸಿನಲ್ಲಿ ಹುಟ್ಟುವ ಭಾವಗಳನ್ನೂ, ಭಾವಗಳು ರೂಪಿಸುವ ಹೆಣ್ಣಿನ ಮನಸ್ಸನ್ನೂ ಇವುಗಳಲ್ಲಿ ಕಾಣಬಹುದು. ಹೆಣ್ಣನ್ನು ಮತ್ತು ಹೆಣ್ಣಿನ ಮನಸ್ಸನ್ನು ಮನುಷ್ಯ ಸಂಬಂಧಗಳು ನಡೆಸಿಕೊಳ್ಳುವ ಪರಿಣಾಮಗಳ ಸೂಕ್ಷ್ಮಲೋಕವೊಂದು ಇವುಗಳಲ್ಲಿ ಅನಾವರಣಗೊಂಡಿದೆ. ಹೆಣ್ಣಿಗೆ ಎದುರಾಗುವ ಇಕ್ಕಟ್ಟಿನ ಆಳವು ಅಸಹಾಯಕತೆಯ ಪಾತಾಳಕ್ಕೆ ಹೋಗದೆ, ಅದು ಗರಿ–ಕೆಯಂತೆ ಒಲವಿನ ಸಿರಿಯಾಗಿ ಚಿಗುರೊಡೆಯುವ ಭರವಸೆಯ ಭಾವವು ಕವನಗಳನ್ನು ಸೃಷ್ಟಿಸಿದೆ.

'ಎಲ್ಲವೂ ದಕ್ಕಿದೆ, ಆದರೂ ಇನ್ನೂ ಏನೋ ಬೇಕಿದೆ, ಈ ಹುಡುಕಾಟ ನಿರಂತರ...' ಎಂಬುದು ಇವುಗಳ ಕೇಂದ್ರ ಕುತೂಹಲವಾಗಿದೆ. ಬದುಕಿನ ಬಾಳನ್ನೂ, ಬಾಳಿನ ಬದುಕನ್ನೂ ಬಗೆದು ನೋಡಲು ಇವು ಕಾತರಿಸಿವೆ. ಮತ್ತೆ ಮತ್ತೆ ಮೌನಕ್ಕೆ ಎಳೆಸುವ, ಇದರ ಪರಿಣಾಮವಾಗಿಯೆ ಮಾತು ಹುಟ್ಟುವ, ಹುಟ್ಟಿದ ಮಾತು ಮತ್ತೆ ಮೌನವಾಗುವ ಚಲನಶೀಲ ಸೂಕ್ಷ್ಮ ಲಯ ಇವುಗಳ ಅಂತರಾಳವಾಗಿದೆ. ಈ ಚಲನೆಯಿಂದಲೆ ಮನುಷ್ಯ ಸ್ವಭಾವದ ಆಳವನ್ನು ಅರಿಯಲು, ಅದನ್ನು ತೋರಿಸಲು ಮತ್ತು ಕವಿತೆಯ ಅಭಿವ್ಯಕ್ತಿಗೆ ಹೊಸರೂಪ ಕೊಡಲು ಇವು ತೊಡಗಿವೆ. ವಿಜಯಲಕ್ಷ್ಮೀ ನುಗ್ಗೇಹಳ್ಳಿಯವರೊಳಗಿನ ಕವಿ ಶಕ್ತಿಶಾಲಿ ಆಗುತ್ತಿರುವ ಸೂಚನೆಗಳನ್ನು ಇವು ಕಾಣಿಸಿವೆ.

▸ **ಡಾ. ಬಿ.ಎಂ. ಪುಟ್ಟಯ್ಯ**
ಕನ್ನಡ ವಿಶ್ವವಿದ್ಯಾಲಯ
ಹಂಪಿ

Scanned with CamScanner

Annexure – 14



ಸಂಪಾದಕ: ಟಿ ಎಸ್ ಗೊರವರ

ಸಂಗಾತ

ತ್ರೈಮಾಸಿಕ ಸಾಹಿತ್ಯ ಪತ್ರಿಕೆ

೨೦೨೧
ಸಂಚಿಕೆ
೧೩

ವಿಷಯ: ಕನ್ನಡ ಸಾಹಿತ್ಯ ವಿಮರ್ಶೆಗೆ: ಇತ್ತೀಚಿನ ಪ್ರಸ್ತುತಿಗಳು

ಪತ್ರಿಕೆ: ಸಂಗಾತ

ದಿನಾಂಕ: 2021, ಸಂಚಿಕೆ: 13,

Scanned with CamScanner



ಸಂಗಾತ

ತ್ರೈಮಾಸಿಕ ಸಾಹಿತ್ಯ ಪತ್ರಿಕೆ

ಫೆಬ್ರವರಿ–ಏಪ್ರಿಲ್ 2021

ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಸಂಪಾದಕ

ಟಿ. ಎಸ್. ಗೊರವರ

ಸಂಪರ್ಕ ವಿಳಾಸ

ಸಂಪಾದಕರು
ಸಂಗಾತ ಪತ್ರಿಕೆ
ಕರ್ನಾಟಕ ವಿಶ್ವವಿದ್ಯಾಲಯ ರಸ್ತೆ
ಜಯನಗರ ಕ್ರಾಸ್
ಸವ್ಹಾಪುರ, ಧಾರವಾಡ- 580001
ಮೊಬೈಲ್ : 9341757653

e-mail: sangaata2018@gmail.com

ಚಂದಾ ವಿವರ
ಬಿಡಿ ಪ್ರತಿ : ರೂ. 160
ವಾರ್ಷಿಕ ಚಂದಾ (ನಾಲ್ಕು ಸಂಚಿಕೆ): ರೂ. 600

ಮುಖಪುಟ ವಿನ್ಯಾಸ
ಸೌಮ್ಯ ಕಲ್ಯಾಣಕರ್

ಸಂಚಿಕೆಯ ಕಲಾವಿದರು
ಕಿರಣ ಬಿ. ಕೆ.
ಶ್ರೇಯಸ್ ಎಂ. ಎನ್.

ಮುದ್ರಣ
ಲಕ್ಷ್ಮೀ ಮುದ್ರಣಾಲಯ
ಬೆಂಗಳೂರು

Scanned with CamScanner

೪ ಎದೆ ಭಲಕಿಯ ಸದ್ದು

ಮುಗಿಯದ ರೈತರ ಸಂಕಟ
ಟಿ.ಎಸ್.ಗೊರವರ

೧೨ ಮೃತು ಕತೆ

ಟಿ.ಎಸ್.ಗೊರವರ

'ನಾನು ಓದಿದ್ದು ಒಂದು ಆಕಸ್ಮಿಕ'
ಕವಿ ರಮೇಶ ಅರೋಲಿ ಸಂದರ್ಶನ

೦೬ ವಿಮರ್ಶೆಯ ವಿಮರ್ಶೆ

ಕನ್ನಡ ಸಾಹಿತ್ಯ ವಿಮರ್ಶೆ : ಇತ್ತೀಚಿನ ಪ್ರವೃತ್ತಿಗಳು
ಬಿ.ಎಂ. ಪುಟ್ಟಯ್ಯ

೧೪ ಹೀರತೀನ ಕೀರಾ

ನನ್ನ ತಾತನ ಅಧಿಕಾರದ ದಂಡ ಮತ್ತು ಪೇಟ
ಅರವಿಂದ ಮಾಲಗಿತ್ತಿ

೩೪ ರೈತರಿಗೇಕೆ ಇಂಗ್ಲಿಷ್ ಶಿಕ್ಷಣ ಬೇಕು?
ಮೂಲ : ಕಾಂಚಾ ಇಲಯ್ಯ ಶೆಫರ್ಡ್,
ಕನ್ನಡಕ್ಕೆ : ಮಂಜುನಾಥ ನರಗುಂದ

೩೮ ಜ್ಯೋಕ್ ಟ್ಯೋಕ್

ಒಂದು ಹಸಿ ಬದನೆಕಾಯಿ ಗಿಡ ಮತ್ತು ಅರೆಬರೆ ಸುಟ್ಟ ಹೆಣ
ಐ.ಜೆ.ಮ್ಯಾಗೇರಿ

೪೧ ಪ್ರಬಂಧ

ಎಂಥಾ ಮೋಜಿನ ಕುದುರಿ ..!
ಮಲ್ಲಿಕಾರ್ಜುನ ಹುಲಗಬಾಳಿ

೪೫ ಕತೆ

ಬಾಬಾಜಾನ್...
ಯೊಗೇಶ ಪಾಟೀಲ

೫೦ ಕವಿತೆ

ಶೋಭಾ ನಾಯಕ್
ವೀಣಾ ನಿರಂಜನ
ಗೀತಯೋಗಿ
ಚಿನ್ನುಪ್ರಕಾಶ್ ಶ್ರೀರಾಮನಹಳ್ಳಿ

Scanned with CamScanner

ವಿಮರ್ಶೆಯ ವಿಮರ್ಶೆ

◆ ಬಿ. ಎಂ. ಪುಟ್ಟಯ್ಯ

ಕನ್ನಡ ಸಾಹಿತ್ಯ ವಿಮರ್ಶೆ : ಇತ್ತೀಚಿನ ಪ್ರವೃತ್ತಿಗಳು

ಈಚಿನ ಕೆಲವು ವರ್ಷಗಳಲ್ಲಿ 'ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳು', 'ಕನ್ನಡ ಸಾಹಿತ್ಯದ ಇತ್ತೀಚಿನ ಪ್ರವೃತ್ತಿಗಳು' ಎಂಬ ಶೀರ್ಷಿಕೆಗಳಲ್ಲಿ ವಿಚಾರ ಸಂಕಿರಣಗಳು ನಡೆಯುತ್ತಿವೆ. ವಿಷಯಗಳ ನಿರ್ದಿಷ್ಟತೆಯ ಚೌಕಟ್ಟಿಗೆ ಬಂದಾಗ, 'ಕಾದಂಬರಿಗಳಲ್ಲಿ ಇತ್ತೀಚಿನ ಒಲವುಗಳು/ ಪ್ರವೃತ್ತಿಗಳು' ಎಂತಲೋ, 'ಕನ್ನಡ ಸಣ್ಣ ಕಥೆಗಳಲ್ಲಿ ಇತ್ತೀಚಿನ ಒಲವುಗಳು/ ಪ್ರವೃತ್ತಿಗಳು' ಎಂತಲೋ ಶೀರ್ಷಿಕೆಗಳನ್ನು ರೂಪಿಸಲಾಗಿರುತ್ತದೆ. ಮುಂದುವರಿದು ಸಾಹಿತ್ಯ ಕುರಿತು ಪಿಎಚ್.ಡಿ. ಅಧ್ಯಯನ ಮಾಡುವವರು ಈ ಮಾದರಿಯ ಶೀರ್ಷಿಕೆಗಳನ್ನು ರೂಪಿಸಿಕೊಳ್ಳುತ್ತಿದ್ದಾರೆ. ಇಲ್ಲಿ ಮೂಲಭೂತವಾದ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾದ ಅಗತ್ಯವಿದೆ ಎಂದು ನಾನು ಭಾವಿಸಿದ್ದೇನೆ.

'ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಇತ್ತೀಚಿನ ಪ್ರವೃತ್ತಿಗಳು' ಎಂಬುವು ಇವೆಯೇ? ಇದ್ದರೆ ಅವು ಯಾವವು? ಅದರ ತಾತ್ವಿಕ ಸ್ವರೂಪ ಯಾವುದು? ಅವನ್ನು ಗುರುತಿಸುವ ಹಾಗೂ ಚರ್ಚಿಸುವ ಮಾನದಂಡಗಳು ಯಾವವು? ಆ ಪ್ರವೃತ್ತಿಗಳು ಸಾಹಿತ್ಯ ವಿಮರ್ಶೆಯ ಚಿಂತನಾಧಾರೆಗೆ, ಆಲೋಚನಾ ವಿಧಾನಕ್ಕೆ ಸಂಬಂಧಿಸಿದವೋ ಅಥವಾ ಸಾಹಿತ್ಯ ವಿಮರ್ಶೆಯ ವಸ್ತು ವಿಷಯಗಳಿಗೆ ಸಂಬಂಧಿಸಿದವೋ ಎಂಬ ಪ್ರಶ್ನೆಗಳು ಮುಖ್ಯವಾಗುತ್ತವೆ. ಇತ್ತೀಚಿನ ಪ್ರವೃತ್ತಿಗಳು ಚಿಂತನಾಧಾರೆಗೆ, ಆಲೋಚನಾ ವಿಧಾನಕ್ಕೆ ಸಂಬಂಧ ಇದ್ದರೆ ಅವುಗಳಲ್ಲಿ ನಡೆದಿರಬಹುದಾದ ಮುಖ್ಯ ಪಲ್ಲಟಗಳು ಯಾವವು, ಇತ್ತೀಚಿನ ಪ್ರವೃತ್ತಿಗಳು ಸಾಹಿತ್ಯ ವಿಮರ್ಶೆಯ ವಸ್ತುವಿಗೆ ಸಂಬಂಧಪಟ್ಟಿದ್ದರೆ ಆ ವಸ್ತುಗಳು ಯಾವವು ಎಂಬ ಚರ್ಚೆಗೆ ಒಂದು ವೈಚಾರಿಕ ಭಿತ್ತಿಯನ್ನು ಇದು ನಿರ್ಮಾಣ ಮಾಡುತ್ತದೆ.

ಈ ಚರ್ಚೆಗೆ ಹೋಗುವ ಮೊದಲು ಕನ್ನಡ ಸಾಹಿತ್ಯ ವಿಮರ್ಶೆಯ ತಿರುಳಿನ ಬಗೆಗೆ ಕೆಲವು ಮಾತುಗಳನ್ನು ಹೇಳುವುದಿದೆ.

Scanned with CamScanner

ಕನ್ನಡ ಸಾಹಿತ್ಯ ವಿಮರ್ಶೆ ಎಂದರೆ ಅದು ಬಹುತೇಕ ಲಿಖಿತ ಸಾಹಿತ್ಯ ಕೃತಿಗಳ ಜೊತೆಯಲ್ಲಿ ನಡೆಸಿರುವ ಅನುಸಂಧಾನವಾಗಿದೆ. ಇದು ಕನ್ನಡದ ಮೌಖಿಕ ಪಠ್ಯಗಳ ಬಗೆಗೆ ಹೆಚ್ಚು ಅನುಸಂಧಾನ ಮಾಡಿಲ್ಲ. ಇದರ ಚರ್ಚೆಗೆ ಇಲ್ಲಿ ಅವಕಾಶ ಕಡಿಮೆ ಇದೆ. ಕನ್ನಡ ಸಾಹಿತ್ಯ ವಿಮರ್ಶೆಯು ಕನ್ನಡದ ಲಿಖಿತ ಪಠ್ಯಗಳೊಂದಿಗೆ ನಡೆಸಿರುವ ಅನುಸಂಧಾನದ ಸ್ವರೂಪವನ್ನು ಮುಖ್ಯವಾಗಿ ೬ ರೀತಿಯಲ್ಲಿ ಗುರುತಿಸಬಹುದು. ಕನ್ನಡ ಸಾಹಿತ್ಯ ವಿಮರ್ಶೆಯು ಸಾಹಿತ್ಯ ಕೃತಿಗಳನ್ನು (೧) ಪರಿಚಯಿಸಿದೆ, (೨) ವಿವರಿಸಿದೆ, (೩) ಸಾರಾಂಶೀಕರಿಸಿದೆ, (೪) ವಿಶ್ಲೇಷಿಸಿದೆ, (೫) ವ್ಯಾಖ್ಯಾನಿಸಿದೆ ಮತ್ತು (೬) ಮೌಲ್ಯಮಾಪನ ಮಾಡಿದೆ. ಸಾಹಿತ್ಯ ವಿಮರ್ಶೆಯಲ್ಲಿ ಇದರ ಪ್ರಮಾಣವನ್ನು ಗಮನಿಸಿದರೆ, ಸಾಹಿತ್ಯ ಕೃತಿಗಳ ಪರಿಚಯದ ಬರವಣಿಗೆ ದೊಡ್ಡ ಪ್ರಮಾಣದಲ್ಲಿದೆ. ಎರಡನೇ ದೊಡ್ಡ ಪ್ರಮಾಣ ಎಂದರೆ ಸಾಹಿತ್ಯ ಕೃತಿಗಳ ವಿವರಣೆ ಮತ್ತು ಸಾರಾಂಶ. ವಿಶ್ಲೇಷಣಾತ್ಮಕ ಬರವಣಿಗೆ ಸ್ವಲ್ಪ ಪ್ರಮಾಣದಲ್ಲಿದೆ. ಇನ್ನು ವ್ಯಾಖ್ಯಾನಾತ್ಮಕ ವಿಮರ್ಶೆ ಪ್ರಮಾಣದಲ್ಲಿ ಬಹಳ ಕಡಿಮೆ ಇದೆ. ಕೆಲವು ಓದುಗರು ಈ ಬರವಣಿಗೆಗೆ ಅರ್ಥ ಆಗುವುದಿಲ್ಲ ಎಂದು ಅದನ್ನು ಓದುವ,ಅಧ್ಯಯನ ಮಾಡುವ ಗೋಜಿಗೆ ಹೋಗಿಲ್ಲ. ಇನ್ನು ಮೌಲ್ಯಮಾಪನದ ವಿಮರ್ಶಾ ಬರವಣಿಗೆ ಈ ಎಲ್ಲಾ ಸ್ವರೂಪದ ಬರವಣಿಗೆಯಲ್ಲೂ ಇದೆ.

ಸಾಹಿತ್ಯ ವಿಮರ್ಶೆಯು ಕೆಲವು ಸಲ ಅತ್ಯಂತ ದುರ್ಬಲ ಕೃತಿಗಳನ್ನು ಮತ್ತು ಕೃತಿಕಾರರನ್ನು ಎತ್ತಿ ಹಿಡಿದಿದೆ; ಇನ್ನು ಕೆಲವು ಸಲ ಮಹತ್ವದ ಕೃತಿಗಳನ್ನು, ಕೃತಿಕಾರರನ್ನು ಕಣ್ಣೆತ್ತಿಯೂ ನೋಡದೆ ಅವನ್ನು ನಿರ್ದಾಕ್ಷಿಣ್ಯವಾಗಿ ನಿರ್ಲಕ್ಷಿಸಿದೆ. ಸಾಹಿತ್ಯ ವಿಮರ್ಶೆಯಲ್ಲಿ ಪಕ್ಷಪಾತ ಹಿತಾಸಕ್ತಿ ಮತ್ತು ತಾರತಮ್ಯದ ಧೋರಣೆ ನಿರಂತರವಾಗಿ ಕೆಲಸ ಮಾಡುತ್ತಾ ಬಂದಿದೆ. ಯಾವುದೇ ಪೂರ್ವಾಗ್ರಹ ಇಲ್ಲದೆ ಈ ಹೇಳಿಕೆಯನ್ನು ಹೇಳಬಹುದಾಗಿದ್ದು, ಇದನ್ನು 'ಕನ್ನಡ ಸಾಹಿತ್ಯ ವಿಮರ್ಶೆಯ ವೈಚಾರಿಕ ರೋಗ' ಎಂದು ಹೊಸದಾಗಿ ನಾಮಕರಣ ಮಾಡಬಹುದು. ಕನ್ನಡ ಸಾಹಿತ್ಯ ವಿಮರ್ಶೆಯನ್ನು ಸೂಕ್ಷ್ಮವಾಗಿ ಬಲ್ಲವರಿಗೆ ಇದಕ್ಕೆ ಉದಾಹರಣೆ ಕೊಡುವ ಇಲ್ಲವೆ ಸಾಕ್ಷಿ ಒದಗಿಸುವ ಅಗತ್ಯ ಇಲ್ಲ ಎಂದು ಭಾವಿಸುತ್ತೇನೆ. ಈ ಚೌಕಟ್ಟಿನ ಚರ್ಚೆಯನ್ನು ಇನ್ನೂ ಮುಂದುವರಿಸಲು ಸಾಧ್ಯವಿದೆ.

ಒಂದು ಕಡೆ ಕನ್ನಡ ಸಾಹಿತ್ಯ ವಿಮರ್ಶೆಗೆ ಈ ಬಗೆಯ ತಾತ್ವಿಕ ಹಿತಾಸಕ್ತಿಯ ಮಿತಿ ಇದ್ದರೆ, ಇನ್ನೊಂದು ಕಡೆ ಇದು ಕನ್ನಡ ವೈಚಾರಿಕ ಚಿಂತನೆಗೆ ಅಪಾರವಾದುದನ್ನು ಕೊಟ್ಟಿದೆ ಎಂಬುದನ್ನು ಮರೆಯುವಂತಿಲ್ಲ. ಸಾಹಿತ್ಯ ವಿಮರ್ಶೆ ಜಗತ್ತಿನ ಬೇರೆ ಬೇರೆ ಜ್ಞಾನಶಿಸ್ತುಗಳನ್ನು, ಚಿಂತನಾಧಾರೆಗಳನ್ನು ಮತ್ತು ಸಿದ್ಧಾಂತಗಳನ್ನು ಕನ್ನಡ ಚಿಂತನೆಗೆ ಹೊಸದಾಗಿ ಸೇರ್ಪಡೆ ಮಾಡಿದೆ. ಮನೋವಿಶ್ಲೇಷಣೆ, ಮಹಿಳಾ ಚಿಂತನೆ, ಚಾರಿತ್ರಿಕ ಓದು, ಅಸ್ತಿತ್ವವಾದ, ವಾಸ್ತವತಾವಾದ, ಮಾರ್ಕ್ಸ್‌ವಾದ, ಪರಂಪರೆಯನ್ನು ಕುರಿತ ಚಿಂತನೆ, ಸಂಸ್ಕೃತಿ ಕುರಿತ ಚಿಂತನೆ, ಜಾಗತೀಕರಣ ಇವೇ ಮುಂತಾದ ಚಿಂತನಾಧಾರೆಗಳನ್ನು ಹಾಗೂ ಸಿದ್ಧಾಂತಗಳನ್ನು ಕನ್ನಡ ಚಿಂತನೆಗೆ ಪರಿಚಯಿಸಿದೆ.

ಬುದ್ಧ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಕಾರ್ಲ್‌ಮಾರ್ಕ್ಸ್‌ರ ದರ್ಶನಗಳ ತಿರುಳನ್ನು ತಮ್ಮ ಅಧ್ಯಯನದ ವಿಧಾನ ಮತ್ತು ದೃಷ್ಟಿಕೋನಕ್ಕೆ ಪ್ರಯೋಗಿಸುವ ವೈಶಿಷ್ಟ್ಯತೆ ಹೊಂದಿರುವ ಬಿ.ಎಂ. ಪುಟ್ಟಯ್ಯ ಚಿಕ್ಕಮಗಳೂರು ಜಿಲ್ಲೆಯ ಬಾಸಾಪುರ ಎಂಬ ಹಳ್ಳಿಯವರು. ಕಳೆದ ೨೮ ವರ್ಷಗಳಿಂದ ಕನ್ನಡ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರು. ಆತ್ಮಕತೆಗಳಲ್ಲಿ ಕರ್ನಾಟಕದ ಕತೆ, ಸಾವು: ಒಂದು ಚಿಂತನೆ, ಮುಖಾಮುಖಿ, ಕದಡು, ಹರಿಶ್ಚಂದ್ರ ಚಾರಿತ್ರ್ಯ : ಸತ್ಯದ ತೊಡಕು, ದಲಿತರು ಮತ್ತು ಭೂಮಿಯ ಪ್ರಶ್ನೆ ಹಾಗೂ ತಾತ್ವಿಕ ಆಯಾಮಗಳು, ಶ್ರಮಭಾಷೆ, ಬರಿ ನಿದ್ದೆಯಲ್ಲವೊ ಅಣ್ಣಾ! ಸಂಶೋಧನಾ ಕೃತಿಗಳನ್ನು ಪ್ರಕಟಿಸಿದ್ದಾರೆ.

ಭಾಷೆ, ಸಾಹಿತ್ಯ, ಸಮಾಜ, ಸಂಸ್ಕೃತಿ, ಪರಂಪರೆ, ಚರಿತ್ರೆ, ಪ್ರಭುತ್ವ, ಹೋರಾಟ ಮುಂತಾದುವನ್ನು ಪ್ರತ್ಯೇಕ ಪ್ರತ್ಯೇಕ ಎಂದು ಪರಿಗಣಿಸದೆ ಮತ್ತು ಅವನ್ನು ಏಕಾಕಾರದಲ್ಲಿ ವಿಶ್ಲೇಷಿಸದೆ, ಪ್ರತಿಯೊಂದರೊಳಗಿನ ಆಂತರಿಕ ಚಲನಶೀಲತೆಯ ಸಂಬಂಧಗಳನ್ನು ಹಾಗೂ ಅವುಗಳ ನಡುವಿನ ಭಿನ್ನ ಭಿನ್ನ ಸಂಬಂಧಗಳನ್ನು ಆಳವಾಗಿ ವ್ಯಾಖ್ಯಾನಿಸುವ ಜಾಯಮಾನ ಇವರ ಚಿಂತನೆ ಹಾಗೂ ಬರವಣಿಗೆಯಲ್ಲಿದೆ.

Scanned with CamScanner

ಪ್ರತಿಕ್ರಿಯೆಗಳಿಗೆ ಆಹ್ವಾನ

ಸದ್ಯದ ಕನ್ನಡ ಸಾಹಿತ್ಯ ವಿಮರ್ಶೆ ಅಷ್ಟೊಂದು ಹುಲುಸಾಗಿ ಬೆಳೆದಿಲ್ಲ. ಆಯಾ ಕಾಲಘಟ್ಟದ ಸಾಹಿತ್ಯಕ ಸಂವೇದನೆ ನಿರ್ಮಿಸಲು ವಿಮರ್ಶೆ ಬೇಕೇ ಬೇಕಾಗುತ್ತದೆ. ಆದರೆ ಈ ಹೊತ್ತು ವಿಮರ್ಶೆಯ ಗೈರು ಹಾಜರಿ ಎದ್ದು ಕಾಣುತ್ತಿದೆ. ಇದ್ದರೂ ಅದು ಪುಸ್ತಕ ಪರಿಚಯ, ಸಾರಾಂಶ ಹೇಳುವ ಮಟ್ಟಕ್ಕೆ ಬಂದು ನಿಂತಿದೆ. ಹೊಸ ತಲೆಮಾರಿನಲ್ಲಿ ವಿಮರ್ಶೆಯನ್ನು ಗಂಭೀರವಾಗಿ ಪರಿಗಣಿಸಿ ಬರೆಯುತ್ತಿರುವವರ ಸಂಖ್ಯೆ ಬಹಳ ಕಡಿಮೆ ಇದೆ. ಈ ಕೊರತೆಯನ್ನು ನೀಗಿಸಿಕೊಳ್ಳುವ ನೆಲೆಯಲ್ಲಿ 'ವಿಮರ್ಶೆಯ ವಿಮರ್ಶೆ' ನೆರವಾಗಬಹುದು.

ಒಟ್ಟು ಕನ್ನಡ ಸಾಹಿತ್ಯ ವಿಮರ್ಶೆಯ ಬಗೆಗೆ ತಾವು ಎತ್ತುವ ಪ್ರಶ್ನೆ ಮತ್ತು ತಕರಾರುಗಳಿಗೆ ಮುಕ್ತ ಆಹ್ವಾನವಿದೆ. ಈ ವರ್ಷದ 'ಸಂಗಾತ'ದ ಪ್ರತಿ ಸಂಚಿಕೆಯಲ್ಲೂ ವಿಮರ್ಶೆಯ ಕುರಿತಾದ ಚರ್ಚೆಯನ್ನು ವಿಸ್ತರಿಸುವ ಆಯ್ದ ಬರಹಗಳನ್ನು ಪ್ರಕಟಿಸಲಾಗುವುದು. ನಿಮ್ಮ ಬರಹಗಳನ್ನು ಈ ಮಿಂಚಂಚೆಯ ಮೂಲಕ ಕಳಿಸಿ.

sangaata2018@gmail.com

–ಸಂಪಾದಕ

'ಸಾಹಿತ್ಯ ವಿಮರ್ಶೆಯ ಇತ್ತೀಚಿನ ಪ್ರವೃತ್ತಿಗಳು' ಎನ್ನುವಾಗ, ಸಾಹಿತ್ಯ ವಿಮರ್ಶೆಯ ಸಾಮಾನ್ಯ ಸ್ವರೂಪ ಯಾವುದು ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಸಾಹಿತ್ಯ ಪಠ್ಯ ಎಂದು ಕರೆಯಲಾಗುವ ಸಾಹಿತ್ಯ–ಸಂಸ್ಕೃತಿ–ಭಾಷೆ–ಸಮುದಾಯ–ಸಮಾಜ–ಪರಂಪರೆ–ಚರಿತ್ರೆ–ಲಿಂಗ–ಜಾತಿ–ಪ್ರಭುತ್ವ ಮುಂತಾದುವನ್ನು ಓದುವುದು, ಗ್ರಹಿಸುವುದು, ಅರ್ಥಮಾಡಿಕೊಳ್ಳುವುದು, ಪರಿಚಯಿಸುವುದು, ವಿವರಿಸುವುದು, ಸಾರಾಂಶೀಕರಿಸುವುದು, ವಿಶ್ಲೇಷಿಸುವುದು, ವ್ಯಾಖ್ಯಾನಿಸುವುದು, ಮೌಲ್ಯಮಾಪನ ಮಾಡುವುದು ಎಂದು ಸ್ಥೂಲವಾಗಿ ಒಂದು ಚೌಕಟ್ಟನ್ನು ಹಾಕಬಹುದು. ಸಾಹಿತ್ಯ ಪಠ್ಯವೊಂದನ್ನು ಓದುವಾಗ ಮೇಲಿನ ಹೇಳಿಕೆಯಲ್ಲಿ ಸೂಚಿಸಿದ ಅಷ್ಟೂ ಸಂಗತಿಗಳನ್ನು ಒಟ್ಟಾಗಿ–ಸಮಗ್ರವಾಗಿ ಗ್ರಹಿಸಲಾಗಿರುತ್ತದೆಯೋ ಎಂಬ ಪ್ರಶ್ನೆಯೂ ಬರುತ್ತದೆ. ಇದು ವಿಮರ್ಶಕರ ಬೌದ್ಧಿಕ ಸಾಮರ್ಥ್ಯ ಮತ್ತು ಅವರ ಧೋರಣೆಯನ್ನು ಅವಲಂಭಿಸಿರುತ್ತದೆ. ಹಾಗಾಗಿ ಎಲ್ಲಾ ವಿಮರ್ಶೆಯ ಬರವಣಿಗೆಯೂ ಇವೆಲ್ಲವನ್ನೂ ಒಳಗೊಂಡಿರುತ್ತದೆ ಎನ್ನಲು ಬರುವುದಿಲ್ಲ.

ಸಾಹಿತ್ಯ ವಿಮರ್ಶೆಯು ಪ್ರಾಥಮಿಕವಾಗಿ ಸಾಹಿತ್ಯ ಕೃತಿಯನ್ನು ಓದುವುದರ ಮೂಲಕ ಶುರುವಾಗುತ್ತದೆ. ಓದುವುದು ಎಂದರೆ ಇದಕ್ಕೆ ಅಕ್ಷರರೂಪದ ಸಂಕೇತಗಳು ಇರಬಹುದು; ಇಲ್ಲದೆಯೂ ಇರಬಹುದು. ಓದುವ ಪಠ್ಯದ ಸ್ವರೂಪ ಮತ್ತು ಓದುವವರ ಧೋರಣೆ ಹಾಗೂ ಹಿತಾಸಕ್ತಿಗೆ ಅನುಗುಣವಾಗಿ ಇದು ಬದಲಾಗುತ್ತಾ ಹೋಗುತ್ತದೆ. ಪ್ರತಿ ಓದಿನಲ್ಲೂ ಅರ್ಥ–ಗ್ರಹಿಕೆ–ಪರಿಚಯ–ವಿವರಣೆ–ಸಾರಾಂಶ–ವಿಶ್ಲೇಷಣೆ–ವ್ಯಾಖ್ಯಾನ–ಮೌಲ್ಯಮಾಪನ ಇವು ಸೃಷ್ಟಿಯಾಗುತ್ತಾ, ಉತ್ಪಾದನೆ ಆಗುತ್ತಾ ಹೋಗುತ್ತವೆ. ಹಾಗಾಗಿಯೇ ಒಂದು ಪಠ್ಯವನ್ನು ಒಂದೇ ಕಾಲದಲ್ಲಿ ಎಲ್ಲರೂ ಓದಿದಾಗ ಒಂದೇ ಅರ್ಥ–ವಿವರಣೆ–ವ್ಯಾಖ್ಯಾನಗಳು ಉತ್ಪಾದನೆ ಆಗುವುದಿಲ್ಲ. ಇದರ ಹಾಗೆಯೇ ಒಬ್ಬ ಓದುಗ, ವಿಮರ್ಶಕ ಒಂದು ಪಠ್ಯವನ್ನು ಬೇರೆ ಬೇರೆ ಉದ್ದೇಶಗಳಿಗೆ ಹಾಗೂ ಬೇರೆ ಬೇರೆ ಕಾಲ–ಸಂದರ್ಭಗಳಲ್ಲಿ ಓದಿದಾಗ ಒಂದೇ ಅರ್ಥ–ವಿವರಣೆ–ವ್ಯಾಖ್ಯಾನಗಳು ಉತ್ಪಾದನೆ ಆಗುವುದಿಲ್ಲ. ಇದು ಸಾಹಿತ್ಯ ವಿಮರ್ಶೆಯ ಬೌದ್ಧಿಕ ಮತ್ತು ವೈಚಾರಿಕ ಕೆಲಸದ ಸಾಮಾನ್ಯ ಸ್ವರೂಪ ಮತ್ತು ಸ್ವಭಾವ.

ಇದಲ್ಲದೆ ಇನ್ನೊಂದು ಬಗೆಯಲ್ಲೂ ಸಾಹಿತ್ಯ ವಿಮರ್ಶೆಯ ಬೌದ್ಧಿಕ ಕೆಲಸವನ್ನು ವಿವರಿಸಿಕೊಳ್ಳಬಹುದು. ಸಾಹಿತ್ಯ ಪಠ್ಯಗಳೊಂದಿಗೆ ಇಲ್ಲವೆ ಸಾಹಿತ್ಯ ಸಂಸ್ಕೃತಿಯೊಂದಿಗೆ ಅನುಸಂಧಾನ ಮಾಡುವುದು, ಸಂವಾದ ಮಾಡುವುದು, ಮುಖಾಮುಖಿ ಮಾಡುವುದು ಮತ್ತು ಮುಖವಾಣಿ ಆಗುವುದು. ಈ ನಾಲ್ಕು ಬಗೆಯ ವೈಚಾರಿಕ, ಬೌದ್ಧಿಕ ಕೆಲಸಗಳು ಅರ್ಥ, ಪರಿಚಯ, ವಿವರಣೆ, ಸಾರಾಂಶ, ವಿಶ್ಲೇಷಣೆ, ವ್ಯಾಖ್ಯಾನ ಹಾಗೂ ಮೌಲ್ಯಮಾಪನ ಇವುಗಳಲ್ಲಿ ಯಾವುದಾದರೂ ಒಂದನ್ನು ಒಳಗೊಂಡಿರಬಹುದು. ಅಥವಾ ಒಂದಕ್ಕಿಂತ ಹೆಚ್ಚು ನೆಲೆಗಳನ್ನು ಒಳಗೊಂಡಿರಬಹುದು. ಸಾಹಿತ್ಯ ವಿಮರ್ಶೆಯ ಈ ಮೂಲಭೂತ ತಾತ್ವಿಕ ಸ್ವರೂಪ ಮತ್ತು ಸ್ವಭಾವದಲ್ಲಿ 'ಇತ್ತೀಚಿನ ಪ್ರವೃತ್ತಿಗಳು'

Scanned with CamScanner

ಎಂಬುವು ಇರುವುದಿಲ್ಲ ಅಥವಾ ಆಗುವುದಿಲ್ಲ. ಯಾಕೆಂದರೆ ಸಾಹಿತ್ಯ ಪಠ್ಯಗಳೊಂದಿಗೆ ನಡೆಸುವ ಈ ಬಗೆಯ ಬೌದ್ಧಿಕ ಸಂವಾದ ಎಲ್ಲಾ ಕಾಲದಲ್ಲೂ ಇರುವಂತಹದ್ದೇ ಆಗಿದೆ. ಹಾಗಾಗಿ ಸಾಹಿತ್ಯ ವಿಮರ್ಶೆಯಲ್ಲಿ ಇತ್ತೀಚಿನ ಪ್ರವೃತ್ತಿ ಎಂಬುದು ಸಾಧ್ಯವಿಲ್ಲ.

ಹಾಗಿದ್ದರೆ ಸಾಹಿತ್ಯ ವಿಮರ್ಶೆಯ ಇತ್ತೀಚಿನ ಪ್ರವೃತ್ತಿಗಳ ಸಾಮಾನ್ಯ ಸ್ವರೂಪ ಯಾವುದು? ಸಾಹಿತ್ಯ ವಿಮರ್ಶೆಯಲ್ಲಿ ಇತ್ತೀಚೆಗೆ ವಿಶ್ಲೇಷಣಾತ್ಮಕ ಹಾಗೂ ವ್ಯಾಖ್ಯಾನಾತ್ಮಕ ಪ್ರವೃತ್ತಿಗಳು ಕಾಣುತ್ತಿಲ್ಲ. ಬದಲಿಗೆ ಪರಿಚಯ-ವಿವರಣೆ ಮತ್ತು ಸಾರಾಂಶದ ನೆಲೆಗಳು ಹೆಚ್ಚಾಗಿ ಕಾಣುತ್ತಿವೆ. ಅಥವಾ ಇದೇ ಇಂದಿನ ಸಾಹಿತ್ಯ ವಿಮರ್ಶೆಯ ಮುಖ್ಯ ಬಂಡವಾಳ ಆಗಿದೆ. ಈ ಕೆಲಸ ಎಲ್ಲೆಲ್ಲಿ ನಡೆಯುತ್ತಿದೆ ಎಂಬುದರ ಒಂದು ಇಣುಕು ನೋಟವನ್ನು ಗಮನಿಸಬಹುದು. ಸಾಹಿತ್ಯ ಕೃತಿಗಳಿಗೆ ಬರೆಯುವ ಮುನ್ನುಡಿಗಳಲ್ಲಿ, ತರಗತಿಗಳ ಪಾಠಗಳಲ್ಲಿ, ಸಾಹಿತ್ಯದ ತರಬೇತಿಗಳಲ್ಲಿ, ಸಾಹಿತ್ಯ ಕುರಿತ ಸೆಮಿನಾರುಗಳಲ್ಲಿ, ವಿಮರ್ಶಾ ಕಮ್ಮಟಗಳಲ್ಲಿ, ಸಾಹಿತ್ಯ ಸಮ್ಮೇಳನಗಳಲ್ಲಿ, ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗುವ ಸಾಹಿತ್ಯ ಕೃತಿಗಳನ್ನು ಕುರಿತ ಬರವಣಿಗೆಗಳಲ್ಲಿ, ಅಭಿನಂದನ ಗ್ರಂಥಗಳಿಗೆ ಬರೆಯುವ ಲೇಖನಗಳಲ್ಲಿ, ಎಂ.ಫಿಲ್., ಪಿಎಚ್.ಡಿ., ಡಿ.ಲಿಟ್. ಮುಂತಾದ ಸಂಶೋಧನಾ ಚಟುವಟಿಕೆಗಳಲ್ಲಿ. ಇಲ್ಲೆಲ್ಲ ಸಾಹಿತ್ಯ ಕೃತಿಗಳ ಬಗೆಗೆ ಮತ್ತು ಅವನ್ನು ಬರೆದವರ ಬಗೆಗೆ ಪರಿಚಯ ಹಾಗೂ ಸಾರಾಂಶಗಳನ್ನು ಉತ್ಪಾದನೆ ಮಾಡಲಾಗುತ್ತಿದೆ. ಇದನ್ನೇ ಸದ್ಯ 'ಸಾಹಿತ್ಯ ವಿಮರ್ಶೆ' ಎಂದು ಬಿಂಬಿಸಲಾಗುತ್ತಿದೆ. ಈ ಬಗೆಯ ಸಾಹಿತ್ಯ ಓದನ್ನು 'ಸಾಹಿತ್ಯದ ಸಾಮಾನ್ಯ ಓದು' ಎಂದು ಕರೆಯಬಹುದು.

ಸಾಹಿತ್ಯ ಕೃತಿಗಳ ಪರಿಚಯ ಮತ್ತು ಸಾರಾಂಶವೇ ಮುಖ್ಯ ಬಂಡವಾಳ ಆಗಿರುವ ಈ ಬೌದ್ಧಿಕ ಕೆಲಸದಲ್ಲಿ ಅದರ ಕಾಳಜಿಯ ನೆಲೆಗಳು ಸಮಾಜದ ಬೇರೆ ಬೇರೆ ಆಯಾಮಗಳನ್ನು ಪಡೆಯುತ್ತಿವೆ. ತಳಸಮುದಾಯಗಳ ಐಡೆಂಟಿಟಿಯ ನೆಲೆ, (ಇದರಲ್ಲಿ ಸಾಂಸ್ಕೃತಿಕ, ಪೌರಾಣಿಕ ಹಾಗೂ ಚಾರಿತ್ರಿಕ ಆಯಾಮಗಳು ಇವೆ) ಲಿಂಗ ತಾರತಮ್ಯದ ನೆಲೆ, ದಲಿತ ನೆಲೆ, ಸ್ಥಳೀಯತೆ, ಪ್ರಾದೇಶಿಕತೆ ಆಯಾಮಗಳ ಓದುಗಳು ನಡೆಯುತ್ತಿವೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಶಯಗಳೊಂದಿಗಿನ ಓದುವುದು, ಪ್ರತಿರೋಧದ ಆಶಯಗಳೊಂದಿಗೆ ಓದುವುದು ಈ ಮುಂತಾದ ಸಾಹಿತ್ಯಕ ಓದುಗಳನ್ನು ಕಾಣಬಹುದು.

ಇಂತಹ ಓದುಗಳಿಗೆ ಮುಖ್ಯ ಕಾರಣ ಸಾಹಿತ್ಯಕ ವಲಯದಲ್ಲಿ ಮಾತ್ರ ಇಲ್ಲ. ಅಥವಾ ಇಂತಹ ಓದುಗಳು ಕೇವಲ ಸಾಹಿತ್ಯ ಸಂಸ್ಕೃತಿಯ ಜಗತ್ತಿನಿಂದ ಉತ್ಪಾದನೆ ಆಗುತ್ತಿಲ್ಲ. ಇತ್ತೀಚೆಗೆ ಸಮಾಜದ ಬೇರೆ ಬೇರೆ ಸಮುದಾಯದವರು, ಬೇರೆ ಬೇರೆ ಸಮೂಹದವರು ಸಾಹಿತ್ಯ ಸಂಸ್ಕೃತಿ ಕ್ಷೇತ್ರವನ್ನು ಪ್ರವೇಶ ಮಾಡಿದ್ದಾರೆ; ಮಾಡುತ್ತಿದ್ದಾರೆ. ಒಂದು ಕಾಲದಲ್ಲಿ ಊಹೆಯನ್ನೂ ಮಾಡಲಾಗದ ಸಮುದಾಯ, ಸಮೂಹದವರು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ದಲಿತರು, ಮಹಿಳೆಯರು, ಮುಸ್ಲಿಮರು, ಆದಿವಾಸಿ ಬುಡಕಟ್ಟು ಸಮುದಾಯದವರು, ಮಂಗಳಮುಖಿಯರು ಹೀಗೆ ಇದನ್ನು ನಮೂದಿಸಲು ಸಾಧ್ಯವಿದೆ. ಇಂತಹ ಸಮುದಾಯ, ಸಮೂಹದವರು ಅನಕ್ಷರಸ್ಥ ಕುಟುಂಬಗಳಿಂದ ಬಂದವರು. ಮೊದಲ ತಲೆಮಾರಿನಲ್ಲಿ ಅಕ್ಷರ ಶಿಕ್ಷಣ ಪಡೆದ ಈ ಸಮುದಾಯದವರು ಸಾಹಿತ್ಯ ರಚನೆ ಮಾಡುತ್ತಿದ್ದಾರೆ. ಇವರಲ್ಲಿ ಕೆಲವರು ಸಾಹಿತ್ಯ ಪಾಠ ಮಾಡುವುದು, ಸಾಹಿತ್ಯವನ್ನು ಕುರಿತು ಮಾತಾಡುವುದು, ಬರೆಯುವುದು ಇತ್ಯಾದಿ ಮಾಡುತ್ತಿದ್ದಾರೆ. ಇವರೆಲ್ಲರೂ ಶುದ್ಧ ಸಾಹಿತ್ಯ ವಿಮರ್ಶೆಯ ಸಿದ್ಧಾಂತಗಳನ್ನು ಓದಿ ಕರಗತ ಮಾಡಿಕೊಂಡ ಪಂಡಿತರಲ್ಲ. ಮತ್ತು ಸಾಹಿತ್ಯ ವಿಮರ್ಶೆಯು ಇವರ ಆಯ್ಕೆಯೂ ಅಲ್ಲ; ವೃತ್ತಿಯೂ ಅಲ್ಲ. ಸಾಹಿತ್ಯ ಸಂಸ್ಕೃತಿಯ ಚಟುವಟಿಕೆಯ ಒಂದು ಭಾಗವಾಗಿ ಇದನ್ನು ಮಾಡುತ್ತಿದ್ದಾರೆ ಅಷ್ಟೆ. ಹಾಗೆ ನೋಡಿದರೆ, ಈ ತಲೆಮಾರು 'ಸಾಹಿತ್ಯಕ ಪಾಂಡಿತ್ಯ'ಕ್ಕೆ ಧಿಕ್ಕಾರ ಹಾಕಿ, ಅದಕ್ಕೆ ಸೆಡ್ಡು ಹೊಡೆದು ನಿಂತಿದೆ. ಸೆಡ್ಡು ಹೊಡೆದು ನಿಂತಿರುವ ಈ ವಸ್ತುಸ್ಥಿತಿ ಇವರ ಸಂಘಟನಾತ್ಮಕ ಯೋಜನೆಯ ಫಲದಿಂದ ಹುಟ್ಟಿದ್ದಲ್ಲ. ಬದಲಾಗುತ್ತಿರುವ ಸಾಮಾಜಿಕ ವಸ್ತುಸ್ಥಿತಿಯೇ ಇಂತಹ ಸನ್ನಿವೇಶವನ್ನು ನಿರ್ಮಾಣ ಮಾಡಿದೆ. ಈ ಸಾಮಾಜಿಕ ಚಲನಶೀಲತೆಯ ಅರಿವಿನ ಗೈರುಹಾಜರಿಯಲ್ಲಿ 'ಕನ್ನಡ ಸಾಹಿತ್ಯ ವಿಮರ್ಶೆ ಸೊರಗಿದೆ', 'ಕನ್ನಡ ಸಾಹಿತ್ಯ ವಿಮರ್ಶೆ ನಿಂತುಹೋಗಿದೆ', 'ಕನ್ನಡ ಸಾಹಿತ್ಯ ವಿಮರ್ಶೆ ಮಹತ್ವದ್ದನ್ನು ಕೊಡುತ್ತಿಲ್ಲ' ಎಂಬ ಹೇಳಿಕೆಗಳನ್ನು ಕೊಡಲಾಗುತ್ತಿದೆ. ಈ ಹೇಳಿಕೆ ಕೊಡುತ್ತಿರುವವರು ಯಾವ ಗುಣಮಟ್ಟದ, ಯಾವ ಧೋರಣೆಯ, ಯಾವ ತಾತ್ವಿಕತೆಯ ಸಾಹಿತ್ಯ ವಿಮರ್ಶೆಯನ್ನು ಬಯಸುತ್ತಿದ್ದಾರೆ ಎಂಬುದು ಸ್ಪಷ್ಟವಾಗುತ್ತಿಲ್ಲ. ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಸಾಹಿತ್ಯ ಕೃತಿಗಳನ್ನು ಕುರಿತ ಪರಿಚಯಾತ್ಮಕ ಬರವಣಿಗೆ ಬಹಳ ದೊಡ್ಡ ಪ್ರಮಾಣದಲ್ಲಿದೆ. ಇದು ಈಗ ಮಾತ್ರ ಬರುತ್ತಿರುವ ಬರವಣಿಗೆ ಅಲ್ಲ. ಕನ್ನಡ ಸಾಹಿತ್ಯ ವಿಮರ್ಶೆಯ ಆರಂಭದಲ್ಲೆ ಈ ಸ್ವರೂಪದ ಬರವಣಿಗೆ ಬಂದಿದೆ. ಇಂತಹ ವಿಮರ್ಶೆಯನ್ನು ಮೇಲುಜಾತಿಯ

Scanned with CamScanner

ಬರಹಗಾರರು, ಶೈಕ್ಷಣಿಕ ಹಿನ್ನೆಲೆಯಿಂದ ಬಂದವರು ಮತ್ತು ಇಂಗ್ಲಿಶ್ ಸಾಹಿತ್ಯ ವಿಮರ್ಶೆಯನ್ನು ಓದಿಕೊಂಡವರು ಬರೆದಿದ್ದಾರೆ. ಮತ್ತು ಈ ಸ್ವರೂಪದ ವಿಮರ್ಶಾ ಬರವಣಿಗೆ ಎಲ್ಲಾ ಕಾಲದಲ್ಲೂ ಮುಂದುವರಿದಿದೆ. 'ಕನ್ನಡ ಸಾಹಿತ್ಯ ವಿಮರ್ಶೆ ಸೊರಗಿದೆ' ಎಂದು ಕೊರಗುವವರು ಸಾಹಿತ್ಯದ ಪರಿಚಯಾತ್ಮಕ, ವಿವರಣಾತ್ಮಕ ವಿಮರ್ಶಾ ಬರವಣಿಗೆಯ ಬಗೆಗೆ ಯಾಕೆ ಮಾತಾಡುವುದಿಲ್ಲ? ಕೆಳಜಾತಿ, ಕೆಳವರ್ಗ ಮತ್ತು ಇಂಗ್ಲಿಶ್ ಸಾಹಿತ್ಯ ವಿಮರ್ಶೆ ಓದದವರು, ಬೇಡ ಎಂದವರು ಬರೆಯುವ ಸಾಹಿತ್ಯ ವಿಮರ್ಶೆ ಮಾತ್ರ ಸೊರಗಿ ಬಿಡುತ್ತದೆಯೇ? ಇದು ಇತ್ತೀಚೆಗೆ ಸಾಹಿತ್ಯವನ್ನು ಕುರಿತು ಬರೆಯುತ್ತಿರುವವರ ಸಾಮಾಜಿಕ ಹಿನ್ನೆಲೆಯ ಬಗೆಗಿನ ಪೂರ್ವಗ್ರಹದಂತೆ ಕಾಣುತ್ತದೆ.

'ಸಾಹಿತ್ಯದ ಸಾಮಾನ್ಯ ಓದಿಗೆ' ದಿನಪತ್ರಿಕೆಗಳ ಸಾಪ್ತಾಹಿಕ ಪುರವಣಿಗಳು ದೊಡ್ಡ ಕೊಡುಗೆ ನೀಡಿವೆ. ಪತ್ರಿಕೆಗಳಲ್ಲಿ ಬರುವ ಸಾಹಿತ್ಯ ವಿಮರ್ಶೆಯ ಬರವಣಿಗೆಗಳು, ಇತರೆ ವಿಷಯಗಳನ್ನು ಕುರಿತು ಸಾಹಿತಿಗಳು ಬರೆಯುವ ಬರವಣಿಗೆಗಳು, ಸಾಹಿತಿಗಳ ಸಂದರ್ಶನಗಳು, ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಪ್ರಶ್ನೆಗಳನ್ನು ರೂಪಿಸಿ, ಅವಕ್ಕೆ ಪ್ರತಿಕ್ರಿಯೆ ಪಡೆದು ಪ್ರಕಟಿಸುವ ಬರವಣಿಗೆಗಳು ಇವೆಲ್ಲವೂ ಕೂಡಾ ಸಾಮಾನ್ಯ ಓದಿನ ಬರವಣಿಗೆಗಳು.

ಇತ್ತೀಚೆಗೆ ಪ್ರಥಮ ದರ್ಜೆ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ಅಧ್ಯಾಪಕರಿಗೆ ಅವರ ಶೈಕ್ಷಣಿಕ ಪ್ರಗತಿಯನ್ನು ಅಳೆಯುವ ಸಲುವಾಗಿ ಎ.ಪಿ.ಐ. ಸ್ಕೋರ್ ಪದ್ಧತಿಯನ್ನು ಜಾರಿಗೊಳಿಸಲಾಗಿದೆ. ಇದು ಬಂದ ನಂತರ ಸೆಮಿನಾರುಗಳಿಗೆ ಕರೆಯುವುದು, ಲೇಖನ ಬರೆಸುವುದು ಹಾಗೂ ಪುಸ್ತಕಗಳನ್ನು ಪ್ರಕಟಿಸುವುದು ಮತ್ತು ಪಠ್ಯಕ್ರಮದಲ್ಲಿ ಬರವಣಿಗೆಯನ್ನು ಸಂಯೋಜಿಸುವುದು, ಪಿಎಚ್.ಡಿ. ಮೌಲ್ಯಮಾಪನ – ಇವುಗಳಲ್ಲಿ ಜಾತಿ, ಉಪಜಾತಿ, ಹುದ್ದೆ ಮುಂತಾದ ಹಿತಾಸಕ್ತಿಗಳು ಶಕ್ತಿಶಾಲಿಯಾಗಿ ಕೆಲಸ ಮಾಡುತ್ತಿವೆ. ಪ್ರಶಸ್ತಿ, ಬಹುಮಾನ ಮುಂತಾದುವು ಇದಕ್ಕೆ ಗಟ್ಟಿಯಾಗಿ ಅಂಟಿಕೊಂಡು ನಡೆಯುತ್ತಿವೆ. ಇದು ದೊಡ್ಡ ರಾಜಕಾರಣವೂ, ದೊಡ್ಡ ಮಾಫಿಯಾವೂ ಆಗಿದೆ. ಇದು ಸಾಹಿತ್ಯ ಓದನ್ನು, ಅದರ ಅನುಸಂಧಾನವನ್ನು ಗುಣಾತ್ಮಕವಾಗಿ ಅತ್ಯಂತ ಕೆಳದರ್ಜೆಗೆ ಇಳಿಸಿದೆ. ಕನ್ನಡ ಎಂ.ಎ. ಪಠ್ಯಕ್ರಮದಲ್ಲಿ, ಅನೇಕ ಪಠ್ಯಗಳಿಗೆ ಪರಿಚಯ ಅಥವಾ ಸಾರಾಂಶ ಹೇಳಲು ಮಾತ್ರ ಅರ್ಹತೆ ಪಡೆದಿರುವ ಪಠ್ಯಗಳಿವೆ. ತರಗತಿಯೊಳಗೆ ಇಂತಹ ಕಳಪೆಗುಣಮಟ್ಟದ ಪಠ್ಯಗಳನ್ನು ಕೇವಲ ಸಾರಾಂಶದ ನೆಲೆಯಲ್ಲಿ ಅಭ್ಯಾಸ ಮಾಡುವ ಈ ಕಾಲದ ತಲೆಮಾರು ಸಾಹಿತ್ಯ ಪಠ್ಯಗಳಿಗೆ ಗಂಭೀರವಾದ ಹಾಗೂ ಆಳವಾದ ನೆಲೆಯಲ್ಲಿ ಅನುಸಂಧಾನ ಮಾಡಲು ಆಗುತ್ತಿಲ್ಲ.

ಸಿದ್ಧಾಂತ ಪ್ರಧಾನ ಸಾಹಿತ್ಯ, ಹಳಗನ್ನಡ ಸಾಹಿತ್ಯ ಹಾಗೂ ಶಾಸ್ತ್ರಪ್ರಧಾನ ಸಾಹಿತ್ಯದ ಓದು ಕಡಿಮೆಯಾಗುತ್ತಿದೆ. ಜೊತೆಗೆ ಈ ಸಾಹಿತ್ಯ ಕುರಿತ ವಿಮರ್ಶಾ ಬರವಣಿಗೆಯೂ ಕಡಿಮೆಯಾಗಿದೆ. 'ವ್ಯಾಖ್ಯಾನ ಪ್ರಧಾನ ಬರವಣಿಗೆಗಳು ಅರ್ಥ ಆಗಲ್ಲ' ಎಂದೂ, 'ಇಂತಹ ಬರವಣಿಗೆಗಳು ಜನರಿಗೆ ಅರ್ಥ ಆಗಲ್ಲ' ಎಂದೂ, 'ಜನರಿಗೆ ಅರ್ಥವಾಗುವ ಹಾಗೆ ಬರೆಯಬೇಕು' ಎಂದೂ ಉಪದೇಶದ ಮಾದರಿಯಲ್ಲಿ ಹೇಳಲಾಗುತ್ತಿದೆ. ಆದರೆ 'ಜನರಿಗೆ ಅರ್ಥ ಆಗುವುದು ಎಂದರೆ ಏನು?' ಎಂಬುದನ್ನು ಇದರ ವಕ್ತಾರರು ವಿವರಿಸಿಲ್ಲ. ಹೀಗೆ ಆರೋಪ ಮಾಡುವ ಕೆಲವರು ಸಾಹಿತ್ಯ ಸಂಸ್ಕೃತಿಯ ಬಗೆಗೆ ವಿವರಣೆ ಕೊಟ್ಟುಕೊಂಡು ಕೂತಿದ್ದಾರೆ. ಇವರು ವಿವರಣೆಕಾರರೇ ಹೊರತು ವಿಮರ್ಶಕರಲ್ಲ. ಆದರೆ ದುರಂತ ಏನಾಗಿದೆ ಎಂದರೆ ಇವರನ್ನೇ ತಪ್ಪಾಗಿ ವಿಮರ್ಶಕರು ಎಂದು ಕರೆಯುವಂತಾಗಿದೆ.

ಸಾಹಿತ್ಯ ಪಠ್ಯಗಳ ನಿಕಟ ಓದಿನ ಫಲವಾಗಿ ಸೃಜನಶೀಲ ಕೃತಿಗಳು ಮೂಡುತ್ತಿವೆ. ಅಂದರೆ ಒಂದು ಸಾಹಿತ್ಯ ಪಠ್ಯವನ್ನು ನಿಕಟವಾಗಿ ಓದಿ, ಅದನ್ನು ಬೇರೊಂದು ಪ್ರಕಾರದಲ್ಲಿ ಸೃಷ್ಟಿಸುವುದು ಇದರ ಸ್ವರೂಪ. ಉದಾಹರಣೆಗೆ, ಕೆ.ವೈ. ನಾರಾಯಣಸ್ವಾಮಿ ಅವರು ಪಂಪನ ಪಂಪಭಾರತವನ್ನು ಓದಿ, ಅದರ ತಾತ್ವಿಕ ಹಾಗೂ ದಾರ್ಶನಿಕ ಪ್ರಭಾವದಿಂದ ಪಂಪಭಾರತ ಎಂಬ ನಾಟಕವನ್ನು ಬರೆದು ಪ್ರಕಟಿಸಿದ್ದಾರೆ. ಈ ಸೃಜನಶೀಲ ಕೆಲಸದಲ್ಲಿ ಪಂಪ ೧೦ನೇ ಶತಮಾನದವನು ಆಗುವುದಿಲ್ಲ; ಪಂಪಭಾರತ ೧೦ನೇ ಶತಮಾನದ್ದು ಆಗುವುದಿಲ್ಲ. ನಾಟಕ ನಮ್ಮ ಕಾಲದ್ದಾಗಿ ಸೃಷ್ಟಿಯಾಗುತ್ತದೆ. ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ಇದಕ್ಕೆ ಬಹಳ ದೊಡ್ಡ ಪರಂಪರೆ ಇದೆ. ಸ್ವತಃ ಪಂಪನೇ ವ್ಯಾಸ ಭಾರತವನ್ನು ಕನ್ನಡ ಭಾರತವಾಗಿಸಿದ. ಇಂತಹ ಹತ್ತಾರು ಪ್ರಯೋಗಗಳು ಸಾಹಿತ್ಯ ಓದಿನ ಪರಿಣಾಮದಿಂದ ನಡೆದಿವೆ.

'ಸಾಹಿತ್ಯ ಪಠ್ಯಗಳ ಮಾಧ್ಯಮ ಪಲ್ಲಟ'ದ ಕೆಲಸ ಸಾಹಿತ್ಯ ವಿಮರ್ಶೆಯ ಇನ್ನೊಂದು ಮುಖ್ಯ ನೆಲೆ. ಸಾಹಿತ್ಯ ಪಠ್ಯವೊಂದನ್ನು ರಾಗ ಸಂಯೋಜನೆ ಮಾಡಿ ಹಾಡಾಗಿಸುವುದು, ರಾಗ ಹಾಗೂ ದೃಶ್ಯ ಸಂಯೋಜನೆ ಮಾಡಿ ಡ್ಯಾನ್ಸ್ ಆಗಿಸುವುದು ಮತ್ತು

Scanned with CamScanner

ನಾಟಕವಾಗಿಸುವುದು ಇದರ ಸಾಮಾನ್ಯ ಸ್ವರೂಪ. ಸಿ. ಬಸವಲಿಂಗಯ್ಯ ಇವರು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ೯ ಗಂಟೆಗಳ ಕಾಲದ ನಾಟಕ ಮಾಡಿದರು. ಇದೊಂದು ದಾಖಲೆಯ ಸೃಜನಶೀಲ ಕೆಲಸ. ಇಂತಹ ಹತ್ತಾರು ಪ್ರಯೋಗಗಳು ನಮ್ಮ ಮುಂದೆ ನಡೆಯುತ್ತಿವೆ.

ಸಮಕಾಲೀನ ಸಂದರ್ಭಗಳ ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ವಿಷಯಗಳ ಚರ್ಚೆಯ ಭಾಗವಾಗಿ ಸಾಹಿತ್ಯವನ್ನು ಓದುವ ಕ್ರಮ ರೂಢಿಗೆ ಬಂದಿದೆ. ಬಹುಸಂಸ್ಕೃತಿ, ಬಹುತ್ವದ ನೆಲೆಗಳು, ಜಾತಿ, ಮಹಿಳೆ, ಪ್ರದೇಶ ಈ ಆಯಾಮದಲ್ಲಿ ಸಾಹಿತ್ಯ ಪತ್ಯಗಳನ್ನು ಓದಲಾಗುತ್ತಿದೆ. ಇಂತಹ ಓದುಗಳಲ್ಲಿ ಸಾಹಿತ್ಯ ಪತ್ಯಗಳ ಆಳವಾದ ಮತ್ತು ಗಂಭೀರವಾದ ಓದು ಹಾಗೂ ಅಭ್ಯಾಸ ಇರುವುದಿಲ್ಲ. ಸಮಕಾಲೀನ ಎಂದು ಕರೆದುಕೊಳ್ಳುವ ಆಶಯವೊಂದಕ್ಕೆ ಗಂಟುಬಿದ್ದು, ಅದನ್ನು ಮೇಲುಸ್ತರದಲ್ಲಿ ವಿವರಿಸಿಕೊಂಡು, ಅದರ ಸ್ವರೂಪಕ್ಕೆ ಸಾಹಿತ್ಯ ಪತ್ಯಗಳಲ್ಲಿ ಪುರಾವೆಗಳನ್ನು ಹುಡುಕಿ ಗಂಟುಹಾಕುವ ಕೆಲಸ ನಡೆಯುತ್ತಿದೆ. ಇದು ಸಾಹಿತ್ಯ ಪತ್ಯಗಳ ಮೇಲೆ ನಡೆಸುತ್ತಿರುವ 'ಬಲಾತ್ಕಾರ'ದಂತೆ ಕಾಣುತ್ತಿದೆ. ಸಾಹಿತ್ಯ ಪತ್ಯದ ಚಲನಶೀಲ ಆಂತರಿಕ ಸಂಬಂಧಗಳ ಬಗೆಗೆ ಏನನ್ನೂ ಚರ್ಚೆ ಮಾಡದೆ, ಸಾಹಿತ್ಯ ಪತ್ಯದಿಂದ ತಮಗೆ ಬೇಕಾದುದನ್ನು ಆಯ್ಕೆ ಮಾಡುವ ವಿಧಾನ ಇದು. ತಮಗೆ ಬೇಕಾದುದನ್ನು ಆಯ್ಕೆ ಮಾಡುವಾಗ ತಮಗೆ ಬೇಡವಾದುದನ್ನು ಹೊರಗಿಡುವ ಕೆಲಸವೂ ನಡೆಯುತ್ತದೆ. ಪತ್ಯದ ಮೇಲುಮೇಲಿನ ಆಯ್ದ ಭಾಗಗಳನ್ನು ಉಲ್ಲೇಖಿಸಿ ತಮ್ಮ ವೈಚಾರಿಕ ಚೌಕಟ್ಟುಗಳಿಗೆ ಜೋಡಿಸುವ ಕ್ರಮ ಈ ಬರವಣಿಗೆಯದ್ದು. ಇದು ಒಂದು ಕಡೆ ಸಂಬಂಧಿಸಿದ ಪರಿಕಲ್ಪನೆಯನ್ನೂ ಬೆಳೆಸುವುದಿಲ್ಲ; ಮತ್ತೊಂದು ಕಡೆ ಸಾಹಿತ್ಯ ಪತ್ಯದ ಆಳಕ್ಕೂ, ಅದರ ಚಲನಶೀಲ ಸಂಕೀರ್ಣ ನೆಲೆಗಳಿಗೂ ಹೋಗುವುದಿಲ್ಲ. ಇಷ್ಟೆಲ್ಲ ಮಿತಿಗಳಿಂದ ಕೂಡಿರುವ ಈ ಬಗೆಯ ಸಾಹಿತ್ಯವನ್ನು ಕುರಿತ ಬರವಣಿಗೆ ಸುಲಭವಾಗಿ ಸ್ವೀಕಾರಯೋಗ್ಯ ಎನಿಸಿದೆ. ಈ ಮಿತಿಯನ್ನು ದಾಟಲು ಸಾಹಿತ್ಯ ಪತ್ಯಗಳು ಒತ್ತಾಯಿಸುತ್ತಿವೆ; ಆದರೆ ನಮ್ಮ ಓದು ಮತ್ತು ಬರವಣಿಗೆಗಳು ಸದ್ಯ ಇದಕ್ಕೆ ಬೆನ್ನು ಮಾಡಿರುವಂತೆ ತೋರುತ್ತಿದೆ.

ಸದಭಿರುಚಿಯ ಕೃತಿಗಳಿಗಾಗಿ ಸಂಪರ್ಕಿಸಿ

ಧಾರವಾಡದ 'ಸಂಗಾತ ಪುಸ್ತಕ' ಮಳಿಗೆಯಲ್ಲಿ ಸದಭಿರುಚಿಯ ಸಾಹಿತ್ಯ ಕೃತಿಗಳು ಲಭ್ಯ ಇವೆ. ಜತೆಗೆ ಅಂಚೆ ಮೂಲಕ ರಿಯಾಯಿತಿ ದರದಲ್ಲಿ ಕೂಡ ಪುಸ್ತಕಗಳನ್ನು ಕಳಿಸಲಾಗುವುದು. ಆಸಕ್ತ ಓದುಗರು ಸಂಪರ್ಕಿಸಬಹುದು.

ವಿಳಾಸ
ಸಂಗಾತ ಪುಸ್ತಕ
ಕರ್ನಾಟಕ ವಿಶ್ವ ವಿದ್ಯಾಲಯ ರಸ್ತೆ
ಜಯನಗರ ಕ್ರಾಸ್
ಸಪ್ತಾಪುರ, ಧಾರವಾಡ-580001
ಮೊಬೈಲ್: 8431113501

Scanned with CamScanner

Annexure – 15

ಕನ್ನಡ ಸಾಹಿತ್ಯ ಪರಿಷತ್ತು

ಮನುಷ್ಯ ಜಾತಿ ತಾನೊಂದೆ ವಲಂ

ದಲಿತ ಸಾಹಿತ್ಯ ಸಂಪುಟ

ಪಂಜು

ಪ್ರಧಾನ ಸಂಪಾದಕರು
ನಾಡೋಜ ಡಾ. ಮನು ಬಳಿಗಾರ್

ಸಂಪಾದಕರು
ಡಾ. ಸತ್ಯಮಂಗಲ ಮಹದೇವ

Scanned with CamScanner

ಅಂಚೆಯಲ್ಲಿ ಬಂತು
11-08-2021
ಕುಷ್ಟಳಿ..

ದಲಿತ ಸಾಹಿತ್ಯ ಸಂಪುಟ

ವಿಮರ್ಶೆ

ಪ್ರಧಾನ ಸಂಪಾದಕರು

ನಾಡೋಜ ಡಾ. ಮನು ಬಳಿಗಾರ್

ಸಂಪಾದಕರು

ಡಾ. ಸತ್ಯಮಂಗಲ ಮಹಾದೇವ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು – ೫೬೦ ೦೧೮.

Scanned with CamScanner

ಪರಿವಿಡಿ

೦೧. ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರಣ ೦೧
• ಪ್ರೊ. ಬಿ. ಕೃಷ್ಣಪ್ಪ

೦೨. ದಲಿತ ಸಾಹಿತ್ಯ ಕೆಲವು ತಾತ್ವಿಕ ಚಿಂತನೆಗಳು ೧೨
• ಡಾ. ದೇವಯ್ಯ ಹರವೆ

೦೩. ಸಮಗಾರ ಭೀಮವ್ವ : ಎಚ್.ಎಸ್.ಶಿವಪ್ರಕಾಶ್ ೨೦
• ಪ್ರೊ. ಮಲ್ಲೇಪುರಂ ಜಿ ವೆಂಕಟೇಶ

೦೪. ಸ್ತ್ರೀವಾದ – ದಲಿತವಾದದಿಂದ ದಲಿತ ಸ್ತ್ರೀವಾದದೆಡೆಗೆ ೨೬
• ಪ್ರೊ. ಅರವಿಂದ ಮಾಲಗತ್ತಿ

೦೫. ದಲಿತ ಸಾಹಿತ್ಯ ಒಂದು ಹಿನ್ನೋಟ ೪೭
• ಡಾ. ಮೂಡ್ನಾಕೂಡು ಚಿನ್ನಸ್ವಾಮಿ

೦೬. ದಲಿತ ಸಾಹಿತ್ಯ ಎತ್ತ ಸಾಗಿದೆ? ೫೧
• ಡಾ. ಮುನಿವೆಂಕಟಪ್ಪ

೦೭. ಸಾಹಿತ್ಯ ಮತ್ತು ಸಮಾಜ ೫೬
• ಡಾ. ಎಚ್.ಟಿ. ಪೋತೆ

೦೮. ಜೀವ ಕಾರುಣ್ಯದ ಎನ್ಕೆ ಕಾವ್ಯ ೬೬
• ಸುಬ್ಬು ಹೊಲೆಯಾರ್

೦೯. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಪುರಾಣ : ಮೊದಲ ವೈಚಾರಿಕ ದಲಿತ ಪುರಾಣ ೭೦
• ಡಾ. ಅರ್ಜುನ ಗೊಳಸಂಗಿ

೧೦. ಹನೂರು ಚಿನ್ನಪ್ಪನವರ ಬೆಲ್ಲದ ದೋಣಿ ೭೫
• ಡಾ. ಬಿ. ಮಹೇಶ್ ಹರವೆ

೧೧. ಕಾವ್ಯ ಎಂಬುದು ಕವಿಯ ಧ್ಯಾನದ ಫಲ ೭೮
• ಡಾ. ಮಹದೇವ ಶಂಕನಪುರ

೧೨. ಮಹಿಳೆಯರ ಸಹಭಾಗಿತ್ವವಿಲ್ಲದೆ ಯಾವ ಚಳುವಳಿಯೂ ಅಪೂರ್ಣ ೮೬
• ದು. ಸರಸ್ವತಿ

೧೩. ಜಿ.ವೆಂಕಟಯ್ಯನವರ ಕಥೆಗಳಲ್ಲಿ ದಲಿತ ಸಂವೇದನೆ ೯೮
• ಪ್ರೊ. ಸೋಮಣ್ಣ ಹೊಂಗರಹಳ್ಳಿ

೧೪. ಕನ್ನಡ ದಲಿತ ಸಾಹಿತ್ಯ ವಿಚಾರ ವಿಮರ್ಶೆ ೧೧೧
• ಡಾ. ಶಿವಾನಂದ ಕೆಳಗಿನಮನಿ

೧೫. ಸೃಜನಶೀಲತೆಯ ಚರ್ಚೆ : ದಲಿತ ಸಾಹಿತ್ಯದ ಮೂಲಕ ೧೨೪
• ಡಾ. ಬಿ.ಎಂ. ಪುಟ್ಟಯ್ಯ

೧೬. ಸಿದ್ಧಲಿಂಗಯ್ಯನವರ ಕಾವ್ಯದ ಹೊಸ ಓದು ೧೩೫
• ಡಾ. ಟಿ. ಯಲ್ಲಪ್ಪ

೧೭. ಬಸವಣ್ಣ ಮತ್ತು ದಲಿತ ಮೂಲದ ವಚನಕಾರರು ೧೪೭
• ಡಾ. ವಡ್ಡಗೆರೆ ನಾಗರಾಜಯ್ಯ

೧೮. ಕಾವ್ಯ– ನಾಟಕ ಸಾಹಿತ್ಯಕ್ಕೆ ದಲಿತ ಕವಿಗಳ ಕೊಡುಗೆ ೧೬೪
• ಡಾ. ಅನಸೂಯಾ ಕಾಂಬಳೆ

೧೯. ಮಹಿಳಾ ಸಾಹಿತ್ಯ – ದಲಿತ ಸಂವೇದನೆ ೧೮೦
• ಡಾ. ಸುಜಾತಾ ಚಲವಾದಿ

೨೦. ಆಧುನಿಕೋತ್ತರ ತೆಲುಗು ದಲಿತ ಸಾಹಿತ್ಯದ ಅರುಂಧತಿ ನಕ್ಷತ್ರ : ಪ್ರೊ. ಎಂಡ್ಲೂರಿ ಸುಧಾಕರ್ ೧೯೦
• ಡಾ. ಅಣ್ಣಮ್ಮ

೨೧. ದಲಿತ ಸಾಹಿತ್ಯದ ಛಂದೋಲಯಗಳು ೧೯೭
• ಡಾ. ರವಿಕುಮಾರ್ ನೀಹಾ

೨೨. ಮುಳ್ಳೂರು ನಾಗರಾಜರ ಸಾಹಿತ್ಯ ಅವಲೋಕನ ೨೦೯
• ಡಾ. ಅಪ್ಪಗೆರೆ ಸೋಮಶೇಖರ

೨೩. ಬಾಬಾಸಾಹೇಬರ ಬಹುಮುಖಿ ಕಾಳಜಿಯ ಅನಾವರಣ : ಎಲ್. ಹನುಮಂತಯ್ಯನವರ 'ಅಂಬೇಡ್ಕರ್' ನಾಟಕ ೨೨೨
• ಡಾ. ಎಸ್. ನರೇಂದ್ರ ಕುಮಾರ್

೨೪. ದಲಿತ ಮಹಿಳೆ ಮತ್ತು ಜಾಗತಿಕ ವಿವೇಕ ೨೨೭
• ಹುಲಿಕುಂಟೆ ಮೂರ್ತಿ

೨೫. ಕೆ.ಬಿ.ಕಾವ್ಯಮಾರ್ಗ : ಆದಿಮ ಪರಂಪರೆಗಳ ಬಹುರೂಪಿ ನೆಲೆಗಳು ೨೩೬
• ಎಸ್.ಕೆ. ಮಂಜುನಾಥ್

Scanned with CamScanner

ಸೃಜನಶೀಲತೆಯ ಚರ್ಚೆ : ದಲಿತ ಸಾಹಿತ್ಯದ ಮೂಲಕ

- ಡಾ. ಬಿ.ಎಂ. ಪುಟ್ಟಯ್ಯ

ಸೃಜನಶೀಲತೆ: ತಾತ್ವಿಕ ವಿಚಾರಗಳು

ಸಾಹಿತ್ಯವನ್ನು ಔಪಚಾರಿಕ ಅಧ್ಯಯನದ ಅನುಕೂಲಕ್ಕಾಗಿ ಸೃಜನಶೀಲ ಮತ್ತು ಸೃಜನೇತರ ಎಂದು ಎರಡು ಭಾಗ ಮಾಡಲಾಗಿದೆ. ಇವುಗಳ ಹಂಗಿಲ್ಲದೆ ಸಾಹಿತ್ಯವನ್ನು ಓದುವ ವಿಶಾಲವಾದ ಓದುಗರಿದ್ದಾರೆ. ಸಾಹಿತ್ಯವನ್ನು ಬದಿಗಿಟ್ಟು ಸೃಜನಶೀಲತೆ ಎಂದರೆ ಏನು ಮತ್ತು ಸೃಜನಶೀಲತೆಯ ಸ್ವರೂಪ ಯಾವುದು ಅಂತ ಚರ್ಚೆಮಾಡೋಣ. ಕೆಲವು ಕೆಲಸಗಳನ್ನು ಗಮನಿಸೋಣ. ಮಣ್ಣಿನಿಂದ ಮಡಕೆ ಮಾಡೋದು, ಚರ್ಮದಿಂದ ಚಪ್ಪಲಿ ಮಾಡೋದು, ಹಲವು ಪದಾರ್ಥಗಳನ್ನು ಬಳಸಿ ಅಡಿಗೆ ಮಾಡೋದು, ಮರದಿಂದ ಪೀಠೋಪಕರಣ, ಆಟೋಪಕರಣ ಮಾಡೋದು ಇತ್ಯಾದಿ. ಇದಕ್ಕೆ ಮೊದಲು ಎಂಬುದಿಲ್ಲ; ಕೊನೆ ಎಂಬುದೂ ಇಲ್ಲ. ಇಂತಹ ಚಟುವಟಿಕೆಗಳನ್ನು ಕೆಲಸ ಅಂತ ಕರಿತೀವಿ. ಹಾಗಿದ್ದರೆ ಕೆಲಸದ ಸ್ವರೂಪ ಯಾವುದು? ಕೆಲಸ ಮಾಡುವಾಗ ಮತ್ತು ಕೆಲಸ ಮಾಡಿ ಮುಗಿಸಿದ ಮೇಲೆ ಏನು ನಡೆದಿರುತ್ತದೆ? ಏನೇ ಕೆಲಸ ಮಾಡಿದರೂ ಕೂಡ ವಸ್ತುವಿನಲ್ಲಿ ಬದಲಾವಣೆ ಆಗುತ್ತೆ. ಭತ್ತದಿಂದ ಅಕ್ಕಿ ಮಾಡುವುದು, ಅಕ್ಕಿಯಿಂದ ಹಿಟ್ಟು ಮಾಡುವುದು, ಹಿಟ್ಟಿನಿಂದ ರೊಟ್ಟಿ ಮಾಡುವುದು, ಹಿಟ್ಟಿನಿಂದ ಗೊಂಬೆ ಮಾಡುವುದು ಇವೆಲ್ಲ ಕೆಲಸ. ಹೀಗೆ ವಸ್ತುವಿನ ರೂಪ ಸ್ವರೂಪವನ್ನು ಬದಲಾಯಿಸಲು ಕೆಲಸ ಮಾಡುವವರ ದೇಹ, ಮನಸ್ಸು, ಕಲ್ಪನೆ ಮತ್ತು ಭಾವನೆಗಳು ಶ್ರಮ ಹಾಕಿರುತ್ತವೆ. ಒಂದು ಅಥವಾ ಒಂದಕ್ಕಿಂತ ಹೆಚ್ಚು ವಸ್ತುಗಳು ತಮ್ಮ ಮೊದಲಿನ ರೂಪ ಸ್ವರೂಪವನ್ನು ಬದಲಾಯಿಸಿಕೊಂಡು, ಮತ್ತೊಂದು ವಸ್ತುವಾಗಿ ಬದಲಾಗಿರುತ್ತವೆ. ಕುಡಿಯುವ ಟೀಯಲ್ಲಿ ನೀರು, ಹಾಲು, ಟೀ ಪುಡಿ ಮುಂತಾದುವು ಶಾಖದಲ್ಲಿ ಪರಸ್ಪರ ಹದವಾಗಿ ಬೆರೆತಿರುತ್ತವೆ. ಈ ವಸ್ತುಗಳು ತಮ್ಮ ಮೊದಲಿನ ಸ್ಥಿತಿಯ ಬಣ್ಣ, ರುಚಿಗಳನ್ನು ಬದಲಾಯಿಸಿಕೊಳ್ಳುತ್ತವೆ. ಇವು ಪರಸ್ಪರ ಬೇರ್ಪಡಿಸದಂತೆ ಬೆರೆತಿರುತ್ತವೆ. ಈ ಸೂತ್ರವನ್ನು ಇಂತಹ ಸಾವಿರಾರು ಕೆಲಸಗಳ ಸ್ವರೂಪವನ್ನು ವಿವರಿಸಲು ಮತ್ತು ಅರಿಯಲು ಬಳಸಬಹುದು. ಭೌತವಸ್ತುಗಳ ರೂಪ ಸ್ವರೂಪವನ್ನು ಮಾನವರ ಅಗತ್ಯಗಳಿಗೆ ಬದಲಾಯಿಸುವುದನ್ನು ಕೆಲಸ ಎನ್ನುತ್ತೇವೆ. ಇಲ್ಲಿ ಕೆಲಸ ಮಾತ್ರ ನಡೆದಿಲ್ಲ. ಕೆಲಸದ ಪರಿಣಾಮದಿಂದ ಹೊಸ ಪದಾರ್ಥ ಸೃಷ್ಟಿಯಾಗಿದೆ. ಇದನ್ನು ಮತ್ತು ಇಂತಹದನ್ನು ಸೃಜನಶೀಲತೆ ಎಂದು ಕರೆಯುತ್ತೇವೆ.

ಮೇಲಿನ ಸೂತ್ರವನ್ನು ಸಾಹಿತ್ಯ ನಿರ್ಮಾಣ ಮತ್ತು ಸಾಹಿತ್ಯದ ಓದಿಗೆ ವಿಸ್ತರಿಸೋಣ. ಅನುಭವ, ಕಲ್ಪನೆ, ಭಾವನೆ ಮತ್ತು ಆಲೋಚನೆಗಳನ್ನು ಸಂವೇದನಾಶೀಲತೆಯಿಂದ ಭಾಷಿಕವಾಗಿ ಹದಗೊಳಿಸುವುದನ್ನು ಸಾಹಿತ್ಯ ಸೃಷ್ಟಿ ಎನ್ನಬಹುದು. ಸಾಹಿತ್ಯ ನಿರ್ಮಾಣಕಾರರಿಗೆ ಅವರದೇ ಆದ ಅನುಭವ, ತಿಳುವಳಿಕೆ, ಆಲೋಚನೆ, ಭಾವನೆ, ಕಲ್ಪನೆಗಳು ಇರುತ್ತವೆ. ಇವನ್ನು ಹದಗೊಳಿಸಿ ಸಾಹಿತ್ಯ ಸೃಷ್ಟಿ ಮಾಡುತ್ತಾರೆ. ಹಾಗೆ ಸೃಷ್ಟಿಯಾದ ಸಾಹಿತ್ಯದಲ್ಲಿ ಬರಹಗಾರರ ಅನುಭವ ಮುಂತಾದುವು ಅವರಲ್ಲಿ ಮೊದಲಿದ್ದ ಸ್ಥಿತಿಯಲ್ಲೇ ಇರುವುದಿಲ್ಲ. ಅನುಭವದೊಂದಿಗೆ ಕಲ್ಪನೆ, ಭಾವನೆ, ಆಲೋಚನೆ ಮತ್ತು ವಿಚಾರಗಳೆಲ್ಲವೂ ಪರಸ್ಪರ ಬೆರೆತು ಭಾಷೆಯಲ್ಲಿ ಮರುಸೃಷ್ಟಿಯಾಗುತ್ತವೆ. ಭಾಷಿಕ ಸಂಯೋಗದಲ್ಲಿ ಹೊಸ ಅನುಭವ ಲೋಕ ಸೃಷ್ಟಿಯಾಗುತ್ತದೆ. ಭಾಷೆ ಎಂಬ ಬಾಣಲಿಯಲ್ಲಿ ಅನುಭವ–ಕಲ್ಪನೆ–ಭಾವನೆ–ಆಲೋಚನೆ–ವಿಚಾರಗಳೆಲ್ಲವೂ ಬೆರೆತು, ಕುದ್ದು ಹೊಸರೂಪ, ಹೊಸಸ್ವರೂಪ ತಾಳುತ್ತವೆ. ಈ ಅನುಭವ ಗ್ರಾಮೀಣ, ನಗರ, ಆಧುನಿಕ, ಸಾಮೂಹಿಕ, ವೈಯಕ್ತಿಕ, ಖಾಸಗಿ, ಪುರುಷ, ಮಹಿಳೆ, ದಲಿತ, ಆದಿವಾಸಿ, ಅಲೆಮಾರಿ ಯಾವುದೇ ಇರಬಹುದು. ಅದರೊಂದಿಗೆ ಬೆರೆಯುವ ಕಲ್ಪನೆ–ಭಾವನೆ–ಆಲೋಚನೆ–ವಿಚಾರಗಳು ಭಿನ್ನಭಿನ್ನವಾಗಿರಬಹುದು. ಭಾಷೆಯಲ್ಲಿ ಇವು ಮರುರೂಪಗೊಂಡು ಸಾಹಿತ್ಯ ನಿರ್ಮಾಣವಾಗುತ್ತದೆ. ಸಾಹಿತ್ಯವನ್ನು ಓದುವಾಗಲೂ ಕೂಡ ಅಷ್ಟೆ ಭಿನ್ನ ಭಿನ್ನ ಓದುಗರ ಭಿನ್ನ ಭಿನ್ನ ಅನುಭವ–ಕಲ್ಪನೆ–ಭಾವನೆ–ಆಲೋಚನೆ–ವಿಚಾರ ಈ ಎಲ್ಲವೂ ಓದುವ ಕೆಲಸದಲ್ಲಿ ಪಾತ್ರ ವಹಿಸುತ್ತವೆ. ಅದರಿಂದ ಒಂದು ಸಾಹಿತ್ಯ ಕೃತಿಗೆ ಹಲವು ಪ್ರತಿಕ್ರಿಯೆಗಳು, ವಿಮರ್ಶೆಗಳು, ಮೌಲ್ಯಮಾಪನಗಳು ಹುಟ್ಟುತ್ತವೆ.

ಭಾಗ ಎರಡು: ರಾಜಕೀಯ ಸೃಜನಶೀಲತೆಯ ಮುಖ್ಯ ಧಾರೆಗಳು

ವಸಾಹತುಶಾಹಿ ಭಾರತದಲ್ಲಿ ಮೂರು ಮಾದರಿಯ ರಾಜಕೀಯ ಸೃಜನಶೀಲತೆಗಳನ್ನು ಗುರುತಿಸಬಹುದು. ಒಂದು ಗಾಂಧಿ ಮಾದರಿ. ಇದು ಭಾರತದ ಗಡಿಯಾಚೆಗಿನ ಶತ್ರುವಿನ ವಿರುದ್ಧ ಮಾತ್ರ ಹೋರಾಡುವ, ಭಾರತದೊಳಗಿನ ವೈರುಧ್ಯಗಳಿಗೆ ಮುಖ್ಯ ಗಮನ ಕೊಡದೆ, ಆ ಮೂಲಕ ಭಾರತದ ಸನಾತನೆಯನ್ನು ಮತ್ತೆ ನಿರ್ಮಿಸುವ ರಾಜಕೀಯ ಸೃಜನಶೀಲತೆ. ಆಸ್ತಿ, ಸಂಪತ್ತು ಮತ್ತು ಅಧಿಕಾರವ ಅಸಮಾನತೆಯನ್ನು ಹಾಗೇ ಉಳಿಸಿಕೊಂಡು, ಮಾನವರ ಮನಸ್ಸಿನಲ್ಲಿ (ಇಂದ್ರಿಯಗಳಲ್ಲಿ) ಪರಿವರ್ತನೆ ಆಗಬೇಕು ಎಂದು ಕರೆಕೊಟ್ಟ ಮಾದರಿ ಇದು. ಇದನ್ನು ಹೊಂದಾಣಿಕೆಯ ಮಾದರಿ ಎನ್ನಬಹುದು. ಎರಡನೇಯದು ಡಾ. ಬಿ.ಆರ್. ಅಂಬೇಡ್ಕರ್ ಅವರ ರಾಜಕೀಯ ಮಾದರಿ. ಭಾರತೀಯ ಸಮಾಜದ ಅಸಮಾನತೆ, ಶ್ರೇಣೀಕರಣ, ಅನ್ಯಾಯ ಹಾಗೂ ಶೋಷಣೆಯ ಸಂಬಂಧಗಳನ್ನು, ಅದರ ವಿನಾಶಕಾರಿ ಪರಿಣಾಮಗಳನ್ನು ಗ್ರಹಿಸಿ, ಶ್ರೇಣೀಕರಣ–ಅಸಮಾನತೆ–ಅನ್ಯಾಯಗಳಿಲ್ಲದ ಸಮಾನತೆಯ ಸಮಾಜವನ್ನು ನಿರ್ಮಿಸಬೇಕೆಂಬ ರಾಜಕೀಯ ಸೃಜನಶೀಲತೆ. ಬಾಬಾಸಾಹೇಬರು ನಡೆಸಿದ ವಿವಿಧ ರೀತಿಯ ಹೋರಾಟಗಳು, ಅವರ ಬರಹಗಳು ಇದಕ್ಕೆ ಆಧಾರ. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳೇ ಇದರ ಅಡಿಗಲ್ಲು. ಇದನ್ನು ಸಮಾನತೆಯ ಮಾದರಿ

Scanned with CamScanner

ಎನ್ನಬಹುದು. ಮೂರನೆಯದು ಮೇಲಿನ ಎರಡರಷ್ಟು ಸ್ಪಷ್ಟವಾಗಿ ಕಾಣುವುದಿಲ್ಲ. ಆದರೆ ಅದರ ಮುಖ್ಯವಾದ ಚಹರೆಗಳನ್ನು ಗುರುತಿಸಬಹುದು. ಸಾಮಾನ್ಯ ಜನತೆ ತಮಗಿರುವ ನೋವು, ಸಂಕಟ, ಅಪಮಾನಗಳನ್ನು ಅರಿಯುತ್ತಲೆ ತಮ್ಮ ಬದುಕನ್ನು ಬದಲಾಯಿಸಿಕೊಳ್ಳಬೇಕು ಎಂಬುದಕ್ಕೆ ನಡೆಸಿದ ಆಲೋಚನೆಗಳು ಹಾಗೂ ಪ್ರಯತ್ನಗಳು. ಬ್ರಿಟೀಶರ ವಿರುದ್ಧ ಮತ್ತು ಸ್ಥಳೀಯ ಭೂಮಾಲಿಕರ ವಿರುದ್ಧ ಹೋರಾಡಿದ ಅನೇಕ ಜನತೆಯ ಹೋರಾಟಗಳನ್ನು ಗಮನಿಸಬೇಕು. ಜೊತೆಗೆ ಆ ಕಾಲದಲ್ಲಿ ರಚನೆಯಾದ ಜಾನಪದ ಸಾಹಿತ್ಯ ಪ್ರಕಾರಗಳನ್ನು ಗಮನಿಸಬಹುದು. ಇದನ್ನು ಸ್ಥಳೀಯ ಸ್ವಾವಲಂಬಿ ಮಾದರಿ ಎನ್ನಬಹುದು.

ಭಾಗ ಮೂರು: ಕನ್ನಡ ದಲಿತ ಸಾಹಿತ್ಯದ ಸೃಜನಶೀಲತೆ

ಕನ್ನಡ ದಲಿತ ಸಾಹಿತ್ಯ ಹಾಗೂ ದಲಿತ ಚಳುವಳಿಯನ್ನು ಸಮಗ್ರವಾಗಿ ಗ್ರಹಿಸಿದಾಗ ಸೃಜನಶೀಲ ಮತ್ತು ಸೃಜನೇತರ ಎಂಬ ವಿಂಗಡಣೆ ಬರುವುದಿಲ್ಲ. ಶ್ರೇಣೀಕರಣ, ಅಸಮಾನತೆ ಮತ್ತು ಅನ್ಯಾಯದಿಂದ ಕೂಡಿದ ವ್ಯವಸ್ಥೆಯೇ ಅಕ್ಷರದ ಮೂಲಕ ದಲಿತ ಸಾಹಿತ್ಯವನ್ನೂ, ಸ್ವಾಭಿಮಾನ ಮತ್ತು ಪ್ರತಿರೋಧದ ಮೂಲಕ ದಲಿತ ಹೋರಾಟವನ್ನೂ ಹುಟ್ಟುಹಾಕಿದೆ. ಈ ದೃಷ್ಟಿಯಲ್ಲಿ ದಲಿತ ಸಾಹಿತ್ಯ ಹಾಗೂ ದಲಿತ ಹೋರಾಟಗಳು ವ್ಯವಸ್ಥೆಯ ಕ್ರೂರ ಒಡಲನ್ನು ಸೀಳಿಕೊಂಡು ಹುಟ್ಟಿದ ಮಹಾನ್ ಸೃಜನಶೀಲತೆಗಳು. ಇವುಗಳ ಹುಟ್ಟೇ ಈ ವ್ಯವಸ್ಥೆಗೆ ಇಂತಹ ಶಕ್ತಿಯೂ ಇದೆಯಲ್ಲಾ ಎಂದು ಹುಬ್ಬೇರಿಸುವಂತೆ ಮಾಡಿದೆ. ಇದು ಬಂಡೆಗಳ ಮೇಲೆ ಚಿಗುರೊಡೆದದ್ದು ಅಲ್ಲ; ಬದಲಿಗೆ ಬಂಡೆಗಳನ್ನೇ ಸೀಳಿಕೊಂಡು ಚಿಗುರೊಡೆದದ್ದು. ಯುಗಯುಗಗಳಿಂದ ಹತ್ತಿಕ್ಕಲ್ಪಟ್ಟಿದ್ದ ಜನಸಮುದಾಯ ಅಕ್ಷರ ತಿಳುವಳಿಕೆಯ ಮೂಲಕ ಸ್ವಾಭಿಮಾನದ ಪ್ರತಿರೋಧವನ್ನು ನಿರ್ಮಿಸಿದ್ದೇ ಬಹುದೊಡ್ಡ ಸೃಜನಶೀಲತೆ. ಒಳಗಿನ ಜ್ವಾಲಾಮುಖಿಯನ್ನು ತಡೆದುಕೊಳ್ಳಲಾರದೆ ಭೂಮಿಯೆ ಬಾಯಿಬಿಟ್ಟಾಗ ಒಮ್ಮೆಲೇ ಹೊರಬರುವ ಲಾವಾರಸದಂತೆ ಈ ಎರಡರ ಹುಟ್ಟು. ಭೂಮಿ ಬಾಯಿಬಿಡುವುದು ಹೇಗೆ ನೈಸರ್ಗಿಕವೋ ಹಾಗೆಯೇ ಅದರೊಳಗಿಂದ ಲಾವಾರಸ ಹೊರಬರುವುದೂ ಕೂಡ ಅಷ್ಟೇ ನೈಸರ್ಗಿಕವಾದುದು. ಸಾಮಾಜಿಕ ಸೃಜನಶೀಲತೆಯು ಸಾಮಾಜಿಕ ವೈರುಧ್ಯದಲ್ಲಿ ನೈಸರ್ಗಿಕವಾಗಿ ಹುಟ್ಟುಪ್ತದೆ. ದಲಿತ ಹೋರಾಟ ಮತ್ತು ದಲಿತ ಸಾಹಿತ್ಯ ನೈಸರ್ಗಿಕ ಸೃಜನಶೀಲತೆಗಳು.

ಅಸ್ಪೃಶ್ಯ ಅಕ್ಷರಸ್ಥರ ಎದೆಯಾಳದಲ್ಲಿ ಹುಟ್ಟಿದ ಹೋರಾಟ ಹಾಗೂ ಸಾಹಿತ್ಯವು ಬದುಕಿನ ಕರಾಳತೆಯನ್ನು ಶೋಧಿಸಿದವು. ಅಸಮಾನತೆ ಮತ್ತು ಅನ್ಯಾಯಗಳನ್ನು ಗುರುತಿಸಿದವು. ಅವನ್ನು ಹೋಗಲಾಡಿಸುವ ದಾರಿಗಳ ಬಗ್ಗೆ ಆಲೋಚಿಸಿದವು. ಈ ಮರುರೂಪಣದ ಆಶಯ, ಹಿತಾಸಕ್ತಿ, ಧೋರಣೆ ಮತ್ತು ಕ್ರಿಯಾ ವಿಧಾನಗಳೇ ಸೃಜನಶೀಲತೆಯ ಶಕ್ತಿಶಾಲಿ ನೆಲೆಗಳು. ಬೌದ್ಧಿಕವಾದ ಈ ಕೆಲಸಗಳಿಗೆ ಸಾಹಿತ್ಯ ರಚನೆ ಮತ್ತು ಅದರ ಸಂವಹನಗಳೇ ಅತ್ಯಂತ ಶಕ್ತಿಶಾಲಿಯಾದ ಮಾಧ್ಯಮಗಳು. ಹಾಗಾಗಿಯೇ ಶೋಷಿತ ಸಮುದಾಯಗಳ ಬರವಣಿಗೆಯಲ್ಲಿ ಚರಿತ್ರೆ, ಪರಂಪರೆ ಮತ್ತು ವರ್ತಮಾನದ

ಕಟುವಿಮರ್ಶೆ ಹಾಗೂ ಅದರ ಮೂಲ ರಚನೆಯನ್ನು ಬದಲಾಯಿಸಬೇಕೆಂಬ ತುಡಿತ ತೀವ್ರವಾಗಿದೆ. ತುಳಿಯುವ ಜನ ಅಸ್ಪೃಶ್ಯರ ಬದುಕನ್ನು ಬದಲಾಗದ ಹಾಗೆ ಬಂಧಿಸಿಟ್ಟಿದ್ದಾರೆ ಎಂಬ ಅರಿವು ಮೂಡಿದ್ದು; ಬಂಧನದ ಬದುಕನ್ನು ಬದಲಾಯಿಸಬಹುದು ಎಂಬ ಅರಿವಿನ ಭರವಸೆ ಮೂಡಿದ್ದು ಸಾಮಾನ್ಯ ವಿಷಯವಲ್ಲ. ತಮ್ಮ ಬದುಕು ಗುಲಾಮತನ ಮತ್ತು ಅಪಮಾನಗಳಿಂದ ಕೂಡಿದೆ ಎಂಬ ಅರಿವು ಈ ಸಮುದಾಯಕ್ಕೆ ಮೂಡಿದ್ದು ಚಾರಿತ್ರಿಕವಾದ ಮಹತ್ವದ ಹೆಜ್ಜೆ.

ಸಿದ್ದಲಿಂಗಯ್ಯನವರ 'ಇಕ್ರಲಾ ವದಿರ್ಲಾ!' ಪದದ ಬಗೆಗೆ ಮತ್ತು 'ಕುಸುಮಬಾಲೆ' ಪೂರ್ವಿಕ ಮಲೆಮಾದೇಶ್ವರಂಗೆ ಅರ್ಪಣೆಯಾಗಿರುವ ಬಗೆಗೆ ಚರ್ಚೆ ನಡೆದಿದೆ. ದೇವನೂರು ಮಹಾದೇವ ಅವರ 'ದ್ಯಾವನೂರು' ಸಂಕಲನದ ಬೆನ್ನುಡಿಯಲ್ಲಿ 'ಖಂಡವಿದೆ ಕೋ, ಮಾಂಸವಿದೆ ಕೋ ಗುಂಡಿಗೆಯ ಬಿಸಿ ರಕ್ತವಿದೆ ಕೋ' ಎಂಬ ಸಾಲುಗಳು ಇವೆ. ಈ ಮಾತುಗಳು ಏನನ್ನು ಸೂಚಿಸಲು ಪ್ರಯತ್ನಿಸುತ್ತಿರಬಹುದು? 'ತಾ' ಎಂದು ಕೇಳಿದವರಿಗೆ 'ಕೋ' ಎಂದು ಕೊಡಲು ಹೊರಟ ಸಾಲುಗಳಿರಬಹುದು. 'ತಾ' ಎಂದು ಕೇಳಿದವರು ಯಾರು? ಅವರೇಕೆ ಇವರಿಂದ 'ತಾ' ಎಂದು ಕೇಳಿದರು? ಇವರೇಕೆ 'ಕೋ' ಎಂದು ಹೇಳಿದರು? 'ಖಂಡ, ಮಾಂಸ, ಗುಂಡಿಗೆಯ ಬಿಸಿರಕ್ತ' ಇವೆಲ್ಲ ಬರಿಯ ಸಾಹಿತ್ಯದ ರೂಪಕಗಳಾ? ಸಮಾಜದ ಚಲನಶೀಲ ಕ್ರೂರ ವಾಸ್ತವಗಳಾ? ದಲಿತ ಸಾಹಿತ್ಯ ಸಾಂಪ್ರದಾಯಿಕ ಅರ್ಥದಲ್ಲಿ ಬರಿಯ 'ಸಾಹಿತ್ಯ'ವಾ? ಖಂಡ, ಮಾಂಸ, ಗುಂಡಿಗೆಯ ಬಿಸಿರಕ್ತಗಳನ್ನು ಬದಿಗೊತ್ತಿ 'ಯಾರ ಜಪ್ತಿಗೂ ಸಿಗದ ನವಿಲುಗಳು' ಎಂದು ವಯ್ಯಾರದಿಂದ ಆಹಾ ! ಓಹೊ ! ಎಂದು ವೈಭವೀಕರಿಸಬೇಕಾ?

'ಹಾದೀಲಿ ಹೋಗೋರೆ ಹಾಡೆಂದು ಕಾಡ್ಬೇಡಿ, ಹಾಡಲ್ಲ ನನ್ನ ಒಡಲುರಿ' ಎಂಬ ಪದದಲ್ಲೂ ಇದೇ ಅಂಶವಿದೆ. ಹಾದಿಯಲ್ಲಿ ಹೋಗುವವರು ಹಾಡು ಹಾಡು (ಹಾಡು ಹೇಳು, ಹಾಡು ಹೇಳು) ಎಂದು ಒತ್ತಾಯಿಸಿದ್ದಾರೆ. ಹಾಗೆ ಒತ್ತಾಯಿಸಿದವರಿಗೆ ಹಾಡು ಅಲ್ಲ; ಮತ್ತು ಹಾಡಲು ಆಗುವುದಿಲ್ಲ; ಯಾಕೆಂದರೆ ಇದು ನನ್ನ ಒಡಲಿನ ಉರಿ. ಹಾಗಾಗಿ ಇದನ್ನು ಹಾಡಲು ಆಗುವುದಿಲ್ಲ ಎಂದು ಮನವರಿಕೆ ಮಾಡುವ ಪ್ರಯತ್ನವಿದೆ. ಮೇಲಿನ ಪದದಲ್ಲಿರುವ ಹೋಗು, ಹಾಡು, ಕಾಡು, ಉರಿ – ಈ ಕ್ರಿಯಾಪದಗಳನ್ನು ಗಮನಿಸಬೇಕು. ಒಂದು ಕಡೆ ಒತ್ತಾಯಿಸಲಾಗಿರುವ ಮತ್ತೊಂದು ಕಡೆ ಆ ಒತ್ತಾಯಕ್ಕೆ ಒಳಗಾಗಿಯೂ ಅದನ್ನು ಪ್ರತಿಭಟಿಸಿರುವ ಆಯಾಮವನ್ನು ಗಮನಿಸಬೇಕು. ಇದನ್ನು ಇನ್ನೊಂದು ಕೋನದಿಂದಲೂ ನೋಡಬಹುದು. ಒಡಲುರಿಯನ್ನು ಹಾಡಿನಲ್ಲಿ ಮತ್ತು ದಾರೀಲಿ ಹೋಗುವವರಿಗೆ ತಿಳಿಸಲು ಆಗುವುದಿಲ್ಲ. ಭಾಷಿಕವಾಗಿ ಏನನ್ನು ಹೇಳಲಾಗಿದೆಯೊ ಅದಕ್ಕಿಂತಲೂ ತೀವ್ರವಾದುದು, ಸೂಕ್ಷ್ಮವಾದುದು ಹೇಳದೇ ಇರುವುದರಲ್ಲಿ ಮತ್ತು ಹೇಳಲು ಆಗದೇ ಇರುವುದರಲ್ಲಿ ಇದೆ. ಅದು ಒಡಲುರಿ. ಅದೇ ನಿಗಿನಿಗಿ ಕೆಂಡ. ಅದೇ ಖಂಡ, ಮಾಂಸ, ರಕ್ತ. ಭಾಷಿಕವಾಗಿ ಏನು ಮತ್ತು ಎಷ್ಟು ಅಭಿವ್ಯಕ್ತವಾಗಿದೆಯೊ ಅದಷ್ಟೇ 'ದಲಿತ ಸಾಹಿತ್ಯ' ಅಲ್ಲ. ದಲಿತ ಸಾಹಿತ್ಯ ಬರಿಯ ಅಕ್ಷರಗಳಲ್ಲಿ, ಭಾಷಿಕ ಅಭಿವ್ಯಕ್ತಿಗಳಲ್ಲಿ ಮಾತ್ರವೇ ಇಲ್ಲ.

Scanned with CamScanner

'ಕುಸುಮಬಾಲೆ'ಯೊಳಗೆ ಒಂದು ಕಡೆ ಕೋಲಾರ ವೆಂಕಟೇಶ್ ಹಾಡುವ ಒಂದು ಹಾಡಿನ ಎರಡು ಸಾಲುಗಳು ಬರುತ್ತವೆ. 'ಕೊಲೆಸುಲಿಗೆ ನಾಡೊಳಗೆ ಅವಮಾನ ಅತ್ಯಾಚಾರ, ನಾಡಲ್ಲವ್ವೋ ಇದು ವಿಷದ ಸಮುದ್ರ!' ಕರ್ನಾಟಕದಲ್ಲಿ ದಲಿತ ಹೋರಾಟ ಶಕ್ತಿಶಾಲಿಯಾಗಿದ್ದಾಗ ಇದರ ಕಾರ್ಯಕ್ರಮಗಳಲ್ಲಿ ಈ ಹಾಡನ್ನು ಹಾಡುತ್ತಿದ್ದರು. ನಮ್ಮಂತಹವರನ್ನು ಈ ಹಾಡಿನ ಗುಂಗು ಇನ್ನೂ ಕಾಡುತ್ತಿದೆ. ಹೌದು, ಗಡದ್ದಾಗಿ ಗಡ್ಡ ಬಿಟ್ಟುಕೊಂಡು, ಉರಿವ ಕೆಂಗಣ್ಣುಗಳೊಂದಿಗೆ ಕೋಲಾರ ವೆಂಕಟೇಶ್ ಈ ಹಾಡನ್ನು ಏರುಧ್ವನಿಯಲ್ಲಿ ಹೇಳ್ತಾ ಇದ್ರು. ನಮ್ಮಂತಹ ಅನೇಕರು ಇದಕ್ಕೆ ಅಷ್ಟೇ ಪರಿಣಾಮಕಾರಿಯಾಗಿ ಕೋರಸ್ ಕೊಡ್ತಾ ಇದ್ವಿ. ನಾಡು ಅಂದ್ರೆ ವಿಷದ ಸಮುದ್ರ ಅನಿಸುತ್ತಿತ್ತು. ದಲಿತ ಸಾಹಿತ್ಯದ ವಿವಿಧ ಪ್ರಕಾರಗಳು ಮತ್ತು ದಲಿತ ಹೋರಾಟ ವಿಷದ ಸಮುದ್ರವನ್ನು ತೆರೆದುತೋರಿಸಿದವು. ಈ ಹಾಡಿನ ಮುಂದಿನ ಸಾಲನ್ನು ಗಮನಿಸಬೇಕು. 'ವಿಷದ ಸಮುದ್ರವ ಕಡೆಯುತ್ತ ಬಂದೆವು ನಾವು, ಅಮೃತ ಕಾಣದೆ ಕಗ್ಗಲ್ಲಾಗಿ ನಿಂತೆವಲ್ಲೋ'. ದಲಿತ ಸಾಹಿತ್ಯವು ಸಮುದ್ರದೊಳಗಿನ ವಿಷವನ್ನು ಎತ್ತಿತೋರಿಸಿದೆ. ಆದರೆ ದಲಿತ ಸಾಹಿತ್ಯವನ್ನು ಕುರಿತ ಪ್ರಧಾನಧಾರೆಯ ವಿಮರ್ಶೆ ದಲಿತ ಸಾಹಿತ್ಯ ತೋರಿಸಿದ ವಿಷದ ಬಗ್ಗೆ ಚರ್ಚೆ ಮಾಡದೆ, ಕಾಲ್ಪನಿಕ ಅಮೃತವನ್ನು ಎವರಿಸಿಕೊಂಡು ಆನಂದಪಟ್ಟಿದೆ.

'ದಲಿತ ಸಾಹಿತ್ಯದ ವ್ಯಾಪ್ತಿ

ಕಳೆದ ಳಿಓ ವರುಷಗಳ ದಲಿತ ಸಮೂಹದ ಸಂಕೀರ್ಣ ಸ್ಥಿತ್ಯಂತರಗಳು, ದಲಿತರ ಬೌದ್ಧಿಕ ಮಾನಸಿಕ ವಿಕಾಸಗಳು; ಆಸೆ, ಕನಸು, ಭರವಸೆಗಳು; ನೋವು, ಯಾತನೆ, ವೇದನೆ, ಹಿಂಸೆ, ಅಪಮಾನ, ಅಸಹನೆ, ಅಸಮಾಧಾನ, ರೋಷ, ಆಕ್ರೋಶ, ಪ್ರತಿರೋಧಗಳು; ಕರ್ನಾಟಕದಲ್ಲಿ ಡಿಎಸ್ಎಸ್ (ಕರ್ನಾಟಕ ದಲಿತ ಸಂಘರ್ಷ ಸಮಿತಿ) ರೂಪುಗೊಂಡ ಚಾರಿತ್ರಿಕ ಸಂದರ್ಭ, ಡಿಎಸ್ಎಸ್‌ನ ಎಲ್ಲ ರೀತಿಯ ಹೋರಾಟಗಳು, ಡಿಎಸ್ಎಸ್‌ನ ಹಲವಾರು ವಿಘಟನೆಗಳು, ಗುಂಪುಗಳು, ಅನಂತರದ ಬೆಳವಣಿಗೆಗಳು, ಡಿಎಸ್ಎಸ್‌ನ ಸಾವಿರಾರು ಕರಪತ್ರಗಳು, ನೂರಾರು ಗೋಡೆ ಬರಹಗಳು, ಬ್ಯಾನರ್‌ಗಳು, ಪತ್ರಿಕಾ ಹೇಳಿಕೆಗಳು, ೩೦೦ಕ್ಕೂ ಹೆಚ್ಚಿನ ಹೋರಾಟದ ಹಾಡುಗಳು, ಡಿಎಸ್ಎಸ್‌ನ ಆರಂಭದ ದಿನಗಳಲ್ಲಿ ಬಿ. ಕೃಷ್ಣಪ್ಪ, ಸಿದ್ದಲಿಂಗಯ್ಯ, ಹಾಸನ ತ್ಯಾಗಿ, ಸಿ. ಮುನಿಯಪ್ಪ, ವೆಂಕಟಸ್ವಾಮಿ, ಗಂಗಾರಾಂ ಚಂಡಾಳ, ಶಿವಣ್ಣ ಕಂದೇಗಾಲ, ಅಶ್ವತ್ ಅಂತ್ಯಜ, ವಿ. ನಾಗರಾಜ್, ಆರ್. ಮಾನಸಯ್ಯ, ಮುಳ್ಳೂರ್ ನಾಗರಾಜ್ ಮುಂತಾದವರ ಪರಿಣಾಮಕಾರಿ ಭಾಷಣಗಳು, ಹೋರಾಟದ ಹಾಡುಗಳ ಹಾಡುಗಾರರಾದ ಕೋಲಾರ ವೆಂಕಟೇಶ್, ಪಿಚ್ಚಳ್ಳಿ ಶ್ರೀನಿವಾಸ್, ಜನಾರ್ಧನ, ಕರ್ನಲ್ ನಾರಾಯಣಸ್ವಾಮಿ, ಕಂದೇಗಾಲ್ ಶಿವಣ್ಣ, ಪೇಪರ್ ಟೌನ್ ಚಂದ್ರು, ಅತ್ತಿಗುಂದ ಕರಿಯಪ್ಪ, ಪಿ. ವೇಲಾಯುಧನ್, ಆರ್. ಮಾನಸಯ್ಯ, ಸಿ. ದಾಸಪ್ಪ – ಮುಂತಾದವರು ಹಾಡಿದ ಹಾಡುಗಳು, ಕಂಜರ ಬಡಿದವರು, ಕೋರಸ್ ಕೊಟ್ಟವರು, ಪತ್ರೆ ಸಂಗಪ್ಪನ ಕಗ್ಗೊಲೆಯಂತಹ ನಾಟಕ, ಡಿಎಸ್ಎಸ್ ನಡೆಸುತ್ತಿದ್ದ ಅಧ್ಯಯನ ಶಿಬಿರಗಳು, ಜಾಥಾಗಳು, ಪ್ರತಿಭಟನಾ ಮೆರವಣಿಗೆಗಳು, ದಲಿತರು ಕೂಗಿದ ಘೋಷಣೆಗಳು, ಬಹಿರಂಗ ಕಾರ್ಯಕ್ರಮಗಳು,

ವಿವಿಧ ಹೋರಾಟಗಳು, ಪಂಚಮ ಪತ್ರಿಕೆಯ ಸಂಚಿಕೆಗಳು, ಡಿಎಸ್ಎಸ್‌ನ ಹೋರಾಟದ ಪತ್ರಿಕಾ ವರದಿಗಳು, ಪತ್ರಿಕಾ ಹೇಳಿಕೆಗಳು, ಇವುಗಳನ್ನು ಕುರಿತು ದಲಿತ ಹೋರಾಟಗಾರರು ಮಾತಾಡಿಕೊಂಡ ಮಾತುಗಳು, ಇವುಗಳನ್ನು ಕುರಿತು ಶೋಷಕ ವಲಯದವರು ತಮ್ಮ ಹೊಟ್ಟೆಯ ಬೆಂಕಿಯಲ್ಲಿ ಬೇಯಿಸಿದ ಪ್ರತೀಕಾರದ ಮಾತುಗಳು – ಇವೆಲ್ಲವೂ ಒಂದು ಕಡೆ.

ಮತ್ತೊಂದು ಕಡೆ ೭೦–೮೦ರ ದಶಕದ ಇಂಡಿಯಾದ ಮತ್ತು ಕರ್ನಾಟಕದ ಭೂಸಂಬಂಧಗಳು, ಉತ್ಪಾದನಾ ಸಂಬಂಧಗಳು, ದುಡಿಮೆಯ ಸಂಬಂಧಗಳು, ಆಳುವ ವರ್ಗದ ರಾಜಕೀಯ ಬೆಳವಣಿಗೆಗಳು, ಸಾಮ್ರಾಜ್ಯಶಾಹಿಯ ಹಿತಾಸಕ್ತಿಗೆ ಪೂರಕವಾಗಿ ಮಾರುಕಟ್ಟೆಗೆ ಅಧೀನಗೊಳಿಸಿದ ಕೃಷಿಯ ಉತ್ಪಾದನಾ ವಿಧಾನಗಳು, ಕೃಷಿ ವಲಯದ ಬಿಕ್ಕಟ್ಟುಗಳು, ಇಂಡಿಯಾದ ಮತ್ತು ಕರ್ನಾಟಕದ ರಾಜಕೀಯ–ಆರ್ಥಿಕ ರಂಗದ ಮೇಲೆ ಮುಂದುವರಿಯುತ್ತಲೇ ಸಾಗಿದ ವಿಶ್ವಬ್ಯಾಂಕ್, ಐಎಂಎಫ್, ಎಫ್‌ಡಿಐಗಳ ನೇರ ಹಿಡಿತಗಳು, ವರ್ಗ ವೈರುಧ್ಯಗಳನ್ನು ಮುಚ್ಚಿಡಲು ಹಾಗೂ ವರ್ಗಹೋರಾಟಗಳನ್ನು ಶಮನಗೊಳಿಸಲು ಭೂಮಾಲಿಕಪರ ಹಾಗೂ ಸಾಮ್ರಾಜ್ಯಶಾಹಿ ಪ್ರಣೀತ ಎನ್‌ಜಿಓಗಳ ಮೂಲಕ ಹರಿಯಬಿಟ್ಟ ಜನವಿರೋಧಿ ಚಿಂತನೆಗಳು, ಫ್ಯೂಡಲಿಸಂನ ನಂಜಿಕೆಗಳ ವಿರುದ್ಧ ಬಂದ ಬಂಡವಾಳಶಾಹಿ ವೈಚಾರಿಕತೆ, ಡಿಎಸ್ಎಸ್‌ನ ಮೂಲಕ ಜಾಗೃತಿಗೊಂಡ ದಲಿತರನ್ನು ಹಾಗೂ ಡಿಎಸ್ಎಸ್‌ಅನ್ನು ಒಡೆದಾಳಲು ಫ್ಯೂಡಲಿಸಂ ಅನುಸರಿಸಿದ ಕಾರ್ಯತಂತ್ರಗಳು – ಇವೆಲ್ಲವೂ ಒಟ್ಟಂದದಲ್ಲಿ ದಲಿತ ಸಾಹಿತ್ಯದ ವ್ಯಾಪ್ತಿಯಲ್ಲಿ ಬರುತ್ತವೆ. ಅದರ ವೈರುಧ್ಯ ಸಂಬಂಧಗಳ ಸಂಕೀರ್ಣ ಲೋಕವನ್ನು ಈ ಮುಂದಿನಂತೆ ಗುರುತಿಸಬಹುದು.

ದಲಿತ ಸಾಹಿತ್ಯ ವ್ಯಾಪ್ತಿಯ ವೈರುಧ್ಯಗಳು, ಸಂಕೀರ್ಣಗಳು ಮತ್ತು ಅದರ ಗ್ರಹಿಕೆಯ ಸಾಧ್ಯತೆಗಳು.

* ಬೆಂಡಿಗೇರಿಯ ದಲಿತಣ್ಣರ ಊಹೆಗೂ ಮೀರಿದ ವಿಕೃತವಾದ ಆದರೆ ಮನುಷ್ಯರಾದ ಕಾರಣಕ್ಕಾದರೂ ಊಹಿಸಿಕೊಳ್ಳಬಹುದಾದ ಅನುಭವ ಒಂದು ಕಡೆಗಿದೆ; ಮೊಗಳ್ಳಿ ಗಣೇಶ್ ಅವರ 'ಬುಗುರಿ' ಕತೆಯ ಹೇಲು ಗುಂಡಿಯ ಚಿತ್ರಣ ಇನ್ನೊಂದು ಕಡೆಗಿದೆ. ಆ ಕತೆಯ ಕುರಿತ ಸಾಹಿತ್ಯ ವಿಮರ್ಶೆಯೂ ಜೊತೆಗಿದೆ.

* ಹಂಗರವಳ್ಳಿಯಲ್ಲಿ ಹಿಂಸಾತ್ಮಕವಾಗಿ ತೊಡಿಸಿದ ಕ್ರೂರ ಅನುಭವ ಒಂದು ಕಡೆಗಿದೆ; ಕುಸುಮಬಾಲೆಯಲ್ಲಿ ೧೬ ಎಳೆನೀರನ್ನು ಕುಡಿದು, ಸಂಘಟಿತಗೊಂಡು ಶಿಷ್ಟ ಡ್ಯೂಟಿಯ ರೂಪದಲ್ಲಿ ಹೊಡೆಯುತ್ತಿರುವವರ ಕೈಗಳನ್ನೇ ಸೋಲಿಸುತ್ತಿರುವ ಗಾರಸಿದ್ಧಾವನ ನೈಜತೆ, ಜೊತೆಗೆ ಅದನ್ನು ಕುರಿತ ವಿಮರ್ಶೆ ಇನ್ನೊಂದು ಕಡೆಗಿದೆ.

* ಒಡಲಾಳದ ಕೊನೆಯಲ್ಲಿ ಎತ್ತಪ್ಪ ಮತ್ತು ಪೊಲೀಸರು ಒಟ್ಟಾಗಿ 'ಈ ಹುಂಜವನ್ನು ಹಿಡಿದು ಕೊಡು' ಎಂದಾಗ ಅದನ್ನು ಸಾಕವ್ವನ ಕುಟುಂಬದವರು ನಯಸಾಜೂಕುಗಳಿಂದ

Scanned with CamScanner

ಹಿಡಿದುಕೊಡುವ ಚಿತ್ರಣ ಒಂದು ಕಡೆಗಿದೆ; ಪುಟಗೌರಿ ಗೋಡೆಯ ಮೇಲೆ ಬರೆದ ನವಿಲಿನ ಚಿತ್ರ ಇನ್ನೊಂದು ಕಡೆಗಿದೆ. ಅದನ್ನು ಕುರಿತು ಸಾಕವ್ವ ಹೇಳುವ ಮಾತೂ (ಅವಳ್ಯಾರೊ ಒಬ್ಬಳು ಕುಟ್ಟೊ ಬತ್ತ ಬಿಟ್ಟು ಹುಟ್ಟೊ ಶ್ಯಾಟ ನೋಡ್ಕೊತಿದ್ಲಂತೆ) ಅದರ ಜೊತೆಯಲ್ಲಿದೆ. ಪುಟಗೌರಿ ಬರೆದ ನವಿಲನ್ನು ಕುರಿತ ಆಹಾ! ಓಹೋ! ಎಂಬ ಆಸ್ವಾದನಾ ವಿಮರ್ಶೆ ಅದರ ಜೊತೆಯಲ್ಲಿದೆ.

* ನೋಟೆಡ್ ದಲಿತ ಸಾಹಿತಿಗಳ, ಅವರ ಕೃತಿಗಳ ಪಟ್ಟಿ, ಅವನ್ನು ಕುರಿತ ವಿಮರ್ಶೆಗಳು ಒಂದು ಕಡೆಗಿವೆ; ನೋಟೆಡ್ ಆಗದ ನೂರಾರು ದಲಿತ ಬರಹಗಾರರು ಹಾಗೂ ಅವರ ಕೃತಿಗಳ್ಳು, ಹೋರಾಟದ ಹಾಡುಗಳು ಮತ್ತೊಂದು ಕಡೆಗಿವೆ.

* 'ದೊಡ್ಡ ಗೌಡರ ಬಾಗಿಲೀಗೆ ನಮ್ಮ ಮೂಳೆಯ ತ್ವಾರಣ ನಮ್ಮ ಜನಗಳ ಕಾಲು ಕೈಯಿ ಕಂಬ ಅವರ ಹಟ್ಟಿಗೆ' ಎಂಬ ಸಿದ್ದಲಿಂಗಯ್ಯನವರ ಹಾಡಿನ ವಾಸ್ತವ ಒಂದು ಕಡೆಗಿದೆ; ಇದೇ ಪದವನ್ನು ಕುರಿತ 'ಉತ್ಪ್ರೇಕ್ಷಲಂಕಾರ ಎಂಬ ಡಿ.ಆರ್. ಅವರ ವಿಮರ್ಶೆ ಜೊತೆಗಿದೆ. .

* 'ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ನನಗೆ ಸಾಹಿತ್ಯಕ ಪ್ರೇರಣೆ' ಎಂದು ದೇವನೂರು ಅವರು, 'ಕುವೆಂಪು ಅವರ ಕಾವ್ಯ ನನ್ನ ಕಾವ್ಯಕ್ಕೆ ಪ್ರೇರಣೆ' ಎಂದು ಸಿದ್ದಲಿಂಗಯ್ಯನವರು ಹೇಳಿರುವ ಹೇಳಿಕೆಗಳು ಒಂದು ಕಡೆಗಿವೆ; ಕುವೆಂಪು ಅವರು 'ಒಡೇರ ದಿಣ್ಣೆಯ ಮೇಲೆ ನಿಂತು ದಲಿತರನ್ನು ಚಿತ್ರಿಸಿದ್ದಾರೆ' ಎಂಬ ಬಿ. ಕೃಷ್ಣಪ್ಪನವರ ವಿಮರ್ಶಾ ಲೇಖನದ ಧೋರಣೆ ಮತ್ತೊಂದು ಕಡೆಗಿದೆ.

* 'ಕುಸುಮಬಾಲೆ ಆಡುಮಾತಿನ ಮಹಾಕಾವ್ಯ' ಎಂಬ ರಮ್ಯ ವಿಮರ್ಶೆ ಒಂದು ಕಡೆಗಿದೆ; 'ಕುಸುಮ ಬಾಲೆ ದಲಿತರ ನೇಣು ಗಂಬ' ಎಂಬ ದಲಿತ ವಿಮರ್ಶೆ ಮತ್ತೊಂದು ಕಡೆಗಿದೆ.

* ಊರುಕೇರಿ 'ಬಡವರ ನಗುವಿನ ಶಕ್ತಿ' ಎಂಬ ರಮ್ಯ ವಿಮರ್ಶೆ ಒಂದು ಕಡೆಗಿದೆ; 'ಇಕ್ರಲಾ ವದಿರ್ಲಾ!' ಎಂಬುದು ಕವನವೇ ಅಲ್ಲ ಎಂಬ ಘ್ಯಾಡಲ್ ಉಪದೇಶ, ಆದೇಶ ಅಲಿಯಾಸ್ ಅಸಹನೆ ಮತ್ತೊಂದು ಕಡೆಗಿದೆ.

* 'ಜಾಗತೀಕರಣದಿಂದ ದಲಿತರು ವಿಮೋಚನೆ ಪಡೆಯಬಲ್ಲರು, ಖಾಸಗೀಕರಣದಲ್ಲೂ ದಲಿತರಿಗೆ ಮೀಸಲಾತಿ ಕೊಡಿ' ಎಂಬ ಹೇಳಿಕೆಗಳು ಒಂದು ಕಡೆಗಿವೆ; ಸಾಮ್ರಾಜ್ಯಶಾಹಿಯ ಜಾಗತೀಕರಣವು ದಲಿತರ ಹಸಿವು ಮತ್ತು ಅಪಮಾನಗಳನ್ನು ಜಾಗತೀಕರಣಗೊಳಿಸಿರುವ ಗಂಭೀರ ಪರಿಸ್ಥಿತಿ ಮತ್ತೊಂದು ಕಡೆಗಿದೆ.

* ಅಕ್ಷರ ಮತ್ತು ಔಪಚಾರಿಕ ಶಿಕ್ಷಣವನ್ನು ವೈಭವೀಕರಿಸಿರುವ ಎಚ್. ಗೋವಿಂದಯ್ಯನವರ 'ಅ ಆ ಮತ್ತು ...' ಎಂಬ ಕವನ ಒಂದು ಕಡೆಗಿದೆ; ಔಪಚಾರಿಕ ಶಿಕ್ಷಣವನ್ನು ವಿಮರ್ಶಿಸಿರುವ 'ದಿಲ್ಲಿ ದಿಲ್ಲಿ ಅಂತೀರಿ ಅದು ಎಂತಹ ದಿಲ್ಯಣ್ಣ' ಎಂಬ ಆರ್. ಮಾನಸಯ್ಯನವರ ಹೋರಾಟದ ಹಾಡು ಹಾಗೂ 'ವಿದ್ಯಾರ್ಥಿ ಸೋದರನೆ

ಮೋಜಿನಿಂದ ತಿರುಗುವನೆ ಮೋಜಿನ ದಾರಿ ಬೇಡಯ್ಯೊ' ಎಂಬ ಸಿ. ದಾನಪ್ಪ ಅವರ ಹೋರಾಟದ ಹಾಡುಗಳು ಮತ್ತೊಂದು ಕಡೆಗಿವೆ.

* 'ಮಾರ್ಕ್ಸ್‌ನ ಗುಲಾಮ ಏಕೆ ಸಿದ್ದಲಿಂಗು? ಅರಿತಿಲ್ಲವೇನು ಲೋಹಿಯಾ ನೀತಿ ನೀನು? ಕುಂಡದೊಳಗಿನ ಗಿಡವಾಗಬೇಡ ಎಂದೂ, ಈ ನೆಲದ ಒಳಗೆ ಬೇರುಬಿಟ್ಟು ಆಗಬೇಕು ಆಲ ನೀನು' ಎಂಬ ಘ್ಯಾಡಲ್ ವೈಚಾರಿಕ ಉಪದೇಶ ಒಂದು ಕಡೆಗಿದೆ; ದೇವನೂರರ 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಕತೆಯಲ್ಲಿ ಕುಡಿದ ಅಮಲಿನಲ್ಲಿ ರೈಲ್ವೆ ಗ್ಯಾಂಗ್‌ಮನ್ ಸಿದ್ದಪ್ಪ 'ಗೌಡರನ್ನು, ಕಂಟ್ರಾಕ್ಟರನ್ನು ನೆನಸಿಕೊಂಡು, ಕಮ್ಯುನಿಸಮ್ ಬರಬೇಕು, ಆಗಲೆ ನಿಮಗೆಲ್ಲ ಬುದ್ಧಿ ಬರೋದು' ಎಂದು ಲೈಟು ಕಂಬಕ್ಕೆ ಒದೆಯುವ ಚಿತ್ರಣ ಇನ್ನೊಂದು ಕಡೆಗಿದೆ.

* 'ನಾನು ಗಾಂಧಿ ಸಿನಿಮಾ ನೋಡಿದೆ, ಆಕಾಶಕ್ಕೆ ಮೂರು ಗೇಣು ಕಮ್ಮಿ' ಎಂಬ ದೇವನೂರರ ಲೇಖನ ಒಂದು ಕಡೆಗಿದೆ; 'ಮುಳ್ಳಿನ ಬದುಕಿಗೆ ಹೂವಿನ ಹೆಸರಿಟ್ಟಿ, ಕ್ರಾಂತಿಯ ಕರಗಿಸಿ ಶಾಂತಿ ಬೀಜವ ನೆಟ್ಟಿ' ಎಂಬ ಗಾಂಧಿಯನ್ನು ಕುರಿತ ಆರ್. ಮಾನಸಯ್ಯನವರ ಹೋರಾಟದ ಹಾಡು ಮತ್ತೊಂದು ಕಡೆಗಿದೆ.

* ದಲಿತರಲ್ಲೆ ಶ್ರೀಮಂತರು, ರಾಜಕಾರಣಿಗಳು, ದಲಿತ ಅಧಿಕಾರಿಗಳು ಬೆಂಗಳೂರಲ್ಲೇ ನೆಲೆಯೂರಿರುವ ವಾಸ್ತವ ಒಂದು ಕಡೆಗಿದೆ; 'ಈ ಗುಲಾಬಿ ನಗರದಾಗ ಗುಡಿಸಲು ಯಾಕಂತ ಬ್ಯಾಡೆಂದು ಬೆಂಗಳೂರು ದಬ್ಬಿತಲ್ಲ' ಎಂಬ ಆರ್. ಮಾನಸಯ್ಯನವರ ಹೋರಾಟದ ಹಾಡು ಮತ್ತೊಂದು ಕಡೆಗಿದೆ.

'ಗ್ರಾಮ ದೇವತೆಯ ಆಚರಣೆಗಳನ್ನು ಪರಿಷ್ಕರಿಸಿ ನಮಗೆ ಬೇಕಾದ ಒಳನೋಟಗಳನ್ನು ಪಡೆಯಬಹುದು ಹಾಗೂ ಗ್ರಾಮ ದೇವತೆಗಳ ಆಚರಣೆಯಲ್ಲಿ ಸಮಷ್ಟಿ ಪ್ರಜ್ಞೆಯ ಸೃಜನಶೀಲತೆಯ ಅರಿವಿನ ವಿಕಾಸದ ದಾರಿಯಿದೆ' ಎಂಬ ಅಧ್ಯಯನದ ಹೇಳಿಕೆಗಳು ಒಂದು ಕಡೆಗಿವೆ; ನಾಡಿನ ಹಳ್ಳಿ ಹಳ್ಳಿಗಳಲ್ಲಿ ಊರ ದೇವರ ಹಬ್ಬ ಜಾತ್ರೆಯಲ್ಲಿ ದಲಿತರ ಮೇಲೆ ನಡೆಸಲಾಗುತ್ತಿರುವ ಹಲ್ಲೆ, ಕೊಲೆಗಳು ಮತ್ತೊಂದು ಕಡೆಗಿವೆ. ಇವತ್ತಿಗೂ ದಲಿತರನ್ನು ಹಳ್ಳಿಗಳ ಮೇಲು ಜಾತಿಯವರು ದೇವಸ್ಥಾನಗಳಿಗೆ ಪ್ರವೇಶ ನೀಡದಿರುವ ಕ್ರೂರ ವಾಸ್ತವ ಅದರ ಜೊತೆಯಲ್ಲಿದೆ.

ಸಾಮ್ರಾಜ್ಯಶಾಹಿಗಳ ಹಾಗೂ ಎನ್‌ಜಿಓಗಳ ಲೆಕ್ಕಾಚಾರಕ್ಕೆ ಆಹಾರ ಒದಗಿಸಲು ಮಾತೆತ್ತಿದರೆ ದಲಿತ ಮತ್ತು ದಲಿತೇತರ ವೈಚಾರಿಕ ಚಿಂತನೆಯಲ್ಲಿ 'ಬ್ರಾಹ್ಮಣಶಾಹಿ, ವೈದಿಕಶಾಹಿ, ಪುರೋಹಿತಶಾಹಿ' ಎಂಬ ಯ್ಯಾಂತ್ರಿಕ ವಿರೋಧಗಳು ಒಂದು ಕಡೆಗಿವೆ; ದಲಿತ ಪುರುಷರು ಮತ್ತು ಬ್ರಾಹ್ಮಣ ಮಹಿಳೆಯರ ನಡುವೆ ಸಾಕಷ್ಟು ಮದುವೆಗಳು ನಡೆದಿರುವ ಮತ್ತು ನಡೆಯುತ್ತಿರುವ ನಿಜ ವಾಸ್ತವ ನಮ್ಮ ಮುಂದಿದೆ. ಆದರೆ ಈ ರೀತಿಯ ಮದುವೆಯ ಸಂಬಂಧಗಳು ದಲಿತರು ಮತ್ತು ಬ್ರಾಹ್ಮಣೇತರ ಮಧ್ಯಮ ಜಾತಿಗಳ ನಡುವೆ ನಡೆದಿಲ್ಲ ಎಂಬ ಕ್ರೂರ ಹಾಗೂ ವಿಕಟ ವಾಸ್ತವವೂ ಇದರ

Scanned with CamScanner

ಜೊತೆಯಲ್ಲಿದೆ. ಒಂದು ವೇಳೆ ದಲಿತರು ಬ್ರಾಹ್ಮಣೇತರ ಮಧ್ಯಮ ಜಾತಿಯವರೊಂದಿಗೆ ಮದುವೆಯ ಪ್ರಯತ್ನ ನಡೆಸಿದ್ದೇ ಆದರೆ ದಲಿತರ ಕೇರಿಗಳು ಬೆಂಕಿಗೆ ಆಹುತಿಯಾಗುವ, ಅಷ್ಟೇ ಅಲ್ಲ ದಲಿತರ ಹೆಣಗಳೂ ಉರುಳುವ ಭೂಮಾಲಿಕರ ವಿಕೃತ ಕ್ರೌರ್ಯ ಮತ್ತೊಂದು ಕಡೆಗಿದೆ. 'ಕುಸುಮಬಾಲೆ'ಯಲ್ಲಿ ಯಾರಿಗೂ ಗೊತ್ತಾಗದಂತೆ ಚೆನ್ನನ ಕೊಲೆಯಾಗುವ ಸಾಹಿತ್ಯಕ ಪ್ರಾತಿನಿಧಿಕ ಅಂಶ ಇದರ ಜೊತೆಗಿದೆ.

ಮೇಲಿನ ವಿವರಣೆಗಳು ವೈರುಧ್ಯಗಳನ್ನು ಯಾಂತ್ರಿಕವಾಗಿ ಜೋಡಿಸಿರುವ ಬೌದ್ಧಿಕ ಕಸರತ್ತಿನ ಪಟ್ಟಿಯಲ್ಲ. ದಲಿತರ ಇರುವಿಕೆಯ ಸ್ತರ ವಿನ್ಯಾಸಗಳು, ಆಗುವಿಕೆಗಾಗಿ ಇವರು ನಡೆಸಿದ ಸಾಧ್ಯತೆಗಳ ಸಂಕೀರ್ಣ ನಡಿಗೆ, ಭೂಮಾಲಿಕ ವರ್ಗ ದಲಿತರನ್ನು ದಿಕ್ಕು ತಪ್ಪಿಸಿರುವ, ತಮ್ಮ ಹಿತಾಸಕ್ತಿಗೆ ಅನುಗುಣವಾಗಿ ನಡೆಸಿಕೊಂಡಿರುವ ಕ್ರೂರ ವಿಧಾನಗಳ ಒಟ್ಟು ನೋಟ ಇದು. ಈ ಮೇಲಿನ ಸಂಕೀರ್ಣ ಬೆಳವಣಿಗೆಗಳನ್ನು ಗಮನಿಸಿದರೆ 'ದಲಿತ ಸಾಹಿತ್ಯ'ಕ್ಕೆ 'ಒಂದು ಸಾಹಿತ್ಯಕ ಚೌಕಟ್ಟು' ಹಾಕುವುದು ಎಷ್ಟು ಕಷ್ಟ ಎಂಬುದು ತಿಳಿಯುತ್ತದೆ.

ಎರಡು ನೋಟ ಕ್ರಮಗಳು

ದಲಿತ ಸಾಹಿತ್ಯ ಮತ್ತು ದಲಿತ ಹೋರಾಟದ ಸೃಜನಶೀಲತೆಯನ್ನು ಸಮಸ್ಯಾತೀತ ವಸ್ತುಸ್ಥಿತಿ ಎಂದು ಪರಿಭಾವಿಸುವುದು ಒಂದು ಕ್ರಮ. ಸೃಜನಶೀಲತೆ ಎಂದರೆ ಸಾಹಿತ್ಯದಲ್ಲಿ ಕಲಾತ್ಮಕ ಯಶಸ್ಸು ಎಂಬುದು ಇಲ್ಲಿಯ ಮೂಲ ಗ್ರಹಿಕೆ. ಹಾಗಾಗಿಯೇ ಕಾಲ್ಪನಿಕ ವಾಸ್ತವವನ್ನು ಸೃಜನಶೀಲತೆ ಎಂದು ತೀರ್ಮಾನಿಸಿದೆ. ವಿಚಾರ ಪ್ರಧಾನ ಬರವಣಿಗೆಗೆ ಸೃಜನೇತರ ಎಂಬ ಹಣೆಪಟ್ಟಿ ಹಚ್ಚಿದೆ. ಆದರೆ ದಲಿತ ಸಾಹಿತ್ಯ ಹಾಗೂ ದಲಿತ ಹೋರಾಟ ಈ ಎರಡೂ ಕೂಡ ಸಾಮಾಜಿಕ ಅಸಮಾನತೆ ಮತ್ತು ಅನ್ಯಾಯಗಳನ್ನು ಬಗೆದು ತೋರಿಸಿವೆ ಹಾಗೂ ಅವುಗಳ ಪರಿವರ್ತನೆಯ ಆಶಯ ಹೊಂದಿವೆ ಎಂದು ಗ್ರಹಿಸುವುದು ಮತ್ತೊಂದು ಕ್ರಮ. ದಲಿತ ಸಾಹಿತ್ಯದ ಸೃಜನಶೀಲತೆಯ ರಚನೆಯ ಕ್ರಮವನ್ನು ಈ ಸ್ವರೂಪದಲ್ಲಿ ಗ್ರಹಿಸಬೇಕು.

ಕರ್ನಾಟಕದಲ್ಲಿ ದಲಿತ ಸಮೂಹದ ಬರಹಗಾರರು ಬರೆಯುವುದಕ್ಕಿಂತ ಮೊದಲು ದಲಿತೇತರ ಬರಹಗಾರರು ದಲಿತರ ಬದುಕನ್ನು ಕುರಿತು ಬರೆದಿದ್ದಾರೆ. ಆ ಬರಹಗಳ ರಚನೆಯ ಮೂಲ ಸ್ವರೂಪ ಹೇಗಿದೆ ಎಂದರೆ ದಲಿತರ ಬದುಕು ದಲಿತೇತರರ ಬದುಕಿನೊಂದಿಗೆ ಸಹಜೀವನವಾಗಿ ಸಾಗುತ್ತಿದೆ. ಅವರೊಂದಿಗೆ ಹೊಂದಿಕೊಂಡು ಸಾಗುತ್ತಿದೆ ಎಂಬ ನಿರೂಪಣೆ ಮತ್ತು ವರ್ಣನೆಗಳಿವೆ. ದಲಿತರ ಬದುಕು ಸಮಸ್ಯೆಗಳಿಲ್ಲದ ಒಂದು ಸಾಮಾನ್ಯ ವಸ್ತುಸ್ಥಿತಿ ಎಂಬಂತೆ ಅಲ್ಲಿನ ನಿರೂಪಣೆ ಇದೆ. ಹಾಗಾಗಿಯೇ ಅಂತಹ ಬರವಣಿಗೆಯಲ್ಲಿ ದಲಿತರ ಹೀನಾಯ ಪರಿಸ್ಥಿತಿಗೆ ಕಾರಣ ಹುಡುವ ಆಸಕ್ತಿ ಇಲ್ಲವೇ ಇಲ್ಲ. ಇಲ್ಲಿ ಮೇಲುಜಾತಿಯ ಗಂಡುಗಳು ಮತ್ತು ಕೆಳಜಾತಿಯ ಹೆಣ್ಣುಗಳ ನಡುವಿನ ಸಂಬಂಧಗಳನ್ನು ನಿರೂಪಿಸಲಾಗಿದೆ. ಕುವೆಂಪು ಮತ್ತು ಶಿವರಾಮ ಕಾರಂತ ಅವರ ಕಾದಂಬರಿಗಳು ಇದಕ್ಕೆ ಒಳ್ಳೆಯ ಉದಾಹರಣೆಗಳು. ೭೦ರ ದಶಕದ ನಂತರ

ದಲಿತರು ಬರೆದ ಬರವಣಿಗೆಯಲ್ಲಿ ದಲಿತೇತರರ ಬದುಕಿಗೆ ದಲಿತರ ಬದುಕು ಹೊಂದಿಕೊಂಡು ಹೋಗುತ್ತಿಲ್ಲ; ಅವರ ದಬ್ಬಾಳಿಕೆ, ಅನ್ಯಾಯ, ಶೋಷಣೆಗೆ ಸಿಲುಕಿದೆ ಎಂಬ ನಿರೂಪಣೆ ಇದೆ. ಜೊತೆಗೆ ದಲಿತರ ಬದುಕಿನ ವಸ್ತುಸ್ಥಿತಿಗೆ ಕಾರಣಗಳನ್ನು ಶೋಧಿಸುವ ನೋಟಗಳಿವೆ. ಇಲ್ಲಿ ಕೆಳಜಾತಿಯ ಗಂಡುಗಳು ಮತ್ತು ಮೇಲುಜಾತಿಯ ಹೆಣ್ಣುಗಳ ನಡುವಿನ ಸಂಬಂಧಗಳನ್ನು ನಿರೂಪಿಸಲಾಗಿದೆ. ಶೋಷಣೆ ಹಾಗೂ ಅವಮಾನದ ಬದುಕನ್ನು ಬದಲಾಯಿಸಬಹುದು ಮತ್ತು ಬದಲಾಯಿಸಬೇಕು ಎಂಬ ಆಶಯಗಳು ಇವೆ. ದಲಿತ ಸಾಹಿತ್ಯ ಬರುವುದಕ್ಕಿಂತ ಮೊದಲು ಕಾವ್ಯ ಎಂದರೆ ಕೇವಲ ಓದುವುದು ಮತ್ತು ಅದನ್ನು ಒಬ್ಬರೇ ಏಕಾಂತದಲ್ಲಿ ಮೌನವಾಗಿ ಓದುವುದು ಎಂಬ ವಸ್ತುಸ್ಥಿತಿ ಇತ್ತು. ಆದರೆ ದಲಿತ ಕಾವ್ಯ ಮೌನ ಓದನ್ನು ಮತ್ತು ಏಕಾಂತದ ಓದನ್ನು ಪರಿವರ್ತನೆ ಮಾಡಿತು. ಅದನ್ನು ಗಟ್ಟಿಯಾಗಿ ಓದಬೇಕು, ಹಾಡಬೇಕು ಮತ್ತು ಗುಂಪಿನಲ್ಲಿ ಹಾಡಬೇಕು ಎಂಬ ವಾತಾವರಣವನ್ನು ನಿರ್ಮಾಣ ಮಾಡಿತು. ಈ ಬಗೆಯಲ್ಲಿ ಸಾಹಿತ್ಯ ರಚನೆಯ ಕ್ರಮವನ್ನೂ ಮತ್ತು ಅದರ ಓದಿನ ವಿಧಾನವನ್ನೂ ದಲಿತ ಹೋರಾಟ ಹಾಗೂ ದಲಿತ ಸಾಹಿತ್ಯ ಒಟ್ಟೊಟ್ಟಿಗೇ ಮಾಡಿವೆ. ಇದು ಈ ಎರಡರ ಅಸಾಮಾನ್ಯವಾದ ಸೃಜನಶೀಲತೆ.

ದಲಿತ ಸಾಹಿತ್ಯ ಮತ್ತು ದಲಿತ ಚಳುವಳಿ ಇವೆರಡೂ ಪರಸ್ಪರ ಬೇರ್ಪಡಿಸಲಾಗದ ದಲಿತರ ಎರಡು ಮುಖ್ಯ ಶಕ್ತಿಗಳು. ಇದರ ಸೃಜನಶೀಲತೆಯನ್ನು ಅವಲೋಕಿಸುವುದೆಂದರೆ ಕೇವಲ ಆಹಾ ಓಹೋ ಎಂದು ಉದ್ಗಾರ ತೆಗೆಯುವ ಕಲಾತ್ಮಕ ವಿವರಣೆ ಅಲ್ಲ. ಕನ್ನಡ ವಿಮರ್ಶೆ ಸಾಮಾನ್ಯವಾಗಿ ಸೃಜನಶೀಲತೆಯನ್ನು ಕಲಾತ್ಮಕತೆ ಎಂಬುದಕ್ಕೆ ಪರ್ಯಾಯ ಪದವಾಗಿ ಬಳಸುತ್ತಾ ಬಂದಿದೆ. ಓದುಗರಿಗೆ ಮುದ ನೀಡುವಂತಿರಬೇಕು, ಆನಂದ, ಸಂತೋಷವನ್ನು ಉಂಟುಮಾಡಬೇಕು, ಕಲ್ಪನೆ ಮತ್ತು ಅನೂಹ್ಯ ಸಾಧ್ಯತೆಗಳಿರಬೇಕು. ಇಂತಹದನ್ನು ಸೃಜನಶೀಲತೆ ಎಂದು ಕರೆಯಲಾಗಿದೆ. ಹಾಗಾಗಿಯೇ ವಿಚಾರ ಪ್ರಧಾನ ಮತ್ತು ತಾತ್ವಿಕ ಪ್ರಧಾನ ಬರವಣಿಗೆಯನ್ನು ಸೃಜನೇತರ ಬರವಣಿಗೆ ಎಂದು ಕರೆಯಲಾಗಿದೆ. ಇದು ಸಾಹಿತ್ಯವನ್ನು ತಾರತಮ್ಯ ದೃಷ್ಟಿಯಿಂದ ನೋಡುವ ತರತಮದ ದೃಷ್ಟಿಕೋನಕ್ಕೆ ಮಾತ್ರ ಸಾಧ್ಯ. ಆದರೆ ಸಾಹಿತ್ಯವು ಜನಸಮುದಾಯಗಳ ದುಃಖ ದುಮ್ಮಾನಗಳನ್ನು, ಆಗುಹೋಗುಗಳನ್ನು ವಿವಿಧ ಪ್ರಕಾರಗಳಲ್ಲಿ ನಿರೂಪಿಸುತ್ತಲೇ ಅವನ್ನು ಬದಲಾಯಿಸಲು ಸೂಚಿಸುವಂತಿದ್ದರೆ ಅಂತಹ ಪ್ರಕಾರಗಳನ್ನು ಸೃಜನಶೀಲ ಸಾಹಿತ್ಯವೆಂದೇ ಕರೆಯಬೇಕು.

ದಲಿತ ಸಾಹಿತ್ಯ, ಚಳುವಳಿಯ ಸೃಜನಶೀಲ ಮಾದರಿಗಳು

ದಲಿತ ಸಾಹಿತ್ಯವು ವಿವಿಧ ಪ್ರಕಾರಗಳ ಅಭಿವ್ಯಕ್ತಿಯನ್ನು ರೂಪಿಸಿಕೊಂಡಿದೆ. ಸಾಂಪ್ರದಾಯಿಕ ಪ್ರಕಾರಗಳನ್ನು ಅದು ಹಿಗ್ಗಿಸಿದೆ; ಹೊಸ ಪ್ರಕಾರಗಳನ್ನು ಸೃಷ್ಟಿಸಿದೆ. ಸಾಹಿತ್ಯದ ವಸ್ತು, ಅಭಿವ್ಯಕ್ತಿ, ಧೋರಣೆ ಮತ್ತು ಆಶಯಗಳ ಸಂಮಿಶ್ರಣದಲ್ಲಿ ಸಾಹಿತ್ಯಕ ಸೃಜನಶೀಲತೆ ನಿರ್ಮಾಣವಾಗುತ್ತದೆ. ಹೋರಾಟದ ಸಿದ್ಧಾಂತ, ಆಶಯ ಮತ್ತು

Scanned with CamScanner

ಆಚರಣೆಗಳು ಒಟ್ಟಾಗಿ ಅದರ ಸೃಜನಶೀಲತೆಯನ್ನು ನಿರ್ಮಿಸುತ್ತವೆ. ಈ ಎರಡೂ ನೆಲೆಗಳನ್ನು ಒಟ್ಟಾಗಿ ಗ್ರಹಿಸಿದಾಗ ಇವುಗಳ ಸೃಜನಶೀಲ ಮಾದರಿಗಳನ್ನು ಪರಿಶೀಲನೆ ಮಾಡಬಹುದು. ಜಾಗತೀಕರಣ ಪೂರ್ವದ ದಿನಗಳಲ್ಲಿ ಇವೆರಡೂ ಗ್ರಾಮೀಣ ಅನುಭವಗಳಿಗೆ ನೇರವಾಗಿ ಮುಖಾಮುಖಿಯಾಗುತ್ತಾ ಬಂದಿವೆ. ಸಾಹಿತ್ಯದಲ್ಲಿ ಲಿಖಿತ ಪರಂಪರೆ ಮತ್ತು ಮೌಖಿಕ ಪರಂಪರೆಗಳ ಪ್ರಭಾವ ಪಡೆದುಕೊಂಡು ಅವನ್ನು ವರ್ತಮಾನದ ಅಗತ್ಯಗಳಿಗೆ ಹೊಸದಾಗಿ ರೂಪಿಸಿವೆ. ದಲಿತ ಹೋರಾಟವು ಗ್ರಾಮೀಣ ಪ್ರದೇಶಗಳಿಗೆ ಹಬ್ಬಿತು. ದಲಿತ ಸಮುದಾಯಕ್ಕೆ ಸಾಮಾಜಿಕ ಜಾಗೃತಿ ಮೂಡಿಸಿತು. ಭೂಮಾಲಿಕ ವರ್ಗವೇ ದಲಿತರ ಪ್ರಧಾನ ಶತ್ರು ಎಂಬುದನ್ನು ಒತ್ತಿ ಹೇಳಿತು. ಇದರಿಂದ ಎಚ್ಚೆತ್ತುಕೊಂಡ ಭೂಮಾಲಿಕ ವರ್ಗದ ವೈಚಾರಿಕ ವಲಯವು ದಲಿತರ ಶತ್ರು ಬ್ರಾಹ್ಮಣಶಾಹಿ ಎಂಬ ತಪ್ಪು ದಾರಿಯನ್ನು ತೋರಿಸಿತು. ಪರಿಣಾಮವಾಗಿ ದಲಿತ ವೈಚಾರಿಕತೆಯ ಒಂದು ಭಾಗವು ಈ ತಪ್ಪಾದ ಆಯಾಮವನ್ನು ಇವತ್ತೂ ನಂಬಿಕೊಂಡಿದೆ.

ಜಾಗತೀಕರಣದ ನಂತರದ ದಿನಗಳಲ್ಲಿ ದಲಿತ ಹೋರಾಟದ ಸ್ವರೂಪ ಮತ್ತು ದಲಿತ ಸಾಹಿತ್ಯದ ಗ್ರಹಿಕೆ ಹಾಗೂ ಅಭಿವ್ಯಕ್ತಿಗಳಲ್ಲಿ ಕೆಲವು ಬದಲಾವಣೆಗಳು ನಡೆದವು. ಜಾಗತೀಕರಣವನ್ನು ದಲಿತರ ಬಿಡುಗಡೆಯ ಬಾಗಿಲು ಎಂದು ಗ್ರಹಿಸಿದ ರಾಜಕೀಯ ಗ್ರಹಿಕೆ ಒಂದು. ಜಾಗತೀಕರಣವು ದಲಿತರ ಶ್ರಮ ಶೋಷಣೆಯ ಮೂಲಕ ಅವರನ್ನು ಮತ್ತಷ್ಟು ಸಂಕಟದ ಕೂಪಕ್ಕೆ ತಳ್ಳುತ್ತದೆ ಎಂಬ ರಾಜಕೀಯ ತಿಳುವಳಿಕೆ ಮತ್ತೊಂದು. ಮೊದಲನೆಯದು ರಾಜಕೀಯ ಅಪಕ್ವ ತಿಳುವಳಿಕೆಯಿಂದ ಬಂದುದು. ಎರಡನೆಯದು ಜಾಗತಿಕ ಮಟ್ಟದ ಆರ್ಥಿಕ–ರಾಜಕೀಯ ಸಮಗ್ರ ಅರಿವಿನಿಂದ ಬಂದುದು.

ಕೊನೆಯದಾಗಿ

ಈ ಪ್ರಬಂಧದ ಆರಂಭದಲ್ಲಿ ಸೃಜನಶೀಲತೆಯ ತಾತ್ವಿಕತೆಯನ್ನು ಚರ್ಚಿಸಲಾಯಿತು. ಅದರ ಬೀಜರೂಪಿ ಆಲೋಚನೆಗಳನ್ನು ಇಲ್ಲಿ ಮತ್ತೆ ನೆನಪು ಮಾಡಿಕೊಳ್ಳೋಣ. ವಸ್ತುವಿನ ರೂಪ, ಸ್ವರೂಪವನ್ನು ಬದಲಾಯಿಸುವುದು ಸೃಜನಶೀಲತೆಯ ಮುಖ್ಯ ಸ್ವಭಾವ. ಈ ದೃಷ್ಟಿಯಿಂದ ದಲಿತ ಸಾಹಿತ್ಯ ಮತ್ತು ದಲಿತ ಹೋರಾಟಗಳು ಸಾಮಾಜಿಕ ಸೃಜನಶೀಲತೆಯ ಶಕ್ತಿಗಳು. ಇವೆರಡೂ ಕೂಡ ತುಳಿಯುವವರ ಮತ್ತು ತುಳಿಸಿಕೊಳ್ಳುವವರ ಅಂತರಂಗ ಹಾಗೂ ಬಹಿರಂಗಗಳೆರಡನ್ನೂ ಬದಲಾಯಿಸಲು ಕರೆ ಕೊಟ್ಟವು. ಮತ್ತು ಈ ದಿಸೆಯಲ್ಲಿ ಕೆಲಸ ಮಾಡಿದವು. ಅಂದರೆ ಅಸಮಾನತೆಯಿಂದ ಕೂಡಿರುವ ಸಾಮಾಜಿಕ ರಚನೆಯನ್ನು ಬದಲಾಯಿಸಬೇಕು ಎಂಬ ಕಳಕಳಿಯನ್ನು ಒಳಗೊಂಡಿವೆ. ಸಾಹಿತ್ಯದ ವಿವಿಧ ಪ್ರಕಾರಗಳ ರಚನೆಯ ಕ್ರಮದಲ್ಲೇ ಹಳೆಯ ಸಂಪ್ರದಾಯದ ಸ್ವರೂಪವನ್ನು ಮುರಿದು ಹೊಸ ಪರಂಪರೆಯನ್ನು ನಿರ್ಮಾಣ ಮಾಡಿವೆ. ಹೀಗೆ ಹೊಸ ಪರಂಪರೆಯನ್ನು ನಿರ್ಮಾಣ ಮಾಡಿರುವುದೇ ಈ ಎರಡರ ಸೃಜನಶೀಲತೆಯ ದೊಡ್ಡ ಶಕ್ತಿ.

Scanned with CamScanner

ಕನ್ನಡ ಸಾಹಿತ್ಯ ಪರಿಷತ್ತು

ಮನುಷ್ಯ ಜಾತಿ
ತಾನೊಂದೆ ವಲಂ

ದಲಿತ ಸಾಹಿತ್ಯ ಸಂಪುಟ

ಅಂಕಣ ಬರಹ

ಪ್ರಧಾನ ಸಂಪಾದಕರು
ನಾಡೋಜ ಡಾ. ಮನು ಬಳಿಗಾರ್

ಸಂಪಾದಕರು
ಡಾ.ಅಣ್ಣಮ್ಮ

Scanned with CamScanner

DALITA SAHITYA SAMPUTA - ANKANA BARAHA - Edited by : Dr. Annamma *Published by :* **Nadoja Dr. Manu Baligar,** President, **Kannada Sahitya Parishattu,** Pampa Mahakavi Road, Chamarajapete, Bengaluru - 560018 Pages : xii + 272 Price : Rs.300=00 : 2020

ಪ್ರಥಮ ಮುದ್ರಣ : ೨೦೨೦
ಪ್ರತಿಗಳು : ೫೦೦
ಬೆಲೆ : ಮುನ್ನೂರು ರೂಪಾಯಿಗಳು
© ಹಕ್ಕುಗಳನ್ನು ಕಾಯ್ದಿರಿಸಿದೆ.

ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿ

ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಸಂಚಾಲಕರು
ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಸದಸ್ಯರು
ಡಾ. ಅರ್ಜುನ ಗೊಳಸಂಗಿ, ಸದಸ್ಯರು
ಡಾ. ಬಿ.ಟಿ. ಲಲಿತಾ ನಾಯಕ್, ಸದಸ್ಯರು

ಪ್ರಕಟಣಾ ಸಮಿತಿ

ನಾಡೋಜ ಡಾ. ಮನು ಬಳಿಗಾರ್
ಅಧ್ಯಕ್ಷರು

ಸಮ್ಮೇಳನಾಧ್ಯಕ್ಷರು – ಡಾ. ಹೆಚ್.ಎಸ್. ವೆಂಕಟೇಶಮೂರ್ತಿ
೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಂಚಾಲಕರು, ಪ್ರಕಟಣಾ ವಿಭಾಗ – ಡಾ. ಪದ್ಮರಾಜ ದಂಡಾವತಿ

ಸದಸ್ಯರು
ಶ್ರೀ ಜರಗನಹಳ್ಳಿ ಶಿವಶಂಕರ್
ಡಾ. ಮೂಡ್ನಾಕೂಡು ಚಿನ್ನಸ್ವಾಮಿ
ಪ್ರೊ. ಧರಣೇಂದ್ರ ಕುರಕುರಿ
ಶ್ರೀ ರಂಜಾನ್ ದರ್ಗಾ
ಡಾ. ಬಿ.ಕೆ. ರವಿ
ಡಾ. ತಮಿಳ್ ಸೆಲ್ವಿ
ಡಾ. ದೊಡ್ಡಮಲ್ಲಯ್ಯ
ಡಾ. ಎಚ್.ಎಲ್. ಪುಷ್ಪ
ಶ್ರೀ ಎ.ಆರ್. ಉಜ್ಜನಪ್ಪ
ಶ್ರೀ ಸಂಜಯ ಅಡಿಗ
ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್

ಗೌರವ ಕಾರ್ಯದರ್ಶಿಗಳು
ಡಾ. ರಾಜಶೇಖರ ಹತಗುಂದಿ
ಶ್ರೀ ವ.ಚ. ಚನ್ನೇಗೌಡ

ಗೌರವ ಕೋಶಾಧ್ಯಕ್ಷರು
ಶ್ರೀ ಪಿ. ಮಲ್ಲಿಕಾರ್ಜುನಪ್ಪ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮುದ್ರಣ : ಬಿ.ಎಂ.ಶ್ರೀ. ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಾಡು, ನುಡಿ, ನೆಲ, ಜಲ ಹಾಗೂ ಸಾಹಿತ್ಯ–ಸಂಸ್ಕೃತಿಗೆ ಪ್ರೇರಕ ಶಕ್ತಿಯಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೧೯೧೫ನೇ ಇಸವಿ ಮೇ ೫ ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ ಅವರ ದೂರದೃಷ್ಟಿಯ ಫಲವಾಗಿ ಅಸ್ತಿತ್ವಕ್ಕೆ ಬಂದಿತು. ಅಂದಿನ ಮೈಸೂರು ಸಂಸ್ಥಾನದ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯ ಅವರ ಒತ್ತಾಸೆಯೂ ಇಲ್ಲಿ ಜೊತೆಗೂಡಿತ್ತು. ಶತಮಾನ ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತು ನನ್ನನ್ನೂ ಸೇರಿ ೨೫ ಅಧ್ಯಕ್ಷರನ್ನು ಕಂಡಿದೆ. ೮೪ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಿ ಕನ್ನಡದ ಕಹಳೆ ಮೊಳಗಿಸಿದೆ. ಇಲ್ಲಿಯವರೆಗೆ ೧೫೦೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ–ಸಂಸ್ಕೃತಿ ಪ್ರಸಾರದಲ್ಲಿ ಮಹತ್ತರ ಸಾಧನೆಗೈದಿದೆ. ೧೦೫ನೇ ವರ್ಷಕ್ಕೆ ಕಾಲಿಟ್ಟ ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು: 'ದಲಿತ ಸಾಹಿತ್ಯ ಸಂಪುಟ'ದ ಯೋಜನೆ ರೂಪಿಸಿ ಕಾರ್ಯಗತಗೊಳಿಸುತ್ತಿರುವುದು ಚರಿತ್ರಾರ್ಹ ಸಂಗತಿಯೆಂದೇ ಭಾವಿಸಿದ್ದೇನೆ. 'ದಲಿತ ಸಾಹಿತ್ಯ ಸಂಪುಟ' ರಚನಾ ಸಮಿತಿಯ ಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿರುವ ಕನ್ನಡದ ಹಿರಿಯ ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು "ಭಾರತೀಯ ಯಾವ ಭಾಷೆಗಳಲ್ಲೂ ಈ ಬಗೆಯ ಸಂಪುಟಗಳು ಪ್ರಕಟಗೊಂಡಿಲ್ಲ" ಎಂದು ಹೇಳಿರುವುದು ಈ ಯೋಜನೆಯ ಐತಿಹಾಸಿಕ ಮಹತ್ವವನ್ನು ಎತ್ತಿ ತೋರಿಸುತ್ತದೆ.

'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪನ ಮಾತನ್ನು ತನ್ನ ಘೋಷ ವಾಕ್ಯವಾಗಿ ಸ್ವೀಕರಿಸಿರುವ ಕನ್ನಡ ಸಾಹಿತ್ಯ ಪರಿಷತ್ತು, ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ನನ್ನ ಅವಧಿಯಲ್ಲಂತೂ ಒಂದು ವ್ರತದಂತೆ ಪಾಲಿಸುತ್ತಾ ಬಂದಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಬಗೆಯ ಚಟುವಟಿಕೆಗಳಲ್ಲಿ ಸಮಸ್ತರನ್ನು ಒಳಗೊಳ್ಳುತ್ತಾ ನಿಜವಾದ ಅರ್ಥದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಲಾಗಿದೆ. ಅದರ ಭಾಗವಾಗಿಯೇ 'ದಲಿತ ಸಾಹಿತ್ಯ ಸಂಪುಟ'ದ ಈ ಚರಿತ್ರಾರ್ಹ ಯೋಜನೆ ಕಾರ್ಯಗತಗೊಂಡಿದ್ದು. ಸಮಾರಂಭವೊಂದರಲ್ಲಿ ಕರ್ನಾಟಕ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಅರ್ಜುನ ಗೊಳಸಂಗಿಯವರು 'ಶತಮಾನ ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತು ದಲಿತ ಸಾಹಿತ್ಯ ಸಂಪುಟಗಳನ್ನು ಹೊರತಂದರೆ ಒಳ್ಳೆಯದು. ಅದು ನಿಮ್ಮ ಅವಧಿಯಲ್ಲೇ ಕಾರ್ಯಗತಗೊಂಡರೆ ಚರಿತ್ರಾರ್ಹ ಸಂಗತಿ ಎನಿಸಿಕೊಳ್ಳುತ್ತದೆ' ಎಂದು ಪ್ರಸ್ತಾವನೆ ಇಟ್ಟರು. ತಕ್ಷಣವೇ ಕಾರ್ಯಪ್ರವೃತ್ತನಾದ ನಾನು ಕಾರ್ಯಕಾರಿ ಸಮಿತಿ ಅನುಮೋದನೆ ಪಡೆದು ಅಗತ್ಯದ ಆರ್ಥಿಕ ಸಂಪನ್ಮೂಲದ ವ್ಯವಸ್ಥೆ ಮಾಡಿಕೊಂಡು

Scanned with CamScanner

ಪರಿವಿಡಿ

೦೧. ಸರ್ವಜ್ಞನ ನೀತಿಮಾರ್ಗ — ೦೧
• ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ

೦೨. ದಲಿತ ಚಳವಳಿ ಮತ್ತು ರಾಜಕಾರಣ — ೦೬
• ಡಾ. ಸಣ್ಣರಾಮ

೦೩. ಒಳ ಮೀಸಲಾತಿ : ಒಳಗಣ್ಣು ತೆರೆಯಲಿ — ೧೬
• ಕೆ.ಬಿ. ಸಿದ್ದಯ್ಯ

೦೪. ಊರುಕೇರಿ — ೨೦
• ಪ್ರೊ. ಸಿದ್ದಲಿಂಗಯ್ಯ

೦೫. ಹಿಂದಿ ಹೇರಿಕೆ: ದೇಶದ ವೈವಿಧ್ಯತೆಗೆ ಅಪಾಯ — ೨೫
• ಶಿವಾಜಿ ಗಣೇಶನ್

೦೬. ಸಂವಿಧಾನದ ಮೂಲ ಆಶಯಗಳು ಮತ್ತು ಓಡುತ್ತಿರುವ 'ಪ್ರಜಾಪ್ರಭುತ್ವ'ವೆಂಬ ಗಾಲಿಯಿಲ್ಲದ ರಥ — ೩೦
• ಡಾ. ಮೂಡ್ನಾಕೂಡು ಚಿನ್ನಸ್ವಾಮಿ

೦೭. 'ಭಾರತಿ' (ತಿರುಮಲೆ ರಾಜಮ್ಮ) — ೩೬
• ಡಾ. ಕಮಲಾ ಹಂಪನಾ

೦೮. ಕನಕದಾಸ ನಾಟಕದ ಒಂದು ವಿಶ್ಲೇಷಣೆ — ೪೭
• ಶ್ರೀಮತಿ. ಬಿ.ಟಿ. ಲಲಿತಾನಾಯಕ್

೦೯. ವ್ಯಕ್ತಿ ಉಲ್ಲೇಖ, ದೈವಸ್ಮರಣೆ ಇಲ್ಲದೆ ಸಂವಿಧಾನ ಸ್ಮರಣೆಯೊಂದೇ ಮುಖ್ಯವಾಗಲಿ — ೫೪
• ಡಾ. ಬರಗೂರು ರಾಮಚಂದ್ರಪ್ಪ,

೧೦. ಜನಪದ ಒಗಟುಗಳಲ್ಲಿ ಹಾಸ್ಯ — ೫೭
• ಡಾ. ಶಿವಾನಂದ ಕೆಳಗಿನಮನಿ

೧೧. ಅಪ್ಪನೆಂದರೆ .... ಭರವಸೆ — ೬೬
• ಡಾ. ಪ್ರಶಾಂತ ನಾಯಕ ಜಿ.

೧೨. ಭ್ರಷ್ಟಾಚಾರ ವಿರೋಧಿ ಹೋರಾಟ: ಅಸಲಿ ಹೋರಾಟ ಮತ್ತು ನಕಲಿ ಹೋರಾಟಗಳ ನೆಲೆಯಿಂದ — ೭೧
• ಡಾ. ಬಿ.ಎಂ. ಪುಟ್ಟಯ್ಯ

೧೩. ಕಂಗಳೊಳಗಣ ಕತ್ತಲೆ... — ೮೦
• ಡಾ. ಎಚ್ ಟಿ ಪೋತೆ

೧೪. ಓಲೆ ಕಳ್ಳ ಅತ್ತೆ — ೮೫
• ಡಾ. ಎಲ್. ಹನುಮಂತಯ್ಯ

೧೫. ಹಿಂದಣ ಗಾಂಧಿ–ಮುಂದಣ ಮಂಡೇಲಾ — ೯೦
• ಡಾ. ವೆಂಕಟಗಿರಿ ದಳವಾಯಿ

೧೬. ಹಣತೆಯ ಬೆಳಕಿನಿಂದ — ೯೩
• ಡಾ. ಸಮತಾ ಬಿ. ದೇಶಮಾನೆ

೧೭. ಪರಂಪರೆ ಮತ್ತು ಹೊಲೆಮಾದಿಗರ ಹಾಡು — ೯೮
• ಡಾ. ಬಿ. ಗಂಗಾಧರ

೧೮. ಸಖೀಗೀತ – ಅಂಬೇಡ್ಕರ್ ಎಂಬ ಬೆಳಕಿಗೆ ಎಣ್ಣೆಯಾಗಿ ಉರಿದ ರಮಾಬಾಯಿ — ೧೧೭
• ಡಾ. ದು.ಸರಸ್ವತಿ

೧೯. ೩೧ ರ ರಾತ್ರಿಯ ಭ್ರಮೆಗಳು — ೧೨೧
• ಓಂ ಪ್ರಕಾಶ್ ನಾಯಕ್

೨೦. ಭಾಷೆ, ಬದುಕಿನ ಮೇಲೆ ಜಾಗತೀಕರಣದ ಸವಾರಿ — ೧೨೬
• ಡಾ. ಶಿವರಾಜ ಬ್ಯಾಡರಹಳ್ಳಿ

೨೧. ಅಸ್ಪೃಶ್ಯ ಕಥನ – ಊರ ಬಾಗಿಲು ತೆರೆದಿದೆ, ಎದೆಯ ಬಾಗಿಲುಗಳು ಮಾತ್ರ ಮುಚ್ಚಿಯೇ ಇವೆ...! — ೧೩೩
• ಎನ್. ರವಿಕುಮಾರ್

೨೨. ಹಳ್ಳಿಯಲ್ಲಿ ದಲಿತರಿಗೆ ಕೇರಿಗಳು, ಪಟ್ಟಣಗಳಲ್ಲಿ ಕೊಳೆಗೇರಿಗಳು – ಬೆಂಗಳೂರು ನಗರದ ಕೊಳೆಗೇರಿಗಳು, ದ್ವಂಸ ಹಾಗೂ ಸ್ಥಳಾಂತರ : ಒಂದು ನೋಟ — ೧೩೬
• ಐಸಕ್ ಅರುಳ್ ಸೆಲ್ವ

೨೩. ಅಂಚಿನ ಸಮುದಾಯಗಳ ಕಣ್ಣುಗಳಲ್ಲಿ ಮೂಡಬೇಕಿದೆ ಸ್ವಾತಂತ್ರ್ಯದ ಬೆಳಕು — ೧೪೨
• ಹುಲಿಕುಂಟೆ ಮೂರ್ತಿ

೨೪. ಅಭಿವೃದ್ಧಿಯಲ್ಲಿ ಅಗೋಚರವಾಗಿ ಉಳಿದವರು — ೧೪೭
• ಡಾ. ಆರ್. ವಿ. ಚಂದ್ರಶೇಖರ್ ರಾಮೇನಹಳ್ಳಿ

೨೫. ಕನ್ನಡ ಶಾಸ್ತ್ರೀಯ ಭಾಷೆ: ಆಗಬೇಕಿರುವುದೇನು? — ೧೫೫
• ಪ್ರದೀಪ್ ಎಲ್ ಮಾಲ್ಗುಡಿ

೨೬. ಶಿಕ್ಷಣ ಮತ್ತು ಉದ್ಯೋಗದ ಜನಪದೀಕರಣ — ೧೬೦
• ಡಾ. ಅರುಣ್ ಜೋಳದಕೂಡ್ಲಿಗಿ

೨೭. ಗುಣಗಾನವಿಲ್ಲದ ಕವಿ ಮತ್ತು ಕವಿತೆಗಳ ಸುತ್ತ — ೧೬೯
• ಗುರುಪ್ರಸಾದ್

೨೮. ಮಾಂಸ, ಎಂಜಲು, ಮಿಲನ ಮತ್ತು ಭಕ್ತಿಯ ಅನುಸಂಧಾನ — ೧೭೩
• ಗೋವಿಂದರಾಜು ಎಂ ಕಲ್ಲೂರು

೨೯. ವಿಳಾಸವಿಲ್ಲದ ಪತ್ರ : ಎನ್.ಕೆ. ಕಾವ್ಯ — ೧೭೮
• ಎಸ್.ಕೆ. ಮಂಜುನಾಥ್

Scanned with CamScanner

ಹಿಂದಣ ಗಾಂಧಿ–ಮುಂದಣ ಮಂಡೇಲಾ

- ಡಾ. ವೆಂಕಟಗಿರಿ ದಳವಾಯಿ

ಹಾದಿ ಒಳಗಲ ಜ್ಯೋತಿ ಬೀದಿಯೊಳಗಲ ಜ್ಯೋತಿ
ಅಂಗೈಲಿ ಉರಿವಂತ ಜ್ಯೋತಿ
ಮುಂಗೈಲಿ ಉರಿವಂತ ಜ್ಯೋತಿ
ಜ್ಯೋತಿ....

ಬುಡಕಟ್ಟಿನ ಸಾಂಸ್ಕೃತಿಕ ವೀರ ಮಂಟೆಸ್ವಾಮಿಯ ಮಹಾಕಾವ್ಯದ ಸಾಲುಗಳಿವು. ಸೃಷ್ಟಿಯ ಆರಂಭವನ್ನು ಈ ಸಾಲುಗಳು ರೂಪಕವಾಗಿ ಹೇಳುತ್ತವೆ. ಧರೆಗೆ ದೊಡ್ಡವರಾದವರ ಸಾಮಾಜಿಕ ಕಥನವಿದು. ಸುಮ್ಮನಿರದ ಈ ದೊಡ್ಡವರು ಹಾದಿ–ಬೀದಿಯಲ್ಲಿ ನಡೆದಾಡಿದ ರೀತಿ ಬೆರಗುಗೊಳಿಸುವಂತದ್ದು. ಒಮ್ಮೆ ಉರಿವ ಕೆಂಡವಾಗುವುದು, ಮತ್ತೊಮ್ಮೆ ಸಂತನಂತೆ ಬೆಳಕು ನೀಡುವುದು, ಯಾರಿಗಾಗಿ ? ಈ ಕುರಿತು ಬೆಳಕಲ್ಲಿ ನಡೆದವರೇ ನುಡಿಯಬೇಕು. ಅಂತಹ ಸಂದರ್ಭಗಳು ಕಾಲಕಾಲಕ್ಕೆ ಸಂಭವಿಸುತ್ತಲೇ ಇರುತ್ತವೆ. ಅಂತಹದ್ದೇ ಕಾಲ ಈಗ ಕೂಡಿ ಬಂದಿದೆ. ಮಂಡೇಲಾರ ಸಾವು ಮತ್ತೊಮ್ಮೆ ಪ್ರಜಾಪ್ರಭುತ್ವದ ಬಗ್ಗೆ, ಸಮಾನತೆಯ ಬಗ್ಗೆ, ಮನುಷ್ಯತ್ವದ ಬಗ್ಗೆ, ಪ್ರೀತಿ ಹುಟ್ಟಿಸುವಂತೆ ಮಾಡುತ್ತಿದೆ. ಕಳೆದುಹೋದ ಅಂತಃಶಕ್ತಿಯನ್ನು ಸೃಜಿಸಲು ಈ ಸಾವು ಬಹಳಷ್ಟು ಕಾರಣವಾಗುತ್ತದೆ. ಗಾಂಧಿ–ಅಂಬೇಡ್ಕರ್–ಅಂಗುಲೀಮಾಲನ ಸಮೀಪಕ್ಕೆ ನಾವು ಮಂಡೇಲಾರನ್ನು ತಂದು ನಿಲ್ಲಿಸುತ್ತಿರುವುದು ಚರಿತ್ರೆಯಾದರು ಎಂಬ ಕಾರಣಕ್ಕಾಗಿ ಅಲ್ಲ, ಆ ಚರಿತ್ರೆ ವರ್ತಮಾನಕ್ಕೆ ಬೆಳಕನ್ನಿತ್ತಿದೆ ಎನ್ನುವ ಕಾರಣಕ್ಕಾಗಿ. !

ಮಂಡೇಲಾರವರು ಗಾಂಧಿಯನ್ನು ಒಪ್ಪಿಕೊಂಡರೆ ನಾವು ಅಂಬೇಡ್ಕರ್‌ರೊಂದಿಗೆ ಮಂಡೇಲಾರನ್ನು ಸಮೀಕರಿಸುತ್ತಿದ್ದೇವೆ ಏಕೆಂದರೆ, ಶೋಷಿತರ ಪರವಾದ ಧ್ವನಿಗಳೆಲ್ಲವೂ ಒಂದೇ ಬಣ್ಣ ಎನ್ನುವ ಹಿನ್ನೆಲೆಯಲ್ಲಿ ! ಆದರೆ ಆ ಬಣ್ಣ 'ಕಪ್ಪು' ಎನ್ನುವುದರಲ್ಲಿ ಯಾವ ಅನುಮಾನಗಳಿಲ್ಲ. ಮಂಡೇಲಾರವರು ಬದುಕನ್ನು ದೀರ್ಘಗೊಳಿಸಿಕೊಂಡಿದ್ದರ ಉದ್ದೇಶವೇ ಪರಿವರ್ತನೆಗಾಗಿ ಎನಿಸುತ್ತದೆ. ಆ ಪರಿವರ್ತನೆಯ ಹಾದಿ ದುರ್ಗಮವಾದರೂ ಮಂಡೇಲಾರವರು ಅದನ್ನು ಕಿರುಪ್ರಯಾಣವೆಂದೇ ಭಾವಿಸಿ ಗುರಿಯನ್ನು ಮುಟ್ಟಿದ್ದಾರೆ. ಪುಣ್ಯಕ್ಕೆ ಆ ದೇಶದಲ್ಲಿ ಗೋಡ್ಸೆಯಂತಹವರು ಹುಟ್ಟಲಿಲ್ಲ. ಇಲ್ಲದಿದ್ದರೆ ದಕ್ಷಿಣ ಆಫ್ರಿಕಾ ಬ್ರಿಟೀಷರಿಂದ ಬಿಡುಗಡೆ ಹೊಂದಿ ೧೮ ವರ್ಷಗಳು ಕಳೆದ ನಂತರವೂ ಸಹಜ ಸಾವು ಮಂಡೇಲಾರವರಿಗೆ ಒದಗಿ ಬರುತ್ತಿರಲಿಲ್ಲ. ಆ ಕಗ್ಗತ್ತಲ ಖಂಡದಲ್ಲಿದ್ದ ಮಾನವೀಯತೆ–ಸಂಯಮ–ಸಂವಾದ ಗುಣ ಈ ನೆಲದಲ್ಲಿ ಹುಟ್ಟದೇ ಹೋಯಿತು. ಮಂಡೇಲಾರವರೇ ಹೇಳುವಂತೆ, "While Gandhi was a human without weakness, I am a man of many weaknesses" ಎಷ್ಟು ದೊಡ್ಡ ಮನುಷ್ಯ ಈ ಮಂಡೇಲಾ. ಬದುಕು,

ಆದರ್ಶ, ಅದಕ್ಕೆ ತಕ್ಕಂತಹ ಹೋರಾಟದ ಹಾದಿ, ಅಧಿಕಾರ ಇವೆಲ್ಲವನ್ನೂ ನೋಡಿದ ಮೇಲೆ ತನ್ನ ದೌರ್ಬಲ್ಯಗಳ ಬಗ್ಗೆ ಎಚ್ಚರಿಕೆಯನ್ನಿಟ್ಟುಕೊಂಡ ಕಾರಣಕ್ಕಾಗಿ ನೆಲ್ಸನ್ ಮಂಡೇಲಾ ವರ್ತಮಾನಕ್ಕೆ ಸಂಗತವಾಗುತ್ತಾರೆ.

ಮಂಡೇಲಾ ಗಾಂಧಿಯಂತೆ ಅಧಿಕಾರವನ್ನು ತ್ಯಜಿಸಲಿಲ್ಲ. ಅಂಬೇಡ್ಕರ್‌ರಂತೆ ಅಧಿಕಾರಕ್ಕೆ ಸಮೀಪಿಸಿದರು. ಅಲ್ಲೇ ಕೂಡುತ್ತಾರೆ ಬಿಡು ಎನ್ನುವುದರೊಳಗೆ ಎದ್ದು ಹೊರಟೇ ಬಿಟ್ಟರು. ಒಬ್ಬ ವ್ಯಕ್ತಿ ಮನಸ್ಸಿಗೆ ತೋಚಿದ್ದನ್ನು ಬಹುಜನರ ಹಿತಕ್ಕಾಗಿ ಬಳಸಿದ್ದು ಬಹಳ ವಿರಳ ಅಂತಹ ಅಪರೂಪದ ವ್ಯಕ್ತಿ ನೆಲ್ಸನ್ ಮಂಡೇಲಾ. ಇಲ್ಲದಿದ್ದರೆ, "When a man has done what he considers to be his duty to his people and his country he can rest in peace" ಎನ್ನುವ ಮಾತು ಅವರಿಂದ ಬರುತ್ತಿರಲಿಲ್ಲ. ಅಷ್ಟೇ ಅಲ್ಲ ಸತ್ಯ, ಅಹಿಂಸೆ, ಸೆರೆವಾಸವನ್ನು ಒಪ್ಪಿಕೊಳ್ಳುವ ಸಂದರ್ಭದಲ್ಲಿಯೂ ಯಾವ ಗೊಂದಲಗಳಿಗೂ ಒಳಗಾಗಲಾರದ್ದು, ಇಂತಹ ಮನಃಸ್ಥಿತಿಯಿಂದಲೇ ಎನಿಸುತ್ತದೆ. ಯಾಕೆಂದರೆ ಗಾಂಧಿಯನ್ನು ಇಷ್ಟಪಡುವುದು ಬೇರೆ; ಅದೇ ಆತನ ಸಂಗಾತಿಯಾಗುವುದು ಬೇರೆ. ಮಂಡೇಲಾ ಗಾಂಧಿಯನ್ನು ಬರೀ ಇಷ್ಟಪಡಲಿಲ್ಲ ಜೊತೆಗೆ ಸಂಗಡಿಗರಾದರು. ಇಲ್ಲದಿದ್ದರೆ ತನ್ನ ಸೆರೆವಾಸದ ಸಹಖೈದಿಯೊಬ್ಬ ಕೇಳಿದ ಪ್ರಶ್ನೆಯನ್ನು ನೆನಪಿನಲ್ಲಿಟ್ಟುಕೊಳ್ಳುತ್ತಿರಲಿಲ್ಲ. ಸತ್ಯಾಗ್ರಹ, ಉಪವಾಸ ಕುರಿತು ತನ್ನ ಸಹಖೈದಿ ಪ್ರಶ್ನಿಸಿದ ರೀತಿಯನ್ನು ಮರೆಯದೆ ಮಂಡೇಲಾರವರು ಹೀಗೆ ದಾಖಲಿಸುತ್ತಿರಲಿಲ್ಲ. "ಮಡಿಬಾ ನನಗೆ ಆಹಾರ ಬೇಕು. ಇಷ್ಟು ವರ್ಷವು ಚಳುವಳಿಗಾಗಿ ಜೀವ ಸವೆಸಿದ್ದೇನೆ. ನಾನೇಕೆ ಉಪವಾಸ ಬೀಳಬೇಕು. ನನಗೆ ಅರ್ಥವಾಗುತ್ತಿಲ್ಲ." ಇಂತಹ ಕಪ್ಪುಜನರ ಅನೇಕ ಪ್ರಶ್ನೆಗಳಿಗೆ ತಮ್ಮ ತೊಂಭತ್ತೈದು ವರ್ಷಗಳ ಆಯುಷ್ಯದಲ್ಲಿ ಉತ್ತರಿಸುತ್ತಲೇ ಬಂದಿದ್ದಾರೆ. ಹೀಗಾಗಿ ೨೧ನೇ ಶತಮಾನದ ಚರಿತ್ರೆಯಾಗಿದ್ದಾರೆ.

ಸುದೀರ್ಘವಾದ ಆ ಸೆರೆವಾಸ ಎಲ್ಲ ದ್ವೇಷಗಳನ್ನು, ಹಿಂಸೆಯನ್ನು ಮಾನವೀಕರಿಸಿದ್ದು ಸಾಮಾನ್ಯ ಸಂಗತಿಯಲ್ಲ. ಅಂತಹ ಸೆರೆವಾಸಗಳು ಅನೇಕ ಹೋರಾಟಗಾರರನ್ನು ಹುಚ್ಚರನ್ನಾಗಿಸಿದೆ ಇಲ್ಲವೇ ಸರ್ವಾಧಿಕಾರಿಯನ್ನಾಗಿಸಿವೆ. ಆದರೆ ಮಂಡೇಲಾರ ಪಾಲಿಗೆ ಆ ಇಪ್ಪತ್ತೇಳು ವರ್ಷ ಭ್ರಮನಿರಸನದ ಕಾಲವಾಗದೇ, ವಿಕ್ಷಿಪ್ತ ಮನಃಸ್ಥಿತಿಯ ಕಾಲವಾಗದೇ, ಮನುಷ್ಯಪರ ಹೋರಾಟಕ್ಕೆ ಸನ್ನದ್ಧಗೊಳಿಸಿದ ಕಾಲವಾದದ್ದು ಅಸಾಧಾರಣ ಸಂಗತಿಯಾಗಿದೆ. ಇದಕ್ಕೆ ಬಹುಶಃ ಕಾರಣವಾದದ್ದು ಅವರೊಳಗಿದ್ದ ಫಿಲಾಸಫರ್. ಇಂತಹ ಫಿಲಾಸಫರ್‌ನಿಂದ ಎರಡು ರೀತಿಯ ಕೆಲಸಗಳು ಸಾಧ್ಯ. ಒಂದು ಖಡ್ಗ ಹಿಡಿಯುವುದು, ಮತ್ತೊಂದು ತಂಬೂರಿ ಮೀಟುವುದು. ಆದರೆ ಇಲ್ಲಿ ಖಡ್ಗವನ್ನು ಪ್ರಯೋಗಿಸದೇ, ಶಾಂತಿ ಸಂಧಾನವನ್ನು ಆಯ್ಕೆ ಮಾಡಿಕೊಳ್ಳುವ ಮನೋಧರ್ಮ ಮಂಡೇಲಾರಿಗೆ ಕೊಟ್ಟಿದ್ದು ಅವರೊಳಗಿನ ಫಿಲಾಸಫಿ ಎನಿಸುತ್ತದೆ. ಬಾಪೂವಿನ ನಂತರದ ರಾಜಕೀಯ ಹೋರಾಟಗಳ ಸಂದರ್ಭದಲ್ಲಿ ನೆಲ್ಸನ್ ಮಂಡೇಲಾಗೆ ಮಾತ್ರ ಇಷ್ಟು ಪ್ರಾಧಾನ್ಯತೆ ಸಿಕ್ಕಿದ್ದು, ಇಂತಹ ಬೆಳಗು 'ಸಮಕಾಲೀನ ಸಂದರ್ಭದಲ್ಲಿ ಮತ್ತೆ ಕಾಣುತ್ತಿಲ್ಲ. ತನ್ನ ಜೀವಿತ ಕಾಲದಲ್ಲಿಯೇ ಮಂಡೇಲಾ ಹೇಗೆ ದಂತಕಥೆಯಾಗಿದ್ದಾರೆ ಎನ್ನುವುದನ್ನು ಈ ಅಂಕಿ ಅಂಶಗಳು ತೋರಿಸಿಕೊಡುತ್ತವೆ. ಅವರು

Scanned with CamScanner

ಪಡೆದ ಪ್ರಶಸ್ತಿಗಳು ೧೧೧೫, ಗೌರವ ಡಾಕ್ಟರೇಟ್‌ಗಳು ೧೧೫, ಅವರ ಹೆಸರಿನ ಮೇಲೆ ಇರುವ ಶಾಲೆ ಮತ್ತು ವಿಶ್ವವಿದ್ಯಾಲಯಗಳು ೨೫, ಗೌರವ ನಾಗರೀಕ ಪೌರತ್ವಗಳು ೧೭೫, ಸ್ಟೇಡಿಯಂ ಪಾರ್ಕ್‌ಗಳು ೨೦, ವೃತ್ತಗಳು ೩೫, ರಸ್ತೆಗಳು ೮೫, ಸ್ಕಾಲರ್‌ಶಿಪ್‌ಗಳು ೨೫, ಇಷ್ಟೆಲ್ಲಾ ಗೌರವಗಳು ಒಬ್ಬ ವ್ಯಕ್ತಿಯನ್ನು ಪ್ರತಿನಿಧಿಸುತ್ತವೆ ಎಂದರೆ ಅದು ದಂತಕಥೆಯಲ್ಲದೇ ಮತ್ತೇನು ?

ದಕ್ಷಿಣ ಆಫ್ರಿಕಾವನ್ನು ಜಗತ್ತು ಬೆರಗಿನಿಂದ ನೋಡುವುದಕ್ಕೆ ಮೂರು ಕಾರಣಗಳಿವೆಯಂತೆ. ಒಂದು "೧೯೯೪ರಲ್ಲಿ ಶಾಂತಿಯುತವಾಗಿ ಆದ ಬದಲಾವಣೆ, ಎರಡು ಸತ್ಯ ಮತ್ತು ಸಾಮರಸ್ಯ ಆಯೋಗ ಕಾರ್ಯನಿರ್ವಹಿಸಿರುವುದು. ಇಲ್ಲಿ ಕೊನೆಯ ಕಾರಣ ನೆಲ್ಸನ್ ಮಂಡೇಲಾ ಎಂಬ ಜಗಮನ್ನಣೆ ಪಡೆದ ಮುತ್ಸದ್ದಿ ಈ ಭೂಮಿ ಮೇಲೆ ನಡೆದಾಡಿರುವುದು" ಇದನ್ನೇ, "ಲಾಂಗ್ ವಾಕ್ ಟು ಫ್ರೀಡಂ" ಎಂದಿರುವುದು. (ಇದು ಮಂಡೇಲಾರ ಆತ್ಮಕಥನ) ಇಲ್ಲವಾದರೆ ಮಂಡೇಲಾ ದಕ್ಷಿಣ ಆಫ್ರಿಕಾಕ್ಕೆ ಅಧ್ಯಕ್ಷರಾದ ತಕ್ಷಣ ಬಿಳಿಯರ ಮಾರಣ ಹೋಮವೇ ನಡೆಯುತ್ತಿತ್ತು. ಇಲ್ಲವೇ ಬ್ರಿಟೀಷರು ಹಾಕಿದ ಪೂರ್ವ ಷರತ್ತುಗಳನ್ನು ಒಪ್ಪಿಕೊಂಡಿದ್ದರೆ, ಸುದೀರ್ಘ ೨೭ ವರ್ಷ ಸೆರೆವಾಸ ಅನುಭವಿಸುವ ಪ್ರಮೇಯವೇ ಬರುತ್ತಿರಲಿಲ್ಲ. ಆದರೆ ತಾನು ನಂಬಿದ ಸಿದ್ಧಾಂತಗಳಿಗೆ ಬದ್ಧನಾಗಿದ್ದುಕೊಂಡೇ ದೇಶವನ್ನು, ಜನರನ್ನು, ಸ್ವಾತಂತ್ರ್ಯವನ್ನು, ಹೋರಾಟದ ಹಾದಿಯನ್ನು, ಪ್ರೀತಿಸುವುದು ಸುಲಭದ ಮಾತಲ್ಲ. ಇದನ್ನು ಅತ್ಯಂತ ಸಹಜವೆನ್ನುವಂತೆ ಮಂಡೇಲಾ ಮಾಡಿ ತೋರಿಸಿದ್ದಾರೆ. ಬ್ರಿಟೀಷರು ಹಾಕಿದ ಎಲ್ಲ ಷರತ್ತುಗಳನ್ನು ಧಿಕ್ಕರಿಸಿ, "ಸಮಾನ ರಾಜಕೀಯ ಹಕ್ಕು, ವರ್ಣಬೇಧ ನಿರ್ಮೂಲನೆ, ಬಹುಮತ ತತ್ವ"ಕ್ಕೆ ಅಂಟಿಕೊಂಡೇ ಸ್ವಾತಂತ್ರ್ಯವನ್ನು ಪಡೆದಿದ್ದಾರೆ ಮತ್ತು ಜೀವಿಸಿದ್ದಾರೆ. ಇದುವರೆಗೂ ಮಂಡೇಲಾರವರು ದಕ್ಷಿಣ ಆಫ್ರಿಕಾದ ಬಿಳಿಯರಿಗೆ 'ಕೋಟೆ'ಯಾಗಿದ್ದರು. ಅವರ ಸುರಕ್ಷತೆಯ ಹೊಣೆಗಾರಿಕೆ ಅವರದೇ ಆಗಿತ್ತು. ನೆಲ್ಸನ್ ಇಲ್ಲದ ಈ ದಕ್ಷಿಣ ಆಫ್ರಿಕಾ ಈಗ ಸಂಘರ್ಷದ ಭೀತಿಯನ್ನು ಎದುರಿಸುತ್ತಿದೆ. ಒಬ್ಬ ವ್ಯಕ್ತಿ, ಆ ವ್ಯಕ್ತಿ ನಂಬಿದ ಸಿದ್ಧಾಂತಗಳು ಎಷ್ಟು ಶಕ್ತಿಯುತವಾಗಿರುತ್ತವೆ ಎಂಬುದಕ್ಕೆ ಮಂಡೇಲಾರೇ ಸಾಕ್ಷಿ.

ಮಂಡೇಲಾಗೆ ಗಾಂಧಿ ಬಗ್ಗೆ, ಈ ದೇಶದ ಬಗ್ಗೆ ಅಪಾರವಾದ ನಂಬಿಕೆ. ಒಮ್ಮೆ ಅವರು ಹೀಗೆ ಹೇಳಿದರಂತೆ. "ಭಾರತದಂತಹ ದೇಶಕ್ಕೆ ನಾನು ಕೊಡುವ ಸಲಹೆ ಅಸಂಬದ್ಧ ಎನಿಸಿಕೊಳ್ಳುತ್ತದೆ. ಗಾಂಧಿನಾಡನ್ನು ಅದರಂತೆ ಬಿಟ್ಟುಬಿಡಿ." ನೆಲ್ಸನ್ ಮಂಡೇಲಾ ಹೇಳಿದಂತೆ ನಾವು ಬಿಟ್ಟುಬಿಡಲು ಸಾಧ್ಯವೇ ? ಏಕೆಂದರೆ, ಅದನ್ನು ಸರಿದಾರಿಗೆ ಪುನಃ ತರಲು ಗಾಂಧಿಯೂ ಇಲ್ಲ, ಆತನ ನೆರಳು ನೆಲ್ಸನ್ ಮಂಡೇಲಾನೂ ಇಲ್ಲ ! ಏಕೆಂದರೆ ಬೀದಿಯಲ್ಲಿ ಜ್ಯೋತಿ ಇದೆ ; ಅದೇ ಮನೆಯಲ್ಲಿ ? ಜಗತ್ತಿನ ಎಲ್ಲಾ ಐಕಾನುಗಳು ನಕ್ಷತ್ರ ರೂಪ ತಾಳುತ್ತಿರುವುದು ನಮ್ಮ ಕಾಲದ ದುರಂತವಾಗಿದೆ.

◆

ಹಣತೆಯ ಬೆಳಕಿನಿಂದ

- ಪ್ರೊ. ಸಮತಾ ಜಿ. ದೇಶಮಾನೆ

ಇಹಲೋಕದ ದುರ್ಭರ ಪರಿಸ್ಥಿತಿಯನ್ನು ಮರೆಯುವುದಕ್ಕೆ ಪರಲೋಕದ ಸುಖದ ಕನಸು ; ಜೀವನದಲ್ಲಿ ಎದುರಾಗುವ ಕಷ್ಟ–ಕಾರ್ಪಣ್ಯಗಳಿಗೆ ನಿಜವಾದ ಕಾರಣವನ್ನಾಗಲೀ ಪರಿಹಾರವನ್ನಾಗಲೀ ಹುಡುಕದೆ ಭ್ರಾಮಕವಾದ ಸಾಂತ್ವನ ಪಡೆಯುವ ಯತ್ನ ಮತ್ತು ಧರ್ಮ ಅವುಗಳನ್ನು ಅನಗತ್ಯಗೊಳಿಸುವ ಸಲುವಾಗಿ ಮನುಷ್ಯನ ಜೀವನವನ್ನು ದುರ್ಭರಗೊಳಿಸುವ, ಶೋಚನೀಯಗೊಳಿಸುವ ಪರಿಸ್ಥಿತಿಯನ್ನು ಅಮೂಲಾಗ್ರವಾಗಿ ಬದಲಾವಣೆ ಮಾಡುವುದಕ್ಕೆ ಹೋರಾಟ ಮಾಡಬೇಕು" ಎಂದು ಕಾರ್ಲ್‌ಮಾರ್ಕ್ಸ್ ಹೇಳಿದ್ದಾರೆ.

ಕಣ್ಣೀರು ಕೂಡ ಒಂದು ಭಾಷೆ. ಅತ್ತವರಿಗೆ ಮಾತ್ರ ಅದರ ಅರ್ಥ ತಿಳಿದಿರುತ್ತದೆ ಎಂದು ಹೇಳುವವರಿದ್ದಾರೆ. ರಾಷ್ಟ್ರೀಯ ಬಹುಜನ ಸಮಾಜದ ರಾಷ್ಟ್ರೀಯ ನಾಯಕ ಯುಗದ ಪರಿವರ್ತಕರು, ಶತಮಾನದ ಸಮಾಜ ಸುಧಾರಕರು ದಾದಾ ಸಾಹೇಬ ಅವರ ಸುಮಾರು ನಾಲ್ಕೈದು ಕೇಡರ್ ಕ್ಯಾಂಪ್‌ಗಳಿಗೆ ಹಾಜರಾಗಿ ಅವರು ವಿವರಿಸಿದ, ಶಾಹು ಮಹಾರಾಜರ ದಲಿತರ ಪರ ಇರುವ ಕಾಳಜಿ ಅಸ್ಪೃಶ್ಯರಿಗೆ ವಿದ್ಯೆ ಕಲಿಯಲು ಅವರು ಶಿಷ್ಯ ವೇತನ ಮಂಜೂರು ಮಾಡಿದ್ದು, ಫುಲೆ ದಂಪತಿಗಳ ಶೂದ್ರ–ಅತಿಶೂದ್ರ ಅತೀ ಶೂದ್ರರಲ್ಲಿ ಶಿಕ್ಷಣದ ಪ್ರಜ್ಞೆ ಮೂಡಿಸಿ ಸಮತೆಯ ಸಮಾಜ ಕಟ್ಟುವಲ್ಲಿ ಅವರು ಅನುಭವಿಸಿದ ಅವಮಾನ–ನೋವು ಸವರ್ಣೀಯರಿಂದ ಬಹಿಷ್ಕರಗೊಳಗಾದಾಗ ಕಣ್ಣೀರು ಹಾಕಿದ್ದು, ಅದರಿಂದ ಮೇಲೆದ್ದು ಸಂಘರ್ಷ ಮಾಡಿ ಇಂದು ರಾಷ್ಟ್ರವೇ ಗೌರವಿಸುವ ವ್ಯಕ್ತಿತ್ವಗಳ ಪರಿಚಯ, ಕೇರಳದ ಶ್ರೀಗುರುದೇವ ನಾರಾಯಣ ಗುರು ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು ಎಂದು ಆಧ್ಯಾತ್ಮದ ಗುರುಗಳ ಗುರುವಾಗಿ ಕರ್ನಾಟಕ ಸರ್ಕಾರವೇ ೧೮೨೨ನೇ ಜನ್ಮದಿನಾಚರಣೆ ಆಚರಿಸುವ ಮಟ್ಟಕ್ಕೆ ಅವರು ಮೌನಕ್ರಾಂತಿ ಮಾಡಿ ಸಮಾಜದ ಚಳುವಳಿಯ ಮೂಲಕ ಸುಧಾರಣೆಯನ್ನು ತಂದವರು.

ಅಯ್ಯನ್‌ಕಾಳಿಯವರ ಹೋರಾಟ ಶೋಷಿತರ ಪರವಾಗಿದ್ದ ವರ ವಿರುದ್ಧ ಸಂಘರ್ಷ ಜಾತಿ ವಿನಾಶಕ್ಕಾಗಿ ಅವರ ಚಳುವಳಿಗಳು, ಕೆಲವೇ ವರ್ಗಕ್ಕೆ ವಿದ್ಯೆ ಕಲಿಯುವ ಹಕ್ಕು ಇದ್ದ ಕಾಲದಲ್ಲಿ ಶೂದ್ರಾತಿ ಶೂದ್ರರಿಗೆ ಶಿಕ್ಷಣದ ಗಂಧವೇ ಇರಲಿಲ್ಲ ವೀರ ಪುಲಯಾರ ಅಯ್ಯನ್‌ಕಾಳಿರವರು ಕೇರಳದ ಶಿಕ್ಷಣದ ಪಿತಾಮಹರಾದರು.

ತಮಿಳುನಾಡಿನ ಪೆರಿಯಾರ್ ಈ ವಿ.ರಾಮಸ್ವಾಮಿ ನಾಯರ್ ಅವರ ಸ್ವಾಭಿಮಾನ ಚಳವಳಿಯ ಮಹತ್ವ, ದ್ರಾವಿಡರ ನಾಡು, ಮಾನಸಿಕ ಗುಲಾಮಿತನಕ್ಕೆ ಶಂಕರ–ಮಧ್ವ–ರಾಮಾನುಜರ ವಿಚಾರಗಳು.

Scanned with CamScanner

ನಮ್ಮ ವೈದ್ಯಶಾಲಾ

ಸಲಹೆಗಾಗಿ ಸಂಪರ್ಕಿಸಿ
080 - 4666 4777
www.nammavaidyashaala.com

ಆರೋಗ್ಯಕರ ಜೀವನಕ್ಕಾಗಿ ಆಧುನಿಕ ಹೋಮಿಯೋಪತಿ ಚಿಕಿತ್ಸೆ

ನಮ್ಮ ವೈದ್ಯಶಾಲಾ ತಂಡವು ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ್ ರವರೊಂದಿಗೆ ಸಹಭಾಗಿತ್ವ ಹೊಂದಿದೆ

ನಮ್ಮ ಅತ್ಯುತ್ತಮ ಹೋಮಿಯೋಪತಿ ಚಿಕಿತ್ಸೆಗಳು

ಅಸ್ತಮಾ | ಥೈರಾಯ್ಡ್ | ಏಸಿಡಿಟಿ | ಬಂಜೆತನ | ಹೇರಿಯಾಸಿಸ್ | ಜಠಮಟ್ಟ | ಸಂಧಿವಾತ | ಹೆಮ್ಮೆ ನೋವು ವೆರಿಕೋಸ್ ವೇಯ್ನ್ | ಮೂಲಮೂಲ | ಸ್ಥೂಲಕಾಯ ಪೈಲ್ಸ್ | ಶೃಂಗಿಕ ಸಮಸ್ಯೆಗಳು

ನಮ್ಮ ಶಾಖೆಗಳು

ಕರ್ನಾಟಕ: ಬೆಂಗಳೂರು | ಮೈಸೂರು | ಶಿವಮೊಗ್ಗ | ಕಲಬುರಗಿ ಹಾಸನ | ಹೊಸಪೇಟೆ | ಹುಬ್ಬಳ್ಳಿ | ದಾವಣಗೆರೆ
ಮಹಾರಾಷ್ಟ್ರ: ಮುಂಬೈ | ಪುಣೆ | ಔರಂಗಾಬಾದ್ | ನಾಸಿಕ್
ತೆಲಂಗಾಣ: ಹೈದರಾಬಾದ್ | ವಾರಂಗಲ್ | ಖಮ್ಮಂ
ಆಂಧ್ರಪ್ರದೇಶ: ವಿಜಯವಾಡ | ಗುಂಟೂರು | ವಿಶಾಖಪಟ್ಟಣಂ | ತಿರುಪತಿ

www.nammavaidyashaala.com

ಹೆಚ್ಚಿನ ವಿವರಗಳಿಗಾಗಿ...

ಮಯೂರ

ಮೇ, 2020 ಬೆಲೆ: ₹15

Scanned with CamScanner

ಮಯೂರ
ಸಂಪುಟ : 53 ಸಂಚಿಕೆ : 05
ಮೇ, 2020

ಮಯೂರ ಶಾಸ್ತ್ರ

ಸಂವಾದಕ
ಕೆ.ಎನ್. ಶಾಂತಕುಮಾರ್

ಹಿರಿಯ ಉಪ ಸಂವಾದಕ
ಸಂದೀಪ ನಾಯಕ

ಮುಖಪುಟ
ಮಲ್ಲಿಕಾರ್ಜುನ ಎಂ. ಕನ್ನೂರ

ಈ ಸಂಚಿಕೆಯ ಕಲಾವಿದರು:
ವೆಂಕಟ್ರಮಣ ಭಟ್
ಗುರು ನಾವಳ್ಳಿ
ಎಸ್.ವಿ. ಹೂಗಾರ
ಮುರಳೀಧರ ರಾರೋಡ್
ಡಿ.ಕೆ. ರಮೇಶ್
ಗಣೇಶ ಆಚಾರ್ಯ
ಪ್ರವೀಣ್ ಆಚಾರ್ಯ
ಎನ್. ನವೀನಕುಮಾರ್
ಯತಿ ಸಿದ್ಧಕಟ್ಟೆ
ವಿ.ಎಂ. ಮಂಜುನಾಥ

ವಿಳಾಸ: ನಂ. 75,
ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು– 560 001
ದೂರವಾಣಿ: 080–45557264
email: editormy@mayura.co.in

ಕತೆಗಳು

ಪಾರೂ
ಜಯಶ್ರೀ ಕಾಸರವಳ್ಳಿ ಕತೆ 20

ದಾರಿ ಯಾವುದಯ್ಯಾ ವೈಕುಂಠಕೆ?
ಗೋಪಾಲಕೃಷ್ಣ ಪೈ 32

ಸಾವಿಲ್ಲದ ಮನೆಯ ಸಾಸಿವೆ
ರಾಜಕುಮಾರ ವ್ಹಿ. ಕುಲಕರ್ಣಿ 44

ನೇಪಥ್ಯದಲ್ಲೊಂದು ನೇಪಥ್ಯ
ಪ್ರೇಮಕುಮಾರ ಹರಿಯಬ್ಬೆ 54

ಶಾಕಾಂಬರಿ ಮಹಾತ್ಮೆ
ಶ್ರೀದೇವಿ ಕಳಸದ 76

ಹಾದಿಗಳೂ ಹೆಜ್ಜೆಗಳೂ
ಬನವಾಸಿ ವೆಂಕಟೇಶ ದೀಕ್ಷಿತ್ 114

ದಾಳಿ
ವಸುಮತಿ ಉಡುಪ 148



ಸಂದರ್ಶನ

ಕಾವ್ಯವೆಂದರೆ ಹೊಸ ಮನುಷ್ಯನ ಹುಡುಕಾಟ
ಕವಿ ಸತ್ಯಾನಂದ ಪಾತ್ರೋಟ
ಅವರನ್ನು ಸಂದರ್ಶಿಸಿದ್ದಾರೆ ವೆಂಕಟಗಿರಿ ದಳವಾಯಿ 06

ನಿಷ್ಠಂ ಪೊಸತು

ಕನ್ನಡ ವಿಜಯದ 'ಕಬ್ಬಿಗರ ಕಾವ'
ಎ.ವಿ. ಪ್ರಸನ್ನ 68

ಪ್ರಬಂಧಗಳು

ಸಾಮರಸ್ಯದ ನದಿ
ಜಿ.ವಿ. ಆನಂದಮೂರ್ತಿ 38

ಬುದ್ಧಿಜೀವಿ ದೇವರಿಗೇ ಪ್ರೀತಿ
ಚಿಂತಾಮಣಿ ಕೊಡ್ಲೆಕೆರೆ 104

ನನ್ನ ಓದು

ಮತ್ತೆ ಸಿಕ್ಕಿದ ಎಸ್. ಮಂಜುನಾಥ್
ನರೇಂದ್ರ ಪೈ 136

ಅನುವಾದಿತ ಕತೆಗಳು

ವಿರುಪಾಪುರ ಗಡ್ಡಿ
ಮೂಲ: ತಲ್ಲಾವಜ್ಜಲ ಪತಂಜಲಿ ಶಾಸ್ತ್ರಿ
ಕನ್ನಡಕ್ಕೆ: ಜಗದೀಶ್ ಚಂದ್ರ ಬಾಗಲಿ 90

ಹೆಸರು ನೆನಪಿಲ್ಲ
ಮೂಲ: ಗೋಪಿನಾಥ್ ಮೊಹಂತಿ
ಕನ್ನಡಕ್ಕೆ: ಡಿ.ಎನ್.ಶ್ರೀನಾಥ್ 126

10X8 ಕೋಣೆ
ಮೂಲ: ಕರ್ತಾರ್ ಸಿಂಗ್ ದುಗ್ಗಾಲ್
ಕನ್ನಡಕ್ಕೆ: ಉದಯ್ ಇಟಗಿ 140

ಕವಿತೆಗಳು

ಸಿದ್ಧಲಿಂಗ ಪಟ್ಟಣಶೆಟ್ಟಿ 67
ರೋಹಿಣಿ ಸತ್ಯ 103

ಸ್ಥಿರ ಶೀರ್ಷಿಕೆಗಳು

ಕಲ್ಪನೆ ಕಾವ್ಯ 51
ಅಂಗೈಯಲ್ಲಿ ಅರಮನೆ 52
ಬುತ್ತಿ ಚಿಗುರು 86
ನವಿಲುಗನ್ನಡಿ 125
ಚಿಣ್ಣರ ಚಾವಡಿ 158
ಮಾಸ ಭವಿಷ್ಯ 160

Scanned with CamScanner

ಸಂದರ್ಶನ: ವೆಂಕಟಗಿರಿ ದಳವಾಯಿ
ಚಿತ್ರಗಳು: ಇಂದ್ರಕುಮಾರ್ ಬಿ. ದಸ್ತೇನವರ

ಕವಿ ಸತ್ಯಾನಂದ ಪಾತ್ರೋಟ ಜೊತೆ ಮಾತುಕತೆ



ಕಾವ್ಯವೆಂದರೆ ಹೊಸ ಮನುಷ್ಯನ ಹುಡುಕಾಟ

ಬಂಡಾಯ ಸಾಹಿತ್ಯ ಚಳವಳಿಯ ಬೆಳಸು ಆದ ಕವಿ ಸತ್ಯಾನಂದ ಪಾತ್ರೋಟ ಅವರು ಕಾವ್ಯಕ್ಕೆ ಪ್ರತಿಭಟನೆಯಷ್ಟೇ ಪ್ರೀತಿಯೂ ಮುಖ್ಯ ಎಂದವರು. ಬಂಡಾಯ ಸಾಹಿತ್ಯ ಭಾವಗೀತೆಗೆ ಕೊಟ್ಟ ಕೊಡುಗೆ ಕೊಂಚ ಕಡಿಮೆ. ಆದರೆ ಪಾತ್ರೋಟ ಅವರು ಆ ಕೊರತೆಯನ್ನು ತುಂಬಿದ್ದಾರೆ. ಅವರ ಕಾವ್ಯ ಸಖಿಯೊಂದಿಗೆ ಸಂವಾದಿಸುವ ರೀತಿಯದು. ನಾಟಕ, ಪ್ರಬಂಧ ಅವರ ಸೃಜನಶೀಲ ಮಾಧ್ಯಮಗಳಾದರೂ ಕವಿಯಾಗಿಯೇ ಅವರು ಹೆಚ್ಚು ಜನಪ್ರಿಯರು. ಅವರೊಂದಿಗಿನ ಸಂವಾದವೆಂದರೆ ದೊಡ್ಡ ಅನುಭವ ಲೋಕದೊಂದಿಗೆ ಮುಖಾಮುಖಿಯಾದಂತೆ. ಅವರು ಜನರ ನಾಲಿಗೆಯಲ್ಲಿರುವ ಜನಪದ ಕವಿ. ಅವರ 'ಬಡವನಾದರೆ ಏನು ಪ್ರಿಯೆ, ಕೈ ತುತ್ತು ತಿನಿಸುವೆ' ಎನ್ನುವ ಕವಿತೆ ಕನ್ನಡದ ಹುಡುಗರ ನೆಚ್ಚಿನ ಹಾಡಾಗಿದೆ. ಕಾವ್ಯವೂ ಸೇರಿದಂತೆ ಅನೇಕ ವಿಷಯಗಳ ಕುರಿತ ಪಾತ್ರೋಟರ ಎದೆಯ ಮಾತುಗಳು ಕೆಲವೊಮ್ಮೆ ಆರ್ದ್ರವಾಗಿ, ಮತ್ತೊಮ್ಮೆ ಆವೇಶವಾಗಿ, ನೆಲಮೂಲದ ಕನಸುಗಳಾಗಿ ಮುಂದಿನ ಪುಟಗಳಲ್ಲಿ ದಾಖಲಾಗಿವೆ.

Scanned with CamScanner

◆ ನಿಮ್ಮ ಹಿನ್ನೆಲೆ, ಬೆಳೆದು ಬಂದ ಪರಿಸರ, ಕುಟುಂಬ ಹಾಗೂ ವಿದ್ಯಾಭ್ಯಾಸ, ಉದ್ಯೋಗದ ಬಗ್ಗೆ ಹೇಳಿ.

ನನ್ನದು ಅನಕ್ಷರಸ್ಥರ ಕುಟುಂಬ. ಅಪ್ಪ ಕಲ್ಲು ಕಟೆದು, ಗೋಡೆ ಕಟ್ಟುವವ. ಅವ್ವ ಅವನ ಕೈಯಲ್ಲಿ ಕೆಸರು ಕಲ್ಲು ಕೊಡುವ ಹೆಣ್ಣಾಳು. ಅವಳ ಕೈಗೆ ಬಳೆ ಇರಲಿಲ್ಲ. ಎದೆಗೆ ಕುಪ್ಪಸ ಇರಲಿಲ್ಲ. ರಣಗುಟ್ಟುವ ಬಿಸಿಲಿಗೆ ಎದೆಯೊಡ್ಡಿ, ಸುರಿಯುವ ಮಳೆಯಲ್ಲಿ ನೆಂದು, ಕೊರೆಯುವ ಚಳಿಯನ್ನೂ ಲೆಕ್ಕಿಸದೆ ಹೊಟ್ಟೆ ಬಟ್ಟೆಗಾಗಿ ಅವರದು ನಿತ್ಯ ಹೋರಾಟ. ಅವರ ದುಡಿತದಲ್ಲಿಯೇ ಏಳು ಜನರ ತುತ್ತಿನ ಚೀಲ ತುಂಬಿಸಬೇಕು. ಇದ್ದರೆ ತಿನ್ನುವುದು, ಇರದಿದ್ದರೆ ತಣ್ಣೀರು ಕುಡಿಯುವುದು. ಉಪ್ಪು ಮೆಣಸಿನಕಾಯಿ ಇದ್ದರೆ ಹಿಟ್ಟಿಲ್ಲ. ಹಿಟ್ಟಿದ್ದರೆ ಉಪ್ಪು ಮೆಣಸಿನಕಾಯಿ ಇಲ್ಲ. ನನ್ನಪ್ಪ ಒಂದು ದಿನ ತಂಗಳು ರೊಟ್ಟಿಯೊಂದಿಗೆ ಉಪ್ಪು ಹಸಿಮೆಣಸಿನಕಾಯಿ ಕಡಿದುಕೊಂಡು ತಿಂದಿದ್ದು ಈಗಲೂ ನನ್ನನ್ನು ಕಾಡಿ ತಳಮಳಗೊಳ್ಳುವಂತೆ ಮಾಡುತ್ತಲೇ ಇದೆ. ಅವ್ವ ಗಿರಣಿಯೊಳಗೆ ಉಳಿದ, ಬಳಿದು ತಂದ ಹಿಟ್ಟು ನಮ್ಮ ಕರುಳು ಮುಸರಿ (ಅರೆ ಹೊಟ್ಟೆ) ಮಾಡಿದ್ದಿದೆ. ಉಪವಾಸದಲ್ಲೂ ಅವರದು ಹಂಗಿಲ್ಲದ ಬದುಕು. ತಾವು ಕಲಿಯದಿದ್ದರೂ ನನಗೆ ನಾಲ್ಕಕ್ಷರ ಕಲಿಸಿದ ಹೆಗ್ಗಳಿಕೆ ಅವರದು. ಅಪ್ಪ ತನ್ನ ಹೆಗಲ ಮೇಲೆ ಕೂರ್ಸಿಕೊಂಡು ಶಾಲೆಗೆ ಸೇರಿಸಿದ ನೆನಪು. ಆಗ ನನಗೆ ಚಡ್ಡಿ ಇರಲಿಲ್ಲ. ಅಂಗಿಯೊಂದೇ. ಕೈಯಲ್ಲೊಂದು ಪಾಟಿ. ಚೋಟುದ್ದವಿದ್ದ ನನಗೆ ಶಾಲೆ ಕೋಣೆಯ ಎತ್ತರ ನೋಡಿ ಆಗ ಗಾಬರಿಯಾಗಿತ್ತು.

ಶಾಲೆಗೆ ನಮ್ಮ ಮನೆ ತುಂಬಾ ಹತ್ತಿರವಿತ್ತು. ಮನೆ ಶಾಲೆಯ ನಡುವೆ ಸದಾ ಹರಿಯುವ ಹಳ್ಳ. (ಮಳೆಯಿಂದ ತುಂಬಿ ಹರಿಯುವ ಹಳ್ಳದಲ್ಲಿ ಆಗ ಎಮ್ಮೆಗಳು ಹರಿದುಕೊಂಡು ಹೋಗಿದ್ದುಂಟು. ಈಗ ಆ ಹಳ್ಳ ಅತಿಕ್ರಮಣಕಾರರಿಂದ ಮುಚ್ಚಿಹೋಗಿದೆ) ಸುತ್ತಲೂ ಹುಣಸೆ, ಬೇವು, ಮಾವು, ತೆಂಗಿನ ಮರಗಳು ಹಳ್ಳದ ತುಂಬ. ದಂಡೆಗೆ ಜೀಕು. ಸಿಂಧಿಗಿತ, ನೀಲಿ ಕಂಟಿ, ಅಂಟುವಾಳಕಾಯಿ ಗಿಡ. ಕ್ಯಾದಗಿಯ ಸೊಂಪು.

ನಮ್ಮ ಮನೆಯ ಎದುರು ಚಪ್ಪಲಿ ಹೊಲೆಯುವವರ ಮನೆ, ಕುರಿಗಳ ಹಿಂಡು, ಕುಡುಕರ ದಂಡು; ಸುತ್ತಮುತ್ತ ಬಡವರ, ಅಸಹಾಯಕ ಧ್ವನಿಗಳು. ಮನೆಯ ಎದುರಿಗೆ ದುರ್ಗವ್ವನ ಗುಡಿಯಿತ್ತು. ನಿತ್ಯ ಆ ದೇವರಿಗೆ ಪೂಜೆ ಆಗುತ್ತಿತ್ತು. ಚಳ್ಳಂಸ ನಾದ, ನಗಾರಿಯ ಸದ್ದು ಕೇಳುತ್ತಿತ್ತು. ಪೂಜಾರಿಯ ಮೈಮೇಲೆ ಬರುವ ದೇವರು, ದವ್ವ ಹಿಡಿದವರ ಒದ್ದಾಟ, ಚೀರಾಟ ನೋಡುತ್ತಿದ್ದೆವು; ಜಾತ್ರೆಗಳಲ್ಲಿ ಕೋಣಗಳನ್ನು ಬಲಿ ಕೊಡಲಾಗುತ್ತಿತ್ತು. ದೇವಿಯ ಮುಂದೆ ಕೋಣನ ತಲೆ, ಅದರ ಬಾಯಲ್ಲಿ ಕಾಲಿನ ತುಂಡು ಇರುತ್ತಿತ್ತು. ಇವನ್ನೆಲ್ಲ ನೋಡುವ ನನ್ನ ಕಣ್ಣುಗಳಲ್ಲಿ ತವಕ, ತಲ್ಲಣ. ಹಾಗಿದ್ದೂ ನೋಡಿಯೇ ಸಮಯಬೇಕು ಆ ಜಾತ್ರೆಗಳ ರುಚಿ. ಇಂತಹ ಜಾತ್ರೆಯಲ್ಲಿ ಸಣ್ಣ ಪೆಟ್ಟಿಗೆಯಲ್ಲಿ ನಾನು ಪಾನ್‌ಪಟ್ಟಿ ಅಂಗಡಿ ಇಟ್ಟು, ಅಶೀ ಸಣ್ಣ ವ್ಯಾಪಾರಿಯಾಗಿದ್ದೆ.

ಬಿಡುವಿದ್ದಾಗ ಅಪ್ಪ ಸಾಯಂಕಾಲ ಹಳ್ಳಕ್ಕೆ ಮೀನು ಹಿಡಿಯಲು ಹೋಗುತ್ತಿದ್ದ. ಜೊತೆಗೆ ನಾನೂ ಹೋಗುತ್ತಿದ್ದೆ. ತೆಳುವಾಗಿ ಹರಿಯುತ್ತಿದ್ದ ಹಳ್ಳಕ್ಕೆ ಇಬ್ಬರೂ ಕೂಡಿ ಒಡ್ಡು ಕಟ್ಟಿ ಒಂದು ಕಡೆಯ ನೀರನ್ನು ಹೊರಕ್ಕೆ ಹಾಕಿ ಅಲ್ಲಿದ್ದ ಮೀನುಗಳನ್ನು ಹಿಡಿಯುತ್ತಿದ್ದೆವು. ಅಪ್ಪ ನನಗೆ ಬರೀ ಮೀನು ತಿನ್ನುವುದನ್ನು ಕಲಿಸಲಿಲ್ಲ. ಮೀನು ಹಿಡಿಯುವುದನ್ನೂ ಕಲಿಸಿದ. ಶಾಲೆಗೆ ಬಿಡುವಿದ್ದಾಗ ಅಪ್ಪನೊಂದಿಗೆ ಕೆಲಸಕ್ಕೆ ಹೋಗುತ್ತಿದ್ದೆ. ಕಲ್ಲು ಹೊತ್ತೆ, ಮಣ್ಣು ತೆಗೆದೆ. ಮೊಂಡಾದ ಉಳಿಗಳನ್ನು ಅಪ್ಪ ಚೂಪುಮಾಡುವಾಗ ಕುಲುಮೆಯಲ್ಲಿ ಕೈ ಸೋತು ಸುಣ್ಣವಾದರೂ ಶಿದಿ ಒತ್ತಿದೆ. ನಿಗಿ ನಿಗಿ ಕೆಂಡದ ಮುಂದೆ ಆಗ ಅಪ್ಪ ಕಂಬಾರನಾಗುತ್ತಿದ್ದ. ಅಪ್ಪನದು ಶರಣ ಕುಲವೆಂದೇ ಹೇಳಬೇಕು. ಪಂಡರಾಪುರ, ತಿಂಥಣಿ ಮೌನೇಶ್ವರನ ಭಕ್ತ ಆತ. ಹೀಗಾಗಿ ಇದ್ದಷ್ಟು ದಿನ ಯಾರಿಗೂ ಯಾವುದಕ್ಕೂ ನೋವು ಕೊಡಲಿಲ್ಲ.

ನಾನು ನಾಲ್ಕು, ಐದನೇ ವರ್ಗದಲ್ಲಿ ಓದುತ್ತಿದ್ದೆ. ಅಪ್ಪ ಶಾಲೆಯ ಮುಂದೆ ಹಾದುಹೋಗುವ ರಸ್ತೆಯ ಅಂಚಿಗಿದ್ದ ಆಕಾಶಮಲ್ಲಿಗೆ ಗಿಡದ ಕೆಳಗೆ ಕುಳಿತು ಕಲ್ಲು ಕಟೆಯುತ್ತಿದ್ದ. ಆ ದಾರಿಯಲ್ಲಿ ಹಾದುಹೋಗುವ ಹೆಚ್ಚು ಓದಿದ ಯುವಕರನ್ನು ನೋಡಿ, 'ನನ್ನ ಮಗ ನಿಮ್ಮಂಥೆ ಎಂದು ಆಗುವನು?' ಎಂದು ಹಲುಬುತ್ತಿದ್ದ. ಹೂವಿನ ವಾಸನೆಯಲ್ಲಿ ಅಪ್ಪನ ಮಾತು ಬೇರೊಂದು ದಾರಿ ಗ್ರಹಿಸುತ್ತಿತ್ತೇನೋ? ಬಾಲ್ಯವೆಂದರೆ ಹಾಗೆ ಅಲ್ಲವೇ? ಅದರ ಫಲ ಅಪ್ಪ ಇದ್ದಾಗಲೇ ಅವನ ಕನಸು ನನಸು ಮಾಡಿದ ತೃಪ್ತಿ ನನ್ನದು. ಆಗ ನಮ್ಮ ಶಾಲೆಗೆ ಹೊಸ ಮೇಷ್ಟ್ರು ಬಂದರು. ನೋಡಲು ಕೆಂಪು ಕೆಂಪಾಗಿದ್ದರು. ಆ ಮೇಷ್ಟ್ರು ನನ್ನನ್ನು ನೋಡಿದಾಗೊಮ್ಮೆ, 'ಏ ಕರಿಯ ಬಾ. ಏ ಕರಿಯ ಹೋಗು, ಒಡ್ಡ, ಶತ ದಡ್ಡ' ಎನ್ನುತ್ತಿದ್ದರು. ಬಣ್ಣ ಸೂಚಕ, ಜಾತಿ ಸೂಚಕ ಪದಗಳು ಆಗ ಅವಮಾನಗೊಳಿಸಿದರೆ ಇಂದು ಕಾಡಿ ಕಾಡಿ ಕವಿತೆಗಳಾಗಿವೆ. ಕಾಡುವಿಕೆಯೇ ಕಟ್ಟುವಿಕೆಗೆ ಮೂಲ ಪ್ರೇರಣೆ ಅಲ್ಲವೇ?

ಒಂದು ಹಂತದ ಶಿಕ್ಷಣ ಮುಗಿಸಿದೆ. ಕಾಲಲ್ಲಿ ಚಪ್ಪಲಿ ಇಲ್ಲ. ತೊಟ್ಟುಕೊಳ್ಳಲು ಸರಿಯಾದ ಬಟ್ಟೆ ಇಲ್ಲ. ಕೂಲಿನ ತಾಪತ್ರಯ ಬೇರೆ. ಹೆತ್ತವರು ಮುಂದೆ ಕಲಿಸುವುದು ಸಾಧ್ಯವಿಲ್ಲವೆಂದಾಗ ಅಕ್ಕನ ಮನೆಗೆ ಹೋದೆ. ಅಕ್ಕನ ಗಂಡ ಭಯಂಕರ ಕುಡುಕ. ಅವನ ಬಾಯಿಂದ ಬರುವ ಮಾತುಗಳು ಸೊಂಟದ ಕೆಳಗಿನವೇ. ಕುಡಿತದ ಅಮಲಿನಲ್ಲಿ ಅಕ್ಕನನ್ನೂ, ನನ್ನನ್ನೂ ತನಗೆ ತಿಳಿದ ಹಾಗೆ ಹೊಡೆಯುತ್ತಿದ್ದ, ಕೂದಲು ಹಿಡಿದು ದರ ದರನೇ ಎಳೆದು ರಸ್ತೆಗೆ ನುಗಿಸುತ್ತಿದ್ದ. ಅಗೆಲ್ಲ ಯಮ ಯಾತನೆ. ಓದುವುದು ಬೇಡವೆನಿಸುತ್ತಿತ್ತು. ಆಗ ಗೆಳೆಯರು ಆಸರೆಯಾಗಿ ಬಂದರು. ಗೆಳೆಯರಾದ ಶಿವಾನಂದ ಬಟ್ಟೆ ಹೊಲಿಸಿಕೊಟ್ಟರೆ, ಮೌಲಾ ಪಾನ್ ಶಾಪ್ ಇಟ್ಟುಕೊಟ್ಟಿದ್ದಲ್ಲದೇ ಶಾಲೆಯ ಫೀಯನ್ನೂ ಕೊಟ್ಟ, ವಿಠ್ಠಲ ತನ್ನ ಬುತ್ತಿಯಲ್ಲಿ ಊಟ ಹಾಕಿದ, ಸಿದ್ದರಾಮ ತನ್ನ ಪಾಸಿಗೆಯಲ್ಲಿ ಮಲಗಿಸಿಕೊಂಡ. ಅವರಿವರು ಕೊಟ್ಟ ಹರಿದ ಬಟ್ಟೆಗಳನ್ನೆ ತೇಪೆ ಹಚ್ಚಿ ಹಾಕಿಕೊಂಡದ್ದುಂಟು. ಡಿ.ಎಸ್. ಕಣವಿ ಶಿಕ್ಷಕರಂತೂ ತಮ್ಮ ಮನೆಯಲ್ಲಿಟ್ಟುಕೊಂಡು ಓದಿಗೆ ನೆರವಾದರು. ಇಲ್ಲಿ ಯಾವ ಜಾತಿಗಳೂ ಧರ್ಮಗಳೂ ಅಡ್ಡ ಬರಲಿಲ್ಲ.

ಪದವಿ ಓದುವಾಗಿನ ಒಂದು ಘಟನೆ ನೆನಪಾಗುತ್ತಲೇ ಇದೆ. ಊಟಕ್ಕೆ ಬಟ್ಟೆಗೆ ತಾಪತ್ರಯವಂತೂ ಇತ್ತು ಎನ್ನಿ. ಆದರೆ ಹೇಗೋ ಹಾಸ್ಟೆಲಿಗೆ ಸೇರಿದೆ. ಕಾಲೇಜಿನ ಸಿಪಾಯಿಯೊಬ್ಬ ಮೆಸ್ ನಡೆಸುತ್ತಿದ್ದ. ನಮಗೆ ಸರಕಾರದಿಂದ ಬರುವ ಶಿಷ್ಯವೇತನದಲ್ಲಿ ಊಟ ದೊರೆಯುವಂತಾದರೂ ಶಿಷ್ಯವೇತನ ಬೇಗ ಬರುತ್ತಿರಲಿಲ್ಲ. ಒಂದು ದಿನ ರಾತ್ರಿ ಊಟಕ್ಕೆ ಕುಳಿತೆ. ತಾಟಿನಲ್ಲಿಯ ತುತ್ತನ್ನು ಇನ್ನೇನು ಬಾಯಲ್ಲಿ ಇಟ್ಟುಕೊಳ್ಳುವುದರಲ್ಲಿದ್ದೆ. ಮೆಸ್ಸಿನ ಮಾಲೀಕ ಬಂದವನೇ ಸರ್ರನೇ ತಾಟು ಕಿತ್ತುಕೊಂಡ. ಅಲ್ಲಿದ್ದವರೆಲ್ಲರೂ ಮೂಕರಾದರು. ಎದ್ದವನೇ ಹಾಸಿಗೆ ದಿಂಬು ಇರದ ಹಾಸ್ಟೆಲಿನಲ್ಲಿ ಎರಡು ದಿನ ಅತ್ತೆ. ಯಾರು ಕೇಳಬೇಕು ನನ್ನ ನೋವು. ಇವು ಕೆಲವೇ ಕೆಲವು ಉದಾಹರಣೆಗಳು ಮಾತ್ರ.

ಅಂತೂ ಶಿಕ್ಷಣ ಮುಗಿಸಿ, ಖಾಸಗಿ ಶಿಕ್ಷಣ ಸಂಸ್ಥೆಯೊಂದರಲ್ಲಿ ಅಧ್ಯಾಪಕನಾದೆ. ಅಲ್ಲಿ ಸಂಬಳವಿರಲಿಲ್ಲ. ಅದು ಅನುದಾನಕ್ಕೊಳಪಡದ ಸಂಸ್ಥೆ. ಹೇಗೋ ಸರಕಾರಿ ಹಾಸ್ಟೆಲುಗಳಲ್ಲಿ ಸಂಜೆ ಪಾಠ ಮಾಡಿ ತಂದೆ ತಾಯಿಗೆ ನೂರು ರೂಪಾಯಿ ಕಳುಹಿಸುತ್ತಿದ್ದೆ. ನೂರು ರೂಪಾಯಿಯಲ್ಲಿ ನಾನು ಬದುಕುತ್ತಿದ್ದೆ. ನಾನು ಸೇವೆ ಸಲ್ಲಿಸುತ್ತಿದ್ದ ಶಿಕ್ಷಣ ಸಂಸ್ಥೆ ಮುಂದೆ ಅನುದಾನಕ್ಕೊಳಪಟ್ಟಿತು. ಆದರೆ ನನಗೆ ಪದೋನ್ನತಿ ಸಿಗಲಿಲ್ಲ. ಕಾರಣ, ನಾನು ಆ ಸಂಸ್ಥೆಯವರ ಜಾತಿಯವನಾಗಿರಲಿಲ್ಲ.

◆ ನಿಮ್ಮ ಅಡ್ಡಹೆಸರು ಪಾತ್ರೋಟ ಮರಾಠಿ ಶಬ್ದ. ಇದು ಹೇಗೆ ಬಂತು?

ಹೌದು, ಅದೂ ಮರಾಠಿ ಶಬ್ದವೆ. ಪತ್ತರಥೋಡ – ಪಾತ್ರೋಟ ಅಂದರೆ ಕಲ್ಲನ್ನು ಒಡೆದು ಮನೆಕಟ್ಟುವವರಿಗೆ ಪಾತ್ರೋಟ ಎಂಬ ಹೆಸರು ಬಂದಿರಲೂಬಹುದು.

Scanned with CamScanner

◆ ನೀವು ಸಾಹಿತ್ಯದತ್ತ, ಅದರಲ್ಲೂ ಕವಿತೆಯತ್ತ ಸೆಳೆಯಲ್ಪಟ್ಟಿದ್ದು ಹೇಗೆ? ನಾಲ್ಕು ದಶಕಗಳ ನಿರಂತರ ಕಾವ್ಯಯಾನದಲ್ಲಿ ಆದ ಅನುಭವಗಳ ಬಗ್ಗೆ ಕೊಂಚ ಹೇಳಿ.

ಇದು ಆಕಸ್ಮಿಕವೆಂದೇ ಹೇಳಬೇಕು. ಬಾಲ್ಯದಲ್ಲಿ ಅಪ್ಪ ತನ್ನ ಹೆಗಲ ಮೇಲೆ ಕೂರ್ರಿಸಿಕೊಂಡು ಜಾತ್ರೆಗಳಿಗೆ ಕರೆದೊಯ್ಯುತ್ತಿದ್ದ. ಪುರವಂತರ ಕುಣಿತ, ಭಜನಾಮೇಳ, ರಾತ್ರಿ ನಡೆಯುವ ನಾಟಕ ನನ್ನಲ್ಲಿ ಕುತೂಹಲ ಹುಟ್ಟಿಸುತ್ತಿದ್ದವು. ಅವ್ವ ಒಮ್ಮೆ ಹೇಳಿದ ನೆನಪು, ನಾನು ಹುಟ್ಟುವ ಮೊದಲು ಅಪ್ಪ ಭಜನಾಕಾರನಾಗಿದ್ದ, ಗೀಗೀ ಪದ ಹಾಡುತ್ತಿದ್ದ. ಅದಕ್ಕೆ ನಮ್ಮ ಮನೆಯಲ್ಲಿ ಇದ್ದ ಚಳ್ಳಂ ಹಲಗೆಗಳೇ ಸಾಕ್ಷಿಯಾಗಿದ್ದವು. ಇದರ ಜೊತೆ ಅವ್ವ ತನ್ನ ತೊಡೆಯ ಮೇಲೆ ನನ್ನನ್ನು ಮಲಗಿಸಿಕೊಂಡು ರಾಗವಾಗಿ ಬೀಸುಕಲ್ಲಿನ ಪದ ಹಾಡುತ್ತ ಜೋಳ ಬೀಸುತ್ತಿದ್ದಳು. ಇದು ಒಂದೆಡೆಯಾದರೆ, ಕಾಲೇಜಿನ ರಜೆಯ ದಿನಗಳಲ್ಲಿ ಆಡು, ಎಮ್ಮೆ, ಆಕಳು ಕಾಯುತ್ತ ಹಳ್ಳ, ಕೊಳ್ಳ, ಕೆರೆ, ಕಟ್ಟೆ, ಕಾಲುವೆಗಳಲ್ಲಿ ಆಡುತ್ತಾ, ಮಡ್ಡಿ,

ಬರೆದೆ, ಬರೆದೆ;
ಕವಿತೆಯೇ ನಾನಾದೆ.
ನಾನೇ ಕವಿತೆಯಾದೆ.

ಮಸಾರಿಗಳಲ್ಲಿ ತಿರುಗಾಡುವಾಗ ಒಬ್ಬನೇ ತೋಚಿದ್ದನ್ನು ಗುನುಗುತ್ತಿದ್ದೆ. ಒಬ್ಬನೇ ಮಾತನಾಡಿಕೊಳ್ಳುತ್ತಿದ್ದೆ. ದ್ವಿತೀಯ ಪಿ.ಯು.ಸಿ ಪರೀಕ್ಷೆಗೆ ಮುಧೋಳಕ್ಕೆ ಹೋದಾಗ ಬೆಳಗಿನ ಸೂರ್ಯೋದಯದ ಸಂದರ್ಭ. ಸುಂದರ ನಿಸರ್ಗದ ಮಡಿಲಲ್ಲಿ ನಾನು ಏನೋ ಬರೆದೆ. ಅದು ಕವಿತೆಯಾಯಿತು. ಅದು ಆಗಿದ್ದು ಕವಿ ಚಕ್ರವರ್ತಿ ರನ್ನನ ನಾಡಿನಲ್ಲಿ. ಗೆಳೆಯರೆಲ್ಲ ಮೆಚ್ಚಿದರು. ಗುರುಗಳು ಕವಿ ಎಂದರು. ಕವಿ ಎಂದ ಗುರುಗಳೇ ಹುಡುಗಿಯೊಬ್ಬಳ ಮುಂದೆ ನಿಸರ್ಗ ಕವಿತೆ ಬರೆಯಲು ಬರುವುದಿಲ್ಲ, ಅವಳು ನೋಡು ಎಷ್ಟು ಚೆನ್ನಾಗಿ ಬರಿತಾಳೆ ಎಂದು ಹೇಳಿದ್ದು ಅವಮಾನಗೊಳಿಸಿತು. ಅದು ಅವಮಾನ ತಡೆದುಕೊಳ್ಳದ ವಯಸ್ಸು. ಅವಮಾನ ಸಾವಿಗಿಂತಲೂ ಹೆಚ್ಚು ಎಂದು ಭಾವಿಸಿದೆ. ಸಾವು ಒಮ್ಮೆ ಮಾತ್ರ ಬರುವಂಥದ್ದು. ಅವಮಾನ ಉಸಿರಿದ್ದಷ್ಟು ದಿನ ಕಟ್ಟಿಗೆ ಹುಳುವಾಗಿ ಕೊರೆಯುತ್ತಲೇ ಇರುತ್ತದೆ. ಅಲ್ಲವೇ? ಹೀಗಾಗಿ ಅವಮಾನದ ಸ್ಥಳದಲ್ಲಿಯೇ ಮತ್ತೆ ನನಗೆ ನಸ್ನ ಗುರುಗಳು ಕವಿ ಎನ್ನಬೇಕೆಂದು ಹಟ ತೊಟ್ಟೆ. ಬರೆದೆ. ಬರೆದೆ; ಕವಿತೆಯೇ ನಾನಾದೆ. ನಾನೇ ಕವಿತೆಯಾದೆ. ಕೊನೆಗೆ ಆ ಹುಡುಗಿಯ ಎದುರೇ ನನ್ನ ಗುರುಗಳು ನೀನು ನಿಜವಾಗಿಯೂ ಕವಿ ಎಂದರು. ಬಹುಶಃ ಅವಮಾನ, ಹಸಿವು, ಸಂಕಟ, ತಲ್ಲಣ, ತಳಮಳವನ್ನು ಮರೆಯಲು ಓದಿದೆ. ದಕ್ಕಿದ ಅನುಭವಗಳನ್ನು ಅಪ್ಪ ಒಂದರ ಮೇಲೆ ಒಂದು ಕಲ್ಲು ಇಟ್ಟು ಗೋಡೆ ಕಟ್ಟಿದಂತೆ, ಅವ್ವ ಕೆಸರಿನಿಂದ ಗೋಡೆಯ ಮೇಲೆ ಆಳಿನ ಲೆಕ್ಕ ಬರೆದಂತೆ ನಾನು, ನನ್ನ, ನನ್ನವರ ಬೆನ್ನ ಹಿಂದಿನ ಮುಂದಿನ ಬವಣೆಗಳನ್ನು ಅಕ್ಷರದಲ್ಲಿ ದಾಖಲಿಸಿದೆ.

1985ರಲ್ಲಿ ನನ್ನ 'ಕರಿ ನೆಲದ ಕಲೆಗಳು' ಸಂಕಲನ ಪ್ರಕಟವಾಯಿತು. ಆಗಿನ್ನೂ ಸಂಬಳವಿರಲಿಲ್ಲ. ಪುಸ್ತಕ ಮಾರಲು ಸರ್ಕಾರಿ ಕಚೇರಿಗಳನ್ನು ಅಲೆದೆ. ಹೀಗೊಂದು ಕಚೇರಿಗೆ ಹೋಗಿ, 'ಇವು ನಾ ಬರೆದ ಪುಸ್ತಕ, ಖರೀದಿಸಿ' ಎಂದೆ. ಆ ಕಚೇರಿಯ ಸಾಹೇಬ, 'ನೀ ಬರೆದ ಪುಸ್ತಕ ಖರೀದಿಸಬೇಕೆಂದು ಕಾನೂನು ಇದೆ ಏನು' ಎಂದು ಕೊಂಕು ನುಡಿದ. ಇನ್ನೊಂದು ಕಚೇರಿಯಲ್ಲಿ 'ನಿನ್ನ ಜಾತಿ ಯಾವುದು?' ಎಂದು ಕೇಳಿದರು.

ಈ ಸಂದರ್ಭದಲ್ಲಿ ವಿಮರ್ಶಕ ಎಲ್.ಎಸ್. ಶೇಷಗಿರಿರಾವ್ ಅವರನ್ನು ನೆನಪಿಸಿಕೊಳ್ಳಲೇಬೇಕು. 1987ರ ಸುಮಾರಿಗೆ ಬಳ್ಳಾರಿಯಲ್ಲಿ ನಡೆದ

Scanned with CamScanner

ಕವಿಗೋಷ್ಠಿಯಲ್ಲಿ 'ಪಂಜೆಯುಡುಗೆಯ ಮುದುಕ' ಕವಿತೆ ಓದಿದ್ದನ್ನು ಕೇಳಿದ ಅವರು ತಾವು ಇಳಿದುಕೊಂಡಿದ್ದ ಲಾಡ್ಜಿಗೆ ಕರೆಸಿ, ನನ್ನ ಕವಿತೆ ಪಡೆದು, ನನ್ನ ಬಗ್ಗೆ ಮತ್ತು ನನ್ನ ಕವಿತೆಯ ಕುರಿತು ತಮ್ಮ ಅಂಕಣವೊಂದರಲ್ಲಿ ಬರೆದರು. ನಾಟಕಕಾರ ಪರ್ವತವಾಣಿಯವರು ಇದಕ್ಕೆ ಸಾಕ್ಷಿಯಾಗಿದ್ದರು.

1990ರಲ್ಲಿ 'ಸುಧಾ' ವಾರ ಪತ್ರಿಕೆಯಲ್ಲಿ ನನ್ನ 'ಜಾಜಿಮಲ್ಲಿಗೆ' ಕವಿತೆ ಪ್ರಕಟವಾಯಿತು. ಅದನ್ನು ನೋಡಿದ ಬರಗೂರು ರಾಮಚಂದ್ರಪ್ಪ ಅವರು ಖುದ್ದಾಗಿ ಪತ್ರ ಬರೆದು – ಆ ಕವಿತೆಯನ್ನು ತರಿಸಿಕೊಂಡು ನಾಡಿನಾದ್ಯಂತ ಅವಕಾಶ ಕಲ್ಪಿಸಿದರು. ತಮ್ಮ ಜೊತೆ ಜೊತೆಯಲ್ಲಿ ಹೆಜ್ಜೆ ಹಾಕುವಂತೆ ಮಾಡಿದರು. ಹಂಪಿ ಉತ್ಸವದಲ್ಲಿ ಕವಿತೆ ಕೇಳಿ ರಾಜಕಾರಣಿ ಎಂ.ಪಿ. ಪ್ರಕಾಶರು ವೇದಿಕೆ ಏರಿ ಕೈಕುಲುಕಿ, ಅಪ್ಪಿಕೊಂಡರು.'ಜಾಜಿಮಲ್ಲಿಗೆ' ಕವಿತೆ ಪಿ.ಯು.ಸಿ ದ್ವಿತೀಯ ವರ್ಷಕ್ಕೆ ಪಠ್ಯವಾಗಿ ನಾನೇ ಬೋಧಿಸುವಂತಾಯಿತು. ಅಲ್ಲಿಂದ ನಾನು 'ಜಾಜಿಮಲ್ಲಿಗೆ' ಕವಿಯಾದೆ. ಹಸಿವೇ ಕವಿತೆಯಾಯಿತು. ನೋವು ಅವಮಾನವೇ ಕವಿತೆಯಾಯಿತು. ಸಂಕಟ, ಕಣ್ಣೀರು ಕವಿತೆಯಾಯಿತು. ಕವಿತೆಯಿಂದಲೇ ಬದುಕು ಕಟ್ಟಿಕೊಂಡೆ ಹೀಗಾಗಿ ನಾನು ನನ್ನ ಕವಿತೆಗಳ ಅನುಸಂಧಾನದಲ್ಲಿ ಬದುಕುವಂತಾಯಿತು, ಬೆಳೆಯುವಂತಾಯಿತು.

ಹೀಗೆ ಕಷ್ಟಕಷ್ಟಗಳನ್ನು ಅನುಭವಿಸುತ್ತಾ ಕವಿತೆಯೊಂದಿಗಿನ ಅನುಸಂಧಾನದಲ್ಲಿ ಕಾಲು ಚಾಚಿ, ಕಾಲ ಕಳೆಯಬೇಕೆನ್ನುವಷ್ಟರಲ್ಲಿ ನಾನು ಕಂಡ ಸಾವುಗಳು ನನ್ನನ್ನು ಹೈರಾಣು ಮಾಡಿದವು. ಸುಖವನ್ನು ಕನಸಿನಲ್ಲೂ ಕಾಣದ ನನ್ನ ಅಪ್ಪ ಹೊಟ್ಟೆ ತುಂಬ ತಿಂದು ನಾಲ್ಕು ಕಾಲ ಕಳೆಯಬೇಕಿರುವ ಹೊತ್ತಿನಲ್ಲಿ ಕೊನೆಯ ಮಗನ ತಲೆಯ ಮೇಲೆ ನಾಲ್ಕು ಕಾಳು ಅಕ್ಷತೆ ಹಾಕದೆ ಕಣ್ಮುಚ್ಚಿದ. ಸರಕಾರ ಕೊಟ್ಟ ಜಮೀನು ಹಸಿರಾಗುವುದನ್ನು ಅವನು ಕಾಣಲೇ ಇಲ್ಲ. ಅತನ ಅಗಲಿಕೆಯ ನೋವು ಮರೆಯುವಷ್ಟರಲ್ಲಿ ಕೊನೆಯ ತಮ್ಮ ಮೂರು ಹಸುಗೂಸುಗಳನ್ನು ಬಿಟ್ಟು ನಡದೇ ಬಿಟ್ಟ. ಆ ನೋವಿನಿಂದ ಹೊರ ಬರುವಷ್ಟರಲ್ಲಿ ಇನ್ನೊಬ್ಬ ತಮ್ಮ ದೂರವಾದ. ಆಗ ದಿಕ್ಕೆಟ್ಟೆ, ಅಸಹಾಯಕನಾದೆ. ನೋಡಿದತ್ತ ನರಕಯಾತನೆ. ಕಣ್ಣೆಟ್ಟತ್ತ ಕತ್ತಲು, ಸಂಕಟ, ನೋವು, ನಿರಾಶೆ... ಮತ್ತೆ ಎದ್ದು ನಿಂತೆ, ನಡೆದೆ. ಎಲ್ಲವನ್ನೂ ನುಂಗಿ ಹಿಮ್ಮೆಟ್ಟಿಸಿ, ಅಗಲಿದ ಸೋದರರ ಕುಟುಂಬಗಳನ್ನು ಹೊಸ ನೆಲೆಗೆ ತಂದು ನಿಲ್ಲಿಸುವಷ್ಟರಲ್ಲಿ ಹೈರಾಣಾದೆ. ಹೊಕ್ಕಳು ಬಳ್ಳಿಗಳನ್ನು ಕಳೆದುಕೊಂಡ ನನ್ನವ್ವ ಮುದುಡಿದಳು, ಕೊರಗಿದಳು. ಒಳಗೊಳಗೆ ನೊಂದಳು. ಅವಳೂ ಒಂದು ದಿನ ಹೊರಟುಹೋದಳು. ನಾಲ್ಕಕ್ಷರ ತವಕ, ತಲ್ಲಣಗಳನ್ನು ಹೊರಗಿಟ್ಟು ಕವಿತೆ ಬರೆಯುವುದು ಅಸಾಧ್ಯವೆಂಬ ವಿಚಾರ ಕಾಡಿತು. ಅದು ಕವಿತೆಯಾಯಿತು. ಊಟಕ್ಕೂ ಪರದಾಡಿದ, ಮೈ–ಮಾನ ಮುಚ್ಚಿಕೊಳ್ಳಲು ಹಲುಬಿದ ನನಗೆ ನನ್ನ ಕಾವ್ಯ ಆಶ್ರಯ ನೀಡಿ ಪೋಷಿಸಿ ಬೆಳೆಸಿದೆ. ಸುಖ, ಸಂತೋಷ, ದುಃಖವನ್ನು ನೀಡಿದೆ. ಇದಕ್ಕಿಂತ ಮಿಗಿಲಾಗಿ ನನ್ನನ್ನು ವಿಶೇಷವಾಗಿಸಿದೆ. ಕಾವ್ಯದ ಕೆಲಸ ಇದೇ ಅಲ್ಲವೇ? ಕಾವ್ಯಕ್ಕೆ ತನ್ನದೇ ಆದ ಶಕ್ತಿ, ಸಾಮರ್ಥ್ಯ ಇದೆ ಎಂಬುದನ್ನು ನನ್ನಂಥವನಿಗೆ ತೋರಿಸಿ ಮನಸ್ಸುಗಳ ತಟ್ಟಲು, ಕಟ್ಟಲು, ಕನಸುಗಳ ಚಿಗುರಿಸಲು ಕೊಡಿಯಾಗಿ, ಸೆಲೆಯಾಗಿ ನನ್ನೊಳಗಿನ ಪ್ರೀತಿಯ ಬಳ್ಳಿಯನ್ನು ಸುತ್ತಲೂ ಹಬ್ಬಿಸಲು ನನ್ನ ಮಿತಿಯಲ್ಲಿ ಪ್ರಯತ್ನಿಸಿದ್ದೇನೆ. ಬಂಡೆಗಲ್ಲಿನ ಬುಡದಲ್ಲಿಯ ಕರಕಿಯಂತೆ ಹೇಗಾದರೂ ಚಿಗುರಬೇಕೆನ್ನುವ ಕನಸಿನಂತೆ ನಾನು ಮತ್ತು ನನ್ನ ಕವಿತೆ. ಆ ಮುಖೇನ ಮನುಷ್ಯರನ್ನು ಹುಡುಕಲು ಪ್ರಯತ್ನಿಸಿದ ನಾನು, ನಾನಾಗಿದ್ದೇನೆ.

◆ ಬಂಡಾಯ ಕವಿ ಎಂದೇ ನಿಮ್ಮನ್ನು ಗುರುತಿಸುತ್ತಾರೆ. ಬಂಡಾಯ ಸಾಹಿತ್ಯದತ್ತ ಅಥವಾ ಬಂಡಾಯ ಮನೋಭಾವದತ್ತ ಸೆಳೆಯುಲ್ಬಟ್ಟಾಗ ನಿಮಗೆ ಇದ್ದ ಪ್ರೇರಣೆ, ಆಕರ್ಷಣೆಗಳೇನು? ಆಗ ಯಾವ ಸಾಹಿತ್ಯ ಮತ್ತು ವ್ಯಕ್ತಿಗಳು ನಿಮಗೆ ರೋಲ್ ಮಾಡೆಲ್‌ಗಳಾಗಿದ್ದರು.

ನನ್ನನ್ನು ಬರೀ 'ಬಂಡಾಯ ಕವಿ' ಅನ್ನುವುದಿಲ್ಲವಲ್ಲ? 'ಜಾಜಿಮಲ್ಲಿಗೆ' ಕವಿ, 'ದಲಿತ ಕವಿ', 'ಹಿರಿಯ ಕವಿ' ಇತ್ತೀಚೆಗೆ 'ವಿಶ್ವವಿದ್ಯಾಲಯದ ಕವಿ' ಎಂದು ಕರೆಯುವುದುಂಟು. ಅಷ್ಟೇ ಏಕೆ ನಿಮ್ಮ ಲೇಖನ ಒಂದರಲ್ಲಿ ನೀವೇ 'ಸುಡುಬಿಸಿಲಿನ ಮಲ್ಲಿಗೆ ಕವಿ' ಎಂದು ಕರೆದಿರಲ್ಲವೇ? ಅದು ಅವರವರ ಪ್ರೀತಿಗೆ, ಭಾವನೆಗೆ ಬಿಟ್ಟದ್ದಲ್ಲವೆ? ನನಗೆ ಯಾವ ವಿಶೇಷಣಗಳೂ ಬೇಡ. ಕವಿ ಎಂದರೆ ಅಷ್ಟೇ ಸಾಕು. ಹಾಗೆ ಕರೆಯದಿದ್ದರೂ ನಡೆಯುತ್ತದೆ. 'ಎನಗಿಂತ ಕಿರಿಯರಿಲ್ಲ' ಇದು ನನ್ನ ಮನೋಭಾವ. ನನಗನ್ನಿಸಿದ್ದನ್ನು ಅಭಿವ್ಯಕ್ತಿಸಿದ್ದೇನಷ್ಟೇ. ಇದಕ್ಕೆ ನನ್ನ ಬೆನ್ನ ಹಿಂದಿನ, ಕಣ್ಣ ಮುಂದಿನ ಪರಿಸರವೇ ಕಾರಣ. ನಾನು ಬಸವ ಜನಿಸಿದ ನಾಡಿನಿಂದ ಬಂದವನು. ಪ್ರಾಥಮಿಕ ಶಾಲೆಯಲ್ಲಿದ್ದಾಗ ನಮ್ಮೂರಿನಲ್ಲಿ ಒಬ್ಬರು ಸ್ವಾತಂತ್ರ್ಯ ಹೋರಾಟಗಾರರಿದ್ದರು. ಸ್ವಾತಂತ್ರ್ಯ ದಿನಾಚರಣೆ, ಗಾಂಧಿ ಜಯಂತಿ ದಿನ, ಊರ ತುಂಬಾ ಪ್ರಭಾತಫೇರಿ ಮಾಡಿಸುತ್ತಿದ್ದರು. ಆಗೆಲ್ಲ ಬಸವಣ್ಣನ 'ತಂದೆ ನೀನು, ತಾಯಿ ನೀನು,' ವಚನವನ್ನು ನಮ್ಮಿಂದ ಹೇಳಿಸುತ್ತಿದ್ದರು. ಅದೂ ಈಗಲೂ ಕಣ್ಮುಂದೆ ಕಟ್ಟಿದಂತಿದೆ. ದೊಡ್ಡವನಾದ ಮೇಲೆ ವಚನ ಸಾಹಿತ್ಯದಲ್ಲಿ ಬಸವಣ್ಣನ ವಚನಗಳನ್ನು ಅಧ್ಯಯನ ಮಾಡಿದೆ. ಹೀಗಾಗಿ ನನಗೆ ಬುದ್ಧನ ಪ್ರೀತಿ, ಬಸವಣ್ಣನ ದಯೆ ಮತ್ತು ಸಮಾನತೆ, ಅಲ್ಲಮನ ಅಂತಃಕರಣ, ಮಹಾತ್ಮ ಗಾಂಧಿಯವರ ಸತ್ಯ, ಅಂಬೇಡ್ಕರರ ಹೋರಾಟ, ಕುವೆಂಪು ಅವರ ವಿಶ್ವಮಾನವ ತತ್ವ, ನಟ ರಾಜಕುಮಾರರ ಸರಳ ಬದುಕು, ಬರಗೂರು ರಾಮಚಂದ್ರಪ್ಪನವರ ಮುಕ್ಕಾಗದ ಮಾನವೀಯತೆ, ನನ್ನ ಪ್ರೀತಿಯ ಗುರು ಹಾಗೂ ಮೊದಲ ಓದುಗರಾದ ಬಿ.ಕೆ. ಹಿರೇಮಠರ ಸಜ್ಜನಿಕೆ, ಅಪರೂಪದ ರಾಜಕಾರಣಿಗಳಾದ ಎಸ್.ಆರ್. ಪಾಟೀಲ ಹಾಗೂ ವೀರಣ್ಣ ಚರಂತಿಮಠ ಅವರ ಹೃದಯವಂತಿಕೆ, ಪ್ರಾಮಾಣಿಕತೆ ಹಾಗೂ ದಾರ್ಶನಿಕರಾದ ಸಿದ್ಧೇಶ್ವರ ಸ್ವಾಮಿಗಳು, ಕನ್ನಡದ ಸ್ವಾಮೀಜಿ ಗದುಗಿನ ತೋಂಟದಾರ್ಯ ಮಠದ ಸಿದ್ಧಲಿಂಗ ಸ್ವಾಮಿಗಳ ಪ್ರೀತಿ, ಹಾರೈಕೆಗಳು ಪ್ರೇರಣೆಯಾದವು. ಇವರೆಲ್ಲ **ನನಗೆ ರೋಲ್ ಮಾಡೆಲ್‌ಗಳು.** ಇವರೆಲ್ಲರ ಜೊತೆ ನನ್ನ ತಂದೆ ತಾಯಿ ಕೂಡ ನನಗೆ ರೋಲ್ **ಮಾಡೆಲ್‌ಗಳಾಗಿದ್ದಾರೆ.** ಇವರೆಲ್ಲ ತಾವು ಕವಿತೆಯಾಗಿ ನನ್ನನ್ನು ಕವಿಯನ್ನಾಗಿಸಿದ್ದಾರೆ.

◆ ಮಾತ್ರವಲ್ಲ, ರಮ್ಯ (ರೋಮ್ಯಾಂಟಿಕ್) ಪ್ರೇಮ ಕವಿ ಕೂಡ. ಈ ಜುಗಲ್‌ಬಂದಿ ಹೇಗೆ ಸಾಧ್ಯವಾಯಿತು? ಇದಲ್ಲದೇ ನಿಮಗೆ ನಿಮ್ಮ ರೋಮ್ಯಾಂಟಿಕ್ ಕವಿತೆಗಳು ಹೆಚ್ಚು ಜನಪ್ರಿಯತೆಯನ್ನು ತಂದು ಕೊಟ್ಟವೆ.

ಮನುಷ್ಯನಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಸಾಧ್ಯಮಾಡಿಕೊಳ್ಳಬೇಕಷ್ಟೇ. ನಿಸರ್ಗದಲ್ಲಿ ಕ್ಷಣ ಕ್ಷಣಕ್ಕೂ ಪ್ರೀತಿ. ಬಂಡಾಯ ನಡೆದೇ ಇರುತ್ತದೆ. 'ಬರೀ ಬೆಲುವಿನಿಂದ ಬರುವುದೇನು ಹೇಳು ಸಖಿ. ಆ ಚಲುವಿಗಷ್ಟು ಇಷ್ಟು ಇರಲಿ, ಪ್ರೀತಿ ಎಂಬ ಚಕಮಕಿ' ಇದು ನನ್ನದೇ ಕವಿತೆಯ ಸಾಲು. ಪ್ರೀತಿಗೆ ಮೂಲ ತಳಹದಿ ಬಂಡಾಯ. ಬಂಡಾಯ ದ್ವೇಷಕ್ಕೆ ಮೂಲವಾಗಬಾರದು. ಪ್ರೀತಿ ಇದ್ದಲ್ಲಿ ಬಂಡಾಯ ಇರುತ್ತದೆ. ಬಂಡಾಯ ಇದ್ದಲ್ಲಿ ಪ್ರೀತಿ ಇರುತ್ತದೆ. ಅವೆರಡೂ ಒಂದಾಗಿ ಸಾಗಿದಾಗಲೇ ಪರಿವರ್ತನೆ, ಬದಲಾವಣೆ ಸಾಧ್ಯ ಎಂಬುದು ನನ್ನ ನಂಬುಗೆ. ಜಗತ್ತು ನಿಂತಿದ್ದೇ ಪ್ರೀತಿಯ ಮೇಲೆ. ಅದು ನೆಲ ಮುಟ್ಟುವ ಪ್ರೀತಿಯಾಗಿರಬೇಕು. ಎಲ್ಲರೂ ಒಂದಾಗಿ ಸೇರಿ ನಡೆವ ಪ್ರೀತಿಯಾಗಿರಬೇಕು. ಭೂಮಿ, ಸೂರ್ಯ, ಚಂದ್ರರ ನಡುವೆ ಇದ್ದದ್ದು ಕಾಲಾತೀತವಾದ ಬಂಡಾಯ ಮತ್ತು ಪ್ರೀತಿ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರರಲ್ಲಿ ಪ್ರೀತಿ, ಬಂಡಾಯ ಎರಡೂ ಒಟ್ಟಾಗಿ ಇದ್ದುದರಿಂದಲೇ ವ್ಯವಸ್ಥೆಯಲ್ಲಿ ಬದಲಾವಣೆಯಾಗಿದ್ದು. ಬುದ್ಧನಂತೂ ಪ್ರೀತಿಯನ್ನೇ ಬಿತ್ತಿ, ಬೆಳೆದು ಅದನ್ನೆ ಹಂಚಿದ. ತನ್ನ ಅನುಭವ ಮಂಟಪದಲ್ಲಿ ಬಸವಣ್ಣ ಎಲ್ಲ ಕಾಯಕ ಜೀವಿಗಳನ್ನು ಪ್ರೀತಿಯಿಂದಲೇ ಕಾಣುತ್ತಿದ್ದ.

Scanned with CamScanner

'ಪ್ರೀತಿಸದವ ಪ್ರೀತಿ ಗೊತ್ತಿರದವ, ಗವಿಯೊಳಗೆ ಕುಳಿತರೂ ಕವಿಯಾಗಲಾರ, ಕಲಾವಿದನಾಗಲಾರ, ಒಬ್ಬ ಒಳ್ಳೆಯ ಮನುಷ್ಯನಂತೂ ಆಗಲಾರ' ಈ ಹಿನ್ನೆಲೆಯಲ್ಲಿ ಬಂಡಾಯ ಕವಿತೆಗಳ ಜೊತೆ ಪ್ರೀತಿಯ ಕವಿತೆಗಳ ಜುಗಲ್‌ಬಂದಿ ನಡೆದಿದೆ ಎಂಬುದು ನನ್ನ ಭಾವನೆ. ಸಂಗೀತದೊಂದಿಗೆ, ರಾಗಬದ್ಧವಾಗಿ ಹಾಡಿದ್ದರಿಂದ ರೋಮ್ಯಾಂಟಿಕ್ ಅನ್ನಿಸಿದ ಕವಿತೆಗಳು ಜನಪ್ರಿಯವಾಗಿರಬಹುದು.

◆ ಬಂಡಾಯ ಚಳವಳಿಯಲ್ಲಿ ಗುರುತಿಸಿಕೊಂಡರೂ ನಿಮ್ಮ ಕವಿತೆಗಳಲ್ಲಿ ಇರಬೇಕಾದ ಆಕ್ರೋಶ, ಸಂಘರ್ಷ, ಇಲ್ಲ. ಸಹಜ ಮಾನವೀಯ ಕಾವ್ಯ ನಿಮ್ಮದು. ನಿಜಕ್ಕೂ ನಿಮ್ಮ ಕಾವ್ಯ ಮನೋಧರ್ಮ, ಜೀವನ ದೃಷ್ಟಿ ಏನು?

ಹಾಗೇನೂ ನನಗೆ ಅನ್ನಿಸಿಲ್ಲ. ಹಾಗೆ ನೋಡಿದರೆ ಚಳವಳಿಯೇ ಬೇರೆ, ಕಾವ್ಯವೇ ಬೇರೆ. ಆಕ್ರೋಶ, ಸಂಘರ್ಷ, ವ್ಯಂಗ್ಯಗಳೇ, ಕಾವ್ಯವಾಗುವುದಿಲ್ಲ. ಕಾವ್ಯದಿಂದಲೇ ಕ್ರಾಂತಿಯಾಗುವುದಿಲ್ಲ. ಆದರೆ ಜನರ ನಿರ್ಣಾಯಕ ಹೋರಾಟಕ್ಕೆ ಕಾವ್ಯ ಸ್ಫೂರ್ತಿಯಾಗಬಹುದಷ್ಟೇ. ನಾವೆಲ್ಲರೂ ಮನುಷ್ಯರು. ಮನುಷ್ಯ ಮನುಷ್ಯನಂತೆ ಬದುಕಬೇಕು. ಅದು ಕಾವ್ಯ, ಸಾಹಿತ್ಯದಲ್ಲಿ ಅನುರಣಿಸಬೇಕು. ಸ್ಥಾಪಿತ ಮತ್ತು ರೂಪಿತ ಸಿದ್ಧಾಂತಗಳನ್ನು ಮುರಿದು ಹೊಸದನ್ನು ಕಟ್ಟುವುದೇ ನಿಜವಾದ ಕಾವ್ಯ. ಅಲ್ಲಿ ಮನುಷ್ಯತ್ವಕ್ಕೆ ಬೆಲೆ ಇರಬೇಕು. ನನ್ನ ದೃಷ್ಟಿಯಲ್ಲಿ ಇದೇ ನಿಜವಾದ ಸಾಹಿತ್ಯ. ಸಾಮರಸ್ಯದ ಬದುಕಿಗೆ ಆಸ್ಪದ ಕೊಡದ ಕಾವ್ಯ ಅದು ಹೇಗೆ ಮಾನವೀಯ ಕಾವ್ಯವಾಗುತ್ತದೆ? ಎಲ್ಲ ತರತಮಗಳನ್ನು ಬದಿಗಿರಿಸಿ ಎಲ್ಲ ಒಳ್ಳೆಯದು ಅಖಂಡವಾಗಬೇಕು. ಇದು ನನ್ನ ಕಾವ್ಯದ ಮನೋಧರ್ಮ. 'ಮಗು ಯಾವುದಾದರೇನು, ಯಾರದಾದರೇನು, ಮಗು ಮಗುವೇ' ಅಲ್ಲವೇ? ಮೊದಲು ನನಗೆ ನಾನೇ ಆದರ್ಶವಾಗಬೇಕು. ನನಗೇ ನಾನೇ ಮಾದರಿಯಾಗಬೇಕು. ಇದು ನನ್ನ ಜೀವನ ದೃಷ್ಟಿ.

◆ ನಿಮ್ಮ ಕಾವ್ಯದ ಪ್ರೀತಿಯ ಆಯಾಮ ಬೇರೆ ಬಗೆಯದು. ಅದರಲ್ಲಿ ಅರ್ಪಣಾ ಮನೋಭಾವವಾಗಲಿ, ನಿವೇದನೆಯಾಗಲಿ ಇಲ್ಲ. ಪ್ರೀತಿ ಹಕ್ಕು ಅಥವಾ ಅಧಿಕಾರ ಎಂಬ ಭಾವ ವ್ಯಕ್ತವಾಗುತ್ತದೆ. ಇದಕ್ಕೆ ಏನು ಕಾರಣ?

ಇದಕ್ಕೆ ಮೂಲ ಕಾರಣ ನಾನು ಬೆಳೆದು ಬಂದ ಪರಿಸರ, ಸಮಾಜ ನನ್ನನ್ನು ನೋಡಿದ, ನಡೆಸಿಕೊಂಡ ರೀತಿಯೂ ಇರಬಹುದು. ಕಾವ್ಯದಲ್ಲಿ ಅರ್ಪಣಾ ಮನೋಭಾವ ನಿವೇದನೆಗಿಂತಲೂ ಪ್ರೀತಿಗೆ ಆದ್ಯತೆ ಇರಬೇಕು. ಸಂಘರ್ಷ, ಹೋರಾಟ, ಅಧಿಕಾರದಿಂದ ಆಗದ್ದು ಪ್ರೀತಿಯಿಂದ ಆಗುತ್ತದೆ. ಪ್ರೀತಿಯದು ತಣ್ಣಗಿನ ಹಕ್ಕೊತ್ತಾಯ. ಇದಕ್ಕೆ ಗೌರವ ಇದೆ. ಅಧಿಕಾರದ್ದು ಕುರ್ಚಿಯ ಹಕ್ಕೊತ್ತಾಯ. ಇಲ್ಲಿ ಗೌರವ ಗೌಣವಾಗುತ್ತದೆ.

◆ 'ಬಡವನಾದರೆ ಏನು ಪ್ರಿಯೇ ಕೈತುತ್ತು ತಿನಿಸುವೆ' ಎಂಬ ಕವಿತೆ ಕನ್ನಡಿಗರ ಬಾಯಲ್ಲಿ ನಲಿಯುತಿದೆ. ಇದು ನಿಮ್ಮನ್ನು ಜನಪದ ಕವಿಯನ್ನಾಗಿಸಿದೆ. ಇದಕ್ಕೆ ದೊರಕಿರುವ ಅಪಾರ ಜನಪ್ರಿಯತೆಯ ಬಗ್ಗೆ ಹೇಳಿ.

1990ರ ಆಸುಪಾಸಿನಲ್ಲಿ ಬರೆದ ಈ ಕವಿತೆ 1996ರಲ್ಲಿ ದೂರದರ್ಶನದ 'ಚಂದನ' ವಾಹಿನಿಯಲ್ಲಿ 'ಗೀತ ಮಾಧುರಿ' ಧಾರಾವಾಹಿಗೆ ಆಯ್ಕೆಯಾಗಿತ್ತು. ಧಾರಾವಾಹಿಯ ನಿರ್ದೇಶಕರು ಟಿ.ಎಸ್. ನಾಗಾಭರಣ, ಸ್ವರ ಸಂಯೋಜನೆ ಸಿ. ಅಶ್ವತ್ಥ್ ಅವರದು. ಕುವೆಂಪು, ಬೇಂದ್ರೆ, ಪು.ತಿ.ನ. ಮುಂತಾದ 16 ಪ್ರಸಿದ್ಧ ಕವಿಗಳ ಕವಿತೆಗಳ ಧಾರಾವಾಹಿ ಅದು. ಕೊನೆಯ ಕಂತಿನಲ್ಲಿ ಸಿದ್ಧಲಿಂಗಯ್ಯ, ಬಿ.ಟಿ. ಲಲಿತಾ ನಾಯಕ, ಚಂಪಾ ಅವರಂತಹ ಪ್ರಸಿದ್ಧರ ಸಾಲಿನಲ್ಲಿ ನಾನೂ ಸೇರಿದ್ದು ನನ್ನ ಕವಿತೆಯಷ್ಟೇ

ರೋಚಕ. ಆಗಿನ್ನು ನಾನು 35ರ ಆಸುಪಾಸಿನ ಯುವಕ. ರಾಮನಗರದಲ್ಲಿ ನನ್ನ ಭಾಗದ ಚಿತ್ರೀಕರಣವಿತ್ತು. ಬಿ.ಸಿ. ಗೌರಿಶಂಕರ ಛಾಯಾಗ್ರಾಹಕರು. ನಾಗಿಣಿಭರಣ ತಮ್ಮ ವಾಹನದಲ್ಲಿ ಕರೆದೊಯ್ಯುವಾಗ ಗಣ ಹಾಡು ಕೇಳಿಸಿದ್ದರು. ರಾಜು ಅನಂತಸ್ವಾಮಿ ಹಾಡಿದ ಆ ಹಾಡು ಕೇಳಿ ಪುಳಕಗೊಂಡಿದ್ದೆ. ಈಗ ನೋಡಿ ಅಂದಂತೆ ಕನ್ನಡಿಗರ ಬಾಯಲ್ಲಿ ಅದು ನಲಿಯುತ್ತಲೇ ಇದೆ.

ಸುಮಾರು ಒಂದುವರೆ ಕೋಟಿಯಷ್ಟು ಜನ ಯುಟ್ಯೂಬಿನಲ್ಲಿ ಇದನ್ನು ಕೇಳಿದ್ದಾರೆ. ಯುವ ಪ್ರೇಮಿಗಳಿಗಂತೂ ಇದು ನೆಚ್ಚಿನ ಹಾಡಾಗಿದೆ. ಆಟೋರಿಕ್ಷಾ, ಟ್ರಕ್, ಬಸ್, ಟ್ರ್ಯಾಕ್ಟರ್, ಮದುವೆ, ಸಭೆ ಸಮಾರಂಭಗಳಲ್ಲಿ, ಗೂಡಂಗಡಿಗಳಲ್ಲಿ ಹಾಡಿದವರಿದ್ದಾರೆ. ಈ ಹಾಡಿನ ಪ್ರೇರಣೆಯಿಂದ ಮದುವೆಯಾದವರಿದ್ದಾರೆ. ಮೊಬೈಲ್ ರಿಂಗ್ ಟೋನ್ ಆಗಿಯೂ ಬಳಕೆಯಾಗುತ್ತಿದೆ. ರಾಜಕಾರಣಿಗಳು ಕೂಡ ಇದರ ರಿಂಗ್ ಟೋನ್ ಇಟ್ಟುಕೊಂಡಿದ್ದಾರೆ. ಹಾಡು ಕೇಳಿ ನಿತ್ಯ ಹತ್ತಾರು ಜನ ಕರೆ ಮಾಡುತ್ತಲೇ ಇರುತ್ತಾರೆ. ಮದುವೆಯಾದ/ ಮದುವೆಯಾಗದ ಯುವತಿಯರು, ಯಾವಾಗ ಬರೆದದ್ದು? ಪ್ರೇರಣೆ ಯಾರು? ಎಂದು ಕೇಳುತ್ತಾರೆ. ನನಗೆ ಈ ಹಾಡಿನಿಂದ ಒಂದು ಪೈಸೆ ಲಾಭವಾಗಿಲ್ಲ. ಕೇಳಿದ ಪ್ರತಿಯೊಬ್ಬರೂ ಒಂದೊಂದು ರೂಪಾಯಿ ಕೊಟ್ಟಿದ್ದರೆ ನಾನು ಕೋಟ್ಯಧೀಶನಾಗಿರುತ್ತಿದ್ದೆ. ಆದರೆ ಕೋಟಿ ಕೋಟಿ ಅಭಿಮಾನಿಗಳ ಪ್ರೀತಿ ಸಿಕ್ಕಿದೆ. ನನ್ನ ಮಗನ ಒತ್ತಾಯಕ್ಕೆ ಇದೇ ಹಾಡಿನ ರಿಂಗ್ ಟೋನ್ ಅನ್ನು ನನ್ನ ಮೊಬೈಲ್‌ಗೆ ಇಟ್ಟುಕೊಂಡಿದ್ದೆನೆ. ಈ ರಿಂಗ್ ಟೋನ್‌ಗಾಗಿ ನಾನು ಮೊಬೈಲ್ ಕಂಪನಿಗೆ ಪ್ರತಿ ತಿಂಗಳು 35 ರೂಪಾಯಿ ಕಟ್ಟುತ್ತಿದ್ದೇನೆ ಎಂದರೆ ನೀವು ನಗಬಹುದು.

ಈ ಹಾಡು ಕೇಳಿ ಅತ್ತ ಚಲನಚಿತ್ರ ನಿರ್ದೇಶಕ ಎಸ್.

Scanned with CamScanner

ಮಹೇಂದರ್ ತಮ್ಮ ನಿರ್ದೇಶನದ 'ಅಕ್ಕತಂಗಿ' ಸಿನಿಮಾಕ್ಕೆ ಇದನ್ನು ಬಳಸಿಕೊಂಡಿದ್ದಾರೆ. ಅದನ್ನು ಅವರೇ ಹಾಡಿದ್ದಾರೆ. ಇದಕ್ಕೆ ವಿ ಮನೋಹರ ಅವರ ಸಂಗೀತವಿದೆ. ಗೌರವಧನ ಬಿಡಿ, ಆ ಹಾಡಿರುವ ಒಂದು ಸೀಡಿಯನ್ನೂ ಕೊಡಲಿಲ್ಲ ಆ ಪುಣ್ಯಾತ್ಮ.

ನೈಜ ಘಟನೆಯೊಂದು ಇಲ್ಲಿ ಉಲ್ಲೇಖಾರ್ಹ. ಪತ್ರಕರ್ತ ಸ್ನೇಹಿತರೊಬ್ಬರ ಅನುಭವ ಇದು. ಅವರು ಬೆಂಗಳೂರಿನಲ್ಲಿ ಆಟೋದಲ್ಲಿ ಹೋಗುತ್ತಿರುವಾಗ ನನ್ನ 'ಬಡವನಾದರೆ...' ಕೇಳಿ ಆಟೋದವನನ್ನು 'ಈ ಹಾಡು ನಿನಗೆಕೆ ಇಷ್ಟ?' ಎಂದು ಕೇಳಿದರಂತೆ. ಆಟೋದವನು, 'ಇದು ನನ್ನ ಮೆಚ್ಚಿನ ಹಾಡು' ಎಂದನಂತೆ. ಇದನ್ನು ಬರೆದವರ ಹೆಸರು ಗೊತ್ತೇ ಎಂದು ಕೇಳಿದಾಗ, 'ಇಲ್ಲ ಬಿಡಿ, ಏನ ಸುಖತ್ತಾಗಿ ಬರೆದಿದ್ದಾನೆ ಆ ಬಡ್ಡಿಮಗ' ಎಂದನಂತೆ ಆಟೋ ಚಾಲಕ! ಈ ಹಾಡು ಕೇಳಿದ ಬೆಂಗಳೂರಿನ ಮಹಿಳಾ ಅಭಿಮಾನಿಯೊಬ್ಬರು ಸತತ ಮೂರು ವರ್ಷ ನನ್ನನ್ನು ಭೇಟಿಯಾಗಲು ಹುಡುಕಾಡಿದರಂತೆ. ನಾನು ಅವರ ಸಂಭ್ರಮ ಹೇಳತೀರದು. ಜಿಲ್ಲಾಧಿಕಾರಿಯೊಬ್ಬರು ಇದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯವರ ನೆಚ್ಚಿನ ಹಾಡು ಎಂದದ್ದು ಕೇಳಿ ಖುಷಿಯಾಯಿತು. ಕವಿತೆಗೆ ಸೀಮೆ, ಜಾತಿ, ಧರ್ಮಗಳ ಬಂಧನವಿಲ್ಲ ಎಂಬುದಕ್ಕೆ ಈ ಹಾಡು ಸಾಕ್ಷಿ. ಇಂತಹ ಉದಾಹರಣೆಗಳು ಬಹಳಷ್ಟು ಇವೆ. ಆದರೆ ಹಾಡಿದ ರಾಜು ಅನಂತಸ್ವಾಮಿ, ಸ್ವರ ಸಂಯೋಜಿಸಿದ ಸಿ. ಅಶ್ವತ್ಥ್ ಈಗ ಇಲ್ಲ ಎಂಬ ನೋವು ನನ್ನನ್ನು ಬಾಧಿಸುತ್ತಲೇ ಇದೆ.

◆ ಪೆದ್ದಾರಿಯಲ್ಲಿ ನಡೆಯುವುದನ್ನು ಬಿಟ್ಟು ನಿಮ್ಮದೇ ಆದ ದಾರಿಯನ್ನು ಕಂಡುಕೊಂಡಿದ್ದೀರಿ, ನಿಮ್ಮ ದಾರಿಯನ್ನು ಕಂಡುಕೊಳ್ಳುವಲ್ಲಿ ನೀವು ಎದುರಿಸಿದ ಸವಾಲು, ಪಡೆದ ಸುಖ ಮತ್ತು ಸಾರ್ಥಕತೆ ಯಾವ ಬಗೆಯದಾಗಿದ್ದವು?

ಪೆದ್ದಾರಿ ಒಂದಷ್ಟು ಅಪಾಯದ್ದು ಎಂದು ನಾನು ತಿಳಿದಿದ್ದೇನೆ. ಕವಿ ಅಥವಾ ಅವನ ಕಾವ್ಯಕ್ಕೆ ಅದರದ್ದೇ ಆದ ಗುಣ ವಿಶೇಷಗಳು, ಆಲೋಚನೆಗಳು ಇರಬೇಕು. ಸಮಕಾಲೀನ ಸಮಸ್ಯೆಗಳಿಗೆ

ಕವಿ ಸತ್ಯಾನಂದ ಪಾಣೋಟ ಅವರ ಜೊತೆ ಸಂದರ್ಶಕ ವೆಂಕಟಗಿರಿ ದಳವಾಯಿ

ಮುಖಾಮುಖಿಯಾಗಬೇಕು. ಕವಿಗೆ ತನ್ನದೇ ದಾರಿ ಇರಬೇಕು. ಇನ್ನೊಬ್ಬರ ದಾರಿಯಲ್ಲಿ ಎಷ್ಟು ದಿನ ನಡೆಯುವುದು. ಹಾಗೇನೆ ಕವಿಯ ಕಾವ್ಯಕ್ಕೆ ಮುಖವಾಡ ಇರಬಾರದು. ಇಂತಹ ಸಂದರ್ಭದಲ್ಲಿ ಗುಡಿಸಲಿನ ಬಗ್ಗೆ, ಬರೀ ನೋವಿನ ಬಗ್ಗೆ, ಕೊಳಕಿನ ಬಗ್ಗೆ ಬರೆಯುವುದು ಅದೆಂಥ ಸಾಹಿತ್ಯ ಎಂಬ ಕುಹಕದ ಮಾತು ಕೇಳಿದ್ದೇನೆ. ಕಾವ್ಯವೆಂದರೆ ಹೊಸ ಮನುಷ್ಯನ ಹುಡುಕಾಟ. ಕಾವ್ಯವೆಂದರೆ ಮನುಷ್ಯತ್ವ. ಆ ದಿಕ್ಕಿನಲ್ಲಿ ಸಾಗಿ ಸುಖಪಟ್ಟಿದ್ದೇನೆ. 'ನಾ ಪಟ್ಟ ಪಾಡು ಅದು ನನ್ನ ಹಾಡು' ಎಂದು ನಾನಂತೂ ಸಂಭ್ರಮಿಸಿದ್ದೇನೆ. ವಿಜೃಂಭಿಸಿಲ್ಲ. ನನ್ನ ದೃಷ್ಟಿಯಲ್ಲಿ ಸಂಭ್ರಮ ಬೇರೆ. ವಿಜೃಂಭಣೆ ಬೇರೆ. ಸಂಭ್ರಮ ಎಲ್ಲರೊಳಗೊಂದಾಗಿ ಸುಖಿಸುವುದು. ವಿಜೃಂಭಣೆ ಒಬ್ಬನ ಸುತ್ತ ಎಲ್ಲರೂ ಕುಣಿಯುವುದು, ಗಿರಕಿ ಹೊಡೆಯುವುದು. ನಾನು ಕವಿತೆ ಬರೆಯುವುದನ್ನು ಗಮನಿಸಿದ ನನ್ನ ಅಕ್ಕನ ಗಂಡ, 'ನೀ ಏನ ಕವಿತೆ ಬರೀತೆಲೇ ನನ್ನತು...' ಎಂದಿದ್ದ. ಆಗ ನಾನು ಬಹಳ ಅತ್ತಿದ್ದೆ. ಆದರೆ ಅವನ ಶವ ಸಂಸ್ಕಾರ ನನ್ನ ಕವಿತೆಯ ದುಡ್ಡಿನಿಂದಲೇ ಮಾಡಿದೆ. ಆಗ ಆತ ಇರಲಿಲ್ಲ. ಮಂಜಾದ ಕಣ್ಣಿನಲ್ಲಿ, ಇಳಿ ವಯಸ್ಸಿನ ನನ್ನ ತಂದೆ ನನ್ನ ಕವಿತೆಗಳನ್ನು ತನ್ನ ಕಿರುಗಣ್ಣಿನಲ್ಲಿ ಓದಿದ್ದು ಕಂಡು ಸಂತಸಗೊಂಡಿದ್ದೆ.

◆ ಜಾಜಿಮಲ್ಲಿಗೆ, ಜಾಲಿಮರ ಇವೆರಡೂ ನಿಮಗೆ ಇಷ್ಟವಾದ ರೂಪಕಗಳು. ಇವೆರಡರಲ್ಲಿ ನೀವು ನಿಲ್ಲುವುದು ಯಾವುದರ ಕಡೆ? ಬದುಕಿಗೆ ಇವೆರಡೂ ಮುಖ್ಯ ಅಲ್ಲವೇ?

ನನ್ನ 'ಜಾಜಿಮಲ್ಲಿಗೆ' ಕವಿತೆಯಲ್ಲಿ ಇದಕ್ಕೆ ಉತ್ತರವಿದೆ. ಪರಿಮಳ ಸೂಸುವುದು ಮಲ್ಲಿಗೆಯ ಗುಣ. ನಾಡಿನ ಮಲ್ಲಿಗೆಗೆ ಸಾಕಿ ಸಲಹುವವರ ಅಗತ್ಯವಿದೆ. ಆದರೆ ಕಾಡು ಹೂವಾದ ಜಾಜಿಮಲ್ಲಿಗೆಗೆ ಯಾರ ರಕ್ಷಣೆ ಪೋಷಣೆ ಇಲ್ಲದಿದ್ದರೂ ಅದು ತನ್ನ ಅಂತಃಶಕ್ತಿಯಿಂದ ಅರಳಿ ಪರಿಮಳ ಸೂಸುವ ಸಾಮರ್ಥ್ಯ ಹೊಂದಿದೆ. ತನ್ನದೇ ಆದ ಚೆಲುವು, ಪರಿಮಳ ಅದಕ್ಕಿದೆ. ಇನ್ನು, ಜಾಲಿಮರಕ್ಕೆ ಯಾರ ಹಂಗೂ ಇಲ್ಲ. ತನ್ನಷ್ಟಕ್ಕೆ ತಾನೇ ಬೆಳೆಯುತ್ತದೆ. ಮುಟ್ಟಿದರೆ, ತುಳಿದರಷ್ಟೇ ಅದರ ಶಕ್ತಿ ಗೊತ್ತಾಗುವುದು. ಜಾಲಿಮರದ ಜೊತೆ ಜೊತೆ ಬೆಳೆದಿದ್ದೇನೆ; ಅದರ ನೆರಳನಲ್ಲಿ ಓದಿದ್ದೇನೆ. ಧೈತನ ಆಪ್ತ ಸುಖನಂತಿರುವ, ಬಡವರ ಬಂಧುವಾದ ಜಾಲಿ, ಜಾಜಿಮಲ್ಲಿಗೆ ಎರಡೂ ನನಗಿಷ್ಟ. ಎರಡೂ ನನ್ನ ಬದುಕಿನ ನೆಚ್ಚಿನ ಸಂಗಾತಿಗಳು. ಮಳೆ, ಹಳ್ಳ ಸೊರಗಿದ್ದರ ಪ್ರತಿಫಲ, ಜಾಲಿಯ ಸ್ಥಳದಲ್ಲಿ ಈಗ ಈಕಜಾಲಿ ವಿಜೃಂಭಿಸುತ್ತಿದೆ.

◆ ನಿಮ್ಮ ಪ್ರಾದೇಶಿಕತೆ ಮತ್ತು ಸಮುದಾಯದ ಭಾಷೆಯನ್ನು ನಿಮ್ಮ ಕಾವ್ಯದಲ್ಲಿ ಬಳಸಿಕೊಂಡಿಲ್ಲ. ಈ ಆಯ್ಕೆ ಪ್ರಜ್ಞಾಪೂರ್ವಕವೇ? ಇದಕ್ಕೆ ಬೇರೆ ಕಾರಣಗಳೇನಾದರೂ ಇವೆಯೇ?

ಪ್ರಜ್ಞಾಪೂರ್ವಕ ಅಥವಾ ಬೇರೆ ಕಾರಣಗಳು ಇಲ್ಲವೇ ಇಲ್ಲ. ಅಕ್ಕಮಹಾದೇವಿ 'ಆನು ಒಲಿದಂತೆ ಹಾಡುವೆ' ಎಂದಂತೆ ನಾನು ಹಾಡಿದೆ, ಬರೆದೆ.

◆ 'ಆತ್ಮಕಥನ' ಬರೆಯುವ ಉದ್ದೇಶ ಇದೆಯೇ? ಉತ್ತರ ಕರ್ನಾಟಕದ ಬದುಕನ್ನು ಬಿಂಬಿಸುವ ಪ್ರಮುಖ ಆತ್ಮಕತೆ ಈಚಿನ ವರ್ಷಗಳಲ್ಲಿ ಬಂದಿಲ್ಲ. ಆ ಹಿನ್ನೆಲೆಯಲ್ಲಿ ಈ ಪ್ರಶ್ನೆ...

ಆತ್ಮಕಥನ ಬರೆಯುವ ಉದ್ದೇಶ ಇದೆ. ಗೆಳೆಯರ, ಕತೆಗಾರ ಕುಂವೀ ಅಂತಹವರ ಒತ್ತಡ ಇದೆ. ನನ್ನದು ಹತ್ತರೊಳಗೆ ಹನ್ನೊಂದು ಎನ್ನುವ ಆತ್ಮಕಥನ ಆಗಬಾರದು. ಓದುಗರಿಗೆ ಹೊಸ ಸಂವೇದನೆ ನೀಡುವಂತಹದ್ದಾಗಿರಬೇಕು. ಬರೆದ ನನಗೂ ಸಂತೋಷ ನೀಡಬೇಕು ಎಂಬ ಆಲೋಚನೆ ನನ್ನದು. ಅದಕ್ಕೊಂದಿಷ್ಟು ತಯಾರಿಯೂ ನಡೆದಿದೆ.

Scanned with CamScanner

◆ ಇತ್ತಿತ್ತಲಾಗಿ ಎಡ–ಬಲಗಳ ಚರ್ಚೆ ಬಿರುಸಾಗಿ ನಡೆಯುತ್ತಿದೆ. ಮನುಷ್ಯತ್ವಕ್ಕೆ ಸಿದ್ಧಾಂತಗಳ ಆಧಾರ ಬೇಕೆ?

ಮನುಷ್ಯತ್ವಕ್ಕೆ ಸಿದ್ಧಾಂತಗಳ ಆಧಾರ ಅನಗತ್ಯ. ಎಡ, ಬಲ, ಮಧ್ಯಮಗಳಿಲ್ಲ ತಾವೇ ಘೋಷಿಸಿಕೊಂಡ. ತಾವೇ ಪೋಷಿಸಿಕೊಂಡು ಬಂದ ಸಿದ್ಧಾಂತಗಳು. ಜೀವ ಪರ, ಮನುಷ್ಯ ಪರ ಸಿದ್ಧಾಂತವೇ ನಿಜವಾದ ಸಿದ್ಧಾಂತ. ವೈದಿಕ ಪರಂಪರೆಯನ್ನು ಧಿಕ್ಕರಿಸಿ ಜೈನಧರ್ಮದಲ್ಲಿದ್ದಾಗಲೂ ಅವೆಲ್ಲವನ್ನೂ ಮೀರಿ 'ಮನುಷ್ಯ ಜಾತಿ ತಾನೊಂದೇ ವಲಂ' ಎಂದ ಪಂಪನ ಸಿದ್ಧಾಂತ ಯಾವುದು? ಕವಿ ರಾಘವಾಂಕ ತನ್ನ ಹರಿಶ್ಚಂದ್ರಕಾವ್ಯದಲ್ಲಿ ಬೇಟೆಯಾಡಿ ದಣಿವಾರಿಸಿಕೊಳ್ಳುತ್ತಿದ್ದ ಹರಿಶ್ಚಂದ್ರ ನರ್ತಕಿಯರ ನರ್ತನ ನೋಡಿ, ಬೇಡಿದ್ದನ್ನು ಕೊಡಲು ಮುಂದಾಗುತ್ತಾನೆ. ಆದರೆ ನರ್ತಕಿಯರು ಮದುವೆಯಾಗಲು ಒತ್ತಾಯಿಸಿದಾಗ, ಹರಿಶ್ಚಂದ್ರ ತಿರಸ್ಕರಿಸುತ್ತಾನೆ. ಆಗ ನರ್ತಕಿಯರು ಪಂಚೇಂದ್ರಿಯಗಳಲ್ಲಿ ನಾಲ್ಕನ್ನು ಭೋಗಿಸಿ ಒಂದನ್ನು ಮಾತ್ರ ಅಧಿಕವೆಂಬಂತೆ ಭಾವಿಸುವುದು ಸರಿಯೇ ಎಂಬ ಮೂಲಭೂತ ಪ್ರಶ್ನೆಯನ್ನು ನರ್ತಕಿಯರ ಮೂಲಕ ರಾಘವಾಂಕ ಎತ್ತುತ್ತಾನೆ. ಮತ್ತು ಜನ ಬದುಕಬೇಕೆಂದು ತಾನು ಕಾವ್ಯ ಬರೆದುದ್ದಾಗಿ ಉಗ್ಗಡಿಸುತ್ತಾನೆ. ಇವರಿಬ್ಬರಿಗೂ ಧರ್ಮ ಸಿದ್ಧಾಂತಕ್ಕಿಂತ ಮಾನವೀಯ ಸಿದ್ಧಾಂತವೇ ಮುಖ್ಯವಾಗಿತ್ತು. ವಚನಕಾರರಂತೂ ಸಾರ್ವಕಾಲಿಕ ಮಾನವೀಯ ಸಿದ್ಧಾಂತವನ್ನೇ ಎತ್ತಿಹಿಡಿದವರು. ಸಮಕಾಲೀನ ಸಂದರ್ಭದಲ್ಲಿ ಮನಸ್ಸುಗಳೇ ಮಲೀನಗೊಂಡಾಗ ಸಿದ್ಧಾಂತದ ಬಗ್ಗೆ ಮಾತನಾಡುವುದು ಅದೆಷ್ಟು ಸರಿ? ಮಲೀನಗೊಂಡ ನಮ್ಮ ಮನಸ್ಸುಗಳು ಮೊದಲು ಸ್ವಚ್ಛವಾಗಬೇಕು. ಆಗ ಬಾಪುವಿನ ಸ್ವಚ್ಛ ಭಾರತದ ಕಲ್ಪನೆ, ತನ್ನಿಂದ ತಾನೇ ಸಾಕಾರಗೊಳ್ಳುತ್ತದೆ. ಸಾರ್ಥಕವೂ ಆಗುತ್ತದೆ. ಅದಕ್ಕೆ ಇನ್ನೊಂದು ಹೊಸ ಆಯಾಮ ಸಿಗುತ್ತದೆ. ಅಂತರಂಗವೇ ಕೊಳಕಾದಾಗ ಸಿದ್ಧಾಂತಗಳ ಬಗ್ಗೆ ಮಾಡನಾಡುವುದು ಎಷ್ಟು ಸರಿ?

◆ ವಿಮರ್ಶೆಗೆ ಪ್ರತಿ ವಿಮರ್ಶ ಬೇಕು ಎಂದು ಹೇಳಿದ್ದೀರಿ. ಯಾವುದೇ ವಿಮರ್ಶೆ ಅಂತಿಮ ಸತ್ಯ ಅಲ್ಲ ಎಂಬುದು ನಿಮ್ಮ ಭಾವನೆಯೇ?

ಯಾವುದೂ ಅಂತಿಮವಲ್ಲ, ಅಂತಿಮವಾಗಬಾರದು. ಹೊಸದನ್ನು ಸ್ವೀಕರಿಸುವುದು ಒಪ್ಪುವುದು ಪ್ರಕೃತಿ ನಿಯಮ. ಕಾವ್ಯ ಹೀಗೇ ಇರಬೇಕು, ಹೀಗೇ ಬರೆಯಬೇಕು ಎನ್ನುವುದಕ್ಕೆ ನನ್ನ ವಿರೋಧವಿದೆ. ತಮ್ಮ ಮೂಗಿನ ನೇರಕ್ಕೆ ಬರೆಯುಬೇಕು ಎನ್ನುವ ಹಲ, ಕೆಲ ವಿಮರ್ಶಕರ ವಿಮರ್ಶೆಯ ಮಾನದಂಡಗಳೇನು? ಕಾವ್ಯಕ್ಕೆ ಪ್ರತಿ ಕಾವ್ಯ ಹುಟ್ಟಿದಂತೆ, ವಿಮರ್ಶೆಗೆ ಪ್ರತಿ ವಿಮರ್ಶೆ ಹುಟ್ಟಬಾರದೇಕೆ? ಪ್ರತಿ ವಿಮರ್ಶೆ ಅಲ್ಲಲ್ಲಿ ಬಂದರೂ ವ್ಯಕ್ತಿ ಪೂಗೂ ಜಾತಿಗೆ ಸೀಮಿತವಾಗಿವೆ. ಸಮಕಾಲೀನ ಸಂದರ್ಭದಲ್ಲಿ ಕೆಲ ಸಾಹಿತಿಗಳು ಜಾತಿ ಮೀರಿಲ್ಲ, ಧರ್ಮ ಮೀರಿಲ್ಲ. ಜಾತಿ ಮತ್ತು ಧರ್ಮದ ಜೊತೆ ಗುಪ್ತ ಸಂಧಾನ ಮಾಡಿಕೊಂಡಿದ್ದಾರೇನೋ ಎಂಬ ಅನುಮಾನ ನನ್ನನ್ನು ಕಾಡುತ್ತಲೇ ಇದೆ. ಹೀಗಾಗಿ ಆಂಡಯ್ಯನಿಂದ ಹಿಡಿದು ಕುವೆಂಪುವರೆಗೂ, ಈಗ ನನ್ನವರೆಗೂ ವಿಮರ್ಶಕರಿಂದ ಅನ್ಯಾಯವಾಗುತ್ತಲೇ ಇದೆ. ಜಾತಿ ಕಾರಣಕ್ಕೆ, ಕುಲ ಮೂಲ ಕಾರಣಕ್ಕೆ ಅಧಿಕಾರ, ಅಂತಸ್ತಿನ ಕಾರಣಕ್ಕೆ, ಸ್ಥಾನ ಮಾನಗಳ ಕಾರಣಕ್ಕೆ, ಇವೆಲ್ಲ ನಿರಂತರವಾಗಿ ನಡೆದೇ ಇವೆ. ನಾನಂತೂ ಎಂದೂ ಯಾವತ್ತೂ ಇದರ ಕುರಿತು ತಲೆ ಕೆಡಿಸಿಕೊಂಡಿಲ್ಲ. ಕವಿ ಸ್ವತಂತ್ರ. ಯಾರ ಹಂಗಿಗೂ ಮುಲಾಜಿಗೂ ಒಳಗಾಗಲಾರ. ಒಳಗಾಗಬಾರದು. ರಾಜಕಾರಣದಂತೆ ಸಾಹಿತ್ಯದಲ್ಲೂ ಅನೇಕ ರೀತಿಯ ಒಳ ಒಪ್ಪಂದ, ಹೊರ ಒಪ್ಪಂದಗಳಿವೆ. ಇಂತಹ ಪರಂಪರೆಯನ್ನು ಕವಿಯೇ ಧಿಕ್ಕರಿಸಿ ಸಹೃದಯನತ್ತ, ಓದುಗನತ್ತ, ತನ್ನನ್ನು ತನ್ನ ಕಾವ್ಯದ ಇರುವಿಕೆಯನ್ನು, ತಾನೇ ದೃಢೀಕರಣಗೊಳಿಸಿಕೊಳ್ಳುವುದೇ ಉತ್ತಮ ಮಾರ್ಗ.

◆ ನಿಜವಾದ ದಲಿತ, ಬಂಡಾಯ ಸಾಹಿತ್ಯ ಬಂದಿದೆ ಎಂದು ನಿಮಗೆ ಅನ್ನಿಸಿದೆಯೇ? ದಲಿತ ಬಂಡಾಯಕ್ಕೆ ಸಂಬಂಧಿಸಿದಂತೆ ಮುಟ್ಟಬೇಕಾದ ಅನುಭವ ಲೋಕಗಳು ಇನ್ನೂ ಇವೆಯೇ?

ಸಾಕಷ್ಟು ಬಂದಿದೆ. ಗುರುತಿಸಿ ಒಪ್ಪುವ ಮನಸ್ಸುಗಳೇ ಇಲ್ಲ. ಇದು ಒಂದು ಕಡೆಯಾದರೆ, ಇನ್ನು ಗ್ರಾಮೀಣ ಭಾಗದ ತಳವರ್ಗದವರ ತಲ್ಲಣ, ಆತಂಕಗಳು ದೇಶಕ್ಕೆ ಸ್ವಾತಂತ್ರ್ಯ ದೊರಕಿ ಎಪ್ಪತ್ತು ವರ್ಷವಾದರೂ ಇನ್ನೂ ಕೊನೆಗೊಂಡಿಲ್ಲ. ಮಲ ಹೊರುವ ಪದ್ಧತಿ, ಜಾತೀಯತೆ, ಅಸ್ಪೃಶ್ಯತೆ ಜೀವಂತವಾಗಿವೆ. ಎಳೆ ಕೂಸುಗಳ ಮೇಲೆ, ವೃದ್ಧೆಯರ ಮೇಲೆ ಹಲ್ಲೆ, ಅತ್ಯಾಚಾರ ನಡೆಯುತ್ತಲೇ ಇದೆ. ಎಡೆ ಸ್ನಾನ, ಭೂತ ಪಿಶಾಚಿಗಳ ಕಾಟ, ಅಂಧಶ್ರದ್ಧೆ ಮೂಢನಂಬಿಕೆಯಿಂದ ಆಗುವ ಅಮಾನುಷ ಅಮಾನವೀಯ ಲೋಕದತ್ತಲೂ ನಮ್ಮ ಕಾವ್ಯ, ಇನ್ನಷ್ಟು ಪರಿಣಾಮಕಾರಿಯಾಗಿ ಬರೆಯಬೇಕಾಗಿದೆ. ಮಾತನಾಡಬೇಕಾಗಿದೆ.

◆ ಕಲೆ ಎನ್ನವುದು ಅತ್ಯಂತ ನಿಷ್ಠುರವಾದದ್ದು. ಪಕ್ಷಪಾತವಿಲ್ಲದ ಕ್ಷೇತ್ರ. ಅನೇಕರು ಪ್ರಾದೇಶಿಕ ಓನ್ನೆಲೆಯನ್ನು ಅರ್ಹತೆಯನ್ನಾಗಿಟ್ಟುಕೊಂಡು ಅವಕಾಶಗಳನ್ನು ಪಡೆದುಕೊಳ್ಳುತ್ತಾರೆ. ಈ ಓನ್ನೆಲೆಯಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದಲ್ಲಿ ಪ್ರಾದೇಶಿಕ ಮೀಸಲಾತಿ ಅಗತ್ಯವೇ? ಅಗತ್ಯವಾದರೆ ಯಾಕೆ?

ಕಲೆ ಎನ್ನುವುದು ನಿಸ್ಸಂದೇಹವಾಗಿ ನಿಷ್ಠುರವಾದದ್ದೇ. ಪಕ್ಷಪಾತವಿಲ್ಲದ ಕ್ಷೇತ್ರವೂ ಹೌದು. ಆದರೆ ಇದು ಆಗುತ್ತಿಲ್ಲವಲ್ಲ. ಎಲ್ಲವೂ ರಾಜಧಾನಿ ಕೇಂದ್ರಿತ. ಯಾವುದೇ ಪಕ್ಷದ ಸರಕಾರ ಬಂದರೂ ರಾಜಧಾನಿ ಕೇಂದ್ರಿತ ಸಾಹಿತಿಗಳೇ ಕಾಯಂ ಫಲಾನುಭವಿಗಳು. ಅರ್ಧರಾತ್ರಿಯಲ್ಲಿ ಕೊಡೆ ಹಿಡಿಯುವವರದ್ದೇ ದರಬಾರು. ಅಧಿಕಾರ, ಪ್ರಶಸ್ತಿ ಕೆಲವರಿಗಷ್ಟೇ ಮೀಸಲು. ಮೀಸಲಾತಿ ಎಂದರೆ ಇದೇ ಇರಬೇಕು. ಹೀಗಾಗಿ ಪ್ರಾದೇಶಿಕ ಸಮಾನತೆ ಕೇಳುವುದರಲ್ಲಿ, ಅವಕಾಶ ಪಡೆದುಕೊಳ್ಳುವಲ್ಲಿ ತಪ್ಪೇನಿದೆ. ಆದರೆ ಪ್ರಾದೇಶಿಕ ಸಮಾನತೆಯ ಜೊತೆ ಜೊತೆ ಸಾಮಾಜಿಕ ಸಮಾನತೆಯೂ ಬೇಕು. ಸಾಮಾಜಿಕ ಸಮಾನತೆಯೂ ರಾಜಧಾನಿ, ಅದರ ಸುತ್ತಮುತ್ತಲಿನ ಪ್ರದೇಶಗಳಿಗಷ್ಟೇ ಸೀಮಿತವಾಗಿದೆ. ಅಖಂಡ ಕರ್ನಾಟಕವೆಂದರೆ ಬರೀ ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಬೆಳಗಾವಿಯಂತಹ ಕೆಲವೇ ಜಿಲ್ಲೆಗಳಷ್ಟೇ ಅಲ್ಲ, ಇನ್ನಿತರ ಜಿಲ್ಲೆಗಳೂ ಇವೆ ಎಂಬ ಪ್ರಜ್ಞೆ ನಮ್ಮನ್ನಾಳುವವರಿಗೆ ಮತ್ತು ಸಾಂಸ್ಕೃತಿಕ, ಸಾಹಿತ್ಯಲೋಕಕ್ಕೂ ತಿಳಿದಿರಬೇಕು. ಇನ್ನಿತರ ಪ್ರದೇಶಗಳು ಅನಾದರಕ್ಕೊಳಗಾಗಿದ್ದು ಇವರ ಕಣ್ಣಿಗೆ ಕಾಣಬೇಕಿದೆ. ಪ್ರತಿಭಾವಂತ ಯಾವುದೇ ಜಾತಿಯವನಿರಲಿ, ಯಾವುದೇ ಪ್ರದೇಶದಲ್ಲಿರಲಿ ಹುಡುಕಿ ಗೌರವಿಸುವ ಕೆಲಸ ಆಗಬೇಕು.

ವೆಂಕಟಗಿರಿ ದಳವಾಯಿ

ಹೊಸತಲೆಮಾರಿನ ವಿಮರ್ಶಕ, ಕವಿ. ಮೂಲತಃ ಬಳ್ಳಾರಿಯವರು. 'ನಾನು–ನೀನು–ಆನು', 'ಮೇಲೊಂದು ಗರುಡ', 'ಕಪ್ಪು ವ್ಯಾಕರಣ', 'ಅಪ್ರಮಾಣ', 'ಇದು ಹೇಳಲು ಬಾರದು' ಎಂಬ ವಿಮರ್ಶಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಕವನ ಸಂಕಲನ – 'ಅಪಮಾನಗಳಿಗಿಲ್ಲ ವಿರಾಮ'. 10ಕ್ಕೂ ಹೆಚ್ಚು ಪುಸ್ತಕಗಳನ್ನು ಸಂಪಾದಿಸಿದ್ದಾರೆ. 'ಕನ್ನಡ ರಂಗಭೂಮಿ ಮತ್ತು ಮಹಿಳೆ' ಅವರ ಪಿಎಚ್.ಡಿ. ಪ್ರಬಂಧವಾಗಿದೆ. ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರು.

Scanned with CamScanner



ಸಾರ್ಥಕ ಬದುಕು

ವಚನಗಳು - ವಚನಕಾರರು : ಸಂಶೋಧನಾತ್ಮಕ ದೃಷ್ಟಿಕೋನ

ನ್ಯಾಯಮೂರ್ತಿ **ಶಿವರಾಜ ವಿ. ಪಾಟೀಲ**

ಅಪರ ಎಂಬತ್ತರ ಸಂಭ್ರಮ

ಗೌರವ ಸಂಪುಟ

ಸಂಪಾದಕ

ಡಾ. ಅಮರೇಶ ಯತಗಲ್

Scanned with CamScanner

Scanned with CamScanner

SAARTHAKA BADUKU

A Felicitation Volume-2
In Honour of Justice Shivaraj V. Patil

Editor
Dr. Amaresh Yatagal
HOD, Dept. of Epigraphy
Kannada University, Hampi
Vidyaranya -583276
Mob: 9972841256
E-mail: dryatagal@gmail.com

Published by
Justice Shivaraj V. Patil Foundation (Reg.), Rayachur
Mob : 9845083177

First Edition : January 2020

Copyright : Publishers

Pages : xvi+696+16

Price : Rs. 1000/-

Size : Crown 1/4

Paper used : 70 GSM NS Maplitho

ISBN : 978-93-5406-365-7

Anubhavamantapa Photo Art : Nadoja Dr. J.S. Khande Rao

Cover Page Design : S. Manjunath

Inner Layout : Sunitha V.D., K.L. Rajashekhar

ಸ್ವಾನ್ ಪ್ರಿಂಟರ್ಸ್
www.svanprinters.com
☎ 080-26742233

Scanned with CamScanner

ಕುರಿಗಾಯಿ ವೀರಗೊಲ್ಲಾಳನ ವಚನಗಳ ವಿಶ್ಲೇಷಣೆ

ಡಾ. ಶಾಂತಪ್ಪ ಎನ್. ಡಂಬಳ

ಕನ್ನಡ ಸಾಹಿತ್ಯ ರಾಜಾಶ್ರಯದಿಂದ ಪ್ರೇರಣೆ ಪಡೆದು ರಾಮಾಯಣ, ಮಹಾಭಾರತದ
ವೃತ್ತಾಂತಗಳನ್ನು ಸಮಕಾಲೀನ ಸಂದರ್ಭದಲ್ಲಿಟ್ಟು ತೂಗಿ ನೋಡಿದಂತೆ ಶರಣರು–ಹರಿದಾಸರ
ಭಕ್ತಿಸಾಹಿತ್ಯ ಅಮೂರ್ತ ಶಕ್ತಿಯ ಸ್ತವನ, ಕೀರ್ತನ, ಗುಣಗಾನದಲ್ಲಿ ತೊಡಗಿದೆ. ವೀರಶೈವರಿಗೆ
ಶಿವ, ಜೈನರಿಗೆ ಅರ್ಹಂತರು, ತೀರ್ಥಂಕರರು ಹರಿದಾಸರಿಗೆ ವಿಷ್ಣುವಿನ ದಶಾವತಾರಗಳು
ಚಿಂತನೆಯ ವಿಷಯಗಳಾಗಿವೆ. ಸೃಷ್ಟಿ, ಸ್ಥಿತಿ, ಲಯಕರ್ತರಾದ ಬ್ರಹ್ಮ, ವಿಷ್ಣು, ಮಹೇಶ್ವರ ಪ್ರಕೃತಿಯನ್ನು
ಮುನ್ನಡೆಸಿದ್ದಾರೆ. ಈ ದೈವಶಕ್ತಿಯನ್ನು ಆರಾಧಿಸುವ ವೈವಿಧ್ಯಮಯ ರೀತಿಗಳಲ್ಲಿ ವೀರಗೊಲ್ಲಾಳನದು
ಮಹತ್ವದ ಶಿವಾರಾಧನೆಯಾಗಿದೆ. ಶಿವಭಕ್ತನಿದ್ದ ಠಾವೆ ದೇವಲೋಕ ಭಕ್ತನಂಗಳವೆ ವಾರಣಾಸಿ .
ಕಾಯವೇ ಕೈಲಾಸ ಎನ್ನುವ ಶರಣರ ನುಡಿಗಳು ಅಕ್ಷರಶಃ ಸತ್ಯವಾದವುಗಳು. ಅಂತಹ ಅಪರೂಪದ
ಠಾವೇ ಗೋಲಗೇರಿ. ಅಲ್ಲಿಯ ಶಿವಭಕ್ತನೇ ಗೊಲ್ಲಾಳ. ಈತ ಹುಟ್ಟಿದ್ದು ಬಿಜಾಪುರ ಜಿಲ್ಲೆಯ
ಹುನಗುಂದ ತಾಲೂಕಿನ ಡವಳಾರ ಎಂಬ ಗ್ರಾಮದಲ್ಲಿ. ತಂದೆ ಬಲ್ಲುಗ, ತಾಯಿ ದುಗ್ಗಳೆ. ಈತನ
ಕಾಯಕ ಕುರಿ ಕಾಯುವುದು. ಡವಳಾರ ಮರಿಯದೊಡ್ಡಿ, ಗೋಲಗೇರಿ ಕುರಿಯ ದೊಡ್ಡಿ
ಮಾಡಿಕೊಂಡು ಕುರಿ ಕಾಯುತ್ತಾ ಮರಿ ಉಣಿಸುವುದು ದಿನನಿತ್ಯದ ಕಾಯಕವಾಗಿತ್ತು;

ಡಂಬಳ ಮುಂದಿನ ಕಲ್ಲ ಹೊಳೆಯ
ಕಂದನ ಮಡುವು ಕುರಿಕಾಯ್ದು ಮರಿ
ಉಣಿಸ್ಯಾನ ಸಿದ್ಧಗೊಲ್ಲಾಳನು ಎನ್ನುವ ಹಾಡು
ಗೋಲಗೇರಿ ಕುರಿಯ ದೊಡ್ಡಿ

Scanned with CamScanner

ಡವಳಾರ ಮರಿಯದೊಡಿ

ಕುರಿಕಾಯ್ದು ಮರಿ ಉಣಿಸ್ಯಾನ ಸಿದ್ಧಗೊಲ್ಲಾಳನು

ಈ ಎರಡು ಹಾಡುಗಳು ಗೊಲ್ಲಾಳನ ಕಾಯಕದ ಕುರಿತು ಹೇಳುತ್ತವೆ. ದಿನನಿತ್ಯದ ದಿನಚರಿಯಲ್ಲಿ ಬದಲಾವಣೆ ಇಲ್ಲ. ಕುರಿ ಕಾಯುವುದು, ಮರಿ ಉಣಿಸುವುದು ಹಾಲನ್ನು ಕರೆದು ಮನೆಗೆ ತೆಗೆದುಕೊಂಡು ಹೋಗಿ ಕೊಡುವುದು. ಇದು ದಿನನಿತ್ಯ ಮುಂಜಾನೆ ಮತ್ತು ಸಾಯಂಕಾಲ ನಡೆಯುತ್ತಲೇ ಇರುತ್ತದೆ.

ತರುಣ ಗೊಲ್ಲಾಳ ಮುಗ್ಧಜೀವಿ. ಕೈಯಲ್ಲಿ ಒಂದು ಕೊಡಲಿ ಹಾಗೂ ಬಗಲಲ್ಲಿ ಬುತ್ತಿ, ಕುರಿಗಳನ್ನು ಹೊಡೆದುಕೊಂಡು ಮೇಯಿಸುತ್ತಾ ಅಡವಿಯಲ್ಲಿ ತಿರುಗುವವ. ಗಿಡ ಗಂಟಿಗಳು ಹಚ್ಚಹಸಿರಾಗಿದ್ದರೆ, ಅಲ್ಲಿಯ ಗಿಡದ ಟೊಂಗೆಗಳನ್ನು ಕಡಿದುಹಾಕಿ ಕುರಿಗಳನ್ನು ಮೇಯಲು ಬಿಟ್ಟು ತಾನು ಗಿಡದ ಕೆಳಗೆ ವಿಶ್ರಮಿಸುತ್ತಾನೆ. ಕುರಿಗಳಿಗೆ ನೀರು ಕುಡಿಸಲು ಡಂಬಳ ಮುಂದಿನ ಹಳ್ಳಕ್ಕೆ ಹೊಡೆದುಕೊಂಡು ಬರುವನು. ಕುರಿಗಳು ವಿಶ್ರಮಿಸುತ್ತಿರುವಾಗ ಮಾತ್ರ ತಾನು ಬುತ್ತಿ ಮಾಡಿ ಮುಗಿಸುವುದು. ಸಾಯಂಕಾಲ ಮತ್ತೆ ಡವಳಾರಕ್ಕೆ ಕುರಿಗಳನ್ನು ಹೊಡೆದುಕೊಂಡು ಹೋಗಿ ಮರಿಗಳನ್ನು ಉಣಿಸಿ ಮತ್ತೆ ಗೋಲಗೇರಿಗೆ ಬರುವುದು ನಿತ್ಯನೇಮ.

ಹೋಳಿ ಹುಣ್ಣಿಮೆಯ ಮರುದಿವಸ ಬೂದಿ ಚೆಲ್ಲುವುದು. ಇದು ಪವಿತ್ರವಾದ ದಿವಸ. ಅಂದು ಶ್ರೀಶೈಲಕ್ಕೆ ಹೋಗುವ ಜನರು ಕಂಬಿಯನ್ನು ಹೊತ್ತುಕೊಂಡು ಬರಿಗಾಲಲ್ಲಿ ನಡೆದು ಹೋಗುವುದು ಈ ಭಾಗದಲ್ಲಿ ಸಾಮಾನ್ಯ. ಬಿಜಾಪುರ ಹಾಗೂ ಸೋಲಾಪುರಗಳಿಂದ ತಂಡೋಪತಂಡವಾಗಿ ಹೋಗುವ ಜನರು ತಮಗೆ ಆಯಾಸ ಆಗದಿರಲೆಂದು ಪರ್ವತ ಮಲ್ಲಯ್ಯ ಉಘೇ ಉಘೇ ಎಂದು ಹೇಳುತ್ತಾ ಭಜನೆಯನ್ನು ಮಾಡುತ್ತಾ ಹೋಗುತ್ತಿರುತ್ತಾರೆ. ಈ ತಂಡಗಳನ್ನು ನೋಡಿದ ಗೊಲ್ಲಾಳನಿಗೆ ಅವನ ಆಂತರ್ಯದಲ್ಲಿ ಮನಸ್ಸು ಕಸಿವಿಸಿಗೊಂಡಂತಾಗಿ ಆ ಕಂಬಿಯನ್ನು ಹೊತ್ತ ತಂಡದ ಜೊತೆಗೆ ಮಾತನಾಡಲು ಮುಂದಾಗುತ್ತಾನೆ. ನೀವು ಯಾರು? ಎಲ್ಲಿಗೆ ಹೊರಟಿರುವಿರಿ? ಎಂದು ಕೇಳುತ್ತಾನೆ. ಆದರೆ ಅವರು ಮಾತ್ರ ಹಾಡುತ್ತಾ ಮುಂದೆ ಸಾಗುತ್ತಾರೆ. ಆದರೆ ಗೊಲ್ಲಾಳನ ಕಿವಿಯಲ್ಲಿ ಮಾತ್ರ ಪರ್ವತ ಮಲ್ಲಯ್ಯ ಉಘೇ ಉಘೇ ಎನ್ನುವ ಶಬ್ದ ಮಾತ್ರ ಹಾಗೆ ರಿಂಗುಣಿಸುತ್ತಿತ್ತು. ಆದರೆ ಗೊಲ್ಲಾಳ ಎಲ್ಲವನ್ನು ತಾನು ತಿಳಿದುಕೊಳ್ಳಬೇಕು ಎಂಬ ಕುತೂಹಲದಿಂದ ಇರುತ್ತಾನೆ. ಹಿಂದೆ ಹಿಂದೆ ನಿಧಾನವಾಗಿ ಬರುತ್ತಿದ್ದ ಕಂಬಿ ಹೊತ್ತ ನಂದಯ್ಯ ಎಂಬ ಜಂಗಮನನ್ನು ನಿಲ್ಲಿಸಿ ಅತ್ಯಂತ ನಯವಿನಯದಿಂದ ಶೀಶೈಲಕ್ಕೆ ಏಕೆ ಹೋಗುತ್ತೀರಿ? ಅಲ್ಲೇನಿದೆ? ಇಷ್ಟೊಂದು ಜನ ತಂಡೋಪತಂಡವಾಗಿ ಹೋಗಲು ಏನು ಕಾರಣವೆಂದು ಕೇಳುತ್ತಾನೆ. ಆಗ ನಂದಯ್ಯ ನಾವು ಹೋಗುತ್ತಿರುವುದು ಮಲ್ಲಯ್ಯನ ದರ್ಶನಕ್ಕೆ ಮಲ್ಲಯ್ಯನ ದರ್ಶನದಿಂದ ಪಾಪ ಪರಿಹಾರವಾಗುತ್ತದೆ, ನಾವು ಪುನೀತರಾಗುತ್ತೇವೆ ಎಂದು ಹೇಳುತ್ತಾನೆ. ಆಗ ಗೊಲ್ಲಾಳ ಅಲ್ಲಿ ಏನು ಸಿಗುತ್ತದೆ ಎಂದು ಪ್ರಶ್ನೆ ಮಾಡುತ್ತಾನೆ. ಆಗ ನಂದಯ್ಯ ಅಲ್ಲಿ ಲಿಂಗಗಳು ಸಿಗುತ್ತವೆ ಎಂದು ಹೇಳುತ್ತಾನೆ. ಆಗ ಗೊಲ್ಲಾಳ ತನ್ನಲ್ಲಿಯ ಮಡಿಕೆ ಹೊನ್ನನ್ನು ಕೊಟ್ಟು ಲಿಂಗತರಲು ಹೇಳುತ್ತಾನೆ. ಈ ವಿಷಯ ಒಂದು ಕಡೆಯಾದರೆ, ಇನ್ನೊಂದೆಡೆ ವೃದ್ಧ ಜಂಗಮ ನಂದಯ್ಯನು ಬರಿಗಾಲಲ್ಲಿ ನಡೆದುಕೊಂಡು ಹೋಗುತ್ತಿರುತ್ತಾನೆ. ಬಿಸಿಲು ಜಾಸ್ತಿಯಾದ್ದರಿಂದ ನಂದಯ್ಯನಿಗೆ ಸ್ವಲ್ಪ ತೊಂದರೆಯಾಗುತ್ತದೆ. ಅದೇ ದಾರಿಯಲ್ಲಿ ಕುರಿಗಳನ್ನು ಕಾಯುತ್ತ ನಿಂತ ಗೊಲ್ಲಾಳನನ್ನು ನೋಡಿ ತಮ್ಮಾ ನಾನು ಶ್ರೀಶೈಲ ಮಲ್ಲಯ್ಯನ ದರ್ಶನಕ್ಕೆ ಹೊರಟಿರುವೆ. ಬಿಸಿಲು ಜಾಸ್ತಿಯಾಗಿ ಕಾಲುಗಳು ಸುಡುತ್ತಿವೆ. ದಯವಿಟ್ಟು ನಿನ್ನ ಚಪ್ಪಲಿಗಳನ್ನು ಕೊಡು ಎಂದು ಕೇಳುತ್ತಾನೆ. ಆಗ ಗೊಲ್ಲಾಳನು ಸ್ವಲ್ಪ ಜಂಗಮನಿಗೆ ತನ್ನ ಪಾದರಕ್ಷೆಗಳನ್ನು ಕೊಡುತ್ತಾನೆ. ಆಗ ನಂದಯ್ಯ ನಿನಗೆ ಮರಳಿ ಬರುವಾಗ ಲಿಂಗ ತಂದುಕೊಡುತ್ತೇನೆ ಎನ್ನುವ ಮಾತನ್ನು ಹೇಳುತ್ತಾರೆ. ಈ ಎರಡು ಸಂಗತಿಗಳು ಬೇರೆ ಬೇರೆಯಾಗಿ ಇದ್ದರೂ ವಿಷಯ ಒಂದೇ ರೀತಿಯಲ್ಲಿರುತ್ತದೆ.

ಯುಗಾದಿ ಹಬ್ಬದಂದು ಮಲ್ಲಯ್ಯನ ದರ್ಶನವನ್ನು ಪಡೆದುಕೊಂಡ ಜನರೆಲ್ಲರೂ ತಮ್ಮ ತಮ್ಮ ಊರುಗಳಿಗೆ ಶೆರಳಲು ಮುಂದಾಗುತ್ತಾರೆ. ನಂದಯ್ಯ ಮಲ್ಲಯ್ಯನ ದರ್ಶನವನ್ನು ಪಡೆದುಕೊಂಡು ಮರಳಿ ತನ್ನೂರಿನ ದಾರಿಯನ್ನು ಹಿಡಿದು ಬರುತ್ತಾನೆ. ಇತ್ತ ಗೊಲ್ಲಾಳ ಕುರಿಗಳನ್ನು ಕಾಯುತ್ತಾ ನಂದಯ್ಯ ಇಂದು ಬರಬಹುದು, ನಾಳೆ ಬರಬಹುದು

Scanned with CamScanner

ಎಚ್ಚತ್ತಾ ಕಂದಿಯನ್ನು ಹೊತ್ತು ಸಾಗುವುದನ್ನು ನೋಡುತ್ತಾ ನಿಂತಿರುತ್ತಾನೆ. ಜನಸಾಗರದಂತೆ ಹರಿದುಬರುತ್ತಿರುವ
ಸಂಜೆಗೆ ನಂದಯ್ಯನನ್ನು ಹುಡುಕಲು ತವಕಿಸುತ್ತಾನೆ. ನಂದಯ್ಯ ಕಾಣಿಸದೇ ಇದ್ದಾಗ ನಿರಾಸೆಗೊಳ್ಳುತ್ತಾ ಕುರಿಗಳನ್ನು
ಹಾಯುತ್ತಾ ನಿಲ್ಲುತ್ತಾನೆ. ನಂದಯ್ಯ ಪರ್ವತ ಮಲ್ಲಯ್ಯನ ದರ್ಶನವನ್ನು ಮಾಡಿಕೊಂಡು ಬರುವಾಗ ಲಿಂಗ ತರುವುದನ್ನು
ಮರೆಯುತ್ತಾನೆ. ಗೊಲ್ಲಾಳನ ಕುರಿಯ ಹಿಂಡು ಕಂಡಾಗ, ನಂದಯ್ಯನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಈಗೇನು
ಮಾಡುವುದು ಎಂದು ಯೋಚಿಸುತ್ತ ಹೆಜ್ಜೆಯನ್ನು ಮುಂದಿಡುತ್ತಾ ಬರುವಾಗ ಅದೇ ತಾನೇ ಕುರಿಗಳು ಹಿಕ್ಕೆಯನ್ನು
ಹಾಕುತ್ತ ಬಂದಿರುತ್ತವೆ. ಅದನ್ನು ಗಮನಿಸಿದ ನಂದಯ್ಯ ಆಲೋಚಿಸಿ ಅದೇ ಹಿಕ್ಕೆಯನ್ನು ತೆಗೆದುಕೊಂಡು ಲಿಂಗ
ಪ್ಪನಿಂದ ಮುಚ್ಚಿ ಅದನ್ನು ಕೊಡುತ್ತಾ ಲಿಂಗ ಬಹಳ ಅಮೂಲ್ಯವಾದ ದೇವರು. ಇದನ್ನು ಒಂದು ಜಾಗದಲ್ಲಿ ಇಟ್ಟು
ಪೂಜಿಸಬೇಕು. ಹಾಲಿನಿಂದ ಅಭಿಷೇಕ ಮಾಡಬೇಕು ಎಂದು ಹೇಳಿ ಹೋಗುತ್ತಾನೆ. ನಂದಯ್ಯ ಹೇಳಿದಂತೆ ಗೊಲ್ಲಾಳ
ಆ ಲಿಂಗವನ್ನು ಕುರಿ ಹಿಕ್ಕೆಯ ಗುಂಪಿನಲ್ಲಿಟ್ಟು ದಿನಾಲು ಪೂಜಿಸತೊಡಗಿದ. ದಿನಾಲು ಮುಂಜಾನೆ ಎದ್ದ ಕೂಡಲೇ
ಸ್ನಾನ ಮಾಡಿ ಅಡವಿಯಲ್ಲಿ ಬೆಳೆದ ಅವರೆಗಿಡದ ಹೂ, ಎಕ್ಕೆ ಗಿಡದ ಹೂವುಗಳನ್ನು ತಂದು, ಕುರಿಯ ಹಾಲನ್ನು
ತೆಗೆದುಕೊಂಡು ಬಂದು ಭಯಭಕ್ತಿಯಿಂದ ಲಿಂಗಕ್ಕೆ ಪೂಜಿಸತೊಡಗಿದ. ಹಾಲಿನ ಅಭಿಷೇಕ ಮಾಡತೊಡಗಿದ. ಆದರೆ
ದಿನಾಲು ಹಾಲನ್ನು ಮನೆಗೆ ತೆಗೆದುಕೊಂಡು ಹೋಗುವುದನ್ನು ನಿಲ್ಲಿಸಿದ. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಬಲ್ಲುಗ
ಸ್ವತಃ ತಾನೇ ಕುರಿಯ ದೊಡ್ಡಿಯ ಜಾಗಕ್ಕೆ ಬಂದು ನೋಡುತ್ತಾನೆ. ಅಲ್ಲಿ ಹಾಲಿನ ಹೊಳೆಯೇ ಹರಿದು ಮಡುಗಟ್ಟಿ
ನಿಂತಿರುವುದನ್ನು ನೋಡಿದ. ಗೊಲ್ಲಾಳನ ಮೇಲೆ ಕೆಂಡಮಂಡಲವಾದ. ಮಗನ ಮುಗ್ಧವಾದ ಹುಚ್ಚು ಭಕ್ತಿಗೆ ಸಿಟ್ಟಾಗಿ
ಗೊಲ್ಲಾಳ ಇದೇನಿದು ಎಂದು ಕೇಳುತ್ತಾನೆ. ಆಗ ಗೊಲ್ಲಾಳ ಶ್ರೀಶೈಲದಿಂದ ಒಬ್ಬ ಜಂಗಮನು ಒಂದು ಲಿಂಗವನ್ನು
ಪಡೆದುಕೊಟ್ಟಿರುವನು. ಆ ಲಿಂಗವನ್ನು ಕುರಿಯ ಹಿಕ್ಕೆಯ ಗುಂಪಿಯಲ್ಲಿಟ್ಟಿರುವೆ ಎಂದು ತಂದೆಗೆ ಹೇಳಿದ. ಇದರಿಂದ
ಸಿಟ್ಟಾದ ಬಲ್ಲುಗ ಕುರಿ ಹಿಕ್ಕೆಯ ರಾಶಿಯನ್ನು ಒದ್ದು ಅವಮಾನಿಸತೊಡಗಿದ. ಇದನ್ನು ಕಂಡು ಕುಪಿತನಾದ ಗೊಲ್ಲಾಳ
ಪಕ್ಕದಲ್ಲೇ ಬಿದ್ದಿದ್ದ ಕೊಡಲಿಯನ್ನು ತೆಗೆದುಕೊಂಡು ತನ್ನ ತಂದೆಯ ರುಂಡವನ್ನು ಕತ್ತರಿಸಿದ. ತಾನು ಮಾತ್ರ ಚಿಲ್ಲಾಪಿಲ್ಲಿಯಾಗಿ
ಬಿದ್ದಿರುವ ಕುರಿ ಹಿಕ್ಕೆಯ ರಾಶಿಯನ್ನು ಒಂದುಗೂಡಿಸುತ್ತ ಲಿಂಗವನ್ನು ಹುಡುಕುತ್ತಾನೆ. ಎಷ್ಟೇ ಪ್ರಯತ್ನಿಸಿದರೂ ಲಿಂಗ
ಸಿಗದೇ ಇದ್ದಾಗ ನಿರಾಸೆಗೊಳ್ಳುತ್ತಾನೆ. ಲಿಂಗವಿಲ್ಲದೆ ನಾನು ಬದುಕುವುದಿಲ್ಲ; ಬದುಕಲೇಬಾರದು ಎಂದು ನಿಶ್ಚಯಿಸಿಕೊಂಡು
ಪಕ್ಕದಲ್ಲೇ ಬಿದ್ದ ಕೊಡಲಿಯನ್ನು ತೆಗೆದುಕೊಂಡು ತನ್ನ ಕತ್ತನ್ನು ಕತ್ತರಿಸಿಕೊಳ್ಳಲು ಮುಂದಾದಾಗ ಕುರಿ ಹಿಕ್ಕೆಯ
ರಾಶಿಯೊಳಗಿಂದಲೇ ಎದ್ದು ಬಂದು ಶಿವ ಗೊಲ್ಲಾಳನ ಕೈಯನ್ನು ಹಿಡಿದು ಕೊಡಲಿಯನ್ನು ಕಸಿದು ಎಸೆಯುತ್ತಾನೆ.
ಶಿವನನ್ನು ನೋಡಿದಾಗ ಗೊಲ್ಲಾಳನಿಗೆ ಆನಂದವೋ ಆನಂದ. ಆಗ ಶಿವ ಗೊಲ್ಲಾಳ ನಿನಗೆ ಏನು ಬೇಕು ನಿನ್ನ
ಇಷ್ಟವನ್ನು ಈಡೇರಿಸುತ್ತೇನೆ ಕೇಳು ಎಂದು ಹೇಳುತ್ತಾನೆ. ಆಗ ಗೊಲ್ಲಾಳ ತನ್ನ ತಂದೆಯನ್ನು ಬದುಕಿಸಲು ಕೇಳದೆ
ಲಿಂಗ ಬೇಕೆಂದು ಮೊರೆಯಿಡುತ್ತಾನೆ. ಗೊಲ್ಲಾಳನ ಲಿಂಗಪ್ರೇಮ ಗಮನಿಸಿದ ಶಿವ ಲಿಂಗವನ್ನು ತನ್ನ ಕೈಯಲ್ಲಿಯೇ
ಕೊರಿಸಿ ಇದನ್ನು ದಿನಾಲು ಪೂಜಿಸು ಎಂದು ಹೇಳುತ್ತಾನೆ. ಮತ್ತೇನು ಬೇಕು ಎಂದು ಕೇಳಿದಾಗ ಮಾತ್ರ ನನ್ನ ತಂದೆ
ಎಂದು ದುಃಖಿತನಾಗಿ ಕೇಳಿದ. ಆಗ ಶಿವ ಬಲ್ಲುಗನನ್ನು ಬದುಕಿಸಿದ. ಶಿವನು ಗೊಲ್ಲಾಳನ ಶಿವಭಕ್ತಿ, ಮುಗ್ಧತೆಗೆ ಮೆಚ್ಚಿ
ಸದ್ಗತಿಯನ್ನು ಕರುಣಿಸಿದ. ತನ್ನ ನಿರ್ವ್ಯಾಜ್ಯ ಪ್ರೀತಿಯಿಂದಲೇ ಸದ್ಗತಿಯನ್ನು ದೊರಕಿಸಿಕೊಂಡ ಅಪರೂಪದ ವ್ಯಕ್ತಿ ವೀರ
ಗೊಲ್ಲಾಳ.

ಈ ಗೊಲ್ಲಾಳನು ವಚನಗಳನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಸದ್ಯ ೧೦ ವಚನಗಳು ಮಾತ್ರ ದೊರಕಿವೆ.
ವಚನದ ಅಂಕಿತನಾಮ ವೀರಬೀರೇಶ್ವರಲಿಂಗ ಎಂದಿಟ್ಟುಕೊಂಡಿದ್ದಾರೆ. ಗೊಲ್ಲಾಳನ ಆರಾಧ್ಯದೈವ ಬೀರೇಶ್ವರನಾಗಿದ್ದ
ಕಾರಣದಿಂದ ಈ ಅಂಕಿತವನ್ನಿಟ್ಟುಕೊಂಡಿದ್ದಾನೆ. ಗೊಲ್ಲಾಳ ತಾನು ಕುರುಬ, ತನ್ನ ಕೆಲಸ ಕುರಿ ಕಾಯುವುದು, ಆ
ಕಾಯಕವನ್ನೇ ತನ್ನ ಮಾತಿನ ಮೂಲಕ ಹಿಡಿದಿಟ್ಟಿರುವನು. ತಾನು ಕುರಿಯನ್ನು ಮೇಯಿಸಲು ಹೊಡೆದುಕೊಂಡು
ಹೋಗುವಾಗ ಅವುಗಳನ್ನು ಹೊಂದಿಸಿಕೊಂಡು ಅತ್ತ ಇತ್ತ ಹೋಗದಂತೆ ಅವುಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು
ಕುರಿಕಾಯುವ ವಿಶೇಷ ಅನುಭವ ಅವನ ವಚನಗಳಲ್ಲಿ ಕಾಣಬಹುದು.

Scanned with CamScanner

ಕಂಥೆಯ ಕಟ್ಟಿ ತಿತ್ತಿಯ ಹೊತ್ತು
ಮರಿಯ ನಡೆಸುತ್ತ ದೊಡ್ಡೆಯ ಹೊಡೆವುತ್ತ
ಅಡ್ಡಗೋಲಿನಲ್ಲಿ ಹೋಹ ಚುಕ್ಕಿ ಬೊಟ್ಟಿನವ ತಿಟ್ಟುತ್ತಾ
ಹಿಂಡನಗಲಿ ಹೋಹ ದಿಂಡೆಯ ಮಣಿಘಟ್ಟಿನ ಅಭಿಸಂಧಿಯ ಕೋಲಿನಲ್ಲಿಡುತ್ತ
ಈ ಹಿಂಡಿನೊಳಗೆ ತಿರುಗಾಡುತ್ತಿದ್ದೇನೆ

ಈ ವಿಕಾರದ ಹಿಂಡ ಬಿಡಿಸಿ
ನಿಜನಿಳಯ ನಿಮ್ಮಂಗವ ತೋರಿ, ಸುಸಂಗದಲ್ಲಿರಿಸು
ಎನ್ನೊಡೆಯ ವೀರಬೀರೇಶ್ವರಲಿಂಗಾ

ಈ ವಚನದಲ್ಲಿ ಗೊಲ್ಲಾಳನು ಕುರಿ ಕಾಯಲು ಸಿದ್ಧನಾಗಿ ಹೋಗುವಾಗಿನ ಸಂದರ್ಭದ ಕುರಿತದ್ದಾಗಿದೆ. ಬುಟ್ಟಿಯನ್ನು ಕಟ್ಟಿಕೊಂಡು, ನೀರನ್ನು ತೆಗೆದುಕೊಂಡು ದೊಡ್ಡಿಯಿಂದ ಕುರಿಯನ್ನು ಹೊರಗೆ ಹಾಕಿ, ದೊಡ್ಡಿಯನ್ನು ಸ್ವಚ್ಛಗೊಳಿಸುವ ಅದೇ ತಾನೆ ಕುರಿ ಮರಿಯನ್ನು ಹಾಕಿದ್ದರೆ, ಚಿಕ್ಕ ಮರಿಯನ್ನು ನಡೆಸುತ್ತ, ಹಸಿವೆಯಿಂದ ಹಿಂಡಿನಲ್ಲಿದ್ದ ಕುರಿಗಳು ಒಟ್ಟ ಈ ಕಡೆ ಓಡುವುದನ್ನು ಅಡ್ಡಗೋಲಿನಿಂದ ಬೆದರಿಸುತ್ತಾ ಈ ಹಿಂಡಿನೊಳಗೆ ನಾನು ತಿರುಗುತ್ತಿದ್ದೇನೆ. ಈ ರೀತಿಯ ಓಡಾಡುವ ಕುರಿಯ ಹಿಂಡಿನಿಂದ ನನ್ನನ್ನು ಬಿಡಿಸಿ ತಮ್ಮ ಸುಸಂಗದಲ್ಲಿರಿಸು ಎಂದು ಕೇಳುವಲ್ಲಿ ಗೊಲ್ಲಾಳನ ಮ್ಮ ಭಕ್ತಿ ಎದ್ದು ಕಾಣುತ್ತದೆ.

ಇನ್ನೊಂದು ವಚನದಲ್ಲಿ;

ಹೋತನ ಹೊಡೆದು, ಆಡಕೂಡಿ, ಕುರಿಯ ನಿಲಿಸಿ
ತಗರ ತಡೆದು ಹಿಂಡನೊಬ್ಬುಳಿತೆ ಮಾಡಿ
ಹುಲಿ, ತೋಳ, ಚೋರ ಭಯಮಂ ಕಳೆದು
ಹಿಂಡಿಗೊಡೆಯನಾಗಿ ಕಾವ ಗೊಲ್ಲಾಳ ನೀನೆ ವೀರಬೀರೇಶ್ವರಾ

ಇಲ್ಲಿ ಗೊಲ್ಲಾಳ ಹೋತ, ಆಡು, ಕುರಿ, ಟಗರು ಇವುಗಳೆಲ್ಲವೂ ಒಂದೇ ದೊಡ್ಡಿಯಲ್ಲಿ ಇರುವುವು. ಹೋತ ಮತ್ತ ಟಗರುಗಳು ಆಕ್ರಮಣಶೀಲ ಮನೋಭಾವದವು. ಕುರಿ ಮತ್ತು ಆಡು ಶಾಂತಿ ಸ್ವಭಾವದವು. ಇವೆಲ್ಲವುಗಳ ಸಂಭಾಳಿಸಿಕೊಂಡು ಕುರಿ ಕಾಯವುದೇ ಒಂದು ವಿಶೇಷವಾದ ಅನುಭವ. ಕುರಿಗಳನ್ನು ತಿನ್ನಲು ಹುಲಿ, ತೋಳ, ಚೋರ ಹೊಂಚು ಹಾಕುತ್ತಲೇ ಇರುತ್ತವೆ. ಇವುಗಳ ಭಯವನ್ನು ಕಳೆದು ಹಿಂಡಿಗೆ ಒಡೆಯನಾದ ವ್ಯಕ್ತಿ ಇಲ್ಲಿ ಪಮುಖ ಅವನೇ ಗೊಲ್ಲಾಳ. ಮನಸ್ಸನ್ನು ತೋಳ, ಹುಲಿ, ಚೋರ ಅನ್ನುವ ಮಾಯಾಪ್ರಪಂಚಕ್ಕೆ ಅಂಜಿ ಜೀವಿಸಿದರೆ ಸಾವ ಕುರಿಗಳಾಗುತ್ತೇವೆ. ಹುಲಿ, ತೋಳ, ಚೋರರ ಭಯ ನಿವಾರಕನಾಗಿ ದೃಢತೆ ಒದಗಿಸಲು ದೇವರ ಮೊರೆ ಹೋಗಿತ್ತಾನೆ ಗೊಲ್ಲಾಳನ ಎಲ್ಲಾ ವಚನಗಳಲ್ಲಿ ಕರ್ತವ್ಯಪ್ರಜ್ಞೆಯ ತಿಳುವಳಿಕೆಯಿದೆ. ತನ್ನ ಕಾಯಕದೊಂದಿಗೆ ವೃತ್ತಿಯ ಸಲಕರಣೆಗಳನ್ನು ಪರಿಚಯಿಸಿದ್ದಾನೆ.

ಇವತ್ತಿಗೂ ಗೊಲ್ಲಾಳ ಒಬ್ಬ ಐತಿಹಾಸಿಕ ವ್ಯಕ್ತಿಯಾಗಿ ಒಂದು ಶಕ್ತಿಯಾಗಿ ನಮಗೆ ಕಂಡುಬರುತ್ತಾನೆ. ಗೊಲ್ಲಾಳ ವೀರಭಕ್ತಿಗೆ ಮೆಚ್ಚಿದ ಶಿವನು ಪ್ರತ್ಯಕ್ಷನಾಗುತ್ತಾನೆ. ಇಂದಿಗೂ ಶ್ರೀಶೈಲಕ್ಕೆ ಹೋಗಿ ಬಂದವರೆಲ್ಲರೂ ಗೊಲ್ಲಾಳನ ದರ್ಶ ಪಡೆದು ಧನ್ಯರಾಗುತ್ತಾರೆ. ಶಿವಾಗಮಗಳಲ್ಲಿ ಭಕ್ತರ ಕಾಯಕನಿಷ್ಠೆ, ಶಿವನಿಷ್ಠೆ ಹಾಗು ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸುವ ದೃಷ್ಟಿಕೋನ ಅನುಸರಣೆಗೆ ಯೋಗ್ಯವಾಗಿದೆ. ಭವಬಂಧನ ನೀಗಿಸಿ, ಅರಿಷಡ್ವರ್ಗಗಳನ್ನು ನಿಯಂತ್ರಿ ಅಧ್ಯಾತ್ಮದ ದಾರಿ ತೋರುವ ಶಿವಾರಾಧಕರ ಇಂಥ ನಡೆ-ನುಡಿಗಳು ನಮ್ಮ ಬಾಳಿಗೆ ಬೆಳಕಾಗುವುದರಲ್ಲಿ ಸಂದೇಹವಿಲ್ಲ

Scanned with CamScanner

ಕೆಲ ಗ್ರಂಥಗಳು

೧. ಬಿ. ಮಹಾದೇವಪ್ಪ, (ಸಂ.) ಅರಿವು-ಆಚಾರ, ಅರಿವು ಆಚಾರ ಪ್ರಕಟನಾಲಯ, ಯಾದಗಿರಿ.
೨. ಬಿ.ಎಸ್. ನಾಗರತ್ನಕುಮಾರಿ. (ಸಂ.) ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ.
೩. ಡಾ. ಶಕುಂತಲಾ ಎಸ್. ದುರಗಿ (ಸಂ.), ಶರಣ ಗೊಲ್ಲಾಳ, ಅ.ಭಾ.ಶ.ಸಾ. ಪರಿಷತ್ತು, ಬೆಂಗಳೂರು.
೪. ಬಿ. ಷಣ್ಮುಖಪ್ಪ (ಸಂ.), ಶರಣ ಕುರುಬ ಗೊಲ್ಲಾಳ, ಕನಕ ಮಾಹಿತಿ ಕೇಂದ್ರ, ಕನಕ ಗುರುಪೀಠ ಆವರಣ, ಶ್ರೀಕ್ಷೇತ್ರ ಕಾಗಿನೆಲೆ.

□ □ □

ಮೂರುವರ್ಣದ ಬೊಟ್ಟುಗ
ಆರು ವರ್ಣದ ಅಳಗ
ಐದು ವರ್ಣದ ಸಂಚಿಗ
ಇವರೊಳಗಾದ ನಾನಾ ವರ್ಣದ
ಅಜಕುಲ ಕುರಿವರ್ಗ
ಕೊಲುವ ತೋಳನ ಕುಲ
ಮುಂತಾದ ತ್ರಿವಿಧದ ಬಟ್ಟೆಯ ಮೆಟ್ಟದೆ
ಮೂರ ಮುಟ್ಟದೆ ಆರ ತಟ್ಟದೆ
ಐದರ ಬಟ್ಟೆಯ ಮೆಟ್ಟದೆ
ಒಂದೇ ಹೊಲದಲ್ಲಿ ಮೇದು
ಮಂದೆಯಲ್ಲಿ ನಿಂದು ಸಂದೇಹ ಕಳೆದು
ಉಳಿಯದ ಸಂದೇಹವ ತಿಳಿದು
ವೀರಜೀರೇಶ್ವರಲಿಂಗದಲ್ಲಿಗೆ ಹೋಗುತ್ತಿರಬೇಕು

- ಕುರಿಗಾಯಿ ವೀರಗೊಲ್ಲಾಳ

ಜಿ. ಶಿವಕುಮಾರ ಎನ್. ಡಂಬಳ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿಸ್ತರಣಾ ಕೇಂದ್ರ, ದೇವದುರ್ಗ-ಜಿಲ್ಲಾ೧೧೧, ಜಿ: ರಾಯಚೂರು, ಮೊ: ೯೬೧೧೨೨೦೪೨೫

Scanned with CamScanner

ಬಹುಭಾಷಾ ಸಂಗಮ ಸಂಸ್ಥೆ (ರಿ), ಹುಬ್ಬಳ್ಳಿ.

ಸಾಹಿತ್ಯದ ವಿವಿಧ ಆಯಾಮಗಳು

ಸಂಪಾದಕರು :
ಪ್ರೊ. ಮಲ್ಲಪ್ಪ ಎಂ. ಮಾನೆಗರ
ಡಾ. ಮಹಾದೇವಪ್ಪ ಎಸ್. ಪೂಜಾರಿ
ಪ್ರೊ. (ಶ್ರೀಮತಿ) ಸುಶೀಲಾದೇವಿ ಬಿ. ಬೆಟಗೇರಿ
ಡಾ. ನಾಗರಾಜ ಡಿ. ಮುರಗೋಡ

Scanned with CamScanner

ಸಾಹಿತ್ಯದ ವಿವಿಧ ಆಯಾಮಗಳು

ಸಂಪಾದಕರು : ಪ್ರೊ. ಮಲ್ಲಪ್ಪ ಎಂ. ಮಾನೆಗರ
ಡಾ. ಮಹಾದೇವಪ್ಪ ಎಸ್. ಪೂಜಾರಿ
ಪ್ರೊ. (ಶ್ರೀಮತಿ) ಸುಶೀಲಾದೇವಿ ಬಿ. ಬೆಟಗೇರಿ
ಡಾ. ನಾಗರಾಜ ಡಿ. ಮುರಗೋಡ

ಪ್ರಕಾಶಕರು : ಅವ್ವ ಪುಸ್ತಕ ಪ್ರಕಾಶನ,
ಬೆಳಗಾವಿ

ಪ್ರತಿಗಳು : ೫೦೦

ಬೆಲೆ : ರೂ. ೨೫೦/-

ಪುಸ್ತಕದ ಆಕಾರ : ಡೆಮಿ ೧/೮

ಅಕ್ಷರ ಜೋಡಣೆ : ನಾಗರಾಜ ನಂದರಗಿ
ವಿದ್ಯಾನಗರ, ಹುಬ್ಬಳ್ಳಿ
ಮೊ. : ೯೯೭೪೩೭೫೫೮೦

ISBN : 978-81-949726-3-1

Scanned with CamScanner

ಶಹಾಪುರ ಪರಿಸರದ ಪ್ರಮುಖ : ಸೂಫಿ–ಸಂತರು

ಡಾ. ಶಾಂತಪ್ಪ ಎನ್. ಡಂಬಳ, ಸಹಾಯಕ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ವಿಭಾಗ ಕನ್ನಡ ವಿಶ್ವವಿದ್ಯಾಲಯ, ವಿಸ್ತರಣಾ ಕೇಂದ್ರ ದೇವದುರ್ಗಾ.
ಜಿಲ್ಲೆ. ರಾಯಚೂರು. ಮೊ : ೯೬೧೧೨೦೪೨೫

ಖಾಸಿಂ ಅಲಿ ಜಿ. ಹುಜರತಿ, ಸಂಶೋಧನಾ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಯಾದಗಿರಿ ಜಿಲ್ಲೆಯಲ್ಲಿ ಶಹಾಪುರ ತಾಲೂಕವು ಒಂದು. ಇದು ಕೃಷ್ಣ ಮತ್ತು ಭೀಮಾ ನದಿಗಳನ್ನು ಹೊಂದಿಕೊಂಡು ಬರುವ ಭೂ ಪ್ರದೇಶ. ಇಲ್ಲಿಯ ನೆಲ–ಜಲ, ಬೆಟ್ಟ–ಗುಡ್ಡ, ಗವಿಗಳು ತುಂಬಾ ವಿಶಿಷ್ಟ ರೀತಿಯಲ್ಲಿ ಇವೆ. ಇದಕ್ಕೆ ಇತಿಹಾಸದಿಂದ ಹಾಗೂ ಪುರಾಣ ಕಾಲದಿಂದಲೂ ಸಗರ, ಸಾಗರಪುರಿ, ಸಗರಪುರ, ಸಗರಗಡ, ಸಗರಾದ್ರಿ ಹಾಗೂ ಸಗರನಾಡು ಎಂದು ಪ್ರಚಲಿತವಿದೆ. ಹಾಗೆಯೇ ಇತಿಹಾಸಕಾರರಾದ ಎನ್. ಮುಜುಮದಾರವರು ಕ್ರಿ.ಶ. ೧೮೮೪ ರಲ್ಲಿ ಇಲ್ಲಿ ಭೂ ಉತ್ಖನನ ಮಾಡುವಾಗ ರಾಷ್ಟ್ರಕೂಟರ ಕಾಲದ (ಕ್ರಿ.ಶ. ೮ನೇ ಶತಮಾನದ್ದು) ಚಾಮುಂಡಿ ವಿಗ್ರಹವನ್ನು ಪತ್ತೆ ಹಚ್ಚಿ, ಈ ಪ್ರದೇಶ 'ಬಹಾವುದ್ದೀನ್, ಬವಾಸಖಾನ್ ಹಾಗೂ ಶಹಿದ್ ಫಕೀರ್ ಸರಕಾರದ ಅಧೀನಕ್ಕೆ ಒಳಪಟ್ಟಿದ್ದರಿಂದ ಇದಕ್ಕೆ ಶಾದಿಲ್‌ಪುರ ಎಂದು ಕರೆಯುತ್ತಿದ್ದರು. ನಂತರ ಜನಸಾಮಾನ್ಯರ ಮಾತಿನಲ್ಲಿ 'ಶಹಾಪುರ' ಅಂತ ಬದಲಾವಣೆ ಆಗಿದೆ ಎಂದು ಹೇಳಿ, ಆ ಕಾಲದಲ್ಲಿ ಶಾಕ್ತಪಂಥ ನೆಲೆಗೊಂಡಿತ್ತೆಂದು ಊಹಿಸುತ್ತಾರೆ.

ಹಾಗೇ ಈ ಪ್ರದೇಶದ ಪ್ರಭುತ್ವವು ಆಳರಸರ ತೆಕ್ಕೆಯಲ್ಲಿ ಸಿಲುಕಿ ಘರ್ಷಣೆಗಳು ಒಳಗೊಂಡಂತೆ, ಧರ್ಮ ಸಂಘರ್ಷಗಳು ನಡೆದಿರುವ ಸಂಗತಿಗಳು ಕಂಡುಬರುತ್ತವೆ. ಇವುಗಳ ತುತ್ತಿಗೆ ನಲುಗಿದ ಈ ನೆಲವು ನಾವೆಲ್ಲರೂ ಒಂದು ಎಂಬ ಭಾವನೆಯಿಂದ ಕೂಡಿಕೊಂಡ ಸಂಬಂಧಗಳಿಗೆ ಇಲ್ಲಿಯ ಸೂಫಿ–ಸಂತರ ಪರಂಪರೆ ಕಾರಣವಿದೆ. ಇಲ್ಲಿ ತುಂಬಿ ಹರಿಯುವ ನದಿಗಳು, ಬೆಟ್ಟದ ಸಾಲುಗಳು, ಫಲವತ್ತತ್ತೆಯ ಭೂಮಿ ಹಾಗೂ ಸೊಬಗನ್ನು ಉಂಟು ಮಾಡುವ ತಾಣ ಇವುಗಳು ಜೀವನಕ್ಕೆ ಸಾಕಾರಗೊಳಿಸಲು ಸೂಕ್ತ ನೆಲೆಯನ್ನು ಹೊಂದಿದೆ.

ಇಂತಹ ನೆಲದಲ್ಲಿ ಅನೇಕ ಸೂಫಿ–ಸಂತರು, ಶರಣ ವಚನಕಾರರು, ಅವಧೂತರು ಆರೂಢಿಗಳು, ಅವರೂಕ್ಷರು, ನಾಥಿಕರು, ಕಪಾಲಿಗಳು, ಯತಿಗಳು ಹಾಗೂ ಶಾಕ್ತರು ಇವರೆಲ್ಲರು ಈ ಮಣ್ಣಿನ ವಾಸನೆ ಅನುಭವಿಸಿ ಹೋಗಿದ್ದವರೆ. ಅವರು ಗುರು–ಶಿಷ್ಯ ಪರಂಪರೆಯನ್ನು ಕಟ್ಟಿ ಸಾಂಸ್ಕೃತಿಕ ಕಾರ್ಯಸ್ಥಾನವನ್ನು ಮಾಡಿಕೊಂಡು ಅಸುನೀಗಿದ್ದು, ನಂತರದ ದಿನಮಾನದಲ್ಲಿ ಜನಸಾಮಾನ್ಯರ

Scanned with Cam
Scanned with CamScanner

ನಂಬಿಕೆಯಲ್ಲಿ ದೈವೀಸ್ವರೂಪಿಯಾಗಿ ಬದುಕಿದ ಕುರುಹುಗಳಿವೆ. ಬಹು ಮುಖ್ಯವಾಗಿ ಸಗರದ ಏನುದ್ದೀನ್ ಮಹಮ್ಮದ್ ಜುನ್ಯಾದಿ, ಸಾಂತಪೀರ, ಮುನವರ ಭಾಷಾ, ಸೂಫಿಸರ್ಮಸ್ತ, ಕುರಕುಂದದ ಗೈಬುಸಾಹೇಬ, ಗೋಗಿಯ ಚಂದಾಹುಸೇನಿ, ಗುರಸಣಿಗಿಯ ಜಲಾಲ್ ಡೊಂಗ್ರಿ, ನಾಗನಟಗಿಯ ದಾರುಶುಕು ಹಾಗೂ ಪರಮಾನಂದ, ಡಿಗ್ಗಿ ಸಂಗಮನಾಥ, ಗುಲ್‌ಸುರುಮದ ಸಿದ್ಧಲಿಂಗ ಹಾಗೂ ಅಮರಕಲ್ಯಾಣ, ಸಂತ ರಸ್ತಾಮರದ ತಿಪ್ಪಣ್ಣಪ್ಪ, ಅನವಾರದ ಚರಬಸವೇಶ್ವರ ತಾತ, ಸಗರದ ಗುರು ಪರಪ್ಪಯ್ಯ, ಡಕ್ಕಲಿಗ ಕೆಂಚಯ್ಯ, ಬೊಮ್ಮಯ್ಯ, ಕೂಡಲೂರ ಬಸವಲಿಂಗಪ್ಪ, ಕನಗನಳ್ಳಿ ಸಿದ್ಧರಾಮೇಶ್ವರ, ರಾಚೋಟಿ ಮುತ್ಯಾ, ಸಾವೂರು ದೊಡ್ಡಪ್ಪ ಅವ್ವರು, ಹಳಿಗೇರಿ ತಾತನವರು, ಕುಳಗೇರಿ ಖಾದರಲಿಂಗ ಹಾಗೂ ಮೂಡಬೂಳ ರಂಗಲಿಂಗೇಶ್ವರರು, ಮೊಟ್ನಳ್ಳಿ, ಹಸನಸಾಬರು ಚಿನ್ನೂರು ಜಲಾಲ ಸಾಬರು, ಕೊಡೆಕಲ್ ಬಸವಣ್ಣ ಹಾಗೂ ತಿಂಥಣಿ ಮೋನಪ್ಪಯ್ಯ ಹೀಗೆ ಅನೇಕ ಶರಣರು, ತತ್ವಪದಕಾರರು ಸೂಫಿ-ಸಂತರು ಈ ನೆಲದಲ್ಲಿ ಬಾಳಿ ಬದುಕಿದ್ದು ತಿಳಿಯಬರುತ್ತದೆ.

ಶಹಾಪುರದ ಅಮರಕಲ್ಯಾಣ, ಡಿಗ್ಗಿ ಸಂಗಮನಾಥ, ಗೋಗಿ ಚಂದಾಹುಸೇನಿ, ಸಗರದ ಸೂಫಿ ಸರ್ಮಸ್ಥ ಹಾಗೂ ನಾಗನಟಗಿಯ ಪರಮಾನಂದರು ಇವುಗಳ ಬಗ್ಗೆ ಜನರ ನಂಬಿಕೆ ಮತ್ತು ಪರಂಪರೆಯನ್ನು ಕುರಿತು ಕರ್ನಾಟಕದ ಬಹು ಸಂಸ್ಕೃತಿಯ ಒಳಗೆ ಅಧ್ಯಯನಿಸಲು ಆಕಸ್ಮಿಕವಾದವು. ಅಂತಹ ಸಂಶೋಧನೆಗಳು 'ಚರಿತ್ರೆಗೆ ಇಂದು ನನ್ನ ಅಧ್ಯಯನದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತ ಹೊಸ ಬಗೆಯಲ್ಲಿ ನಿರ್ವಚನೆಗೊಳ್ಳತ್ತದೆ. ಚರಿತ್ರೆ ನಮ್ಮದು, ನಮ್ಮ ವರ್ತಮಾನಕ್ಕೆ ಅಥವಾ ಬದುಕಿಗೆ ಸಂಬಂಧಿಸಿದ್ದು ಎನ್ನುವ ಅಸ್ಮಿತೆಯ ಹಿನ್ನೆಲೆಯ ಭಾವನೆ ಅಥವಾ ಜಾಗೃತಿ ಜನರಲ್ಲಿ ಮಾಡುತ್ತಿದ್ದು, ಇದು ಜನ ಕೇಂದ್ರಿತ ಚರಿತ್ರೆ ರಚನೆಗೆ ಎಡೆ ಮಾಡಿಕೊಟ್ಟರೆ'[೧] ಈ ರಚನೆಗೆ ಜನ ಕೇಂದ್ರಿತವಾದ ಅಧ್ಯಯನ, ಅಂದರೆ ಮಾನವ ಬದುಕುವ ನೆಲೆಯ ಮೂಲಕ ಚರಿತ್ರೆಯನ್ನು ನೋಡುವ ವಿಧಾನ. ಈ ಚಾರಿತ್ರಿಕ ಬರವಣಿಗೆಯಲ್ಲಿ ಅಷ್ಟಾಗಿ ಪ್ರಾಮುಖ್ಯತೆ ಪಡೆಯದ ಕ್ಷೇತ್ರಗಳು ಕರ್ನಾಟಕದಲ್ಲಿ ಬಹಳಷ್ಟಿವೆ. ಅವುಗಳಲ್ಲಿ ಮುಖ್ಯವಾದದ್ದು ಕತೆಯಾಗಿಸಿಕೊಂಡು ಶಹಾಪುರ ತಾಲೂಕಿನ ಸೌಹಾರ್ದತೆಯ ನೆಲೆಗಳ ಸೂಫಿ-ಸಂತರ ಚರಿತ್ರೆಯನ್ನು ಮೌಖಿಕ ಮತ್ತು ಪುರಾಣ ಇವುಗಳ ಸಂಕಥನದ ವಿಷಯವನ್ನಾಗಿ ಇಲ್ಲಿ ನಿರೂಪಿಸಲಾಗಿದೆ.

೧. ಶಹಾಪುರದ 'ಅಮರ ಕಲ್ಯಾಣ'

'ಕಲ್ಯಾಣ'ದ ಬಗ್ಗೆ ಬಹಳಷ್ಟು ಚರ್ಚೆಗಳು, ಅಧ್ಯಯನಗಳು ನಡೆದಿರುವಂತೆ ಈ ಅಮರ ಕಲ್ಯಾಣ ಸ್ಥಳದ ಬಗ್ಗೆ ಗುರುತಿಸಲು ಸಂಶೋಧನೆಯಲ್ಲಿ ಜೀಕಾಡುತ್ತಿರುವುದನ್ನು ಕಂಡು ಬರುತ್ತದೆ. ಇದಕ್ಕೆ ಬಹುಮುಖ್ಯವಾಗಿ ಕಲ್ಯಾಣ ಎಂದ ಕೂಡಲೆ ಬೀದರ ಜಿಲ್ಲೆಯ 'ಬಸವಕಲ್ಯಾಣ'ವನ್ನು ನೆನಪಿಸಿಕೊಂಡು ಇದರ ಮೂಲ ಹುಡುಕಲು ಪ್ರಯತ್ನಿಸಿರಬಹುದು. ಬಸವಕಲ್ಯಾಣವು ೧೨ನೇ ಶತಮಾನದ ವಚನ ಚಳುವಳಿ ನಾಯಕನಾದ ಬಸವಣ್ಣನವರ ಕಾರ್ಯಕ್ಷೇತ್ರ ಆಗುವುದಕ್ಕಿಂತ

ಹಿಂದೆ ದಕ್ಷಿಣ ಭಾರತದಲ್ಲಿ ಇದು ಅತ್ಯಂತ ಗಮನಾರ್ಹ ಪಟ್ಟಣವಾಗಿತ್ತು. ಕಲ್ಯಾಣ ಚಾಲುಕ್ಯರ ಅರಸನಾದ ವಿಕ್ರಮಾದಿತ್ಯನ ಕಾಲದಲ್ಲಿ ಒಂದು ಪ್ರಬಲ ರಾಜಕೀಯ ಶಕ್ತಿಯ ಕೇಂದ್ರ ರಾಜಧಾನಿಯಾಗಿತ್ತು. ನಂತರ ಈ ಕಲ್ಯಾಣ ಬಸವಾದಿ ಶರಣರ ಕಾಲದಲ್ಲಿ ಚಳುವಳಿಯ ಆಂದೋಲನದ ಕೇಂದ್ರ ಸ್ಥಾನವಾಗಿ ಹೆಸರುವಾಸಿ ಆಗಿತ್ತು. ಭಾರತ ಹಾಗೂ ಕರ್ನಾಟಕದ ವಿವಿಧ ಭಾಗದಿಂದ ಸಮಾಜದ ವಿವಿಧ ಸ್ತರಗಳಿಗೆ ಸೇರಿದ ಜನರನ್ನು ಇದು ಆಕರ್ಷಿಸಿತು. ಇಲ್ಲಿ ಸತ್ಯರು, ಸಾತ್ವಿಕರು ತುಂಬಿಕೊಂಡಿದ್ದರಿಂದ ಪಾಪಿಗಳು, ಕೋಪಿಗಳು, ಅಸತ್ಯರು, ಅನಾಚಾರಿಗಳು ಹೋಗಬಾರದೆಂಬ ಪ್ರತೀಕವು ಇತ್ತು. ಈ ಕಲ್ಯಾಣದಲ್ಲಿ ವಚನ ಚಳುವಳಿಯ ಶರಣರ ಚಿಂತನೆಗಳು ಜನಸಾಮಾನ್ಯರ ಮೇಲೆ ಪ್ರಭಾವ ಬೀರಿ ವಾತಾವರಣ ಬದಲಾಯಿಸಿ ಸಮಾಜದ ಮುಖ್ಯವಾಹಿನಿಗೆ ಬರಲು ಕಾರಣವಾಯಿತು. ಇದು ಪ್ರಭುತ್ವ ಮತ್ತು ಜನಸಮುದಾಯಗಳ ಮಧ್ಯ ನಡೆದಿರುವ 'ಸಂಘರ್ಷಣೆಯ ಕಾಲ' ಎಂದು ಕರೆಯಬಹುದು. ಯಾಕೆಂದರೆ ಇಲ್ಲಿ ಕ್ರಾಂತಿ ಸಂಭವಿಸಿ ಶರಣರ ಸಮೂಹ ಚಿದ್ರಗೊಂಡು ಕಂಗಾಲಾದರು. ಹಾಗೂ ಕಗ್ಗೊಲೆಯೂ ಆಯಿತು. ಆದರೆ ಇವರು ಪಲಾಯನಗೈದರೆ ಹೊರತು ಆತ್ಮಹತ್ಯೆ ಮಾಡಿಕೊಂಡವರಲ್ಲ. ಈ ಕಲ್ಯಾಣವನ್ನು ಕೆಲವು ವಿದ್ವಾಂಸರು 'ಸಮಯ ಕಲ್ಯಾಣ'ವೆಂದು ಗುರುತಿಸುತ್ತಾರೆ. ಅದೇ ರೀತಿ ವಿಜಯನಗರದ ರಾಜಸತ್ತೆ ಮತ್ತು ಧರ್ಮಸತ್ತೆ ಇವು ಆಕಾರಗಳನ್ನು ಇಟ್ಟುಕೊಂಡು ಇದನ್ನು 'ವಿಜಯಕಲ್ಯಾಣ' ಎಂದು ಕರೆದುಕೊಂಡು, ಇವೆರಡು ಒಂದೇ ಎಂದು ಗುರುತಿಸುತ್ತಾರೆ. ಇವೆರಡರಲ್ಲಿಯ ಭಿನ್ನ ಸ್ವರೂಪಗಳ ಬಗ್ಗೆ ಚರ್ಚಿಸಿಕೊಳ್ಳದ ಕಾರಣವೂ ಇರಬಹುದು. ಈ ಕಾರಣದಿಂದಲೇ ಮುಂದಿನ ಕಾಲಘಟ್ಟದ ಚಳುವಳಿ ಸ್ವರೂಪದ ಬಗ್ಗೆ ಒಳ ಅರಿವು ತಿಳಿಯದೆ ಹೋಗಿರಬಹುದುದೇನೊ. ಇಲ್ಲಿ ಅದರ ಬಗ್ಗೆ ಚರ್ಚಿಸದೆ ಕೇವಲ 'ಅಮರ ಕಲ್ಯಾಣ' ಸ್ಥಳವನ್ನು ಪರಿಚಯಿಸುತ್ತೇವೆ.

ಈ ಅಮರ ಕಲ್ಯಾಣದ ಪರಂಪರೆ ಡಕ್ಕಲಿಗ ಕೆಂಚಯ್ಯನಿಂದ ಹಿಡಿದು ಪರಮಾನಂದರು, ಡಿಗ್ಗಿ ಸಂಗಯ್ಯ, ರಸ್ತಾಮರದ ದಾಡ ತಿಪ್ಪಣ್ಣ, ಶರಭಲಿಂಗ, ದೇವಯ್ಯ, ಕೊಡೆಕಲ್ಲ ಬಸವಣ್ಣ, ಗುತ್ತಿಬಸವಣ್ಣ, ಸಗರ ಪರಪಯ್ಯ, ಕುಳಗೇರಿ ಖಾದರಲಿಂಗ ಹಾಗೂ ನಾಗಾವಿ ಪರಂಪರೆಯ ಒಳಗೂ ಸಂಧಿಸಿಕೊಂಡು ಬರುತ್ತದೆ. ಇಂತಹ ಚಾರಿತ್ರಿಕತೆಯನ್ನು ಹೊಂದಿರುವ 'ಅಮರಕಲ್ಯಾಣ' ಯಾರಿಂದ ಪ್ರಾರಂಭವಾಯ್ತು? ಇದರ ಮೂಲ ಎಲ್ಲಿದೆ? ಎಂಬುದನ್ನು ಹುಡುಕಾಡಿದ್ದು ಸಂಶೋಧನೆಯಲ್ಲಿ ಕಂಡುಬರುತ್ತದೆ.

ಇದು ಶಹಾಪುರದಿಂದ ೧೫ ಕಿ.ಮೀ. ದಕ್ಷಿಣಾಭಿಮುಖದಲ್ಲಿ ಬರುತ್ತದೆ. ಎರಡು ಗುಡ್ಡಗಳು ಒಂದು ಡಿರಕಿ ಬಸವನಕೊಳ್ಳ ದಾಟಿ ಹೋದರೆ ಅಲ್ಲೊಂದು ಹಾಸು ಬಂಡಿಯ ಮೇಲೆ ಸಣ್ಣದೊಂದು ಗುಡಿಯಿದೆ. ಇದು ಸುಮಾರು ೪ಥಿ ಅಡಿ ಉದ್ದಗಲದ ೩ ಅಡಿ ಎತ್ತರದ ಯಾವುದೇ ಗೋಮರ ಅಲಂಕಾರವಿಲ್ಲದ ರೀತಿಯಲ್ಲಿ ಕಂಡುಬರುತ್ತದೆ. ಇದು ಬಹುಮುಖ್ಯವಾಗಿ ಈ ಸಣ್ಣಗುಡಿ ರೂಪಕವಾಗಿ ನಿರ್ಮಿಸಿಕೊಂಡದ್ದು ನಂತರ ದಿನಗಳಲ್ಲಿ.

Scanned with CamScanner

ಈ ನಾಡಿನೊಳಗ ವರಪಯ್ಯ, ಸಂಗಯ್ಯ ಮತ್ತು ಚಂದಾಹುಸೇನಿ ಅಂಕ ಮೂವರು ಗೆಳೆಯರು ಮತ್ತು ಗುರು-ಶಿಷ್ಯರಾಗಿದ್ದರು. ಅವರು ಚಂತ್ಯಾನ ಊರು ಜನರ ಮುಂದೆ ಕಂಡರೆ ಚಂಜಿಕಿ ಹೊತ್ತು ಮುಳಗದರೊಳಗ ಅವರಿಗೆ ಸಮೀಪ ಗುತ್ತವಲ್ಲಿ ಗವಿ ಇದ್ದರೆ ಸಾಕು ಅಲ್ಲಿಗೆ ಹೋಗಿ ಇರುತ್ತಿದ್ದರು. ಇವರು ಯಂಗ ಇದ್ದಾರಂತ್ರ ಒಂದು ಗವಿನಾ, ಒಂದು ಊರುನಾ ಈ ಭೂಮಿ ಎಲ್ಲಿದಯೊ ಅಲ್ಲಿಯವರೆಗೂ ತಿರುಗಾಡುತ್ತಿದ್ದರು. ಅದರಂಗ ಈ ಶಹಾಪರ ಗುಡ್ಡಕ್ಕ ಒಂದು ದಿನ ಹುಣ್ಣು-ಹಂಪಲು ತಿಂದು, ಆಲ್ಲಿ ಎಷ್ಟು ಗವಿಗಳಿದ್ದಾವೆ ಎಂದು ನೋಡಿಕೊಂಡು ಬರಮಂತ ತಮ್ಮ ತಮ್ಮಲ್ಲಿ ಮಾತಾಡಿಕೊಂಡು ಹೊರಟವರು. ಹೋಗಿ ಎಲ್ಲಾ ಗವಿಗಳನ್ನು ನೋಡಿದರು. ನಂತರ ಸ್ವಲ್ಪಹೊತ್ತು ಹಣ್ಣು-ಹಂಪಲು ತಿಂದರಾಯ್ತು ಅಂತ ನಿಡ-ಗಿಡ ತಿರುಗಾಡುತ್ತಿದ್ದರು. ಆಗ ದೂರದಿಂದ ಒಂದು ಧ್ವನಿ ಪರಪಯ್ಯನಿಗೆ ಕೇಳಿತು, ಆಗ ಅವನು ಸಂಗಯ್ಯ ಹಾಗೂ ಚಂದಾಹುಸೈನಿ ಇವರಿಬ್ಬರಿಗೂ 'ಯಾರೊ ಕೂಗಿದಂಗ ಕೇಳಿಸುತ್ತದೆ' ಅಂತ ಹೇಳಿದ. ಅವರಿಬ್ಬರು ಸಪ್ಪಳ ಮಾಡದೆ ನಿಂತು ಎಲ್ಲಿಂದ ಅಂತ ಸ್ವಲ್ಪ ಕಿವಿಕೊಟ್ಟು ಕೇಳತೊಡಗಿದರು. ನಂತರ ಅವರಿಗೂ ಧ್ವನಿ ಕೇಳದ ಕೂಡಲೇ 'ಹೌದಲ್ಲೊ' ಈ ಕಡೆಯಿಂದ ಅಂದರೆ ಈ ಕೊಳ್ಳದ ಕಡೆಯಿಂದ ಕೇಳಿಬರುತ್ತಿದೆ, ನಡಿರಿ ಹೋಗೋಮು ಅಲ್ಲಿ ಯಾರು ಇರಬಹುದು ಅಂತ ಮಾತಾಡಿಕೊಂಡು ಆ ಸ್ಥಳಕ್ಕೆ ಹೋಗುತ್ತಾರೆ. ಅಲ್ಲಿ ಒಬ್ಬ ದಿಗಂಬರವಾಗಿ ಆ ಹಾಸುಬಂಡೆಯ ಮೇಲೆ ಒಂದು ಗುಂಡಗಲ್ಲು ಆಕಾರದ ಉದ್ದನೆಯ ಸಣ್ಣದೊಂದು ಕಲ್ಲನ್ನು ಎದಿರಿಗಿಟ್ಟಕೊಂಡು ತಪ್ಪಸ್ಸು ಕುಳಿತಿರುತ್ತಾನೆ. ಆತನನ್ನು ಎಲ್ಲರೂ ದಿಗಂಬರಸ್ವಾಮಿ ಅಂತ ಕರೆಯುತ್ತಿದ್ದರು. ಈತನ ಮೂಲ ಡಕ್ಕಲಿಗ ಕೆಂಚಯ್ಯ ಅಂತ ಪೆಸರಿತ್ತು. ಅದೇನಿರಲಿ ಬಂದ ಮೂವರು ಈತನನ್ನು ಕಂಡು ಆತನ ಸಮೀಪ ಹೋಗಲಿಲ್ಲ, ಯಾಕೆಂದರೆ ತಪ್ಪಸ್ಸಿಗೆ ಭಂಗ ತರಬಾರದೆಂದು ತಿಳಿದು ಅಲ್ಲಿಯೇ ಕಂಟಿಯ ನೆರಳಿನ ಕೆಳಗೆ ಕುಳಿತಿರುತ್ತಾರೆ. ಆ ಕಡೆಯಿಂದ ಇಬ್ಬರು ವ್ಯಕ್ತಿಗಳು ಆತನನ್ನು ಬೇಟಿಯಾಗಲು ಅಲ್ಲಿಗೆ ಬರುತ್ತಾರೆ. ಅವರಿಬ್ಬರು ಬೇರೆ ದೇರೆ ದಿಕ್ಕಿನವರು. ಒಬ್ಬರು ಪೂರ್ವದಿಕ್ಕಿನವರಾದರೆ, ಇನ್ನೊಬ್ಬ ದಕ್ಷಿಣ ದಿಕ್ಕಿನವನು. ಅವರ ಕೆಲಸ ದಿನಾಲು ಬಂದು ಆತನಿಗೆ ಊಟಕೊಟ್ಟು ಮಾತಾಡಿಸಿಕೊಂಡು ಹೋಗುವುದಾಗಿತ್ತು. ಅಂದಿನಂತೆ ಇವತ್ತು ಕೂಡ ಬಂದಿದ್ದರು. ಆಗ ಆ ದಿಗಂಬರಸ್ವಾಮಿ ತಪ್ಪಸ್ಸಿನಲ್ಲಿ ಕುಳಿತಿದ್ದು ಕಂಡು, ಅವರು ಕೂಡ ಕಂಟಿಯ ನೆರಳಿಗೆ ಹೋಗಿ ಇವರು ಕುಳಿತುಕೊಂಡರು. ಸ್ವಲ್ಪವೊತ್ತಿನ ನಂತರ ಆ ದಿಗಂಬರಸ್ವಾಮಿಯು ತನ್ನ ತಪ್ಪಸ್ಸು ಮುಗಿಸಿಕೊಂಡು ಆನಂದಕ್ಕೆ-ಆಣಿಯಲು ತಯ್ಯಾರಾದ ಇದನ್ನು ಕಂಡ ಆ ಭಕ್ತರು ಆತನಲ್ಲಿಗೆ ಬಂದು ತಾವು ತಂದಿರುವ ಊಟವನ್ನು ಒಬ್ಬರು ಅಂಗೈಯಲ್ಲಿ ಹಾಕಿಕೊಂಡು ಉಚ್ಚಿ ಹದ ಮಾಡುತ್ತಿದ್ದರು, ಇನ್ನೊಬ್ಬರು 'ಸೇದಿ ಬಂಗನ್ನು ಸ್ವಚ್ಛಗೊಳಿಸಿ ಒಳಗಡೆ ಸಣ್ಣದೊಂದು ಅಳ್ಳು ಹಾಕಿ ತಯ್ಯಾರಿಸಿ ಆತನಿಗೆ ಕೊಟ್ಟರು. ಆಗ ಅವನು ಆ ಸೇದಿ ಬಂಗನಲ್ಲಿ ಹಾಕಿಕೊಂಡು ಚಕಮುಕಿಯಿಂದ ಬೆಂಕಿ ಪಚ್ಚಿಕೊಂಡು ಒಂದು ಜುರಕ ಸೇದಿ ಹೊಗೆಯನ್ನು ಬಿಟ್ಟು ನಂತರ 'ಈ

ಮೂವರು ಬಂದದ್ದನ್ನು ನೋಡಿ ಯಾಕೆ ಬಂದಿರಪ್ಪ ಇಲ್ಲಿಗೆ? ವಿಶೇಷವಾದರೂ ಸಮಾಚಾರ ಇತ್ತಾ ತಮ್ಮಂದಿರಾ? ಅಂತ ಕೇಳಿ ವಿಚಾರಿಸತೊಡಗಿದ. ಆದಕ್ಕೆ ಆ ಮೂವರು ಇಲ್ಲೊಂದು ಧ್ವನಿ ಕೇಳಿ ಬರುತ್ತಿತ್ತು ಅದಕ್ಕೆ ನೋಡಕೊಂಡು ಹೋದ್ರಾಯ್ತು ಅಂತ ತಿಳಿದು ಬಂದಿವಿ ಅಂದರು. ಆಗ ಅವನು ಹ್ಞೂಂ. ಆಯ್ತು ಸರಿ, ನೋಡಿರಲ್ಲ ಹೋಗಿ, ಈಗ ಹೋಗಬಹುದಲ್ಲ ಅಂತ ಹೇಳಿದ. ಆ ಮೂವರಲ್ಲಿ ಪರಪಯ್ಯ ಮತ್ತೆ ಆತನನ್ನು ಇಲ್ಲಿ ಎಷ್ಟು ಗವಿಗಳವೆ? ಎಂದು ಕೇಳಿದ, ಆಗ ಆ ದಿಗಂಬರ ಸ್ವಾಮಿಯೂ 'ನೋಡಪ್ಪ ತಮ್ಮ ಇಲ್ಲಿ ಎಷ್ಟು ಗವಿಗಳಿದ್ದಾವೆಂದು ಹೇಳಕ್ಕಾಗಲ್ಲ, ಒಂದು ಮಾತ್ರ ಸತ್ಯ ಹೊಲದಾಗ ಬೆಳೆಯುವ ಅವರಿಕಾಳುಗಳು ಇರುತ್ತಾವಲ್ಲ, ಆ ಅವರಿಕಾಳುಗಳು ಒಂದು ಗೋಣಿ ಚೀಲದಷ್ಟು ತಂದು ಒಂದೊಂದು ಗವಿಗೆ ಒಂದೊಂದು ಇಟ್ಟಕಂತ ಬಂದ್ರೆ ಸಾಲಬಹುದೇನೊ ಎಂದು ಹೇಳಿ ಮತ್ತೊಂದು ಜುರಕಿ ಎಳೆಯುತ್ತಿದ್ದ. ಇದು ಕೇಳಿದ ಆ ಮೂವರು ಗೊಳ್ಳೆಂದು ನಕ್ಕರು. ಇದನ್ನು ಗಮನಿಸಿದ ಅವನು ಕೂಡ ಸರಿ ಆಯ್ತು ನಿಮ್ಮಂತೆ ನಾನೊಬ್ಬ ಎಂದು ಒಪ್ಪಿಗೆ ಕೊಟ್ಟ, ನೀವು ಐದು ಮಂದಿ ಕೂಡಿಕೊಂಡು ಒಂದು ಚೀಲ ಅವರಿಕಾಳು ತಗೊಂಡು ಬರಬೇಕು, ಅದು ನಾಳೆ ಭಾನುವಾರ ದಿನವೇ ಆರಂಭಿಸಿದರೆ ಮೂರು-ನಾಲ್ಕು ದಿನಗಳು ಮುಗಿಯಬಹುದು, ಅದಕ್ಕೆ ನೀವು ಈಗ ಹೋಗಿ ನಾಳೆಯೆ ತಂದು ಪಂಚಂಗ ಆಗಬೇಕೆಂದು ತಿಳಿಸುತ್ತಾನೆ. ಇದಕ್ಕೆ ಅವರೆಲ್ಲರೂ ಒಪ್ಪಿ ಅವರಿಕಾಳು ತರಲು ಹೋಗುತ್ತಾರೆ.

ಮಾರನೆ ದಿನವೇ ಆ ಐವರು ಒಂದೊಂದು ದಿಕ್ಕಿಗೆ ಹೋಗಿ ಅವರಿಕಾಳು ತಂದು ದಿಗಂಬರ ಸ್ವಾಮಿಯಾಗಿರುವ ಡಕ್ಕಲಿಗ ಕೆಂಚಯ್ಯನ ಮುಂದೆ ಹಾಕುತ್ತಾರೆ. ಇದನ್ನು ಕಂಡು ಅವನು ಆಯ್ತು ಸರಿ ಹಂಚಿಕೊಂಡು ಬರೋಣಂತ ತಿಳಿಸಿದ್ದಾಗ, ಆ ಐವರು ಮಂದಿ ಇಲ್ಲಿಂದಲೇ ಪ್ರಾರಂಭ ಮಾಡೋಣ. ಹಾಗೇ ನಾವು ಯಾವ ಯಾವ ಗವಿಗಳಿಗೆ ಹೋಗುತ್ತೇವು ಆವುಗಳಿಗೆ ಹೆಸರುಗಳನ್ನು ಕೊಡುತ್ತ ಬರಬೇಕೆಂದು ಕೇಳುತ್ತಾರೆ. ಇದನ್ನು ಗಮನಿಸಿದ ಡಕ್ಕಲಿಗ ಕೆಂಚಯ್ಯ ಇದಕ್ಕೆ ಮೊದಲು ಒಪ್ಪದಿದ್ದರು ಆ ಐದು ಮಂದಿಯ ಮಾತಿಗೆ ಬೆಲೆಕೊಟ್ಟು ಸರಿ ಎಂದು ತಿಳಿಸುತ್ತಾನೆ. ಆದರೆ ಇಲ್ಲಿಂದಲೇ ಆರಂಭಿಸುವುದು ನನಗೇನು ಸರಿ ಅನಿಸುವುದಿಲ್ಲ, ಯಾಕೆಂದರೆ ಎಲ್ಲ ಕಡೆಯಿಂದ ಹಂಚಿಕೊಂಡು ಎಲ್ಲರಿಗೂ ಸಾಂತ್ವನ ಮಾಡಿಕೊಂಡು ಬಂದು ಕೊನೆಗೆ ಇದಕ್ಕೆ ಒಂದು ಕಾಳುಗಳನ್ನಿಟ್ಟು ಹೆಸರು ಕೋಡೋಣವೆಂದು ತಿಳಿಸುತ್ತಾನೆ. ಇದಕ್ಕೆ ಅವರೆಲ್ಲರೂ ಒಪ್ಪಿಕೊಂಡು ಕಾಳುಗಳನ್ನಿಡಲು ಆ ದಿಗಂಬರನೊಂದಿಗೆ ಹೋಗುತ್ತಾರೆ. ಅವರೆಲ್ಲರೂ ಕೂಡಿಕೊಂಡು ಒಂದು ಗವಿಗಳನ್ನೂ ಬಿಡದೆ ಮೂರು ದಿನಗಳ ಕಾಲ ಅಂದರೆ ರವಿವಾರ, ಸೋಮವಾರ, ಮಂಗಳವಾರ ಈ ಮೂರು ದಿನಗಳಲ್ಲಿ ಹಂಚಿಕೊಳ್ಳುತ್ತಾ; ಬುಧವಾರ ಬೆಳಗ್ಗೆ ತಾವು ಮೊದಲು ಆರಂಭಿಸಬೇಕು ಅನ್ನುವ ಜಾಗಕ್ಕೆ ಮತ್ತೆ ಬರುತ್ತಾರೆ. ಆದರೆ ಆ ಚೀಲದೊಳಗೆ ಅವರಿಕಾಳುಗಳು ಅಷ್ಟೇ ಅಲ್ಲ ಒಂದೇ ಒಂದು ದೂಸುಕಡ್ಡಿಯನ್ನು ಇಲ್ಲದ ಹಾಗೆ ಆ ಗೋಣಿಚೀಲ ಖಾಲಿಯಾಗಿತ್ತು. ಆ ಕಾಲಿಯಾದ ಚೀಲ ದಕ್ಷಿಣ ದಿಕ್ಕಿನಿಂದ ಬಂದ ಭಕ್ತನಾದ ಡಂಗರದವನ ಕೈಯಲ್ಲಿತ್ತು. ಕೊನೆಗೂ ಖಾಲಿಯಾದ ಚೀಲವನ್ನು ನೋಡಿ ಎಲ್ಲರೂ ಗಾಬರಿಗೊಂಡು

Scanned with CamScanner

ಈಗೇನು ಮಾಡೋಮ. ಅದು ಬೇರೆ ಸ್ವಂತ ಅವರೇ ತಪ್ಪಸ್ಸು ಕುಳಿತುಕೊಳ್ಳುವ ಬಾಗ. ಇವಕ್ಕೆ ಇರವಂಗಾಯತ್ತಲ್ಲ. ಈಗ ಹೋಗಿ ತಂಬಂದ್ರ ಹೇಳಿಕೇಳಿ ಬುಧುವಾರ ಆವ ಇಮ ದೆವ್ವದ ವಾರ ಅಂತ ತಮ್ಮ ತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದರು. ಆದರೆ ಆ ದಿಗಂಬರಸ್ವಾಮಿ ಕಂಚಯ್ಯ ತನ್ನ ತಪ್ಪಸ್ಸು ಮುಗಿಸಿಕೊಂಡು ಇವರನ್ನು ನೋಡಿ 'ಯಾಕೂ ತಮ್ಮಂದಿರಾ ಏನೋ ಗಾಢವಾಗಿ ಚಿಂತಿಸಿದ್ದಂಗ ಕಾಣುತ್ತದೆ' ಎಂದು ವಿಚಾರಿಸತೊಡಗಿದ. ಆದಕ್ಕೆ ಡಂಗುರದವನು ತನ್ನ ಕೈಯಲ್ಲಿದ್ದ ಬೇಲ ಮೇಲಕತ್ತಿ ಎರಡು ಕೈಗಳಿಂದ ಅಳ್ಳಾಡಿಸಿ ತೋರಿಸಿದ. ಇದನ್ನು ಕಂಡು ಆ ಸ್ವಾಮಿಯೂ ಮೂರು ನಕ್ಕು ಇವಕ್ಕೆ ನೀವೆಲ್ಲ ಸಪ್ಪಗೆ ಕುಳಿತುಕೊಂಡಿರೇನು ಅಂತ ಕೇಳಿ, ಅವೆಲ್ಲವನ್ನು ಕರೆದು ಅಲ್ಲಿ ಎರಡು ಆಂಬರಿಗಿಡಗಳು ಕಾಣುತ್ತಾವಲ್ಲ. ಅವುಗಳಲ್ಲಿ ಇರುವ ಹೂಗಳು, ತಪ್ಪಲುಗಳನ್ನು ಹರಕೊಂಡು ಬನ್ನಿ ಅಂತ ಹೇಳಿದ. ಆಗ ಆ ಐದು ಮಂದಿ ಹೋಗಿ ಹರಕೊಂಡು ಬಂದು ಈಗೇನು ಮಾಡದು? ಅಂತ ಕೇಳುತ್ತಾರೆ. ಇದಕ್ಕೆ ಅವನು ನೀವು ತಂದಿರುವ ತಪ್ಪಲು ಹೂ ಒಟ್ಟಿಗೆ ಸೇರಿಸಿ ಇವರ ಮೇಲೆ ಹಾಕುತ್ತಿರಿ ಇದಕ್ಕೆ ಹೆಸರಿಟ್ಟರಾಯ್ತು ಅಂತ ತಿಳಿಸಿದ. ಇದಕ್ಕೆ ಎಲ್ಲರೂ ಸರಿ ಎಂದು ಒಪ್ಪಿಗೆ ಕೊಟ್ಟು, ಆ ಐದು ಮಂದಿ ಕೂಡಿಕೊಂಡು ತಾವು ತಂದಿರುವ ತಪ್ಪಲು ಹೂಗಳನ್ನು ಹಾಕುತ್ತಿರುತ್ತಾರೆ. ಆಗ ಆ ದಿಗಂಬರನಾದ ಡಕ್ಕಲಿಗ ಕಂಚಯ್ಯನು 'ಅಮರಕಲ್ಯಾಣ' ಎಂದು ನಾಮಕರಣ ಮಾಡಿ ಇದನ್ನು ಲೋಕಕ್ಕೆ ಸಾರಿ ಅಂತ ಆ ಐದು ಮಂದಿಗೆ ತಿಳಿಸುತ್ತಾನೆ. ಅದರಲ್ಲಿ ಪರಪಯ್ಯನು ಪರಮಾನಂದನಾಗಿ ಈತನ ಶಿಷ್ಯನಾಗುತ್ತಾನೆ. ಪೂರ್ವದಿಕ್ಕಿನಿಂದ ಬಂದ ಭಕ್ತ ಇದಕ್ಕೆ ಸೇವಕನಾಗುತ್ತಾನೆ. ಡಂಗುರದವನು ಸಾರುತ್ತಾನೆ. ಇನ್ನುಳಿದವರು ಈ ಪರಂಪರೆಯನ್ನು ಮುಂದುವರೆಸುತ್ತಾರೆ. ಅದಕ್ಕೆ ಅಂದಿನಿಂದ ಇಂದಿನವರೆಗೂ ಅಮರ ಕಲ್ಯಾಣವೆಂದು ಕರೆಯುತ್ತಾರೆಂಬುದು ಜನಸಾಮಾನ್ಯರ ಅಭಿಪ್ರಾಯ. ಈ ಕಥೆ ಈ ಭಾಗದ ಹಿರಿಕರಲ್ಲಿ ಜನಜನಿತವಾಗಿ ಕೇಳಿಬರುತ್ತದೆ. ಇದನ್ನು ನಾವು ಸೂಕ್ಷ್ಮತೆಯಿಂದ ನೋಡುವ ಕಣ್ಣುಗಳಾದರೆ ಒಂದು ಚರಿತ್ರೆಯನ್ನು ತಿಳಿಸುತ್ತದೆ. ಇಲ್ಲವಾದರೆ ಒಂದು ಮೌಢ್ಯತೆಯ ಕಂತೆಯಾಗಿ ಮೂಢನಂಬಿಕೆಯಾಗಿ ಕಾಣುತ್ತದೆ. ಇದು ಬಪಮುಖ್ಯ 'ಅಮರಕಲ್ಯಾಣ'ವನ್ನು ಸ್ಥಾಪಿಸಿದ ಮೂಲ ಪುರುಷನಾದ ಡಕ್ಕಲಿಗ ಕಂಚಯ್ಯ ಎಂದು ತಿಳಿಸುತ್ತದೆ. ಈ ಡಕ್ಕಲಿಗ ಎಂಬುದು ಡಕ್ಕಲಿಗ ಸಮುದಾಯದ ಹೆಸರು. ಜನರ ಆಡು ನುಡಿಯಿಂದ 'ಡಕ್ಕಲಿಗ' ಅಂತ ಆಗಿದೆ ಅಷ್ಟೇ. ಈ ಡಕ್ಕಲಿಗ ಸಮುದಾಯವು 'ಅಸ್ಪೃಶ್ಯ' ಜನಾಂಗದಲ್ಲೆ ಅತ್ಯಂತ ಅಸ್ಪೃಶ್ಯ ಜನಾಂಗವೆಂದು ಇಂದಿಗೂ ಕರೆಯುತ್ತಾರೆ. ಇವರು ಮೊದಲು ಸಗರ ಗ್ರಾಮದಲ್ಲಿ ಕಂಡುಬರುತ್ತಿದ್ದರು. ನಂತರ ಈ ಸಮುದಾಯ ಹುಣಸಗಿ, ತಾಳಿಕೋಟಿ, ಸಾರಾಯಿಣಮರಗಳಲ್ಲಿ ಇಂದಿಗೂ ಕಂಡುಬರುತ್ತಾರೆ. ಇವರಲ್ಲಿ 'ಅಮರಕಲ್ಯಾಣ'ದ ಚಾರಿತ್ರಿಕ ಪರಂಪರೆ ಹಾಗೂ ಸಂಸ್ಕೃತಿಯನ್ನು ಇಂದಿಗೂ ಅವರ ಆಚರಣೆಯಲ್ಲಿ ಇದೆ. ಈ ಪರಂಪರೆಯನ್ನು ಶಿವಕಂಚಿಯಿಂದ ಬಂದ ಪರಪಯ್ಯನೇ ಪರಮಾನಂದನಾಗಿ ಮುಂದುವರಿಸಿಕೊಂಡು ಹೋಗಿರುವಂತೆ ತಿಳಿಸುತ್ತದೆ. ನಂತರ

ಆತನ ಶಿಷ್ಯ ಸಂಗಮನಾಥ ಡಿಗ್ಗಿ ಮತ್ತು ಡಂಗುರದವನು ಪ್ರಚಾರಗೊಳಿಸಿದ್ದು ಗೊತ್ತಾಗುತ್ತದೆ. ಆದರೆ ಪೂರ್ವದಿಕ್ಕಿನವರು ಮತ್ತು ದಕ್ಷಿಣ ದಿಕ್ಕಿನವರು ಯಾರೆಂದು ಖಚಿತಗೊಳಿಸಿಲ್ಲ. ಈ ಪರಂಪರೆಯನ್ನು ಮುಂದೇ ಗುತ್ತಿಬಸಪ್ಪ, ಕೊಡೆಕಲ್ಲ ಬಸಪ್ಪ, ಕುಳಗೇರಿ ಖಾದರಲಿಂಗ, ಬಾಡ ತಿಪ್ಪಣ್ಣಪ್ಪ, ರಸ್ತಾಪುರ ದ್ಯಾವಣ್ಣ ಮತ್ತು ಶರಭಲಿಂಗ, ಕೂಡಲೂರು ಬಸವಲಿಂಗಪ್ಪ, ಕನಗನಪಳ್ಳಿ ಸಿದ್ಧರಾಮೇಶ್ವರ, ಸಾವೂರು ದೊಡ್ಡಪ್ಪ ಅಪ್ಪರು, ಸಾಲೋಟಗಿ ಶಿವಯೋಗಿಗಳು, ತಿಂಥಣಿ ಮೋನಪ್ಪಯ್ಯ, ಕಡಕೋಳ ಮಡಿವಾಳಪ್ಪನವರು ಹಾಗೂ ಮೊಟ್ನಳ್ಳಿ ಹಸನಸಾಹೇಬರು ಮುಂತಾದವರು ಈ ಪರಂಪರೆಯನ್ನು ಗುರು-ಶಿಷ್ಯತ್ವದಲ್ಲಿ ಕಟ್ಟಿಕೊಂಡು ಬಂದಿರುವುದು ಕಾಣಬತ್ತದೆ.

"ಕಲ್ಯಾಣವು ಕೇವಲ ಒಂದು ಭೌತಿಕ ಸ್ಥಳವಾಗಿ ಪರಿಭಾವಿಸುವ ಕಲ್ಪನೆ ಮರೆಯಾಯಿತು. ವಚನಕಾರರ ಆಶೋತ್ತರಗಳ ಪ್ರತೀಕವಾದ ಸಾಂಸ್ಕೃತಿಕ ಹಾಗೂ ವೈಚಾರಿಕ ಆಕೃತಿಗಳ ಮೊತ್ತರೂಪದ ಅರ್ಥವಂತಿಕೆಯನ್ನು ಕಲ್ಯಾಣವು ಪಡೆದುಕೊಂಡಿತು. ಹೀಗಾಗಿ ಕಲ್ಯಾಣವೆಂದರೇನೆ ವಚನಗಳು ಮತ್ತು ವಚನಕಾರರು ಕಣ್ಮುಂದೆ ಬರುವಂತಾಯಿತು."೨ ಇದೆ ಪರಂಪರೆಯ ಅರ್ಥವನ್ನು ಪಡೆದುಕೊಂಡು ಮುಂದೆ ಭಕ್ತ ಹಾಗೂ ಅನುಭಾವಿಗಳಿಗೆ ಒಂದು ಶಕ್ತಿ ಆಯಿತು.

ಕರ್ನಾಟಕ ಸಂಸ್ಕೃತಿಯಲ್ಲಿ ಭಿನ್ನ ಭಿನ್ನ ಧರ್ಮ, ಭಾಷೆಗಳ ತಿಕ್ಕಾಟಗಳು ಆರಂಭವಾಯಿತು. ಆದ್ದರಿಂದ ಅನುಭಾವ ನೆಲೆಯಿಂದ ಈ ಪರಂಪರೆ ಕಡೆಗೆ ಹೆಜ್ಜೆ ಹಾಕುವುದರ ಮೂಲಕ 'ಅಮರತ್ವವನ್ನು' ಸಾರ್ವತ್ರಿಕಗೊಳಿಸಲು ಅನುಭಾವಿ ಚಳುವಳಿಗಳು ಸಾಂಕೇತಿಕ ಸಾದೃಶ್ಯದಿಂದ ಈ 'ಅಮರಕಲ್ಯಾಣ' ಹೆಸರಿನಲ್ಲಿ ಪ್ರಚಾರ ಪಡಿಸಲು ಮುಂದಾದವು.

ಹಾಗೇ ಈ ಕಾಲದಲ್ಲಿ ಡಂಗುರದೊಂದಿಗೆ ಊರೂರು ತಿರುಗಾಟದಿಂದ ಸಮುದಾಯದ ಪ್ರಜ್ಞೆಯ ಜಾಗೃತಿ ಮಾಡುವುದು ಇದರ ಮುಖ್ಯ ನೆಲೆಯಾಗಿತ್ತು. ಪವಿತ್ರ-ಅಪವಿತ್ರಗಳೆಂಬ ತರತಮರಹಿತವಾಗಿರುವ ಜಾತ್ಯತೀತ ನಿಲುವನ್ನು ಜನರಲ್ಲಿ ಜೀವಂತವಾಗಿಡುವುದು ಪರಂಪರೆಯ ಆಶಯವಾಗಿದೆ. ಸಂಗಮನನ್ನು-ಮಹಮ್ಮದ್, ಚಂದಾ ಹುಸೇನನ್ನು-ಅಲ್ಲಮ ಹಾಗೂ ಕೊಡೆಕಲ್ ಬಸವಣ್ಣನನ್ನು ದೇವವಾಣಿ ಎಂದು, ಜನರಿಗೆ ಬಯಾನ್ ಕೊಡುವವನು ಎಂದು ಕಲ್ಪಿಸಿಕೊಂಡಿದ್ದು, ಕಾಲಜ್ಞಾನಗಳ ಚರಿತ್ರೆಯಲ್ಲಿ ಸರ್ವಸಾಮಾನ್ಯವಾಗಿದೆ. ಈ ವ್ಯಾಪಕವಾದ ಹರವನ್ನು ಪಡೆದುಕೊಂಡು ಜನರ ಮನೋಸ್ವಾಸ್ಥಗಳನ್ನು, ನರದೌರ್ಬಲ್ಯಗಳನ್ನು ಗುಣಪಡಿಸಲು ನಿಸರ್ಗ ಬೆಟ್ಟ ಪ್ರದೇಶಗಳಲ್ಲಿ ಸುಶ್ರಾಲಯ ಕೇಂದ್ರದಂತೆ ದೇಶಿಯ ವೈದ್ಯ ಪರಂಪರೆಯನ್ನು ಕಾರ್ಯನಿರ್ವಹಿಸಿದ ಸಂಗತಿಯಾಗಿದೆ. ಇದೊಂದು ಅರ್ಥದಲ್ಲಿ 'ಅಮರಕಲ್ಯಾಣ'ದ ಹೆಸರು ಸಾರ್ಥಕವಾಗಿದೆ.

ಈ ಅಮರಕಲ್ಯಾಣದ ಪರಂಪರೆ ಕುರಿತು ಜನ ಸಾಮಾನ್ಯರ ಬಾಯಿಯಲ್ಲಿ ಕಥೆಗಳ ರೂಪದಲ್ಲಿ ಬರುವಂತೆ, ಗುರುಗುಂಟಾ ಬಸವೇಶ್ವರ ಚರಿತ್ರೆ ಮತ್ತು ನಂದಿಯಾಗಮಲೀಲೆ ಕಾವ್ಯಗಳಿಂದ ತಿಳಿದು ಬರುತ್ತದೆ. ತಿಪ್ಪಣ್ಣಯ್ಯನು ಬಾಲಕ ಗುಂಡ ಬಸವಣ್ಣನಿಗೆ:

Scanned with CamScanner

ಕೇಳು ನೀ ಬಸವಣ್ಣ ಹೇಳುವ ಮಾತನು
ದಾಳಲೋಚನ ಭಕ್ತನೊಬ್ಬ
ಪಳಿಯ ಸಗರದ ಹೊರಗೆ ಮಠಕಟ್ಟಿ ತಾ
ಇಳೆಯಾಳ ಅಮರಕಲ್ಯಾಣನೆನಿಸಿ

ಎಂದು ತಿಳಿಸುತ್ತಾನೆ. ಇದರಲ್ಲಿ ಬರುವ ಪಳಿಯ ಸಗರವೆಂದರೆ 'ಹಳಿಸಗರ' ಎಂದರ್ಥ. ಇದು ಶಹಾಪುರಕ್ಕೆ ಹತ್ತಿಕೊಂಡಿರುವ ಗ್ರಾಮ ಆಗಿದೆ. ಈ ಊರಿನ ಹೊರಗೆ ಮಠಕಟ್ಟಿ ಅಮರಕಲ್ಯಾಣ ಬೆಳೆಸಿದನೆಂದು ತಿಳಿಸಿದ್ದನ್ನು ನೋಡಿದರೆ ಆತ ಡಿಗ್ಗಿ ಸಂಗಮನಾಥನು ಮುಂದುವರಿಸಿಕೊಂಡು ಹೋಗಿದ್ದು ತಿಳಿಯುತ್ತದೆ.

ಕೊಡೇಕಲ್ ಪರಂಪರೆಯನ್ನು ಅಮರಕಲ್ಯಾಣ ಎಂದು ಈಗಾಗಲೇ ಡಾ.ಬಸವಲಿಂಗಪ್ಪ ಸೊಪ್ಪಿಮಠರು 'ಕೊಡೆಕಲ್ ಬಸವಣ್ಣ: ಒಂದು ಅಧ್ಯಯನ" ಪ್ರಬಂಧವಲ್ಲಿ ಮತ್ತು ಡಾ. ಶಿವಾನಂದ ವಿರಕ್ತಮಠ ಅವರ 'ಅಮರಕಲ್ಯಾಣ' ಕೃತಿಯಲ್ಲಿ ಕೊಡೇಕಲ್ಲು, ಕಡಕಲ್ಯಾಣ, ಕಡಿಯಕಲ್ಯಾಣ ಎಂದು ಕರೆಸಿಕೊಂಡಿದ್ದು ಪೌರಾಣಿಕವಾಗಿದೆ, ಆದೇ ರೀತಿ ಅನುಪಮ ವೆಂ. ಆದಾಪೂರ ಅವರು 'ಅಮರಕಲ್ಯಾಣ: ಸಾಂಸ್ಕೃತಿಕ ಅಧ್ಯಯನ' ಸಂಪ್ರಬಂಧದಲ್ಲಿ ಡಿಗ್ಗಿ ಸಂಗಮನಾಥನ ಚರಿತ್ರೆಯೊಂದಿಗೆ 'ಅಮರಕಲ್ಯಾಣ' ಸ್ಥಳವನ್ನು ಗುರುತಿಸಿದ್ದಾರೆ. ಆದರೆ ಅಮರಕಲ್ಯಾಣವನ್ನು ಸ್ಥಾಪಿಸಿದವನು ಡಿಗ್ಗಿ ಸಂಗಮನಾಥನಲ್ಲ. ಇಲ್ಲಿಯ ಜನರ ಮೌಖಿಕ ಚರಿತ್ರೆಯಲ್ಲಿ ಡಕ್ಕಲಿಗ ಕಂಚಿಯ್ಯನು ಪ್ರಮುಖನಾಗುತ್ತಾನೆ. ನಂತರ ಪರಪ್ಪಯ್ಯನು ಅವಧೂತನಾಗಿ ಪರಮಾನಂದರು ಎಂದು ನಾಮಕರಣಗೊಂಡು, ಆತನ ಶಿಷ್ಯನಾಗಿ ಮುಂದುವರೆಯುತ್ತಾನೆ. ಈತನ ಶಿಷ್ಯ ಡಿಗ್ಗಿ ಸಂಗಮನಾಥನು ಆರೂಢನಾಗಿ ಈ ಪರಂಪರೆಯನ್ನು ಪ್ರಚಾರಗೊಳಿಸಿದನು. ಚಂದಾಹುಸೇನಿ ಪಾದರಲಿಂಗನವರು ಕುಳಗೇರಿಯಲ್ಲಿ ಈ ಪರಂಪರೆಯನ್ನು ಮುಂದುವರೆಸಿದ್ದು ಕೊಡೆಕಲ್ ಬಸವಣ್ಣನವರು, ತಿಪ್ಪಣ್ಣಪ್ಪ ಹಾಗೂ ಬಸವಣ್ಣನವರು ತಿಳಿದು ಬರುತ್ತದೆ.

ಶಹಾಪುರ ಪೇಟೆಯಲ್ಲಿ ಇರುವ ಈ ಅಮರಕಲ್ಯಾಣ ಪರಿಸರದಲ್ಲಿ ಹಲವಾರು ದೇವಾಲಯಗಳು ಹಾಗೂ ಸ್ಮಾರಕಗಳು ಕಂಡು ಬರುತ್ತವೆ. ಇವು ಜನಸಾಮಾನ್ಯರ ನಂಬಿಕೆ ಆಚರಣೆಗಳಿಂದ ಹುಟ್ಟಿಕೊಂಡಿವೆ. ಹಾಗೆ ಈ ಅಮರಕಲ್ಯಾಣವು ಸಣ್ಣದೊಂದು ಗುಡಿ ಸ್ವರೂಪವಾಗಿ ನಿರ್ಮಿಸಿಕೊಂಡಿದ್ದು, ಸರಿಸುಮಾರು ೧೯೮೦ರಲ್ಲಿ ಇರಬಹುದು. ಇದನ್ನು ಕಟ್ಟಿಸಿದವನು ವಿರಪಾಪುರದ ಅಂಬ್ರಣ್ಣ ಹಾಗೂ ರಸ್ತಾಪುರದ ತಿಪ್ಪಣ್ಣಪ್ಪ ಅವರು ನಿರ್ಮಿಸಿದರೆಂದು ತಿಳಿದುಬರುತ್ತದೆ.

ಈ ಪರಂಪರೆಯನ್ನು ದೈವಿ ಸ್ವರೂಪತೆಯಲ್ಲಿ ಕಂಡು ಇಲ್ಲಿಯ ಸುತ್ತಮುತ್ತಲಿನ ಊರುಗಳ ಜನಸಮುದಾಯಗಳು ಈ ಸಾಂಕೇತಿಕ ಹೆಸರಿನೊಂದಿಗೆ ಅಂಬ್ರಪ್ಪ, ಅಂಬ್ರಪ್ಪ, ಅಂಬ್ರಕ್ಕ ಇತ್ಯಾದಿ ಹೆಸರುಗಳಿಂದ ಕರೆದುಕೊಳ್ಳುತ್ತಾರೆ. ಅದರಲ್ಲೂ ವಿಶೇಷವಾಗಿ ಮುಸ್ಲಿಂ ಧರ್ಮದ 'ಪಿಂಜಾರ' ಜಾತಿಯವರಾದ 'ಅಲಿ'ಯನ್ನು ಮುಂದೆ ಸೇರಿಸಿಕೊಂಡು 'ಅಮೃತ ಅಲಿ' ಎಂದು ನಾಮಕರಣ ಮಾಡಿಕೊಂಡು

ಪರಂಪರೆ ಮುಂದುವರೆಸಿದ್ದು ಕಂಡು ಬರುತ್ತದೆ. ಇದರ ಸೇವೆ ಅಥವಾ ಪೂಜಾರಿಯೂ ಇಂದಿಗೂ ರಸ್ತಾಪುರದ ಅಸ್ಪೃಶ್ಯ ಸಮುದಾಯಕ್ಕೆ ಸೇರಿದ ವ್ಯಕ್ತಿ ಎಂಬುದು ತಿಳಿದುಬರುತ್ತದೆ.

೨. ಸಗರ ಹಜರತ್ ಸೂಫಿ ಸರ್ಮಸ್ಥ:

ಸಗರ ಗ್ರಾಮವು ಶಹಾಪುರ ನಗರದಿಂದ ನೈರುತ್ಯಕ್ಕೆ ೨೨ ಕಿ.ಮೀ. ದೂರದಲ್ಲಿ ಬರುವ ಪ್ರಮುಖ ಕಂದಾಯ ವಲಯವಾಗಿದೆ. ಇದು ತಾಲೂಕಿನ ದೊಡ್ಡ ಹೋಬಳಿಯು ಹೌದು. ಈ ಗ್ರಾಮಕ್ಕೆ ಮೊದಲು 'ನಸ್ರತ್‌ಬಾದ್' ಎಂದು ಕರೆಯುತ್ತಿದ್ದರು. ಈ ಗ್ರಾಮದ ಉತ್ತರ ದಿಕ್ಕಿನಲ್ಲಿ ೨ ಕಿ.ಮೀ. ದೂರದಲ್ಲಿ ದರ್ಗಾವಿದೆ. ಈ ದರ್ಗಾ ಸ್ಥಳೀಯವಾಗಿ ಪ್ರಾಮುಖ್ಯತೆ ಪಡೆದುಕೊಂಡಿದೆ. ಈ ದರ್ಗಾದಲ್ಲಿ ಇದ್ದ ವ್ಯಕ್ತಿ ಸ್ಥಳೀಯವಾಗಿ ಪ್ರಸಿದ್ಧಿಯನ್ನು ಪಡೆದುಕೊಂಡ ಸೂಫಿ ಸರ್ಮಸ್ಥರು ಒಬ್ಬರು. ಇವರು ಭಾರತಕ್ಕೆ ಆಗಮಿಸಿದ ಸೂಫಿಗಳಲ್ಲಿ ಎರಡನೆಯವರು. ಆದರೆ ಕರ್ನಾಟಕಕ್ಕೆ ಅದರಲ್ಲೂ ದಖ್ಖನಿಗೆ ಬಂದಿರುವ ಸೂಫಿಗಳಲ್ಲಿ ಇವರೇ ಮೊದಲಿಗರು. ಈತನು ೫೯೯ ಹಿಜರಿಯಲ್ಲಿ ಜನಿಸಿದನು. ಇವನು 'ಸಾಮ್ರಾ' ಪ್ರಾಂತ್ಯದ ರಾಜವಂಶಸ್ಥರಾಗಿದ್ದು ಹಾಗೂ ಬಲಪ್ ಪ್ರಾಂತ್ಯದ ರಾಜಕುಮಾರಿಯನ್ನು ವಿವಾಹವಾಗಿದ್ದನೆಂದು ತಿಳಿದುಬರುತ್ತದೆ. ನಂತರ ಸೂಫಿ ಆಧ್ಯಾತ್ಮಿಕತೆಯ ಪ್ರಭಾವಕ್ಕೆ ಒಳಗಾಗಿ ದೆಹಲಿಯ ಸೂಫಿ ಸರ್ಮಸ್ಥ ಹಸದದ್ದುಲ್ ಹೌಲಿಯ (ಕಬರತ್ ಬಲಾ–ಎ–ಸಾನಿಯಾ) ಎಂದು ನಾಮಕರಣಗೊಳ್ಳುತ್ತಾರೆ. 'ಸರಮಸ್ತ' ಅಂದರೆ 'ದೈವೀ ಪ್ರಮಸ್ತ' ಎಂಬುದು ಇದರರ್ಥ. ಹಾಗೂ ಸೂಫಿಯ ಸಂಕೇತವಾಗಿದೆಂದು ಹೇಳಬಹುದು.

ನಂತರ ಉತ್ತರಭಾರತದ ಹಲವಾರು ಕಡೆಗಳಲ್ಲಿ ಸಂಚರಿಸಿ ಸುಮಾರು ೧೬೦೦ ಪಲ್ಲಕ್ಕಿಗಳಲ್ಲಿ ಇವರು ತಮ್ಮ ಅನುಯಾಯಿಗಳ ಜೊತೆ ನಸ್ರತ್‌ದಾದ್ ಅಥವಾ ಸಗರದಲ್ಲಿ ಬಂದು ನೆಲೆಸಿದರು. ತಜರಿತಾ (ಸಂತ ಚಾರಿತ್ರ)ಗಳು ವಿವರಿಸುವಂತೆ ಸೂಫಿ ಹೆಸರುಳ್ಳ ಯೋಧರು ಬಂದಿರುವುದನ್ನು ಈ ಕೃತಿ ವಿವರಿಸುತ್ತದೆ. ಇಲ್ಲಿ ಅವರು ಜಿಹಾದ್ (ಧರ್ಮಯುದ್ಧ) ಎಂದು ತಿಳಿದು ದೊರೆ ಮತ್ತು ಧರ್ಮಕ್ಕಾಗಿ ಯುದ್ಧದಲ್ಲಿ ಪಾಲ್ಗೊಂಡು ಸಾಮ್ರಾಜ್ಯ ವಿಸ್ತರಿಸಿಕೊಡಲು ಬಂದ ಸೂಫಿಗಳಲ್ಲಿ ಈ ಸೂಫಿ ಸರ್ಮಸ್ಥ ಕೂಡ ಒಬ್ಬರು. ಇಂತಹ ಸೂಫಿಗಳನ್ನು ಯುದ್ಧರೂಪಿ ಸೂಫಿಗಳು ಎಂದು ಕರೆಯುತ್ತಾರೆ. ಇದರಲ್ಲಿ ಸೂಫಿ ಸರ್ಮಸ್ಥ ದೀರ್ ಖಿಂಡಾಯಿಕ್ ಆಗಮಿಸಿದ ಯುದ್ಧ ಸೂಫಿಗಳಲ್ಲಿ ಮೊದಲಿಗರೆಂದು ತಿಳಿಸುತ್ತದೆ.

ಇಂತಹ ಯುದ್ಧ ರೂಪಿ ಸೂಫಿಗೆ ನಾಲ್ಕು ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳು ಇರುವುದು ತಿಳಿದುಬರುತ್ತದೆ.

೧) ಶೇಖ್ ಫರಿದುದ್ದಿನ್ ಸುಲ್ತಾನ್ ಸರ್ಮಸ್ಥ (ಅಯೋಧ್ಯ)
೨) ಶೇಕ್ ನಿಜಾಮುದ್ದಿನ್ ಸರ್ಮಸ್ಥ (ಅಯೋಧ್ಯ)
೩) ಶೇಕ್ ಶಹಾಬುದ್ದನ್ ಸರ್ಮಸ್ಥ (ಜಾಲಿಹಾಳ, ಕಲಬುರಗಿ)
೪) ಮನ್ನಾವರ ಬಾದಷಾ ಸರ್ಮಸ್ಥ (ಸಗರ)

Scanned with CamScanner

ಇವು ಆತನಿಗೆ ಗಂಡು ಮಕ್ಕಳಾದರೆ :

೧) ಮಹಬೂಬಿ ಉರ್ಫ ತಿರಕಸಬಿ

೨) ಬೀಬಿ ರಾಬಿಯಾ

೩) ಬೀಬಿ ನಿಜಾಮ್ ಕಾತುಲ್

ಎಂಬ ಮೂವರು ಹೆಣ್ಣು ಮಕ್ಕಳುಗಳು ಆತನಿಗೆ ಇರುವುದಾಗಿ ತಿಳಿದು ಬರುತ್ತವೆ. ಈತನ ಮೊದಲ ಮಗಳ ಮಗಳನ್ನು ಸಂತ ಸೂಫಿ ಚಂದಾಹುಸೇನಿಯೊಂದಿಗೆ ವಿವಾಹ ಮಾಡಿಕೊಡುತ್ತಾರೆ. ಅಂದಿನಿಂದ ಸಗರ-ಗೋಗಿಯ ನಡುವೆ ಸಂಬಂಧಗಳು ಏರ್ಪಟ್ಟವು.

ಇವು ೨ನೇ ವಿಲಿಫನ್ ಪೀಳಿಗೆಯವರಾಗಿದ್ದು, ೧೬ನೇ ವಾಸ್ತವ ಆಗಿರುತ್ತಾರೆ. (ಉಮರ್ ಫಾರೂಖ್) ಎಂದು ತಿಳಿಯಬರುತ್ತದೆ. ಹಾಗೇ ತಮ್ಮ ಅನುಯಾಯಿಗಳ ಜೊತೆ ಸಗರದಲ್ಲಿ ನೆಲೆಸಿ ಹಿಜರಿ ಶಕೆ ೬೮೦ ರಲ್ಲಿ ನಿಧನ ಹೊಂದಿದ ಇವರು ಹಾಗೂ ಇವರ ಅನುಯಾಯಿಗಳ ಗೋರಿಗಳು ಸಗರನಲ್ಲಿ ಸುಮಾರು ೨-೩ ಕಿ.ಮೀ. ವ್ಯಾಪ್ತಿಯಲ್ಲಿ ಹಬ್ಬಿರುವುದು ಕಂಡು ಬರುತ್ತವೆ. ಇವರು ಕವಿ-ಲೇಖಕರಾಗದೇ ಇದ್ದರೂ ಸಗರನಾಡಿಗೆ ಬಂದು ನೆಲೆಸಿದ ಪ್ರಥಮ ಸೂಫಿಯಾಗಿದ್ದ. ಈ ಈ ಪರಿಸರದಲ್ಲಿ ಇವರು ಐತಿಹಾಸಿಕ ಹಾಗೂ ಆಧ್ಯಾತ್ಮಿಕವಾಗಿ ಮಹತ್ವ ಪಡೆದವರಾಗಿದ್ದಾರೆ. ಇಲ್ಲಿ ಚಾರ ರಬ್ಬಿಹುಸ್ ಸಾನಿ ಎಂದು ಉರುಷ್ ಜರುಗತ್ತದೆ. ಇವರ ಎಲ್ಲಾ ಕಾರ್ಯಗಳನ್ನು ಸಜ್ಜಾದ ತಬರಾಜ ಸೂಫಿ ಸರ್ಮಸ್ಥರು ನೋಡಿಕೊಳ್ಳುತ್ತಾರೆ.

ಇಲ್ಲಿಯ ಜನರು ತಮ್ಮ ದೈವಸ್ವರೂಪಿಯಾಗಿ ನಿರ್ಮಿಸಿಕೊಂಡು ಹಿಂದೂ-ಮುಸಲ್ಮಾನರು ಎನ್ನುವ ಬೇಧ-ಭಾವ ಇಲ್ಲದೆ ನೈವೇದ್ಯ ಹರಕೆಯನ್ನು ತೀರಿಸಿಕೊಳ್ಳುತ್ತಿರುವುದು ಇವತ್ತಿಗೂ ಕಂಡು ಬರುತ್ತದೆ. ಈತನ ಹೆಸರನ್ನೆ ತಮ್ಮ ಮಕ್ಕಳಿಗೆ ಇಡುವ ವಾಡಿಕೆಯೂ ಇದೆ. ಸೋಪಣ್ಣ, ಸೂಫೀಸಾಬ, ಸೋಪವ್ವ ಸೋಫಿಯಾ ಇತ್ಯಾದಿ ಹೆಸರುಗಳಿಂದ ಕರೆದುಕೊಂಡು ದಿನನಿತ್ಯ ಆತನನ್ನು ಪೂಜಿಸುವುದು ಕಂಡುಬರುತ್ತದೆ. ಇದೊಂದು ಸಾಮರಸ್ಯದ ಹಾದಿಯನ್ನು ಕಟ್ಟಿಕೊಂಡಂತೆ ಕಾಣುತ್ತದೆ.

೩. ಗೋಗಿ ಸೂಫಿ ಚಂದಹುಸೇನಿ:

ಶಹಾಪುರ ತಾಲೂಕಿನ ಸೂಫಿಗಳಲ್ಲಿ ಚಂದಾಹುಸೇನ ಒಬ್ಬರು. ಇದು ತಾಲೂಕ ಕೇಂದ್ರದಿಂದ ಪಶ್ಚಿಮಕ್ಕೆ ೧೧ ಕಿ.ಮೀ. ದೂರದಲ್ಲಿ ಬರುವ ಗೋಗಿಯ ಗ್ರಾಮದ ಮಧ್ಯದಲ್ಲಿ ಈತನ ಸಮಾಧಿ ಕಂಡುಬರುತ್ತದೆ. ಈ ಗ್ರಾಮವು ಕಂದಾಯ ಗ್ರಾಮವಾಗಿದ್ದು, ಪ್ರಮುಖ ವಾಣಿಜ್ಯ ಕೇಂದ್ರವಾಗಿದೆ. ಈ ಸೂಫಿಯು ಕಲಬುರಗಿ ಜಿಲ್ಲೆಯ ಜೀವರಗಿ ತಾಲೂಕಿನ ಭೀಮಾನದಿ ತೀರ ಪ್ರದೇಶದ ರದ್ದೇವಾಡಿ ಗ್ರಾಮದಲ್ಲಿ ೭೬೪ ಹಿಜರಿ ಅಂದರೆ ಕ್ರಿಶ. ೧೪೧೭ ರಲ್ಲಿ ಗ್ರಾಮದ ಮಸೀದಿಯ ಹತ್ತಿರ ಒಂದು ಓಣಿಯಲ್ಲಿ ಮುಂಜಾನೆಯ 'ನಮಾಜ್ ಹಜಾನ್' ಸಮಯದಲ್ಲಿ ಸೈಯದ್ ಜಹಾಸಿನ್ ಹುಸೇನ್ ಮತ್ತು ಆಸ್ಮತ್ ಪನಾಬಿಬ ಪಿರ್ಜೀಶಾ ದಂಪತಿಗಳ ಮಗನಾಗಿ ಜನಿಸುತ್ತಾರೆ. ಈ ಸೂಫಿ ಹುಟ್ಟುವ ಸಂದರ್ಭದಲ್ಲಿ ಲಂಗೋಟಿಯನ್ನು ಧರಿಸಿಕೊಂಡು ತಲೆಯ ಮೇಲೆ ಕಿರೀಟವನ್ನು ಇಟ್ಟಕೊಂಡೆ ಜನಿಸಿದ ಎನ್ನುವ ಮಾತಿದೆ. ಇದನ್ನು ಕಂಡು 'ವಿರಿಸ್ತರು' ತಮ್ಮ ಲೋಕದಲ್ಲಿ ಖುಷಿಯನ್ನು ಹಂಚಿಕೊಂಡು ಆಚರಣೆ ಮಾಡಿಕೊಂಡರೆಂದು ಕಥೆಯಿದೆ.

"ಒಂದು ದಿನ ಬಹಮನಿ ಸುಲ್ತಾನ ರಾಜನಿಗೆ ಆಗೋಚರ ಶರೀರವಾಣಿಯೊಂದು ನಿನ್ನ ನಾಡಿನಲ್ಲಿ ಒಬ್ಬ ಮಹಾನ್ ಸಂತನು ಹುಟ್ಟ ಬರುತ್ತಾನೆ. ಆಗ ನಿಮ್ಮ ರಾಜ್ಯವು ಸುಖ-ಶಾಂತಿಯಿಂದ ಕೂಡಿ ಏಳಿಗೆಯಾಗುತ್ತದೆ ಎಂದು ಹೇಳಿತ್ತು. ಕೂಡಲೇ ಆ ರಾಜನು ತನ್ನ ಸೈನಿಕರನ್ನು ಮಗುವಿನ ಹುಡುಕಾಟಕ್ಕೆ ಕೊಟ್ಟು ಕಳುಹಿಸಿದ್ದನು. ಬೀಡು ಬಿಟ್ಟರು. ಒಮ್ಮೆ ಇದ್ದಕ್ಕಿದಂತೆ ಹಾಗೆ ಬಿರುಗಾಳಿ ಶುರುವಾಗಿ ಬಿಡಾರಗಳು ದೂಳಿಪಟವಾಗಿ ದೀಪಗಳು ನಂದಿಹೋದವು. ಆದರೆ ಸಂತನ ತಂದೆಯ ಬಿಡಾರ ಮಾತ್ರ ಉಳಿದು ಅದರಲ್ಲಿನ ದೀಪ ಹಾಗೆ ಉರಿಯುತ್ತಿತ್ತು. ಆತನ ತಂದೆ ಹಾಗೇ ಕುಳಿತುಕೊಂಡು ಜಪಮಣಿಯನ್ನು ಎಣಿಸಿಕೊಳ್ಳುತ್ತಾ ಕುಳಿತ್ತಿದ್ದ. ಇದನ್ನು ಕಂಡು ಸೈನಿಕರು ರಾಜನಿಗೆ ಹೋಗಿ ಸುದ್ದಿ ತಿಳಿಸುತ್ತಾರೆ, ಇದನ್ನು ಕೇಳಿದ ರಾಜನು ಇದೆ ಪವಾಡ ಪುರುಷನ ಮನೆಯೆಂದು ಅಲ್ಲಿಗೆ ಬರುತ್ತಾನೆ. ಇನ್ನೂ ರಾಜರು ಬರುವ ಸುದ್ದಿ ತಿಳಿದು ತಂದೆ ತಾಯಿಗಳು ಅಲ್ಲಿಂದ ದೂರ ಹೋಗಲು ನಿರ್ಧರಿಸಿದರು. ಆಗ ಭೀಮಾನದಿಯು ತುಂಬಿ ಹರಿಯುತ್ತಿತ್ತು ಅದನ್ನು ದಾಟುವುದು ಹೇಗೆ ಎಂಬ ಚಿಂತಿಯಲ್ಲಿದ್ದಾಗ ಆಕಾಶದಿಂದ ಅಶರೀರವಾಣಿಯೊಂದು ಕೇಳಿ ಬಂತು. ಅದು ಹೇಳಿದಂತೆ ಜಾ-ನಜಾಮ್ (ಬಿಸ್ತಾರ)ವನ್ನು ನದಿಯ ಮೇಲೆ ಹಾಸಿ ಒಂದು ಮೂಲೆಯಲ್ಲಿ ತಂದೆ, ಇನ್ನೊಂದು ಮೂಲೆಯಲ್ಲಿ ತಾಯಿ ಹಾಗೂ ಮತ್ತೊಂದು ಮೂಲೆಯಲ್ಲಿ ಚಿಕ್ಕಪ್ಪ ಹೀಗೆ ಮೂವರು ಕುಳಿತುಕೊಂಡು ಹೋಗುತ್ತಿರುತ್ತಾರೆ, ಆಗ ಇನ್ನೊಂದು ಮೂಲೆಯೂ ಮುಳುಗಲು ಪ್ರಾರಂಭಿಸಿತು. ಇದನ್ನು ಕಂಡ ಚಂದಾಹುಸೇನನು ತನ್ನ ತಾಯಿಯ ಉದರದೊಳಗಿದ್ದ ತಾಯಿಗೆ ಹೆದರದಿರು, ಆ ತುದಿಗೆ ನಾನು ಕೂಡತ್ತೇನೆಂದು ಭರವಸೆ ಮಾತನ್ನು ನೀಡಿ, ಹೀಗೆ ತುಂಬಿದ ನದಿಯಲ್ಲಿ ತೇಲುತ, ರದ್ದೇವಾಡಗಿ ಗ್ರಾಮವನ್ನು ತಲುಪಿದರು. ನಂತರ ಅದೇ ಗ್ರಾಮದಲ್ಲಿ ಬಟ್ಟೆ ಉಟ್ಟುಕೊಂಡೆ ಜನಿಸಿದನು. ಈತನಿಗೆ ತಂದೆ ತಾಯಿಗಳು 'ಜಲಾಲ್ ಹಮ್ಮದಿ ಹುಸೇನ್' ಎಂದು ನಾಮಕರಣ ಮಾಡಿದರು.

ಆತನು ಜನಿಸುವ ಸಮಯಕ್ಕೆ ದೇವಲೋಕದಿಂದ ತೊಟ್ಟಿಲೊಂದು ತೂಗುತ್ತಾ ಭೂಮಿಗೆ ಬಂದಿಳಿಯಿತು. ಇದನ್ನು ಕಂಡ ತಂದೆ ತಾಯಿಗಳು ಗಾಬರಿಗೊಂಡರು. ನಂತರ ಆ ತೊಟ್ಟಿಲೊಳಗೆ ಮಗುವನ್ನು ಹಾಕಿದರು. ಆಗ ತೊಟ್ಟಿಲು ಗಾಳಿಯಿಂದ ಆಕಾಶ ತುಂಬೆಲ್ಲ ಹಾರಾಡಿಕೊಂಡು ಮುಂದೆ ಹೋಗುತ್ತಿತ್ತು. ಇದರ ಹಿಂದೆ ತಂದೆ ತಾಯಿಗಳು, ಬೆನ್ನಟ್ಟಿಕೊಂಡು ಹೋಗುತ್ತಿದ್ದರು. ಮುಂದೆ ಆ ತೊಟ್ಟಿಲು ಒಂದು ಸ್ಥಳದಲ್ಲಿ ಗಿಡಕ್ಕೆ ಸಿಕ್ಕು ತೂಗಿಗೊಂಡು ನಿಂತಿತ್ತು. ಅದು ಮುಂದೆ 'ಗಂವಾರ' ಎಂಬ ಊರಾಗಿ ಇಂದು ಬೆಳೆದಿದೆ. 'ಗಂವಾರ' ಅಂದರೆ ಉರ್ದುವಿನಲ್ಲಿ 'ತೊಟ್ಟಿಲು'

Scanned with CamScanner

ಎಂದರ್ಥ. ಮತ್ತೆ ಅಲ್ಲಿಂದ ಮುಂದೆ ಗಾಳಿಯಲ್ಲಿ ಹಾರಾಡಿಕೊಂಡು ಯಾರೂ ಇಲ್ಲದ ಕಡವಿಯಲ್ಲಿ ನಿಡಕಂಟಿಗಳಿಂದ ಕೂಡಿದ ಭಯಾನಕ ಸ್ಥಳಕ್ಕೆ ಬಂದು, ಒಂದು ಮೊನ್ನೆವಾಗ ಕರಿಪಾಲಿ ಗಿಡದಲ್ಲಿ ನೇತಾಡ ಹತ್ತಿತ್ತು. ಅದು ದಿನನಿತ್ಯ ಸುತ್ತಾಡಿ ತಿಮಾಡಿಕೊಂಡು ಮನಃ ತೊಟ್ಟಿಲು ಇದೆ ಜಾಗಕ್ಕೆ ಬಂದು ನೇತಾಡತೊಡಗಾತ್ತಿತ್ತು. ಯಾಕೆಂದರೆ ಇಲ್ಲಿಯ ತಂಪು ನೆಲ ಆತನಿಗೆ ಇಷ್ಟವಾಯಿತು. ಇದೇ ಮುಂದೆ ಆತನು ವಾಸಿಸುವ ಸ್ಥಳವಾಯಿತು. ಇದೆ ಗೋಗಿ ಊರು ಎಂದು ಕೀರ್ತಿ ಬರುತ್ತದೆ.

ಈ ಕಥೆಯೂ ಇಲ್ಲಿಯ ಜನರ ಬಾಯಲ್ಲಿ ರೂಢನಾಮದಂತೆ ಕಂಡುಬರುತ್ತದೆಯೆಂದು ಹೇಳಬಹುದು. ಇದನ್ನು ಸೂಕ್ಷ್ಮತೆಯಿಂದ ನೋಡಿದಾಗ ಇವನೊಬ್ಬ ಪವಾಡ ಪುರುಷ ಹಾಗೂ ದೈವ ಸ್ವರೂಪಿಯಂತೆ ಆತನ ಜನನ ಕುಟುಂಬಿಕರು ಎಂದು ಭಾವಿಸಿಕೊಂಡು ಬಂದಿದ್ದಾರೆಂದು ತಿಳಿದುಬರುತ್ತದೆ. ಹಾಗೇ ಒಮ್ಮೆಯೂ ತನ್ನ ೧೫ನೇ ವಯಸ್ಸಿನಲ್ಲಿ ಕಲಬುರಗಿಯ ಖಾಜಾ ಬಂದೇ ನವಾಜರನ್ನು ಭೇಟಿಯಾಗಲು ಹೋಗಿದ್ದರು, ಈತನ ಬರುವಿಕೆಯನ್ನು ಕಂಡು ಬಂದೇ ನವಾಜರವರು ಆತ್ಮೀಯವಾಗಿ ಬರಮಾಡಿಕೊಂಡು ತಮ್ಮ ಬಳಿಯಲ್ಲಿಯೇ ಕರೆದುಕೊಂಡರು. ಇವನ್ನು ನೋಡಿದ ಶಿಷ್ಯಂದಿರು ಆಶ್ಚರ್ಯ ಆಗುವುದನ್ನು ಕಂಡ ಪ್ರೇಮ ಸೂಫಿಯೂ ಇವರು ಮಹ್ಮದ ಪೈಗಂಬರನ ಪ್ರತೀಕದಂತೆ ಇದ್ದಾರೆಂದು ವಿವರಿಸಿದ್ದಾರೆ ಮತ್ತು 'ಏಮಝಲ್ ಹಜ್' (ಭೂಮಿಯ ಚಂದ್ರ) ಎಂಬ ಬಿರುದನ್ನು ನೀಡಿದ್ದಾರೆ ಎಂಬುದು ತಿಳಿದುಬರುತ್ತದೆ.

ಈತನ ವಿವಾಹವು ಹಜರತ್ ಬೀಬಿ ಮಗ್ದುಮ್ ಜಹಾರೊಂದಿಗೆ ಆಗುತ್ತದೆ. ಆಕೆಯೂ ಹಜರತ ಸೂಫಿಸರ್ಮಸ್ಥ ಹರೇಮತುಲಾಲೆ–ಕಿ–ನವಾಸಿ (ಮಗಳ ಮಗಳು). ಹಜರತ್ ಶೇಕ್ ಕಾಕುರವರ ಮೊದಲ ಮಗಳು, ಇವರಿಗೆ ನಾಲ್ಕು ಜನ ಗಂಡು ಮಕ್ಕಳಿದ್ದರೆಂದು ತಿಳಿಯುತ್ತದೆ.

೧) ಸೈಯದ್ ಷಾ ನೂರ್ ಆಲಮ್ (ಗೋಗಿ)
೨) ಸೈಯದ್ ಷಾ ಶೇಮ್ಸ್ ಆಲಮ್ (ರಾಯಚೂರ)
೩) ಸೈಯದ್ ಷಾ ಅಬ್ದುಲ್ ರಹಿಮ್ ಹುಸೇನಿ (ಬೀದರ)
೪) ಸೈಯದ್ ಷಾ ಮಸ್ತಾಲ ಹುಸೇನಿ (ಬೀದರ)

ಇವರಲ್ಲಿ ಗೋಗಿಯ ಸೈಯದ್ ಷಾ ನೂರ್ ಆಲಮ್‌ನನ್ನು ಹೊರತುಪಡಿಸಿ ಉಳಿದ ೩ ಜನರು ಸೂಫಿಸಂತರಾಗುತ್ತಾರೆ. ನೂರ್ ಆಲಮ್ ಮಾತ್ರ ತಂದೆಯ ನಂತರ ಉತ್ತರಾಧಿಕಾರತ್ವವನ್ನು ಸ್ವೀಕರಿಸುತ್ತಾರೆ. ಮುಂದೆ ಚಂದಾಹುಸೇನಿಯವರಿಗೆ ವಿಲಾಪತ್ (ಉತ್ತರಾಧಿಕಾರತ್ವ)ವನ್ನು ಹಜರತ್ ಖಾಜಾ ಆರೀಫ್ ಬಿಲ್ಲಾ ಜೀಯಾ–ಹಜರತ್ ಸೈದುದ್ದೀನ್ ಫೀರ್ ಜನ್ನಜಾನಿ–ಹಜರತ್ ಖಾಜಾ ಹಸ್ಸನ್ ಜಹಾಂಗೀರ್ ಸುಮ್ನಾನಿ ಹೀಗೆ ೨೪ ವಿಲಾಪತ್‌ಗಳ ಮೂಲಕ ಸಾಗಿ ಮಹ್ಮದ್ ಪೈಗಂಬರ್‌ಗೆ ಸಮಾನವಾಗಿ ತಲುಪುತ್ತಾರೆ.

ಹಾಗೇ ಯೂಸೂಫ್ ಆದಿಲ್ ಖಾನನು ಚಂದಾಹುಸೇನಿಯ ದರ್ಶನದ ಪೂರ್ವದಲ್ಲಿ ಇವರಿಗೆ ಹೆಚ್ಚಾಗಿ ಅಪಜಯಗಳು ಸಂಭವಿಸುತ್ತಿದ್ದವು. ಇವರ ಆಶೀರ್ವಾದ ಪಡೆದ ನಂತರ ಜಯಗಳು ಲಭಿಸಲು ಪ್ರಾರಂಭಿಸಿದವು. ಇದರಿಂದ ಚಂದಾಹುಸೇನಿಯನ್ನು ಗುರುವನ್ನಾಗಿ ಸ್ವೀಕರಿಸಿ ಅವರಿಗೆ ಸಂಪತ್ತನ್ನು ನೀಡಲು ಮುಂದಾದಾಗ ಖಾನನಿಗೆ ನಿರಾಶೆ ಕಾದಿತ್ತು, ಅದನ್ನು ಸ್ವೀಕರಿಸದೆ ಮರಳಿ ಕಳುಹಿಸಿದರು. ಬಿಜಾಪುರದ ಆದಿಲ್ ಷಾಗಳು ತಮ್ಮ ಮರಣದ ನಂತರ ಗೋಗಿಯಲ್ಲಿ ಮಣ್ಣು ಮಾಡಬೇಕೆಂದು ಕರಾರೊಂದನ್ನು ರಚಿಸಿ ಮಾಡಿಕೊಂಡರು. ಇದರಂತೆ ಷಾ ಕುಟುಂಬದ ಸದಸ್ಯರ ಅಂತಿಮ ಕಾರ್ಯಗಳು ಗೋಗಿಯಲ್ಲಿ ನಡೆದಿವೆ. ಯಾಕೆಂದರೆ ಸಂತನಾದ ಚಂದಾಹುಸೇನಿಯ ಬಳಿಯಲ್ಲಿ ಮಣ್ಣು ಮಾಡುವುದರಿಂದ 'ಜನ್ನತ್' (ಸ್ವರ್ಗ) ಪ್ರಾಪ್ತಿಯಾಗುತ್ತದೆಂಬ ನಂಬಿಕೆಯಿಂದ ಈ ತಿರ್ಮಾನವನ್ನು ಕೈಗೊಳ್ಳುತ್ತಾರೆ. ನಂತರ ಈ ಸೂಫಿಯೂ ಹಿಜರಿ ೮೫೮ (ಕ್ರಿ.ಶ. ೧೪೫೧)ರಲ್ಲಿ ತಮ್ಮ ೬೩ನೇ ವಯಸ್ಸಿನಲ್ಲಿ ಮರಣ ಹೊಂದಿದರು. ಆಗ ಯೂಸೂಫ್ ಆದಿಲ್ ಷಾನ ಕಾಲದಲ್ಲಿ ದರ್ಗಾದ ಕಟ್ಟಡ ಕಾರ್ಯವನ್ನು ಪ್ರಾರಂಭಿಸಿ, ಇಬ್ರಾಹಿಂ ಆದಿಲ್ ಷಾನ ಕಾಲದಲ್ಲಿ ಕಟ್ಟಡ ಕಾರ್ಯವನ್ನು ಪೂರ್ಣಗೊಳಿಸುತ್ತಾರೆ. ಈತನ 'ಹತ ಶಬಾನ್'ರಂದು ಪ್ರತಿ ವರ್ಷ ಉರುಷ ನಡೆಯುತ್ತದೆ. ಇದು ಮೊದಲು ಪ್ರಾರಂಭಿಸಿದ್ದು ಯೂಸೂಫ್ ಆದಿಲ್‌ಷಾನಿಂದ ಹಿಡಿದು ಇಲ್ಲಿಯವರೆಗೂ ನಡೆದುಕೊಂಡು ಬಂದಿದೆ.

ಈ ಉರುಷ್ ನಡೆಯುವ ಮುಂಚೆ ನಗಾರಿ ಬಡಿಯುತ್ತಾರೆ. ೧೧ ದಿನಗಳ ಕಾಲ ಪೂಜೆ ನಡೆಯುತ್ತದೆ. ಆ ಸಮಯದಲ್ಲಿ ಎಲ್ಲರೂ ನಿರಾಹಾರಿಗಳಾಗಿರುತ್ತಾರೆ. ನೀರು ಕುಡಿಯದೆ ರಾತ್ರಿ ಮಾತ್ರ ಊಟ ಮಾಡುವುದು ನಿಯಮ. ಈ ದಿನಗಳಲ್ಲಿ ಪ್ರತಿ ನಿತ್ಯವು ತಲೆ ಸ್ನಾನದ ನಂತರ ಸಕ್ಕರೆ ತೆಗೆದುಕೊಂಡು ದರ್ಗಾಕ್ಕೆ ಹೋಗುತ್ತಾರೆ. ಅಮವಾಸ್ಯೆಯ ನಂತರ ಚಂದ್ರನ ದರ್ಶನವಾದ ೧೧ ದಿನಕ್ಕೆ ಉರುಸು ಪ್ರಾರಂಭವಾಗುತ್ತದೆ. ಇಂದು ನಡೆಯುತ್ತಿರುವ ಉರುಸು ೫೭೪ನೇ ಜಾತ್ರೆ (ಉರುಸು). ಉರುಸಿಗೂ ಮೊದಲು ಗುಡಿಯನ್ನು ಸ್ವಚ್ಛಗೊಳಿಸುತ್ತಾರೆ. ದೀಪಾಲಂಕಾರದಿಂದ ಕಂಗೊಳಿಸುವಂತೆ ಭಕ್ತಾದಿಗಳನ್ನು ಕೈಬೀಸಿ ಕರೆಯುತ್ತದೆ. ಹಾಗೇ ಉರುಸಿನ ಸಮಯದಲ್ಲಿ ಊರಲ್ಲೆಲ್ಲಾ ಭಕ್ತಸಾಗರವೇ ಸೇರಿರುತ್ತದೆ. "ದೇಶದ ಮೂಲೆ ಮೂಲೆಗಳಿಂದ ಅವನ ಭಕ್ತರು ಬಂದು ಇಲ್ಲಿ ತಂಗುತ್ತಾರೆ. ಇಡೀ ರಾತ್ರಿ ಡೊಳ್ಳು ಕುಣಿತ, ಕೋಲಾಟ, ಕುದುರೆ ಮೆರವಣಿಗೆ ಹೀಗೆ ಹಲವಾರು ವಿಶೇಷತೆಯಿಂದ ಮೆರವಣಿಗೆಯನ್ನು ಬೆಳಗ್ಗೆ ಸರಿಯಾಗಿ ಐದು ಗಂಟೆಗೆ ದರಗಾ ತಲುಪುತ್ತದೆ. ನಂತರ 'ಗಂಧಾ' ನೆರೆವೇರುತ್ತದೆ. ಎರಡನೇ ದಿನ ಮುಸಲ್ಮಾನ ಬಳಗದವರು ಹಾಗೂ ಹಿಂದೂಗಳು ಕೂಡಿಕೊಂಡು ನೈವೇದ್ಯವನ್ನು ಸಲ್ಲಿಸುತ್ತಾರೆ. ಮೂರನೆ ದಿನ ದೀಮೋತ್ಸವ ಇರುತ್ತದೆ, ನಾಲ್ಕನೇ ದಿನ ಕಾರ್ಯ ಮುರಿಯುತ್ತಾರೆ."೪

ಅಂದಿನಿಂದ ಇಂದಿಗೂ ದರ್ಗಾವನ್ನು ಚಂದಾಸಾಹೇಬನ ವಂಶಸ್ಥರು ನೋಡಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಈ ದರ್ಗಾದ ಎಲ್ಲ

Scanned with CamScanner

ಕಾರ್ಯಕ್ರಮಗಳನ್ನು ಸಂಸ್ಥಾನಿಕರಾದ (ವಾರಸ್ದಾರರು) ಸೈಯದ್ ಮಹ್ಮದ್ ಮಹ್ಮದೂಲ್ ಹುಸೇನಿ ಬಿನ್ ಸೈಯದ್ ಷಾ ಶಮ್ಸ್-ಎ-ಆಲಮ್ ಹುಸೇನಿ, ಸದ್ಯಾದ ನಪಿಂ ಬುಜುರು ಬರ್ಗಾಯ್ ಜಲಾಲಿಯ ಗೋಗಿ ಷರೀಫ್ ಎಂಬ ೨೦ನೇ ಪೀಠಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

೪) ನಾಗನಟಿಗಿ ಪರಮಾನಂದ ಪ್ರಭು :

ನಾಗನಟಿಗಿಯೂ ಶಹಾಪುರ ನಗರದಿಂದ ೧೫ ಕಿ.ಮೀ. ದೂರದಲ್ಲಿ ಕಂಡುಬರುವ ಒಂದು ಹಳ್ಳಿ. ಈ ಗ್ರಾಮದಲ್ಲಿ ಮೊದಲು ಶಿವದೇವಾಲಯವಿತ್ತು ಅನ್ನುವುದಕ್ಕೆ ಇಲ್ಲಿ ದೊರಕಿರುವ ಗಜಲಕ್ಷ್ಮೀ ಶಿಲ್ಪವೇ ಕಾರಣ. ಇಲ್ಲಿಯ ಜನರ ನಂಬಿಕೆಯಂತೆ ಈ ಊರು ನಾಗದೇವತೆಗಳಿಂದ ಕೂಡಿತ್ತು. ಆ ಕಾರಣಕ್ಕೆ ಇದಕ್ಕೆ ಮೊದಲು ನಾಗನಹಟ್ಟಿ ಅಂತ ಕರೆಯುತ್ತಿದ್ದರು. ನಂತರ ದಿನಗಳಲ್ಲಿ ಜನರ ಬಾಯಿಂದ ಬಾಯಿಗೆ ನಾಗನಟಗಿ ಎಂದು ರೂಪಾಂತರಗೊಂಡಿತು. ಅಂದಿನಿಂದ ಇಂದಿನವರೆಗೂ ಈ ಊರಿಗೆ ನಾಗನಟಗಿ ಅಂತಲೇ ಕರೆಯುತ್ತಿದ್ದಾರೆಂದು ಈ ಊರಿನ ಹಿರಿಕರು ತಿಳಿಸುತ್ತಾರೆ. ಇಲ್ಲಿಂದ ಪಶ್ಚಿಮ ಅಭಿಮುಖವಾಗಿ ಸುಮಾರು ೩ ಕಿ.ಮೀ. ದೂರದಲ್ಲಿ 'ಪರಮಾನಂದ ಪ್ರಭು ಗುಡಿ' ಬರುತ್ತದೆ. ಇದು ಬಹುಮುಖ್ಯ ಆವಧೂತರ ಸಂಕಲ್ಪದಲ್ಲಿ ಆಚರಣೆಗಳು ನಡೆಯುತ್ತವೆ. ಇವನು ತಮಿಳುನಾಡು ಶಿವಕಂಚಿಯಿಂದ ಬಂದವನೆಂದು ತಿಳಿಯುತ್ತದೆ. ಈತನಿಗೆ ಆತನ ತಂದೆ-ತಾಯಿಗಳು ಮದುವೆ ಮಡಲು ಇಚ್ಚಿಸಿದ್ದಾಗ ಅದನ್ನು ಧಿಕ್ಕರಿಸಿ ಅಲ್ಲಿಂದ ಸಂಚರಿಸಿಕೊಳ್ಳುತ್ತಾ ಆಂಧ್ರಪ್ರದೇಶದ ಕಂಚಿ-ಕಾಮಾಕ್ಷಿ ಕಡೆ ಬರುತ್ತಾನೆ. ನಂತರ ರಾಯಚೂರಿನ ಘೋಣಾರಾಮಪೂರಕ್ಕೆ ಬಂದು ಕೆಲವು ದಿನ ಪವಾಡ ಮಾಡಿ ಅಲ್ಲಿಯೇ ಬದುಕಿ ಮುಂದಿನ ದಿನಗಳನ್ನು ದೋರನಹಳ್ಳಿ, ಸಗರ, ರಸ್ತಾಪೂರ, ಯಲಗೋಡ, ಅರಿಕೇರಿ, ನಾಯ್ಕಲ್, ಹೆದ್ದಾಳ ಹಾಗೂ ನಾಗನಟಗಿ ಹೀಗೆ ಅನೇಕ ಕಡೆ ಸಂಚರಿಸಿಕೊಂಡು ತನ್ನ ಕೊನೆ ಸಮಯವನ್ನು ಸಿಂದಗಿ ಹತ್ತಿರದ ಚಾಂದಕೋಟಿಯಲ್ಲಿ ಐಕ್ಯನಾದ (ಕೊಲೆಯಾದ)ನೆಂದು ಇಲ್ಲಿಯ ಜನರ ನಂಬಿಕೆಯಾಗಿದೆ.

ಈ ಪರಮಾನಂದ ಪ್ರಭುವು ಡಿಗ್ಗಿ ಸಂಗಮನಾಥನ ಗುರು ಹಾಗೂ ಅಮರಕಲ್ಯಾಣ ಸ್ಥಾಪಿಸಿ ನಾಮಕರಣ ಮಾಡಿದ ದಿಗಂಬರ ಸ್ವಾಮಿ ಡಕ್ಕಲಿಗ ಕೆಂಚಮ್ಮನ ಶಿಷ್ಯನೆಂದು ಈ ಭಾಗದಲ್ಲಿ ಭಾವಿಸಿಕೊಂಡು ಜನ ಸಮುದಾಯ ದೈವವಾಗಿ ಪೂಜಿಸುತ್ತಾರೆ. ಆತನ ಹೆಸರಿನ ಮೇಲೆ ದೇವಸ್ಥಾನ, ಜಾತ್ರೆ, ಆಚರಣೆ ಉತ್ಸವಗಳಲ್ಲಿ ಮೂರ್ತರೂಪ ಪಡೆದುಕೊಂಡಿರುವುದನ್ನು ಜಾನಪದ ಆಕರಗಳಿಂದ ಗೊತ್ತಾಗುತ್ತದೆ. ಆದರೆ ಸಾಹಿತ್ಯದ ದೃಷ್ಟಿಯಿಂದ ಈತನ ಯಾವುದೇ ರಚನೆಗಳು ದೊರಕವುದಿಲ್ಲ. ಇವನು ಒಂದು ರೀತಿಯಲ್ಲಿ ಮರುಳಶಂಕರನನ್ನು ಹೋಲುವ ವ್ಯಕ್ತಿತ್ವದಂತೆ ಕಂಡುಬರುತ್ತದೆ. ಕೊಡೆಕಲ್ ಬಸವಣ್ಣ ಮತ್ತು ಮಂಟೆಸ್ವಾಮಿಯವರು ಇವನ ವ್ಯಕ್ತಿತ್ವ ಸಾಧನೆ ಸಿದ್ಧಿಗಳನ್ನು ಉಲ್ಲೇಖಿಸಿದ್ದು ಅವರ ಕೃತಿಗಳಿಂದ ತಿಳಿಯುತ್ತದೆ. ಅದನ್ನು ಬಿಟ್ಟರೆ ಜನಪದರ ಆಚರಣೆಯಲ್ಲಿ ಕೇವಲ ಅಮೂರ್ತಸ್ವರೂಪತೆ ಕಂಡುಬರುತ್ತದೆ ಎಂದು ಹೇಳಬಹುದು. ಈತನ ಹಿಂದೆ ಯಾವಾಗಲೂ ಸಿದ್ದಪ್ಪ

ಇರುತ್ತಿದ್ದನೆಂದು ನಂಬಿಕೆ. ನಂತರ ಹೆಬ್ಬಾಳ ಹಾಗೂ ನಾಗನಟಗಿಯಲ್ಲಿ ನೆಲೆ ನಿಂತಾಗ ಡಿಗ್ಗಿ ಸಂಗಮನಾಥ, ಖಾದರಲಿಂಗ ಹಾಗೂ ಬರಗಾಲಪ್ಪ ಎಂಬ ಮೂವರು ಶಿಷ್ಯರು ಜೊತೆಯಲ್ಲಿದ್ದರೆಂದು ಒಂದು ನಂಬಿಕೆ. ಇವರು ಸಾಹಿತ್ಯ ರಚನೆ ಮಾಡದಿದ್ದರೂ ಪರವಾಗಿಲ್ಲ, ಯಾಕೆಂದರೆ, ಅಮರಕಲ್ಯಾಣದ ಸಂತರ ಪಥ ಆರೂಢ ಸಂಗಮೇಶ್ವರನಿಗೆ ಈತನು ಮಾಡಿರಬಹುದಾದ ಬೋಧೆ, ಸಾಹಿತ್ಯ ತನ್ನ ಕಾಲದ ಸಕಲರಿಗೆ ಬೋಧೆ ನೀಡಿದ ಅಪ್ರತಿಮ ಯೋಗಿ ಅನ್ನುವುದರಲ್ಲಿ ಸಂಶಯವಿಲ್ಲ. ಈತನಲ್ಲಿ ನಂಬಿಕೆಯಿಟ್ಟ ಈ ಊರಿನ ಜನರು ಮಳೆರಾಯನನ್ನು ಧರೆಗೆ ಕರೆಯಿಸಿಕೊಳ್ಳಲು ಡೊಳ್ಳು ಬಾರಿಸಿಕೊಂಡು, ಹಲಗಗಳು ಹಾಕಿಕೊಂಡು ಹಾಗೂ ಕಂಬಳಿ ಧರಿಸಿಕೊಂಡು ಆ ಗುಡಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಪೂಜೆ ಸಲ್ಲಿಸಿದ ನಂತರ ಕಲ್ಲಿನ ಹಾಸುಬಂಡೆಯೇ ತಮ್ಮ ಊಟ ಮಾಡುವ ಗಂಗಾಳವನ್ನಾಗಿ ಮಾಡಿಕೊಂಡು ನುಚ್ಚು ಮತ್ತು ಮಜ್ಜಿಗೆಯನ್ನು ಕಲಿಸಿಕೊಂಡು ಪ್ರಸಾದ ಸ್ವೀಕರಿಸುತ್ತಾರೆ. ಹಾಗೇ ಬಂದರೆ ನಮ್ಮೂರಿಗೆ ಮಳೆ ಆಗುತ್ತದೆಂಬ ನಂಬಿಕೆಯಾಗಿದೆ. ಇಲ್ಲಿ ಎಲ್ಲಾ ಜನ ಸಮುದಾಯದವರು ಕೂಡಿಕೊಂಡು ಪ್ರಸಾದ ಸ್ವೀಕರಿಸುವುದು ವಿಶೇಷವಾಗಿದೆ.

ಶಹಾಪುರ ಪರಿಸರದ ಪ್ರಮುಖ ಸೂಫಿ-ಸಂತರನ್ನು ಹುಡುಕುತ್ತಾ ಹೋದಂತೆ ಅವರ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಶೋಧ ಮಾಡಲು ಮುಂದಾಗಲು ಹಚ್ಚುತ್ತದೆ. ಇಲ್ಲಿಯ ಜನಪದರ ಅಭಿವ್ಯಕ್ತಿಯ ಮೂಲಕ ವಿಷಯವನ್ನು ಗ್ರಹಿಸುತ್ತ ಶೋಧನೆಗೆ ತೊಡಗಿದಾಗ ಹಲವಾರು ಸೂಫಿ ಸಂತರು ನಮಗೆ ಸಿಗಬಹುದು. ಆದರೆ ಲೇಖನಕ್ಕೆ ಸೀಮಿತಗೊಳಿಸುತ್ತಾ ಪ್ರಮುಖರನ್ನು ಮಾತ್ರ ಇಲ್ಲಿ ಪರಿಚಯಿಸುತ್ತಿರುವೆ. ಇಲ್ಲಿ ಕಾಣಿಸಿಕೊಂಡ ಸಾಧಕರು ತಮ್ಮದೇ ಆದ ವೈಶಿಷ್ಟ್ಯಗಳಿಂದಲೇ ಕೀರ್ತಿಯನ್ನು ಪಡೆದವರು. ಇವರು ಜನ ಸಮುದಾಯದವರ ದೃಷ್ಟಿಯಲ್ಲಿ ಸಂತರಾಗಿ ಸೂಫಿಗಳಾಗಿ ಕಂಡು ಬಂದಿದ್ದಾರೆ. ಆಯಾ ಸೂಫಿಗಳ ಸಂತರ ಸಾಂಸ್ಕೃತಿಕ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಇಲ್ಲಿ ನೀಡಲಾಗಿದೆ. ಇವರು ಜನ ಸಮುದಾಯದಲ್ಲಿ ದೈವವಾಗಿ, ಕಂಡು ಬಂದುದರ ಫಲವೇ ಜಾತ್ರೆ, ಉತ್ಸವ, ಆಚರಣೆ, ಹಬ್ಬ ಹರಿದಿನ ನಂಬಿಕೆಗಳ ಇವುಗಳ ಹಿನ್ನೆಲೆಯಲ್ಲಿಯೇ ಸೂಫಿ ಸಂತರನ್ನು ಇಲ್ಲಿ ಪರಿಚಯಿಸಲಾಗಿದೆ.

ಕೊನೆಯ ಟಿಪ್ಪಣಿಗಳು :

೧) ಚರಿತ್ರೆ ಕಥನ – ಹಾ. ಕೆ.ಮೋಹಕೃಷ್ಣ ರೈ, ಪುಟ-೩
೨) ಅಮರಕಲ್ಯಾಣ – ಡಾ.ಶಿವಾನಂದ ವಿರಕ್ತಮಠ, ಪುಟ-೨, ೩
೩) ಗುಂಡ ಬಸವೇಶ್ವರ ಚರಿತ್ರೆ – (ಸಂ), ಡಾ.ಎಂ.ಎಂ. ಕಲಬುರಗಿ, ಸಂಗಪ್ಪಯ್ಯ ಸ್ವಾಮಿ, ಪುಟ-೫೭
೪) ದರಗಾ (ಕಟ್ಟುಗ) – ಬಸವರಾಜ ಕೋಡಗುಂಟಿ, ಪುಟ-೨೫.

Scanned with CamScanner

ತನ್ನ ಸುತ್ತಣ ಜಗತ್ತನ್ನು ವಿಶಿಷ್ಟವಾಗಿ ಗ್ರಹಿಸುವ ಮತ್ತು ತಮ್ಮನ್ನು ಬಹುವಾಗಿ ಕಾಡುವ ಸಂಗತಿಗಳಿಗೆ ಬರವಣಿಗೆಯ ಮೂಲಕ ಹೊಸದೊಂದು ಆಯಾಮವನ್ನು ತಂದು ಕೊಡುವ ಮಹಾದೇವ ಬಸರಕೋಡ ಅವರು ನಮ್ಮ ನಡುವಿನ ಪ್ರಮುಖ ಬರಹಗಾರರಲ್ಲಿ ಒಬ್ಬರು. ಅಂತಯೇ ಲೋಕದ ವಿದ್ಯಮಾನಗಳಿಗೆ ಅಕ್ಷರಗಳ ಮೂಲಕ ಪ್ರತಿಯಾಗುವ ಕಲೆಯನ್ನು ಸ್ಥಾಗೂಡಿಸಿಕೊಂಡಿರುವ ಅವರು ನಮ್ಮ ಬಿಡುಕಿಗೆ ಸಂಬಂಧಿಸಿದ ಬಳ ಮತ್ತು ಹೊರ ಜಗತ್ತನ್ನು ಬರಹ ರೂಪದಲ್ಲಿ ಅಷ್ಟೇ ಪ್ರಾಮಾಣಿಕವಾಗಿ ಮಾರ್ಮಗೊಳಿಸಿರುತ್ತ ಬಂದಿದ್ದಾರೆ. ಹೀಗೆ, ಬದುಕು ಮತ್ತು ಬರಹ ಎರಡನ್ನೂ ದೇರೆ ದೇರೆಯಾಗಿ ಪ್ರತ್ಯೇಕಿಸಿ ನೋಡದೇ ಒಂದೇ ಸರಳರೇಖೆಯಲ್ಲಿ ಮುನ್ನಡೆಸಿಕೊಂಡು ಹೋಗುತ್ತಿರುವ ಮಹಾದೇವ ಅವರು ತನ್ನ ಸಮಕಾಲೀನ ಬರಹಗಾರರು ಕಂಡುಂಡ ಅನುಭವಗಳನ್ನು ಹಲವು ನೆಲೆಗಳಲ್ಲಿ ಪರಾಮರ್ಶಿಸಿ ನೋಡುವ ಗುಣವನ್ನು ಅಳವಡಿಸಿಕೊಂಡಿದ್ದಾರೆ.

ಈಗ ಅದರ ಫಲವೇ ಇದು ಎಂದು ಹೇಳಬಹುದಾದ ಈ (ಸಂವೇದನೆ) ಮಿಮರ್ಶಾ ಸಂಕಲನದಲ್ಲಿ ನಾಡಿನ ಹಿರಿಯ ಕಿರಿಯ ಬರಹಗಾರರ ಕೃತಿಗಳನ್ನು ತಮ್ಮ ಕಡಿತ ಕ್ರಮದ ಪರಿಧಿಯಲ್ಲಿಟ್ಟು ನೋಡುವ ಪ್ರಯತ್ನ ಮಾಡಿದ್ದಾರೆ. ಇಲ್ಲಿನ ಬಹುತೇಕ ಬರಹಗಳನ್ನು ಸಾಧ್ಯಂತವಾಗಿ ಓದಿದಾಗ ಎಂದರೆ ಯಾವುದೇ ಒಂದು ಕೃತಿಯನ್ನು ಮಾರ್ಮ ಒಪ್ಪಿಕೊಂಡಿರುವ ಸಿದ್ಧ ಸೂತ್ರಗಳ ರಚನೆಯಲ್ಲಿಟ್ಟು ನೋಡುವುದಲ್ಲ. ಬದಲಿಗೆ ಆ ಕೃತಿಯ ಇರುವಂತೆಯೇ ಅದರೊಳಗಿನ ಮಿಡಿತಗಳಿಗೆ ಹಲವು ಆಯಾಮಗಳಲ್ಲಿ ಪರಾಮರ್ಶಿಸಿ ನೋಡುವದು! ಅಂದರೆ ಆ ಅಡಿತಗಳಿಗೆ ಬಿಚ್ಚಿಕೆಯನ್ನು ತಂದುಕೊಡುವುದು ಎಂಬುದು ತಿಳುವಳಿಕೆಗೆ ಬರುತ್ತದೆ.

ಇದು ಒಂದು ತೆರದಲ್ಲಿ ಬರಹಗಾರರು ಮತ್ತಷ್ಟು ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುತ್ತದೆ. ತಮ್ಮ ಸಮಕಾಲೀನ ಲೇಖಕರ ಕೃತಿಯನ್ನು ತೂಗಿ ನೋಡುವ ವಿಶೇಷ ದಾರಿಯೊಂದನ್ನು ಕಂಡುಕೊಂಡಿರುವ ಮಹಾದೇವ ಅಭಿನಂದನಾರ್ಹರು.

— ಕಲ್ಲೇಶ ಕುಂಬಾರ
ಹಾರೂಗೇರಿ

ಮಹಾದೇವ ಬಸರಕೋಡ

ಸಂವೇದನೆ



Scanned with CamScanner

ವಿಮರ್ಶಾ ದಾರಿಯಲ್ಲಿ...

ಓದುವವರ, ಬರೆಯುವವರ ಸಂಖ್ಯೆ ಇಂದು ಹೆಚ್ಚಾಗಿರಬಹುದು. ಹಾಗೇ ಕವಿತೆ, ಕತೆಗಳನ್ನು ಬರೆಯುವವರು ಕೂಡಾ. ಅದೇ ವಿಮರ್ಶೆ–ಸಂಶೋಧನೆಯ ಬಗ್ಗೆ ಈ ಮಾತನ್ನು ಹೇಳುವಂತಿಲ್ಲ. ಕಾರಣ "ಹೊಸ ವಿಚಾರಗಳನ್ನು, ಭಾವನೆಗಳನ್ನು ಸ್ಥಳಂತ ಅಂತರ್ದೃಷ್ಟಿಗಳನ್ನು, ಸ್ಪಷ್ಟವಾಗಿ, ನೇರವಾಗಿ, ಅಸಂದಿಗ್ಧ ರೀತಿಯಲ್ಲಿ ವ್ಯಕ್ತಪಡಿಸುತ್ತ ನೂತನ ವಿಚಾರಧಾರೆಗಳನ್ನು ನಮ್ಮ ಸಂಪ್ರದಾಯಕ್ಕೆ ಹೊಂದಿಸುತ್ತ ಪರಂಪರೆಗೆ ಹೊಸ ಆಯಾಮಗಳನ್ನು ನಿರ್ಮಿಸುತ್ತ ಬದುಕನ್ನು ನವೀಕರಿಸುವುದು ವಿಮರ್ಶೆಯ ಕೆಲಸ"ವಾದ್ದರಿಂದ ಈ ಪ್ರಕಾರದಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ಕಡಿಮೆ. ಇಂತಹ ಕೊರತೆ ಮಧ್ಯೆ ತರುಣ ಮಿತ್ರರಾದ ಮಹಾದೇವ ಬಸರಕೋಡ ಅವರು 'ಸಂವೇದನೆ' ಎಂಬ ವಿಮರ್ಶೆ ಕೃತಿಯನ್ನು ಪ್ರಕಟಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ.

ವಿಮರ್ಶೆ ಒಂದು ತಲೆಮಾರಿನ ಮೇಲೆ ವಿಶಿಷ್ಟ ಪ್ರಭಾವವನ್ನು ಬೀರುವುದರಲ್ಲಿ ಸಂದೇಹವಿಲ್ಲ. ಸಾಹಿತ್ಯದಲ್ಲಿ ಹೊಸ ಸಂವೇದನೆ ಮತ್ತು ರಚನೆಗೆ ತಕ್ಕ ಪರಿಸರವನ್ನು ನಿರ್ಮಿಸುವ ಕೆಲಸವನ್ನು ವಿಮರ್ಶೆ ಸದಾ ಮಾಡುತ್ತಲಿರುತ್ತದೆ. ಅಂತಹ ಪ್ರಯತ್ನವನ್ನು ಮಹಾದೇವ ಬಸರಕೋಡ ಅವರ ಈ ಬರಹಗಳಲ್ಲಿ ಎದ್ದು ಕಾಣುತ್ತದೆ. ಆದರೆ ವಿನಯಶೀಲನಾದ ಮಹಾದೇವ ಅವರ ಸ್ವಭಾವ ಇಲ್ಲಿ ನಿಷ್ಠುರ ವಿಮರ್ಶೆಗೆ ತೊಡಗಿಸಿಲ್ಲ. ಆ ಸಾಧ್ಯತೆಗಳು ಕಡಿಮೆ ಕಾಣಿಸಿಕೊಂಡಿವೆಯಾದರೂ, ವಿನಯ ಪೂರ್ವಕವಾಗಿ ಹೇಳುವ ವಿಧಾನವೇ ಢಾಳಾಗಿದೆ. ಈ ಸಂದರ್ಭಕ್ಕೆ ಮಾಸ್ತಿಯವರ ಸಣ್ಣ ಕಥೆಗಳ ಬಗ್ಗೆ ಎಂ.ಜಿ. ಕೃಷ್ಣಮೂರ್ತಿ ಅವರ ವಿಮರ್ಶೆಯ ಮಾತುಗಳು ನೆನಪಾಗುತ್ತವೆ. "ಹೊಸಗನ್ನಡ ಸಾಹಿತ್ಯದಲ್ಲಿ ಮಾಸ್ತಿಯವರ ಸಣ್ಣ ಕತೆಗಳಿಗಿರುವ ಸ್ಥಾನದ ಬಗ್ಗೆ ಬಹುಶಃ ಹೆಚ್ಚು ವಿವಾದಕ್ಕೆ ಆಸ್ಪದವಿಲ್ಲ. ಮಾಸ್ತಿಯವರು ಕನ್ನಡದಲ್ಲಿ ಸಣ್ಣ ಕತೆಗೆ ರೂಪು ಕೊಟ್ಟ ಹಿರಿಯರು; ಸಣ್ಣ ಕಥೆಗಳ ಕುರಿತು ಆಸಕ್ತಿ ಇರುವವರು ಈ ಮಾತನ್ನು ತಳ್ಳಿ ಹಾಕುವುದಿಲ್ಲ–ಇವು ನಿರ್ವಿವಾದವಾದ ವಿಷಯಗಳು. ಆದರೆ ನಮ್ಮ ಸಾಹಿತ್ಯದಲ್ಲಿ

Scanned with CamScanner

ಮತ್ತು ಸಾಹಿತ್ಯಿಕ ಮಹತ್ತ್ವವುಳ್ಳ ಇಂತಹ ಹಿರಿಯರ ಬಗ್ಗೆ ನಿರ್ವಿಕಾರ ಮನೋಭಾವದಿಂದ ಯೋಚಿಸುವದರ ಮೂಲಕ ಸಾಹಿತಿ ಮಾಸ್ತಿಯರಿಗೆ ನಾವು ಕೊಡುವ ಗೌರವ ಅವರು ಬರೆದದ್ದೆಲ್ಲ ಹೊನ್ನು ಎಂದು ಹೇಳಿ ಅವರನ್ನು ಗರ್ಭಗುಡಿಗೆ ನೂಕುವುದಕ್ಕಿಂತ, ನಾವು ಗೌರವಿಸುವ ಹಿರಿಯ ಸಾಹಿತಿಗಳ ಕೃತಿಗಳನ್ನು ವಿಮರ್ಶೆಯ ಆಚೆಗಿಡುವ ಮನೋಭಾವ ಬೆಳೆಸಿಕೊಳ್ಳುವುದಕ್ಕಿಂತ ಹೆಚ್ಚು ಮುಖ್ಯ. ಉತ್ತಮ ಸಾಹಿತ್ಯ ಕೃತಿ ಯಾವುದೇ ರೀತಿಯ ವಿಮರ್ಶೆಯಿಂದ ನಾಶವಾಗುವುದಿಲ್ಲ. ಅನೇಕ ವೇಳೆ ಆ ಕೃತಿಯ ಗುಣ ಹೆಚ್ಚು ಗಮನಕ್ಕೆ ಬರುತ್ತದೆ."೨ ಎಂ.ಜಿ.ಕೆ ಅವರ ಈ ವಿಮರ್ಶಾ ದೃಷ್ಟಿಕೋನ ನಮ್ಮೆಲ್ಲರಿಗೂ ಮಾದರಿಯಾದದ್ದು. ಒಂದೆಡೆ ಆರಾಧಿಸುವ ಗುಣ ಮತ್ತೊಂದೆಡೆ ಸಂಪೂರ್ಣ ನಿರಾಕರಿಸುವ ಗುಣವನ್ನು ಕಾಣುತ್ತಿರುವ ಈ ಸಂದರ್ಭದಲ್ಲಿ ಹೊಸ ತಲೆಮಾರಿನ ವಿಮರ್ಶಕರಿಗೆ ಈ ನಿಲುವು ಮುಖ್ಯವೆನಿಸುತ್ತದೆ. ಇಂತಹ ಮನೋಧರ್ಮವನ್ನು ಮಹಾದೇವ ಬಸರಕೋಡ ಅವರು ಅಳವಡಿಸಿಕೊಂಡಲ್ಲಿ ಭಿನ್ನವಾಗಿ ಬರೆಯಬಲ್ಲರು. ಯಾಕೆಂದರೆ ಓದುವ ಉತ್ಸಾಹ ಮತ್ತು ಗ್ರಹಿಸುವ ಕ್ರಮಗಳು ಸಮಾನಾಂತರವಾಗಿ ಚಲಿಸುವ ಕ್ರಿಯೆಯಾಗಿರುವದರಿಂದ, ಇದರಲ್ಲಿ ಯಾವುದೊಂದು ಅಸಮವಾಗುವಂತಿಲ್ಲ. ವಿಮರ್ಶೆಗೆ 'ವಿನಯ' ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಕೃತಿಯ ನಿಷ್ಠೆಯೂ. ಇವೆರಡನ್ನೂ ಕಾಯ್ದುಕೊಳ್ಳುವುದು ಬಹಳ ಮುಖ್ಯ ಇಲ್ಲದಿದ್ದರೆ ವಿಮರ್ಶೆ ತಾಳಿಕೊಳ್ಳುವುದು ಕಷ್ಟ ಇದು ಬಸರಕೋಡ ಅವರಿಗೆ ಸಾಧ್ಯವಿದೆ. ಯಾಕೆಂದರೆ ಕಿರಿಯರು ಮತ್ತು ತಮ್ಮ ಸಮಕಾಲೀನರ ಕೃತಿಗಳ ಬಗ್ಗೆ ಬರೆಯುವಾಗ ಈ ನಿಷ್ಠುರತೆ ಕಾಣಿಸಿಕೊಳ್ಳುತ್ತದೆ. ಆ ಎಳೆಗಳು ವಿಮರ್ಶೆಯ ದಾರಿಯಾಗಬೇಕು ಎನ್ನುವ ಆಶಯ ನನ್ನದು.

ಮಹಾದೇವ ಅವರ ಬರೆಯುವ ಉತ್ಸಾಹ, ಓದಿನ ಹಂಬಲ ಇಲ್ಲಿಯ ೨೦ ಲೇಖನಗಳಲ್ಲಿಯೂ ಎದ್ದು ಕಾಣಿಸುತ್ತದೆ. ಕತೆ, ಕವಿತೆ, ನಾಟಕ, ಸಂಪಾದನೆ, ಅನುವಾದಕ್ಕೆ ಸಂಬಂಧಿಸಿದ ಇಲ್ಲಿಯ ಲೇಖನಗಳು ಮುನ್ನಡಿ–ಬೆನ್ನುಡಿ, ಶುಭ–ಹಾರೈಕೆ ಮಾದರಿಯಲ್ಲಿವೆ. ಸಹೃದಯತೆಯ ಕಡೆ ವಾಲಿದ ಇಲ್ಲಿಯ ಲೇಖನಗಳು ತೀಕ್ಷ್ಣವಾದ, ಆಳವಾದ ಚರ್ಚೆಗೆ ಅವಕಾಶ ಕಲ್ಪಿಸುವುದಿಲ್ಲ. ಒಬ್ಬ ಓದುಗನಾಗಿ ಗೌರವಿಸುವ ಬಗೆಗಳನ್ನು ಅತ್ಯಂತ ಪ್ರಾಮಾಣಿಕವಾಗಿಯೇ ಮಾಡಿದ್ದಾರೆ. ಆದರೆ ಬರಹ ಅನ್ನೋದು ಬರೀ ಸಂಭ್ರಮವಲ್ಲ. ಲೋಕದೃಷ್ಟಿಯೂ ಆಗಿದೆ. ಆ ಲೋಕದೃಷ್ಟಿಗೆ ಅನ್ಯಜ್ಞಾನ, ಶಿಸ್ತುಗಳ–ಸಹಜ್ಞಾನ ಶಿಸ್ತುಗಳ ಪರಿಚಯ ಅವಶ್ಯವಾಗಿದೆ. ಇವುಗಳಿಂದ ಮಹಾದೇವರ ಗ್ರಹಿಕೆಯೇ ಭಿನ್ನವಾಗಲಿದೆ. ಅಂತಹ ಪ್ರಯತ್ನಗಳನ್ನು ಮುಂದಿನ ಬರಹಗಳಲ್ಲಿ ನಿರೀಕ್ಷಿಸುತ್ತೇನೆ. ಅದು ಬಸರಕೋಡ ಅವರಿಗೆ ಆತ್ಮವಿಶ್ವಾಸವನ್ನು ತಂದು ಕೊಡುತ್ತದೆ. ಬಾಗಲಕೋಟೆಯ ಪರಿಸರದಲ್ಲಿ ಕಥೆಗಾರರು, ಕಾದಂಬರಿಕಾರರು ಕವಿಗಳಿದ್ದಾರೆ.

ಆದರೆ ವಿಮರ್ಶಕರ ಕೊರತೆ ತುಂಬಾ ಇದೆ. ಹೊಸ ತಲೆಮಾರಿನ ಶ್ರೀಹರಿ ಧೂಪದ, ಜಿ.ಜಿ.ಹಿರೇಮಠ, ವಿಜಯಶ್ರೀ ಇಟ್ಟಣ್ಣವರ, ಮಹಾದೇವ ಬಸರಕೋಡ ಅಂತಹವರಿಗೆ ಈ ಕೊರತೆಯನ್ನು ತುಂಬುವ ಸಾಮರ್ಥ್ಯವಿದೆ. ಈ ತರುಣರಲ್ಲಿಯೇ ಬಸರಕೋಡ ಅವರು ನಿರಂತರ ಪತ್ರಿಕೆಗಳಲ್ಲಿ ಬರೆಯುತ್ತಿದ್ದಾರೆ. ಹೀಗಾಗಿ ವಿಮರ್ಶೆಯನ್ನು ಮಹಾದೇವ ಬಸರಕೋಡ ಅವರು ಗಂಭೀರವಾಗಿ ತೆಗೆದುಕೊಂಡಲ್ಲಿ ಮುಂದಿನ ಬರಹಗಳು ಮತ್ತಷ್ಟು ಭಿನ್ನವಾಗಿರುವದರಲ್ಲಿ ಅನುಮಾನವಿಲ್ಲ. ಯಾಕೆಂದರೆ ಬಸರಕೋಡ ಅವರ ಓದುವ ಆಸಕ್ತಿ, ಬರೆಯುವ ಉತ್ಸಾಹ ಅನನ್ಯವಾಗಿದೆ.

ಈ ಕೃತಿಯ ಲೇಖನಗಳನ್ನು ಮೂರು ರೀತಿಯಲ್ಲಿ ವರ್ಗೀಕರಣ ಮಾಡಬಹುದು. ಒಂದು ಬಾಗಲಕೋಟೆಯ ಪರಿಸರದ ಸಾಹಿತ್ಯ, ಎರಡು ಹೊಸ ತಲೆಮಾರಿನ ಸಾಹಿತ್ಯ, ಮೂರು ಈಗಾಗಲೇ ಚರ್ಚೆಗೆ ಒಳಗಾದ ಸಾಹಿತ್ಯ ಎಂದು. ಬಹುತೇಕ ಇಲ್ಲಿಯ ಲೇಖನಗಳು ಪರಿಣಾಮದ ಕುರಿತು ಮಾತನಾಡಿವೆ. ಅಂದರೆ ವ್ಯಕ್ತಿ–ಸಮಾಜ–ಆಧುನಿಕತೆ ಉಂಟು ಮಾಡಿದ ತಲ್ಲಣಗಳನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿವೆ. ಇಂತಹ ತಲ್ಲಣಗಳಿಗೆ ಮುಖಾಮುಖಿಯಾದ ಕೃತಿಗಳನ್ನು ಬಸರಕೋಡ ಅವರು ಹೆಚ್ಚು ಇಷ್ಟಪಟ್ಟಿದ್ದಾರೆ. ಇದು ಅವರ ನಿಲುವನ್ನು ಸ್ಪಷ್ಟಪಡಿಸಿದೆ. ಉದಾಹರಣೆಗೆ ಲಲಿತಾ ಹೊಸಪ್ಯಾಟಿ ಅವರ 'ವೈಶಾಖ ಶುದ್ಧ ಹುಣ್ಣಿಮೆಯ ದಿನ' ಎಂಬ ಕವನ ಸಂಕಲನ ಕುರಿತು ಹೇಳುತ್ತಾ "ಅದು ಓದುಗನನ್ನು ಕ್ಷಣಕಾಲವಾದರೂ ಹಿಡಿದು ನಿಲ್ಲಿಸಬೇಕು. ಮನದಲ್ಲಿ ಒಂದಷ್ಟು ಹೊಸ ಆಲೋಚನೆಗಳನ್ನು, ಲವಲವಿಕೆಯನ್ನು ಈಗಾಗಲೇ ಪರಿಚಿತವಾಗಿರುವ ಕವಿತೆಗಳಿಗಿಂತ ಚಲನಶೀಲವಾದ ಚಹರೆಯನ್ನು ಹೊಂದಿರಬೇಕು. ನಿಂದ ಹೆಜ್ಜೆಯ ಮೀರಿ ಒಂದಷ್ಟು ಭಿನ್ನವಾಗಿ ನಮ್ಮನ್ನು ಚಿಂತನೆಗೆ ಒಳಗು ಮಾಡಬೇಕು. ಪ್ರಸ್ತುತ ಸಾಮಾಜಿಕ ಸಂದರ್ಭಗಳಲ್ಲಿ ಎದುರುಗೊಳ್ಳುವ ವಿವಿಧ ವಿಲಕ್ಷಣ ಸಂದರ್ಭಗಳಿಗೆ ಸಮೃದ್ಧತೆ, ವೈವಿಧ್ಯತೆಗಳನ್ನುಹೊಸತಾದ ಎಚ್ಚರದ ಬೆಳಕಿಗೆ ನಮ್ಮನ್ನು ನಾವು ತೆರೆದುಕೊಳ್ಳುವಂತೆ ಪ್ರೇರೆಪಿಸಬೇಕು. ಬೇರೊಂದು ವಿವೇಚನೆಯ ಹದಕ್ಕೆ ತಂದು ನಿಲ್ಲಿಸಬೇಕು" ಎನ್ನುವ ಸ್ಪಷ್ಟ ಅಭಿಪ್ರಾಯವಿದೆ. ಅದೇ ಜಗದೀಶ್ ಹಾದಿಮನಿಯವರ 'ಪ್ರೇಮಮಯಿ' ಖಂಡಕಾವ್ಯದ ಕುರಿತು ಹೇಳುವಲ್ಲಿ ಇಲ್ಲ. ".. ಇವೆಲ್ಲವುಗಳ ಹೊರತಾಗಿ ಕೆಲವು ಕಡೆಗಳಲ್ಲಿ ಕಾವ್ಯ ತನ್ನ ಕಾವನ್ನು ಕಳೆದುಕೊಳ್ಳುವಂತೆ ತೋರುತ್ತದೆ. ಅದರ ರಚನೆಯಲ್ಲಿನ ಕೊಂಡಿಗಳು ಕೊಂಚ ಸಡಿಲಗೊಂಡ ಭಾವ ಅಲ್ಲಲ್ಲಿ ಕೊಂಚಮಟ್ಟಿಗೆ ಕಾಡುತ್ತದೆ. ಬಿಡಿ ಬಿಡಿ ಪ್ರತಿಮೆಗಳ ಮೂಲಕವೇ ಇಡೀಯಾದ ಭಾವವೊಂದನ್ನು ಇನ್ನಷ್ಟು ಸಮೃದ್ಧಗೊಳಿಸಬಹುದಿತ್ತೇನೋ?" ಈ ರೀತಿಯ ಹಿಂಜರಿಕೆ ಅವಶ್ಯಕತೆ ಇಲ್ಲ. ವಿಮರ್ಶೆಯಲ್ಲಿ ಒಂದು ಅಭಿಪ್ರಾಯಗಳು ಮೂಡಲಿಕ್ಕೆ ಕಾರಣಗಳಿರುತ್ತವೆ.

Scanned with CamScanner

ಹಾಗೇ ನಿರಾಕರಿಸಲಿಕ್ಕೆ. ಇದರ ಕಡೆಗೆ ಗಮನವಿರಬೇಕೆ ಹೊರತು ವ್ಯಕ್ತಿಯ ಕಡೆ ಅಲ್ಲ.

ಈ ಕೃತಿಯ ಮತ್ತೊಂದು ಗಮನ ಸೆಳೆದ ಅಂಶವೆಂದರೆ ತುಂಬಾ ಹೆಸರು ಮಾಡಿದರವರನ್ನು ಗುರುತಿಸಿರುವುದು. ವಿಮರ್ಶೆಯಲ್ಲಿ ಬಹುತೇಕ ಸ್ಥಾನ ಪಡೆಯುವುದು ಈಗಾಗಲೆ Establish ಆದವರವು. ಪಂಪ, ಕುವೆಂಪು, ಬೇಂದ್ರೆ ಅಂತವರೇ ಪುನಃ ಪುನಃ ವಿಮರ್ಶೆಗೆ ಒಳಗಾಗುತ್ತಿರುತ್ತಾರೆ. ಅದು ತಪ್ಪಲ್ಲ. ಆದರೆ ನಮ್ಮ ಸಮಕಾಲೀನ ಸಾಹಿತ್ಯವನ್ನು ಅಲಕ್ಷ ಮಾಡುವುದು ಯಾವ ಕಾರಣಕ್ಕಾಗಿ? ನಮ್ಮ ತಲೆಮಾರಿನವರನ್ನು ಗಮನಿಸದಿರುವುದು ಯಾವ ಕಾರಣಕ್ಕಾಗಿ? ಇಲ್ಲಿ ಬಸರಕೋಡ ಅವರು ಜಿ.ಕೆ.ತಳವಾರ, ಜೆಸ್ಸಿ, ಡಾ. ಶರತ್‌ಕುಮಾರ, ವೈ.ವೈ ಕೊಕ್ಕನವರ, ನಾಗರಾಜ ಬಸರಕೋಡ, ದ್ರಾಕ್ಷಾಯಣಿ ಯಡಹಳ್ಳಿ, ಶೀಲಾ ರಿತ್ತಿ, ಶಿವಶಂಕ್ರಪ್ಪ ಶಿರೋಳ, ಶಿವಪ್ಪಗೌಡ ಬಿರಾದಾರ ಅಂತಹ ಸ್ಥಳೀಯ ಲೇಖಕರನ್ನು ವಿಮರ್ಶಿಸಿರುವುದು ಬಹಳ ಮುಖ್ಯವಾದ ಸಂಗತಿಯಾಗಿದೆ. ಕಾರಂತರು, ಅಬ್ಬಾಸ್ ಮೇಲಿನಮನಿ, ಮಲ್ಲಿಕಾರ್ಜುನ ಹಿರೇಮಠ, ಲಲಿತಾ ಹೊಸಪ್ಯಾಟಿ, ಪ್ರಕಾಶ್ ಖಾಡೆ, ಕಪಿಲ್ ಹುಮನಾಬಾದೆಯಂತಹ Established writers ಮಧ್ಯೆ ಹೊಸ ಬರಹಗಾರರನ್ನು ಗಂಭೀರವಾಗಿ ಓದುವುದು ಒಬ್ಬ ವಿಮರ್ಶಕನಿಗೆ ಇರಬೇಕಾದ ಗುಣವೇ ಆಗಿದೆ. ಆ ರೀತಿಯ Observation ಕೂಡ ಬಹಳ ಮುಖ್ಯವಾಗುತ್ತದೆ. ಅಮುಖ್ಯ ಎಂದು ಕರೆದಿರುವ ಲೇಖಕನನ್ನೂ ವಿಮರ್ಶೆಯ ವ್ಯಾಪ್ತಿಗೆ ತರಬೇಕಾಗಿದೆ. ಈ ಕೆಲಸವನ್ನು ಬಸರಕೋಡ ಅವರು ಜವಾಬ್ದಾರಿಯಿಂದಲೇ ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಈ ನೆಲದ ಕಥೆಗಾರ ಅಬ್ಬಾಸ್ ಮೇಲಿನಮನಿ ಅವರು ಇಲ್ಲದ ಕಾಲದಲ್ಲಿ ಇದನ್ನು ಬರೆಯುತ್ತಿರುವುದು ಬೇಸರದ ಸಂಗತಿಯಾಗಿದೆ. ಈ ಮುನ್ನುಡಿಯ ಕಾರಣಕ್ಕಾಗಿಯೇ ಅಬ್ಬಾಸ್ ಅವರು ೨–೩ ಗಂಟೆ ಮಾತನಾಡಿದ್ದುಂಟು. ಕಿರಿಯರ ಬಗ್ಗೆ ಅವರಿಗಿದ್ದ ಪ್ರೀತಿಗೆ ಅದು ಸಂಕೇತವಾಗಿದೆ. ಬಸರಕೋಡ ಅವರಂತಹ ಕಿರಿಯರನ್ನು ನೀವೇ ಪ್ರೋತ್ಸಾಹಿಸಬೇಕು' ಎಂದ ಮಾತು ಈಗಲೂ ನನ್ನ ಕಿವಿಯಲ್ಲಿದೆ. ನಾನು ಯಾವ ನೆಪ ಹೇಳಿದರೂ ಕೇಳುವ ಸ್ಥಿತಿಯಲ್ಲಿ ಅಬ್ಬಾಸ್ ಅವರು ಇರಲಿಲ್ಲ. ಅವರೊಂದಿಗಿನ ನನ್ನ ಒಡನಾಟ ಅತ್ಯಂತ ಆಪ್ತವಾದದ್ದು. ಇಂದಿಗೂ ಅವರಿಲ್ಲ ಎನಿಸುತ್ತಿಲ್ಲ. ಆ ಡೋಲಕ್ ಭಾಷಾ ನಮ್ಮ ನಡುವೆ ಇದ್ದಾನೆ ಎನಿಸುತ್ತದೆ. ಅದು ಹಾಗೇ ಇರಲಿ. ಬಸರಕೋಡ ಅವರು ಅಬ್ಬಾಸ್ ಅವರನ್ನು ಗೌರವಿಸುವ–ಪ್ರೀತಿಸುವ ಬರೆಹಗಳು ಇಲ್ಲಿವೆ. ಬಹುಶಃ ಸಂಪಾದನಾ ಕೃತಿಗಳ ಬಗ್ಗೆ ವಿಮರ್ಶೆಗಳು ಬಹಳ ಕಡಿಮೆ. ಆದರೆ ಮಹಾದೇವ ಅವರು ಇಲ್ಲಿ ಅವರ ಏಳು ಸಂಪದನಾ ಕೃತಿಗಳ

ವಿಮರ್ಶೆಯನ್ನು ಮಾಡಿದ್ದಾರೆ. ಈ ದೃಷ್ಟಿಯಿಂದ ಇಲ್ಲಿ ವೈವಿಧ್ಯಮಯ ಲೇಖನಗಳಿವೆ. ಈ ವೈವಿಧ್ಯಮತೆಯ ಜೊತೆಗೆ ಭಿನ್ನ ಓದುಗಳು ಸೇರಿಕೊಳ್ಳಬೇಕಿದೆ. ಅದು ಬಸರಕೋಡ ಅವರಿಗೆ ವಿಮರ್ಶಾ ಪರಿಭಾಷೆಯನ್ನು ತಂದು ಕೊಡುತ್ತದೆ. ಅಂತಹ ಪ್ರಯತ್ನದಲ್ಲಿ ತೊಡಗುವರು ಎಂಬ ಭರವಸೆ ನನಗಿದೆ.

– ಡಾ. ವೆಂಕಟಗಿರಿ ದಳವಾಯಿ
ಸಹ ಪ್ರಾಧ್ಯಾಪಕರು,
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೫೩೦೨೭

ಅಡಿಟಿಪ್ಪಣಿ:
೧. ಗೋಪಾಲಕೃಷ್ಣ ಅಡಿಗ: ವಿಮರ್ಶೆ ಮತ್ತು ವೈಚಾರಿಕ ಪ್ರಬಂಧಗಳು ; ಸಂ.೨ ಪು.೧೫೩
೨. ಎಂ.ಜಿ. ಕೃಷ್ಣಮೂರ್ತಿ : ಕೃತಿ ಸಂಸ್ಕೃತಿ : ಪುಟ ೮೯
೩. ಸಂವೇದನೆ. ಮಹಾದೇವ ಬಸರಕೋಡ ಪುಟ: ೨೧
೪. ಅದೇ ಪುಟ ೩೧

Scanned with CamScanner

SAMVEDANE

By: **Mahadev Basarkod**
'Munjavu' Laxmi Nagar,
Amingad-587112.
Tq: Hunagund Dt: Bagalkot
Cell :9902755950
email : mahadevijet@gmail.com

Published By :
Basarkod Prakashan
'Munjavu' Laxmi Nagar,
Amingad-587112.
Tq: Hunagund Dt: Bagalkot

Page : 116 (xviii+98)

Price : Rs. 120

First Edition : 2021

© Author

ಒಳಗಣ ಬೆಳಗು

ಲೇಖಕರು : ಮಹಾದೇವ ಬಸರಕೋಡ

ಬಳಸಿದ ಕಾಗದ : 70 GSM NS Maplitho

ಮುದ್ರಕರು : ಜೆ. ಪಿ. ಪ್ರಿಂಟ್ಸ್, ಗದಗ

ಅರ್ಪಣೆ

ಬದುಕಿನ ವೈವಿಧ್ಯತೆಯೊಂದಿಗೆ
ಜೀವಪರ, ನಿತಾಂತ ಕಾಳಜಿಯ
ಮನೋಧರ್ಮವನ್ನು ಕಾಪಿಟ್ಟುಕೊಂಡು ಬಂದಿರುವ
ನೇರ ನುಡಿಯ ಸಂಪಾದಕ, ಹಿರಿಯ ಸ್ನೇಹಿತ
ಆರ್. ನರಸಿಂಹಮೂರ್ತಿ
ಖ್ಯಾತ ಕಲಾವಿದ ಸ್ನೇಹಿತರಾದ
ಕಾಸೀಮ್ ಕನಸಾವಿ, ಶಾಂತಯ್ಯ ಪರಡಿಮಠ, ಶರಣು ಚಟ್ಟಿ
ಅವರ ಒಡಲಾಳ ಪ್ರೀತಿಗೆ

Scanned with CamScanner

ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಕನ್ನಡ ಸಂಶೋಧನೆ

ಸಂಪಾದಕರು
ಡಾ. ಪಿ. ಮಹಾದೇವಯ್ಯ

ಸಂಪಾದಕ ಮಂಡಳಿ
ಡಾ. ಡಿ. ಪಾಂಡುರಂಗ ಬಾಬು
ಡಾ. ಅಶೋಕಕುಮಾರ ರಂಜೇರೆ

ಸಂಚಿಕೆ
೭೨

ಅಯ್ಯಾ ಎಂದರೇ....

ಡಿ.ಪಾಂಡುರಂಗ ಬಾಬು

'ಅಯ್ಯಾ ಎಂದರೆ ಸ್ವರ್ಗ ಯೆಲವೋ ಎಂದರೆ ನರಕ ನಡುಗನ್ನಡ ಸಾಹಿತ್ಯದ ವಚನವೊಂದರಲ್ಲಿ ಅಯ್ಯಾ ಮತ್ತು ಎಲವೋ ಎಂಬ ಎರಡು ರಚನೆಗಳ ಬಳಕೆಯ ಸಾಮಾಜಿಕ ಪರಿಣಾಮಗಳನ್ನು ಕುರಿತು ದಾಖಲಾಗಿರುವ ಚಾರಿತ್ರಿಕ ಮಹತ್ವದ ಸಾಲುಗಳಿವು. ಅಯ್ಯಾ ಮತ್ತು ಯೆಲವೋ ರಚನೆಗಳ ಬೆಳವಣಿಗೆ ಅವು ಬೇರೆ ಬೇರೆ ನೆಲೆಗಳಲ್ಲಿ ಬಳಕೆಗೊಳ್ಳುತ್ತಾ ಪ್ರಸ್ತುತ ಕರ್ನಾಟಕದ ಉಪ ಮುಖ್ಯ ಮಂತ್ರಿಗಳು ಇತ್ತೀಚೆಗೆ ಅವರ ಅಧೀನದಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಇಲಾಖೆಯ ನೌಕರರನ್ನು ಉದ್ದೇಶಿಸಿ ಮಾತನಾಡುವಾಗ 'ಬಸ್ ಪ್ರಯಾಣಿಕರನ್ನು ಏನಯ್ಯ, ಬಾರಯ್ಯ ಎಂದು ಸಂಬೋಧಿಸಬೇಡಿ, ಸಾರ್ ಎಂದು ಸಂಬೋಧಿಸಿ' ಎಂಬ ಮಾತುಗಳನ್ನು ಒಳಗೊಂಡ ಸಲಹೆ ನೀಡಿದ್ದಾರೆ. ಈ ಸಲಹೆ ನೀಡಿದ್ದುದರ ಔಚಿತ್ಯವನ್ನು ಪ್ರಶ್ನಿಸುವುದು ಈ ಘಟನೆಯನ್ನು ಉಲ್ಲೇಖಿಸಿರುವ ಉದ್ದೇಶವಲ್ಲ. ಬದಲಿಗೆ ಭಾಷಾ ರೂಪವೊಂದು ಸಾಮಾಜಿಕ ನೆಲೆಗಳಲ್ಲಿ ತನ್ನ ಕ್ರಿಯಾತ್ಮಕತೆಯನ್ನು ಪಲ್ಲಟಗೊಳಿಸಿಕೊಂಡ ಅಂಶವನ್ನು ವಿವರಿಸುವ ಪ್ರಯತ್ನಕ್ಕೆ ಪೂರಕವಾಗಿ ಮಾತ್ರ ಇಲ್ಲಿ ಉಲ್ಲೇಖಿಸಿದೆ. 'ಅಯ್ಯಾ' ಎಂಬ ರಚನೆ ಗೌರವ ವಾಚಕವಾಗಿಯೂ ಎಲವೋ ಎಂಬ ರಚನೆ ಅಗೌರವ ಸೂಚಕವೂ ಮತ್ತು ನೇತ್ಯಾತ್ಮಕ ಅಭಿವ್ಯಕ್ತಿ ಸಂದರ್ಭದ, ಕೆಳ ಸ್ತರದ,ಅಧೀನ ವ್ಯಕ್ತಿಗಳ ಮೇಲೆ ಪ್ರಯೋಗವಾಗುವ ರಚನೆಯಾಗಿದೆ. ಇವೆರಡೂ ರೂಪಗಳು ಮಾನವ ಸೂಚಕ ಪುಲ್ಲಿಂಗ ರಚನೆಗಳಾಗಿದ್ದು ಇದರ ವಿವಿಧ ರೂಪಗಳಿಗೆ ಬಳಕೆಯ ಸಾಮಾಜಿಕ ನೆಲೆಗಳನ್ನು ಆಧರಿಸಿ ಬಳಸುವವರ ಮತ್ತು ಪ್ರಯೋಗಕ್ಕೊಳಗಾದವರ ನೆಲೆಯಿಂದ ಸಾಮಾಜಿಕ ಸ್ಥಾನಮಾನಗಳು ಆರೋಪಿತವಾಗುತ್ತವೆ.

ಕನ್ನಡ ಬರಹ ಪರಂಪರೆಯಲ್ಲಿ ಶಾಸನಗಳಿಂದ ಹಿಡಿದು ಇಲ್ಲಿಯವರೆಗೂ ಸಂಬೋಧನೆ, ಉಲ್ಲೇಖ, ಜಾತಿವಾಚಕ, ಗೌರವ ಸೂಚಕ ಮತ್ತು ಪುರುಷ ವ್ಯಕ್ತಿನಾಮಗಳ ಭಾಗವಾಗಿ - ಅಯ್ಯ ಬಳಕೆಯಲ್ಲಿದೆ. ತಳ ಸಮುದಾಯಗಳ ವಚನಕಾರರ ಹೆಸರುಗಳು ಬಹುಪಾಲು ಅಯ್ಯ ವಾರ್ಗಿಕವನ್ನು ಹೊಂದಿರುವಂತಹವೆ ಆಗಿವೆ. ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಜೇಡರ ದಾಸಿಮಯ್ಯ ಮುಂತಾದವರವಿವೆ. -ಅಯ್ಯ ಎಂಬ ಈ ರಚನೆ ದಕ್ಷಿಣ ಭಾರತದ ಎಲ್ಲಾ ದ್ರಾವಿಡ ಭಾಷೆಗಳಲ್ಲಿಯೂ ಮೇಲ್ನೋಟದ ಸಾಮಾನ್ಯ ಗ್ರಹಿಕೆಗೆ ವ್ಯಕ್ತಿನಾಮಗಳ ಭಾಗವಾಗಿಯೂ ತಮಿಳಿನಲ್ಲಿ ಅಯ್ಯಂಗಾರ್ ಎಂಬ ಜಾತಿವಾಚಕದಲ್ಲಿಯೂ ಬಳಕೆಯಲ್ಲಿದೆ.

ಪ್ರಸ್ತುತ ಕನ್ನಡದ ಮಟ್ಟಿಗೆ -ಅಯ್ಯ ಎನ್ನುವ ರಚನೆ ಮೈಸೂರು ಭಾಗದ ಸಾಮಾಜಿಕ ತಳ ಸಮುದಾಯಗಳಲ್ಲಿ (ಬಹುತೇಕ ಬ್ರಾಹ್ಮಣೇತರ ಕನ್ನಡಭಾಷಿಕ ಸಮುದಾಯಗಳಲ್ಲಿ) ತಂದೆಯ ಮತ್ತು ತಾಯಿಯ ತಂದೆಯನ್ನು ಸಂಬೋಧಿಸುವ ಸಂಬೋಧನಾ ರೂಪವಾಗಿ ಮತ್ತು ಅವರನ್ನು ಕುರಿತ ಸಂಬಂಧವಾಚಕವಾಗಿಯೂ ಬಳಕೆಯಲ್ಲಿದೆ. ಈಗ ನಗರ ಮತ್ತು ಆಧುನೀಕರಣದ ಪ್ರಭಾವಕ್ಕೊಳಗಾಗಿರುವ ಗ್ರಾಮೀಣ ಮತ್ತು ಶಿಕ್ಷಿತ ಸಮುದಾಯಗಳಲ್ಲಿ ಅಜ್ಜ ಮತ್ತು ತಾತಾ ಎಂಬ ರೂಪಗಳಿಗೆ ಪಲ್ಲಟಗೊಳ್ಳುತ್ತಿರುವುದು ಕಂಡು ಬರುತ್ತಿದೆ. ಹಾಗೆಯೇ ಕೆಲವು ನಿರ್ದಿಷ್ಟ ಸಮುದಾಯಗಳಲ್ಲಿ ತಂದೆಯನ್ನು ಸಂಬೋಧಿಸಲು ಮತ್ತು ತಂದೆಯನ್ನು ಸೂಚಿಸುವ ಸಂಬಂಧವಾಚಕವಾಗಿಯು ಬಳಕೆಯಲ್ಲಿದೆ.ಈ ರೂಪ ಇಪ್ಪತ್ತನೇ ಶತಮಾನದ ಕೊನೆಯವರೆಗೂ ಕರ್ನಾಟಕದ ಕನ್ನಡ ಭಾಷಿಕರಾಗಿರುವ ಎಲ್ಲ ಜಾತಿ ಸಮುದಾಯಗಳ ವ್ಯಕ್ತಿನಾಮಗಳ ಎರಡನೇ ಭಾಗವಾಗಿ ಅನಿರ್ಬಂಧಿತವಾಗಿ ಬಳಕೆಯಲ್ಲಿದೆ. ಉದಾಹರಣೆಗೆ- ಮಲ್ಲಯ್ಯ-ಆದಿ ಕರ್ನಾಟಕ

Scanned with CamScanner

ಅನಂತಯ್ಯ–ಬ್ರಾಹ್ಮಣ ಶ್ರೀಕಂಠಯ್ಯ–ಒಕ್ಕಲಿಗ, ನಂಜಯ್ಯ–ಲಿಂಗಾಯತ, ಕೂಮಯ್ಯ–ಉಪ್ಪಾರ, ಸಿದ್ದರಾಮಯ್ಯ–ಕುರುಬ, ಅಪ್ಪಯ್ಯ–ಕುಂಬಾರ, ಅಪ್ರಯ್ಯ–ಈಡಿಗ, ಕಾಡುವಯ್ಯ–ಪರಿವಾರ ಇತ್ಯಾದಿ (ಈ ಹೆಸರುಗಳು ಹಳೇ ಮೈಸೂರು ಪ್ರಾಂತ್ಯದವು) ಜಾತಿವಾಚಕಗಳನ್ನು ವ್ಯಕ್ತಿನಾಮದ ಭಾಗವಾಗಿ ಸಮುದಾಯ ಅಸ್ಮಿತೆ/ಪ್ರತಿಷ್ಠೆಯ ಗುರುತಾಗಿಸಿಕೊಳ್ಳುವ ಪವೃತ್ತಿಯಿಂದಾಗಿ ಸಾಮಾಜಿಕವಾಗಿ ಮೇಲ್ಸ್ತರದ ಮತ್ತು ಮಧ್ಯಮ ಸ್ತರದ ಜಾತಿ ಶ್ರೇಣಿಯ ವ್ಯಕ್ತಿಗಳಲ್ಲಿ ಪೂರ್ವಿಕರ ಹೆಸರಿನ ಭಾಗವಾಗಿದ್ದ–ಅಯ್ಯ ವಾರ್ಗಿಕವನ್ನು ಬಿಟ್ಟು ತಮ್ಮ ಜಾತಿವಾಚಕಗಳನ್ನು ಹೆಸರಿನ ಭಾಗವಾಗಿಸಿಕೊಳ್ಳುವುದು ಸಾಮಾನ್ಯವಾಗಿದೆ. ಸಾಮಾಜಿಕವಾಗಿ ದಮನಿತ, ಸಾಮಾಜಿಕ ಸ್ತರದಲ್ಲಿ ಕೆಳಗಿನ ಸ್ಥಾನಗಳಲ್ಲಿದ್ದು ಯಾವ ಜಾತಿಗಳನ್ನು ತಮ್ಮ ಪ್ರತಿಷ್ಠೆಯ ಗುರುತಾಗಿಸಿಕೊಳ್ಳಲು ಸಾಧ್ಯವಿಲ್ಲದ ಸಮುದಾಯಗಳು ಹೆಸರಿನ ಭಾಗವಾಗಿ ಬಳಕೆಯಾಗುತ್ತಿದ್ದ ಅಯ್ಯ ರಚನೆಯನ್ನು ಬಿಡುವ ಪ್ರವೃತ್ತಿಯನ್ನು ಮೊದಲಾಗಿಸಿ ಶಿಕ್ಷಣ ಪಡೆದ ಎರಡನೇ ತಲೆಮಾರು ಬಹುಪಾಲು ಪೂರ್ಣವಾಗಿ–ಅಯ್ಯ ರಹಿತ ವ್ಯಕ್ತಿನಾಮಗಳಿಗೆ ಬದಲಾಗಿವೆ. ಆದರೆ ವೃತ್ತಿವಾಚಕಗಳು ವ್ಯಕ್ತಿನಾಮದ ಭಾಗವಾಗಿ ಬಳಕೆಯಾಗುವ ಪರಂಪರೆ ಇಲ್ಲದಿದ್ದ ದಕ್ಷಿಣ ಕರ್ನಾಟಕದಲ್ಲಿಯೂ ಸಾಮಾಜಿಕವಾಗಿ ಜಾತಿ ಹೆಸರನ್ನು ಪ್ರತಿಷ್ಠೆಯಾಗಿಸಿಕೊಂಡಿಲ್ಲದಿದ್ದ ಮದ್ಯಮ ಜಾತಿ ಮತ್ತು ವೃತ್ತಿ ಸಮುದಾಯಗಳು ಉತ್ತರ ಕರ್ನಾಟಕದ ಮಾದರಿಯಂತೆ ಈಗ ವೃತ್ತಿ ಹೆಸರುಗಳನ್ನು/ಜಾತಿ ಹೆಸರುಗಳನ್ನು–ಅಯ್ಯದ ಸ್ಥಾನದಲ್ಲಿಯೂ ಅಥವಾ ಅಯ್ಯ ರಚನೆಯನ್ನು ಒಳಗೊಂಡಂತೆಯೂ ವ್ಯಕ್ತಿನಾಮಗಳನ್ನು ಇಟ್ಟುಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ಈಗಾಗಲೇ ಹೇಳಿದಂತೆ ಜಾತಿ/ವೃತ್ತಿಗಳನ್ನು ತಮ್ಮ ಪ್ರತಿಷ್ಠೆಯ ಗುರುತಾಗಿಸಿಕೊಳ್ಳಲು ಸಾಧ್ಯವಿಲ್ಲದ ಸಮುದಾಯಗಳು ಈಗ ಅಲ್ಲಲ್ಲಿ ಜಾತಿ/ವೃತ್ತಿಗಳನ್ನು ವ್ಯಕ್ತಿನಾಮದ ಭಾಗವಾಗಿಸಿಕೊಳ್ಳುತ್ತಿರುವುದು ಕಂಡುಬರುತ್ತಿರುವುದು (ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ)ಪ್ರಬಲ ಜಾತಿಗಳ ಪ್ರತಿಷ್ಠೆಯ/ಸಾಮಾಜಿಕ ಅಂತಸ್ತಿನ ಗುರುತಾಗಿ ಜಾತಿ ವಾಚಕಗಳನ್ನು ಪ್ರಜ್ಞಾ ಪೂರ್ವಕವಾಗಿ, ಉದ್ದೇಶ ಪೂರ್ವಕವಾಗಿ ಅವರು ಬಳಸುತ್ತಿರುವ ಮನೋಭಾವಕ್ಕೆ ಪ್ರತಿರೋಧದ ರೀತಿಯಲ್ಲಿ ವ್ಯಕ್ತಿ ನೆಲೆಯಲ್ಲಿ ಇದು ಕಾಣಿಸುತ್ತಿದೆಯೆ ಹೊರತು ಸಾರ್ವತ್ರಿಕವಾದ ಸಮುದಾಯ ಪ್ರವೃತ್ತಿಯಾಗಿಲ್ಲ. ದಕ್ಷಿಣ ಕರ್ನಾಟಕದ ಸಾಮಾಜಿಕವಾಗಿ ಉನ್ನತ ಶ್ರೇಣಿಯ ಎಲ್ಲಾ ಜಾತಿಯ ಕೆಲವು ಜನಗಳ ಮತ್ತು ತಳ ಸಮುದಾಯಗಳಲ್ಲಿ ಬಹು ಪಾಲು ಜನಗಳ ವ್ಯಕ್ತಿನಾಮದ ಭಾಗವಾಗಿದ್ದು ಬಳಕೆಯಾಗುತ್ತಿದ್ದ ಅಯ್ಯ ಈಗ ವ್ಯಕ್ತಿ ನಾಮದ ವಲಯದಿಂದ ಹೊರಗಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಇದು ಯಾವುದೇ ಸಮುದಾಯಕ್ಕೆ ನಿರ್ಬಂಧಿತವಾಗಿರದೆ ಮುಕ್ತ ಬಳಕೆಯಲ್ಲಿದ್ದುದಕ್ಕೆ ವಿರುದ್ಧ ನೆಲೆಯಲ್ಲಿ ಉತ್ತರ ಕರ್ನಾಟಕದಲ್ಲಿ ಸಾಮಾಜಿಕವಾಗಿ ಉನ್ನತ ಸಮುದಾಯವೊಂದರ ಜಾತಿ ಮತ್ತು ಪೌರೋಹಿತ್ಯ ವೃತ್ತಿ ಸೂಚಕವಾಗಿ ಬಳಕೆಯಲ್ಲಿದೆ. ಉದಾಹರಣೆಗೆ: ಸಿದ್ದಯ್ಯ, ಮಹದೇವಯ್ಯ, ಈಶ್ವರಯ್ಯ ಮೈಸೂರು ಪರಿಸರದಲ್ಲಿ ತಳ ಸಮುದಾಯದ ಹೆಸರುಗಳಾದರೇ, ಉತ್ತರ ಕರ್ನಾಟಕದಲ್ಲಿ ಉನ್ನತ ಸಮುದಾಯದ ಹೆಸರುಗಳು(ಉತ್ತರ ಕರ್ನಾಟಕದ ತಳ ಸಮುದಾಯಗಳ ಹೆಸರುಗಳು ಅಯ್ಯದ ಬದಲಿಗೆ ಹೆಚ್ಚಾಗಿ ಅಪ್ಪ/ಅಣ್ಣ ಅಥವಾ ಜಾತಿ/ವೃತ್ತಿ ಸೂಚಕಗಳೊಂದಿಗೆ ಬಳಕೆಯಾಗುತ್ತವೆ.) ಈ ಹೆಸರುಗಳ ಭಾಗವಾಗಿರುವ –ಅಯ್ಯ ಒಂದೇ ರೂಪ ಪ್ರಾದೇಶಿಕವಾಗಿ, ಸಾಮಾಜಿಕವಾಗಿ ಮೇಲೆ ಮತ್ತು ಕೆಳಗಿನ ವಿರುದ್ಧ ನೆಲೆಗಳಲ್ಲಿ ಜಾತಿ ಅಂತರನಿರ್ವಹಣೆ ಸೂಚಕವಾಗಿ ಕೆಲಸ ನಿರ್ವಹಿಸುತ್ತದೆ. ಅಯ್ಯ ರೂಪಕ್ಕೆ ಬಹುವಚನ ಪ್ರತ್ಯಯದೊಂದಿಗೆ ಉತ್ತರ–ದಕ್ಷಿಣ ಕರ್ನಾಟಕದಲ್ಲಿ ಅಯ್ನೋರು, ಅಯ್ಯೋರು, ಅಯ್ಯಾರು ಎಂಬ ಸಂಬೋಧನಾ ರೂಪಗಳು ಬಳಕೆಯಲ್ಲಿವೆ. ಉತ್ತರ ಕರ್ನಾಟಕದಲ್ಲಿ ಒಂದು ನಿರ್ದಿಷ್ಟ ಸಮುದಾಯದವರಿಗೆ ಜಾತಿವಾಚಕವಾಗಿ ಹಾಗೂ ಹೆಸರಿನ ಜೊತೆಗಲ್ಲದಿದ್ದರೂ ಸಾಮಾನ್ಯ ವ್ಯವಹಾರದ ಸಂದರ್ಭದಲ್ಲಿ ಎಲ್ಲಾ ಜಾತಿ ಸಮುದಾಯದವರೂ ಈ ನಿರ್ದಿಷ್ಟ ಸಮುದಾಯದ ವ್ಯಕ್ತಿಗಳನ್ನು ಅಯ್ನೋರು ಎಂದು ಸಂಬೋಧಿಸುತ್ತಾರೆ, ಉಲ್ಲೇಖಿಸುತ್ತಾರೆ. ದಕ್ಷಿಣ ಕರ್ನಾಟಕದ ಮೈಸೂರು ಪರಿಸರದಲ್ಲಿ ಅಯ್ನೋರು ಮತ್ತು ಅಯ್ಯೋರು ಎರಡು ರೂಪಗಳು ಬಳಸುವವರು ಮತ್ತು ಆರೋಪಿಸಲ್ಪಡುವವರು ಎಂಬ ಎರಡು ನೆಲೆಗಳಿಂದ ಸ್ವಲ್ಪ ಭಿನ್ನ ಕ್ರಿಯಾತ್ಮಕತೆಯನ್ನು ಹೊಂದಿವೆ. ಅಯ್ನೋರು ಎಂಬುದು ಪುರೋಹಿತರನ್ನು ಸೂಚಿಸಲು ಎಲ್ಲಾವರ್ಗದ ಜನರೂ ಉನ್ನತ ವರ್ಗದ ಪುರೋಹಿತರಿಗೆ ಬಳಸಿದರೆ ಮಿಕ್ಕ ಜಾತಿಯ ಪುರೋಹಿತರಿಗೆ ಪೂಜಾರಿ ಎಂದು ಬಳಕೆಯಾಗುತ್ತದೆ. ಅಯ್ನೋರು ಎಂಬ ರಚನೆಯನ್ನು ಸಾಮಾನ್ಯವಾಗಿ ಬ್ರಾಹ್ಮಣರನ್ನು ಸಂಬೋಧಿಸಲು ಬ್ರಾಹ್ಮಣೇತರ ಗ್ರಾಮೀಣ ಅಶಿಕ್ಷಿತ ವರ್ಗದವರು ಬಳಸುತ್ತಾರೆ. ಹಾಗೆಯೇ ಇತರ ಉನ್ನತ ವರ್ಗದ 'ಪುರೋಹಿತ'ರಿಗೆ ಅವರಿಗಿಂತ ಕೆಳ ವರ್ಗದಲ್ಲಿರುವ ಇತರ ಕೆಳವರ್ಗಗಳವರು ಸಂಬೋಧನೆಗಾಗಿ ಬಳಸುತ್ತಾರೆ. 'ಅಯ್ಯೋರು' ರೂಪ ದಲಿತ

Scanned with CamScanner

ಸಮುದಾಯಗಳ ಅಶಿಕ್ಷಿತರು ತಮಗೆ ಕೆಲಸ ನೀಡಿದ ಯಾವುದೇ ಮಾಲೀಕನಿಗೆ,ವಿಶೇಷವಾಗಿ ಭೂಮಾಲೀಕರಿಗೆ ಸಂಬೋಧಿಸಲು ಅವರನ್ನು ಉಲ್ಲೇಖಿಸಲು ಬಳಸುತ್ತಾರೆ(ಮೈಸೂರಿನ ಪಶ್ಚಿಮ ತಾಲ್ಲೂಕುಗಳಲ್ಲಿ ಮಾತ್ರ ಇದನ್ನು ಗಮನಿಸಲಾಗಿದೆ). ಈಗ ಕರ್ನಾಟಕದ ಎಲ್ಲಾಕಡೆಯೂ ಹಿರಿಯರು ಕಿರಿಯರನ್ನು ಸಂಬೋಧಿಸುವಾಗ. ಬಹುಪಾಲು ಸಮಾನ ವಯಸ್ಕ ಪುರುಷ ಆಪ್ತ ಸ್ನೇಹಿತರ ನಡುವೆಯೂ ಅಯ್ಯ ಕ್ರಿಯಾ ಪದಗಳಲ್ಲಿ (ಕೊಡಯ್ಯ, ಬಾರಯ್ಯ, ಕುತ್ಕೊಳಯ್ಯ) ಸಂಬೋಧನಾ ರೂಪವಾಗಿ ಬಳಕೆಯಾಗುತ್ತದೆ. ಕುತೂಹಲವೆಂದರೆ ಅನಕ್ಷರಸ್ಥನೊಬ್ಬ ಅಥವಾ ಸಾಮಾಜಿಕವಾಗಿ ಕೆಳಹಂತದಲ್ಲಿರುವ ವ್ಯಕ್ತಿಯೊಬ್ಬ ಸಾಮಾಜಿಕವಾಗಿ/ಔದ್ಯೋಗಿಕವಾಗಿ ಯಾವುದೇ ಉನ್ನತ ಸ್ಥಾನಮಾನಗಳಲ್ಲಿರಬಹುದಾದ ವ್ಯಕ್ತಿಗೆ ಈ ರೂಪವನ್ನು ಬಳಸಿದಾಗ ಈ ರೂಪವನ್ನು ಸ್ವೀಕರಿಸುವ ವ್ಯಕ್ತಿ ಇದನ್ನು ಗೌರವ ಸೂಚಕವಾಗಿಯೇ ಸ್ವೀಕರಿಸುತ್ತಾನೆ(ಆದರೆ ಇದು ಬಳಕೆಯಾಗುವ ವಾಕ್ಯದಲ್ಲಿ ಕ್ರಿಯಾ ಪದವು ಬಹುವಚನ ರೂಪವನ್ನು ಹೊಂದಿರುತ್ತದೆ ಉದಾಹರಣೆಗೆ: ಅಯ್ಯಾ ಮುಂದೆ ಹೋಗಿ?). ಆದರೆ ಅದೇ ಶಿಕ್ಷಣ ಪಡೆದವರು ತಮ್ಮ ಹಾಗೆ ಶಿಕ್ಷಣ ಪಡೆದ ಆತ್ಮೀಯರಲ್ಲದವರಿಗೆ ಹಾಗೆ ಬಳಸಲಾಗದು. ಶಿಕ್ಷಿತರು–ಅಶಿಕ್ಷಿತರಿಗೆ ಉನ್ನತ ಹುದ್ದೆಯಲ್ಲಿರುವವರು–ಕೆಳ ಹಂತದ ನೌಕರರಿಗೆ ಹಿರಿಯರು–ಕಿರಿಯರಿಗೆ ಬಳಸಿದರೆ ಅದನ್ನು ಸಹಜವಾಗಿ ಸ್ವೀಕರಿಸಲಾಗುತ್ತದೆ. ಆಧುನಿಕ ಸಮಾಜದಲ್ಲಿ ವಿಶೇಷವಾಗಿ ಹಳ್ಳಿ ಬೇರಿನ ಮೂಲದ ವ್ಯಕ್ತಿಗಳು ಏಕವಚನದಲ್ಲಿ ಕ್ರಿಯಾ ಧಾತುಗಳೊಂದಿಗೆ ನಗರವಾಸಿಗಳು ಮತ್ತು ಹಳ್ಳಿವಾಸಿಗಳು ಅಸಹನೆಯ, ತಿರಸ್ಕಾರದ, ಜಗಳದ ಸಂದರ್ಭಗಳಲ್ಲಿ ಯಾರಿಗೆ ಯಾರು ಬೇಕಾದರೂ ಅಯ್ಯ ರೂಪದ ಸವಕಳಿಯೋ ಮತ್ತು ಅಯ್ಯ ಹಚ್ಚಿದ ರೂಪಗಳನ್ನು ಬಳಸುತ್ತಾರೆ. ಉದಾ: **ಯೋ** ಕಂಡಿದ್ದಿನಿ ಸುಮ್ನಿರಯ್ಯ ಇತ್ಯಾದಿ.

ಕನ್ನಡ ಬಳಕೆಯ ಹಲವು ನೆಲೆಗಳಲ್ಲಿ ಕ್ರಿಯಾತ್ಮಕವಾಗಿಯೂ ಹಲವೆಡೆ ಜಡವಾಗಿಯೂ ಇರುವ ಅಯ್ಯ ರೂಪ ಕರ್ನಾಟಕದಾದ್ಯಂತ ಬೇರೆ ಬೇರೆ ನಿಯೋಗಗಳಿಗೆ ಭಿನ್ನ ರೂಪವನ್ನು ಧರಿಸಿ ಚಾರಿತ್ರಿಕವಾಗಿ ವಿವಿಧ ಸ್ತರಗಳಲ್ಲಿ ಬಳಕೆಯಾಗಿದೆ. ಹಾಗೆ ಬಳಕೆಯಲ್ಲಿ ಅದೊಂದು ಗೌರವ ಸೂಚಕ ಸಂಬೋಧನೆಯಾಗಿ, ಗೌರವ ಸೂಚನೆಯ ಉದ್ದೇಶದಿಂದಲೇ ಇರಬಹುದಾದ ವ್ಯಕ್ತಿನಾಮದ ಭಾಗವಾಗಿ, ಜಾತಿವಾಚಕವಾಗಿ, ವೃತ್ತಿವಾಚಕವಾಗಿ(ವಿಶೇಷವಾಗಿ ಪೌರೋಹಿತ್ಯ) ಬಳಕೆಯಾಗಿದೆ. ಪ್ರಸ್ತುತ ವೃತ್ತಿ ಮತ್ತು ಜಾತಿ ಹೆಸರಿನ ಹೊರತಾಗಿ(ಉತ್ತರ ಕರ್ನಾಟಕದಲ್ಲಿ ಒಂದು ಸಮುದಾಯ/ಉಪಜಾತಿಯ ಹೆಸರಿನ ಹೊರತಾಗಿ) ಸಂಬೋಧನೆ, ವ್ಯಕ್ತಿನಾಮಗಳಲ್ಲಿ ಕಳೆದು ಹೋಗುತ್ತಿದೆ. ಹೀಗೆ ಕಳೆದು ಹೋಗುತ್ತಿರುವುದು ಸಾಮಾನ್ಯ ಸಹಜ ಬದಲಾವಣೆಯ ಕಾರಣದಿಂದಲ್ಲ ಇದರ ಹಿಂದೆ ಪ್ರಬಲ ಸಾಮಾಜಿಕ ಕಾರಣಗಳು ಪ್ರವೃತ್ತವಾಗಿವೆ ಎನಿಸುತ್ತದೆ. –ಅಯ್ಯ ಎಲ್ಲ ಕನ್ನಡ ಭಾಷಿಕ ಸಮುದಾಯದ ಜನರ ಹೆಸರಿನ ಭಾಗವಾಗಿ ಬಳಕೆಯಾಗಿದ್ದರೂ ಇಪ್ಪತ್ತನೇ ಶತಮಾನದ ಕಡೆಯ ಭಾಗದಿಂದ ಜಾತಿ, ಅಂತಸ್ತುಪ್ರಜ್ಞೆ ಸಮಾಜೋರಾಜಕೀಯ ಪ್ರಾಬಲ್ಯ ನಿರ್ವಹಣೆಯಲ್ಲಿ ಮುಖ್ಯವಾಗುತ್ತಿರುವುದು, ಅಧೀನ ಅಥವಾ ದುರ್ಬಲ ಸಮುದಾಯಗಳ ಎದುರು ತಮ್ಮ ಸಾಮಾಜಿಕ ಪ್ರಾಬಲ್ಯದ ಚಹರೆಯನ್ನು ತೋರ್ಪಡಿಸುವ ಅಂಶವಾಗಿ ಜಾತಿ, ವೃತ್ತಿ ವಾಚಕಗಳನ್ನು ತಮ್ಮ ಹೆಸರಿನ ಮೂಲಕ ಪ್ರಕಟಿಸಿ ಕೊಳ್ಳುತ್ತಿರುವುದರಿಂದ ಪ್ರಬಲವರ್ಗದ ವ್ಯಕ್ತಿನಾಮಗಳಲ್ಲಿ–ಅಯ್ಯ ಕಾಣೆಯಾಗುತ್ತಿದೆ. ಇದಕ್ಕೆ ಮತ್ತೊಂದು ಕಾರಣ ಅಧೀನ ಕೆಳಜಾತಿಗಳು ವಿಶೇಷವಾಗಿ ಅಸ್ಪೃಶ್ಯ ಸಮುದಾಯಗಳು ತಮ್ಮ ವ್ಯಕ್ತಿನಾಮದ ಭಾಗವಾಗಿ ಹೊಂದಿ ವ್ಯಾಪಕವಾಗಿದ್ದ ಅಯ್ಯದ ಬಳಕೆ ಮೇಲ್ವರ್ಗದವರ ಸಂಬೋಧನೆ ಮತ್ತು ಉಲ್ಲೇಖಗಳಲ್ಲಿ ಮುಂದುವರೆದು ಹೆಸರಿನ ನಿರ್ದಿಷ್ಟ ಭಾಗವನ್ನು ಬಿಟ್ಟು ವಾರ್ಗಿಕದಂತೆ ಕೆಲಸ ನಿರ್ವಹಿಸುತ್ತಾ, ಅದು ಅಧೀನತೆಯ ಕಾರಣಕ್ಕೆ ಏಕವಚನ ಸಂಬೋಧನಾ ರೂಪವಾಗಿ ಮಾತ್ರ ಬಳಕೆಯಾಗುತ್ತಿದ್ದು ಕ್ರಮೇಣ ಅದಕ್ಕೆ ಆರೋಪಿತವಾದ ಪರೋಕ್ಷ ನೇತ್ಯಾತ್ಮಕ ಕೆಲಸದ ಕಾರಣ ಮತ್ತು ಇತರೆ ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಬೆಳವಣಿಗೆಗಳ ಕಾರಣ ಕೆಳ ಸಮುದಾಯಗಳ ವ್ಯಕ್ತಿನಾಮಗಳಲ್ಲಿ ಅಯ್ಯಕ್ಕೆ ಸ್ಥಾನ ಪಲ್ಲಟವಾಗಿದೆ. ಹಿಂದೆ ಹೇಳಿದ ಅಯ್ನೋರು, ಅಯ್ಯೋರು ಎಂಬ ರೂಪಗಳು ಅಶಿಕ್ಷಿತ/ಹಿರಿಯ ತಲೆಮಾರಿನಲ್ಲಿ ಸಕ್ರಿಯವಾಗಿದ್ದರೆ, ಕಿರಿಯ ಶಿಕ್ಷಿತ ತಲೆಮಾರಿನಲ್ಲಿ ಅಸಕ್ರಿಯವಾಗಿದೆ. ಉತ್ತರ ಕರ್ನಾಟಕದ ಜಾತಿವಾಚಕ ಬಳಕೆಯ ನೆಲೆ ಸ್ಥಿರವಾಗಿದೆ. ಕನ್ನಡದಲ್ಲಿ ಗೌರವ ಸೂಚಕ ಸಂಬೊಧನೆಗೆ ಔಪಚಾರಿಕ, ಅನೌಪಚಾರಿಕ ನೆಲೆಗಳಲ್ಲಿ ಬೇರೆ, ಬೇರೆ ರಚನೆಗಳು ಬಳಕೆಗೆ ಬಂದಿವೆ. ವಿಶೇಷವಾಗಿ ಕನ್ನಡ ಸಂದರ್ಭದಲ್ಲಿ ಸೃಷ್ಟಿಯಾಗಿರುವ ಆಡಳಿತಾತ್ಮಕ ಔಪಚಾರಿಕ ನೆಲೆಗಳು ಬರೆವಣಿಗೆ, ಸಾಹಿತ್ಯದ ಮೂಲಕ ಸಂಸ್ಕೃತ ರಚನೆಗಳನ್ನು ಸ್ವೀಕರಿಸಿ/ಸೃಷ್ಟಿಸಿ ಬಳಸುತ್ತಿದ್ದರೆ, ಆಧುನಿಕ ಅನೌಪಚಾರಿಕ ನೆಲೆಗಳು ಇಂಗ್ಲಿಷ್, ಉರ್ದು ಭಾಷೆಗಳಿಂದ ಪಡೆದು ಬಳಕೆಗೆ ತಂದಿದೆ ಉದಾಹರಣೆಗೆ

Scanned with CamScanner

ಸಾಹೇಬ್ರೆ, ಸರ್/ಸಾರ್, ಮೇಡಮ್ ಇತ್ಯಾದಿಗಳನ್ನು ಅಳವಡಿಸಿ ಬಳಸಲಾಗುತ್ತಿದೆ. ಇದರ ಪರಿಣಾಮ ಹನ್ನೆರಡನೇ ಶತಮಾನದಲ್ಲಿ ನಿಜವಾಗಿಯೂ ಗೌರವ ಸೂಚಕ ಸಂಬೋಧನೆಯಾಗಿದ್ದ ಅಯ್ಯಾ ರೂಪ ಪ್ರಸ್ತುತ ಮಾನ್ಯ ಉಪ ಮುಖ್ಯಮಂತ್ರಿಗಳು/ಸಾರಿಗೆ ಮಂತ್ರಿಗಳು ತಮ್ಮ ಅಧೀನ ನೌಕರರನ್ನು ಉದ್ದೇಶಿಸಿ ಮಾತನಾಡಿದ ಇಪ್ಪತ್ತೊಂದನೆ ಶತಮಾನದ ಈ ಸಂದರ್ಭದಲ್ಲಿ ಸೀಮಿತವಾದ ಇತ್ಯಾತ್ಮಕ ನೆಲೆಗೆ, ಅಗೌರವ ಸೂಚಕ ವಲಯದ ಬಳಕೆಗೆ ಸಂಕುಚಿತವಾಗಿದ್ದು ಅದರ ಸ್ಥಾನಕ್ಕೆ ಇಂಗ್ಲಿಶ್‌ನ ಸಾರ್ ಕನ್ನಡದಲ್ಲಿ ಗೌರವ ಸೂಚಕ ರೂಪವಾಗಿ ಬಳಕೆಗೆ ಬಂದಿದೆ..ಈ ಟಿಪ್ಪಣಿಯ ಉದಾಹರಣೆ, ವಿವರಗಳು ಸೀಮಿತ ಪ್ರದೇಶದ, ವೈಯಕ್ತಿಕ ಅನುಭವದ ಮಾಹಿತಿಯನ್ನು ಆಧರಿಸಿದ್ದು ವಿಸ್ತೃತ ಕ್ಷೇತ್ರ ಮಾಹಿತಿಯ ಮೂಲಕ ಹೆಚ್ಚಿನ ಅಧ್ಯಯನ ಸಾಧ್ಯ. ಕನ್ನಡದಲ್ಲಿ ರಾಚನಿಕ ನೆಲೆಯಲ್ಲಿ ಐತಿಹಾಸಿಕ ಅಧ್ಯಯನಗಳು ಸಾಕಷ್ಟು ನಡೆದಿದ್ದರೂ ಸಮಾಜೋ ಭಾಷಿಕ ಅಧ್ಯಯನಕ್ಕೆ ತೊಡಗಲು ಸಾಕಷ್ಟು ತಾವಿದೆ.

ಸ್ಪಷ್ಟ ಓದು, ಶುದ್ಧ ಬರಹ

ಡಾ.ಅಶೋಕಕುಮಾರ ರಂಜೇರೆ

ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಗ್ರಾಮವೊಂದರ ಶಾಲಾ ವಿದ್ಯಾರ್ಥಿಯೊಬ್ಬನಿಗೆ ಶಿಕ್ಷಕರೊಬ್ಬರು ಪಕ್ಕೆಲುಬು ಎನ್ನುವ ಪದವನ್ನು ಉಚ್ಚರಿಸಲು ಹೇಳಿಕೊಡುವಾಗ, ಉಚ್ಚಾರಣೆಯಲ್ಲಿ ವಿದ್ಯಾರ್ಥಿ ಪದೇ ಪದೇ ತಪ್ಪು ಮಾಡುತ್ತಿರುವ ವೀಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಇದೇ ರೀತಿಯ ಪ್ರಕರಣಗಳಾದ ಪುಳಿಯೋಗರೆ ಪದವನ್ನು ಒಂದೇ ಬಾರಿಗೆ ವಿದ್ಯಾರ್ಥಿಗೆ ಕಲಿಸಲು ಪ್ರಯತ್ನಿಸುವ ಮತ್ತು ನಪುಂಸಕ ಪದವನ್ನು ಉಚ್ಚರಿಸಲು ಬಾರದೇ ಇರುವ ವಿದ್ಯಾರ್ಥಿಯೊಬ್ಬನನ್ನು ಶಿಕ್ಷಕರೊಬ್ಬರು ಗೇಲಿ ಮಾಡುವ ವೀಡಿಯೋಗಳು ವೈರಲ್ ಆಗಿರುವುದು ಗಮನಿಸಿದ್ದೇವೆ. ಆ ಸಂಬಂಧ ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಟಿಪ್ಪಣಿಯೊಂದನ್ನು ಬರೆದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದ್ದಾರೆ. ಸೂಚನೆಯಲ್ಲಿ ಈ ವೀಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟವರನ್ನು ಪತ್ತೆಹಚ್ಚಲು ಸೈಬರ್ ಕ್ರೈಮ್ ಠಾಣೆಗೆ ದೂರು ನೀಡಲು ಮತ್ತು ಸದರಿ ವೀಡಿಯೋ ವೈರಲ್ ಮಾಡಿದ ಶಿಕ್ಷಕ ಮತ್ತು ಅವರ ಶಾಲೆಯ ಮುಖ್ಯೋಪಾಧ್ಯಾಯರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸೂಚನೆ ನೀಡಿದ್ದಾರೆ. ಮಾನ್ಯ ಶಿಕ್ಷಣ ಸಚಿವರು ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿ ಮಕ್ಕಳು ಹೀಗೆ ಗೇಲಿಗೆ ಒಳಗಾಗುವ ಮತ್ತು ಅವಮಾನಕ್ಕೀಡು ಮಾಡುವ ಶಿಕ್ಷಕರ ಬಗ್ಗೆ ಕಾನೂರು ಕ್ರಮ ಕೈಗೊಳ್ಳಲು ಸೂಚನೆ ನೀಡಿರುವುದು ಒಳ್ಳೆಯ ಬೆಳವಣಿಗೆಯಾದರೂ ಸ್ಪಷ್ಟ ಓದು ಮತ್ತು ಶುದ್ಧ ಬರಹದ ಕಲ್ಪನೆಯ ಹಿಂದಿನ ತಾತ್ವಿಕತೆ ಕುರಿತು ಗಂಭೀರವಾಗಿ ಯೋಚಿಸಬೇಕಾಗಿದೆ.

ವೈರಲ್ ಆದ ವೀಡಿಯೋವನ್ನು ಸೂಕ್ಷ್ಮವಾಗಿ ಗಮನಿಸಿದರೆ ವಿದ್ಯಾರ್ಥಿ ಪಕ್ಕೆಲುಬು ಎನ್ನುವ ಪದವನ್ನು ಸ್ಪಷ್ಟವಾದ ಉಚ್ಚಾರಣೆ ಮಾಡುವಾಗ ಆಗುತ್ತಿರುವ ವ್ಯತ್ಯಾಸ ನೋಡುಗರಿಗೆ ನಗುತರಿಸುವಂತಿದ್ದರೂ ಅದು ಅಪರಾಧವೇನಲ್ಲ. ಒಂದು ತರಗತಿಯಲ್ಲಿರುವ ಎಲ್ಲ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಒಂದೇ ಸಮನಾಗಿರುವುದಿಲ್ಲ. ಇದಕ್ಕೆ ಸಾಮಾಜಿಕವಾದ, ವೈಯಕ್ತಿಕವಾದ ಕಾರಣಗಳೂ ಇರುತ್ತವೆ. ಇದನ್ನು ಮೊದಲಿಗೆ ಶಿಕ್ಷಕರು ಮನಗಾಣಬೇಕಿದೆ. ಏಕೆಂದರೆ ಒಂದು ತರಗತಿಯಲ್ಲಿನ ಎಲ್ಲ ಮಕ್ಕಳನ್ನು ಒಂದೇ ರೀತಿಯಲ್ಲಿ ಕಲಿಸುವ ಮತ್ತು ಮೌಲ್ಯಮಾಪನಕ್ಕೆ ಒಡ್ಡುವ ವಿಧಾನವೇ ಸರಿಯಾದ ಕ್ರಮವಲ್ಲ. ಒಂದು ತರಗತಿಯಲ್ಲಿ ಇರುವ ಮಕ್ಕಳು ಬೇರೆ ಬೇರೆ ಧರ್ಮ, ಜಾತಿ, ಲಿಂಗ, ವರ್ಗಗಳಿಂದ ಬಂದವರಾಗಿರುತ್ತಾರೆ. ಅವರೆಲ್ಲರೂ ತಮ್ಮ ತಮ್ಮ ಮನೆ ಮತ್ತು ಪರಿಸರದಲ್ಲಿ ಒಂದೇ ರೀತಿಯ ಕನ್ನಡವನ್ನು ಬಳಸುವುದಿಲ್ಲ. ಹಾಗಾಗಿ ಪ್ರತಿ ಮಕ್ಕಳ ಕಲಿಕಾ ಮಟ್ಟ ಒಂದೇ ರೀತಿಯಲ್ಲಿ ಇರುವುದಿಲ್ಲ. ಜೊತೆಗೆ ಕೆಲವು ಸಂದರ್ಭದಲ್ಲಿ ಇದಕ್ಕೆ ವ್ಯಕ್ತಿಗತ ನೆಲೆಯಲ್ಲಿ ಇರುವ ದೈಹಿಕ ಮತ್ತು ಮಾನಸಿಕ ಆರೋಗ್ಯವೂ ಕಾರಣವಾಗಿರಬಹುದು. ಅಷ್ಟೇ ಅಲ್ಲ ಸ್ಪಷ್ಟ ಓದು ಮತ್ತು ಶುದ್ಧ ಬರಹ ಯಾವುದು ಎನ್ನುವಲ್ಲಿಯೇ ಮತ್ತೂ ಕೆಲವು ಗೊಂದಲಗಳಿವೆ.

ದೈಹಿಕವಾಗಿ ಅಂಗಾಂಗಳ ಬೆಳವಣಿಗೆಯಲ್ಲಾದ ನ್ಯೂನ್ಯತೆಯೂ ಒಂದು ಕಾರಣವಾದರೆ ಒತ್ತಕ್ಷರಗಳು, ಕೂಡು ಪದಗಳು, ಸಮಾಸ ಪದಗಳು ಕನ್ನಡದ ರಚನೆಗಿಂತ ಭಿನ್ನವಾದ ರಚನೆಯ ಪದಗಳನ್ನು ಉಚ್ಚರಿಸುವಲ್ಲಿ ಇಂಥ ತಪ್ಪುಗಳು (ತಪ್ಪು ಎಂದು ಪರಿಭಾವಿಸುವುದಾದರೆ) ಸಹಜವಾಗಿಯೇ ತರಗತಿಗಳ ಒಳಗೂ ಹೊರಗೂ ನಡೆಯುತ್ತವೆ. ಸದರಿ ವೀಡಿಯೋದಲ್ಲಿ ಪಕ್ಕೆಲುಬು ಪದವನ್ನು ಉಚ್ಚರಿಸುವಲ್ಲಿ ಮಗು ಮೊದಲಿಗೆ ತನಗೆ ಈ ಪದ ಉಚ್ಚರಿಸಲು ಸಾಧ್ಯವಿಲ್ಲ ಎಂದು

Scanned with CamScanner



Scanned with CamScanner

ಸಂಗಾತ

ತ್ರೈಮಾಸಿಕ ಸಾಹಿತ್ಯ ಪತ್ರಿಕೆ

ಮೇ–ಜುಲೈ

ಆಗಸ್ಟ್–ಅಕ್ಟೋಬರ್

ಸಂಯುಕ್ತ ಸಂಚಿಕೆ–2020



ಸಂಪಾದಕ

ಟಿ. ಎಸ್. ಗೊರವರ

ಸಂಪರ್ಕ ವಿಳಾಸ

ಸಂಪಾದಕರು

ಸಂಗಾತ ಪತ್ರಿಕೆ

ಕರ್ನಾಟಕ ವಿಶ್ವವಿದ್ಯಾಲಯ ರಸ್ತೆ

ಜಯನಗರ ಕ್ರಾಸ್

ಸಪ್ತಾಪುರ, ಧಾರವಾಡ– 580001

ಮೊಬೈಲ್ : 9341757653

e-mail: sangaata2018@gmail.com

tsgoravar@gmail.com

ಚಂದಾ ವಿವರ

ಬಿಡಿ ಪ್ರತಿ : ರೂ. 150

ವಾರ್ಷಿಕ ಚಂದಾ (ನಾಲ್ಕು ಸಂಚಿಕೆ): ರೂ. 500

ಮುಖಪುಟ ವಿನ್ಯಾಸ

ಸೌಮ್ಯ ಕಲ್ಯಾಣಕರ್

ಸಂಚಿಕೆಯ ಕಲಾವಿದರು

ಸೃಜನ್

ಭೂಮಿಕಾ ಕುಂಟೋಜಿ

ನಿನಾದ

ಹಜರತ್ ಅಲಿ

ಮುದ್ರಣ,

ಲಕ್ಷ್ಮೀ ಮುದ್ರಣಾಲಯ

ಬೆಂಗಳೂರು

Scanned with CamScanner

೪ ಎದೆ ಹಿಗ್ಗಿಸುವ ನಿದ್ದೆ
ಲೋಕಾಂತದ ಸದ್ದುಗಳಲ್ಲೇ ಅವಿತ ಏಕಾಂತ
ಟಿ.ಎಸ್.ಗೊರವರ



ಏಕಾಂತ ಸಂಕಥನ

೭ ಏಕಾಂತತೆ ಎಂಬ ವರ್ಗಪ್ರಜ್ಞೆ
ಮನು ವಿ. ದೇವದೇವನ್

೧೨ ಏಕಾಂತವೆಂಬುದು ಕವಿಸಮಯವಲ್ಲ
ಕೆ.ಫಣಿರಾಜ್

೧೫ ಏಕಾಂತಕ್ಕೆ ಹಂಬಲಿಸುವ ಜೀವಾತ್ಮಗಳು
ಎಚ್.ಎಸ್.ಶಿವಪ್ರಕಾಶ್

೧೬ ಲೇಖಕನ ಏಕಾಂತ ಭಿನ್ನವೇನೂ ಅಲ್ಲ
ಜಯಂತ ಕಾಯ್ಕಿಣಿ

೧೭ ನಿರ್ಜನವೇಕೋ ಚಿತ್ತ ಸಮಾಧಾನವುಳ್ಳ ಶರಣಂಗೆ?
ಜಿ.ವಿ.ಆನಂದಮೂರ್ತಿ

೧೯ ಇದು ಉತ್ತರವಲ್ಲ
ರಘುನಂದನ

೨೨ ಲೋಕಾಂತದ ಗಾಢ ಅನುಭವ ಇಲ್ಲದಿದ್ದರೆ ಏಕಾಂತಕ್ಕೆಲ್ಲಿ ಜಾಗ?
ಬಸವರಾಜ ಸಾದರ

೨೫ ಹೇಳತೇನ ಕೇಳಾ
ಏಕಾಂತ ಮತ್ತು ಏಕಾಕಿತನ : ಒಂದು ಸಂಕಟಕಥನ
ಬರಗೂರು ರಾಮಚಂದ್ರಪ್ಪ

ಹಿ ಇಸ್ ಎ ಪೊಲಿಟಿಕಲ್ ಫಿಲಾಸಫರ್
ಪ್ರೊ.ನರಸಿಂಹಪ್ಪ. **ನಿರೂಪಣೆ** : ಬಸವರಾಜು ಮೇಗಲಕೇರಿ

೨೬ ಜೈಲು ಪರಿಸರದ ಏಕಾಂತ ಕಥನಗಳು
ಐ.ಜೆ.ಮ್ಯಾಗೇರಿ

೬೧ ಮೃತ ಕವಿತೆ
ಸಂಶೋಧಕ ಸತ್ಯ ಹೇಳುವಾಗ ಹಿಂಸೆಯ, ಈರ್ಷೆಯ ಭಾಷೆ ಬಳಸಬಾರದು: ಷ.ಶೆಟ್ಟರ್
ವಿಕ್ರಮ ವಿಸಾಜಿ

೨೯ ಗದ್ಯ ಕವಿತೆ
ಟಿ.ಎಸ್.ಗೊರವರ

Scanned with CamScanner

೮೨

ಕೆ.ಪಿ.ಮೃತ್ಯುಂಜಯ
ಗೀತಾ ವಸಂತ
ಶಿವರಾಜ ಬೆಟ್ಟದೂರು

೯೪ ಕವಿತೆಗಳ ಕುರಿತು ಟಿಪ್ಪಣಿ
ಓ.ಎಲ್.ನಾಗಭೂಷಣಸ್ವಾಮಿ

೯೯ ಕಾಶ್ಮೀರದ ಅನುಭಾವಿ ಕವಿ ಲಾಲ್ ದೇಡಳ ವಾಕ್‌ಗಳು
ಕನ್ನಡಕ್ಕೆ : ವಿಜಯಾ ಗುತ್ತಲ





೧೨೪ ಕಸವರಮೆಂಬುದು ನೆಱೆಸೈರಿಸಲಾರ್ಪೊಡೆ...
ಸೋಮಶೇಖರ ಕನಕಾಚಲ

೧೩೧ ಪಕ್ಕಿಹಳ್ಳದಿಂದ ಗಂಗಾತಟದವರೆಗೆ
ನಾರಾಯಣ ಕೆ.ವಿ.

ಗೊಲ್ಲರು ಮತ್ತು ಕುರುಬರು : ಒಂದು ಜಾತಿ ಕಥನ
ಟಿ.ಎಸ್.ಗೊರವರ

೧೩೭ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ೨೦೨೦ (೨೦೧೯) : ಒಂದು ವಿಶ್ಲೇಷಣೆ
ಬಿ. ಶ್ರೀಪಾದ ಭಟ್

೧೪೨ ಏಕತಾನತೆಯ ಸೌಂದರ್ಯ
ಹರೀಶ್ ಎಂ.ಜಿ.

೧೪೬ ಜನಪ್ರಿಯತೆ ಮತ್ತು ಮಾಧ್ಯಮಗಳು: ಪುನರ್‌ವ್ಯಾಖ್ಯಾನದ ಅನಿವಾರ್ಯತೆ
ಎನ್.ಕೆ.ಪದ್ಮನಾಭ

೧೫೧ ಸಂವಹನದ ಸಾಂಗತ್ಯ ಮತ್ತು ಸಂವಾದ
ಹೃಷಿಕೇಶ ಬಹದ್ದೂರ ದೇಸಾಯಿ

೧೦೧ ಮುಟ್ಟಿಗೆ ಕಳಂಕ ಏಕೆ?
ಎಚ್.ಎಸ್.ಶ್ರೀಮತಿ

೧೦೮ ರುಕ್ಮಾದೇವಿಯ ಕಥೆ
ಲಲಿತಾ ಸಿದ್ಧಬಸವಯ್ಯ

೧೧೫ ಕೆಳಸಮುದಾಯಗಳು ಮತ್ತು ಅವುಗಳ ಭಾಷಿಕ ಬಳಕೆ
ಅಶೋಕಕುಮಾರ ರಂಜೇರೆ

೧೧೯ ಪ್ರಬಂಧ
ನಮ್ಮೂರ ಸೊಳ್ಳೆಗಳು
ವೆಂಕಟೇಶ ಮಾಚಕನೂರ

Scanned with CamScanner

ಕೆಳಸಮುದಾಯಗಳು ಮತ್ತು ಅವುಗಳ ಭಾಷಿಕ ಬಳಕೆ

◆ ಅಶೋಕಕುಮಾರ ರಂಜೇರೆ

ಭಾಷೆ ಎನ್ನುವುದು ಕೇವಲ ಮನುಷ್ಯರ ನಡುವಿನ ಸಂವಹನ ಮಾಧ್ಯಮದ ಸಾಧನವಷ್ಟೇ ಅಲ್ಲ. ಅದು ಆ ಸಮಾಜದ ರಚನೆಯ ತಳಹದಿಯೂ ಆಗಿರುತ್ತದೆ. ಹಾಗಾಗಿ ಯಾವುದೇ ಭಾಷೆಯನ್ನು ಬಳಸುವ ಆ ಭಾಷಿಕ ಸಮುದಾಯದ ಸಾಮಾಜಿಕ ಅಂಶಗಳು, ಬದುಕಿನ ವಿಧಾನಗಳು ಮೈಗೂಡಿಸಿಕೊಂಡಿರುತ್ತದೆ. ಆದ್ದರಿಂದಲೇ ಒಬ್ಬರು ಒಂದು ನುಡಿಯನ್ನು ಬಳಸುತ್ತಿರುವಾಗಲೇ ಅಥವಾ ಮಾತಾಡುತ್ತಿದ್ದರೆ ಬಹುಮಟ್ಟಿಗೆ ಅವರ ಸ್ಥಾನಮಾನ, ಪ್ರದೇಶ, ಸಾಮಾಜಿಕ ಅಂತಸ್ತು ಎಲ್ಲವನ್ನು ತಿಳಿದುಕೊಳ್ಳಲು ಸಾಧ್ಯವಿದೆ. 'ಅವನ ಮಾತೇ ಅವನ ಸಂಸ್ಕೃತಿಯನ್ನು ತಿಳಿಸುತ್ತದೆ' ಎನ್ನುವಂಥ ಮಾತುಗಳು ಸಮಾಜದಲ್ಲಿ ಚಾಲ್ತಿಯಲ್ಲಿರುವುದು, ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ 'ಕುಲಮಂ ನಾಲಗೆ ತಬ್ಬುವವೊಲ್' ಎಂದು ಹೇಳಿರುವುದು ಇದೇ ಹಿನ್ನೆಲೆಯಲ್ಲಿ ಇರಬೇಕು. ಜನರು ಒಂದು ನುಡಿಯನ್ನು ಕಲಿಯುವಾಗ ಕೇವಲ ಭಾಷೆಯನ್ನಷ್ಟೇ ಕಲಿಯಲಾರರು. ಅದರ ಜೊತೆಗೆ ಅದರಲ್ಲಿ ಬೆರೆತುಹೋದ ಜೀವನವಿಧಾನವನ್ನೂ ಕಲಿಯುತ್ತಿರುತ್ತಾರೆ. ಹಾಗಾಗಿ ಒಂದು ನುಡಿಯನ್ನು ಕಲಿಯುವಾಗ ಸಹಜವಾಗಿಯೇ ಆ ಭಾಷಿಕ ಸಮುದಾಯದ ನಂಬಿಕೆಗಳು, ಆಲೋಚನಾ ವಿಧಾನ, ಪಾರಂಪರಿಕ ತಿಳಿವು ಅದರೊಂದಿಗೆ ತಾನಾಗೇ ಬಂದುಬಿಡುತ್ತದೆ. ಇದೇ ಹಿನ್ನೆಲೆಯಲ್ಲಿ ಕವಿ ಕೆ.ಬಿ.ಸಿದ್ದಯ್ಯ ಅವರು ಒಂದೆಡೆ ಹೀಗೆ ಹೇಳುತ್ತಾರೆ. 'ನಾನು ಬಕಾಲ ಖಂಡಕಾವ್ಯವನ್ನು ಬರ್ದಾಗ, ಏನಪ್ಪ ಬಹಳ ಚೆನ್ನಾಗಿ ಬರ್ದಿದ್ದೀಯ, ನಾನು ಡಿಕ್ಶನರಿ ಎಲ್ಲ ನೋಡ್ದೆ, ಆದ್ರೆ ಆ ಶಬ್ದ ಇಲ್ವಲ್ಲ. ಅದಕ್ಕೆ ಏನು ಅರ್ಥ ಅಂತ ಅನೇಕರು ನನ್ನನ್ನು ಕೇಳಿದ್ರು. ಅದ್ಕೆ ನಾನು ಹೇಳ್ದೆ, ಡಿಕ್ಶನರಿಯಲ್ಲಿ ಇರೋ ಶಬ್ದ ಅಲ್ಲ ಅದು. ಡಿಕ್ಶನರಿಗೆ ಸೇರ್ಪಡೆಯಾಗ್ಬೇಕಿದೆ' ಹಾಗಾಗಿ ಯಾವುದೇ ನುಡಿ ಕೇವಲ ಒಂದು ಭಾಷೆಯಾಗಿರದೇ ಆ ಸಮುದಾಯದ ಬದುಕಿನ ಪ್ರತಿಬಿಂಬವೂ ಆಗಿರುತ್ತದೆ.

ಬೀದರ್ ಜಿಲ್ಲೆಯ ಸುಲ್ತಾನಬಾದ್ ವಾಡಿಯವರಾದ ಅಶೋಕಕುಮಾರ ರಂಜೇರೆ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಭಾಷೆ ಸಮಾಜ ಶಿಕ್ಷಣ, ಸಾಹಿತ್ಯ ಮತ್ತು ಇತಿಹಾಸದ ಸಂಬಂಧಗಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

Scanned with CamScanner

ಭಾಷೆಗೂ ಮತ್ತು ಭಾಷೆಯನ್ನು ಬಳಸುವ ಸಮುದಾಯಗಳಿಗೂ ಇರುವ ಇಂಥ ಭಾವನಾತ್ಮಕ ಸಂಬಂಧ ಇರುವುದರಿಂದಲೇ ಯಾವುದೇ ಒಂದು ಭಾಷೆ, ಆ ಭಾಷೆಯನ್ನು ಬಳಸುವ ಜನಸಮುದಾಯ ಮತ್ತು ಆ ಜನಸಮುದಾಯ ನೆಲೆಸಿದ ಪ್ರದೇಶಕ್ಕೆ ಇಂಥ ಒಂದು ಅವಿನಾಭಾವ ಸಂಬಂಧವನ್ನು ಕಲ್ಪಿಸಿ ಮಾತಾಡುತ್ತೇವೆ. ಉದಾಹರಣೆಗೆ ಕನ್ನಡ–ಕನ್ನಡಿಗ ಮತ್ತು ಕರ್ನಾಟಕ. (ಭಾಷೆಗೂ ಮತ್ತು ಭಾಷೆಯನ್ನು ಮಾತನಾಡುವ ವ್ಯಕ್ತಿಗೂ ಮತ್ತು ಆತ ವಾಸಿಸುವ ನೆಲಕ್ಕೂ ನೇರವಾದ ಸಂಬಂಧವೇನೂ ಇರುವುದಿಲ್ಲ. ಸಾಮಾಜಿಕವಾಗಿ ಸಂಬಂಧ ಏರ್ಪಟ್ಟಿರುತ್ತದೆ.) ನಾವು, ನಮ್ಮದು ಎನ್ನುವ ಪರಿಕಲ್ಪನೆಯಲ್ಲಿ ಇದನ್ನು ವಿವರಿಸುತ್ತೇವೆ. ಹಾಗೆ ನೋಡಿದರೆ ಕನ್ನಡವೂ ಒಂದಲ್ಲ. ಕನ್ನಡಿಗರು ಒಂದಲ್ಲ. ಕನ್ನಡ ನಾಡಿನಲ್ಲೇ ಹಲವು ಕನ್ನಡಗಳಿವೆ. ಹಲವು ಬಗೆಯ ಕನ್ನಡಿಗರಿದ್ದಾರೆ. ಪ್ರಾದೇಶಿಕವಾಗಿ ಬೀದರ್‌ನಿಂದ ಹಿಡಿದು ದಕ್ಷಿಣದ ಚಾಮರಾಜನಗರದವರೆಗೆ, ಪೂರ್ವದ ಬಳ್ಳಾರಿಯಿಂದ ಹಿಡಿದು ಪಶ್ಚಿಮದ ಕರಾವಳಿವರೆಗೆ ಒಂದೇ ಕನ್ನಡ ಇಲ್ಲ. ಘಟ್ಟದ ಮೆಲೂ, ಘಟ್ಟದ ಕೆಳಗೂ ಬೇರೆ ಬೇರೆ ಕನ್ನಡಗಳಿವೆ. ಅಷ್ಟೇ ಅಲ್ಲ ಒಂದೇ ಪ್ರದೇಶದಲ್ಲಿ ಬದುಕುತ್ತಿರುವ ಕನ್ನಡಿಗರೇ ಆದರೂ ಬ್ರಾಹ್ಮಣರ ಕನ್ನಡ, ಗೌಡರ ಕನ್ನಡ, ಲಿಂಗಾಯತರ ಕನ್ನಡ, ದಲಿತರ ಕನ್ನಡವೂ ಒಂದೇ ಅಲ್ಲ. ಭಾಷಿಕವಾಗಿ ನಾವೆಲ್ಲ ಕನ್ನಡಿಗರು ಒಂದು ಎಂದು ಹೇಳುವಾಗಲೂ ಈ ಅಂತರ ಇದ್ದೇ ಇರುತ್ತದೆ. ಪ್ರಾದೇಶಿಕವಾಗಿ ಹೀಗೆ ಕನ್ನಡ ಭಿನ್ನ ರೂಪ ತಾಳಲು ಅನೇಕ ಕಾರಣಗಳಿವೆ. ಪರಸ್ಪರ ಸಂಪರ್ಕ ಇರದ ಕಾರಣದಿಂದಾಗಿ ಪ್ರಾದೇಶಿಕವಾಗಿ ಈ ಭಿನ್ನತೆ ಕಾಣುತ್ತೇವೆ. ಆದರೆ ಒಂದೇ ಪ್ರದೇಶದಲ್ಲಿ ಇದ್ದರೂ, ಒಂದೇ ಊರಲ್ಲಿ ಇದ್ದರೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದರಿಂದ ಒಂದೇ ಪ್ರದೇಶದಲ್ಲಿನ ಜಾತಿ ವರ್ಗಗಳಲ್ಲಿ ಭಾಷಿಕ ಭಿನ್ನತೆಯನ್ನು ಕಾಣುತ್ತೇವೆ. ಭಾಷೆಯಲ್ಲಿ ರೂಪುಗೊಂಡ ಈ ಭಿನ್ನತೆಯ ಮೂಲಕ ಆಯಾ ಸಮುದಾಯಗಳ ಸಾಮಾಜಿಕ ಚಹರೆಯನ್ನು ಗುರುತಿಸಲು ಸಾಧ್ಯವಿದೆ.

ಒಟ್ಟಾರೆಯಾಗಿ ಕನ್ನಡದ ಸಂದರ್ಭವನ್ನು ಕುರಿತು ವಿವೇಚಿಸುವಾಗ ಸಾವಿರಾರು ವರ್ಷಗಳ ಹಿಂದಿನ ಪಂಪನ ಕಾಲದ ಪದಗಳನ್ನು, ನಿತ್ಯನಿರಂತರವಾಗಿ ಬದಲಾಗುತ್ತಿರುವ ವರ್ತಮಾನದ ಸಾಮಾಜಿಕ ಅಂಶಗಳನ್ನೂ, ಮುಂದೆ ನಿರ್ಮಾಣವಾಗುವ ಭವಿಷ್ಯತ್ತಿನ ಅಂಶಗಳನ್ನೂ ಏಕಕಾಲಕ್ಕೆ ಭಾಷೆ ತನ್ನಲ್ಲಿ ಹುದುಗಿಸಿಟ್ಟುಕೊಂಡಿರುತ್ತದೆ. ಹಾಗಾಗಿ ಭಾಷೆ ಎನ್ನುವುದು ಭೂತವೂ ಹೌದು, ವರ್ತಮಾನವೂ ಹೌದು ಮತ್ತು ಭವಿಷತ್ತು ಹೌದು. ಭಾಷೆಯಲ್ಲಿ ಚಾರಿತ್ರಿಕ ಅಂಶಗಳು ಇರುತ್ತವೆ, ವಾಸ್ತವದ ಜಗತ್ತು ಇರುತ್ತದೆ ಮತ್ತು ಭವಿಷ್ಯತ್ತಿನ ಅಲೋಚನೆಗಳೂ ಒಟ್ಟೊಟ್ಟಿಗೆ ಮೈದಳೆದಿರುತ್ತವೆ. ಭಾಷೆಯನ್ನು ಬಳಸುವವರು, ತಾವು ಬಳಸುವ ಭಾಷೆಯ ಬಗೆಗೆ ಏನೇ ಹೇಳಿದರೂ ಅವರು ಬಳಸುವ ಭಾಷಿಕ ರಚನೆ ಮತ್ತು ಬಳಕೆಯಲ್ಲೇ ಇವು ಅಂತರ್ಗತವಾಗಿರುತ್ತವೆ. ಹಾಗಾಗಿ ಸಮುದಾಯದ ನಂಬಿಕೆಗಳ ಹಿನ್ನೆಲೆಯಲ್ಲಿಯೇ ಭಾಷೆಗೆ ಅರ್ಥ ನಿರ್ಮಾಣವಾಗುವುದರಿಂದ ಜಾತಿ, ಧರ್ಮ, ವರ್ಗ, ವರ್ಣ, ಪ್ರದೇಶಗಳ ಚಹರೆಯಾಗಿಯೂ ಅದನ್ನು ನೋಡಲು ಅವಕಾಶವಿದೆ.

ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಕನ್ನಡ ನಾಡಿನಲ್ಲಿ ವಾಸಿಸುವ ನಾವೆಲ್ಲರೂ ಒಂದು ಎಂದು ಹೇಳಿದರೂ ನಾವೆಲ್ಲ ಒಂದಲ್ಲ. ಕನ್ನಡ ಭಾಷೆಯನ್ನೇ ಬಳಸುವ ಕನ್ನಡಿಗರೂ ಒಂದಲ್ಲ. ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಇರುವ ಅಸಮಾನತೆಯ ಅಂತರದಿಂದ ಭಾಷೆಯಲ್ಲೂ ಭಿನ್ನಾಂಶಗಳನ್ನು ಸೃಷ್ಟಿ ಮಾಡಿದೆ. ಸ್ವಾತಂತ್ರ್ಯ ಬಂದು ಏಳು ದಶಕಗಳು ಕಳೆದರೂ ಜಾತಿ, ಧರ್ಮಗಳಿಂದ ಬಿಡಿಸಿಕೊಳ್ಳಲಾಗದ ಈ ಸಮಾಜದಲ್ಲಿ ಭಾಷಿಕವಾಗಿಯೂ ಈ ಅಂತರ ಬಹುಮಟ್ಟಿಗೆ ಹಾಗೇ ಮುಂದುವರೆದಿದೆ. ಮೇಲು ನೋಟಕ್ಕೆ ಇದು ಕಾಣದೇ ಹೋದರೂ ಭಾಷಿಕ ರಚನೆ ಮತ್ತು ಬಳಕೆಯ ಉದಾಹರಣೆಗಳಿಂದ ಇದನ್ನು ಸ್ಪಷ್ಟಪಡಿಸಲು ಸಾಧ್ಯವಿದೆ.

ಉದಾಹರಣೆ : 01. ಸುಮಾರು ಎರಡು ದಶಕಗಳ ಹಿಂದೆ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗವು 'ಕೃಷಿಪದ ಕೋಶ' ಎನ್ನುವ ಯೋಜನೆಯನ್ನು ಡಾ.ಕೆ.ವಿ.ನಾರಾಯಣ ಅವರ ನಿರ್ದೇಶನದಲ್ಲಿ ನಿರ್ವಹಿಸಲಾಗುತ್ತಿತ್ತು. ಜಾಗತೀಕರಣ, ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಯಿಂದ ಸಾಮಾಜಿಕವಾಗಿ ಅನೇಕ ಪಲ್ಲಟಗಳು ಆಗುತ್ತಿದ್ದವು. ಕೃಷಿ ಪ್ರಧಾನವಾಗಿರುವಂಥ ಭಾರತದಂಥ ದೇಶದಲ್ಲಿ ಕೃಷಿಯಲ್ಲೂ ಕೂಡ

Scanned with CamScanner

ಮಹತ್ತರವಾದ ಪಲ್ಲಟಗಳು ಆಗುತ್ತಿದ್ದವು. ಪಾರಂಪರಿಕ ತಿಳುವಳಿಕೆಯಿಂದ ಆಧುನಿಕ ವಿಜ್ಞಾನದ ಕಡೆಗೆ ವಾಲಿದ ಕೃಷಿಯಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಿದ್ದದ್ದರಿಂದ ಸಹಜವಾಗಿಯೇ ಕೃಷಿಗೆ ಸಂಬಂಧಿಸಿದಂತೆ ಅನೇಕ ಕೃಷಿ ವಿಧಾನಗಳು, ಸಲಕರಣೆಗಳು, ಆಚರಣೆಗಳನ್ನು ಬಿಟ್ಟುಕೊಡುವ ಮೂಲಕ ಪಾರಂಪರಿಕ ತಿಳಿವು ಹಿನ್ನೆಲೆಗೆ ಸರಿಯುತ್ತಿರುವ ಸಂಕೀರ್ಣವಾದ ಕಾಲ. ಅಂಥ ಸಂಕೀರ್ಣವಾದ ಪಲ್ಲಟದಿಂದಾಗಿ ಪೂರ್ತಿಯಾಗಿ ನಾಶವಾಗುವ ಮೊದಲು ಅವುಗಳನ್ನು ಸಂಗ್ರಹಿಸಿಡಬೇಕು ಎನ್ನುವ ಉದ್ದೇಶ ಸದರಿ ಯೋಜನೆಯದ್ದಾಗಿತ್ತು. ಒಂದು ಸಮುದಾಯದ ತಿಳಿವು ಅವರ ಭಾಷೆಯಲ್ಲಿ ಅಡಕವಾಗಿರುವುದರಿಂದ ಭಾಷೆ ಕಳೆದುಕೊಳ್ಳುವ ಮುಂಚೆ ಹಾಗೆ ಸಂಗ್ರಹಿಸುವ ಮೂಲಕ ಕನಿಷ್ಠ ಮಟ್ಟದ ತಿಳಿವನ್ನು ಹಿಡಿದಿಡುವ ಉದ್ದೇಶವೂ ಆ ಯೋಜನೆಯದ್ದಾಗಿತ್ತು. ಕೃಷಿಗೆ ಸಂಬಂದಿಸಿದ ಪದಕೋಶವನ್ನು ದಾಖಲಿಸುವ ಹಿನ್ನೆಲೆಯಲ್ಲಿ ಪದ ಸಂಗ್ರಹ ಕಾರ್ಯ ನಡೆಯುತ್ತಿತ್ತು. ಹೀಗೆ ಕೃಷಿ ಸಂಬಂಧಿ ಪದಗಳನ್ನು ಸಂಗ್ರಹಿಸುವಾಗ ಪ್ರಾದೇಶಿಕ ಮತ್ತು ಸಾಮಾಜಿಕ ಭಿನ್ನರೂಪಗಳನ್ನು ದಾಖಲಿಸಬೇಕಿತ್ತು. ಹೀಗೆ ಕೃಷಿ ಮತ್ತು ಕೃಷಿಸಂಬಂಧದ ಆಚರಣೆಗಳು, ಭೂಮಿ, ಮಳೆ, ನಕ್ಷತ್ರ, ಉಪಕರಣಗಳು ಹೀಗೆ ಹತ್ತು ಹಲವು ವಿಭಾಗ ಮಾಡಿಕೊಂಡು ಪದಗಳನ್ನು ಮತ್ತು ಅವುಗಳಿಗೆ ಇರುವ ಅರ್ಥವನ್ನು ದಾಖಲಿಸುವಾಗ ಭಾಷಾ ವಿದ್ಯಾರ್ಥಿಗಳಾದ ನಮಗೆ ಅನೇಕ ಕುತೂಹಲಕಾರಿಯಾದ ಸಂಗತಿಗಳು ಕಾಣುವಂತಾಯಿತು.

ಸಹಜವಾಗಿಯೇ ಕೃಷಿಕರು ಆಕಾಶದ ನಕ್ಷತ್ರಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮ ಕೃಷಿ ಚಟುವಟಿಕೆಗಳನ್ನು ನಡೆಸುವುದು ಕಂಡಿದ್ದೇವೆ. ಹಾಗೇ ನಕ್ಷತ್ರಗಳನ್ನು ಕುರಿತಂತೆ ಮಾತನಾಡುವಾಗ 'ತೊಗಲು ಮಂಚ' ಎನ್ನುವ ಪದ ಕಿವಿಗೆ ಬಿತ್ತು. ಅದನ್ನು ಇನ್ನಷ್ಟು ವಿವರವಾಗಿ ತಿಳಿದುಕೊಳ್ಳಲು ಪ್ರಯತ್ನಿಸಿದಾಗ ಗೊತ್ತಾದದ್ದು ಏನು ಅಂದ್ರೆ ಕೃಷಿಕರು ಇದನ್ನು 'ಕೂರಿಗೆ ತಾಳು' ಎಂದು ಗುರುತಿಸಿದ್ದು. ಇದನ್ನು ಶಿಕ್ಷಣಕ್ಕೆ ತೆರೆದುಕೊಂಡಿದ್ದ ಬ್ರಾಹ್ಮಣರು ಹೇಳುವುದು ಸಪ್ತರ್ಷಿ ಮಂಡಲ ಎಂದು. ಯಾಕೆ ಒಂದೇ ನಕ್ಷತ್ರ ಪುಂಜವನ್ನು ಬೇರೆ ಬೇರೆ ಸಮುದಾಯದವರು ಹೀಗೆ ಬೇರೆ ಬೇರೆ ರೀತಿಯಲ್ಲಿ ಕರೆಯುತ್ತಾರೆ ಎನ್ನುವುದು ಕೂತೂಹಲ ಮೂಡಿಸಿತು. ಬ್ರಾಹ್ಮಣ ಸಮುದಾಯದವರು ಸಂಸ್ಕೃತಭುವಿಷ್ಟವಾದ 'ಸಪ್ತರ್ಷಿ ಮಂಡಲ' ಎಂದು ಕರೆಯುವುದು, ಕೃಷಿಕರಾದವರು ತಮ್ಮ ದಿನನಿತ್ಯದ ಬಳಕೆ ವಸ್ತುವಾದ ಕೂರಿಗೆಯ ತಾಳಿನ ಮೂಲಕ ಗುರುತಿಸುವುದು ಮತ್ತು ದಲಿತ ಸಮುದಾಯದವರು ಇದನ್ನು ತೊಗಲುಮಂಚ ಎಂದು ಕರೆಯುವುದರ ಹಿಂದಿನ ಕಾರಣ ಏನು ಎನ್ನುವುದನ್ನು ಕೂಲಂಕಷವಾಗಿ ಚರ್ಚಿಸುವ ಅಗತ್ಯವಿದೆ. ಬ್ರಾಹ್ಮಣ ಅಥವಾ ಶಿಕ್ಷಣಕ್ಕೆ ತೆರೆದುಕೊಂಡ ಸಮುದಾಯ ಗುರುತಿಸುವ ಸಪ್ತರ್ಷಿ ಮಂಡಲದ ಹಿಂದಿನ ತಿಳುವಳಿಕೆ, ಕೃಷಿಕರು ಕೃಷಿ ಚಟುವಟಿಕೆಯ ನಿರ್ವಹಣೆಯ ಹಿನ್ನೆಲೆಯಲ್ಲಿ ಗುರುತಿಸುವ ಕೂರಿಗೆ ತಾಳಿನ ಹಿಂದಿನ ತಿಳುವಳಿಕೆ ಮತ್ತು ದಲಿತ ವರ್ಗದವರು ತಮ್ಮ ಬದುಕಿನ ವಿಧಾನದ ಮೂಲಕ ಗುರುತಿಸುವ ತೊಗಲು ಮಂಚದ ಹಿಂದಿನ ತಿಳುವಳಿಕೆ ಬೇರೆಯದ್ದೇ ಆಗಿದೆ. ಬ್ರಾಹ್ಮಣ ಕುಟುಂಬದ ವ್ಯಕ್ತಿಗೆ ಕೃಷಿಯ ಜ್ಞಾನವಾಗಲಿ, ಚರ್ಮಕ್ಕೆ ಸಂಬಂಧಿಸಿದ ತಿಳುವಳಿಕೆಯಾಗಲಿ ಇರುವುದಿಲ್ಲ. ಅವರ ತಿಳುವಳಿಕೆ ಏನಿದ್ದರೂ ಓದಿನ ಮೂಲಕ ಬಂದದ್ದು. ಪ್ರಾಯೋಗಿಕ ತಿಳುವಳಿಕೆ ಮೂಲಕ ಬಂದದ್ದಲ್ಲ. ಆದರೆ ಕೃಷಿಕ ಮತ್ತು ದಲಿತ ಸಮುದಾಯದ ಜನ-ರಿಗೆ ಪ್ರಾಯೋಗಿಕವಾಗಿ ತಮ್ಮ ದಿನನಿತ್ಯದ ಕಾಯಕದ ಭಾಗವಾಗಿ ಅದನ್ನು ವಿವರಿಸುವುದನ್ನು ಕಾಣುತ್ತೇವೆ.

ಉದಾಹರಣೆ : 02. ಇನ್ನೊಂದು ಸಂದರ್ಭದಲ್ಲಿ ರಾಯಚೂರು ಪರಿಸರದಲ್ಲಿ ಭೂಮಾಲಿಕರಾದ ಲಿಂಗಾಯತರ ಅಥವಾ ಮೇಲು ವರ್ಗದ ಮನೆಯ ಮುಖ್ಯ ಬಾಗಿಲನ್ನು ದಲಿತರು ದೊಡ್ಡ ಬಾಗಿಲು ಎಂದು ಕರೆದದ್ದು ಮತ್ತು ಭೂಮಾಲಿಕ ಸಮುದಾಯದ ಲಿಂಗಾಯತರು ಮತ್ತು ಮೇಲು ವರ್ಗದ ಜನರು ತಮ್ಮ ಮನೆಯ ಮುಖ್ಯ ಬಾಗಿಲನ್ನು ಹೊರಬಾಗಿಲು ಎಂದು ಕರೆದದ್ದು. ಭೂಮಾಲಿಕ ಸಮುದಾಯದವರಿಗೆ ಮನೆಯ ಒಳಗಿನಿಂದ ನೋಡುವುದಿರಿಂದ ಅವರಿಗೆ ಅದು ಹೊರಬಾಗಿಲು. ದಲಿತ ಅಥವಾ ಊರಿನಿಂದ ದೂರ ಇರುವ ದಲಿತರಿಗೆ ಅದು ದೊಡ್ಡ ಬಾಗಿಲು. ಏಕೆಂದರೆ ಅಷ್ಟು ದೊಡ್ಡದಾದ ಮತ್ತು ಮುಖ್ಯವಾದ ಬಾಗಿಲು ತಮ್ಮ ಸಮುದಾಯದಲ್ಲಿ ಕಾಣಲು ಸಾಧ್ಯವಿಲ್ಲ. ಇದು ಏಕಕಾಲಕ್ಕೆ ಊರಿನ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ತಿಳಿಸುತ್ತದೆ. ಈ ಎರಡೂ ಪ್ರಸಂಗಗಳು ನನ್ನನ್ನು ಕುತೂಹಲಕ್ಕೆ ಕಾರಣವಾಗಿ ಅದನ್ನು ಸಾಮಾಜಿಕವಾಗಿ ನೋಡಲು

Scanned with CamScanner

ಕಾರಣವಾಯಿತು. ಮೊದಲ ಪ್ರಸಂಗದಲ್ಲಿ ದಲಿತ ಸಮುದಾಯದವರು 'ತೊಗಲು ಮಂಚ' ಎಂದು ಬಳಸಿರುವ ಪದ ಲಿಂಗಾಯತ ಅಥವಾ ಬ್ರಾಹ್ಮಣ ವರ್ಗದಲ್ಲಿ ವರ್ಜ್ಯವಾಗಿದೆ. ಏಕೆಂದರೆ ತೊಗಲು ಎನ್ನುವುದೇ ನಿಷೇಧದ ಪದ. ಆದರೆ ಅದನ್ನು ಸಹಜವೆಂಬಂತೆ ದಲಿತ ಸಮುದಾಯ ಬಳಸಿದೆ. ಹಾಗೇನೆ ಅದೇ ನಕ್ಷತ್ರ ಪುಂಜವನ್ನು 'ಕೂರಿಗೆ ತಾಳು' ಎಂದು ಕರೆದದ್ದು. ತಮ್ಮ ದಿನನಿತ್ಯದ ಕೃಷಿಯಲ್ಲಿ ಬಳಸುವ ಕುಂಟಿ ಉಪಕರಣಕ್ಕೆ ಬಳಸುವ ಕೂರಿಗೆ ಆಕಾರದ ಸಾಲಿನ ನಕ್ಷತ್ರ ಪುಂಜವನ್ನು ಕೃಷಿಕರು ಕೂರಿಗೆ ತಾಳು ಎಂದು ಕರೆದದ್ದು. ಬ್ರಾಹ್ಮಣ ವರ್ಗದ ಜನರು ಕೃಷಿಯಾಗಲಿ, ಚರ್ಮಕ್ಕೆ ಸಂಬಂಧಿಸಿದ ಪದಗಳನ್ನು ಬಳಸುವ ಸಂದರ್ಭಗಳು ಇಲ್ಲದೇ ಇರುವುದರಿಂದ ಅವರಲ್ಲಿ ತೊಗಲು ಮಂಚವಾಗಲಿ, ಕೂರಿಗೆ ತಾಳು ಎಂದಾಗಲಿ ಕಂಡು ಬರುವುದಿಲ್ಲ. ಬದುಕಿನ ವಿಧಾನದಿಂದಲೇ ಪದಕೋಶ ರಚನೆಯಾಗುವುದರಿಂದ ಅವರವರ ಸಮುದಾಯದ ಕಾಯಕಕ್ಕೆ ಸಂಬಂಧಿಸಿ ಪದಗಳ ರಚನೆಯಾಗಿದೆ. ಇದು ಅವರ ದಿನನಿತ್ಯದ ಪದಕೋಶದ ಭಾಗವಾಗಿ ರಚನೆಯಾಗಿರುವುದರಿಂದ ಅದರಲ್ಲಿ ಅಂಥದೇನು ವಿಶೇಷವಿಲ್ಲ. ಆದರೆ ಲಿಂಗಾಯತ, ಬ್ರಾಹ್ಮಣರ ಸಮುದಾಯದಲ್ಲಿ ಇಂಥ ತೊಗಲಿಗೆ ಸಂಬಂಧಿಸಿದ ಪದಗಳನ್ನು ಬಳಸುವ ಸಂದರ್ಭಗಳೇ ಇಲ್ಲದ ಕಾರಣ ಅಂಥ ಪದಗಳು ಇರಲು ಸಾಧ್ಯವಿಲ್ಲ.

ಭಾಷೆ ಜಾತಿಸೂಚಕ ಅಥವಾ ಸಮುದಾಯ ಸೂಚಕವಲ್ಲದಿದ್ದರೂ ಭಾಷೆಯಲ್ಲಿನ ಅರ್ಥಕ್ಕೆ, ಕ್ರಿಯೆಗೆ ಮತ್ತು ನಂಬಿಕೆಗಳಿಗೆ ಜಾತಿ ಸಮುದಾಯಗಳ ಗುಣವಿರುತ್ತದೆ. ದಲಿತ ಸಮುದಾಯಕ್ಕೂ ಪುರೋಹಿತ ಅಥವಾ ಫ್ಯೂಡಲ್ ಸಮುದಾಯದ ನಡುವೆ ಸಾಮಾಜಿಕ ಸ್ಥಾನಮಾನದ ಅಂತರವಿರುವುದರಿಂದ ಸಹಜವಾಗಿಯೇ ಅವರಾಡುವ ನುಡಿಯಲ್ಲಿ ಅದು ತಾನಾಗಿಯೇ ವ್ಯಕ್ತವಾಗುತ್ತಿರುತ್ತದೆ. ಇದು ಅಭಿವ್ಯಕ್ತಿಪಡಿಸುವ ನುಡಿಯಲ್ಲಷ್ಟೇ ಅಲ್ಲ ಅದು ಅವರ ದೈಹಿಕ ಭಾಷೆ ಮೂಲಕವೂ ಗುರುತಿಸಲು ಸಾಧ್ಯ ಎಂದು ರಂಗತಜ್ಞರೂ, ಚಿಂತಕರೂ, ಲೇಖಕರೂ ಆಗಿರುವ ಸಿ.ಬಸವಲಿಂಗಯ್ಯ ಅವರು ಒಂದೆಡೆ ಹೇಳುತ್ತಾರೆ. 'ದಣಿ–ಆಳಿನ ಮುಖಾಮುಖಿಯಾದಾಗಿನ ದೃಶ್ಯ ಕಲ್ಪಿಸಿಕೊಂಡರೆ ಸ್ಪಷ್ಟವಾಗುತ್ತದೆ. ಎದುರಿಗೆ ಧಣಿ ಬರುತ್ತಿದ್ದರೆ ಆಳು ವಿನಯಪೂರ್ವಕವಾಗಿ ಎರಡೂ ಕೈಗಳನ್ನು ಜೋಡಿಸಿ, ನಡುಬಗ್ಗಿಸಿ ಸೌಮ್ಯವಾಗಿ ನಮಸ್ಕಾರ ಧಣಿ ಎನ್ನುತ್ತಾನೆ. ಧಣಿ ತನ್ನ ದೇಹವನ್ನೆ ಸೆಟೆಸಿಕೊಂಡು ಎದೆಯುಬ್ಬಿಸಿ ಅಹಂಭಾವದಿಂದ ಹ್ಞೂ... ಹ್ಞೂ ಅಂದಷ್ಟೇ ಹೂಂಕರಿಸುತ್ತಾನೆ. ಕಣ್ಣಲ್ಲಿ ಕಣ್ಣಿಟ್ಟು ನೋಡುವುದಿರಲಿ ಅದ್ಯಾವುದೋ ಪ್ರಾಣಿಯಂತೆ ತಿರಸ್ಕಾರ ಭಾವದಿಂದಲೇ ಪ್ರತಿಕ್ರಿಯಿಸುವುದನ್ನು ಕಾಣುತ್ತೇವೆ.'(ದಲಿತರು ಭಾಷೆ ಮತ್ತು ಸಮಾಜ : ಸಂ. ಡಾ.ಪಿ.ಮಹದೇವಯ್ಯ, ಪ್ರಕಾಶನ, ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, ಪುಟ–148) ಆದ್ದರಿಂದಲೇ ಇರಬೇಕು. ಭಾಷಾ ತಜ್ಞರಾದ ಡಾ.ಕೆ.ವಿ.ನಾರಾಯಣ ಅವರು ತಮ್ಮ ಒಂದು ಲೇಖನದಲ್ಲಿ 'ಕುಲವನ್ನು, ಜಾತಿಯನ್ನು ಗುರುತಿಸುವುದಕ್ಕೆ ಮಾತನ್ನು ಒಂದು ಸಾಧನವಾಗಿ ಬಳಸುತ್ತೇವೆ. ಅದು ಇಂದಿಗೂ ಕೂಡ ನಿಜ. ಅಸಮಾನತೆಯನ್ನು, ಸಾಮಾಜೀಕರಣವನ್ನು ಗುರುತಿಸುವುದಕ್ಕೆ ಭಾಷೆಯನ್ನು ಒಂದು ಚಹರೆಯಾಗಿ ಇಟ್ಟುಕೊಳ್ಳಲಾಗಿದೆ.' (ತೆಂಕಣದ ನುಡಿಗಳು ಮತ್ತು ಇಂಗ್ಲಿಶ್, ಸಂ : ಮೇಟಿ ಮಲ್ಲಿಕಾರ್ಜುನ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪುಟ–130) ಎಂದು ಹೇಳುತ್ತಾರೆ. ದಲಿತ ಸಮುದಾಯದ ಕನ್ನಡ ಬೇರೆ ಸಮುದಾಯದ ಕನ್ನಡಕ್ಕಿಂತ ಬೇರೆಯದೇ ಆಗಿದೆ. ಭಾಷೆಯಲ್ಲಿ ಯಾವುದು ಶ್ರೇಷ್ಠ ಕನಿಷ್ಠ ಎನ್ನುವುದು ಇರದೇ ಇದ್ದರೂ, ಯಾವುದು ಸರಿಯಾದ ಕನ್ನಡ, ಯಾವುದು ಅಮಾನ್ಯ ಕನ್ನಡ ಎನ್ನುವುದು ಸಾಮಾಜಿಕವಾಗಿ ನಿರ್ಣಯಿಸಲ್ಪಡುತ್ತದೆ. ಬ್ರಾಹ್ಮಣರ ಬಗೆಗೆ, ಹೊಲೆಯ ಸಮುದಾಯದ ಬಗೆಗೆ ತಲೆತಲಾಂತರದಿಂದ ಸಾಮಾಜಿಕವಾಗಿ ಕಟ್ಟಿಕೊಟ್ಟ ತಿಳುಳಿಕೆ ಎಂಥದ್ದು ಎನ್ನುವುದನ್ನು 'ಊರು ಹೊಲಗೇರಿ ಒಂದಾಯ್ತದಾ ?', 'ದನಾ ತಿನ್ನೋನ್ಗೆ ಗೊಬ್ಬರದಾಣೆ', 'ವೊಲಿಯನ್ ಕ್ವಾಪ ನೆಲ್ಲುಲ್ ಬೆಂಕಿ ಒಂದೇ' ಎನ್ನುವ ಗಾದೆ ಮಾತು, ನುಡಿಗಟ್ಟುಗಳನ್ನು ನೋಡಿದರೆ ದಲಿತ ವರ್ಗದ ಬಗೆಗಿನ ಮೇಲುವರ್ಗಗಳ ನಂಬಿಕೆಗಳು, ದಲಿತ ವರ್ಗದ ಕೋಪದ ಬಗೆಗೆ ದಲಿತರಿಗೆ ಇರುವ ಅನುಭವವನ್ನು ಹೇಳುತ್ತವೆ. ಕೆಳವರ್ಗ ಮತ್ತು ಮೇಲ್ವರ್ಗಗಳ ಬಗೆಗೆ ಪುರಾಣಗಳು ಕಟ್ಟಿಕೊಡುವ ತಿಳಿವು ಎಂಥದ್ದು ಎನ್ನುವುದನ್ನು ಈ ಕೆಳಗಿನ ಕತೆಯನ್ನು ಗಮನಿಸಬಹುದು.

ಮಹಾಭಾರತದ ವನಪರ್ವದಲ್ಲಿ ಬರುವ ಅಜಗರದ ಕತೆ ನಮಗೆಲ್ಲ ಗೊತ್ತಿದೆ. ಪಾಂಡವರು ವನವಾಸದಲ್ಲಿ

Scanned with CamScanner

ಇರುವ ಸಂದರ್ಭದಲ್ಲಿ ಭೀಮಸೇನನನ್ನು ಹೆಬ್ಬಾವು ಹಿಡಿದುಕೊಂಡಿದ್ದು, ಭೀಮಸೇನನನ್ನು ಹೆಬ್ಬಾವು ಬಿಡಬೇಕಾದರೆ ಧರ್ಮರಾಯ ಹೆಬ್ಬಾವಿನ ಪ್ರಶ್ನೆಗೆ ಉತ್ತರಿಸಿದ್ದು. ಹೆಬ್ಬಾವು ಕೇಳಿದ ಪ್ರಶ್ನೆ ಮತ್ತು ಅದಕ್ಕೆ ಧರ್ಮರಾಯ ನೀಡಿದ ಉತ್ತರ ಕುತೂಹಲಕಾರಿಯಾಗಿದೆ.

ಅಜಗರ ಹೆಬ್ಬಾವು : ರಾಜನೇ ಬ್ರಾಹ್ಮಣನು ಯಾರು ?

ಧರ್ಮರಾಯ : ಸತ್ಯ, ದಾನ, ದಯೆ, ಒಳ್ಳೆಯ ಕರ್ಮದ ಅಭ್ಯಾಸ, ಅಹಿಂಸೆ, ಇಂದ್ರಿಯ ನಿಗ್ರಹ, ಕರುಣೆ ಈ ಗುಣಗಳು ಯಾವನಲ್ಲಿ ಇರುತ್ತವೆಯೋ ಅವನನ್ನು ಬ್ರಾಹ್ಮಣ ಎಂದು ತಿಳಿ.

ಅಜಗರ ಹೆಬ್ಬಾವು : ಈ ಗುಣಗಳು ಶೂದ್ರನಲ್ಲಿ ಕಂಡುಬಂದರೆ ?

ಧರ್ಮರಾಯ : ಆ ಗುಣಗಳು ಶೂದ್ರನಲ್ಲಿ ಕಂಡುಬಂದರೆ, ಬ್ರಾಹ್ಮಣನಲ್ಲಿ ಅದು ಇಲ್ಲದಿದ್ದರೆ, ಆ ಶೂದ್ರನು ಶೂದ್ರನಲ್ಲ (ಅರ್ಥಾತ್ ಅವನು ಬ್ರಾಹ್ಮಣನಲ್ಲ) ಆ ಬ್ರಾಹ್ಮಣನು ಬ್ರಾಹ್ಮಣನಲ್ಲ. (ಅರ್ಥಾತ್ ಶೂದ್ರನು)

ಇದೇ ರೀತಿಯ ಕರ್ಣ ಪರಶುರಾಮರ ನಡುವಿನ ಕತೆಯನ್ನು, ಜಬಲೆಯ ಮಗ ಸತ್ಯಕಾಮ ವಿದ್ಯಾಭ್ಯಾಸದ ಕತೆಗಳು ಪುಷ್ಟೀಕರಿಸುತ್ತವೆ. ಪಾರಂಪರಿಕವಾಗಿ ಸೃಷ್ಟಿಮಾಡಿರುವ ಇಂಥ ನಂಬಿಕೆಗಳೇ ಕೆಳವರ್ಗದ, ದಲಿತರ ಭಾಷೆಯ ಬಗ್ಗೆ ಅಶುದ್ಧತೆ, ಅಪನಂಬಿಕೆ, ಹೀನಾರ್ಥಗಳನ್ನು ಕಲ್ಪಿಸಲಾಗಿದೆ. ಇದನ್ನು ಮೊಗಳ್ಳಿ ಗಣೇಶ್ ಅವರು ತಮ್ಮ ಲೇಖನದಲ್ಲಿ ಹೀಗೆ ಹೇಳಿರುವುದು ಸರಿಯಾಗಿದೆ. 'ಶ್ರೇಷ್ಠರ ನೆಲೆಯಲ್ಲಿ ನೀಚರ ಬಗ್ಗೆ ನಿರ್ಣಾಯಕವಾದ ಅರ್ಥಗಳು ಅನುಶಾಸನದಂತೆ ಜಾರಿಗೊಂಡಿರುತ್ತವೆ. ಮೇಲು ಜಾತಿಯವರ ಮಾತು ಯಾವತ್ತೂ ಸತ್ಯದ ಪರವಾಗಿರುತ್ತದೆಂದಾಗ, ಕೆಳಜಾತಿಯವರು ಮಾತ್ರ ಸುಳ್ಳನ್ನು ಆಡುವವರು ಧ್ವನಿತಾರ್ಥವೂ ವ್ಯಕ್ತವಾಗುತ್ತಿರುತ್ತದೆ. ಕೀಳು ಜನ ಅನೀತಿಯನ್ನಾಡುವವರು ಎಂದು ಮೊದಲೇ ಪೂರ್ವಾಗ್ರಹ ಮೇಲುಜಾತಿಯಲ್ಲಿ ನೆಲೆಸಿರುವುದರಿಂದ ದಲಿತರ ಮಾತು ವಿಶ್ವಾಸಕ್ಕೆ ಅರ್ಹವಲ್ಲ ಎಂಬ ಮೌಲ್ಯವು ಈಗಲೂ ಸಮಾಜದಲ್ಲಿ ಬಲವಾಗಿದೆ.'(ದಲಿತರು ಭಾಷೆ ಮತ್ತು ಸಮಾಜ : ಸಂ. ಡಾ.ಪಿ.ಮಹದೇವಯ್ಯ, ಪ್ರಕಾಶನ, ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, ಪುಟ–140) ಇಂಥ ಅನೇಕ ಉದಾಹರಣೆಗಳ ಮೂಲಕ ಸಮುದಾಯಗಳ ಸಾಮಾಜಿಕ ಚಹರೆಗಳನ್ನು ಅವರುಗಳ ಭಾಷಿಕ ರಚನೆ ಮತ್ತು ಬಳಕೆಯ ಹಿನ್ನೆಲೆಯಲ್ಲಿ ವಿವರಿಸಲು ಸಾಧ್ಯವಿದೆ.

Scanned with CamScanner

ಅಶೋಕಕುಮಾರ ರಂಜೇರೆ
ಗ. ಸ್ವಪ್ನ ಬಿದು - ಶಿಕ್ಷ ಬಾಡ.

32

ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಕನ್ನಡ ಸಂಪಾದಕರು
ಡಾ. ಪಿ. ಮಹಾದೇವಯ್ಯ

ಸಂಪಾದಕ ಮಂಡಳಿ
ಡಾ. ಡಿ. ಪಾಂಡುರಂಗ ಬಾಬು
ಡಾ. ಅಶೋಕಕುಮಾರ ರಂಜೇರೆ

ಸಂಚಿಕೆ
೭೨

ಅಯ್ಯಾ ಎಂದರೇ....

ಡಿ.ಪಾಂಡುರಂಗ ಬಾಬು

'ಅಯ್ಯಾ ಎಂದರೆ ಸ್ವರ್ಗ ಯೆಲವೋ ಎಂದರೆ ನರಕ ನಡುಗನ್ನಡ ಸಾಹಿತ್ಯದ ವಚನವೊಂದರಲ್ಲಿ ಅಯ್ಯಾ ಮತ್ತು ಎಲವೋ ಎಂಬ ಎರಡು ರಚನೆಗಳ ಬಳಕೆಯ ಸಾಮಾಜಿಕ ಪರಿಣಾಮಗಳನ್ನು ಕುರಿತು ದಾಖಲಾಗಿರುವ ಚಾರಿತ್ರಿಕ ಮಹತ್ವದ ಸಾಲುಗಳಿವು. ಅಯ್ಯಾ ಮತ್ತು ಯೆಲವೋ ರಚನೆಗಳ ಬೆಳವಣಿಗೆ ಅವು ಬೇರೆ ಬೇರೆ ನೆಲೆಗಳಲ್ಲಿ ಬಳಕೆಗೊಳ್ಳುತ್ತಾ ಪ್ರಸ್ತುತ ಕರ್ನಾಟಕದ ಉಪ ಮುಖ್ಯ ಮಂತ್ರಿಗಳು ಇತ್ತೀಚೆಗೆ ಅವರ ಅಧೀನದಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಇಲಾಖೆಯ ನೌಕರರನ್ನು ಉದ್ದೇಶಿಸಿ ಮಾತನಾಡುವಾಗ 'ಬಸ್ ಪ್ರಯಾಣಿಕರನ್ನು ಏನಯ್ಯ, ಬಾರಯ್ಯ ಎಂದು ಸಂಬೋಧಿಸಬೇಡಿ, ಸಾರ್ ಎಂದು ಸಂಬೋಧಿಸಿ' ಎಂಬ ಮಾತುಗಳನ್ನು ಒಳಗೊಂಡ ಸಲಹೆ ನೀಡಿದ್ದಾರೆ. ಈ ಸಲಹೆ ನೀಡಿದ್ದುದರ ಔಚಿತ್ಯವನ್ನು ಪ್ರಶ್ನಿಸುವುದು ಈ ಘಟನೆಯನ್ನು ಉಲ್ಲೇಖಿಸಿರುವ ಉದ್ದೇಶವಲ್ಲ. ಬದಲಿಗೆ ಭಾಷಾ ರೂಪವೊಂದು ಸಾಮಾಜಿಕ ನೆಲೆಗಳಲ್ಲಿ ತನ್ನ ಕ್ರಿಯಾತ್ಮಕತೆಯನ್ನು ಪಲ್ಲಟಗೊಳಿಸಿಕೊಂಡ ಅಂಶವನ್ನು ವಿವರಿಸುವ ಪ್ರಯತ್ನಕ್ಕೆ ಪೂರಕವಾಗಿ ಮಾತ್ರ ಇಲ್ಲಿ ಉಲ್ಲೇಖಿಸಿದೆ. 'ಅಯ್ಯಾ' ಎಂಬ ರಚನೆ ಗೌರವ ವಾಚಕವಾಗಿಯೂ ಎಲವೋ ಎಂಬ ರಚನೆ ಅಗೌರವ ಸೂಚಕವೂ ಮತ್ತು ನೇತ್ಯಾತ್ಮಕ ಅಭಿವ್ಯಕ್ತಿ ಸಂದರ್ಭದ, ಕೆಳ ಸ್ತರದ,ಅಧೀನ ವ್ಯಕ್ತಿಗಳ ಮೇಲೆ ಪ್ರಯೋಗವಾಗುವ ರಚನೆಯಾಗಿದೆ. ಇವೆರಡೂ ರೂಪಗಳು ಮಾನವ ಸೂಚಕ ಪುಲ್ಲಿಂಗ ರಚನೆಗಳಾಗಿದ್ದು ಇದರ ವಿವಿಧ ರೂಪಗಳಿಗೆ ಬಳಕೆಯ ಸಾಮಾಜಿಕ ನೆಲೆಗಳನ್ನು ಆಧರಿಸಿ ಬಳಸುವವರ ಮತ್ತು ಪ್ರಯೋಗಕ್ಕೊಳಗಾದವರ ನೆಲೆಯಿಂದ ಸಾಮಾಜಿಕ ಸ್ಥಾನಮಾನಗಳು ಆರೋಪಿತವಾಗುತ್ತವೆ.

ಕನ್ನಡ ಬರಹ ಪರಂಪರೆಯಲ್ಲಿ ಶಾಸನಗಳಿಂದ ಹಿಡಿದು ಇಲ್ಲಿಯವರೆಗೂ ಸಂಬೋಧನೆ, ಉಲ್ಲೇಖ, ಜಾತಿವಾಚಕ, ಗೌರವ ಸೂಚಕ ಮತ್ತು ಪುರುಷ ವ್ಯಕ್ತಿನಾಮಗಳ ಭಾಗವಾಗಿ – ಅಯ್ಯ ಬಳಕೆಯಲ್ಲಿದೆ. ತಳ ಸಮುದಾಯಗಳ ವಚನಕಾರರ ಹೆಸರುಗಳು ಬಹುಪಾಲು ಅಯ್ಯ ವಾರ್ಗಿಕವನ್ನು ಹೊಂದಿರುವಂತಹವೆ ಆಗಿವೆ. ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಜೇಡರ ದಾಸಿಮಯ್ಯ ಮುಂತಾದವರವಿವೆ. –ಅಯ್ಯ ಎಂಬ ಈ ರಚನೆ ದಕ್ಷಿಣ ಭಾರತದ ಎಲ್ಲಾ ದ್ರಾವಿಡ ಭಾಷೆಗಳಲ್ಲಿಯೂ ಮೇಲ್ನೋಟದ ಸಾಮಾನ್ಯ ಗ್ರಹಿಕೆಗೆ ವ್ಯಕ್ತಿನಾಮಗಳ ಭಾಗವಾಗಿಯೂ ತಮಿಳಿನಲ್ಲಿ ಅಯ್ಯಂಗಾರ್ ಎಂಬ ಜಾತಿವಾಚಕದಲ್ಲಿಯೂ ಬಳಕೆಯಲ್ಲಿದೆ.

ಪ್ರಸ್ತುತ ಕನ್ನಡದ ಮಟ್ಟಿಗೆ –ಅಯ್ಯ ಎನ್ನುವ ರಚನೆ ಮೈಸೂರು ಭಾಗದ ಸಾಮಾಜಿಕ ತಳ ಸಮುದಾಯಗಳಲ್ಲಿ (ಬಹುತೇಕ ಬ್ರಾಹ್ಮಣೇತರ ಕನ್ನಡಭಾಷಿಕ ಸಮುದಾಯಗಳಲ್ಲಿ) ತಂದೆಯ ಮತ್ತು ತಾಯಿಯ ತಂದೆಯನ್ನು ಸಂಬೋಧಿಸುವ ಸಂಬೋಧನಾ ರೂಪವಾಗಿ ಮತ್ತು ಅವರನ್ನು ಕುರಿತ ಸಂಬಂಧವಾಚಕವಾಗಿಯೂ ಬಳಕೆಯಲ್ಲಿದೆ. ಈಗ ನಗರ ಮತ್ತು ಆಧುನೀಕರಣದ ಪ್ರಭಾವಕ್ಕೊಳಗಾಗಿರುವ ಗ್ರಾಮೀಣ ಮತ್ತು ಶಿಕ್ಷಿತ ಸಮುದಾಯಗಳಲ್ಲಿ ಅಜ್ಜ ಮತ್ತು ತಾತಾ ಎಂಬ ರೂಪಗಳಿಗೆ ಪಲ್ಲಟಗೊಳ್ಳುತ್ತಿರುವುದು ಕಂಡು ಬರುತ್ತಿದೆ. ಹಾಗೆಯೇ ಕೆಲವು ನಿರ್ದಿಷ್ಟ ಸಮುದಾಯಗಳಲ್ಲಿ ತಂದೆಯನ್ನು ಸಂಬೋಧಿಸಲು ಮತ್ತು ತಂದೆಯನ್ನು ಸೂಚಿಸುವ ಸಂಬಂಧವಾಚಕವಾಗಿಯು ಬಳಕೆಯಲ್ಲಿದೆ.ಈ ರೂಪ ಇಪ್ಪತ್ತನೇ ಶತಮಾನದ ಕೊನೆಯವರೆಗೂ ಕರ್ನಾಟಕದ ಕನ್ನಡ ಭಾಷಿಕರಾಗಿರುವ ಎಲ್ಲ ಜಾತಿ ಸಮುದಾಯಗಳ ವ್ಯಕ್ತಿನಾಮಗಳ ಎರಡನೇ ಭಾಗವಾಗಿ ಅನಿರ್ಬಂಧಿತವಾಗಿ ಬಳಕೆಯಲ್ಲಿದೆ. ಉದಾಹರಣೆಗೆ– ಮಲ್ಲಯ್ಯ–ಆದಿ ಕರ್ನಾಟಕ

Scanned with CamScanner

ಸಾಹೇಬ್ರೆ, ಸರ್/ಸಾರ್, ಮೇಡಮ್ ಇತ್ಯಾದಿಗಳನ್ನು ಅಳವಡಿಸಿ ಬಳಸಲಾಗುತ್ತಿದೆ. ಇದರ ಪರಿಣಾಮ ಹನ್ನೆರಡನೇ ಶತಮಾನದಲ್ಲಿ ನಿಜವಾಗಿಯೂ ಗೌರವ ಸೂಚಕ ಸಂಬೋಧನೆಯಾಗಿದ್ದ ಅಯ್ಯಾ ರೂಪ ಪ್ರಸ್ತುತ ಮಾನ್ಯ ಉಪ ಮುಖ್ಯಮಂತ್ರಿಗಳು/ಸಾರಿಗೆ ಮಂತ್ರಿಗಳು ತಮ್ಮ ಅಧೀನ ನೌಕರರನ್ನು ಉದ್ದೇಶಿಸಿ ಮಾತನಾಡಿದ ಇಪ್ಪತ್ತೊಂದನೆ ಶತಮಾನದ ಈ ಸಂದರ್ಭದಲ್ಲಿ ಸೀಮಿತವಾದ ಇತ್ಯಾತ್ಮಕ ನೆಲೆಗೆ, ಅಗೌರವ ಸೂಚಕ ವಲಯದ ಬಳಕೆಗೆ ಸಂಕುಚಿತವಾಗಿದ್ದು ಅದರ ಸ್ಥಾನಕ್ಕೆ ಇಂಗ್ಲಿಶ್‌ನ ಸಾರ್ ಕನ್ನಡದಲ್ಲಿ ಗೌರವ ಸೂಚಕ ರೂಪವಾಗಿ ಬಳಕೆಗೆ ಬಂದಿದೆ..ಈ ಟಿಪ್ಪಣಿಯ ಉದಾಹರಣೆ, ವಿವರಗಳು ಸೀಮಿತ ಪ್ರದೇಶದ, ವೈಯಕ್ತಿಕ ಅನುಭವದ ಮಾಹಿತಿಯನ್ನು ಆಧರಿಸಿದ್ದು ವಿಸ್ತೃತ ಕ್ಷೇತ್ರ ಮಾಹಿತಿಯ ಮೂಲಕ ಹೆಚ್ಚಿನ ಅಧ್ಯಯನ ಸಾಧ್ಯ. ಕನ್ನಡದಲ್ಲಿ ರಾಚನಿಕ ನೆಲೆಯಲ್ಲಿ ಐತಿಹಾಸಿಕ ಅಧ್ಯಯನಗಳು ಸಾಕಷ್ಟು ನಡೆದಿದ್ದರೂ ಸಮಾಜೋ ಭಾಷಿಕ ಅಧ್ಯಯನಕ್ಕೆ ತೊಡಗಲು ಸಾಕಷ್ಟು ತಾವಿದೆ.

ಸ್ಪಷ್ಟ ಓದು, ಶುದ್ಧ ಬರಹ

ಡಾ.ಅಶೋಕಕುಮಾರ ರಂಜೇರೆ

ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಗ್ರಾಮವೊಂದರ ಶಾಲಾ ವಿದ್ಯಾರ್ಥಿಯೊಬ್ಬನಿಗೆ ಶಿಕ್ಷಕರೊಬ್ಬರು ಪಕ್ಕೆಲುಬು ಎನ್ನುವ ಪದವನ್ನು ಉಚ್ಚರಿಸಲು ಹೇಳಿಕೊಡುವಾಗ, ಉಚ್ಚಾರಣೆಯಲ್ಲಿ ವಿದ್ಯಾರ್ಥಿ ಪದೇ ಪದೇ ತಪ್ಪು ಮಾಡುತ್ತಿರುವ ವೀಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಇದೇ ರೀತಿಯ ಪ್ರಕರಣಗಳಾದ ಪುಳಿಯೋಗರೆ ಪದವನ್ನು ಒಂದೇ ಬಾರಿಗೆ ವಿದ್ಯಾರ್ಥಿಗೆ ಕಲಿಸಲು ಪ್ರಯತ್ನಿಸುವ ಮತ್ತು ನಪುಂಸಕ ಪದವನ್ನು ಉಚ್ಚರಿಸಲು ಬಾರದೇ ಇರುವ ವಿದ್ಯಾರ್ಥಿಯೊಬ್ಬನನ್ನು ಶಿಕ್ಷಕರೊಬ್ಬರು ಗೇಲಿ ಮಾಡುವ ವೀಡಿಯೋಗಳು ವೈರಲ್ ಆಗಿರುವುದು ಗಮನಿಸಿದ್ದೇವೆ. ಆ ಸಂಬಂಧ ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಟಿಪ್ಪಣಿಯೊಂದನ್ನು ಬರೆದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದ್ದಾರೆ. ಸೂಚನೆಯಲ್ಲಿ ಈ ವೀಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟವರನ್ನು ಪತ್ತೆಹಚ್ಚಲು ಸೈಬರ್ ಕ್ರೈಮ್ ಠಾಣೆಗೆ ದೂರು ನೀಡಲು ಮತ್ತು ಸದರಿ ವೀಡಿಯೋ ವೈರಲ್ ಮಾಡಿದ ಶಿಕ್ಷಕ ಮತ್ತು ಅವರ ಶಾಲೆಯ ಮುಖ್ಯೋಪಾಧ್ಯಾಯರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸೂಚನೆ ನೀಡಿದ್ದಾರೆ. ಮಾನ್ಯ ಶಿಕ್ಷಣ ಸಚಿವರು ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿ, ಮಕ್ಕಳು ಒಂಗೆ ಗೇಲಿಗೆ ಒಳಗಾಗುವ ಮತ್ತು ಅವಮಾನಕ್ಕೀಡು ಮಾಡುವ ಶಿಕ್ಷಕರ ಬಗ್ಗೆ ಕಾನೂರು ಕ್ರಮ ಕೈಗೊಳ್ಳಲು ಸೂಚಿಸಿ ನೀಡಿರುವುದು ಒಳ್ಳೆಯ ಬೆಳವಣಿಗೆಯಾದರೂ ಸ್ಪಷ್ಟ ಓದು ಮತ್ತು ಶುದ್ಧ ಬರಹದ ಕಲ್ಪನೆಯ ಹಿಂದಿನ ತಾತ್ವಿಕತೆ ಕುರಿತು ಗಂಭೀರವಾಗಿ ಯೋಚಿಸಬೇಕಾಗಿದೆ.

ವೈರಲ್ ಆದ ವೀಡಿಯೋವನ್ನು ಸೂಕ್ಷ್ಮವಾಗಿ ಗಮನಿಸಿದರೆ ವಿದ್ಯಾರ್ಥಿ ಪಕ್ಕೆಲುಬು ಎನ್ನುವ ಪದವನ್ನು ಸ್ಪಷ್ಟವಾದ ಉಚ್ಚಾರಣೆ ಮಾಡುವಾಗ ಆಗುತ್ತಿರುವ ವ್ಯತ್ಯಾಸ ನೋಡುಗರಿಗೆ ನಗುತರಿಸುವಂತಿದ್ದರೂ ಅದು ಅಪರಾಧವೇನಲ್ಲ. ಒಂದು ತರಗತಿಯಲ್ಲಿರುವ ಎಲ್ಲ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಒಂದೇ ಸಮನಾಗಿರುವುದಿಲ್ಲ. ಇದಕ್ಕೆ ಸಾಮಾಜಿಕವಾದ, ವೈಯಕ್ತಿಕವಾದ ಕಾರಣಗಳೂ ಇರುತ್ತವೆ. ಇದನ್ನು ಮೊದಲಿಗೆ ಶಿಕ್ಷಕರು ಮನಗಾಣಬೇಕಿದೆ. ಏಕೆಂದರೆ ಒಂದು ತರಗತಿಯಲ್ಲಿನ ಎಲ್ಲ ಮಕ್ಕಳನ್ನು ಒಂದೇ ರೀತಿಯಲ್ಲಿ ಕಲಿಸುವ ಮತ್ತು ಮೌಲ್ಯಮಾಪನಕ್ಕೆ ಒಡ್ಡುವ ವಿಧಾನವೇ ಸರಿಯಾದ ಕ್ರಮವಲ್ಲ. ಒಂದು ತರಗತಿಯಲ್ಲಿ ಇರುವ ಮಕ್ಕಳು ಬೇರೆ ಬೇರೆ ಧರ್ಮ, ಜಾತಿ, ಲಿಂಗ, ವರ್ಗಗಳಿಂದ ಬಂದವರಾಗಿರುತ್ತಾರೆ. ಅವರೆಲ್ಲರೂ ತಮ್ಮ ತಮ್ಮ ಮನೆ ಮತ್ತು ಪರಿಸರದಲ್ಲಿ ಒಂದೇ ರೀತಿಯ ಕನ್ನಡವನ್ನು ಬಳಸುವುದಿಲ್ಲ. ಹಾಗಾಗಿ ಪ್ರತಿ ಮಕ್ಕಳ ಕಲಿಕಾ ಮಟ್ಟ ಒಂದೇ ರೀತಿಯಲ್ಲಿ ಇರುವುದಿಲ್ಲ. ಜೊತೆಗೆ ಕೆಲವು ಸಂದರ್ಭದಲ್ಲಿ ಇದಕ್ಕೆ ವ್ಯಕ್ತಿಗತ ನೆಲೆಯಲ್ಲಿ ಇರುವ ದೈಹಿಕ ಮತ್ತು ಮಾನಸಿಕ ಆರೋಗ್ಯವೂ ಕಾರಣವಾಗಿರಬಹುದು. ಅಷ್ಟೇ ಅಲ್ಲ ಸ್ಪಷ್ಟ ಓದು ಮತ್ತು ಶುದ್ಧ ಬರಹ ಯಾವುದು ಎನ್ನುವಲ್ಲಿಯೇ ಮತ್ತೂ ಕೆಲವು ಗೊಂದಲಗಳಿವೆ.

ದೈಹಿಕವಾಗಿ ಅಂಗಾಂಗಳ ಬೆಳವಣಿಗೆಯಲ್ಲಾದ ನ್ಯೂನ್ಯತೆಯೂ ಒಂದು ಕಾರಣವಾದರೆ ಒತ್ತಕ್ಷರಗಳು, ಕೂಡು ಪದಗಳು, ಸಮಾಸ ಪದಗಳು ಕನ್ನಡದ ರಚನೆಗಿಂತ ಭಿನ್ನವಾದ ರಚನೆಯ ಪದಗಳನ್ನು ಉಚ್ಚರಿಸುವಲ್ಲಿ ಇಂಥ ತಪ್ಪುಗಳು (ತಪ್ಪು ಎಂದು ಪರಿಭಾವಿಸುವುದಾದರೆ) ಸಹಜವಾಗಿಯೇ ತರಗತಿಗಳ ಒಳಗೂ ಹೊರಗೂ ನಡೆಯುತ್ತವೆ. ಸದರಿ ವೀಡಿಯೋದಲ್ಲಿ ಪಕ್ಕೆಲುಬು ಪದವನ್ನು ಉಚ್ಚರಿಸುವಲ್ಲಿ ಮಗು ಮೊದಲಿಗೆ ತನಗೆ ಈ ಪದ ಉಚ್ಚರಿಸಲು ಸಾಧ್ಯವಿಲ್ಲ ಎಂದು

Scanned with CamScanner

ಪರಿಗಣಿಸಿದಂತೆ ಕಾಣುತ್ತದೆ. ಕಾರಣ ತನ್ನ ಸಹಪಾಟಿಗಳ ಎದುರು ತಾನು ಉಚ್ಚರಿಸುವುದು ತಪ್ಪೆಂದು ಪರಿಗಣಿಸಿದ ಸುತ್ತಲಿನ ಮಕ್ಕಳ ನಗು ಮತ್ತು ಶಿಕ್ಷಕರ ದಂಡನೆ ಆ ವಿದ್ಯಾರ್ಥಿಯನ್ನು ಅಧೀರನನ್ನಾಗಿ ಮಾಡಿದೆ. ಆದರಿಂದ ಪಕ್ಕೆಲುಬು ಎನ್ನುವ ಪದವನ್ನು ವಿದ್ಯಾರ್ಥಿ ಪೊಪ್ಪೆಎಬುಲು > ಪೊಪ್ಪೆಬುಲು > ಕೊಪ್ಪೆಎಬುಲು > ಕಪ್ಪೆಬುಲು ಎಂತೆಲ್ಲ ಉಚ್ಚಾರಣೆ ಮಾಡಿ [illegible] ಪ+ಕ್ಕೆ+ಲು+ಬು ಎಂದು ಸರಿಯಾಗಿಯೇ ಗುರುತಿಸಿ ಉಚ್ಚಾರ ಮಾಡುತ್ತಾನೆ. ಆದರೆ ಎರಡು ಪದಗಳನ್ನು ಸೇರಿಸಿ ಕೂಡುಪದವಾಗಿ ಉಚ್ಚರಿಸುವಾಗ ಪೊಪ್ಪೆಎಬುಲು>ಕೊಪ್ಪೆಎಬುಲು ಕಪ್ಪೆಬುಲು ಎಂದು ಉಚ್ಚಾರ ಮಾಡಿದ್ದಾನೆ. ಎರಡು ಪದಗಳು ಸೇರಿ ಆಗುವ ಕೂಡು ಪದವನ್ನು ಬಿಡಿಸಿ ಹೇಳುವುದರಲ್ಲಿ ಶಿಕ್ಷಕರಾದವರೂ ಸರಿಯಾದ ಕ್ರಮವನ್ನು ಅನುಸರಿಸಿಲ್ಲ. ಶಿಕ್ಷಕರು ಪಕ್ಕೆಲುಬು ಪದವನ್ನು ಬಿಡಿಸಿ ಹೇಳುವಾಗ ಪಕ್ಕೆ+ಲುಬು= ಪಕ್ಕೆಲುಬು ಎಂದು ಉಚ್ಚರಿಸಲು ಹೇಳುತ್ತಿರುವಂತೆ ಕಾಣುತ್ತಿದೆ. ಆದರೆ ಬದಲಿಗೆ ಪಕ್ಕೆ+ಎಲುಬು=ಪಕ್ಕೆಲುಬು ಎಂದು ವಿವರಿಸಲು ಸಾಧ್ಯವಿದೆ. ಮಕ್ಕಳಿಗೆ ಎರಡು ಬೇರೆ ಬೇರೆ ಪದಗಳು ತಿಳಿದಿರುತ್ತವೆ. ಆದರೆ ಆ ಎರಡೂ ಪದಗಳನ್ನು ಸೇರಿಸಿ ಕೂಡುಪದವಾಗಿ ಉಚ್ಚರಿಸುವ ಸಂದರ್ಭದಲ್ಲಿ ಗೊಂದಲವುಂಟಾಗುತ್ತಿದೆ. ಇಂಥ ಪದಗಳು ಅನೇಕ ಸಲ ಸುಶಿಕ್ಷಿತರಿಂದಲೂ ನಡೆಯುತ್ತದೆ. ಉದಾಹರಣೆಗೆ ಒಂದೇ ವರ್ಣದ ಅಲ್ಪ ಪ್ರಾಣ, ಮಹಾಪ್ರಾಣ ಅಕ್ಷರಗಳು ಕ್ರಮವಾಗಿ ಒಂದಾಗ ಅಕ್ಷರ ಪಲ್ಲಟ ಮಾಡುವುದು ಕಾಣುತ್ತೇವೆ. ಅತಿಥಿ, ಆತಿಥ್ಯ ಪದಗಳನ್ನು ಬಹುತೇಕರು ಅಥಿತಿ, ಅಥಿತ್ಯ ಎಂತಲೇ ಉಚ್ಚರಿಸುವುದನ್ನು ಮತ್ತು ಬರೆಯುವುದನ್ನು ಈಗಲೂ ಕಾಣಬಹುದು.

ಬಾಯಿಂದ ಧ್ವನಿಗಳನ್ನು ಹೊರಡಿಸುವಾಗ, ಧ್ವನ್ಯಂಗಗಳಲ್ಲಿ ಒಂದೇ ಸ್ಥಾನದ ಅಕ್ಕಪಕ್ಕದಲ್ಲಿ ಹುಟ್ಟುವ ಧ್ವನಿಗಳು ಕ್ರಮವಾಗಿ ಬಂದಾಗ ಈ ಬಗೆಯ ತಪ್ಪುಗಳು ಆಗುತ್ತವೆ. ಉದಾಹರಣೆಗೆ ಅ ಮತ್ತು ಹ ಅಕ್ಷರದಿಂದ ಆರಂಭವಾಗುವ ಪದಗಳನ್ನು ಅ ಮತ್ತು ಹ ಉಚ್ಚಾರ ಮಾಡುವ ಮಧ್ಯದ ಉಚ್ಚಾರಣೆ ಮಾಡುವುದರಿಂದ ಹಾಲು ಪದವನ್ನು ಆಲು, ಅಕ್ಕಿ ಪದವನ್ನು ಹಕ್ಕಿ ಎಂಬಂತೆ ಉಚ್ಚಾರಗಳು ಕಂಡುಬರುತ್ತವೆ. ಇದನ್ನು ಕೂಡ ತಪ್ಪು ಎಂದೇ ಭಾವಿಸಲಾಗಿದೆ. ಸಾಮಾನ್ಯವಾಗಿ ಮಕ್ಕಳು ಬಹು ಬೇಗನೆ ಇದನ್ನು ಸರಿಪಡಿಸಿಕೊಳ್ಳುತ್ತವೆ. ಕೆಲವು ಮಕ್ಕಳು ಇದನ್ನು ಸರಿಪಸಿಡಿಸಿಕೊಂಡು ಉಚ್ಚಾರ ಮಾಡುವಲ್ಲಿ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತವೆ. ಇದನ್ನು ಶಿಕ್ಷಕರು ತಪ್ಪೆಂದು ಭಾವಿಸದೆ ವಿಧಾನವಾಗಿ ಹೇಳಿಕೊಡಬೇಕಾಗುತ್ತದೆ. ಈ ಬಗೆಯ ಭಿನ್ನ ಉಚ್ಚಾರಣೆಗೆ ಮತ್ತೂ ಒಂದು ಕಾರಣ ಇರಬಹುದು. ಮಕ್ಕಳು ಶಾಲಾ ಪರಿಸರಕ್ಕೆ ಬರುವ ಮೊದಲೇ ಭಾಷೆಯ ಕೌಶಲಗಳಾದ ಅರ್ಥಮಾಡಿಕೊಳ್ಳುವ, ಮಾತಾಡುವ, ಓದುವ ಮತ್ತು ಬರೆಯುವ ನಾಲ್ಕು ಕೌಶಲಗಳಲ್ಲಿ ಮೊದಲೆರಡು ಕೌಶಲಗಳು ಪಡೆದಿರುತ್ತವೆ. ಶಾಲೆಯಲ್ಲಿ ಓದುವ ಮತ್ತು [illegible] ಮೊದಲೆರಡು ಕೌಶಲಗಳು ಓದುವ ಕೌಶಲದ ಮೇಲು [illegible] ಬೀರುತ್ತಿರುತ್ತದೆ. ಹಾಗಾಗಿ ಶಾಲೆಗೆ ಬರುವ ಮುನ್ನವೇ ಕಲಿತ ಮೊದಲೆರಡು ಕೌಶಲಗಳ ಪ್ರಭಾವದಿಂದ ವಿದ್ಯಾರ್ಥಿಗಳು ಬಹುವಾಗ ಇಂಥ ತಪ್ಪುಗಳನ್ನು ಮಾಡುವ ಸಾಧ್ಯತೆ ಇದೆ.

ಒಂದೇ ಪದಕ್ಕೆ ಭಿನ್ನ ಮಾದರಿಯ ಉಚ್ಚಾರಗಳು ಸಮಾಜದಲ್ಲಿ [illegible] ಕರ್ನಾಟಕದ ಉತ್ತರದಲ್ಲಿರುವ ಬೀದರ್ ಜಿಲ್ಲೆಯಿಂದ [illegible], ದಕ್ಷಿಣದ ತುಟ್ಟ ತುದಿಯಲ್ಲಿರುವ ಚಾಮರಾಜನಗರ, ಪೂರ್ವದ ಬಳ್ಳಾರಿಯಿಂದ ಬಿಡಿದು, ಪಶ್ಚಿಮದ ಕರಾವಳಿವರೆಗಿನ ವಿಶಾಲವಾದ ಕರ್ನಾಟಕದಲ್ಲಿ ಕನ್ನಡ ನುಡಿಯೇ ಬಳಕೆಯಲ್ಲಿದ್ದರೂ ಒಂದೇ ಕನ್ನಡ ಬಳಕೆಯಲಿಲ್ಲ. ಬೀದರ್ ಕನ್ನಡವೇ ಬೇರೆ, ಚಾಮರಾಜನಗರದ ಕನ್ನಡವೇ ಬೇರೆ. ಹಾಗೇನೆ ಬಳ್ಳಾರಿ ಕನ್ನಡವೇ ಬೇರೆ, ಕರಾವಳಿಯ ಮಂಗಳೂರು, ಉಡುಪಿ ಕನ್ನಡವೇ ಬೇರೆ. ಬೆಳಗಾವಿ ಕನ್ನಡ, ಚಿತ್ರದುರ್ಗದ ಕನ್ನಡ, ಬೆಂಗಳೂರು ಕನ್ನಡ, ಕೊಡಗು ಕನ್ನಡಗಳು ಒಂದೇ ರೀತಿಯಲ್ಲಿ ಇಲ್ಲ. ಹಾಗಾಗಿ ಕರ್ನಾಟಕದಲ್ಲೇ ಹಲವಾರು ಕನ್ನಡಗಳಿವೆ. ಪ್ರಾದೇಶಿಕ ಈ ಭಿನ್ನತೆಗಳ ಜೊತೆಗೆ ಸಾಮಾಜಿಕವಾಗಿಯೂ ಬ್ರಾಹ್ಮಣರ ಕನ್ನಡ, ಲಿಂಗಾಯತರ ಕನ್ನಡ, ಗೌಡ ಕನ್ನಡ, ದಲಿತರ ಕನ್ನಡಗಳು ಕೂಡ ಒಂದೇ ತೆರನಾಗಿಲ್ಲ. ಈ ಭಿನ್ನತೆಯ ಜೊತೆಗೆ ಅನ್ಯ ಭಾಷಿಕ ಮಕ್ಕಳು ಬಳಸುವ ಕನ್ನಡದಲ್ಲೂ ವ್ಯತ್ಯಾಸಗಳನ್ನು ಕಾಣಲು ಸಾಧ್ಯವಿದೆ. ಉಚ್ಚಾರಣೆಯಲ್ಲಿ, ಅರ್ಥದಲ್ಲಿ, ಮಾತಾಡುವ ಧಾಟಿಯಲ್ಲಿ ಇರುವ ಈ ಭಿನ್ನಾಂಶಗಳು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಿರುತ್ತದೆ ಎಂದು ಭಾಷಾಶಾಸ್ತ್ರಜ್ಞರು ಹೇಳುತ್ತಾರೆ. ಈ ಭಿನ್ನ ಮಾದರಿಗಳು ಸಾಹಿತ್ಯದಲ್ಲೂ ಕಾಣುತ್ತೇವೆ. ದೇವನೂರು ಮಹಾದೇವ ಅವರ ಕನ್ನಡಕ್ಕೂ, ಚಂದ್ರಶೇಖರ ಪಾಟೀಲ, ಗೀತಾ ನಾಗಭೂಷಣ, ಚನ್ನಣ್ಣ ವಾಲೀಕಾರ ಅವರುಗಳ ಬರಹಗಳು ಬೇರೆ ಬೇರೆಯಾಗಿಯೇ ಇವೆ. ಈ ಭಿನ್ನ ಕನ್ನಡಗಳು ಇಂದಿನವುಗಳೇನಲ್ಲ. ಹತ್ತನೇ ಶತಮಾನದಲ್ಲಿ ಕವಿರಾಜಮಾರ್ಗಕಾರನೇ ಕನ್ನಡಂಗಳ್ ಎಂದು ಹೇಳಿದ್ದಾನೆ. ಹೀಗೆ ಚಾರಿತ್ರಿಕ

Scanned with CamScanner

ವಾಗಿಯೂ, ಪ್ರಾದೇಶಿಕವಾಗಿಯೂ ಮತ್ತು ಸಾಮಾಜಿಕವಾಗಿಯೂ ಹಲವು ಕನ್ನಡಗಳು ಇವೆ. ಆದರೆ ಕರ್ನಾಟಕದಾದ್ಯಂತ ಇರುವ ಎಲ್ಲ ಪ್ರದೇಶದ, ಎಲ್ಲ ಸಮುದಾಯದ ಎಲ್ಲ ಮಕ್ಕಳು ಒಂದೇ ರೀತಿಯಲ್ಲಿ ಬರೆಯಬೇಕು ಮತ್ತು ಒಂದೇ ರೀತಿಯಲ್ಲಿ ಉಚ್ಚಾರ ಮಾಡಬೇಕು ಎನ್ನುವ ತಾತ್ವಿಕತೆಯ ಹಿಂದೆ ಕನ್ನಡ ಬಳಸುವವರಿಗೆಲ್ಲರಿಗೂ ಸಮಾನವಾಗಿ ಅರ್ಥವಾಗಬೇಕು ಎನ್ನುವ ಮಹದಾಸೆಯಿದ್ದರೂ ಈ ತಿಳಿವಿನಲ್ಲಿ ಮಿತಿಗಳು ಇವೆ. ಗೊಂದಲಗಳು ಇವೆ. ಆ ಮಿತಿಗಳನ್ನು ಅರ್ಥ ಮಾಡಿಕೊಳ್ಳದೇ ಸ್ಪಷ್ಟ ಓದು, ಶುದ್ಧ ಬರಹ ಎನ್ನುವ ಪರಿಕಲ್ಪನೆ ಮೂಲಕ ಏಕರೂಪಿ ಕನ್ನಡದ ಬಳಕೆಗೆ ಮುಂದಾಗಿರುವುದು ಕನ್ನಡದ ಬೆಳವಣಿಗೆಗೆ ಪೂರಕವಾಗುವ ಬದಲು ತೊಡಕಾಗಿ ಪರಿಣಮಿಸುವ ಸಾಧ್ಯತೆಯೇ ಹೆಚ್ಚು.

ಭಾರತೀಯರಿಗೆ ಬೇಕಾದ ಶಿಕ್ಷಣವು ಭಾರತೀಯ ಪರಂಪರೆಯೊಳಗಿನಿಂದಲೇ ರೂಪುಗೊಳ್ಳಬೇಕಿತ್ತು. ಆದರೆ ಮೆಕಾಲೆ ಮಾದರಿಯಲ್ಲಿ ರೂಪುಗೊಂಡ ಈ ಶಿಕ್ಷಣ ವ್ಯವಸ್ಥೆಯಲ್ಲಿ ಸಂಸ್ಕೃತ ಪ್ರಭಾವದ ಕನ್ನಡವನ್ನು ಏಕರೂಪಿ ಪಠ್ಯ, ಏಕರೂಪಿ ಕಲಿಕೆ, ಬೋಧನೆಯಿಂದಾಗಿ ಸೃಷ್ಟಿಯಾಗಿರುವ ಗೊಂದಲಗಳೇ ಇನ್ನೂ ಪರಿಹಾರವಾಗಿಲ್ಲ. ಉದಾಹರಣೆಗೆ ಶ, ಷ, ಸ ಅಕ್ಷರಗಳ ಉಚ್ಚಾರ ಅವರ್ಗೀಯ ವ್ಯಂಜನಗಳ ಹಿಂದೆ ಬಿಂದು ಬಂದಾಗ ಉಚ್ಚರಿಸುವ ವಿಧಾನ ಈಗಲೂ ಕರ್ನಾಟಕದಾದ್ಯಂತ ಭಿನ್ನವಾಗಿಯೇ ಇವೆ. ಶೇಕ್ಸ್‌ಪಿಯರ್>ಷೇಕ್ಸ್‌ಪಿಯರ್, ಸಕ್ಕರೆ >ಶಕ್ಕರೆ. ಲಕ್ಷ>ಲಕ್ಸ್, ಕೃಷ್ಣ > ಕ್ರಿಶ್ಣ, ಸಂತೋಷ > ಸಂತೋಶ, ಷಟ್ಪದಿ > ಶಟ್ಪದಿ ಪದಗಳನ್ನು ಬರೆಯುವಲ್ಲಿ ಮತ್ತು ಉಚ್ಚರಿಸುವಲ್ಲಿ ಸ್ಪಷ್ಟತೆ ಇದೆಯೇ ಎಂದರೆ, ಖಂಡಿತವಾಗಿಯೂ ಇಲ್ಲ. ಹಾಗೇನೆ ಒಂದು ಪದದಲ್ಲಿ ಅವರ್ಗೀಯ ವ್ಯಂಜನಗಳ ಹಿಂದೆ ಅನುನಾಸಿಕ ಅಥವಾ ಬಿಂದು ಬಂದಾಗ ಅಂಥ ಪದಗಳ ಉಚ್ಚರಿಸುವಲ್ಲಿ ಉತ್ತರ ಕರ್ನಾಟಕಕ್ಕೂ ದಕ್ಷಿಣ ಕರ್ನಾಟಕಕ್ಕೂ ಈಗಲೂ ಭಿನ್ನತೆ ಇದೆ. ಉದಾಹರಣೆಗೆ: ಸಂಯಮ, ಸಂವಹನ, ಸಂವರ್ಧನ, ಸಂವೇದ, ವಂಶ, ಸಂಶಯ, ಸಂಶೋಧನೆ, ಹಂಸ, ಸಂಸ, ಕಂಸ, ನಮುಂಸಕ, ಸಂಸತ್ತು, ಸಂಸ್ಕೃತಿ, ಸಿಂಹದಂಥ ಪದಗಳನ್ನು ಗಮನಿಸಬಹುದು.

ಉದಾಹರಣೆಗೆ ಈ ಕೆಳಗಿನ ಪದಗಳನ್ನು ಗಮನಿಸಿ

ಪದಗಳು	ದಕ್ಷಿಣ ಕರ್ನಾಟಕದವರ ಉಚ್ಚಾರಣೆ	ಉತ್ತರ ಕರ್ನಾಟಕದವರ ಉಚ್ಚಾರಣೆ
ಸಂಯಮ	ಸಮ್‌ಯಮ	ಸಂಯ್‌ಮ
ಸಂವಹನ	ಸಮ್‌ವಹನ	ಸಂವ್‌ಹನ
ಸಂವರ್ಧನ	ಸಮ್‌ವರ್ಧನ	ಸಂವ್‌ರ್ಧನ
ವಂಶ	ವಮ್‌ಶ	ವಂವ್‌ಶ
ಸಂಶಯ	ಸಮ್‌ಶಯ	ಸಂವ್‌ಶಯ
ಹಂಸ	ಹಮ್‌ಸ	ಹಂವ್‌ಸ
ನಮುಂಸಕ	ನಮುಮ್‌ಸಕ	ನಮುನ್‌ಸಕ
ಸಿಂಹ	ಸಿಮ್‌ಹ	ಸಿಂವ್‌ಹ

ಸ್ವಾತಂತ್ರ್ಯ ನಂತರ ಕರ್ನಾಟಕದಾದ್ಯಂತ ಶಾಲೆಗಳನ್ನು ತೆರೆದು ಮಕ್ಕಳಿಗೆ ಶಿಕ್ಷಣ ನೀಡುವ ಹಿನ್ನೆಲೆಯಲ್ಲಿ ಪಠ್ಯಗಳ ನಿರ್ಮಾಣ ಮತ್ತು ಶಿಕ್ಷಕರ ತಯಾರಿ ಮತ್ತು ಸರ್ಕಾರದ ನಿರ್ದೇಶನದಡಿಯಲ್ಲಿ ಆರಂಭವಾದ ಈ ಪ್ರಕ್ರಿಯೆ ಇಂದು ಇಲ್ಲಿಗೆ ಬಂದು ತಲುಪಿದೆ. ಅರ್ಥಪೂರ್ಣ ಓದು ಮತ್ತು ಬರಹದ ಮೂಲಕ ಮಕ್ಕಳಿಗೆ ಭಾಷಾ ಬಳಕೆಯ ಕೌಶಲಗಳ ಬೆಳವಣಿಗೆಗಾಗಿ ಕೇಂದ್ರ ಸರ್ಕಾರದ ಸೂಚನೆಯನ್ವಯ ೨೦೧೧-೧೨ರಲ್ಲಿ ಸರ್ವಶಿಕ್ಷಣ ಅಭಿಯಾನವು ಸ್ಪಷ್ಟ ಓದು ಮತ್ತು ಶುದ್ಧ ಬರಹ ಪರಿಕಲ್ಪನೆ ಯೋಜನೆ ಜಾರಿಗೆ ತಂದಿದೆ. ಈ ಯೋಜನೆ ಮತ್ತೆ ಆಧುನಿಕ ಜಗತ್ತಿನ ಏಕರೂಪಿ ಬಳಕೆ ಮಾದರಿಯನ್ನು ಪುಷ್ಟೀಕರಿಸುವಂತಿದೆ. ಮೇಲು ನೋಟಕ್ಕೆ ಇದು ಸರಿ ಎಂಬಂತೆ ಕಂಡರೂ ಸ್ಪಷ್ಟ ಓದು ಮತ್ತು ಶುದ್ಧ ಬರಹ ಎನ್ನುವ ಪರಿಕಲ್ಪನೆಯ ಪದಗಳಾದ ಸ್ಪಷ್ಟ ಮತ್ತು ಶುದ್ಧ ಎನ್ನುವ ಪದಗಳನ್ನೇ ನೂರಕ್ಕೆ ೯೦ ಪ್ರತಿಶತ ಜನರು ಸ್ಪಷ್ಟವಾಗಿ ಉಚ್ಚರಿಸುವುದಿಲ್ಲ. ಸಾಮಾನ್ಯ ಜನರಾಗಲೀ, ವಿದ್ಯಾರ್ಥಿಗಳಿಗೆ ಕಲಿಸುವ ಶಿಕ್ಷಕ ವರ್ಗದವರೇ ಆಗಲಿ ಸ್ಪಷ್ಟ ಮತ್ತು ಶುದ್ಧ ಎನ್ನುವ ರೂಪಗಳನ್ನು ಬರವಣಿಗೆಯಲ್ಲಿ ಸರಿಯಾಗಿ ಬಳಸಿದ್ದರೂ ಉಚ್ಚಾರಣೆಯಲ್ಲಿ ಸ್ಪಷ್ಟ, ಸುದ್ದ ಎಂದು ಬಳಸುವವರ ಸಂಖ್ಯೆಯೇ ಹೆಚ್ಚಾಗಿರುತ್ತದೆ. ಇದನ್ನು ಯಾರಾದರೂ ಪರೀಕ್ಷಿಸಿದರೆ ಸ್ಪಶ್ಟ, ಸ್ಪಷ್ಟ, ಸ್ಪಸ್ಟ ಮತ್ತು ಶುದ್ಧ, ಸುದ್ದ, ಸುದ್ಧ, ಶುದ್ಧ ಇವುಗಳಲ್ಲಿ ಯಾವುದನ್ನು ಅನುಕರಿಸುತ್ತಿದ್ದಾರೆ ಎಂದು ಹೇಳುವುದು ಕಷ್ಟ. ತಾವು ಸರಿಯಾಗಿಯೇ ಉಚ್ಚರಿಸುತ್ತಿದ್ದೇವೆ ಎಂದು ಅಂದುಕೊಂಡರೂ ಈ ವ್ಯತ್ಯಾಸಗಳು ಹಾಗೇ ಬಳಕೆಯಾಗುತ್ತವೆ.

ಬಹುತ್ವದ ಬಗ್ಗೆ, ಸಬಾಲ್ಟರ್ನ್ ಬಗ್ಗೆ, ಬಹುಭಾಷಾ ಬಳಕೆ ಕುರಿತಂತೆ ಪ್ರಜಾಸತ್ತಾತ್ಮಕ ಹಿನ್ನೆಲೆಯಲ್ಲಿ ಧನಾತ್ಮಕವಾಗಿ ಚಿಂತಿಸುತ್ತಿರುವ ನಮಗೆ ಇದಕ್ಕೆ ತದ್ವಿರುದ್ಧವಾಗಿ ನಾಡಿನಾದ್ಯಂತ ಎಲ್ಲಿಂದ ಎಲ್ಲಿಗೆ ಹೋದರೂ ಒಂದೇ ಬಗೆಯ, ಏಕರೂಪಿ ನಾಗರೀಕತೆ ಕಂಡುಬರುತ್ತಿರುವುದನ್ನು ನೋಡುತ್ತೇವೆ. ಆಯಾ ಪ್ರದೇಶದ ಭೂಮಿ, ಕಾಡು, ನೀರು, ನೈಸರ್ಗಿಕ ವಾತಾವರಣಕ್ಕೆ

Scanned with CamScanner

ತಕ್ಕಂತೆ ಜನರು ಇದ್ದಾರೆ. ಶೀತವಲಯದಲ್ಲಿ, ಸಮಶೀತೋಷ್ಣ ವಲಯದಲ್ಲಿ, ಉಷ್ಣ ವಲಯದಲ್ಲಿ ಒಂದೇ ಬಗೆಯ ಜನಾಂಗ ಇಲ್ಲ. ಇಲ್ಲಿನ ಜನರ ನಡುವೆ ಬಣ್ಣ, ಎತ್ತರ, ಮೈಕಟ್ಟು, ಕೂದಲು ಎಲ್ಲವೂ ಭಿನ್ನವಾಗಿಯೇ ಇವೆ. ಅದಕ್ಕೆ ತಕ್ಕಹಾಗೆ ಭಾಷಾ ವೈವಿಧ್ಯತೆಯೂ ಇದೆ. ಹೀಗೆ ವೈವಿಧ್ಯಮಯವಾಗಿ ರೂಪ ಗೊಳ್ಳಲು ಅಲ್ಲಿನ ಗಾಳಿ, ನೀರು, ಭೂಮಿ, ಅದಕ್ಕೆ ತಕ್ಕಹಾಗೆ ಬೆಳೆದ ಆಹಾರ ಎಲ್ಲವೂ ಕಾರಣವಾಗಿದೆ. ಇದಕ್ಕನುಗುಣವಾಗಿ ಅವರ ದೈಹಿಕ ಬೆಳವಣಿಗೆ, ಆರೋಗ್ಯವೂ ಇರುತ್ತದೆ. ಆದರೆ ಆಧುನಿಕ ಸಂದರ್ಭದ ತಿಳುವಳಿಕೆ ಅವರ ಆರೋಗ್ಯಕ್ಕೆ ಸಂಬಂಧಿಸಿದಂತೆ ವೈದ್ಯಕೀಯವಾಗಿ ಒಂದೇ ರೀತಿ ಎಂದು ಪರಿಗಣಿಸಿ ಜಗತ್ತಿನಾದ್ಯಂತ ಇರುವ ಜನರಿಗೆ ಒಂದೇ ಬಗೆಯ ಆರೋಗ್ಯ ಮಾಪನ ಮಾಡುವಂತೆ (ಜಗತ್ತಿನಾದ್ಯಂತ ಇರುವ ಎಲ್ಲರಿಗೂ ರಕ್ತದೊತ್ತಡ (ಬಿ.ಪಿ) ಸಕ್ಕರೆ ಕಾಯಿಲೆಯ ಮಾಪನ ಒಂದೇ ಎಂದು ಪರಿಗಣಿಸಿ ಚಿಕಿತ್ಸೆ ನೀಡುವುದು) ಬದುಕಿನ ವಿಧಾನದಲ್ಲೂ ಅದನ್ನು ಅಳವಡಿಸಿಕೊಳ್ಳುತ್ತಿರುವುದು ದುರಂತವೇ ಸರಿ. ಅದೇ ರೀತಿ ಹಲವು ಕನ್ನಡಗಳ ಬದಲಿಗೆ ಒಂದೇ ಕನ್ನಡ ಬಳಸುವ ಅಥವಾ ಸ್ಪಷ್ಟ ಓದು ಮತ್ತು ಶುದ್ಧ ಬರಹದ ಹಿಂದಿನ ವಿಧಾನದಲ್ಲೂ ಇರುವಂತೆ ಕಾಣುತ್ತದೆ. ಅಷ್ಟೇ ಅಲ್ಲ ಸ್ಪಷ್ಟ ಓದು, ಶುದ್ಧ ಬರಹದ ಪರಿಕಲ್ಪನೆಯ ಹಿಂದೆ ಸರಿ–ತಪ್ಪು, ಶ್ರೇಷ್ಠ–ಕನಿಷ್ಠ, ಬುದ್ಧಿವಂತಿಕೆ–ದಡ್ಡತನ, ನಾಗರೀಕ–ಗ್ರಾಮ್ಯ ಎನ್ನುವ ಭಾವನೆಗಳು ಮುನ್ನೆಲೆಗೆ ಬಂದು ಅನೇಕ ವಿದ್ಯಾರ್ಥಿಗಳ ಕಲಿಕೆಗೆ ಹಿನ್ನೆಡೆಯಾಗುವ ಸಾಧ್ಯತೆಯೂ ಇದೆ. ಇದನ್ನು ತಾಂತ್ರಿಕವಾಗಿ ಮತ್ತು ತಾತ್ವಿಕವಾಗಿ ಬೇರೆ ಬೇರೆಯಾಗಿಯೇ ಚರ್ಚಿಸುವ ಅಗತ್ಯವಿದೆ ಎನಿಸುತ್ತದೆ.

ಗಂಡಾಳು–ಹೆಣ್ಣಾಳು ಪದ ರಚನೆಯ ಉಲಿ ಕಟ್ಟಲೆ

ಪಿ.ಮಹಾದೇವಯ್ಯ

ಕನ್ನಡದಲ್ಲಿ ಉಲಿ ಕಟ್ಟಲೆಗಳು ಪರಸ್ಪರ ಹೊಂದಾಣಿಕೆಯಿಂದ ಬಳಕೆಯಲ್ಲಿವೆ. ಹೀಗೆ ಪರಸ್ಪರ ಹೊಂದಾಣಿಕೆಯಿಂದ ಬಳಕೆಯ ಉಲಿಕಟ್ಟಲೆಗಳನ್ನು ಎರಡು ವಿಧವಾಗಿ ವರ್ಗೀಕರಿಸಬಹುದು. ಒಂದು: ಬರೆಹ ಕನ್ನಡದ ಉಲಿಕಟ್ಟಲೆ ಎರಡು; ಮಾತಿನ ಕನ್ನಡದ ಉಲಿಕಟ್ಟಲೆ. ಈ ಎರಡು ಮಾದರಿಯ ಉಲಿಕಟ್ಟಲೆಗಳು ಬೇರೆಬೇರೆ ಅಲ್ಲ ಒಂದೇ ಹೇಗೆ ಎಂಬುದನ್ನು ತಿಳಿಯಬೇಕಾಗಿದೆ. ಈ ಉಲಿಕಟ್ಟಲೆಗಳನ್ನು ಸಾಂಪ್ರದಾಯಿಕ ವ್ಯಾಕರಣಕಾರರು ಸಂಧಿಸಮಾಸ ಎಂದು ಕರೆದಿದ್ದಾರೆ. ಕನ್ನಡದಲ್ಲಿ ಎರಡು ನೆಲೆಯಲ್ಲಿ ಉಲಿ ಕಟ್ಟಲೆಗಳು ಜಾರಿಯಲ್ಲಿವೆ. ಮೊದಲನೆಯದು ಪದ+ಪದ, ಎರಡನೆಯದು ಪದ+ಪ್ರತ್ಯಯ. ಪ್ರಸ್ತುತ ಟಿಪ್ಪಣಿಯಲ್ಲಿ ಪದ+ ಪದ ಸೇರಿ ಆಗುವ ಕಟ್ಟಲೆಗಳ ಬಗ್ಗೆ ಮಾತ್ರ ಚರ್ಚಿಸಲಾಗಿದೆ. ಗಂಡಾಳು, ಹೆಣ್ಣಾಳು, ಕಾಲಾಳು, ಗಂಡಾನೆ, ಹೆಣ್ಣಾನೆ ಮುಂತಾದ ಪದಗಳಲ್ಲಿ ಎರಡು ಪದಗಳಿವೆ. ಗಂಡು+ಆಳು, ಹೆಣ್ಣು+ಆಳು, ಕಾಲು+ಆಳು, ಗಂಡು+ಆನೆ, ಹೆಣ್ಣು+ಆನೆ ಪದರಚನೆಗಳಲ್ಲಿ ಮೊದಲ ಪದದ ಕೊನೆಯ ಉಲಿಯು ತೆರೆದ ಉಲಿಯಾಗಿದೆ. ಎರಡನೆಯ ಪದದ ಮೊದಲನೆಯ ಉಲಿಯು ತೆರೆದ ಉಲಿಯಾಗಿದೆ. ಹೀಗಿರುವಾಗ ಇಲ್ಲಿ ಮೊದಲ ಪದದ ಕೊನೆಯ ಉಲಿ ಬಿದ್ದು ಹೋಗಿ ಗಂಡಾಳು, ಹೆಣ್ಣಾಳು, ಕಾಲಾಳು, ಹೆಣ್ಣಾನೆ, ಗಂಡಾನೆ ಎಂಬ ರಚನೆಗಳು ನಮಗೆ ಸಿಗುತ್ತವೆ. ಈ ಪದಗಳನ್ನು ನುಡಿಯುವಾಗ ಉಲಿಕಟ್ಟುಗಳನ್ನು ತಿಳಿಯಬಹುದು. 'ಒಂದೇ ಉಲಿಕಂತೆಯ ಪದವಾಗಿದ್ದು, ಅದು ಮುಚ್ಚಿದ ಉಲಿಕಂತೆಯಾಗಿದ್ದರೆ ಆಗ ಅದನ್ನು ಬಿಡಿಯಾಗಿ ನುಡಿಯುವಾಗ ಇಳಿಯಲ್ಲಿರುವ ಕೊನೆಯ ತಡೆಯುಲಿಗೆ ಉ ಎಂಬ ಉಲಿ ಸೇರಿಕೊಳ್ಳುತ್ತದೆ ಎಂಬುದು ಮತ್ತೊಂದು ಕಟ್ಟು. ಉಳಿದ ಕಡೆಗಳಲ್ಲಿ ಅದು ಮುಚ್ಚಿದ ಉಲಿಕಂತೆಯಾಗಿಯೇ ಬಳಕೆಯಾಗುತ್ತದೆ. ಒಂದು ಎತ್ತುಗೆಯನ್ನು ನೋಡೋಣ

ಗಂಡ್ ಮತ್ತು ಹೆಣ್ ಎಂಬುವು ಎರಡು ಕನ್ನಡ ಪದಗಳು ಇವುಗಳಲ್ಲಿ ಒಂದೆ ಉಲಿಕಂತೆ ಇದೆ. ಅದರಲ್ಲಿಯೂ ಅವು ಮುಚ್ಚಿದ ಉಲಿಕಂತೆಗಳಾಗಿವೆ. ಈ ಪದಗಳನ್ನು ಬಿಡಿಯಾಗಿ ನುಡಿಯುವಾಗ ಗಂಡ್ ಮತ್ತು ಹೆಣ್ ಪದಗಳ ಇಳಿಯ ತಡೆಯುಲಿಗೆ ಉ ಸೇರಿಸಿ ಗಂಡು ಮತ್ತು ಹೆಣ್ಣು ಎಂದು ನುಡಿಯುತ್ತೇವೆ. ಉಳಿದ ಕಡೆಗಳಲ್ಲಿ ಅವುಗಳನ್ನು ಗಂಡ್ ಮತ್ತು ಹೆಣ್ ಎಂದೇ ನುಡಿಯುತ್ತೇವೆ. ಗಂಡಾಳು, ಹೆಣ್ಣಾಳು ಎಂದು ನುಡಿಯುವಾಗ ಮುಚ್ಚಿದ ಉಲಿಯೊಳಗೆ ನುಡಿಯುತ್ತೇವೆ. ಅಂದರೆ ನಮ್ಮ ಶಾಲೆಯಲ್ಲಿ ಸೊಲ್ಲರಿಮೆ(ವ್ಯಾಕರಣ)ವನ್ನು ಕಲಿಸುವಾಗ ಹೆಚ್ಚಿನ ಸಂದರ್ಭದಲ್ಲಿ ಬರೆಹದ ಕನ್ನಡದ ರಚನೆಗೆ ಸಂಧಿ ಮಾಡುವ ಚಳಕವನ್ನು ಹೇಳಿಕೊಡುತ್ತೇವೆ. ಅದು ಬಳಕೆಯಲ್ಲಿ ಏನಾಗುತ್ತದೆ ಎಂಬುದನ್ನು ಗಮನಿಸುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಮಕ್ಕಳಿಗೆ ಗೊಂದಲವುಂಟಾಗುತ್ತಿದೆ. ಅಂದರೆ ಬಳಕೆಯಲ್ಲಿ ಇಲ್ಲದ ಹೆಚ್ಚುವರಿ ರೂಪಗಳು ಸಂಧಿ ಮಾಡುವ ಸಂದರ್ಭದಲ್ಲಿ ಬಂದಾಗ

Scanned with CamScanner

ಜನಪರ

ಮಾತುಕತೆ

ಮಾಸಿಕ

ಜನಸಮುದಾಯದ ಆಶಯಗಳ ಪ್ರಾಭಿಮಾನಿ ಧ್ವನಿ

• ಅಕ್ಟೋಬರ್ 2020 • ಸಂಪುಟ - 7 • ಸಂಚಿಕೆ 12 • ಪುಟ 14

ಎಲ್ಲರಿಗೂ ಒಂದೇ ನ್ಯಾಯವಿರಲಿ



ಗಾಂಧಿಯ ನಿಲುವು

ಬಣ್ಣ ಮತ್ತು ಭಾಷೆ

ಕೊರೋನಾ ಟೈಮ್ಸ್

ಆನ್‌ಲೈನ್ ಪೂಜೆಗೆ ೭,೦೦೦!

ಶಾವು, ಮದುವೆಗೆ ೭೫,೦೦೦!

ಸೈಂಟ್ ಆನ್ಸ್ ಆಫ್ ಬೆಂಗಳೂರು

ನೊಂದ ಸಿಸ್ಟರ್‌ಗಳ ಕನವರಿಕೆ

Scanned with CamScanner

ಬಣ್ಣ ಮತ್ತು ಭಾಷೆ

ಬಣ್ಣಕ್ಕೂ ಮತ್ತು ಭಾಷೆಗೂ ಏನು ಸಂಬಂಧ? ಬಣ್ಣ ಮತ್ತು ಭಾಷೆಯನ್ನು ಕುರಿತು ಮಾತನಾಡುವಾಗ ಈ ಪ್ರಶ್ನೆ ಏಳುವುದು ಸಹಜ. ಬಣ್ಣ ಎನ್ನುವುದು ಕಣ್ಣಿಗೆ ಕಾಣುವ ವಸ್ತುಗಳ, ವ್ಯಾಪ್ತಿ ಪಕ್ಷಿಗಳ, ಅವುಗಳ ಮೇಲ್ಮೈಯನ್ನು ಗುರುತಿಸಲು ಬಳಸುವ ಒಂದು ವಿಧಾನವಷ್ಟೆ. ಅಥವಾ ಅವುಗಳನ್ನು ಗುರುತಿಸಲು ಬಳಸುವ ಒಂದು ಶಾಬ್ದಿಕ ಪದ. ಆದರಾಚೆಗೆ ಬಣ್ಣಕ್ಕೂ ಭಾಷೆಗೂ ಯಾವ ಬಗೆಯ ಸಂಬಂಧ ಕಲ್ಪಿಸಲು ಸಾಧ್ಯ ಎನ್ನುವ ಪ್ರಶ್ನೆ ಕೂಡ ಉದ್ಭವಿಸುವುದು ಸಹಜವೇ. ಭಾಷೆ ಎನ್ನುವುದು ಮನುಷ್ಯರ ನಡುವಿನ ಭಾವನೆಗಳ ಅಭಿವ್ಯಕ್ತಿ ಪಡಿಸಲು ಮತ್ತು ಆ ಅಭಿವ್ಯಕ್ತಿಯನ್ನು ಅರ್ಥಮಾಡಿಕೊಳ್ಳಲು ಇರುವ ಸಂವಹನ ಪ್ರಕ್ರಿಯೆ. ಈ ಸಂವಹನ ಪ್ರಕ್ರಿಯೆಯಲ್ಲಿ ಇರುವ ಶಬ್ದ ಮತ್ತು ಅರ್ಥಗಳಿಗೆ ಸಂಬಂಧಿಸಿದ್ದೇ ಭಾಷೆ. ಭಾಷೆಯನ್ನು ಭಾಷಾವೈಜ್ಞಾನಿಕ ಹಿನ್ನೆಲೆಯಲ್ಲಿ ವಿವರಿಸುವ ಉದ್ದೇಶ ಸದ್ಯಕ್ಕೆ ಇಲ್ಲಿನದ್ದಲ್ಲ. ಹಾಗಾಗಿ ಬಣ್ಣವನ್ನು ಗುರುತಿಸಲು ಕಲ್ಪಿಸಲಾದ ಶಾಬ್ದಿಕ ರೂಪದ ಪದ ಮತ್ತು ಆ ಶಬ್ದವನ್ನು ಗುರುತಿಸಲು ಬಳಸುವ ಅಕ್ಷರಗಳ ಗುಂಪು ಮತ್ತು ಶಾಬ್ದಿಕ ಪದ ಪದಾರ್ಥವು ಸಾಮಾಜಿಕವಾಗಿ ವಿನ್ಯಾಸಗೊಂಡಿರುವ ಮಾದರಿ ಕುತೂಹಲಕಾರಿಯಾಗಿರುತ್ತದೆ.

ಮೂಲಭೂತವಾಗಿ ಬಣ್ಣಕ್ಕೂ ಮತ್ತು ಆ ಬಣ್ಣವನ್ನು ಗುರುತಿಸಲು ಬಳಸುವ ಶಬ್ದಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ಭಾಷೆಯಲ್ಲಿ ಅದನ್ನು ರೂಢಿಯಿಂದ ಕಲ್ಪಿಸಲಾಗುತ್ತದೆ. ಉದಾಹರಣೆಗೆ ಕೆಂಪು ಎಂದು ಗುರುತಿಸುವ ಬಣ್ಣಕ್ಕೂ ಮತ್ತು ಕೆಂಪು ಎಂದು ಉಚ್ಚರಿಸುವ ಶಬ್ದಕ್ಕೂ ಮತ್ತು ಕೆಂಪು ಎಂದು ಸೂಚಿಸುವ ಅಕ್ಷರಗಳ ಗುಚ್ಛಗಳಿಂದ ಕೂಡಿದ ಪದಕ್ಕೂ ಯಾವುದೇ ಸಂಬಂಧ ಇಲ್ಲ. ಇದು ಕೂಡ ಕಲ್ಪಿಸಿದ್ದೇ ಆಗಿದೆ. (ಬಣ್ಣ (ಶಬ್ದ ಮತ್ತು ಕಣ್ಣಿಗೆ ಕಾಣುವ ದೃಶ್ಯ) ಬಣ್ಣ (ಅಕ್ಷರಗಳು ಮತ್ತು ಅದನ್ನು ಪ್ರತಿನಿಧಿಸುವ ಶಬ್ದ (ಬ+ಣ್ಣ)) ಬಣ್ಣ ಎಂದು ಉಚ್ಚರಿಸುವ ಶಬ್ದಕ್ಕು, ಮತ್ತು ಅದನ್ನು ಪ್ರತಿನಿಧಿಸುವ ಬಣ್ಣದ ರೂಪಕ್ಕೂ ಒಂದಕ್ಕೊಂದು ಸಂಬಂಧ ಇರುವಂತೆ ಕಾಣುತ್ತದೆ. ಆದರೆ ಬಣ್ಣದ ಗುಣಕ್ಕೂ ಮತ್ತು ಆ ಬಣ್ಣವನ್ನು ಗುರುತಿಸಲು ಬಳಸುವ ಶಾಬ್ದಿಕ ಉಚ್ಚಾರಣೆಗೂ ಮತ್ತು ಅದನ್ನು ಗುರುತಿಸಲು ಇರುವ ಅಕ್ಷರಗಳಿಂದ ಕೂಡಿದ ಶಬ್ದಕ್ಕೂ ಯಾವುದೇ ಸಾವಯವ ಸಂಬಂಧ ಇರುವುದಿಲ್ಲ ಎನ್ನುವುದನ್ನು ಹೇಳಿದ್ದೇನೆ. ಈ ಸಂಬಂಧ ಕಲ್ಪಿಸಲಾದ ಅಥವಾ ಆರೋಪಿಸಲಾದ ಸಂಬಂಧ ಎಂದರೂ ತಪ್ಪಾಗಲಾರದು. ಭಾಷೆಗೂ ಬಣ್ಣಕ್ಕೂ ಇರುವ ಸಂಬಂಧವನ್ನು ರೂಪಾಯಿ ನೋಟಿಗೂ ಮತ್ತು ಅದರ ಮೌಲ್ಯಕ್ಕೂ ಇರುವ ಸಂಬಂಧ ಇರುವಂತೆ ಇರುತ್ತದೆ.

ಯಾವುದೇ ಮುಖಬೆಲೆಯ ರೂಪಾಯಿ ನೋಟಿಗೂ ಮತ್ತು ಅದರ ಮೌಲ್ಯಕ್ಕೂ ಸಂಬಂಧ ಇರುವುದಿಲ್ಲ. ಉದಾಹರಣೆಗೆ ಡಿಮಾನಿಟೈಸೇಶನ್ ನಂತರ ಒಂದು ಸಾವಿರ ಮತ್ತು ಐನೂರು ನೋಟುಗಳನ್ನು ಅಮಾನ್ಯ ಮಾಡಿದ ಮೇಲೆ ಆ ನೋಟುಗಳಿಗೆ ಯಾವುದೇ ಮೌಲ್ಯ ಇಲ್ಲ. ಅವುಗಳು ಕೇವಲ ಕಾಗದದ ತುರುಗಳಾದವು ಹಾಗಾಗಿ ಐನೂರು, ಸಾವಿರ ಮುಖಬೆಲೆಯ ನೋಟಿನ ಮೌಲ್ಯ ಸರ್ಕಾರ ಕಲ್ಪಿಸಿದ ಆರೋಪದಲ್ಲಿದೆಯೋ ಅಥವಾ ಸ್ವತಃ ಆ ಕಾಗದದ ನೋಟಿನಲ್ಲಿದೆಯೋ ಎಂದರೆ ಖಂಡಿತವಾಗಿಯೂ ಆ ನೋಟಿನಲ್ಲಿ ಇಲ್ಲ. ಅದು ಕಲ್ಪಿಸಿದ ಮೌಲ್ಯದಲ್ಲಿದೆ. ಹಾಗಾಗಿ ಅದು ಆರೋಪಿತ ಮೌಲ್ಯ ಆರೋಪಿತ ಮೌಲ್ಯ ಆ ನೋಟಿಗೆ ಇಲ್ಲ ಎಂದು ಸರ್ಕಾರ ಘೋಷಿಸಿದ ಕೂಡಲೇ, ಆ ನೋಟಿನ ಮೌಲ್ಯ ಇಲ್ಲದಂತಾಗಿ ಕೇವಲ ಕಾಗದವಾಗಿ ಮಾರ್ಪಡುತ್ತದೆ. ಹಾಗೆಯೇ ಭಾಷೆಯಲ್ಲೂ ಕೂಡ ಇದೇ ಬಗೆಯಲ್ಲಿ ಒಂದು ಪದಕ್ಕೆ ಅಥವಾ ವಸ್ತುಗಳಿಗೆ ಶಬ್ದವನ್ನು ಆರೋಪಿಸಿ ಅದಕ್ಕೆ ಒಂದು ಅರ್ಥವನ್ನು ಕಲ್ಪಿಸಲಾಗುತ್ತದೆ.

ಪದ ಮತ್ತು ಪದಾರ್ಥದಲ್ಲಿ ಪದಕ್ಕೆ ಕಲ್ಪಿಸಲಾದ ಅರ್ಥ ಕೂಡ ನಾವು ಕಟ್ಟಿಕೊಂಡದ್ದೇ ಆಗಿದೆ. ಅದು ಆಯಾ ಪ್ರದೇಶ ಸಮುದಾಯದಲ್ಲಿ ಬೇರೆನೇ ಆಗಿರಬಹುದು. ಒಂದೆಡೆ ಅದು ಅಪಾರ್ಥಕ್ಕೂ ಕಾರಣವಾಗಬಹುದು. ಉದಾಹರಣೆಗೆ :– ತಿಂಡಿ ಎನ್ನುವ ಪದಕ್ಕೆ ಬೆಳಗಿನ ಉಪಾಹಾರ ಎಂದು ದಕ್ಷಿಣ ಕರ್ನಾಟಕದಲ್ಲಿ ಅರ್ಥ ಹೊಂದಿದ್ದರೆ ಉತ್ತರ ಕರ್ನಾಟಕದಲ್ಲಿ ಅದಕ್ಕೆ ತುರಿಕೆ ಎನ್ನುವ ಅರ್ಥ ಹೊಂದಿದೆ. ಕೆಲವು ಪ್ರದೇಶದಲ್ಲಿ ಇರುವ ಶಬ್ದಕ್ಕೆ ಮತ್ತೊಂದು ಪ್ರದೇಶದಲ್ಲಿ ಅರ್ಥವೇ ಇಲ್ಲದಿರಬಹುದು. ಅಷ್ಟೇ ಅಲ್ಲ ಒಂದು ಪದಕ್ಕೆ ಇರುವ ಅರ್ಥ ಕಾಲಾಂತರದಲ್ಲಿ ಬದಲಾಗಲೂಬಹುದು. ಉದಾಹರಣೆಗೆ ಕೂಳ್ ಎನ್ನುವ ಪದಕ್ಕೆ ಹಳಗನ್ನಡದಲ್ಲಿ ಅನ್ನ ಎಂದರ್ಥವಿದ್ದರೆ ಪ್ರಸ್ತುತ ಸಂದರ್ಭದಲ್ಲಿ ಹೀನಾರ್ಥ ಪ್ರಾಪ್ತಿಯಾಗಿದೆ. ಅಮ್ಮ ಎನ್ನುವ ಪದಕ್ಕೆ ಹಿಂದೆ ಅಪ್ಪ ಎನ್ನುವ ಅರ್ಥ ಇದ್ದದ್ದು ಈಗ ಅದು ತಾಯಿ ಎನ್ನುವ ಅರ್ಥಕ್ಕೆ ಬದಲಾಗಿದೆ. ಇನ್ನೊಂದು ಭಾಷೆಯ ಶಬ್ದ ಮತ್ತೊಂದು ಭಾಷಿಕ ಸಮುದಾಯದಲ್ಲಿ ಯಾವುದೇ ಅರ್ಥ ಇರದ ಶಬ್ದ ಮಾತ್ರ ಆಗಬಹುದು. ಅಥವಾ ಕೆಲವು ಸಂದರ್ಭದಲ್ಲಿ ಬೇರೊಂದು ಅರ್ಥವೇ ಬರಬಹುದು. ಉದಾಹರಣೆಗೆ ರೇಪು ಎನ್ನುವುದು ತೆಲುಗು ಭಾಷೆಯಲ್ಲಿ ನಾಳೆ ಎನ್ನುವ ಅರ್ಥ ಇದ್ದರೆ ಇದೇ ರೇಪ್ ಎನ್ನುವ ಶಬ್ದಕ್ಕೆ ಇಂಗ್ಲೀಶಿನಲ್ಲಿ ಲೈಂಗಿಕ ದೌರ್ಜನ್ಯ ಎನ್ನುವ ಅರ್ಥ ಇದೆ. ಹಾಗಾಗಿ ಪದ ಮತ್ತು ಪದದ ಅರ್ಥ ನೇರವಾಗಿ ಸಂಬಂಧ ಇಲ್ಲದಿರುವುದು ಮತ್ತು ಅದು ನಾವೇ ಆರೋಪಿಸಿದ್ದು ಎನ್ನುವುದು ಇದರಿಂದ ಅರ್ಥವಾಗುತ್ತದೆ. ಇದನ್ನು ಇನ್ನೂ ವಿಸ್ತರಿಸಿ ಚರ್ಚಿಸುವುದಾದರೆ ಕೆಂಪು ಬಣ್ಣ ಎನ್ನುವಲ್ಲಿ ಕಣ್ಣಿಗೆ ಕಾಣುವ ಒಂದು ಬಗೆಯ ಬಣ್ಣವನ್ನು ಕೆಂಪು ಎಂದು ಭಾವಿಸಬೇಕು. ಅಷ್ಟೇ ಅಲ್ಲ ಸಾಮಾಜಿಕವಾಗಿ ಸಾರ್ವತ್ರಿಕವಾದ ತಿಳುವಳಿಕೆಯಲ್ಲಿ (ಕೆಲವು ಸಮುದಾಯಗಳಲ್ಲಿ ಇಲ್ಲದೇ ಇರಬಹುದು) ಕೆಂಪು ಎಂದರೆ ಅಪಾಯ ಎನ್ನುವ ಅರ್ಥವನ್ನೂ ನೀಡಲಾಗಿದೆ. ರಸ್ತೆಯಲ್ಲಿ ಹೋಗುವಾಗ ಟ್ರಾಫಿಕ್ ಸಿಗ್ನಲ್‌ನಲ್ಲಿ ನಾವು ಕೆಂಪು ದೀಪ ಬಿದ್ದಕೂಡಲೇ ನಿಲ್ಲುತ್ತೇವೆ. ಹಳದಿ ದೀಪ ಹತ್ತಿದ ಕೂಡಲೇ ಸಂಚರಿಸಲು ಸಿದ್ಧರಾಗುತ್ತೇವೆ. ಹಸಿರು ದೀಪ ಹತ್ತಿದ ಕೂಡಲೇ ಮುಂದಕ್ಕೆ ಸಂಚರಿಸುತ್ತೇವೆ. ಹಾಗಾಗಿ ರಸ್ತೆಯ ಮಧ್ಯೆ ಇರುವ ಹಳದಿ ಪಟ್ಟಿಯನ್ನು ದಾಟುವುದಿಲ್ಲ. ಹಾಗೇನಾದರೂ ದಾಟಿದರೆ ಪೊಲೀಸ್‌ನವರು ತಾತ್ಕಾತು ಮಾಡಬಹುದು ಇಲ್ಲವೇ ದಂಡವನ್ನೂ ವಿಧಿಸಬಹುದು. ಹಾಗೆನೇ ರೈಲು ಕೂಡ ಹಸಿರು ಮತ್ತು ಕೆಂಪು ದೀಪಗಳ ಮೂಲಕವೇ ಚಲಿಸುತ್ತದೆ.

■ ಅಶೋಕಕುಮಾರ ರಂಚೇರೆ

> ಮೂಲಭೂತವಾಗಿ ಬಣ್ಣಕ್ಕೂ ಮತ್ತು ಆ ಬಣ್ಣವನ್ನು ಗುರುತಿಸಲು ಬಳಸುವ ಶಬ್ದಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಭಾಷೆಯಲ್ಲಿ ಅದನ್ನು ರೂಢಿಯಿಂದ ಕಲ್ಪಿಸಲಾಗುತ್ತದೆ. ಉದಾಹರಣೆಗೆ ಕೆಂಪು ಎಂದು ಗುರುತಿಸುವ ಬಣ್ಣಕ್ಕೂ ಮತ್ತು ಕೆಂಪು ಎಂದು ಉಚ್ಚರಿಸುವ ಶಬ್ದಕ್ಕೂ ಮತ್ತು ಕೆಂಪು ಎಂದು ಸೂಚಿಸುವ ಅಕ್ಷರಗಳ ಗುಚ್ಛಗಳಿಂದ ಕೂಡಿದ ಪದಕ್ಕೂ ಯಾವುದೇ ಸಂಬಂಧ ಇಲ್ಲ. ಇದು ಕೂಡ ಕಲ್ಪಿಸಿದ್ದೇ ಆಗಿದೆ. (ಬಣ್ಣ (ಶಬ್ದ ಮತ್ತು ಕಣ್ಣಿಗೆ ಕಾಣುವ ದೃಶ್ಯ) ಬಣ್ಣ (ಅಕ್ಷರಗಳು ಮತ್ತು ಅದನ್ನು ಪ್ರತಿನಿಧಿಸುವ ಶಬ್ದ (ಬ+ಣ್ಣ)) ಬಣ್ಣ ಎಂದು ಉಚ್ಚರಿಸುವ ಶಬ್ದಕ್ಕು, ಮತ್ತು ಅದನ್ನು ಪ್ರತಿನಿಧಿಸುವ ಬಣ್ಣದ ರೂಪಕ್ಕೂ ಒಂದಕ್ಕೊಂದು ಸಂಬಂಧ ಇರುವಂತೆ ಕಾಣುತ್ತದೆ. ಆದರೆ ಬಣ್ಣದ ಗುಣಕ್ಕೂ ಮತ್ತು ಆ ಬಣ್ಣವನ್ನು ಗುರುತಿಸಲು ಬಳಸುವ ಶಾಬ್ದಿಕ ಉಚ್ಚಾರಣೆಗೂ ಮತ್ತು ಅದನ್ನು ಗುರುತಿಸಲು ಇರುವ ಅಕ್ಷರಗಳಿಂದ ಕೂಡಿದ ಶಬ್ದಕ್ಕೂ ಯಾವುದೇ ಸಾವಯವ ಸಂಬಂಧ ಇರುವುದಿಲ್ಲ

ಸಮೃದ್ಧಿಯ ಸಂಕೇತ, ಬೆಳವಣಿಗೆಯ ಸಂಕೇತ ಎಂತಲೂ, ಬಿಳಿ ಎಂದರೆ ಶಾಂತಿ, ಶುಭ್ರತೆ, ಪ್ರಶಾಂತತೆಯ ಸಂಕೇತ ಎಂತಲೂ, ಕಪ್ಪು ಎಂದರೆ ಕತ್ತಲೆ, ಮೌಢ್ಯತೆ, ದುಃಖದ ಪ್ರತೀಕವಾಗಿಯೂ ಅರ್ಥೈಸಿಕೊಳ್ಳುತ್ತೇವೆ.

ಬಣ್ಣಗಳ ಬಗೆಗಿನ ಆರೋಪಿತ ಈ ತಿಳಿವು ನಿಧಾನವಾಗಿ ಸಾಮಾಜಿಕ ಸಂದರ್ಭದಲ್ಲಿ ನೆಲೆಗೊಂಡು ದೊಡ್ಡ ಅಪಾಯವನ್ನೇ ಸೃಷ್ಟಿಸಬಹುದು. ಉದಾಹರಣೆಗೆ ಶ್ರೇಷ್ಠ-ಕನಿಷ್ಠ ಮೇಲು-ಕೀಳು, ಉತ್ತಮ-ಅಧಮ, ಬುದ್ಧಿವಂತ-ದಡ್ಡ, ತಿಳಿವು-ಮೌಢ್ಯ ಸೌಂದರ್ಯ, ಮತ್ತಿತರ ವಲಯಗಳಿಗೂ ಬಣ್ಣದ ವರಿಕಲ್ಪನೆ ವಿಸ್ತರಿಸಿಕೊಂಡದ್ದು ದುರಂತವಾಗಿ ಪರಿಣಮಿಸಿದೆ. ಬಿಳಿಯ ಬಣ್ಣ ಸೌಂದರ್ಯದ ಸಂಕೇತವಾಗಿ ಸಮಾಜದಲ್ಲಿ ಬಿಂಬಿತವಾಗಿರುವುದರಿಂದ ಕಪ್ಪು ಬಣ್ಣದವರು ಸೌಂದರ್ಯ ಉಳ್ಳವರಲ್ಲ ಎನ್ನುವ ತಿಳಿವಿಗೆ ಒಳಗಾಗಬೇಕಾಗಿದೆ. ಒಂದು ಮಗು ಜನಿಸಿದಾಗ ಸಾಮಾನ್ಯವಾಗಿ ಮಗು ಕಪ್ಪಗೆ, ಕಪ್ಪಗೆ ತುಂಬಾ ಚನ್ನಾಗಿದೆ ಎಂದು ಹೇಳುವುದನ್ನು ಕೇಳಲು ಸಾಧ್ಯವಿಲ್ಲ. ಮಗು ಬೆಳ್ಳಗೆ

Scanned with CamScanner

ಸಣ್ಣಗೆ ತುಂಬಾ ಮುದ್ದಾಗಿದೆ, ಸುಂದರವಾಗಿದೆ ಎನ್ನುವ ಮಾತುಗಳನ್ನು ಕೇಳುತ್ತೇವೆ. ಬಿಳಿ ಬಣ್ಣ ಸೌಂದರ್ಯದ ಪ್ರತೀಕವೆಂದು ಭಾವಿಸುವುದರಿಂದಲೇ ಇಂದು ಕಪ್ಪು ವರ್ಣೀಯರು ಬೆಳ್ಳಗಾಗಬೇಕು ಎನ್ನುವ ತಹತಹಿಕೆಯಲ್ಲಿದ್ದಾರೆ. ಜಗತ್ತಿನ ಅತ್ಯಂತ ಶ್ರೇಷ್ಠ ಡ್ಯಾನ್ಸರ್ ಮೈಕಲ್ ಜಾಕ್ಸನ್ ತಾನು ಬಿಳಿಯ ವರ್ಣೀಯ ಜನಾಂಗದವನಂತಾಗಬೇಕು ಎಂದು ಮಾಡಿಕೊಂಡ ಶಸ್ತ್ರಚಿಕಿತ್ಸೆಯಿಂದ ಮರಣವನ್ನೇ ಕಾಣಬೇಕಾಯಿತು. ಜಗತ್ತಿನಲ್ಲಿ ಜನರು ಬೆಳ್ಳಗಾಗಿ ಸುಂದರವಾಗಿ ಕಾಣಬೇಕು ಎನ್ನುವ ಹಿನ್ನೆಲೆಯಲ್ಲಿ ಬಳಸುವ ಕಾಸ್ಮೆಟಿಕ್ ಪದಾರ್ಥಗಳ ವಹಿವಾಟು ಜಗತ್ತಿನ ಆರ್ಥಿಕತೆಯನ್ನೇ ಬದಲಾಯಿಸಬಹುದಾದಷ್ಟು ವ್ಯಾಪಕವಾಗಿ ಬೆಳೆದಿದೆ. ಹಳ್ಳಿಯ ಅನಕ್ಷರರಿಂದ ಹಿಡಿದು ಪ್ರತಿಷ್ಠಿತ ಜನರವರೆಗೆ ಎಲ್ಲರೂ ಬಳಸುವ ಕಾಸ್ಮೆಟಿಕ್‌ಗಳನ್ನು ನೋಡಿದರೆ ಬಿಳಿ ಬಣ್ಣದ ಬಗೆಗೆ ನಮ್ಮೊಳಗೆ ಮನೆಮಾಡಿದ ಪಾರಂಪರಿಕ ತಿಳಿವಿನ ಪರಿಕಲ್ಪನೆ ಎಂಥ ಅವಘಡಗಳನ್ನು ಸೃಷ್ಟಿ ಮಾಡಿದೆ ಎನ್ನುವುದನ್ನು ಅವರ ಕ್ರಿಯೆಯಿಂದಲೇ ಅರಿಯಬೇಕು. ಇದರಿಂದ ಸಮಾಜದಲ್ಲಿ ಒಂದು ವರ್ಗದ ಮನಸ್ಥಿತಿಯಲ್ಲಿ ಹುಟ್ಟುಹಾಕಿರುವ ಶ್ರೇಷ್ಠತೆ, ಸುಂದರತೆ, ಅಮಾನವೀಯತೆ ಎಂಥದ್ದು ಎನ್ನುವುದು ಗೊತ್ತಾಗುತ್ತದೆ. ಇದನ್ನು ಕೆಲವು ನಿದರ್ಶನಗಳಿಂದ ವಿವರಿಸಬಹುದು ಎನಿಸುತ್ತದೆ.

ನಿದರ್ಶನ –01 ಮಹಾತ್ಮ ಗಾಂಧೀಜಿಯವರು 1896ರಲ್ಲಿ ಆಫ್ರಿಕಾದಲ್ಲಿದ್ದಾಗ ಒಂದು ಸಲ ಪ್ರಿಟೋರಿಯಾ ಎನ್ನುವಲ್ಲಿಗೆ ಹೋಗುವಾಗ ಕ್ರಮಬದ್ಧವಾಗಿ ಪ್ರಥಮದರ್ಜೆ ಸೀಟು ಕಾಯ್ದಿರಿಸಿ ಪ್ರಯಾಣ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಬಿಳಿಯ ಪೊಲೀಸಿನವನೊಬ್ಬ ಬಂದು ಗಾಂಧೀಜಿಯವರನ್ನು ಎಬ್ಬಿಸಿ ಅಲ್ಲಿಂದ ಮೂರನೇ ದರ್ಜೆಯ ಬೋಗಿಗೆ ಹೋಗಲು ಸೂಚಿಸಿದಾಗ, ಅದಕ್ಕೆ ಗಾಂಧೀಜಿಯವರು ನಾನು ಕ್ರಮಬದ್ಧವಾಗಿ ಆಸನವನ್ನು ಪಡೆದಿದ್ದೇನೆ, ನಾನೇಕೆ ಏಳಬೇಕು ಎಂದು ಪ್ರಶ್ನೆ ಮಾಡುತ್ತಾರೆ. ಅದಕ್ಕೆ ಆ ಪೊಲೀಸಿನವ ಅದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಮೂರನೇ ದರ್ಜೆಯ ಹಿಂದಿನ ಸಾಮಾನ್ಯ ಭೋಗಿಗೆ ಹೋಗಲು ಹೇಳುತ್ತಾನೆ. ಗಾಂಧೀಜಿಯವರು ಕಾದಿರಿಸಿದ ಸೀಟಿನಿಂದ ಏಳದೇ ಇದ್ದಾಗ ಪೀಟರ್‌ಮೆರಿಟ್ಜ್‌ಬರ್ಗ್ ಎನ್ನುವ ನಿಲ್ದಾಣದಲ್ಲಿ ಅವರನ್ನು ಮತ್ತು ಅವರ ಲಗೇಜನ್ನು ಎತ್ತಿ ಬೋಗಿಯಿಂದ ಹೊರಹಾಕುತ್ತಾನೆ. ಸ್ವತಃ ಗಾಂಧೀಜಿ ಅವರೇ ತಮ್ಮ ಬರವಣಿಗೆಯಲ್ಲಿ ಇದನ್ನು ದಾಖಲಿಸಿದ್ದಾರೆ. ಹೀಗೆ ರೈಲಿನಿಂದ ಗಾಂಧೀಜಿಯವರನ್ನು ಹೊರ ಹಾಕಲು ಗಾಂಧೀಜಿ ಅವರು ಕಪ್ಪು ವರ್ಣೀಯರೆಂಬ ಜನಾಂಗೀಯ ನಿಲುವೇ ಕಾರಣ. ಬಹುಶಃ ಮಹಾತ್ಮಾ ಗಾಂಧಿಯವರು ಬಿಳಿಯರಂತಿದ್ದಿದ್ದರೆ ಅವರನ್ನು ರೈಲಿನಿಂದ ಹೊರಗೆ ಹಾಕುತ್ತಿರಲಿಲ್ಲ. ಹೀಗೆ ಹೊರಗೆ ಹಾಕಲು ಅಲ್ಲಿನ ಬಿಳಿಯ ವರ್ಣೀಯರ ಮನಸ್ಥಿತಿಯೇ ಕಾರಣ.

ನಿದರ್ಶನ 2: ಕರೋನಾ ಮಹಾಮಾರಿಯಿಂದ ಜಗತ್ತೆ ತತ್ತರಿಸಿಹೋದ ಸಂದರ್ಭದಲ್ಲಿ ಅಮೇರಿಕಾದ ನಗರವೊಂದರಲ್ಲಿ ಒಂದು ಘಟನೆ ನಡೆಯಿತು. ಅಮೇರಿಕಾದಲ್ಲಿ ಲಾಕ್‌ಡೌನ್ ಹಾಕಿದ ಸಂದರ್ಭದಲ್ಲಿ ನಡೆದ ಒಂದು ಘಟನೆ ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿತ್ತು. ಅಮೇರಿಕದ ರಸ್ತೆಯಲ್ಲಿ ಬಿಳಿಯ ಪೊಲೀಸಿನವನೊಬ್ಬ ನಡುರಸ್ತೆಯಲ್ಲಿ ಕಪ್ಪು ವರ್ಣೀಯನವನೊಬ್ಬನನ್ನು ಕುತ್ತಿಗೆಯ ಮೇಲೆ ಕಾಲಿಟ್ಟು ಅಮಾನವೀಯವಾಗಿ ನಡೆದುಕೊಂಡ. ಕಪ್ಪು ವರ್ಣೀಯ ವ್ಯಕ್ತಿ ಎಷ್ಟೇ ಗೋಗರೆದರೂ, ಬಿಳಿಯ ವರ್ಣೀಯ ಪೊಲೀಸಿನವ ಸ್ವಲ್ಪವೂ ವಿಚಲಿತನಾಗದೆ ಸಾಯಿಸಿದ. ಆತನಿಗೆ ಆ ಕುರಿತು ಹಾಗೆ ಮಾಡುವಾಗ, ಆತನ ಮುಖದಲ್ಲಿ ಯಾವುದೇ ಗಿಲ್ಟ್ ಕೂಡ ಇರಲಿಲ್ಲ. ತಾನು ಮಾಡುತ್ತಿರುವುದು ಸರಿಯಾಗಿಯೇ ಇದೆ ಎನ್ನುವಂತೆ ಇತ್ತು. (ಈ ಘಟನೆಯ ವೀಡಿಯೋ ವೈರಲ್ ಆದಾಗ ಜಗತ್ತಿನ ಅನೇಕರು ಇದಕ್ಕೆ ಪ್ರತಿಕ್ರಿಯಿಸಿದರು. ಅಮೇರಿಕದ ಬಿಳಿಯ ಜನಾಂಗದ ಜನರೂ ಕೂಡ ಹೀಗೆ ಬಿಳಿಯನೊಬ್ಬ ಕಪ್ಪು ವರ್ಣೀಯನ ಮೇಲೆ ಅಮಾನವೀಯವಾಗಿ ಜನಾಂಗೀಯ ದಾಳಿ ಮಾಡಿರುವುದು ಸರಿಯಾದ ಕ್ರಮವಲ್ಲ ಎಂದು ಪ್ರತಿಭಟನೆಗಳೂ ಕೂಡ ನಡೆದವು.) ಇದಕ್ಕೆ ಉತ್ತರವಾಗಿ ಬಿಳಿಯ ವರ್ಣೀಯ ಪೊಲೀಸನ ಮೇಲೆ ಯಾವ ಕ್ರಮ ಕೈಗೊಳ್ಳಲಾಯಿತು ಎನ್ನುವ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ.

ನಿದರ್ಶನ 03 : ಕನ್ನಡದ ಖ್ಯಾತ ವಿದ್ವಾಂಸರು, ಚಿಂತಕರೂ ಆಗಿರುವ ಡಾ.ಮರುಜೋತ್ತಮ ಬಿಳಿಮಲೆ ಅವರು ಕಾಗೆ ಮುಟ್ಟದ ನೀರು ಎನ್ನುವ ಆತ್ಮ ಕಥನ ಪ್ರಕಟಿಸಿದ್ದಾರೆ. ಈ ಕೃತಿ ಕನ್ನಡ ನಾಡಿನಲ್ಲಿ ಒಂದು ಸಣ್ಣ ಸಂಚಲನವನ್ನೇ ಉಂಟು ಮಾಡಿದೆ. (ಕೇವಲ ಹತ್ತು ದಿನಗಳಲ್ಲಿ ಎರಡು ಮುದ್ರಣ ಕಂಡಿದೆ) ಈ ಕೃತಿಯನ್ನು ನಾನು ಓದುತ್ತಿರುವಾಗ ಡಾ. ಮರುಜೋತ್ತಮ ಬಿಳಿಮಲೆ ಅವರು ತಮ್ಮ ಬಗ್ಗೆ ಎರಡು ಘಟನೆಗಳನ್ನು ವಿವರಿಸುವಾಗ ಕಪ್ಪು ಬಣ್ಣದ ಬಗ್ಗೆ ದಾಖಲಿಸುತ್ತಾರೆ. ಇದು ಈ ಲೇಖನ ಬರೆಯುವ ಸಂದರ್ಭದಲ್ಲಿ ಕುತೂಹಲ ಮೂಡಿಸಿತು. 1. 'ಕಪ್ಪಗೆ, ಕುಳ್ಳಗೆ, ಕುರೂಪದಲ್ಲಿ ಎಲ್ಲರನ್ನೂ ಮೀರಿಸುವಂತಿದ್ದ ನಾನು ತಂದೆ ತಾಯಿಯರ ವಿಷಾದವನ್ನು ಗಮನಾರ್ಹವಾಗಿ ಹೆಚ್ಚಿಸಿದ್ದಿರಲೇಬೇಕು. ಕರೆಯಲು ಸುಲಭವಾಗುವಂತೆ ರೋಯಿತ ಅಂತ ಹೆಸರಿಟ್ಟರು. ನೋಡಿದವರು ಮುಖ ಸಿಂಡರಿಸಿಕೊಂಡು ಏನೇನೋ ಪಿಸುಗುಡುತ್ತಿದ್ದುದನ್ನು, ಮನ್ನಿನ ನೆಲದಲ್ಲಿ ಮಲಗಿದ್ದ ನನ್ನನ್ನು ಹಾಗೇ ದಾಟಿಕೊಂಡು ಹೋಗುತ್ತಿದ್ದುದ್ದನ್ನು ಅಮ್ಮ ಕೊನೆಯವರೆಗೂ ಬೇಸರ ಮತ್ತು ಸಿಟ್ಟಿನಿಂದ ಹೇಳುತ್ತಿದ್ದರು.' (ಪುಟ–20) 2. "ಮುದೂರು ಅವರು ಶಾಲಾ ವಾರ್ಷಿಕೋತ್ಸವಕ್ಕಾಗಿ ಧರ್ಮಾಧಿಕಾರಿಯ ದೀಪಸ್ಥಂಬಗಳು ಎಂಬ ನಾಟಕವನ್ನು ಆರಿಸಿಕೊಂಡರು. ವಿಕ್ಟರ್ ಹ್ಯೂಗೋನ ಲಾ ಮಿಸರೇಬಲ್ ಕಾದಂಬರಿಯ ಆರಂಭದ ಒಂದು ಪ್ರಸಂಗವನ್ನು ಆಧರಿಸಿ ನಾರ್ಮನ್ ಮೆಕ್ನೆಲ್ ರಚಿಸಿದ ನಾಟಕವದು. ಕಪ್ಪಗೆ ಕುಳ್ಳಾಗಿದ್ದ ನನ್ನ ಗುಂಗುರು ಕೂದಲನ್ನು ಕಂಡ ಮುದೂರು ನನಗೆ ಕಳ್ಳನ ಪಾತ್ರ ಕೊಟ್ಟರು." ಪುಟ–60. ಡಾ.ಮರುಜೋತ್ತಮ ಬಿಳಿಮಲೆ (ಕಾಗೆ ಮುಟ್ಟದ ನೀರು, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, 2020)

ನಿದರ್ಶನ 3 : ತನ್ನ ವಿಶಿಷ್ಟ ಡ್ಯಾನ್ಸ್‌ನಿಂದಲೇ ಜಗತ್ತಿನಾದ್ಯಂತ ಅತ್ಯಂತ ಪ್ರಸಿದ್ಧಿ ಪಡೆದಿದ್ದ ಪಾಪ್ ಗಾಯಕ ಮತ್ತು ನೃತ್ಯಗಾರ ಮೈಕಲ್ ಜಾಕ್ಸನ್ ಎಲ್ಲರಿಗೂ ಗೊತ್ತು. ಆತ ಮೂಲತಃ ಕಪ್ಪು ವರ್ಣೀಯ ವ್ಯಕ್ತಿ. ಈತ ಎಷ್ಟು ಪ್ರಖ್ಯಾತಿ ಪಡೆದ ಡ್ಯಾನ್ಸರ್ ಎಂದರೆ ಜಗತ್ತಿನ ಯಾವುದೇ ಮೂಲೆಗೆ ಹೋದರೂ ಈತ ಎಲ್ಲರಿಗೂ ಚಿರಪರಿಚಿತ. ತಾನು ಕಪ್ಪುವರ್ಣೀಯನಾಗಿರುವುದನ್ನು ಗೌರವರ್ಣಕ್ಕೆ ಬದಲಾಯಿಸಿಕೊಳ್ಳಲು ಹಂಬಲಿಸಿದ. ಮತ್ತು ತನ್ನ ಕಪ್ಪು ಚರ್ಮದ ಬಣ್ಣವನ್ನು ಶಸ್ತ್ರಚಿಕಿತ್ಸೆ ಮೂಲಕ ಬಿಳಿಯಾಗಿಸಿಕೊಂಡ. ಇದರಿಂದ ಆತನ ಆರೋಗ್ಯ ಕೈಕೊಟ್ಟಿದ್ದಲ್ಲದೆ ಕುರುಪಿಯಂತಲೂ ಆದ. ಇದರಿಂದ ಕೊನೆಗೆ ತನ್ನ ಜೀವನವನ್ನೇ ಕಳೆದುಕೊಳ್ಳಬೇಕಾಯಿತು.

ಇದು ಬಿಳಿಯ ವರ್ಣೀಯರಿಗೆ ತಮ್ಮ ಬಣ್ಣದ ಬಗೆಗೆ ಇರುವ ಹೆಮ್ಮೆ ಗೌರವದ ಪ್ರತೀಕವಾಗಿ ಕಾಣುವ ಬಗೆ ಒಂದಾದರೆ, ಕಪ್ಪು ವರ್ಣೀಯರಿಗೆ ತಮ್ಮ ಕಪ್ಪು ಬಣ್ಣದ ಬಗೆಗೆ ಇರುವ ಕೀಳರಿಮೆ, ಅಸಹನೆ ಮತ್ತೊಂದು. ಈ ಮನಸ್ಥಿತಿ ಅಂತರ ಮತ್ತಷ್ಟು ಹೆಚ್ಚಾಗಲು ಕಾರಣವಾಗಿದೆ ಎನಿಸುತ್ತದೆ. ಡಾ.ರಾಮಮನೋಹರ ಲೋಹಿಯಾ ಅವರು ತಮ್ಮ ಒಂದು ಲೇಖನದಲ್ಲಿ ಹೇಳುವ ಹಾಗೆ "ಬಿಳಿಯರು ದಕ್ಷಿಣ ಹಾಗೂ ಮಧ್ಯ ಅಮೇರಿಕದಲ್ಲಿ ಸಂಖ್ಯಾ ಬಲದಲ್ಲಿ ಅಲ್ಪವಾಗಿದ್ದರೂ ಪ್ರಾಬಲ್ಯ ಸಾಧಿಸಿದ್ದಾರೆ. ಇಂಥಲ್ಲಿ ಜನತಂತ್ರ ಅಸ್ತಿತ್ವದಲ್ಲಿದ್ದಾಗ, ಸ್ವಲ್ಪ ಮಹತ್ವದ ಮುಖ್ಯಾಂಶವೊಂದು ಗೋಚರಿಸುತ್ತದೆ. ಬಿಳಿಯರಲ್ಲದವರು ಸಾಮಾನ್ಯವಾಗಿ, ಬಿಳಿಯರಿಗಿಂತ ಕೀಳೆಂದು ಭಾವಿಸುತ್ತಾರೆ. ಕರಿಯನೊಬ್ಬ ಅಹಂಕಾರಿಯಂತೆ ಮತ್ತು ಜಗಳಗಂಟಿಯಾಗಿ ವರ್ತಿಸಿದರೂ, ಅವನ ಹೃದಯಾಂತರಾಳದಲ್ಲಿ ಆ ಕೀಳರಿಮೆ ಇರುತ್ತದೆ. ಇದು ಅಮೇರಿಕದಲ್ಲಿ ಹೆಚ್ಚು ನಿಚ್ಚಳವಾಗಿದೆ. ಅಲ್ಲಿ ಕರಿಯರು ಬಿಳಿಯ ಚರ್ಮದ ಸೌಂದರ್ಯದ ಬಗೆಗೆ ಒಂದು ರೀತಿಯ ಹುಚ್ಚು ಹಿಡಿಸಿಕೊಂಡು, ತಮ್ಮ ಕರಿಯ ಚರ್ಮದ ಬಗ್ಗೆ ಕೀಳು ಭಾವನೆಯನ್ನು ಬೆಳೆಸಿಕೊಂಡು ಜೀವನದುದ್ದಕ್ಕೂ ದುಃಖಿಸುತ್ತಾನೆ. ಈ ಕೀಳರಿಮೆಯ ಭಾವನೆ ಅನಿವಾರ್ಯವಾಗಿ ಇತರ ಕ್ಷೇತ್ರಗಳಿಗೂ ವ್ಯಾಪಿಸಿಕೊಳ್ಳುತ್ತದೆ" (ಡಾ. ರಾಮಮನೋಹರ ಲೋಹಿಯಾ, ಲೇ. ಮೈಬಣ್ಣದ ಪ್ರಶ್ನೆ, (1960ರಲ್ಲಿ ಬರೆದ ಲೇಖನ) ಮಾನವ ಕುಲದ ಏಕತೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 2000)

ನಿದರ್ಶನ 05 : ಕಳೆದ ವಾರ ನಮ್ಮ ವಿಭಾಗ ಪ್ರತಿದಿನ ನಡೆಸುವ ಕಿಟಕಿ ಮಾತು ಎನ್ನುವ ಕಾರ್ಯಕ್ರಮದಲ್ಲಿ ನಮ್ಮ ವಿಭಾಗದ ವಿದ್ಯಾರ್ಥಿ ಗಾದೆಗಳು ಮತ್ತು ಅವುಗಳ ಸಾಮಾಜಿಕ ಚಹರೆ ಎನ್ನುವ ವಿಷಯ ಕುರಿತು ಟಿಪ್ಪಣಿ ಮಂಡಿಸುವಾಗ ಕಪ್ಪು ಬ್ರಾಹ್ಮಣನನ್ನು ನಂಬಬೇಡ, ಬಿಳಿ ಶೂದ್ರನನ್ನು ನಂಬಬೇಡ. ಎನ್ನುವ ಗಾದೆ ಮಾತಿನ ಹಿಂದಿನ ಸಾಮಾಜಿಕ ಮನೋಭಾವ

ಕುರಿತು ಮಾತನಾಡಿದ. (ಬ್ರಾಹ್ಮಣರು ಬೆಳ್ಳಗಿರುತ್ತಾರೆ, ಶೂದ್ರರು ಕಪ್ಪಗಿರಬೇಕು ಎನ್ನುವ ಸಂಬಂಧ, ಬ್ರಾಹ್ಮಣರು ಬುದ್ಧಿವಂತರು ಶೂದ್ರರು ದಡ್ಡರು ಎನ್ನುವ ಭಾವನೆ.) ಇದು ಸಮಾಜದ ತಿಳುವಳಿಕೆಯಾಗಿ ಹೇಗೆ ಬಳಕೆಯಾಗುತ್ತಿದೆ ಎನ್ನುವದು ನನ್ನ ಕುತೂಹಲ ಕೆರಳಿಸಿತು.

ಮೇಲಿನ ಒಂದು ಮತ್ತು ಎರಡನೇ ನಿದರ್ಶನಗಳಲ್ಲಿ ಶ್ವೇತ ವರ್ಣೀಯ ಜನಾಂಗದವರಲ್ಲಿ ಕಪ್ಪು ವರ್ಣೀಯರ ಬಗೆಗಿನ ತಿಳಿವು ರೂಪುಗೊಂಡಿದ್ದನ್ನು ವಿವರಿಸುತ್ತವೆ. ಶ್ವೇತವರ್ಣೀಯರಾದ ನಾವು ಶ್ರೇಷ್ಠರು, ಬುದ್ಧಿವಂತರು ಎನ್ನುವ ಮನೋಭಾವ ಎದ್ದು ಕಾಣುತ್ತದೆ. ಮೂರು ಮತ್ತು ನಾಲ್ಕನೇ ನಿದರ್ಶನಗಳಲ್ಲಿ ಕಪ್ಪು ವರ್ಣೀಯರಲ್ಲೇ ತಮ್ಮ ಬಣ್ಣದ ಬಗೆಗೆ ರೂಪುಗೊಂಡ ಕೀಳರಿಮೆಯ ಮನೋಭಾವ ಎಂಥದ್ದು ಎನ್ನುವುದನ್ನು ಹೇಳುತ್ತವೆ. ಐದನೇ ನಿದರ್ಶನದಲ್ಲಿ ಜನಸಾಮಾನ್ಯರಲ್ಲೂ ಕೂಡ ಮೇಲ್ವರ್ಗ ಮತ್ತು ಬಿಳಿಯ ಬಣ್ಣದ ಬಗೆಗೆ ತಳೆದಿರುವ ನಿಲುವು ಅವರ ಅರಿವಿನ ಭಾಗವಾಗಿ ರೂಪುಗೊಂಡ ಬಗೆಯನ್ನು ಹೇಳುತ್ತದೆ. ಹಾಗಾಗಿ ಶ್ವೇತವರ್ಣೀಯರಲ್ಲಿನ ಶ್ರೇಷ್ಠತೆಯ ವ್ಯಸನ, ಕಪ್ಪು ವರ್ಣೀಯರಾದ ಕರಿಯರಲ್ಲಿನ ಕೀಳರಿಮೆ ಮತ್ತು ಜನಸಾಮಾನ್ಯರಲ್ಲೇ ತಲೆತಲಾಂತರದಿಂದ ರೂಪುಗೊಂಡ ಶ್ರೇಷ್ಠ ಕನಿಷ್ಠ, ಮೇಲು–ಕೀಳು ಭಾವನೆ ಇಂಥ ಭಾಷಿಕ ರಚನೆಗಳನ್ನು ಹುಟ್ಟುಹಾಕಲು ಕಾರಣವಾಗುತ್ತವೆ. ಅಷ್ಟೇ ಅಲ್ಲ ಇದಕ್ಕೆ ಪೂರಕವಾಗಿ ಇಂಥ ತಿಳಿವನ್ನೇ ಪುಷ್ಟಿಗೊಳಿಸುವ ನಮ್ಮ ಶಿಕ್ಷಣದಲ್ಲಿನ ಸ್ಥಿತಿ ಕೂಡ ಕಾರಣವಾಗಿದೆ.

ಭಾರತೀಯರಲ್ಲಿ ಅಷ್ಟೇ ಅಲ್ಲ ಜಾಗತಿಕವಾಗಿ ಜನರಲ್ಲಿ ಸೌಂದರ್ಯ ಮತ್ತು ಬಣ್ಣದ ಹಿಂದಿನ ಪೂರ್ವಗ್ರಹಪೀಡಿತ ಈ ತಿಳಿವಿನ ಬಗೆಗೆ ತಾತ್ವಿಕವಾಗಿ ಆಲೋಚನೆ ಮಾಡುವಂತಾಗಬೇಕು. ಈ ಸಂಬಂಧ ರಾಮಮನೋಹರ ಲೋಹಿಯಾ ಅವರು ತಮ್ಮ ಒಂದು ಬರಹದಲ್ಲಿ ವಿವರಿಸುವಂತೆ ಮತ್ತು ದ. ರಾ. ಬೇಂದ್ರೆ ಅವರು ತಮ್ಮ ಒಂದು ಕವನದಲ್ಲಿ ಹೇಳುವಂತೆ ಬಣ್ಣದ ಭಾಷಿಕ ಅರ್ಥದಲ್ಲಿ ನಮ್ಮ ತಿಳಿವು ವಿಸ್ತರಿಸಬೇಕಿದೆ.

ಭಾರತೀಯರಲ್ಲಿ ಪ್ರಾಚೀನ ಕಾಲದಲ್ಲಿ ಸೌಂದರ್ಯ ಮತ್ತು ಮೈಬಣ್ಣದ ಕಲ್ಪನೆ ಇದಕ್ಕಿಂತ ತುಂಬಾ ಭಿನ್ನವಾಗಿತ್ತು ಎಂದು ಲೋಹಿಯಾ ಅವರು ತಮ್ಮ ಒಂದು ಲೇಖನದಲ್ಲಿ ಹೇಳಿದ್ದಾರೆ. "ಪ್ರಾಚೀನ ಭಾರತ, ಮೈಬಣ್ಣ ಮತ್ತು ಚೆಲುವುಗಳನ್ನು ತೊಡರಿಕೆಯಿಲ್ಲದೆ ಬೇರಾಗಿ ನೋಡಬಲ್ಲ ಎಚ್ಚರವನ್ನು ಪ್ರಾಯಶಃ ಸಾಧಿಸಿಕೊಂಡಿತ್ತು. ಚೆಲುವು ಎಲ್ಲೇ ಇದ್ದರೂ ಅದನ್ನು ಕಾಣಬಲ್ಲ ಶಕ್ತಿಯನ್ನು ಸಿದ್ಧಿಸಿಕೊಂಡಿತ್ತು. ಕಪ್ಪು ಬಿಳುಪುಗಳ ಮಧ್ಯೆ ಪೂರ್ವಗ್ರಹ ಬಿಟ್ಟು ಅದರ ತೊಡಕಿಲ್ಲದ ಸೌಂದರ್ಯವನ್ನು ತೂಗಿ ನೋಡಬಲ್ಲ ಶಕ್ತಿ ಪಡೆದುಕೊಂಡಿದ್ದುದು ನಿರ್ವಿವಾದ. ಮುಂದಿನ ಪೀಳಿಗೆಗಳು ಸೌಂದರ್ಯಾನುಭವದ ಈ ವಿಶೇಷ ಪ್ರಬುದ್ಧತೆಯನ್ನು ಹೇಗೋ ಪೋಲು ಮಾಡಿಕೊಂಡುಬಿಟ್ಟವು ಎಂದು ಹೇಳುತ್ತಾರೆ." (ಡಾ. ರಾಮಮನೋಹರ ಲೋಹಿಯಾ, ಲೇ. ಮೈಬಣ್ಣದ ಪ್ರಶ್ನೆ,(1960 ರಲ್ಲಿ ಬರೆದ ಲೇಖನ) ಮಾನವ ಕುಲದ ಏಕತೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 2000)

ತಾತ್ವಿವಾಗಿ ಸೌಂದರ್ಯ ಎನ್ನುವುದು ಬಣ್ಣದಲ್ಲಿಲ್ಲ ಎನ್ನುವುದನ್ನು ದ.ರಾ.ಬೇಂದ್ರೆ ಅವರು ತಮ್ಮ ಕವನವೊಂದರಲ್ಲಿ ಹೀಗೆ ಹೇಳಿರುವುದನ್ನು ಕಾಣಬಹುದು. "ಸೌಂದರ್ಯವೆಂಬೂದು ಕಣ್ಣಿನ ತುತ್ತಲ್ಲ, ಕಣ್ಣಿಗೆ ಕಣ್ಣಾಗಿ ಒಳಗಿಹುದು." ಹಾಗಾದರೆ ಸೌಂದರ್ಯ ಎನ್ನುವುದು ಬಣ್ಣದಲ್ಲಿದೆಯೋ ಅಥವಾ ಕಾಣುವ ಕಣ್ಣಿನಲ್ಲಿದೆಯೋ ? ಅಥವಾ ಸಮಾಜ ಕಟ್ಟಕೊಟ್ಟ ತಿಳಿವಿನಲ್ಲಿದೆಯೋ ಯೋಚಿಸಬೇಕಾಗಿದೆ.

Scanned with CamScanner

ಜನಪರ

ಮಾತುಕತೆ

ಮಾಸಿಕ ಜನಸಮುದಾಯಗಳ ಆಶಯಗಳ ಸ್ವಾಭಿಮಾನಿ ಸ್ವರ

• ನವೆಂಬರ್ 2020 • ಸಂಪುಟ - 8 • ಸಂಚಿಕೆ 1 • ಪುಟ 14

ಕನ್ನಡದ ಆತಂಕಗಳು

ಕನ್ನಡ ಉಳಿವುದೇ?



ಹೌದೀ ಮೋದಿ ಗುಡ್‌ಬೈ ಟ್ರಂಪ್!

ಜೈಲಿನಲ್ಲಿ ಮಾನವೀಯತೆಯ ಕಾರಂಜಿ



ಕನಸುಗಳ ಮಾತು ಮಧುರ

Scanned with CamScanner

ಮಾತುಕತೆ 25

ಕನ್ನಡದ ಆತಂಕಗಳು

ಕನ್ನಡ ಉಳಿವುದೇ?

ಭಾಷೆಗಳನ್ನು ಉಳಿಸುವುದು ಎಂದರೆ ಆ ಭಾಷಿಕ ಸಮುದಾಯವನ್ನು ಉಳಿಸದೆ ಕೇವಲ ಅವರು ಬಳಸುವ ಭಾಷೆಯನ್ನು ಉಳಿಸಲು ಸಾಧ್ಯವಿಲ್ಲ ಎನ್ನುವ ಮಾತು ಸತ್ಯ ಎಂದು ಕಾಣುತ್ತದೆ. ಆದ್ದರಿಂದ ಕರ್ನಾಟಕದಲ್ಲಿ ಕನ್ನಡ ನುಡಿ ಆಡಳಿತ, ಶಿಕ್ಷಣ, ಸಾರ್ವಜನಿಕ ಕ್ಷೇತ್ರ ಮತ್ತಿತರ ವಲಯಗಳಲ್ಲಿ ಸಾರ್ವತ್ರಿಕವಾಗಿ ಸಹಜವಾಗಿ ಬಳಕೆಯಾಗಿ ಕನ್ನಡದ ಆತಂಕಗಳು ದೂರವಾಗಬೇಕಾದರೆ, ಕನ್ನಡದ ನುಡಿ ಉಳಿಕೆಯ ಕೆಲಸಗಳ ಜೊತೆಗೆ ಕನ್ನಡಿಗರನ್ನು ಕಾಪಿಡುವ ಕೆಲಸ ನಡೆಯಬೇಕಾಗಿದೆ. ಆಗ ಕನ್ನಡ ನಿರಾತಂಕವಾಗಿ ಉಳಿಯಬಹುದು ಎನಿಸುತ್ತದೆ.

ಸಾವಿರಾರು ವರ್ಷಗಳ ಸುದೀರ್ಘ ಚರಿತ್ರೆ ಇರುವ ಕನ್ನಡವು ಜಗತ್ತಿನ ಕೆಲವೇ ಕೆಲವು ಪುರಾತನ ಭಾಷೆಗಳಲ್ಲಿ ಒಂದು. ಕನ್ನಡ ನುಡಿಯ ಚರಿತ್ರೆಯನ್ನು ಸುಮೇರಿಯನ್ ಸಂಸ್ಕೃತಿಯ ಕಾಲಘಟ್ಟಕ್ಕೂ (ಕ್ರಿ.ಪೂ. ಸುಮಾರು ಮೂರರಿಂದ ಐದನೇ ಶತಮಾನ) ವಿದ್ವಾಂಸರು ತೆಗೆದುಕೊಂಡು ಹೋಗಿದ್ದಾರೆ. ಸುಮೇರಿಯನ್ ಭಾಷೆಯಲ್ಲಿನ ಅನೇಕ ಪದಗಳು ಮತ್ತು ಕನ್ನಡದ ಅನೇಕ ಪದಗಳಲ್ಲಿ ಸಾಮ್ಯತೆ ಇದ್ದು ಅವುಗಳಿಗೆ ಇರುವ ಅರ್ಥ ಒಂದೇ ಆಗಿರುವುದರಿಂದ ಕನ್ನಡ ನುಡಿ ಆ ಕಾಲದಲ್ಲೇ ಬಳಕೆಯಲ್ಲಿದ್ದಿರಬಹುದು ಎನ್ನುವ ಮಾತುಗಳನ್ನು ಹೇಳುತ್ತಾರೆ. ಅದೇನೇ ಇರಲಿ ಕನ್ನಡ ನುಡಿ ಜಗತ್ತಿನ ಅತ್ಯಂತ ಪುರಾತನ ಭಾಷೆಗಳಲ್ಲಿ ಒಂದು ಎನ್ನುವುದು ನಿರ್ವಿವಾದ.

ಕನ್ನಡ ನುಡಿಯ ಬಳಕೆಯ ವ್ಯಾಪ್ತಿಯೂ ಕೂಡ ವ್ಯಾಪಕವಾಗಿದೆ. ಯುನೆಸ್ಕೊ ಮತ್ತು ಭಾರತೀಯ ಜನಗಣತಿಯ ಅಂಕಿ ಸಂಖ್ಯೆಗಳ ಪ್ರಕಾರವೇ ಜಗತ್ತಿನಾದ್ಯಂತ ಸುಮಾರು ನಾಲ್ಕುವರೆ ಕೋಟಿಗಿಂತಲೂ ಹೆಚ್ಚಿನ ಜನರು ಕನ್ನಡ ನುಡಿಯನ್ನು ಮನೆಮಾತಾಗಿ ಬಳಸುತ್ತಿದ್ದಾರೆ (ದ್ವಿತೀಯ ಭಾಷೆಯಾಗಿ ಕನ್ನಡವನ್ನು ಬಳಸುವವರನ್ನು ಸೇರಿಸಿದರೆ ಸುಮಾರು ಆರು ಕೋಟಿಯಷ್ಟು ಜನ ಕನ್ನಡವನ್ನು ಬಳಸುತ್ತಿದ್ದಾರೆ). ಜಾಗತಿಕ ಮಟ್ಟದಲ್ಲಿ ಅತಿ ಹೆಚ್ಚು ಜನರು ಅಂದರೆ ಸುಮಾರು ನಾಲ್ಕು ಕೋಟಿಗಿಂತ ಹೆಚ್ಚಿನ ಜನರು ಒಂದು ಭಾಷೆಯನ್ನು ಬಳಸುವ ಭಾಷೆಗಳು ಹೆಚ್ಚೆಂದರೆ ಮೂವತ್ತು ಭಾಷೆಗಳು ಸಿಗಬಹುದು. ಹಾಗೆ ವ್ಯಾಪಕವಾಗಿ ಬಹುಸಂಖ್ಯಾತ ಜನರು ಬಳಸಲ್ಪಡುವ ಭಾಷೆ ಕನ್ನಡವೂ ಆಗಿದೆ ಎನ್ನುವುದು ಹೆಮ್ಮೆಯ ವಿಷಯವೇ ಆಗಿದೆ. ಹೀಗೆ ಅತ್ಯಂತ ಹಳೆಯ ಭಾಷೆಗಳಲ್ಲಿ ಒಂದಾದ, ಜಗತ್ತಿನಾದ್ಯಂತ ಬಹುಸಂಖ್ಯಾತರು ಬಳಸುವ ಕನ್ನಡ ನುಡಿ ಅನೇಕ ಅವಸ್ಥಾಂತರಗಳನ್ನು ದಾಟಿಕೊಂಡು ಇಂದಿನ ಸ್ಥಿತಿಗೆ ಬಂದಿದೆ.

ಹತ್ತನೇ ಶತಮಾನದಿಂದಲೇ ಅಂದರೆ ಸುಮಾರು ಒಂದು ಸಾವಿರ ವರ್ಷಗಳ ಹಿಂದೆಯೇ ಕನ್ನಡ ನುಡಿಯಲ್ಲಿ ಜಾಗತಿಕ ಮಟ್ಟದಲ್ಲಿ ನಿಲ್ಲಬಲ್ಲ ಉತ್ಕೃಷ್ಟವಾದ ಸಾಹಿತ್ಯ ನಿರ್ಮಾಣಗೊಂಡಿದೆ. ವಚನ ಸಾಹಿತ್ಯ, ಭಕ್ತಿಸಾಹಿತ್ಯ, ತತ್ವಸಾಹಿತ್ಯದ ಮೂಲಕ ಸ್ವತಂತ್ರ ಜ್ಞಾನ ಸೃಷ್ಟಿ ಮಾಡಿರುವ ಕನ್ನಡಕ್ಕೆ ಒಂದು ಭವ್ಯ ಪರಂಪರೆಯೇ ಇದೆ. ಸುದೀರ್ಘ ಇತಿಹಾಸ, ಉತ್ಕೃಷ್ಟ ಸಾಹಿತ್ಯ ರಚನೆ, ತನ್ನದೇ ಜ್ಞಾನ ಸೃಷ್ಟಿ ಇರುವುದರಿಂದಲೇ ಇಂದು ಶಾಸ್ತ್ರೀಯ ಸ್ಥಾನಮಾನವೂ ಪಡೆದ ಭಾರತದ ಐದಾರು (ಸಂಸ್ಕೃತ, ತಮಿಳು, ಕನ್ನಡ, ತೆಲುಗು, ಮಲಯಾಳ) ಭಾಷೆಗಳಲ್ಲಿ ಕನ್ನಡವೂ ಒಂದಾಗಿದೆ. ಇಂಥ ಭವ್ಯ ಪರಂಪರೆ ಇರುವ, ಸ್ವತಂತ್ರ ಸಾಹಿತ್ಯ ಸೃಷ್ಟಿ ಆಗಿರುವ ಕನ್ನಡ ನಡೆದುಬಂದ ದಾರಿಯೇ ರೋಚಕವಾಗಿದೆ. ಇಂಥ ಕನ್ನಡ ನುಡಿಯು ಚರಿತ್ರೆಯುದ್ದಕ್ಕೂ ನಿರಾತಂಕವಾಗಿಯೇನು ಇದ್ದಿಲ್ಲ. ಯಾವುದೇ ಭಾಷೆ ತನ್ನ ಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಭೌಗೋಳಿಕ ವಿದ್ಯಮಾನಗಳಿಗೆ ತಕ್ಕಂತೆ ಬದಲಾವಣೆ ಕಾಣುವುದು ಸಹಜವಾಗಿರುತ್ತದೆ. ಇದು ಕೆಲವು ಸಲ ಬೆಳವಣಿಗೆಗೆ ಪೂರಕವಾಗಿರಬಹುದು. ಮತ್ತೆ ಕೆಲವು ಸಲ ಆತಂಕವೂ ಎದುರಿಸಬಹುದು. (ರಾಜಕೀಯಾರ್ಥಿಕ ಕಾರಣಗಳಿಂದ ಇಂಗ್ಲೀಶ್ ಇಂದು ಜಾಗತಿಕವಾಗಿ ಬೆಳೆದು ನಿಂತಿದೆ. ಕೆಲವು ಸಂದರ್ಭಗಳಲ್ಲಿ ಅನೇಕ ಸಣ್ಣ ಪುಟ್ಟ ಭಾಷೆಗಳು ಭೌಗೋಳಿಕ ವಿಕೋಪಕ್ಕೊಳಗಾಗಿ ನಾಶವಾಗಿಯೂ ಹೋಗಿವೆ. ಕೆಲವು ಸಂದರ್ಭಗಳಲ್ಲಿ ಪ್ರಭುತ್ವದ ರಕ್ಷಣೆಗೆ ಮತ್ತೆ ಕೆಲವು ಸಲ ಪ್ರಭುತ್ವದ ಕೆಂಗಣ್ಣಿಗೆ ಗುರಿಯಾದ ಭಾಷೆಗಳೂ ಇವೆ. ಅನೇಕ ನುಡಿಗಳು ಈ ಎಲ್ಲ ಬಗೆಯ ಎಡರು ತೊಡರುಗಳನ್ನು ಎದುರಿಸಬೇಕಾಗುತ್ತದೆ. ಸಾವಿರಾರು ವರ್ಷಗಳ ಸುದೀಘ ಇತಿಹಾಸದಲ್ಲಿ ಕನ್ನಡ ಭಾಷೆ ಕೂಡ ಹೀಗೆ ಅನೇಕ ಅಡೆ ತಡೆಗಳನ್ನು ಎದುರಿಸಿದರೂ ಅದನ್ನು ದಾಟಿಕೊಂಡು ಇಂದಿನ ಸ್ಥಿತಿಗೆ ಬಂದು ನಿಂತಿದೆ. ಚರಿತ್ರೆಯುದ್ದಕ್ಕೂ ಇಂಥ ಅನೇಕ ಅಡೆ ತಡೆಗಳು, ಆತಂಕಗಳನ್ನು ಎದುರಿಸಿದರೂ ಪ್ರಸ್ತುತ ದಿನಮಾನಗಳಲ್ಲಿ ಈ ಆತಂಕಗಳು ಹಿಂದೆಂದಿಗಿಂತಲೂ ಗಂಭೀರವಾಗಿದೆ ಮತ್ತು ಭಿನ್ನ ಸ್ವರೂಪದ್ದಾಗಿದೆ. ವಿದ್ವಾಂಸರು, ತಜ್ಞರು ಇತ್ತೀಚಿನ ದಿನಗಳಲ್ಲಿ ಹೇಳುತ್ತಿರುವ ಮಾತು, "ನಮ್ಮ ಮುಂದಿನ ತಲೆಮಾರಿನವರಿಗೆ ಕನ್ನಡ ಎನ್ನುವ ಭಾಷೆಯೊಂದು ಇತ್ತು. ಜನರು ಅದನ್ನು ಸಹಜವಾಗಿಯೇ ಬಳಸುತ್ತಿದ್ದರು ಎಂದು ಕಥೆಯ ಮೂಲಕವೋ, ಕನ್ನಡದಲ್ಲಿ ಸೃಷ್ಟಿಯಾಗಿರುವ ಗ್ರಂಥಗಳನ್ನೋ ತೋರಿಸಿ ವಿವರಿಸುವ ಪರಿಸ್ಥಿತಿ ಬರುತ್ತದೆ" ಎಂಬ ಮಾತುಗಳು ಹೇಳಿರುವುದು ಎಂದು ಕಾಣುತ್ತದೆ. ಇಂಥ ಸಂಕೀರ್ಣ ಪರಿಸ್ಥಿತಿಯನ್ನು ಗಮನಿಸಿಯೇ "ಮುಂದಿನ ತಲೆಮಾರಿನ ಹೊತ್ತಿಗೆ ಕನ್ನಡ ಉಳಿದೀತೆ?" ಎನ್ನುವ ಪ್ರಶ್ನೆ ಈಗ ಅನೇಕರನ್ನು ಕಾಡುತ್ತಿದೆ. ಈ ಬಗೆಯ ಪ್ರಶ್ನೆ ಹೊಸತೇನಲ್ಲ. ಕನ್ನಡ ಭಾಷೆ ಚರಿತ್ರೆಯುದ್ದಕ್ಕೂ ಇಂಥ ಆತಂಕಗಳನ್ನು ಎದುರಿಸುತ್ತಲೇ ಬಂದಿದೆ.

ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಮುನ್ನ ಕನ್ನಡ ಮತ್ತು ಕರ್ನಾಟಕದ ಸ್ವರೂಪ ಬೇರೆಯೇ ಆಗಿತ್ತು. ಕನ್ನಡ ನಾಡು ಮತ್ತು ಕನ್ನಡ ಮಾತನಾಡುವ ಜನರು ಅನೇಕ ಸಂಸ್ಥಾನಗಳಲ್ಲಿ ಹರಿದು ಹಂಚಿ ಹೋಗಿದ್ದರು. ಅಂದಿನ ಕನ್ನಡದ ಆತಂಕಗಳು ಬೇರೆ ಸ್ವರೂಪದ್ದೇ ಆಗಿದ್ದವು. ಸ್ವತಂತ್ರ ಭಾರತ ಆದಮೇಲೆ ರಾಜ್ಯಗಳ ವಿಂಗಡಣೆ ಆಯಿತು. ಆಗಲೂ ಕೂಡ ಭಾಷಿಕ ಸಮುದಾಯಕ್ಕನುಗುಣವಾಗಿ ರಾಜ್ಯಗಳ ವಿಂಗಡಣೆ ಪೂರ್ಣ ಪ್ರಮಾಣದಲ್ಲಿ ಆಗದ ಕಾರಣ ಭಾಷಿಕ ಚಳುವಳಿಗಳು ನಡೆದು 1956ರಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸಲಾಯಿತು. ಭಾಷೆಗಳ ಆಧಾರದ ಮೇಲೆಯೇ ರಾಜ್ಯಗಳ ವಿಂಗಡಣೆ ಆದರೂ ಕನ್ನಡದ ಆತಂಕಗಳೇನೂ ಕಡಿಮೆಯಾದಂತೆ ಕಾಣುವುದಿಲ್ಲ. ಭಾರತದ ಸಂವಿಧಾನದ ಹಿನ್ನೆಲೆಯಲ್ಲಿ 1963ರಲ್ಲಿ ರಾಜ್ಯ ಭಾಷಾ ಅಧಿನಿಯಮ ರೂಪುಗೊಂಡ ಮೇಲೆ ಕನ್ನಡ ಪರ ಕೆಲಸಗಳು ಸರ್ಕಾರದ ಮೂಲಕವೇ ನಡೆಯಲು ಪ್ರಾರಂಭವಾದಂತೆ ಕಂಡರೂ ಬೇರೆ ಬೇರೆ ಸ್ವರೂಪದ ಆತಂಕಗಳನ್ನು ಕನ್ನಡ ಎದುರಿಸುತ್ತಾ ಬಂದಿದೆ. ತದನಂತರ ಕರ್ನಾಟಕದ ಏಕೀಕರಣ ಹೋರಾಟದಿಂದ ಇದು ಮತ್ತಷ್ಟು ಹರಳುಗಟ್ಟಿ ಮಹತ್ತರ ಕನ್ನಡಪರ ಕೆಲಸಗಳು ಆಗುವಂತಾದರೂ, ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಎನ್ನುವ ನೆಲೆಯಲ್ಲಿ ಸಕ್ರಿಯವಾಗಿ ಚಟುವಟಿಕೆಗಳು ನಡೆದಂತೆ ಕಂಡರೂ, ಶಿಕ್ಷಣ, ಆಡಳಿತ ಮತ್ತು ಸಾಂಸ್ಕೃತಿಕವಾಗಿಯೂ ಕನ್ನಡದ ಬೆಳವಣಿಗೆ ಸರ್ವತೋಮುಖವಾಗಿ ನಡೆಯಬೇಕು ಎನ್ನುವ ಹಿನ್ನೆಲೆಯಲ್ಲಿ ಎದುರಾದ ಆತಂಕಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಚಳುವಳಿಗಳು ನಡೆದವು.

ನಿರಂತರ ಹೋರಾಟ, ಚಳುವಳಿ (ಗೋಕಾಕ್ ಚಳುವಳಿ ಇತ್ಯಾದಿ) ನಡೆದು ಅದಕ್ಕೆ ಸರ್ಕಾರದ ಸಕಾರಾತ್ಮಕ ಸ್ಪಂದನೆಯೂ ಅನೇಕ ಸಲ ಸಿಕ್ಕು ಒಳ್ಳೆಯ ಕೆಲಸಗಳು ಆದರೂ ಇದರ ಜತ ಜತೆಗೆ ಅನೇಕ ತೊಡಕುಗಳು ಕೂಡ ಎದುರಾಗಿವೆ. ರಾಜ್ಯದ ಗಡಿ ಪ್ರದೇಶಗಳಲ್ಲಿ, ರಾಜಧಾನಿ ಬೆಂಗಳೂರಿನಲ್ಲಿ, ಬೃಹತ್ ಕಾರ್ಖಾನೆಗಳಲ್ಲಿ ಕನ್ನಡ ಬಳಕೆಗೆ ಎದುರಾದ ತೊಡಕುಗಳನ್ನು ನಿವಾರಿಸಿಕೊಳ್ಳಲು ಕನ್ನಡಪರ ಸಂಘಟನೆಗಳು, ಕನ್ನಡ ಸಂಘಗಳು ನಿರಂತರ ಹೋರಾಟವನ್ನೇ ನಡೆಸಿವೆ. ಶೈಕ್ಷಣಿಕವಾಗಿ ಕನ್ನಡ ಮಾಧ್ಯಮದಲ್ಲೇ ಕಲಿಯಲು ಅವಕಾಶವಿದ್ದಲ್ಲೂ ಖಾಸಗಿ ಸಂಸ್ಥೆಗಳ ಬಿಕ್ಕಟ್ಟಿನಿಂದ ಅನೇಕ ತೊಡಕುಗಳೂ ಎದುರಾದದ್ದು ಕನ್ನಡ ನಾಡಿನ ಚರಿತ್ರೆಯಲ್ಲಿ ನೋಡಬಹುದು. 1984ರಿಂದ ಶೈಕ್ಷಣಿಕವಾಗಿ ಈ ತೊಡಕು ಬರಬರುತ್ತ ಗಂಭೀರವಾಗಿ ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯ ಮಾಡಲು ಆಗದ ಸ್ಥಿತಿ ಸರ್ಕಾರಕ್ಕೆ ಬಂದೊದಗಿರುವುದು ವಿಪರ್ಯಾಸವೇ ಸರಿ.

ಪ್ರಭುತ್ವ ಮನಸ್ಸು ಮಾಡಿದರೆ, ರಾಜ್ಯಶಕ್ತಿ ಒಂದು ಭಾಷೆಯ ಪರವಾಗಿ ನಿಂತರೆ ಏನು ಬೇಕಾದರೂ ಮಾಡಬಹುದು ಎನ್ನುವುದಕ್ಕೆ ಅನೇಕ ಉದಾಹರಣೆಗಳು ಜಗತ್ತಿನಲ್ಲಿ ಸಿಗುತ್ತವೆ. ಭಾಷಿಕ ಹೋರಾಟವೊಂದು ಭಾಷಾವಾರು ಪ್ರಾಂತ್ಯಗಳಾಗಲು ಕಾರಣವಷ್ಟೇ ಅಲ್ಲ ದೇಶವನ್ನೇ ವಿಭಜಿಸಲು ಕಾರಣವಾಗಿರುವ ಚಾರಿತ್ರಿಕ ಘಟನೆಗಳು ನಮ್ಮ ಮುಂದಿವೆ. ಪಾಕಿಸ್ತಾನದ ಭಾಗವಾಗಿದ್ದ ಪೂರ್ವ ಪಾಕಿಸ್ತಾನ ಬರ್ಮಾ ದೇಶವಾಗಿ ರೂಪುಗೊಳ್ಳಲು ಭಾಷಾ ಚಳುವಳಿಯೇ ಕಾರಣ. ಆದರೂ ಕನ್ನಡ ನುಡಿಯ ಮುಂದಿರುವ ಪ್ರಸ್ತುತ ಸವಾಲುಗಳ, ಆತಂಕಗಳ ಸ್ವರೂಪವೇ ಭಿನ್ನವಾಗಿದೆ ಮತ್ತು ಸಂಕೀರ್ಣವಾಗಿದೆ. ಆದ್ದರಿಂದ ಸರ್ಕಾರ ಕೂಡ ಕೈಚಲ್ಲಿ ಕುಳಿತುಕೊಳ್ಳುವಂತೆ ಆಗಿದೆ. (ಇದಕ್ಕೆ ಅನೇಕ ಕಾರಣಗಳು ಇರಬಹುದು)

1956ರ ನವೆಂಬರ 01 ರಂದು ಅಧಿಕೃತವಾಗಿ ರಚನೆಯಾದ ಭಾಷಾವಾರು ಪ್ರಾಂತ್ಯಗಳ ನೆನಪಿಗಾಗಿ ಕನ್ನಡ ರಾಜ್ಯೋತ್ಸವವನ್ನು ನಿರಂತರವಾಗಿ ಆಚರಿಸುತ್ತ ಬಂದಿದ್ದೇವೆ. ನವೆಂಬರ್ ತಿಂಗಳು ಬಂತೆಂದರೆ ಸಾಕು ಕನ್ನಡದ ಅಬ್ಬರ ಜಾಸ್ತಿಯಾಗುತ್ತದೆ. ಕನ್ನಡ ಮನಸ್ಸುಗಳು ಜಾಗೃತಗೊಂಡು ರಾಜ್ಯೋತ್ಸವದ ಆಚರಣೆಗೆ ಅಣಿಯಾಗುತ್ತವೆ. ರಾಜ್ಯದಾದ್ಯಂತ ಶಾಲಾ ಕಾಲೇಜುಗಳಲ್ಲಿ,

Scanned with CamScanner

ಸರ್ಕಾರಿ ಕಚೇರಿಗಳಲ್ಲಿ ರಾಜ್ಯೋತ್ಸವದ ಆಚರಣೆ ಮಾಡಲಾಗುತ್ತದೆ. ಇಡೀ ತಿಂಗಳ ಕಾಲ ರಾಜ್ಯದ ಎಲ್ಲ ಚಿತ್ರಮಂದಿರಗಳಲ್ಲಿ ಕನ್ನಡ ಸಿನಿಮಾ ಪ್ರದರ್ಶನಗೊಳ್ಳುತ್ತವೆ. ಫೇಸ್‌ಬುಕ್, ಟ್ವೀಟರ್‌ಗಳಲ್ಲಿ ಕನ್ನಡದ್ದೇ ಸದ್ದು. ಸಂಘ ಸಂಸ್ಥೆಗಳು, ಕನ್ನಡಪರ ಹೋರಾಟದ ಸಂಘಟನೆಗಳು ವಿದ್ಯುಕ್ತಣೆಯಿಂದ ರಾಜ್ಯೋತ್ಸವದಲ್ಲಿ ತೊಡಗಿಸಿಕೊಳ್ಳುತ್ತವೆ. ಎಲ್ಲಿ ನೋಡಿದರೂ ಕನ್ನಡ, ಕನ್ನಡ ಎನ್ನುವಂತಾಗುತ್ತದೆ. ರಾಜ್ಯದಾದ್ಯಂತ ಎಲ್ಲೆಂದರಲ್ಲಿ ಕೆಂಪು ಹಳದಿ ಬಣ್ಣದ ಬಾವುಟಗಳ ಹಾರಾಟ, ಕನ್ನಡ ಭುವನೇಶ್ವರಿಯ ಪಟಕ್ಕೆ ಹಾರ, ಆಟೋಟಗಳು, ಸಂಭ್ರಮಗಳು ಜರುಗುತ್ತವೆ. ನವೆಂಬರ್ ಮುಗಿಯುತ್ತಿದ್ದಂತೆ ಈ ಅಬ್ಬರ ಕಡಿಮೆಯಾಗಿ ಎಲ್ಲವೂ ತಣ್ಣಗಾಗಿಬಿಡುತ್ತದೆ. ಮತ್ತೆ ಕನ್ನಡದ ಕೂಗು ಕೇಳಬೇಕಾದರೆ ಮುಂದಿನ ವರ್ಷದ ನವೆಂಬರ್‌ವರೆಗೆ ಕಾಯಬೇಕು.

ಇದು ರಾಜ್ಯದಾದ್ಯಂತ ನಡೆಯುವ ಸಾಮಾನ್ಯ ಪ್ರಕ್ರಿಯೆ.

ಇನ್ನೊಂದೆಡೆ ನಿರಂತರವಾಗಿ ಕನ್ನಡದ ಉಳಿವಿಗಾಗಿ ಮತ್ತು ಬೆಳವಣಿಗೆಗಾಗಿ ಸರ್ಕಾರ ಮತ್ತು ಅದರ ಅನೇಕ ಇಲಾಖೆಗಳು ನಿರಂತರವಾಗಿ ಕೆಲಸ ಮಾಡುತ್ತಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ವಿಶ್ವವಿದ್ಯಾಲಯದಂಥ ಸಂಸ್ಥೆಗಳು, ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳಾದ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಅಕಾಡೆಮಿಗಳು, ಕನ್ನಡಪರ ಹೋರಾಟ ಸಂಘಟನೆಗಳಾದ ಕರ್ನಾಟಕ ರಕ್ಷಣ ವೇದಿಕೆ, ಜಯ ಕರ್ನಾಟಕ ಮುಂತಾದ ಸಂಘಟನೆಗಳು ಕನ್ನಡವನ್ನು ಉಳಿಸಲು ನಿರಂತರವಾಗಿ ಕೆಲಸ ಮಾಡುತ್ತಿವೆ. ಆದರೂ ಕನ್ನಡ ನುಡಿಯ ಮುಂದಿರುವ ಆತಂಕಗಳು ಪ್ರಸ್ತುತ ದಿನಮಾನಗಳಲ್ಲಿ ಬಗೆಹರಿಯದೇ ಮತ್ತಷ್ಟು ಉಲ್ಬಣಗೊಂಡಿವೆ. ಕನ್ನಡ ನುಡಿ ಎಲ್ಲ ವಲಯಗಳಲ್ಲಿ ಬಳಕೆಯಾಗುತ್ತಿಲ್ಲ. ಬದಲಿಗೆ ದಿನವೂ ಅದರ ಬಳಕೆ ಕಡಿಮೆಯಾಗುತ್ತಿದೆ ಎನ್ನುವ ಕೂಗು ಕೇಳಿಬರುತ್ತಿದೆ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕು ಏಳು ದಶಕಗಳು ಮೂರೈಸಿದ್ದರೂ, ಭಾಷಾವಾರು ಪ್ರಾಂತ್ಯಗಳು ಆಗಿ ಆರುವರೆ ದಶಕಗಳೇ ಕಳೆದರೂ, ಕರ್ನಾಟಕದ ಏಕೀಕರಣವಾಗಿ ಕರ್ನಾಟಕ ಎಂದು ನಾಮಕರಣಗೊಂಡು ಸುಮಾರು ಐದು ದಶಕಗಳೇ ಮುಗಿದರೂ ಇನ್ನೂ ಈಗಲೂ ಕನ್ನಡ ಅನುಷ್ಠಾನದ ಬಗ್ಗೆ ಮಾತಾಡುವುದನ್ನು ಕಾಣುತ್ತೇವೆ. 2009 ವರ್ಷವನ್ನು ಕನ್ನಡ ಅನುಷ್ಠಾನ ವರ್ಷ ಎಂದು ಪರಿಗಣಿಸಿದರೂ ಕನ್ನಡದ ಆತಂಕಗಳು ಮತ್ತೆ ಮತ್ತೆ ಭಿನ್ನ ಸ್ವರೂಪದಲ್ಲಿ ಎದುರಾಗಿ ಕನ್ನಡದ ಬೆಳವಣಿಗೆಗೆ ಹಿನ್ನೆಡೆಯಾಗುತ್ತಿದೆ. ಆದರೂ ನವೆಂಬರ್ ಬಂತೆಂದರೆ ಕನ್ನಡಪರ ಸಂಭ್ರಮಾಚರಣೆ ಮುಗಿಲು ಮುಟ್ಟುತ್ತದೆ. ಈ ಸಂಭ್ರಮಾಚರಣೆಗಳು ಕೇವಲ ಆಚರಣೆಯಾಗಿ ಮಾತ್ರ ನಡೆಯುತ್ತಿವೆಯೇ ಎನ್ನುವ ಅನುಮಾನ ಬರುತ್ತಿದೆ ಹೀಗೆ ಕನ್ನಡದ ಉಳಿವು ಮತ್ತು ಬೆಳವಣಿಗೆ ಕೇವಲ ಆಚರಣೆಗಳಿಂದ ಆಗಲು ಸಾಧ್ಯವಾ? ಎನ್ನುವುದನ್ನು ಗಂಭೀರವಾಗಿ ಆಲೋಚಿಸಬೇಕಾಗಿದೆ.

> **ನವೆಂಬರ್ ಬಂತೆಂದರೆ ಕನ್ನಡಪರ ಸಂಭ್ರಮಾಚರಣೆ ಮುಗಿಲು ಮುಟ್ಟುತ್ತದೆ. ಈ ಸಂಭ್ರಮಾಚರಣೆಗಳು ಕೇವಲ ಆಚರಣೆಯಾಗಿ ಮಾತ್ರ ನಡೆಯುತ್ತಿವೆಯೇ ಎನ್ನುವ ಅನುಮಾನ ಬರುತ್ತಿದೆ ಹೀಗೆ ಕನ್ನಡದ ಉಳಿವು ಮತ್ತು ಬೆಳವಣಿಗೆ ಕೇವಲ ಆಚರಣೆಗಳಿಂದ ಆಗಲು ಸಾಧ್ಯವಾ? ಎನ್ನುವುದನ್ನು ಗಂಭೀರವಾಗಿ ಆಲೋಚಿಸಬೇಕಾಗಿದೆ.**

ಜಾಗತಿಕ ಸಂದರ್ಭದಲ್ಲಿ ಹೀಗೆ ಆತಂಕವನ್ನು ಎದುರಿಸುತ್ತಿರುವ ಭಾಷೆ ಕನ್ನಡ ಒಂದೇ ಅಲ್ಲ ಕನ್ನಡದಂತೆ ಸುದೀರ್ಘ ಚರಿತ್ರೆ ಇರುವ, ವ್ಯಾಪಕವಾಗಿ ಬಳಕೆಯಾಗುತ್ತಿರುವ ಅನೇಕ ನುಡಿಗಳು ಕೂಡ ಇಂಥದ್ದೇ ಆತಂಕಕ್ಕೆ ಒಳಗಾದಂತೆ ಕಾಣುತ್ತದೆ. ಪ್ರಸ್ತುತ ಜಾಗತಿಕ ವಿದ್ಯಮಾನಗಳಿಂದ ನೂರಾರು ನುಡಿಗಳು ಜನರ ಬಳಕೆಯಿಂದ ಹಿನ್ನೆಲೆಗೆ ಹೋಗುತ್ತಿರುವ ಆತಂಕ ಎದುರಿಸುತ್ತಿವೆ. ಇನ್ನು ಸಣ್ಣ ಮಟ್ಟ ನುಡಿಗಳ ಪಾಡಂತೂ ಶೋಚನೀಯವಾಗಿದೆ. ಕಳೆದರಡು ದಶಕಗಳಲ್ಲಿ ಭಾರತದ ಅನೇಕ ಭಾಷೆಗಳು ವಿನಾಶವಾಗಿವೆ. ಕಳೆದ ಮೂರು ದಶಕಗಳಿಂದೀಚೆಗೆ ಶೈಕ್ಷಣಿಕವಾಗಿ ಕನ್ನಡಕ್ಕೆ ಹಿನ್ನೆಡೆಯಾಗಿದೆ. ಅಧಿಕೃತವಾಗಿ ಕರ್ನಾಟಕದ ರಾಜ್ಯಭಾಷೆ ಕನ್ನಡ ಎಂದು ಪರಿಗಣಿಸಿದರೂ ಭಾಷಾ ಮಾಧ್ಯಮದ ವಿಷಯದಲ್ಲಿ ಕನ್ನಡಕ್ಕೆ ಹಿನ್ನೆಡೆಯಾಗಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಮಾಧ್ಯಮ ವಿಷಯದಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯವು ಭಾಷಾ ಮಾಧ್ಯಮದ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ತೀರ್ಮಾನಕ್ಕಿಂತ ಪೋಷಕರ ತೀರ್ಮಾನಕ್ಕೆ ಬಿಡುವ ತೀರ್ಪು ನೀಡಿದೆ. 2009ರಲ್ಲಿ ಕರ್ನಾಟಕ ಸರ್ಕಾರ ಕನ್ನಡ ಅನುಷ್ಠಾನ ವರ್ಷ ಎಂದು ಘೋಷಣೆ ಮಾಡಿ ಆದೇಶ ಹೊರಡಿಸಿದರೂ ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮಕವಾಗಿ ಕನ್ನಡ ಅನುಷ್ಠಾನಗೊಳಿಸಲು ಪೂರ್ಣ ಪ್ರಮಾಣದಲ್ಲಿ ಯಶಸ್ಸು ಕಂಡಿಲ್ಲ. (ಭಾಷಾವಾರು ಪ್ರಾಂತ್ಯಗಳು ರಚನೆಯಾಗಿ ಮೈಸೂರು ರಾಜ್ಯ ಎಂದು ಘೋಷಣೆಯಾದಾಗಿನಿಂದ ಇಲ್ಲಿಯವರೆಗೆ ಕರ್ನಾಟಕ ರಾಜ್ಯದ ಎಲ್ಲ ವಲಯಗಳಲ್ಲಿ ಕನ್ನಡ ಬಳಕೆ ಕಡ್ಡಾಯ ಎಂದು ಸುಮಾರು 500ಕ್ಕೂ ಹೆಚ್ಚಿನ ಆದೇಶಗಳನ್ನು ಸರ್ಕಾರ ಹೊರಡಿಸಿದೆ.)

ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆ ಹೆಚ್ಚಾದಂತೆ ಕನ್ನಡದ ಅವಶ್ಯಕತೆ ಇಲ್ಲವೆಂಬಂತೆ ಬಿಂಬಿಸಲಾಗುತ್ತಿದೆ. ಕನ್ನಡ ಅನ್ನದ ಭಾಷೆಯಾಗಿ ರೂಪುಗೊಳ್ಳದ ಕಾರಣ ಇಂಗ್ಲೀಷಿನಂಥ ಜಾಗತಿಕ ಭಾಷೆಗಳ ಕಡೆಗೆ ಕನ್ನಡಿಗರು ವಾಲಿರುವುದರಿಂದ ಕನ್ನಡ ನುಡಿಗೆ ಮತ್ತಷ್ಟು ಹಿನ್ನೆಡೆಯಾಗಿದೆ ಎಂದು ಹೇಳಲಾಗುತ್ತಿದೆ. ಕೇಂದ್ರ ಸರ್ಕಾರ ದೇಶದಾದ್ಯಂತ ಹಿಂದಿ ಬಳಕೆಗೆ ಹೆಚ್ಚಿನ ಒತ್ತು ನೀಡುತ್ತಿರುವುದರಿಂದ ಜನರಲ್ಲಿ ಇಂಗ್ಲೀಷ್, ಹಿಂದಿ ಕಲಿತರೆ ಸಾಕು, ಕನ್ನಡ ನುಡಿ ಬಳಸದೆ ಇದ್ದರೂ ನಡೆಯುತ್ತದೆ ಎನ್ನುವ ನಂಬಿಕೆ ಹೆಚ್ಚಾಗುತ್ತಿದೆ. ಕನ್ನಡ ಭಾಷೆಯನ್ನು ಬಳಸಲು ಆಕ್ಷೇಪ ಇಲ್ಲದೇ ಇದ್ದರೂ ಬಳಸಬೇಕಾದ ತುರ್ತು ಇಲ್ಲದಂತಾಗಿದೆ. ಇದು ಮತ್ತಷ್ಟು ಕನ್ನಡಕ್ಕೆ ಆತಂಕವನ್ನೊಡಿದೆ. ಹಾಗಾಗಿ ಕನ್ನಡವು ದಿನೇ ದಿನೇ ಜನಬಳಕೆಯಿಂದ ಹಿನ್ನೆಲೆಗೆ ಸರಿಯುತ್ತಿರುವ ಭಾಷೆಗಳಲ್ಲಿ ಒಂದು ಎಂದು ಅನೇಕರು ಹೇಳುತ್ತಿದ್ದಾರೆ. ವಿಶ್ವಸಂಸ್ಥೆಯೇ 2011ರಲ್ಲಿ ಘೋಷಿಸಿದ ಅಂಕಿ ಸಂಖ್ಯೆಗಳ ಪ್ರಕಾರ ಭಾರತದ ಸುಮಾರು 197 ನುಡಿಗಳು ತೀವ್ರ ಅಳಿವಿನಂಚಿನಲ್ಲಿವೆ. ಮುಂದಿನ ಕೆಲವೇ ವರ್ಷಗಳಲ್ಲಿ ಈ ನುಡಿಗಳು ಜನಬಳಕೆಯಿಂದ ಮಾಯವಾಗಲಿವೆ. ಇದೇ ದಶಕದಲ್ಲಿ ಭಾರತದ ಭಾಷೆಗಳನ್ನು ಸರ್ವೇಕ್ಷಣ ಮಾಡಿದ ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾದ ಮುಖ್ಯಸ್ಥರಾದ ಡಾ.ಜಿ.ಎನ್.ದೇವಿ ಅವರೂ ಕೂಡ ಮುಂದಿನ ಕೆಲವು ದಶಕಗಳಲ್ಲಿ ಭಾರತದ ಐವತ್ತಕ್ಕೂ ಹೆಚ್ಚಿನ ಭಾಷೆಗಳು ಅಳಿಯಲಿವೆ ಎನ್ನುವ ಮಾತುಗಳನ್ನು ಹೇಳಿದ್ದಾರೆ.

ಹೀಗೆ ಅಳಿದು ಹೋಗಲಿರುವ ಪಟ್ಟಿಯಲ್ಲಿ ಕನ್ನಡವೂ ಇದೆಯಾ? ಎನ್ನುವ ಪ್ರಶ್ನೆ ಅನೇಕರನ್ನು ಕಾಡುತ್ತಿದೆ. ಅನೇಕ ವಿದ್ವಾಂಸರು ಕನ್ನಡ ಕೂಡ ಅತ್ಯಂತ ವೇಗವಾಗಿ ಅಳಿಯುತ್ತಿರುವ ಭಾಷೆಗಳಲ್ಲಿ ಒಂದು ಎಂದು ಹೇಳಿರುವ ಹೇಳಿಕೆಗಳು ಸತ್ಯ ಎನ್ನುವಂತೆ ಕಾಣುತ್ತಿದೆ. ಆದರೆ ಭಾಷಾ ತಜ್ಞರು, ಚಿಂತಕರೂ ಆದ ಡಾ.ಜಿ.ಎನ್.ದೇವಿ ಅವರು ಕನ್ನಡಕ್ಕೆ ಅಂಥ ಆತಂಕವೇನೂ ಇಲ್ಲ. ಕನ್ನಡ ಅಳಿವಿನಂಚಿಗೆ ಸಾಗುತ್ತಿರುವ ಭಾಷೆಗಳ ಪಟ್ಟಿಯಲ್ಲಿ ಇಲ್ಲ ಎನ್ನುವ ಮಾತುಗಳು ಸ್ವಲ್ಪ ಮಟ್ಟಗೆ ನೆಮ್ಮದಿ ತಂದರೂ ಸಹ ಕನ್ನಡದ ಆತಂಕಗಳೇನು ಕಡಿಮೆಯಾಗಿಲ್ಲ. ಅವು ದಿನೇ ದಿನೇ ಗಂಭೀರ ಮತ್ತು ಸಂಕೀರ್ಣ ಸ್ವರೂಪ ಪಡೆಯುತ್ತಿರುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಹಾಗಾಗಿ ಕನ್ನಡದ ಉಳಿವಿಗಾಗಿ ಮತ್ತು ಅದರ ಸರ್ವತೋಮುಖ ಬೆಳವಣಿಗೆಗೆ ತಾತ್ವಿಕವಾಗಿ ಮತ್ತು ಪ್ರಾಯೋಗಿಕವಾಗಿ ಏನು ಮಾಡಬೇಕು ಎನ್ನುವುದನ್ನು ಗಂಭೀರವಾಗಿ ಆಲೋಚಿಸಬೇಕಾದ ಕಾಲಘಟ್ಟದಲ್ಲಿದ್ದೇವೆ.



ಅಶೋಕಕುಮಾರ ರಂಜೇರೆ

ಕನ್ನಡಕ್ಕೆ ಈ ಹಿಂದೆ ಆತಂಕಗಳು ಎದುರಾಗಲಿಲ್ಲ ಎಂದಲ್ಲ. ಚರಿತ್ರೆಯುದ್ದಕ್ಕೂ ಕನ್ನಡ ಅನೇಕ ಆತಂಕಗಳನ್ನು ಎದುರಿಸುತ್ತ ಬಂದಿದೆ. ಆಂಡಯ್ಯನ ಕಾಲದಲ್ಲಿ ಕನ್ನಡ ಅಪಭ್ರಂಶಗೊಂಡಿದೆ, ಕನ್ನಡ ಕಲುಷಿತಗೊಂಡಿದೆ ಎಂದು ಭಾವಿಸಿ ತಾನು ಕನ್ನಡದ ಪದಗಳನ್ನು ಬಿಟ್ಟು ಬೇರೆ ಭಾಷೆಯ ಪದಗಳನ್ನು ಬಳಸದೇ ಬರೆಯುತ್ತೇನೆ ಎಂದು ಕಬ್ಬಿಗರ ಕಾವ ಬರೆದ. ಸ್ವಾತಂತ್ರ್ಯಪೂರ್ವದಲ್ಲಿ ಅನೇಕ ಸಂಸ್ಥಾನಗಳಲ್ಲಿ ಹರಿದು ಹಂಚಹೋಗಿದ್ದ ಕನ್ನಡವೇ ಆಡಳಿತ ಭಾಷೆಯಾಗಿದ್ದಕ್ಕೆ ನಿದರ್ಶನಗಳು ಸಿಗುತ್ತವೆ. ಬ್ರಿಟೀಶರ ಕಾಲದಲ್ಲಿನ ಆಡಳಿತದಲ್ಲೂ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಅನೇಕ ನಿದರ್ಶನಗಳನ್ನು ವಿದ್ವಾಂಸರು ದಾಖಲಿಸಿದ್ದಾರೆ. ಹತ್ತು ಹಲವು ಸಂಸ್ಥಾನಗಲ್ಲಿ ಹರಿದು ಹಂಚ ಹೋಗಿದ್ದ ಕನ್ನಡಿಗರು ನೂರಾರು ವರ್ಷಗಳ ಕಾಲ ಇತರೆ ನುಡಿಗಳ ಆಳ್ವಿಕೆಯಲ್ಲಿ ಕಳೆದಿದ್ದಾರೆ. ಇತರೆ ಭಾಷೆಗಳೊಂದಿಗೆ ಬರೆತು ಬದುಕಿದ್ದಾರೆ. (ಕನ್ನಡ ಇತರೆ ಭಾಷೆಗಳೊಂದಿಗೆ ಕೊಡು ಕೊಳೆ ಮಾಡಿಕೊಳ್ಳುವ ಮೂಲಕ ಉಳಿದು ಬಂದಿದೆ.) ಆಡಳಿತ, ಶಿಕ್ಷಣ ಇತರೆ ಭಾಷೆಗಳಲ್ಲೇ ಪಡೆದಿದ್ದಾರೆ. ಆದರೂ ಮನೆಯ ವಾತಾವರಣದಲ್ಲಿ, ಗ್ರಾಮಗಳ ಪರಿಸರದಲ್ಲಿ ಕನ್ನಡವೇ ಬಳಸುವ ಮೂಲಕ ಅದನ್ನು ಸಂಗೋಪಿಸುತ್ತಲೂ ಬಂದಿದ್ದಾರೆ. ಉದಾಹರಣೆಗೆ ಹೈದ್ರಾಬಾದ್ ಪ್ರಾಂತವು ಹೈದ್ರಾಬಾದ್ ನಿಜಾಮನ ಆಳ್ವಿಕೆಗೆ ಒಳಗಾಗಿ ಆಡಳಿತ, ಶಿಕ್ಷಣ, ವ್ಯವಹಾರಕ್ಕಾಗಿ ಉರ್ದುವಿನ ಬಳಕೆ ಮಾಡುತ್ತಲೇ ಕನ್ನಡವನ್ನು ಉಳಿಸಿಕೊಂಡು ಬಂದಿದ್ದಾರೆ. ಆದರೆ ಕನ್ನಡ ನುಡಿಯ ಇಂದಿನ ಆತಂಕಗಳು ಮತ್ತೊಂದು ರೀತಿಯದ್ದಾಗಿವೆ. ಆಡಳಿತಾತ್ಮಕವಾಗಿ, ಶೈಕ್ಷಣಿಕವಾಗಿ ಸಂವಿಧಾನಬದ್ಧವಾಗಿಯೇ ಕನ್ನಡ ಬಳಸಲು ಅವಕಾಶವಿದ್ದರೂ ಕನ್ನಡ ನಮ್ಮೆಲ್ಲರಿಂದ ದೂರವಾಗುತ್ತದೆ ಎನ್ನುವ ಆತಂಕ ಎದುರಾಗಿದೆ.

ಈ ಆತಂಕದಿಂದಲೇ ಕನ್ನಡ ಉಳಿಯುವುದೆ? ಎನ್ನುವ ಪ್ರಶ್ನೆ ನಮ್ಮ ಮುಂದೆ ಮತ್ತೆ ಮತ್ತೆ ನಿಲ್ಲುತ್ತಿದೆ. ಕನ್ನಡ ನುಡಿ, ಬಳಕೆಯ ನೆಲೆಯಿಂದ ತಣ್ಣಗೆ ಹಿಂದೆ ಸರಿಯುತ್ತಿದೆ ಎನಿಸುತ್ತಿದೆ. ಶಾಲಾ ವಾತಾವರಣದಲ್ಲಿ ಇಂಗ್ಲೀಷ್ ಬರುತ್ತಿದೆ. ಇಂಗ್ಲೀಶ್ ಅನ್ನದ ಭಾಷೆಯಾಗಿದೆ ಎನ್ನುವ ನಂಬಿಕೆಯಲ್ಲಿ ಅದನ್ನು ಎಲ್ಲರೂ ತಮ್ಮದಾಗಿಸಿಕೊಳ್ಳುವ ಧಾವಂತದಲ್ಲಿದ್ದಾರೆ. ಈ ನಂಬಿಕೆ ಹಳ್ಳಿ ಹಳ್ಳಿಗಳಿಗೂ ಪಸರಿಸಿರುವುದರಿಂದ ಅಪ್ಪ ಅಮ್ಮಂದಿರು, ಪೋಷಕರು ತಮ್ಮ ಮಕ್ಕಳು ಕನ್ನಡ ಕಲಿಯದೇ ಇದ್ದರೂ ಪರವಾಗಿಲ್ಲ ಇಂಗ್ಲೀಶ್ ಕಲಿತು ಬದುಕು ರೂಪಿಸಿಕೊಂಡರೆ ಸಾಕು ಎನ್ನುವ ಮನಸ್ಥಿತಿಯಲ್ಲಿದ್ದಾರೆ. ಹಾಗಾಗಿ ಹಳ್ಳಿಗಾಡಿನ ಶಾಲಾ ಆವರಣಕ್ಕೂ ಇಂಗ್ಲೀಶ್ ವಿಸ್ತರಿಸಿಕೊಂಡಿದೆ. ಪ್ರಸ್ತುತ ಜಗತ್ತು ತಂತ್ರಜ್ಞಾನದ ಬಳಕೆಗೆ ಸಿದ್ಧಗೊಂಡಿರುವುದರಿಂದ ಅದಕ್ಕೆ ತಕ್ಕಂತೆ ಕನ್ನಡದ ಬಳಕೆ ಅನಿವಾರ್ಯ ಎಂಬಂತೆ ಮಾಡಬೇಕಿದೆ. ನಮ್ಮ ಇಂದಿನ ಪ್ರಯತ್ನಗಳು ಕನ್ನಡದ ಪರವಾಗಿದ್ದೂ ಕನ್ನಡವನ್ನು ಉಳಿಸುವ ನಿಟ್ಟಿನಲ್ಲಿ ರೂಪುಗೊಂಡವುಗಳಾಗಿವೆ. ಅವು ಕನ್ನಡ ಭಾಷಿಕರನ್ನು ಒಳಗೊಂಡಿಲ್ಲ. ಡಾ.ಕೆ.ವಿ.ನಾರಾಯಣ ಅವರು ತಮ್ಮ ನುಡಿಗಳ ಅಳಿವು ಪುಸ್ತಕದಲ್ಲಿ ಹೇಳುವಂತೆ ಭಾಷೆಯ ಅಳಿವನ್ನು ಒಂದು ಭಾಷೆ ಮತ್ತು ಆ ಭಾಷೆಯನ್ನು ಬಳಸುವ ಸಮುದಾಯದಿಂದ ಬೇರೆಯಾಗಿ ಗ್ರಹಿಸಬಾರದು. ಹೀಗೆ ಪ್ರತ್ಯೇಕಿಸಿ ಗ್ರಹಿಸಿದ ಹಿನ್ನೆಲೆಯಲ್ಲಿ ಭಾಷೆಯನ್ನು ಉಳಿಸುವ ಕಾರ್ಯಯೋಜನೆಗಳು ಯಶಸ್ವಿಯಾಗಲಾರವು. (ಈಗಿರುವ ನಮ್ಮ ಯೋಜನೆಗಳು ಅದೇ ರೀತಿಯವುಗಳಾಗಿವೆ.) ಹಾಗಾಗಿ ಭಾಷೆಗಳನ್ನು ಉಳಿಸುವುದು ಎಂದರೆ ಆ ಭಾಷಿಕ ಸಮುದಾಯವನ್ನು ಉಳಿಸದೆ ಕೇವಲ ಅವರು ಬಳಸುವ ಭಾಷೆಯನ್ನು ಉಳಿಸಲು ಸಾಧ್ಯವಿಲ್ಲ ಎನ್ನುವ ಮಾತು ಸತ್ಯ ಎಂದು ಕಾಣುತ್ತದೆ. ಆದ್ದರಿಂದ ಕರ್ನಾಟಕದಲ್ಲಿ ಕನ್ನಡ ನುಡಿ ಆಡಳಿತ, ಶಿಕ್ಷಣ, ಸಾರ್ವಜನಿಕ ಕ್ಷೇತ್ರ ಮತ್ತಿತರ ವಲಯಗಳಲ್ಲಿ ಸಾರ್ವತ್ರಿಕವಾಗಿ ಸಹಜವಾಗಿ ಬಳಕೆಯಾಗಿ ಕನ್ನಡದ ಆತಂಕಗಳು ದೂರವಾಗಬೇಕಾದರೆ, ಕನ್ನಡದ ನುಡಿ ಉಳಿಕೆಯ ಕೆಲಸಗಳ ಜೊತೆಗೆ ಕನ್ನಡಿಗರನ್ನು ಕಾಪಿಡುವ ಕೆಲಸ ನಡೆಯಬೇಕಾಗಿದೆ. ಆಗ ಕನ್ನಡ ನಿರಾತಂಕವಾಗಿ ಉಳಿಯಬಹುದು ಎನಿಸುತ್ತದೆ. ■

Scanned with CamScanner

ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗವು ಬಾರತೀಯ ಭಾಷೆಗಳು ವಿಜ್ಞಾನದ ಮಾಧ್ಯಮವಾಗಬೇಕೆಂಬ ಹಿನ್ನೆಲೆಯಲ್ಲಿ. ಕೃಷಿ ಕ್ಷೇತ್ರದಲ್ಲಿ ಕನ್ನಡವನ್ನು ಜಾರಿಗೆ ತರುವ ಪ್ರಯತ್ನದ ಪ್ರಥಮ ಹೆಜ್ಜೆಯಾಗಿ, ಕೃಷಿ ಮತ್ತು ಸಂಬಂಧಿತ ವಿಷಯಗಳ ಕನ್ನಡ ಪರ್ಯಪುಸ್ತಕಗಳ ಪ್ರಕಟಣಾ ಕಾರ್ಯವನ್ನು ಕೈಗೊಂಡಿತು. ಅದರೊಂದಿಗೆ ಕೃಷಿ ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಆಕರ ಗ್ರಂಥಗಳನ್ನು ಮತ್ತು ಪಾರಿಭಾಷಿಕ ಪದಕೋಶಗಳನ್ನು ರಚಿಸಿ ಕನ್ನಡದಲ್ಲಿ ಕೃಷಿಸಾಹಿತ್ಯ ರಚನೆಗಾಗಿ ಕನ್ನಡ ಪರಿಸರವನ್ನು ಸಜ್ಜುಗೊಳಿಸಿದ ಕೀರ್ತಿಹೊಂದಿದೆ. ಕೃಷಿ ಸಾಹಿತ್ಯ ಮತ್ತು ಪದಕೋಶಗಳಿಂದ ಕನ್ನಡ ಭಾಷೆಯನ್ನು ಹಾಗೂ ಸಾಹಿತ್ಯವನ್ನು ಆ ನೆಲೆಯಲ್ಲಿ ಸಮೃದ್ಧಗೊಳಿಸುತ್ತದೆ. ಕನ್ನಡ ಅಧ್ಯಯನ ವಿಭಾಗದಿಂದ ವಿದ್ಯಾರ್ಥಿಗಳಿಗೆ, ಕಲಿಗೆ, ಬೋಧಕರಿಗೆ, ಸಂಶೋಧಕರಿಗೆ, ವಿಸ್ತರಣಾ ಕಾರ್ಯಕರ್ತರಿಗೆ ಮತ್ತು ಆಸಕ್ತರಿಗೂ ಸಹ ಉಪಯುಕ್ತವಾಗುವಂತಹ ಹಲವಾರು ಕೃತಿಗಳನ್ನು ಹೊರತರುತ್ತಾ ಕನ್ನಡ ಸಾಹಿತ್ಯ ವಿಕಾಸದ ಹಾದಿಯಲ್ಲಿ ಕೃಷಿ ವಿಜ್ಞಾನ ಸಾಹಿತ್ಯವನ್ನು ಮುನ್ನಡೆಸಿ ಬೆಳೆಸಿದೆಯೆಂದರೆ ತಪ್ಪಾಗಲಾರದು. ಕರ್ನಾಟಕ ಸರಕಾರದ ಆದೇಶದ ಮೇರೆಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಸ್ನಾತಕ ಪದವಿಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬೋಧಿಸಲು ೨೦೧೬-೧೭ರಿಂದ ಪ್ರಾತಿಲರಾಗಿರುವುದು ಸ್ವಾಗತಾರ್ಹ. ಅದಕ್ಕೆ ಅಗತ್ಯವಾದ ಪರ್ಯಪುಸ್ತಕವನ್ನು ಪ್ರಕಟಿಸಿರುವ ಪರ್ಯಪುಸ್ತಕ ಸಮಿತಿಯವರನ್ನು ಅಭಿನಂದಿಸುವೆ.

ಡಾ. ಎಸ್.ರಾಜೇಂದ್ರ ಪ್ರಸಾದ್
ಕುಲಪತಿಗಳು

Published with the assistance of the Commission for Scientific and Technical Terminology, Ministry of Human Resource Development, Government of India, New Delhi under the Scheme for Production of University Level Literatue in Indian Languages.

UNIVERSITY OF AGRICULTURAL SCIENCES
BANGALORE-560065
www.uasbangalore.edu.in
Email: kannada@uasbangalore.edu.in

₹ 50/-

ಕೃಷಿ ಸಂಸ್ಕೃತಿಕ ಕನ್ನಡ

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ
ಪ್ರಥಮ ವರ್ಷದ ಕನ್ನಡ ಪರ್ಯಪುಸ್ತಕ



ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಜ್ಞಾನ ವಿದ್ಯಾಲಯ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560065

Scanned with CamScanner

ಸಾಂಸ್ಕೃತಿಕ ಕನ್ನಡ

ಸ್ನಾತಕ ಪದವಿಯ ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್ ಕನ್ನಡ ಪಠ್ಯ ಪುಸ್ತಕ
(೨೦೨೦–೨೧ರ ಶೈಕ್ಷಣಿಕ ವರ್ಷದಿಂದ)

ಸಂಪಾದಕ ಮಂಡಳಿ

ಪ್ರೊ. ಎಂ.ಬಿ.ಚೆಟ್ಟಿ

ಪ್ರೊ. ಹಿ.ಚಿ.ಬೋರಲಿಂಗಯ್ಯ

ಪ್ರೊ. ಅಶೋಕಕುಮಾರ ರಂಜೇರೆ

ಪ್ರೊ. ಜೆ.ಬಾಲಕೃಷ್ಣ

ಪ್ರೊ. ಕೆ.ಸಿ.ಶಶಿಧರ ಕುಂಬಾರ

ಡಾ. ಪ್ರಮೋದ ಕಟ್ಟಿ

ಡಾ. ಸುರೇಖಾ ಸಂಕನಗೌಡರ

ಡಾ. ಉಮಾ ಅಕ್ಕಿ

ಪ್ರೊ. ಎಂ.ನಾರಾಯಣ ಸ್ವಾಮಿ

ಕನ್ನಡ ಅಧ್ಯಯನ ವಿಭಾಗ

ಶಿಕ್ಷಣ ನಿರ್ದೇಶನಾಲಯ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–೫೬೦೦೬೫

Scanned with CamScanner

ಸಾಂಸ್ಕೃತಿಕ ಕನ್ನಡ – ಸ್ನಾತಕ ಪದವಿಯ ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್ ಕನ್ನಡ ಪಠ್ಯ ಪುಸ್ತಕ. **ಪ್ರಕಾಶಕರು:** ಕನ್ನಡ ಅಧ್ಯಯನ ವಿಭಾಗ, ಶಿಕ್ಷಣ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-೫೬೦೦೬೫.

ಮೊದಲ ಮುದ್ರಣ: ೨೦೨೧ ಪುಟಗಳು: xvi + ೧೦೦
ಪ್ರತಿಗಳು: ೮೦೦ ಬೆಲೆ: ರೂ. ೫೦-೦೦

Cultural Kannada - A Text of Kannada for the first semester of first year Under Graduate Students- **Published by** Department of Kannada Studies, University of Agricultural Sciences, Bangalore-560065.

Year of Publication :2021 Pages: xvi +100
Copies: 800 Price: Rs: 50-00
Size: 1/8th Demy, Paper: 70 GSM Maplitho

ISBN: 978-93-83889-72-3

© ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.

ಮುಖಪುಟ ವಿನ್ಯಾಸ : ಜೆ.ಬಿ.

ಮುದ್ರಣ:
ರಘು ಪ್ರಿಂಟ್ ಸಿಸ್ಟಮ್ಸ್, ಆಲಮ್ಮಿ ಕಟ್ಟಡ
ಪಶುವೈದ್ಯಕೀಯ ವಿ.ವಿ. ಆವರಣ, ಹೆಬ್ಬಾಳ, ಬೆಂಗಳೂರು-560024

59

ಟಿ.ಎಸ್.ನಾಗಾಭರಣ
ಅಧ್ಯಕ್ಷರು

ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಕರ್ನಾಟಕ ಸರ್ಕಾರ

ಆಶಯ ನುಡಿ

ಕರ್ನಾಟಕದಲ್ಲಿ ಕನ್ನಡ ಅಧಿಕೃತ ರಾಜ್ಯ ಭಾಷೆ, ಜನಭಾಷೆಯೂ ಹೌದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ಅರ್ಥವಾಗುವ ಭಾಷೆಯಲ್ಲಿ ವ್ಯವಹರಿಸಬೇಕಾದದ್ದು ಆಡಳಿತ ಮತ್ತು ಶಿಕ್ಷಣ ಕ್ಷೇತ್ರದ ಎಲ್ಲರ ಕರ್ತವ್ಯ. ಆಡಳಿತದ ಭಾಷೆಯನ್ನಾಗಿ ಕನ್ನಡವನ್ನು ಅನುಷ್ಠಾನಗೊಳಿಸುವ ಕಾರ್ಯಗಳು ಜರೂರಿನಿಂದ ನಡೆಯುತ್ತಿವೆ. ಆದರೆ ಶಿಕ್ಷಣ ಕ್ಷೇತ್ರದಲ್ಲಿ ನಾವಿನ್ನೂ ಗುರಿ ಮುಟ್ಟಲು ಸಾಧ್ಯವಾಗಿಲ್ಲ. ನಾಡಿನ ಅಧಿಕೃತ ರಾಜ್ಯಭಾಷೆಯನ್ನು ಕರ್ನಾಟಕದಲ್ಲಿ ಶಿಕ್ಷಣ ಪಡೆಯುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಕಲಿತಾಗ ಅದು ಸಾರ್ಥಕಗೊಳ್ಳುತ್ತದೆ.

ಶಿಕ್ಷಣದ ಖಾಸಗೀಕರಣ ಹಾಗೂ ಶಿಕ್ಷಣ ಸಂಸ್ಥೆಗಳ ಕನ್ನಡದ ಬಗೆಗಿನ ಉದಾಸೀನತೆ ಆ ದಿಸೆಯಲ್ಲಿ ಅಡ್ಡಿಯಾಗಿದ್ದವು. ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯ ಪದವಿ ತರಗತಿಗಳಲ್ಲಿ ಮೊದಲ ಸೆಮಿಸ್ಟರುಗಳಲ್ಲಿ ಎರಡನೇ ಭಾಷೆಯನ್ನಾಗಿ ಕನ್ನಡ ಭಾಷಾ ಪಠ್ಯಗಳನ್ನು ಅಳವಡಿಸಲಾಗಿತ್ತಾದರೂ ಮಾತೃಭಾಷೆಯ ನೆಪದಲ್ಲಿ ಬೇರೆ ಯಾವುದಾದರೂ ಭಾಷೆಯೊಂದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಒದಗಿಸಲಾಗಿತ್ತು. ಆದರೆ ಇಂಗ್ಲಿಷ್ ಎಲ್ಲರಿಗೂ ಕಡ್ಡಾಯ ಭಾಷೆಯಾಗಿತ್ತು! ವೃತ್ತಿ ಶಿಕ್ಷಣದ ಕೋರ್ಸ್‌ಗಳಲ್ಲಿ ಒಂದು ಭಾಷೆಯನ್ನಾಗಿ ಕನ್ನಡವನ್ನು ಕಲಿಸುವ ಅವಕಾಶವೇ ಇರಲಿಲ್ಲ. ಇದನ್ನು ಮನಗಂಡ ಈ ಹಿಂದಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರುಗಳ ಸಕಾಲಿಕ ಕ್ರಮಗಳಿಂದ ಎರಡು ಪಠ್ಯಗಳನ್ನು ವೃತ್ತಿ ಶಿಕ್ಷಣದ ವಿದ್ಯಾರ್ಥಿಗಳಿಗಾಗಿ ನಿಗದಿಪಡಿಸಲಾಗಿತ್ತು.

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಉನ್ನತ ಶಿಕ್ಷಣ ಪರಿಷತ್ತಿನ ಸಭೆಯಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸುವ ವ್ಯವಸ್ಥೆಗೆ ಮುಂದಡಿ ಇಟ್ಟಿತು. ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಹಿ.ಚಿ.ಬೋರಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ಎಲ್ಲಾ ವೃತ್ತಿ ಶಿಕ್ಷಣ ವಿಶ್ವವಿದ್ಯಾಲಯಗಳ ಕುಲಸಚಿವರು ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರನ್ನೊಳಗೊಂಡ ಸಮಿತಿಯನ್ನು ರಚಿಸಿ ವರದಿ ನೀಡಲು ಆದೇಶಿಸಲಾಯಿತು. ಸದರಿ ವರದಿಯ ಆಧಾರದಲ್ಲಿ, ಉನ್ನತ ಶಿಕ್ಷಣ ಪರಿಷತ್ತು ರಚಿಸಿದ ಪಠ್ಯ ರಚನಾ ಸಮಿತಿಗಳು ವೃತ್ತಿ ಶಿಕ್ಷಣದ ವಿದ್ಯಾರ್ಥಿಗಳಿಗೆ 'ಬಳಕೆ ಕನ್ನಡ' (ಕನ್ನಡೇತರ ವಿದ್ಯಾರ್ಥಿಗಳಿಗಾಗಿ), ಮತ್ತು 'ಸಾಂಸ್ಕೃತಿಕ ಕನ್ನಡ' (ಕನ್ನಡ ಬಲ್ಲ ವಿದ್ಯಾರ್ಥಿಗಳಿಗಾಗಿ) ಎಂಬ ಪಠ್ಯಗಳನ್ನು ಸಿದ್ಧಪಡಿಸಿದೆ.

Scanned with CamScanner

೧.೩ ಕನ್ನಡ ಭಾಷೆಯ ಸಂಕ್ಷಿಪ್ತ ಚರಿತ್ರೆ

ಅಶೋಕಕುಮಾರ ರಂಜೇರೆ

ಕನ್ನಡ ಭಾಷೆಯ ಪ್ರಾಚೀನತೆ

ಜಗತ್ತಿನಲ್ಲಿ ಸುಮಾರು ಏಳು ಸಾವಿರದಿಂದ ಒಂಭತ್ತು ಸಾವಿರ ಭಾಷೆಗಳು ಇರಬಹುದು ಎಂದು ವಿದ್ವಾಂಸರು ಗುರುತಿಸಿದ್ದಾರೆ. (೨೦೧೧ರ ಜನಗಣತಿ ಪ್ರಕಾರ ಯುನೆಸ್ಕೊ ೭೧೦೦ ಮುಖ್ಯ ಜೀವಂತ ಭಾಷೆಗಳಿವೆ ಎಂದು ದಾಖಲಿಸಿದೆ) ಅವುಗಳಲ್ಲಿ ಕೆಲವೇ ಕೆಲವು ಭಾಷೆಗಳು ಸಾವಿರಾರು ವರ್ಷಗಳ ಸುದೀರ್ಘ ಪರಂಪರೆ ಇರುವ ನುಡಿಗಳಾಗಿವೆ. ಹಾಗೆ ಸಾವಿರಾರು ವರ್ಷಗಳ ಸುದೀರ್ಘ ಪರಂಪರೆ ಇರುವ ಕೆಲವೇ ಭಾಷೆಗಳಲ್ಲಿ ಕನ್ನಡವೂ ಒಂದು. ಜಗತ್ತಿನ ಅತ್ಯಂತ ಪುರಾತನವಾದ ಸುಮಾರು ೨೫ ಭಾಷೆಗಳ ಪಟ್ಟಿಯನ್ನು ಮಾಡಿದರೆ ಅದರಲ್ಲಿ ಭಾರತದ ಕನಿಷ್ಠ ೫ ಭಾಷೆಗಳು ಸೇರುತ್ತವೆ. ಅವೆಂದರೆ: ಸಂಸ್ಕೃತ, ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳಂ. ಜಾಗತಿಕ ಭಾಷೆಗಳ ಸಂದರ್ಭದಲ್ಲಿ ಕನ್ನಡಕ್ಕೆ ಮಹತ್ವದ ಸ್ಥಾನ ಇದೆ. ಮೌಖಿಕ ಆಕರಗಳ ಹಿನ್ನೆಲೆಯಲ್ಲಿ ವಿದ್ವಾಂಸರು ಕನ್ನಡ ಭಾಷೆಯ ಹಳತನ್ನು ಕ್ರಿಸ್ತಪೂರ್ವ ಕಾಲಕ್ಕೆ ತೆಗೆದುಕೊಂಡು ಹೋಗಿರುವುದನ್ನು ಕಾಣುತ್ತೇವೆ. ಗ್ರೀಕ್ ಭಾಷೆಯಲ್ಲಿ, ತಮಿಳಿನ ಶಿಲಪ್ಪದಿಕಾರಂ ಗ್ರಂಥಗಳಲ್ಲಿ, ಅಶೋಕನ ಶಾಸನಗಳಲ್ಲಿ ಬಳಕೆಯಾದ ರೂಪಗಳನ್ನು ಈಗಾಗಲೇ ದಾಖಲಿಸಿದ್ದಾರೆ.

ಭಾರತದಲ್ಲೇ ಅತ್ಯಂತ ಪ್ರಾಚೀನ ಸಂಸ್ಕೃತಿಯ ಕುರುಹುಗಳು ಸಿಕ್ಕ ಸಿಂಧು ಸಂಸ್ಕೃತಿಯನ್ನು ದ್ರಾವಿಡ ಸಂಸ್ಕೃತಿಯೊಂದಿಗೆ ಸಮೀಕರಿಸಿ ದ್ರಾವಿಡ ಭಾಷೆಯ ಹಳತನ್ನು ಸಿಂಧು ಸಂಸ್ಕೃತಿಯ ಕಾಲಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನಗಳೂ ನಡೆದಿವೆ. ಹರಪ್ಪ ನಾಗರೀಕತೆಯು ದ್ರಾವಿಡ ಭಾಷಿಕರದ್ದಾಗಿತ್ತು ಎನ್ನುವ ತಿಳುವಳಿಕೆ ಈಗಲೂ ಕೂಡ ಪ್ರಚಲಿತದಲ್ಲಿದೆ.

ಹರಪ್ಪ ನಾಗರಿಕತೆಯ ಸಮಕಾಲೀನದಲ್ಲಿ ಭಾರತದ ದಕ್ಷಿಣದಲ್ಲೂ ಕೂಡ ನಾಗರಿಕತೆಗಳು ಇದ್ದವು ಎನ್ನುವುದಕ್ಕೆ ಸಾಕಷ್ಟು ಪುರಾವೆಗಳು ದೊರೆತಿವೆ. ಹರಪ್ಪ ನಾಗರಿಕತೆ ಬೆಳವಣಿಗೆಯ ಸಂದರ್ಭದಲ್ಲಿ ಅಲ್ಲಿನ ಅನೇಕ ಕಟ್ಟಡಗಳಿಗೆ ಇಂದಿನ

ಕರ್ನಾಟಕದ ಮಸ್ಕಿ, ತೆಕ್ಕಲಕೋಟೆ ಮೊದಲಾದ ಪ್ರದೇಶಗಳಿಂದ ಕಲ್ಲುಗಳನ್ನು ಸಾಗಿಸಲಾಗುತ್ತಿತ್ತು ಎನ್ನುವುದನ್ನು ಕೂಡ ಸಾಕ್ಷೀಕರಿಸಿದ್ದಾರೆ (ಯು.ಆರ್.ರಾವ್ ೧೯೮೮) (ಭಾಷಿಕ ಕರ್ನಾಟಕ – ಬಸವರಾಜ ಕೋಡಗುಂಟಿ). ಕ್ರಿ. ಪೂ. ೨೦೦೦ದಿಂದ ೩೦೦೦ ವರ್ಷಗಳ ಹಿಂದೆ ಇದ್ದಿರಬಹುದಾದ ಹರಪ್ಪ ಮತ್ತು ಮೊಹೆಂಜೊದಾರೋ ಸಂಸ್ಕೃತಿಗೆ ಸಂಬಂಧಿಸಿದ ದಾಖಲೆಗಳಲ್ಲಿ, ಆ ಸಂಬಂಧದ ಉಲ್ಲೇಖಗಳಲ್ಲಿ ಕನ್ನಡ ಜನರ ಮತ್ತು ಕನ್ನಡ ಭಾಷೆಯ ಪದಗಳ ಉಲ್ಲೇಖ ಇರುವುದನ್ನು ಡಾ.ಹೆರಾಸ್ ಎನ್ನುವ ಸಂಶೋಧಕರು ದಾಖಲಿಸಿದ್ದಾರೆ. ಹಾಗಾಗಿ ಕನ್ನಡ ಭಾಷೆ ಕ್ರಿ.ಪೂ. ೨೦೦೦ ವರ್ಷಗಳಿಗಿಂತಲೂ ಹಳೆಯ ಇತಿಹಾಸ ಹೊಂದಿದೆ ಎಂದು ವಿದ್ವಾಂಸರು ಊಹೆ ಮಾಡಿದ್ದಾರೆ.

ಜಗತ್ತಿನ ಕೆಲವೇ ಪ್ರದೇಶಗಳನ್ನು ಬಿಟ್ಟರೆ ಭಾರತದ, ಅದರಲ್ಲಿ ಇಂದಿನ ಕರ್ನಾಟಕದ ಯಾದಗಿರಿ ಜಿಲ್ಲೆಯ, ಶಹಾಪುರ ತಾಲೂಕಿನ ಕೆಲವು ಪ್ರದೇಶಗಳು ಪುರಾತನ ಶಿಲಾಯುಗದ ಪುರಾವೆಗಳು ದೊರೆತ ಪ್ರದೇಶಗಳಾಗಿವೆ. ಇದೇ ಪ್ರದೇಶದಲ್ಲಿ ಇರುವ ಸನ್ನತಿ ಕ್ರಿಸ್ತಪೂರ್ವದಲ್ಲೇ ಅಶೋಕನ ಬೌದ್ಧಧರ್ಮದ ಬಹುದೊಡ್ಡ ನೆಲೆಯಾಗಿತ್ತು ಎನ್ನುವುದಕ್ಕೆ ಪುರಾತತ್ವ ಇಲಾಖೆ ಸಾಕ್ಷಿಯಾಗಿದೆ. ಅಂದರೆ ಸಿಂಧು ಕಣಿವೆಯ ಹರಪ್ಪ ಮೊಹೆಂಜೊದಾರೊ ನಾಗರಿಕತೆಯ ಕಾಲದಲ್ಲಿ ದಕ್ಷಿಣ ಭಾಗದಲ್ಲೂ ಕೂಡ ನಾಗರಿಕತೆ ಇತ್ತು. ಹಾಗಾಗಿ ಇಲ್ಲಿಯೂ ಕೂಡ ನಾಗರಿಕಗೊಂಡ ಭಾಷೆಯ ಬಳಕೆ ಇತ್ತು. ಹಾಗೆ ಬಳಕೆಯಲ್ಲಿರುವ ಭಾಷೆ ಕನ್ನಡವೇ ಆಗಿರಬೇಕು ಎನ್ನುವ ವಾದಗಳು ಇವೆ.

ಕನ್ನಡ ಭಾಷೆ ಮತ್ತು ಕನ್ನಡ ಪ್ರದೇಶದ ಬಗ್ಗೆ ಸಿಗುವ ಅನೇಕ ಪುರಾವೆಗಳ ಆಧಾರದಲ್ಲೂ ಕನ್ನಡ ನುಡಿಯ ಮತ್ತು ಕನ್ನಡ ನಾಡಿನ ಚರಿತ್ರೆಯನ್ನು ವಿದ್ವಾಂಸರು ವಿವರಿಸಿದ್ದಾರೆ. ಮಹಾಭಾರತ ಮತ್ತು ರಾಮಾಯಣದಂತಹ ಪ್ರಸಿದ್ಧ ಪುರಾಣಗಳು ಕ್ರಿ.ಪೂ. ೩ನೇ ಶತಮಾನದಿಂದ ಕ್ರಿ.ಶ ೨ನೇ ಶತಮಾನದ ಅವಧಿಯಲ್ಲಿ ರಚನೆಯಾಗಿರಬೇಕು ಎಂದು ಹೇಳುತ್ತಾರೆ. ಹಾಗಾಗಿ ಮಹಾಭಾರತದ ಸಭಾಪರ್ವದಲ್ಲಿ ಮತ್ತು ಭೀಷ್ಮ ಪರ್ವದಲ್ಲಿ ಕರ್ಣಾಟ ಎಂದು ಉಲ್ಲೇಖಿಸಿರುವುದನ್ನು ಗಮನಿಸಿದ ವಿದ್ವಾಂಸರು ಆ ಕಾಲಕ್ಕಾಗಲೇ ಕರ್ನಾಟಕ ಪ್ರದೇಶ ಇದ್ದಿರಬಹುದು. ಹಾಗಾಗಿ ಕನ್ನಡ ಭಾಷೆ ಕೂಡ ಇತ್ತು. ಹಾಗಾಗಿ ಕನ್ನಡ ನಾಡು ನುಡಿಯ ಚರಿತ್ರೆಯನ್ನು ಕ್ರಿ.ಪೂ. ೩ನೇ ಶತಮಾನದವರೆಗೆ ತೆಗೆದುಕೊಂಡು ಹೋಗಿದ್ದಾರೆ.

ಗ್ರೀಕ್ ಗಣಿತಜ್ಞ, ಖಗೋಳಶಾಸ್ತ್ರಜ್ಞನಾದ ಟಾಲೆಮಿ ಕ್ರಿ. ಪೂ. ೧೭೦ರಿಂದ ೧೦೦ರ ಅವಧಿಯಲ್ಲಿ ಇದ್ದ ಎಂದು ಹೇಳುತ್ತಾರೆ. ಈ ಅವಧಿಯಲ್ಲಿ ಬರೆದ ಪುಸ್ತಕವೊಂದರಲ್ಲಿ ಟಾಲೆಮಿಯು ಪ್ರಾಚೀನ ಭಾರತದ ಅನೇಕ ಸ್ಥಳಗಳಾದ ಅಥಣಿ ತಾಲೂಕಿನ ತವಸಿ,

Scanned with CamScanner

ವಿಜಯಪುರ ಜಿಲ್ಲೆಯ ಇಂಡಿ, ಹೂವಿನ ಹಿಪ್ಪರಗಿ, ರಾಯಚೂರು ಜಿಲ್ಲೆಯ ಮುದಗಲ್, ಸವದಿ ಊರುಗಳ ಹೆಸರುಗಳನ್ನು ದಾಖಲಿಸಿದ್ದಾನೆ ಎಂದು ಕನ್ನಡದ ವಿದ್ವಾಂಸರಾದ ಗೋವಿಂದ ಪೈ ಅವರು ತಿಳಿಸಿದ್ದಾರೆ. ಹಾಗಾಗಿ ಕ್ರಿಸ್ತಪೂರ್ವದಲ್ಲೇ ಕನ್ನಡ ಪ್ರದೇಶದ ಊರುಗಳ ದಾಖಲೆ ಇರುವುದರಿಂದ ಕನ್ನಡ ಭಾಷೆ ಇತ್ತು ಎಂದು ಹೇಳುತ್ತಾರೆ. ಅಷ್ಟೇ ಅಲ್ಲ ಕ್ರಿ.ಶ ೧೫೧೦ರಲ್ಲಿ ರಚನೆಯಾಗಿರಬಹುದಾದ ಗ್ರೀಕ್‌ನ ಪ್ರಹಸನವೊಂದರ ಕತೆ ಕರ್ನಾಟಕದ ಪಶ್ಚಿಮ ಕರಾವಳಿಗೆ ಸಂಬಂಧಿಸಿದ್ದಾಗಿದೆ. ಆ ಪ್ರಹಸನದಲ್ಲಿ ಬರುವ ಅನೇಕ ಪದಗಳು ದ್ರಾವಿಡ ಭಾಷೆಗೆ ಸಂಬಂಧಿಸಿದವುಗಳಾಗಿವೆ. ಅವು ಕನ್ನಡ ಭಾಷೆಯ ಪದಗಳೂ ಆಗಿರಬಹುದು. ಎನ್ನುವ ಮಾತುಗಳನ್ನು ವಿದ್ವಾಂಸರಾದ ಗೋವಿಂದ ಪೈ, ಎಸ್. ಶ್ರೀಕಂಠಯ್ಯ ಮುಂತಾದವರು ಹೇಳಿದ್ದಾರೆ.

ದ್ರಾವಿಡ ಪ್ರದೇಶದ ಶಾತವಾಹನ ವಂಶದ ಹಾಲರಾಜ ಸಂಕಲಿಸಿದ ಗಾಥಾ ಸಪ್ತಶತಿ ಕಾವ್ಯದಲ್ಲಿ ಕನ್ನಡ ಭಾಷೆಯ ಅನೇಕ ಪದಗಳು ಸಿಗುತ್ತವೆ. ಉದಾಹರಣೆಗೆ ಪೊಟ್ಟ (ಹೊಟ್ಟೆ), ತುಪ್ಪ (ತುಪ್ಪ), ಪೆಟ್ಟು (ಹೊಡೆ), ರೊಟ್ಟಿ (ರೊಟ್ಟಿ), ಊರೋ (ಊರು) ಎನ್ನುವ ರೂಪಗಳು ಈಗಲೂ ಹಳೆಗನ್ನಡದಲ್ಲಿ ಬಳಕೆಯಾಗಿರುವುದನ್ನು ನೋಡುತ್ತೇವೆ. ಹಾಗಾಗಿ ಹಾಲರಾಜನ ಕಾಲಕ್ಕಾಗಲೇ ಕನ್ನಡ ಜನಭಾಷೆಯಾಗಿತ್ತು ಎಂತಲೂ ವಿದ್ವಾಂಸರು ಹೇಳಿದ್ದಾರೆ.

ಅಶೋಕ ಚಕ್ರವರ್ತಿಯ ಬಗ್ಗೆ ನಾವೆಲ್ಲ ಕೇಳಿದ್ದೇವೆ. ಕ್ರಿ.ಪೂರ್ವದಲ್ಲೇ ಉತ್ತರ ಭಾರತದಿಂದ ದಕ್ಷಿಣ ಭಾರತ ಮತ್ತು ಶ್ರೀಲಂಕಾಕ್ಕೆ ಬೌದ್ಧ ಧರ್ಮದ ಪ್ರಚಾರಕ್ಕಾಗಿ ತನ್ನ ಮಕ್ಕಳಾದ ಸಂಘಮಿತ್ರೆ ಮತ್ತು ಮಹೇಂದ್ರ ಇವರನ್ನು ಕಳುಹಿಸಿದ್ದ. ಹೀಗೆ ಬೌದ್ಧ ಧರ್ಮದ ಪ್ರಚಾರಕ್ಕಾಗಿ ದಕ್ಷಿಣ ಭಾರತಕ್ಕೆ ಬಂದಾಗ ಕೆತ್ತಿಸಿದ ಶಾಸನಗಳು ಈಗಲೂ ದೊರೆಯುತ್ತವೆ. ಯಾದಗಿರಿ ಜಿಲ್ಲೆಯ ಸನ್ನತಿ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ರಾಯಚೂರು ಜಿಲ್ಲೆಯ ಮಸ್ಕಿ, ಕೊಪ್ಪಳ ಜಿಲ್ಲೆಯ ಕೊಪ್ಪಳ ಮುಂತಾದ ಕಡೆಯಲ್ಲಿ ಅಶೋಕನ ಶಾಸನಗಳು ದೊರಕುತ್ತವೆ. ಇವುಗಳಲ್ಲಿನ ಬ್ರಹ್ಮಗಿರಿ ಶಾಸನದಲ್ಲಿ ದೊರಕುವ ಇಸಿಲ ಎನ್ನುವ ಪದ ದ್ರಾವಿಡದ, ಕನ್ನಡದ ಪದವಾಗಿದೆ ಎಂದು ವಿದ್ವಾಂಸರಾದ ಡಿ.ಎಲ್.ನರಸಿಂಹಾಚಾರ್ ಅವರು ಹೇಳಿದ್ದಾರೆ. ಹಾಗಾಗಿ ಕನ್ನಡ ಭಾಷೆ ಕ್ರಿ.ಪೂರ್ವದಲ್ಲೇ ಬಳಕೆಯಲ್ಲಿತ್ತು ಎನ್ನುವುದು ಇದರಿಂದ ವೇದ್ಯವಾಗುತ್ತದೆ.

ಕನ್ನಡ ಭಾಷೆಯ ಚರಿತ್ರೆಯನ್ನು ಸುಮೇರಿಯನ್ ಸಂಸ್ಕೃತಿಯ ಕಾಲಘಟ್ಟಕ್ಕೂ (ಕ್ರಿಪೂ. ಸುಮಾರು ಮೂರರಿಂದ ಐದನೇ ಶತಮಾನ) ವಿದ್ವಾಂಸರು ತೆಗೆದುಕೊಂಡು ಹೋಗಿದ್ದಾರೆ. ಸುಮೇರಿಯನ್ ಸಂಸ್ಕೃತಿಯನ್ನು ತಮಿಳು ಮತ್ತು ಕನ್ನಡದೊಂದಿಗೆ ಸಮೀಕರಿಸಿ ದ್ರಾವಿಡದ ಹಳಮೆಯನ್ನು ಸುಮೇರಿಯನ್ ಕಾಲಘಟ್ಟಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನಗಳು ಕೂಡ ನಡೆದಿವೆ. ಸುಮೇರಿಯನ್ ಭಾಷೆಯಲ್ಲಿನ ಅನೇಕ

ಪದಗಳು ಮತ್ತು ಕನ್ನಡದ ಅನೇಕ ಪದಗಳ ನಡುವೆ ಸಾಮ್ಯತೆ ಇದ್ದು ಅವುಗಳಿಗೆ ಇರುವ ಅರ್ಥ ಒಂದೇ ಆಗಿರುವುದರಿಂದ ಕನ್ನಡ ನುಡಿ ಆ ಕಾಲದಲ್ಲೇ ಬಳಕೆಯಲ್ಲಿದ್ದಿರಬಹುದು ಎನ್ನುವ ಮಾತುಗಳನ್ನು ಹೇಳುತ್ತಾರೆ. ಉದಾಹರಣೆಗೆ,

ಸುಮೇರಿಯನ್ ಪದ	ದ್ರಾವಿಡ ಪದ	ದ್ರಾವಿಡ (ಅರ್ಥ)	ಸುಮೇರಿಯನ್ (ಅರ್ಥ)
ಊರ್	ಊರು	ಜನರು ನೆಲೆ ನಿಂತ ತಾಣ	ಜನರು ನೆಲೆ ನಿಂತ ತಾಣ
ಉರ್	ಉಳ್	ಊಳುವುದು	ಊಳುವುದು
ಉರಿ	ಉರಿ	ಬೆಂಕಿಯಿಂದ ಹೊತ್ತಿರುವುದು	ಬೆಂಕಿ ಹತ್ತಿಸುವ ಕಟ್ಟಿಗೆ

ಮೇಲಿನ ಪದಗಳ ಉಚ್ಚಾರಣೆ ಮತ್ತು ಅರ್ಥದಲ್ಲಿ ಸಾಮ್ಯತೆ ಇರುವುದರಿಂದ ಕನ್ನಡ ಭಾಷೆಯ ಇತಿಹಾಸವನ್ನು ಸುಮೇರಿಯನ್ ಕಾಲಘಟ್ಟದಷ್ಟೇ (ಕ್ರಿಪೂ. ಸುಮಾರು ಮೂರರಿಂದ ಐದನೇ ಶತಮಾನ) ಹಳೆಯದು ಎಂದು ವಿದ್ವಾಂಸರು ಹೇಳುತ್ತಿದ್ದಾರೆ. ಈ ಎಲ್ಲ ವಿಷಯಗಳನ್ನು ಕ್ರೋಢೀಕರಿಸಿ ಬೇರೆ ಬೇರೆ ವಿದ್ವಾಂಸರು ಇತ್ತೀಚೆಗೆ ಚರ್ಚಿಸುವುದನ್ನು ಗಮನಿಸುವುದಾದರೆ ಕನ್ನಡ ಭಾಷೆಗೆ ಸುಮಾರು ಮೂರರಿಂದ ಐದು ಸಾವಿರ ವರ್ಷಗಳ ಇತಿಹಾಸ ಇರುವುದು ಕಂಡುಬರುತ್ತದೆ.

ಲಿಖಿತವಾಗಿ ಸಿಕ್ಕ ಆಕರಗಳನ್ನು ಗಮನಿಸಿದರೂ ಕನ್ನಡ ಭಾಷೆಗೆ ೧೬೦೦ ವರ್ಷಗಳ ಸುದೀರ್ಘ ಚರಿತ್ರೆ ಇರುವುದನ್ನು ನೋಡಬಹುದು. ತಮಿಳು ಭಾಷೆಯ ಲಿಖಿತ ದಾಖಲೆಗಳು ಕ್ರಿಸ್ತಪೂರ್ವದ ದಾಖಲೆಗಳು ಆಗಿರುವುದನ್ನು ಖಚಿತಪಡಿಸಲಾಗಿದೆ. ಕನ್ನಡ ಭಾಷೆ ಮೂಲ ದ್ರಾವಿಡ ಭಾಷೆಯಿಂದ ಕವಲೊಡೆದ ಸಂದರ್ಭ ತಮಿಳು ಭಾಷೆಗೆ ಹತ್ತಿರವಾಗಿರುವುದರಿಂದ ಸಹಜವಾಗಿಯೇ ಕನ್ನಡದ ಚರಿತ್ರೆ ಕೂಡ ಅದರಷ್ಟೇ ಹಳತಾದದ್ದು ಎನ್ನುವುದನ್ನು ಅಂತರಾಷ್ಟ್ರೀಯ ಮಟ್ಟದ ಇತಿಹಾಸ ಸಂಶೋಧಕರಾದ ಪ್ರೊ. ಷ. ಶಟ್ಟರ್ ಅವರು ತಮ್ಮ 'ಶಂಗಂ ತಮಿಳಗಂ' ಕೃತಿಯಲ್ಲಿ ನಿರೂಪಿಸಿದ್ದಾರೆ. ಅಷ್ಟೇ ಅಲ್ಲ ಜರ್ಮನಿಯ ಮ್ಯಾಕ್ಸ್ ಪ್ಲಾಂಕ್ ಮತ್ತು ಮಾನವ ಇತಿಹಾಸ ವಿಜ್ಞಾನ ಸಂಸ್ಥೆ/ ಅಂತರರಾಷ್ಟ್ರೀಯ ವಿಶ್ಲೇಷಣಾ ಸಂಸ್ಥೆಯವರು ದ್ರಾವಿಡ ಭಾಷಾ ಸಮೂಹ ಸುಮಾರು ೪೫೦೦ ವರ್ಷಗಳ ಹಿಂದೆಯೇ ಅಸ್ತಿತ್ವದಲ್ಲಿದ್ದವು ಎನ್ನುವುದನ್ನು ಹೇಳಿದ್ದಾರೆ.

ಲಿಖಿತ ದಾಖಲೆಗಳ ಪ್ರಕಾರ ೮ನೇ ಶತಮಾನದಿಂದ ಸಾಹಿತ್ಯ ರಚನೆಯಾದದ್ದು ಕಂಡರೆ ಕನ್ನಡ ಬರವಣಿಗೆಯ ರೂಪ ಈಗಿನ ದಾಖಲೆಗಳ ಪ್ರಕಾರ ಕ್ರಿ.ಶ. ೪೫೦ ಆಗಿದೆ. ಹಾಸನ ಜಿಲ್ಲೆ, ಬೇಲೂರು ತಾಲೂಕಿನ ಹಲ್ಮಿಡಿ ಎಂಬ ಊರಿನಲ್ಲಿ ಈ ಶಾಸನ ದೊರೆತಿದೆ. ಇದು ಕನ್ನಡ ಭಾಷೆಯಲ್ಲಿ ದೊರೆತ ಅತ್ಯಂತ ಹಳೆಯ ಶಾಸನ. ಇದನ್ನು ಕದಂಬ ವಂಶದ ರಾಜನಾದ ಕಾಕುತ್ಸವರ್ಮ ಬರೆಸಿದ ಶಾಸನವಾಗಿದೆ.

Scanned with CamScanner

ಬರವಣಿಗೆಯ ದಾಖಲೆಯ ಪ್ರಕಾರ ಕನ್ನಡದ ಬಗ್ಗೆ ಸಿಗುವ ಮೊದಲ ಆಧಾರ ಇದಾಗಿದೆ. ಈ ಹಿಂದೆ ಹೇಳಿದ ಅನೇಕ ವಿಷಯಗಳು ಊಹೆಯ ಆಧಾರದಲ್ಲಿ ಕನ್ನಡ ಭಾಷೆಯ ಚರಿತ್ರೆಯನ್ನು ಕಟ್ಟಿದರೆ ಖಚಿತ ದಾಖಲೆಗಳ ಮೂಲಕ ಕನ್ನಡ ಭಾಷೆಯ ಚರಿತ್ರೆಯನ್ನು ಹಲ್ಮಿಡಿ ಶಾಸನದಿಂದ ಆರಂಭಿಸಲಾಗುತ್ತದೆ. ಅದೇನೇ ಇರಲಿ, ಈ ಎಲ್ಲ ದಾಖಲೆಗಳ ಮೂಲಕ ಕನ್ನಡ ನುಡಿ ಜಗತ್ತಿನ ಅತ್ಯಂತ ಪುರಾತನ ಭಾಷೆಗಳಲ್ಲಿ ಒಂದು ಎನ್ನುವುದು ನಿರ್ವಿವಾದವಾಗಿ ಹೇಳಬಹುದು.

ಕನ್ನಡ ಭಾಷಾ ಬಳಕೆಯ ವ್ಯಾಪಕತೆ

ಈಗಾಗಲೇ ಹೇಳಿರುವಂತೆ ಜಗತ್ತಿನಲ್ಲಿ ಸುಮಾರು ೭ರಿಂದ ೯ ಸಾವಿರದಷ್ಟು ಭಾಷೆಗಳು ಇರಬಹುದು ಎಂದು ಭಾಷಾ ತಜ್ಞರು ಹೇಳುತ್ತಾರೆ. ಇತ್ತೀಚಿನ ಸೆನ್ಸಸ್ ಪ್ರಕಾರ ಸುಮಾರು ಏಳು ಸಾವಿರ ಚಿಲ್ಲರೆ ಭಾಷೆಗಳು ಇರುವುದನ್ನು ದಾಖಲಿಸಿದ್ದಾರೆ. ಇಷ್ಟೊಂದು ಭಾಷೆಗಳು ಬಳಕೆಯಲ್ಲಿದ್ದರೂ ಇವುಗಳನ್ನು ಬಳಸುವ ಜನಸಂಖ್ಯೆಯ ವಿವರ ನೋಡಿದರೆ ವಿಚಿತ್ರವಾಗಿದೆ.

ಜಗತ್ತಿನ ಒಟ್ಟು ಜನಸಂಖ್ಯೆಯ ಶೇಕಡಾ ೯೦ರಷ್ಟು ಜನರು ಜಗತ್ತಿನ ಒಟ್ಟು ಭಾಷೆಗಳ ಶೇಕಡಾ ೧೦ರಷ್ಟು ಭಾಷೆಗಳನ್ನು ಮಾತ್ರ ಬಳಸುತ್ತಿದ್ದಾರೆ. ಉದಾಹರಣೆಗೆ, ೨೦೧೧ರ ಜನಗಣತಿ ಪ್ರಕಾರ ಜಗತ್ತಿನಲ್ಲಿ ೭೫೦ ಕೋಟಿ ಜನರಿದ್ದು ಅವರು ಸುಮಾರು ೭೧೫೦ ಭಾಷೆಗಳನ್ನು ಬಳಸುತ್ತಿದ್ದರು. ಇವುಗಳಲ್ಲಿ ಸುಮಾರು ೬೭೫ ಕೋಟಿ ಜನರು ಬಳಸುವ ಒಟ್ಟು ಭಾಷೆಗಳ ಸಂಖ್ಯೆ ಸುಮಾರು ೭೧೫. ಕೇವಲ ೭೫ ಕೋಟಿ ಜನರು ಬಳಸುವ ಭಾಷೆಗಳ ಸಂಖ್ಯೆ ೬೪೩೫ ಎಂದು ದಾಖಲಾಗಿದೆ. ಇನ್ನೂ ಕುತೂಹಲಕರ ಸಂಗತಿ ಎಂದರೆ ಜಗತ್ತಿನ ಪ್ರಮುಖ ಸುಮಾರು ಭಾಷೆಗಳನ್ನು ಒಟ್ಟು ಜನಸಂಖ್ಯೆ ಅರ್ಧದಷ್ಟು ಜನರು ಬಳಸುತ್ತಿದ್ದಾರೆ. ಅಂತಹ ಪ್ರಮುಖ ೩೦ ಭಾಷೆಗಳಲ್ಲಿ ಕನ್ನಡವೂ ಒಂದು. ಸಣ್ಣ ಸಣ್ಣ ಭಾಷಿಕ ಸಮುದಾಯಗಳು ಬಳಸುವ ಬಹುತೇಕ ಭಾಷೆಗಳು ದೇಸಿ ಭಾಷೆಗಳಾಗಿವೆ. ಜಾಗತಿಕ ಮಟ್ಟದಲ್ಲಿ ಅತಿ ಹೆಚ್ಚು ಜನರು ಬಳಕೆ ಮಾಡುವ ಭಾಷೆಗಳ ಪಟ್ಟಿಯನ್ನು ಅನೇಕ ಸಮೀಕ್ಷೆಗಳು ದಾಖಲೆ ಮಾಡಿವೆ. ಅವುಗಳ ಪಟ್ಟಿಯನ್ನು ಗಮನಿಸಿದರೆ ಅಲ್ಲೂ ಕೂಡ ಜಗತ್ತಿನ ಪ್ರಮುಖ ೩೦ ಭಾಷೆಗಳ ಪಟ್ಟಿಯಲ್ಲಿ ಕನ್ನಡವೂ ಒಂದಾಗಿರುತ್ತದೆ.

ಪೀಪಲ್ಸ್ ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ ನಡೆಸಿದ ಭಾಷಾ ಸಮೀಕ್ಷೆ ಜಗತ್ತಿನಲ್ಲೇ ಅತಿ ದೊಡ್ಡ ಸಮೀಕ್ಷೆ ಎಂದು ಗುರುತಿಸುತ್ತಾರೆ. ೨೦೦೩ ರಲ್ಲಿ ಆರಂಭವಾದ ಈ ಸಮೀಕ್ಷೆ ಪೂರ್ಣಗೊಂಡಿದೆ. ಸುಮಾರು ೭೭ ಪುಸ್ತಕಗಳನ್ನು ಈ ಸಮೀಕ್ಷೆಯ ಫಲವಾಗಿ ಈಗಾಗಲೇ ಪ್ರಕಟಿಸಲಾಗಿದೆ.

ಭಾಷಾ ತಜ್ಞರಾದ ಡಾ. ಜಿ. ಎನ್. ದೇವಿ ಅವರು ಹೇಳುವ ಮಾತುಗಳನ್ನು ಗಮನಿಸಬೇಕು. ಜಗತ್ತಿನ ಅತ್ಯಂತ ಪ್ರಬಲ ಮತ್ತು ಪ್ರಮುಖ ಭಾಷೆಗಳೆಂದು ೩೦ ಭಾಷೆಗಳನ್ನು ಪರಿಗಣಿಸಿದರೆ ಅವುಗಳಲ್ಲಿ ಭಾರತದ ೮ ಭಾಷೆಗಳು ಸೇರುತ್ತವೆ. ಅವುಗಳಲ್ಲಿ ಕನ್ನಡವೂ ಕೂಡ ಒಂದು. (ಉಳಿದ ಭಾಷೆಗಳು : ೧. ಹಿಂದಿ ೨. ತಮಿಳು ೩. ಮರಾಠಿ ೪. ತೆಲುಗು ೫. ಬಂಗಾಳಿ ೬. ಪಂಜಾಬಿ ೭. ಮಲಯಾಳಂ).

ಕನ್ನಡ ನುಡಿಯ ಬಳಕೆಯ ವ್ಯಾಪ್ತಿಯೂ ಕೂಡ ವ್ಯಾಪಕವಾಗಿದೆ. ಯುನೆಸ್ಕೊ ಮತ್ತು ಭಾರತೀಯ ಜನಗಣತಿಯ ಅಂಕಿ ಸಂಖ್ಯೆಗಳ ಪ್ರಕಾರವೇ ಜಗತ್ತಿನಾದ್ಯಂತ ಸುಮಾರು ನಾಲ್ಕುವರೆ ಕೋಟಿಗಿಂತಲೂ ಹೆಚ್ಚಿನ ಜನರು ಕನ್ನಡ ನುಡಿಯನ್ನು ಮನೆಮಾತಾಗಿ ಬಳಸುತ್ತಿದ್ದಾರೆ. (ದ್ವಿತೀಯ ಭಾಷೆಯಾಗಿ ಕನ್ನಡವನ್ನು ಬಳಸುವ ಜನರನ್ನು ಸೇರಿಸಿದರೆ ಸುಮಾರು ಆರು ಕೋಟಿಯಷ್ಟು ಜನ ಕನ್ನಡವನ್ನು ಬಳಸುತ್ತಿದ್ದಾರೆ.) ಜಾಗತಿಕ ಮಟ್ಟದಲ್ಲಿ ಹೀಗೆ ಅತಿ ಹೆಚ್ಚು ಜನರು ಅಂದರೆ ಸುಮಾರು ನಾಲ್ಕು ಕೋಟಿಗಿಂತ ಹೆಚ್ಚಿನ ಜನರು ಒಂದು ಭಾಷೆಯನ್ನು ಬಳಸುವ ಭಾಷೆಗಳು ಹೆಚ್ಚೆಂದರೆ ೨೫ರಿಂದ ಮೂವತ್ತು ಭಾಷೆಗಳು ಸಿಗಬಹುದು. ಹಾಗೆ ವ್ಯಾಪಕವಾಗಿ ಬಹುಸಂಖ್ಯಾತ ಜನರು ಬಳಸಲ್ಪಡುವ ಭಾಷೆ ಕನ್ನಡವೂ ಆಗಿದೆ ಎನ್ನುವುದು ಹೆಮ್ಮೆಯ ವಿಷಯವೇ ಆಗಿದೆ. ಹೀಗೆ ಅತ್ಯಂತ ಹಳೆಯ ಭಾಷೆಗಳಲ್ಲಿ ಒಂದಾದ, ಜಗತ್ತಿನಾದ್ಯಂತ ಬಹುಸಂಖ್ಯಾತರು ಬಳಸುವ ಕನ್ನಡ ನುಡಿ ಅನೇಕ ಅವಸ್ಥಾಂತರಗಳನ್ನು ದಾಟಿಕೊಂಡು ಇಂದಿನ ಸ್ಥಿತಿಗೆ ಬಂದಿದೆ. ಇಂಥ ಭವ್ಯ ಪರಂಪರೆ ಇರುವ, ಸ್ವತಂತ್ರ ಸಾಹಿತ್ಯ ಸೃಷ್ಟಿ ಕಾರ್ಯವನ್ನು ಕೈಗೊಂಡಿರುವ ಕನ್ನಡ ಭಾಷೆ ನಡೆದುಬಂದ ದಾರಿಯೇ ರೋಚಕವಾಗಿದೆ.

ಕನ್ನಡ ಲಿಪಿಯಲ್ಲಿ ಸಾಹಿತ್ಯ ರಚನೆಯಾದದ್ದು ನಮಗೆ ದೊರೆತ ದಾಖಲೆಗಳ ಪ್ರಕಾರ ೮ನೇ ಶತಮಾನದ ಶಿವಕೋಟಾಚಾರ್ಯರ ವಡ್ಡಾರಾಧನೆ ಕೃತಿಯಿಂದ. ಆ ನಂತರದಲ್ಲಿ ಪಂಪನ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಮಹಾಕಾವ್ಯಗಳು ಸಿಗುತ್ತವೆ. ಅದೇ ಕಾಲಘಟ್ಟದಲ್ಲಿ ರನ್ನ, ಪೊನ್ನ, ಜನ್ನ ಮುಂತಾದ ಚಂಪೂ ಪ್ರಕಾರದ ಸಾಹಿತ್ಯ ಹೇರಳವಾಗಿ ಸಿಗುತ್ತದೆ. ಅಲ್ಲಿಂದ ಇಲ್ಲಿಯವರೆಗೆ ಬೃಹತ್ ಪ್ರಮಾಣದಲ್ಲಿ ಸಾಹಿತ್ಯ ರಚನೆಯಾಗಿದೆ. ೧೨ನೇ ಶತಮಾನದಲ್ಲಿನ ವಚನ ಸಾಹಿತ್ಯ, ೧೩, ೧೪ನೇ ಶತಮಾನಗಳಲ್ಲಿ ಕುಮಾರವ್ಯಾಸ, ಹರಿಹರ, ರಾಘವಾಂಕ ಮುಂತಾದ ಕವಿಗಳನ್ನು ನೋಡಬಹುದು. ೧೫, ೧೬ನೇ ಶತಮಾನದಲ್ಲಿ ಕೀರ್ತನ ಸಾಹಿತ್ಯ, ತದನಂತರ ತತ್ವಪದ ಸಾಹಿತ್ಯವನ್ನು ನೋಡುತ್ತೇವೆ. ೧೮, ೧೯ನೇ ಶತಮಾನದಲ್ಲೂ ಅನೇಕ ಕೃತಿಗಳು ದೊರಕುತ್ತವೆ. ಈ ಎಲ್ಲ ಸಾಹಿತ್ಯದಂತೆ ಆಧುನಿಕ ಸಾಹಿತ್ಯದಲ್ಲೂ ಕೂಡ ಜಾಗತಿಕ ಮಟ್ಟದಲ್ಲಿ ನಿಲ್ಲಬಲ್ಲ ಸಾಹಿತ್ಯ ಕನ್ನಡದಲ್ಲಿ

Scanned with CamScanner

ರಚನೆಯಾಗಿದೆ. ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ ಮುಂತಾದವರನ್ನು ಇಲ್ಲಿ ಉಲ್ಲೇಖಿಸಬಹುದು. ಭಾರತದ ಯಾವ ಭಾಷೆಯಲ್ಲೂ ಮೊರಕದಷ್ಟು ಜ್ಞಾನಪೀಠ ಪ್ರಶಸ್ತಿಗಳು ಕನ್ನಡಕ್ಕೆ ಬಂದಿವೆ. ಈಗಲೂ ಕೂಡ ಕನ್ನಡದಲ್ಲಿ ಅಪಾರವಾದ ಸಾಹಿತ್ಯ (ಕತೆ, ಕಾದಂಬರಿ, ನಾಟಕ, ಪ್ರಬಂಧ ಮುಂತಾದ ಪ್ರಕಾರಗಳಲ್ಲಿ) ಸೃಷ್ಟಿಯಾಗುತ್ತಿದೆ ಎನ್ನವುದು ಹೆಮ್ಮೆಯ ವಿಷಯವಾಗಿದೆ.

ಹತ್ತನೇ ಶತಮಾನದಿಂದಲೇ ಅಂದರೆ ಸುಮಾರು ಒಂದು ಸಾವಿರ ವರ್ಷಗಳ ಹಿಂದೆಯೇ ಕನ್ನಡ ನುಡಿಯಲ್ಲಿ ಜಾಗತಿಕ ಮಟ್ಟದಲ್ಲಿ ನಿಲ್ಲಬಲ್ಲ ಉತ್ಕೃಷ್ಟವಾದ ಸಾಹಿತ್ಯ ನಿರ್ಮಾಣಗೊಂಡಿದೆ. ವಚನ ಸಾಹಿತ್ಯ, ಭಕ್ತಿಸಾಹಿತ್ಯ, ತತ್ವಸಾಹಿತ್ಯದ ಮೂಲಕ ಸ್ವತಂತ್ರ ಜ್ಞಾನ ಸೃಷ್ಟಿಮಾಡಿರುವ ಕನ್ನಡಕ್ಕೆ ಒಂದು ಭವ್ಯ ಪರಂಪರೆಯೇ ಇದೆ. ಸುದೀರ್ಘ ಇತಿಹಾಸ, ಉತ್ಕೃಷ್ಟ ಸಾಹಿತ್ಯ ರಚನೆ, ತನ್ನದೇ ಜ್ಞಾನ ಸೃಷ್ಟಿ ಇರುವುದರಿಂದಲೇ ಇಂದು ಶಾಸ್ತೀಯ ಸ್ಥಾನಮಾನವೂ ಪಡೆದ ಭಾರತದ ಐದಾರು (ಸಂಸ್ಕೃತ, ತಮಿಳು, ಕನ್ನಡ, ತೆಲುಗು, ಮಲಯಾಳಂ) ಭಾಷೆಗಳಲ್ಲಿ ಕನ್ನಡವೂ ಒಂದಾಗಿದೆ. ಇದಕ್ಕೆ ಮುಖ್ಯವಾದ ಕೆಲವು ಕಾರಣಗಳನ್ನು ಕೊಡಲಾಗಿದೆ.

ಕನ್ನಡ ಭಾಷೆಯ ವೈವಿಧ್ಯತೆ

ಭಾರತ ದೇಶವೇ ಒಂದು ವೈವಿಧ್ಯಮಯವಾದ ದೇಶವಾಗಿದೆ. ಭೌಗೋಳಿಕವಾಗಿ ಉತ್ತರದಲ್ಲಿ ಗಗನದೆತ್ತರಕ್ಕೆ ಚಾಚಿಕೊಂಡು ಕಣ್ಣನ ಸೆಳೆಯುವ ಹಿಮಾಲಯ ಪರ್ವತ ಶ್ರೇಣಿಗಳಿಂದ ಕೂಡಿದ ಪ್ರದೇಶ, ಭಾರತದ ಪೂರ್ವ, ಪಶ್ಚಿಮ ಮತ್ತು ದಕ್ಷಿಣಕ್ಕೆ ಇರುವ ವಿಶಾಲವಾದ ಕಡಲ ತೀರಗಳು, ನೂರಾರು ದ್ವೀಪಗಳು, ನಿತ್ಯಹರಿದ್ವರ್ಣದಂತೆ ಚಾಚಿಕೊಂಡ ಮಲೆನಾಡಿನ ಘಟ್ಟಗಳು, ಪರ್ವತ ಶ್ರೇಣಿಗಳೂ, ದಟ್ಟ ಕಾನನಗಳು, ವಿಶಾಲವಾದ ಬಯಲು ಸೀಮೆ, ಭಯ ಹುಟ್ಟಿಸುವ ಮರುಭೂಮಿ, ಎಲ್ಲವೂ ಇಲ್ಲಿದೆ.

ಸಾಮಾಜಿಕವಾಗಿ ಹತ್ತಾರು ಧರ್ಮಗಳು, ಸಾವಿರಾರು ಜಾತಿ ಉಪ ಜಾತಿಗಳು ಒಟ್ಟಿಗೆ ಇವೆ. ಹಾಗೆಯೇ ಉತ್ತರದಿಂದ ದಕ್ಷಿಣದವರೆಗೆ ನೂರಾರು ಭಾಷೆಗಳು ಮತ್ತು ಉಪ ಭಾಷೆಗಳನ್ನು ಹೊಂದಿರುವ ವೈವಿಧ್ಯಮಯ ಭಾಷೆಗಳ ಬಳಕೆಯೂ ಇಲ್ಲಿದೆ. ಸಾವಿರಾರು ವರ್ಷಗಳ ಸುದೀರ್ಘ ಚರಿತ್ರೆ ಇರುವ ಭಾರತದಲ್ಲಿ ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಜಗತ್ತನ್ನೇ ತನ್ನೆಡೆಗೆ ಸೆಳೆಯುವಂತೆ ಮಾಡಿದೆ. ಕರ್ನಾಟಕ ರಾಜ್ಯ ಕೂಡ ಇದೇ ರೀತಿಯಲ್ಲಿ ಬಹುತ್ವದೊಂದಿಗೆ ವೈವಿಧ್ಯಮಯವಾಗಿದೆ.

ಕರ್ನಾಟಕದಲ್ಲಿ ಅಧಿಕೃತ ಭಾಷೆ ಕನ್ನಡವೇ ಆಗಿದ್ದರೂ ಅದರ ಜೊತೆಗೆ ಹಲವು ಭಾಷೆಗಳ ಬಳಕೆಯೂ ಇದೆ. ಹಾಗೇನೆ ಬಳಕೆಯಾಗುತ್ತಿರುವ ಕನ್ನಡ ಒಂದೇ ಆಗಿದ್ದರೂ ಒಂದು ಕನ್ನಡವಲ್ಲ. ಹಲವು ಕನ್ನಡಗಳಿವೆ. ಪ್ರಾದೇಶಿಕವಾಗಿ

ಬೀದರ್ ಕನ್ನಡ, ಚಾಮರಾಜನಗರ ಕನ್ನಡ, ಬೆಂಗಳೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ, ಬೆಳಗಾವಿ ಕನ್ನಡ, ಬಳ್ಳಾರಿ ಕನ್ನಡಗಳು ಬೇರೆ ಬೇರೆಯಾಗಿಯೇ ಇವೆ. ಅದೇ ರೀತಿ ಸಾಮಾಜಿಕವಾಗಿ ಬ್ರಾಹ್ಮಣರು ಆಡುವ ಕನ್ನಡ,

ಜಗತ್ತಿನಲ್ಲಿ ಅತಿ ಹೆಚ್ಚು ಜನರು ಬಳಸುತ್ತಿರುವ ೨೫ ಭಾಷೆಗಳು

ಕ್ರ ಸಂ	ಬಳಕೆಯಾಗುವ ಭಾಷೆ	ಭಾಷೆಯ ಗುಂಪು	ಮೊದಲ ಭಾಷೆಯಾಗಿ ಬಳಕೆಯಾಗುವ ಜನಸಂಖ್ಯೆ (ಮಿಲಿಯನ್‌ಗಳಲ್ಲಿ)	೨ನೇ ಭಾಷೆಯಾಗಿ ಬಳಸುತ್ತಿರುವ ಭಾಷಿಕರ ಸಂಖ್ಯೆ (ಮಿಲಿಯನ್‌ಗಳಲ್ಲಿ)	ಭಾಷೆಯನ್ನು ಬಳಸುವ ಒಟ್ಟು ಜನಸಂಖ್ಯೆ (ಮಿಲಿಯನ್‌ಗಳಲ್ಲಿ)
೧೧	ಮುಂಡಾರಿಯನ್ (ಚೈನೀಸ್)	ಸೈನೊ ಟಿಬೇಟನ್	೯೨೧.೫	೧೯೮.೭	೧೧೨೦.೦
೦೨	ಸ್ಪ್ಯಾನಿಷ್	ಇಂಡೋ ಯುರೋಪಿಯನ್	೪೬೩.೦	೭೪.೯	೫೩೭
೦೩	ಇಂಗ್ಲೀಶ್	ಇಂಡೋ ಯುರೋಪಿಯನ್	೩೭೯.೭	೯೯೮.೪	೧೨೬೮.೦
೦೪	ಹಿಂದಿ	ಇಂಡೋ ಯುರೋಪಿಯನ್	೩೪೨.೦	೨೯೫.೩	೬೩೭.೩
೦೫	ಬಂಗಾಳಿ	ಇಂಡೋ ಯುರೋಪಿಯನ್	೨೨೮.೫	೩೬.೮	೨೬೫.೨
೦೬	ಪೋರ್ಚುಗೀಸ್	ಇಂಡೋ ಯುರೋಪಿಯನ್	೨೨೭.೯	೨೪.೨	೨೫೨.೨
೦೭	ರಷ್ಯಿಯನ್	ಇಂಡೋ ಯುರೋಪಿಯನ್	೧೫೫.೭	೧೦೪.೩	೨೫೮.೦
೦೮	ಜಪಾನೀಸ್	ಜಾಪೋನಿಕ್	೧೨೬.೨	೦.೨	೧೨೬.೪
೦೯	ಯೂ ಚೈನೀಸ್	ಸೈನೊ ಟಿಬೇಟನ್	೮೪.೫	೦.೪೦೨	೮೪.೯
೧೦	ಮರಾಠಿ	ಇಂಡೋ ಯುರೋಪಿಯನ್	೮೩.೧	೧೨.೭	೯೫.೮
೧೧	ತೆಲುಗು	ದ್ರಾವಿಡಿಯನ್	೮೨.೪	೧೧.೦	೯೩.೪
೧೨	ವೂ ಚೈನೀಸ್	ಸೈನೊ ಟಿಬೇಟನ್	೮೧.೭	೦.೦೬೩	೮೧.೮
೧೩	ಟರ್ಕಿಷ್	ಟರ್ಕಿಕ್	೭೯.೫	೫.೭	೮೫.೨
೧೪	ತಮಿಳು	ದ್ರಾವಿಡಿಯನ್	೭೭.೮	೭.೦	೮೫.೮
೧೫	ಫ್ರೆಂಚ್	ಇಂಡೊ ಯುರೋಪಿಯನ್	೭೭.೩	೧೯೯.೩	೨೭೭.೬
೧೬	ವಿಯೆಟ್‌ನಾಮೀಸ್	ಆಸ್ಟೋ ಏಷಿಯಾಟಿಕ್	೭೬.೦	೧.೦೦	೭೭.೦
೧೭	ಜರ್ಮನ್	ಇಂಡೋ ಯುರೋಪಿಯನ್	೭೫.೫	೫೬.೧	೧೩೧.೬
೧೮	ಉರ್ದು	ಇಂಡೊ ಆರ್ಯನ್	೬೯.೦	೧೦೧.೬	೧೭೦.೬
೧೯	ಇಟಾಲೀಯನ್	ಇಂಡೋ ಆರ್ಯನ್	೬೪.೬	೩.೧	೬೭.೭
೨೦	ಗುಜರಾತಿ	ಇಂಡೊ ಯುರೋಪಿಯನ್	೫೬.೫	೪.೨	೬೦.೭
೨೧	ಭೋಜಪುರಿ	ಇಂಡೊ ಯುರೋಪಿಯನ್	೫೨.೨	೧.೧೬೦	೫೩.೪
೨೨	ಸದರನ್‌ಮಿನ್	ಸೈನೊ ಟಿಬೇಟನ್	೪೮.೨	೦.೩೪೭	೪೮.೫
೨೩	ಹಾ ಉಸಾ	ಆಫ್ರೋ ಏಷಿಯಾಟಿಕ್	೪೭.೭	೨೫.೦	೭೨.೭
೨೪	ಇಂಡೋನೇಷಿಯನ್	ಆಸ್ಟೋನೇಷಿಯನ್	೪೩.೭	೧೫೫.೪	೧೯೯.೦
೨೫	ಕನ್ನಡ	ದ್ರಾವಿಡಿಯನ್	೪೩.೭	೧೨.೯	೫೬.೫

Scanned with CamScanner

ಲಿಂಗಾಯಿತರು ಬಳಸುವ ಕನ್ನಡ, ಗೌಡ ಜನಾಂಗದವರು ಬಳಸುವ ಕನ್ನಡ, ಇತರೆ ಹಿಂದುಳಿದ ವರ್ಗಗಳು ಬಳಸುವ ಕನ್ನಡ ಮತ್ತ ದಲಿತ, ಬುಡಕಟ್ಟು ಜನರು ಬಳಸುವ ಕನ್ನಡಗಳು ಬೇರೆ ಬೇರೆಯಾಗಿಯೇ ಇವೆ. ಉದಾಹರಣೆಗೆ:– ಪ್ರಾದೇಶಿಕವಾಗಿ ದಕ್ಷಿಣ ಕರ್ನಾಟಕದಲ್ಲಿ ತಿಂಡಿ ಎನ್ನುವ ಪದಕ್ಕೆ ಬೆಳಗ್ಗಿನ ಉಪಾಹಾರ ಎಂದರ್ಥವಿದ್ದರೆ ಉತ್ತರ ಕರ್ನಾಟಕದಲ್ಲಿ ತಿಂಡಿ ಎನ್ನುವ ಪದಕ್ಕೆ ತೆವಲು, ತುರಿಕೆ ಎನ್ನುವ ಅರ್ಥ ಇದೆ. ಹಾಗೇನೆ ಉತ್ತರ ಕರ್ನಾಟಕದಲ್ಲಿ ಸಿರ ಎಂದರೆ ಒಂದು ಸಿಹಿ ತಿನಿಸು. (ಕೇಸರಿ ಬಾತ್) ದಕ್ಷಿಣ ಕರ್ನಾಟಕದಲ್ಲಿ ಸಿರ ಎಂದರೆ ತಲೆ ಎನ್ನುವ ಅರ್ಥ ಇದೆ. ಉತ್ತರ ಕರ್ನಾಟಕದಲ್ಲಿ ಭತ್ತಕ್ಕೆ ಕಳವಿ ಎಂದು ಕರೆದರೆ, ದಕ್ಷಿಣ ಕರ್ನಾಟಕದಲ್ಲಿ ನೆಲ್ಲು, ಭತ್ತ ಎನ್ನುವ ರೂಪಗಳು ದೊರಕುತ್ತವೆ. ಹಾಗೇನೆ ಉಚ್ಚಾರಣೆಯಲ್ಲೂ ಕೂಡ ಪ್ರಾದೇಶಿಕವಾಗಿ ಮತ್ತು ಸಾಮಾಜಿಕವಾಗಿ ಅನೇಕ ವೈವಿಧ್ಯತೆಗಳು ಇರುವುದನ್ನು ಕಾಣುತ್ತೇವೆ.

ಕನ್ನಡ ಭಾಷೆಯನ್ನು ಚಾರಿತ್ರಿಕವಾಗಿ, ಪ್ರಾದೇಶಿಕವಾಗಿ ಮತ್ತು ಸಾಮಾಜಿಕವಾಗಿ ಈ ವೈವಿಧ್ಯತೆಯಿಂದ ಕೂಡಿದ್ದು ವೈಶಿಷ್ಟ್ಯಪೂರ್ಣವೂ ಆಗಿದೆ. ಕರ್ನಾಟಕದ ಇತಿಹಾಸ, ಕನ್ನಡದ ಚರಿತ್ರೆ, ಕರ್ನಾಟಕ ರಾಜ್ಯದ ಭೌಗೋಳಿಕ, ಸಾಮಾಜಿಕ ಮತ್ತು ಭಾಷಿಕ ವೈವಿಧ್ಯತೆ ದಿಗಿಲು ಹುಟ್ಟಿಸಿದರೂ ಆಶ್ಚರ್ಯಪಡಬೇಕಿಲ್ಲ. ಹಾಗಾಗಿ ಕರ್ನಾಟಕದಲ್ಲಿ ಇರುವ ಎಲ್ಲರೂ ಈ ವೈವಿಧ್ಯತೆಯನ್ನು ತಿಳಿದಿದ್ದರೆ ಕರ್ನಾಟಕದ ಪರಿಸರವನ್ನು, ಜನರನ್ನು, ಅವರ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗುತ್ತದೆ. ಆದ್ದರಿಂದ, ಈ ವೈವಿಧ್ಯತೆಯನ್ನು ಋಣಾತ್ಮಕವಾಗಿ ಪರಿಗಣಿಸದೆ, ಧನಾತ್ಮಕವಾಗಿ ಪರಿಗಣಿಸಿದರೆ ಕನ್ನಡ, ಕನ್ನಡಿಗರು ಮತ್ತು ಕರ್ನಾಟಕದ ಅಭಿವೃದ್ಧಿಗೆ ಮತ್ತು ಸಹಬಾಳ್ವೆಗೆ ಅನುಕೂಲವಾಗುತ್ತದೆ.

ಆಶಯ

ಯಾವುದೇ ಒಂದು ಭಾಷೆಗೂ ಮತ್ತು ಆ ಭಾಷೆಯನ್ನು ಬಳಸುವ ಜನರಿಗೂ ಮತ್ತು ಆ ಜನರು ನೆಲೆನಿಂತಿರುವ ಪ್ರದೇಶಕ್ಕೂ ಒಂದು ಅವಿನಾಭಾವ ಸಂಬಂಧ ಇರುತ್ತದೆ. (ಕನ್ನಡ+ಕನ್ನಡಿಗ+ಕರ್ನಾಟಕ) ಈ ಅವಿನಾಭಾವ ಸಂಬಂಧ ಇರುವುದರಿಂದಲೇ ನಾನು, ನನ್ನ ಭಾಷೆ, ನನ್ನ ಜನ ಮತ್ತು ನನ್ನ ಊರು, ನನ್ನ ಪ್ರದೇಶ ಎನ್ನುವ ಅಭಿಮಾನ ಮೂಡುತ್ತದೆ. ಆದ್ದರಿಂದಲೇ ಈ ವಿಷಯವನ್ನು ಕುರಿತು ಮಾತನಾಡುವಾಗ ಸಹಜವಾಗಿಯೇ ಭಾವುಕರಾಗುತ್ತೇವೆ. ಹೀಗೆ ಭಾವನಾತ್ಮಕ ಸಂಬಂಧ ಏರ್ಪಡಲು ಕಾರಣವೂ ಇದೆ. ನಾವು ಬಳಸುವ ಭಾಷೆ ಅದು ಕೇವಲ ಸಂವಹನಕ್ಕಾಗಿ ಬಳಸುವ ಸಾಧನವಷ್ಟೇ ಆಗಿರದೇ ಅದು ನಮ್ಮ ಜೀವನದ ಪ್ರತೀಕವೂ ಆಗಿರುತ್ತದೆ. ಯೋಚನೆಯ ವಿಧಾನವೂ ಆಗಿರುತ್ತದೆ. ಹಾಗಾಗಿ ಒಂದು ಭಾಷೆಯನ್ನು

ಬಳಸುವ ಭಾಷಿಕರಿಗೆ ತಮ್ಮ ಭಾಷೆಯ ಬಗೆಗೆ, ಆ ಭಾಷೆಯನ್ನು ಬಳಸುವ ಜನರ ಬಗೆಗೆ ನಾವು ನಮ್ಮವರು, ನಮ್ಮ ಭಾಷೆ ಎನ್ನುವ ಭಾವನೆ ಹುಟ್ಟಿಕೊಂಡಿರುತ್ತದೆ. (ನಾವು ಬಳಸುವ ಭಾಷೆಯನ್ನು ಬಳಸುವ ಪ್ರದೇಶವನ್ನು ಬಿಟ್ಟು ದೂರ ಹೋದಾಗ ಇದರ ಅನುಭವ ಹೆಚ್ಚಾಗಿ ಆಗುತ್ತದೆ.) ಹಾಗೇನೆ ನಾವು ನೆಲೆಸಿರುವ ಊರು, ಕೇರಿ, ಪ್ರದೇಶ, ತಾಲೂಕು, ಜಿಲ್ಲೆ, ರಾಜ್ಯ, ದೇಶಗಳವರೆಗೆ ನಮ್ಮದು ಎನ್ನುವ ಭಾವ ಬಂದಿರುವುದರಿಂದಲೇ ಭಾರತ ಸ್ವತಂತ್ರ ದೇಶವಾಗಲು, ೧೯೫೬ರಲ್ಲಿ ಭಾಷಾವಾರು ರಾಜ್ಯಗಳ ನಿರ್ಮಾಣ ಆಗಲೂ ಕಾರಣವಾಗಿದೆ. ಅಷ್ಟೇ ಅಲ್ಲ ಇಂಥ ಭಾವನಾತ್ಮಕ ಕಾರಣಗಳಿಗಾಗಿಯೇ ಭಾಷಿಕ ಚಳುವಳಿಗಳು ನಡೆದು ದೇಶ, ದೇಶಗಳ ವಿಭಜನೆಯೂ ಆಗಿದೆ. (ಉದಾ:– ಪಾಕಿಸ್ತಾನದ ಪೂರ್ವ ಭಾಗವಾಗಿದ್ದ ಪೂರ್ವ ಪಾಕಿಸ್ತಾನ, ಪ್ರತ್ಯೇಕ ಬಾಂಗ್ಲಾದೇಶವಾಗಲು ಕಾರಣವಾಯಿತು) ಒಂದು ಭಾಷೆಗೂ, ಅದನ್ನು ಬಳಸುವ ಜನರಿಗೂ ಮತ್ತು ಅವರು ನೆಲೆನಿಂತ ಪ್ರದೇಶಕ್ಕೂ (ಜೈವಿಕವಾಗಿ ಯಾವುದೇ ಸಂಬಂಧ ಇರದಿದ್ದರೂ) ಇರುವ ಭಾವನಾತ್ಮಕ ಸಂಬಂಧವನ್ನು ಅರಿಯುವುದು ಅವಶ್ಯ. ಹಾಗೇನೆ ನಾವು ಬಳಸುವ ಭಾಷೆ, ಅದು ಬೆಳೆದು ಬಂದ ಬಗೆ, ಅದರ ಬಳಕೆಯ ವ್ಯಾಪ್ತಿ ಮತ್ತು ಅದರ ವೈವಿಧ್ಯತೆ ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ. ಆ ಹಿನ್ನೆಲೆಯಲ್ಲಿ ಕನ್ನಡ ಮನೆಮಾತಾಗಿರುವ ಪ್ರತಿಯೊಬ್ಬರೂ ಕನ್ನಡವನ್ನು ಕುರಿತಂತೆ ಕನಿಷ್ಠ ಮಟ್ಟದ ಈ ತಿಳಿವು ಇರಬೇಕಾಗುತ್ತದೆ. ಈ ತಿಳಿವು ಕರ್ನಾಟಕದ ಜನರೊಂದಿಗೆ ಬೆರೆಯಲು, ಈ ನಾಡಿನ ಸಮಾಜವನ್ನು ಅರ್ಥಮಾಡಿಕೊಳ್ಳಲು, ಸಂಬಂಧವನ್ನು ಬೆಸೆಯಲು ಮತ್ತು ಅನೇಕ ವಿಷಯಗಳನ್ನು ಸಂವಹನಗೊಳಿಸಲು ಅನುಕೂಲವಾಗುತ್ತದೆ. ಆ ಕಾರಣಕ್ಕಾಗಿ ಕನ್ನಡ ಭಾಷೆಯ ಸಂಕ್ಷಿಪ್ತ ಚರಿತ್ರೆಯನ್ನು ಇಲ್ಲಿ ನೀಡಲಾಗಿದೆ.

ಲೇಖಕರ ಪರಿಚಯ

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಕನ್ನಡ ನಾಟಕ, ರಂಗಭೂಮಿ ಅಧ್ಯಯನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಅಶೋಕಕುಮಾರ ರಂಜೇರೆ ಅವರು ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಭಾಷೆ ಮತ್ತು ಶಿಕ್ಷಣ, ಭಾಷೆ ಸಮಾಜ ಶಿಕ್ಷಣ, ವಿವಿಧ ವೃತ್ತಿಪದ ಕೋಶ, ಪದ ವಿನ್ಯಾಸ, ಸಾಹಿತ್ಯ ಮತ್ತು ಇತಿಹಾಸದ ಸಂಬಂಧಗಳು: ಸಂಸರ ನಾಟಕಗಳ ಮುಖೇನ, ಮೂಕ ನಾಟಕ, ಡಾ.ಎಚ್.ನರಸಿಂಹಯ್ಯ ಎನ್ನುವ ಸ್ವತಂತ್ರ ಕೃತಿಗಳು ಪ್ರಕಟಗೊಂಡಿವೆ. ಭಾಷಾ ಮಾಧ್ಯಮದ ವಾಗ್ವಾದಗಳು ಎನ್ನುವ ಸಂಪಾದಿತ ಕೃತಿಯ ಜೊತೆಗೆ ಕೃಷಿ ಪದಕೋಶ, ದಿನ ದಿನ, ಆಡಳಿತ ಕನ್ನಡ ಎನ್ನುವ ಭಾಷಾ ಸಂಬಂಧಿ ಕೃತಿಗಳನ್ನು, ನುಡಿ ಭಿನ್ನಪ, ತಾಂತ್ರಿಕ ಕನ್ನಡ ಎನ್ನುವ ಪತ್ಯ ಪುಸ್ತಕಗಳು ಇವರು ಇತರರೊಂದಿಗೆ ಸಂಪಾದಿಸಿದ ಸಂಪಾದನಾ ಕೃತಿಗಳು.

Scanned with CamScanner

ಕಳೆದ ೨೮ ವರ್ಷಗಳಿಂದ ಕನ್ನಡ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕೆಲಸಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಡಾ. ಅಶೋಕಕುಮಾರ ರಂಜೇರೆ ಅವರು ಕನ್ನಡ ವಿಶ್ವವಿದ್ಯಾಲಯದಲ್ಲಿ ಯೋಜನಾ ಸಹಾಯಕರಾಗಿ, ಸಹಾಯಕ ಪ್ರಾಧ್ಯಾಪಕರಾಗಿ, ಸಹ ಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಡಾ.ಕೆ.ವಿ.ನಾರಾಯಣ ಮತ್ತು ವಿಭಾಗದ ಸಹೋದ್ಯೋಗಿ ಮಿತ್ರರೊಂದಿಗೆ ಸೇರಿ ಕೃಷಿ ಪದಕೋಶ, ಭಾಷೆ: ವಿಷಯ ವಿಶ್ವಕೋಶ, ಕನ್ನಡದಲ್ಲಿ ಇಂಗ್ಲೀಷ್ ಪದಕೋಶ, ಕನ್ನಡ ಉಪಭಾಷಾ ಪದಕೋಶ, ಬಂಜಾರ-ಕನ್ನಡ ನಿಘಂಟಿನಂತಹ ಬೃಹತ್ ಯೋಜನೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಈ ಎಲ್ಲ ಶೈಕ್ಷಣಿಕ ಕೆಲಸಗಳ ಜೊತೆಗೆ ಕುಲಸಚಿವರಾಗಿ, ಅಧ್ಯಯನಾಂಗದ ನಿರ್ದೇಶಕರಾಗಿ, ಲಲಿತ ಕಲೆಗಳ ನಿಕಾಯದ ಡೀನ್‌ರಾಗಿ, ವಿಶೇಷ ಕಾರ್ಯನಿರ್ವಹಣಾಧಿಕಾರಿಯಾಗಿ ಆಡಳಿತಾತ್ಮಕ ಹುದ್ದೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಪ್ರಸ್ತುತ ಇವರು ಕನ್ನಡ ವಿಶ್ವವಿದ್ಯಾಲಯದ, ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಕಳೆದ ಒಂದು ದಶಕದಿಂದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಪೂರಕ ಓದು

೧. ಕನ್ನಡ ಭಾಷೆಯ ಸಂಕ್ಷಿಪ್ತ ಚರಿತ್ರೆ: ೧೯೯೯, ಕೃಷ್ಣಯ್ಯ ಎಂ.ಎಚ್., ಅಂಕಿತ ಪ್ರಕಾಶನ, ಗಾಂಧಿ ಬಜಾರ್, ಬಸವನಗುಡಿ, ಬೆಂಗಳೂರು- ೦೪

೨. ಭಾಷೆ ವಿಷಯ ವಿಶ್ವಕೋಶ, ೨೦೦೯, (ಸಂ) ನಾರಾಯಣ ಕೆ.ವಿ., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಸಾಮಾಜಿಕ ಉಪಭಾಷೆ : ೨೦೦೦, ಮಹಾದೇವಯ್ಯ ಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ -ಶಿಲಾ ೨೭೭

೪. ಕನ್ನಡ ಭಾಷೆಯ ಪ್ರಭೇದಗಳು : ೨೦೧೩, ಸಂಗಮೇಶ ಸವದತ್ತಿಮಠ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೫. ಕನ್ನಡ-ಕನ್ನಡಿಗ-ಕರ್ನಾಟಕ : ೧೯೯೯, ಶೇಷಗಿರಿರಾವ್ ಎಲ್.ಎಸ್., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಭಾಗ – ೨
ಆಧುನಿಕ ಪೂರ್ವ ಕನ್ನಡ ಕಾವ್ಯ
(ವಚನ ಸಾಹಿತ್ಯದಿಂದ ಈಚೆಗೆ)

Scanned with CamScanner

ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಕನ್ನಡ ಸಂಶೋಧನೆ

ಸಂಪಾದಕರು
ಡಾ. ಪಿ. ಮಹಾದೇವಯ್ಯ
ಸಂಪಾದಕ ಮಂಡಳಿ
ಡಾ. ಡಿ. ಪಾಂಡುರಂಗ ಬಾಬು
ಡಾ. ಅಶೋಕಕುಮಾರ ರಂಜೇರೆ

ಸಂಚಿಕೆ
೭೨

ಅಯ್ಯಾ ಎಂದರೇ....

ಡಿ.ಪಾಂಡುರಂಗ ಬಾಬು

'ಅಯ್ಯಾ ಎಂದರೆ ಸ್ವರ್ಗ ಯೆಲವೋ ಎಂದರೆ ನರಕ ನಡುಗನ್ನಡ ಸಾಹಿತ್ಯದ ವಚನವೊಂದರಲ್ಲಿ ಅಯ್ಯಾ ಮತ್ತು ಎಲವೋ ಎಂಬ ಎರಡು ರಚನೆಗಳ ಬಳಕೆಯ ಸಾಮಾಜಿಕ ಪರಿಣಾಮಗಳನ್ನು ಕುರಿತು ದಾಖಲಾಗಿರುವ ಚಾರಿತ್ರಿಕ ಮಹತ್ವದ ಸಾಲುಗಳಿವು. ಅಯ್ಯಾ ಮತ್ತು ಯೆಲವೋ ರಚನೆಗಳ ಬೆಳವಣಿಗೆ ಅವು ಬೇರೆ ಬೇರೆ ನೆಲೆಗಳಲ್ಲಿ ಬಳಕೆಗೊಳ್ಳುತ್ತಾ ಪ್ರಸ್ತುತ ಕರ್ನಾಟಕದ ಉಪ ಮುಖ್ಯ ಮಂತ್ರಿಗಳು ಇತ್ತೀಚೆಗೆ ಅವರ ಅಧೀನದಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಇಲಾಖೆಯ ನೌಕರರನ್ನು ಉದ್ದೇಶಿಸಿ ಮಾತನಾಡುವಾಗ 'ಬಸ್ ಪ್ರಯಾಣಿಕರನ್ನು ಏನಯ್ಯ, ಬಾರಯ್ಯ ಎಂದು ಸಂಬೋಧಿಸಬೇಡಿ, ಸಾರ್ ಎಂದು ಸಂಬೋಧಿಸಿ' ಎಂಬ ಮಾತುಗಳನ್ನು ಒಳಗೊಂಡ ಸಲಹೆ ನೀಡಿದ್ದಾರೆ. ಈ ಸಲಹೆ ನೀಡಿದ್ದುದರ ಔಚಿತ್ಯವನ್ನು ಪ್ರಶ್ನಿಸುವುದು ಈ ಘಟನೆಯನ್ನು ಉಲ್ಲೇಖಿಸಿರುವ ಉದ್ದೇಶವಲ್ಲ. ಬದಲಿಗೆ ಭಾಷಾ ರೂಪವೊಂದು ಸಾಮಾಜಿಕ ನೆಲೆಗಳಲ್ಲಿ ತನ್ನ ಕ್ರಿಯಾತ್ಮಕತೆಯನ್ನು ಪಲ್ಲಟಗೊಳಿಸಿಕೊಂಡ ಅಂಶವನ್ನು ವಿವರಿಸುವ ಪ್ರಯತ್ನಕ್ಕೆ ಪೂರಕವಾಗಿ ಮಾತ್ರ ಇಲ್ಲಿ ಉಲ್ಲೇಖಿಸಿದೆ. 'ಅಯ್ಯಾ' ಎಂಬ ರಚನೆ ಗೌರವ ವಾಚಕವಾಗಿಯೂ ಎಲವೋ ಎಂಬ ರಚನೆ ಅಗೌರವ ಸೂಚಕವೂ ಮತ್ತು ನೇತ್ಯಾತ್ಮಕ ಅಭಿವ್ಯಕ್ತಿ ಸಂದರ್ಭದ, ಕೆಳ ಸ್ತರದ,ಅಧೀನ ವ್ಯಕ್ತಿಗಳ ಮೇಲೆ ಪ್ರಯೋಗವಾಗುವ ರಚನೆಯಾಗಿದೆ. ಇವೆರಡೂ ರೂಪಗಳು ಮಾನವ ಸೂಚಕ ಪುಲ್ಲಿಂಗ ರಚನೆಗಳಾಗಿದ್ದು ಇದರ ವಿವಿಧ ರೂಪಗಳಿಗೆ ಬಳಕೆಯ ಸಾಮಾಜಿಕ ನೆಲೆಗಳನ್ನು ಆಧರಿಸಿ ಬಳಸುವವರ ಮತ್ತು ಪ್ರಯೋಗಕ್ಕೊಳಗಾದವರ ನೆಲೆಯಿಂದ ಸಾಮಾಜಿಕ ಸ್ಥಾನಮಾನಗಳು ಆರೋಪಿತವಾಗುತ್ತವೆ.

ಕನ್ನಡ ಬರಹ ಪರಂಪರೆಯಲ್ಲಿ ಶಾಸನಗಳಿಂದ ಹಿಡಿದು ಇಲ್ಲಿಯವರೆಗೂ ಸಂಬೋಧನೆ, ಉಲ್ಲೇಖ, ಜಾತಿವಾಚಕ, ಗೌರವ ಸೂಚಕ ಮತ್ತು ಪುರುಷ ವ್ಯಕ್ತಿನಾಮಗಳ ಭಾಗವಾಗಿ – ಅಯ್ಯ ಬಳಕೆಯಲ್ಲಿದೆ. ತಳ ಸಮುದಾಯಗಳ ವಚನಕಾರರ ಹೆಸರುಗಳು ಬಹುಪಾಲು ಅಯ್ಯ ವಾರ್ಗಿಕವನ್ನು ಹೊಂದಿರುವಂತಹವೆ ಆಗಿವೆ. ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಜೇಡರ ದಾಸಿಮಯ್ಯ ಮುಂತಾದವರವಿವೆ. –ಅಯ್ಯ ಎಂಬ ಈ ರಚನೆ ದಕ್ಷಿಣ ಭಾರತದ ಎಲ್ಲಾ ದ್ರಾವಿಡ ಭಾಷೆಗಳಲ್ಲಿಯೂ ಮೇಲ್ನೋಟದ ಸಾಮಾನ್ಯ ಗ್ರಹಿಕೆಗೆ ವ್ಯಕ್ತಿನಾಮಗಳ ಭಾಗವಾಗಿಯೂ ತಮಿಳಿನಲ್ಲಿ ಅಯ್ಯಂಗಾರ್ ಎಂಬ ಜಾತಿವಾಚಕದಲ್ಲಿಯೂ ಬಳಕೆಯಲ್ಲಿದೆ.

ಪ್ರಸ್ತುತ ಕನ್ನಡದ ಮಟ್ಟಿಗೆ –ಅಯ್ಯ ಎನ್ನುವ ರಚನೆ ಮೈಸೂರು ಭಾಗದ ಸಾಮಾಜಿಕ ತಳ ಸಮುದಾಯಗಳಲ್ಲಿ (ಬಹುತೇಕ ಬ್ರಾಹ್ಮಣೇತರ ಕನ್ನಡಭಾಷಿಕ ಸಮುದಾಯಗಳಲ್ಲಿ) ತಂದೆಯ ಮತ್ತು ತಾಯಿಯ ತಂದೆಯನ್ನು ಸಂಬೋಧಿಸುವ ಸಂಬೋಧನಾ ರೂಪವಾಗಿ ಮತ್ತು ಅವರನ್ನು ಕುರಿತ ಸಂಬಂಧವಾಚಕವಾಗಿಯೂ ಬಳಕೆಯಲ್ಲಿದೆ. ಈಗ ನಗರ ಮತ್ತು ಆಧುನೀಕರಣದ ಪ್ರಭಾವಕ್ಕೊಳಗಾಗಿರುವ ಗ್ರಾಮೀಣ ಮತ್ತು ಶಿಕ್ಷಿತ ಸಮುದಾಯಗಳಲ್ಲಿ ಅಜ್ಜ ಮತ್ತು ತಾತಾ ಎಂಬ ರೂಪಗಳಿಗೆ ಪಲ್ಲಟಗೊಳ್ಳುತ್ತಿರುವುದು ಕಂಡು ಬರುತ್ತಿದೆ. ಹಾಗೆಯೇ ಕೆಲವು ನಿರ್ದಿಷ್ಟ ಸಮುದಾಯಗಳಲ್ಲಿ ತಂದೆಯನ್ನು ಸಂಬೋಧಿಸಲು ಮತ್ತು ತಂದೆಯನ್ನು ಸೂಚಿಸುವ ಸಂಬಂಧವಾಚಕವಾಗಿಯು ಬಳಕೆಯಲ್ಲಿದೆ.ಈ ರೂಪ ಇಪ್ಪತ್ತನೇ ಶತಮಾನದ ಕೊನೆಯವರೆಗೂ ಕರ್ನಾಟಕದ ಕನ್ನಡ ಭಾಷಿಕರಾಗಿರುವ ಎಲ್ಲ ಜಾತಿ ಸಮುದಾಯಗಳ ವ್ಯಕ್ತಿನಾಮಗಳ ಎರಡನೇ ಭಾಗವಾಗಿ ಅನಿರ್ಬಂಧಿತವಾಗಿ ಬಳಕೆಯಲ್ಲಿದೆ. ಉದಾಹರಣೆಗೆ– ಮಲ್ಲಯ್ಯ–ಆದಿ ಕರ್ನಾಟಕ

Scanned with CamScanner

ತಕ್ಕಂತೆ ಜನರು ಇದ್ದಾರೆ. ಶೀತವಲಯದಲ್ಲಿ, ಸಮಶೀತೋಷ್ಣ ವಲಯದಲ್ಲಿ, ಉಷ್ಣ ವಲಯದಲ್ಲಿ ಒಂದೇ ಬಗೆಯ ಜನಾಂಗ ಇಲ್ಲ. ಇಲ್ಲಿನ ಜನರ ನಡುವೆ ಬಣ್ಣ, ಎತ್ತರ, ಮೈಕಟ್ಟು, ಕೂದಲು ಎಲ್ಲವೂ ಭಿನ್ನವಾಗಿಯೇ ಇವೆ. ಅದಕ್ಕೆ ತಕ್ಕಹಾಗೆ ಭಾಷಾ ವೈವಿಧ್ಯತೆಯೂ ಇದೆ. ಹೀಗೆ ವೈವಿಧ್ಯಮಯವಾಗಿ ರೂಪುಗೊಳ್ಳಲು ಅಲ್ಲಿನ ಗಾಳಿ, ನೀರು, ಭೂಮಿ, ಅದಕ್ಕೆ ತಕ್ಕಹಾಗೆ ಬೆಳೆದ ಆಹಾರ ಎಲ್ಲವೂ ಕಾರಣವಾಗಿದೆ. ಇದಕ್ಕನುಗುಣವಾಗಿ ಅವರ ದೈಹಿಕ ಬೆಳವಣಿಗೆ, ಆರೋಗ್ಯವೂ ಇರುತ್ತದೆ. ಆದರೆ ಆಧುನಿಕ ಸಂದರ್ಭದ ತಿಳುವಳಿಕೆ ಅವರ ಆರೋಗ್ಯಕ್ಕೆ ಸಂಬಂಧಿಸಿದಂತೆ ವೈದ್ಯಕೀಯವಾಗಿ ಒಂದೇ ರೀತಿ ಎಂದು ಪರಿಗಣಿಸಿ ಜಗತ್ತಿನಾದ್ಯಂತ ಇರುವ ಜನರಿಗೆ ಒಂದೇ ಬಗೆಯ ಆರೋಗ್ಯ ಮಾಪನ ಮಾಡುವಂತೆ (ಜಗತ್ತಿನಾದ್ಯಂತ ಇರುವ ಎಲ್ಲರಿಗೂ ರಕ್ತದೊತ್ತಡ (ಬಿ.ಪಿ) ಸಕ್ಕರೆ ಕಾಯಿಲೆಯ ಮಾಪನ ಒಂದೇ ಎಂದು ಪರಿಗಣಿಸಿ ಚಿಕಿತ್ಸೆ ನೀಡುವುದು) ಬದುಕಿನ ವಿಧಾನದಲ್ಲೂ ಅದನ್ನು ಅಳವಡಿಸಿಕೊಳ್ಳುತ್ತಿರುವುದು ಪುರಾತನವೇ ಸರಿ. ಅದೇ ರೀತಿ ಹಲವು ಕನ್ನಡಗಳ ಬದಲಿಗೆ ಒಂದೇ ಕನ್ನಡ ಬಳಸುವ ಅಥವಾ ಸ್ಪಷ್ಟ ಓದು ಮತ್ತು ಶುದ್ಧ ಬರಹದ ಹಿಂದಿನ ವಿಧಾನದಲ್ಲೂ ಇರುವಂತೆ ಕಾಣುತ್ತದೆ. ಅಷ್ಟೇ ಅಲ್ಲ ಸ್ಪಷ್ಟ ಓದು, ಶುದ್ಧ ಬರಹದ ಪರಿಕಲ್ಪನೆಯ ಹಿಂದೆ ಸರಿ–ತಪ್ಪು, ಶ್ರೇಷ್ಠ–ಕನಿಷ್ಠ, ಬುದ್ಧಿವಂತಿಕೆ–ದಡ್ಡತನ, ನಾಗರೀಕ–ಗ್ರಾಮ್ಯ ಎನ್ನುವ ಭಾವನೆಗಳು ಮುನ್ನೆಲೆಗೆ ಬಂದು ಅನೇಕ ವಿದ್ಯಾರ್ಥಿಗಳ ಕಲಿಕೆಗೆ ಹಿನ್ನಡೆಯಾಗುವ ಸಾಧ್ಯತೆಯೂ ಇದೆ. ಇದನ್ನು ತಾಂತ್ರಿಕವಾಗಿ ಮತ್ತು ತಾತ್ವಿಕವಾಗಿ ಬೇರೆ ಬೇರೆಯಾಗಿಯೇ ಚರ್ಚಿಸುವ ಅಗತ್ಯವಿದೆ ಎನಿಸುತ್ತದೆ.

ಗಂಡಾಳು–ಹೆಣ್ಣಾಳು ಪದ ರಚನೆಯ ಉಲಿ ಕಟ್ಟಲೆ

ಪಿ.ಮಹಾದೇವಯ್ಯ

ಕನ್ನಡದಲ್ಲಿ ಉಲಿ ಕಟ್ಟಲೆಗಳು ಪರಸ್ಪರ ಹೊಂದಾಣಿಕೆಯಿಂದ ಬಳಕೆಯಲ್ಲಿವೆ. ಹೀಗೆ ಪರಸ್ಪರ ಹೊಂದಾಣಿಕೆಯಿಂದ ಬಳಕೆಯ ಉಲಿಕಟ್ಟಲೆಗಳನ್ನು ಎರಡು ವಿಧವಾಗಿ ವರ್ಗೀಕರಿಸಬಹುದು. ಒಂದು: ಬರೆಹ ಕನ್ನಡದ ಉಲಿಕಟ್ಟಲೆ ಎರಡು; ಮಾತಿನ ಕನ್ನಡದ ಉಲಿಕಟ್ಟಲೆ. ಈ ಎರಡು ಮಾದರಿಯ ಉಲಿಕಟ್ಟಲೆಗಳು ಬೇರೆಬೇರೆ ಅಲ್ಲ ಒಂದೇ ಹೇಗೆ ಎಂಬುದನ್ನು ತಿಳಿಯಬೇಕಾಗಿದೆ. ಈ ಉಲಿಕಟ್ಟಲೆಗಳನ್ನು ಸಾಂಪ್ರದಾಯಿಕ ವ್ಯಾಕರಣಕಾರರು ಗಂಧಿನಿಯಮ ಎಂದು ಕರೆದಿದ್ದಾರೆ. ಕನ್ನಡದಲ್ಲಿ ಎರಡು ನೆಲೆಯಲ್ಲಿ ಉಲಿ ಕಟ್ಟಲೆಗಳು ಜಾರಿಯಲ್ಲಿವೆ. ಮೊದಲನೆಯದು ಪದ+ಪದ, ಎರಡನೆಯದು ಪದ+ಪ್ರತ್ಯಯ. ಪ್ರಸ್ತುತ ಚರ್ಚೆಯಲ್ಲಿ ಪದ+ ಪದ ಸೇರಿ ಆಗುವ ಕಟ್ಟಲೆಗಳ ಬಗ್ಗೆ ಮಾತ್ರ ಚರ್ಚಿಸಲಾಗಿದೆ. ಗಂಡಾಳು, ಹೆಣ್ಣಾಳು, ಕಾಲಾಳು, ಗಂಡಾನೆ, ಹೆಣ್ಣಾನೆ ಮುಂತಾದ ಪದಗಳಲ್ಲಿ ಎರಡು ಪದಗಳಿವೆ. ಗಂಡು+ಆಳು, ಹೆಣ್ಣು+ಆಳು, ಕಾಲು+ಆಳು, ಗಂಡು+ಆನೆ, ಹೆಣ್ಣು+ಆನೆ ಪದರಚನೆಗಳಲ್ಲಿ ಮೊದಲ ಪದದ ಕೊನೆಯ ಉಲಿಯು ತೆರೆದ ಉಲಿಯಾಗಿದೆ. ಎರಡನೆಯ ಪದದ ಮೊದಲನೆಯ ಉಲಿಯು ತೆರೆದ ಉಲಿಯಾಗಿದೆ. ಹೀಗಿರುವಾಗ ಇಲ್ಲಿ ಮೊದಲ ಪದದ ಕೊನೆಯ ಉಲಿ ಬಿದ್ದು ಹೋಗಿ ಗಂಡಾಳು, ಹೆಣ್ಣಾಳು, ಕಾಲಾಳು, ಹೆಣ್ಣಾನೆ, ಗಂಡಾನೆ ಎಂಬ ರಚನೆಗಳು ನಮಗೆ ಸಿಗುತ್ತವೆ. ಈ ಪದಗಳನ್ನು ನುಡಿಯುವಾಗ ಉಲಿಕಟ್ಟುಗಳನ್ನು ತಿಳಿಯಬಹುದು. 'ಒಂದೇ ಉಲಿಕಂತೆಯ ಪದವಾಗಿದ್ದು, ಅದು ಮುಚ್ಚಿದ ಉಲಿಕಂತೆಯಾಗಿದ್ದರೆ ಆಗ ಅದನ್ನು ಬಿಡಿಯಾಗಿ ನುಡಿಯುವಾಗ ಇಳಿಯಲ್ಲಿರುವ ಕೊನೆಯ ತಡೆಯುಲಿಗೆ ಉ ಎಂಬ ಉಲಿ ಸೇರಿಕೊಳ್ಳುತ್ತದೆ ಎಂಬುದು ಮತ್ತೊಂದು ಕಟ್ಟು. ಉಳಿದ ಕಡೆಗಳಲ್ಲಿ ಅದು ಮುಚ್ಚಿದ ಉಲಿಕಂತೆಯಾಗಿಯೇ ಬಳಕೆಯಾಗುತ್ತದೆ. ಒಂದು ಎತ್ತುಗೆಯನ್ನು ನೋಡೋಣ

ಗಂಡ್ ಮತ್ತು ಹೆಣ್ ಎಂಬುವು ಎರಡು ಕನ್ನಡ ಪದಗಳು ಇವುಗಳಲ್ಲಿ ಒಂದೆ ಉಲಿಕಂತೆ ಇದೆ. ಅದರಲ್ಲಿಯೂ ಅವು ಮುಚ್ಚಿದ ಉಲಿಕಂತೆಗಳಾಗಿವೆ. ಈ ಪದಗಳನ್ನು ಬಿಡಿಯಾಗಿ ನುಡಿಯುವಾಗ ಗಂಡ್ ಮತ್ತು ಹೆಣ್ ಪದಗಳ ಇಳಿಯ ತಡೆಯುಲಿಗೆ ಉ ಸೇರಿಸಿ ಗಂಡು ಮತ್ತು ಹೆಣ್ಣು ಎಂದು ನುಡಿಯುತ್ತೇವೆ. ಉಳಿದ ಕಡೆಗಳಲ್ಲಿ ಅವುಗಳನ್ನು ಗಂಡ್ ಮತ್ತು ಹೆಣ್ ಎಂದೇ ನುಡಿಯುತ್ತೇವೆ. ಗಂಡಾಳು, ಹೆಣ್ಣಾಳು ಎಂದು ನುಡಿಯುವಾಗ ಮುಚ್ಚಿದ ಉಲಿಯೊಳಗೆ ನುಡಿಯುತ್ತೇವೆ. ಅಂದರೆ ನಮ್ಮ ಶಾಲೆಯಲ್ಲಿ ಸೊಲ್ಲರಿಮೆ(ವ್ಯಾಕರಣ)ವನ್ನು ಕಲಿಸುವಾಗ ಹೆಚ್ಚಿನ ಸಂದರ್ಭದಲ್ಲಿ ಬರೆಹದ ಕನ್ನಡದ ರಚನೆಗೆ ಸಂಧಿ ಮಾಡುವ ಚಳಕವನ್ನು ಹೇಳಿಕೊಡುತ್ತೇವೆ. ಅದು ಬಳಕೆಯಲ್ಲಿ ಏನಾಗುತ್ತದೆ ಎಂಬುದನ್ನು ಗಮನಿಸುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಮಕ್ಕಳಿಗೆ ಗೊಂದಲವುಂಟಾಗುತ್ತಿದೆ. ಅಂದರೆ ಬಳಕೆಯಲ್ಲಿ ಇಲ್ಲದ ಹೆಚ್ಚುವರಿ ರೂಪಗಳು ಸಂಧಿ ಮಾಡುವ ಸಂದರ್ಭದಲ್ಲಿ ಬಂದಾಗ

Scanned with CamScanner

ಅವುಗಳು ಹೇಗೆ ಬಂದಿವೆ ಎಂಬುದನ್ನು ಹೇಳಿಕೊಡುವ ಕೆಲಸ ಆಗಬೇಕಾಗಿದೆ. ಮಕ್ಕಳ ಮಟ್ಟಕ್ಕೆ ಅನಗತ್ಯ ಎನಿಸಿದರೂ, ಕಲಿಸುವವರಿಗೆ ಅದು ತಿಳಿದಿರಬೇಕಾಗುತ್ತದೆ. ಗಂಡಾಳು ಮತ್ತು ಹೆಣ್ಣಾಳು ಪದಗಳನ್ನು ಒಡೆದು ಸಂಧಿ ಮಾಡುತ್ತಿರುವುದು ಬರಹದ ಕನ್ನಡಕ್ಕೆ.

ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಸೊಲ್ಲರಿಮೆಯನ್ನು ತಿಳಿಸುವಾಗ ಪದಗಳನ್ನು ಒಡೆದು(ಗಂಡು+ಆಳು, ಹೆಣ್ಣು+ಆಳು) ತೋರಿಸುವುದರಿಂದ ಯಾವ ಬಗೆಯ ಚಳಕ ಉಂಟಾಗುವುದಿಲ್ಲ. ಬದಲಿಗೆ ಎರಡು ಪದಗಳನ್ನು ಕೂಡಿಸುವುದರಿಂದ ಪದರಚನೆ ಮಾಡುವ ಚಳಕ ಮಕ್ಕಳಲ್ಲಿ ಉಂಟಾಗುತ್ತದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ಗಂಡ್+ಆಳು, ಹೆಣ್+ಆಳು ಎಂದು ಕೊಟ್ಟು ಕೂಡಿಸಿ ಎಂದಾಗ ಯಾವ ಬರಿಯು ಬದಲಾವಣೆ ಉಂಟಾಗದೆ ಸರಳವಾಗಿ ಹೆಣ್ಣಾಳು, ಗಂಡಾಳು ಎಂದು ಪದರಚನೆ ಮಾಡುತ್ತಾರೆ. ಆದರೆ ಒಡೆದು ಸಂಧಿ ಮಾಡಿ ಎಂದಾಗ ಮೊದಲ ಪದವನ್ನು ಉಕಾರಾಂತಗೊಳಿಸಿ ನಂತರ ಸಂಧಿ ಮಾಡಲಾಗುತ್ತದೆ. ಆಗ ಸಹಜವಾಗಿಯೇ ಮಕ್ಕಳ ಮಾತಿನಲ್ಲಿ ಇಲ್ಲದ ಉಕಾರ ಸಂಧಿ ಮಾಡುವಾಗ ಅಂದರೆ ಕೂಡಿಸುವಾಗ ಎಲ್ಲಿಂದ ಬಂತು ಎಂಬ ಕೇಳ್ವಿಗೆ ಸಾಂಪ್ರದಾಯಿಕ ವ್ಯಾಕರಣದಲ್ಲಿ ಉತ್ತರವಿಲ್ಲ. ಇಂಥ ಸಂದರ್ಭಗಳನ್ನು ನಮ್ಮ ಶಾಲೆಯಲ್ಲಿ ಹೇಳುವಾಗ ಇದು ಕನ್ನಡ ಉಲಿಕಟ್ಟುಗಳ ಜಾಯಮಾನವೆಂದು ಹೇಳಿ ಜಾರಿಕೊಳ್ಳುವ ಕೆಲಸವಾಗುತ್ತಿವೆ.

ಪದರಚನೆಯಿಂದ ನೋಡುವುದಾದರೆ ಗಂಡಾಳು ಮತ್ತು ಹೆಣ್ಣಾಳು ಈ ಎರಡೂ ಪದಗಳಲ್ಲಿ ಯಾವ ಭಾಗದ ಅರ್ಥ ಮುಖ್ಯವಾಗುತ್ತದೆ? ಇಲ್ಲಿ ಆಳು ಪದದ ಅರ್ಥ ತಟಸ್ಥವಾಗಿದೆ. ಆಳು ಪದದ ಮೊದಲಿಗೆ ಗಂಡ್ ಮತ್ತು ಹೆಣ್ ರಚನೆಗಳು ಬಂದು ಬೇರೆಬೇರೆ ಪದವರ್ಗಗಳಾಗಿವೆ. ಈ ಪದವರ್ಗ ರಚನೆಯಾಗುವುದಕ್ಕೆ ಆಳು ಪದದ ಅರ್ಥ ಕೇಂದ್ರವಲ್ಲ. ಗಂಡ್ ಮತ್ತು ಹೆಣ್ ಪದಗಳು.

ವಾಕ್ಯದಲ್ಲಿ ಗಂಡಾಳು ಬಂದರು, ಹೆಣ್ಣಾಳು ಬಂದರು ಎಂಬುವುದು ಮಾನವ ವರ್ಗವನ್ನು ಸೂಚಿಸುತ್ತದೆ. ಗಂಡಾಳು ಬಂದನು, ಹೆಣ್ಣಾಳು ಬಂದಳು ರೂಪಗಳು ಬಳಕೆಯ ವಲಯಗಳಲ್ಲಿ ಇದ್ದಂತಿಲ್ಲ. ಆದರೆ ವಾಕ್ಯದಲ್ಲಿ ಗಂಡುಬೆಕ್ಕು ಬಂತು, ಹೆಣ್ಣುದೆಕ್ಕು ಬಂತು, ಹೆಣ್ಣುಹುಲಿ ಬಂತು ಎನ್ನುವಾಗ ಕ್ರಿಯಾಪದದಲ್ಲಿ ನಪುಂಸಕಲಿಂಗ ಪ್ರತ್ಯಯ ಬಳಕೆಯಲ್ಲಿದೆ.

ದಿನದಿನ

ಪಿ.ಮಹಾದೇವಯ್ಯ

ದೇಶಮೂಲವಾದಿತನ(ನಾ) ಇದು ದೇಶದ ಮೂಲದ ಬಗೆಗೆ ಹೊಂದಿರುವ ವಿಶಿಷ್ಟ ಗುಣ. 'ದೇಶಮೂಲವಾದಿತನದಿಂದ ಪ್ರಧಾನಮಂತ್ರಿಯಾಗಿ ಪರಿವರ್ತಿಸಿದ್ದಾರೆ' ಇತ್ತೀಚಿಗೆ 'ತನ' ಪ್ರತ್ಯಯ ವಿಶಿಷ್ಟವಾದ ಗುಣವುಳ್ಳದ್ದು ಎಂಬ ಅರ್ಥ ಬರುವಂತೆ ಪದ ರಚನೆ ಮಾಡಲಾಗುತ್ತಿದೆ. ಆ ಸಾಲಿಗೆ ಈ ಪದ ಸೇರುತ್ತದೆ.

ನಗರಮುಖಿ(ನಾ) ಇದು ನಗರದ ಕಡೆಗೆ ಮುಖ ಮಾಡುವ ಪರಿಸ್ಥಿತಿ. 'ಪಲ್ಲಗಳನ್ನು ತೊರೆದು ಯಾಕೆ ಎಲ್ಲರೂ ನಗರಮುಖಿ ಗೆಳಾಗುತ್ತಿದ್ದಾರೆ ಎಂಬ ಪ್ರಶ್ನೆಯನ್ನು ಕೇಳಿಕೊಂಡು ಅದಕ್ಕೆ ಉತ್ತರವನ್ನು ಕೊಡುತ್ತದೆ'. ಸಮಾಜಮುಖಿ ಮಾದರಿಯಲ್ಲಿ ರಚನೆಯಾಗಿರುವ ಪದ.

ನಮೋತ್ಸಾಹ(ನಾ) ಉದಯಿಸಿದ. ನರೇಂದ್ರ ಮೋದಿ ಉತ್ಸಾಹ. 'ಏದೇಶಿ ನೇರ ಬಂಡವಾಳ ಹೂಡಿಕೆಗೆ ರತ್ನಗಂಬಳಿ ಸ್ವಾಗತ ಕೋರಿರುವ ಏತ್ತ ಸಚಿವೆ ನಿರ್ಮಲಾ ಸೀತಾರಾಮನ್ ನವೋದಯಕ್ಕೆ ನಮೋತ್ಸಾಹ ನೀಡಿದ್ದಾರೆ.' ವ್ಯಕ್ತಿನಾಮವನ್ನು ಸಂಕ್ಷಿಪ್ತೀಕರಣಗೊಳಿಸಿ ನರೇಂದ್ರಮೋದಿ ಎನ್ನುವುದಕ್ಕೆ ಬದಲಾಗಿ 'ನಮೋ'ಎಂದು ಮಾಧ್ಯಮದವರು ಬಳಕೆ ಮಾಡಿದ್ದಾರೆ. ಈ ವ್ಯಕ್ತಿನಾಮಕ್ಕೆ ಸಂಸ್ಕೃತದ ಉತ್ಸಾಹ' ಸೇರಿಸಿ ಪದರಚನೆ ಮಾಡಲಾಗಿದೆ.

ಪಕ್ಷಕಾರ(ನಾ) ತರಂಗ ಪಕ್ಷಕ್ಕೆ ಸೇರಿದ ವ್ಯಕ್ತಿ. 'ಅನ್ಯಾಯಾಗಿ ಹೋರಾಟ ನಡೆಸುತ್ತಾ ನ್ಯಾಯಾಲಯಗಳಿಗೆ ಅಲೆದಾಡುತ್ತಾ, ವಕೀಲರ ಕುಲ್ಕುಧರಿಸುತ್ತಾ ಹಣವನ್ನು ಪೋಲು ಮಾಡುವ ಪಕ್ಷಕಾರರಿಗೆ, ಕಕ್ಷಿದಾರರಿಗೆ ಅವರು ಸೌಹಾರ್ದತೆಯ ಕಿವಿ ಮಾತನ್ನು ಹೇಳುತ್ತಿದ್ದರು'. ಕಕ್ಷಿದಾರ ಪದಕ್ಕೆ ಪರ್ಯಾಯವಾಗಿ ಬಳಸಲಾಗಿದೆ. ಈಗಾಗಲೇ 'ಪಕ್ಷಗಾರ'ಪದವನ್ನು ಬಳಕೆ ಮಾಡಲಾಗಿದೆ.

ಫಲೋಪವಾಸ(ನಾ) ತರಂಗ. ಹಣ್ಣುಗಳನ್ನೇ ಸೇವಿಸಿ ಮಾಡುವ ಉಪವಾಸ. 'ರಸೋಪವಾಸದ ಬಳಿಕ ಫಲೋಪವಾಸ ಮಾಡಬೇಕು'. ಫಲ+ಉಪವಾಸ ಸೇವಿಸಿ ಪದರಚನೆ ಮಾಡಲಾಗಿದೆ. ಹಣ್ಣುಗಳನ್ನೆ ಸೇವಿಸಿ ಮಾಡುವ ಉಪವಾಸವನ್ನು ವಿವರಿಸುವುದಕ್ಕೆ ಈ ಪದ ರಚನೆ ಮಾಡಲಾಗಿದೆ.

Scanned with CamScanner

ಪಶುತನ(ನಾ) ಸುಧಾ. ಮನುಷ್ಯರ ಪಶುವಿಗುಣ. 'ಇಂತಹ ಸಂದರ್ಭಗಳಲ್ಲೆಲ್ಲಾ ಅಡಗಿಸಿಟ್ಟ ಎಲ್ಲಾ ಪಶುತನಗಳು ಹೊರ ಹೊಮ್ಮುತ್ತವೆ'. 'ತನ' ಪ್ರತ್ಯಯ ಬಳಸಿ ಗುಣವುಳ್ಳದ್ದು ಎಂದು ಅರ್ಥಬರುವಂತೆ ಪದಗಳನ್ನು ಸಾಧಿಸಲಾಗುತ್ತದೆ. ಮಾದರಿ: ಸೋಮಾರಿತನ.

ಮುಧಾರಿಗಿರಿ(ನಾ) ಲಂಕೇಶ ಪತ್ರಿಕೆ. ಮುಧಾರಿತನ. 'ಉಂಡು ಉಲೆವ ಮುಧಾರಿಗಿರಿ ಬೇಡ! 'ಗಿರಿ' ಪ್ರತ್ಯಯವನ್ನು ಒಂದು ಅಧಿಕಾರ ಸ್ಥಾನವನ್ನು ಸೂಚಿಸಲು ಬಳಕೆ ಮಾಡಲಾಗಿದೆ. ಮಾದರಿ: ಮಂತ್ರಿಗಿರಿ.

ಪ್ರಚಾರಿತ(ನಾ) ತರಂಗ. ಪ್ರಚಾರ ಮಾಡುವುದು. 'ಇನ್ನು ಅದು ಜನರಿಗೆ ತಲುಪುದು ಹೇಗೆ? ಪಕ್ಷದ ಬಹುಪ್ರಚಾರಿತ ಮತ್ತೊಂದು ಅಶ್ವಾಸನೆ ಎಂದರೆ ಅಧಿಕಾರಕ್ಕೆ ಬಂದ ಮೊದಲ ವರ್ಷದಲ್ಲೇ ಕೇಂದ್ರ ಸರ್ಕಾರದಲ್ಲಿ ಖಾಲಿ ಇರುವ ೨೨ ಲಕ್ಷ ಹುದ್ದೆಗಳನ್ನು ತುಂಬುವುದು! ಸಾಮಾನ್ಯವಾಗಿ ಚಿತ್ರಿತ, ಪಿಚಾರಿತ ಮುಂತಾದ ಸಂಸ್ಕೃತ ರೂಪಗಳ ಪದರಚನಾ ನಿಯಮವನ್ನು ಪ್ರಚಾರ ರೂಪದಲ್ಲಿ ಬಳಸಿ 'ಪ್ರಚಾರಿತ'ರೂಪ ಪಡೆಯಲಾಗಿದೆ.

ಬಾಬ್ತುದಾರ(ನಾ) ತರಂಗ. ಉತ್ಸವ ಕೆಲಸಕ್ಕೆ ಸಂಬಂಧಪಟ್ಟ ವ್ಯಕ್ತಿ. 'ಈ ಉತ್ಸವದ ನೇತೃತ್ವವಹಿಸುವವರು ಗ್ರಾಮದ ೧೬ ಮನೆತನದವರು. ಅವರನ್ನು ಬಾಬ್ತುದಾರರು ಎನ್ನುತ್ತಾರೆ. ಬಾಬ್ತುದಾರ ಎನ್ನುವುದು ಒಂದು ಹುದ್ದೆ ಎಂಬರ್ಥದಲ್ಲಿ ಬಳಕೆಯಲ್ಲಿದೆ. ಮಾದರಿ: ಅಮಲ್ದಾರ

ಬೈಗುಳಾರ್ಚನೆ(ನಾ) ಪ್ರಜಾವಾಣಿ. ಬೈಗುಳಿನಿಂದ ನೈವೇದ್ಯ. 'ಇನ್ನು ಕೆಲಸ ಮುಗಿಸಿಲ್ಲವೆ ಎಂದೂ ಬಾಸ್ ಬೈಗುಳಾರ್ಚನೆ ಶುರು ಮಾಡುವಾಗ ತಲೆ ತಗ್ಗಿಸಿ ಕಿವಿಬಾಯಿಗೆ ಕೆಲಸ ಕೊಡದೆ ಮೌನ ಧಾನ್ಯದಲ್ಲಿರುವುದು! ಬೈಗುಳ+ಅರ್ಚನೆ ಸೇರಿ ಬೈಗುಳಾರ್ಚನೆ ಪದರಚನೆ ಮಾಡಲಾಗಿದೆ. ಮಾದರಿ: ಪುಷ್ಪಾರ್ಚನೆ.

ಮತಾಧೀಶ(ನಾ) ಸಂಯುಕ್ತ ಕರ್ನಾಟಕ. ಓಟು ಹಕ್ಕುವಳ್ಳವನು. 'ಗೆದ್ದವರ ಮೇಲೆ ಕಣ್ಣಾವಲು ಮತಾಧೀಶನ ಹೊಣೆಗಾರಿಕೆ. ಕನ್ನಡದಲ್ಲಿ ಈಗಾಗಲೇ ಮತದಾರ. ಓಟ್ದಾರ ಪದಗಳಿಗಿಂತ ಅರ್ಥದ ನೆಲೆಯಲ್ಲಿ ವಿಶೇಷತೆ ಇಲ್ಲ. 'ನ್ಯಾಯಾಧೀಶ', 'ಮಠಾಧೀಶ' ಮಾದರಿಯಲ್ಲಿ ಪದರಚನೆ ಮಾಡಲಾಗಿದೆ.

ಮಹಿಳಾಗಸ್ತು(ನಾ) ಉದಯವಾಣಿ. ಮಹಿಳೆಯರಿಗೆ ಕಾವಲು, ರಕ್ಷಣೆ. 'ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಸುರಕ್ಷತೆಯ ಬಗ್ಗೆ ತಾಂತ್ರಿಕವಾಗಿ ಸುಧಾರಿತ ಪರಿಹಾರಗಳನ್ನು ಪರಿಚಯಿಸುವ ಅಗತ್ಯವಿದೆ. ಮೊಬೈಲ್ ಎಸ್ಒಎಸ್, ಸಾರ್ವಜನಿಕ ಸಾರಿಗೆಯಲ್ಲಿ ಕ್ಯಾಮೆರಾ ಕಣ್ಗಾವಲು ಮತ್ತು ಮಹಿಳಾಗಸ್ತು ಗಳನ್ನು ಹೆಚ್ಚು ವ್ಯಾಪಕ ಬಳಸುವ ವ್ಯವಸ್ಥೆ ಬೇಕಾಗಿದೆ' 'ಬಂದೋಬಸ್ತು' ಮಾದರಿಯಲ್ಲಿ ಹೊಸ ಪದವನ್ನು ರಚಿಸಿ ಮಾಡಲಾಗಿದೆ.

ಮಮ್ಮೀಕರಣ(ನಾ) ತರಂಗ. ಮಮ್ಮೀಮಯ ಮಾಡುವುದು. 'ಮಮ್ಮೀಕರಣ ಕಾರ್ಯ ಒಂದೆರಡು ದಿನಗಳ, ವಾರಗಳ ಕಾಲದ್ದಲ್ಲ. ಆರು ತಿಂಗಳ ದೀರ್ಘ ಅವಧಿಯದು. ಈಕರಣ ಪ್ರತ್ಯಯ ಬಳಕೆಗೆ ಇದೊಂದು ಸೇರ್ಪಡೆ.

ಮಾಲಿನ್ಯಕಾರಕ(ನಾ) ಕರ್ಮವೀರ. ಕಲುಷಿತಗೊಂಡಿರುವ ಸ್ಥಿತಿ, ಮಲಿನವಾಗಿರುವ. 'ನಾವುಗಳು ನಗರದೊಳಗೆ ಓಡಾಟಕ್ಕೆ ಅಥವಾ ಸಂಚಾರಕ್ಕೆ ಮಾಲಿನ್ಯಕಾರಕವಲ್ಲದ ವಿದ್ಯುತ್ ಚಾಲಿತ (ಎಲೆಕ್ಟ್ರಿಕಲ್), ಸೋಲಾರ್ ಚಾಲಿತ, ಬ್ಯಾಟರಿ ಚಾಲಿತ ವಾಹನ ಗಳನ್ನು ಬಳಸುವುದು ಸೂಕ್ತ! –ಕಾರಕ ಪ್ರತ್ಯಯ ಸೇರಿರುವ. ಪೀಡಿತವಾಗಿರುವ ಎಂಬರ್ಥದಲ್ಲಿ ಬಳಕೆಯಲ್ಲಿದೆ. ಮಾಲಿನ್ಯ ಎಂದರೆ ಕೊಳೆ, ದೋಷ ಎಂಬರ್ಥವಿದೆ. ಇಲ್ಲಿ ಕಲುಷಿತದಿಂದ ಕೂಡಿರುವ ಎಲೆಕ್ಟ್ರಿಕಲ್ ಚಾಲಿತ ವಾಹನಗಳನ್ನು ಬಳಸದೆ ಇರುವುದು ಸೂಕ್ತ ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ.

ಯೌವನಕಾರಕ(ನಾ) ತರಂಗ. ಪ್ರಾಯದಲ್ಲಿ ಸ್ಥಿತಿಯಲ್ಲಿರುವವರು. ಕನ್ನಡ ನುಡಿಯಲ್ಲಿ –ಕಾರಕ ಪ್ರತ್ಯಯ ಸೇರಿರುವ, ಪೀಡಿತ ವಾಗಿರುವ ಎಂಬರ್ಥದಲ್ಲಿ ಬಳಕೆಯಲ್ಲಿದೆ. ಇಲ್ಲೂ ಸಹ ಈ ಅರ್ಥದಲ್ಲೇ ಬಳಕೆ ಮಾಡಲಾಗಿದೆ.

ರಾಜ್ಯತ್ವ(ನಾ) ಸುಧಾ. ರಾಜ್ಯದ ಸ್ಥಿತಿ. 'ಅವನಿಗೆ ರಾಜ, ರಾಜತ್ವ, ರಾಜತ್ವಗಳು ದೂರದ ಸಮೀಕ್ಷೆಯೇ ಆಗಿರಬಹುದು'. ರಾಜ್ಯದ ಸ್ಥಿತಿಯನ್ನು ರಾಜ್ಯತ್ವ ಎಂದು ಸೂಚಿಸುತ್ತಿದ್ದರೂ, 'ರಾಜ್ಯ' ರೂಪವೇ ಆ ಕೆಲಸವನ್ನು ಮಾಡುತ್ತಿದೆ. ಇಂಗ್ಲಿಶಿನ್ State shipಗೆ ಸಂವಾದಿಯಾಗಿ ಬಳಕೆ ಮಾಡಲಾಗಿದೆ.

ವೀರಗಾರ(ನಾ) ತರಂಗ. ಧೀರ, ಪರಾಕ್ರಮಿ, ಶೂರ. 'ಗ್ರಾಮದ ಕಮ್ಮಾರರು ಸಿದ್ಧಗೊಳಿಸಿ ಅದರಲ್ಲಿ ಅಕ್ಕಿಯ ಗುಣಗಳನ್ನಿಟ್ಟು ಪೂಜಿಸಿ ಬಂಡಿಯನ್ನು ವೀರಗಾರರಿಗೆ ನೀಡುವ ಕಾರಣವಾಗಿ ಕರಕ್ಕೆ ಬಂಡಿ ಎಂದು ಕರೆಯುತ್ತಾರೆ! ಏನಾದರೂ ಒಂದನ್ನು ಮಾಡಬಲ್ಲ. ಸಾಧಿಸಬಲ್ಲ ವ್ಯಕ್ತಿಯನ್ನು –ಗಾರ ನಾಮಸಾಧಕ ಪ್ರತ್ಯಯದಿಂದ ಸೂಚಿಸಲಾಗುತ್ತದೆ. ಇಲ್ಲಿ 'ವೀರ'ಪದವೇ ಸಾಕಾಗಿತ್ತು. –ಗಾರ ಪ್ರತ್ಯಯದ ಅಗತ್ಯವಿಲ್ಲ ಎನ್ನಿಸುತ್ತದೆ.

Scanned with CamScanner

ವೀಲುಕರ್ತ(ನಾ) ತರಂಗ. ವಿಲ್ ಸೃಷ್ಟಿಸುವವನು. ಇಷ್ಟಾದುದನ್ನು ಬರೆ 'ಇವರು ವಿಲ್‌ಕರ್ತನ ಮರಣಾನಂತರ ವಿಲ್‌ನಲ್ಲಿ ಬರೆದ ರೀತಿಯಲ್ಲಿ ಆಸ್ತಿ ಹಂಚಿಕೆಯಾಗುವಂತೆ ನೋಡಿಕೊಳ್ಳುತ್ತಾರೆ.' ಇಂಗ್ಲಿಶಿನ ವಿಲ್ ಪದಕ್ಕೆ ಸಂಸ್ಕೃತದ ಕರ್ತ ಸೇರಿಸಿ 'ವೀಲುಕರ್ತ' ಎಂದು ಪದ ರಚನೆ ಮಾಡಲಾಗಿದೆ.

ಸಂಹಾರಿಣಿ(ನಾ) ಸುಧಾ. ಸಂಹಾರ ಮಾಡುವ ಹೆಂಗಸು. 'ಸಂಹಾರಿಣಿ ಪೂಜಾ! 'ಸಂಹಾರ' ಪುಲ್ಲಿಂಗವಾಚಿಯೆಂದು ತಿಳಿದು ರೂಪಿಸಿರುವ ಪದ. ಆದರೆ 'ಸಂಹಾರ' ಲಿಂಗಾತೀತ ವಾದುದು.

ಸಿದ್ಧಗ್ರಹಪೀಡಿತ(ನಾ) ವಿಶ್ವವಾಣಿ. ಸಿದ್ಧ ಎಂಬ ವ್ಯಕ್ತಿಯಿಂದ ಉಂಟಾಗುವ. ೨೦೧೮ರ ವಿಧಾನಸಭೆ ಚುನಾವಣೆಯ ನಂತರ ಮೇ ೨೩ರಂದು ಅಚ್ಚರಿಯ ರೀತಿಯಲ್ಲಿ ಕಾಂಗ್ರೆಸ್ ಜತೆ ಅಧಿಕಾರ ಸೂತ್ರ ಹಿಡಿದ ಕುಮಾರಸ್ವಾಮಿ ಸರಕಾರ ಆರಂಭ ದಿಂದಲೂ ಒಂದು ರೀತಿಯಲ್ಲಿ ಬಾಲಗ್ರಹ ಪೀಡಿತವಾಗಿದೆ. ಬಾಲಗ್ರಹ ಪೀಡನೆ ಎನ್ನುವುದಕ್ಕಿಂತ ಹೆಚ್ಚಾಗಿ ಸಿದ್ಧಗ್ರಹ ಪೀಡಿತ ಎನ್ನಬಹುದು'. ಈಗಾಗಲೇ ಕನ್ನಡದಲ್ಲಿ ರೋಗಪೀಡಿತ. ಬರ ಪೀಡತ ಪರಚನೆಗಳು ಆಗಿವೆ. ಈ ಪದಗಳ ಮಾದರಿಯಲ್ಲೇ 'ಸಿದ್ಧಗ್ರಹಪೀಡಿತ' ಪದರಚನೆ ಮಾಡಲಾಗಿದೆ.

ಸ್ನಾನೋತ್ಸಾಹಿ(ನಾ) ತರಂಗ. ಕೆಸರಲ್ಲಿ ಹೊರಳಾಡಿ ಸಂಭ್ರಮಿ ಸುವ ಉತ್ಸಾಹಿಗಳು. 'ದೇಶ–ವಿದೇಶಗಳಿಂದ ಲಕ್ಷ ಲಕ್ಷ ಸ್ನಾನೋ ತ್ಸಾಹಿಗಳು ಈ ಉತ್ಸವದಲ್ಲಿ ಪಾಲ್ಗೊಂಡು ಬೂದು ಬಣ್ಣದ ಕೆಸರಲ್ಲಿ ಹೊರಳಾಡಿ ಸಂಭ್ರಮಿಸುತ್ತಾರೆ! ಸ್ನಾನ ಮಾಡುವುದಕ್ಕೆ ನೀರೆ ಬೇಕು ಎಂದಲ್ಲ! ಯಾವ ಬಗೆಯಲ್ಲಾದರೂ ಸ್ನಾನ ಮಾಡುವುದಕ್ಕೆ ಉತ್ಸಾಹಿಗಳು ಇದ್ದಾರೆ ಎಂಬರ್ಥದಲ್ಲಿ ಬಳಕೆ ಯಲ್ಲಿದೆ.

ವಾರದ ಮಾತು

ಅರ್ಪಿತ ವಿ, ಅನಿಲ ಕುಮಾರ ಎನ್.

ಗಂಡಾಳು–ಹೆಣ್ಣಾಳು

–ಗೌರಿ ಮಲ್ಲಿಕಾರ್ಜುನ

ಕನ್ನಡ ಭಾಷಾಧ್ಯಯನ ವಿಭಾಗದ ವಿದ್ಯಾರ್ಥಿಗಳು ಕನ್ನಡ ನುಡಿ: ಸಮಾಜ, ಸಂಸ್ಕೃತಿ, ವ್ಯಾಕರಣಕ್ಕೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಮತ್ತು ತಮ್ಮ ಸಂಶೋಧನಾ ಅಧ್ಯಯನ ವಿಷಯಕ್ಕೆ ಪೂರಕವಾಗಿರುವಂತಹ ವಿಷಯಗಳನ್ನು ಕುರಿತು ವಿಷಯ ಮಂಡಿಸಿರುವ ಮಾತುಗಳಿಗೆ ಪ್ರತಿಕ್ರಿಯೆ ಮತ್ತು ಟಿಪ್ಪಣಿಗಳನ್ನು ಈ ಅಂಕಣದಲ್ಲಿ ದಾಖಲಿಸಲಾಗುತ್ತದೆ.

ದಿನಾಂಕ ೦೬–೧೨–೨೦೧೯ರಂದು ಗಂಡಾಳು–ಹೆಣ್ಣಾಳು ಎಂಬ ವಿಷಯ ಕುರಿತು ವಿಭಾಗದ ಸಂಶೋಧನ ವಿದ್ಯಾರ್ಥಿ ಗೌರಿ ಮಲ್ಲಿಕಾರ್ಜುನ ಅವರು ವಿಷಯ ಮಂಡಿಸಿದರು. ಭಾಷಿಕ ಆಕರಗಳ ಮೂಲಕ ಸಾಮಾಜಿಕ ಸಂರಚನೆಯನ್ನು ಮತ್ತು ಕಾಲಕಾಲಕ್ಕೆ ಆಗುವ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳ ಬಹುದಾಗಿದೆ. ಕನ್ನಡ ಸಂದರ್ಭದಲ್ಲಿ ಆಳು ಎನ್ನುವ ಪದವು ಹಲವು ಅರ್ಥಗಳಲ್ಲಿ ಬಳಕೆಯಲ್ಲಿರುವುದನ್ನು ಚಾರಿತ್ರಿಕವಾಗಿ ಗುರುತಿಸುವ ಮೂಲಕ ಆಳು ಪದ ಬಳಕೆಯ ಸಾಧ್ಯತೆಗಳನ್ನು ವಿವರಿಸಿದರು. ಕೂಲಿಯವನು, ಕೆಲಸಗಾರ ಎನ್ನುವ ಅರ್ಥ ಕೊಡುವ ಹಾಗೂ ಈ ಅರ್ಥದ ಹಿನ್ನೆಲೆಯಲ್ಲಿ ರಚನೆಯಾದ ಪದಗಳನ್ನು ಕುರಿತು ಚರ್ಚೆಮಾಡಿದರು. ಹಾಗೇ ಕೆಲವು ವಲಯಗಳಲ್ಲಿ ಅವಕಾಶಗಳು ಇಲ್ಲದವರು ಅಂತಹ ವಲಯ ವನ್ನು ಪ್ರವೇಶಿಸಿದಾಗ ಆಗುವ ಪದಗಳ ಬಳಕೆಯಲ್ಲಿನ ಬದಲಾವಣೆಗಳ ಬಗೆಗೆ ವಿವರಿಸಿದರು. ಆಳು ಎನ್ನುವ ಪದ ವ್ಯಕ್ತಿವಾಚಕವಾಗಿ ಬಳಕೆಯಾಗುತ್ತದೆ. ನಂತರ ಗಂಡು ಹೆಣ್ಣು ಪದಗಳು ಸೇರುತ್ತವೆ. ಮಗ ಎನ್ನುವ ಪದ ದ್ರಾವಿಡ ಭಾಷೆ ಯಿಂದ ಬಂದಿರುವಂತದು. ನಂತರ ಅದಕ್ಕೆ ಆನ್, ಆಳ್, ಸೇರಿ ಮಗನು, ಮಗಳು ಪದಗಳಾಗುತ್ತವೆ ಎಂದು ತಿಳಿಸಿದರು. ಸಾಮಾಜಿಕ ವಾಸ್ತವವನ್ನು ಭಾಷಿಕವಾಗಿ ಸರಿ ಮಾಡಲು ಸಾಧ್ಯವಿಲ್ಲ ಆದರೆ ಭಾಷಿಕವಾಗಿ ಸಾಮಾಜಿಕ ವಾಸ್ತವವನ್ನು ರೂಪಿಸಿ ಹೇಳಬಹುದು ಎಂದು ಸಲಹೆ ನೀಡಿದರು.

ಒಂದು ಹುಡುಗನಿಗೆ ಬಿದ್ದ ಕನಸು: ಸಾಮಾಜಿಕ ಸ್ತರಗಳು ಮತ್ತು ಭಾಷೆ

–ವೀರಭದ್ರಪ್ಪ

ದಿನಾಂಕ ೧೨–೦೧–೨೦೧೯ರಂದು ಒಂದು ಹುಡುಗನಿಗೆ ಬಿದ್ದ ಕನಸು ಕಥಾಸಂಕಲನದಲ್ಲಿ: ಸಾಮಾಜಿಕ ಸ್ತರಗಳು ಮತ್ತು ಭಾಷೆ ಎಂಬ ವಿಷಯ ಕುರಿತು ವಿಭಾಗದ ಸಂಶೋಧನಾ ವಿದಾರ್ಥಿ ವೀರಭದ್ರಪ್ಪ ಅವರು ವಿಷಯ ಮಂಡಿಸಿದರು. ಭಾಷೆ ಸಮಾಜದ ಸಂಸ್ಕೃತಿಯ ಅಂಗವಾಗಿದ್ದು ,ಆ ಭಾಷೆಯ ಮೂಲಕ ಸಾಮಾಜಿಕ ಸಂರಚನೆಯ ಒಳಾಂಶಗಳಾದ ಜಾತಿ, ಲಿಂಗ, ಶಿಕ್ಷಣ, ವೃತ್ತಿ, ಅಧಿಕಾರಗಳಂತಹ ಅಂಶಗಳನ್ನು ಭಾಷೆಯೊಂದು ಅಭಿವ್ಯಕ್ತಿಸುತ್ತದೆ ಎಂಬುದನ್ನು ಒಂದು

Scanned with CamScanner

ಭಾಷಾ ಭಾರತಿ

ಚಾತುರ್ಮಾಸಿಕ

ಪ್ರಧಾನ ಸಂಪಾದಕರು: ಅಜಕ್ಕಳ ಗಿರೀಶ ಭಟ್

ಸಂಪಾದಕರು: ಎಂ.ಎಸ್. ಚೈತ್ರ, ಸ. ಗಿರಿಜಾಶಂಕರ್, ಅಜ್ಜಂಪುರ ಮಂಜುನಾಥ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ,

ಮಲ್ಲತ್ತಹಳ್ಳಿ, ಬೆಂಗಳೂರು – 560 056.

Scanned with CamScanner

Bhasha Bharathi Chathurmasika - Published by Sri Ishwar K. Mirji, Registrar, Kuvempu Bhasha Bharathi Pradhikara, Kalagrama, Jnana Bharathi, Mallattahalli, Bengaluru-560 056; p.p: viii + 130.

ಮೇ-ಆಗಸ್ಟ್, ೨೦೨೦

© : ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

ಮುದ್ರಣ : ೨೦೨೦
ಪುಟಗಳು : viii + ೧೩೦
ಪ್ರಾಯೋಗಿಕ ಸಂಚಿಕೆ – ೧
ಪ್ರತಿಗಳು : ೬೦೦

ಪ್ರಕಾಶಕರು
ಶ್ರೀ ಈಶ್ವರ್ ಕ. ಮಿರ್ಜಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು–೫೬೦ ೦೫೬

ಮುಖಪುಟ ವಿನ್ಯಾಸ : ಹೆಚ್. ವೀರೇಶ್

ಕು.ಭಾ.ಭಾ.ಪ್ರಾ.ದ ಅಧ್ಯಕ್ಷರು
ಡಾ. ಅಮಕ್ಕಳ ಗಿರೀಶ ಭಟ್

ಸದಸ್ಯರು
ಶ್ರೀ ಅಜ್ಜಂಪುರ ಮಂಜುನಾಥ
ಡಾ. ಮಾಧವ ಪೆರಾಜೆ
ಡಾ. ಎ. ಷಣ್ಮುಖಿ
ಶ್ರೀ ಎಂ.ಎಸ್. ಚೈತ್ರ
ಡಾ. ಡಂಟಿನ್ ಜಳಕಿ
ಶ್ರೀ ಸ. ಗಿರಿಜಾಶಂಕರ್
ಶ್ರೀ ರಾಘವೇಂದ್ರ ಪಾಟೀಲ
ಶ್ರೀ ಯತೀಂದ್ರನಾಥ್
ಶ್ರೀ ಎಸ್. ರಂಗಪ್ಪ, ಕ.ಆ.ಸೇ.
ಶ್ರೀ ಕಲ್ಲೇಶಪ್ಪ ಜಿ.

ರಿಜಿಸ್ಟ್ರಾರ್
ಶ್ರೀ ಈಶ್ವರ್ ಕ. ಮಿರ್ಜಿ

ಮುದ್ರಕರು
ರಾಜಾ ಪ್ರಿಂಟರ್ಸ್
ನಂ. ೨೦/೧, ೧ನೇ ಅಡ್ಡರಸ್ತೆ, ೩ನೇ ಮುಖ್ಯ ರಸ್ತೆ
ಪ್ರಭ್‌ರಾಜ್ ಲೇಔಟ್, ಬನ್ನೇರುಘಟ್ಟ ರಸ್ತೆ
ಬೆಂಗಳೂರು–೫೬೦ ೦೩೦. ದೂ: ೦೮೮–೨೨೨೩೪೪೦೬

ಅಧ್ಯಕ್ಷರ ಮಾತು

ಜ್ಞಾನ ಮತ್ತು ಸಾಹಿತ್ಯದ ನಿರಂತರ ಕೊಡುಕೊಳ್ಳುವಿಕೆಯ ಮೂಲಕ ಕನ್ನಡ ಸಂಸ್ಕೃತಿಯ ಸಂವರ್ಧನೆಯಾಗಬೇಕು ಎಂಬುದು ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಧ್ಯೇಯವಾಗಿದೆ. ಯಾವುದೇ ಒಂದು ಭಾಷಾ ಸಂಸ್ಕೃತಿ ಬೆಳೆಯಬೇಕಾದರೆ ಇತರ ಭಾಷೆಗಳೊಡನೆ ನಿರಂತರ ಕೊಡುಕೊಳ್ಳುವಿಕೆ ಆಗಬೇಕಾಗಿರುವುದು ಅನಿವಾರ್ಯ. ಅನುವಾದದ ಮೂಲಕ ಈ ಕೊಡುಕೊಳ್ಳುವಿಕೆ ನಡೆಯುತ್ತಿರಬೇಕಾಗುತ್ತದೆ.

ಪ್ರಾಚೀನ ಕಾಲದಿಂದಲೂ ಒಂದಲ್ಲ ಒಂದು ಬಗೆಯಲ್ಲಿ ಭಾಷಾಂತರ ಕಾರ್ಯ ನಡೆಯುತ್ತ ಬಂದಿರುವುದನ್ನು ಕಾಣುತ್ತೇವೆ. ಭಾಷಾಂತರ ಎಂದರೇನು; ಭಾಷಾಂತರ ಹೇಗಿರಬೇಕು; ಭಾಷಾಂತರದ ವಿವಿಧ ನಮೂನೆಗಳಾವುವು; ಭಾಷಾಂತರಕಾರರಿಗೆ ಇರಬೇಕಾದ ಅರ್ಹತೆಗಳೇನು ಮುಂತಾದ ಪ್ರಶ್ನೆಗಳನ್ನು ಇಟ್ಟುಕೊಂಡು ಭಾಷಾಂತರ ಮೀಮಾಂಸೆಯೂ ಬೆಳೆಯುತ್ತಿದೆ. ಆದರಲ್ಲೂ ಈಚಿನ ವರ್ಷಗಳಲ್ಲಿ ವಿಶ್ವವಿದ್ಯಾಲಯ ಗಳಲ್ಲಿ ಭಾಷಾಂತರ ಅಧ್ಯಯನ ವಿಭಾಗಗಳು ಆರಂಭವಾಗಿರುವುದರಿಂದ ಈ ಬಗೆಯ ತಾತ್ವಿಕ ಜಿಜ್ಞಾಸೆಗಳಿಗೆ ಹೆಚ್ಚಿನ ಅವಕಾಶ ಒದಗಿದೆ.

ಭಾಷಾಂತರದ ಬಗೆಗಿನ ತಾತ್ವಿಕ ಚರ್ಚೆಗಳನ್ನು ನಡೆಸುವವರಿಗೆ ಅಂಥ ಚರ್ಚೆಗಳನ್ನು ಅಥವಾ ಚಿಂತನೆಗಳನ್ನು ಹಂಚಿಕೊಳ್ಳಲು ಸೂಕ್ತವಾದ ವೇದಿಕೆಯ ಅಗತ್ಯವಿದೆ. ಅದೇ ರೀತಿ ಕಥೆ, ಕವಿತೆ, ಲೇಖನ ಇತ್ಯಾದಿ ವಿವಿಧ ಬಗೆಯ ಬರಹಗಳನ್ನು ಅನುವಾದಿಸಿದವರಿಗೆ ಅವುಗಳನ್ನು ಪ್ರಕಟಿಸುವ ಪತ್ರಿಕೆಗಳ ಅಗತ್ಯ ಕೂಡ ಇದೆ. ಈ ಹಿನ್ನೆಲೆಯಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾಷಾ ಭಾರತಿ ಎಂಬ ಹೆಸರಿನಲ್ಲಿ ಚಾತುರ್ಮಾಸಿಕ ಪತ್ರಿಕೆಯೊಂದನ್ನು ಆರಂಭಿಸಿದ್ದು ಇದೀಗ ಮೊದಲ ಪ್ರಾಯೋಗಿಕ ಸಂಚಿಕೆ ಪ್ರಕಟವಾಗುತ್ತಿದೆ.

ಇದಕ್ಕಾಗಿ ಶ್ರಮಿಸಿದ ಸಂಪಾದಕರಾದ ಶ್ರೀ ಎಂ ಎಸ್ ಚೈತ್ರ, ಶ್ರೀ ಸ. ಗಿರಿಜಾ ಶಂಕರ್ ಹಾಗೂ ಶ್ರೀ ಅಜ್ಜಂಪುರ ಮಂಜುನಾಥ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆಯೇ ಆಡಳಿತಾತ್ಮಕವಾಗಿ ಇದನ್ನು ಆಗು ಮಾಡಿದ ರಿಜಿಸ್ಟ್ರಾರ್ ಈಶ್ವರ್ ಕ ಮಿರ್ಜಿಯವರಿಗೆ, ಪ್ರಾಧಿಕಾರದ ಹೊಸ ಹೊಸ ಉಪಕ್ರಮಗಳಿಗೆ ಬೆಂಬಲವಾಗಿ

Scanned with CamScanner

ವಿಶ್ವಾತ್ಮಕ ದೇಶಭಾಷೆ–ಷೆಲ್ಡನ್ ಪೋಲಾಕ್: ಕನ್ನಡಕ್ಕೆ–ಅಕ್ಷರ.ಕೆ.ವಿ, ಅಕ್ಷರ ಪ್ರಕಾಶನ ಪೆಗ್ಗೋಡು. (2003).
ಬಯಲು ಆಲಯ: ಕೀರ್ತಿನಾಥ ಕುರ್ತಕೋಟಿ, ಕನ್ನಡ ವಿ.ವಿ. ಹಂಪಿ (1992).
ಅನುವಾದ ಸಂಕಥನ ಸಂ:01, 02: ಮೇಟಿ ಮಲ್ಲಿಕಾರ್ಜುನ್ (ಸಂ). ಕುವೆಂಪು ಭಾಷಾ ಭಾರತಿ ಬೆಂಗಳೂರು (2018).
ಅನುವಾದ ಸಾಹಿತ್ಯ: ಮೋಹನ್ ಕುಂಟಾರ್ (ಸಂ). ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು (2015).
ಭಾಷಾಂತರ ಭಾರತಿ: ಸಿ.ಪಿ ಕೃಷ್ಣಕುಮಾರ್, ಲಲಿತಾ ಬುಕ್ ಬ್ಯುರೋ ಮೈಸೂರು (2009).
ಭಾಷಾಂತರ ಪ್ರವೇಶಿಕೆ: ಎಂ.ಮಹೇಶ್ವರಪ್ಪ, ಧಾತ್ರಿ ಪುಸ್ತಕ ಬೆಂಗಳೂರು (2007).
Translation Studies: Susan Bassnett, London and New York, Routledge (1980).
Translation Theory: An Indian Perspective: G.N Devy. Macmillian Indian Ltd. (2000).
Siting Translation: Tejaswini Niranjana, Oriental Longman Paper back. (199[illegible]).
Translating Culture VS Cultural Translation: Harish Trivedi, Univ. Of Iowa. (2005).

❑

– ಡಾ. ಮಹಾಂತೇಶ ಪಾಟೀಲ
ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ–577007.
Email-manteshpatil186@gmail.com

ಕನ್ನಡ ಅನುವಾದ: ಸಮಕಾಲೀನ ಪ್ರವೃತ್ತಿಗಳು

– ಡಾ. ಮೋಹನ ಕುಂಟಾರ್

ಅನುಸೃಷ್ಟಿ ಪರಂಪರೆ

ಕನ್ನಡದಲ್ಲಿ ಅನುವಾದ ಕೃತಿಗಳ ಸಂಖ್ಯೆ ಅಪಾರವಾಗಿದೆ ಎಂದು ಹೆಮ್ಮೆಪಟ್ಟು ಕೊಳ್ಳುವಷ್ಟೇನೂ ಇಲ್ಲ. ಮಲಯಾಳಂ, ತೆಲುಗು ಭಾಷೆಗಳಿಗೆ ಹೋಲಿಸಿದರೆ ಕನ್ನಡದಲ್ಲಿ ಅನುವಾದ ಕೃತಿಗಳ ಸಂಖ್ಯೆ ಪರಿಮಿತವಾಗಿದೆಯೆಂದೇ ಹೇಳಬೇಕು. ಮಲಯಾಳಂ, ತೆಲುಗು ಭಾಷೆಗಳಲ್ಲಿ ಅನುವಾದ ಪರಂಪರೆಯೊಂದು ಆಧುನಿಕ ಪೂರ್ವದಿನಗಳಲ್ಲಿಯೇ ರೂಪುಗೊಂಡಿತ್ತು. ನನ್ನಯನ ತೆಲುಗು ಭಾರತ, ಎಳುತ್ತಚ್ಚನ್‌ನ ಮಲಯಾಳಂ ಮಹಾಭಾರತಗಳು ಮೂಲ ವ್ಯಾಸನ ಕೃತಿಯ ಸಂಕ್ಷಿಪ್ತಾನುವಾದಗಳೆಂದೇ ಪ್ರಸಿದ್ಧವಾಗಿವೆ. ಸುದೀರ್ಘವಾದ ಸಂಸ್ಕೃತ ಮಹಾಭಾರತವನ್ನು ಪ್ರಾದೇಶಿಕ ಭಾಷೆಗಳಲ್ಲಿಯೂ ನೀಡುವುದು ಇವರ ಅನುವಾದದ ಬಹಳ ಪ್ರಮುಖವಾದ ಉದ್ದೇಶವಾಗಿತ್ತು. ಮೂಲ ಸಂಸ್ಕೃತವನ್ನು ಓದಲಾರದವರು ಪ್ರಾದೇಶಿಕ ಭಾಷೆಯಲ್ಲಿಯೇ ರಾಮಾಯಣ, ಮಹಾಭಾರತಗಳನ್ನು ಓದಿ ತಮ್ಮದನ್ನಾಗಿ ಮಾಡಿಕೊಳ್ಳಬೇಕೆಂಬ ಅಪೇಕ್ಷೆ ಅವರದಾಗಿತ್ತು. ಹಾಗಾಗಿ ಸಂಸ್ಕೃತ ರಾಮಾಯಣ ಮಹಾಭಾರತಗಳ ಅನೇಕ ಅನುವಾದಗಳು ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟವಾದುವು. ಪ್ರಾದೇಶಿಕ ಭಾಷೆಯ ಕವಿಗಳು ತಮ್ಮ ಸೃಜನಶೀಲ ರಚನೆಗಳ ಸಂದರ್ಭಗಳಲ್ಲಿ ಅವುಗಳ ಆಶಯಗಳನ್ನು ತಮಗೆ ಬೇಕಾದಂತೆ ಅರ್ಥೈಸಿಕೊಂಡು ಸಮಕಾಲೀನವಾಗಿ ಸ್ಪಂದಿಸಿದ ಉದಾಹರಣೆಗಳೂ ಸಾಕಷ್ಟಿವೆ.

ಆದರೆ ಕನ್ನಡದಲ್ಲಿ ಮೂಲ ಸಂಸ್ಕೃತ ರಾಮಾಯಣ, ಮಹಾಭಾರತಗಳು ಅನುವಾದ ರೂಪದಲ್ಲಿ ಕನ್ನಡದಲ್ಲಿ ಬರಲಿಲ್ಲವಾಗಿತ್ತು. ಕನ್ನಡ ಕವಿಗಳು ಮೂಲ ಸಂಸ್ಕೃತ ಕೃತಿಗಳನ್ನು ಆಧರಿಸಿ ಸ್ವೋಪಜ್ಞತೆಯನ್ನು ಮೆರೆದು ಅಜರಾಮರರೆನಿಸಿದರು.

Scanned with CamScanner

ಮೂಲ ಸಂಸ್ಕೃತ ಮಹಾಭಾರತವನ್ನು ಆಧರಿಸಿಯೂ ಪಂಪ, ವಿಕ್ರಮಾರ್ಜುನ ವಿಜಯವನ್ನು ಬರೆದ. ಅದು ವ್ಯಾಸಕೃತ ಮಹಾಭಾರತವಲ್ಲ. ಆದರೂ ವ್ಯಾಸನನ್ನು ಬಿಟ್ಟು ರಚಿಸಿದ ಕೃತಿಯೂ ಅಲ್ಲ. ತನ್ನ ಆಶ್ರಯದಾತ ಅರಿಕೇಸರಿಯನ್ನು ಅರ್ಜುನನೊಡನೆ ಅಭೇದ್ಯವಾಗಿ ಕಲ್ಪಿಸಿ ರೂಪಿಸಿದ ಕೃತಿಯಾಗಿ ಪಂಪನ ಕೃತಿ ವಿಶಿಷ್ಟವೆನಿಸಿತು. ಇದೇ ಪರಂಪರೆಯನ್ನು ಕನ್ನಡದಲ್ಲಿ ಮುಂದೆ ರನ್ನನೇ ಮೊದಲಾದವರು ಅನುಸರಿಸಿದರು. ಈ ಸ್ವೋಪಜ್ಞ ಅನುಸೃಷ್ಟಿಯು ಜನಮೆಚ್ಚಿದ ಪರಂಪರೆಯಾಯಿತು. ಮೂಲ ಕೃತಿಯೊಂದನ್ನು ಆಧರಿಸಿ ಅದನ್ನು ಭಟ್ಟಿ ಇಳಿಸುವ ಅನುವಾದಕ್ಕಿಂತಲೂ ಸ್ವತಂತ್ರವಾದ ಅನುಸೃಷ್ಟಿಯೇ ಶ್ರೇಷ್ಠ ಎಂಬ ನಿಲುವು ಕನ್ನಡದಲ್ಲಿ ಬೆಳೆದುಬಂತು. ಅನುವಾದ ಎಂದರೆ ಸ್ವತಂತ್ರವಾಗಿ ಕೃತಿ ರಚನೆ ಮಾಡಲು ಅಸಾಧ್ಯವಾದವರು ಮಾಡುವ ಅಸಮರ್ಥವಾದ ಎರಡನೆಯ ದರ್ಜೆಯ ರಚನೆಗಳು ಎಂಬ ತಿಳುವಳಿಕೆ ಕನ್ನಡದಲ್ಲಿ ಆಧುನಿಕ ಪೂರ್ವಕಾಲದಿಂದಲೂ ನಡೆದು ಬಂದಂತೆ ತೋರುತ್ತದೆ. ಇಲ್ಲವಾದರೆ ಪೆರಿಯ ಪುರಾಣದ ವಿಷಯಗಳನ್ನು ಆಧರಿಸಿದ ಹರಿಹರನ ರಗಳೆ ಎಂಬ ಸ್ವತಂತ್ರ ರಚನೆಗಳು, ವ್ಯಾಸಭಾರತವನ್ನಾಧರಿಸಿದ ಕುಮಾರವ್ಯಾಸನ ಷಟ್ಪದಿ ಕಾವ್ಯ 'ಕರ್ಣಾಟ ಭಾರತ ಕಥಾಮಂಜರಿ', ಬಾಣಭಟ್ಟನ ಕಾದಂಬರಿಯೆಂಬ ಗದ್ಯಕೃತಿಯನ್ನಾಧರಿಸಿದ ನಾಗವರ್ಮನ 'ಕರ್ಣಾಟಕ ಕಾದಂಬರಿ' ಎಂಬ ಚಂಪೂಕಾವ್ಯ ಇತ್ಯಾದಿಗಳು ಕಾಣಿಸಿಕೊಳ್ಳುತ್ತಿರಲಿಲ್ಲ. ಹೀಗೆ ಮೂಲ ಕೃತಿಯನ್ನಾಧರಿಸಿದ ಅನುಸೃಷ್ಟಿಗೊಂದು ಪರಂಪರೆಯನ್ನು ಕನ್ನಡ ಕವಿಗಳು ಪ್ರಾಚೀನ ಕಾಲದಿಂದಲೂ ನಿರ್ಮಿಸಿ ಕೊಟ್ಟಿದ್ದಾರೆ. ಆಧುನಿಕ ದಿನಗಳವರೆಗೂ ಅನುಸೃಷ್ಟಿಯಾಗಿ ರೂಪಿಸಿದ ರಚನೆಗಳ ಸಂದರ್ಭದಲ್ಲಿ ಮೂಲ ಕೃತಿಗಳನ್ನು ಜೊತೆಗಿರಿಸಿ ನೋಡುವ ಅದನ್ನು ವಿಮರ್ಶಿಸುವ ಜಾಯಮಾನ ಕನ್ನಡದಲ್ಲಿ ಇಂದಿಗೂ ಇಲ್ಲ. ಸ್ವತಂತ್ರವಾದ ಅನುಸೃಷ್ಟಿಗಳಿಗೆ ಮೂಲ ಕಾವ್ಯದ ಹಂಗಿಲ್ಲ. ಹಾಗಾಗಿ ಅನುವಾದಗಳ ಮೂಲಕ ಅನ್ಯಭಾಷಾ ಕೃತಿಗಳನ್ನು ಅವರ ಚಿಂತನೆಗಳನ್ನು ಅರಿತುಕೊಳ್ಳುವ ಮನಸ್ಸು ಮಾಡಲಿಲ್ಲ. ವಾಲ್ಮೀಕಿ ರಾಮಾಯಣ ವ್ಯಾಸ ಮಹಾಭಾರತ, ಭಾಸ, ಕಾಳಿದಾಸ, ಹರ್ಷನೇ ಮೊದಲಾದ ಮಹಾಕವಿಗಳ ಸಂಸ್ಕೃತ ಕೃತಿಗಳ ಅನುವಾದಗಳು ಕನ್ನಡದಲ್ಲಿ ಪ್ರಕಟವಾಗಿದ್ದರೂ ಅವುಗಳಿಗೆ ಓದುಗರು ವಿರಳ. ಸಂಸ್ಕೃತ ವಿದ್ವಾಂಸರಲ್ಲಿ ಮೂಲ ಸಂಸ್ಕೃತ ಕಾವ್ಯಗಳನ್ನು ಓದುವವರೂ ಇದ್ದಾರೆ. ಆದರೆ ಕನ್ನಡ ಅನುವಾದಗಳಿಂದ ಮೂಲ ಕೃತಿಯ ಆಶಯಗಳನ್ನು ಅರ್ಥೈಸಿಕೊಳ್ಳುವ ಕನ್ನಡ ಓದುಗರು ವಿರಳ. ಆದರೆ ಕೃತಿ ರಚನೆ ಮಾಡಿದ ಕವಿಗಳ ಸ್ವೋಪಜ್ಞತೆಯನ್ನು ಮಾತ್ರ ಹೊಗಳುವ ಬೆಳೆಯಮಾನ ಕನ್ನಡದಲ್ಲಿ ಹಿಂದಿನಿಂದಲೂ ಬೆಳೆದುಬಂದಿದೆ. ಗಿರಿಜಾ ಕಲ್ಯಾಣ, ಹರಿಶ್ಚಂದ್ರ ಕಾವ್ಯ, ಜೈಮಿನಿ ಭಾರತ, ರಾಮಚಂದ್ರ ಚರಿತ ಪುರಾಣ ಮೊದಲಾದ

ರಚನೆಗಳ ಆಕರ ಕೃತಿಗಳ ಬಗೆಗೆ ಕುತೂಹಲದ ಚರ್ಚೆಗಳು ಕನ್ನಡದಲ್ಲಿ ಇಲ್ಲವೇ ಇಲ್ಲ ಎನ್ನುವಷ್ಟು ವಿರಳ. ಕನ್ನಡ ಕೃತಿಗಳ ಓದಿಗೆ ಅವುಗಳ ಅಗತ್ಯ ಇಲ್ಲ ಎಂದೇ ಭಾವಿಸಿದಂತಿದೆ.

ಅನುವಾದಗಳ ಮೂಲಕ ಜಗತ್ತಿನ ಪ್ರತಿಯೊಂದು ಭಾಷೆಯ ಸಾಹಿತ್ಯ ಪೋಷಣೆಯಾಗಿದೆ ಎಂಬ ಇತಿಹಾಸದ ವಾಸ್ತವ ವಿಚಾರಗಳನ್ನು ಸಾಹಿತ್ಯ ಚರಿತ್ರೆಕಾರರು ಹೇಳುವುದಿದೆ. ಅನುವಾದಗಳ ಮೂಲಕ ಇತರ ಭಾಷೆಗಳ ಕೃತಿಗಳು ಲಕ್ಷ್ಯಭಾಷೆಯ ಸಂದರ್ಭದಲ್ಲಿ ಪ್ರಕಟವಾದಾಗ ಅನ್ಯಭಾಷಾ ಜ್ಞಾನವಲಯದ ವಿವಿಧ ಪಾತಳಿಗಳ ಹಾಗೂ ದೃಷ್ಟಿಕೋನಗಳ ಅರಿವಾಗುತ್ತದೆ ಎಂಬ ತಿಳುವಳಿಕೆಯಿಂದ ಈ ಬಗೆಯ ಮಾತುಗಳು ಪ್ರಕಟವಾಗಿವೆ. ಆದರೆ ಕನ್ನಡದ ಅನುಸೃಷ್ಟಿ ಪರಂಪರೆ ಲಕ್ಷ್ಯಭಾಷೆಯಲ್ಲಿ ಅನ್ಯಭಾಷಾ ಕೃತಿಯ ಅರ್ಥಪೂರ್ಣ ಅಳವಡಿಕೆಯನ್ನು ಅನುಮೋದಿಸುತ್ತದೆ. ಅನ್ಯಭಾಷಾ ಕೃತಿಯ, ಕೃತಿಕಾರರ ಆಲೋಚನೆಗಳು, ಚಿಂತನೆಯ ವಿಧಾನಗಳನ್ನು ತಿಳಿಯಬೇಕೆಂಬ ಯಾವ ಅಪೇಕ್ಷೆಯೂ ಇರುವುದಿಲ್ಲ. ಅನ್ಯಭಾಷಿಕ ಕೃತಿಗಳಿಂದ, ಕೃತಿಕಾರರಿಂದ ಕವಿಗಳು ತಾವು ಪಡೆದುಕೊಳ್ಳಬಹುದಾದುದನ್ನು ಪಡೆದು ಲಕ್ಷ್ಯಭಾಷೆಯ ಓದುಗರಿಗೆ ಕೊಡುತ್ತಾರೆ. ಆದರೆ ಅನ್ಯಭಾಷಾ ಕೃತಿಗಳ ಕೃತಿಕಾರರ ಆಲೋಚನೆಗಳು ಓದುಗರತ್ತ ಸುಳಿಯದಂತೆ ತಡೆಯುತ್ತದೆ ಎಂಬುದೇ ವಾಸ್ತವ. ಅನ್ಯಭಾಷಾ ಕೃತಿಗಳ ಅನುಸೃಷ್ಟಿಯು ಸಾಹಿತ್ಯವನ್ನು ಲಕ್ಷ್ಯಭಾಷೆಯಲ್ಲಿ ಪೋಷಿಸುವ ವಿಧಾನ ಒಂದು ರೀತಿಯಲ್ಲಿ ಸೀಮಿತ ಪರಿಧಿಯಲ್ಲಿ ಇರಬಹುದು. ಈ ಪರಿಧಿಯಲ್ಲಿಯೂ ಅದು ಹೆಚ್ಚು ಪ್ರಭಾವಶಾಲಿಯಾಗಿಯೂ ಇರಬಹುದು. ಆದರೆ ಅನ್ಯಭಾಷಾ ಕೃತಿಗಳು, ಕೃತಿಕಾರರು ಇನ್ನಷ್ಟು ವಿಶಾಲ ದೃಷ್ಟಿಕೋನದಿಂದ ಪರಿಗ್ರಹಿಸುವ ಅವಕಾಶವನ್ನು ನೀಡುವ ಅನುವಾದವನ್ನು ನಿರಾಕರಿಸುವುದು ಅಪೇಕ್ಷಣೀಯವಲ್ಲ. ಕನ್ನಡದಲ್ಲಿ ಅನುಸೃಷ್ಟಿ ಪರಂಪರೆಗೆ ಸಿಕ್ಕ ಮಹತ್ವ ಅನುವಾದ ಪರಂಪರೆಗೆ ಪ್ರಾಚೀನ ಕಾಲದಿಂದಲೂ ದೊರೆಯಲಿಲ್ಲ. ಹಾಗಾಗಿ ಅನುವಾದ ಎಂದರೆ ಎರಡನೆಯ ದರ್ಜೆಯ ಬರವಣಿಗೆ ಎಂಬ ನಿರಾಸಕ್ತಿ ಕನ್ನಡ ಓದುಗವಲಯದಲ್ಲಿದೆ. ಸಾಹಿತ್ಯವಲಯದಲ್ಲಿ ಆಧುನಿಕ ದಿನಗಳಲ್ಲಿಯೂ ಇದು ಮುಂದುವರಿದಿದೆ.

ಆಧುನಿಕ ದಿನಗಳ ರೂಪಾಂತರ ಪರಂಪರೆಯೂ ಇದರ ಮುಂದುವರಿದ ಭಾಗವೇ ಆಗಿದೆ. ಅನುವಾದಗಳು ಕನ್ನಡ ಸ್ವತಂತ್ರ ಕೃತಿಗಳಂತೆ ಓದಿಸಿಕೊಳ್ಳಬೇಕೆಂಬ ಅಪೇಕ್ಷೆ, ಓದಿಸಿಕೊಳ್ಳುತ್ತವೆ ಎಂಬ ವಿಮರ್ಶೆ ಅನುವಾದಕ್ಕೆ ಪ್ರೋತ್ಸಾಹ ನೀಡುವ ನೆಲೆಯಿಂದ ಹುಟ್ಟಿಕೊಂಡವುಗಳಲ್ಲ. ಅನ್ಯಭಾಷಾ ಪದ ಸಂಪತ್ತು, ಸಾಂಸ್ಕೃತಿಕ ವಿವರಗಳನ್ನು ಕನ್ನಡದ ನೆಲೆಯಿಂದಲೇ ಅರ್ಥ ಮಾಡಿಕೊಳ್ಳಬೇಕೆಂಬ ಅಪೇಕ್ಷೆ ಅನುವಾದವನ್ನು ಬೆಳೆಸುವುದಿಲ್ಲ. ಸಂವಹನವಾಗುವಂತೆ ಲಕ್ಷ್ಯಭಾಷೆಯಲ್ಲಿ ರೂಪಿಸಿದ

Scanned with CamScanner

ಅನುವಾದ ಬರವಣಿಗೆ, ಶ್ರಮಪಟ್ಟಾದರೂ ಅರ್ಥೈಸಿಕೊಳ್ಳಬೇಕೆಂಬ ಕುತೂಹಲದ ನಿಲುವು ಅನುವಾದಗಳನ್ನು ಉತ್ತೇಜಿಸಬಹುದು.

ಅನೇಕ ಕೃತಿಗಳ ಅನುವಾದಗಳು ಓದುಗರನ್ನು ಅವುಗಳ ಭಾಷೆ, ಬರವಣಿಗೆಯ ಶೈಲಿ ಇವುಗಳ ಕಾರಣಕ್ಕೆ ಸೆಳೆಯುತ್ತಿಲ್ಲವೆಂಬ ಆರೋಪವೂ ಕೇಳಿಸುತ್ತಿದೆ. ಗಾಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್‌ನ ನೋಬೆಲ್ ಪುರಸ್ಕೃತ ಕಾದಂಬರಿ 'ವನ್‌ಹಂಡ್ರಡ್ ಈಯರ್ಸ್ ಆಫ್ ಸೋಲಿಟ್ಯೂಡ್'ನ ಎರಡು ಅನುವಾದಗಳು ಕನ್ನಡದಲ್ಲಿ ಪ್ರಕಟವಾಗಿವೆ. ಒಂದಕ್ಕಿಂತಲೂ ಹೆಚ್ಚು ಆವೃತ್ತಿಗಳು ಬಂದರೂ ಸುಲಭವಾಗಿ ಗ್ರಾಹ್ಯವಾಗುತ್ತಿಲ್ಲ ಎಂಬ ಗೊಣಗಾಟ ಸಾಹಿತ್ಯವಲಯದಲ್ಲಿ ಕೇಳಿಬರುತ್ತಿದೆ. ಹೀಗೆಯೇ ಒಂದು ಕೃತಿಯ ಹಲವು ಅನುವಾದಗಳು ಪ್ರಕಟವಾದರೂ ಅನುವಾದಗಳಾಗಿ ಹೆಸರು ಮಾಡಿದ ಗದ್ಯ ಕೃತಿಗಳು ಬೆರಳೆಣಿಕೆಯಷ್ಟೇ ಇರಬಹುದು. ಅನುವಾದಗಳೆಂದಲ್ಲ ಅನುಸೃಷ್ಟಿಗಳಾಗಿ ರೂಪಿಸಿದ ಕಾವ್ಯಗಳು ಕನ್ನಡದಲ್ಲಿ ಹೆಸರಾಗಿವೆ. ಬೇಂದ್ರೆಯವರ ಮೇಘದೂತ, ಬಿ.ಎಂ. ಶ್ರೀಗಳು ರೂಪಾಂತರಿಸಿದ ಇಂಗ್ಲಿಷ್ ಗೀತೆಗಳಲ್ಲಿನ ಅನೇಕ ರಚನೆಗಳು ಕನ್ನಡದ ಜಾಯಮಾನವನ್ನು ಅನುಸರಿಸಿದ ಕಾರಣಕ್ಕೆ ಓದುಗರ ಮೆಚ್ಚುಗೆ ಪಡೆದಿವೆ. ಅನುಸೃಷ್ಟಿಯ ಮೂಲಕ ರೂಪಿಸಿದ ಕಾರಣಕ್ಕೆ ಕಾವ್ಯಗಳಿಗೆ ಮಹತ್ವವಿದೆ. ಡಿ.ವಿ.ಜಿ.ಯವರ ಉಮರನ ಒಸಗೆ ಒಳ್ಳೆಯ ಅನುವಾದವಾದರೂ ಗಮನಾರ್ಹವೆಂದು ಪರಿಗಣಿಸಲಿಲ್ಲ. ಆದರೆ ಅಪಾರ ಸಂಖ್ಯೆಯ ಗದ್ಯ ಅನುವಾದಗಳನ್ನು ಓದುವವರೂ ವಿರಳ. ಓದಿದರೂ ಓದಿ ಮರೆತು ಬಿಡುವವರೇ ಬಹಳ.

ಕನ್ನಡದಲ್ಲಿ ಇನ್ನೊಂದು ವಿದ್ಯಮಾನವನ್ನು ಗಮನಿಸಬಹುದು. ಅನುವಾದಗಳನ್ನು ಓದಿ ಅದನ್ನು ಉಲ್ಲೇಖಿಸುವಾಗ ಮುಖ್ಯವಾಗಿ ಇಂಗ್ಲಿಷ್ ಮೂಲಕ ಬಂದಿದ್ದರೆ – ಮೂಲ ಕೃತಿಯನ್ನು ಅಥವಾ ಇಂಗ್ಲಿಷ್ ಮೂಲವಷ್ಟೆ ಓದಿದಂತೆ ಬಿಂಬಿಸುವುದಿದೆ. ಕೆಲವೊಂದು ಅನುವಾದಗಳನ್ನು ಯಾವುದೋ ಭಾರತೀಯ ಭಾಷೆಯ ಮೂಲಕ ಕನ್ನಡದಲ್ಲಿ ರೂಪಿಸಿರುತ್ತಾರೆ. ಆದರೆ ಅನುವಾದಕರು ತಾವು ಅನುವಾದಕ್ಕೆ ಆಯ್ದುಕೊಂಡ ಕೃತಿಯ ಮೂಲವನ್ನು ಹೇಳುವುದಿಲ್ಲ. ಬಂಗಾಳಿಯೇ ಮೊದಲಾದ ಭಾಷೆಗಳಿಂದ ತೆಲುಗು ಮೂಲಕ ಬಂದ ಅನುವಾದಗಳು ಕನ್ನಡದಲ್ಲಿ ಇವೆ. ಆದರೆ ಅನುವಾದಕರು ಈ ಬಗೆಗೆ ಏನನ್ನು ಹೇಳದಿರುವುದೂ ಇದೆ.

ಕೆಲವೊಬ್ಬರು ಅನುವಾದಕರು ಬೇರೆ ಭಾಷೆಯ ಮೂಲಕ ಅನುವಾದವನ್ನು ಮಾಡಿದರೂ ತಾವು ಮೂಲ ಭಾಷೆಯನ್ನು ಅನುವಾದ ಮಾಡಿದವರಂತೆ ಬಿಂಬಿಸುವ ಪ್ರಯತ್ನ ಮಾಡುತ್ತಾರೆ. ಮೂಲಭಾಷೆಯನ್ನು ಕಲಿತಿಲ್ಲವಾದರೂ ಇನ್ನೊಂದು ಭಾರತೀಯ ಭಾಷೆಯನ್ನೋ ಇಂಗ್ಲಿಷನ್ನೋ ಆಧರಿಸಿ ಅನುವಾದವನ್ನು ರೂಪಿಸಿದವರು ಅನುವಾದದ ಆಕರ ಕೃತಿಯನ್ನು ಉಲ್ಲೇಖಿಸುವುದೇ ಇಲ್ಲ. ಇಂಗ್ಲಿಷ್ ಬಾರದೇ

ಇದ್ದರೂ ಬಲ್ಲವರಿಂದ ಹೇಳಿಸಿಕೊಂಡು ಅನುವಾದಿಸಿದ ಬಸವಪ್ರಶಾಸ್ತಿಗಳಂತಹವು ಆದರ್ಶ ಕನ್ನಡದಲ್ಲಿದೆ.

ಅನೇಕ ಓದುಗರು ಅನ್ಯಭಾಷಾ ಕೃತಿಗಳನ್ನು ಉಲ್ಲೇಖಿಸುವಾಗ ಸಜ್ಜ, ಸಮಾರಂಭಗಳ ಭಾಷಣಗಳಲ್ಲಿಯೂ ಸಹ ಮೂಲ ಭಾಷೆಯಲ್ಲಿಯೇ ಕೃತಿಗಳನ್ನು ಓದಿದವರಂತೆ ಮಾತನಾಡುತ್ತಿರುತ್ತಾರೆ. ಇಂಗ್ಲಿಷಿನ ಮೂಲಕ ಬಂದ ಅನೇಕ ಕೃತಿಗಳನ್ನು ಇಂಗ್ಲಿಷಿನ ಆಕರವನ್ನೆ ಓದಿದವರಂತೆ ಬಿಂಬಿಸುವುದರಿಂದ ಅನುವಾದಕರು ಗೌಣರಾಗಿಯೇ ಉಳಿಯುತ್ತಾರೆ. ಅನುವಾದ ಕೃತಿಗಳನ್ನೆ ಆಧರಿಸಿದ ಸಂದರ್ಭದಲ್ಲಿಯೂ ಅನುವಾದಕರನ್ನಾಗಲಿ, ಕೃತಿಯನ್ನಾಗಲಿ ಉಲ್ಲೇಖಿಸದ ಅಪ್ರಮಾಣಿಕತೆ ಕನ್ನಡದಲ್ಲಿ ಇದೆ. ಇದರಿಂದ ಅನುವಾದಕರ ಶ್ರಮವನ್ನು ಗುರುತಿಸುವುದಾಗಲಿ, ಅನುವಾದ ಕೃತಿಗಳ ಬಗೆಗೆ ಒಲವನ್ನು ಬೆಳೆಸಲು ಮುಂದಾಗದೆ ಇರುವುದರಿಂದ ಕನ್ನಡದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಎಂದೂ ಅನುವಾದ ನಗಣ್ಯವೇ ಆಗಿದೆ. ವಿಜ್ಞಾನ, ಸಮಾಜ ವಿಜ್ಞಾನಗಳ ಸಂದರ್ಭದಲ್ಲಿ ಮಾತ್ರ ಅನುವಾದಗಳ ಅವಲಂಬನೆ ಒಂದು ಮಿತಿಯವರೆಗಾದರೂ ವಿಷಯ ಪರಿಚಯದ ಕೊರತೆಯ ಕಾರಣಕ್ಕೆ ಸ್ವಲ್ಪ ಮಟ್ಟಿಗೆ ಉಳಿದುಕೊಂಡಿದೆ.

ಅನುವಾದಗಳಲ್ಲಿ ತೊಡಕು

ಸಾಮಾನ್ಯವಾಗಿ ಅನುವಾದಗಳು ತೊಡಕೆನಿಸುತ್ತವೆ ಎಂಬೊಂದು ಆರೋಪವೂ ಇದೆ. ಇದಕ್ಕೆ ಕಾರಣಗಳೂ ಇವೆ. ಅನುವಾದಗಳನ್ನು ಮೂಲ ಕೃತಿಯ ಓದಿನಿಂದ ರೂಪಿಸುವಾಗ ಅನುವಾದಕರು ಕೆಲವೊಮ್ಮೆ ಮೂಲ ಭಾಷೆಯವರಿರುತ್ತಾರೆ. ಮತ್ತೆ ಕೆಲವೊಮ್ಮೆ ಲಕ್ಷ್ಯ ಭಾಷೆಯವರಿರುತ್ತಾರೆ. ಈ ಎರಡೂ ಸಂದರ್ಭಗಳಲ್ಲಿ ಅನುವಾದಗಳು ವಿಭಿನ್ನವಾಗಿಯೇ ರೂಪುಗೊಳ್ಳುತ್ತವೆ. ಮೂಲ ಭಾಷೆಯ ಅನುವಾದಕರು ಆ ಭಾಷೆಯ ಜಾಯಮಾನಕ್ಕೆ ನಿಷ್ಠರಾಗಿ ಅಲ್ಲಿನ ಬರವಣಿಗೆಯ ಶೈಲಿಯನ್ನು ಅವಲಂಬಿಸಿಯೇ ಕನ್ನಡದಲ್ಲಿ ಅನುವಾದಿಸಿರುತ್ತಾರೆ. ಮಲಯಾಳಂನಿಂದ ಅನುವಾದಿಸುವ ಕೆ.ಕೆ. ನಾಯರ್, ಅಶೋಕ ಕುಮಾರ್ ಮೊದಲಾದವರ ಅನುವಾದಗಳಲ್ಲಿ ಇದನ್ನು ಗುರುತಿಸಬಹುದು. ಹಾಗೆಯೇ ಕನ್ನಡ ಮನೆಮಾತಿನವರು ಮಲಯಾಳಂ ಅನುವಾದ ರೂಪಿಸುವಾಗಲೂ ಬರವಣಿಗೆಯ ಶೈಲಿ ಕನ್ನಡ ಜಾಯಮಾನವನ್ನು ಅನುಸರಿಸುತ್ತದೆ. ಉದಾಹರಣೆಗೆ ಬಿ.ಕೆ.ತಿಮ್ಮಪ್ಪ ಅವರ ಮಲಯಾಳಂ ಅನುವಾದ ಕೃತಿಗಳು. ಇವೆರಡೂ ಬಗೆಯ ಅನುವಾದಗಳನ್ನು ಹೊರತುಪಡಿಸಿ ಮೂಲ ಭಾಷೆಯೇ ತಿಳಿಯದೆ ಮಧ್ಯವರ್ತಿ ಭಾಷೆಯ –ಪ್ರಮುಖವಾಗಿ ಇಂಗ್ಲಿಷ್– ಮೂಲಕ ಮಾಡಿದ ಅನುವಾದಗಳು.

Scanned with CamScanner

ಉದಾಹರಣೆಗೆ ಮಲಯಾಳಂ ಮೂಲದ ವೈಕಂ ಮುಹಮ್ಮದ್ ಬಷೀರ್ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ ಎಸ್. ಗಂಗಾಧರಯ್ಯ ಅವರ 'ವೈಕಂ ಕತೆಗಳು'. ಇವು ಮೂರು ಬಗೆಯ ಅನುವಾದಗಳು. ಮೂಲ ಮಲಯಾಳಂ ಭಾಷೆಯ ಕೃತಿಗಳನ್ನು ಕಟ್ಟಿ ಕೊಡುವ ರೀತಿಯೂ ವಿಭಿನ್ನವೇ ಆಗಿವೆ.

ಮೂಲ ಮಾತೃ ಭಾಷೆಯ ಅನುವಾದಕರಿಗೆ ಮೂಲದ ಅರ್ಥದ ಬಗೆಗೆ ಸ್ಪಷ್ಟತೆ ಇರುವುದರಿಂದ ಅನುವಾದದಲ್ಲಿ ಮೂಲದ ಸಾಂಸ್ಕೃತಿಕ ಸೊಗಡನ್ನು ತರಬೇಕೆಂಬ ಹಟವಿರುತ್ತದೆ. ಲಕ್ಷ್ಯಭಾಷೆಯು ಮಾತೃ ಭಾಷೆಯಾಗುಳ್ಳ ಅನುವಾದಕರಿಗೆ ಕನ್ನಡದಲ್ಲಿ ಮೂಲ ಭಾಷೆಯ ಸಾಂಸ್ಕೃತಿಕ ವಿವರಗಳನ್ನು ಒಗ್ಗಿಸುವ ಕಾಳಜಿಯಿರುತ್ತದೆ. ಮೂಲ ಭಾಷೆಯ ಸೊಗಡರಿಯದ ಮೂಲಕ ಭಾಷೆಯ ಅನುವಾದಕರು ಲಕ್ಷ್ಯ ಭಾಷೆಯನ್ನು ಮಾತ್ರ ಕೇಂದ್ರೀಕರಿಸುವುದರಿಂದ ಯಾವುದೇ ಸಾಂಸ್ಕೃತಿಕ ತೊಡಕುಗಳು ಎದುರಾಗುವುದಿಲ್ಲ. ಭಾಷೆ ಹಾಗೂ ಬರವಣಿಗೆಯ ಬಗೆಗಿನ ನಿಷ್ಠೆ ಮಾತ್ರ ಇರುತ್ತದೆ.

ಹಾಗೆಯೇ ಕನ್ನಡನಾಡಿನ ಪ್ರಾದೇಶಿಕ ಭಾಷೆಗಳು ಆಯಾ ಪ್ರದೇಶದ ಗಡಿರಾಜ್ಯಗಳ ಭಾಷೆಗಳ ಪ್ರಭಾವಕ್ಕೊಳಗಾಗಿರುತ್ತವೆ. ಮರಾಠಿ ಪ್ರಭಾವದ ಮುಂಬಯಿ ಕರ್ನಾಟಕದ ಕನ್ನಡ, ಉರ್ದು ಪ್ರಭಾವದ ಹೈದರಾಬಾದ್ ಕರ್ನಾಟಕದ ಕನ್ನಡ, ತಮಿಳು ಪ್ರಭಾವದ ಮೈಸೂರು ಕರ್ನಾಟಕ ಪ್ರಭಾವದ ಕನ್ನಡಗಳು ಆಯಾ ಪ್ರದೇಶಗಳವರಿಗೆ ಸುಲಭವಾಗಿ ತಿಳಿಯುತ್ತವೆ. ಆಯಾ ಪ್ರದೇಶಗಳಲ್ಲಿ ರೂಪಿಸಿದ ಅನುವಾದಗಳೂ ಆಯಾ ಪ್ರದೇಶದ ಭಾಷೆಗಳನ್ನೇ ಪ್ರತಿನಿಧಿಸುತ್ತವೆ. ಆ ಕಾರಣಕ್ಕಾಗಿಯೇ ಮರಾಠಿ ಅನುವಾದಗಳು ಮುಂಬಯಿ ಕರ್ನಾಟಕದ ಜನರಿಗೆ ಪ್ರಿಯವಾಗುತ್ತವೆ. ಉರ್ದು ಅನುವಾದಗಳು ಹೈದರಾಬಾದ್ ಕರ್ನಾಟಕದ ಓದುಗರಿಗೆ ಪ್ರಿಯವಾಗುತ್ತವೆ. ತಮಿಳು, ಮಲಯಾಳಂ ಅನುವಾದಗಳು ದಕ್ಷಿಣ ಕರ್ನಾಟಕದ ಓದುಗರನ್ನು ಸೆಳೆಯುವಂತೆ, ಗುಲ್ಬರ್ಗಾ ಪ್ರದೇಶದ ಓದುಗರನ್ನು ಸೆಳೆಯುವುದಿಲ್ಲ. ಅನುವಾದಕರು ತಾವು ಬದುಕುವ ಪ್ರಾದೇಶಿಕ ಕನ್ನಡದ ಸ್ವರೂಪಕ್ಕೆ ಒಗ್ಗಿಸುವ ಪ್ರಯತ್ನವನ್ನು ಮಾಡುತ್ತಿರುತ್ತಾರೆ. ಗುಲ್ಬರ್ಗಾ ಪ್ರದೇಶದ ಪ್ರಾದೇಶಿಕ ಆಡುನುಡಿಯನ್ನು, ಚಾಮರಾಜನಗರದ ಆಡುನುಡಿಯನ್ನು, ಕಾಸರಗೋಡು ಪ್ರದೇಶದ ಆಡುನುಡಿಯನ್ನು ಬಳಸಿ ಅನುವಾದಿಸಿದ ಅನೇಕ ಕೃತಿಗಳು ಕನ್ನಡದಲ್ಲಿವೆ. ಕನ್ನಡದಲ್ಲಿ ಬರುವ ಅನುವಾದ ಕೃತಿಗಳು ಕರ್ನಾಟಕದ ಎಲ್ಲಾ ಪ್ರದೇಶದ ಓದುಗರನ್ನು ಸಮಾನವಾಗಿ ತಲುಪುತ್ತಿಲ್ಲ ಎಂಬುದು ವಾಸ್ತವ. ಇದಕ್ಕೆ ಅನುವಾದಕರ ಇತಿಮಿತಿಗಳೇ ಕಾರಣವಿರಬಹುದು.

ಬಿ.ಎಂ.ಶ್ರೀಯವರ ಹಾಗು ಬೇಂದ್ರೆಯವರ ಅನುವಾದಗಳ ಭಾಷೆ ಒಂದೇ ಆಗಿಲ್ಲ. ಮಾತಿನ ಭಾಷೆಯ ಸೊಗಡನ್ನು ಉಳಿಸಿಕೊಂಡ ಭಾಷೆ ಅಲ್ಲವಾದರೂ ಇವೆಲ್ಲ ಬರಹದ ಭಾಷೆಯಾಗಿ ವಿಕರೂಪದಲ್ಲಿ ರೂಪಿಸಲು ಸಾಧ್ಯವಾಗದುದರ ಕಾರಣವೇನಿರಬಹುದು? ತಮ್ಮ ನೆಲದ ಭಾಷೆ ಮತ್ತು ಅದು ಪ್ರಚಲಿತದಲ್ಲಿರುವ ಸಾಂಸ್ಕೃತಿಕ ವಿವರಗಳ ಮೂಲಕವೇ ಮನ್ನಣೆ ದೊರೆಯಬೇಕೆಂಬ ಲೇಖಕರ ಅಪೇಕ್ಷೆಯೆ ಕಾರಣವಿರಬಹುದು. ಪ್ರಾದೇಶಿಕ ವಿನ್ಯಸತೆಗೆ ಮಾನ್ಯತೆ ನೀಡುವ ಕನ್ನಡ ಓದುಗರ ಹಾಗೂ ವಿಮರ್ಶಕರ ನಿಲುವುಗಳೂ ಕಾರಣವಿರಬಹುದು. ಕನ್ನಡದಲ್ಲಿ ಬರೆಯುವ ಬರಹಗಾರರೆಲ್ಲ ಪ್ರಾದೇಶಿಕ ಪ್ರಜ್ಞೆಯನ್ನೂ ಬರಹದ ಸಂದರ್ಭದಲ್ಲಿ ಉಳಿಸಿಕೊಂಡಿರುವುದರ ಪರಿಣಾಮವೂ ಇರಬಹುದು. ಪ್ರಾದೇಶಿಕತೆಯನ್ನು ಉಳಿಸಿಕೊಂಡು ಎಲ್ಲಾ ಕಾಲಕ್ಕೂ, ಪ್ರದೇಶಗಳಿಗೂ ಸಮಾನ ರೀತಿಯಲ್ಲಿ ಸಂವಹನವಾಗುವ ಕನ್ನಡ ಬರವಣಿಗೆಯನ್ನು ರೂಪಿಸಿದ ವಚನಕಾರರ ಭಾಷೆಯಿದೆ. ಹನ್ನೆರಡನೆಯ ಶತಮಾನದ ವಚನಕಾರರು ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಭಾಷೆಯ ದೃಷ್ಟಿಯಿಂದ ಸಮಕಾಲೀನರೇ ಆಗಿದ್ದಾರೆ. ಆದರೆ ಕನ್ನಡದ ಬಹು ಮುಖ್ಯ ಲೇಖಕರು, ಅನುವಾದಕರು ಪ್ರಾದೇಶಿಕತೆಯ ಚೌಕಟ್ಟಿನಲ್ಲಿ ಬರಹಗಳನ್ನು ರೂಪಿಸಿ ಕಾಲದ ಮರೆಗೆ ಸಲ್ಲುತ್ತಿದ್ದಾರೆ. ಇದಕ್ಕೆ ಕೇವಲ ಭಾಷೆ ಬರಹದ ಶೈಲಿ ಅಷ್ಟೇ ಕಾರಣ ಆಗಿರಲಾರದು. ಆದರೆ ಇವು ಬಹುಮುಖ್ಯ ಕಾರಣಗಳಲ್ಲಿ ಸೇರಿವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಅನ್ಯಭಾಷೆಯ ಕೃತಿಗಳನ್ನು ಕನ್ನಡದಲ್ಲಿ ಅನುವಾದಿಸುವಾಗ ಉಪಭಾಷೆಗಳನ್ನು ಆಶ್ರಯಿಸಿದುದೂ ಇದೆ. 1958ರಲ್ಲಿ ಪ್ರಕಟವಾದ ಚಿನುವ ಅಚಿಬೆಯ 'Things Fall Apart' 'ಕಳಚಿದ ಕೊಂಡಿ'(1997) ಎಂದು ಪ್ರವೋದ ಮುತಾಲಿಕ ಅವರು ಉತ್ತರ ಕರ್ನಾಟಕದ ಆಡು ಭಾಷೆಯಲ್ಲಿ ಅನುವಾದಿಸಿದ್ದಾರೆ. ಇದೇ ಕಾದಂಬರಿಯ ಇನ್ನೊಂದು ಅನುವಾದವನ್ನು ಸಿ. ನಾಗಣ್ಣ ಅವರು 'ಭಂಗ'(2001) ಎಂದು ಅನುವಾದಿಸಿದ್ದು, ಇದರಲ್ಲಿ ನಂಜನಗೂಡಿನ ಪ್ರಾದೇಶಿಕ ಭಾಷೆಯನ್ನು ಬಳಸಿದ್ದಾರೆ.

ಟಿ.ಪಿ.ಕೈಲಾಸಂ ಅವರ ಟೊಳ್ಳುಗಟ್ಟಿ ನಾಟಕವನ್ನು ರಂ.ಶ್ರೀ.ಮುಗಳಿ ಯವರು ಉತ್ತರ ಕರ್ನಾಟಕದ ಭಾಷೆಗೆ ಅನುವಾದಿಸಿದ್ದಾರೆ. ಹೀಗೆ ಪ್ರಾದೇಶಿಕ ಭಾಷೆ ಮತ್ತು ಅವುಗಳ ಅನುವಾದಗಳ ಅಗತ್ಯವನ್ನು ಹೇಳುವಾಗಲೇ ಪ್ರಾದೇಶಿಕ ಉಪಭಾಷೆಗಳ ಅನುವಾದಗಳು ಓದುಗರನ್ನು ತಲುಪುವುದಿಲ್ಲ ಎಂಬುದನ್ನು ಒಪ್ಪಿಕೊಂಡಂತಾಗಿದೆ. 'ಕುಸುಮ ಬಾಲೆ'ಯ ಭಾಷೆ ಅರ್ಥವಾಗುವುದಿಲ್ಲವೆಂದು ಕನ್ನಡಕ್ಕೆ ಅನುವಾದಿಸಬೇಕೆಂದು ಪ್ರಸಿದ್ಧ ಲೇಖಕರೇ ಹೇಳಿದ್ದನ್ನು ಇಲ್ಲಿ

Scanned with CamScanner

ನೆನಪಿಸಿಕೊಳ್ಳಬೇಕು. ಹಾಗೆ ನೋಡಿದರೆ ಕುವೆಂಪು ಅವರ 'ಶೂದ್ರ ತಪಸ್ವಿ'ಯ ಭಾಷೆ ಯಾವುದೇ ಪ್ರಾದೇಶಿಕ ಉಪಭಾಷೆಯಲ್ಲವಾದರೂ ಹೃದ್ಯವೆನಿಸುತ್ತದೆ.

ಪ್ರಾದೇಶಿಕ ಭಾಷೆಯನ್ನು ಮೀರಿ ಪ್ರಮಾಣ ಕನ್ನಡದಲ್ಲಿ ಅನುವಾದಗಳು ರೂಪುಗೊಳ್ಳಬೇಕು ಎಂಬ ಅಪೇಕ್ಷೆಯಿಂದ ಅನೇಕ ಕೃತಿಗಳು ಬಂದಿವೆ. ಹಾಗೆಯೇ ಸಮಾಜದ ಮೇಲುವರ್ಗದವರದೇ ಸರಿಯಾದ ಕನ್ನಡ ಎಂಬಿತ್ಯಾದಿ ತಿಳುವಳಿಕೆಗಳು ಭಾಷೆಯ ಬ್ರಾಹ್ಮಣೀಕರಣವನ್ನು ಉತ್ತೇಜಿಸಬಹುದೆ ಹೊರತು ಕನ್ನಡದ ದೇಸಿ ಸೊಗಡನ್ನು ಭಾಷೆಯ ಮೂಲಕ ಕಟ್ಟಿಕೊಡಲಾರದು. ಮೂಲಭಾಷೆಗೆ ಯಾವುದೇ ಲಕ್ಷ್ಯ ಭಾಷೆ ಸಂವಾದಿ ಭಾಷೆ ಆಗಲಾರದು. ಅನುವಾದದಲ್ಲಿ ಮೂಲಕೃತಿಗೆ ಪರ್ಯಾಯ ಪ್ರಾದೇಶಿಕ, ಸಾಮುದಾಯಿಕ ಭಾಷೆಗಳನ್ನು ಆಯ್ದುಕೊಳ್ಳುವುದು ಅಪೇಕ್ಷಣೀಯವೇ ಆಗಿದೆ.

ಉರ್ದು, ಮರಾಠಿ ಅನುವಾದಗಳಿಗೆ ದಕ್ಷಿಣ ಕರ್ನಾಟಕದಲ್ಲಿ ಓದುಗರು ಕಡಿಮೆ. ತಮಿಳು, ಮಲಯಾಳಂ ಅನುವಾದಗಳಿಗೆ ಬೀದರ್, ಗುಲ್ಬರ್ಗಾ ಕಡೆಯಲ್ಲಿ ಓದುಗರು ಇಲ್ಲವೆನ್ನುವಷ್ಟು ವಿರಳ. ಯಥಾವತ್ತಾದ ಅನುವಾದಗಳಿಗೆ, ಓದುಗರ ಸಂಖ್ಯೆ ಕಡಿಮೆಯೆ. ಕುವೆಂಪು ಅವರ 'ರಕ್ತಾಕ್ಷಿ' ಹ್ಯಾಮ್ಲೆಟ್ ನಾಟಕವನ್ನು ಆಧರಿಸಿದ ರೂಪಾಂತರ. ಇದು ಬಿದನೂರು ಸಂಸ್ಥಾನದ 'ಕತೆಯಾಗಿ ಸ್ಥಳೀಕರಣಗೊಳಿಸಿದ ಕಾರಣಕ್ಕಾಗಿ ಆ ಕೃತಿಗೆ ಇರುವ ವ್ಯಾಪಕ ಓದುಗ ವರ್ಗ ಹ್ಯಾಮ್ಲೆಟ್ ಅನುವಾದದ ಇತರ ಕೃತಿಗಳಿಗೆ ಇಲ್ಲ. ಹಾಗೆಯೇ ಶೂರಸೇನ ಚರಿತೆ, ಪ್ರತಾಪರುದ್ರದೇವ ಮೊದಲಾದ ಸ್ಥಳೀಕರಣಗೊಳಿಸಿದ ರೂಪಾಂತರಗಳನ್ನು ಕನ್ನಡಿಗರು ಒಪ್ಪಿಕೊಳ್ಳುವಂತೆ ಯಥಾವತ್ತಾದ ಅನುವಾದಗಳನ್ನು ಸ್ವೀಕರಿಸುವುದಿಲ್ಲ. ಅನ್ಯ ಸಂಸ್ಕೃತಿಯ ಅಪರಿಚಿತತೆಯ ಕಾರಣಕ್ಕೆ ಅನುವಾದಗಳನ್ನು ಅನ್ಯವಾಗಿಯೇ ಉಳಿಸಿ ಅಂತರ ಕಾಯ್ದುಕೊಳ್ಳುವುದು ಕನ್ನಡ ಓದುಗರ ಸ್ವಭಾವವೇ ಆಗಿದೆ. ಬೇರೆ ಭಾಷೆಯ ಕೃತಿಗಳ ಅನುವಾದಗಳನ್ನು ತಮ್ಮ ಸಾಹಿತ್ಯ ಕೃತಿಗಳೊಡನೆ ತೌಲನಿಕವಾಗಿ ಪರಿಶೀಲಿಸುವ ಕುತೂಹಲವುಳ್ಳವರ ಕೊರತೆ ಕನ್ನಡದಲ್ಲಿ ಕಾಣಿಸುತ್ತಿದೆ.ಹಿಂದೆ ಇತರೆ ಭಾರತೀಯ ಭಾಷೆಗಳನ್ನೊ ಅಥವಾ ವಿದೇಶಿ ಭಾಷೆಗಳನ್ನು ಕಲಿಯುವ ಕನ್ನಡ ಬರಹಗಾರರಿದ್ದರು. ಇಂದು ಅನ್ಯಭಾಷೆಗಳನ್ನು ಕಲಿಯಲು ಅನುಕೂಲಗಳಿವೆ. ಆದರೆ ಕಲಿಯಬೇಕೆಂಬ ಆಸಕ್ತರಿಲ್ಲ. ಹಾಗಾಗಿ ಮೂಲದಿಂದ ನೇರವಾಗಿ ಅನುವಾದ ಮಾಡುವವರೂ ರೂಪುಗೊಳ್ಳುತ್ತಿಲ್ಲ. ಬೇರೆ ಭಾಷೆಯಲ್ಲಿ ಪ್ರಕಟವಾದ ಕೃತಿಗಳು ಕನ್ನಡಕ್ಕೆ ತತ್‌ಕ್ಷಣ ಅನುವಾದಿಸುವ ಯಾವ ಕ್ರಿಯಾ ಯೋಜನೆಗಳನ್ನು ರೂಪಿಸುವ ಸಂಘ-ಸಂಸ್ಥೆಗಳು ಕನ್ನಡದಲ್ಲಿ ಇಲ್ಲ. ಜಗತ್ತಿನ ಪ್ರಸಿದ್ಧ ಲೇಖಕರಲ್ಲೊಬ್ಬರಾದ ಟಾಲ್‌ಸ್ಟಾಯ್ ರಷ್ಯನ್ ಭಾಷೆಯಲ್ಲಿ ಕೃತಿರಚನೆ ಮಾಡಿದ್ದು 1867ರಲ್ಲಿ. ಕನ್ನಡದಲ್ಲಿ ಅನುವಾದವಾದುದು 1965ರ

ಸುಮಾರಿಗೆ. ಅಂದರೆ ತೊಂಬತ್ತೆಂಟು ವರ್ಷಗಳ ನಂತರ. ನೆರೆಯ ಮಲಯಾಳಂನಲ್ಲಿ 'ಇಂದುಲೇಖಾ' ಕಾದಂಬರಿ ಪ್ರಕಟವಾದುದು 1889ರಲ್ಲಿ. ಕನ್ನಡಕ್ಕೆ ಅನುವಾದವಾಗಿ ಪ್ರಕಟವಾದುದು 1995ರಲ್ಲಿ. 'ಶಾರದಾ' ಮಲಯಾಳಂನಲ್ಲಿ ಬಂದುದು 1893 ಕನ್ನಡ ಅನುವಾದ 2016. ಹೀಗೆ ಮೂಲ ಭಾಷೆಯ ಕೃತಿಗೂ ಅನುವಾದಗಳಿಗೂ ಶತಮಾನಗಳ ಅಂತರವಿದೆ.

ಸಾಂಸ್ಕೃತಿಕ ರಾಜಕಾರಣ

ಅನುವಾದಕ್ಕೆ ಕೃತಿಗಳನ್ನು ಆಯ್ಕೆ ಮಾಡುವಲ್ಲಿ ಸಾಂಸ್ಕೃತಿಕ ರಾಜಕಾರಣದ ಪ್ರಭಾವವನ್ನು ಅಲ್ಲಗಳೆಯಲಾಗದು. ಮೂಲ ಭಾಷೆಯ ಕೃತಿ ಇವತ್ತು ಅದು ಪ್ರತಿನಿಧಿಸುವ ಸಂಸ್ಕೃತಿ ಲಕ್ಷ್ಯ ಭಾಷೆಯಲ್ಲಿ ಅದನ್ನು ಅಪೇಕ್ಷಿಸುವ ಪ್ರಭುತ್ವ ಅನುವಾದವನ್ನು ರೂಪಿಸುವಂತೆ ನಿರ್ದೇಶಿಸುತ್ತದೆ. ಅಂತಹ ನಿರ್ದೇಶನಗಳು ಕೆಲವೊಮ್ಮೆ ಪ್ರತ್ಯಕ್ಷವಾಗಿ ಮತ್ತೆ ಕೆಲವೊಮ್ಮೆ ಪರೋಕ್ಷವಾಗಿ ಅನುವಾದದ ಆಯ್ಕೆಯ ಹಿಂದೆ ಕೆಲಸ ಮಾಡಬಹುದು. ಅನುವಾದಕರಾದವರೂ ಈ ಬಗೆಯ ಸಾಂಸ್ಕೃತಿಕ ರಾಜಕಾರಣದ ಭಾಗವಾಗಿಯೇ ಆಯ್ಕೆ ಪ್ರಕ್ರಿಯೆಯನ್ನು ಮಾಡಬಹುದು. ಸಮಕಾಲೀನ ಸಮಾಜ ಮತ್ತು ಅದು ಅಪೇಕ್ಷಿಸುವ ನಿರ್ದಿಷ್ಟ ವೈಚಾರಿಕ ಆಶಯಗಳ ಭಾಗವಾಗಿಯೇ ಅನುವಾದಗಳು ಕಾಣಿಸಿಕೊಳ್ಳುತ್ತವೆ.

ಬಿ.ಎಂ.ಶ್ರೀಯವರ ಇಂಗ್ಲಿಷ್ ಗೀತೆಗಳನ್ನು ಆಯ್ಕೆಮಾಡಿ ರೂಪಾಂತರಿಸುವಲ್ಲಿ ಅಂದಿನ ಸಮಕಾಲೀನ ಸಾಂಸ್ಕೃತಿಕ ರಾಜಕಾರಣದ ಪ್ರಭಾವವಿದೆ. ಇದು ರಾಜಕೀಯ ಪ್ರಭುತ್ವದ ಭಾಗವಾಗುವುದಕ್ಕಿಂತಲೂ ಸಾಂಸ್ಕೃತಿಕ ಪ್ರಭುತ್ವದ ಭಾಗವಾಗಿಯೇ ಆಗಿದೆ. ಕನ್ನಡ ಭಾಷೆಯಲ್ಲಿ ಸಂಸ್ಕೃತ ಕಾವ್ಯ ಪರಂಪರೆಯನ್ನು ವಿಸ್ತರಿಸುವ ರೀತಿಯಲ್ಲಿಯೇ ಆಧುನಿಕ ದಿನಗಳಲ್ಲಿಯೂ ಮುಂದುವರಿದಿತ್ತು. ಪಾಶ್ಚಾತ್ಯ ಪ್ರಭಾವ ಅದರಲ್ಲಿಯೂ ಇಂಗ್ಲಿಷ್ ಶಿಕ್ಷಣದ ಪರಿಣಾಮವಾಗಿ ಚಿಂತನೆ, ಆಶಯ ಹಾಗೂ ಬರವಣಿಗೆಯ ವಿಧಾನವನ್ನು ಹೊಸದಾಗಿ ರೂಪಿಸಿಕೊಳ್ಳುವ ಅಗತ್ಯ ಕನ್ನಡ-ಸಾಹಿತ್ಯಕ್ಕೆ ಇತ್ತು. ಇದನ್ನು ಮನಗಂಡು ಕನ್ನಡದಲ್ಲಿ ಹೊಸ ಬಗೆಯ ಕಾವ್ಯ ರಚನೆಗೆ ಬೇಕಾದ ಮಾದರಿಗಳನ್ನು ರೂಪಿಸಿಕೊಡುವ ಪ್ರಯತ್ನವನ್ನು ಬಿ.ಎಂ.ಶ್ರೀಯವರು ಮಾಡಿದರು. ಕನ್ನಡದ ಸಾಂಸ್ಕೃತಿಕ ವಲಯವನ್ನು ಹೊಸ ಬಗೆಯಲ್ಲಿ ಪ್ರಚೋದಿಸುವ ಸಾಧ್ಯತೆಯನ್ನು ಕನ್ನಡ ಸಾಂಸ್ಕೃತಿಕ ಪ್ರಭುತ್ವದ ನೆಲೆಯಿಂದ ಕಂಡುಕೊಂಡರು. ಕನ್ನಡದ ಇತಿಮಿತಿಗಳನ್ನು ಪಶ್ಚಿಮದ ಪ್ರಭಾವದಿಂದ ಮೀರಬಹುದು ಎಂಬ ಯೋಚನೆಯಿಂದ ಇಂಗ್ಲಿಷ್ ಗೀತೆಗಳು ರೂಪುಗೊಂಡುವು. ಕನ್ನಡವು ಸಂಸ್ಕೃತದ ಕೊಂಡಿ ಕಳಚಿಕೊಂಡು ಇಂಗ್ಲಿಷ್‌ನ ಸಂಪರ್ಕದಿಂದ ಹೊಸ ಬಗೆಯಲ್ಲಿ

Scanned with CamScanner

ಬೆಳೆಯಬೇಕಾದ ಅಗತ್ಯವನ್ನು ಬಿ.ಎಂ.ಶ್ರೀ ಅವರು ಮನಗಂಡಿದ್ದರು. ಕನ್ನಡ ಓದುಗರು ಬರಹಗಾರರು ಒಪ್ಪುವ ರೀತಿಯಲ್ಲಿ ಸಮಕಾಲೀನ ಕನ್ನಡ ಕಾವ್ಯಕ್ಕೆ ಹೊಸ ದಾರಿಯನ್ನು ತೋರಿದರು. ಶ್ರೀಯವರು ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ನಿರ್ವಹಿಸಿದ ಈ ಮಹತ್ಕಾರ್ಯದಿಂದ ಆಧುನಿಕ ಕನ್ನಡ ಕಾವ್ಯ ಹೊಸ ಜಾಡನ್ನು ಹಿಡಿಯಿತು. ಅದರ ಪ್ರಭಾವ ಆಧುನಿಕ ಕನ್ನಡದ ಸಂದರ್ಭದಲ್ಲಿ ಶತಮಾನಗಳವರೆಗೂ ಮುಂದುವರಿಯುವಲ್ಲಿ ಶಕ್ತವಾಯಿತು.

ಸ್ವಾತಂತ್ರ್ಯೋತ್ತರ ಭಾರತದಲ್ಲಿನ ಅಧಿಕಾರ ರಾಜಕಾರಣವು ಗಾಂಧಿ ಚಿಂತನೆಗಳನ್ನು ಭಾರತೀಯ ಭಾಷೆಗಳಿಗೆ ಅನುವಾದಿಸುವ ಕೆಲಸಗಳನ್ನು ಮಾಡಿತು. ಕನ್ನಡದಲ್ಲಿಯೂ ಗಾಂಧೀ ಚಿಂತನೆಗಳು ಅನುವಾದಗೊಂಡು ಪ್ರಕಟವಾದುವು. ಅದೇ ವೇಳೆಗೆ ಸಮಕಾಲೀನರಾದ ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳ ಅನುವಾದಗಳಿಗೆ ಅವಕಾಶ ದೊರೆಯಲಿಲ್ಲ. 20ನೆಯ ಶತಮಾನದ ಕೊನೆಯ ದಶಕಗಳಲ್ಲಿ ಅಂಬೇಡ್ಕರ್ ಚಿಂತನೆಗಳಿಗೆ ಹೆಚ್ಚಿನ ಮಾನ್ಯತೆ ಪ್ರಭುತ್ವದ ಕಡೆಯಿಂದ ದೊರೆಯಿತು. ಪರಿಣಾಮವಾಗಿ ಅನೇಕ ಸಾಂಸ್ಕೃತಿಕ ಸಂಘ-ಸಂಸ್ಥೆಗಳು ಅಂಬೇಡ್ಕರ್ ಬರಹಗಳ ಅನುವಾದಗಳನ್ನು ಕನ್ನಡದಲ್ಲಿ ಈಗಲೂ ಪ್ರಕಟಿಸುತ್ತಿವೆ. ಅಂಬೇಡ್ಕರ್ ಚಿಂತನೆಗಳಿಗೆ ಸಮಕಾಲೀನ ಸಾಮಾಜಿಕ ರಾಜಕೀಯ ವಲಯಗಳಲ್ಲಿ ದೊರೆತ ಪ್ರಾಶಸ್ತ್ಯದಿಂದಾಗಿ ಅವು ಕನ್ನಡದಲ್ಲಿ ಎಲ್ಲರಿಗೂ ಲಭ್ಯವಾಗುವಂತೆ ಸಾಂಸ್ಕೃತಿಕ ರಾಜಕಾರಣ ಮುತುವರ್ಜಿ ವಹಿಸಿದೆ. ಅಂಬೇಡ್ಕರ್ ಬರಹಗಳು, ಭಾಷಣಗಳು ಅವರ ಸಮಕಾಲೀನ ದಿನಗಳಿಗಿಂತ ಇಂದು ಹೆಚ್ಚು ಪ್ರಸ್ತುತವಾಗಲು ಇಂದಿನ ಸಾಂಸ್ಕೃತಿಕ ರಾಜಕಾರಣದ ಪ್ರಭುತ್ವವೇ ಕಾರಣವಾಗಿದೆ.

ಹಾಗೆಯೆ ಸಮಾಜವಾದಿ ಚಿಂತನೆಗಳು ಸಮಾಜದಲ್ಲಿ ರಾಜಕೀಯವಾಗಿ ನೆಲೆಯೂರತೊಡಗಿದಾಗ ಕನ್ನಡದಲ್ಲಿಯೂ ಅವುಗಳ ಅನುವಾದಗಳು ಪ್ರಕಟವಾಗಲಾರಂಭಿಸಿದುವು. ಲೋಹಿಯಾ ಜೀವಿಸಿದ್ದ ದಿನಗಳಲ್ಲಿ ಕನ್ನಡದಲ್ಲಿ ಅನುವಾದವಾಗಿ ಕಾಣಿಸಿಕೊಳ್ಳದೆ ಇದ್ದರೂ ಮುಂದೆ ಅವುಗಳು ಪ್ರಕಟವಾಗಲು ಸಾಂಸ್ಕೃತಿಕ ರಾಜಕಾರಣವೇ ಪ್ರಮುಖ ಕಾರಣ. ಮಾರ್ಕ್ಸ್‌ವಾದಿ ಚಿಂತನೆಗಳು ರಾಜಕೀಯವಾಗಿ ಪ್ರಚಾರಕ್ಕೆ ಅನಿವಾರ್ಯವಾದುವು. ಹಿಂದುಗಳಿದ ವರ್ಗಗಳ ಚಳವಳಿಗೆ ತಮಿಳಿನ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಅವರ ಚಿಂತನೆ ಪ್ರೇರಣೆ ಒದಗಿಸುವ ಸಂದರ್ಭಗಳು ಒದಗಿದಾಗ ಕನ್ನಡದಲ್ಲಿ ಪೆರಿಯಾರ್ ಚಿಂತನೆಗಳು ಕಾಣಿಸಿಕೊಂಡುವು. ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಬರೆಹಗಳ ಅನುವಾದಗಳು ಇತ್ತೀಚೆಗೆ ಪ್ರಕಟವಾಗುತ್ತಿರುವುದು ಸಾಂಸ್ಕೃತಿಕ ರಾಜಕಾರಣದ ಭಾಗವೇ ಆಗಿದೆ. ಹಾಗೆ ಕೃತಿಯೊಂದರ ಆಯ್ಕೆ ಮತ್ತು ಅನುವಾದಗಳ ಹಿಂದೆ

ಸಾಂಸ್ಕೃತಿಕ ರಾಜಕಾರಣವು ಮಹತ್ತರ ಪಾತ್ರ ವಹಿಸುತ್ತದೆ. ಸಾಂಸ್ಕೃತಿಕ ಅಪೇಕ್ಷೆ, ಒತ್ತಡಗಳು ಲಕ್ಷ್ಯ ಭಾಷೆಯ ಸಂದರ್ಭದಲ್ಲಿ ಪ್ರಭುತ್ವದ ನಿಯಂತ್ರಣಕ್ಕೆ ಒದಗಿದಾಗ ಕೃತಿಯೊಂದರ ಅನುವಾದ ರೂಪುಗೊಳ್ಳುತ್ತದೆ. ಸಾಂಸ್ಕೃತಿಕ ರಾಜಕಾರಣವು ಬಹುತೇಕ ಸಾಮೂಹಿಕ ಅಪೇಕ್ಷೆಯ ನೆಲೆಯಿಂದಲೇ ಮುನ್ನೆಲೆಗೆ ಬಂದಿರಬಹುದು. ಅವು ಮೂಲ ಕೃತಿ ರೂಪಿಸಿದ ಸಮಾಜದ ಸಮಕಾಲೀನತೆಗಿಂತ ಲಕ್ಷ್ಯ ಭಾಷಾ ಸಮಕಾಲೀನತೆಗೆ ಹೆಚ್ಚು ಪ್ರಸ್ತುತವಾಗಿರುತ್ತವೆ. ಹಾಗಾಗಿ ಲಕ್ಷ್ಯಭಾಷೆಯಲ್ಲಿ ಪ್ರಸ್ತುತವಾಗುವ ಕಾಲಘಟ್ಟವು ಮೂಲಕೃತಿ ರಚನೆಯ ಕಾಲದಿಂದ ಕುಂದಾ ಅಂತರದಲ್ಲಿಯೇ ಇರಬಹುದು. ಅಂದರೆ ಕೃತಿಯೊಂದರ ಅನುವಾದ ರೂಪುಗೊಳ್ಳಲು ಸಮಕಾಲೀನ ಸಾಂಸ್ಕೃತಿಕ ರಾಜಕಾರಣದ ನೆರವು ಇದ್ದೇ ಇರುತ್ತದೆ. ಅದನ್ನು ರೂಪಿಸುವಲ್ಲಿ ಸಾಹಿತ್ಯ, ರಾಜಕೀಯ, ಧಾರ್ಮಿಕ, ಸಾಮಾಜಿಕ ಪ್ರಭಾವಗಳು ಇವುಗಳಲ್ಲಿ ಯಾವುದೇ ಒಂದು ಘಟಕ ನಿರ್ಣಾಯಕ ಪಾತ್ರವಹಿಸಬಹುದು. ಕೃತಿಯೊಂದು ನಿರ್ದಿಷ್ಟ ಸಾಂಸ್ಕೃತಿಕ ಆಶಯಗಳಿಗೆ ನೆರವಾಗುವುದರ ನೆಲೆಯಿಂದಲೇ ರಾಜಕಾರಣದ ಸ್ವರೂಪವನ್ನು ಗುರುತಿಸಬಹುದು. ಅಂದರೆ ಸಾಂಸ್ಕೃತಿಕ ರಾಜಕಾರಣವನ್ನು ಮಾಡುವ ಶಕ್ತಿ ಇರುವುದು ಕೃತಿಯಲ್ಲಿ ಅಲ್ಲ, ಬದಲಾಗಿ ಅದು ಅನುವಾದವಾಗುವ ಲಕ್ಷ್ಯಭಾಷೆಯ ಸಂದರ್ಭದಲ್ಲಿ ಎಂಬುದು ಗಮನಾರ್ಹ.

ಪದ್ಯ ಹೃದ್ಯ

ಕನ್ನಡದಲ್ಲಿ ಪದ್ಯಾನುವಾದಗಳಿಗೆ ಸಿಕ್ಕ ಪ್ರಾಶಸ್ತ್ಯ ಗದ್ಯಾನುವಾದಗಳಿಗೆ ದೊರೆಯಲಿಲ್ಲ. ಅರವತ್ತೂರು ಪುರಾತನರನ್ನು ಕುರಿತು ರೇಕ್ಕಿಕಾರ್ ಕವಿ ಬರೆದ 'ಪೆರಿಯ ಪುರಾಣಂ' ಗದ್ಯಕೃತಿ. ಅದೇ ವಿಷಯವನ್ನಾಧರಿಸಿದ ಹರಿಹರನ ರಗಳೆ ಛಂದಸ್ಸಿನ ಪದ್ಯಕೃತಿಯಾಗಿದೆ. ಬಾಣಭಟ್ಟನ ಸಂಸ್ಕೃತ ಕಾದಂಬರಿ ಗದ್ಯ. ಅದನ್ನಾಧರಿಸಿದ 'ಕರ್ಣಾಟಕ ಕಾದಂಬರಿ' ಚಂಪೂ ಕಾವ್ಯ. ಆಧುನಿಕ ಪೂರ್ವ ದಿನಗಳಲ್ಲಿ ಪದ್ಯ ಕಾವ್ಯಗಳಿಗೆ ಸಿಕ್ಕ ಮನ್ನಣೆ ಆಧುನಿಕ ದಿನಗಳ ಹೊತ್ತಿಗೆ ಗದ್ಯಬರಹಗಳಿಗೆ ದೊರೆಯಿತು. ಮುದ್ದಣ 'ಪದ್ಯಂ ವದ್ಯಂ ಗದ್ಯಂ ಹೃದ್ಯಂ' ಎಂದೇ ಸಾರಿ ಗದ್ಯಕ್ಕೆ ಪ್ರಾಶಸ್ತ್ಯ ನೀಡಿದ. ಕೆಂಪು ನಾರಾಯಣನ 'ಮುದ್ರಾರಾಕ್ಷಸ' ನಾಟಕವನ್ನು ಮುದ್ರಾಮಂಜೂಷವಾಗಿ ಗದ್ಯಾನುವಾದ ಮಾಡಲಾಯಿತು. ಇಷ್ಟಿದ್ದರೂ ಕಾವ್ಯಾನುವಾದಗಳಿಗೆ ದೊರೆತ ಪ್ರಚಾರ, ಪ್ರಸಿದ್ಧಿ ಗದ್ಯಾನುವಾದಗಳಿಗೆ ಸಾಹಿತ್ಯವಲಯದಲ್ಲಿ ದೊರೆಯಲಿಲ್ಲ. ಇಂಗ್ಲಿಷಿನ ವರ್ಡ್ಸ್‌ವರ್ತ್, ಕೀಟ್ಸ್, ಜರ್ಮನ್ ಕವಿಗಳಾದ ರಿಲ್ಕ್, ಗಯಟೆ ಫ್ರೆಂಚ್ ಕವಿಗಳಾದ ಚಾರ್ಲ್ಸ್ ಬೋದಿಲೇರ್ ರಷ್ಯನ್ ಕವಿ ಅಲೆಗ್ಸಾಂಡರ್ ಪುಷ್ಕಿನ್ ಮೊದಲಾದವರ ಕವಿತೆಗಳು ಕನ್ನಡದಲ್ಲಿ ಅನುವಾದ

Scanned with CamScanner

ವಾಗಿವೆ. ಸಾಹಿತ್ಯ ವಲಯದಲ್ಲಿ ಈ ಕವಿಗಳ ಹೆಸರುಗಳು ಪರಿಚಿತವೆನಿಸಿವೆ. ಹಾಗೆಯೇ ಜಿ.ಪಿ.ರಾಜರತ್ನಂ ಅವರ ಬುದ್ಧ ಚರಿತೆ, ಎಲ್.ಬಸವರಾಜ ಅವರ 'ಸೌಂದರ ನಂದ' ಮೊದಲಾದ ಕಾವ್ಯಾನುವಾದಗಳು ವಸ್ತು ವಿಷಯಗಳಿಂದಷ್ಟೇ ಅಲ್ಲ, ಅನುವಾದದ ನಿರೂಪಣೆ ಶೈಲಿಯಿಂದಲೂ ಹೃದ್ಯವೆನಿಸುವ ರಚನೆಗಳು. ಕಾವ್ಯ ಅನುವಾದಗಳಲ್ಲಿ ಮೂಲ ಪದ್ಯದ ಭಾಷಿಕ ಲಯ, ಛಂದಸ್ಸು, ಶ್ಲೇಷಾರ್ಥಗಳೊಡನೆ ರೂಪಿಸುವುದು ಸಾಧ್ಯವಿಲ್ಲ ಎಂಬೊಂದು ಮಾತಿದೆ. ಹಾಗಾಗಿ ಗದ್ಯಾನುವಾದಗಳು ಹೆಚ್ಚಾಗಿ ಕನ್ನಡದಲ್ಲಿ ಆಗಿವೆ. ಯಾವುದೇ ಅನುವಾದಗಳು ಮಧ್ಯವರ್ತಿ ಭಾಷೆಯ ಮೂಲಕ ಬರುವಾಗಲೂ ಆಧುನಿಕ ದಿನಗಳಲ್ಲಿ ಮೂಲ ಭಾಷೆಯ ಲಯವನ್ನು ಕೇಳಿಸಿಕೊಳ್ಳುವ ಅವಕಾಶಗಳಿವೆ. ಕಾವ್ಯಾನುವಾದಗಳ ಸಂದರ್ಭದಲ್ಲಿ ಧ್ವನಿ ಮುದ್ರಣದ ಮೂಲಕ ಮೂಲ ಭಾಷೆಯ ಕಾವ್ಯದ ಓದನ್ನು ಕೇಳಿಸಿಕೊಳ್ಳಬಹುದು. ಈಗಾಗಲೇ ಬೇರೆ ಭಾಷೆಗಳಿಗೆ ಅನುವಾದವಾಗಿರುವ ಪದ್ಯಗಳನ್ನು ಆಧಾರವಾಗಿ ಇರಿಸಿಕೊಂಡು ಮೂಲ ಭಾಷೆಯ ಬನಿಯೊಡನೆ ಕನ್ನಡದಲ್ಲಿಯೂ ಅನುವಾದಿಸಬಹುದು. ಉದಾಹರಣೆಗೆ ಎಚ್.ಎಸ್. ರಾಘವೇಂದ್ರರಾವ್ ಅವರ 'ಕಪ್ಪು ಕವಿತೆ' (2013)ಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕನ್ನಡ ವಿಶ್ವವಿದ್ಯಾಲಯದಲ್ಲಿ ಕನ್ನಡ–ತಮಿಳು, ಕನ್ನಡ–ಮಲಯಾಳಂ ಕಾವ್ಯಾನುವಾದ ಕಮ್ಮಟದಲ್ಲಿ ಆಯಾಭಾಷೆಗಳ ಕವಿಗಳೇ ಇಂಗ್ಲಿಷ್ ಭಾಷೆಯ ನೆರವಿಲ್ಲದೆ ಕಾವ್ಯವಾಚನ ಮಾಡಿ ಅವುಗಳ ಲಯವನ್ನು ಅನುಸರಿಸಿ ಅನುವಾದಿಸಲಾಗಿತ್ತು. ಈ ಅನುವಾದ ಕೃತಿಗಳು ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾಗಿವೆ. ಸಂಗಂ ಕಾಲದ ತಮಿಳು ಸಾಹಿತ್ಯವನ್ನು ಕುವೆಂಪು ಭಾಷಾ ಭಾರತಿಯು ಇದೇ ರೀತಿಯ ಪ್ರಾಯೋಗಿಕ ಕಮ್ಮಟವನ್ನು ಮಾಡಿ 'ನಿಚ್ಚಂ ಪೊಸತು' ಎಂಬ ಅನುವಾದವನ್ನು ಪ್ರಕಟಿಸಿದೆ.

ಈಗಾಗಲೇ ಆಗಿರುವ ಬೇರೆ ಭಾಷೆಯ ಹಲವು ಅನುವಾದಗಳನ್ನು ಲಕ್ಷ್ಯಭಾಷೆಯಲ್ಲಿ ಇದ್ದರೆ ಅವುಗಳನ್ನು ಇರಿಸಿಕೊಂಡು ಹೊಸತೊಂದು ಅನುವಾದವನ್ನು ರೂಪಿಸುವ ಅವಕಾಶಗಳು ಅನುವಾದ ಕ್ಷೇತ್ರದಲ್ಲಿ ಇದೆ. ಟಾಲ್‌ಸ್ಟಾಯ್‌ಯ 'ಅನ್ನಾಕರೆನಿನಾ' ಮತ್ತು 'ಯುದ್ಧಮತ್ತುಶಾಂತಿ'ಯನ್ನು ದೇ.ಜ.ಗೌ. ಅವರು ಅನುವಾದಿಸಿದ್ದರು. ಜ.ನಾ. ತೇಜಶ್ರೀ ರೂಪಿಸಿದ ಅನ್ನಾಕರೆನಿನಾದ ಸಂಗ್ರಹಾನುವಾದವನ್ನು ಅಲ್ಲದೆ ಹಲವು ಇಂಗ್ಲಿಷ್ ಅನುವಾದಗಳನ್ನು ಆಧರಿಸಿ ಓ.ಎಲ್. ನಾಗಭೂಷಣಸ್ವಾಮಿಯವರು ಅನುವಾದಿಸಿರುವ 'ಯುದ್ಧ ಮತ್ತು ಶಾಂತಿ'ಯನ್ನು ಇಲ್ಲಿ ಮಾದರಿಯಾಗಿ ಉದಾಹರಿಸಬಹುದು.

ಕನ್ನಡದಿಂದ ಇತರೆ ಭಾಷೆಗಳಿಗೆ ಅನುವಾದಗಳು

ಕನ್ನಡ ಸೃಜನ ಲೇಖಕರು ಪ್ರಮುಖವಾಗಿ ಎರಡು ಮಹತ್ವಾಕಾಂಕ್ಷೆಗಳನ್ನು ಪ್ರಕಟಿಸುತ್ತಿರುತ್ತಾರೆ. ತಮ್ಮ ಕೃತಿಗಳು ಬೇರೆ ಭಾಷೆಗಳಿಗೆ ಅನುವಾದವಾಗಬೇಕು ಎಂಬುದು ಮೊದಲನೆಯದು. ಕಥಾಸಾಹಿತ್ಯವಾದರೆ ಅವು ಬೆಳ್ಳಿತೆರೆಯ' ಮೇಲೆ ಕಾಣಿಸಿಕೊಳ್ಳಬೇಕು ಎಂಬುದು ಎರಡನೆಯದು. ಈ ಎರಡೂ ಬಗೆಯಲ್ಲಿ ಹೆಚ್ಚಿನ ಸಹೃದಯರನ್ನು ತಲುಪಬಹುದು, ಪ್ರಚಾರ ದೊರೆಯಬಹುದು ಎಂಬ ಬಯಕೆ ಅವರದು.

ಕನ್ನಡದ ಸಂದರ್ಭದಲ್ಲಿ ಬೇಕಾದ ಸಾಹಿತ್ಯ, ವಿಚಾರ, ವಿಜ್ಞಾನಾದಿಗಳನ್ನು ಲೇಖಕರು ಕಾಲಕ್ಕೆ ತಕ್ಕಂತೆ ಅನುವಾದಗಳ ಮೂಲಕ ಬರಮಾಡಿಕೊಂಡಿದ್ದಾರೆ. ಹೀಗೆ ಅನುವಾದಗಳ ಆಮದು ನಡೆದಿರುವುದು ಕನ್ನಡ ಸಾಂಸ್ಕೃತಿಕ ಲೋಕದ ಅಪೇಕ್ಷೆಯನ್ನು ಅಥವಾ ಬೇಡಿಕೆಯನ್ನು ಈಡೇರಿಸುವ ಸಲುವಾಗಿಯೇ ಆಗಿರಬಹುದು. ಹಾಗಾಗಿ ಅನುವಾದಗಳು, ಅನುಸೃಷ್ಟಿಗಳು, ರೂಪಾಂತರಗಳ ಮೂಲಕ ಬೇರೆ ಭಾಷೆಯ ಕೃತಿಗಳು ಕನ್ನಡವನ್ನು ಪೋಷಿಸಿವೆ, ಪ್ರಭಾವಿಸಿವೆ. ಹಾಗೆಯೇ ಕನ್ನಡದಿಂದ ಬೇರೆ ಭಾಷೆಗಳಿಗೆ ಹೋದ ಕೃತಿಗಳ ಸಂಖ್ಯೆ ತೀರಾ ನಗಣ್ಯವೆಂದೇ ಹೇಳಬೇಕು.

ಶ್ರೀಕೃಷ್ಣ ಆಲನಹಳ್ಳಿಯವರ ಕತೆ, ಕಾದಂಬರಿಗಳು ಮಲಯಾಳಂನಲ್ಲಿ ಜನಪ್ರಿಯವಾಗಿವೆ. ನಿರಂಜನರ 'ಚಿರಸ್ಮರಣೆ' ಮಲಯಾಳಂನಲ್ಲಿ ಎಡಪಂಥೀಯ ಓದುಗರನ್ನು ಪ್ರಭಾವಿಸಿದೆ. ಬೇಂದ್ರೆಯವರ ಕೆಲವು ರಚನೆಗಳು ಹಾಗೂ ಎಸ್.ಎಲ್.ಬೈರಪ್ಪ ಅವರ ಕೃತಿಗಳು ಮರಾಠಿ ಭಾಷೆಯ ಓದುಗರ ಪ್ರೀತಿಗೆ ಪಾತ್ರವಾಗಿವೆ. ಕೃತಿಯ ಹಾಗೂ ಬಿ.ಆರ್.ನಾರಾಯಣ ಅವರ ಮಲೆಗಳಲ್ಲಿ ಮದುಮಗಳು, ಪರ್ವ, ತಬ್ಬಲಿಯು ನೀನಾದೆ ಮಗನೆ, ಚಿಕ್ಕವೀರ ರಾಜೇಂದ್ರ, ಶೂದ್ರತಪಸ್ವಿ ಮೊದಲಾದ ಕೃತಿಗಳ ಹಿಂದಿ ಅನುವಾದಗಳು, ಶಂಕರ ಮೊಕಾಶಿ ಪುಣೇಕರರ ಅವಧೇಶ್ವರಿ, ಅವರು ಅನುವಾದಿಸಿದ 'ಶ್ರೀ ರಾಮಾಯಣ ದರ್ಶನಂ', ತೇಜಸ್ವಿನಿ ನಿರಂಜನ ಅವರ ಚಿರಸ್ಮರಣೆ, ಫಣಿಯಮ್ಮ, ವನಮಾಲಾವಿಶ್ವನಾಥ್ ಅವರ 'ದಿ ಲೈಫ್ ಆಫ್ ಹರಿಶ್ಚಂದ್ರ' ಇತ್ಯಾದಿ ಇಂಗ್ಲಿಷ್ ಅನುವಾದಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಎ.ಕೆ. ರಾಮಾನುಜನ್ ಅವರ 'ಸ್ಪೀಕಿಂಗ್ ಆಫ್ ಶಿವ' ಕನ್ನಡಕ್ಕೆ ಅಂತಾರಾಷ್ಟ್ರೀಯ ಪ್ರಸಿದ್ಧಿಯನ್ನು ತಂದುಕೊಟ್ಟ ಕೃತಿ. ಹಾಗೆಯೇ ಸಂಸ್ಕಾರ ಕಾದಂಬರಿಯ ಅನುವಾದ 'ಎ ರೈಟ್ ಫಾರ್ ಎ ಡೆಡ್ ಮ್ಯಾನ್ ' ಎಂಬುದೂ ಇದೇ ಸಾಲಿನಲ್ಲಿ ಹೆಸರಿಸಬೇಕಾದ ಕೃತಿ.

Scanned with CamScanner

ಕನ್ನಡದ ಜ್ಞಾನಪೀಠ ಪುರಸ್ಕೃತ ಕವಿಗಳ ರಚನೆಗಳು ಭಾರತದ ಇತರ ಭಾಷೆಗಳ ಓದುಗರಿಗೆ ಈ ದಿನಗಳಲ್ಲೂ ದೊರೆಯುತ್ತಿಲ್ಲ. ಅಲ್ಲಿ ಇಲ್ಲಿ ಬಿಡಿ ರಚನೆಗಳ ಇಂಗ್ಲಿಷ್ ಅನುವಾದಗಳ ಮೂಲಕವೇ ಅವರನ್ನು ತಿಳಿಯುವ ಅವಕಾಶ ಮಾತ್ರ ಸಾಹಿತ್ಯ ಅಕಾದೆಮಿಯಂತಹ ಸಂಸ್ಥೆಗಳು ರೂಪಿಸಿದ ಅನುವಾದಗಳ ಮೂಲಕ ಸಾಧ್ಯವಾಗಿರಬಹುದು. ಆದರೆ ದೇಶೀಯ ಭಾಷೆಗಳಲ್ಲಿ ಅನೇಕರ ರಚನೆಗಳು ಇಲ್ಲವೇ ಇಲ್ಲ ಎನ್ನುವಷ್ಟು ವಿರಳ. ಅನ್ಯ ಭಾಷಾ ಲೇಖಕರು ಕನ್ನಡದಲ್ಲಿ ಅನುವಾದಗಳ ಮೂಲಕ ಪರಿಚಿತರಾಗಿದ್ದಾರೆ. ಆದರೆ ಅನುವಾದಗಳೇ ಇಲ್ಲದ ಕಾರಣಕ್ಕೆ ಕನ್ನಡ ಲೇಖಕರು ಕನ್ನಡೇತರರಿಗೆ ಅಪರಿಚಿತರಾಗಿಯೇ ಉಳಿದಿದ್ದಾರೆ. ಕೆಲವೊಂದು ಭಾಷೆಗಳಲ್ಲಿ ಅದರಲ್ಲಿಯೂ ಮಲಯಾಳಂ, ತೆಲುಗು, ಭಾಷೆಗಳಲ್ಲಿ ಕೆಲವೊಂದು ಕೃತಿಗಳು ಅನುವಾದಗಳಾಗಿವೆ. ಅವು ಸಾಹಿತ್ಯ ಅಕಾದೆಮಿಯಂತಹ ಸಂಸ್ಥೆ ಹಾಗೂ ಕೆಲವೊಂದು ವೈಯಕ್ತಿಕ ನೆಲೆಯಲ್ಲಿ ರೂಪಿಸಿದ ಅನುವಾದಗಳೇ ಆಗಿವೆ. ಇಂಗ್ಲಿಷಿನಲ್ಲಿ ಅನುವಾದವಾದ ಕೃತಿಗಳು ಬಹುತೇಕ ಕನ್ನಡ ಲೇಖಕರೇ ರೂಪಿಸಿ, ಪ್ರಕಟಿಸಿದ ಪುಸ್ತಕಗಳು. ಕನ್ನಡದ ಬಹುಮುಖ್ಯ ರಚನೆಗಳೆಂದೋ, ಲೇಖಕರ ವೈಯಕ್ತಿಕ ಆಸೆಯನ್ನು ಪೂರೈಸಿಕೊಳ್ಳಲೋ ಎಂಬಂತೆ ರೂಪಿಸಿದ ಅನುವಾದಗಳಾಗಿಯೋ ಕೆಲವೊಮ್ಮೆ ಸಾಂಸ್ಥಿಕ ಅನುವಾದಗಳಾಗಿಯೋ ರೂಪುಗೊಂಡಿರುವ ಸಂದರ್ಭಗಳು ಇವೆ. ಶರಣರ ವಚನಗಳು, ಕನಕದಾಸರ ರಚನೆಗಳು ಇತ್ಯಾದಿ ಅನುವಾದ ಕೆಲಸಗಳು ಕನ್ನಡದ ಮಹತ್ವಾಕಾಂಕ್ಷೆಯ ಯೋಜನೆಗಳಾಗಿವೆ. ಅವೆಲ್ಲ ಒಂದು ರೀತಿಯಲ್ಲಿ ರಪ್ತು ಅನುವಾದಗಳಾಗಿ ಬಹುತೇಕ ಜಡವಾಗಿಯೇ ಉಳಿದಿವೆ. ಅವೆಂದೂ ಲಕ್ಷ್ಯಭಾಷೆಯಲ್ಲಿ ಓದುಗರ ಬೇಡಿಕೆಯನ್ನು ಪೂರೈಸುವ ರಚನೆಗಳಾಗಿ ರೂಪುಪಡೆಯಲಿಲ್ಲ. ಕನ್ನಡದ ಕೃತಿಗಳನ್ನು ಕನ್ನಡಿಗರೇ ಓದಿ ಅರ್ಥೈಸಿಕೊಂಡು ಭಾಷೆಗಳಲ್ಲಿ ಬರೆದು ಲಕ್ಷ್ಯಭಾಷೆಯಲ್ಲಿ ತಜ್ಞರಿಂದ ಪರಿಷ್ಕರಿಸಿಕೊಂಡು ರೂಪಿಸಿದ ಅನುವಾದಗಳು ಎಂದೂ ಲಕ್ಷ್ಯಭಾಷೆಯಲ್ಲಿ ಬೇಡಿಕೆಯ ಸರಕುಗಳಾಗಲೇ ಇಲ್ಲ. ಕನ್ನಡದಲ್ಲಿ ಬೇರೆ ಭಾಷೆಯ ಕೃತಿಗಳು ಕನ್ನಡ ಓದುಗರ ಆಪೇಕ್ಷೆಯನ್ನು ಪೂರೈಸುವಂತೆ ಬಂದಾಗ ಮಾತ್ರ ಸ್ವೀಕಾರಾರ್ಹ ಎನಿಸಿವೆ; ಹಾಗೆಯೇ ಕನ್ನಡ ಓದುಗರ ಮನಸೆಳೆದಿವೆ. ಹಾಗಾಗಿ ಬೇರೆ ಭಾಷೆಯ ಓದುಗರ ನಡುವೆ ಕನ್ನಡದ ಕೃತಿಗಳ ಬಗೆಗೆ ಅಭಿರುಚಿ ಹುಟ್ಟಿಸುವ ಕೆಲಸಗಳನ್ನು ಮೊದಲು ಮಾಡಬೇಕಾಗಿದೆ. ಅವುಗಳ ಬಗೆಗೆ ಕುತೂಹಲ ತಾಳಿದ ಬೇರೆ ಭಾಷೆಯ ಓದುಗರು ಕನ್ನಡವನ್ನು ಕಲಿತು ಅನುವಾದಗಳ ಮೂಲಕ ಬೇರೆ ಭಾಷೆಗಳಿಗೆ ಕೊಂಡೊಯ್ಯುವಂತೆ ಮಾಡುವ ಅಗತ್ಯವಿದೆ. ಬಿ. ವೆಂಕಟಾಚಾರ್ಯರು ಅನುವಾದ ಮಾಡುವ ಸಲುವಾಗಿಯೇ ಬಂಗಾಳಿ ಭಾಷೆ ಕಲಿತರು. ಬಂಕಿಮಚಂದ್ರರೇ ಮೊದಲಾದವರ ಅನೇಕ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದರು. ತಗಳಿ ಶಿವಶಂಕರ

ಪಿಳ್ಳೆಯವರ ಮಲಯಾಳಂ ಕಾದಂಬರಿ 'ಚೆಮ್ಮೀನ್' ಜಗತ್ತಿನ ಸಲವತ್ತೇಳು ಭಾಷೆಗಳಿಗೆ ಅನುವಾದವಾಗಿವೆ. ಮಲಯಾಳಂ ಭಾಷೆಗೆ ವಿದೇಶಿ ಸಾಹಿತ್ಯ ವಲಯದಲ್ಲಿ 'ಚೆಮ್ಮೀನ್ ಭಾಷೆ' ಎಂಬ ಪರ್ಯಾಯ ಹೆಸರೇ ದಾಖಲಾಗಿದೆಯೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕನ್ನಡ ಅನುವಾದಕರು

ಬ್ರಿಟಿಷರ ಆಳ್ವಿಕೆಯು ಆರಂಭವಾಗುತ್ತಿದ್ದಂತೆ ಭಾರತದಲ್ಲಿ ಇಂಗ್ಲಿಷ್ ಭಾಷೆಯ ಪ್ರಭಾವ ನಿಧಾನವಾಗಿ ಕಾಣಿಸಿಕೊಳ್ಳತೊಡಗಿತು. ಭಾರತೀಯರಲ್ಲಿ ಇಂಗ್ಲಿಷ್ ಮಾದರಿಯ ಶಿಕ್ಷಣ, ಇಂಗ್ಲಿಷ್ ಕಲಿಕೆ ಪರಿಣಾಮವಾಗಿ ಯುರೋಪಿಯನ್ ಸಾಹಿತ್ಯದ ಅನಾವರಣವಾಗತೊಡಗಿತು. ಫ್ರಾನ್ಸ್, ಜರ್ಮನಿ, ಇಟಲಿ, ಸ್ಪೆಯಿನ್, ರಷ್ಯಾ ಮೊದಲಾದ ದೇಶಗಳ ಅನೇಕ ಕೃತಿಗಳು ಭಾರತೀಯರ ಓದಿಗೆ ನಿಲುಕಿದುವು. ಹಾಗೆ ಇಂಗ್ಲಿಷ್‌ನ ಮೂಲಕ ಓದಿದ ಯೂರೋಪಿಯನ್ ಭಾಷೆಯ ಕೃತಿಗಳನ್ನು ತಮ್ಮ ಓದುಗರಿಗೂ ಭಾರತೀಯ ಭಾಷೆಯಲ್ಲಿ ಅನುವಾದಿಸಿದರು.

19ನೆಯ ಶತಮಾನದ ಉತ್ತರಾರ್ಧದಲ್ಲಿ ನಿಧಾನ ಗತಿಯಲ್ಲಿ ಆರಂಭವಾದ ಈ ಬಗೆಯ ಅನುವಾದ ಚಟುವಟಿಕೆಗಳು 20ನೆಯ ಶತಮಾನದ ಆರಂಭದ ಹೊತ್ತಿಗೆ ಇನ್ನಷ್ಟು ತ್ವರಿತಗತಿಯಲ್ಲಿ ಮುನ್ನಡೆದುವು. ಪರಿಣಾಮವಾಗಿ ಭಾರತೀಯ ಭಾಷೆಗಳಲ್ಲಿ ಯೂರೋಪಿಯನ್ ಸಾಹಿತ್ಯ ಕೃತಿಗಳು ಹಲವು ರೂಪಗಳಲ್ಲಿ ಕಾಣಿಸಿಕೊಂಡುವು. ಮುಂದುವರಿದು ಭಾರತೀಯ ಭಾಷೆಗಳ ಕೃತಿಗಳನ್ನು ಪರಸ್ಪರ ಅನುವಾದಿಸುವ ಕೆಲಸಗಳೂ ನಡೆದುವು. ಆರಂಭದಲ್ಲಿ ಭಾರತೀಯ ಭಾಷೆಗಳ ಕೃತಿಗಳನ್ನು ಇಂಗ್ಲಿಷ್ ಭಾಷೆಯ ಮೂಲಕವೇ ಅನುವಾದಿಸುವ ಕೆಲಸ ನಿರ್ವಹಿಸಿದರು. ಕ್ರಮೇಣ ಆಯಾ ಭಾಷೆಗಳಿಂದ ನೇರವಾಗಿ ಅನುವಾದಿಸುವ ಚಟುವಟಿಕೆಗಳಿಗೆ ಉತ್ತೇಜನ ದೊರೆಯಿತು.ಅಂತಹ ಅನುವಾದಕರು ಕನ್ನಡದಲ್ಲಿ ಹೇಳಿಕೊಳ್ಳುವಂತಹ ಸಂಖ್ಯೆಯಲ್ಲೇನೂ ಇಲ್ಲ. ಈ ದಿಸೆಯಲ್ಲಿ ಹಲವು ಅನುವಾದಕರು ತಮ್ಮ ಪರಿಸರದ ಭಾಷೆಗಳ ನಡುವೆ ಬದುಕುತ್ತಲೇ ಅನುವಾದಗಳ ಕೆಲಸಗಳಲ್ಲಿ ತೊಡಗಿಸಿಕೊಂಡರು. ಈ ಬಗೆಯ ಅನುವಾದಕರಲ್ಲಿ ವಿಭಿನ್ನ ಹಿನ್ನೆಲೆಯುಳ್ಳವರನ್ನು ಗಮನಿಸಬಹುದು.

ಕನ್ನಡೇತರ ಮಾತೃಭಾಷೆ

ಕನ್ನಡದಲ್ಲಿ ಕನ್ನಡೇತರ ಮನೆ ಮಾತಿನ ಬರಹಗಾರರೂ ಅನುವಾದ ಕೆಲಸಗಳನ್ನು ನಿರ್ವಹಿಸಿದ್ದಾರೆ. ಈ ದಿಸೆಯಲ್ಲಿ ಮರಾಠಿ ಮನೆಮಾತಿನ ಬೇಂದ್ರೆ, ವಿ.ಎಂ. ಇನಾಂದಾರ್, ಮೀನಾ ವಾಂಗೀಕರ್ ತಮಿಳು ಮನೆಮಾತಿನ ಮಾಸ್ತಿ, ಗೊರೂರು, ಡಿ.ವಿ. ಗುಂಡಪ್ಪ, ಎಲ್. ಗುಂಡಪ್ಪ, ಶೇಷನಾರಾಯಣ, ಮತ್ತೂರು

Scanned with CamScanner

ಕೃಷ್ಣಮೂರ್ತಿ, ತಮಿಳು ಸೆಲ್ವಿ, ಜಯಲಲಿತ, ಮಲಯಾಳಂ ಮನೆ ಮಾತಿನ ನಾ. ಕಸ್ತೂರಿ, ಕೊಂಕಣಿ ಮನೆಮಾತಿನ ಗೋವಿಂದ ಪೈ, ಪಂಜೆ ಮಂಗೇಶರಾವ್, ಎಂ.ಎನ್. ಕಾಮತ್, ತೆಲುಗು ಮನೆ ಮಾತಿನ ಆರ್ವೀಯಸ್ ಸುಂದರಂ, ಶೇಷಶಾಸ್ತ್ರಿ, ಉರ್ದು ಮನೆಮಾತಿನ ಹಸನ್ ನಯೀಂ ಸುರಕೋಡ, ಫಕೀರ್ ಮುಹಮ್ಮದ್ ಕಟ್ಪಾಡಿ, ತುಳು ಮನೆಮಾತಿನ ಕೆದಂಬಾಡಿ ಜತ್ತಪ್ಪ ರೈ ಮೊದಲಾದವರು ಪ್ರಮುಖರು. ಇವರೆಲ್ಲರೂ ಸಾಹಿತ್ಯ ಕೃತಿಗಳನ್ನು ಕನ್ನಡದಲ್ಲಿ ಅನುವಾದಿಸುವ ಕೆಲಸ ಮಾಡಿದ್ದಾರೆ. ಈ ಲೇಖಕರಿಗೆ ಅನುವಾದಗಳ ಮೂಲಭಾಷೆ ಮಾತೃಭಾಷೆಯಾಗಿದ್ದುದು ಆಕಸ್ಮಿಕವೇ ಇರಬಹುದು. ಆದರೆ ಅನುವಾದ ಕೆಲಸಗಳಲ್ಲಿ ತೊಡಗಿಸಿಕೊಳ್ಳಲು ಅವರಿಗೆ ಇದ್ದ ಬಹುಭಾಷಾ ತಿಳುವಳಿಕೆ ಮುಖ್ಯ ಕಾರಣಗಳಲ್ಲಿ ಒಂದು.

ಔದ್ಯೋಗಿಕ ನೆಲದ ಭಾಷೆ

ಮತ್ತೆ ಕೆಲವರು ಔದ್ಯೋಗಿಕ ಕಾರಣಗಳಿಗೆ ಬೇರೆ ಬೇರೆ ಊರುಗಳಲ್ಲಿ ತಾವು ನೆಲೆಸಿದ ರಾಜ್ಯದ ಭಾಷೆಯನ್ನು ಕಲಿತು ಅನುವಾದ ಕೆಲಸಗಳಲ್ಲಿ ತೊಡಗಿಸಿಕೊಂಡವರೂ ಇದ್ದಾರೆ. ಕಾಸರಗೋಡು ಸರಕಾರೀ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಬಿ.ಕೆ. ತಿಮ್ಮಪ್ಪ, ಕಲ್ಲಿಕೋಟೆ ಮೊದಲಾದೆಡೆ ಕೇರಳದ ಸ್ಪೈಸ್ ಬೋರ್ಡ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಎಂ.ಎಸ್.ಲಕ್ಷ್ಮಣಾಚಾರ್, ಅವರ ಶ್ರೀಮತಿಯವರಾದ ವಸುಮತಿ ಲಕ್ಷ್ಮಣಾಚಾರ್ ಇವರೆಲ್ಲ ಮಲಯಾಳಂ ಕಲಿತು ಅಲ್ಲಿನ ಕೃತಿಗಳನ್ನು ಅನುವಾದ ಮಾಡಿದರು. ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಬಿ.ಎ.ಕೆದಿಲ್ಲಾಯ, ಮದುರೈ ಕಾಮರಾಜ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಪಾ.ಶ.ತ್ರೀನಿವಾಸ, ಟಿ.ಬಿ.ಸಿದ್ಧಲಿಂಗಯ್ಯ ಮೊದಲಾದವರು ತಮಿಳು ಕಲಿತು ಅನುವಾದಗಳಲ್ಲಿ ತೊಡಗಿಸಿಕೊಂಡವರು. ಕಲ್ಕತ್ತಾದಲ್ಲಿ ನೆಲೆಸಿದ್ದ ಕುಮಾರಪ್ಪ ಬಂಗಾಳಿ ಕಲಿತು ಅನುವಾದಗಳನ್ನು ಮಾಡಿದರು. ಆಂಧ್ರದಲ್ಲಿ ಅಧ್ಯಾಪಕರಾಗಿದ್ದ ಕುಂ.ವೀರಭದ್ರಪ್ಪ ಅವರು ತೆಲುಗಿನಿಂದ, ಸ್ನೇಹಲತಾ ರೋಹಿಡೇಕರ್ ಅವರು ಒರಿಯಾದಿಂದ ಅನುವಾದಗಳನ್ನು ಮಾಡಿದ್ದಾರೆ.

ಆಸಕ್ತಿಯಿಂದ ಅನ್ಯಭಾಷೆ ಕಲಿತವರು

ವೈಯಕ್ತಿಕ ಆಸಕ್ತಿಯಿಂದ ದೇಶ, ವಿದೇಶಗಳ ಭಾಷೆಗಳನ್ನು ಕಲಿತು ಅನುವಾದ ಮಾಡಿದವರೂ ಇದ್ದಾರೆ. ಈಗಾಗಲೇ ಹೇಳಿದಂತೆ ಬಂಗಾಳಿ ಭಾಷೆಯನ್ನು ಕಲಿತು ನೇರ ಅನುವಾದಗಳನ್ನು ಮಾಡಿದ ಬಿ. ವೆಂಕಟಾರ್ಯರು ಪ್ರಮುಖರು. ಮುಂದೆ ಎ.ಆರ್. ಕೃಷ್ಣಶಾಸ್ತ್ರೀ, ಅಹೋಬಲ ಶಂಕರ ಮೊದಲಾದವರು ಬಂಗಾಳಿ ಭಾಷೆ ಕಲಿತು ಅನುವಾದಗಳನ್ನು ರೂಪಿಸಿದ್ದರು. ರಷ್ಯನ್ ಭಾಷೆಯನ್ನು ಕಲಿತ ಕೆ.ಎಲ್. ಗೋಪಾಲಕೃಷ್ಣರಾವ್, ಬಿ.ಕೆ.ಎಸ್. ಮೂರ್ತಿ, ಎಚ್.ಎಸ್. ಹರಿಶಂಕರ್, ಕೆ.ಎಸ್. ಶಿವದಾಸನ್, ಬುದ್ಧಣ್ಣ ಹಿಂಗಮಿರೆ ಮೊದಲಾದವರು ಅನುವಾದಗಳನ್ನು ಮಾಡಿದ್ದಾರೆ. ವಸುಂಧರಾ ಫಿಲಿಯೋಜಾ ಅವರು ಫ್ರೆಂಚ್‌ನಿಂದ, ವಿಜಯಾ ಗುತ್ತಲ ಅವರು ಗ್ರೀಕ್‌ನಿಂದ ಕನ್ನಡಕ್ಕೆ ನೇರ ಅನುವಾದಗಳನ್ನು ಮಾಡಿದ್ದಾರೆ. ಹೈದ್ರಾಬಾದ್ ಕರ್ನಾಟಕದಲ್ಲಿ ಉರ್ದು ಶಿಕ್ಷಣ ಮಾಧ್ಯಮವಾಗಿದ್ದುದರಿಂದ ಪಂಚಾಕ್ಷರಿ ಹಿರೇಮಠ, ಶಾಂತರಸ ಮೊದಲಾದವರು ಉರ್ದು ಕಲಿತು ಅನುವಾದ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಬೇರೆ ಭಾಷೆಗಳನ್ನು ಕಲಿಯಲು ಅನುಕೂಲ ಇಲ್ಲದ ದಿನಗಳಲ್ಲಿಯೂ ಹಿರಿಯ ತಲೆಮಾರಿನ ಜನರು ಭಾಷೆಗಳನ್ನು ಕಲಿತು ಅನುವಾದಗಳ ಮೂಲಕ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಈಗ ಬೇರೆ ಭಾಷೆಗಳನ್ನು ಕಲಿಯುವ ಮನಸ್ಸು ಕ್ಷೀಣಿಸಿದೆ. ಬಹುಭಾಷಾ ಕಲಿಕೆಯ ಶ್ರಮಕ್ಕಿಂತ ಇಂಗ್ಲಿಷ್ ಭಾಷೆಯನ್ನು ಮಾತ್ರ ಕಲಿಯುವುದು ಉತ್ತಮ ಎಂಬ ನಿಲುವಿಗೆ ಜನ ತಲುಪಿದ್ದಾರೆ. ಬೇರೆ ಭಾಷೆ ಕಲಿತಾಗಲೂ ಅನುವಾದ ಕೆಲಸಗಳನ್ನು ಮಾಡುವ ಮನಸ್ಥಿತಿಯಂತೂ ಇಲ್ಲವಾಗಿದೆ.

ಗಡಿನಾಡಿನ ಲೇಖಕರು

ರಾಜ್ಯದ ಗಡಿಭಾಗಗಳಲ್ಲಿ ಅನ್ಯರಾಜ್ಯಗಳ ಸಂಪರ್ಕದ ಕಾರಣಕ್ಕೆ ಅನೇಕ ಲೇಖಕರು ಎರಡು ಭಾಷೆಗಳ ನಡುವೆ ತಮ್ಮ ಬರವಣಿಗೆಯನ್ನು ರೂಪಿಸಿರುತ್ತಾರೆ. ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ಬಹುಭಾಷಿಕ ಪರಿಸರವೇ ಇದೆ. ಹಾಗಾಗಿ ಆಯಾ ಪ್ರದೇಶಗಳಲ್ಲಿ ಜನರು ಒಂದಲ್ಲ ಒಂದು ಭಾಷೆಯನ್ನು ತಮ್ಮ ಬರಹದ ಭಾಷೆಯಾಗಿ ರೂಪಿಸಿಕೊಂಡಿರುವುದನ್ನು ಕಾಣಬಹುದು. ಕನ್ನಡ ಮಲಯಾಳಂ ಗಡಿಪ್ರದೇಶದ ಲೇಖಕರಲ್ಲಿ ಸಿ. ರಾಘವನ್, ಕೆ.ಕೆ. ನಾಯರ್, ಪಾರ್ವತಿ ಜಿ. ಐತಾಳ್, ಮೋಹನ ಕುಂಟಾರ್ ತಮಿಳಿನಿಂದ ನಲ್ಲತಂಬಿ ಮೊದಲಾದವರು ಎರಡೂ ಭಾಷೆಗಳಿಗೆ ಸಾಹಿತ್ಯ ಕೃತಿಗಳನ್ನು ಪರಿಸ್ಪರ ಅನುವಾದಿಸಿದ್ದಾರೆ. ಸಾರಾ ಅಬೂಬಕ್ಕರ್, ನಾ.ದಾ. ಶೆಟ್ಟಿ, ಅರ್ತಿಕಜೆ ಶ್ರೀಕೃಷ್ಣಭಟ್ ಮೊದಲಾದವರು ಮಲಯಾಳಂನಿಂದ ಕನ್ನಡಕ್ಕೆ ಅನುವಾದ ಮಾಡಿದರೆ, ಪಯ್ಯನ್ನೂರು ಕುಞರಾಮನ್‌ನಂತಹ ಲೇಖಕರು ಕನ್ನಡದಿಂದ ಮಲಯಾಳಂ ಭಾಷೆಗೆ ಅನುವಾದ ಮಾಡಿದ್ದಾರೆ. ಕನ್ನಡ ಮರಾಠಿ ಸಂದರ್ಭದಲ್ಲಿ ಉಮಾ ಕುಲಕರ್ಣಿ, ಸರಜೂ ಕಾಟ್ಕರ್, ಡಿ.ಎಸ್. ಚೌಗಲೆ ಮೊದಲಾದವರು ಗಡಿ ಪ್ರದೇಶದಲ್ಲಿ ಮರಾಠಿಯಿಂದ ಕನ್ನಡಕ್ಕೆ ನೇರ ಅನುವಾದಗಳನ್ನು ಮಾಡಿದ್ದಾರೆ. ಗಡಿನಾಡು ಭಾಷಾ ಸಂಘರ್ಷದ ನೆಲವಾಗದೆ ಭಾಷಾ ಸೌಹಾರ್ದದ ನೆಲೆಯಾಗುವಲ್ಲಿ ಅನುವಾದಕರ ಶ್ರಮವೂ ಇದೆ. ಎರಡು ಭಾಷೆಗಳ ನಡುವೆ ಕೊಡುಕೊಳುಗೆಗಳ ಕೆಲಸ ಸಾಂಸ್ಕೃತಿಕ ವಿನಿಮಯದ ಭಾಗವಾಗಿಯೂ ಪರಿಣಾಮಕಾರಿಯೆನಿಸಿದೆ.

Scanned with CamScanner

ಇವರಷ್ಟೇ ಅಲ್ಲದೆ ಕರ್ನಾಟಕದ ಒಳಗಡೆ ವಾಸ ಮಾಡುವ ಅನೇಕರು ತಮ್ಮ ಮಾತೃಭಾಷೆಯ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ರೇಷನಾರಾಯಣ ಅವರ ಮನೆ ಮಾತು ತಮಿಳು. ಕೆ.ಕೆ. ಗಂಗಾಧರನ್, ಅರೋಕಕುಮಾರ್ ಮೊದಲಾದವರ ಮನೆ ಮಾತು ಮಲಯಾಳಂ. ತೆಲುಗು ಅನೇಕರಿದ್ದಾರೆ. ಭಾಷಾ ಅಧ್ಯಾಪಕರಾಗಿ ಸಾಹಿತ್ಯ ಪ್ರೀತಿಯ ಭಾಗವಾಗಿ ಅನುವಾದವನ್ನು ರೂಪಿಸಿದ ಅನೇಕರು ಕನ್ನಡ ಅನುವಾದ ಕ್ಷೇತ್ರದಲ್ಲಿ ಹೆಸರಾಗಿದ್ದಾರೆ. ಇಂಗ್ಲಿಷ್ ಪ್ರಾಧ್ಯಾಪಕರಾಗಿ ಅನುವಾದಗಳಲ್ಲಿ ತೊಡಗಿಸಿಕೊಂಡ ಅನೇಕರು ಕನ್ನಡದಲ್ಲಿದ್ದಾರೆ. ಸುಮತೀಂದ್ರ ನಾಡಿಗ, ಶಾಂತಿನಾಥ ದೇಸಾಯಿ, ಪಿ. ಲಂಕೇಶ್, ಓ.ಎಲ್. ನಾಗಭೂಷಣಸ್ವಾಮಿ, ಎಲ್.ಎಸ್. ಶೇಷಗಿರಿರಾವ್ ಸಿ. ನಾಗಣ್ಣ, ಕೆ.ಎಸ್. ಭಗವಾನ್, ಸಿ.ಎನ್. ರಾಮಚಂದ್ರನ್, ವೀಣಾ ಶಾಂತೇಶ್ವರ, ಲಕ್ಷ್ಮೀ ಚಂದ್ರಶೇಖರ್, ವನಮಾಲಾ ವಿಶ್ವನಾಥ್, ಪಾರ್ವತಿ ಜಿ. ಐತಾಳ್ ಮೊದಲಾದವರು ಸಾಹಿತ್ಯಾಸಕ್ತಿಯಿಂದ ಅನುವಾದ ಕೆಲಸಗಳನ್ನು ನಿರ್ವಹಿಸಿದ್ದಾರೆ. ಕನ್ನಡ ಪ್ರಾಧ್ಯಾಪಕರಾಗಿದ್ದ ದೇ.ಜ.ಗೌ., ನರಹಳ್ಳಿ ಬಾಲಸುಬ್ರಹ್ಮಣ್ಯ, ಪಿ.ಪಿ.ಕೆ., ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಎಚ್.ಎಸ್. ರಾಘವೇಂದ್ರರಾವ್, ಎಚ್.ಎಸ್. ಶ್ರೀಮತಿ, ಪಿ.ವಿ. ನಾರಾಯಣ, ವಿಜಯ ಸುಬ್ಬರಾಜ್, ನಾ.ದಾ. ಶೆಟ್ಟಿ, ಬಿ.ಎ. ವಿವೇಕ ರೈ, ಎಂ.ಆರ್. ಕಮಲಾ, ಎಲ್.ಸಿ. ಸುಮಿತ್ರಾ ಹಿಂದಿ ಭಾಷಾ ಪ್ರಾಧ್ಯಾಪಕರಾದ ತಿಪ್ಪೇಸ್ವಾಮಿ, ಬಾಲಚಂದ್ರ ಜಯಶೆಟ್ಟಿ, ಲಕ್ಷ್ಮೀನಾರಾಯಣ ಅರೋರಾ, ಪ್ರಧಾನ್ ಗುರುದತ್ತ, ಸಿದ್ಧಲಿಂಗ ಪಟ್ಟಣಶೆಟ್ಟಿ, ತೇಜಸ್ವಿ ಕಟ್ಟೀಮನಿ ಹೀಗೆ ಅನೇಕರು ನಿರಂತರವಾಗಿ ಕನ್ನಡ ಅನುವಾದ ಕ್ಷೇತ್ರವನ್ನು ಹುಲುಸಾಗಿ ಬೆಳೆಸಿದ್ದಾರೆ.

ಇಪರಷ್ಟೇ ಅಲ್ಲದೆ ಬೇರೆ ಬೇರೆ ಕ್ಷೇತ್ರಗಳಲ್ಲಿ ದುಡಿಯುವವರೂ ಆಸಕ್ತಿಯಿಂದ ಅನುವಾದಗಳನ್ನು ಮಾಡುತ್ತಲೇ ಬಂದಿದ್ದಾರೆ. ಎಸ್. ದಿವಾಕರ್, ಎಚ್.ಎಸ್. ಪಾರ್ವತಿ, ಎಸ್.ಎಂ. ರಾಮಚಂದ್ರಸ್ವಾಮಿ, ಬಿ. ಸುಜ್ಞಾನಮೂರ್ತಿ ಈ ದಿಸೆಯಲ್ಲಿ ಪ್ರಮುಖ ಹೆಸರು.

21ನೆಯ ಶತಮಾನದ ಅನುವಾದಗಳ ಆಯಾಮ

21ನೆಯ ಶತಮಾನದ ಕನ್ನಡ ಅನುವಾದಗಳಲ್ಲಿ ಹೆಚ್ಚಾಗಿ ಆತ್ಮಕತೆಗಳದೇ ಸಿಂಹಪಾಲು. ಅದರಲ್ಲಿಯೂ ಮಹಿಳಾ ಆತ್ಮಕತೆಗಳ ಸಂಖ್ಯೆಯೂ ಹೆಚ್ಚಿದ. ಮರಾಠಿ ದಲಿತ ಆತ್ಮಕತೆಗಳ ಅನುವಾದಗಳು 20ನೆಯ ಶತಮಾನದ ಕೊನೆಯ ದಶಕದಲ್ಲಿ ಕಾಣಿಸಿಕೊಂಡು, ಕನ್ನಡದಲ್ಲಿ ಹೊಸ ಸಂಚಲನವನ್ನು ಹುಟ್ಟು ಹಾಕಿದುವು.

ಚಂದ್ರಕಾಂತ ಪೋಕಳೆಯವರು ಅನುವಾದಿಸಿದ ಲಕ್ಷ್ಮಣ ಗಾಯಕವಾಡರ ಉಚಲ್ಯಾ(1994), ದು.ನಿಂ. ಬೆಳಗಲಿಯವರು ಅನುವಾದಿಸಿದ ಶರಣಕುಮಾರ ನಿಂಬಾಳೆಯವರ 'ಅಕ್ರಮಸಂತಾನ' ಇವು ಆರಂಭದ ಮರಾಠಿ ಆತ್ಮಕತೆಗಳ ಅನುವಾದಗಳು. ಅವು ಮುಂದುವರಿದು ಅನೇಕ ಅನುವಾದಗಳು ಬಂದುವಲ್ಲದೆ ಮಹಿಳಾ ಆತ್ಮಕತೆಗಳು ಕನ್ನಡದಲ್ಲಿ ಯಥೇಚ್ಛವಾಗಿ ಅನುವಾದವಾದುವು. ಪೂರ್ಣಿಮಾಭಟ್ ಅನುವಾದಿಸಿದ ಮಲಯಾಳಂ ಲೇಖಕಿ ಕಮಲಾದಾಸ್ ಅವರ 'ನನ್ನ ಕತೆ'(1995) ನಾ.ದಾ. ಶೆಟ್ಟಿ ಅನುವಾದಿಸಿದ 'ಬಾಲ್ಯದ ನೆನಪುಗಳು'(2001) ಪಾರ್ವತಿ ಜಿ. ಐತಾಳ್ ಅನುವಾದಿಸಿದ 'ನೀರ್‌ಮಾದಳ ಹೂ ಬಿಟ್ಟ ಕಾಲ'(2009) ಇತ್ಯಾದಿ ಅನೇಕ ಆತ್ಮಕತೆಗಳು ಕನ್ನಡದಲ್ಲಿ ಬಂದುವು. ರವಿ ಬೆಳಗೆರೆಯವರು ಅನುವಾದಿಸಿದ ಪ್ರೊತಿಮಾ ಬೇಡಿ ಅವರ 'ಟ್ರೈಂಪಾಸ್' (1999, ಪುನರ್ಮುದ್ರಣ 2000), ಅಲ್ಲದೆ ಹಸನ್ ನಯೀಂ ಸುರಕೋಡ ಅನುವಾದಿಸಿದ ಅಮೃತಾ ಪ್ರೀತಮ್ ಅವರ 'ರಸೀದಿ ಟಿಕೇಟು' ಇತ್ಯಾದಿ ಆತ್ಮಕತೆಗಳು ಗಮನ ಸೆಳೆಯುತ್ತವೆ.

ಎಂ.ಆರ್. ಕಮಲ ಅನುವಾದಿಸಿದ 'ಕಪ್ಪು ಹಕ್ಕಿಯ ಬೆಳಕಿನ ಹಾಡು'(2004) ಇದರಲ್ಲಿ ನೀಗ್ರೋ ಗುಲಾಮಿ ಕಪ್ಪು ಮಹಿಳೆಯರ ಒಟ್ಟು ಸಾಲ್ವರ ಆತ್ಮಕತೆಗಳು ಹಾಗೂ ಒಬ್ಬಳ ಜೀವನಗಾಥೆಯಿದೆ. 'ರೋಸಾಪಾರ್ಕ್ಸ್: ನನ್ನ ಕಥೆ'(2006) ಇದರಲ್ಲಿ ಅಮೆರಿಕದ ಕಪ್ಪು ಜನರ ಹೋರಾಟದ ಬದುಕಿನ ಕತೆಯಿದೆ. 'ಸೆರೆಹಕ್ಕಿ ಹಾಡುವುದು ಏಕೆಂದುಬಲ್ಲೆ' ಮಾಯಾ ಏಂಜೆಲೋ ಆತ್ಮಕತೆ(2007). ಇದರಲ್ಲಿ ಕಪ್ಪು ಜನಾಂಗದ ನೊಂದವರ ಆಸೆ, ಆಕಾಂಕ್ಷೆ, ನೋವು, ನಲಿವುಗಳ ಕತೆಯಿದೆ. 'ಮರುಭೂಮಿಯ ಹೂ' ಆಫ್ರಿಕಾದ ಮಹಿಳೆಯೊಬ್ಬಳ ಆತ್ಮಕತೆ(2013). ವಾರಿಸ್ ಡೆರಿಸ್ ಆಫ್ರಿಕಾದ ಸೋಮಾಲಿಯಾ ದೇಶದ ಮುಸ್ಲಿಂ ಅಲೆಮಾರಿ ಬುಡಕಟ್ಟಿಗೆ ಸೇರಿದ ಮಹಿಳೆಯೊಬ್ಬಳ ಹೋರಾಟದ ಬದುಕಿನ ಚಿತ್ರಣವಿದೆ. ಪಾಕಿಸ್ತಾನದ ಬಾಲಕಿ ಮಲಾಲಾ ಯೂಸಫ್‌ಜೈಯಾಗೆ ನೋಬೆಲ್ ಪಾರಿತೋಷಕ ಸಿಕ್ಕಾಗ ಪ್ರಕಟವಾದ 'ನಾನು ಮಲಾಲಾ' ಪುಸ್ತಕ ಜಗತ್ತಿನ ಅನೇಕ ಭಾಷೆಗಳಲ್ಲಿಯೂ ಅನುವಾದವಾದಂತೆ ಕನ್ನಡದಲ್ಲಿಯೂ ಕಾಣಿಸಿಕೊಂಡಿತು. ತೆಹಮಿನ ದುರ್ರಾನಿಯ 'ಆರನೆಯ ಹೆಂಡತಿ', ಮಾಧವಿ ದೇಸಾಯಿಯ 'ಕುಣಿಯೆ ಗುಮಾ', ಸುಸ್ಮಿತಾ ಬಂದೋಪಾಧ್ಯಾಯರ 'ಕಾಬೂಲಿವಾಲಾನ ಮಡದಿ', ಬೇಬಿಹಲ್ದಾರ್‌ಳ 'ನೋವಿನ ಬದುಕು', ನಳಿನಿ ಜಮೀಲರ 'ಸೆಕ್ಸ್‌ವರ್ಕರ್ ಒಬ್ಬಳ ಆತ್ಮಕತೆ', ನಟಿ ಶಕೀಲಾರ ಆತ್ಮಕತೆ ಇತ್ಯಾದಿಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಬಗೆಯ ಆತ್ಮಕತೆಯ ಅನುವಾದಗಳು ಮೂಲ ಭಾಷೆಯಲ್ಲಿ ಪ್ರಕಟವಾಗಿ ಹೆಚ್ಚು ತಡವಾಗದೆ ಇತರ ಭಾಷೆಗಳಿಗೆ ಅನುವಾದವಾಗಿರುವುದನ್ನು ಗಮನಿಸಬಹುದು.

Scanned with CamScanner

21ನೇ ಶತಮಾನದಲ್ಲಿ ದೇವರು, ಧರ್ಮ, ದಾರ್ಶನಿಕ ಪರಂಪರೆಗಳನ್ನು ಕುರಿತ ಅನುವಾದಗಳು ಹೆಚ್ಚಾಗಿ ಪ್ರಕಟವಾಗಲಾರಂಭಿಸಿವೆ. ಅನೇಕ ಖಾಸಗಿ ಸಂಘ-ಸಂಸ್ಥೆಗಳು ಈ ಬಗೆಯ ಅನುವಾದಗಳನ್ನು ರೂಪಿಸಿ ಪ್ರಕಟಿಸುತ್ತಿವೆ. ಹಾಗೆಯೇ ವಿಜ್ಞಾನ ಸಾಹಿತ್ಯ, ವೈಚಾರಿಕ ಸಾಹಿತ್ಯ ಕೃತಿಗಳ ಅನುವಾದಗಳಿಗೂ ಹೆಚ್ಚಿನ ಪ್ರಾಶಸ್ತ್ಯವಿದೆ. ಕೆ.ಪುಟ್ಟಸ್ವಾಮಿ ಅವರು 'ಜೀವಸಂಕುಲಗಳ ಉಗಮ'ದಂತಹ ಕೃತಿಗಳ ಮೂಲಕ ವಿಜ್ಞಾನ ಸಾಹಿತ್ಯದ ಅನುವಾದಗಳಿಗೆ ಹೆಸರಾಗಿದ್ದಾರೆ. ಅನುವಾದಗಳ ಮೂಲಕ ಹೊಸಬಗೆಯ ಕಾವ್ಯ, ಕತೆ, ಕಾದಂಬರಿಗಳ ಕುರಿತ ಕುತೂಹಲಕ್ಕಿಂತಲೂ ವ್ಯಕ್ತಿಗಳ ವೈಯಕ್ತಿಕ ನೋವು ನಲಿವುಗಳ ಆಖ್ಯಾನಗಳಿಗೆ ಓದುಗರು ಆಕರ್ಷಿತರಾಗುವುದು ಒಂದೆಡೆ. ವೈಯಕ್ತಿಕ ನೋವನ್ನು ಹೇಳಿಕೊಳ್ಳುವುದರ ಜೊತೆಗೆ ಧಾರ್ಮಿಕತೆಯ ಮುಖವಾಡವನ್ನು ತೆರೆದಿಡುತ್ತಲೇ ಮುಸ್ಲಿಂ ಮಹಿಳೆಯೊಬ್ಬಳ ಮರಂತ ಬದುಕನ್ನು ಹಿಡಿದಿಡುವ ಕಾದಂಬರಿ 'ಪೀಠಾಧಿಪತಿಯ ಪತ್ನಿ'ಯಂತಹ ಕಾದಂಬರಿಗಳೂ ಗಮನ ಸೆಳೆದಿವೆ. ದಾರ್ಶನಿಕ ತತ್ವಸಿದ್ಧಾಂತಗಳನ್ನು ಕುರಿತ ಪ್ರಚಾರ, ಪ್ರಸಾರದ ಕೆಲಸವನ್ನು ಕೈಗೆತ್ತಿಕೊಂಡಿರುವ ಸಂಘಟನೆಗಳು ನಿರ್ದಿಷ್ಟ ಸಮಾಜವನ್ನು ಕೇಂದ್ರವಾಗಿರಿಸಿಕೊಂಡು ಅನುವಾದಗಳನ್ನು ರೂಪಿಸುತ್ತಿವೆ.

ದೆಹಲಿಯ ಜವಹರ್‌ಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಪೀಠವು ಮುದುಪೋತ್ತಮ ಬಿಳಿಮಲೆಯವರ ನೇತೃತ್ವದಲ್ಲಿ ಕನ್ನಡದ ಅಭಿಜಾತ ಕೃತಿಗಳ ಇಂಗ್ಲಿಷ್ ಅನುವಾದ ಯೋಜನೆಗಳನ್ನು ಕೈಗೊಂಡಿದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಕೇಂದ್ರವು ಹನ್ನೆರಡನೆಯ ಶತಮಾನದ ವಚನಗಳು, ಕನಕದಾಸರ ರಾಮಧಾನ್ಯ ಚರಿತೆ ಮೊದಲಾದ ಕೃತಿಗಳು, ಕನ್ನಡ ಮೌಖಿಕ ಕಥನಗಳು, ಕುವೆಂಪು ಕವಿತೆಗಳು, 5 ರಿಂದ 13ನೇ ಶತಮಾನದ ವರೆಗಿನ ಕನ್ನಡ ಅಭಿಜಾತ ಕೃತಿಗಳ ವಾಚಿಕೆ ಇತ್ಯಾದಿಗಳ ಇಂಗ್ಲಿಷ್ ಅನುವಾದಗಳನ್ನು ಪ್ರಕಟಿಸಿದೆ. ಅನುವಾದ ಕೆಲಸಗಳನ್ನು ಪ್ರಮುಖವಾಗಿ ಲಕ್ಷ್ಯದಲ್ಲಿಟ್ಟು ಸ್ಥಾಪನೆಯಾದ ಕುವೆಂಪು ಭಾಷಾಭಾರತಿಯೂ ಅನೇಕ ಅನುವಾದ ಯೋಜನೆಗಳನ್ನು ರೂಪಿಸಿ ಉತ್ತಮ ಕೃತಿಗಳನ್ನು ಕನ್ನಡ ಮತ್ತು ಇತರ ಭಾರತೀಯ ಭಾಷೆಗಳಲ್ಲಿಯೂ ಪ್ರಕಟಿಸಿದೆ. ಸಾಹಿತ್ಯ ಅಕಾದೆಮಿಯಂತೂ ಅನುವಾದಗಳನ್ನು ಪ್ರಕಟಿಸುತ್ತಲೇ ಬಂದಿದೆ. ಜಾಗತಿಕ ಮಟ್ಟದಲ್ಲಿ ಕನ್ನಡ ಕೃತಿಗಳನ್ನು ಪರಿಚಯಿಸುವ ಮಹತ್ವಾಕಾಂಕ್ಷೆಯೊದಿಗೆ ಮೂರ್ತಿ ಕ್ಲಾಸ್ಸಿಕಲ್ ಲೈಬ್ರರಿ ಆಫ್ ಇಂಡಿಯಾದಂತಹ ಸಂಸ್ಥೆಗಳು ಅನುವಾದ ಕ್ಷೇತ್ರದಲ್ಲಿ ಕಾಣಿಸಿಕೊಂಡಿವೆ. ಹೀಗೆ ಅನುವಾದ ಚಟುವಟಿಕೆಗಳು ಸಾಂಸ್ಥಿಕ ನೆಲೆಯಲ್ಲಿಯೂ ನಡೆಯುತ್ತಿವೆ.

ಆಡಳಿತ ನಡೆಸುವ ಸರಕಾರಗಳು ತಮ್ಮ ತತ್ವಸಿದ್ಧಾಂತಗಳನ್ನು ಬೆಂಬಲಿಸುವ ಮಹನೀಯರ ವಿಚಾರಗಳನ್ನು ಪ್ರಕಟಿಸುವ ಯೋಜನೆಗಳನ್ನು ರೂಪಿಸುತ್ತಿರುತ್ತವೆ. ಸರಕಾರದ ಅಂಗ ಸಂಸ್ಥೆಗಳು ಇದನ್ನು ಕಾರ್ಯರೂಪಕ್ಕೆ ತರುತ್ತವೆ. ಹಾಗಾಗಿ

ಅನುವಾದಗಳು ಕೇವಲ ಲಕ್ಷ್ಯಭಾಷಾ ಓದುಗರ ಬೇಡಿಕೆಯ ಕಾರಣಗಳಿಗಷ್ಟೇ ರೂಪುಗೊಳ್ಳುವುದಿಲ್ಲ. ಪ್ರಭುತ್ವದ ಹಿತಾಸಕ್ತಿಗಳನ್ನು ಪೋಷಿಸುವಲ್ಲಿಯೂ ಅನುವಾದ ಚಟುವಟಿಕೆಗಳು ಸಮಕಾಲೀನ ದಿನಗಳಲ್ಲಿ ಹೆಚ್ಚು ಕ್ರಿಯಾಶೀಲವಾಗಿವೆ.

ಪರಾಮರ್ಶನ ಗ್ರಂಥಗಳು:

- ಅನಂತನಾರಾಯಣ ಎಸ್. (1976 ಎರಡನೆಯ ಮುದ್ರಣ) ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು
- ಕರೀಗೌಡ ಬೀಚನಹಳ್ಳಿ (ಡಾ.)(ಸಂ), (1999) ಭಾಷಾಂತರದ ಸಾಂಸ್ಕೃತಿಕ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ
- ಕೀರ್ತಿನಾಥ ಕುರ್ತಕೋಟಿ (1992), ಬಯಲು ಆಲಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ
- ಮೋಹನ ಕುಂಟಾರ್ (ಡಾ.), (2010) ಭಾಷಾಂತರದ ವಿಭಿನ್ನ ನೆಲೆಗಳು, ಪಲ್ಲವ ಪ್ರಕಾಶನ ಚಿನ್ನಪಟ್ಟಣ
- ಮೋಹನ ಕುಂಟಾರ್ ಎ.(ಡಾ.),(2014) ಕನ್ನಡ – ಮಲಯಾಳಂ ಭಾಷಾಂತರ ಪ್ರಕ್ರಿಯೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ
- ಮೋಹನ ಕುಂಟಾರ್ (ಪ್ರೊ.), (ಸಂ).. (2015) ಅನುವಾದ ಸಾಹಿತ್ಯ, ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ 10 ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
- ಮೋಹನ ಕುಂಟಾರ್ (ಡಾ.), (2015) ಭಾಷಾಂತರ ಪ್ರಕ್ರಿಯೆ ಪ್ರೇರಣೆ ಪ್ರಭಾವ, ಪ್ರಸಾರಾಂಗ, ಯಾಜಿ ಪ್ರಕಾಶನ ಹೊಸಪೇಟೆ
- ಲಕ್ಷ್ಮೀನಾರಾಯಣ ಅರೋರಾ (2010), ಸ್ವಾತಂತ್ರ್ಯೋತ್ತರ ಕನ್ನಡ ಭಾಷಾಂತರ ಸಾಹಿತ್ಯ, ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು
- ಶ್ರೀನಿವಾಸ ಹಾವನೂರ (1974) ಹೊಸಗನ್ನಡದ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ
- ಸಿ. ಪಿ. ಕೆ. (2009) ಭಾಷಾಂತರ ಭಾರತಿ, ಶ್ರೀಲಲಿತಾ ಬುಕ್ ಬ್ಯೂರೋ, ಮೈಸೂರು

❑

– ಡಾ. ಮೋಹನ ಕುಂಟಾರ್
ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ
ಹಂಪಿ ಕನ್ನಡ ವಿಶ್ವವಿದ್ಯಾನಿಲಯ
ವಿದ್ಯಾರಣ್ಯ, ಹೊಸಪೇಟೆ

Scanned with CamScanner

ಕರ್ನಾಟಕ ಸರ್ಕಾರ

ಪುಸ್ತಕ ಲೋಕ

ಜನವರಿ-ಮಾರ್ಚ್, ೨೦೨೦
ಸಂಪುಟ-೮ ಸಂಚಿಕೆ-೧

ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು-೫೬೦೦೦೨

Scanned with CamScanner

ಕನ್ನಡ ಪುಸ್ತಕ ಪ್ರಾಧಿಕಾರ

ಅಧ್ಯಕ್ಷರು
ಡಾ. ಎಂ.ಎನ್. ನಂದೀಶ ಹಂಚೆ

ಸದಸ್ಯರು
ಪ್ರೊ. ಎ.ವಿ. ನಾವಡ
ಪ್ರಕಾಶ ಕಂಬತ್ತಳ್ಳಿ
ಡಾ. ಆರ್.ಬಿ. ಗದ್ದಗಿಮಠ ಸಂಗಪ್ಪ ಸಾಂತಪ್ಪ ಪೂಜಾರಿ
ಅಶೋಕಕುಮಾರ್ ರಾಯ್ಕರ್
ಡಾ. ಪುರುಷೋತ್ತಮ ಗೌಡ,
ಟಿ.ಎ.ಎನ್. ಬಂಡಿಗೆ

ಪ್ರಕಾಶಕರು
ಶ್ರೀ ಕೆ. ಜಿ. ಕಿರಣ್ ಸಿಂಗ್
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ,
ಕನ್ನಡಭವನ, ಜೆಸಿ ರಸ್ತೆ, ಬೆಂಗಳೂರು-560002
ದೂರವಾಣಿ / ಫ್ಯಾಕ್ಸ್ : 080-22484516

ಸಂಪುಟ	. 8
ಸಂಚಿಕೆ	: 1
ಪ್ರತಿಗಳು	: 500
ಪುಟಗಳು	. 100

ಲೇಖನಗಳಲ್ಲಿನ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬ್ದಾರರು

ಮುದ್ರಣ : ರಾಜಾ ಪ್ರಿಂಟರ್ಸ್
ಮುಖ್‌ರಾಜ್ ಲೇಔಟ್, ಬನ್ನೇರುಘಟ್ಟ ರಸ್ತೆ
ಬೆಂಗಳೂರು-560 030. ದೂರವಾಣಿ: 22234066
ಈಮೇಲ್: rajaprinters@gmail.com

Scanned with CamScanner

ಜ್ಞಾನಪೀಠ ಪ್ರಶಸ್ತಿ ವಿಜೇತ ಮಲಯಾಳಂ ಕವಿ ಅಕ್ಕಿತ್ತಂ

ಮೋಹನ ಕುಂಟಾರ್

'ಇತರರಿಗಾಗಿ ಕಣ್ಣಿಂದ ಹನಿಯೊಂದ
ನಾನುದುರಿಸಲು
ನನ್ನಂತರಾಳದಲ್ಲುದಿಸುವುದು
ಸಾವಿರ ಸೌರಮಂಡಲ
ಇತರರಿಗಾಗಿ ನಾನೊಂದು
ನಸುನಗೆಯ ಬೀರಲು
ನನ್ನ ಹೃದಯದಲ್ಲಲೆಯುವುದು
ನಿತ್ಯ ನಿರ್ಮಲ ಪೌರ್ಣಮಿ'

ಇತರರಿಗಾಗಿ ಮನಮಿಡಿಯುವ ಹೃದಯ ನಿವೇದನೆಯನ್ನು ಅಕ್ಷರರೂಪದಲ್ಲಿ ಮೂಡಿಸಿದ ಮಲಯಾಳಂ ಕವಿ ಅಕ್ಕಿತ್ತಂ ಅಚ್ಯುತನ್ ನಂಬೂದಿರಿಗೆ ಐವತ್ತೈದನೆಯ ಜ್ಞಾನಪೀಠ ಪುರಸ್ಕಾರ ಸಂದಿದೆ. ಮಲಯಾಳಂಗೆ ಆರನೆಯ ಜ್ಞಾನಪೀಠವಿದು. ಈ ಮೊದಲು ಜಿ. ಶಂಕರ ಕುರುಪ್ಪ್, ಎಸ್.ಕೆ. ಪೊಟ್ಟಕಾಡ್, ತಗಳಿ ಶಿವಶಂಕರ ಪಿಳ್ಳೆ, ಎಂ.ಟಿ. ವಾಸುದೇವನ್ ನಾಯರ್, ಒ.ಎನ್.ವಿ. ಕುರುಪ್ಪ ಇವರು ಗೌರವಕ್ಕೆ ಪಾತ್ರರಾದವರು– ತಾನು ಕಣ್ಣೀರು ಸುರಿಸಾವಾಗಲೂ ತನ್ನೊಳಗೆ ಉದಯಿಸುವ ಸೂರ್ಯನನ್ನು ಗುರುತಿಸುವ ಕವಿ ಅಕ್ಕಿತ್ತಂ ಸ್ವಾನುಭವಗಳ ಜೊತೆಗೆ ಸಮಕಾಲೀನ ಸಾಮಾಜಿಕ ಬದುಕಿನ ಪರಿಸ್ಥಿತಿಗಳನ್ನು ಕುರಿತಂತೆ ಅನೇಕ ಕವಿತೆಗಳನ್ನು ಬರೆದು ಮಲಯಾಳಂ ಕಾವ್ಯಪ್ರಿಯರ ಹೃದಯ ಸ್ಪರ್ಶಿಸಿದ್ದಾರೆ.

ಖ್ಯಾತ ಚಿತ್ರಕಲಾವಿದ ರಾಜಾ ರವಿವರ್ಮ ಅರಮನೆಯ ಗೋಡೆಗಳ ಮೇಲೆ ಇದ್ದಲಿನಿಂದ ಚಿತ್ರಗಳನ್ನು ಬರೆದು ಮಹಾನ್ ಕಲಾವಿದರಾದಂತೆ ಅಕ್ಕಿತ್ತಂ ಸಹ ದೇವಾಲಯದ ಗೋಡೆಗಳ ಮೇಲೆ ಚಿತ್ರ ಬರೆದು ಕಲಾವಿದನಾಗುವ ಕನಸು ಕಂಡಿದ್ದರು. ಸೊಂಟದಲ್ಲಿ ಕಪ್ಪು ಉಡಿದಾರ ಹಾಗೂ ಬೆಳ್ಳಿನ ಕೌಪೀನವನ್ನು ಕಟ್ಟಕೊಂಡ ಹೆಣ್ಣೊಬ್ಬಳ ಚಿತ್ರವನ್ನು ಕಂಡು ಸ್ನಾನಕ್ಕೆ ಬಂದ ಹೆಣ್ಣು ಮಕ್ಕಳು ನಕ್ಕಾಗ ಇದು ನನ್ನದೇ ಚಿತ್ರವೆಂದು ಭಾವಿಸಿದ ನಂಬೂದಿರಿ ಹೆಣ್ಣುಮಗಳೊಬ್ಬಳು ಅತ್ತುಬಿಟ್ಟಳು. ಇದನ್ನು ನೋಡಿದ ಬಳಿಕ ಅಕ್ಕಿತ್ತಂಗೆ ಸಂಕಟವಾಯಿತು. ಮುಂದೆ ಚಿತ್ರ ಬರೆಯುವುದನ್ನೇ ನಿಲ್ಲಿಸಿಬಿಟ್ಟರು. ಮುಂದೆ ಅಕ್ಷರ ಬರವಣಿಗೆಯನ್ನೇ ಪ್ರಮುಖ ಅಭಿವ್ಯಕ್ತಿ ಮಾಧ್ಯಮವನ್ನಾಗಿಸಿಕೊಂಡರು.

ಅಚ್ಯುತನ್ ನಂಬೂದಿರಿ

ಹಳ್ಳಿಯ ಮುಂಡ ಹುಡುಗರು ದೇವಾಲಯದ ಗೋಡೆಗಳ ಮೇಲೆ ಇದ್ದಲಿನಿಂದ ಗೀಚಿದ ಸಾಲುಗಳನ್ನು ಓದಿದ ಅಕ್ಕಿತ್ತಂಗೆ ಉಂಟಾದ ರೋಚಕದ ಭರದಲ್ಲಿ ತನ್ನ ಎಂಟನೆಯ ವಯಸ್ಸಿನಲ್ಲಿ ಗೋಡೆಯ ಮೇಲೆ ಗೀಚಿದ ಸಾಲ್ಕು ಸಾಲುಗಳೇ ಮೊದಲ ಕವಿತೆಯಾಯಿತು

'ದೇವಾಲಯದ ಗೋಡೆಗಳಲ್ಲಿ
ಸುಮ್ಮನೆ ಗೀಚಿದರೆ
ದೊಡ್ಡವನಾದ ದೇವರು ಬಂದು
ಅವೆಲ್ಲವನ್ನು ಮಾಯಿಸುವನು'

ಬಾಲಕ ಅಕ್ಕಿತ್ತಂನಿಂದ ಅನಿರೀಕ್ಷಿತವಾಗಿ ಹೊರಹೊಮ್ಮಿದ ಕವಿತಾ ಲಕ್ಷಣಗಳ ಈ ಕಾವ್ಯ ಬೀಜ ಮುಂದೆ ಹೆಮ್ಮರವಾಗಿ ಬೆಳೆಯಲು ನಾಂದಿಯಾಯಿತು.

ಕುಮರನಲ್ಲೂರ್‌ನ ಅಕ್ಕಿತ್ತಂ ಅವರ ಮನೆಯ ಹಿಂಭಾಗದ ವಿಶಾಲವಾದ ಬಯಲಿನಲ್ಲಿ ಜೊತೆಗಾರರೊಡನೆ ಆಟವಾಡುತ್ತ ಕಳೆದ ಬಾಲ್ಯದ ಸೆನಪುಗಳು ಕವಿಯ ಹೃದಯದ ಕನಸುಗಳಾಗಿ ಕವಿತೆಗಳಲ್ಲಿ ಕುಡಿಯೊಡೆದಿವೆ. ಹಸಿವೆಯೇ ತನ್ನಿಂದ ಕವಿತೆಗಳನ್ನು ಬರೆಯಿಸಿತು ಎಂದು ಅಕ್ಕಿತ್ತಂ ಹೇಳಿದ್ದಿದೆ. ನೋವುಗಳು ನೆರಳುಗಳಾಗಿ ಜೊತೆಗಿರುತ್ತಿದ್ದ ಆ ಕಾಲದಲ್ಲಿ ಕೈ ಹಿಡಿದು ಮುನ್ನಡೆಸಲು ಕವಿತೆಯೇ ಜೊತೆಯಾಗುತ್ತಿತ್ತು. ಇತರರ ನೋವಿಗೆ ಸ್ಪಂದಿಸುವ ಅವರ ಸಂತಸದಲ್ಲಿ ಪಾಲ್ಗೊಳ್ಳುವ ಕವಿಗೆ ಹಳ್ಳಿಯ ಕಾಲು ದಾರಿಯಲ್ಲಿ ನಡೆಯುವಾಗ ಕವಿತೆ ಸಹಯಾತ್ರಿಯಾಗಿರುತ್ತಿತ್ತು.

ಅಕ್ಕಿತ್ತಂ ಅವರ ರಚನೆಗಳಲ್ಲಿ ಪ್ರಮುಖವಾದುದೆಂದು ಪರಿಗಣಿಸಲಾದ ಕವಿತೆ 'ಇಪ್ಪತ್ತನೆಯ ಶತಮಾನದ ಇತಿಹಾಸ' ಬರೆದದ್ದು ೧೯೫೨ರಲ್ಲಾದರೂ ಪ್ರಕಟವಾದುದು ೧೯೫೪ರಲ್ಲಿ. ಮಲಯಾಳಂ ಕಾವ್ಯಲೋಕಕ್ಕೆ ಆಧುನಿಕತೆಯ ಪ್ರವೇಶದ ಹೆಜ್ಜೆ ಗುರುತಾಗಿಯೂ ಈ ದೀರ್ಘ ಕಥನಕವನವನ್ನು ವಿಶ್ಲೇಷಿಸಲಾಗಿದೆ. ಮಾನವ ಪ್ರೀತಿಯಲ್ಲಿ ಕೇಂದ್ರೀಕೃತವಾದ ಸಾಮಾಜಿಕ ಜೀವನ ದರ್ಶನದ ಉದಾತ್ತ ಭಾವಗಳನ್ನು ಸರಳವೂ, ಅಗಾಧವೂ ಆದ ಈ ಇತಿಹಾಸ ಪ್ರಚಾರ ಮಾಡುತ್ತದೆ. ಈ ಕವಿತೆಯ ಕುರಿತು ಅಕ್ಕಿತ್ತಂ ಹಲವು ಬಾರಿ ಪುನರಾವರ್ತಿಸಿದ್ದಿದೆ. ಇದನ್ನು ಬರೆದುದು ನಾನಲ್ಲ. ನನ್ನೊಳಗಿನ ಇನ್ನೊಬ್ಬ.

ಬಾಲ್ಯದ ಆಟ ಪಾಠಗಳ ಸಂಭ್ರಮದ ವರ್ಣನೆಯಿಂದ ಆರಂಭವಾಗುವ ಈ ಕವಿತೆಯು ನಿಧಾನವಾಗಿ ವಿಷಾದದ ಛಾಯೆ ಆವರಿಸಿ ಅಧ್ಯಾತ್ಮದ ಅಮೃತ ಸಿಂಚನದೊಡನೆ ಕೊನೆಯಾಗುತ್ತದೆ. ಬದಲಾವಣೆಗೆ ಸಿಲುಕಿದ ಬದುಕಿನಲ್ಲಿ ಸಂತಸ ಕಳೆದುಕೊಳ್ಳುವ ಅನೇಕ ಸಾಮಾಜಿಕ ರಾಜಕೀಯ ವಿದ್ಯಮಾನಗಳಿಂದ ನೋವಿಗೊಳಗಾದವರಿಗಾಗಿ ಕವಿ ಮನಸ್ಸು ನೊಂದಿದೆ.

ಮನುಷ್ಯ ಸಮತೆಯೇ ಮೂಲ ಆಶಯವಾಗುಳ್ಳ ಈ ಕವಿತೆಯಲ್ಲಿ ದುಃಖಿತರ ಕುರಿತ ಅನುಕಂಪವನ್ನು ಕಾಣಬಹುದು. ಮಾನವತೆಯ ಮಹಾದರ್ಶನವನ್ನು ಇತರರಿಂದಲೂ ನಿರೀಕ್ಷಿಸುವ ಕವಿ ಅಕ್ಕಿತ್ತಂರ ವೈಯಕ್ತಿಕ ದುಃಖವೆಂಬುದು ಆ ಕವಿತೆಯಲ್ಲಿಲ್ಲ. ಇತರರಿಗಾಗಿ ಕಣ್ಣೀರು ಸುರಿಸುವ ಸಿದ್ಧಿ ದೈವಸೃಷ್ಟಿಯಲ್ಲಿ ಮಾನವನಿಗೆ ಮಾತ್ರ ಸಾಧ್ಯವಿರುವ ಸಾಮರ್ಥ್ಯ.

ಕ್ರಾಂತಿಗೆ ವಿರುದ್ಧವಾಗಿ ಕವಿತೆ ಬರೆದರೆಂಬ ಆರೋಪ ಹೊರಿಸಿ ಪ್ರಮುಖ ರಾಜಕೀಯ ಪಕ್ಷವೊಂದು ಕವಿಯನ್ನು ಅವಗಣಿಸಿತ್ತು. ಕ್ರಾಂತಿಯೆಂಬುದು ರಕ್ತ ಸುರಿಸದೆಯೇ ಆಗಬೇಕು ಎಂಬುದೇ ಕವಿಯ ವೈಷ್ಣವ ಬಂಡವಾಳಶಾಹಿಗಳ, ಜಮೀನ್ದಾರರ ವಿರುದ್ಧ ಕಾರ್ಮಿಕ ಹೋರಾಟದ ವಯಲಾರ್ ಚಳವಳಿಯ ನಂತರ ಕವಿಯ ಆತ್ಮ ನೊಂದು ಕವಿತೆಯ ರೂಪದಲ್ಲಿ ಹೊರಹೊಮ್ಮಿತು. ಆ ಹೋರಾಟದಲ್ಲಿ ಬಡವರು ಪ್ರಾಣ

Scanned with CamScanner

ಕಳೆದುಕೊಂಡುದು ನೇತೃತ್ವದ ಅಮ್ಮುದ್ಧತೆಯ ಪ್ರತೀಕವೆಂದು ಅವರ ಪಾಪ ನಿವೇದನೆಯ ರೂಪದಲ್ಲಿ ಕವಿತೆಯನ್ನು ಅಕ್ಕಿತ್ತಂ ಬರೆದಿದ್ದರು. ಈ ವಶ್ಯಾತ್ಮಾಪ ರೂಪದ ಭಾವವನ್ನು ಪ್ರಕಟಪಡಿಸಿದ್ದು ಕಮ್ಯುನಿಸ್ಟ್ ಪಾರ್ಟಿಗೆ ಇಷ್ಟವಾಗಲಿಲ್ಲ.

ಇಪ್ಪತ್ತನೆಯ ಶತಮಾನದ ಇತಿಹಾಸ ಬರೆದುದು ಕ್ರಾಂತಿಯಲ್ಲಿ ನಂಬಿಕೆಯಿಲ್ಲದೆ ಅಲ್ಲ. ಬದಲಾಗಿ ರಕ್ತಪಾತವಿಲ್ಲದೆ ಕ್ರಾಂತಿಯಾಗಬೇಕೆಂದು ಬಯಸುವ ಕವಿಯೇ ಅದನ್ನು ಬರೆದುದು. ಕೇರಳದಲ್ಲಷ್ಟೇ ಅಲ್ಲ ಭಾರತದ ಇತರೆ ಕಡೆಗಳಲ್ಲಿಯೂ ಕವಿ ಬಯಸುವುದೂ ಇದನ್ನೆ. ಅಕ್ಕಿತ್ತಂರನ್ನು ದೂರವಿಟ್ಟವರಾರೂ ಅದನ್ನು ಅರ್ಥಮಾಡಿಕೊಂಡಿಲ್ಲ ಎಂಬುದೇ ವಸ್ತು ಸ್ಥಿತಿಯ ಚರ್ಚೆ ಮಲಯಾಳಿಗರ ನಡುವೆ ಇದೆ.

'ಬೆಳಕು ದುಃಖಕರ ಮಗುವೇ
ಇರುಳಲ್ಲವೇ ಸುಖಪ್ರದ'

ಎಂಬ ಸಾಲುಗಳನ್ನು ಹಲವರು ತಪ್ಪಾಗಿ ಗ್ರಹಿಸಿದರು. ಈ ಸಾಲುಗಳು ಕೇರಳ ಸಾಮಾಜಿಕ, ರಾಜಕೀಯ ವಲಯದಲ್ಲಿ ತಲ್ಲಣಗಳನ್ನುಂಟು ಮಾಡಿದುವು. ಕವಿ ಬೆಳಕನ್ನು ದುಃಖವೆಂದು ಹೇಳುವಾಗ ಬೆಳಕನ್ನು ನಿಷೇಧಿಸುತ್ತಾರೆ ಎಂದಲ್ಲ ಅರ್ಥೈಸಬೇಕಾದುದು. ಕವಿತೆ ಬಯಸುವುದು ಮರು ಓದನ್ನು. ತಪ್ಪಾಗಿ ಓದುವುದರಿಂದಲೇ ಅಕ್ಕಿತ್ತಂ ಬಗೆಗೆ ತಪ್ಪು ಗ್ರಹಿಕೆಗೆ ದಾರಿ ಮಾಡಿಕೊಟ್ಟಿದೆ ಎಂದು ವಿಮರ್ಶಕರು ಅಭಿಪ್ರಾಯಿಸಿದ್ದಿದೆ.

ಮಲಯಾಳಂ ಕಾವ್ಯದಲ್ಲಿ ಆಧುನಿಕತೆಯ ಪ್ರವೇಶ ಪಡೆದುದು ಅಕ್ಕಿತ್ತಂ ಅವರ ಮೂಲಕ ಎಂದೇ ವಿಮರ್ಶಕರ ಅಭಿಪ್ರಾಯ. ಕವಿ ಚಂಗಂಪುಟ ಉದ್ದೀಪಿಸಿದ ಅತಿಭಾವುಕತೆಯ ಭಾವ ಸೌಂದರ್ಯವು ಕಾವ್ಯಾಂತರಿಕ್ಷದಲ್ಲಿ ವ್ಯಾಪಿಸಿ ತುಂಬಿ ನಿಂತುದು ಒಂದು ಕಾಲ ಘಟ್ಟ. ಆಧುನಿಕತೆಗೆ ಮುನ್ನುಡಿಯೋ ಎಂಬಂತೆ'ಭಿದ್ರವಿಚ್ಛಿದ್ರ ಲೋಕ' (ಇಡಿಇಸ್ಥೆಪೊಳಇ್ಳ ಲೋಕಂ) ಬರೆದರು.

'ಅಡುಗೆ ಮಾಡುತ್ತಿದ್ದವನ ಒಲೆಯಲ್ಲಿ
ಹೋಗಿ ಬಿದ್ದ ಪತಂಗಗಳು
ಮರುದಿನ ದಾರಿ ಬದಿಯ ಹೊಂಡದಲ್ಲಿ
ಕಂಡುದು ಶಿಶು ಶವಗಳ ರೂಪದಲ್ಲಿ'

ಎಂದು ಕ್ರಾಂತಿಕಾರಿ ಚಿಂತನೆಯ ಕವಿತೆಯನ್ನು ಎಷ್ಟೋ ಕಾಲಕ್ಕೂ ಮೊದಲೇ ಅಕ್ಕಿತ್ತಂ ಬರೆದಿದ್ದಾರೆ. ಕವಿತೆ ಅದರ ಪ್ರಜ್ಞಾವಲಯವನ್ನು ಕಳಚಿ ಬೀದಿಗೆ ಇಳಿದು ನಡೆಯುತ್ತಿತ್ತು. ಸುಡುವ ಕೆಂಡದ ಕಡೆಗೆ ದೃಷ್ಟಿ ಹಾಯಿಸುವದು ಕವಿತೆ. ಅದುವೇ ಅಕ್ಕಿತ್ತಂರಲ್ಲುಂಟಾದ ಬದಲಾವಣೆ. ಭಾಷೆಯ ಬದಲಾವಣೆ. ಭಾವದ ಬದಲಾವಣೆ. ದೃಷ್ಟಿಕೋನದ ಬದಲಾವಣೆ

'ಬೀದಿ ಬದಿಯಲ್ಲಿ ಕಾಗೆ ಕುಕ್ಕುತ್ತಿದೆ
ಸತ್ತ ಹುಡುಗಿಯ ಕಣ್ಣುಗಳನ್ನು
ಮೊಲೆ ಕಚ್ಚಿ ಎಳೆಯುತ್ತಿದೆ
ನರವರ್ಗ ನವಾತಿಥಿ'

ಸತ್ತ ಹುಡುಗಿಯ ಕಣ್ಣು, ಮೊಲೆಗಳ ಕುಕ್ಕಿ ಎಳೆಯುವ ಭಾಷೆಗಳೋ, ಪ್ರತಿಮೆಗಳೋ ಅಂದು ಕವಿತೆಗೆ ಒಗ್ಗುವ ಮಾತುಗಳಾಗಿರಲಿಲ್ಲ. ಆದರೂ ಮಾರ್ಮಿಕ ಮಾತುಗಳಿಂದ ಬದುಕಿನ ನಿಷ್ಠುರ ಸತ್ಯಗಳನ್ನು ಅಕ್ಕಿತ್ತಂ ಕವಿತೆಗಳಲ್ಲಿ ಆವಿಷ್ಕರಿಸಿದರು. ವಾಸ್ತವದಲ್ಲಿ ಅಲ್ಲಿಯೇ ಮಲಯಾಳಂನ ಆಧುನಿಕತೆಯ ಆರಂಭ.

ಇ.ಎಂ.ಎಸ್. ನಂಬೂದಿರಿಪಾಡ್‌ರ ಸಮೀಪವರ್ತಿಯಾಗಿದ್ದ ಅಕ್ಕಿತ್ತಂ ಅವರ ಮನೆಯಲ್ಲಿ ಕಮ್ಯುನಿಸ್ಟ್ ಸಾಹಿತ್ಯಕ್ಕಾಗಿ ಪೊಲೀಸರು ಹೋಗಿ ತನಿಖೆ ಮಾಡಿದ್ದಿದೆ. ಅಂತಹ ಒಬ್ಬ ಕವಿಗೆ ಕಮ್ಯುನಿಸ್ಟ್ ಚಿಂತನೆಗೆ ವಿರುದ್ಧವಾಗಿ ಬರೆಯುವುದು ಸಾಧ್ಯವಿಲ್ಲ. ಆದರೆ 'ಇಪ್ಪತ್ತನೆಯ ಶತಮಾನದ ಇತಿಹಾಸ'ವನ್ನು ಬರೆದಾಗ ಕವಿಯನ್ನು ಕಮ್ಯುನಿಸ್ಟ್ ವಿರುದ್ಧವಾಗಿ ಚಿತ್ರಿಸುವ ಶ್ರಮವೂ ನಡೆಯಿತು.

ರಮ್ಯ ಸಂಪ್ರದಾಯದ ಮಲಯಾಳಂ ಕಾವ್ಯ ಸಂಪ್ರದಾಯಕ್ಕೆ ನೆಲದ ಭಾಷೆ. ಸಂಸ್ಕಾರಗಳ ಮೂಲಕ ಆಧುನಿಕತೆಯ ಭದ್ರ ತಳಹದಿಯನ್ನೊದಗಿಸಿದ ಕವಿ ಅಕ್ಕಿತ್ತಂ. ಭಾವುಕತೆಯನ್ನು ನವೀಕರಿಸಿ ಪರಂಪರೆ ಮತ್ತೆ ಆಧುನಿಕತೆಗೆ ಬಿಗಿ ಕೊಂಡಿಯಾಗಿ ಅಕ್ಕಿತ್ತಂರ ಕವಿತೆಗಳು ಗಮನ ಸೆಳೆಯುತ್ತವೆ. ಪರಂಪರೆಯ ಉತ್ತಮಾಂಶಗಳನ್ನು ಒಳಗೊಂಡು ಆಧುನಿಕತೆಯ ಬೆಳಕಿನೆಡೆಗೆ ವಿಸ್ತರಿಸಿದ ಕವಿತೆಗಳನ್ನು ಇವರು ರಚಿಸಿದರು. ವ್ಯಾವಹಾರಿಕ ಭಾಷೆಯನ್ನು ಕಾವ್ಯ ಭಾವಕತ್ವದ ಔನ್ನತ್ಯಕ್ಕೆ ಕೊಂಡೊಯ್ದ ಕೀರ್ತಿ ಅಕ್ಕಿತ್ತಂಗೆ ಸಲ್ಲಬೇಕು.

'ವಜ್ರ ಕೋದಿರುವ ರತ್ನಗಳ ಒಳಗಿಂದ
ದಾಟಿ ಹೋಗುವ ಭಾಗವಷ್ಟೇ, ಕೇವಲ ನೂಲಾಗಿ ನಾನು'

ಎಂದು ಬರೆದ ಕವಿ. ನಿಮಗೆ ನಾನು ರತ್ನಮಾಲೆಯಂತೆ ಕಾಣಿಸುತ್ತಿರಬಹುದು. ಆದರೆ ನಾನು ಕೇವಲ ನೂಲು ಮಾತ್ರ. ಈ ರತ್ನಗಳ ನಡುವಿನಿಂದ ಹಾದು ಬರಲು ಭಾಗ್ಯ ಪಡೆದ ಒಂದು ನೂಲು! ಈ ರತ್ನವನ್ನು ಕೋದುದು ನಾನಲ್ಲ. ವಜ್ರ, ಈ ವಿನಯ ಭಾವ ಅಕ್ಕಿತ್ತಂ ಅವರ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತಿದೆ. 'ಇದಂ ನಮಮಃ' ಎಂಬ ಸಂಕಲ್ಪದಂತೆ ಇದಾವುದೂ ನನ್ನದಲ್ಲ ಎಂದು ಹೇಳುವ ಮನಸ್ಸು. ಆ ಮನಸ್ಸು ಅಕ್ಕಿತ್ತಂ ಅವರ ಸ್ವಯಂ ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದು. ಹಾಗಿಲ್ಲದಿರುತ್ತಿದ್ದರೆ

'ನನ್ನದಲ್ಲ ನನ್ನದಲ್ಲೀ ಆನೆಗಳು
ನನ್ನದಲ್ಲೀ ಮಹಾ ದೇವಾಲಯಗಳೂ ಮಕ್ಕಳೇ'ಎಂದು ಅವರು ಬರೆಯುತ್ತಿರಲಿಲ್ಲ.

ಅಕ್ಕಿತ್ತಂರನ್ನು ಸಾಮಾನ್ಯವಾಗಿ ಸಾಹಿತ್ಯಾಸ್ವಾದಕರು ಕಾಣುವುದು ಮಲಯಾಳಂ ಕಾವ್ಯದ ಪಿತಾಮಹನಾಗಿ.ವಯಸ್ಸಿನಿಂದಲೂ ಪಿತಾಮಹನೇ ಹೌದು. ಆದರೆ ಇದೇ ಅಕ್ಕಿತ್ತಂ ಮಲಯಾಳಂನ ಅತ್ಯಂತ ಆಧುನಿಕ ಕವಿ ಎಂಬುದೂ ವಾಸ್ತವವೇ. ಭಾಷೆಯಲ್ಲು, ಭಾವನೆಯಲ್ಲು ಕಾಲಕ್ಕನುಗುಣವಾಗಿ ವಿನೂತನರಾಗಿಸಲು ತಿಳಿದಿದೆ ಎಂಬುದರಿಂದಲೇ ಅಕ್ಕಿತ್ತಂ ಏಕಕಾಲಕ್ಕೆ ಪಿತಾಮಹ ಕವಿಯೂ ಆಧುನಿಕ ಕವಿಯೂ ಆಗುವುದು ಸಾಧ್ಯವಾಗಿದೆ.

ಇತ್ತೀಚಿನ ದಿನಗಳಲ್ಲಿ ಅಕ್ಕಿತ್ತಂ ಅವರನ್ನು ಸಮುದಾಯವೊಂದರ ವಕ್ತಾರರನ್ನಾಗಿ ಮಾತ್ರ ಸಂಕುಚಿತ ಭಾವನೆಯಿಂದ ಕಾಣಲಾಗುತ್ತಿತ್ತು. ಅದು ಸರಿಯಾದ ಕ್ರಮವಾಗಿರಲಿಲ್ಲ ಎಂಬುದಕ್ಕೆ ಅವರ ಕವಿತೆಗಳೇ ಸಾಕ್ಷಿಯಾಗಿವೆ. 'ರಕ್ತ ಪ್ರಸಾದ' ಎಂಬ ಅವರ ಕವಿತೆಯನ್ನು ಇದಕ್ಕೆ ಉದಾಹರಣೆಯಾಗಿ ವಿಮರ್ಶಕರು ಉಲ್ಲೇಖಿಸುವುದಿದೆ. ಸಮುದಾಯಗಳ ಪರಸ್ಪರ ಸಂಘರ್ಷವೇ ಇವರ ಮುಖ್ಯ ಪ್ರಮೇಯ. ಘರ್ಷಣೆಯಲ್ಲಿ ಅನೇಕರು ಪ್ರಾಣ ಕಳೆದುಕೊಂಡರು. ಪ್ರತಿಯೊಂದು ಸಮುದಾಯದ ಎಷ್ಟು ಜನರು ತೀರಿಕೊಂಡರು ಎಂಬುದು ಜನರಿಗೆ ತಿಳಿಯುವ ಕುತೂಹಲವಿತ್ತು. ಅದನ್ನು ತಿಳಿದುಕೊಳ್ಳಲು ದೇವಾಲಯದ ದೇವರಲ್ಲಿ ಸತ್ತವರ ಸಂಖ್ಯೆ ಹೇಳಲು ಭಿನ್ನವಿಸಿಕೊಂಡರು. ನಾನದರಲ್ಲಿ ಹಿಂದುಗಳದೋ, ಕ್ರಿಶ್ಚಿಯನರದೋ, ಮುಸಲ್ಮಾನರದೋ ರಕ್ತವನ್ನು ಕಾಣಲಿಲ್ಲ. ಒ . ಎ . ಬಿ ಎಂಬೀ ಗುಂಪಿನ ರಕ್ತವನ್ನು ಮಾತ್ರ ಕಂಡೆನೆಂದು ಹಿಂದೂಗಳ ದೇವರು ಹೇಳಿದ. ಮನುಷ್ಯರನ್ನು ಹಿಂದೂವಾಗಿಯೋ, ಮುಸಲ್ಮಾನನಾಗಿಯೋ, ಕ್ರಿಶ್ಚಿಯನನಾಗಿಯೋ ಕಾಣದ ಕವಿ ಅಕ್ಕಿತ್ತಂ. 'ತಪಸ್ಯ'ದಂತಹ ಬಲಪಂಥೀಯ ಸಾಂಸ್ಕೃತಿಕ ಸಂಘಟನೆಗಳ ಜೊತೆಗೆ ಗುರುತಿಸಿಕೊಂಡು ಅವರು ಕಾರ್ಯ ನಿರ್ವಹಿಸಿರಬಹುದು. ಅದರ ಹೆಸರಿನಲ್ಲಿ ಅರ್ಹತೆಗೆ ಸಲ್ಲಬೇಕಾದ ಪುರಸ್ಕಾರಗಳನ್ನು ನಿರಾಕರಿಸುವುದು ಸರಿಯಲ್ಲ. ಸಮತೆಯ ತತ್ವವನ್ನಾಧರಿಸಿಯೇ ಕವಿತೆಗಳನ್ನು ಬರೆದ ಕವಿಯನ್ನು ಸಂಕುಚಿತ ಭಾವದಿಂದ ಕಂಡುದೇ ಪುರಸ್ಕಾರಕ್ಕೆ ವಿಳಂಬವಾದುದು ಕಾರಣವಾಗಿರಬಹುದು ಎಂಬ ಮಾತು ಮಲಯಾಳಂ ವಲಯದಲ್ಲಿದೆ.

ಕೊನೆಗೂ ಜ್ಞಾನ ಪೀಠ ಅರಸಿ ಬಂದಾಗ ಕವಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದು ನನಗಿಂತಲೂ ಸಮರ್ಥರಾದ ಬರಹಗಾರರು ಮಲಯಾಳಂನಲ್ಲಿದ್ದರು. ಆದರೆ ಆ ಗೌರವ ಅವರಿಗ್ಯಾರಿಗೂ ಸಿಗದೆ ನನಗೇ ದೊರೆಯಿತು. ಅದಕ್ಕೆ ನನ್ನ ವಯಸ್ಸು ಕಾರಣ ಎಂಬರ್ಥದ ಮಾತುಗಳನ್ನು ತೊಂಬತ್ತೂರು ವರ್ಷದ ಕವಿ ಪ್ರತಿಕ್ರಿಯಿಸಿದರು. ೧೯೮೩ರಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ಗೆ ಜ್ಞಾನಪೀಠ ಬಂದಾಗ ಅವರಿಗೂ ತೊಂಬತ್ತೂರು

Scanned with CamScanner

ವರ್ಷ ಪ್ರಾಯವಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಕ್ಕಿತ್ತಂ ಅವರಿಗೆ ಜ್ಞಾನಪೀಠ ಪುರಸ್ಕಾರ ದೊರೆಸುದಕ್ಕಾಗಿ ಕೇರಳೀಯರು ಸಂಭ್ರಮಿಸುತ್ತಿದ್ದಾರೆ. ಅದರಲ್ಲಿಯೂ ಕುಮರನಲ್ಲೂರು ಶಾಲೆಗೆ ಎಲ್ಲಿಲ್ಲದ ಸಂತಸ. ಕುಮರನಲ್ಲೂರಿನ ಗವರ್ನಮೆಂಟ್ ಹೈಯರ್ ಸೆಕೆಂಡರಿ ಶಾಲೆಯ ಇಬ್ಬರು ವಿದ್ಯಾರ್ಥಿಗಳಿಗೆ ಜ್ಞಾನಪೀಠ ದೊರೆತಂತಾಯಿತು. ಇದೇ ಶಾಲೆಯಲ್ಲಿ ಎರಡು ವರ್ಷ ಕಿರಿಯವರಾಗಿ ಕಲಿತ ಎಂ.ಟಿ.ವಾಸುದೇವನ್ ನಾಯರ್‌ಗೆ ೧೯೯೫ರಲ್ಲಿಯೇ ಜ್ಞಾನಪೀಠ ಲಭಿಸಿತ್ತು. ಇದೊಂದು ಅಪೂರ್ವ ಘಟನೆಯೆಂದೇ ಪರಿಭಾವಿಸಬಹುದು.

ಆಮೆಟ್ಟೂರ್ ಅಕ್ಕಿತ್ತಂ ಮನೆಯ ವಾಸುದೇವನ್ ನಂಬೂದಿರಿ ಮತ್ತು ಚೇಕೂರ್ ಮನೆಯ ಪಾರ್ವತಿ ಅಂತರ್ಜನಂ ದಂಪತಿಗಳಿಗೆ ಮಗನಾಗಿ ೧೯೨೬ ಮಾರ್ಚ್ ೧೮ರಂದು ಪಾಲಕ್ಕಾಡ್ ಜಿಲ್ಲೆಯ ಕುಮರನಲ್ಲೂರಿನಲ್ಲಿ ಅಕ್ಕಿತ್ತಂ ಜನಿಸಿದರು.

ವೇದಾಧ್ಯಯನದ ಜೊತೆಗೆ ಇಂಗ್ಲಿಷ್, ಗಣಿತ, ತೆಲುಗು ಕಲಿತರು. ಕೋಳಿಕ್ಕೋಡಿನ ಸಾಮೂದಿರಿ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್‌ಗೆ ಸೇರಿದರೂ ಅನಾರೋಗ್ಯದ ಕಾರಣ ಶಿಕ್ಷಣ ಮುಂದುವರಿಸಲಾಗಲಿಲ್ಲ. ತೃಶ್ಶೂರಿನ ಪ್ರಸಿದ್ಧ ಮಂಗಳೋದಯ ಪ್ರೆಸ್ಸಿನಲ್ಲಿ ಕೆಲಸಕ್ಕೆ ಸೇರಿಕೊಂಡರಲ್ಲದೆ ಮುಂದೆ ಉಣ್ಣಿನಂಬೂದಿರಿ ಮಾಸಿಕದ ಪ್ರಕಾಶಕರೂ ಆದರು.

ಚಿತ್ರಕಲೆ, ಸಂಗೀತ, ಜ್ಯೋತಿಷ್ಯ ಎಂಬಿತ್ಯಾದಿ ವಿಷಯಗಳ ಕುರಿತು ಚಿಕ್ಕಂದಿನಲ್ಲಿಯೇ ಆಸಕ್ತಿ ಬೆಳೆಸಿಕೊಂಡ ಅಕ್ಕಿತ್ತಂ ಎಂಟನೆಯ ವಯಸ್ಸಿನಲ್ಲಿಯೇ ಕವಿತೆ ಬರೆಯಲಾರಂಭಿಸಿದರು. ಎಳೆಯ ದಿನಗಳಲ್ಲಿಯೇ ಮಲಯಾಳಂನ ಹಿರಿಯ ಕವಿಗಳ, ಬರೆಹಗಾರರ ಒಡನಾಟವೂ ದೊರೆಯಿತು.

ಅನೇಕ ನಾಟಕಗಳಲ್ಲಿ ಅಭಿನಯಿಸಿದರು. ಗಾಂಧೀಜಿಯ ನೇತೃತ್ವದ ದೇಶೀಯ ಚಳುವಳಿಯಿಂದ ಆಕರ್ಷಿತರಾಗಿದ್ದ ಕವಿ ಬಳಿಕ ನಂಬೂದಿರಿ ಸಮುದಾಯದ ಪರಿಷ್ಕಾರದ ಉದ್ದೇಶವಾಗುಳ್ಳ 'ಯೋಗಕ್ಷೇಮ ಸಭೆ'ಯ ಸಕ್ರಿಯ ಕಾರ್ಯಕರ್ತರಾದರು. ೧೯೪೪ರಲ್ಲಿ ಶ್ರೀದೇವಿ ಅಂತರ್ಜನಂ ಅವರನ್ನು ಮದುವೆಯಾದರು. ಪಾರ್ವತಿ, ಇಂದಿರ, ವಾಸುದೇವನ್, ಶ್ರೀಜ, ಲೀಲ, ನಾರಾಯಣನ್ ಮಕ್ಕಳು.

೧೯೫೬ರಿಂದ ೧೯೬೫ರ ವರೆಗೆ ಕೋಳಿಕ್ಕೋಡ್ ತೃಶ್ಶೂರ್ ಮೊದಲಾದೆಡೆ ಆಕಾಶವಾಣಿಯಲ್ಲಿ ಉದ್ಯೋಗ ನಿರತರಾಗಿದ್ದು, ಸಂಪಾದಕ ಹುದ್ದೆಯಿಂದ ನಿವೃತ್ತರಾದರು. ಮುಂದೆ ಅನೇಕ ಸಂಘ ಸಂಸ್ಥೆಗಳ ಸಮಿತಿಗಳಲ್ಲಿ ವಿವಿಧ ಹುದ್ದೆಗಳಲ್ಲಿದ್ದು ಕಾರ್ಯಪ್ರವೃತ್ತರಾಗಿದ್ದರು.

ವೀರವಾದಂ (ಸವಾಲು–೧೯೪೪),ವಳಕ್ಕಿಲುಕ್ಕಂ (ಬಳೆಸದ್ದು–೧೯೪೭),ಮಧುವಿಧು (ಮಧುಚಂದ್ರ–೧೯೪೯),ಮನೋರಥ (೧೯೫೧).ಇಪ್ಪತ್ತನೆಯ ಶತಮಾನದ ಇತಿಹಾಸ (೧೯೫೨),ಕುದಿರ್ನ್ ಮಣ್ಣ್ (ನೆನೆದ ಮಣ್ಣು–೧೯೫೨).ಅಂಜು ನಾಡೋಡಿ ಪಾಟುಗಳ್ (ಐದು ಜಾನಪದ ಲಾವಣಿಗಳು–೧೯೫೪),ಒರು ಕುಲ ಮುಂದಿರಿಜ (ಒಂದು ದ್ರಾಕ್ಷೆಗೊಂಚಲು –೧೯೬೧),ಅರಂಗೇಟ್ಟಂ (ರಂಗ ಪ್ರವೇಶ–೧೯೬೧),ಅನಶ್ವರನ ಗಾನಂ (ಅನಶ್ವರನ ಗೀತೆ–೧೯೬೧).ಇಡಿಜ್ಞ್ ಪೊಳಿಞ್ಞ ಲೋಕಂ (ಛಿದ್ರವಿಚ್ಛಿದ್ರ ಲೋಕ–೧೯೬೧),ಪೆಣ್ಣ ಕಲ್ಲಿಂಡೆ ಕಥ (ಅಮೃತಶಿಲೆಯ ಕತೆ–೧೯೬೧).ಸಂಚಾರಿಗಳ್ (ಪ್ರವಾಸಿಗರು–೧೯೬೧),ಕಡಂಬಿನ್ ಪೂಕಳ್ (ಕಡಂಬ ಹೂಗಳು–೧೯೬೧).ಉಣ್ಣಿಕ್ಕನಾವ್ಯಗಳ್ (ಮಕ್ಕಳ ಕನಸುಗಳು–೧೯೬೧),ಮಧುವಿಧುವಿನ್ ಶೇಷಂ (ಮಧುಚಂದ್ರದ ಬಳಿಕ–೧೯೬೧).ಉರುಕುಡನ್ ನಿಲಾವ್ (ಜೊಗಸೆ ತುಂಬ ಬೆಳದಿಂಗಳು).ಹೀಗೆ ಮೂವತ್ತಕ್ಕೂ ಹೆಚ್ಚು ಕವನ ಸಂಕಲನಗಳು, ಸಣ್ಣ ಕತೆ, ನಾಟಕ, ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಲ್ಲದೆ ಅನೇಕ ಅನುವಾದ ಕೃತಿಗಳನ್ನು ರಚಿಸಿದ್ದಾರೆ. ಸುಮಾರು ಏಳು ದಶಕಗಳ ಕಾಲ ನಿರಂತರ ಕಾವ್ಯಕೃಷಿ ಮಾಡಿದರು. ಇವರ ಅನೇಕ ಕೃತಿಗಳು ತೆಲುಗು, ಹಿಂದಿ, ಇಂಗ್ಲಿಶ ಭಾಷೆಗಳಿಗೆ ಅನುವಾದವಾಗಿವೆ.

ವಿವಾಸ : ಡಾ. ಮೋಹನ ಕುಂಟಾರ, ಪ್ರಾಧ್ಯಾಪಕರು ಭಾಷಾಂತರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ ಅಂಚೆ: ವಿದ್ಯಾರಣ್ಯ ೫೮೩೨೭೬

ಡಾ. ವಿಜಯ ಅವರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿ ಕಲ್ಲುಮುಳ್ಳುಗಳ ಹಾದಿಯ ಪಯಣ: ಕುದಿ ಎಸರು

ಡಾ. ವಿಜಯಾ

ತಾರಿಣಿ ಶುಭದಾಯಿನಿ

ಈ ಬಾರಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿ 'ಕುದಿ ಎಸರು' ಶ್ರೀಮತಿ ವಿಜಯಮ್ಮನವರ ಆತ್ಮಕಥೆ. ಈ ಬಾರಿ ಪ್ರಶಸ್ತಿಯ ವಿಶೇಷ ಎಂದರೆ ಒಬ್ಬ ಮಹಿಳೆಗೆ ಬಂದಿರುವುದಷ್ಟೇ ಅಲ್ಲದೆ ಆತ್ಮಕಥೆಯ ಪ್ರಕಾರಕ್ಕೆ ಅದು ಸಂದಿರುವುದು. ಸಾಮಾನ್ಯವಾಗಿ ಮಹಿಳಾ ಆತ್ಮಕಥೆಗಳು ನಿರ್ಭಿಡೆಯಿಂದ ಹೇಳಿಕೊಳ್ಳುವ ಜಾಯಮಾನದವು. ಅಥವಾ ಹಾಗೆ ತೆರೆದುಕೊಳ್ಳುತ್ತವೆ ಎನ್ನುವ ಕಾರಣದಿಂದಲೇ ಅವುಗಳಿಗೆ ಸಾಮಾಜಿಕವಾಗಿ ನಿಷೇಧಗಳು ಹೆಚ್ಚು. ಅವು ಇರುವ ರೀತಿಯಿಂದಲೇ ಅವು ಅವಜ್ಞೆಗೆ ಒಳಗಾಗುವ ಸಂಕಷ್ಟವನ್ನು ಅನುಭವಿಸುತ್ತವೆ. ಈ ಅಡ್ಡಿ ಆತಂಕವನ್ನು ಮೀರಿ ಕನ್ನಡದ ಒಂದು ಮಹಿಳಾ ಆತ್ಮಕಥೆಗೆ ಬೇರೆಲ್ಲ ಪ್ರಕಾರಗಳನ್ನು ಮೀರಿ ಒಂದು ಸ್ಥಾನಮಾನ ಸಿಕ್ಕಿರುವುದು ಅಭಿನಂದನಾರ್ಹ.

ಸಾಹಿತಿಯಷ್ಟೇ ಅಲ್ಲದೆ ಪತ್ರಕರ್ತೆಯಾಗಿ, ಸಾಹಿತ್ಯ ಸಂಘಟಕಿಯಾಗಿ, ಹೋರಾಟಗಾರ್ತಿಯಾಗಿ ಗುರುತಿಸಿಕೊಂಡಿರುವ ವಿಜಯಮ್ಮನವರ ಆತ್ಮಕಥೆ ಹಲವು ಕಾರಣಗಳಿಗೆ ಮುಖ್ಯವೆನಿಸುತ್ತದೆ. ಸಾಮಾಜಿಕ ಕ್ಷೇತ್ರದಲ್ಲಿ ಗುರುತಿಸಿಕೊಂಡ ಹೆಣ್ಣುಮಕ್ಕಳ ಬಗ್ಗೆ ಸಾಧನೆಯ ಗರಿ ಇರುವಂತೆಯೇ ಸಾಕಷ್ಟು ವಿವಾದಗಳು ಹಾಗು ಕಲ್ಪಿತ ಕಥೆಗಳು ಇರುತ್ತವೆ. ಸಮಾಜ ಅವರನ್ನು ಪ್ರಶಂಸಾತ್ಮಕವಾಗಿ ನೋಡುತ್ತಿರುವಾಗಲೇ ಒಳಗೆಲ್ಲೊ ಆಳದಲ್ಲಿ ಕೆಟ್ಟನೋಟದ ಮುಳ್ಳು ನೆಟ್ಟುಕೊಂಡಿರುತ್ತದೆ. ಇದರಿಂದ ಒಬ್ಬ ಹೆಂಗಸೊಬ್ಬಳು ಆತ್ಮಕಥೆ ಬರೆಯುವಾಗ ಅನೇಕ ಬಗೆಯ ಕಷ್ಟಗಳನ್ನು ಅನುಭವಿಸಬೇಕು. ಅದರಲ್ಲಿಯೂ ಆಕೆ ತನ್ನ ಮದುವೆ, ಸ್ನೇಹ ಸಂಬಂಧಗಳ ಬಗ್ಗೆ ಎಷ್ಟು ಪ್ರಬುದ್ಧವಾಗಿ ಹೇಳಿಕೊಂಡರೂ ಅದನ್ನು ಅಪಪ್ರಚಾರಕ್ಕೆ ಬಳಸಿಕೊಂಡಿರುವ ಉದಾಹರಣೆಗಳು ಅನೇಕ. ಈ ಕಾರಣಕ್ಕೆ ಆತ್ಮಕಥೆ ಬರೆಯುವುದೇ ಒಂದು ಬಂಡಾಯದ ಪ್ರತೀಕ! ಸಮಾಜಕ್ಕೆ ಹೆದರದೆ ತಮ್ಮ ಒಳಬಾಳಿನ ಗುಟ್ಟುಗಳನ್ನು ಧೈರ್ಯವಾಗಿ ಹಂಚಿಕೊಳ್ಳುವ ಅಭಿವ್ಯಕ್ತಿಯನ್ನು ಕೈಗೆತ್ತಿಕೊಳ್ಳುವುದು ಹೋರಾಟವೇ ಮೂಲ ಪ್ರವೃತ್ತಿಯುಳ್ಳವರಾದ ವಿಜಯಮ್ಮನವರಿಗೆ ಉಚಿತವಾದ ನಿಲುವೇ ಆಗಿದೆ. ಕುದಿಯುವ ಎಸರಿನ ರೂಪಕದಲ್ಲಿ ತಮ್ಮ ಕುದ್ದು ಬೆಂದ ಜೀವನಗಾಥೆಯನ್ನು ಇಲ್ಲಿ ಅವರು ಕಟ್ಟಿಕೊಡಲು ಹೊರಟಿದ್ದಾರೆ.

Scanned with CamScanner

ಪಾ.ಪ್ರ. ಶ್ರೀನಿವಾಸ

ಕನ್ನಡ-ತಮಿಳು ಸಾಂಸ್ಕೃತಿಕ ಸೇತು

ಡಾ. ಎ. ಮೋಹನ ಕುಂಟಾರ್



ಯಜಿ ಪ್ರಕಾಶನ
YAJI PRAKASHANA

Scanned with CamScanner

PA.SHA.SRINIVASA

KANNADA-TAMILU SAAMSKRUTIKA SETU

A Monograph on the life and achievements of **Dr. P.S.Srinivasa**

Written by

Dr. A. Mohana Kuntar

Professor

Kannada University, Hampi

Hospet 583 276

Cell: 9448997450

Published by

YAJI PRAKASHANA, HOSAPETE

(On behalf of the felicitation committee of Dr. Pa.Sha.Srinivasa)

Hosapete 583 201, Ballari Dist.

Cell: 94810 42400, 94487 22800

email: yajiprakashana@gmail.com

© Author

ಪ್ರಕಾಶಕರು

ಪಾ. ಪಾ.ಶ್ರೀನಿವಾಸ ಸನ್ಮಾನ ಸಮಿತಿ ಪರವಾಗಿ

ಯಾಜಿ ಪ್ರಕಾಶನ, ಹೊಸಪೇಟೆ

ಅಧಿಕೃತ ಮಾರಾಟಗಾರರು

ಭೂಮಿ ಪುಸ್ತಕ, ಹೊಸಪೇಟೆ

Cell: 7019637741

ISBN: 978-93-83717-46-0

Price: Rs. 100/-

ಮೊದಲ ಮುದ್ರಣ: 2020

ಪುಟಗಳು: 10 + 94 = 104

ಕಾಗದ ಬಳಕೆ: 70 GSM NS Meplito

ಮುಖಪುಟ ವಿನ್ಯಾಸ: ಜಿ.ಆರ್.ಗುರುಪ್ರಸಾದ

ಅಕ್ಷರಜೋಡಣೆ & ಪುಟವಿನ್ಯಾಸ

ಭೂಮಿ ಪುಸ್ತಕ, ಹೊಸಪೇಟೆ

ಮುದ್ರಣ

ಓಂಕಾರ ಆಫ್‌ಸೆಟ್ ಪ್ರಿಂಟರ್ಸ್, ಬೆಂಗಳೂರು

ಡಿ. ಪಾ.ಶ.ಶ್ರೀನಿವಾಸ ಮತ್ತು ಡಿ. ಶ್ರೀಮತಿ ಸುಶೀಲಾ

ಆಗಲುವಿಕೆಯ ಸೋವನ್ನು ಇನ್ನೂ ಮನಸ್ಸಿನಲ್ಲಿ ಅದುಮಿಟ್ಟುಕೊಂಡ ಅವರ ಅಭಿಮಾನಿಗಳು ಮದುರೈ ಕನ್ನಡ ವಿಭಾಗದ ಅಧ್ಯಾಪಕ, ವಿದ್ಯಾರ್ಥಿ ಮಿತ್ರರು, ಮದುರೈ ಕರ್ನಾಟಕ ಸಂಘದ ಸದಸ್ಯರು ಎಲ್ಲರೂ ಸೇರಿ ಆಗಲಿದ ದಂಪತಿಗೆ ದಿನಾಂಕ ೨೫.೦೯.೨೦೨೦ರಂದು ಮಂಡ್ಯದಲ್ಲಿ ಮೊದಲ ಸಂಸ್ಮರಣ ದಿನದ ಸಂದರ್ಭ ಶ್ರದ್ಧಾಂಜಲಿ ರೂಪದಲ್ಲಿ ಸಮರ್ಪಿಸಿದ ಕೃತಿಯಿದು.

ಮರದ ನೆರಳಂತೆ ತೊರೆಯ ನೀರಂತೆ
ಪಾಂಥರಿಗೆ ರಸಪಾಕವುಣಿಸಿದ
ಪಳುಕು ಮನಸಿನ ಉದಾರ ದಂಪತಿಗೆ
ಶಿರಬಾಗಿ ಆದರದಿ ನಮಿಸುವೆವು
ಇರಲೆಮ್ಮ ಮೇಲೆ ಅನವರತ
ನಿಮ್ಮ ಹರಕೆ ಹಾರೈಕೆ

Scanned with CamScanner

ಮಲಯಾಳಂನ ಮೊದಲ ಕಾದಂಬರಿ

ಕಂದಲತ

ಅನುವಾದ

ಮೋಹನ ಕುಂಟಾರ್

ಯಜಿ ಪ್ರಕಾಶನ
YAJI PRAKASHANA

Scanned with CamScanner

KUNDALATA
(Novel)
Translated by
Dr. Mohana Kuntar
'Payaswini', Shantinagar
HOSAPETE 583201
Cell: 94489 97450

Published by
YAJI PRAKASHANA
'Bhoomi', M.P. Prakashanagara
Hosapete 583 201, Vijayanagar Dist.
Cell: 7019637741 / 94487 22800
email: yajiprakashana@gmail.com

© Shreedevi K.S.

ಅಧಿಕೃತ ಮಾರಾಟಗಾರರು
ಭೂಮಿ ಪುಸ್ತಕ, ಹೊಸಪೇಟೆ
94810 42400

Price: Rs. **150/-**

ISBN: **978-93-83717-47-7**
ಮೊದಲ ಮುದ್ರಣ: **2020**

ಪುಟಗಳು: 32 + 128 = **160**
ಕಾಗದ ಬಳಕೆ: 70 GSM NS book print
ಮುಖಪುಟ ವಿನ್ಯಾಸ: **ಎಫ್.ಟಿ. ಹಾದಿಮನಿ**

ಅಕ್ಷರಜೋಡಣೆ & ಪುಟವಿನ್ಯಾಸ
ಭೂಮಿ ಪುಸ್ತಕ, ಹೊಸಪೇಟೆ
70196 37741

ಮುದ್ರಣ
ಎಲ್.ಕೆ.ಪ್ರೆಸ್ ಇಂಕ್, ಬೆಂಗಳೂರು 562 123
ಮೊ: 87629 66760

ಸವಿನುಡಿ

ಹೊಸಪೇಟೆಯ ಯಾಜಿ ಪ್ರಕಾಶನವು ಸೀಮಾತೀತ ಸಾಹಿತ್ಯದ ಪರಿಕಲ್ಪನೆಯನ್ನಿಟ್ಟುಕೊಂಡು ಪ್ರಾರಂಭವಾದುದು. ದೇಶ-ಕಾಲ-ಮತಗಳಾಚೆ ನಿಂತು ಸತ್ವಯುತ ಹಾಗು ಸಾರ್ವಕಾಲಿಕವಾದುದನ್ನು ಕುರಿತು ಸಾಹಿತ್ಯ ಸೃಷ್ಟಿಯಾಗಬೇಕು ಎನ್ನುವುದು ನಮ್ಮ ಮುಖ್ಯ ಕಾಳಜಿ. ಇಲ್ಲಿ ಯಾವಾಗಲೂ ಆದ್ಯತೆ ಇರುವುದು ಆಲೋಚನೆಗೆ. ಇಂಥ ಗುರಿಯನ್ನಿಟ್ಟುಕೊಂಡು ಪ್ರಾರಂಭವಾದ ಪ್ರಕಾಶನ ಕ್ರಮಿಸಿದ ದಾರಿಯೇನೂ ದೀರ್ಘವಾದುದಲ್ಲ. ಆದರೆ ಇರುವಷ್ಟೇ ಅವಧಿಯಲ್ಲಿ ಇಟ್ಟ ಒಂದೊಂದು ಹೆಜ್ಜೆಯೂ ದಿಟ್ಟ ಹಾಗು ದಾಖಲಾರ್ಹ.

೨೦೧೨ರ ಡಿಸೆಂಬರ್ ಕೊನೆಯಲ್ಲಿ ಆಕಸ್ಮಿಕ ಎನ್ನುವಂತೆ ಪ್ರಾರಂಭವಾದ 'ಯಾಜಿ ಪ್ರಕಾಶನ' ಇಂದಿಗೆ ಇನ್ನೂ ಎಂಟು ವರ್ಷಗಳ ಅವಧಿಯನ್ನೂ ಕೂಡಾ ಪೂರ್ಣಗೊಳಿಸಿಲ್ಲ. ಆದರೆ ಏಳೂವರೆ ವರ್ಷಗಳ ಸೀಮಿತ ಅವಧಿಯಲ್ಲಿ ಅದು ಸಾಧಿಸಿದ್ದು ಮಾತ್ರ ಸೀಮಾತೀತವಾದುದೆ. ಇದುವರೆಗೂ ನಮ್ಮ ಪ್ರಕಾಶನದ ಐದು ಕೃತಿಗಳು ಸಿನಿಮಾ ಆಗಿ ಜನ ಮೆಚ್ಚುಗೆಗಳಿಸಿವೆ. ಸತತ ೨೦೧೩ರಿಂದ ೨೦೧೯ರವರೆಗೆ ರಾಜ್ಯದ ಸಾರಸ್ವತ ನಿರ್ಣಾಯಕ ಕೇಂದ್ರಗಳೆನಿಸಿರುವ ಅಕಾಡೆಮಿಗಳಿಂದ ಯಾಜಿ ಪ್ರಕಾಶನದ ಅನೇಕ ಕೃತಿಗಳಿಗೆ ಪ್ರಶಸ್ತಿಗಳು ಸಂದಿರುವುದು ನಮ್ಮ ಪ್ರಕಟಣಾ ಮೌಲಿಕತೆಗೆ ಸಿಕ್ಕ ಗೌರವ.

೨೦೧೩ರಲ್ಲಿ ಯಕ್ಷಗಾನ ಅಕಾಡೆಮಿ, ೨೦೧೪ರಲ್ಲಿ ನಾಟಕ ಅಕಾಡೆಮಿ, ೨೦೧೫ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹೀಗೆ ನಿರಂತರ ಮೂರು ವರ್ಷ ಮೂರು ಪ್ರಶಸ್ತಿಗಳು ಅಲ್ಲದೇ ೨೦೧೬ರಲ್ಲಿ ಕುವೆಂಪು ಭಾಷಾ ಭಾರತಿ ಅನುವಾದ ಪ್ರಶಸ್ತಿ, ೨೦೧೭ರಲ್ಲಿ ನಮ್ಮ ಪ್ರಕಟಣೆಯಾದ ಡಾ. ಸರಜೂ ಕಾಟ್ಕರ್ ಅವರ ಕಾದಂಬರಿ ಆಧಾರಿತ ಚಲನಚಿತ್ರ ಜುಲೈ ೨೨, ೧೯೪೭ ಮತ್ತು ಸಾವಿತ್ರಿಬಾಯಿ ಫುಲೆಗೆ ರಾಜ್ಯ ಪ್ರಶಸ್ತಿ, ೨೦೧೮ರಲ್ಲಿ ಪುಸ್ತಕ ಪ್ರಾಧಿಕಾರ ಕೊಡಮಾಡುವ 'ಪುಸ್ತಕ ಸೊಗಸು'(ಜಾಡಮಾಲಿಯ ಜೀವ ಕೇಳುವುದಿಲ್ಲ...!) ತೃತೀಯ ಬಹುಮಾನ ಮತ್ತು ೨೦೧೯ರ ಕರ್ನಾಟಕ ಸಂಘ ಕೊಡುವ ಉತ್ತಮ ಕಾದಂಬರಿಯಾದ 'ಜಗದ್ವಂದ್ಯ ಭಾರತಂ' ಕೃತಿ ಕುವೆಂಪು ಪ್ರಶಸ್ತಿ(ಪ್ರಥಮ)ಗೆ ಭಾಜನವಾಗಿದೆ.

Scanned with CamScanner

ತರಳಬಾಳು

ಸಾಹಿತ್ಯಕ, ಸಾಂಸ್ಕೃತಿಕ ಹಾಗೂ ವೈಚಾರಿಕ ತ್ರೈಮಾಸಿಕ

ಸಂಪುಟ – ೪೬ ಸಂಚಿಕೆ – ೧

ಅಕ್ಟೋಬರ್ – ೨೦೨೦

ಪ್ರಧಾನ ಸಂಪಾದಕರು
ಡಾ॥ ನಾ. ಲೋಕೇಶ ಒಡೆಯರ್

ಸಂಚಿಕೆಯ ಸಂಪಾದಕರು
ಎಸ್.ಆರ್. ಮಲ್ಲಿಕಾರ್ಜುನಯ್ಯ

ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ
ಸಿರಿಗೆರೆ – ೫೭೭ ೫೨೧ ಚಿತ್ರದುರ್ಗ ಜಿಲ್ಲೆ

Scanned with CamScanner

ನುಡಿಮುತ್ತು

ಶಿಕ್ಷಣದಲ್ಲಿ ಪರವರ್ತನೆಯಾಗದೆ ಜಗತ್ತಿಗೆ ಸುಖವಿಲ್ಲ. ವಿದ್ಯಾರ್ಥಿಗಳಿಗೆ ಔದ್ಯೋಗಿಕ, ವ್ಯಾವಹಾರಿಕ, ಆಧ್ಯಾತ್ಮಿಕ ಮೂರು ಶಿಕ್ಷಣಗಳನ್ನು ಕೊಡಬೇಕು.

– ಶ್ರೀ ತರಳಬಾಳು ಜಗದ್ಗುರು
ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು

ಸಂಪಾದಕೀಯ ಮಂಡಳಿ

ಪ್ರಧಾನ ಸಂಪಾದಕರು
ಡಾ॥ ನಾ. ಲೋಕೇಶ ಒಡೆಯರ್

ಪ್ರೊ॥ ಡಿ.ಎಂ. ನಾಗರಾಜ್ ಐ. ಜಿ. ಚಂದ್ರಶೇಖರಯ್ಯ
ನಾಗರಾಜ ಸಿರಿಗೆರೆ ಎಸ್. ಆರ್. ಮಲ್ಲಿಕಾರ್ಜುನಯ್ಯ

ವ್ಯವಸ್ಥಾಪಕ ಸಂಪಾದಕರು
ಡಿ. ಜೆ. ಮಾಜಿಗೌಡರ್

ಚಂದಾದಾರಕಲ್ಲಿ ಮನವಿ

'ತರಳಬಾಳು'ವಿನ ಐದು ವರ್ಷದ ಚಂದಾ ರೂ. 250/– ಮಾತ್ರ. ದಯಮಾಡಿ ನಿಮ್ಮ ಸ್ನೇಹಿತರನ್ನು, ನೌಕರರನ್ನು, ಬಂಧುಗಳನ್ನು, ಪರಿಚಿತರನ್ನು ಚಂದಾದಾರರಾಗಲು ಸಹಕರಿಸಿ.

ಪತ್ರ ವ್ಯವಹಾರದ ವಿಳಾಸ

ಸಂಪಾದಕರು 'ತರಳಬಾಳು' ತ್ರೈಮಾಸಿಕ
ಶ್ರೀ ತರಳಬಾಳು ಮುದ್ರಣಾಲಯ, ಸಿರಿಗೆರೆ – 577 541
ಚಿತ್ರದುರ್ಗ – ಜಿಲ್ಲೆ, ದೂರವಾಣಿ : 08194 – 268843
ಇ ಮೇಲ್ : taralabalu.thrimasika@gmail.com

ಒಳಪುಟಗಳಲ್ಲಿ

ಸಂಪಾದಕೀಯ 4

ಜಾತ್ಯತೀತವೆಂಬ ಘೋಷಣೆ ಒಂದು ವಂಚನೆ 6
ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು

ಜನಮಾನದಲ್ಲಿ ನೆಲೆಗೊಂಡ ಅಪ್ರತಿಮ ದಿವ್ಯ ಚೇತನ 8
ಶ್ರೀ ತರಳಬಾಳು ಜಗದ್ಗುರು ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು

ಅಸಂಗತ ಬದುಕು 12
ಡಾ॥ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

ವಚನ ಸಾಹಿತ್ಯ ಮತ್ತು ಆಧುನಿಕ ಸಮಾಜ ವ್ಯವಸ್ಥೆ 19
ಡಾ. ವಿಠಲರಾವ್ ಟಿ. ಗಾಯಕ್ವಾಡ್

ಶರಣರ ಸಾಂಪ್ರದಾಯಿಕ ವಿರೋಧಿ ಚಿಂತನೆಗಳು 33
ಡಾ. ರಾಜಶೇಖರ ಜಮದಂಡಿ

ಅರಣ್ಯಕ್ಕೆ ತಳ್ಳಲ್ಪಟ್ಟ ಸತ್ಯಾಗ್ರಹ ಚರಿತ್ರೆ 38
ಡಾ. ಪಿ ನಾಗಭೂಷಣಗೌಡ

ಶರಣೇ ಗೊಗ್ಗವ್ವೆ: ಧೀರ ನೀರೆ 48
ಡಾ. ಪ್ರಕಾಶ ಹಲಗೇರಿ

ಅಪ್ಪಂದಿರ ಅದ್ಭುತ ಕಥನಗಳು 53
ಡಾ. ಮೀರಸಾಬಿಹಳ್ಳಿ ಶಿವಣ್ಣ

Scanned with CamScanner

ವಚನ ಸಾಹಿತ್ಯ ಮತ್ತು ಆಧುನಿಕ ಸಮಾಜ ವ್ಯವಸ್ಥೆ

ಡಾ. ವಿಠಲರಾವ್ ಟಿ. ಗಾಯಕ್ವಾಡ್

ಕರ್ನಾಟಕದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನದ ಶರಣರ ಭಕ್ತಿ ಚಳವಳಿಯು ಸಮಾಜೋ-ಧಾರ್ಮಿಕವಾಗಿ ಬಹಳ ಗಮನಾರ್ಹ ಬದಲಾವಣೆಯನ್ನು ಉಂಟುಮಾಡಿದಂತಹ ಘಟ್ಟ ಎಂಬುದನ್ನು ಸಾಂಸ್ಕೃತಿಕ ನೆಲೆಯಿಂದ ಉಲ್ಲೇಖಿಸುವಂತಹ ವಿಚಾರವಾಗಿದೆ. ವೈದಿಕ, ಜೈನ, ಬೌದ್ಧ ಮತಪಂಥಗಳ ವಿಪರೀತವಾದ ಆಚಾರ, ವಿಚಾರಗಳಿಂದ 'ಧರ್ಮ ಎಂದರೆ ಏನು?' ಎಂಬ ಬಗೆಗೆ ಜನಸಾಮಾನ್ಯರು ಕಂಗೆಟ್ಟು ಪರಿತಪಿಸುತ್ತಿದ್ದರು. ಅಂತಹ ಜನಸಾಮಾನ್ಯರಿಗೆ ಮಹಾತ್ಮಾ ಬಸವೇಶ್ವರ, ಆಧ್ಯಾತ್ಮಿಕ ಮಹಾನ್ ಚೇತನ ಅಲ್ಲಮಪ್ರಭು, ಶಿವಯೋಗಿ ಸಿದ್ಧರಾಮೇಶ್ವರ, ಸೂಕ್ಷ್ಮ ಧರ್ಮಚಿಂತಕ ಚೆನ್ನಬಸವೇಶ್ವರ, ಅಧ್ಯಾತ್ಮದ ಮಹಾಮೇರು ಅಕ್ಕಮಹಾದೇವಿ ಮೊದಲಾದವರು ರೂಪಿಸಿದ ಧಾರ್ಮಿಕ ಚಳವಳಿಯು ಜೀವನಕ್ಕೆ ಹೊಸದಾದ ದರ್ಶನವನ್ನು ತಂದು ಕೊಟ್ಟಿತು. ಅಸಮಾನತೆ, ಶೋಷಣೆಗಳಿಗೆ ಕಾರಣವಾಗಿದ್ದ ಜಾತಿ, ಮತಧರ್ಮ, ಸವರ್ಣ-ಅವರ್ಣತೆ, ಭೇದಭಾವಗಳು ಹೆಚ್ಚಾಗಿ ಬಾಧಿಸುತ್ತಿದ್ದಂತಹ ಸಮಯದಲ್ಲಿ ಹರ ಶರಣರು ಭಕ್ತಿಯ ನೆಲೆಯಲ್ಲಿ ಒಂದು ಹೊಸ ಚಳವಳಿಯನ್ನು ರೂಪಿಸಿದರು. ಯಾವುದೇ ರೀತಿಯ ನಿರ್ಬಂಧಗಳು ಇಲ್ಲದಂತಹ ಈ ಶರಣ ಚಳವಳಿಯಲ್ಲಿ ಮೇಲು ಜಾತಿಯವರಿಂದ ಹಿಡಿದು ಕೆಳಜಾತಿಯವರೆಗಿನ ಎಲ್ಲಾ ಜನರೂ ಸೇರಿಕೊಂಡರು. ಅನುಸಂಧಾನ, ಸಮಾಲೋಚನೆ ಮತ್ತು ಅನುಭಾವ ದರ್ಶನದಂತಹ ಸಂಗತಿಗಳ ಮೂಲಕ ಬಸವೇಶ್ವರಾದಿ ಶರಣರು ಜನರಲ್ಲಿ ಹೊಸ ದೃಷ್ಟಿಕೋನವನ್ನು ಮೂಡಿಸಿದರು ಎಂಬುದು ಇಲ್ಲಿ ಅವಶ್ಯವಾಗಿ ಗಮನಿಸಬೇಕು. ಎಲ್ಲಾ ಸಾಂಪ್ರದಾಯಿಕ ವಿಚಾರಗಳನ್ನು ಶರಣರು ತಮ್ಮ ಅನುಭಾವ ಚಿಂತನೆಗಳ ಮೂಲಕ ಗಂಭೀರವಾಗಿ ಪ್ರಶ್ನಿಸಿದರು. 'ಧಾರಣಾಯುತ್ತದ್ಧರ್ಮಃ' ಎಂಬ ವಿಶಾಲ ಚಿಂತನೆಯು ಕ್ರಮೇಣ ಪ್ರಶ್ನಾತೀತವಾದುದೇ ಧರ್ಮ (unquestioned belief) ಎಂಬ ನೆಲೆಯಿಂದ ವ್ಯಾಖ್ಯಾನಿಸಲ್ಪಟ್ಟು ಸಾಮಾಜಿಕ ವಿಘಟನೆಗೆ ಕಾರಣವಾಗಿತ್ತು. ಸರ್ವ ಸ್ವಾತಂತ್ರ್ಯವನ್ನು ಇಟ್ಟುಕೊಂಡಿದ್ದಂತಹ ವರ್ಣಾಶ್ರಮ ವ್ಯವಸ್ಥೆಯು ಕ್ರಮೇಣ ಜಾತಿ ವ್ಯವಸ್ಥೆಯಾಗಿ ಪರಿವರ್ತನೆಗೊಂಡ ಮೇಲೆ ಮೇಲುಕೀಳು ಭಾವನೆಗಳು ಸಮಾಜದಲ್ಲಿ ನಿರ್ದಿಷ್ಟವಾಗಿ ಬೇರೂರಿ ಜನಸಾಮಾನ್ಯರನ್ನು ಮತ್ತು ಸ್ತ್ರೀಯರನ್ನು ಗಂಭೀರವಾಗಿ ಬಾಧಿಸುತ್ತಿದ್ದವು. ಅಂತಹ ಸಮಯದಲ್ಲಿ ತಮಿಳುನಾಡಿನ ಶೈವ ಪಂಥ, ಕಾಶ್ಮೀರಿ ಶೈವ ಪಂಥ ಮತ್ತು ನಾಥಪಂಥಗಳ ಚಿಂತನೆಗಳನ್ನು ಮುಖ್ಯವಾಗಿಟ್ಟುಕೊಂಡು ಹರ ಶರಣರಾದ ಬಸವೇಶ್ವರ, ಅಲ್ಲಮಪ್ರಭು, ಚೆನ್ನಬಸವಣ್ಣಾದಿಗಳು ಹೊಸ ಚಳವಳಿಯನ್ನು ಹುಟ್ಟುಹಾಕಿದರು. 'ಯಾರೂ ಮೇಲಲ್ಲ; ಯಾರೂ ಕೀಳಲ್ಲ; ಯಾರಲ್ಲೂ ತಾವು ಪಾಪಿಗಳು

Scanned with CamScanner

ರ್ಮದಿಂದ ಹೀಗೆ ಹುಟ್ಟಿದ್ದೇವೆ ಎಂದು ಭಾವಿಸಬೇಕಿಲ್ಲ; ದೈವ ಸಾಕ್ಷಾತ್ಕಾರ ಅಥವಾ ಮೋಕ್ಷ ಎಲ್ಲರಿಗೂ ಸಾಧ್ಯವಾಗುತ್ತದೆ. ಅದಕ್ಕಾಗಿ ಸಂಸಾರ ತ್ಯಾಗ ಮಾಡಬೇಕಾಗಿಲ್ಲ, ದೇಹವನ್ನು ದಂಡಿಸಬೇಕಿಲ್ಲ, ಕಠಿಣ ವ್ರತನಿಯಮಾದಿಗಳ ಮೂಲಕ ದೇವರಲ್ಲಿ ಪ್ರಾರ್ಥನೆ ಮಾಡಬೇಕಿಲ್ಲ, ಯಜ್ಞಯಾಗಾದಿಗಳ ಮೂಲಕವೇ ದೇವರ ಕರುಣೆ ಸಾಧ್ಯವೆಂಬ ಭಾವನೆಯು ಬೇಕಾಗಿಲ್ಲ' ಎಂಬಿತ್ಯಾದಿ ಹಲವಾರು ಚಿಂತನೆಗಳು ಇವರಲ್ಲಿ ಪ್ರಮುಖವಾದವುಗಳು. ಈ ಮೂಲಕ ಸಮಾಜದ ಬಹುಜನ ಸಮೂಹವನ್ನು ಅವರವರ ಜಡಸ್ಥಿತಿಯಿಂದ ಚೇತನಮಯಗೊಳಿಸಿದರು.

ಶರಣರಿಗೆ ತಮಿಳುನಾಡಿನ ನಾಯನ್ಮಾರರ ಶೈವ ಚಳವಳಿ ಮತ್ತು ಕಾಶ್ಮೀರ ಶೈವದ ಪ್ರೇರಣೆ ಪ್ರಭಾವಗಳೂ ಇದ್ದವು. ಹಾಗೆಯೇ ಬೌದ್ಧ ಮತದ ವಜ್ರಾಯಾನ ಪಂಥ, ನಾಥಪಂಥಗಳ ಪ್ರಭಾವವೂ ಇತ್ತು ಎನ್ನಲಾಗಿದೆ. ಈ ಶೈವ ಸಂಪ್ರದಾಯವು ವೇದಪೂರ್ವ ಕಾಲದ್ದಾಗಿದ್ದು, ಹರಪ್ಪ–ಮೊಹೆಂಜೋದಾರೋ ಸಂಸ್ಕೃತಿಯಲ್ಲಿಯೇ ಕಂಡುಬರುತ್ತದೆ. ಆದರೂ ಇದು ಮುಂದೆ ಅತ್ಯಂತ ಪ್ರಭಾವಕಾರಿಯಾಗಿ ಬೆಳೆದ ವೈದಿಕ ಮತಕ್ಕೆ ವಿರೋಧಿಯಾಗಿಯೇ ಬೆಳೆದುಬಂದಿತು ಎಂಬುದನ್ನು ಮರೆಯುವಂತಿಲ್ಲ. ಶರಣರು ತಮಿಳುನಾಡಿನಲ್ಲಿ ನಾಯನ್ಮಾರರು ರೂಪಿಸಿದ ರೀತಿಗಿಂತಲೂ ಇನ್ನೂ ವಿಶಿಷ್ಟವಾಗಿ ತಮ್ಮ ಭಕ್ತಿ ಚಳವಳಿಯನ್ನು ರೂಪಿಸಿಕೊಂಡರು. ತಮ್ಮ ಕಾಲಕ್ಕೆ ಉಚ್ಛ್ರಾಯ ಸ್ಥಿತಿಯಲ್ಲಿಯೂ ಮತ್ತು ಬಹಳ ಪ್ರಭಾವಶಾಲಿಯೂ ಆಗಿದ್ದಂತಹ ವೈದಿಕ ಮತ್ತು ಜೈನ ಧರ್ಮದ ತಾತ್ತ್ವಿಕತೆಯನ್ನು ವಿರೋಧಿಸಿ ಸುಂದರ, ತಿರುನಾವುಕರಸ ಅಪ್ಪರ್, ಸುಂದರರ್ ಮತ್ತು ಮಾಣಿಕ್ಯ ವಾಚಕರ್ ಎಂಬ ನಾಲ್ವರು ಸಮಯಾಚಾರ ಅಥವಾ ಸಮಯ ಕುವರರು ಈ ಪಂಥವನ್ನು ಹುಟ್ಟುಹಾಕಿ ಎಲ್ಲರಿಗೂ ಬೋಧಿಸುವ ಮೂಲಕ ತಮಿಳುನಾಡನ್ನು ಶೈವಮಯಗೊಳಿಸಿದರು. ಅವರಿಗೆಲ್ಲ ಅರವತ್ಮೂರು ಪುರಾತನರ ಪರಂಪರೆಯೊಂದು ಇತ್ತು. ಇವರುಗಳೇ ಅವರ ಸ್ತೋತ್ರಗಳಿಗೆ ಭಕ್ತಿಯ ಕಥನವಾಗಿತ್ತು. ಶೇಕ್ಕಿಳಾರ್ ಎಂಬ ಕವಿಯು ಬರೆದ 'ಪೆರಿಯ ಪುರಾಣ' ಎಂಬ ಕೃತಿಯು ಈ ಅರವತ್ಮೂರು ಪುರಾತನ ಭಕ್ತರ ಧಾರ್ಮಿಕ ಜೀವನದ ಕಥನವನ್ನೇ ಒಳಗೊಂಡಿರುವುದಾಗಿದೆ.

ಕರ್ನಾಟಕದ ಶರಣರಿಗೆ ಈ ತಮಿಳು ಶೈವ ಸಾಹಿತ್ಯದ ಜೊತೆಗೆ ಸಂಸ್ಕೃತದಲ್ಲಿ ಉಪಮನ್ಯು ಎಂಬುವವರು ರಚಿಸಿರುವ 'ಭಕ್ತಿ ವಿಲಾಸ' ಎಂಬ ಕೃತಿಯ ಪ್ರಭಾವವೂ ಇರುವುದನ್ನು ಮರೆಯುವಂತಿಲ್ಲ. ಹಾಗೆಯೇ ಕಾಶ್ಮೀರಿ ಶೈವವು ಆಧರಿಸಿದ್ದ 'ತ್ರಿಕ ಶಾಸ್ತ್ರದ ಚಿಂತನೆಗಳೂ ಇದರ ಮೇಲೆ ಗಾಢವಾದ ಪ್ರಭಾವವನ್ನು ಬೀರಿವೆ. 'ಆಗಮಶಾಸ್ತ್ರ, ಸ್ಪಂದಶಾಸ್ತ್ರಮತ್ತು ಪ್ರತ್ಯಭಿಜ್ಞಾನಶಾಸ್ತ್ರ'ಗಳೇ ಈ ತ್ರಿಕಶಾಸ್ತ್ರವಾಗಿವೆ. ವೇದಗಳ ಪ್ರಾಮಾಣ್ಯವನ್ನು ವಿರೋಧಿಸಿದ ಈ ಕಾಶ್ಮೀರಿ ಶೈವಕ್ಕೆ ವೇದಾಂತದ ಅದ್ವೈತ ಶಿವಸೂತ್ರಗಳು ಪ್ರೇರಕವಾಗಿವೆ. ಇವರಿಗೆ 'ಶಿವ, ಶಕ್ತಿ ಮತ್ತು ನರ' ಎಂಬ ತ್ರಿಕೂಟದ ಸಂಬಂಧಿಕ ನೆಲೆಯು ಬಹಳ ಮುಖ್ಯವಾದುದು. ಈ ವಿಶಿಷ್ಟ ಸ್ವರೂಪದಲ್ಲಿ ಇರುವ ಕಾಶ್ಮೀರಿ ಶೈವವು ಕರ್ನಾಟಕದ ಈ ಶಿವಶರಣರ ಭಕ್ತಿ ಚಳವಳಿಯ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿದೆ. ಅಲ್ಲಮಪ್ರಭು ಅವರ ಚಿಂತನೆಗಳಲ್ಲಿ ಈ 'ಪ್ರತ್ಯಭಿಜ್ಞಾನ'ದ ಪ್ರಭಾವವನ್ನು ನೋಡಬಹುದಾಗಿದೆ. ಕಾಶ್ಮೀರದ ಅರಸ ಮೋಳಿಗೆ ಮಾರಯ್ಯನ ಚಿಂತನೆಗಳಲ್ಲಿಯೂ ಇದನ್ನು ಗಮನಿಸಬಹುದಾಗಿದೆ. 'ಸೂಕ್ಷ್ಮಾಗಮ ಸುಪ್ರಭೇದ, ಸ್ವಾಯಂಭುವ, ಕಾರ್ಮಿಕ, ಪರಮೇಶ್ವರ, ವಾಪುಲ' ಮುಂತಾದ ಆಗಮಗಳ ತಾತ್ತ್ವಿಕತೆಯು ವಚನ ಸಾಹಿತ್ಯವನ್ನು ಗಂಭೀರವಾಗಿ ಪ್ರಭಾವಿಸಿವೆ.

ಹನ್ನೆರಡನೆಯ ಶತಮಾನದ ಈ ಭಕ್ತಿ ಚಳವಳಿಯ ಉಪ ಉತ್ಪನ್ನವೇ (by product) ವಚನ ಸಾಹಿತ್ಯ. ಅಂದರೆ ವಚನಕಾರರು ಅಥವಾ ಶರಣರು ವಚನ ಸಾಹಿತ್ಯವನ್ನು ತಮ್ಮ ತಮ್ಮ ಜೀವನದ ಅನುಭವ ಮತ್ತು ಅನುಭಾವಗಳ ನೆಲೆಯ ಮೇಲೆಯೇ ರಚನೆ ಮಾಡಿದ್ದಾರೆ

ಎಂಬುದನ್ನು ಗಮನಿಸಿದಾಗ ಶರಣರ ಈ ವಚನ ಸಾಹಿತ್ಯದ ಮಹತ್ವವು ನಮಗೆ ಅರ್ಥವಾಗುತ್ತದೆ. 'ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ' ಎಂಬ ಉದ್ಘೋಷಣೆಯ ಮೂಲಕ ಹರ ಶರಣರು ಆವರೆಗೆ ಸಾಂಪ್ರದಾಯಿಕವಾಗಿ ಮಾನ್ಯಮಾಡಿಕೊಂಡಿದ್ದಂತಹ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆ ಎಂಬುದಾಗಿ ಮತ್ತೆ ಮತ್ತೆ ಪ್ರತಿಪಾದಿಸುತ್ತಿದ್ದಂತಹ ವೇದ, ಪುರಾಣ ಶಾಸ್ತ್ರಗಳನ್ನೆಲ್ಲ ತಿರಸ್ಕರಿಸಿ, ಅನುಭವಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟರು. ಕಾಯಕವೇ ಕೈಲಾಸ (Work is worship) ಎಂಬ ಚಿಂತನೆಯ ಮೂಲಕ ವಚನಕಾರರು ಎಲ್ಲಾ ದುಡಿಯುವ ವರ್ಗದವರಿಗೆ, ಕುಶಲ ಕರ್ಮಿಗಳಿಗೆ ವಿಶೇಷ ಸ್ಥಾನಮಾನ ನೀಡಿದರು. ಇದರಿಂದ ಪ್ರತಿಯೊಬ್ಬರು ತಂತಮ್ಮ ಜಾತಿಯೊಂದಿಗೆ ತಮ್ಮ ಹೆಸರನ್ನು ಹೇಳಿಕೊಳ್ಳುತ್ತಿದ್ದರು. ಉದಾಹರಣೆಗೆ ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ಹಡಪದ ಅಪ್ಪಣ್ಣ, ನುಲಿಯ ಚಂದಯ್ಯ ಮುಂತಾದ ಹೆಸರುಗಳನ್ನು ಇಲ್ಲಿ ಗಮನಿಸಬಹುದು. ವಚನಕಾರರಿಗೆ ಕಾಯಕವೇ ಪ್ರಮುಖ ಮೌಲ್ಯವಾಗಿತ್ತು. ಕಾಯಕದೊಂದಿಗೆ ಸೇವೆಯನ್ನು (Service) ಮುಖ್ಯ ಸಾಮಾಜಿಕ ಮೌಲ್ಯವಾಗಿ ಪ್ರತಿಪಾದಿಸಿದರು. ಇವೆರಡೂ ಅಂಶಗಳು 'ಕ್ರಿಯಾಶೀಲ ಸಮಾಜ ಸಂರಚನೆ ಮತ್ತು ಸೌಹಾರ್ದತೆ'ಯ ಅನುಬಂಧವನ್ನು ಗಂಭೀರವಾಗಿ ರೂಪಿಸುವಂತಹುಗಳಾಗಿವೆ. ವಚನ ಸಾಹಿತ್ಯವು 'ಜಾಗತಿಕ ಸಂವೇದನೆ'ಯ ದೃಷ್ಟಿಯಿಂದ ಬಹಳ ಗಂಭೀರವಾಗಿ ಎಲ್ಲರಿಗೂ ಅರ್ಥೈಸುವಂತಹ 'ಸಾಧಾರಣೀಕರಣ' ನೆಲೆಯಿಂದ ಸಂವೇದನೆ ತಂದುಕೊಡುವಂಥದಾಗಿದೆ. ಹಾಗಾಗಿಯೇ ಕರ್ನಾಟಕದಲ್ಲಿ ನಡೆದಂತಹ ಹನ್ನೆರಡನೆಯ ಶತಮಾನದ ಈ ಚಳವಳಿಯನ್ನು 'ಕನ್ನಡ ಯುಗ, ಬಸವ ಯುಗ' ಎಂಬುದಾಗಿ ಹೇಳುವಂತೆಯೇ 'ವಿಶ್ವಮಾನವ ಯುಗ' ಎಂಬುದಾಗಿಯೂ ಹೇಳಿದರೆ ಅತಿಶಯೋಕ್ತಿಯ ಮಾತಾಗುವುದಿಲ್ಲ. ಬಸವೇಶ್ವರಾದಿ ಶರಣರು ರಚಿಸಿರುವಂತಹ ಸಾಹಿತ್ಯವು ವಿಶ್ವಪ್ರಜ್ಞೆಯ ಪಾತಳಿಯನ್ನು ಹೊಂದಿರುವಂತಹುಗಳಾಗಿವೆ ಎಂಬುದನ್ನು ವಚನ ಸಾಹಿತ್ಯದ ಅಧ್ಯಯನದ ಮೂಲಕವಾಗಿ ಕಂಡುಕೊಳ್ಳಬಹುದಾಗಿದೆ. 'ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಷಟ್ಸ್ಥಲಗಳು'; ಸಂಸಾರ ಹೇಯವೆನಿಸಿ ಲಿಂಗಾಂಗ ಸಾಮರಸ್ಯ ಬಯಸಿ ಬರುವ ಭಕ್ತರಿಗೆ ಬೋಧಿಸುವ 'ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರ ಎಂಬ ಅಷ್ಟಾವರಣಗಳು; 'ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರವೆಂಬ ಪಂಚಾಚಾರಗಳು ವಚನ ಸಾಹಿತ್ಯದ ಪ್ರಮುಖ ತಾತ್ತ್ವಿಕ ತಳಹದಿಗಳಾಗಿವೆ. ಕಾಯಕ (ಶ್ರಮ) ಮತ್ತು ದಾಸೋಹ (ವಿತರಣೆ) ಎಂಬ ಪವಿತ್ರ ಮನೋಧರ್ಮದ ಮೂಲಕ ಜೀವನವನ್ನು 'ಅಂಗದಿಂದ ಲಿಂಗ'ಕ್ಕೆ ಪರಿವರ್ತಿಸಿಕೊಂಡ ಪ್ರಮುಖ ದಾರ್ಶನಿಕ ಜ್ಞಾನದ ಅಭಿವ್ಯಕ್ತಿಗಳಾಗಿವೆ ವಚನಗಳು.

೧. ಸ್ವಾನುಭವ ಪ್ರಧಾನ ಅನುಭಾವಿಕ ಜೀವನ:

ಶರಣರು ಅನುಭವ ಪ್ರಧಾನ ನೆಲೆಯಿಂದಲೇ ಜೀವನವನ್ನು ನೋಡಿದರು. ಅವರಿಗೆ ಸಂಪ್ರದಾಯ ಜೀವನದ ದೃಷ್ಟಿಕೋನವು ಯಾವತ್ತೂ ಒಪ್ಪಿತವಾಗಿರಲಿಲ್ಲ. ತಂತಮ್ಮ ಅನುಭವದ ಸ್ತರದ ಮೇಲೆಯೇ ಅನುಭಾವವನ್ನು ಕಟ್ಟಿಕೊಳ್ಳಬೇಕು ಎಂಬುದು ಬಸವಣ್ಣಾದಿ ಎಲ್ಲಾ ಶರಣರ ಮುಖ್ಯ ವಿಚಾರವಾಗಿತ್ತು:

'ಅರಿವಿನ ತೃಪ್ತಿಗೆ ಅನುಭಾವವೆ ಆಶ್ರಯ, ಲಿಂಗಾನುಭವದಿಂದ ನಿಮ್ಮ ಕಂಡೆನ್ನ ಮರೆದೆ ಕೂಡಲಸಂಗಮದೇವಾ' ಎಂಬ ವಚನಗಳು ಬಹಳ ಗಂಭೀರವಾದುವು. ಜೀವನದಲ್ಲಿ ಪ್ರತಿಯೊಂದು ಹೆಜ್ಜೆಯೂ ಅನುಭವದ ಮೂಲಕವೇ ಇಡುವುದಕ್ಕೆ ಸಾಧ್ಯವಾಗುತ್ತಿರುತ್ತದೆ. ಅದರಿಂದಲೇ ಜೀವನದ ಬಗೆಗಿನ ಸೂಕ್ಷ್ಮ ಅರಿವು ಬರುತ್ತದೆ. ಅರಿವು ಅನುಭಾವದ

Scanned with CamScanner

ರಣದಿಂದಾಗಿ ಜೀವನದ ಸಂತೃಪ್ತಿಗೆ ಕಾರಣವಾಗುತ್ತದೆ. ಸಂತೃಪ್ತಿ ಇಲ್ಲದ ಮನುಷ್ಯರ ಜೀವನವು ಸದಾ ಬಾಧೆಯುಂಟು ಮಾಡುವುದೇ ಆಗಿರುತ್ತದೆ. ಹಾಗಾಗಿಯೇ ಜೇಡರ ದಾಸಿಮಯ್ಯ ಮತ್ತು ಬಸವಣ್ಣನವರು ಅನುಭವ ಅನುಭಾವವಾಗಬೇಕು; ಅಂತಹ ಅನುಭಾವದಿಂದಲೇ ಎಲ್ಲರಲ್ಲಿಯೂ ತನ್ನನ್ನು ಕಾಣುತ್ತಾ, ಎಲ್ಲರಲ್ಲಿಯೂ ದೇವರನ್ನು ಕಾಣುತ್ತಾ ಜೀವನ ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎಂಬ ಸಂಗತಿಯನ್ನು ತಮ್ಮ ಈ ಚಿಕ್ಕ ವಚನಗಳಲ್ಲಿ ಬಹಳ ಗಂಭೀರವಾಗಿಯೇ ಅಭಿವ್ಯಕ್ತಿಸಿರುವುದನ್ನು ಕಾಣಬಹುದಾಗಿದೆ.

ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗಿರುವ ಹಾವಿನಹಾಳ ಕಲ್ಲಯ್ಯ ಎಂಬ ವಚನಕಾರ ಜೀವನದ ದೃಷ್ಟಿಕೋನವನ್ನೇ ಗಂಭೀರವಾಗಿ ತನ್ನ ಒಂದು ವಚನದಲ್ಲಿ ಹೀಗೆ ಹಿಡಿದಿಟ್ಟಿದ್ದಾನೆ:

'ಎಲ್ಲರೂ ಅಹುದೆಂಬುದು ಪ್ರಮಾಣವಲ್ಲ ಕಾಣಿರೋ
ಎಲ್ಲರೂ ಅಲ್ಲವೆಂಬುದು ಪ್ರಮಾಣವಲ್ಲ ಕಾಣಿರೋ,
ಅದೇನು ಕಾರಣವೆಂದರೆ ಶರಣರ ಹೃದಯದ ಅಂತಸ್ಥವನರಿಯರಾಗಿ,
ಎನ್ನಾಹುದೆಂಬುದನೂ ಅಲ್ಲ ಎಂಬುದನೂ ಎನ್ನ ಮನೋಮೂರ್ತಿ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ ನೀನೇ ಬಲ್ಲೆ.'

ಪ್ರಮಾಣಗಳನ್ನು ಇಟ್ಟುಕೊಂಡು ಜೀವನವನ್ನು ಅರ್ಥೈಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕಾರಣ ಪ್ರಮಾಣವು ಮನಸ್ಸಿನ ಅನುಭವದ ಮೇಲೆ ರೂಪುಗೊಂಡಿದ್ದರೆ ಮಾತ್ರವೇ ಅದಕ್ಕೆ ಶಿವಶರಣರ ನಿಜದ ನೆಲೆಯ ಅರಿವಾಗುವುದು. ಅಂದರೆ ಅಂತಸ್ಥವನ್ನು ಅರಿಯುವುದಕ್ಕೆ ಸಾಧ್ಯವಾಗುವುದು. ಆದರೂ ಪ್ರತಿಯೊಬ್ಬರ ಮನಃಸ್ಥಿತಿಯೂ ಬಹಳ ವಿಶಿಷ್ಟವಾದುದೇ ಆಗಿರುತ್ತದೆ. ಅದು ಅನುಭಾವದ ನೆಲೆಯಲ್ಲಿ ಇರುವುದಾದರೆ ಅದಕ್ಕೆ ಮತ್ತೊಂದು ಪ್ರಮಾಣವು ಬೇಕಾಗುವುದಿಲ್ಲ.

ಇದರ ಸ್ವರೂಪವನ್ನು ಕುರಿತಂತೆ ಚೆನ್ನಬಸವಣ್ಣನವರ ವಚನ ಇಂತಿದೆ:

'ಅನುಭಾವ ಅನುಭಾವವೆಂದೆಂಬರಿ
ಅನುಭಾವವೆಂಬುದು ನೆಲದ ಮರೆಯ ನಿಧಾನ ಕಾಣಿರೋ,
ಅನುಭಾವವೆಂಬುದು ರಚ್ಚೆಯ ಮಾತೆ?
ಅನುಭಾವವೆಂಬುದೇನು ಸಂತೆಯ ಸುದ್ದಿಯೇ?
ಅನುಭಾವವೆಂಬುದೇನು ಬೀದಿಯ ಪಸಾರವೇ?
ಏನ ಹೇಳುವೆನಯ್ಯಾ ಅನುಭಾವದ ಘನವನು?
ಆನೆಯ ಮಾನದೊಳಗಿಕ್ಕಿದೊಡೆ ಅಡಗುವುದೆ, ದರ್ಪಣದೊಳಗಲ್ಲದೆ?
ಆ ಹಾಗೆ ಕಂಡಕಂಡಲ್ಲಿ ಗೋಷ್ಠಿ ಗೋಷ್ಠಿ
ನಿಂದನಿಂದಲ್ಲಿ ಬಂದ ಬಂದಲ್ಲಿ ಅನುಭಾವವ ಮಾಡುವ
ಪಾತಕರನೆನಗೊಮ್ಮೆ ತೋರದಿರಯ್ಯಾ ಕೂಡಲ ಚೆನ್ನಸಂಗಮದೇವಾ'

ಅನುಭಾವವೆಂಬುದು ತುಂಬ ಗೂಢವಾದ ಸಂಗತಿಯಾಗಿದೆ. ವಾಚಾಳಿಯಂತೆ ಕಂಡಕಂಡಲ್ಲಿ ಏನೇನೋ ಅರ್ಥಗಳನ್ನು ಹಚ್ಚುತ್ತಾ ಹೇಳಿಕೊಂಡು ಬರುವಂತಹದ್ದಲ್ಲ. ಹಾಗೆ ಮಾಡುತ್ತಿರುವವರು ಪಾತಕಿಗಳು ಅವರ ಮುಖವನ್ನು ನನಗೆ ಒಮ್ಮೆಯೂ ತೋರಿಸಬಾರದು ಎಂಬುದು ಚೆನ್ನಬಸವಣ್ಣನ ಆಶಯ. ಹಾಗಾದರೆ ಅನುಭಾವದ ಪರಿ ಎಂಥದ್ದು ಎಂದರೆ, ಅದು 'ಆನೆಯನ್ನು ಒಂದು ಅಳತೆಯ ಗೂಡಿನಲ್ಲಿ ಹಿಡಿದಿಡಲಾಗದು; ಆದರೆ ಅದನ್ನು ಒಂದು ಕನ್ನಡಿಯಲ್ಲಿ ಎಲ್ಲರಿಗೂ ಕಾಣುವಂತೆ ಹಿಡಿದಿಡಬಹುದು' ಎಂಬ ಮಾತು ಬಹಳ ಅರ್ಥಪೂರ್ಣವಾದುದು. ಪ್ರತಿಯೊಬ್ಬರೂ ತಾವು ತಮ್ಮ 'ಅಂತರಂಗವೆಂಬ ಕನ್ನಡಿ'ಯಲ್ಲಿಯೇ

ಈ ಅನುಭಾವದ ಪರಿಯನ್ನು ಕಾಣಬೇಕು. ಇದನ್ನು ಮತ್ತೊಬ್ಬರಿಂದ ವ್ಯಾಖ್ಯಾನಿಸಿ ಕೊಂಡು ಆಗುಮಾಡಿಕೊಳ್ಳುತ್ತೇವೆಂಬ ಪ್ರಜ್ಞೆಯು ಸರಿಯಲ್ಲ ಎಂಬ ಚೆನ್ನಬಸವಣ್ಣನವರ ವಿಚಾರ ಬಹಳ ಗಂಭೀರವಾದುದು.

ಅಲ್ಲಮಪ್ರಭುಗಳು ಇದನ್ನು ಎಲ್ಲಾ ಕುರುಹುಗಳ ಅಂತರಂಗ ದರ್ಶನಕ್ಕೂ ಅನುಭಾವವೇ ಪ್ರಮಾಣ ಎಂಬುದಾಗಿ ಹೇಳಿದ್ದಾರೆ,

'ಅನುಭಾವದಿಂದ ಹುಟ್ಟಿತ್ತು ಲಿಂಗ,
ಅನುಭಾವದಿಂದ ಹುಟ್ಟಿತ್ತು ಜಂಗಮ
ಅನುಭಾವದಿಂದ ಹುಟ್ಟಿತ್ತು ಪ್ರಸಾದ
ಅನುಭಾವದನುವಿನಲ್ಲಿ ಗುಹೇಶ್ವರ ಲಿಂಗವನುಪಮ ಸುಖ.'

ಇವರದೇ ಮತ್ತೊಂದು ವಚನ

'ಕಲ್ಲು ಮನೆಯ ಮಾಡಿ ಕಲ್ಲು ದೇವರ ಮಾಡಿ ಕಲ್ಲ ಮೇಲೆ ಕಲ್ಲು ಕಿಡದರೆ ದೇವರಿತ್ತ ಹೋದಹೋ'

ಎಂಬುದನ್ನು ಇಲ್ಲಿ ನೆನಪಿಸಿಕೊಂಡರೆ ಈ ವಚನದ ನಿಜವಾದ ಧ್ವನಿ ವಿನೆಂಬುದು ನಮಗೆ ತಿಳಿಯುತ್ತದೆ. ಪಂಚೇಂದ್ರಿಯಗಳಿಗೆ ಲಿಂಗ, ಜಂಗಮ, ಪ್ರಸಾದಗಳು ಕಾಣಿಸುವ ಪರಿಯೇ ಬೇರೆ; ಅನುಭಾವದ ಚೌಕಟ್ಟಿನಲ್ಲಿ ಅವುಗಳು ಕಾಣಿಸುವ ಪರಿಯೇ ಬೇರೆ. ಹೀಗೆ ಜೀವನವನ್ನು ಅನೇಕ ನೆಲೆಗಳಲ್ಲಿ ಶುದ್ಧ ಭಕ್ತಿ ಮತ್ತು ನಿರ್ಮಲ ಧಾರ್ಮಿಕ ಆಯಾಮದಿಂದ ರೂಪಿಸುವುದಕ್ಕೆ ಶರಣರು ಪ್ರಯತ್ನಿಸಿದರು.

೨. ಜ್ಞಾನದ ಅಖಂಡಮಯ ಪ್ರಜ್ಞಾ ಸ್ವರೂಪವಾಗಿರಬೇಕು ಜೀವನ:

'ಅರಿವೇ ಗುರು' ಎಂಬ ಪ್ರಮುಖವಾದ ಪರಿಕಲ್ಪನೆಯಿಂದ ಶರಣರು ಜೀವನವನ್ನು ಅರ್ಥೈಸುವುದಕ್ಕೆ ಪ್ರಯತ್ನಿಸಿದ್ದಾರೆ. ಮನುಷ್ಯ ಜೀವನವು ನಿಂತಿರುವುದು ನಿಜವಾದ ಭಕ್ತಿ, ಜ್ಞಾನ ಮತ್ತು ವೈರಾಗ್ಯಗಳ ಸಂಗಮದಿಂದ. ಶರಣರು "ಸಂಸಾರವನ್ನು ಹೇಯ ಎನ್ನಲಿಲ್ಲ, ಬದಲಾಗಿ ಅರಿವಿನ ನೆಲೆಯಿಲ್ಲದ ಜೀವನವನ್ನು ಹೇಯ" ಎಂಬುದಾಗಿ ಹೇಳಿದ್ದಾರೆ. 'ಹೆಣ್ಣು ಮಾಯೆ' ಎಂಬ ಇತರೆ ಮತಗಳ ಚಿಂತನೆಯನ್ನು ನಿರಾಕರಿಸಿದ ಶರಣರು ಹೆಣ್ಣು ಮಾಯೆಯಲ್ಲ ಎಂಬುದಾಗಿ ಹೇಳಿದಲ್ಲದೆ, 'ಮರೆವನ್ನೇ ಮಾಯೆ' ಎಂಬುದಾಗಿ ಹೇಳಿದ್ದಾರೆ:

'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ
ಕೂಡಲಸಂಗನ ಶರಣರ ಅನುಭಾವದಿಂದ
ಎನ್ನ ಭವದ ಕೇಡು ನೋಡಯ್ಯಾ.'

ಬಸವಣ್ಣನವರ ಈ ವಚನವು ಎಲ್ಲಾ ಕಾಲಕ್ಕೂ ಅನ್ವಯಿಸುವಂತಹ ಸಮಾಜೋದ್ಧಾರ ಜೀವನದ ತತ್ತ್ವವನ್ನು ಬೋಧಿಸುತ್ತಿದೆ. ನಿಜ ಜ್ಞಾನದಿಂದ ಎಲ್ಲಾ ಅಜ್ಞಾನದ ಎಲ್ಲಾ ನೆಲೆಗಳು ಇಲ್ಲವಾಗುತ್ತವೆ. ಹಾಗಾಗದೇ ಇದ್ದರೆ ಜೀವನ ಅಂಧಕಾರಮಯವಾಗುತ್ತದೆ. ಇಂತಹ ನೆಲೆಯಿಂದಲೇ ಪೂರ್ಣ ಜೀವನವನ್ನು ರೂಪಿಸಿಕೊಳ್ಳಬೇಕು ಎಂಬುದು ಶರಣರ ಪ್ರಮುಖವಾದ ತತ್ತ್ವವಾಗಿದೆ.

Scanned with CamScanner

ಇಂತಹದ್ದೇ ಮತ್ತೊಂದು ವಚನ ಹಾವಿನಹಾಳ ಕಲ್ಲಯ್ಯನವರದ್ದು, ಅತ್ಯಂತ ಗಮನೀಯವಾದುದಾಗಿದೆ:

'ಅರಿವೇ ಗುರು, ಆಚಾರವೇ ಶಿಷ್ಯ, ಜ್ಞಾನವೇ ಲಿಂಗ, ಪರಿಣಾಮವೇ ತಪ.
ಸಮತೆ ಎಂಬುದೇ ಯೋಗ ನೋಡಾ, ಈಸುವನರಿಯದೆ ಲೋಚು ಬೋಳಾದರೇನು?
ಮಹಾಲಿಂಗ ಕಲ್ಲೇಶ್ವರದೇವರು ನಗುವರು.'

'ಅರಿವು ಮತ್ತು ಜ್ಞಾನ' ಎಂಬ ಶರಣರ ವಿಚಾರಗಳು ಸಮಕಾಲೀನ ಬದುಕಿನಲ್ಲಿಯೂ ಬಹಳ ಮುಖ್ಯವಾಗಿ ಚರ್ಚೆಗೆ ಒಳಗಾಗುತ್ತಿರುವ ಅಂಶಗಳಾಗಿವೆ. 'Knowledge is virtue; virtue is knowledge' ಎಂಬ ಜಾನ್ ಕೀಟ್ಸ್ ಹೇಳಿರುವ ತಾತ್ತ್ವಿಕತೆಯನ್ನು ಶರಣರು ೧೨ ನೆಯ ಶತಮಾನದಲ್ಲಿಯೇ ಹೇಳಿದ್ದರು ಎಂಬುದನ್ನು ಈ ಮೂಲಕ ಕಂಡುಕೊಳ್ಳಬಹುದಾಗಿದೆ.

೩. ಸ್ತ್ರೀ–ಪುರುಷರ ಸಮಾನತೆ:

ಶರಣರು 'ಸ್ತ್ರೀ–ಪುರುಷ ಭೇದ'ವನ್ನು ಒಪ್ಪಲಿಲ್ಲ. ಅವರ ತತ್ತ್ವದ ಅಧಿದೈವವೇ ಅರ್ಧನಾರೀಶ್ವರನಾದ ಶಿವ ಆಗಿರುವುದರಿಂದ ಅವರು ಸ್ತ್ರೀ ಸಮುದಾಯಕ್ಕೆ ಸಮಾನ ಸ್ಥಾನಮಾನವನ್ನು ನೀಡಿದ್ದರು. ಅಕ್ಕಮಹಾದೇವಿ, ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಅಜಗಣ್ಣೆ, ಆಯ್ದಕ್ಕಿ ಲಕ್ಕಮ್ಮ, ಸೂಳೆ ಸಂಕವ್ವೆ, ನೀಲಲೋಚನೆ, ಮುಕ್ತಾಯಕ್ಕ, ಸತ್ಯಕ್ಕ, ಕದಿರ ರೆಮ್ಮವ್ವ ಮೊದಲಾದ ಸ್ತ್ರೀಯರು ಅನುಭವ ಮಂಟಪದಲ್ಲಿ ತಂತಮ್ಮ ಅನುಭವಗಳನ್ನು ವಚನ ರೂಪಗಳಲ್ಲಿ ಹೇಳಿದ್ದಾರೆ:

'ಚಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೇ ನೀವು ಕಾಣಿರೇ
ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ ನೀವು ಕಾಣಿರೇ, ನೀವು ಕಾಣಿರೇ'

ಎಂಬ ಅಕ್ಕನ ವಚನ ಅನುಭವ ಮಂಟಪದಲ್ಲಿ ಎಲ್ಲಾ ಜನಸಾಮಾನ್ಯರು ಮತ್ತು ಸ್ತ್ರೀಯರು ಅನುಭಾವದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದುದನ್ನು ಮನಸ್ಸಿಗೆ ಮೂಡಿಸುವಂತಿದೆ.

'ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ ಕಾಣಾ ರಾಮನಾಥ'

ಎಂಬ ಜೇಡರ ದಾಸಿಮಯ್ಯನ ವಚನವನ್ನು ನೋಡಿದಾಗ ಸ್ತ್ರೀ–ಪುರುಷರೆಂಬ ವಿಚಾರಕ್ಕಿಂತ ಆತ್ಮವಂತರು ಎಂಬ ವಿಚಾರವೇ ಬಹಳ ಶ್ರೇಷ್ಠವಾದುದು ಎಂಬ ತತ್ತ್ವವನ್ನು ಪ್ರತಿಪಾದಿಸುತ್ತಿರುವುದು ಗಮನಾರ್ಹ. ಇಂದು ವಿಶ್ವಮಾನವ ತತ್ತ್ವವನ್ನು ಬಹಳ ಮುಖ್ಯವಾಗಿ ಪ್ರತಿಪಾದಿಸಲಾಗುತ್ತಿದೆ. ಆದರೆ ಶರಣರು ಅಂದೇ ಈ ನೆಲೆಯಲ್ಲಿ ಯೋಚಿಸಿದ್ದರು ಎಂಬುದು ಗಮನಾರ್ಹ. ಸೂಳೆ ಸಂಕವ್ವೆಯಂತಹ ಸ್ತ್ರೀಯನ್ನು ಸಹ ಶರಣರು ಆತ್ಮಪ್ರಧಾನ ವ್ಯಕ್ತಿಯಾಗಿ ನೋಡಿರುವುದನ್ನು ಗಮನಿಸಿದಾಗ ಶರಣರ ದೃಷ್ಟಿಕೋನವು ಎಷ್ಟು ವಿಶಾಲವಾದುದಾಗಿತ್ತು ಎಂಬುದು ಮನದಟ್ಟಾಗುತ್ತದೆ. ಆಧುನಿಕ ಮನಃಶಾಸ್ತ್ರವು ಹೇಳುವಂತೆ 'ಪುರುಷ–ಸ್ತ್ರೀ ಎಂಬುದು ಒಂದು ಅವಿನಾಭಾವ ಘಟಕ; ಯಾರೂ ಪೂರ್ಣ ಪುರುಷರಿಲ್ಲ' ಯಾರೂ ಪೂರ್ಣ ಸ್ತ್ರೀಯರೂ ಇಲ್ಲ. ಪುರುಷರಲ್ಲಿ ಸ್ತ್ರೀಯ ಅಂಶವಿದೆ; ಸ್ತ್ರೀಯರಲ್ಲಿ ಪುರುಷನ ಅಂಶ'ವಿದೆ. ಹಾಗಾಗಿ ಅವರವರ ದೇಹದ ಬಾಹ್ಯ ಸ್ವರೂಪವನ್ನು ಗಮನದಲ್ಲಿ ಇಟ್ಟುಕೊಂಡು ಮೇಲ್ನೋಟಕ್ಕೆ ಭೇದಿಸಿ ಹೇಳುವುದು ಸೂಕ್ತವಲ್ಲ. ಬದಲಾಗಿ ಆಕ್ಷಿಕ ಮತ್ತು ಸಾಮರ್ಥ್ಯದ ಮೇಲೆಯೇ ಮನುಷ್ಯ ಸಮಾಜವನ್ನು ನಾವು ರೂಪಿಸಬೇಕಾಗಿದೆ. ಶರಣರು ತಮ್ಮ ವಚನಗಳಲ್ಲಿ ಅದರ ಸಾಧ್ಯತೆಗಳನ್ನು ನಮ್ಮ

ಮುಂದೆ ಗಂಭೀರವಾಗಿಯೇ ಇರಿಸಿದ್ದಾರೆ. ಸ್ತ್ರೀ–ಪುರುಷರಿಬ್ಬರೂ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕವಾಗಿ ಅವಿನಾಭಾವ ಘಟಕವಾಗಿದ್ದಾರೆ:

'ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿಮಸಣಿಯ ಭಕ್ತಿ!
ಗಂಡ ಕೊಂಬುದು ಪಾದೋದಕ ಪ್ರಸಾದ: ಹೆಂಡತಿ ಕೊಂಬುದು ಸುರೆ ಮಾಂಸ!
ಭಾಂಡ–ಭಾಜನ ಶುದ್ಧವಿಲ್ಲದವರ ಭಕ್ತಿ,
ಹೆಂಡದ ಮಡಕೆಯ ಹೊರಗೆ ತೊಳೆದಂತೆ ಕೂಡಲಸಂಗಮದೇವಾ.'

ಮನುಷ್ಯ ಜೀವನದ ಎಲ್ಲಾ ವಿಚಾರಗಳಲ್ಲಿಯೂ ಅವಿನಾಭಾವ ಘಟಕವಾಗಿರುವ ಸ್ತ್ರೀ–ಪುರುಷರು ಪರಸ್ಪರ ವಿರುದ್ಧವಾದ ಆಚಾರ, ವಿಚಾರಗಳನ್ನು ಹೊಂದಿದ್ದರೆ ಸಾಮಾಜಿಕ ವ್ಯವಸ್ಥೆಯಲ್ಲಿ ಸುಸಂಘಟಿತೆ ಎಂಬುದು ಸಾಧ್ಯವಾಗುವುದಿಲ್ಲ. ಈ ಅಂಶವನ್ನು ಅರ್ಥಮಾಡಿಕೊಳ್ಳಲಾಗದೆಯೇ ಸಮಕಾಲೀನ ಸಮಾಜವು ಅನೇಕ ಸಮಸ್ಯೆಗಳನ್ನು ಅನಿವಾರ್ಯವಾಗಿ ಎದುರಿಸಬೇಕಾಗಿ ಬಂದಿದೆ. ಈ ಹಿನ್ನೆಲೆಯಲ್ಲಿಯೇ ಶರಣರು 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ, ಸತಿಪತಿಗಳೊಂದಾಗದ ಭಕ್ತಿ, ಅಮೃತದೊಳು ವಿಷ ಬೆರೆದಂತೆ ಕಾಣಾ ರಾಮನಾಥ' ಎಂಬುದಾಗಿ ಹೇಳಿರುವುದು.

ಮತ್ತೊಂದು ಅಂಶವೆಂದರೆ ಸ್ತ್ರಿಯನ್ನು ಅಶಕ್ತಳು, ಮಾಸಿಕಾದಿ ತೊಂದರೆಗಳಿಂದ ಬಳಲುವ ಆಕೆ ಯಾವುದೇ ಜವಾಬ್ದಾರಿಯನ್ನು ನಿರ್ವಹಿಸಲಾರಳು ಎಂಬುದಾಗಿಯೂ ವ್ಯಾಖ್ಯಾನಿಸಲಾಗಿದೆ. ಆದರೆ ಇದು ಪ್ರಾಕೃತಿಕ ಎಂಬುದಾಗಿ ಹೇಳಿರುವ ಜೀವಶಾಸ್ತ್ರ ಚಿಂತಕರು ಮತ್ತು ಸಮಾಜೋ ಮನಃಶಾಸ್ತ್ರಗಳ ಚಿಂತಕರು ಸ್ತ್ರೀಗೆ ಮಾಸಿಕ ಸರದಿಯು ಇರುವುದರಿಂದಲೇ ಸಮಾಜದ ಉದ್ಧಾರವು ಸಾಧ್ಯವಾಗಿರುವುದು. ಹಾಗೂ ಆರೋಗ್ಯಕಾರಿ ಮತ್ತು ಚಿರಕಾಲದ ಸಮಾಜ ವ್ಯವಸ್ಥೆಯು ನಿರ್ಮಾಣವಾಗಿರುವುದು ಎಂಬುದಾಗಿ ಹೇಳಿದ್ದಾರೆ. ಇದನ್ನ ಶರಣರು 'ಸತಿ ಭಕ್ತೆಯಾದೊಡೆ ಹೊಲೆಗಂಜಲಾಗದು; ಪತಿ ಭಕ್ತನಾದೊಡೆ ಕುಲಕಂಜಲಾಗದು' ಎಂಬ ವಚನದ ಮೂಲಕ ಆ ಹೊತ್ತಿನಲ್ಲಿಯೇ ಸಮಾಜಕ್ಕೆ ಅರ್ಥೈಸುವುದಕ್ಕೆ ನಿಖರವಾಗಿ ಪ್ರಯತ್ನಿಸಿದ್ದಾರೆ. ಹಾಗಾಗಿಯೇ ಮಾಸಿಕ ಸರದಿಯಾದ ಮುಟ್ಟನ್ನು ಹೊಲೆ ಎಂದು ಶರಣರು ಯಾವತ್ತೂ ಭಾವಿಸಿರುವುದಿಲ್ಲ. ಹೀಗೆ ಸಮಾಜದಲ್ಲಿ ಅರ್ಥಪೂರ್ಣ ಪ್ರಜ್ಞೆಯಿಂದ ಜೀವನವನ್ನು ರೂಪಿಸಿಕೊಳ್ಳಲಾಗದೆ ಹೋಗಿರುವುದು ಸ್ತ್ರೀ–ಪುರುಷ ಸಂಘರ್ಷಕ್ಕೆ ಕಾರಣವಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಹಲವಾರು ಸಮಸ್ಯೆಗಳು ಹುಟ್ಟಿಕೊಂಡಿವೆ ಎಂಬ ವಿಚಾರವನ್ನು ಮರೆಯುವಂತಿಲ್ಲ.

೪. ಜಾತಿ ಶ್ರೇಷ್ಠತೆಯ ನಿರಾಕರಣೆ:

ಭಾರತ ವರ್ಣಾಶ್ರಮ ವ್ಯವಸ್ಥೆಯಿಂದ ಹೊರಳಿ ಜಾತಿ ಪ್ರಧಾನವಾದ ದೇಶ. ವೃತ್ತಿಯಿಂದ ಹುಟ್ಟಿಕೊಂಡ ಜಾತಿಯು ಕ್ರಮೇಣ ಶ್ರೇಷ್ಠತೆಯ ನೆಲೆಯಿಂದ ಶ್ರೇಣೀಕರಣ ಅವಸ್ಥೆಯನ್ನು ತಲುಪಿ ಸಮಾಜದ ಬದುಕನ್ನು ಸಂಕೀರ್ಣವಾಗಿಸಿತು. ಶರಣರು ವೃತ್ತಿ ಅಥವಾ ಕರ್ಮಗಳ ಪ್ರಾಧಾನ್ಯತೆಯನ್ನು ಮುಖ್ಯವಾಗಿ ಇಟ್ಟುಕೊಂಡು 'ಕಾಯಕವನ್ನು ಪವಿತ್ರ'ವಾಗಿ ಭಾವಿಸಿ ಸರ್ವ ಸಮಾನತೆಯ ನೆಲೆಯಿಂದ ಜಾತಿಯನ್ನು ನಿರಾಕರಿಸಿದರು. ಬಸವೇಶ್ವರರು ತಾವು ಬ್ರಾಹ್ಮಣಿಕೆಯನ್ನು ನಿರಾಕರಿಸಿ 'ಮಾದರ ಚೆನ್ನಯ್ಯನ ಮಗ ತಾನು, ತಾನು ಹಾರುವನೆಂದರೆ ಕೂಡಲಸಂಗಮದೇವನು ನಗುವನಯ್ಯಾ' ಎಂಬ ವಚನದ ಮೂಲಕ ಜಾತಿ ಶ್ರೇಷ್ಠತೆಯನ್ನು ಖಚಿತವಾಗಿ ನಿರಾಕರಿಸಿದುದನ್ನು ಇಲ್ಲಿ ಗಮನಿಸಬಹುದು.

'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಟ್ಟು ಸಾಲಿಗನಾದ, ವೇದವನೋದಿ ಹಾರುವನಾದ'

Scanned with CamScanner

ಂಬ ವಚನವು ಜಾತಿಯು ಅವರವರ ವೃತ್ತಿಯನ್ನು ಪ್ರಧಾನವಾಗಿ ಎತ್ತಿ ಹಿಡಿಯುತ್ತಿದೆ ಎಂಬುದನ್ನು ಮನದಟ್ಟು ಮಾಡಿಸುವುದಾಗಿದೆ.

'ಜಾತಿವೇದದಲ್ಲಿ ಶೋಧಿಸಿ ಪುಟವಿಟ್ಟ ಬೂದಿಯಂತಾದೆನಯ್ಯಾ ನಿಮ್ಮನಾರಾಧಿಸಿ!
ಅದೆಂತೊಡೆ: ॥ತ್ಲೋ.॥ 'ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ಯಥಾ'
ಎಂಬುದಾಗಿ, ಕಾದಲೋಹದ ಮೇಲೆ ಉದಕವನೆರೆದಂತಾದೆನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.'

ಜಾತಿ ಎಂಬ ಜ್ಞಾನದಿಂದಲೇ ದೇವರನ್ನು ಶೋಧಿಸಿದ ಉರಿಲಿಂಗಪೆದ್ದಿ ಎಂಬ ವಚನಕಾರರು 'ಜಾತಿಗಿಂತಲೂ ಜ್ಞಾನವೇ ಶ್ರೇಷ್ಠ' ಎಂಬ ವಿಚಾರವನ್ನು ಒಂದು ಸಂಸ್ಕೃತ ಶ್ಲೋಕದ ಮೂಲಕವಾಗಿ ಸ್ಪಷ್ಟೀಕರಿಸುತ್ತಾರೆ. 'ಜ್ಞಾನವೆಂಬುದು ಸರ್ವ ಕರ್ಮಗಳನ್ನು ಭಸ್ಮ ಮಾಡುವುದಾಗಿದೆ; ಕಾದ ಕಬ್ಬಿಣದ ಮೇಲೆ ನೀರನ್ನು ಹಾಕಿದರೆ ಅದರ ಕುರುಹು ಹೇಗೆ ಉಳಿಯುವುದಿಲ್ಲವೋ ಹಾಗೆ ಜ್ಞಾನವೆಂಬ ನೆಲೆಯಿಂದ ಯಾವ ಜಾತಿಯೂ ಇರುವುದಿಲ್ಲ; ಕರ್ಮವೂ ಉಳಿಯುವುದಿಲ್ಲ' ಎಂಬ ವಿಚಾರವು ಗಮನಾರ್ಹವಾದುದು. ಹನ್ನೆರಡನೆಯ ಶತಮಾನದಲ್ಲಿ ಶರಣರು ಜಾತಿ ಪ್ರಣೀತ ಸಾಮಾಜಿಕ ವ್ಯವಸ್ಥೆಯನ್ನು ಕರ್ಮ ಅಥವಾ ಕಾಯಕದ ಮೂಲಕ ಮುಕ್ತ ಸಮಾಜೋ ಧಾರ್ಮಿಕ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದಕ್ಕೆ ಬಯಸಿದ್ದರು; ಆದರೆ ಅದು ಸಂಘರ್ಷದಲ್ಲಿ ಅಂತ್ಯವಾಯಿತು ಎಂಬುದನ್ನು ಇಲ್ಲಿ ಅವಶ್ಯವಾಗಿ ಗಮನಿಸಲೇ ಬೇಕಾದ ಅಂಶವಾಗಿದೆ. ಭಾರತದಲ್ಲಿ ಇಂದು ಜಾತಿಯು ಒಂದು ಸಂಸ್ಥೆಯಾಗಿದೆ. ಹಾಗಾಗಿಯೇ ಜಾತಿ ಪ್ರಣೀತವಾದ ಸಾಮಾಜಿಕ ಸಂಕೀರ್ಣತೆಯು ಇಂದು ನಮ್ಮನ್ನು ಬಹಳವಾಗಿ ಬಾಧಿಸುತ್ತಿದೆ. ರಾಜಾ ರಾಮಮೋಹನರಾಯ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಅರವಿಂದ ಮಹರ್ಷಿ, ಮಹಾತ್ಮಾ ಗಾಂಧೀಜಿ ಮತ್ತು ಬಾಬಾಸಾಹೇಬ ಅಂಬೇಡ್ಕರ ಅವರಂತಹ ದಾರ್ಶನಿಕರು ಮತ್ತು ಚಿಂತಕರು ಸಮಕಾಲೀನ ಸಾಮಾಜಿಕ ವ್ಯವಸ್ಥೆಯಲ್ಲಿ ಅಭಿವೃದ್ಧಿಗೆ ಗಂಭೀರ ತೊಡಕಾಗಿರುವ ಜಾತಿಯ ಸ್ವರೂಪವನ್ನು ಖಚಿತವಾಗಿ ಗುರುತಿಸಿದ್ದಾರೆ. ಮಾತ್ರವಲ್ಲ ಅದನ್ನು ಮಾನಸಿಕವಾಗಿ, ಜ್ಞಾನಾತ್ಮಕವಾಗಿ ಮತ್ತು ಕಾನೂನಾತ್ಮಕವಾಗಿ ಇಲ್ಲವಾಗಿಸಿ ಜಾತ್ಯತೀತ ಸಮಾಜವನ್ನು ಸ್ಥಾಪಿಸಿ ಸಮಗ್ರ ಅಭಿವೃದ್ಧಿಯನ್ನು ಸಾಧಿಸಬಹುದು ಎಂಬುದನ್ನು ತಮ್ಮ ಬೋಧನೆಗಳು ಮತ್ತು ಚಿಂತನೆಗಳಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

೫. ಲಿಂಗಾಂಗ ಸಾಮರಸ್ಯ ವಿಶ್ವಮಾನವ ನೀತಿ:

ಹರ ಶರಣರು ರಚಿಸಿರುವ ವಚನ ಸಾಹಿತ್ಯವು ವಿಶ್ವಮಾನವ ಪ್ರಜ್ಞೆಯನ್ನು ಹೊಂದಿರುವಂತಹ ವಿಶಾಲ ದೃಷ್ಟಿ ಧೋರಣೆಯ ಪ್ರತೀಕಗಳಾಗಿವೆ. ಬಸವಣ್ಣಾದಿ ಶರಣರು ತಮ್ಮ ಜೀವನಾನುಭವದ ಮೂಲಕ 'ವಿಶ್ವಮಾನವ ಧರ್ಮ'ವನ್ನು ಬೋಧಿಸಿದ್ದಾರೆ:

'ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲಪ್ರಾಣಿಗಳೆಲ್ಲದರಲ್ಲಿಯೂ
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.'

ಬಸವಣ್ಣನವರ ಈ ವಚನವು 'ವಿಶ್ವಮಾನವ ಧರ್ಮ'ದ ವಿಶಾಲ ಪ್ರಜ್ಞೆಯನ್ನು ಬಿಸುತ್ತಿರುವುದಾಗಿದೆ. ಜೀವನವು ಶಾಂತ ಮತ್ತು ಸಂತೃಪ್ತಮಯ ನೆಲೆಯಲ್ಲಿ ರೂಪುಗೊಳ್ಳಬೇಕಾದರೆ ಎಲ್ಲರೂ ಮನಸ್ಸನ್ನು ನಿರ್ಮಲ ಭಾವದಿಂದಲೂ ದಯಾಪೂರ್ಣ ನೈತಿಕತೆಯಿಂದಲೂ ರೂಪುಗೊಳಿಸಿಕೊಂಡಿರಬೇಕು. ದಯವಿಲ್ಲದ ಯಾವುದೇ ವಿಚಾರವೂ

ಅಧರ್ಮವೇ ಸರಿ ಎಂಬ ಈ ವಚನದ ತತ್ವವು ವಿಶ್ವಮಾನ್ಯ ಚಿಂತನೆಯಾಗಿದೆ. ಹಾಗೆಯೇ ಮತ್ತೊಂದು ವಚನದಲ್ಲಿ ಬಸವಣ್ಣನವರು ಒಂದು ಗಂಭೀರ ಜೀವನ ಸತ್ಯವನ್ನು ಸರ್ವಾನ್ವಯ ರೀತಿಯಲ್ಲಿ ಅನಾವರಣಗೊಳಿಸಿದ್ದಾರೆ:

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು-ಕೊಂಡಪರೆಂಬುದನರಿಯದೆ
ಬೆಂದವೊಡಲ ಹೊರೆಯ ಹೋಯಿತ್ತಲ್ಲದೆ!
ಅಂದಂದೇ ಹುಟ್ಟಿತ್ತು, ಅಂದಂದೇ ಹೊಂದಿತ್ತು
ಕೊಂದವರುಳಿದರೆ ಕೂಡಲಸಂಗಮದೇವಾ?

ಅಂದರೆ ಪ್ರಾಣವುಳ್ಳ ಎಲ್ಲಾ ಜೀವಿಗಳಲ್ಲಿಯೂ ಕರುಣೆ, ದಯಾರ್ದ್ರ ಭಾವನೆಯನ್ನು ಹೊಂದಿರಬೇಕಾದುದು ಮನುಷ್ಯ ಜೀವನ. ಅದಿಲ್ಲದೆ ಇರುವುದರಿಂದಲೇ ಸಾಮಾಜಿಕ ಸಮಸ್ಯೆಗಳಂತೆ, ಧಾರ್ಮಿಕ, ಸಾಂಸ್ಕೃತಿಕ ಸಮಸ್ಯೆಗಳು ಇಂದು ಮನುಷ್ಯ ಸಮಾಜವನ್ನು ಬಹಳ ಗಂಭೀರವಾಗಿ ಕಾಡುತ್ತಲಿವೆ ಎಂಬುದನ್ನು ಶರಣರು ಹನ್ನೆರಡನೆಯ ಶತಮಾನದಲ್ಲಿಯೇ ಸ್ಪಷ್ಟವಾಗಿ ಒತ್ತಿ ಒತ್ತಿ ಹೇಳಿದ್ದಾರೆ.

ಅಲ್ಲಮಪ್ರಭುವಿನ ವಚನಗಳಲ್ಲಿಯೂ ಇದನ್ನು ಕಾಣಬಹುದು:

ಜೀವ ತಪ್ಪಿಸಿ ಜೀವಿಸಬಾರದಾರಿಗೆಯೂ
'ಅಹಿಂಸಾ ಪರಮೋ ಧರ್ಮಃ'
ಎಂಬ ಶ್ರಾವಕರ ನಾನಾರನೂ ಕಾಣೆ
ಪೃಥ್ವೀ ಬೀಜಂ ತಥಾ ಮಾಂಸಂ ಅಪ್ ದ್ರವ್ಯ ಸುರಾಮಯಂ।
ಆತ್ಮಾ ಜೀವಸಮಾಯುಕ್ತಂ ಜೀವಂ ಜೀವೇನ ಭಕ್ಷಯೇತ್॥
ಇಂತೆಂದುದಾಗಿ, ಲಿಂಗಾರ್ಪಿತ ಶುದ್ಧ;
ಮಿಕ್ಕುದು ಜೀವಮಯ ಗುಹೇಶ್ವರಾ.

ಭಾರತೀಯ ಜೀವನದ ತಾತ್ತ್ವಿಕ ತಳಹದಿಯೇ ಅಹಿಂಸೆ; ಅದನ್ನೇ ಧರ್ಮ ಎನ್ನಲಾಗಿದೆ. ಈ ತತ್ವವನ್ನೇ ಎಲ್ಲಾ ಮತಧರ್ಮಗಳು, ಮತಪಂಥಗಳ ಬೋಧಕರು ಮತ್ತು ದಾರ್ಶನಿಕರು ಮತ್ತೆಮತ್ತೆ ಹೇಳುತ್ತಾ ಬಂದಿದ್ದಾರೆ. ಶರಣರು ಅದನ್ನು ನಿತ್ಯ ಜೀವನದ ಒಂದು ಪ್ರಮುಖ ಅಂಶವಾಗಿಯೇ ಬೋಧಿಸಿದ್ದರು ಎಂಬುದನ್ನು ಇಲ್ಲಿ ಮನಗಾಣಬಹುದಾಗಿದೆ.

'ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ
ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯಾ
ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ.'

ಎಂಬ ಬಸವಣ್ಣನವರ ವಚನವು ವಿಶ್ವಮಯವಾಗಿ ಮಾನವ ಸಮಾಜವು ಅನ್ಯ ಎಂಬ ಧೋರಣೆಯು ಹೊಂದದೆ ನಮ್ಮವರು ಎಂಬ ಆತ್ಮೀಯತೆಯ ಮೂಲಕ ಜೀವನವನ್ನು ರೂಪಿಸಿಕೊಂಡರೆ ಯಾವುದೇ ಸಂಘರ್ಷ, ಯುದ್ಧಗಳು ಆಗುವುದಿಲ್ಲ ಎಂಬ ವಿಶಾಲ ಅರ್ಥದಲ್ಲಿ ಇಂತಹ ಹಲವಾರು ವಚನಗಳನ್ನು ರಚಿಸಿದ್ದಾರೆ.

Scanned with CamScanner

ನಿಕ ಸಮಾಜ ವ್ಯವಸ್ಥೆ:

ಇಂದು ಮನುಷ್ಯ ಸಮಾಜ ಬೇರೆ ಬೇರೆ ಕಾರಣಗಳಿಂದ ಸಂಪೂರ್ಣವಾಗಿ ವಿಘಟಿತವಾಗಿದ್ದು ಇಂದು ಹಿಂಸೆಯ ನೆಲೆಗೆ ಬಂದು ನಿಂತಿದೆ. ನಿತ್ಯವೂ ಒಂದಲ್ಲ ಒಂದು ಹಿಂಸೆಯ ಪರಿಣಾಮಗಳಿಂದ ಮನುಷ್ಯ ಸಮಾಜವು ಬಾಧೆಗೆ ಗುರಿಯಾಗುತ್ತಲೇ ಇದೆ. ಒಂದೆಡೆ ಮಾನವೀಯತೆಯ ಲುಪ್ತತೆಯಾಗಿದ್ದರೆ ಮತ್ತೊಂದೆಡೆಯಲ್ಲಿ ಸ್ವಾರ್ಥ ಸಾಧನೆಯ ಆಕಾಂಕ್ಷೆ. 'ನಡೆ ಮತ್ತು ನುಡಿಗಳಲ್ಲಿ ಅಸಂಗತತೆ'ಯು ಇರುವುದರಿಂದ ಇಂತಹ ಅನೇಕ ಸಾಮಾಜಿಕ ಏರುಪೇರುಗಳಿಗೆ ಹಾಗೂ ಗಂಭೀರ ದುರಂತಕ್ಕೆ ಕಾರಣವಾಗಿದೆ. ವಚನ ಸಾಹಿತ್ಯದ ಮೂಲಕವಾಗಿ ಇಂಥ ಎಲ್ಲಾ ವಿಚಾರಗಳನ್ನು ತನ್ನ ಒಟ್ಟು ಅಭಿವ್ಯಕ್ತಿಯಲ್ಲಿ ಬೇರೆ ಬೇರೆಯ ದೃಷ್ಟಿ–ಧೋರಣೆಗಳು ಮತ್ತು ಭಿನ್ನ ಭಿನ್ನ ಆಯಾಮಗಳಿಂದ 'ಅನುಭವ ಮಂಟಪ'ದಲ್ಲಿ ಮತ್ತೆ ಮತ್ತೆ ಚರ್ಚೆಯನ್ನು ಮಾಡುತ್ತಲೇ ಇದ್ದರು ಎಂಬುದಕ್ಕೆ ಇಲ್ಲಿನ ಹಲವಾರು ವಚನಗಳೇ ನಿದರ್ಶನವಾಗಿವೆ. ಮೋಳಿಗೆ ಮಾರಯ್ಯ, ಮರುಳ ಶಂಕರದೇವ ಮೊದಲಾದ ಉತ್ತರ ಭಾರತ ಮತ್ತು ದಕ್ಷಿಣ ಭಾರತಗಳ ಎಲ್ಲಾ ಚಳವಳಿಗಳ ನೇತಾರರು, ಭಕ್ತರು ಕರ್ನಾಟಕದಲ್ಲಿ ನಡೆದ ಹನ್ನೆರಡನೆಯ ಶತಮಾನದಲ್ಲಿನ ಈ ಭಕ್ತಿ ಚಳವಳಿಯತ್ತ ಆಕರ್ಷಿತರಾದರು. ಸಮಾಜೋ – ಧಾರ್ಮಿಕವಾಗಿ ವಿಶೇಷ ಆಯಾಮವನ್ನು ರೂಪಿಸಿಕೊಂಡಿದ್ದಂತಹ ಈ ಶಿವಶರಣರ ಭಕ್ತ ಸಮೂಹವು ಮುಕ್ತ ಚಿಂತನೆಯ ಧಾರ್ಮಿಕ ನೆಲೆಯನ್ನು ರೂಪಿಸಿಕೊಂಡಿತ್ತು. ಇಂದು ಮತಧರ್ಮಗಳು ನಮ್ಮ ನಿತ್ಯ ಜೀವನವನ್ನು ವಿಪರೀತವಾಗಿ ಕಾಡುತ್ತಿವೆ. ಮಾನವ ಸಮಾಜವು ಇದರಿಂದಾಗಿ ಹಲವಾರು ಕೊಂದರೆಗಳನ್ನು ನಿತ್ಯವೂ ಅನುಭವಿಸುತ್ತಾ ಪರಿತಪಿಸುತ್ತಲೇ ಇದೆ. ಮತಧರ್ಮವನ್ನು ಮನುಷ್ಯ ವೈಚಾರಿಕವಾಗಿ ಅರ್ಥಮಾಡಿಕೊಳ್ಳುವುದು ಅತ್ಯವಶ್ಯವಾಗಿದೆ. ವೈಚಾರಿಕತೆ ಎಂಬುದು ಒಂದು ಕ್ರಿಯೆಯೂ ಅಲ್ಲ; ಪ್ರತಿಕ್ರಿಯೆಯೂ ಅಲ್ಲ. ಅದೊಂದು ವಿಶಿಷ್ಟವಾದ ಪ್ರಕ್ರಿಯೆ. ನಾವು ಇಂದು ತೀರಾ 'ಆಸ್ತಿಕ'(Theist) ವಾದಿಗಳಾಗುತ್ತಿದ್ದೇವೆ; ಇಲ್ಲಾ ತೀರಾ ನಾಸ್ತಿಕ (Atheist) ವಾದಿಗಳಾಗುತ್ತಿದ್ದೇವೆ. ಆದರೆ ಇಂದು ಅನುಭವ ಪ್ರಣೀತ ನೆಲೆಯಿಂದ 'ಅಜ್ಞೇಯತಾ' (Agnostic) ವಾದವನ್ನು ನಮ್ಮ ಜೀವನದ ನಿಜವಾದ ಮೌಲ್ಯವಾಗಿ ಆಧರಿಸಿಕೊಂಡು ವಿಶಿಷ್ಟ ರೀತಿಯಿಂದ ರೂಪಿಸಿಕೊಳ್ಳಬೇಕಾಗಿದೆ. ಅಂದರೆ ನಾವು ಪ್ರತಿಯೊಂದನ್ನು ಬರಿಯ ಜ್ಞಾನವೆಂಬ ಆಯಾಮದಿಂದ ನೋಡುವುದಕ್ಕಿಂತ ಪರಿಜ್ಞಾನವಾಗಿ ನೋಡುವುದು ಅತ್ಯಂತ ಅಗತ್ಯ ದೃಷ್ಟಿಕೋನವಾಗಿದೆ. ಆದರೆ ಸಮಕಾಲೀನ ಸಮಾಜದ ಧೋರಣೆಯು ವಿಚಿತ್ರವಾಗಿದೆ. ನಾವು ಯಾವುದಾದರೂ ಒಂದು ಸಂಗತಿಯನ್ನು ಒಪ್ಪಿಕೊಳ್ಳಬಹುದು ಅಥವಾ ಬಿಡಬಹುದು. ಆದರೆ ಅದನ್ನು ನಿರಾಕರಿಸುವುದಕ್ಕೆ ಬರುವುದಿಲ್ಲ. ಈ ಒಪ್ಪಿತತೆ ಅಥವಾ ಬಿಡುವಿಕೆಯು ನಮ್ಮ ತಿಳಿವಳಿಕೆಯ ದ್ಯೋತಕವಾಗಿರುತ್ತದೆ. ಅಂದರೆ ನಾವು ಯಾವುದೇ ವಿಚಾರವನ್ನು ನಮ್ಮ ನಮ್ಮ ಅನುಭವದ ಚೌಕಟ್ಟಿನಲ್ಲಿ ವಿವೇಚನೆ ಮತ್ತು ವಿಶ್ಲೇಷಣೆಗೆ ಒಳಪಡಿಸಿದ ಮೇಲೆಯೇ ಅದರ ಒಟ್ಟು ಫಲವನ್ನು ಕುರಿತು ವಿಮರ್ಶಿಸಬೇಕಾಗಿದೆ. ಆದನ್ನು ಬಿಟ್ಟು ಹೇಳಿದುದೆಲ್ಲ ಸತ್ಯ ಎಂದುಕೊಂಡು ಅದನ್ನು ನಮ್ಮ ಜೀವನದ ಮೌಲ್ಯವನ್ನಾಗಿ ಮಾಡಿಕೊಳ್ಳುವುದಕ್ಕೆ ಹೊರಟರೆ ನಾವು ಸಂಪ್ರದಾಯವಾದಿಗಳಾಗುತ್ತೇವೆ. ಇಲ್ಲ ಎಲ್ಲವನ್ನು ನಿರಾಕರಿಸುತ್ತ ಹೋದರೆ ನಾವು ಟೀಕಾಕಾರರಾಗುತ್ತೇವೆ ಎಂಬುದರ ಅರಿವು ನಮ್ಮಲ್ಲಿ ಖಚಿತವಾಗಿ ಇರಬೇಕಾಗಿದೆ.

> 'ಬಣ್ಣ ಹಲವಪ್ಪಲ್ಲಿ ಬಣ್ಣ ತಾನೊಂದಾಗಿ, ಬಣ್ಣ ಮೂಜಗಕೆ ಮುಕ್ಕಣ್ಣ ತಾನು
> ಬಣ್ಣಕರು ಬಣ್ಣದೊಳಗಾಳುವದನೇ ಕಂಡು ಅಣ್ಣ ನಗುತಿರ್ದನೈ ಯೋಗಿನಾಥಾ!'

ಎಂಬ ಶಿವಯೋಗಿ ಸಿದ್ಧರಾಮೇಶ್ವರರ ವಚನವು ಆಧುನಿಕ ಸಮಾಜದ ಮನೋಭಾವವನ್ನು ಕುರಿತ ದೂರದೃಷ್ಟಿಯ ದ್ಯೋತಕವೇ ಆಗಿದೆ. ಇಂದು ಸಮಾಜವು 'ಬಣ್ಣ'ದ ಮೂಲಕ ಜನ

ಸಮುದಾಯವನ್ನು ಭೇದಕ್ಕೆ ಗುರಿಮಾಡಿದೆ. ಏಳು ಬಣ್ಣಗಳು ಸೇರಿ ಬಿಳಿಯ ಬಣ್ಣವಾಗುತ್ತದೆ. ಅದರಲ್ಲಿ ಬೂದು, ನೀಲಿ, ಹಳದಿ, ಹಸಿರು, ನೇರಳೆ, ಕೇಸರಿ, ಕೆಂಪು ಬಣ್ಣಗಳೆಲ್ಲ ಸೇರಿಕೊಂಡಿವೆ ಎಂಬುದು ವೈಜ್ಞಾನಿಕ ಸತ್ಯ. ಆದರೆ ಸಮಕಾಲೀನ ಸಮಾಜವು ಬಣ್ಣದ ನೆಲೆಯಿಂದ ಮನುಷ್ಯ ಮನುಷ್ಯರಲ್ಲಿ ಮೇಲು–ಕೀಳು ಧೋರಣೆಯನ್ನು ಹೊಂದಿದೆ. 'ಬಣ್ಣಕ್ಕಿಂತಲೂ ಶುದ್ಧವಾದ ವ್ಯಕ್ತಿತ್ವ ಮತ್ತು ಸತ್ವವೇ ಬಹಳ ಮುಖ್ಯ ಎಂಬುದು ಪ್ರಸ್ತುತ ವಚನದ ಆಶಯ. ಅದನ್ನು ಜೀವನ ಮೌಲ್ಯವಾಗಿ ಮಾಡಿಕೊಂಡ ಪರಿಣಾಮ ಅಮೆರಿಕಾದಂತಹ ದೇಶದಲ್ಲಿ ಬ್ಲಾಕ್ ಪ್ಯಾಂಥರ್ ಚಳವಳಿ ಹುಟ್ಟಿಕೊಂಡು ಸಮಾನತೆಗೆ ಹೋರಾಟ ಮಾಡಬೇಕಾಯಿತು. ಭಾರತದಲ್ಲಿ ಉಚ್ಚ, ನೀಚವೆಂಬ ಭೇದವು ಆವರಿಸಿ ಸಮಾಜದಲ್ಲಿ ಧಾರ್ಮಿಕ ಶೋಷಣೆಯು ಉಂಟಾಗಲು ಕಾರಣವಾಯಿತು. ಇಂದು ವರ್ಣದ್ವೇಷವು ಜಗತ್ತಿನಾದ್ಯಂತ ಆವರಿಸಿಕೊಂಡಿದೆ; ಅದಕ್ಕೆ ಮತಧರ್ಮವೂ ಜೊತೆಯಾಗಿರುವುದರಿಂದ ಅದರ ಪರಿಣಾಮ ಭೀಕರವಾಗಿದೆ.

ಆಧುನಿಕ ಸಮಾಜ ವ್ಯವಸ್ಥೆಯ ಮತ್ತೊಂದು ಮುಖ್ಯ ಆಘಾತದ ಸಂಗತಿಯೆಂದರೆ ಸರ್ವ ಪ್ರಪಂಚವೂ ಹಣಮಯವಾಗಿರುವುದು. ದುಡ್ಡು, ಸಂಪತ್ತು, ಆಸ್ತಿ ಎಂಬುದು ಮನುಷ್ಯ ಜೀವನದ ಒಂದು ಅಂಶ. ಆದರೆ ಇಂದು ಪ್ರಪಂಚ ಶ್ರೀಮಂತ ಮತ್ತು ಬಡರಾಷ್ಟ್ರಗಳು ಎಂದು ಇಬ್ಭಾಗಗೊಂಡಿವೆ. ಹಾಗೆಯೇ ಸಮಾಜದಲ್ಲಿ ಶ್ರೀಮಂತರು ಮತ್ತು ಬಡವರು ಎರಡು ವರ್ಗವು ನಿರ್ಮಾಣವಾಗಿ ಸಾಮಾಜಿಕ ಅನ್ಯೋನ್ಯಕ್ಕೆ ಕಂಠಕ ಉಂಟಾಗಿದೆ. ಇದನ್ನು ಆಧ ವಚನಕಾರರು ಹನ್ನೆರಡನೆಯ ಶತಮಾನದಲ್ಲಿಯೇ ಈ ಭೀಕರತೆಯ ಬಗೆಗೆ ಅಭಿವ್ಯಕ್ತಿಸಿದ್ದಾರೆ.

> ಹಾವು ತಿಂದವರ ನುಡಿಸಬಹುದು, ಗರ ಹೊಡೆದವರ ನುಡಿಸಬಹುದು
> ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ!
> ಬಡತನವೆಂಬ ಮಂತ್ರವಾದಿ ಹೊಗಲು ಒಡನೆ ನುಡಿವರು ಕೂಡಲಸಂಗಮದೇವಾ.
>
> ಅಮರಾವತಿಯ ಪಟ್ಟಣದೊಳಗೆ ದೇವೇಂದ್ರನಾಳುವ ನಂದನವಯ್ಯಾ
> ಅತ್ತ ಸಾರಲೆ ಕಾಮ, ಮೋಹವೆ ನಿನಗೆ? ಲೋಕಾದಿ ಲೋಕವನೆಲ್ಲವ
> ಮರಳು ಮಾಡಿದೆ ಕಾಮ, ಗುಹೇಶ್ವರ ಲಿಂಗವನರಿ ಭೋ.
>
> ತನ್ನವರನ್ಯರಹರು ಹೆಣ್ಣು, ಹೊನ್ನು, ಮಣ್ಣು ಹಿಡಿದು
> ಹೊರತಾಗಿ ಆ ಮೂರ ಬಿಟ್ಟಡೆ ಅನ್ಯರು ತನ್ನವರಹರು
> ಅರಿದವಂಗೂ ಸರಿ, ಜಗದ ಒಡಲಾದವಂಗೂ ಸರಿ
> ಆಸೆ ಒಂದೇ ಭೇದ, ಉಭಯಕ್ಕೆ ಹೊರಗಾಗು ಏಘಟದೂರ ರಾಮೇಶ್ವರಲಿಂಗವನರಿವುದಕ್ಕೆ.

ಎಂಬ ಬಸವೇಶ್ವರ, ಅಲ್ಲಮಪ್ರಭು ಮತ್ತು ಮೆರೆಮಿಂಡಿದೇವರ ವಚನಗಳನ್ನು ನೋಡಿದಾಗ ಶರಣರು ಸಂಪತ್ತಿಗೆ ಎಂಥ ಸ್ಥಾನವನ್ನು ನೀಡಿದ್ದರು ಎಂಬುದು ಅರಿವಿಗೆ ಬರುತ್ತದೆ. ಇಂತಹ ಇನ್ನೂ ಹಲವಾರು ವಚನಗಳು ವಚನ ಸಾಹಿತ್ಯದಲ್ಲಿ ನಮಗೆ ಕಾಣಸಿಗುತ್ತವೆ. ಶ್ರೀಮಂತಿಕೆ, ಸಂಪತ್ತು ಎಂಬುದು ಇಂದು ಅಂತಸ್ತಿನ ದ್ಯೋತಕವಾಗಿರುವುದರಿಂದ ಶ್ರೀಮಂತರು ಅಥವಾ ಹಣವಂತರು ಬಡವರನ್ನು ಅತ್ಯಂತ ನಿಕೃಷ್ಟ ದೃಷ್ಟಿಯಿಂದ ನೋಡುತ್ತಿದ್ದಾರೆ. ಇವು ಮನುಷ್ಯನಿಗೆ ಅಹಂಕಾರವನ್ನು ತಂದುಕೊಡುತ್ತದೆ. ಎಲ್ಲರಲ್ಲೂ ಬಡತನ ಎಂಬ ಪ್ರಜ್ಞೆಯ ಅರಿವು ಇದ್ದರೆ ಸಮಾಜದಲ್ಲಿ ಅಸಮಾನತೆಯು ತಾಂಡವವಾಡುತ್ತಿರಲಿಲ್ಲ. ಈ ಅಂಶವನ್ನೇ ಬಸವಣ್ಣಾದಿಗಳು ಸಿರಿಗರ, ಕಾಮ ಮೋಹದ ಮರಳು ಮತ್ತು ತನ್ನವರು ಅನ್ಯರು ಎಂಬ ಭಿನ್ನ ಮನಸ್ಥಿತಿಯನ್ನು ತರುತ್ತದೆ ಎಂಬುದಾಗಿ ಧ್ವನಿಸಿರುವುದು. ಶ್ರೀಮಂತಿಕೆ ಎಂಬುದು ಇಂದು ಮಾನವೀಯತೆಯ ಲುಪ್ತತೆಗೆ ಕಾರಣವಾಗಿದೆ ಮತ್ತು ಬೂರ್ಜ್ವಾ (ಅತಿ ಸಂತೃಪ್ತರು) ಸ್ಥಿತಿಯನ್ನು ತಂದು ಸಮಾಜವನ್ನು ಕ್ರಿಯಾಶೀಲ ರಹಿತವಾಗಿ ಮಾಡಿದೆ. 'ಬಡತನ ಇರುವಲ್ಲಿ ಪ್ರತಿಭೆ ಇರುತ್ತದೆ' ಎಂಬುದಾಗಿ

Scanned with CamScanner

ಕಾರ್ಲ್‌ಮಾರ್ಕ್ಸ್ ಒಂದೆಡೆಯಲ್ಲಿ ಹೇಳಿದ್ದಾನೆ. ವಚನಕಾರರು ಸಂಪತ್ತಿನ ಕ್ರೋಢೀಕರಣವನ್ನು ಒಪ್ಪುತ್ತಿರಲಿಲ್ಲ; ಸಂಪತ್ತು ಸಮಾಜವನ್ನು ಸ್ಥಗಿತಗೊಳ್ಳುವಂತೆ ಮಾಡುತ್ತದೆ ಎಂಬುದಾಗಿಯೇ ಭಾವಿಸಿದ್ದರು. ಆಯ್ದಕ್ಕಿ ಲಕ್ಕಮ್ಮ ತನ್ನ ಪತಿ ಆಯ್ದಕ್ಕಿ ಮಾರಯ್ಯನಿಗೆ 'ಈಸಕ್ಕಿಯಾಸೆ ನಿನಗೇತಕಯ್ಯಾ' ಎಂಬುದಾಗಿ ಹೇಳಿ ಅಂದಿಗೆ ಸಾಕಾಗುವಷ್ಟು ಅಕ್ಕಿಯನ್ನು ಉಳಿಸಿಕೊಂಡು ಮಿಕ್ಕುದನ್ನು ದೇವಾಲಯದ ಹತ್ತಿರವೇ ಹಾಕಿ ಬರುವಂತೆ ಹೇಳಿ ವಾಪಾಸ್ಸು ಕಳುಹಿಸಿದ ಸಂದರ್ಭವು ನಮಗೆ ಇಲ್ಲಿ ಬಹಳ ಮುಖ್ಯವಾಗುತ್ತದೆ. 'ಆಸೆ ಎಂಬುದು ಅರಸಂಗಲ್ಲದೆ ಶಿವಭಕ್ತರಿಗೆ ಉಂಟೇ ಅಯ್ಯಾ' , 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ!', 'ಜೋಳವಾಳಿಗೂ ವೇಳೆವಾಳಿಗೂ ನಡುವೆ ಅಂತರವಿರಬಾರದು' ಎಂಬ ಬಸವಣ್ಣನವರ ದೃಷ್ಟಿಯು ಇಲ್ಲಿ ಬಹಳ ಮುಖ್ಯವಾದುದು. ಇಂದು 'ಆಸ್ತಿಯ ಹಕ್ಕು' ಎಂಬುದು ಮನುಷ್ಯ ಸಮಾಜದಲ್ಲಿ ವಿಪರೀತ ಗಳಿಕೆಗೆ ಕಾರಣವಾಗಿದೆ ಮತ್ತು ಭೋಗಮಯ ಬದುಕಿನಲ್ಲಿ ಮನುಷ್ಯತ್ವವನ್ನು ಕಳೆದುಕೊಂಡು ಜೀವನದ 'ಸಂತೃಪ್ತ ಸ್ಥಿತಿ ಅರ್ಥಾತ್ ಆಧ್ಯಾತ್ಮಿಕ ನೆಲೆ'ಯನ್ನು ಕಂಡುಕೊಳ್ಳಲಾಗದೆ ಮನುಷ್ಯ ತನ್ನ ಜೀವನವನ್ನು ಅಸ್ತವ್ಯಸ್ತಗೊಳಿಸಿಕೊಂಡು ಒದ್ದಾಡುವ ಸ್ಥಿತಿಯನ್ನು ನೋಡುತ್ತಿದ್ದೇವೆ. 'ಸಂಸಾರ ಎಂಬುದು ಸದ್ಗತಿಯ ಹಂತ' ಎಂಬುದನ್ನು ಅರಿಯದುದರಿಂದ ಸಂಸಾರದಲ್ಲಿ 'ಅನುಬಂಧತೆ'ಯು ಇಲ್ಲದೆ ಹೋಗಿದೆ. 'ಕಾಲಿಗೆ ಕಟ್ಟಿದ ಗುಂಡು; ಕೊರಳಿಗೆ ಕಟ್ಟಿದ ಬೆಂಡು, ತೇಲಲೀಯದು ಗುಂಡು; ಮುಳುಗಲೀಯದು ಬೆಂಡು' ಎಂಬ ಉಭಯಸಂಕಟಕ್ಕೆ ಕಾರಣವಾಗಿರುವ ಸ್ಥಿತಿಯನ್ನು ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಸ್ಪಷ್ಟವಾಗಿಯೇ ಹೇಳಿದ್ದಾರೆ.

ಆಧುನಿಕ ಸಮಾಜ ಭೋಗ–ಯೋಗ ಸಮನ್ವಯದ ಕೊರತೆಯಿಂದಾಗಿ ಪರಿತಪಿಸುತ್ತಿದೆ. ಅದನ್ನು ವಚನ ಸಾಹಿತ್ಯದ ಮೂಲಕ ನಾವು ಅರ್ಥಮಾಡಿಕೊಂಡು ಸಮರೂಪುಗೊಳಿಸಿಕೊಳ್ಳಬಹುದಾಗಿದೆ. ಸಕಲೇಶ ಮಾದರಸರು ಮನುಷ್ಯನ ಒಟ್ಟು ಮನೋಭಾವವನ್ನು ಗಂಭೀರವಾಗಿ ಹಿಡಿದಿಟ್ಟಿದ್ದಾರೆ. ಇದು ಆಧುನಿಕ ಸಮಾಜದ ಮನಃಸ್ಥಿತಿಯ ಸ್ವರೂಪವನ್ನು ನಿರ್ದಿಷ್ಟವಾಗಿ ಅರ್ಥೈಸುವಂಥದೇ ಆಗಿದೆ:

ಜನ ಮೆಚ್ಚು ಶುದ್ಧನಲ್ಲದೆ ಮನ ಮೆಚ್ಚು ಶುದ್ಧನಲ್ಲವಯ್ಯ
ನುಡಿಯಲ್ಲಿ ಜಾಣನಲ್ಲದೆ ನಡೆಯಲ್ಲಿ ಜಾಣನಲ್ಲವಯ್ಯ
ವೇಳದಲ್ಲಿ ಅಧಿಕನಲ್ಲದೆ ಭಾಳೆಯಲ್ಲಿ ಅಧಿಕನಲ್ಲವಯ್ಯ
ಧನ ದೊರಕದೆ ನಿಸ್ಪೃಹನಲ್ಲದೆ ಧನದೊರಕಿ ನಿಸ್ಪೃಹನಲ್ಲವಯ್ಯ
ಏಕಾಂತ ದ್ರೋಹಿ ಗುಪ್ತ ಪಾತಕಿ ಯುಕ್ತಿಶೂನ್ಯಂಗೆ
ಸಕಲೇಶ್ವರ ದೇವರು ಒಲಿ ಒಲಿ ಎಂದರೆ ಎಂತೊಲಿವನಯ್ಯಾ?

'ಜನರನ್ನು ಮೆಚ್ಚಿಸಬಹುದು, ಒಪ್ಪಿಸಬಹುದು. ಆದರೆ ಮನಸ್ಸನ್ನು ಮೆಚ್ಚಿಸುವುದಕ್ಕೆ ಒಪ್ಪಿಸುವುದಕ್ಕೆ ಸಾಧ್ಯವಿಲ್ಲ' ಎಂಬುದು ಎಲ್ಲರಿಗೂ ತಿಳಿದಿರುವಂತಹ ಸಂಗತಿ. ನುಡಿಯಲ್ಲಿ ಜಾಣನಿದ್ದು ನಡೆಯಲ್ಲಿ ಇಲ್ಲದಿರುವುದು, ವೇಷದಲ್ಲಿ ಅಧಿಕನಿದ್ದು ಭಾಷೆಯಲ್ಲಿ ಇಲ್ಲದೆ ಇದ್ದರೆ, ಹಣವಿಲ್ಲದೆ ಇದ್ದಾಗ ಒಳ್ಳೆಯವನೆನೆಸಿಕೊಂಡಿದ್ದು ದೊರಕಿದಾಗ ಹಾಗಿಲ್ಲದೆ ಹೋದರೆ, ಅಂಥವರು ಏಕಾಂತ ದ್ರೋಹಿಗಳು, ಗುಪ್ತ ಪಾತಕಿಗಳು ಮತ್ತು ಯುಕ್ತಿ ಶೂನ್ಯರು ಎಂಬುದಾಗಿ ಕಟುವಾಗಿಯೇ ಹೇಳಿರುವುದನ್ನು ಗಮನಿಸಬಹುದು. ಅಂಥವರಿಗೆ ದೇವರು ಒಲಿ ಒಲಿ ಎಂದರೆ ಹೇಗೆ ಒಲಿಯುತ್ತಾನೆ ಎಂಬ ಮಾತುಗಳು ಗಮನಾರ್ಹವಾದುವು.

ಒಟ್ಟಾರೆ ಇಂದು ಪ್ರಪಂಚದ ದೇಶಗಳೆಲ್ಲವೂ ಮತಧರ್ಮ ಪ್ರಧಾನವಾಗಿವೆ. ಆದರೆ ಒಂದೇ ಮತಧರ್ಮದ ರಾಷ್ಟ್ರಗಳ ನಡುವೆಯೇ ಎರಡು ಮಹಾಯುದ್ಧಗಳು ನಡೆದು ಪ್ರಪಂಚ ಭಯಾನಕ ಸ್ಥಿತಿಯನ್ನು ಅನುಭವಿಸಬೇಕಾಗಿ ಬಂದಿತು. ವೈದಿಕ, ಜೈನ, ಬೌದ್ಧ, ಲಿಂಗಾಯತ, ಸಿಖ್, ಕ್ರೈಸ್ತ, ಇಸ್ಲಾಂ ಮುಂತಾದ ಮತಧರ್ಮಗಳೆಲ್ಲವೂ ಬೋಧಿಸುತ್ತಿರುವುದು ಮಾನವೀಯತೆ ಮತ್ತು ಅಹಿಂಸೆಯನ್ನು. ಆದರೆ ಸಮಕಾಲೀನ ರಾಷ್ಟ್ರಗಳ ನೀತಿಯು ಮಾತ್ರ ಒಂದನೆಯ ಜಗತ್ತಿನ ರಾಷ್ಟ್ರ ಎಂದೆನಿಸಿಕೊಳ್ಳುವುದಕ್ಕೆ ಹಿಂಸೆ, ಆಕ್ರಮಣ, ಭಯೋತ್ಪಾದನೆ, ಮತಾಂತರ ಮುಂತಾಗಿ ಯಾವೆಲ್ಲಾ ಮಾರ್ಗದ ಮೂಲಕ ಕ್ರಮಿಸುತ್ತಿವೆ ಎಂಬುದನ್ನು ಗಮನಿಸಿದಾಗ ಬಸವೇಶ್ವರಾದಿಗಳು ಹೇಳಿದ ಕಾಯಕ, ದಾಸೋಹ, ಇಷ್ಟಲಿಂಗ, ಲಿಂಗಾಂಗ ಸಾಮರಸ್ಯ, ಭೂತದಯೆ ಮುಂತಾದ ಎಲ್ಲಾ ಅಂಶಗಳು ಸಮಕಾಲೀನ ಸಾಮಾಜಿಕ ಜೀವನ ವ್ಯವಸ್ಥೆಗೆ ಎಷ್ಟು ಅಗತ್ಯ ಎಂಬುದು ಖಚಿತವಾಗಿಯೂ ಮನದಟ್ಟಾಗಬೇಕಾಗಿದೆ. ಅಲ್ಲದೆ ಇಂದು ಮಾನವ ಧರ್ಮದ ದ್ಯೋತಕಗಳಾಗಿ ಈ ಅಧ್ವರ್ಯಗಳನ್ನು ಎಚ್ಚರದ ಮೂಲಕವೇ ಅರ್ಥಮಾಡಿಕೊಂಡು ಅನುಯಾಯಿತ್ವದಿಂದ ಅರಿವಿನ ಲೋಕಕ್ಕೆ ಬಂದು ಹೊಸ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಾಗಿದೆ. ಇದು ಯಾರೋ ಕೆಲವೇ ಮಹಾನ್ ವ್ಯಕ್ತಿಗಳ ನಿರೀಕ್ಷಣೆಯ ಕಾಲವಲ್ಲ; ಬದಲಾಗಿ ಪಾರಂಪರಿಕ ಅರಿವಿನ ಐತಿಹಾಸಿಕ ಪಥದಿಂದ ರೂಪಿಸಿಕೊಳ್ಳಬೇಕಾದ ಪ್ರತಿಯೊಬ್ಬರ ಜವಾಬ್ದಾರಿಯ ಕಾಲ. ಪ್ರಜಾಪ್ರಭುತ್ವವೆಂಬ ಹೆಸರಿನಲ್ಲಿಯೂ ನಾವು ಇಂದು ಅಳವಡಿಸಿಕೊಂಡಿರುವ ಜೀವನ ವ್ಯವಸ್ಥೆಯ ಸ್ವರೂಪವು ನಿಜವಾಗಿಯೂ ಬದಲಾಗಬೇಕಾಗಿದೆ. ಅಕ್ಷರ ಪಡೆದುಕೊಂಡಿರುವ ನಾವು ಆ ಮೂಲಕ ಜ್ಞಾನ ಲೋಕವನ್ನು ಸ್ವತಃ ಪ್ರವೇಶಿಸಿ ಪರಿಶೀಲಿಸಿದರೆ ಸಮಾನತೆಯ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು ಅಸಾಧ್ಯವಾದ ಕೆಲಸವೇನೂ ಅಲ್ಲ. ಅದಕ್ಕೆ ಪ್ರತಿಯೊಬ್ಬರೂ ತಂತಮ್ಮ ಪೂರ್ವಗ್ರಹಗಳಿಂದ ಹೊರಬಂದು ತಾವೆಲ್ಲರೂ ಮನುಷ್ಯರು ಎಂಬ ಪರಿಷ್ಕಾರಯುತ ಪ್ರಜ್ಞೆಯನ್ನು ಅವಶ್ಯವಾಗಿ ರೂಢಿಸಿಕೊಳ್ಳಬೇಕಾಗಿದೆ. ಯಾವೆಲ್ಲ ತಾರತಮ್ಯವನ್ನು ನಾವು ನೀಗಿಕೊಳ್ಳದೆ ಹೋದರೆ, ನಾವು ನಾವೇ ಪರಸ್ಪರ ಹೊಡೆದಾಟ, ಬಡಿದಾಟಗಳಿಂದ ಪರಿತಪಿಸುವಂತೆ ಆಗಬಹುದು. ಅಥವಾ ಅನ್ಯಾಕ್ರಮಣಗಳಿಗೆ ಒಳಗಾಗಿ ಒಂದೊಮ್ಮೆ ಉಳಿದರೆ ಕುರಿಗಳಂತೆ ತಲೆಬಾಗಿಸಿಕೊಂಡು ಹೋಗುವಂತಹ ಅತ್ಯಂತ ಭಯಾನಕವಾದ ದಯನೀಯ ಸ್ಥಿತಿಯನ್ನು ಅನುಭವಿಸುವುದು ಅನಿವಾರ್ಯವಾಗುತ್ತದೆ. ಈ ಎಚ್ಚರ ಬರುವುದು ಸ್ವಾನುಭವ, ಅಧ್ಯಯನ, ಪರಿಜ್ಞಾನ ಮತ್ತು ಪರಿಷ್ಕಾರಗಳಿಂದ. ಅದನ್ನು ಎಲ್ಲರೂ ಅರ್ಥ ಮಾಡಿಕೊಂಡರೆ ಹೊಸ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು ಅಥವಾ ಇರುವ ಸಾಮಾಜಿಕ ವ್ಯವಸ್ಥೆಯನ್ನು ಇನ್ನೂ ವಿಶಿಷ್ಟವಾಗಿ ಪರಿಷ್ಕರಿಸಿಕೊಳ್ಳುವುದಕ್ಕೆ ಸುಲಭ ಸಾಧ್ಯವೆಂಬುದು ಗಮನಾರ್ಹ. ಒಂದು ಕಾಲಕ್ಕೆ 'ಆಸ್ತಿತೆಯ' ಕಾರಣವಾಗಿ ಹುಟ್ಟಿಕೊಂಡ ಸಮಾಜೋ–ಧಾರ್ಮಿಕ ವ್ಯವಸ್ಥೆಯು ಇಂದಿಗೂ ಅಗತ್ಯವೇ ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬರೂ ಅವಶ್ಯವಾಗಿ ಹಾಕಿಕೊಳ್ಳಬೇಕಾಗಿದೆ. ಅದಕ್ಕೆ ಪರ್ಯಾಯವಾಗಿ ಪರಿಷ್ಕಾರಯುತವೋ ಅಥವಾ ಹೊಸ ವ್ಯವಸ್ಥೆಯನ್ನೋ ರೂಪಿಸಿಕೊಳ್ಳಲು ಪರಿಜ್ಞಾನವೆಂಬ ಅಸ್ತ್ರದ ಮೂಲಕವೇ ನಾವು ಸಜ್ಜಾಗಬೇಕಾಗಿದೆ. ಹಾಗಾಗದೆ ಹೋದರೆ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆ ಮನುಷ್ಯ ಜೀವನವನ್ನು ನಿತ್ಯನಿರಂತರವಾಗಿ ಶೋಷಿಸುತ್ತಲೋ ಅಥವಾ ನಿರ್ಬಂಧಿಸುತ್ತಲೋ ಹೋಗುತ್ತಲೇ ಇರುತ್ತದೆ. ನಾವು ಇಂದು ಮಾನವೀಯತೆಯ ಮೂಲಕ ಗೆಲ್ಲಬೇಕಾಗಿರುವ ಪ್ರಮುಖ ಸಮಸ್ಯೆಯೆಂದರೆ ಹಿಂಸೆ ಮತ್ತು ಅಸಮಾನತೆ. ಇಂದು 'ವೈಜ್ಞಾನಿಕ ಸಂತೋಧನೆ' ಎಂಬ ಹೆಸರಿನಲ್ಲಿ ನಂಬರ್ ಒನ್ ಸ್ಥಾನದಲ್ಲಿ ಇರುವ ಜಗತ್ತಿನ ಶ್ರೀಮಂತ ದೇಶಗಳು 'ಆಟಂ ಬಾಂಬ್, ಹೈಡ್ರೋಜನ್ ಬಾಂಬ್' ಮುಂತಾಗಿ ಏನೆಲ್ಲವನ್ನು ಉತ್ಪಾದಿಸಿ ಇಟ್ಟುಕೊಂಡಿವೆ ಮತ್ತು ಅದನ್ನು ತಮ್ಮ ಶ್ರೀಮಂತಿಕೆಯ ದ್ಯೋತಕವಾಗಿ

Scanned with CamScanner

ಭಾವಿಸಿವೆ. ಆದರಿಂದ ಪ್ರಪಂಚದ ಅಭಿವೃದ್ಧಿಶೀಲ ಮತ್ತು ಬಡ ರಾಷ್ಟ್ರಗಳು ಅದರ ಉದಾರತೆಯ ಕಾರಣವೋ ಅಥವಾ ಭಯದ ಕಾರಣವೋ ಶ್ರೀಮಂತ ರಾಷ್ಟ್ರಗಳ ತಾಳಕ್ಕೆ ತಕ್ಕಂತೆ ಕುಣಿಯುವಂತಾಗಿದೆ; ಹಿಂಸೆ ಮತ್ತು ಭಯೋತ್ಪಾದನೆಯಿಂದ ತತ್ತರಿಸುತ್ತಿವೆ. ಇಂದು ಪ್ರಪಂಚದ ಎಲ್ಲಾ ರಾಷ್ಟ್ರಗಳೂ ಶಸ್ತ್ರಾಸ್ತ್ರ ಖರೀದಿಗಾಗಿಯೇ ತಮ್ಮ ದೇಶದ ಸಂಪತ್ತಿನ ಬಹುಭಾಗವನ್ನು ವ್ಯಯಿಸುತ್ತಿವೆ. ರಾಮಮನೋಹರ ಲೋಹಿಯಾ ಅವರು ಒಂದೆಡೆಯಲ್ಲಿ ಹೀಗೆ ಹೇಳಿದ್ದಾರೆ. ಇಂದು ಪ್ರಪಂಚದಲ್ಲಿ ಹಿಂಸೆ ಮತ್ತು ಶಾಂತಿಯ ಪ್ರತೀಕಗಳಾಗಿ ಆಟಂಬಾಂಬ್ ಮತ್ತು ಮಹಾತ್ಮಾ ಗಾಂಧೀಜಿಯರು ಇದ್ದಾರೆ. ಇವೆರಡರ ನಡುವೆ ಸಂಘರ್ಷ ನಡೆದೇ ತೀರುತ್ತದೆ. ಗಾಂಧೀಜಿಯ ಗೆಲ್ಲಬೇಕು ಎಂಬುದು ನನ್ನ ಆಶಯ ಎನ್ನುತ್ತಾರೆ. ವಚನ ಸಾಹಿತ್ಯ ಅಹಿಂಸೆಯ ಜೀವನವನ್ನೇ ಒತ್ತಿ ಹೇಳುತ್ತಾ ಬಂದಿರುವುದನ್ನು ನೋಡಿದ್ದೇವೆ. 'ದಯೆ'ಯನ್ನೇ ಜೀವನ ಮೌಲ್ಯವಾಗಿ ಹೇಳಿದ ವಚನ ಸಾಹಿತ್ಯದ ಆಶಯವು ಇಂದು ವಿಶ್ವಾದ್ಯಂತ ಜನರನ್ನು ತಲುಪಬೇಕಾಗಿದೆ. 'ಕಾಯಕವೇ ಕೈಲಾಸ; ದೇಹವೇ ದೇಗುಲ' ಎಂಬುದನ್ನು ಖಂಡಿತವಾಗಿ ಅರ್ಥ ಮಾಡಿಕೊಂಡರೆ ಮನುಷ್ಯ ಸಮಾಜವು ನಿರ್ಭಯವಾಗಿ ಜೀವಿಸಬಹುದು.

ಸಹಾಯಕ ಕೃತಿಗಳು:

೧. ಭೂಸನೂರಮಠ. ಸಂ.ಶಿ.: ವಚನ ಸಾಹಿತ್ಯ ಸಂಗ್ರಹ, ಸಾಹಿತ್ಯ–ಸಂಸ್ಕೃತಿ ಅಭಿವೃದ್ಧಿ ಶಾಖೆ, ಬೆಂಗಳೂರು, ೧೯೬೫ ೨. ಶ್ರೀನಿವಾಸಮೂರ್ತಿ ಎಂ.ಆರ್.: ವಚನ ಧರ್ಮಸಾರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೫೬ ೩. ಚಿದಾನಂದಮೂರ್ತಿ ಎಂ.: ವಚನ ಸಾಹಿತ್ಯ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ೧೯೭೫ ೪. ಶಿವರುದ್ರಪ್ಪ ಜಿ.ಎಸ್.: ಕನ್ನಡ ಸಾಹಿತ್ಯ ಸಂದರ್ಭ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦ ೫. ಬಸವರಾಜ ಸಬರದ: ವಚನ ಚಳುವಳಿ, ಪಲ್ಲವಿ ಪ್ರಕಾಶನ, ಗುಲಬರ್ಗಾ, ೧೯೯೨

❑

ಡಾ. ವಿಠಲರಾವ್ ಟಿ. ಗಾಯಕ್ವಾಡ್
ಪ್ರಾಧ್ಯಾಪಕ, ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ– ಪಿಲಖಿ ೨೭೬
ಹೊಸಪೇಟೆ (ತಾ), ಬಳ್ಳಾರಿ (ಜಿ), ಕರ್ನಾಟಕ.
ಮೇಲ್: vrtgaikwad@gmail.com

Scanned with CamScanner

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಏಪ್ರಿಲ್–ಜೂನ್ ೨೦೨೦
ಸಂಚಿಕೆ ೧೧೪

ಪ್ರಧಾನ ಸಂಪಾದಕರು
ಡಾ. ಬಿ.ವಿ. ವಸಂತಕುಮಾರ್

ಸಂಪಾದಕರು
ಡಾ. ಎ. ರಘುರಾಂ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು–೫೬೦ ೦೦೨
ದೂರವಾಣಿ : ೦೮೦–೨೨೨೧೧೭೬೦

Scanned with CamScanner

ANIKETHANA (a quarterly journal of Kannada Language and Literature) April 2020 – June 2020. Edited by : Dr. A. Raghuram, Published by : Kariyappa N., Registrar, Karnataka Sahithya Academy, Kannada Bhavana, J.C. Road, Bengaluru - 560 002

ಪುಟಗಳು : viii+160=168

ಬೆಲೆ : ರೂ. 50/-

ಸಂಚಿಕೆ : ೧೧೪

ಪ್ರತಿಗಳು : ೨೦೦೦

ಪ್ರಧಾನ ಸಂಪಾದಕರು
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು
ಕರಿಯಪ್ಪ ಎನ್.
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು–೫೬೦ ೦೦೨

ಚಂದಾ ವಿವರ
ಬಿಡಿ ಪ್ರತಿ : ರೂ. ೫೦/–
ವಾರ್ಷಿಕ ಚಂದಾ : ರೂ. ೨೦೦/–
ಆಜೀವ ಚಂದಾ : ರೂ. ೧,೦೦೦/–

ಮುಖಪುಟ ವಿನ್ಯಾಸ : ಮಂಜು (ಕೋ ಪ್ರಕಾಶನ)

ಮುದ್ರಕರು :
ಅಕ್ಷರ ಪ್ರಿಂಟರ್ಸ್
ನಂ. 2, 5ನೇ 'ಬಿ' ಮುಖ್ಯರಸ್ತೆ
ಬ್ಯಾಂಕ್ ಆಫ್ ಬರೋಡಾ ರಸ್ತೆ
ಕಾಮಾಕ್ಷಿಪಾಳ್ಯ, ಬೆಂಗಳೂರು – 560 079.
ಮೊಬೈಲ್ : 9844365538

Scanned with CamScanner

ಪರಿವಿಡಿ

೧. ವಾರಕರಿ ಪಂಥ ಮತ್ತು ದಾಸಪಂಥ
– ಡಾ. ವಿಠಲರಾವ್ ಟಿ. ಗಾಯಕ್ವಾಡ್ ೧

೨. ರಾಜಪ್ರಭುತ್ವಕ್ಕಿಂತ ಕುಟುಂಬ ದೊಡ್ಡದು : ಪಂಪ
– ಡಾ. ಎ. ರಘುರಾಂ ೧೯

೩. ಕಲ್ಯಾಣ ಸೀಮೆಯ ಕಾಲುದಾರಿ ಹೆಜ್ಜೆ ಹುಡುಕುತ :
ಕಾಲುದಾರಿ ಪರಂಪರೆಗೆ ಅನಂತದ ನೆನವು
– ಡಾ. ಸಿ.ಬಿ. ಬಿಲ್ಕರಾಗಿ ೨೪

೪. ಕನ್ನಡಕ್ಕೆ ಇನ್ನೊಂದು 'ಕವಿರಾಜಮಾರ್ಗ'
– ಎನ್.ಎಸ್. ಗುಂಡೂರ ೩೮

೫. ತ.ರಾ.ಸು ಪೌರಾಣಿಕ ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆ
– ಡಾ. ಆರ್. ಮಹೇಶ್ ೪೩

೬. ಬೇಂದ್ರೆ ಕಾವ್ಯದಲ್ಲಿ ದೇಸಿಯ ಬೇರುಗಳು
– ಡಾ. ರವಿಶಂಕರ ಎ.ಕೆ. ೫೧

೭. ಸಾಹಿತ್ಯ ಚರಿತ್ರೆ ಎಂಬ ಪರಿಕಲ್ಪನೆಯ ಹರಿಕಾರ ರೆ. ವೈಗಲ್
– ಡಾ. ಚೈತಾಲಿ ಕೆ. ಎಸ್. ೬೩

೮. ಶಾಸನ ಸಂಪಾದನೆಯ ಇತಿಹಾಸ
– ಡಾ. ಟಿ.ಎಲ್. ಜಗದೀಶ ೭೦

೯. ಸರ್ವಜ್ಞನ ವಚನಗಳಲ್ಲಿ ಹೆಣ್ಣು
– ಡಾ. ಬಾಳಪ್ಪ .ಎ.ಬಿ ೮೩

೧೦. ಬುಡಕಟ್ಟು ಸಮುದಾಯದ ಮೌಖಿಕ ಸಾಹಿತ್ಯದಲ್ಲಿ
ಕ್ಯಾತಪ್ಪದೈವದ ಬಾಹುಳ್ಯತೆ
– ಡಾ. ಚಿತ್ತಯ್ಯ ಕೆ ೮೬

Scanned with CamScanner

೧೧. ಸೀದ್ರೆಗೊಲರ್ಲು ಅಥವಾ ಬೆಕ್ಕಿನ ಬಾಯಿ ತೊಳೆದ ಗೊಲ್ಲರು–ಒಂದು ವಿಶ್ಲೇಷಣೆ
– ಡಾ. ಎಸ್. ಶಿವಣ್ಣ ಬೆಳವಾಡಿ ೯೬

೧೨. ಕನ್ನಡ ಮತ್ತು ಡಾ.ರಾಜ್
– ಯರಿಯಪ್ಪ ಬೆಳಗುರ್ಕಿ ೯೮

೧೩. ಆತ್ಮ ಬಲಿದಾನ ಸಾಂಸ್ಕೃತಿಕ ನೋಟ
– ಡಾ. ಶಿವಕುಮಾರ ಕಂಪ್ಲಿ ೧೦೧

೧೪. ಸಿರಿಯಜ್ಜಿ ಸಾಹಿತ್ಯ :
ಬಂಜೆತನ ಕುರಿತ ಪ್ರತಿಸಾಂಸ್ಕೃತಿಕ ಲೋಕದೃಷ್ಟಿ
– ಡಾ. ಮಂಜಣ್ಣ .ಎಂ ೧೦೮

೧೫. ಮಲೆಗಳಲ್ಲಿ ಮದುಮಗಳು : ಗುತ್ತಿಯ ಜಗತ್ತು
– ಡಾ. ಮಂಜುನಾಥ ಪಾಳ್ಯ ೧೧೬

೧೬. ಸಾಹಿತ್ಯಲೋಕದಲ್ಲಿ ಮಿಂಚಿ ಮರೆಯಾದ ಮಹಾಚೇತನ : ಕೊಡಗಿನ ಗೌರಮ್ಮ
– ಡಾ. ಲಾವಣ್ಯ .ಸಿ.ಪಿ ೧೨೫

೧೭. 'ಚಿತ್ರಗ್ರೀವ – ಜೀವಭಾವ ಬೆಸುಗೆಯ ಜೊತೆ ಸಾಹಸಮಯ ಚಿತ್ರಣ
– ಡಾ. ಗಿರೀಶ್ ಮೂಗ್ತಿಹಳ್ಳಿ ೧೩೧

೧೮. ಕನ್ನಕ್ಕಿಯು ಉದಿಸಿದೊಂದು ಮಾಧುರ್ಯದ ಮಹಾಯಾನ
– ಡಾ. ಸತ್ಯಮಂಗಲ ಮಹಾದೇವ ೧೪೩

೧೯. ಜಗನ್ನಾಥದಾಸರ ಸಾಮಾಜಿಕ ಮತ್ತು ಅನುಭಾವಿಕ ನೆಲೆಗಳು
– ಚಿದಾನಂದ ಸಾಲಿ ೧೪೮

Scanned with CamScanner

ವಾರಕರಿ ಪಂಥ ಮತ್ತು ದಾಸಪಂಥ

– ಡಾ. ವಿಠಲರಾವ್ ಟಿ. ಗಾಯಕ್ವಾಡ್

ಭಾರತದ ಮಧ್ಯಕಾಲೀನ ಯುಗದಲ್ಲಿ ನಡೆದ ಭಕ್ತಿ ಚಳವಳಿಗಳು ಬಹಳ ವಿಶಿಷ್ಟವಾದುವು. ವರ್ಣಾಶ್ರಮ ವ್ಯವಸ್ಥೆಯು ಜಾತಿ ವ್ಯವಸ್ಥೆಯಾಗಿ ಪರಿವರ್ತನೆಗೊಂಡುದರಿಂದ ಜನಸಾಮಾನ್ಯರ ನಿತ್ಯ ಜೀವನ ವ್ಯವಸ್ಥೆಯು ಬಹಳ ಅಯೋಮಯವಾಯಿತು. 'ಚಾತುರ್ವರ್ಣ್ಯಂ ಮಯಾಸೃಷ್ಟ್ಯಂ ಗುಣಕರ್ಮ ವಿಭಾಗಶಃ' ಎಂಬ ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ಉವಾಚವಿದೆ. ಅಂದರೆ 'ನಾಲ್ಕು ವರ್ಣಗಳನ್ನು ನಾನು ಸೃಷ್ಟಿಸಿದ್ದೇನೆ. ಅದು ಅವರವರ ಗುಣ ಮತ್ತು ಕರ್ಮಗಳ ನೆಲೆಯಿಂದ' ಎಂಬುದು ಇದರ ಅರ್ಥ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬುವೇ ಆ ನಾಲ್ಕು ವರ್ಣಗಳು. ಕಾಲಕ್ರಮೇಣ ಈ ತತ್ತ್ವದಲ್ಲಿನ ನಿಜವಾದ ಆಶಯವು ಇಲ್ಲವಾಗಿ ಕೇವಲ ಕರ್ಮಪ್ರಧಾನ ನೆಲೆಯಲ್ಲಿಯಷ್ಟೇ ವ್ಯಾಖ್ಯಾನಗೊಳ್ಳಲಾರಂಭಿಸಿತು. ಗುಣ ಮತ್ತು ಕರ್ಮಗಳ ಸಾಮರ್ಥ್ಯದಿಂದ ಯಾರು ಬೇಕಾದರೂ ಯಾವುದೇ ವರ್ಣಕ್ಕಾದರೂ ಹೋಗಬಹುದಾದ ಒಂದು ಸ್ವತಂತ್ರ 'ಸಮಾಜೋ–ಸಾಂಸ್ಕೃತಿಕ' ವ್ಯವಸ್ಥೆಯು ಪ್ರಾಚೀನ ಭಾರತದಲ್ಲಿ ಇದ್ದಿತು ಎಂಬುದು ಇದರಿಂದ ನಮಗೆ ವೇದ್ಯವಾಗುತ್ತದೆ. ಅಂತಹ ಒಂದು ಗಂಭೀರ ವ್ಯವಸ್ಥೆಯು ಕ್ರಮೇಣ ಸಂಪ್ರದಾಯವಾಗಿಯೂ ತದನಂತರದಲ್ಲಿ ಸಂಸ್ಥೆಯಾಗಿಯೂ ರೂಪುಗೊಂಡಿತು. ಪುರೋಹಿತಶಾಹಿಗಳು (Priest class) ಸಾಮಾಜಿಕವಾಗಿ ಹೀಗೆ ವ್ಯಾಖ್ಯಾನಿಸಿ, ಪ್ರರೂಪಿಸಿದಂತಹ ಗಂಭೀರ ವ್ಯವಸ್ಥೆ ಇದು. ಇದರ ಪರಿಣಾಮವಾಗಿ ಜನರು ತಮ್ಮ ಹುಟ್ಟಿದ ಜಾತಿಯು ತಮ್ಮ ಪೂರ್ವ ಕರ್ಮದಿಂದಾದ ವಿಧಿ ನಿಯಾಮಕ ಎಂಬುದಾಗಿ ಭಾವಿಸಿದ ಜನತೆ ತಾರತಮ್ಯಾನುಸಾರ ವ್ಯವಸ್ಥೆಯನ್ನು ಒಪ್ಪಿಕೊಂಡರಲ್ಲದೆ ಅದರಂತೆಯೇ ಜೀವಿಸಲಾರಂಭಿಸಿದರು. ಈ ಪರಿಸ್ಥಿತಿಯು ಸಾವಾಜಿಕ ವ್ಯವಸ್ಥೆಯನ್ನು ಸ್ವತಂತ್ರರಹಿತ ನೆಲೆಯಲ್ಲಿ ಸಂಕೀರ್ಣವಾಗಿರುವಂತೆ ರೂಪುಗೊಳಿಸಿತು ಎಂಬುದು ಗಮನಾರ್ಹವಾದ ಸಂಗತಿಯಾಗಿದೆ.

'ಧ್ರೀಯತೇ ಅನೇನ ಇತಿ ಧರ್ಮಃ' ಅಂದರೆ ಮನುಷ್ಯ ಬದುಕನ್ನು ಉಜ್ವಲಗೊಳಿಸುವಂತಹ ಧಾರಣ ಸ್ವರೂಪವೆ ಧರ್ಮವೆನಿಸುತ್ತದೆ. ಮಾತ್ರವಲ್ಲ,

Scanned with CamScanner

'ಧಾರಣಾದ್ಧರ್ಮಮಿತ್ಯಾಹುಃ' ನಾವು ಬದುಕಿನಲ್ಲಿ ಯಾವುದನ್ನು ಧರಿಸಿರುತ್ತೇವೆಯೋ ಅಥವಾ ಯಾವುದು ನಮ್ಮನ್ನು ಧರಿಸಿರುತ್ತದೆಯೋ ಅದೇ ಧರ್ಮ ಎಂಬುದು ಇದರ ನಿಜವಾದ ಅರ್ಥ. ಜನವಿರೋಧಿ ಸ್ವಾರ್ಥಿಗಳಿಂದ ನಿಜವಾದ ಸಾಮಾಜಿಕ ಸಮಾನತೆಯ ಧರ್ಮವು ಹಾಳಾಗಿ ಅಸಮಾನತೆಯ ವ್ಯವಸ್ಥೆಯೊಂದು ನಿರ್ಮಾಣವಾಯಿತು. ಜನಸಾಮಾನ್ಯರ ಈ ಸಂಕೀರ್ಣ ಅವಸ್ಥೆಗೆ ನಿಜವಾದ ಕಾರಣ ಮತ್ತು ಅದಕ್ಕೆ ಪರಿಹಾರಮಾರ್ಗವನ್ನು ಆಯಾಯ ಸಮಾಜದಲ್ಲಿ ಹುಟ್ಟಿಕೊಂಡ ಮಹಾನ್ ಪುರುಷರೇ ಹುಡುಕಲು ಪ್ರಯತ್ನಿಸಿದರು ಎಂಬುದು ಗಮನಾರ್ಹ ಸಂಗತಿ. ಅಂದರೆ ಧರ್ಮದ ಮೂಲ ನೆಲೆಯಾದ ಭಕ್ತಿ ಭಾವದ ಮೂಲಕವೇ ಧಾರ್ಮಿಕ ಸಂಕೀರ್ಣತೆಗೆ ಒಂದು ಪರಿಹಾರ ಮಾರ್ಗವನ್ನು ತೋರಿಸುವ ಕಾರಣದಿಂದಾಗಿ ಅನೇಕ ಮತಪಂಥ ಇಲ್ಲವೇ ಮತಧರ್ಮಗಳು ಹುಟ್ಟಿಕೊಂಡವು. ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಮಹಾನುಭಾವ, ವಾರಕರಿ, ರಾಮದಾಸಿ ಮೊದಲಾದ ಮತಪಂಥಗಳು ಹುಟ್ಟಿಕೊಂಡುದು ಈ ಹಿನ್ನೆಲೆಯಲ್ಲಿಯೇ. ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಮಧ್ಯಕಾಲೀನ ಯುಗದಲ್ಲಿ ಹುಟ್ಟಿಕೊಂಡ ಸಂತರು, ವಿಭೂತಿ ಪುರುಷರು, ಅವಧೂತರು, ಚೈತನ್ಯ ಪುರುಷರು, ವಿಶ್ವಮಾನ್ಯರು ಮೊದಲಾದವರು ತಮ್ಮ ದೃಷ್ಟಿಧೋರಣೆ ಮತ್ತು ದರ್ಶನಗಳ ಮೂಲಕವಾಗಿ ಜನಸಾಮಾನ್ಯರ ಜೀವನಕ್ಕೆ ಸಂಪುಷ್ಟ ಆಯಾಮವನ್ನು ತರುವುದಕ್ಕೆ ಪ್ರಯತ್ನ ಮಾಡಿದರು ಎಂಬುದು ಮುಖ್ಯ ಸಂಗತಿ. ಈ ಕಾರಣವಾಗಿಯೇ ಅಂತಹವರು ನಮ್ಮ 'ಸಮಾಜೋ-ಧಾರ್ಮಿಕ' ಇತಿಹಾಸದಲ್ಲಿ ತಮ್ಮ ವಿಶಿಷ್ಟ ಕೈಂಕರ್ಯದಿಂದ ಅವಿಸ್ಮರಣೀಯವಾಗಿ ಉಳಿದಿದ್ದಾರೆ.

ಈ ಮಹಾಪುರುಷರಲ್ಲಿ ಎರಡು ವಿಧದ ನೆಲೆಯಲ್ಲಿ ಸಾಧನೆಗೆಯ್ದ ಮಹಾನ್ ವ್ಯಕ್ತಿತ್ವದವರು ಕಾಣಿಸುತ್ತಾರೆ. ಆ ಎರಡು ವಿಧಗಳವರು ಎಂದರೆ ಒಂದು ವ್ಯಕ್ತಿಗತ ನೆಲೆಯವರು ಮತ್ತೊಂದು ಸಾಮಾಜಿಕವಾಗಿ ಜನಸಮೂಹದಲ್ಲಿ ಕಾಣಿಸಿಕೊಂಡವರು. ಅಂತರ್ಮುಖಿತೆ, ಬಿರುಕಿಲ್ಲದ ವ್ಯಕ್ತಿತ್ವ, ಅಂತರಂಗ ಶುದ್ಧತೆ, ಆತ್ಮಾನುಸಂಧಾನ ಮತ್ತು ಬ್ರಹ್ಮಾನಂದ ಸುಖ ಇವುಗಳು ವೈಯಕ್ತಿಕ ನೆಲೆಯಲ್ಲಿ ಆವಿರ್ಭವಿಸಿಕೊಂಡಿರುವಂತಹ ಪ್ರಮುಖ ಅಂಶಗಳು. ಸಾಮಾಜಿಕ ಸ್ತರದವರು ಈ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಸಮಾಜದ ಎಲ್ಲರನ್ನೂ ತಮ್ಮ ಚಿಂತನೆಯಲ್ಲಿ ಸೇರಿಸಿಕೊಂಡು ಅವರ ಜೀವನದ ಎಲ್ಲಾ ಆಗುಹೋಗುಗಳಿಗೂ ಸ್ಪಂದಿಸುವ ವಿಶಿಷ್ಟ ಪ್ರಕ್ರಿಯೆಯನ್ನು ಹೊಂದಿರುವಂತಹವರಾಗಿರುತ್ತಾರೆ. ಈ ಎರಡೂ ನೆಲೆಗಳವರು ತಮ್ಮ ಭಕ್ತಿಭಾವನೆಯ ಚಿಂತನೆ, ಬೋಧನೆಗಳ ಮೂಲಕ ಮಾಡ ಹೊರಟಿದುದೆಂದರೆ, ಸರ್ವಕಾರುಣ್ಯ ಮಹಾತ್ಮ್ಯವನ್ನು ಎಲ್ಲರಿಗೂ ತಿಳಿಸಿಕೊಟ್ಟು ಅವರನ್ನೆಲ್ಲ ದೈವೀ ಸಂಕಲ್ಪನದ ಪರಿಧಿಯಲ್ಲಿ ತಮ್ಮ ಬದುಕಿನ ಸ್ವರೂಪವನ್ನು ದರ್ಶಿಸುವುದಕ್ಕೆ ಅಣಿಗೊಳಿಸುವುದು. ಅದಕ್ಕಾಗಿ ಪರಮಾತ್ಮನ ನಾಮಸಂಕೀರ್ತನೆಗಳ ಮೂಲಕ ಆತ್ಮ-ಪರಮಾತ್ಮರ ಅನುಸಂಧಾನ, ಕಪಟಾಚರಣೆಗಳ ವರ್ಜ್ಯ ಮತ್ತು ಕಟುನಿಂದನೆ, ಜೀವನದ ಬಗೆಗೆ ದಾರ್ಶನಿಕ ದೃಷ್ಟಿಕೋನ

ಮತ್ತು ವಿಮರ್ಶೆಯ ಮೂಲಕ ಆತ್ಮ ಮತ್ತು ಸಾಮಾಜಿಕ ಶುದ್ಧೀಕರಣಕ್ಕೆ ಪ್ರಯತ್ನಿಸಿರುವುದು ಈ ಸಂತಶ್ರೇಷ್ಠರ ಮುಖ್ಯ ಕೈಂಕರ್ಯವಾಗಿತ್ತು. ಈ ದಾಳಿನ ಎಲ್ಲಾ ಪ್ರಶ್ನೆ ಮತ್ತು ಸಂಕೀರ್ಣತೆಗಳಿಗೆ ಉತ್ತರ ಹುಡುಕಿಕೊಡುವ ದಿಶೆಯಲ್ಲಿ ಅನೇಕರು ವಿವಿಧ ನೆಲೆಗಳಿಂದ ಜನ ಬದುಕಿನ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ದಾರ್ಶನಿಕ ಮಾರ್ಗವನ್ನು ಚಿರಸ್ಥಾಯಿಗೊಳಿಸಿರುವುದು ಗಮನಾರ್ಹ. ಶಂಕರಾಚಾರ್ಯ (ಕೇರಳ, ಕ್ರಿ.ಶ. ೭೮೮-೮೨೦), ರಾಮಾನುಜಾಚಾರ್ಯ (ತಮಿಳುನಾಡು, ಕ್ರಿ.ಶ. ೧೦೧೭-೧೧೩೭), ಮಧ್ವಾಚಾರ್ಯ (ಕರ್ನಾಟಕ, ಕ್ರಿ.ಶ. ೧೨೩೮-೧೩೧೭), ವಲ್ಲಭಾಚಾರ್ಯ (ಆಂಧ್ರಪ್ರದೇಶ, ಕ್ರಿ.ಶ. ೧೪೭೯-೧೫೩೧), ಸಂತ ಸೂರದಾಸ (ಹರಿಯಾಣ, ಕ್ರಿ.ಶ.ಸು. ೧೪೭೯-೧೫೪೦), ಸಂತ ಮೀರಾಬಾಯಿ (ಪಶ್ಚಿಮ ಬಂಗಾಳ, ಕ್ರಿ.ಶ.೧೫೪೭-೧೬೧೪), ಸಂತ ಜ್ಞಾನೇಶ್ವರ (ಮಹಾರಾಷ್ಟ್ರ, ಕ್ರಿ.ಶ.೧೨೭೫-೧೨೯೬), ಸಂತ ನಾಮದೇವ (ಮಹಾರಾಷ್ಟ್ರ, ಕ್ರಿ.ಶ. ೧೨೭೦), ಸಂತ ಏಕನಾಥ (ಮಹಾರಾಷ್ಟ್ರ, ಕ್ರಿ.ಶ. ೧೫೩೩-೧೫೯೯), ಸಂತ ರಾಮದಾಸ (ಮಹಾರಾಷ್ಟ್ರ, ಕ್ರಿ.ಶ. ಸು. ೧೬೦೮), ಸಂತ ತುಕಾರಾಮ (ಮಹಾರಾಷ್ಟ್ರ, ಕ್ರಿ.ಶ. ೧೬೦೮-೧೬೪೯) ವ್ಯಾಸರಾಜತೀರ್ಥ (ಕರ್ನಾಟಕ, ಕ್ರಿ.ಶ. ೧೪೬೦-೧೫೩೯), ಭಕ್ತ ಪುರಂದರದಾಸ (ಕರ್ನಾಟಕ, ಕ್ರಿ.ಶ.೧೪೮೪-೧೫೬೪), ಗುರುನಾನಕ್ (ಪಂಜಾಬ್, ಕ್ರಿ.ಶ. ೧೪೬೯-೧೫೨೪), ಶ್ರೀಕೃಷ್ಣಚೈತನ್ಯ (ಪ.ಬಂಗಾಳ, ಕ್ರಿ.ಶ. ೧೪೮೪-೧೫೩೨), ಸಂತ ತುಳಸೀದಾಸ (ಉತ್ತರ ಪ್ರದೇಶ, ಕ್ರಿ.ಶ. ೧೪೯೭-೧೫೩೨) ಈ ಮೊದಲಾದ ಸಂತ-ಮಹಾಂತರು ಮಧ್ಯಕಾಲೀನ ಯುಗದಲ್ಲಿ ಭಕ್ತಿ ಪರಂಪರೆಯನ್ನು ಜೀವನದ ಶ್ರೇಷ್ಠ ಮೌಲ್ಯಗಳ ಮೂಲಕವಾಗಿ ಸ್ಥಾಪಿಸಿ ಪ್ರರೂಪಿಸಿದವರು.

ಸಂತ ಜ್ಞಾನೇಶ್ವರ ಮತ್ತು ಭಕ್ತ ಪುರಂದರದಾಸರು ಹುಟ್ಟುಹಾಕಿದ ಸಮಾಜೋ ಧಾರ್ಮಿಕ ಚಿಂತನೆಗಳು ತಂತಮ್ಮ ಕಾಲದ ಸಾಮಾಜಿಕ ಸಂಕೀರ್ಣತೆಗಳನ್ನು ವಿಶೇಷವಾಗಿ ಗಮನಿಸಿ ಅದಕ್ಕೆ ಭಕ್ತಿ ಮತ್ತು ಆಧ್ಯಾತ್ಮಿಕ ಧೋರಣೆಗಳಿಂದ ಅಪಾರ ಜನಸಮುದಾಯಕ್ಕೆ ಹೊಸ ದಾರಿಯನ್ನು ತೋರಿಸಿ ಕೊಡುವುದರ ಮೂಲಕ ಅವರ ಬದುಕಿನ ಪ್ರಶ್ನೆಗಳಿಗೆ ವಿಶೇಷವಾಗಿ ಸ್ಪಂದಿಸಿದವರು. ನಾಥಪಂಥದ ದೀಕ್ಷೆ ಪಡೆದಿದ್ದ ಸಂತ ಜ್ಞಾನೇಶ್ವರರು ಅದರಲ್ಲಿಯೇ ಉಳಿಯದೆ ತಮ್ಮದೇ ಆದ ಚಿಂತನೆಗಳ ಚೌಕಟ್ಟಿನಲ್ಲಿ 'ವಾರಕರಿ ಪಂಥ'ವನ್ನು ಹುಟ್ಟು ಹಾಕಿದರು. ಹಾಗೆಯೇ ಭಕ್ತ ಪುರಂದರದಾಸರು ವ್ಯಾಸರಾಜತೀರ್ಥರ ಶಿಷ್ಯರಾಗಿದ್ದು, ಮಧ್ವಾಚಾರ್ಯರ ದ್ವೈತ ತತ್ತ್ವವನ್ನು ಒಪ್ಪಿಕೊಂಡಿದ್ದರೂ ಅಲ್ಲಿಯೇ ನಿಲ್ಲದೆ, 'ವ್ಯಾಸಕೂಟ'ವನ್ನು ಬಿಟ್ಟು 'ದಾಸಕೂಟ'ದ ಮೂಲಕ ಸರ್ವಜನರ ಜೀವನದ ಸಂಕೀರ್ಣತೆಗಳಿಗೆ ತಮ್ಮ ಕೀರ್ತನೆಗಳ ಮೂಲಕ ಭಕ್ತಿಯುತ ಪರಿಹಾರಗಳನ್ನು ತೋರಿಸಿ ಜನರ ಮನಸ್ಸಿಗೆ ಸಮಾಧಾನ ಮತ್ತು ಆನಂದವನ್ನು ಉಂಟುಮಾಡಿದವರಾಗಿದ್ದಾರೆ. ಇಬ್ಬರೂ ಸಂತರು ಮುಖ್ಯವಾಗಿ ಜನಸಮುದಾಯದ ನಡುವೆಯೇ ಬದುಕಿದವರು ಮತ್ತು ಜನ ಸಮುದಾಯದ

Scanned with CamScanner

ಆಶೋತ್ತರಗಳನ್ನು ಅರಿತು ಆ ದಿಶೆಯಲ್ಲಿಯೇ ಬಹಳ ಗಂಭೀರವಾಗಿ ಚಿಂತಿಸಿದವರು ಎಂಬುದನ್ನು ಅವಶ್ಯವಾಗಿ ಗಮನಿಸಬೇಕು.

ಸಂತ ಜ್ಞಾನೇಶ್ವರ ಮಹಾರಾಜರು ಬ್ರಾಹ್ಮಣರಾಗಿದ್ದರೂ ಬಹಳ ಸಂಕಷ್ಟಮಯವಾದ ಜೀವನವನ್ನು ನಡೆಸಬೇಕಾಯಿತು. ತಂದೆ ವಿಠ್ಠಲಪಂತರು ತಾವು ಸಂನ್ಯಾಸತ್ವವನ್ನು ಸ್ವೀಕರಿಸಿ ಮತ್ತೆ ಸಂಸಾರಕ್ಕೆ ಬಂದವರು. ವಿಠ್ಠಲಪಂಥ ಮತ್ತು ರುಕ್ಮಿಣಿಬಾಯಿ ದಂಪತಿಗಳಿಗೆ ನಿವೃತ್ತಿನಾಥ, ಜ್ಞಾನೇಶ್ವರ, ಸೋಪಾನದೇವ ಮತ್ತು ಮುಕ್ತಾಬಾಯಿ ಎಂಬ ನಾಲ್ವರು ಮಕ್ಕಳು ಜನಿಸಿದರು. ಸಂನ್ಯಾಸ ಸ್ವೀಕರಿಸಿದ ನಂತರದಲ್ಲಿ ಜನಿಸಿದ ಈ ಮಕ್ಕಳು ಬ್ರಾಹ್ಮಣ ವರ್ಣಕ್ಕೆ ಸ್ವೀಕಾರಾರ್ಹವಲ್ಲ ಎಂಬ ಕಾರಣದಿಂದ ಅವರ ಮುಂಜಿಯ ಕಾಲಕ್ಕೆ ಕರ್ಮನಿಷ್ಠ ಬ್ರಾಹ್ಮಣ ವರ್ಗವು ತೀವ್ರವಾಗಿ ವಿರೋಧಿಸಿತು. ಅವರ ಪ್ರಕಾರ ಸಂನ್ಯಾಸಿಗಳಿಗೆ ಜಾತಿ, ಕುಲ, ವರ್ಣ ಮತ್ತು ಅಧಿಕಾರಗಳಾವುವೂ ಇಲ್ಲ. ಹಾಗಾಗಿ ಈ ಮಕ್ಕಳು ಬ್ರಾಹ್ಮಣರಲ್ಲ. ಹಾಗೆಯೇ ಕ್ಷತ್ರಿಯ, ವೈಶ್ಯ, ಶೂದ್ರ ವರ್ಗಕ್ಕೂ ಸೇರುವುದಿಲ್ಲ ಎಂಬುದಾಗಿ ವಾದಿಸಿದರು. ಇದಕ್ಕೆ ಪರಿಹಾರವಾಗಿ ಪೈಠಣ ಕ್ಷೇತ್ರಕ್ಕೆ ಹೋಗಿ ಪ್ರಾಯಶ್ಚಿತ್ತ ಪಡೆದು ಅಲ್ಲಿಂದ ಶುದ್ಧಿ ಪತ್ರವನ್ನು ತೆಗೆದುಕೊಂಡು ಬಂದರಷ್ಟೇ ಇದು ಸಾಧ್ಯವಾಗಬಹುದು ಎಂಬುದಾಗಿ ಸೂಚಿಸಿದರು. ಅದರಂತೆ ನಿವೃತ್ತಿನಾಥ, ಜ್ಞಾನದೇವಾದಿ ಸೋದರರು ಪೈಠಣಕ್ಕೆ ಬಂದು ಅಲ್ಲಿ ಹಲವಾರು ಚಮತ್ಕಾರಗಳನ್ನು ತೋರಿಸಿ, ಕೋಣನ ಬಾಯಲ್ಲಿ ಮಂತ್ರವನ್ನು ಹೇಳಿಸಿ ತಮ್ಮ ಅಸೀಮ ಸಾಮರ್ಥ್ಯವನ್ನು ಆ ಜನಕ್ಕೆ ತೋರಿಸಿದರು. ಕೊನೆಗೆ ಹೇಮಾಡಪಂತ ಮತ್ತು ಬೋಪದೇವರು ಈ ಸೋದರರಿಗೆ 'ಶುದ್ಧಿಪತ್ರ'ವನ್ನು ನೀಡಿದರಾದರೂ ಆಳಂದಿಯ ಬ್ರಾಹ್ಮಣವರ್ಗ ಅದನ್ನು ಒಪ್ಪಲಿಲ್ಲ. ಪ್ರಾಯಶ್ಚಿತ್ತವೆಂದರೆ ಜೀವ ಬಿಡುವುದು ಎಂಬುದಾಗಿ ಹೇಳಿದರು. ಅದನ್ನು ಒಪ್ಪಿಕೊಂಡ ವಿಠ್ಠಲಪಂತ, ರುಕ್ಮಿಣಿಬಾಯಿ ದಂಪತಿಗಳು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಇಂದ್ರಯಾಣಿ ನದಿಗೆ ಹಾರಿ ಪ್ರಾಣತ್ಯಾಗ ಮಾಡಿದರು. ತಮ್ಮ ತಂದೆ ತಾಯಿಯರ ಪ್ರಾಣತ್ಯಾಗ ಪ್ರಸಂಗವನ್ನು ಕಣ್ಣಾರೆ ಕಂಡಿದ್ದ ಜ್ಞಾನೋಬಾದಿ ಸೋದರರು ಈ ಕರ್ಮಠ ಬ್ರಾಹ್ಮಣರ ಉಪಟಳಕ್ಕೆ ಬೇಸತ್ತು ಅನ್ಯಮಾರ್ಗದ ಬಗೆಗೆ ಯೋಚಿಸುತ್ತಿದ್ದರು. ಆ ಹೊತ್ತಿಗಾಗಲೆ ಹಿರಿಯ ಸೋದರ ನಿವೃತ್ತಿನಾಥನು ನಾಥಪಂಥದ ಗುರು ಗಹಿನಿನಾಥರಿಂದ ಸಂನ್ಯಾಸವನ್ನು ಸ್ವೀಕರಿಸಿದ್ದನು. ಈ ಗಹಿನಿನಾಥರು ಕನಿಫ್‌ನಾಥ ಅಥ ಕಾನ್ಹೋಬಾರ ಶಿಷ್ಯರಾಗಿದ್ದರು. ನಾಥಪಂಥದ ಸಂಸ್ಥಾಪಕ ಆದಿನಾಥನನ್ನು 'ತ್ರಿಪುರಾರಿ' ಎಂಬ ವಿಶೇಷಣದಿಂದ ಕರೆಯಲಾಗಿದೆ. 'ನಾಥ' ಎಂದರೆ 'ಒಡೆಯ' ಅಥವಾ 'ಸ್ವಯಂಸಿದ್ಧ' ಎಂಬ ಅರ್ಥವಿದೆ. ನಾಥಪಂಥದಲ್ಲಿ 'ನವನಾಥ ಪರಂಪರೆ'ಯು ಬಹಳ ಗಂಭೀರವಾದುದು. ಮಚ್ಚೀಂದ್ರ ಅಥವಾ ಮತ್ಸ್ಯನಾಥ, ಗೋರಕ್ಷನಾಥ ಅಥವಾ ಗೋರಖನಾಥ, ಜಲಂಧರನಾಥ ಅಥವಾ ಜಾನಪೀರ, ಕನೀಫನಾಥ ಅಥವಾ ಕಾನ್ಹೋಬಾ, ಗಹಿನೀನಾಥ ಅಥವಾ ಗೈಬಿಪೀರ, ಭಾರತೀನಾಥ ಅಥವಾ ರಾಜ ಭರತಾರಿ, ರೇವಣನಾಥ ಅಥವಾ ರೇವಣಸಿದ್ಧ ಅಥವಾ ಕಾಡಸಿದ್ಧ, ಚರಪತಿನಾಥ,

ನಾಗನಾಥ ಅಥವಾ ನಾಗೇಶನಾಥ ಎಂಬ ಒಂಬತ್ತು ಜನರು ಈ ನವನಾಥ ಪರಂಪರೆಯಲ್ಲಿ ಹೆಸರಿಸಲ್ಪಟ್ಟಿದ್ದಾರೆ. ಹೀಗೆ ನಾಥಪಂಥದ ದೀಕ್ಷೆಯನ್ನು ಪಡೆದುಕೊಂಡಿದ್ದ ನಿವೃತ್ತಿನಾಥನೇ ಮುಂದೆ ತನ್ನ ಎಲ್ಲಾ ಸೋದರರಿಗೂ ಗುರುವಾಗಿ ನಾಥಪಂಥದ ದೀಕ್ಷೆಯನ್ನು ನೀಡಿದನು. ನಾಥಪಂಥ ಬಹುಶ್ರುತ ಧಾರೆಯನ್ನು ಹೊಂದಿರುವ ನೆಲೆಯದ್ದಾಗಿದೆ. ಅದರ ಒಂದು ಧಾರೆ ಸಂತ ಜ್ಞಾನೇಶ್ವರರ ನೇತೃತ್ವದಲ್ಲಿ 'ವಿಷ್ಣುಸಹಿತ ಶಿವ' ಎಂಬ ಅದ್ವೈತ ಪ್ರಣೀತ ವೈದಿಕ ಧಾರೆಯನ್ನು ಹುಟ್ಟುಹಾಕಿ ಜನಪ್ರಿಯಗೊಳಿಸಿತು. ಮತ್ತೊಂದು ಧಾರೆ ಅಲ್ಲಮಪ್ರಭುದೇವರ ನೇತೃತ್ವದಲ್ಲಿ ಶಕ್ತಿವಿಶಿಷ್ಟಾದ್ವೈತ ಪ್ರಣೀತ ಶೈವಧಾರೆಯನ್ನು ಜನಪ್ರಿಯಗೊಳಿಸಿತು. ಈ ಅಲ್ಲಮರು ನಾಥಪಂಥದ ಗುರುಗಳಲ್ಲಿ ಶಿಷ್ಯರಾಗಿದ್ದರು ಎಂಬುದು ಗಮನಾರ್ಹ.

ಜ್ಞಾನೇಶ್ವರಾದಿ ಸೋದರರ ಕುಟುಂಬದವರಿಗೆ ನಾಥಪಂಥ ಹೊಸದಾದುದೇನು ಆಗಿರಲಿಲ್ಲ. ಈ ಪಂಥದಲ್ಲಿಯೇ ಹೆಸರಿಸಲಾಗಿರುವ ತ್ರಯಂಬಕ ಎಂಬುವವರು ಜ್ಞಾನೇಶ್ವರಾದಿ ಸೋದರರಿಗೆ ಮುತ್ತಜ್ಜ. ತ್ರಯಂಬಕರ ಮಗ ಗೋವಿಂದ ಪಂತ, ಇವರ ಮಗ ವಿಠ್ಠಲಪಂತ ಎಂಬುದಾಗಿ ಹೇಳಲಾಗಿದೆ. ಈ ವಿಠ್ಠಲಪಂತರು ವೈದಿಕ ಪರಂಪರೆಯ ಅನುಸಾರ ಸಂನ್ಯಾಸ ದೀಕ್ಷೆಯನ್ನು ಶ್ರೀಪಾದಸ್ವಾಮಿ ಎಂಬುವವರಿಂದ ಪಡೆದಿದ್ದರು. ಆಗ ವಿಠ್ಠಲಪಂತರ ಪೂರ್ವಾಶ್ರಮದ ಹೆಸರನ್ನು ಬಿಟ್ಟು 'ಚೈತನ್ಯಾಶ್ರಮ' ಎಂಬ ಹೆಸರನ್ನು ನೀಡಲಾಗಿತ್ತು. ಅನಂತರ ಅವರು 'ಎಲ್ಲಿ ಹೋದರೂ ಮುತ್ತುಗಕ್ಕೆ ಮೂರೇ ಎಲೆ' ಎಂಬಂತೆ ಅಲ್ಲಿಯೂ ಶಾಂತ ಮನಃಸ್ಥಿತಿಯನ್ನು ಕಾಣಲಾಗದೆ ವಾಪಸ್ಸು ಸಂಸಾರಕ್ಕೆ ಬಂದರು. ಇದು ಕೂಡಾ ಸಾಧ್ಯವಾಯಿತು ಗುರು ಶ್ರೀಪಾದಸ್ವಾಮಿಗಳ ಕಾರಣದಿಂದಲೇ. ಹೀಗೆ ಹಿಂದೆ ತಮ್ಮ ಕುಟುಂಬದವರು ಸಂಬಂಧ ಹೊಂದಿದ್ದಂತಹ ನಾಥಪಂಥದ ಮೂಲಕ ಜ್ಞಾನೇಶ್ವರಾದಿ ಸೋದರರು ಕೆಲವಾರು ವಿಶಿಷ್ಟ ತಾತ್ತ್ವಿಕ ವಿಚಾರಗಳ ಮೂಲಕ 'ವಾರಕರಿ' ಎಂಬ ಹೊಸ ಪಂಥವನ್ನು ಸ್ಥಾಪಿಸಿದರು. ಇದರಲ್ಲಿ ನಾಥಪಂಥದ ತತ್ತ್ವಗಳೊಂದಿಗೆ ಬ್ರಹ್ಮಸೂತ್ರದ ಆಧಾರದ ಮೇಲೆ ಹುಟ್ಟುಹಾಕಿದ್ದ ಶ್ರೀಶಂಕರಾಚಾರ್ಯರ ಅದ್ವೈತ ಮತ್ತು ಶ್ರೀರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಮತಗಳ ಅನೇಕ ಅಂಶಗಳೂ ಸೇರಿಕೊಂಡಿವೆ. ಆದರೆ ಜ್ಞಾನೇಶ್ವರರು ಅದ್ವೈತ ಮತ್ತು ವಿಶಿಷ್ಟಾದ್ವೈತ ಪಂಥದ ಎಲ್ಲಾ ತತ್ತ್ವಗಳನ್ನು ಹಾಗೆಯೇ ಸ್ವೀಕರಿಸಲಿಲ್ಲ. ಶಂಕರರ ಅದ್ವೈತದಲ್ಲಿ ಸ್ತ್ರೀ–ಶೂದ್ರರಿಗೆ ಮೋಕ್ಷದ ನೆಲೆಯನ್ನು ಎಲ್ಲಿಯೂ ಹೇಳಿಲ್ಲ. ಹಾಗೆಯೇ ರಾಮಾನುಜರ ವಿಶಿಷ್ಟಾದ್ವೈತದಲ್ಲಿನ ಸವ್ಯೂಹ, ನಿರ್ವ್ಯೂಹ ಚಿಂತನೆಗಳನ್ನು ಒಪ್ಪಿಕೊಂಡರೂ ಅಲ್ಲಿನ ಚಾತುರ್ವರ್ಣ್ಯ ಪದ್ಧತಿಯಲ್ಲಿನ ದೋಷಗಳನ್ನು ಒಪ್ಪಿಕೊಳ್ಳುವುದಿಲ್ಲ. ಜ್ಞಾನೇಶ್ವರ ಮಹಾರಾಜರು ಸಾಂಪ್ರದಾಯಿಕ ವ್ಯವಸ್ಥೆಗಳಲ್ಲಿನ ಕಠಿಣ ವಿಚಾರಗಳನ್ನು ಒಪ್ಪದೆ ಎಲ್ಲರಿಗೂ ಮೋಕ್ಷ ಮಾರ್ಗವನ್ನು ಸಾಧ್ಯವಾಗಿಸುವ ದಿಶೆಯಲ್ಲಿ ತಮ್ಮದೇ ಆದ ಹಲವಾರು ಚಿಂತನೆಗಳನ್ನು ಇಟ್ಟುಕೊಂಡು ವಾರಕರಿ ಪಂಥವನ್ನು ಹುಟ್ಟುಹಾಕಿದರು. ವಾರಕರಿ ಎಂದರೆ ಯಾವ ಕರ್ಮಠ ನಿಷ್ಠೆಯ ಆಚರಣೆಯೂ

Scanned with CamScanner

ಇಲ್ಲದೆ ಸರಳ ಶುದ್ಧವಾದ ಭಕ್ತಿಯಿದು. ತಮ್ಮ ಆರಾಧ್ಯ ದೈವ ಶ್ರೀವಿಠ್ಠಲನನ್ನು ಪೂಜಿಸುವುದು. ಇದರಲ್ಲಿ ಯಾವುದೇ ಲಿಂಗಭೇದವಾಗಲಿ, ಜಾತಿ ಭೇದವಾಗಲಿ ಇಲ್ಲ. 'ಜ್ಞಾನದೇವ ರಚಿಲಾ ಪಾಯಾ' ಎಂಬ ಧ್ವನಿಯು ಎಲ್ಲೆಡೆಯೂ ಸರ್ವಮಾನ್ಯವಾಗಿದೆ. ಹಾಗೆಯೇ ಸಂತ ಏಕನಾಥನು ದೇಗುಲವಾದರೆ, ಸಂತ ತುಕಾರಾಮನು ಕಳಸವೆನಿಸಿ ಕೊಂಡಿದ್ದಾನೆ. ಈ ವಾರಕರಿ ಪಂಥದ ಆರಾಧ್ಯ ದೇವರು ಪಂಢರಪುರದ 'ಶ್ರೀವಿಠ್ಠಲ'. ಆದರೆ ಈ ದೇವರ ವರ್ಣನೆಯು ಮಾತ್ರ ದಶಾವತಾರಗಳಲ್ಲಿ ಇಲ್ಲ. ಪುರಾಣಗಳಲ್ಲಿ ಉಲ್ಲೇಖಿಗಳಿಲ್ಲ, ವಿಷ್ಣುಪುರಾಣದಲ್ಲಿಯೂ ಇಲ್ಲ. ಹಾಗೆಯೇ ವೇದ, ಶಾಸ್ತ್ರ, ಪುರಾಣ ಶ್ರುತಿ, ಸ್ಮೃತಿಗಳಲ್ಲಿಯೂ ಇಲ್ಲ. ಆದರೂ ಇಷ್ಟೊಂದು ಜನಪ್ರಿಯನಾಗಿ ಮಹಾರಾಷ್ಟ್ರದ ಭಕ್ತಜನರ ಮಾನಸಲೋಕದಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದುಕೊಂಡಿರುವ ದೇವರೆನಿಸಿದ್ದಾನೆ. ಹಾಗಾದರೆ ಈ ದೇವರು ಯಾರು ಎಂಬುದಕ್ಕೆ ಒಂದು ಕಥನವಿದೆ. ಭಕ್ತ ಶಿರೋಮಣಿ ಪುಂಡಲೀಕನನ್ನು ಭೇಟಿಮಾಡುವುದಕ್ಕಾಗಿ ದ್ವಾರಕೆಯಿಂದ ಬಂದ ದೈವ ಶ್ರೀಕೃಷ್ಣ. ಆಗ ತನ್ನ ತಂದೆ-ತಾಯಿಯರ ಸೇವೆಯಲ್ಲಿ ಇದ್ದಂತಹ ಭಕ್ತ ಪುಂಡಲೀಕನು ತನ್ನ ಸೇವೆ ಮುಗಿಯುವವರೆಗೂ ಇಟ್ಟಿಗೆಯ ಮೇಲೆ ನಿಲ್ಲುವಂತೆ ಸೂಚಿಸಿ ಇಟ್ಟಿಗೆಗಳನ್ನು ಎಸೆದ. ಆ ನಿಜಭಕ್ತನ ಸೂಚನೆಯ ಅನುಸಾರ ಅವುಗಳ ಮೇಲೆ ನಿಂತ ಶ್ರೀಕೃಷ್ಣನೇ ವಿಠ್ಠಲ ಎನಿಸಿಕೊಂಡು ಕಳೆದ ಇಪ್ಪತ್ತೆಂಟು ಯುಗಗಳಿಂದಲೂ ಇಲ್ಲಿಯೇ ಇದ್ದಾನೆ ಎಂಬ ಕಥನವೊಂದು ಮಾತ್ರ ನಮಗೆ ಸಿಕ್ಕಿರುವುದಾಗಿದೆ.

'ಪುಂಡಲಿಕೇ ಭಕ್ತೇ ತಾರಿಲೇ ವಿಶ್ವಜನ।
ವೈಕುಂಠೀಚೀ ಮೂರ್ತೀ ಆಣಿಲೀ ಪಂಢರಪುರಪಾಟಣಾ॥
ಕಾಯಾ ವಾಚಾ ಮನೇ ಜೀವೇ ಸರ್ವಸ್ವೇ ಉದಾರ।
ಬಾಪರಖಿಮಾದೇವೀವರ ವಿಠ್ಠಲಾಚಾ ವಾರೀಕರ॥'

(ಭಕ್ತ ಪುಂಡಲಿಕನು ತನ್ನ ಕಾರ್ಯದಿ ವಿಶ್ವಜನರ ದರುಶನಕೆ ನಿಲಿಸಿಹನಿಂತು ವೈಕುಂಠದ ಮೂರ್ತಿಯನು ಪಂಢರಪುರದೊಳು, ಕಾಯಾ, ವಾಚಾ, ಮನಸೊಳಗೆ ಜೀವಿಸಿರಲೆಂದು ಉದ್ಧಾರದಿ, ಬಾಪರಖಿಮಾದೇವೀವರ ವಿಠ್ಠಲನ ವಾರಕರಿ.) ವಿಠ್ಠಲ, ವಿಠೋಬಾ, ವಿಠೂಮಾವುಲಿ ಎಂದು ಮುಂತಾಗಿ ಭಕ್ತಜನರಿಂದ ಸ್ತುತಿಸಲ್ಪಡುವ ಈ ದೇವರು ದಕ್ಷಿಣ ಭಾರತಾದ್ಯಂತ ಬಹಳ ದೊಡ್ಡ ಭಕ್ತ ಸಮುದಾಯವನ್ನು ಹೊಂದಿದೆ. 'ವಿಟ್+ಠ+ಲ'= ವಿಠ್ಠಲ ಎಂದರೆ 'ವಿತ್ತ ವೇದನಂ ಜ್ಞಾನಂ, ತೇನ ಠಾಃ ಶೂನ್ಯಃ ತಾನಲಾತಿ ಸ್ವೀಕರೋತಿ' (ಶ್ರೀಕಾಶಿನಾಥ ಉಪಾಧ್ಯೆ: ವಿಠ್ಠಲ ಋಗ್ಮಂತ್ರ ಸಾರಭಾಷ್ಯ), 'ವಿ+ಠೋಬಾ' ವಿಠೋಬಾ ಎಂದರೆ 'ಜ್ಞಾನ+ಆಕಾರ', 'ಗರುಡ+ಆಸನ' (ಸಂತ ತುಕಾರಾಮ). ಹೀಗೆ ವಿಷ್ಣುವೇ ವಿಠ್ಠಲ ಎಂಬುದು ಎಲ್ಲಾ ಸಂತರ ಅಭಿಮತ. ವಿಷ್ಣು>ವಿಟ್ಟು>ವಿಟ್ಠಲ>ವಿಠ್ಠಲ ಎಂಬುದಾಗಿ ಶಬ್ದ ಸ್ವರೂಪವನ್ನು ಗುರುತಿಸಲಾಗಿದೆ. ವಿಷ್ಣುವಿನ ಅಷ್ಟಾವತಾರ ಮತ್ತು ಪೂರ್ಣಾವತಾರವಾದ ಶ್ರೀಕೃಷ್ಣ ದೇವರು ಮತ್ತು ಶ್ರೀವಿಠ್ಠಲ ದೇವರು ಒಂದೇ ಎಂಬ ನಂಬಿಕೆ ಸಂತ, ಭಕ್ತರದ್ದು. ಶ್ರೀಕೃಷ್ಣನ ಜನನ

ಶ್ರಾವಣವದ್ಯ ಅಷ್ಟಮಿ ಬುಧವಾರ. ಶ್ರೀವಿಠ್ಠಲನ ಆರಾಧನ ವಾರವೂ ಬುಧವಾರ. ವಿಠ್ಠಲ ದೇವರಿಗೂ ರುಕ್ಮಿಣಿ, ರಾಧೆಯರ ಕಥನಗಳಿವೆ. ವಿಠ್ಠಲ ಭಕ್ತಿ ಭಜನ ಸಂಪ್ರದಾಯವು ಜ್ಞಾನೇಶ್ವರಾದಿಗಳ ಕಾಲಕ್ಕೆ ಆಗಲೇ ಬಹಳ ಜನಪ್ರಿಯವಾಗಿತ್ತು. ನೇವಾಸೆ ಬಹಳ ಪ್ರಮುಖ ಸ್ಥಳ. ಅದನ್ನು ವಾರಕರಿ ಸಂಪ್ರದಾಯದ ಪ್ರಮುಖ ಅಂಶವಾಗಿ ಮಾಡಿಕೊಂಡ ಜ್ಞಾನೇಶ್ವರಾದಿ ಸಂತರು ಪಂಢರಪುರವನ್ನು ವಿಠ್ಠಲ ತಮ್ಮ ಅಭಂಗಗಳ ಭಜನೆಗಳ ಮೂಲಕ ಭಕ್ತಿಮಯಗೊಳಿಸಿದರು. ಆವರೆಗೆ ಪ್ರಮುಖ ಸ್ಥಳವಾಗಿದ್ದ ಪೈಠಣದಿಂದ ಪಂಢರಪುರಕ್ಕೆ ಧಾರ್ಮಿಕ ಸ್ಥಳವನ್ನು ವರ್ಗಾಯಿಸಲಾಯಿತು. ಇದರಿಂದಾಗಿ ಪೈಠಣದ ಕರ್ಮಠ ಬ್ರಾಹ್ಮಣ ವರ್ಗದವರ ಕಪಿಮುಷ್ಠಿಯಿಂದ ಮಹಾರಾಷ್ಟ್ರದ ಬ್ರಾಹ್ಮಣ ಮತ್ತು ಬಹುಸಂಖ್ಯಾತ ಬ್ರಾಹ್ಮಣೇತರ ವರ್ಗಕ್ಕೆ ಬಿಡುಗಡೆ ದೊರೆಯಿತು ಎಂಬುದಾಗಿಯೂ ಹೇಳಬಹುದು. ಆ ಹೊತ್ತಿಗಾಗಲೇ ನೇವಾಸೆಯಲ್ಲಿ ವಿಠ್ಠಲ ಭಜನಾ ಮಂಡಳಿಯು ಇತ್ತು. ಅದರ ಸ್ವರೂಪದಲ್ಲಿ ತಮ್ಮ ಆರಾಧ್ಯ ದೈವ ಶ್ರೀವಿಠ್ಠಲನನ್ನು ಕುರಿತು ಅಭಂಗಗಳನ್ನು ರಚಿಸಿ ಹಾಡುತ್ತಾ ಪಂಢರಪುರದತ್ತ ನಡೆದರು. ಏಕಿಲೆಯಲ್ಲಿ ರೂಪುಗೊಂಡು ಸಮಪಾದಚರಣಗಳನ್ನು ಹೊಂದಿರುವ ಅಭಂಗ ಸ್ವರೂಪಿ ದೈವವೇ ಶ್ರೀವಿಠ್ಠಲ.

ಪಂಢರಪುರಕ್ಕೆ ಆಷಾಢ, ಕಾರ್ತಿಕ ಮತ್ತು ಮಾಘ ಮತ್ತು ಚೈತ್ರ ಏಕಾದಶಿಗಳಂದು ವಾರಿ ಹೋಗುವ ಪದ್ಧತಿಯು ಜ್ಞಾನೇಶ್ವರರಿಗೂ ಪೂರ್ವದಿಂದಲೇ ಇತ್ತು ಎಂಬುದಾಗಿ ಕೆಲವರು ಹೇಳುತ್ತಾರೆ.

'ಮಹಾಯೋಗಪೀಠೇ ತಟೇ ಭೀಮರಥ್ಯಾಂ।
ವರಂಪುಂಡರೀಕಾಯ ದಾತುಂ ಮುನೀದ್ರೈಃ॥
ಸಮಾಗತ್ಯ ನಿಷ್ಟಂತಮನಾನಂದಕಂದಂ।
ಪರಬ್ರಹ್ಮಲಿಂಗಂ ಭಜೇ ಪಾಂಡುರಂಗಂ॥'

ಎಂಬ 'ಪಾಂಡುರಂಗಾಷ್ಟಕಂ' ಕೃತಿಯ ಉಲ್ಲೇಖವನ್ನು ಗಮನಿಸಿದಾಗ ವಾರಕರಿ ಸಂಪ್ರದಾಯವು ಸುಮಾರು ಆರು, ಏಳನೆಯ ಶತಮಾನದ ಹೊತ್ತಿಗಾಗಲೇ ಚಾಲ್ತಿಯಲ್ಲಿತ್ತು. ಬಹಳ ದೂರದ ಸ್ಥಳಗಳಿಂದ ಜನರು ವಾರಿಗಳಾಗಿ ಪಂಢರಪುರದ ಶ್ರೀವಿಠ್ಠಲನ ದರ್ಶನಕ್ಕೆ ಬರುತ್ತಿದ್ದರು ಎಂಬುದಾಗಿ ಹೇಳಬಹುದು. ಇನ್ನು ಪಂಢರಪುರದ ಶ್ರೀವಿಠ್ಠಲ ದೇವಾಲಯದ ಪ್ರಾಚೀನ ಉಲ್ಲೇಖವು ನಮಗೆ ಕ್ರಿ.ಶ. ಸು.೫೯೬ರ ತಾಮ್ರಪಟದಲ್ಲಿ ಇದ್ದು, ಅದನ್ನು ಮೈಸೂರು ಸರ್ಕಾರದ ೧೯೨೯ರಲ್ಲಿ ಪುರಾತತ್ತ್ವ ಇಲಾಖೆಯ ವತಿಯಿಂದ ಪ್ರಕಟಿಸಲಾಗಿದೆ. ಈ ತಾಮ್ರಪಟದ ಪ್ರಕಾರ ಅಂದು ದೇವದತ್ತ ಎಂಬಾತನು ಪಂಢರಪುರದ ದೇವಾಲಯದ ಪ್ರಮುಖ ಅಧಿಕಾರಿಯಾಗಿದ್ದನು. ಆತನು ಅಂದು ವಾರಕರಿಗಳಾಗಿ ಬಂದು ಹೋಗುವವರ ಬಗೆಗೆ ಉಲ್ಲೇಖಿಸಿದ್ದಾನೆ. ಈ ಪ್ರಕಾರ ಈ ದೇವಾಲಯದಲ್ಲಿನ ವಿಠ್ಠಲ ಮೂರ್ತಿಯು ಸುಮಾರು ನಾಲ್ಕು, ಐದನೆಯ ಶತಮಾನದಷ್ಟು ಹಳೆಯದಾಗಿರಬಹುದು ಎಂಬುದಾಗಿ ಊಹಿಸುವುದಕ್ಕೆ ಸಾಧ್ಯವಿದೆ. ಆದರೆ ವಾರಕರಿ ಪಂಥವು ಸಮಾಜೋ-ಧಾರ್ಮಿಕ ಚಳವಳಿಯಾಗಿ ಭಕ್ತಿಪೂರ್ಣ

Scanned with CamScanner

ನೆಲೆಯಿಂದ ರೂಪುಗೊಂಡುದು ಮಾತ್ರ ಸಂತ ಜ್ಞಾನೇಶ್ವರರಿಂದಲೇ ಎಂಬುದು ಗಮನಾರ್ಹ.

'ಕಾಶಿಯೇ ಕನೌಜು, ದ್ವಾರಕೆ ಗುಜರೂ, ಕಾನಡಾ ವಿಠ್ಠಲೂ ಪಂಢರಿಯೇ', 'ತೀರ್ಥ ವಿಠ್ಠಲ, ಕ್ಷೇತ್ರ ವಿಠ್ಠಲ', 'ಐಸೇ ತೀರ್ಥ ಉತ್ತಮೋತ್ತಮ। ಆಣಿಕ ನಾಹೀ ಯಾ ಸಮ। ಶಿವಪೀತ ಹೇ ಮನೋರಮ। ಅಲಂಕಾಮರೀ ಹೇ ದೇವ' ಎಂಬ ಉಲ್ಲೇಖಗಳು ಕಾಶಿ, ದ್ವಾರಕೆಗಳ ಹಾಗೆಯೇ ಅಸೀಮ ಮತ್ತು ಅಮೇಯ ಶ್ರೀವಿಠ್ಠಲನು ನೆಲೆಸಿರುವ ಪಂಢರಪುರವೂ ವಿಶಿಷ್ಟ ಧಾರ್ಮಿಕ ಸ್ಥಳ ಎಂಬುದು ಇದರಿಂದ ವಿದಿತವಾಗುವುದು. 'ತ್ರಿಭುವ ನಾಮೇ ತೀನ ಅಕ್ಷರೇ ವಿಠ್ಠಲ ನಾಮಾಚೇ, ಘ್ಯಾತಿ ತಯಾಚೀ ಪಾತಕ ಜಳತಿಲ ಜನ್ಮೋಜನ್ಮೀಚೇ' (ವಿಠ್ಠಲ ಎಂಬ ಮೂರು ಅಕ್ಷರಗಳ ಉಚ್ಚಾರಣೆಯು ಮೂರು ಲೋಕಕೆ ಸಮ, ಅದನು ಪಠಿಸಲು ಸುಡುವುದು ಜನ್ಮಜನ್ಮಗಳ ಪಾತಕಗಳೆಲ್ಲ) ಎಂಬ ಸಾರ್ಥಕ ಭಾವವು ಸಂತರಲ್ಲಿ ವ್ಯಕ್ತವಾಗಿದೆ. ಇನ್ನು ಸಂತ ಜ್ಞಾನೇಶ್ವರರೇ ತಮ್ಮ ಒಂದು ಅಭಂಗದಲ್ಲಿ ಹೇಳಿರುವಂತೆ 'ಕಾನಡಾ ವಿಠ್ಠಲೂ ಕರುನಾಟಕೂ, ತ್ಯಾನೇ ಮಲಾ ಲಾವಿಲಾ ವೇಧೂ'. 'ಬಾಪ ರಖುಮಾದೇವಿವರಾ ವಿಠ್ಠಲಾಸೀ ಭೇಟೀ। ಸಂಸಾರಾಸೀ ತುಟೇ ಜಾಲೀ ಗೇ ಮಾಯೇ।', 'ಸೌಭಾಗ್ಯ ಸುಂದರ ಗುಣಲಾವಣ್ಯ ಸಾಗರೂ', 'ನಾಚತಾ ಪಂಢರೀಸೀ ಜಾವೂ ರೇ ಖೇಳೀಯಾ। ವಿಠ್ಠಲ ರಖುಮಾಈ ಪಾಹೂರೇ', 'ಕಾಯಾ ವಾಚಾ ಮನೇ ಜೀವೇ ಸರ್ವಸ್ವೇ ಉದಾರ। ಬಾಪರಖುಮಾದೇವೀವರೂ ವಿಠ್ಠಲಾಚಾ ವಾರೀಕರ॥' 'ತೇ ಮಾಝೇ ಸೋಯರೇ ಸಜ್ಜನ ಸಾಂಗಾತೀ।, ಜೇ ಕಾ ಆಠವಿತೀ ಪಾಯ ವಿಠೋಬಾಚೀ', 'ಚಂದ್ರಭಾಗೇ ಸ್ನಾನ ವಿಧೀ ತೋ ಹರಿಕಥಾ। ಸಮಾಧಾನ ಚಿತ್ತಾ ಸರ್ವ ಕಾಳ॥', 'ಸಂಪತ್ತೀ ಸೋಹಳಾ ನಾವಡೇ ಮನಾಲಾ। ಲಾಗಲಾ ಟಕಳಾ ಪಂಢರೀಚಾ।', ಎಂಬುವು ಆತ್ಮಸಮರ್ಪಣದ ಆತ್ಯಂತಿಕ ಅಭಿವ್ಯಕ್ತಿಯಾಗಿವೆ. ವಾರಕರಿಗಳು ಪಾಲಿಸಬೇಕಾದ ಕೆಲವು ಅಂಶಗಳನ್ನು ಅವರು ಆತ್ಮಿಕವಾಗಿ ಅನುಸರಿಸುವಂತೆ ಪ್ರಬೋಧಿಸಿದರು: 'ಸತ್ಯವನ್ನು ಹೇಳುವುದು, ಪರಸ್ತೀಯನ್ನು ತಾಯಿಯ ಸಮಾನವಾಗಿ ನೋಡುವುದು, ಏನಾದರೂ ತಪ್ಪುಗಳು ತಿಳಿಯದೆ ಉಂಟಾದರೆ ಅದನ್ನು ವಿಠ್ಠಲ ಮಾತೆಯಲ್ಲಿ ನಿವೇದಿಸಿಕೊಂಡು ಕ್ಷಮೆ ಕೋರುವುದು, ನಿತ್ಯವೂ ಶುದ್ಧ ಮತ್ತು ಸಾತ್ವಿಕವಾದ ಆಹಾರವನ್ನು ಸೇವನೆ ಮಾಡುವುದು, ವರ್ಷದಲ್ಲಿ ಒಮ್ಮೆಯಾದರೂ ಪಂಢರಿಗೆ ಮತ್ತು ಆಳಂದಿಗೆ ವಾರಿ ಹೋಗುವುದು, ಏಕಾದಶಿ ವ್ರತವನ್ನು ತಪ್ಪದೆ ಪಾಲಿಸುವುದು, ಪ್ರತಿದಿನವೂ 'ಜೈ ಜೈ ರಾಮಕೃಷ್ಣಹರಿ' ಎಂಬ ಮಂತ್ರವನ್ನು ೧೦೮ ಬಾರಿ ಪಠಿಸುವುದು, ಹರಿಪಾಠವನ್ನು ಉಚ್ಚರಿಸದೆ ಭೋಜನ ಮಾಡಬಾರದು, ಜ್ಞಾನೇಶ್ವರಿ–ಏಕನಾಥಿ ಭಾಗವತ–ಶ್ರೀತುಕಾರಾಮ ಗಾಥಾ ಗ್ರಂಥಗಳನ್ನು ನಿಯಮಿತವಾಗಿ ವಾಚನ ಮಾಡುವುದು, ಜ್ಞಾನದೇವರ ಪಸಾಯದಾನವನ್ನು ಹೇಳದೆಯೆ ನಿದ್ರೆ ಮಾಡದಿರುವುದು, ನಿಯಮದಂತೆ ಸ್ನಾನ ಮಾಡಿದ ಮೇಲೆ ಗೋಪಿಚಂದನ ಧರಿಸುವುದು, ಹಣೆಗೆ ಗಂಧವನ್ನು ಹಚ್ಚಿಕೊಂಡ

ಮೇಲೆಯೇ ವ್ಯವಹಾರ ವನ್ನು ಆರಂಭ ಮಾಡುವುದು, ಪ್ರಪಂಚದಲ್ಲಿ ತನ್ನ ಪಾಲಿಗೆ ಬಂದ ಕಾರ್ಯವನ್ನು ಶ್ರೀವಿಠ್ಠಲನ ಸಾಕ್ಷಿಯಾಗಿ ಪ್ರಾಮಾಣಿಕವಾಗಿ ಮಾಡಿರುವೆನೋ ಇಲ್ಲವೋ ಎಂಬುದನ್ನು ನಿವೇದನೆ ಮಾಡುವುದಕ್ಕಾಗಿ ಪ್ರತಿವರ್ಷವೂ ವಾರಿ ಯಾತ್ರೆಗೆ ಹೋಗುವುದು' ಈ ಮೊದಲಾದ ಅಂಶಗಳು ಪ್ರತಿಯೊಬ್ಬ ವಾರಿಯಲ್ಲಿಯೂ ಆತ್ಮಸಂಯೋಗಗೊಂಡಿದ್ದವು. ಹಿಂದೆ ಒಂದು ಮಾತು ಪ್ರಚಲಿತದಲ್ಲಿತ್ತು, 'ವಾರಕರೀ ವಾರೀತ ಪಾಹಾವಾ; ವಾರೀತ ನ ದಿಸಲಾ ತರ ವಿಠ್ಠಲ ಚರಣೀ ರುಜೂ ಝಾಲ ಸಮಜಾವಾ. (ವಾರಕರಿಯನ್ನು ವಾರಿಯಲ್ಲಿ ನೋಡಬೇಕು; ವಾರಿಯಲ್ಲಿ ಕಾಣದೆ ಇದ್ದರೆ ವಿಠ್ಠಲನ ಚರಣದಲ್ಲಿ ಲೀನಗೊಂಡಿಹನು ಎಂಬುದಾಗಿ ಭಾವಿಸಬೇಕು.) ಸಂತರುಗಳಾದ ಗೋರಾ ಕುಂಭಾರ, ಜನೀ ದಾಸಿ, ಚೋಖಾಮೇಳ, ಸಾವತಾ ಮಾಳಿ, ನರಹರಿ ಸೋನಾರ, ಕಾನ್ಹೋಪಾತ್ರರಂತಹ ಸಾಮಾನ್ಯ ಜನವರ್ಗದ ಪ್ರತಿನಿಧಿತ್ವದಲ್ಲಿ ಮಹತ್ವದ ವಿಠ್ಠಲ ಭಕ್ತಿ ಮಾರ್ಗವೊಂದನ್ನು ರೂಪಿಸಿದರು.

ಭಕ್ತಿ ಮತ್ತು ಕರ್ಮ ಯೋಗವನ್ನು ಸಂಲಗ್ನಗೊಳಿಸುವ ನಿಟ್ಟಿನಲ್ಲಿ ಸಂತ ಜ್ಞಾನೇಶ್ವರರು 'ಭಗವದ್ಗೀತೆ'ಯನ್ನು 'ಜ್ಞಾನೇಶ್ವರಿ'ಯಾಗಿ ರೂಪಿಸಿದರು. 'ಭಗವದ್ಗೀತೆ'ಯು ಮರಾಠಿಯಂತಹ ಪ್ರಾದೇಶಿಕ ಭಾಷೆಯಲ್ಲಿ ಮೊತ್ತಮೊದಲಿಗೆ ವಿಸ್ತಾರಾನುವಾದದ ಮೂಲಕ ರೂಪಿಸಿದ ಮಹಾನ್ ಶ್ರೇಯಸ್ಸು ಸಂತ ಜ್ಞಾನೇಶ್ವರರಿಗೆ ಸಲ್ಲುವುದು. 'ಉಭಾರಿಲಾ ಧ್ವಜ ತಿಹೀ ಲೋಕಾವರೀ। ಐಸೀ ಚರಾಚರಿ ಕೀರ್ತಿ ಜ್ಯಾಚೀ॥' ಎಂಬುದಾಗಿ ಸಂತ ಸಮೂಹವು ಅವರನ್ನು ಶ್ಲಾಘಿಸಿದೆ. ಕರ್ಮ, ಜ್ಞಾನ, ಭೋಗ ಮತ್ತು ಭಕ್ತಿಗಳ ನೆಲೆಯಿಂದ ಸಂತ ಜ್ಞಾನೇಶ್ವರರು ತಮ್ಮ ಕರ್ಮಯೋಗ ತತ್ತ್ವವನ್ನು ಬೋಧಿಸಿದ್ದಾರೆ. ಮೂಲತಃ ಕರ್ಮಯೋಗಿ, ಜ್ಞಾನಯೋಗಿ, ಭಕ್ತಿಯೋಗಿ, ವಿರಕ್ತಿಯೋಗಿ ಮತ್ತು ಅನುಭಾವಿ ಅದ್ವೈತಿಯಾದ ಜ್ಞಾನೇಶ್ವರರು ವಿಠ್ಠಲ–ರುಕ್ಮಿಣಿಯರನ್ನು ಶಿವ ಮತ್ತು ಶಕ್ತಿಯರ ಅಪರೂಪದ ದಾಂಪತ್ಯವಾಗಿ ತಮ್ಮ ಕೃತಿ 'ಜ್ಞಾನೇಶ್ವರಿ'ಯಲ್ಲಿ ಚಿತ್ರಿಸಿದ್ದಾರೆ. 'ಕಣ್ಣುಗಳು ಎರಡಿದ್ದರೂ ನೋಡುವ ನೋಟವು ಎರಡಲ್ಲ, ಒಂದೇ; ದಡಗಳು ಎರಡಿದ್ದರೂ ನದಿಯು ಮಾತ್ರ ಒಂದೇ; ತುಟಿಗಳು ಎರಡಿದ್ದರೂ ಹೊರಡುವ ಮಾತು ಮಾತ್ರ ಒಂದೇ' ಎಂಬಂತಹ ಅದ್ವೈತ ಪೂರ್ಣ ದೃಷ್ಟಿಯು ಜ್ಞಾನೇಶ್ವರರದು.

'ವೇದು ಸಂಪನ್ನ ಹೋಯೇ ಠಾಈ। ಪರೀ ಕೃಪಣು ಆನ ನಾಹೀ।
ಜೇ ಕಾನೀ ಲಾಗಲಾ ತಿಹೀ। ವರ್ಣಾಚಾಂಚೀ॥
ಏರಾ ಭವವ್ಯಥಾ ಠೇಲೇಯಾ। ಸ್ತ್ರೀ ಶೂದ್ರಾದಿಕಾ ಪ್ರಾಣಿಯಾ।
ಅನವಸರೂ ಸಾಂಡೂನಿಯಾ। ಅಸೇ ನವ್ಹೇ॥'

(ವೇದವು ಸಂಪನ್ನವಾದುದು, ಅಂತೆ ಕೃಪಣವೂ ಆಹುದು. ಕೇಳುತಿಹುದು ಕವಿಗಳಿಗೆ, ಮೂರು ವರ್ಣಗಳವರಿಗಷ್ಟೆ ಉಳಿದವರಿಗೆಲ್ಲ ತಂದಿದೆ ಭವವ್ಯಥೆ, ಸ್ತ್ರೀಶೂದ್ರಾದಿಗಳನು ಪ್ರಾಣಿಗಳಂದದಿ. ನೀಡಿಲ್ಲ ಅವರಿಗೆ ಅವಕಾಶ, ಅಂತಲ್ಲವು ಈ ಪರಿವೇಶ) ಹೀಗೆ ಅಭಂಗ ಕೀರ್ತನೆಗಳನ್ನು ಅವರು ಸಮಾಜ ಪರಿವರ್ತನ ಮಾಧ್ಯಮವಾಗಿ ಮಾಡಿಕೊಂಡು ಸಮಸ್ತ ಸಂತರ ಒಡಗೂಡಿ ಸರ್ವರಲ್ಲಿಯೂ ಅಹಂಕಾರ ನಿರಸನಕ್ಕೆ ಮತ್ತು ಕರ್ಮಪ್ರಧಾನ

Scanned with CamScanner

ಭಕ್ತಿಭಾವವನ್ನು ಪ್ರೋಜ್ವಲಗೊಳಿಸಿದರು. ಈ ಹಿನ್ನೆಲೆಯಿಂದಾಗಿಯೇ ಸಂತ ಜ್ಞಾನೇಶ್ವರರು ಶ್ರೀಶಂಕರಾಚಾರ್ಯರ ಅದ್ವೈತದಲ್ಲಿನ ಈ ಲೋಪವನ್ನು ಅರಿತು ತಮ್ಮ ಪಂಥದಲ್ಲಿ ಭಿನ್ನವಾದ ನಿಲವೊಂದನ್ನು ರೂಪಿಸಿ, ಸ್ತ್ರೀ ಶೂದ್ರಾದಿಗಳೆಲ್ಲರೂ ವಾರಕರಿ ಪಂಥದಲ್ಲಿ ಭಾಗವಹಿಸುವುದಕ್ಕೆ ಅವಕಾಶ ಸಾಧ್ಯತೆಯನ್ನು ರೂಪಿಸಿದರು. ಈ ಪಂಥದಲ್ಲಿ ನಾಥಪಂಥದ ಸಾಮಾಜಿಕ ವ್ಯವಸ್ಥೆ ಮತ್ತು ಕಾಶ್ಮೀರ ಶೈವದ ಅನುಭಾವಿಕ ನೆಲೆ ಸಮಾವೇಶಗೊಂಡಿವೆ. 'ಭಕ್ತ–ದೇವರು–ಮೋಕ್ಷ' ಎಂಬ ಸರಳವಾದ ಭಕ್ತಿಯ ನೆಲೆಯಲ್ಲಿ ಸಂತ ಜ್ಞಾನೇಶ್ವರರ 'ಜ್ಞಾನೇಶ್ವರಿ' ಕಾವ್ಯವು ರಚನೆಗೊಂಡಿದೆ. ಸಂತ ಜ್ಞಾನೇಶ್ವರರಿಗೆ ವಿಶ್ವಸೌಂದರ್ಯದ ಪ್ರತೀಕ, ಸಂತ ನಾಮದೇವರಿಗೆ ಪ್ರೇಮ ಸ್ವರೂಪಿ, ಸಂತ ಏಕನಾಥರಿಗೆ ಲೀಲಾವತಾರಿ, ಸಂತ ತುಕಾರಾಮರಿಗೆ ಪತಿತರ ಪಾಲಕ ದೇವರಾಗಿ ಶ್ರೀವಿಠ್ಠಲ ಕಾಣಿಸಿದ್ದಾನೆ.

'ಅಮೃತಾಹುನೀ ಗೋಡ ನಾಮ ತುಝೇ ದೇವಾ ನಾಮ ತುಝೇ ದೇವಾ।
ಮನ ಮಾಝೆ ಕೇಶವ ಕಾ ಬಾ ನೇಫೇ' – ಸಂತ ಜ್ಞಾನೇಶ್ವರ
(ಅಮೃತಕಂತಲೂ ಸಿಹಿಯು ನಿನ್ನ ನಾಮವು ದೇವಾ, ನಿನ್ನ ನಾಮವದು ದೇವ,
ಅಂತಿರಲು ನನ್ನ ಮನವದೇಕೆ ಪಠಿಸದು ಕೇಶವ)
'ನಾಮ ಗಾಊ ನಾಮ ಘ್ಯಾಊ। ನಾಮೇ ವಿಠೋಬಾಸೀ ಪಾಹೂ'
– ಸಂತ ನಾಮದೇವ
(ನಾಮದೇವನು ಹಾಡಿಹನು, ನಾಮದೇವನು ಹಿಡಿದಿಹನು, ನಾಮದೇವನಿಂತು
ವಿಠ್ಠಲನ ನೋಡಿಹನು)
'ಆನಂದಾಚೇ ಡೋಹೇ ಆನಂದ ತರಂಗ।
ಆನಂದಾಚೇ ಅಂಗ, ಆನಂದಾಚೇ ಅಂಗ...

ಸಂತ ತುಕಾರಾಮ (ಆನಂದದಿ ಹರಿದಿಹುದು ಆನಂದ ತರಂಗವು, ಆನಂದದಿ ಅಂಗವು, ಆನಂದದಿ ಅಂಗವು) ಸಂತ ಜ್ಞಾನೇಶ್ವರರ ಈ ವಿಶಿಷ್ಟ ಭಕ್ತಿ ಚಳವಳಿಯಿಂದಾಗಿ ಸಕಲ ಮಹಾರಾಷ್ಟ್ರವು ವಿಶಿಷ್ಟ ಭಕ್ತಿಭೂಮಿಯಾಗಿ ಮಾರ್ಪಾಟಾಯಿತು. ಆ ಹೊತ್ತಿಗಾಗಲೇ ಅದ್ವೈತ ಪಂಥದ ಶ್ರೀಶಂಕರಾಚಾರ್ಯರ ಅನುಯಾಯಿಗಳಾದ ಶ್ರೀಅಚಲಾನಂದಸ್ವಾಮಿ ಎಂಬುವವರು ಕರ್ನಾಟಕ ಮತ್ತು ತಮಿಳುನಾಡಿನ ಹಲವು ಪ್ರದೇಶಗಳಲ್ಲಿ ವಿಠ್ಠಲನ ಆರಾಧನ ಸಂಪ್ರದಾಯವನ್ನು ಆರಂಭಿಸಿದ್ದರು. ಅವರು ಸ್ಥಾಪಿಸಿದ ಮಠಗಳ ಉಲ್ಲೇಖವು ಇಂತಿದೆ: ೧. ಪಂಡರಿಗೆ (ಪಂಢರಪುರ), ೨. ಕಳಸಾ (ಚಿಕ್ಕಮಗಳೂರು), ೩. ವಿದ್ಯಾನಗರ ಅಥವಾ ವಿಜಯನಗರ (ಬಳ್ಳಾರಿ), ೪. ಕೆಳದಿ (ಶಿವಮೊಗ್ಗ), ೫. ರಾಮೇಶ್ವರ (ತಮಿಳುನಾಡು) ೬ ಕಾಶಿ (ಉತ್ತರಪ್ರದೇಶ). ಹಾಗೆಯೇ ವಿಶಿಷ್ಟಾದ್ವೈತ ಪಂಥದ ಅನುಯಾಯಿಗಳು ವೆಂಕಟೇಶ್ವರ>ವಿಠ್ಠಲ ಒಂದೇ ಎಂಬ ನೆಲೆಯಿಂದಲೂ ವಿಠ್ಠಲನ ಆರಾಧನೆಯನ್ನು ಮಾಡುತ್ತಿದ್ದರು. ಜ್ಞಾನೇಶ್ವರಾದಿಗಳ ನಂತರ ಮುಂದೆ ದ್ವೈತ ಪಂಥದ ಸ್ಥಾಪಕರಾದ ಶ್ರೀ ಮಧ್ವಾಚಾರ್ಯರು ಕೂಡಾ ಉಡುಪಿಯ ಅಷ್ಟ ಮಠಗಳಲ್ಲಿ ಬರುವ ಪಲಮಾರು, ಪುತ್ತಿಗೆ ಮತ್ತು ಶಿರೂರ ಎಂಬ ಮೂರರಲ್ಲಿ ಶ್ರೀವಿಠ್ಠಲನ ಮೂರ್ತಿಗಳನ್ನು ಮಾಡಿಸಿ ಆರಾಧನೆಗೆ ಚಾಲನೆ ನೀಡಿದರು. ಅಲ್ಲದೆ

ತಮ್ಮ ಶಿಷ್ಯರಿಗೆ 'ವಿಠ್ಠಲ' ಎಂಬ ಅಂಕಿತದ ಮೂಲಕ ಭಕ್ತಿ ಭಜನಾ ಸಾಹಿತ್ಯವನ್ನು ರಚಿಸುವಂತೆ ಆದೇಶ ನೀಡಿದ್ದರು ಎನ್ನಲಾಗಿದೆ. ಮುಂದೆ ಮಧ್ವಾಚಾರ್ಯರ ಆದೇಶದಂತೆ ಮೂವತ್ತೇಳು ಜನ ದಾಸರು ವಿಠ್ಠಲನ ಅಂಕಿತ ನಾಮವನ್ನು ಇಟ್ಟುಕೊಂಡು ಕೀರ್ತನೆಗಳನ್ನು ರಚಿಸಿದರು. ಅವರಲ್ಲಿ ಶ್ರೀಪುರಂದರದಾಸರು ಬಹಳ ಪ್ರಮುಖರಾದವರು.

ಕರ್ನಾಟಕದ ಹರಿದಾಸ ಪಂಥ

ಕರ್ನಾಟಕದಲ್ಲಿ ಹರಿದಾಸ ಸಂಪ್ರದಾಯವು ಕ್ರಿ.ಶ.ಸು. ೯ನೆಯ ಶತಮಾನದಿಂದಲೇ ಅದ್ವೈತಿ ಅಚಲಾನಂದರ ಕಾಲದಿಂದಲೇ ಆರಂಭಗೊಂಡಿತೆಂದು ಜಿ.ವರದರಾಜರಾವ್ ಅವರು ತುಕೇಕೇರಿ ಹಸ್ತಪ್ರತಿಯ ಆಧಾರದಿಂದ ದಾಖಲಿಸಿದ್ದಾರೆ. ಮುಂದೆ ಶ್ರೀನರಹರಿತೀರ್ಥರ ಮೂಲಕವಾಗಿ ಈ ಹರಿದಾಸ ಪಂಥಕ್ಕೆ ಹೊಸ ತೀವ್ರತೆಯು ದೊರೆಯಿತು. ಹರಿದಾಸ ಪರಂಪರೆಯಲ್ಲಿ ನಾಲ್ಕು ಘಟ್ಟಗಳನ್ನು ಗುರುತಿಸಲಾಗಿದೆ:

೧. ಶ್ರೀಪಾದರಾಜ ಪೂರ್ವ ಯುಗ (ಕ್ರಿ.ಶ. ೮೭೯–೧೪೫೦)
೨. ಶ್ರೀಪಾದರಾಜ ಯುಗ (ಕ್ರಿ.ಶ. ೧೪೫೧ ರಿಂದ ೧೫೬೨)
೩. ಶ್ರೀವ್ಯಾಸರಾಜ ತೀರ್ಥ, ಶ್ರೀ ಪುರಂದರದಾಸ, ಶ್ರೀಕನಕದಾಸ
೪. ಶ್ರೀವಿಜಯದಾಸರ ಯುಗ (ಕ್ರಿ.ಶ. ೧೫೬೬ ರಿಂದ ೧೮೦೯)
೫. ಶಿಷ್ಯ–ಪ್ರಶಿಷ್ಯ ಯುಗ (ಕ್ರಿ.ಶ. ೧೮೧೦ರಿಂದ ಮುಂದೆ)

ಹರಿದಾಸ ಪಂಥದವರು ತಮ್ಮ ಈ ನೆಲೆಗೆ ರಾಮಾಯಣದ ಶ್ರೀಹನುಮಾನ್ ದೈವವನ್ನು ಅನುಕರಿಸಿದ್ದಾರೆ. 'ದಾಸೋಹಂ ಕೋಸಲೇಂದ್ರಸ್ಯ' ಎಂಬ ಶ್ರೀಹನುಮಾನ್ ದೇವರ ಉವಾಚವನ್ನು ಆಧರಿಸಿ ತಾವು ಶ್ರೀಹರಿಯ ದಾಸರು ಎಂಬುದಾಗಿ ಗುರುತಿಸಿಕೊಂಡಿದ್ದಾರೆ.

ದಾಸಪಂಥದಲ್ಲಿ ಪುರಂದರದಾಸ ಮತ್ತು ಕನಕದಾಸರ ಹೆಸರುಗಳು ಬಹಳ ಪ್ರಮುಖವಾದವು. 'ದಾಸರೆಂದರೆ ಪುರಂದರದಾಸರಯ್ಯಾ' (ವ್ಯಾಸರಾಜ ತೀರ್ಥ) ಮತ್ತು 'ನಾಡಾಡಿಯಂತೆಯೇ ಮಾಡಿಬಿಟ್ಟ ಇವಗೆ ನಾಡೆಲ್ಲ ಹುಡುಕಿದರು ಈಡಾರ ಕಾಣೆ' (ಪುರಂದರದಾಸ) ಎಂಬ ಉಲ್ಲೇಖಗಳು ಇವರಿಬ್ಬರೂ ದಾಸರ ಹಿರಿಮೆ ಮತ್ತು ಗರಿಮೆಯ ದ್ಯೋತಕಗಳಾಗಿವೆ. ಪುರಂದರದಾಸ ಮತ್ತು ಕನಕದಾಸರು ಮುಖ್ಯವಾಗಿ ದಾಸಪೀಠದ ಅಧ್ವರ್ಯುಗಳು. ಇಬ್ಬರೂ ವೈಚಾರಿಕ ಆಯಾಮದಲ್ಲಿಯೇ ಮನುಷ್ಯ ಬದುಕಿಗೆ ಅತ್ಯಗತ್ಯವಾದ ಶುದ್ಧ ಭಕ್ತಿ ಮತ್ತು ಅಧ್ಯಾತ್ಮಿಕ ದರ್ಶನದ ಮೂಲಕ ಇಡೀ ನಾಡಿಗೆ ಹೊಸ ಬಗೆಯಲ್ಲಿ ಚೇತನ ನೀಡಿದವರಾಗಿದ್ದಾರೆ. ಪುರಂದರದಾಸರು ವ್ಯಾಸರಾಯ ತೀರ್ಥರಿಗೆ ಬಲಗೈ ಇದ್ದಂತೆ ಇದ್ದರು. ಶುದ್ಧ ಮಧ್ವ ಪಂಥದ ಅನುಯಾಯಿಗಳಾಗಿದ್ದ ಪುರಂದರದಾಸರು ತಮ್ಮ ಅಂಕಿತ ನಾಮವಾಗಿ 'ಪುರಂದರ ವಿಠಲ' ಎಂದು ಇಟ್ಟುಕೊಳ್ಳುವ ಮೂಲಕ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಭಕ್ತಿ ಪರಂಪರೆಯಲ್ಲಿ ವಿಶೇಷವಾಗಿ ಉಲ್ಲೇಖಿತರಾಗಿದ್ದಾರೆ.

Scanned with CamScanner

ಪುರಂದರದಾಸರು ಕ್ರಿ.ಶ. ಸು. ೧೪೮೦ರಿಂದ ೧೫೬೫ರವರೆಗೆ ಜೀವಿಸಿದ್ದ ಒಬ್ಬ ಮಹಾನ್ ದಾರ್ಶನಿಕ ದಾಸವರೇಣ್ಯರು. ಅವರ ಹುಟ್ಟೂರು ಪುಣೆಯ ಹತ್ತಿರದ ಪುರಂದರಗಡ ಎಂಬ ಊರು ಎಂದು ಹೇಳಲಾಗಿದೆ. ಇದು ಪುಣೆಗೆ ಹದಿನೆಂಟು ಮೈಲುಗಳಷ್ಟು ದೂರದಲ್ಲಿದ್ದು ಅವರ ಆರಾಧ್ಯ ದೈವ ಶ್ರೀವಿಠ್ಠಲನು ನೆಲೆಸಿರುವ ಪಂಢರಪುರಕ್ಕೆ ಹತ್ತಿರದಲ್ಲಿದೆ. ಕನ್ನಡದ ಆದಿಕವಿ ಪಂಪನಂತೆಯೇ ಪುರಂದರದಾಸರೂ ಕೂಡ ಈಗ ಬೇರೆ ರಾಜ್ಯದಲ್ಲಿರುವ ಪ್ರದೇಶದಲ್ಲಿ ಹುಟ್ಟಿದವರು ಎಂಬುದನ್ನು ನಿರಾಕರಿಸುವುದಕ್ಕೆ ಸಾಧ್ಯವಿಲ್ಲ. ಕೆಲವರ ಪ್ರಕಾರ ಇವರು ಕರ್ನಾಟಕದವರೇ ಇರಬೇಕು ಎಂಬ ಅಭಿಪ್ರಾಯವೂ ಇದೆ. "ಪುರಂದರದಾಸರ ಜನ್ಮಸ್ಥಳ ಪುರಂದರಪುರ, ಪಾಕಶಾಸನಪುರ, ಪುರಂದರಾಲಯ ಘಟ್ಟಿ ಮುಂತಾಗಿ ಹೇಳಿದ್ದಾರೆ. ಶ್ರೀಆದ್ಯ ರಾಮಾಚಾರ್ಯರು ಹಲವು ದುರ್ಬಲ ಆಧಾರಗಳಿಂದ 'ಪುರಂದರದಾಸರ ಜನ್ಮಸ್ಥಳವು ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನಲ್ಲಿ ಇರುವ ಕ್ಷೇಮಪುರ ಎಂದು ಅಭಿಪ್ರಾಯ ಪಟ್ಟಿದ್ದಾರೆ." "ಮಹಾರಾಷ್ಟ್ರದಲ್ಲಿ ಹುಟ್ಟಿದ ಪುರಂದರದಾಸರು ಅಚ್ಚಗನ್ನಡ ಕೀರ್ತನೆಗಳನ್ನು ರಚಿಸಲು ಮತ್ತು ಕರ್ನಾಟಕದ ಹಲವಾರು ದೇವಸ್ಥಾನಗಳನ್ನು ನೆನೆಯಲು ಹೇಗೆ ಸಾಧ್ಯ? ಎಂದು ಕೇಳುವ ಆದ್ಯರು ಪಂಪ ಮಹಾಕವಿಯು ಆಂಧ್ರಪ್ರದೇಶದ ಕರೀಮನಗರ ಜಿಲ್ಲೆಯ ಬೋಧನದಲ್ಲಿದ್ದು ಅಚ್ಚಗನ್ನಡದಲ್ಲಿ ಹಾಗೂ ನೂರಾರು ಮೈಲು ದೂರದಲ್ಲಿರುವ ಬನವಾಸಿಯನ್ನು ವರ್ಣಿಸುತ್ತ ಮಹಾಕಾವ್ಯ ಬರೆದ ಮಾತು ಗಮನಿಸಿದರೆ ಉತ್ತರ ದೊರೆಯದಿರದು. ಹುಟ್ಟೂರು ಯಾವುದಾದರೂ ಕವಿ ತನ್ನ ಮಾತೃಭಾಷೆಯ ಮೇಲಿನ ಪ್ರಭುತ್ವವನ್ನು ಕಳೆದುಕೊಳ್ಳಲಾರ." (ವಾಸುದೇವ ಅಗ್ನಿಹೋತ್ರಿ: ಪುರಂದರದಾಸರು ಮತ್ತು ಶ್ರೀಮದ್ಭಾಗವತ: ಒಂದು ತೌಲನಿಕ ಅಧ್ಯಯನ, ಪು. ೩೦) ಈ ಮೇಲಿನ ಎರಡು ಉಲ್ಲೇಖಗಳನ್ನು ಗಮನಿಸಿದರೆ ಬಹಳಷ್ಟು ಜನ ವಿದ್ವಾಂಸರು ಪುರಂದರದಾಸರು ಈಗಿನ ಮಹಾರಾಷ್ಟ್ರ ರಾಜ್ಯದವರು ಎಂಬುದಾಗಿಯೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆ ಹೊತ್ತಿಗೆ ಮಹಾರಾಷ್ಟ್ರದಲ್ಲಿ ಸಂತ ಜ್ಞಾನೇಶ್ವರಾದಿಗಳು ಪಂಢರಪುರದ ವಿಠ್ಠಲನ ಆರಾಧನೆಯ ಅಂಗವಾಗಿ ರೂಪಿಸಿದ ವಾರಕರಿ ಚಳವಳಿಯ ಮೂಲಕ ಮರಾಠಿ ಭಾಷೆಯು ವಿಶಿಷ್ಟ ಅಸ್ಮಿತೆಯ ಮೂಲಕ ಜನರ ಮನೆಮಾತಾಗಿ ಹೋಗಿತ್ತು. ಆದರೂ ಒಂದು ದೃಷ್ಟಿಕೋನದಿಂದ ನೋಡಬಹುದಾದರೆ, ಈಗಿನ ಮಹಾರಾಷ್ಟ್ರದ ಬಹಳಷ್ಟು ಪ್ರದೇಶಗಳು ಕನ್ನಡಿಗ ಆಳರಸರ ಆಳ್ವಿಕೆಗೆ ಒಳಪಟ್ಟಿದ್ದುದರಿಂದ ಅಲ್ಲಿ ಕನ್ನಡ ಭಾಷೆಯು ಇನ್ನೂ ಇತ್ತು ಎಂಬುದಾಗಿ ಊಹಿಸುವುದಕ್ಕೂ ಸಾಧ್ಯವಿದೆ. ಏನೇ ಇರಲಿ ಪುರಂದರದಾಸರಂತಹ ಮಹಾನ್ ದಾರ್ಶನಿಕ ಕೀರ್ತನಕಾರರು ಕನ್ನಡದಲ್ಲಿ ಕೀರ್ತನಾದಿ ಸಾಹಿತ್ಯವನ್ನು ಬರೆಯುವ ಮೂಲಕ ಕರ್ನಾಟಕ ಸಂಸ್ಕೃತಿಗೆ ವಿಶೇಷವಾದ ಕೊಡುಗೆಯನ್ನು ಕೊಟ್ಟಿದ್ದಾರೆ.

ರತ್ನಪಡಿ ವ್ಯಾಪಾರ ವ್ಯವಹಾರದಿಂದ ಅಗರ್ಭ ಶ್ರೀಮಂತರಾಗಿದ್ದ ವರದಪ್ಪನಾಯಕ ಮತ್ತು ಶ್ರೀಮತಿ ಲಕ್ಷ್ಮಿಬಾಯಿಯವರ ಮಗನಾದ ಶ್ರೀನಿವಾಸನಾಯಕ ಅಥವಾ

ಸೀನಪ್ಪನಾಯಕರೇ (ಕೆಲವರು ಕೃಷ್ಣಪ್ಪ ನಾಯಕ ಎಂದು ಹೇಳಿದ್ದಾರೆ.) ತಿರುಪತಿಯ ಶ್ರೀನಿವಾಸನ ಕೃಪೆಯಿಂದ ಜನಿಸಿದ ಕಾರಣವೇ ಅವರಿಗೆ ಶ್ರೀನಿವಾಸನಾಯಕ ಎಂಬುದಾಗಿ ಹೆಸರನ್ನಿಟ್ಟರು. ಮುಂದೆ ಪುರಂದರದಾಸ ಎಂದು ಹೆಸರಾಂಕಿತರಾದವರು. ದೇಶಸ್ಥ ಅಥವಾ ಸ್ಮಾರ್ತ ಬ್ರಾಹ್ಮಣರಾದ ಇವರು ಶೈವ ಭಾಗವತ ಪರಂಪರೆಯವರಾಗಿದ್ದರು. ಆ ಹೊತ್ತಿಗೆ ಮಹಾರಾಷ್ಟ್ರದಲ್ಲಿ ಭಾಗವತ ಪರಂಪರೆಯು ಬಹಳ ಉತ್ತುಂಗ ಧಾರ್ಮಿಕ ಮಾರ್ಗವಾಗಿತ್ತು. ಶ್ರೀವ್ಯಾಸರಾಜತೀರ್ಥರ ಮೂಲಕ ದೀಕ್ಷೆಯನ್ನು ಪಡೆಯುವ ಮೂಲಕ ಆಚಾರ್ಯ ತ್ರಯರಲ್ಲಿ ಒಬ್ಬರಾದ ಉಡುಪಿಯ ಶ್ರೀಮಧ್ವಾಚಾರ್ಯರ ಅನುಯಾಯಿಗಳಾಗಿ ಮಾಧ್ವರೆನಿಸಿಕೊಂಡರು. ಇವರ ವಂಶದ ವೃತ್ತಿ ಚಿನಿವಾರಿಕೆ. ಬಾಲಕರಾಗಿದ್ದ ಶ್ರೀನಿವಾಸನಾಯಕರು ತಮ್ಮ ತಂದೆಯವರ ಅಪೇಕ್ಷೆಗೆ ಅನುಗುಣವಾಗಿ ಕನ್ನಡ-ಸಂಸ್ಕೃತ ಭಾಷೆಗಳಲ್ಲಿ ವಿದ್ಯಾಭ್ಯಾಸ ಹಾಗೂ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿ ಅಸೀಮತೆಯನ್ನು ಸಾಧಿಸಿದರು. ಹಾಗಯೇ ಪಂಡಿತರಿಂದ ವೈದಿಕ ಪರಂಪರೆಯನ್ನು ಅಭ್ಯಸಿಸಿ ಅದನ್ನು ತಮ್ಮದನ್ನಾಗಿ ಮಾಡಿಕೊಂಡರು. ಇನ್ನು ವಂಶಪಾರಂಪರ್ಯವಾಗಿ ಬಂದಂತಹ ವಾಣಿಜ್ಯ ವೃತ್ತಿಯಂತು ಜನ್ಮಜಾತವಾಗಿತ್ತು. ಅವರಿಗೆ ಹದಿನೆಂಟು ವರ್ಷಗಳಾದಾಗ ಸರಸ್ವತಿಬಾಯಿ ಎಂಬ ಕನ್ಯೆಯೊಂದಿಗೆ ವಿವಾಹ ಮಾಡಲಾಯಿತು. ತಂದೆಯ ಮರಣಾನಂತರ ಶ್ರೀನಿವಾಸನಾಯಕರು ದಕ್ಷತೆಯಿಂದ ವ್ಯಾಪಾರ ವ್ಯವಹಾರವನ್ನು ಮುನ್ನಡೆಸಿಕೊಂಡು ಹೋಗಿ ತಮ್ಮ ಮೂವತ್ತೈದನೆಯ ವಯಸ್ಸಿಗೆ ವಿಜಯನಗರ ಸಾಮ್ರಾಟ ಶ್ರೀಕೃಷ್ಣದೇವರಾಯನಿಂದ 'ನವಕೋಟಿ ನಾರಾಯಣ' ಎಂಬ ಬಿರುದಿಗೆ ಪಾತ್ರರಾಗಿ ಅವರ ಗಣ ವ್ಯಾಪಾರಸ್ಥರಲ್ಲಿ ಒಬ್ಬರಾಗಿದ್ದವರು. ಅವರಲ್ಲಿ ಬಹಳಾತಿಬಹಳ ಗರ್ವವು ಮತ್ತು ಕೃಪಣತೆಯೂ ಸೇರಿಕೊಂಡಿತ್ತು. ಆದರೆ ಅವರ ಪತ್ನಿ ಸರಸ್ವತಿಬಾಯಿ ಮಾತ್ರ ಅದಕ್ಕೆ ತದ್ವಿರುದ್ಧವಾದ ವ್ಯಕ್ತಿತ್ವ ಉಳ್ಳವರಾಗಿದ್ದರು. ತನ್ನ ವರಪ್ರಸಾದದಿಂದ ಜನಿಸಿದ್ದ ಶ್ರೀನಿವಾಸನಾಯಕನನ್ನು ತನ್ನ ದಾರಿಗೆ ಕರೆದುಕೊಳ್ಳುವುದಕ್ಕೆ ತಿರುಪತಿಯ ಶ್ರೀನಿವಾಸ ದೈವ ಕಾಲಸಂದರ್ಭಕ್ಕಾಗಿ ಕಾಯುತ್ತಿದ್ದನು ಎಂಬ ಕಥೆ ಇದೆ. ಒಬ್ಬ ವಯೋವೃದ್ಧನ ವೇಷ ಧರಿಸಿದ ಶ್ರೀನಿವಾಸನು ಒಬ್ಬ ಬಾಲಕನೊಂದಿಗೆ ಬಂದು ತನ್ನ ವರಪ್ರಸಾದ ಪುತ್ರ ಶ್ರೀನಿವಾಸನಾಯಕನಲ್ಲಿ ಈ ಮಗುವಿನ ಉಪನಯನ ಮಾಡುವುದಕ್ಕೆ ಧನಸಹಾಯ ಮಾಡಬೇಕೆಂದು ಮತ್ತೆ ಮತ್ತೆ ಕೇಳಿಕೊಳ್ಳುತ್ತಿದ್ದನು ಹೀಗೆ ಆರು ತಿಂಗಳು ಕಳೆದರು ಕೃಪಾಣ ಶ್ರೀನಿವಾಸನಾಯಕರು ಒಂದು ದಮ್ಮಡಿಯನ್ನೂ ಬಿಚ್ಚಲಿಲ್ಲ. ಹಾಗಾಗಿ ಇವನ ಈ ಕೃಪಣತ್ವವನ್ನು ಇಲ್ಲವಾಗಿಸಿ ಆಧ್ಯಾತ್ಮ ಮಾರ್ಗಕ್ಕೆ ಕರೆತರಬೇಕೆಂದು ಆಲೋಚಿಸಿದ ಶ್ರೀನಿವಾಸ ದೇವರು ಆತನ ಈ ಕೃತ್ಯವನ್ನು ಅವನ ಪತ್ನಿ ಶ್ರೀಮತಿ ಸರಸ್ವತಿಬಾಯಿಯವರಲ್ಲಿ ಎಲ್ಲಾ ವಿಚಾರಗಳನ್ನು ಬಿಡದೆ ಹೇಳಿಕೊಂಡನು. ಅಸಹಾಯಕಳಾದ ಆಕೆ ಆ ವೃದ್ಧರಿಗೆ ಕೊಡುವುದಕ್ಕೆ ತನ್ನ ಕೈಯಲ್ಲಿ ಏನು ಇಲ್ಲದೆ ಇದ್ದುದರಿಂದ ತನ್ನ ಮೊಗಿನಲ್ಲಿದ್ದ ಮೂಗುತಿಯನ್ನೇ ತೆಗೆದುಕೊಟ್ಟಳು. ಆ ದಾನವೇ 'ಮೂಗುತಿಯ ಸಂದರ್ಭ'. ಅದರಿಂದ

Scanned with CamScanner

ಶ್ರೀನಿವಾಸನಾಯಕನ ಜೀವನ ಗತಿಯನ್ನೇ ಬದಲಾಯಿಸಿತು. ಶ್ರೀಮತಿ ಸರಸ್ವತಿಬಾಯಿ ಅವರು ನೀಡಿದ್ದ ಮೂಗುತಿಯನ್ನು ಹಿಡಿದು ಆ ವಯೋವೃದ್ಧರು ಶ್ರೀನಿವಾಸನಾಯಕರ ಚಿನ್ನದ ಅಂಗಡಿಯಲ್ಲಿಯೆ ಮಾರಾಟ ಮಾಡಲು ಹೋದನು. ತನ್ನ ಹೆಂಡತಿಯ ಮೂಗಿನಲ್ಲಿ ಇದ್ದಂತಹ ಈ ಆಭರಣವು ಈ ವಯೋವೃದ್ಧನ ಕೈಯಲ್ಲಿದ್ದುದನ್ನು ಕಂಡ ಶ್ರೀನಿವಾಸನಾಯಕನು ಅನುಮಾನದಿಂದ ವಿಚಾರಿಸಲು ನೇರವಾಗಿ ಮನೆಗೆ ಬಂದು ಹೆಂಡತಿಯಲ್ಲಿ ಮೂಗುತಿಯನ್ನು ತೋರಿಸುವಂತೆ ಕೇಳಿದನು. ಅದನ್ನು ದಾನ ಕೊಟ್ಟಿರುವುದಾಗಿ ಹೇಳಲೊಲ್ಲದೆ ಆಕೆ ವಿಷ ಕುಡಿಯಲು ಬಟ್ಟಲನ್ನು ಎತ್ತಿಕೊಂಡಾಗ ಅದರಲ್ಲಿ ಅವಳ ಆ ಮೂಗುತಿಯು ಕಾಣಲು ಅದನ್ನು ತಂದು ಪತಿಗೆ ನೀಡಿದರು. ಅದನ್ನು ನೋಡಿದ ಶ್ರೀನಿವಾಸನಾಯಕ ತನ್ನ ಅಂಗಡಿಗೆ ಬಂದು ತಾನು ಭದ್ರವಾಗಿ ಬೀಗ ಹಾಕಿಟ್ಟಿದ್ದ ಮೂಗುತಿಯೊಂದಿಗೆ ಹೋಲಿಸಬೇಕೆಂದು ಬೀಗ ತೆಗೆದು ನೋಡಿದರೆ ಅಲ್ಲಿ ಮೂಗುತಿಯೇ ಇರಲಿಲ್ಲ, ಆಶ್ಚರ್ಯವಾಯಿತು. ತನ್ನ ಜೀವನದಲ್ಲಿ ಇದು ಎಂಥ ಚಮತ್ಕಾರವೆಂದು ಅದರ ಬಗೆಗೆ ವಿಚಾರಿಸಲೆಂದು ನೋಡಿದರೆ ಆ ವಯೋವೃದ್ಧರು ಅಲ್ಲಿ ಇರಲೇ ಇಲ್ಲ. ಆಗ ಅವರಿಗೆ ಜೀವನದ ಒಟ್ಟು ಗತಿಯೂ ಎಷ್ಟು ಸೂಕ್ಷ್ಮ ಮತ್ತು ಗಂಭೀರವಾಗಿರುತ್ತದೆ ಎಂಬುದರ ಅರಿವಾಯಿತು. ಇದೆಲ್ಲ ತನ್ನ ದೈವ ಶ್ರೀನಿವಾಸನ ಚಮತ್ಕಾರವಲ್ಲದೆ ಮತ್ತೇನು ಅಲ್ಲ ಎಂಬುದು ಅವರಿಗೆ ಸಾಕ್ಷಾತ್ ಅರಿವಿಗೆ ಬಂದಿತು. ಕೊನೆಗೆ ಶ್ರೀನಿವಾಸನಾಯಕ ತನ್ನ ಬಳಿಯಲ್ಲಿದ್ದ ನವಕೋಟಿಗೂ ಅಧಿಕವಾಗಿದ್ದ ಸಂಪತ್ತನ್ನೆಲ್ಲ ಸತ್ಪಾತ್ರರಾದವರಿಗೆ ದಾನ ನೀಡಿ ತಮ್ಮ ಹೆಂಡತಿ ಮಕ್ಕಳೊಂದಿಗೆ ಹಂಪೆಗೆ ಬಂದು ಶ್ರೀವ್ಯಾಸರಾಜತೀರ್ಥರಿಂದ ಮಾಧ್ವ ದೀಕ್ಷೆಯನ್ನು ಸ್ವೀಕರಿಸಿದರು. ಆಗ ಅವರಿಗೆ ಪುರಂದರದಾಸ ಎಂಬುದಾಗಿ ಪುನರ್ಜಾಮಕರಣವಾಯಿತು. ಅವರು 'ಪುರಂದರ ವಿಠ್ಠಲ' ನೆಂಬ ಅಂಕಿತನಾಮ ಧರಿಸಿ ಕೀರ್ತನೆಗಳನ್ನು ಹಾಡುತ್ತಾ ದಾಸ ಬದುಕನ್ನು ನಡೆಸುವುದಕ್ಕೆ ಆರಂಭಿಸಿದರು. ಜೋಳಿಗೆ ಹಾಕಿಕೊಂಡು, ತಾಳ ಹಿಡಿದು ಭಿಕ್ಷೆ ಬೇಡಿ ಬದುಕುವಂತಹ ನೆಲೆಯನ್ನು ಅವರು ಒಪ್ಪಿಕೊಂಡು ಆಧ್ಯಾತ್ಮ ಮಾರ್ಗಕ್ಕೆ ಬಂದರು ಎನ್ನಲಾಗಿದೆ. ಅವರು ಮುಂದಿನ ಆಧ್ಯಾತ್ಮಿಕ ಮಾರ್ಗವನ್ನು ಒಪ್ಪಿಕೊಂಡು ಅದರಲ್ಲಿ ಸಹಜವಾಗಿಯೇ ನಡೆದರು. ಈ ದಾಸತ್ವ ಭಾವವು ಭಾರತೀಯ ಆಧ್ಯಾತ್ಮಿಕ ಬದುಕಿನಲ್ಲಿ ಹಾಸುಹೊಕ್ಕಾದ ಸಂಗತಿಯಾಗಿದೆ. ರಾಮಾಯಣದಲ್ಲಿ ಹನುಮಂತನು 'ದಾಸೋಹಂ ಕೋಸಲೇಂದ್ರಸ್ಯ' ಎಂಬುದಾಗಿ ಉದ್ಗರಿಸಿದ್ದಾನೆ. ಅಂದರೆ ರಾಮಾಯಣದ ಕಾಲದಿಂದಲೂ ತಂತಮ್ಮ ಆರಾಧ್ಯ ದೇವರಲ್ಲಿ ದಾಸತ್ವವನ್ನು ಸ್ವೀಕರಿಸಿ ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯುವುದು ಸರ್ವೆಸಾಮಾನ್ಯವಾದ ಸಂಗತಿಯೇ ಆಗಿತ್ತು ಎಂಬುದು ಈ ಮೂಲಕ ತಿಳಿದು ಬರುತ್ತದೆ. ಆಧ್ಯಾತ್ಮ ಮತ್ತು ಭಕ್ತಿ ಮಾರ್ಗವು ಭಾರತೀಯ ಸಂತ ಪರಂಪರೆಯಲ್ಲಿ ಬಹಳ ವಿಶಿಷ್ಟವಾದ ಜೀವನ ಧರ್ಮವೆನಿಸಿದೆ. ಆಧ್ಯಾತ್ಮಿಕ ಮತ್ತು ಭಕ್ತಿಯು ವೈಚಾರಿಕ ಮನೋಧರ್ಮವೇ ಆಗಿದೆ. ವೈಚಾರಿಕತೆ ಎಂಬುದು ಕ್ರಿಯೆಯೂ ಅಲ್ಲ ಅಥವಾ ಪ್ರತಿಕ್ರಿಯೆಯೂ ಅಲ್ಲ; ಅಂದರೆ

ಅದೊಂದು ಪ್ರಕ್ರಿಯೆ. ವೈಚಾರಿಕತೆ ಯು ದೇವತಾಶಾಸ್ತ್ರದೊಂದಿಗೆ ಬೆಳೆದುಬಂದು ಮುಂದೆ ಸಮಾಜೋ ರಾಜಕೀಯವಾಗಿ ಬೌದ್ಧಿಕ ವಿಮರ್ಶೆಯ ಸ್ವರೂಪವನ್ನು ಪಡೆದುಕೊಂಡಿತು. ಅಂದರೆ ವೈಚಾರಿಕತೆಯು ಭಾವನೆ ಮತ್ತು ಬುದ್ಧಿಗಳ ವಿದ್ಯುತ್ ಆಲಿಂಗನವಾಗಿದೆ. ಈ ವೈಚಾರಿಕತೆಯು ವೈಯಕ್ತಿಕ ಮತ್ತು ಸಾಮಾಜಿಕ ಎರಡೂ ಆಯಾಮಗಳಲ್ಲಿ ಇದೆ. ವೈಯಕ್ತಿಕವಾಗಿ ಸ್ವೀಕರಿಸಿದವರು ತಾವು ತಪೋನಿರತರಾಗಿಯೋ ಅಥವಾ ಸಾಧಕರಾಗಿಯೋ ತಮ್ಮ ಮೋಕ್ಷ ಮಾರ್ಗದ ಕಡೆಗೆ ನಡೆಯುತ್ತಿರುತ್ತಾರೆ. ಯಾರು ತಮ್ಮ ವೈಯಕ್ತಿಕ ಪರಿಧಿಯನ್ನು ದಾಟಿ ಸಾಮಾಜಿಕ ಅಥವಾ ಸಾರ್ವತ್ರಿಕ ನೆಲೆಯಲ್ಲಿ ವ್ಯವಹರಿಸುತ್ತಾರೋ ಅವರು ಸಮಾಜೋ ಚಿಂತಕರಾಗಿ ಅಥವಾ ಆಧ್ಯಾತ್ಮೋ ಧರ್ಮ ಚಿಂತಕರಾಗಿ ಕಾಣಿಸುತ್ತಾರೆ. ಅಂಥವರು ತಮ್ಮ ಚಿಂತನೆಯ ಮೂಲಕ ಕಂಡುಕೊಂಡ ಫಲಿತಗಳನ್ನು ಸಮಾಜದ ಎಲ್ಲರ ಬದುಕಿನ ದಾರ್ಶನಿಕ ಮಾರ್ಗವಾಗಿ ಹೇಳುತ್ತಾ ಮನಗಾಣಿಸುವ ದಿಶೆಯಲ್ಲಿ ದುಡಿಯುತ್ತಾರೆ. ಚಾರ್ವಾಕ, ಸಾಕ್ರಟೀಸ್, ಗೌತಮ ಬುದ್ಧ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ಬಸವೇಶ್ವರ, ಅಲ್ಲಮಪ್ರಭು ಮುಂತಾದವರು ಈ ಮಾರ್ಗದಲ್ಲಿ ನಡೆದ ಮಹಾನ್ ದಾರ್ಶನಿಕರು ಎಂಬುದನ್ನು ಅವರ ಜೀವನ ಮತ್ತು ಸಾಧನೆಯ ಮೂಲಕ ಮನಗಾಣಬಹುದಾಗಿದೆ. ಆಲ್ಬರ್ಟ್ ಐನ್‌ಸ್ಟೀನ್ ಒಂದೆಡೆಯಲ್ಲಿ ಹೇಳಿದ ಒಂದು ಉಲ್ಲೇಖ ಗಮನಾರ್ಹವೆನಿಸುತ್ತದೆ. 'ಧರ್ಮವಿಲ್ಲದ ವಿಜ್ಞಾನ ಕುರುಡು; ವಿಜ್ಞಾನವಿಲ್ಲದ ಧರ್ಮ ಕುಂಟು' ಅಂದರೆ ವಿಜ್ಞಾನ 'ಹೇಗೆ' ಎಂಬುದರ ಮೂಲಕ ಅನ್ವೇಷಿಸ ಹೊರಟರೆ, ಧರ್ಮ 'ಏಕೆ' ಎಂಬುದರ ಮೂಲಕ ದರ್ಶಿಸುತ್ತದೆ. ಹಾಗಾಗಿ ಇವೆರಡರ ಸಮನ್ವಯವುಳ್ಳ 'ವೈಚಾರಿಕತೆ' ಮನುಷ್ಯ ಬದುಕಿಗೆ ಹೊಸ ಜೀವನ ದೃಷ್ಟಿಯನ್ನು ನೀಡುತ್ತದೆ. ಎಂತಲೇ 'ಧ್ರೀಯತೇ ಅನೇನ ಇತಿ ಧರ್ಮಃ', ಮತ್ತು 'ಧಾರಣಾದ್ಧರ್ಮಮಿತ್ಯಾಹುಃ' ಎಂಬ ಚಿಂತನೆಯು ವ್ಯಕ್ತಿಯ 'ಭಾವಶ್ರೀ, ಬುದ್ಧಿಶ್ರೀ ಮತ್ತು ಆತ್ಮಶ್ರೀ'ಯನ್ನು ವಿಶಿಷ್ಟವಾಗಿ ರೂಪಿಸಿ ವೈಚಾರಿಕವಾಗಿ ಜೀವನದ ಬೃಹದ್ದರ್ಶನವಾಗಿ ರೂಪಿಸುತ್ತವೆ ಎಂಬುದು ಗಮನಾರ್ಹ. ಅಂತಹವರಲ್ಲಿ ಶ್ರೀಪುರಂದರದಾಸರೂ ಒಬ್ಬರು. ಮುಂದೆ ಅವರು ತಮ್ಮ ಜೀವನವನ್ನು ಭಕ್ತಿ, ಜ್ಞಾನ ಮತ್ತು ವೈರಾಗ್ಯಗಳ ಮೂಲಕ ವಿಶಿಷ್ಟವಾಗಿ ತಮ್ಮ ಜೀವನವನ್ನು ನಡೆಸಿ ಈ ಮೇಲೆ ಹೇಳಿದಂತೆ 'ದಾಸರೆಂದರೆ ಪುರಂದರದಾಸ'ರಯ್ಯಾ ಎಂಬ ಭಾಜನಕ್ಕೆ ಪಾತ್ರರಾದರು.

ದಾಸತ್ವದ ದೀಕ್ಷೆಯನ್ನು ಗುರುಗಳಾದ ಶ್ರೀವ್ಯಾಸರಾಜರಿಂದ ಸ್ವೀಕರಿಸಿದ ಪುರಂದರದಾಸರು ಪೂರ್ಣಬದುಕಿನ ದಾರಿಯಲ್ಲಿ ಒಂದು ಅನನ್ಯ ವಿಶಿಷ್ಟ ವ್ಯಕ್ತಿತ್ವವಾಗಿ ಬದುಕಿ ಮಾದರಿಯಾಗಿದ್ದಾರೆ. ಪುರಂದರದಾಸರ ಜೀವನದಂತೆ ಅವರ ಕೀರ್ತನೆಗಳೂ ಸಮಾಜೋ–ಸಾಂಸ್ಕೃತಿಕ ಆಯಾಮದಿಂದ ವೈಚಾರಿಕವಾಗಿದ್ದು ಗಂಭೀರವಾಗಿವೆ. ಅವರು ಬಾಲ್ಯದಲ್ಲಿಯೇ ಕರಗತ ಮಾಡಿಕೊಂಡಿದ್ದ ಸಂಗೀತವು ಅವರ ಕೀರ್ತನಾದಿ ಸಾಹಿತ್ಯದ ಮೂಲಭೂತ ತಳಹದಿಯಾಗಿ ಅವರನ್ನು 'ಕರ್ನಾಟಕ ಸಂಗೀತ ಪಿತಾಮಹ'

Scanned with CamScanner

ಎಂಬ ಗೌರವಕ್ಕೆ ಭಾಜನಗೊಳಿಸಿದೆ. ಶ್ರೀನಿವಾಸ ನಾಯಕ ತನಗೆ ನವಕೋಟಿ ನಾರಾಯಣ ಎಂಬ ಬಿರುದು ನೀಡುವಂತೆ ಶ್ರೀಕೃಷ್ಣದೇವರಾಯನ ಮನೆಯ ಬಾಗಿಲು ಕಾಯುತ್ತಾ ಬೇಡಿದ ಕಾಲವು ಹೋಗಿ ಎಲ್ಲವನ್ನು ಬಿಟ್ಟು ಭಗವತಿ ಬುಟ್ಟಿ (ಜೋಳಿಗೆ) ಹಿಡಿದು ಬಂದ ಪುರಂದರದಾಸರ ಪಾದಗಳನ್ನು ಸ್ವತಃ ಅರಸನೇ ತೊಳೆದು ಗೌರವಿಸುವ ಕಾಲ ಪ್ರಾಪ್ತವಾಯಿತು. ಅಂದರೆ ಜೀವನ ಆಧ್ಯಾತ್ಮ ಮಯವಾಗಿರಬೇಕು ಎಂಬುದರ ಸಂಕಥನವೇ ಪುರಂದರದಾಸರ ಬದುಕು ಒಂದು ನಿದರ್ಶನ ಸ್ವರೂಪದಲ್ಲಿ ನಮಗೆ ಮನದಟ್ಟಾಗುತ್ತದೆ.

'ಆದದ್ದೆಲ್ಲ ಒಳಿತೇ ಆಯಿತು ನಮ್ಮ
ಶ್ರೀಧರನ ಸೇವೆ ಮಾಡಲು ಸಾಧನ ಸಂಪತ್ತಾಯಿತು ಅ.ಪ.
ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಬಾಗಿ ನಾಚುತಲಿದ್ದೆ
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯಾ'

ಎಂಬ ಈ ಕೀರ್ತನೆಯು ಜೀವನವು ಸುಖಮಯವಾಗಿರಬೇಕೋ ಸಂತೃಪ್ತಮಯವಾಗಿರಬೇಕೋ ಎಂಬ ವೈಚಾರಿಕ ಪ್ರಶ್ನೆಯನ್ನು ನಮ್ಮ ಮುಂದೆ ಇಡುತ್ತದೆ. ಸಂಪತ್ತನ್ನು ಕಳೆದುಕೊಂಡು ಎಷ್ಟೋ ಜನ ಪ್ರಪಂಚದಲ್ಲಿ ನೋವು, ಸಂತಾಪದಲ್ಲಿ ನಿತ್ಯ ಪರಿತಪಿಸುತ್ತಾ ಸಾಯುವವರೇ ಹೆಚ್ಚು. ಆದರೆ ಪುರಂದರದಾಸರು ಹಾಗಲ್ಲ, ತಮ್ಮ ಈ ಪರಿವರ್ತಿತ ಸ್ಥಿತಿಯನ್ನು ಸಾರ್ಥಕವಾದುದೆಂದು ಸಂತೃಪ್ತ ಭಾವದಿಂದ ಉದ್ಗರಿಸಿದ್ದಾರೆ. ಜೀವನದಲ್ಲಿ ಸುಖಕ್ಕಿಂತ ಸಂತೃಪ್ತಿಯೇ ಮುಖ್ಯ ಎಂಬ ವಿಚಾರವನ್ನು ಈ ಮೂಲಕ ನಮಗೆ ಸುಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ಪುರಂದರದಾಸರ ಕೀರ್ತನೆಗಳನ್ನು ವೈಚಾರಿಕ ಆಯಾಮದಿಂದ ಅಧ್ಯಯನ ಮಾಡಿದರೆ ಅವರ ಆಧ್ಯಾತ್ಮಿಕ ನೆಲೆಯ ದರ್ಶನವಾಗುತ್ತದೆ. ಆವತ್ತಿನ ಸುಖಕ್ಕಿಂತ ಇವತ್ತಿನ ಸಂತೃಪ್ತ ಬದುಕು ಅವರ ಕೀರ್ತನೆಗಳ ಮೂಲಕ ನಮ್ಮ ಎದುರು ಗಂಭೀರವಾಗಿ ಅನಾವರಣಗೊಂಡಿದೆ. ಅವರ ಕೀರ್ತನೆಗಳನ್ನು ಭಕ್ತಿ ಮತ್ತು ನಾಮ ಸಂಕೀರ್ತನೆ, ಆಧ್ಯಾತ್ಮಿಕ ಜ್ಞಾನ, ಸಾಮಾಜಿಕ ಮತ್ತು ಧಾರ್ಮಿಕ ಎಂಬುದಾಗಿ ಅನೇಕ ಬಗೆಗಳಲ್ಲಿ ವಿಂಗಡಿಸಿ ಅಧ್ಯಯನ ಮಾಡಬಹುದಾಗಿದೆ. ಇವು ಪರಿಶುದ್ಧ ಜೀವನದ ವೈಚಾರಿಕ ಆಯಾಮಗಳಾಗಿವೆ ಎಂಬುದು ಗಮನಾರ್ಹ.

'ಆಚಾರವಿಲ್ಲದ ನಾಲಗೆ ನಿನ್ನ
ನೀಚ ಬುದ್ಧಿಯ ಬಿಡು ನಾಲಿಗೆ'
'ಹೊಲೆಯ ಹೊರಗಿಹನೆ ಒಳಗಿಲ್ಲವೆ
ಶ್ರೀಹರಿಯ ಭಕುತರು ಪೇಳಿರಿದನು'
'ಉದರ ವೈರಾಗ್ಯವಿದು ನಮ್ಮ
ಪದುಮನಾಭನಲಿ ಲೇಶ ಭಕುತಿಯಿಲ್ಲ'

'ನೀನ್ಯಾಕೊ ನಿನ್ನ ಹಂಗ್ಯಾಕೊ ನಿನ್ನ
ನಾಮದ ಬಲವೊಂದಿದ್ದರೆ ಸಾಕೊ'
'ನಿನಗೂ ಆಣೆ ರಂಗ ಎನಗೂ ಆಣೆ
ನಿನಗೂ ನನಗೂ ಇಬ್ಬರಿಗೂ ಭಕ್ತರಾಣೆ'
'ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡೆ ಜಗಳವೇ ಲೇಸು'
'ಏಕೆ ದೇಹವನು ದಂಡಿಸುವೆ ವೃಥಾ ಬಿಡ–
ದೇಕಚಿತ್ತದೆ ಲಕ್ಷ್ಮೀಕಾಂತ ಹರಿ ಎನ್ನದೆ
'ಮಡಿ ಮಡಿ ಮಡಿಯೆಂದು ಮಾರ್ಮಾರು ಹಾರುತಿ
ಮಡಿಯೆಲ್ಲಿ ಬಂತೊ ಬಿಕನಾಶಿ'
'ಮಲವ ತೊಳೆಯ ಬಲ್ಲರಲ್ಲದೆ
ಮನವ ತೊಳೆಯಬಲ್ಲರೆ'

ಒಟ್ಟಾರೆ ಮರಾಠಾ ಸಂತರಾದ ಜ್ಞಾನೇಶ್ವರಾದಿಗಳಾಗಲಿ, ಕರ್ನಾಟಕದ ಹರಿದಾಸರಾದ ಭಕ್ತ ಪುರಂದರದಾಸಾದಿಗಳಾಗಲಿ ಭಕ್ತ ಜನರ ಹೃದಯವನ್ನು ಭೋಗಮಯ ಜೀವನದ ಕಡೆಯಿಂದ ತ್ಯಾಗಮಯ ಜೀವನದ ಕಡೆಗೆ ಹೊರಳಿಸಿದರು. ಬಹುಶಃ ಇದು ವಿ.ಎಸ್. ನೈಪಾಲ್ ಅವರು ಹೇಳಿದ್ದ 'ಗಾಯಗೊಂಡ ಸಂಸ್ಕೃತಿ' (ಊಂಡೆಡ್ ಕಲ್ಚರ್) ಎಂಬುದಕ್ಕೆ ಪರ್ಯಾಯ ಮಾರ್ಗವಾಗಿತ್ತು ಎಂಬುದನ್ನು ಅವಶ್ಯವಾಗಿ ಗಮನಿಸಬೇಕು.

ಮರಾಠಾ ಸಂತರು ಹುಟ್ಟುಹಾಕಿದ ಈ ಸಮಾಜೋ–ಧಾರ್ಮಿಕ ಚಳವಳಿಯಿಂದ ಮಹಾರಾಷ್ಟ್ರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರಿಂದ ಹಿಂದವಿ ಸಾಮ್ರಾಜ್ಯವೊಂದರ ಸಂಸ್ಥಾಪನೆಗೆ ಭದ್ರವಾದ ಧಾರ್ಮಿಕ ಬುನಾದಿಯೊಂದನ್ನು ನಿರ್ಮಿಸಿತ್ತು. ಸಾತ್ವಿಕ ಆಶಯದ ಈ ಚಳವಳಿ ಇಂದಿಗೂ ತನ್ನ ನೆಲೆಯನ್ನು ಅಪಾರ ಭಕ್ತ ಸಮುದಾಯದ ಹೃದಯ ಸಾಮ್ರಾಜ್ಯದಲ್ಲಿ ಜಾತ್ಯಾತೀತ ನೆಲೆಯಿಂದ ಉಳಿಸಿಕೊಂಡಿದೆ. ಎಲ್ಲಾ ಮತಧರ್ಮದವರೂ ಮರಾಠಾ ಸಂತರ ಆರಾಧ್ಯ ದೈವ ಶ್ರೀವಿಠ್ಠಲನನ್ನು ತಮ್ಮ ಅಧಿದೈವವನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದ್ದರೆಂಬ ದಿ. ಡಾ. ರಾಮಚಂದ್ರ ಚಿಂತಾಮಣ ಢೇರೆಯವರ ವಿಚಾರದ ಹಿನ್ನೆಲೆಯಲ್ಲಿ ಗಂಭೀರವಾಗಿ ಆಲೋಚಿಸಬೇಕಾಗಿದೆ. ಕಾರಣ ಈ ಸಂತ ಚಳವಳಿಯಲ್ಲಿ ಸಂತ ಜ್ಞಾನೇಶ್ವರರೊಂದಿಗೆ ಎಲ್ಲಾ ಜಾತಿ ಪಂಗಡಗಳ ಸಮುದಾಯದವರೂ ಸಮಾವೇಶಗೊಂಡಿದ್ದರು. ಹಾಗೆಯೇ ಕರ್ನಾಟಕದಲ್ಲಿಯೂ ಕನ್ನಡ ಸಂಸ್ಕೃತಿಯ ಒಂದು ಪ್ರಮುಖ ಕಣ್ಣು ಎಂಬುದಾಗಿ ಪರಿಗಣಿಸಿರುವ ಹರಿದಾಸ ಪಂಥದವರು ಮಾಡಿದ ವಿಶಿಷ್ಟ ಗಂಭೀರ ಚಳವಳಿಯಿಂದ ವೈಚಾರಿಕ ದೃಷ್ಟಿಕೋನವೊಂದು ಪ್ರಾಪ್ತವಾಯಿತು. ಸಮಕಾಲೀನವಾಗಿ ರಾಜ್ಯಭಾರ ಮಾಡುತ್ತಿದ್ದಂತಹ ವಿಜಯನಗರದ ರಾಜ ಶ್ರೀಕೃಷ್ಣದೇವರಾಯ ಅವರಿಗೆ ಸಮಾಜೋ–ಧಾರ್ಮಿಕ ಚಿಂತನೆಯ ಮೂಲಕ ಆದರ್ಶಪರ ಆಡಳಿತಕ್ಕೆ ಇವರ ವಿಚಾರಗಳು ಸ್ಫೂರ್ತಿಯಾದವು ಎಂಬುದನ್ನು ಮರೆಯುವಂತಿಲ್ಲ. ಹರಿದಾಸರು ಕೂಡಾ ಹೊಸ ಮತಧರ್ಮವನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿರಲಿಲ್ಲ. ಇದರಿಂದಾಗಿ

Scanned with CamScanner

ಮತಧರ್ಮಗಳ ನಡುವಣ ಸಂಘರ್ಷ ಮತ್ತು ಹೋರಾಟಗಳಿಗೆ ಸಮಾಲೋಚನೆ ಮತ್ತು ಸಹಬಾಳ್ವೆಯ 'ಮಾನವೀಯ ಧರ್ಮ'ದ ನಿಜಪಥವೊಂದನ್ನು ಕಾಣುವುದಕ್ಕೆ ಸಾಧ್ಯವಾಯಿತು.

ವಾರಕರಿ ಪಂಥದ ಸಂತ ಜ್ಞಾನೇಶ್ವರಾದಿಗಳು ಮತ್ತು ಹರಿದಾಸ ಪಂಥದ ಭಕ್ತ ಪುರಂದರದಾಸಾದಿಗಳು ತಮ್ಮ ಆಧ್ಯಾತ್ಮಿಕ ಚಿಂತನೆಗಳನ್ನೆಲ್ಲ ಜೀವನ ದರ್ಶನಗಳಾಗಿಸಿಕೊಂಡು ತಮ್ಮ ಅಭಂಗ ಮತ್ತು ಕೀರ್ತನೆಗಳ ಮೂಲಕ ಅನಾವರಣಗೊಳಿಸಿದ್ದಾರೆ. ಅವರ ಈ ಬೋಧನೆ ಮತ್ತು ಹಾಡುಗಳು ಸಮಾಜದಲ್ಲಿ 'ಜನ ಸಂವೇದನೆ'ಗೆ ಕಾರಣವಾಯಿತು. ಇಂದಿಗೂ ಅಪಾರ ಜನಸಮುದಾಯ ಅಭಂಗ ಮತ್ತು ಕೀರ್ತನೆಗಳನ್ನು ತಮ್ಮ ಜೀವನದ ಪ್ರಮುಖ ಅಂಶವಾಗಿ ಪರಿಗಣಿಸಿಕೊಂಡು ಹಾಡುತ್ತಾ, ಬೋಧಿಸುತ್ತ ಮತ್ತು ಕೇಳುತ್ತಾ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆ.

ಸಾಂದರ್ಭಿಕ ಗ್ರಂಥಗಳು :

೧. ಪುರುಷೋತ್ತಮ ಗಣೇಶ ಸಹಸ್ರಬುದ್ಧೆ: ಮಹಾರಾಷ್ಟ್ರ ಸಂಸ್ಕೃತಿ (ಮರಾಠಿಕೃತಿ), ಕಾಂಟಿನೆಂಟಲ್ ಪ್ರಕಾಶನ, ಪುಣೆ, ೧೯೭೯

೨. ಭಾವೆ.ವಿ.ಲ : ಮಹಾರಾಷ್ಟ್ರ ಸಾರಸ್ವತ ಖಂಡ ೧–೨(ಮರಾಠಿ ಕೃತಿ), ಪಾಪ್ಯುಲರ್ ಪ್ರಕಾಶನ ಮುಂಬಯಿ, ೧೯೮೨, ೧೯೮೩

೩. ಸಾವಿತ್ರಿ ಖಾನೋಲಕರ: ಮಹಾರಾಷ್ಟ್ರ ಸಂತರು, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು

೪. ರಾಜವಾಡೆ ವಿ.ಕಾ.(ಸಂಪಾದನೆ): ಜ್ಞಾನೇಶ್ವರಿ (ಮರಾಠಿ ಕೃತಿ), ಧುಳೆ, ೨೦೦೯

೫. ಕುಲಕರ್ಣಿ ಗೋ.ಮ. (ಸಂಪಾದನೆ): ಮಹಾರಾಷ್ಟ್ರಾಚೀ ಸತ್ಪಧಾರಾ(ಮರಾಠಿ ಕೃತಿ), ವಿ.ತ್ರಂ. ಶೇಟೆ, ಪುಣೆ, ೧೯೮೧

೬ ಬಹಿರಟ ಭಾ. ಪ.: ವಾರಕರಿ ಸಂಪ್ರದಾಯ– ಉದಯ ವ ವಿಕಾಸ (ಮರಾಠಿ ಕೃತಿ), ಪ್ರ.ಜ್ಞಾ. ಭಾಲೇರಾವ್, ಪುಣೆ, ೧೯೭೨

೭ ಲೋಕಾಪುರ ರಂ.ಶಾ.(ಅನುವಾದ): ಕನ್ನಡ ಜ್ಞಾನೇಶ್ವರಿ, ನಿಶಾಂತ ಪ್ರಕಾಶನ, ಬೆಳಗಾವಿ, ೨೦೦೩

೮. ದತ್ತಾವಧೂತರು (ಅನುವಾದ): ಶ್ರೀ ಜ್ಞಾನೇಶ್ವರಿ, ಚೈತನ್ಯಾಶ್ರಮ, ಶ್ರೀ ಕ್ಷೇತ್ರ, ಹೆಬ್ಬಳ್ಳಿ, ೨೦೦೭

೯. ಶ್ರೀನಿವಾಸ ಹಾವನೂರ ಮತ್ತು ಸತ್ಯನಾರಾಯಣರಾವ್ ಹೊ.ರಾ. (ಸಂಪಾದನೆ): ಪುರಂದರದಾಸರ ಜನಪ್ರಿಯ ಕೀರ್ತನೆಗಳು, ಅಂಕಿತ ಪುಸ್ತಕ, ಬೆಂಗಳೂರು, ೨೦೦೨.

೧೦. ನಾವಡ ಎ.ವಿ.: ದಾಸಮಾರ್ಗ, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ, ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ, ೨೦೦೪

೧೧. ನಾಯ್ಕ ಟಿ.ವಿ.: ಪುರಂದರದಾಸ ಮತ್ತು ಸಂತ ತುಕಾರಾಮ, ರಾಘವೇಂದ್ರ ಪ್ರಕಾಶನ, ಅಂಕೋಲ, ೧೯೯೪

೧೨. ಕೃಷ್ಣಾಜೀ ಜ್ಞಾನಮೋಠೆ (ಸಂಪಾದಕ): ಪಂಢರೀ ವಾರಕರೀ ಸಾರ್ಥ ಭಜನೀ ಮಾಲಿಕಾ, ಶ್ರೀ ಸಂತ ವಾನ್ಮಯ ಸೇವಾ ಸಮಿತಿ, ಕೊಪ್ಪಳ, ೨೦೦೬

Scanned with CamScanner

ಶರಣ ದರ್ಶನ

ಸಂಪಾದಕರು

ಡಾ. ಎಂ. ನಾಗರಾಜ

ಪ್ರಸಾರಾಂಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ

ವಿಜಯಪುರ-586108

Scanned with CamScanner

SHARAN DARSHAN: - Edited by Dr. M. Nagaraj, Co-Ordinator Mundargi Sri Jagadguru Annadanishwar Sahitya mattu Samskruti Adyayan Peet. Published by: Prasaranga, Karnataka State Akkamahadevi Women's Univeristy, Vijayapura -586108

ಸಂಪಾದಕ : ಡಾ. ಎಂ. ನಾಗರಾಜ
ಸಂಯೋಜಕರು, ಮುಂಡರಗಿ ಶ್ರೀ. ಜಗದ್ಗುರು ಅನ್ನದಾನೀಶ್ವರ ಶರಣ ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಯನ ಪೀಠ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಪ್ರಥಮ ಮುದ್ರಣ : 2020

ಬಳಸಿದ ಕಾಗದ : 70 ಜಿಎಸ್‌ಎಂ, ಎನ್.ಎಸ್.ಮ್ಯಾಪ್ಲಿತೋ

ಪುಟಗಳು : 162+ xviii

ಬೆಲೆ : 300/–

ISBN : 978-93-83090-74-7

Paper : Demi 1/8, 70 GSM Maplitho

Cover Page : Artboard 210 GSM

Copies : 500

Cover Page Design : M Ramu

ಹಕ್ಕುಗಳು : ಕುಲಸಚಿವರು, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಪ್ರಕಾಶಕರು : ಡಾ. ವಿಷ್ಣು. ಎಂ ಶಿಂದೆ
ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಮುದ್ರಣ : ಕ್ರಯಾ ಪ್ರಕಾಶನ
40/5, 2ನೇ ಬಿ ಮುಖ್ಯರಸ್ತೆ, 16 ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು–560 027
ಮೊಬೈಲ್ : 94485 78021

Scanned with CamScanner

ಪರಿವಿಡಿ

ಕುಲಪತಿಗಳ ನುಡಿ	i
ಕುಲಸಚಿವರ ನುಡಿ	v
ಸಂಪಾದಕರ ನುಡಿ	vii
ಪ್ರಕಾಶಕರ ನುಡಿ	x
ಪ್ರಸ್ತಾವನೆ	xii

1. ವಚನಕಾರ್ತಿಯರ ಕೌಟುಂಬಿಕ ಚಿಂತನೆ
   – ಪ್ರೊ. ಪ್ರೀತಿ ಶುಭಶ್ಚಂದ್ರ 1–9
2. ಹರಿಹರ ಚಿತ್ರಿಸಿದ ಶಿವಶರಣೆಯರು
   – ಪ್ರೊ. ಯು. ರಾಘವೇಂದ್ರರಾವ್ 10–14
3. ಚೆನ್ನಬಸವಣ್ಣನವರ ವಚನ–ವಚನೇತರ ಸಾಹಿತ್ಯ
   – ಡಾ. ವಿಠಲರಾವ್ ಟಿ. ಗಾಯಕ್ವಾಡ್ 15–33
4. ಶಾಸ್ತ್ರಸಾಹಿತ್ಯಕ್ಕೆ ಶರಣರ ಕೊಡುಗೆ
   – ಡಾ. ಕೊಟ್ರಸ್ವಾಮಿ. ಎ.ಎಂ.ಎಂ. 34–47
5. ಹಾನಗಲ್ಲ ಗುರುಕುಮಾರ ಶಿವಯೋಗಿಗಳು (ಕ್ರಿ.ಶ.1866–1930)
   – ಡಾ. ಎಸ್. ಶಿವಾನಂದ 47–61
6. ವಚನ ಸಾಹಿತ್ಯ ಪರಂಪರೆ
   – ಡಾ. ಮೀನಾಕ್ಷಿ ಜಂಗಮಣಿ 62–89

Scanned with CamScanner

7. ಮುಂಡರಗಿ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದ ಪರಂಪರೆ
– ಡಾ. ಬಿ.ಎಸ್. ಬಿರಾದಾರ 90–105

8. ಶ್ರೀ ಜಗದ್ಗುರು ಅನ್ನದಾನೀಶ್ವರರ ವಚನಗಳಲ್ಲಿ ಸ್ತ್ರೀ ಸಂವೇದನೆ
– ಡಾ. ಅಮರೇಶ ಯತಗಲ್ 106–123

9. "ವಚನಕಾರ್ತಿಯರಲ್ಲಿ ಜಾತಿ, ಲಿಂಗತ್ವ
ಹಾಗೂ ಪಿತೃಪ್ರಧಾನತೆಯ ಪ್ರಶ್ನೆಗಳು"
– ಪ್ರೊ. ಆರ್. ಸುನಂದಮ್ಮ 124–134

10. ತಳವರ್ಗದ ವಚನಕಾರ್ತಿಯರು
– ಡಾ. ಶ್ರೀಶೈಲ ನಾಗರಾಳ 135–141

11. ವಚನಕಾರ್ತಿಯರ ಕಾಯಕ ಸಿದ್ಧಾಂತ
– ಡಾ. ಗುಂಡಣ್ಣ ಕಲಬುರ್ಗಿ 142–145

12. ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳ ಸಮಗ್ರ
ಸಾಹಿತ್ಯ ವಿಶ್ಲೇಷಣೆ
– ಪ್ರೊ. ಆರ್.ಎಲ್.ಪೋಲೀಸ್ ಪಾಟೀಲ 146–160

Scanned with CamScanner

ಚನ್ನಬಸವಣ್ಣನವರ ವಚನ - ವಚನೇತರ ಸಾಹಿತ್ಯ

– ಡಾ. ವಿಠಲರಾವ್ ಟಿ. ಗಾಯಕ್ವಾಡ್

'ಆಡಿನ ಕೊರಳಲ್ಲಿ ಮೊಲೆ ಇದ್ದರೇನು ಅಮೃತವುಂಟೇ?
ಭಕ್ತನಾದಲ್ಲಿ ಫಲವೇನು ಶಿವಪಥವನರಿಯದನ್ನಕ್ಕ?
ದಕ್ಕಾಲಿ ಬಿದ್ದ ಕಣ್ಣಿನಂತೆ ಜಂಗಮದ ಮೇಲೆ
ಹರುಷವಿಲ್ಲದ ನೋಟ
ಕೂಡಲಚೆನ್ನಸಂಗನ ಶರಣ ಬೆರಸದ ಹರುಷ
ಅರಸಿಯ ನೋಟದಂತೆ'

ಕನ್ನಡ ಸಮಾಜೋ ಸಾಂಸ್ಕೃತಿಕ ನೆಲೆಯಿಂದ ವಿಶಿಷ್ಟವಾದ ಒಂದು ಘಟ್ಟ 'ವಚನ ಸಾಹಿತ್ಯ'. ಹಾಗೆಯೇ ಮತ್ತೊಂದು 'ದಾಸ ಸಾಹಿತ್ಯ'. ಇವೆರಡನ್ನು ಕನ್ನಡ ಸಂಸ್ಕೃತಿಯ ಎರಡು ಕಣ್ಣುಗಳು ಎಂಬುದಾಗಿ ಕರೆಯಲಾಗುತ್ತದೆ. ವಚನ ಚಳವಳಿಯ ಕಾಲ ಕ್ರಿ.ಶ. ಹನ್ನೆರಡನೆಯ ಶತಮಾನ. ಜಡಗೊಂಡಿದ್ದ ಸಮಾಜೋ ಧಾರ್ಮಿಕ ಜೀವನಕ್ಕೆ ಭಕ್ತಿಭಂಡಾರಿ ಬಸವಣ್ಣ, ಮಹಾನ್ ದಾರ್ಶನಿಕ ಜ್ಞಾನಿ ಅಲ್ಲಮಪ್ರಭುಗಳೇ ಮೊದಲಾಗಿ ಅನೇಕ ವಿಶಿಷ್ಟ ವ್ಯಕ್ತಿಗಳು ಹೊಸ ದೃಷ್ಟಿಧೋರಣೆಗಳ ಮೂಲಕ ಚೇತನಾತ್ಮಕ ಆಯಾಮವನ್ನು ನೀಡಿದರು. ಎಲ್ಲಾ ವಿಚಾರಗಳು ಆಚಾರಗಳಾಗಿ, ಸಂಪ್ರದಾಯಗಳಾಗಿ ಜನಸಾಮಾನ್ಯರ ಬದುಕು ವಿವಿಧ ನೆಲೆಗಳಿಂದ ಸಂಕೀರ್ಣಗೊಂಡಿತ್ತು. ವೈದಿಕ ಧರ್ಮದ ಯಜ್ಞಯಾಗಾದಿಗಳು ಮತ್ತು ಕರ್ಮಸಿದ್ಧಾಂತಗಳು, ಜೈನಧರ್ಮದ ಜೀವನ ನಶ್ವರ ಮತ್ತು ದೇಹದಂಡನೆಯ ವಿಚಾರಗಳು ಮತ್ತು ಬೌದ್ಧಧರ್ಮದ ನಿರೀಶ್ವರ ಅಥವಾ ಶೂನ್ಯವಾದದ ಚಿಂತನೆಗಳು ಜನಸಾಮಾನ್ಯರಿಗೆ ವಿಚಲಿತಗೊಳಿಸಿದ್ದವು. ಹಾಗಾಗಿ ಅನುಯಾಯಿ ಭಕ್ತರ

Scanned with CamScanner

ದೊಡ್ಡ ಸಮೂಹವೊಂದು ನಿರ್ಮಾಣವಾಗಿತ್ತು. ಅವರಿಗೆ ನಿಜವಾದ ಸಮಾಜೋಧರ್ಮ ಯಾವುದು, ತಮ್ಮ ಜೀವನದಲ್ಲಿ ಯಾವ ಧರ್ಮದ ಮೂಲಕ ಸಾರ್ಥಕತೆಯನ್ನು ಕಾಣಬಹುದು ಎಂಬ ಪ್ರಶ್ನೆಗಳಿಗೆ ಉತ್ತರಗಳಿರಲಿಲ್ಲ. ವರ್ಣಾಶ್ರಮ ಪದ್ಧತಿಯು ಜಾತಿ ವ್ಯವಸ್ಥೆಯಾಗಿ ಶ್ರೇಷ್ಠ–ಕನಿಷ್ಠ, ಅಕ್ಷರಸ್ಥರು–ಅನಕ್ಷರಸ್ಥರು, ಭೂಸುರರು–ಸಾಮಾನ್ಯರು, ಸ್ಪೃಶ್ಯರು–ಅಸ್ಪೃಶ್ಯರು, ಪುಣ್ಯವಂತರು–ಪಾಪಕರ್ಮಿಗಳು ಎಂಬಿವೇ ಮೊದಲಾದವು ಜನಸಾಮಾನ್ಯರ ಜೀವನವನ್ನು ನಿರ್ಬಂಧಿಸಿ ತಾವು ಬದುಕಿ ಏನು ಪ್ರಯೋಜನ? ಎಂಬಂತಹ ನಿರಾಶಾವಾದವನ್ನು ಮೂಡಿಸಿದ್ದವು. ಇಂತಹ ಸಂಕೀರ್ಣ ಸಂದರ್ಭದಲ್ಲಿ ಯಾವ ನಿರ್ಬಂಧಗಳೂ ಇಲ್ಲದೆ ಯಾರು ಬೇಕಾದರೂ ಭಕ್ತರಾಗಬಹುದು, ಶಿವಸಾನಿಧ್ಯವನ್ನು ತಮ್ಮ ಭಕ್ತಿ ಮತ್ತು ಕಾಯಕದ ಮೂಲಕ ಪಡೆಯಬಹುದು ಎಂಬುದಾಗಿ ಬೋಧಿಸಿ ಎಲ್ಲರಿಗೂ ಮುಕ್ತ ಆಹ್ವಾನ ನೀಡಿದರು. 'ಭಕ್ತಿಪ್ರಿಯ ಶಿವ'ನ ಆರಾಧನೆಯನ್ನು ಸರಳ ಮತ್ತು ಸ್ವಾನುಭವದ ನೆಲೆಯಿಂದ ಬೋಧಿಸಿ ಜನಸಾಮಾನ್ಯರ ಜೀವನದ ಪ್ರಶ್ನೆಗಳಿಗೆ ತಾವೇ ಉತ್ತರ ಮತ್ತು ಅರ್ಥವನ್ನು ಕಂಡುಕೊಳ್ಳುವಂತೆ ಮಾಡಿದ ಶ್ರೇಯಸ್ಸು ವಚನ ಚಳವಳಿಯದ್ದಾಗಿದೆ. ಭಕ್ತ ಮತ್ತು ಭವಿ ಎಂಬ ಸಾಮಾನ್ಯ ವಿಚಾರಗಳ ಮೂಲಕ ಯಾರಾದರೂ ಭಕ್ತರಾಗಬಹುದು ಎಂಬ ವಿಶಾಲ ತತ್ತ್ವದ ನೆಲೆಯಲ್ಲಿ ಜನಸಾಮಾನ್ಯರನ್ನು ಸ್ಪಂದಿಸಿದರು. ತಮಿಳುನಾಡಿನ ನಾಯನ್ಮಾರರ ಶೈವ ಚಳವಳಿ ಮತ್ತು ಕಾಶ್ಮೀರ ಶೈವ, ಬೌದ್ಧರ ವಜ್ರಾಯಾನ ಪಂಥ ಮತ್ತು ನಾಥಪಂಥದ ವಿಚಾರ ಚಿಂತನೆಗಳ ಪರಂಪರೆಯ ನೆಲೆಯಿಂದ ತಮ್ಮ ಸಮಕಾಲೀನ ಸಮಾಜದ ಎಲ್ಲಾ ಪ್ರಶ್ನೆಗಳನ್ನು ಪ್ರಾಯೋಗಿಕ ನೆಲೆಯಿಂದ ಪರಿಶೀಲಿಸಿ ಉತ್ತರ ಕಂಡುಕೊಳ್ಳುವಂತೆ ಮಾಡಿದುದು ಈ ವಚನಕಾರರ ಪ್ರಮುಖ ಸಾಧನೆಯಾಗಿದೆ. ಎಂತಲೇ ಇದನ್ನು 'ಅನುಭಾವಿಗಳ ಚಳವಳಿ' ಎಂಬುದಾಗಿ ಪರಿಭಾವಿಸಿರುವುದು. ಆದ್ಯ ವಚನಕಾರ ಜೇಡರದಾಸಿಮಯ್ಯ, ಕೊಂಡುಗುಳಿ ಕೇಶಿರಾಜ ಅವರಿಂದ ಆರಂಭವಾದ ಈ ನಿಜಭಕ್ತಿಯ ಅನಾವರಣವು ಬಸವಣ್ಣನವರು ಕಲ್ಯಾಣಕ್ಕೆ ಬಂದು ಚಾಲುಕ್ಯ ದೊರೆ ಬಿಜ್ಜಳನ ಮಂತ್ರಿಯಾಗಿ ಅದನ್ನೇ ತಮ್ಮ ಸಮಾಜೋದ್ಧಾರಕ ಕರ್ಮಭೂಮಿಯನ್ನಾಗಿ ಮಾಡಿಕೊಂಡ ನಂತರ ಈ ನಿಜಭಕ್ತಿಯ ಅನಾವರಣಕ್ಕೆ ವಿಶಾಲವಾದ ಸಾಮಾಜಿಕ ಆಯಾಮವೊಂದು ಪ್ರಾಪ್ತವಾಯಿತು ಎಂಬುದನ್ನು ನಾವು ಗಮನಿಸುವುದು ಅತ್ಯಗತ್ಯವಾಗಿದೆ. ಈ ವಚನ ಚಳವಳಿಯ ಎರಡನೆಯ ಘಟ್ಟದ ಪ್ರಮುಖ ರೂವಾರಿ ಮತ್ತು ಶಿವಭಕ್ತಿ ಚಳವಳಿಯ ನಿಜವಿಸ್ತಾರದ ಅದ್ವರ್ಯು ಚೆನ್ನಬಸವಣ್ಣನವರಾಗಿದ್ದಾರೆ.

'ಅವಿರಳ ಮಹಾಜ್ಞಾನಿ', 'ಷಟ್‌ಸ್ಥಲ ಚಕ್ರವರ್ತಿ' ಎಂಬುದಾಗಿ ಅಲ್ಲಮಪ್ರಭು ದೇವರಿಂದಲೇ ಕೀರ್ತಿಸಿಕೊಂಡಿದ್ದ ಚೆನ್ನಬಸವಣ್ಣನವರು ಭಕ್ತಿಭಂಡಾರಿ ಬಸವೇಶ್ವರರ ಸೋದರಳಿಯ. ಅಂದರೆ ಬಸವಣ್ಣನವರ ಸೋದರಿ ನಾಗಲಾಂಬಿಕೆ ಅಥವಾ ಅಕ್ಕನಾಗಮ್ಮ ಮತ್ತು ಶಿವದೇವರ ಮಗ. ಇವರ ಕಾಲ ಕ್ರಿ.ಶ.ಸು. 1140. ಬಸವಣ್ಣನವರು ಕರ್ಮಲತೆಯ ದ್ಯೋತಕವಾದ ಜನಿವಾರ ಧಾರಣೆಯ ಸಂದರ್ಭದಲ್ಲಿ ಎಲ್ಲರೂ ಸನಗೆ ಅಸ್ಪೃಶ್ಯತೆನಿಸುವಂತಹ ಯಾವುದೇ ಕರ್ಮಬಂಧಗಳು ಬೇಡವೆಂದು

ತಿರಸ್ಕರಿಸಿ ಕೂಡಲಸಂಗಮಕ್ಕೆ ಹೊರಟು ಬಂದರು. ಆಗ ಅವರೊಂದಿಗೆ ಸೋದರಿ ಅಕ್ಕನಾಗಮ್ಮನವರೂ ಬಂದರು. ಅಲ್ಲಿಯೇ ಜನುಮವಡೆದವರೂ ಈ ಮಹಾನ್ ಜ್ಞಾನಿ ಚೆನ್ನಬಸವಣ್ಣನವರು. ಈ ಮಗುವಿನ ತೇಜೋರೂಪವನ್ನು ಕಂಡು ವಿಸ್ಮಿತರಾದ ಬಸವಣ್ಣನವರು 'ಇಂದು ಹುಟ್ಟಿದ ಕೂಸಿಗೆ ಇಂದೇ ಜವ್ವನವಾಯಿತು' ಎಂಬುದಾಗಿ ಉದ್ಗಾರ ಮಾಡಿದ್ದರು. ಈ ಮಗು 'ಕಾರಣಿಕ ಪುರುಷ' ಎಂಬ ನೆಲೆಯಲ್ಲಿಯೇ ವೀರಶೈವ ಕಾವ್ಯಗಳಲ್ಲಿ ಪೌರಾಣಿಕ ಆಯಾಮಗಳಲ್ಲಿವ್ಯಕ್ತವಾಗಿದೆ. ಅಂದರೆ ಈ ಮಗುವಿನ ತಂದೆ ಸಾಕ್ಷಾತ್ ಪರಮೇಶ್ವರ ಎಂಬುದು ಈ ಎಲ್ಲಾ ಕವಿ ಮತ್ತು ಧರ್ಮಜ್ಞಾನಿಗಳ ಅಭಿಪ್ರಾಯವಾಗಿದೆ. ಹರಿಹರ, ಭೀಮಕವಿ ಮತ್ತು ತೆಲುಗಿನ ಪಾಲ್ಕುರಿಕೆ ಸೋಮನಾಥ ಇವರು ಯಾರಲ್ಲಿಯೂ ಚೆನ್ನಬಸವಣ್ಣನವರ ತಂದೆಯ ಹೆಸರಿನ ಪ್ರಸ್ತಾಪವಿಲ್ಲ. ಲಕ್ಕಣ್ಣ ದಂಡೇಶ ತನ್ನ 'ಶಿವತತ್ತ್ವ ಚಿಂತಾಮಣಿ' (ಕ್ರಿ.ಶ.ಸು. 1425)ಯಲ್ಲಿ ಮೊದಲಿಗೆ ಇವರ ಜನನದ ವರ್ಣನೆ ಹೀಗಿದೆ: 'ಒಂದು ದಿನ ಬಸವಣ್ಣ ದೊರೆಯ ಕರೆಯಂತೆ ರಾಜಾಸ್ಥಾನಕ್ಕೆ ಹೋಗುವಾಗ, ಜಂಗಮದ ತೀರ್ಥ ಪ್ರಸಾದಗಳನ್ನು ಕಾಯ್ದುಕೊಂಡಿರುವಂತೆ ಅಕ್ಕನಾಗಮ್ಮನವರಿಗೆ ಹೇಳಿ ಹೋಗುತ್ತಾರೆ. ಅದನ್ನು ಕಾಯುತ್ತಾ ಕುಳಿತಿದ್ದ ಅಕ್ಕನಾಗಮ್ಮನವರಿಗೆ ತೂಕಡಿಕೆ ಬರಲಾರಂಭಿಸುತ್ತದೆ. ಆಗ ಒಂದು ಬೆಕ್ಕು ಅಲ್ಲಿಗೆ ಬಂದು ಆ ಪ್ರಸಾದಕ್ಕೆ ಬಾಯಿ ಹಾಕಲು ಮುಂದಾಗುವುದು. ಆಗ ಆಸ್ಥಾನದಲ್ಲಿದ್ದ ಬಸವಣ್ಣನವರು ಅದನ್ನು ತಮ್ಮ ದಿವ್ಯದೃಷ್ಟಿಯಿಂದ ತಿಳಿದು ಅಲ್ಲಿಂದಲೇ ಕೈಬೀಸಿ ಬೆಕ್ಕನ್ನು ಓಡಿಸುತ್ತಾರೆ. ಇದರಿಂದ ಅಚ್ಚರಗೊಂಡ ನಾಗಾಂಬಿಕೆಯವರು ಆ ಪ್ರಸಾದವನ್ನು ತೆಗೆದುಕೊಂಡು ಸೇವಿಸುತ್ತಾರೆ. ಅದರಿಂದ ಗರ್ಭಧರಿಸಿ 'ಸುಜ್ಞಾನಮೂರ್ತಿ'ಯ ಅವತಾರಕ್ಕೆ ಕಾರಣವಾಗುತ್ತಾಳೆ. ಆತನೇ ಚೆನ್ನಬಸವಣ್ಣ ಎಂಬ ಅಭಿದಾನವನ್ನು ಪಡೆಯುತ್ತಾನೆ' (ಅವಿರಳಜ್ಞಾನಿ ಚನ್ನಬಸವಣ್ಣ, 8–9) ಎಂಬುದಾಗಿ ಎಚ್. ತಿಪ್ಪೇರುದ್ರಸ್ವಾಮಿಯವರು ತಮ್ಮ ಕೃತಿಯಲ್ಲಿ ಹೇಳಿದ್ದಾರೆ. ಹಾಗೆಯೇ ಮುಂದಿನವರಾದ ಚಾಮರಸ, ಶಿವಗಣಪ್ರಸಾದಿ ಮಹದೇವಯ್ಯ, ಹಲಗೆಯಾರ್ಯ, ಸಿದ್ಧನಂಜೇಶ, ಚನ್ನಪ್ಪಕವಿ ಮೊದಲಾದವರು ಈ ಜನನ ಸಂದರ್ಭವನ್ನು 'ಪ್ರಸಾದಕಾಯ', 'ಷಟ್‌ಸ್ಥಲ ಬ್ರಹ್ಮಿ' ಎಂಬ ನೆಲೆಯಲ್ಲಿ ಕಾರಣಿಕ ಪುರುಷ ಎಂಬ ಚೌಕಟ್ಟಿನಲ್ಲಿ ಬೆಳೆಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. 'ಶಿವಂ ತಾನೇ ಪ್ರಾಣಲಿಂಗ ಸಂಬಂಧ ನಿರ್ಣಯಮಂ ಬಸವಂಗೆ ತೋರ್ಪೆನೆಂದು ಪ್ರಸಾದಮುಖದಿಂದ ನಾಗಾಂಬಿಕೆಯ ಗರ್ಭದೊಳು ಚೆನ್ನಬಸವಣ್ಣನೆಂಬ ನಾಮದಿಂದೊಗೆದು...' ಎಂಬ ಶಿವಗಣಪ್ರಸಾದಿ ಮಹದೇವಯ್ಯನವರು ತಮ್ಮ 'ಶೂನ್ಯಸಂಪಾದನೆ' ಕೃತಿಯಲ್ಲಿ ವರ್ಣಿಸಿದ್ದಾರೆ. ಈ ವಿಚಾರಗಳು ಅಸಂಗತವೆನಿಸುವುದಿಲ್ಲ. ಕಾರಣ ಚೆನ್ನಬಸವಣ್ಣನವರು ಬಾಲ್ಯದಿಂದಲೇ ತಮ್ಮ ಅಪಾರಭಕ್ತಿ ಮತ್ತು ಧಾರ್ಮಿಕ ವಿಚಾರಗಳಿಂದ ಅತ್ಯಂತ ಆಕರ್ಷಣೀಯ ವ್ಯಕ್ತಿಯಾಗಿ ಶರಣ ಸಮೂಹದಲ್ಲಿ ಕಾಣಿಸುತ್ತಾರೆ. ಈ ಸಣ್ಣ ವಯಸ್ಸಿನಲ್ಲಿಯೇ ಸಂಸ್ಕೃತ ಮತ್ತು ಕನ್ನಡ ಈ ಎರಡೂ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಮತ್ತು ಪ್ರಭುತ್ವವನ್ನು ಸಾಧಿಸಿದ್ದರು. ಅವರ ಜ್ಞಾನ–ಕ್ರಿಯಾದಂತಹ ಧಾರ್ಮಿಕ ವಿಚಾರಗಳು ಅವರನ್ನು

Scanned with CamScanner

'ಕಿರಿಯರಾದರೂ ಹಿರಿತನದ' ಸ್ಥಾನ ಪಡೆಯುವುದಕ್ಕೆ ಕಾರಣವಾಯಿತು ಎಂಬುದನ್ನು ಗಮನಿಸಿದಾಗ ಚೆನ್ನಬಸವಣ್ಣನವರ ವ್ಯಕ್ತಿತ್ವದ ಗಾಂಭೀರ್ಯವು ನಮ್ಮ ಅರಿವಿಗೆ ಬರುತ್ತದೆ.

ಕಲ್ಯಾಣದಲ್ಲಿ ಬಸವಣ್ಣನವರು ಕಲ್ಯಾಣದಲ್ಲಿ ನಿಜಾನುಭವದ ಮೂಲಕ ತಮ್ಮ ಸಮಾಜೋ-ಧಾರ್ಮಿಕ ವಿಚಾರಗಳನ್ನು ಅಭಿವ್ಯಕ್ತಿಸುತ್ತಿದ್ದರು. ಮೊದಲೇ ಸಂಕೀರ್ಣ ಪರಿಸ್ಥಿತಿಯಿಂದ ದಿಕ್ಕುತೋಚದೆ ಕಂಗಾಲಾಗಿದ್ದ ಜನಸಮುದಾಯವು ಅದನ್ನು ಒಪ್ಪಿ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರಾಗಿ ಬಂದು ಸೇರಿದರು. ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ, ಮಾದರ ಚೆನ್ನಯ್ಯ, ಹರಳಯ್ಯ, ಧೂಳಯ್ಯ, ನುಲಿಯ ಚಂದಯ್ಯ ಮೊದಲಾಗಿ ಕೇವಲ ಸುತ್ತಮುತ್ತಲಿನವರು ಮಾತ್ರ ಇಲ್ಲಿ ನೆರೆದಿರಲಿಲ್ಲ. ಆಫ್ಘಾನಿಸ್ತಾನದಿಂದ ಮರುಳಶಂಕರದೇವ ಎಂಬ ಭಕ್ತರು ಆಗಮಿಸಿ ಪ್ರಸಾದಕುಂಡವನ್ನು ಕಾಯುವ ಕಾಯದಲ್ಲಿ ನಿರತರಾಗಿದ್ದರು. ಇನ್ನು ಕಾಶ್ಮೀರದ ರಾಜ ಮಹದೇವ ಎಂಬುವವರು ಕಲ್ಯಾಣಕ್ಕೆ ಬಂದು ಕಟ್ಟಿಗೆ ಮಾರುವ ಕಾಯಕ ಮಾಡುತ್ತಾ ಮೋಳಿಗೆ ಮಾರಯ್ಯ ಎಂಬ ಅಭಿದಾನಕ್ಕೆ ಕಾರಣರಾಗಿದ್ದಾರೆ. ಈ ಭಕ್ತ ಸಮುದಾಯದವರಿಗೆ ಕೇವಲ ತನ್ನ ಅನುಯಾಯಿಗಳನ್ನಾಗಿ ಮಾಡಿಕೊಳ್ಳಲಿಲ್ಲ. ಬದಲಾಗಿ ಅವರಿಗೆ 'ಧಾರ್ಮಿಕ ಪ್ರಜ್ಞೆ' ದೇವೀಗುಣವನ್ನು ಬೋಧಿಸುವ ಮೂಲಕ ಅವರಲ್ಲಿ 'ನಿಜಧರ್ಮ'ದ ಅರಿವನ್ನು ಮೂಡಿಸುವುದಕ್ಕೆ ಉದ್ಯೋಗಿಸಿದರು. ಅದಕ್ಕಾಗಿ 'ಮಹಾಮನೆ'ಯನ್ನು ಸ್ಥಾಪಿಸಿದರು. ಅದೇ ಮುಂದೆ 'ಅನುಭವಮಂಟಪ'ವಾಯಿತು. ಈ ಅನುಭವಮಂಟಪದ ನೇತೃತ್ವವನ್ನು ಶಿವಯೋಗಿಗಳಾದ ಅಲ್ಲಮಪ್ರಭು ದೇವರಿಗೆ ವಹಿಸಿದರು. ಇದನ್ನು ಕರ್ತಾರನ ಕಮ್ಮಟ ಎಂಬುದಾಗಿ ಹೇಳಬಹುದಾಗಿದೆ. ಶರಣರೆಲ್ಲರೂ ಇಲ್ಲಿ ತಂತಮ್ಮ ಕಾಯಕದ ಮೂಲಕ ನಿಜಾನುಭವವನ್ನು ಅಭಿವ್ಯಕ್ತಿಸುವುದಕ್ಕೆ ಸಾಧ್ಯವಾಯಿತು. ಆಗ ಅಲ್ಲಿಯೇ ಇದ್ದಂತಹ ಬಾಲಕ ಚೆನ್ನಬಸವಣ್ಣನವರಿಗೆ ಇಂತಹ ಭಕ್ತಿ-ಅನುಭಾವಗಳ ಸಾಂಸ್ಕೃತಿಕ ಪರಿಸರವು ದಾರ್ಶನಿಕ ಜ್ಞಾನಿಯಾಗಿ ಬೆಳೆಯುವುದಕ್ಕೆ ಕಾರಣವೂ ಆಯಿತು. ಬಾಲ್ಯದಲ್ಲಿಯೇ ಅನೇಕ ಧಾರ್ಮಿಕ ಪ್ರಶ್ನೆಗಳಿಗೆ ಚೆನ್ನಬಸವಣ್ಣನವರು ಉತ್ತರಿಸುತ್ತಿದ್ದರು ಅಲ್ಲಮಪ್ರಭುಗಳು ಅದನ್ನು ಒಪ್ಪುತ್ತಿದ್ದರು ಎಂದರೆ ಅವರ ಅನುಭಾವ ದೃಷ್ಟಿ ಎಷ್ಟು ಸೂಕ್ಷವೂ ಗಂಭೀರವೂ ಆದುದಾಗಿತ್ತು ಎಂಬುದನ್ನು ಮನಗಾಣಬಹುದು. ಮಾತ್ರವಲ್ಲ ಅಲ್ಲಮಪ್ರಭುಗಳು ಮತ್ತೆ ವಿಶ್ವಪರ್ಯಟನಕ್ಕೆ ಹೊರಟಾಗ ಅನುಭವಮಂಟಪದ ಆ ಸ್ಥಾನಕ್ಕೆ ಯಾರನ್ನು ನೇಮಿಸಬೇಕು ಎಂಬ ಪ್ರಶ್ನೆ ಎದುರಾಯಿತು. ಆಗ ಸ್ವತಃ ಅಲ್ಲಮಪ್ರಭುಗಳೇ 'ನಿಜಾನುಭವ ಶರಣ' ಚೆನ್ನಬಸವಣ್ಣನವರ ಹೆಸರನ್ನು ಹೇಳುತ್ತಾ, ಅವರ ಬಗೆಗೆ ಶ್ಲಾಘಿಸುತ್ತಾರೆ:

'ಕಿರಿಯರಾದಡೇನು? ಹಿರಿಯರಾದಡೇನು?
ಅರಿವಿಂಗೆ ಹಿರಿದು ಕಿರಿದು ಉಂಟೇ ಅಯ್ಯಾ?
ಆದಿ-ಅನಾದಿ ಇಲ್ಲದಂದು,
ಅಜಾಂಡ-ಬ್ರಹ್ಮಾಂಡ ಕೋಟಿಗಳುದಯವಾಗದಂದು,

ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿಯೆಂಬುದು
ಕಾಣಬಂದಿತ್ತು ಕಾಣ ಚೆನ್ನಬಸವಣ್ಣ'

ಅಲ್ಲಮಪ್ರಭುಗಳ ಹಾಗೆಯೇ ಭಕ್ತಿಭಂಡಾರಿ ಬಸವೇಶ್ವರರು 'ಬಿತ್ತದೆ ಬೆಳೆಯದೆ ಬೆಳೆದ ಹೆಬೆಳಸಿನ ರಾಶಿಯ ನೋಡಾ, ಸುಗಂಧಬಂಧ ಬಂಧುರದಂತೆ ಹಬ್ಬುತ್ತಿದೆ ಪರಿಮಳ... ಲಿಂಗಸ್ವಯವಾಗಿ ಎನಗೆ ಗತಿಪಥವ ತೋರಿಸಬೇಕೆಂದು', ಕರ್ಮಯೋಗಿ ಸಿದ್ಧರಾಮೇಶ್ವರರು 'ಕ್ರಿಯೆಯದು ಚೆನ್ನಬಸವಣ್ಣನ ಎಡಪಾದ, ಜ್ಞಾನವದು ಚೆನ್ನಬಸವಣ್ಣನ ಬಲಪಾದ, ನಾನು ಅವರ ಚಮ್ಮಾವುಗೆ' ಮೇದಾರ ಕೇತಯ್ಯರು 'ಜ್ಞಾನ ಸೂತ್ರಧಾರಿ', ಮರುಳಶಂಕರದೇವರು 'ನಿಜವುಂಡ ನಿರ್ಮಲದ ಘನ' ಎಂದು ಉದ್ಗರಿಸಿದ್ದಾರೆ. ಹಾಗೆಯೇ 'ಆಚಾರದಲ್ಲಿ ಅನುಭಾವಿ', 'ಪ್ರಸಾದದಲ್ಲಿ ಪರಿಣಾಮಿ', 'ಅವಿರಳ ಜ್ಞಾನಿ', 'ಸ್ವಯಂಭೂ ಜ್ಞಾನಿ', 'ಗುರುವಿಲ್ಲದ ಶಿಷ್ಯ' ಎಂದು ಮುಂತಾಗಿ ಬೇರೆ ಬೇರೆ ಶರಣರು ಶ್ಲಾಘಿಸಿದ್ದಾರೆ. ಹೀಗೆ ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಅಸಾಧ್ಯವಾದ ಸಮಾಜೋ-ಧಾರ್ಮಿಕ ಚಿಂತನೆ ಮತ್ತು ಕ್ರಿಯಾಶೀಲತೆಗಳಿಂದ ಶರಣ ಸಮೂಹದಲ್ಲಿ ಆಕರ್ಷಣೀಯ ವ್ಯಕ್ತಿಯಾಗಿದ್ದರು. ಇಂಥ ಮಹಾನ್ ದಾರ್ಶನಿಕನೆನಿಸಿದ ಚೆನ್ನಬಸವಣ್ಣನವರಿಗೆ ಸ್ವತಃ ಬಸವಣ್ಣನವರೂ ಲಿಂಗಧಾರಣೆ ಮಾಡಿಸಬೇಕೆಂದು ಕೋರಿದಾಗ ನಿಜಾನುಭಾವಿಗೆ ನಾನು ಮಾಡಿಸುವ ಅಗತ್ಯವಿಲ್ಲ ಎಂದು ಹೇಳಿದ್ದರು. ಕೊನೆಗೆ ಬಸವಣ್ಣನವರ ಕೈಗಳ ಸ್ಪರ್ಶವಾಗಿದ್ದ ಆ ಲಿಂಗವನ್ನು ಪಡೆದು ಧರಿಸಿ ಸ್ವತಃ ಬಸವಣ್ಣನವರನ್ನೇ ತಮ್ಮ ಧಾರ್ಮಿಕ ಗುರು ಎಂಬುದಾಗಿ ಚೆನ್ನಬಸವಣ್ಣನವರು ಕೃತಜ್ಞತೆಯಿಂದ ಉದ್ಗರಿಸಿರುವುದನ್ನು ಕಾಣಬಹುದಾಗಿದೆ.

ಈ ಎಲ್ಲಾ ಹಿರಿಯ ಶರಣರ ಆಶಯದಂತೆ 'ಅನುಭವ ಮಂಟಪ'ದ ನೇತೃತ್ವವನ್ನು ಚೆನ್ನಬಸವಣ್ಣನವರು ವಹಿಸಿಕೊಂಡು ಗಂಭೀರವಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದರು. ಹಾಗೆಯೇ ಮಹಾಮನೆಯ ದಾಸೋಹಾದಿ ಕಾರ್ಯಗಳಿಗೆ ಒಂದು ಸುವ್ಯವಸ್ಥೆಯು ಬರುವಂತೆ ಮಾಡಿದ್ದರು. ಸಮಾಜೋಧರ್ಮದ ಬಗೆಗಿನ ಯಾವುದೇ ಪ್ರಶ್ನೆಗಳೆಲ್ಲವೂ ಇಲ್ಲಿ ಚರ್ಚೆಗೆ ಒಳಗಾಗುತ್ತಿದ್ದವು. ಎಲ್ಲರಿಗೂ ನಿಜಾನುಭವದ ವ್ಯಕ್ತಿತ್ವ ಮತ್ತು ಲಿಂಗಧಾರಣೆಗಳ ಮೂಲಕ ಪರಿಶುದ್ಧ ಮನಸ್ಸಿನವರಾಗುವುದರ ಅಗತ್ಯವನ್ನು ಮತ್ತೆ ಮತ್ತೆ ಒತ್ತಿ ಹೇಳುತ್ತಿದ್ದರು. ಸ್ವತಃ ಶ್ರೇಷ್ಠ ತತ್ತ್ವದಾರ್ಶನಿಕರಾದ ಅಲ್ಲಮಪ್ರಭುದೇವರ ಎದುರು ಸತಾರ್ಕಿಕವಾಗಿ ವಾದಮಂಡಿಸಿ ಕರ್ಮಯೋಗಿ ಸಿದ್ಧರಾಮೇಶ್ವರರಿಗೂ ಲಿಂಗಧಾರಣೆ ಮಾಡಿಸಿದ ಪ್ರಸಂಗದ ಬಗೆಗೆ ಇಲ್ಲಿ ನೆನಪಿಸಿಕೊಳ್ಳಬಹುದು. ಶರಣ ಸಮೂಹಕ್ಕೆ ಹೀಗೆ ಒಂದು ಧಾರ್ಮಿಕ ಅಸ್ಮಿತೆಯನ್ನು ತರುವ ಮೂಲಕ ಭಕ್ತಿ, ಕಾಯಕ ಮತ್ತು ನಿಜದರ್ಶನಗಳನ್ನು ಮನಗಾಣಿಸಿದರು. ಎಂತಲೇ ಚೆನ್ನಬಸವಣ್ಣನವರನ್ನು 'ಧಾರ್ಮಿಕ ಅನುಭಾವಿ' ಎಂಬುದಾಗಿ ಅಂದಿನ ಶರಣ ಸಮೂಹವು ಅತ್ಯಂತ ಗೌರವದಿಂದ ಸ್ತುತಿಸಿತ್ತು. ವೈಚಾರಿಕ ಪಾತಳಿಯ ಮೇಲೆ ರೂಪುಗೊಂಡಿದ್ದ ಈ ಸಮಾಜೋ-ಧಾರ್ಮಿಕ ಚಳವಳಿ ಆ ಕಾಲಕ್ಕೆ ತನ್ನ ಮುಕ್ತ ದೃಷ್ಟಿಕೋನ ಮತ್ತು ಸರ್ವಸಮಾನತೆಯ ಕಾರಣದಿಂದಾಗಿ ಅಪಾರ ಜನಸಮುದಾಯವು ಭಕ್ತರಾಗಿ ಸೇರಿಕೊಳ್ಳಲು ಕಾರಣವಾಯಿತು. ಇದರಿಂದಾಗಿ

Scanned with CamScanner

ಸ್ಥಾಪಿತವಾಗಿದ್ದ ವೈದಿಕ ಧರ್ಮದ ಪುರೋಹಿತಶಾಹಿ ವರ್ಗಕ್ಕೆ ಆಘಾತವಾದಂತಾಗಿ ಅವರು ರಾಜಪ್ರಭುತ್ವ ಮತ್ತು ಭಕ್ತಜನರ ಸಮುದಾಯದ ನಡುವೆ ಸಂಘರ್ಷವಾಗುವುದಕ್ಕೆ ಕಾರಣವಾದರು. ಸ್ವತಃ ಬಿಜ್ಜಳ ದೊರೆಯೇ ಮಹಾತ್ಮಾ ಬಸವೇಶ್ವರರ ಬಗೆಗೆ ಅನೇಕ ಪ್ರಸಂಗಗಳಲ್ಲಿ ಅನುಮಾನ ಪಟ್ಟಾಗ ತಾವು ಎಷ್ಟು ಪ್ರಾಮಾಣಿಕರೆಂಬುದನ್ನು ಪ್ರಸ್ತುತ ಪಡಿಸಬೇಕಾಯಿತು. ಮುಂದೆ ಇಂತಹ ಪ್ರಸಂಗಗಳು ಮತ್ತೆ ಮತ್ತೆ ಬರುತ್ತಿದ್ದವು, ಅದನ್ನು ಮತ್ತೆ ಸ್ಪಷ್ಟಪಡಿಸುತ್ತಿದ್ದರು. ಹರಳಯ್ಯ–ಮಧುವರಸರ ಮಕ್ಕಳ ಅಂತರ್ಜಾತಿ ವಿವಾಹದ ಕಾರಣ ಸಾಮಾಜಿಕ ಸಮಸ್ಯೆಯು ಉಲ್ಬಣಿಸಿತು. ಇದು ಶರಣ ಸಮೂಹ ಮತ್ತು ರಾಜ ಸಮೂಹಗಳ ನಡುವಣ ಸಂಘರ್ಷಕ್ಕೆ ಕಾರಣವಾಗಿ ಬಸವಣ್ಣನವರು ಸ್ವತಃ ತಾವೇ ಮಂತ್ರಿಪದವಿಯನ್ನು ತ್ಯಜಿಸಿ ಕೂಡಲಸಂಗಮಕ್ಕೆ ಬಂದರು. ಇತ್ತ ಹರಳಯ್ಯ ಮತ್ತು ಮಧುವರಸರನ್ನು ಎಳೆಹೂಟೆ ಶಿಕ್ಷೆಗೆ ಗುರಿಪಡಿಸಿ ಬಹಿರಂಗವಾಗಿ ಅಸುನೀಗುವಂತೆ ಮಾಡಿದರು. ಹಾಗೆಯೇ ಅವರ ಮಕ್ಕಳನ್ನು ಕೊಲ್ಲಲಾಯಿತು. ಸೈನಿಕರು ಮತ್ತು ಶರಣ ಗಣಸಮೂಹದ ನಡುವೆ ಭೀಕರ ಹೋರಾಟಗಳು ನಡೆದು ರಕ್ತಪಾತ ಉಂಟಾಯಿತು. ಹೀಗೆ ಕ್ರಿ.ಶ.ಸು. 1166–67ರಲ್ಲಿ ನಡೆದ ಕಲ್ಯಾಣದ ಕ್ರಾಂತಿಯಲ್ಲಿ ದೊರೆ ಬಿಜ್ಜಳನ ಕೊಲೆಯಾಯಿತು. ಅದರ ಅಪವಾದ ಶರಣ ಸಮೂಹದ ಮೇಲೆ ಬಂದುದರಿಂದಾಗಿ ಶರಣರ ಮೇಲೆ ಆಕ್ರಮಣಗಳು ನಡೆಯಲಾರಂಭಿಸಿದವು. ಆ ಹೊತ್ತಿಗೆ ಕಲ್ಯಾಣದಲ್ಲಿ ಅಲ್ಲಮಪ್ರಭುದೇವ, ಸಿದ್ಧರಾಮೇಶ್ವರ ಮೊದಲಾದ ಪ್ರಮುಖರಾರೂ ಇರಲಿಲ್ಲ. ಇದ್ದವರು ಧಾರ್ಮಿಕ ಅನುಭಾವಿ ಚೆನ್ನಬಸವಣ್ಣನವರು ಮಾತ್ರ, ಅವರ ಮೇಲೆ ಬಿಜ್ಜಳ ದೊರೆಯ ಕಡೆಯವರು ಆಕ್ರಮಣ ಮಾಡಲು ಮುಂದಾದರು. ಆಗ ತಮ್ಮ ಭಕ್ತ ಸಮೂಹದೊಂದಿಗೆ ಚೆನ್ನಬಸವಣ್ಣನವರು ಕಲ್ಯಾಣದಿಂದ ಹೊರಟು ಉಳವಿಗೆ ಬಂದು ನೆಲೆಸಿದರು. ಒಂದು ಗುಂಪು ಕಲ್ಯಾಣದಿಂದ ಹೊರಟು ಸೊಲ್ಲಾಪುರ, ಹಲಸಂಗಿ, ವಿಜಾಪುರ, ಬಬಲೇಶ್ವರ, ಯರಗಟ್ಟಿ, ಮುರಗೋಡದ ಮಾರ್ಗವಾಗಿ ಉಳವಿಗೆ ಬಂದು ಸೇರಿಕೊಂಡಿತು. ಹಾಗೆಯೇ ಮತ್ತೊಂದು ಗುಂಪು ಕಲ್ಯಾಣದಿಂದ ಹೊರಟು ಗುಲಬರ್ಗಾ, ಜೇವರಗಿ, ಇಂಗಳೇಶ್ವರ, ಬೀಳಗಿ, ಬೈಲಹೊಂಗಲ, ಸಂಪಗಾಂವ್, ಕಲಘಟಗಿಗಳ ಮೂಲಕ ಉಳವಿಗೆ ಬಂದಿತು. ಇದು ಪಲಾಯನವಲ್ಲ; ಶರಣಧರ್ಮದ ಸಂರಕ್ಷಣೆಯ ತೀರಾ ಆಗತ್ಯವಾದ ಕಾರ್ಯವಾಗಿತ್ತು. ಎಂತಲೇ 12ನೆಯ ಶತಮಾನದ ಕ್ರಾಂತಿಯ ನಂತರ ಅಳಿಸಿ ಹೋಗಬೇಕಾಗಿದ್ದ ಶರಣ ಅಥವಾ ಭಕ್ತ ಚಳವಳಿಯ ಧರ್ಮವು ಮತ್ತೆ ಎಲ್ಲೆಡೆ ಪ್ರಸರಣವಾಗುವುದಕ್ಕೆ ಚೆನ್ನಬಸವಣ್ಣನವರು ಶರಣಧರ್ಮದ ಪ್ರಸರಣದ ಪ್ರಮುಖ ರೂವಾರಿ ಮತ್ತು ಕಾರಣೀ ಪುರುಷ ಎನ್ನಲಾಗಿದೆ. ಹೀಗೆ ಶರಣ ಧರ್ಮವು ಕಲ್ಯಾಣದಿಂದ ಹೊರಗಡೆ ಪ್ರಸರಣಗೊಂಡ ಪ್ರಮುಖವಾದ ಆರು ಕ್ಷೇತ್ರಗಳಲ್ಲಿ ಉಳವಿ ಪ್ರಮುಖವಾದುದು. ಇನ್ನುಳಿದುವು ಶ್ರೀಶೈಲ, ಹಂಪೆ, ಲಕ್ಷ್ಮೇಶ್ವರ ಮತ್ತು ಗುಮ್ಮಳಾಪುರ. ಉಳವಿಯ ಮೊದಲ ಹೆಸರು ವೀರೇಶಪುರ. ಚೆನ್ನಬಸವಣ್ಣನವರು ಅಲ್ಲಿಗೆ ಬಂದು ತಾನು ಇಲ್ಲಿ ಉಳಿವೆ ಎಂಬುದಾಗಿ ಹೇಳಿದರು ಅದೇ ಮುಂದೆ ಉಳವಿ ಎಂಬುದಾಗಿ ಹೆಸರಾಯಿತು ಎಂಬುದಾಗಿ ಹೇಳಲಾಗುತ್ತದೆ.

ಚೆನ್ನಬಸವಣ್ಣನವರ ವಚನ ಮತ್ತು ವಚನೇತರ ಸಾಹಿತ್ಯ:

ಷಟ್‌ಸ್ಥಲ ಚಕ್ರವರ್ತಿ ಎಂಬುದಾಗಿ ಪ್ರಶಂಸಿಸಲ್ಪಟ್ಟಿರುವ ಚೆನ್ನಬಸವಣ್ಣನವರು ಈಗ ಉಪಲಬ್ಧವಾಗಿರುವಂತೆ 'ಕೂಡಲಚೆನ್ನ ಸಂಗಮದೇವ' ಎಂಬ ಅಂಕಿತನಾಮದಲ್ಲಿ ಸುಮಾರು 1800 ವಚನಗಳನ್ನು ರಚಿಸಿದ್ದಾರೆ. ಹಾಗೆಯೇ 'ಕರಣ ಹಸಿಗೆ', 'ಮಿಶ್ರಾರ್ಪಣ', 'ಪದಮಂತ್ರಗೌಪ್ಯ', 'ಹಿರಿಯ ಮಂತ್ರಗೌಪ್ಯ' ಮತ್ತು 'ಘಟಚಕ್ರ' ಎಂಬ ಚಿಕ್ಕಚಿಕ್ಕದಾದ ಐದು ಕೃತಿಗಳನ್ನು ಬರೆದಿದ್ದಾರೆ. ಇವುಗಳಲ್ಲೆಲ್ಲ ಚೆನ್ನಬಸವಣ್ಣನವರ ಶಾಸ್ತ್ರವ್ಯಾಸಂಗ ವಿವೇಚನೆ, ಸಮಾಜೋ–ಧಾರ್ಮಿಕ ಚಿಂತನೆ ಮತ್ತು ಆನ್ವಯಿಕತೆಯಂತಹ ಮಹತ್ ದೃಷ್ಟಿಕೋನಗಳನ್ನು ಕಾಣಬಹುದಾಗಿದೆ. ಈ ಕೃತಿಗಳು ಅವರ ಅಮೇಯ (ಅಳತೆಯಿಲ್ಲದ) ಪ್ರವೃತ್ತಿಯ ದ್ಯೋತಕಗಳಾಗಿವೆ ಎಂಬುದನ್ನು ಮರೆಯುವಂತಿಲ್ಲ.

ಷಟ್‌ಸ್ಥಲ ವಚನಗಳ ಆಶಯ:

ಸರ್ವವ್ಯಾಪಕ ಚಿರಂತನ ಮೌಲ್ಯಗಳು ಮತ್ತು ಮಾನವೀಯತೆಯಂತಹ ಗಂಭೀರ ವಿಚಾರಗಳನ್ನು ಇವರ ವಚನಗಳಲ್ಲಿ ಕಾಣಬಹುದಾಗಿದೆ. ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಇವು ಷಟ್‌ಸ್ಥಲಗಳಾಗಿವೆ. ಮನುಷ್ಯ ಜೀವನವು ಸಾಧನೆ ಮತ್ತು ಶೋಧನೆಯ ಒಟ್ಟು ನಡೆಯಾಗಿದೆ. ಅದನ್ನು ಒಟ್ಟಾರೆ ಜೀವನಧರ್ಮದ ಮೇಲೆ ರೂಪಿಸಿಕೊಂಡಲ್ಲಿ ಜೀವನ ದಾರ್ಶನಿಕವಾಗುತ್ತದೆ. ಅದಕ್ಕಾಗಿ ಷಟ್‌ಸ್ಥಲ ಮಾರ್ಗಗಳನ್ನು ಕುರಿತು ವಿಶೇಷವಾಗಿ ಬೋಧಿಸಿರುವುದು. ಜೀವಾತ್ಮ ವ್ಯಕ್ತಿಗಳು ತಾವೇ ಶಿವಸ್ವರೂಪವೆಂದು ತಿಳಿದು ಹಾಗೆ ಆಗುವುದಕ್ಕಾಗಿ ನಿರ್ದಿಷ್ಟ ಪಥದ ಮೂಲಕ ಪರಿಕ್ರಮಿಸುವುದೆ ಧಾರ್ಮಿಕ, ಜೀವನದ ಪ್ರಮುಖ ನೆಲೆಯಾಗಬೇಕು. ಜೀವನ ಒಂದು ತತ್ವದ ಮೇಲೆ ನೆಲೆಗೊಂಡಿದ್ದರೆ, ಜೀವಿಗಳು ಧಾರ್ಮಿಕ ಆಚರಣೆಯ ನೆಲೆಯಲ್ಲಿ ಬದುಕುತ್ತಿರುತ್ತಾರೆ. ಇವೆರಡರ ನಡುವಣ ಸಮನ್ವಯವೇ ಷಟ್‌ಸ್ಥಲಗಳು. ಅಂತರಂಗ ಮತ್ತು ಬಹಿರಂಗ ಬದುಕಿನ ಸ್ವರೂಪವನ್ನು ಕಂಡುಕೊಳ್ಳುವಲ್ಲಿ ತಮ್ಮ ಅಂತಃಶಕ್ತಿಯನ್ನು ಅತ್ಯಂತ ವಿವೇಚನಾಯುಕ್ತವಾಗಿ ರೂಪಿಸಿಕೊಂಡು ನಡೆವಲ್ಲಿ ಈ ಮಾರ್ಗದ ದರ್ಶನವಾಗುತ್ತದೆ. ಪ್ರತಿಯೊಬ್ಬ ಜೀವಿಯಲ್ಲಿಯೂ ಈ 'ಶಿವತತ್ತ್ವ'ವು ಸುಪ್ತವಾಗಿ ಅಡಗಿರುತ್ತದೆ ಎಂಬುದಾಗಿ ಅಲ್ಲಮಾದಿ ಶರಣರೆಲ್ಲರೂ ತಂತಮ್ಮ ವಚನಗಳಲ್ಲಿ ಹೇಳಿದ್ದಾರೆ. ಅದರಂತೆ ಷಡುಸ್ಥಲಬ್ರಹ್ಮಿ ಎಂಬುದಾಗಿ ಶ್ಲಾಘಿಸಲ್ಪಟ್ಟಿರುವ ಚೆನ್ನಬಸವಣ್ಣನವರೂ ಸಹಾ ತಮ್ಮ ವಚನಗಳಲ್ಲಿ ಈ ಅಂತರ್ಗತ ಸುಪ್ತತೆಯ ಶಿವತತ್ತ್ವದ ನೆಲೆಗಳನ್ನು ಕಾಣಿಸುತ್ತಾರೆ:

ಮರೀಚಿಯೊಳಡಗಿದ ಬಿಸಿಲಿನಂತಿದ್ದಿತ್ತು
ಕ್ಷೀರದೊಳಡಗಿದ ತುಪ್ಪದಂತಿದ್ದಿತ್ತು
ಚಿತ್ರಕನೊಳಡಗಿದ ಚಿತ್ರದಂತಿದ್ದಿತ್ತು
ಆಲಿಯೊಳಡಗಿದ ತೇಜವಂತಿದ್ದಿತ್ತು
ನುಡಿಯೊಳಗಿದ ಅರ್ಥದಂತಿದ್ದಿತ್ತು

Scanned with CamScanner

ಕೂಡಲಚೆನ್ನಸಂಗಯ್ಯಾ ನಿಮ್ಮ ನಿಲವು'
'ಫಲದೊಳಗಣ ಮಧುರ ಗೋಪ್ಯದಂತಿದ್ದಿತ್ತು
ಚಂದ್ರಕಾಂತದ ಉದಕದ ತೆರನಂತಿದ್ದಿತ್ತು
ಮಯೂರನ ತತ್ತಿಯ ಚಿತ್ರದಂತಿದ್ದಿತ್ತು
ಶಿಶುಕಂಡ ಕನಸಿನ ಪರಿಯಂತಿದ್ದಿತ್ತು
ಕೂಡಲ ಚೆನ್ನಸಂಗಯ್ಯಾ (ನಿಮ್ಮ ನಿಲವು)
ಸದ್ಗುರುಚಿತ್ತದ ಪದದಂತಿತ್ತು

ದೇಹ–ಮನಸ್ಸು, ಪದ–ಪದಾರ್ಥಗಳ ಒಟ್ಟು ನೆಲೆಯಲ್ಲಿ ಅಭಿವ್ಯಕ್ತಗೊಂಡಿರುವ ಈ ವಚನಗಳ ಆಶಯ ಪಿಂಡಾಂಡಜ್ಞಾನದ ಸ್ವರೂಪ ಮತ್ತು ಜೀವಾತ್ಮರ ಶಕ್ತಿಸಾಮರ್ಥ್ಯದ ಬಗೆಗೆ ಗಂಭೀರವಾದ ಅರಿವನ್ನು ತರುವಂತಹುಗಳಾಗಿವೆ. ಮನುಷ್ಯರು ಅನುಕರಣ ಜೀವಿಯಾಗಿ ಜೀವಿಸುತ್ತಿರುವುದರಿಂದ ತಮ್ಮಲ್ಲಿರುವ ಈ ಸುಪ್ತಶಕ್ತಿಯ ವಿಚಾರವಾಗಿ ಸಂಪೂರ್ಣ ವಿಸ್ಮೃತಿಗೆ ಒಳಗಾಗಿದ್ದಾರೆ. ಇದರಿಂದಾಗಿ ತಮ್ಮೊಳಗಿನ ಸತ್‌ಶಕ್ತಿಯ ತೇಜೋ ಸ್ವರೂಪವನ್ನು ಅವರು ಅರಿಯದೆ ಮರೆವಿನ ನೆಲೆಯಲ್ಲಿಯೇ ಜೀವನ ಸಾಗಿಸುತ್ತಾ ಅತೃಪ್ತಿ, ಅಸಂತೋಷಗಳಿಂದ ಕಾಮಕ್ರೋಧಾದಿ ಗುಣಗಳನ್ನು ಮನಸ್ಸಿನಲ್ಲಿ ಪ್ರಧಾನಗೊಳಿಸಿಕೊಂಡಿರುವುದರಿಂದ ಜೀವನ ಸಂಕೀರ್ಣವಾಗಿದೆ. ಈ ಕಾಯಗುಣ ಮತ್ತು ಕ್ಷಣಿಕ–ಕ್ಷುಲ್ಲಕ ವಿಚಾರಗಳಿಂದ ದೂರವಾಗಿ ಜೀವನವನ್ನು ಪ್ರಾಯೋಗಿಕ ನೆಲೆಯಲ್ಲಿ ರೂಪಿಸಿಕೊಂಡರೆ ಸಾರ್ಥಕತೆಯ ನೆಲೆ ಮತ್ತು ಸದ್ಗುರುಚಿತ್ತದ ಸ್ವರೂಪವೇನು ಎಂಬುದು ತಂತಾನೆ ತಿಳಿಯುವುದು. ಚೆನ್ನಬಸವಣ್ಣನವರು ಸಮಕಾಲೀನ ಬದುಕಿನ ಡಾಂಭಿಕತೆ, ವ್ಯಾವಹಾರಿಕತೆ ಮತ್ತು ಮಾನಸಿಕ ಅಶುದ್ಧತೆಗಳನ್ನು ಅರಿತು ಅದನ್ನು ವಿಡಂಬಿಸುತ್ತಲೇ ವ್ಯಕ್ತಿತ್ವ ನೆಲೆ ಮತ್ತು ಆಳಗಳನ್ನು ಮನಗಾಣಿಸುವುದಕ್ಕೆ ತೀಕ್ಷ್ಣವಾದ ನೆಲೆಯಿಂದಲೇ ವಚನಗಳನ್ನು ಬರೆದಿದ್ದಾರೆ.

ಭಕ್ತ ಮತ್ತು ಭಕ್ತಿ:

ಮನುಷ್ಯ ಬದುಕು, ವಿಚಾರ ಮತ್ತು ಆಚಾರಗಳ ಒಟ್ಟುಸ್ವರೂಪವಾಗಿದೆ. ವಿಚಾರಗಳಿಲ್ಲದೆ ಕೇವಲ ಆಚಾರಗಳಲ್ಲಿ ಅನೇಕರು ಜೀವನ ಸಾಗಿಸುತ್ತಿದ್ದಾರೆ. ಅಂತರಂಗ ಮತ್ತು ಬಹಿರಂಗಗಳ ಆನ್ವಯಿಕತೆಯಾಗದೆ ತೋರ್ಪಡಿಕೆಯ ನೆಲೆಯಲ್ಲಿ ಜೀವನವನ್ನು ಸಾಗಿಸುತ್ತಿರುವುದರಿಂದ ಶಿವನ ಸತ್ಪಥವು ಕಾಣಿಸದಾಗಿದೆ:

'ಹಲವು ಕಾಲ ಹಂಸೆಯ ಸಂಗದಲ್ಲಿದ್ದರೆ ಬಕನು ಶುಚಿಯಾಗಬಲ್ಲುದೆ?
ನಿಧಿನಿಧಾನದೊಳಗಿದ್ದರೇನು ಪಾಷಾಣ ಹೊನ್ನಾಗಬಲ್ಲುದೆ?
ಕಲ್ಪತರುಗಳ ಸಂಗದಲ್ಲಿದ್ದರೇನು ಕೊರಡು ಫಲವಾಗಬಲ್ಲುದೆ?
ಕಾಶೀಕ್ಷೇತ್ರದಲ್ಲಿ ಶುನಕನಿದ್ದರೇನು ಅದರ ಕ್ಷೀರ ಪಂಚಾಮೃತವಾಗಬಲ್ಲುದೆ?
ಖಂಡುಗ ಹಾಲೊಳಗೆ ಇದ್ದಿಲ ಹಾಕಿದರೇನು ಬಿಳಿದಾಗಬಲ್ಲುದೆ?

ಇದು ಕಾರಣ ಕೂಡಲಚೆನ್ನಸಂಗನ ಶರಣರ ಸನ್ನಿಧಿಯಲ್ಲಿದ್ದರೇನು
ಅಸಜ್ಜನ ಸದ್ಭಕ್ತನಾಗಬಲ್ಲನೆ?' (ಚೆನ್ನಬಸವಣ್ಣನವರ ವಚನಗಳು. 41)

ಸನಿಹ ಬೇರೆ, ಸಾನಿಧ್ಯ ಬೇರೆ, ಸಾಯುಜ್ಯ ಬೇರೆ. ಸನಿಹವಿದ್ದುದೆಲ್ಲ ಸಾಯುಜ್ಯವಾಗುವುದಿಲ್ಲ ಎಂಬುದನ್ನು ಈ ವಚನದಲ್ಲಿ ಕಾಣಬಹುದು. ಬಹಿರಂಗದ ಸ್ವರೂಪದಿಂದ ಅಂತರಂಗದ ನೆಲೆಯನ್ನು ಗುರುತಿಸುವುದಕ್ಕೆ ಸಾಧ್ಯವಿಲ್ಲ. ಅಂದರೆ ಭಕ್ತರು ನಿಜವಾದ ಭಕ್ತಿಯನ್ನು ಹೊಂದಬೇಕು. ತಾವೆ ಹಂಸೆ, ನಿಧಿನಿಧಾನ, ಕಲ್ಪತರು, ಪಂಚಾಮೃತ, ಪರಿಶುದ್ಧ ಮತ್ತು ಸದ್ಭಕ್ತರಾಗಬೇಕು. ತೋರಿಕೆಯ ನೆಲೆಯ ಭಕ್ತರನ್ನು ಮತ್ತು ಭಕ್ತಿಯನ್ನು ಚೆನ್ನಬಸವಣ್ಣನವರು ಒಪ್ಪುವುದಿಲ್ಲ. ಅರ್ಥದ ಮದ, ಅಹಂಕಾರದ ಮದ, ಕುಲಮದಗಳನ್ನು ಬಿಟ್ಟಲ್ಲಿ ಮಾತ್ರವೇ ಸಮಯಾಚಾರ ಸಮಯಭಕ್ತಿ ಸಾಧ್ಯವಾಗುವುದು. ಇವುಗಳನ್ನು ಬಿಟ್ಟರೆ ಮಾತ್ರವೇ ಭಕ್ತಕಾಯವು ಮಮಕಾಯವಾಗುತ್ತದೆ. ಅಲ್ಲಿ ಸಾಯುಜ್ಯವು ಸಹಜವಾಗಿರುತ್ತದೆ.

ಇನ್ನು ಭಕ್ತನ ಸ್ವರೂಪ ಎಂಥದಿರಬೇಕು ಎಂಬ ಚೆನ್ನಬಸವಣ್ಣನವರ ವಿಚಾರವನ್ನು ಈ ವಚನದಲ್ಲಿ ನೋಡಬಹುದು:

'ಭಕ್ತ ಶಾಂತನಾಗಿರಬೇಕು,
ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು,
ಭೂತಹಿತವಹ ವಚನವ ನುಡಿಯಬೇಕು,
ಗುರುಲಿಂಗ ಜಂಗಮದಲ್ಲಿ ನಿಂದೆಯಿಲ್ಲದಿರಬೇಕು
ಸಕಲ ಪ್ರಾಣಿಗಳ ತನ್ನಂತೆ ಭಾವಿಸೂದು ಮಾಡಬೇಕು,
ತನುಮನಧನವ ಗುರುಲಿಂಗ ಜಂಗಮಕ್ಕೆ ಸವೆಸಲೇಬೇಕು,
ಅಪಾತ್ರದಾನವ ಮಾಡಲಾಗದು,
ಸಕಲೇಂದ್ರಿಯಗಳ ತನ್ನ ವಶವ ಮಾಡಬೇಕು,
ಇದೇ ಮೊದಲಲ್ಲಿ ಬೇಹ ಶೌಚ ನೋಡಾ.
ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ ಎನಗಿದೇ ಸಾಧನ
ಕೂಡಲಚೆನ್ನಸಂಗಮದೇವಾ' (ಅದೇ, 64)

ಭಕ್ತನು ಸತ್ಯ, ವಚನ, ಅನಿಂದ್ಯ, ಸರ್ವಭೂತದಯೆ, ಗುರುಲಿಂಗ ಜಂಗಮ ಸೇವೆ, ಸಕಲೇಂದ್ರಿಯಗಳ ವಶಕಾರನಾಗಿ ಲಿಂಗಪೂಜನದಿಂದ ಪ್ರಸಾದವನ್ನು ಪಡೆದು ಸಾಧನವಾಗಬೇಕೆಂಬ ವಿಚಾರ ಬಹಳ ಗಂಭೀರವಾದುದು. ಲಾಂಛನಗಳು ಬಾಹ್ಯ ತೋರಿಕೆಯಷ್ಟೆ ಸದ್ಭಕ್ತರ ದ್ಯೋತಕವಲ್ಲ. ಷಟ್‌ಸ್ಥಲದ ನೆಲೆಯಲ್ಲಿ ಮೊದಲ ಸ್ತರವೇ ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ಪರಿಶುದ್ಧತೆಯನ್ನು ಕುರಿತು ಅತ್ಯಂತ ಗಂಭೀರವಾಗಿ ಹೇಳಲಾಗಿದೆ. ಕೇವಲ ಬಹಿರಂಗ ತೋರಿಕೆಯ ಭಕ್ತರ ಪರಿಯು 'ಸುರೆಯ ಮಡಕೆಗೆ ಹೊರಗೆ ಬೂದಿಯ ಹೂಸಿದೊಡೇನು ಒಳಗು ಶುದ್ಧವಾಗಬಲ್ಲುದೆ, ಚಾಂಡಾಲ ಭಾಂಡದಲ್ಲಿ ಭಾಗಿರಥಿಯುದಕವ ತುಂಬಿದಡೇನೋ ಶುದ್ಧವಾಗಬಲ್ಲುದೆ?' ಎಂಬುದಾಗಿ

Scanned with CamScanner

ಮತ್ತೆ ಮತ್ತೆ ಹೇಳಿರುವ ಇಂತಹ ತೀಕ್ಷ್ಣವಾದ ಮಾತುಗಳು ಆ ಹೊತ್ತಿನ ಭಕ್ತ ಸಮೂಹದ ನಿಜದ ನೆಲೆಯನ್ನು ಅರ್ಥೈಸುವುವಾಗಿವೆ. ಇಂದಿಗೂ ಸದ್ಗುರು ಆಚಾರ್ಯ ಪಥವು ಮತ್ತೆ ಮತ್ತೆ ವಿಚಾರ ಮತ್ತು ಆಚಾರಗಳ ಬಗೆಗೆ ಏಕೆ ಒತ್ತಿ ಒತ್ತಿ ಹೇಳುತ್ತಲಿದೆ ಎಂಬುದರ ನಿಜವಾದ ಕಾರಣ ಜನಸಮುದಾಯ ಸಂಪ್ರದಾಯದ ನೆಲೆಯಲ್ಲಿ ಆಚಾರಗಳನ್ನು ಮಾಡುತ್ತಿದ್ದಾರೆ, ವಿಚಾರಗಳ ನೆಲೆಯಲ್ಲಿ ಅಲ್ಲ. ವಿಚಾರ–ಆಚಾರಗಳ ನೈಜ ಅನುಸಂಧಾನವಾದಲ್ಲಿ ಮಾತ್ರವೇ ಜೀವನ ಪ್ರಾಯೋಗಿಕ ಆನ್ವಯಿಕತೆಯಿಂದ ಕೂಡುವುದಕ್ಕೆ ಸಾಧ್ಯ, ಸತ್ಫಲವನ್ನು ಪಡೆಯುವುದಕ್ಕೆ ಸಾಧ್ಯ. ಅದಕ್ಕೆ ಬೇಕಾದುದು ಏನು ಎಂಬುದನ್ನು ತಮ್ಮ ವಚನಗಳಲ್ಲಿ ಬೇರೆ ಬೇರೆ ಉಪಮೆ ರೂಪಕಾದಿ ಆಯಾಮಗಳಿಂದ ಮತ್ತೆ ಮತ್ತೆ ಹೇಳಿದ್ದಾರೆ.

ಏಕೈಕ ನಿಷ್ಠೆಯೇ ಭಕ್ತಿಯ ಮೂಲ:

ಭಕ್ತಿಯ ಮೂಲ ನೆಲೆ ಏಕೈಕ ನಿಷ್ಠೆ. ಅದು ಶಿವಸಾಯುಜ್ಯ. ಅಲ್ಲಿ ಪದಾರ್ಥ ಪ್ರಸಾದವಾಗುತ್ತದೆ. ಆ ಪ್ರಸಾದವು ಬಾಹ್ಯ ವಸ್ತುಗಳನ್ನು ದೇವರಿಗೆ ಅಥವಾ ಲಿಂಗಕ್ಕೆ ಅರ್ಪಿಸುವುದರಿಂದ ಬರುವುದಿಲ್ಲ; ಬದಲಾಗಿ ಅಂತರಂಗದ ನೆಲೆಯ ಅರ್ಪಣೆಯಾಗಬೇಕು. ಅದು ಏಕೈಕ ನಿಷ್ಠೆಯಿಂದ ಮಾತ್ರವೇ ಸಾಧ್ಯವಾಗುವುದು. ಇಲ್ಲಿ ಯಾವುದರಲ್ಲೂ ಯಾವುದೇ ವ್ಯತ್ಯಾಸವು ಇರುವುದಿಲ್ಲ. ಅಥವಾ ಯಾವುದೂ ಹೀನವಲ್ಲ; ಕನಿಷ್ಟವೂ ಅಲ್ಲ. ಎಲ್ಲರೂ ಎಲ್ಲಾ ಕಾಲದಲ್ಲಿಯೂ ತಮ್ಮ ಭಕ್ತಿನಿಷ್ಠೆಯನ್ನು ಶ್ರದ್ಧಾಪೂರ್ವಕವಾಗಿ ತೋರ್ಪಡಿಸಿಕೊಳ್ಳಬಹುದು.

'ಸೋಮವಾರ ಮಂಗಳವಾರ ಶಿವರಾತ್ರಿಯೆಂದು ಮಾಡುವ ಭಕ್ತರ
ಲಿಂಗಭಕ್ತಂಗೆ ನಾನೆಂತು ಸರಿಯೆಂಬೆನಯ್ಯಾ?
ದಿನ ಶ್ರೇಷ್ಠವೋ? ಲಿಂಗ ಶ್ರೇಷ್ಠವೋ?
ಪಂಚಮಹಾಪಾತಕರ ಮುಖವ ನೋಡಲಾಗದು.
ಸೋಮೇ ಭೌಮೇ ವ್ಯತೀಪಾತೇ ಸಂಕ್ರಾತಿ ಶಿವರಾತ್ರಯೋ।
ಏಕಭುಕ್ತೋಪವಾಸೇನ ನರಕೇ ಕಾಲಮಕ್ಷಯಂ॥
ಇದು ಕಾರಣ ಕೂಡಲಚೆನ್ನಸಂಗಯ್ಯಾ
ಇಂಥವರ ಮುಖವ ನೋಡಲಾಗದು.' (ಅದೇ. 175)

ನಿತ್ಯ ಜೀವನದಲ್ಲಿ ಸಂಪ್ರದಾಯಗಳು ನಿರ್ದಿಷ್ಟಗೊಳಿಸಿ ತಿಥಿ, ವಾರ, ನಕ್ಷತ್ರಗಳ ನೆಲೆಯಿಂದ ಶ್ರೇಷ್ಠಾಶ್ರೇಷ್ಠತೆಯ ವಿಷಯವನ್ನು ಆಚಾರದಲ್ಲಿ ತಂದಿವೆ. ಆದರೆ ಸದ್ಭಕ್ತರು ಶುಭ, ತಿಥಿ, ವಾರ, ಮುಹೂರ್ತಗಳು ಎಂಬುದಾಗಿ ಕಾಯುತ್ತಾ ಕುಳಿತುಕೊಳ್ಳಬಾರದು. ಮನಕ್ಕೆ ಮನವೇ ಸಾಕ್ಷಿಯಾಗಬೇಕು. ಆಗ ಮಾತ್ರವೇ ಏಕಭಕ್ತೋಪಾಸನೆಯ ಮೂಲಕ ಶಿವಸಾಯುಜ್ಯವನ್ನು ಕಾಣುವುದಕ್ಕೆ ಸಾಧ್ಯವಾಗುತ್ತದೆ.

ಇದನ್ನು ವಿಚಾರ ಮತ್ತು ಆಚಾರಗಳಲ್ಲಿ ರೂಢಿಸಿಕೊಂಡಲ್ಲಿ ಮಾತ್ರವೇ ಮನಃಶೀಲ ಶುದ್ಧತೆಯು ಸಾಧ್ಯವಾಗುತ್ತದೆ. ಭಕ್ತರಾದವರನ್ನು ಹೇಗೆ ಕಾಣುತ್ತಾರೆ ಎಂಬುದನ್ನು ಈ ವಚನದಲ್ಲಿ ಹೇಳುತ್ತಾರೆ:

'ವೀರನಾದರೆ ಅಲಗಿನ ಮೊನೆಯಲ್ಲಿ ಕಾಣಬಹುದು,
ಧೀರನಾದರೆ ತನ್ನ ಸೋಂಕಿದಲ್ಲಿ ಅರಿಯಬಹುದು,
ಭಕ್ತನಾದರೆ ತಾಗು ನಿರೋಧದಲ್ಲಿ ಅರಿಯಬಹುದು,
ಕೂಡಲಚೆನ್ನಸಂಗಯ್ಯಾ
ಸುಜ್ಞಾನಿಯಾದರೆ ಸುಳುಹಿನಲ್ಲಿ ಅರಿಯಬಹುದು.' (ಅದೇ. 178)

ಅಂದರೆ ಎಲ್ಲರಿಗೂ ಒಂದು ಅಸ್ಮಿತೆ ಇರುವಂತೆ ಭಕ್ತರಿಗೂ ಒಂದು ಅಸ್ಮಿತೆಯು ಇರುತ್ತದೆ. ಭಕ್ತರು ತಮ್ಮ ಸುಜ್ಞಾನದ ಮೂಲಕವೇ ಇತರರಿಗೆ ತಮ್ಮ ಇರವನ್ನು ತೋರ್ಪಡಿಸುತ್ತಾರೆ. ಅವರ ಭಕ್ತಿನಿಷ್ಠೆಯು ಅಚಲವಾಗಿರಬೇಕು ಎಂಬುದಾಗಿ ಒತ್ತಿ ಹೇಳುತ್ತಾರೆ:

'ರಣವನರ್ಚಿಸಿ, ಭೂತಕ್ಕೆ ಬಲಿಯ ಕೊಡುವ ಕಲಿಯ ಮನ
ಮೊನೆಯ ಮೇಲೆ ಇಪ್ಪಂತೆ
ಸಮಯಾಚಾರವ ಮಾಡಬೇಕು,
ಮಾಡಿಹೆನೆಂಬುದು ಸಾಮಾನ್ಯವೇ?
ಇದು ಕಾರಣ ಕೂಡಲಚೆನ್ನಸಂಗಯ್ಯಾ,
ಸಮಯಭಕ್ತಿ ಸಂದಿತ್ತು ಸಂಗನಬಸವಣ್ಣಂಗೆ.' (ಅದೇ. 179)

ಸಮಯಾಚಾರವೇ ಬಹಳ ಮುಖ್ಯವಾದುದು ಭಕ್ತರಾದವರಿಗೆ ಎಂಬ ಆಶಯ ಮತ್ತು ಧ್ವನಿಯು ಇಲ್ಲಿ ವ್ಯಕ್ತವಾಗಿದೆ. ವೀರನಿಗೆ ತನ್ನ ಕತ್ತಿಯ ಮೇಲೆ ಸಂಪೂರ್ಣ ಮನಸ್ಸು ಹೇಗೆ ತೊಡಗಿಕೊಂಡಿರುತ್ತದೆಯೋ ಹಾಗೆಯೇ ಭಕ್ತನಿಗೆ ಸಮಯಾಚಾರದ ಬಗೆಗೆ ಸಂಪೂರ್ಣ ಮನಸ್ಸಿರಬೇಕು. ನಮ್ಮ ಹಿರಿಯರು ಆಗಾಗ ಹೇಳುತ್ತಿದ್ದ 'ಮುತ್ತು ಕಳೆದರೆ ಸಿಕ್ಕೀತು; ಹೊತ್ತು ಕಳೆದರೆ ಸಿಗುವುದಿಲ್ಲ' ಎಂಬ ಗಾದೆ ಮಾತು ಇಲ್ಲಿ ನೆನಪಾಗುತ್ತದೆ. ಚೆನ್ನಬಸವಣ್ಣನವರು ಭಕ್ತರು ಸಮಯಾಚಾರಿಗಳಾಗಿದ್ದರೆ ಮಾತ್ರವೇ ಸಮಯಭಕ್ತಿಯು ಸಾಧ್ಯವೆಂಬುದಾಗಿ ಹೇಳುತ್ತಾ ಸಮಯ ವ್ಯರ್ಥ ಮಾಡುತ್ತಿದ್ದವರನ್ನು ಈ ಮೂಲಕ ಸರಿದಾರಿಗೆ ತರಲು ಪ್ರಯತ್ನಿಸಿದ್ದಾರೆ ಎಂಬುದನ್ನು ಅರಿಯಬಹುದಾಗಿದೆ.

ಭಕ್ತಿ, ಧಾರ್ಮಿಕ ಶ್ರದ್ಧೆಗಳು ಅಂಧಶ್ರದ್ಧೆಗಳಾಗಬಾರದು:

ಆಚಾರಗಳಲ್ಲಿ ಸಂಪೂರ್ಣ ಅಂಧಶ್ರದ್ಧೆಯು ಆವರಿಸಿಕೊಳ್ಳುವುದಕ್ಕೆ ಸಾಧ್ಯತೆಗಳು ಹೆಚ್ಚು. ಸಮಯಾಚಾರವನ್ನು ಅರಿಯದವರು ಹೇಗೆ ಅಪಥ್ಯರೋ ಹಾಗೆಯೇ ಅಂಧಶ್ರದ್ಧಾಯುಕ್ತ ಭಕ್ತಿ, ಶ್ರದ್ಧೆಗಳನ್ನು ತೋರುವವರು ಧಾರ್ಮಿಕರಲ್ಲ ಎಂಬುದನ್ನು ಚೆನ್ನಬಸವಣ್ಣನವರು ತಮ್ಮ ವಚನಗಳಲ್ಲಿ ಮತ್ತೆ ಮತ್ತೆ ಹೇಳಿದ್ದಾರೆ. ಮರ್ಮವನರಿತು

Scanned with CamScanner

ಸ್ಮಾಡಬೇಕು ಭಕ್ತಿ ಮತ್ತು ಕರ್ಮಗಳನು. ಹಾಗೆ ಮಾಡುವವಗೆ ಯಾವುದೇ ಕರ್ಮವಿರುವುದಿಲ್ಲ:

'ಮಾಡುವರಯ್ಯಾ ಮಾಡುವರಯ್ಯಾ ಮರುಳುಗೊಂಡಂತೆ,
ಮರ್ಮವನರಿಯದ ಮಾಟ ಸಯಿದಾನದ ಕೇಡು, ಕರ್ಮದ ಬೆಳಸು.
ಕೂಡಚೆನ್ನಸಂಗನ ಶರಣರ ಅನುವರಿಯದೆ
ಮಾಡುವ ಮಾಟ ಭವ ಮಾಟ.' (ಅದೇ. 55)

ಶುದ್ಧಭಕ್ತಿಯಿಂದ ಭವತ್ವವನ್ನು ಕಳೆದುಕೊಳ್ಳಬೇಕು. ಶರಣ ಚಳವಳಿಯ ಮೂಲತತ್ವವೇ ಭವಿಗಳನ್ನು ಭಕ್ತರನ್ನಾಗಿಸುವುದು. ಭಕ್ತರಾಗುವ ಮನಸ್ಸಿದ್ದವರು ಮಾತ್ರವೇ ಇಲ್ಲಿ ಬರಬಹುದು ಎಂಬುದಾಗಿ ಮುಕ್ತ ಆಹ್ವಾನ ಕೊಟ್ಟಿದ್ದ ವಿಚಾರವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆತ್ಮಸಂಗಾತ ಮಾಡಿಕೊಳ್ಳದೆ ಭಕ್ತಿಯು ಸಾಧ್ಯವಿಲ್ಲ; ಅದು ಮರುಳುಗೊಂಡ ಮನಸ್ಸಿನ ರೀತಿಯದಾಗಿರುತ್ತದೆ. ನಿಜಸ್ತರವೇನು ಎಂಬುದನ್ನು ತಿಳಿಯದೆ ಮಾಡುವ ಯಾವುದೇ ರೀತಿಯ ಭಕ್ತಿಯು ಪದಾರ್ಥವನ್ನು ಹಾಳುಗೆಡವಿದಂಥ ಸ್ಥಿತಿಯದ್ದಾಗಿರುತ್ತದೆ.

ಕೇವಲ ಉದ್ದೇಶಕ್ಕಾಗಿ ಭಕ್ತಿಯನ್ನು ಮಾಡುವವರು 'ಎಡೆಯೆಲೆಯನು ಸಿದ್ಧಪಡಿಸಿಗೆದಿಡುವ ರೀತಿಯದ್ದಾಗಿರುತ್ತದೆ' ಎಂಬುದಾಗಿ ಮನಕ್ಕೆ ತಾಕುವಂತೆ ಮತ್ತೊಂದು ವಚನದಲ್ಲಿ ಹೇಳಿದ್ದಾರೆ.

'ಲಿಂಗ ಪ್ರೇಮಿಗಳು ಜಂಗಮದನುವನರಿಯದಡೆ
ಜಂಗಮ ಪ್ರೇಮಿಗಳು ಲಿಂಗದನುವನರಿಯದಡೆ
ಪ್ರಸಾದ ಪ್ರೇಮಿಗಳು ಲೋಕದ ಸಂಗವನರಿಯದಡೆ
ಲಿಂಗ ಪ್ರೇಮಿಗಳೂ ಅಲ್ಲ ಜಂಗಮ ಪ್ರೇಮಿಗಳೂ ಅಲ್ಲ.
ಪ್ರಸಾದ ಪ್ರೇಮಿಗಳೂ ಅಲ್ಲ. ಆ ಜೀವಿಗಳಿಗೆ ಭಕ್ತಿಯೆಲ್ಲಿಯದೊ
ಕೂಡಲಚೆನ್ನಸಂಗಮದೇವಾ.' (ಅದೇ. 60)

ಭಕ್ತರು ಶಿವಸಾಯುಜ್ಯದಲ್ಲಿ ಇಹ ಮತ್ತು ಪರಗಳೆರಡನ್ನೂ ತಿಳಿದುಕೊಂಡಿರಬೇಕು. ಅದನ್ನು ಬಿಟ್ಟರೆ ಅಂಥ ಜೀವಿಗಳು ತೋರಿಸುತ್ತಿರುವ ಅಥವಾ ಮಾಡುತ್ತಿರುವ ಭಕ್ತಿಯು ಎಂಥ ರೀತಿಯದ್ದು ಎಂಬುದನ್ನು ಆಶ್ಚರ್ಯಚಕಿತರಾಗಿ ಮತ್ತು ಖೇದಯುಕ್ತವಾಗಿ ಅಭಿವ್ಯಕ್ತಿಸಿರುವುದನ್ನು ಈ ವಚನದಲ್ಲಿ ಕಾಣಬಹುದಾಗಿದೆ.

ಅನುಭವ ಅನುಭಾವವಾಗಬೇಕು:

ಅಜ್ಞಾನದಿಂದ ಸುಜ್ಞಾನದ ಕಡೆಗೆ ನಡೆಯುವುದೇ ಭಕ್ತರಾದವರ ನಿಜವಾದ ಗುರಿ ಮತ್ತು ಮಾರ್ಗವಾಗಿರಬೇಕು. ಆಗ ಭಕ್ತರ ಅನುಭವಗಳು ಸಾರ್ವತ್ರಿಕವಾಗಿ ಅನುಭಾವಗಳಾಗುತ್ತವೆ. ಮನುಷ್ಯ ಬದುಕು ಸದಾ ಕತ್ತಲಿನಿಂದ ಬೆಳಕಿನ ಕಡೆಗೆ ಮಾಡುವಂತಹ ಪಯಣವೇ ಆಗಿರುತ್ತದೆ. ಅನುಭಾವ ಎಂಬುದು

ಪ್ರಜ್ಞಾಪೂರ್ವಕವಾದ ದಾರ್ಶನಿಕ ಸ್ತರ. ಅದು ಅಂತರಂಗ ಮತ್ತು ಬಹಿರಂಗ ಎರಡನ್ನೂ ಸಾಮರಸ್ಯಗೊಳಿಸುವುದೇ ಆಗಿರುತ್ತದೆ. ಮನುಷ್ಯ ಜೀವನ ಕಾಯಕ ಮೂಲವಾಗಿರಬೇಕು ನಿಜ; ಆದರೆ ಆ ಕಾಯಕವು ಲೌಕಿಕವಾದ ವಾಂಛೆ ಮತ್ತು ವೈಯಕ್ತಿಕವಾದ ಬದ್ಧತೆ ಮತ್ತು ಬಂಧನಗಳಿಂದ ಮುಕ್ತಗೊಳಿಸುವಂತಹ ನೆಲೆಯಲ್ಲಿ ಭಕ್ತರು ರೂಪಿಸಿಕೊಳ್ಳಬೇಕು. ಒಂದೊಮ್ಮೆ ಹಾಗೆ ಮಾಡಿಕೊಳ್ಳದೆ ಹೋದರೆ ಕಾಯಕ ಎಂಬುದು ಶ್ರೇಷ್ಠ ಮೌಲ್ಯವಾಗುವುದಿಲ್ಲ. ಅಂದರೆ ವೈಯಕ್ತಿಕ ಆಸೆ, ಸ್ವಾರ್ಥಗಳೆಲ್ಲವೂ ಇಲ್ಲಿ ಕಳೆದು ಹೋಗಬೇಕು ಎಂಬುದನ್ನು ಚೆನ್ನಬಸವಣ್ಣನವರು ಒತ್ತಿ ಒತ್ತಿ ಹೇಳಿದ್ದಾರೆ:

'ಆರಂಬವ ಮಾಡಿ ಸಂಸಾರ ಸ್ಥಿತಿ ಕಳೆಯದಿದ್ದರೆ ಆ ಆರಂಬವೇ ಕೇಡು
ವ್ಯವಹಾರವ ಮಾಡಿ ಸಂಸಾರಸ್ಥಿತಿ ಕಳೆಯದಿದ್ದರೆ ಆ ವ್ಯವಹಾರವೆ ಕೇಡು
ಓಲಗವ ಮಾಡಿ ಸಂಸಾರಸ್ಥಿತಿ ಕಳೆಯದಿದ್ದರೆ ಆ ಓಲಗವೇ ಕೇಡು
ಭಕ್ತಿಯ ಮಾಡಿ ಜನನ ಮರಣ ವಿರಹಿತನಾಗದಿದ್ದರೆ
ಆ ಭಕ್ತಿಯೆ ಕೇಡು ಕೂಡಲಚೆನ್ನಸಂಗಮದೇವಾ' (ಅದೇ. 999)

ಶರಣರು ಸಂಸಾರವನ್ನು ಹೇಯವೆಂದು ಎಲ್ಲಿಯೂ ಹೇಳುವುದಿಲ್ಲ; ಬದಲಾಗಿ ಸಂಸಾರಕ್ಕೆ ಅಂಟಿಕೊಂಡು ಅದರ ಪರಿಧಿಯಲ್ಲಿಯೇ ವ್ಯವಹರಿಸುತ್ತ ಲೌಕಿಕ ಜೀವನವನ್ನು ನಡೆಸುವುದನ್ನು ಒಪ್ಪುವುದಿಲ್ಲ. ಅದಕ್ಕಾಗಿ ಒಂದು ನೆಲೆಯ ಭಕ್ತಿಯು ಎಲ್ಲರಿಗೂ ಇರಬೇಕು. ಗಂಡ ಒಂದರ ಭಕ್ತ, ಹೆಂಡತಿ ಒಂದರ ಭಕ್ತೆಯಾದಾಗ ಇಂತಹ ಅಸಂಗತತೆಗಳು ತಲೆದೋರುತ್ತವೆ. ಅಲ್ಲದೆ ಸಂಸಾರಕ್ಕೆ ತೀವ್ರವಾಗಿ ಅಂಟಿಕೊಂಡಿದ್ದರೆ ಸ್ವಾರ್ಥ, ಮೋಹ, ಆಸೆಗಳು ಹೆಚ್ಚುಹೆಚ್ಚಾಗಿ ಹುಟ್ಟಿಕೊಳ್ಳುತ್ತಲೇ ಇರುತ್ತವೆ. ಆದುದರಿಂದ ಭಕ್ತಿ ಮತ್ತು ಸೇವೆಯ ನೆಲೆಯಿಂದಲೇ ಪ್ರತಿಯೊಂದು ಕಾಯಕವನ್ನು ಮಾಡಬೇಕು ಎಂಬುದು ಚೆನ್ನಬಸವಣ್ಣನವರ ಆಶಯವಾಗಿದೆ. ಹಾಗೆ ಮಾಡದ ಯಾವ ಕಾಯಕವಾಗಲೀ ಭಕ್ತಿಯಾಗಲೀ 'ಕೇಡು', 'ಕೇಡು' ಎಂಬುದಾಗಿ ಅವಧಾರಣೆಯ ನೆಲೆಯಿಂದ ಮತ್ತೆ ಮತ್ತೆ ಒತ್ತಿ ಹೇಳಿರುವುದನ್ನು ಕಾಣಬಹುದು.

'ಇಲ್ಲದ ಸಂಸಾರ ಕಣ್ಣಮುಂದೆ ರೂಪಾಗಿ ಕಾಡುತ್ತಿರ್ದಡೆ,
ಸುಜ್ಞಾನವೆಂಬ ಅಂಜನವ ಹಚ್ಚಿ,
ಸಕಲ ಭ್ರಮೆಯೆಂಬ ಕತ್ತಲೆಯ ಕಳೆದು,
ನಿಜಲಿಂಗಸಂಬಂಧವ ನೆಲೆಗೊಳಿಸಿ, ನಿತ್ಯದಲ್ಲಿ ಅಚ್ಚೊತ್ತಿದನಾಗಿ,
ಕೂಡಲಚೆನ್ನಸಂಗಯ್ಯನಲ್ಲಿ ಪ್ರಭುವಿನ ಶ್ರೀಪಾದಕ್ಕೆ
ನಮೋ ನಮೋ ಎಂಬೆನು.' (ಅದೇ. 1009)

ಅಂದರೆ ಸಂಸಾರವು ಭಕ್ತನಿಗೆ ಬಂಧನವಾಗಬಾರದು. ಸಂಸಾರವು ಅಂಟಿಕೊಂಡ ಕರ್ಮವಲ್ಲ; ಅದು ಇದ್ದೂ ಇಲ್ಲದಂತಹ ಸ್ವರೂಪದಲ್ಲಿ ಭಕ್ತರಾದವರು ನೆಲೆಗೊಳಿಸಿಕೊಳ್ಳಬೇಕು ಎಂಬುದನ್ನು ಪ್ರಸ್ತುತ ವಚನದಲ್ಲಿ ಹೇಳಿರುವುದನ್ನು ಗಮನಿಸಬಹುದು. ಎಲ್ಲವೂ ಭ್ರಮೆ, ಅದು ಒಂದು ಕತ್ತಲಿನ ಸ್ವರೂಪದ್ದು. ಆ ಭ್ರಮೆಯೆಂಬ

Scanned with CamScanner

ಕತ್ತಲೆಯನ್ನು ಕಳೆದುಕೊಳ್ಳುವುದಕ್ಕೆ ಪ್ರತಿಯೊಬ್ಬ ಭಕ್ತರೂ 'ಸುಜ್ಞಾನ' ಎಂಬ ಅಂಜನವ ಹಚ್ಚಿಕೊಳ್ಳಬೇಕು. ಆ ಮೂಲಕ 'ನಿಜಲಿಂಗ ಸಂಬಂಧವ ನೆಲೆಗೊಳಿಸಿ, ನಿತ್ಯದಲ್ಲಿ ಅಚ್ಚೊತ್ತಿದನಾಗಿ' ಎಂಬ ಹಂತಕ್ಕೆ ಬಂದಾಗ ಅವರು ಅನುಭಾವಿಗಳಾಗುತ್ತಾರೆ. ಅವರಿಗೆ ಜೀವನ, ಸಂಸಾರಗಳು ಬಂಧನವಾಗುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಅನುಭಾವಿಗಳಾದವರಿಗೆ ಜೀವನದ ನೆಲೆಯ ದಾರ್ಶನಿಕವಾದ ಅರಿವು ಇರಬೇಕು. ಹಾಗೆ ಇರದೆ ಇದ್ದರೆ ಅದು ಅನುಭಾವದ ಸ್ತರವಲ್ಲ ಎಂಬುದನ್ನು ಈ ಕೆಳಗಿನ ವಚನದಲ್ಲಿ ಹೇಳಿರುವುದನ್ನು ಕಾಣಬಹುದಾಗಿದೆ.

'ಮಧುರದ ಗುಣವ ಇರುವೆ ಬಲ್ಲುದು
ವೇಳೆಯ ಗುಣವ ಕೋಳಿ ಬಲ್ಲುದು
ಗೋತ್ರದ ಗುಣವ ಕಾಗೆ ಬಲ್ಲುದು
ಈ ಮನುಷ್ಯ ಜನ್ಮದಲ್ಲಿ ಹುಟ್ಟಿ
ಶಿವಜ್ಞಾನಿಗಳ ಬರವನರಿಯದಿದ್ದಡೆ
ಆ ಕೋಳಿ ಕಾಗೆ ಇರುವೆಗಿಂದಲು ಕರಕಷ್ಟ ಕಾಣಾ
ಕೂಡಲಚೆನ್ನಸಂಗಮದೇವಾ.' (ಅದೇ. 1446)

ಒಂದೊಂದು ಪ್ರಾಣಿಗೆ ಒಂದೊಂದು ಗುಣವು ನಿರ್ದಿಷ್ಟವಾಗಿರುತ್ತದೆ. ಆದರೆ ಮನುಷ್ಯರಾದವರಿಗೆ ಸರ್ವಗುಣಗಳೂ ಇರಬೇಕು. ಅಂಥವರು ಮಾತ್ರ ನಿಜವಾದ ಭಕ್ತರೂ ಅನುಭಾವಿಗಳೂ ಆಗಬಲ್ಲರು. ಒಂದೊಮ್ಮೆ ಹಾಗೆ ಆಗದೆ ಹೋದರೆ ಕೋಳಿ, ಕಾಗೆ, ಇರುವೆಗಳಿಗಿಂತಲೂ ಕೀಳು ಎಂಬ ಮಾತು ಬಹಳ ಗಂಭೀರವಾದುದು. ಭಕ್ತರಾದವರು ನಿಜವಾದ ಜ್ಞಾನಿಗಳಾಗಿರಬೇಕು. ಆ ಜ್ಞಾನವು ಆರು ಬಗೆಯಲ್ಲಿರುತ್ತದೆ ಎಂಬುದಾಗಿ ತಮ್ಮ ಮತ್ತೊಂದು ವಚನದಲ್ಲಿ ಹೇಳಿದ್ದಾರೆ. ಅವುಗಳೆಂದರೆ ಮತಿಜ್ಞಾನ, ಶ್ರುತಿಜ್ಞಾನ, ಖಂಡಜ್ಞಾನ, ಕೇವಲಜ್ಞಾನ, ಜ್ಯೋತಿರ್‌ಜ್ಞಾನ ಮತ್ತು ಮಹಾಜ್ಯೋತಿರ್‌ಜ್ಞಾನ. ಇವುಗಳು ಒಂದರಿಂದ ಒಂದರ ಚಲನೆಗೆ ಮತ್ತು ದಾರ್ಶನಿಕಜ್ಞಾನಕ್ಕೆ ಇಂಬುಕೊಡುವಂಥವಾಗಿವೆ.

ಜೀವನದ ಸಾರ್ಥಕ ಐಕ್ಯತೆ:

'ಶರಣರ ಗುಟ್ಟು ಮರಣದಲ್ಲಿ ನೋಡಾ' ಎಂಬ ಮಹತ್ ಅರ್ಥವುಳ್ಳ ಉಕ್ತಿಯೊಂದಿದೆ. ಜೀವನವನ್ನು ಸಾರ್ಥಕ್ಯ ನೆಲೆಯಲ್ಲಿ ರೂಪಿಸಿಕೊಂಡಲ್ಲಿ ಅದು ಭಕ್ತರನ್ನು ಸಾಯುಜ್ಯಗೊಳಿಸಿ ಇದ್ದೂ ಇಲ್ಲದಂತಹ ವಿಶಿಷ್ಟ ಸ್ತರಕ್ಕೆ ಕೊಂಡೊಯ್ಯುತ್ತದೆ. ಆ ಸ್ಥಿತಿಯ ವೈಶಿಷ್ಟ್ಯವು ಬಹಳ ಸೂಕ್ಷ್ಮಾತಿಸೂಕ್ಷ್ಮವಾದುದು ಎಂಬುದನ್ನು ಈ ವಚನದಲ್ಲಿ ಹೇಳುತ್ತಾರೆ:

'ಇದ್ದು ಬದ್ಧನಲ್ಲ, ಸುಳಿದು ಸೂತಕಿಯಲ್ಲ,
ಆವ ಸಂಗವೂ ಇಲ್ಲದ ನಿಜೈಕ್ಯನು
ಬೇಕು ಬೇಡೆನ್ನದೆ, ಅಳಿದುಳಿದು

ಕರ್ಪುರದ ಗಿರಿಯನುರಿ ತಾಗಿದಂತೆ
ಕೂಡಲಚೆನ್ನಸಂಗನಲ್ಲಿ ಲಿಂಗೈಕ್ಯನು.' (ಅದೇ. 730)

'ಶರಣ ಸತ್ತರೆ ಭಕ್ತರು ಹೊತ್ತರು. ಪ್ರಸಾದಿಗಳತ್ತರಲ್ಲ,
ಸುತ್ತಲಿದ್ದ ಜಂಗಮವೆಲ್ಲಾ ಕಿಚ್ಚ ಹಿಡಿದರಲ್ಲಾ,
ಊರೊಳಗಿದ್ದವರು ಒಂಬತ್ತು ಬಾಗಿಲ ತುಂಬಿಕೊಂಡಿದ್ದರು ನೋಡಾ!
ಮರಳಿ ಒಂದು ಬಾಗಿಲ ತೆಗೆದು, ಸತ್ತುದ ಕಂಡು
ಅದಾರು ಅದಾರು ಸತ್ತರೆಂದು, ಸತ್ತವರು ಬಹುದ ಕಂಡು ಇತ್ತಲೆಯಾದರಲ್ಲಾ,
ಕೂಡಲಚೆನ್ನಸಂಗ ಸತ್ತು ಸಯವಾದ.' (ಅದೇ. 739)

ಸಂಸ್ಕೃತದಲ್ಲಿ 'ಪದ್ಮಪತ್ರಮಿವಾಂಭುಸಿ' ಎಂಬ ಮಾತೊಂದಿದೆ. ಇದ್ದು ಯಾವ ಬದ್ಧತೆಗೂ ಒಳಗಾಗದಿರುವುದು, ಸುಳಿದರೂ ಸೂತಕಕ್ಕೆ ಒಳಗಾಗದಿರುವಂಥ ನೆಲೆ ಬಹಳ ಗಂಭೀರವಾದುದು. ನಿಜೈಕ್ಯದ ನೆಲೆಯಿಂದ ಬೇಕು ಬೇಡ ಎನ್ನದೆ ಕರ್ಪುರದ ಗಿರಿಯ ಉರಿ ತಾಗಿದರೆ ಯಾವ ಕುರುಹೂ ಅಲ್ಲಿ ಉಳಿಯುವುದಿಲ್ಲ. ಆದರೆ ಒಂಬತ್ತು ಬಾಗಿಲನ್ನು ತುಂಬಿಕೊಂಡು ಊರೊಳಗಿದ್ದವರು ಅಂದರೆ ನಿತ್ಯ ಸಂಸಾರಿಗಳು ಒಂದು ಬಾಗಿಲನು ತೆಗೆದು ಸತ್ತಿರುವುದನು ಕಂಡು ಯಾರು ಯಾರೆಂದು ಕೇಳುತ್ತಲೇ ಇತ್ತಲೇ ಉಳಿದರು. ಆದರೆ ಸತ್ತವರು ಕೂಡಲಸಂಗನಲ್ಲಿ ಶಾಂತ(ಸಯ)ವಾಗಿ ಲೀನವಾದರು. ಹಾಗಾಗಿಯೇ ಶರಣರ ಗುಟ್ಟು ಮರಣದಲ್ಲಿ ನೋಡಾ ಎಂದು ಧ್ವನಿಪೂರ್ಣವಾಗಿ ಹೇಳಿರುವುದು.

ಚೆನ್ನಬಸವಣ್ಣನವರು ತಮ್ಮ ಉಳಿದ ಕೃತಿಗಳಲ್ಲಿ ಶರೀರ, ಮನಸ್ಸು ಮತ್ತು ಆತ್ಮಗಳ ವಿಶ್ಲೇಷಣೆಯನ್ನು ಗಂಭೀರವಾಗಿಯೇ ವಿವರಿಸಿರುವುದನ್ನು ಕಾಣಬಹುದು. ಅವರ 'ಕರಣಹಸಿಗೆ' ಎಂಬ ಕೃತಿಯಲ್ಲಿನ ಅಂಶಗಳು ಬಹಳ ಗಮನಾರ್ಹವಾದುವು. ಇಲ್ಲಿ ಕರಣ ಎಂದರೆ ತತ್ತ್ವ, ಹಸಿಗೆ ಎಂದರೆ ವಿಭಾಗ. ಅಂದರೆ ಇಂದ್ರಿಯಗಳ ವಿಭಜನೆಯ ಮೂಲಕವಾಗಿ ದೇಹಾತ್ಮಗಳ ಸ್ವರೂಪವನ್ನು ತಿಳಿಯುವುದು. ಇದರಲ್ಲಿ ಸೃಷ್ಟಿಯ ಸಂಪೂರ್ಣ ಇತಿವೃತ್ತವನ್ನೇ ಹೇಳಲಾಗಿದೆ. 'ಅಂಗವಿಡಿದು ಲಿಂಗಸಿದ್ಧಿ'ಯನ್ನು ಪಡೆಯುವುದು ಮನುಷ್ಯರ ಭಕ್ತಿಮಾರ್ಗದ ಮುಖ್ಯ ಗುರಿಯಾಗಬೇಕು. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬಂತೆ ಪಾಪಗಳಿಂದ ಬರುವುದು ಸ್ಥಾವರ ಜನುಮ, ಪುಣ್ಯದಿಂದ ಬರುವುದು ದೇವತಾ ಜನುಮ, ಆದರೆ ಪುಣ್ಯಪಾಪಗಳ ಸಮಾನತ್ವದಿಂದ ಬರುವುದು ಮನುಷ್ಯ ಜನುಮ. ಹಾಗಾಗಿ ದೇಹಪುದ್ಧಿ ಮತ್ತು ಆತ್ಮಪುದ್ಧಿಗಳೆರಡೂ ಇಲ್ಲಿ ಅತ್ಯಗತ್ಯ ಎಂಬುದನ್ನು ಒತ್ತಿ ಹೇಳಿರುವುದನ್ನು ಕಾಣಬಹುದು. ಪ್ರೊ. ವಿ.ಜಿ. ಮಾರಿಹಾಳ ಅವರು ತಮ್ಮ 'ಚೆನ್ನಬಸವಣ್ಣನವರು' ಎಂಬ ಕೃತಿಯಲ್ಲಿ ಜಗತ್ತು ಮತ್ತು ಮನುಷ್ಯ ಜೀವನದ ಸಂಬಂಧ ಮತ್ತು ನೆಲೆಗಳನ್ನು ಒಟ್ಟು ಮೂವತ್ತಾರು ಅಂಶಗಳ ಮೂಲಕವಾಗಿ ಹೇಳಿದ್ದಾರೆ. 1. ಪಂಚಮಹಾಭೂತ 2. ಜಗತ್ತಿನ ಉತ್ಪತ್ತಿ 3. ಬ್ರಹ್ಮಾಂಡ ಪಂಚಾಂಗಗಳ ಸಂಬಂಧ 4. ಪಂಚಮಹಾ ಭೂತಗಳು ಪಂಚೀಕರಣಗೊಂಡ ಕ್ರಿಯೆ 5. ಬುದ್ಧೀಂದ್ರಿಯಗಳು,

Scanned with CamScanner

ಕರ್ಮೇಂದ್ರಿಯಗಳು 6. ದಶವಾಯುಗಳು 7. ಕರಣ ಚತುಷ್ಪಯಗಳು 8. ಆತ್ಮನ ಉತ್ಪತ್ತಿ- ಅಷ್ಟ ಆತ್ಮಗಳು 9. ಇಪ್ಪತ್ತೈದು ಜಾಗತಿಕ ತತ್ತ್ವಗಳು 10. ದಶನಾಡಿಗಳು 11. ಎಂಟು ತನುಗಳು 12. ಅಂತರಂಗದ ಎಂಟು ಮದಗಳು 13. ಬಹಿರಂಗದ ಎಂಟು ಮದಗಳು 14. ಅಷ್ಟಮೂರ್ತಿ ಮದಂಗಳು 15. ಸಪ್ತಧಾತುಗಳು–ವರ್ಣಾಂಕುರ ಭೇದ 16. ಸಪ್ತವ್ಯಸನಗಳು 17. ಷಡೂರ್ಮಿಗಳು 18. ಅರಿಷಡ್ ವರ್ಗಗಳು 19. ಷಡ್ ಭ್ರಮೆಗಳು 20. ಷಡ್ಭಾವ ವಿಕಾರಗಳು 21. ಪಂಚಕೋಶಗಳು 22. ಪಂಚಕ್ಲೇಶಗಳು 23. ಅಂಗಚತುಷ್ಪಯಗಳು 24. ಗುಣತ್ರಯಗಳು 25. ಅಹಂಕಾರತ್ರಯಗಳು (ಇಹಲೋಕ) 26. ತಾಪತ್ರಯಗಳು (ಸ್ವರ್ಗಲೋಕ) 27. ತನುತ್ರಯಗಳು 28. ಜೀವನತ್ರಯಗಳು 29. ಆತ್ಮತ್ರಯಗಳು 30. ಅವಸ್ಥಾತ್ರಯಗಳು 31. ತ್ರಿದೋಷಗಳು 32. ಸದ್ಭಾವ ತ್ರಯಗಳು 33. ದುರ್ಭಾವ ತ್ರಯಗಳು 34. ಮನತ್ರಯಗಳು 35. ತ್ರಿಕರಣಂಗಳು 36. ಪಂಚಾಗ್ನಿಗಳು. (ಪುಟ. 44 ಮತ್ತು 45)

ಇವೇ ವಿಚಾರಗಳು ಅವರ 'ಮಿಶ್ರಾರ್ಪಣ' ಎಂಬ ಕೃತಿಯಲ್ಲಿದ್ದು ಅಲ್ಲಿ ಇನ್ನೂ ಸೂಕ್ಷ್ಮವಾಗಿ ವಿವರಿಸಿದ್ದಾರೆ. ಮಿಶ್ರಾರ್ಪಣ ಎಂದರೆ ಪದಾರ್ಥಗಳ ಲಿಂಗಾರ್ಪಣೆ ಎಂದರ್ಥ. ಕಾಯಾರ್ಪಣ, ಭಾವಾರ್ಪಣ, ಕರಣಾರ್ಪಣ ಮತ್ತು ಪರಿಪೂರ್ಣಾರ್ಪಣಗಳೇ ಮಿಶ್ರಾರ್ಪಣ ಎಂದಿದ್ದಾರೆ. ಅಂದರೆ ಕುಬುದ್ಧಿಯನ್ನು ಸುಬುದ್ಧಿಯಾಗಿಸಿಕೊಳ್ಳಬೇಕು. ಅಹಂಕಾರವನ್ನು ನಿರಹಂಕಾರಗೊಳಿಸಿಕೊಳ್ಳಬೇಕು. ಇದರಿಂದ ಮಾತ್ರವೇ ಶಿವಲಿಂಗದ ಸಾನಿಧ್ಯವು ಸಾಧ್ಯವಾಗುತ್ತದೆ. ವ್ಯಾಕುಲತೆಯನ್ನು ಕಳೆದುಕೊಂಡು ಸುಮನಸ್ಸನ್ನು ನೆಲೆಗೊಳಿಸಿಕೊಂಡಲ್ಲಿ ಅಲ್ಲಿ ಜಂಗಮಲಿಂಗದ ನೆಲೆಯು ಸಾಧ್ಯವಾಗುತ್ತದೆ. ಅಜ್ಞಾನವನ್ನು ಕಳೆದುಕೊಂಡು ಸುಜ್ಞಾನವನ್ನು ಪಡೆದುಕೊಂಡಾಗ ಪ್ರಸಾದಲಿಂಗದ ದರ್ಶನವಾಗುತ್ತದೆ. ದುರ್ಭಾಗಳೆಲ್ಲವೂ ಇಲ್ಲವಾಗಿ ಸದ್ಭಾವಗಳು ನೆಲೆಗೊಂಡಾಗ ಮಹಾಲಿಂಗವು ಪ್ರಾಪ್ತವಾಗುತ್ತದೆ ಎಂಬ ವಿಚಾರಗಳನ್ನು ಪ್ರಸ್ತುತ ಕೃತಿಯಲ್ಲಿ ಚೆನ್ನಬಸವಣ್ಣನವರು ವಿವರಿಸಿದ್ದಾರೆ.

ಚನ್ನಬಸವಣ್ಣನವರು 'ಮಂತ್ರಗೌಪ್ಯ' ಹೆಸರಿನ ಎರಡು ಕೃತಿಗಳನ್ನು ಬರೆದಿದ್ದಾರೆ. ಒಂದು 'ಹಿರಿಯ ಮಂತ್ರಗೌಪ್ಯ' ಮತ್ತೊಂದು 'ಪದಮಂತ್ರ ಗೌಪ್ಯ' ಹಿರಿಯ ಮಂತ್ರಗೌಪ್ಯ ಎಂಬ ಕೃತಿಯಲ್ಲಿ ನಿತ್ಯನಿಜಲಿಂಗೈಕ್ಯದ ಸ್ವರೂಪವನ್ನು ಕುರಿತು ವಿವರಿಸಲಾಗಿದೆ. ಸದ್ಬೋಧ ಸ್ವರೂಪಶಾಸ್ತವೇ 'ಮಂತ್ರಗೌಪ್ಯ' ಎಂಬುದನ್ನು ಅರಿಯಬಹುದಾಗಿದೆ. ಇದರಲ್ಲಿ ನಾಲ್ಕು ನಾಲ್ಕು ಸಾಲುಗಳ ಅಂದರೆ ಚೌಪದಿಗಳ 27 ಪದ್ಯಗಳಿವೆ. ಪ್ರತಿಯೊಂದಕ್ಕೂ ಭಾವಾರ್ಥಗಳನ್ನು ನೀಡಲಾಗಿದೆ. ಇದನ್ನು ಸಿದ್ಧರಾಮ ಶಿವಯೋಗಿಗಳಿಗೆ ಬೋಧಿಸಿದ್ದು ಎನ್ನಲಾಗಿದೆ. ಯೋಗ ಸಾಧನೆಯ ಆತ್ಯಂತಿಕ ಅನುಭವದ ಅನಾವರಣವಾಗಿದೆ. ಶರಣರಲ್ಲಿ ಬಹುತೇಕರು ಯೋಗ ಜೀವನದ ಬಗೆಗೆ ಬರೆದಿರುವುದನ್ನು ಕಾಣಬಹುದು. ನಿದರ್ಶನಕ್ಕೆ ಅಕ್ಕಮಹಾದೇವಿ ಅವರ 'ಯೋಗಾಂಗ ತ್ರಿವಿಧಿ' ಕೃತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

'ಪದ್ಮಪೀಠವ ಬಲಿದು, ಪದ್ಮ ನವಸೂತ್ರದಿಂ
ಪದ್ಮ ಪುಷ್ಪವು ಅರಳಿ ವಾಸನಿಸಿತು!
ಪದ್ಮಪುಷ್ಪವ ಕೊಯ್ದು ಉನ್ಮನೀಯ ಸ್ಥಾನದ
ಪದ್ಮ ಲಿಂಗಾರ್ಚನೆಯ ಪರಮಯೋಗಿ॥'

ಅವರ ಮತ್ತೊಂದು ಕೃತಿ 'ಪದ ಮಂತ್ರಗೌಪ್ಯ' ಇದರಲ್ಲಿ ಐದೈದು ನುಡಿಯ 2 ಪದ್ಯಖಂಡಗಳು ಸೇರಿವೆ. ಶಿವಯೋಗ ಸಾಧನೆಗೆ ಹೆಚ್ಚು ಒತ್ತು ಕೊಡಲಾಗಿರುವ ಈ ಕೃತಿಯಲ್ಲಿ ವ್ಯಕ್ತಿ ತನ್ನ ಧಾರ್ಮಿಕ ಶಿವಯೋಗ ಸಾಧನೆಯಲ್ಲಿ ತನ್ನ 'ತನು–ಮನ–ಧನವನ್ನೆಲ್ಲ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳಿಗೆ ಅರ್ಪಿಸಿ ತೂರ್ಯಾವಸ್ಥೆಯನ್ನು ಪಡೆಯುವುದಾಗಿದೆ. ತನುವನ್ನು ಲಿಂಗಕ್ಕೆ, ಮನವನ್ನು ಗುರುವಿಗೆ ಮತ್ತು ಧನವನ್ನು ಜಂಗಮಕ್ಕೆ ಅರ್ಪಿಸುವ ಮೂಲಕ ಪರಮ ಶಿವಯೋಗಿಯಾಗುವ ನೆಲೆಯನ್ನು ಪ್ರಸ್ತುತ ಕೃತಿಯಲ್ಲಿ ವಿವರಿಸಲಾಗಿದೆ. ಘಟಚಕ್ರವು ಬ್ರಹ್ಮಾಂಡ–ಪಿಂಡಾಂಡಗಳ ಮೂಲ ರಹಸ್ಯವನ್ನು ವಿವರಿಸಿರುವ ಗದ್ಯ ಕೃತಿಯಾಗಿದೆ. ಸೃಷ್ಟಿ, ಸ್ಥಿತಿ ಮತ್ತು ಲಯಗಳ ವಸ್ತುಸ್ಥಿತಿಯನ್ನು ಸಾಧಾರವಾಗಿ ನಿರೂಪಿಸಲಾಗಿದೆ. ಹಾಗೆಯೇ ದೇಹರಚನೆ, ಪಂಚಭೂತಗಳು, ಪಂಚೀಕರಣ ತತ್ತ್ವ, ಷಟ್‌ಚಕ್ರಗಳು, ಯೋಗ ಸಾಧನೆಯ ಕ್ರಮ, ವಿವಿಧ ಯೋಗಗಳು ಮತ್ತು ಶಿವಯೋಗ ಸಾಧನೆಯ ಸ್ವರೂಪವನ್ನು ಸೂಕ್ಷ್ಮವಾಗಿ ವಿವರಿಸಿರುವುದನ್ನು ನೋಡಬಹುದಾಗಿದೆ.

ಒಟ್ಟಾರೆ ಷಟ್‌ಸ್ಥಲ ಜ್ಞಾನಿ, ಷಟ್‌ಸ್ಥಲ ಚಕ್ರವರ್ತಿ, ಎಂದು ಕರೆಯಿಸಿಕೊಂಡ ಚೆನ್ನಬಸವಣ್ಣನವರು ಭಕ್ತಿಭಂಡಾರಿ ಬಸವಣ್ಣನವರ ಪ್ರಮುಖ ವಾರಸುದಾರರು ಅಥವಾ ಉತ್ತರಾಧಿಕಾರಿ ಎಂಬುದನ್ನು ಮರೆಯುವಂತಿಲ್ಲ. ಅವರ ಧಾರ್ಮಿಕ ಅರಿವು ಬಹಳ ಸೂಕ್ಷ್ಮ ಮತ್ತು ಗಂಭೀರವಾದುದು. 'ನಿಜದ ನೆಲೆ'ಯ ಅರಿವನ್ನು ವಿಶಿಷ್ಟವಾಗಿ ಪಡೆದು ಪರಮ ಶಿವಯೋಗಿ ಎನಿಸಿಕೊಂಡಿರುವ ಚೆನ್ನಬಸವಣ್ಣನವರನ್ನು ಎಚ್. ತಿಪ್ಪೇರುದ್ರಸ್ವಾಮಿಯವರು ಅವಿರಳಜ್ಞಾನಿ ಎಂಬುದಾಗಿ ಕರೆದಿದ್ದಾರೆ. ಚೆನ್ನಬಸವಣ್ಣನವರು ಪರಿಶುದ್ಧಭಕ್ತಿ, ಶುದ್ಧ ಮಾನವೀಯತೆ ಮತ್ತು ಶುದ್ಧ ಜ್ಞಾನದ ಪ್ರತಿಪಾದಕರಾಗಿರುವುದನ್ನು ಅವರ ಬರಹಗಳಿಂದ ಮನಗಾಣಬಹುದಾಗಿದೆ. ಭಕ್ತಿ ಮತ್ತು ಧರ್ಮಗಳು ಕೇವಲ ತೋರಿಕೆಯ ಆಚಾರಗಳಾಗಬಾರದು ಎಂಬ ಕಾರಣದಿಂದಲೇ 'ನಿಜದ ನೆಲೆ', 'ನಿಜಾನುಭಾವ' ಎಂಬ ಪರಿಭಾಷೆಗಳನ್ನು ಮತ್ತೆ ಮತ್ತೆ ಬಳಸುವ ಮೂಲಕ ಸಮಕಾಲೀನ ಭಕ್ತ ಸಮುದಾಯವನ್ನು ಜಾಗೃತಗೊಳಿಸುವ ಕಾರ್ಯವನ್ನು ಮಾಡಿದ್ದಾರೆ. ಅಂದರೆ 'ಈ ನಿಜದರ್ಶನವೇ ಶಿವಯೋಗ' ಎಂಬುದು ಅವರ ಪ್ರಮುಖವಾದ ತತ್ತ್ವವಾಗಿದೆ.

ಚೆನ್ನಬಸವಣ್ಣನವರ ಈ ಸಮಾಜೋ–ಧಾರ್ಮಿಕ ಪ್ರಕ್ರಿಯೆಯನ್ನು ಕುರಿತಂತೆ ಶ್ರೀ ಕುಮಾರಸ್ವಾಮಿಗಳವರು ತಮ್ಮ 'ದಿ ಡೈಮೆನ್ಸನ್ ಆಫ್ ಯೋಗಾ'(1984) ಎಂಬ ಕೃತಿಯಲ್ಲಿ ಹೀಗೆ ಹೇಳಿದ್ದಾರೆ.

Scanned with CamScanner

ಜಾಗತಿಕವಾಗಿ ಮೂರು ರೀತಿಯ ನೀತಿ ನಿಯತ್ತುಗಳಿವೆ:

ಇವುಗಳಲ್ಲಿ ಮೊದಲನೆಯದನ್ನು ಬುದ್ಧ–ಕ್ರಿಸ್ತನಂತಹವರು ಪ್ರಸ್ತಾಪಿಸಿದರು. ಹಾಗೆ ಮಾಡುವ ಮೂಲಕ ಒಳಿತಿನ ಧೋರಣೆಯ ಮೂಲಕ ಕೇಡನ್ನು ಹೇಗೆ ಗೆಲ್ಲುವುದು ಎಂಬುದನ್ನು ಇಡೀ ಜಗತ್ತಿಗೇ ತೋರಿಸಿಕೊಟ್ಟರು. ಎರಡನೆಯದನ್ನು ಬುದ್ಧ ಮತ್ತು ಏಸುಕ್ರಿಸ್ತನಂತಹವರು ಪ್ರಸ್ತಾಪಿಸಿ ಪ್ರಸ್ತುತ ಪಡಿಸಿದರು. ಅವರು ಮಾನವ ಬದುಕಿನ ಅಸಮಾನತೆಗಳನ್ನು ಎತ್ತಿ ತೋರಿಸುತ್ತಾ ಇದಕ್ಕೆಲ್ಲ ಪರಿಹಾರವೆಂದರೆ ಸದ್ಗುಣವೇ ಎಂಬುದನ್ನು ಗಂಭೀರವಾಗಿ ಜನರಿಗೆ ಉಪದೇಶಿಸಿದರು. ಮೂರನೆಯದನ್ನು ಗ್ರೀಕ್ ತತ್ತ್ವಜ್ಞಾನಿಗಳು ಪ್ರತಿಪಾದಿಸಿರುವುದಾಗಿದೆ. ಅವರು ಗಂಡು–ಹೆಣ್ಣುಗಳಿಗೆ ಪ್ರತ್ಯೇಕವಾದ ಯಾವುದೇ ಮೌಲ್ಯಗಳಿರುವುದಿಲ್ಲ. ಅದನ್ನು ಜ್ಞಾನಿಗಳಾದವರು ಮಾತ್ರವೇ ನಿರ್ಧರಿಸುತ್ತಾರೆ.

ಈ ಮೂರೂ ಚಿಂತನೆಗಳ ಒಟ್ಟು ಸ್ವರೂಪವು ಚೆನ್ನಬಸವಣ್ಣನವರಲ್ಲಿ ಇದೆ ಎಂಬುದಾಗಿ ಕುಮಾರಸ್ವಾಮಿಯವರು ಹೇಳುತ್ತಾ, ಹೀಗೆ ಬರೆಯುತ್ತಾರೆ:

'After Buddha it was Channabasavanna, the young veerashaiva saint of the 12th century. Who started the movement of rationalization in religion life.... He and his colleagues knows as sharana's initiated the doctrine of 'Golden mean in all the works of life. It is obvious that this doctrine of the mean is the formation of characteristics attitude which appears in the sayings of almost every saint.' ಅಂದರೆ, ಭಾರತದಲ್ಲಿ ಬುದ್ಧನ ಅನಂತರ ಕ್ರಿ.ಶ. 12ನೆಯ ಶತಮಾನದಲ್ಲಿ ತರುಣ ವೀರಶೈವ ಸಂತ ಚೆನ್ನಬಸವಣ್ಣನವರು ಈ ತಾತ್ವಿಕ ನೆಲೆಯ ನೇತೃತ್ವವನ್ನು ವಹಿಸಿ ಮುನ್ನಡೆಸಿದರು. ಅವರು ತಮ್ಮ ವಿಚಾರಗಳ ಮೂಲಕ ಜೀವನದ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿ 'ವ್ಯಕ್ತಿತ್ವದ ನಿಜದ ನೆಲೆ'ಯನ್ನು ತಮ್ಮ ನಡೆನುಡಿಗಳ ಮೂಲಕ ಪ್ರತಿಯೊಬ್ಬರೂ ಪಡೆಯಬಹುದು ಎಂಬುದನ್ನು ಒತ್ತಿ ಹೇಳಿದ್ದಾರೆ. ಸ್ಪಷ್ಟವಾಗಿ ಹೇಳಬಹುದಾದರೆ ಈ ಸಿದ್ಧಾಂತದ ಮೂಲಕ ಚೆನ್ನಬಸವಣ್ಣನವರು ವ್ಯಕ್ತಿತ್ವ ಅಥವಾ ಗುಣಾತ್ಮಕವಾದ ಸ್ವರೂಪವನ್ನು ಪ್ರತಿಯೊಬ್ಬ ಭಕ್ತರೂ ಕೂಡಾ ತಮ್ಮ ಜೀವನದಲ್ಲಿ ಅತ್ಯಂತ ವಿಶಿಷ್ಟವಾಗಿ ರೂಪಿಸಿಕೊಳ್ಳಬೇಕು ಎಂಬುದನ್ನು ಹೇಳಿರುವುದನ್ನು ನೋಡಬಹುದು.

ಚೆನ್ನಬಸವಣ್ಣನವವರ ಸಿದ್ಧಾಂತದಲ್ಲಿ ವಿವೇಚನೆ ಮತ್ತು ಆತ್ಮಶಕ್ತಿಗಳ ಸಂಬಂಧಗಳಿವೆ. ಹಾಗೆಯೇ ಜ್ಞಾನ–ಕ್ರಿಯೆಗಳ ಸಂಬಂಧದ ಬಗೆಗೆ ವಿಶೇಷವಾದ ಒತ್ತು ನೀಡಿದ್ದಾರೆ. ಇವೆಲ್ಲಕ್ಕೂ ಮೂಲವೇ ಭಕ್ತಿ. ಇದರಿಂದಾಗಿ ಈ ಕೆಳಗಿನ ವಿಚಾರಗಳು ಪ್ರತಿಯೊಬ್ಬ ಶರಣ ಭಕ್ತರಲ್ಲಿಯೂ ನೆಲೆಗೊಳ್ಳುತ್ತವೆ ಎಂಬುದನ್ನು ವಿಶೇಷವಾಗಿ ತಮ್ಮ ಕೃತಿಗಳಲ್ಲಿ ಗುರುತಿಸಿದ್ದಾರೆ:

1. ಸಹನೆ, ದಯೆ ಮತ್ತು ಕರುಣೆಗಳನ್ನು ಕಲಿಸುತ್ತದೆ.
2. ದೇವರ ನಿರ್ಣಯಗಳನ್ನು ತಿಳಿಸುತ್ತದೆ.

3. ದೇವರ ವಿಷಯವಾಗಿ ನಮ್ಮಲ್ಲಿ ಪ್ರೀತಿಯನ್ನು ತರುತ್ತದೆ.
4. ಪ್ರಕೃತಿಯನ್ನು ನಿಸರ್ಗವಾದದ ನೆಲೆಯಲ್ಲಿ ಅರ್ಥೈಸುತ್ತದೆ.
5. ಆತ್ಮಸ್ವರೂಪ ಮತ್ತು ದಾರ್ಶನಿಕ ದೃಷ್ಟಿಕೋನಗಳನ್ನು ಜಾಗೃತಗೊಳಿಸುತ್ತದೆ.
6. ಹುಟ್ಟು, ಜೀವನ ಮತ್ತು ಸಾವುಗಳನ್ನು ಪ್ರಾಂಜಲ ಮನಸ್ಸಿನಿಂದ ಸ್ವೀಕರಿಸಲು ಕಲಿಸುತ್ತದೆ.

ಮನುಷ್ಯ ಜೀವನದಲ್ಲಿನ ಸರ್ವಸ್ವವೂ ದೇವರಿಂದ ಆರಂಭವಾಗುತ್ತದೆ ಮತ್ತು ಕೊನೆಗೆ ದೇವರಲ್ಲಿಗೇ ಹೋಗಿ ಸೇರುತ್ತದೆ. ಅದಕ್ಕೆ ಮನುಷ್ಯರಿಗೆ ಅವಶ್ಯವಾಗಿ ಬೇಕಾದುದೆಂದರೆ ಜ್ಞಾನ ಮತ್ತು ಭಕ್ತಿ. ದೇವರು ಮತ್ತು ಪ್ರಕೃತಿಗಳ ವಿಷಯದಲ್ಲಿ ಭಕ್ತಿಯು ಅಚಲ ನಿಷ್ಠವಾಗಿರಬೇಕು. ಜೀವನವು ಅಹಿಂಸೆಯ ಪಾತಳಿಯ ಮೇಲೆ ರೂಪುಗೊಂಡಿರಬೇಕು. ಅಂದರೆ ಸಕಲ ಜೀವಾತ್ಮರ ವಿಷಯದಲ್ಲಿ ದಯೆ ಮತ್ತು ಲೇಸನ್ನೇ ಬಯಸುವ ಮನಸ್ಸು ಇರಬೇಕೆಂಬುದು ಇವರ ವಿಚಾರಗಳಲ್ಲಿ ಅಭಿವ್ಯಕ್ತವಾಗಿದೆ. ಹಾಗೆಯೇ 'ಕಾಯಕ'ದ ಬಗೆಗೆ ವಿಶ್ವಾಸ (ಆರಿಟುಣಥಿ ಠಜಿ ಟಚಿಛಠಣಡಿ)ವನ್ನು ಗಂಭೀರವಾಗಿ ಪ್ರತಿಪಾದಿಸಿದ್ದಾರೆ. ಈ ಮೂಲಕ ಭಾರತೀಯ ಶೈವ ಆಧ್ಯಾತ್ಮಿಕ ಪರಂಪರೆಗೆ ಒಂದು ಹೊಸ ಆಯಾಮವನ್ನು ರೂಪಿಸಿಕೊಡುವ ಕಾರ್ಯವನ್ನು ಪ್ರರೂಪುಗೊಳಿಸಿರುವುದನ್ನು ಮನಗಾಣಬಹುದಾಗಿದೆ. (ಆಧಾರ: ವಿ. ಜಿ. ಮಾರಿಹಾಳರ ಕೃತಿ)

ಸಹಾಯಕ ಕೃತಿಗಳು:

1. ಮಲ್ಲಾಪುರ ಬಿ.ವಿ. (ಸಂ): ಚೆನ್ನಬಸವಣ್ಣನವರ ವಚನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2001
2. ಮಾರಿಹಾಳ ವಿ. ಜಿ.: ಚೆನ್ನಬಸವಣ್ಣನವರು, ಶ್ರೀಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2003
3. ತಿಪ್ಪೇರುದ್ರಸ್ವಾಮಿ ಎಚ್.: 'ಅವಿರಳ ಜ್ಞಾನಿ ಚನ್ನಬಸವಣ್ಣ', ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು 2009 (ನಾ. ಮು.)

* * *

(* ದಿನಾಂಕ 26.09.2017ರಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ವತಿಯಿಂದ ಸಿಂಧನೂರಿನ ಸರ್ಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ನೀಡಿದ ಭಾಷಣ.)

○○○

Scanned with CamScanner

ರತ್ನಪ್ರಭೆ

(ಡಾ. ಟಿ.ಎನ್. ನಾಗರತ್ನ ಅವರ ಅಭಿನಂದನ ಗ್ರಂಥ)

ಸಂಪಾದಕರು

ಡಾ. ಅಕ್ಕಮಹಾದೇವಿ

ಡಾ. ಗೀತಾ ನಾವಲ್ ಶ್ರೀನಿವಾಸ್

ಡಾ. ಬಿ.ಎಸ್. ಅನಿಲಕುಮಾರ, ಬೊಮ್ಮಾಘಟ್ಟ

ಸಿ.ಎಸ್.ಪೂರ್ಣಿಮಾ

ಗೌರವ ಪ್ರತಿ

ಡಾ.ಟಿ.ಎನ್.ಎನ್. ಅಭಿನಂದನ ಸಮಿತಿ

ಮಣಿ ಪ್ರಕಾಶನ

ಮೈಸೂರು

Scanned with CamScanner

RathnaPrabhe: A Felicitation Volume of Dr. T.N. Nagarathna :
Edited By :
Dr. Akkamahadevi,
Dr. Geetha Naval Srinivasan,
Dr.B.S. Anilkumara Bommaghatta,
C.S. Poornima

Published by :
Mani Prakashana
No. 560, 12th Main, 20 'B' Cross,
'C' Block, Vijayanagar 3rd Stage,
Mysore-570 030.
Email : Maniprakashana@gmail.com
Mob : 9686535465

ISBN	**:978-93-84240-73-8**
ಪ್ರಥಮ ಮುದ್ರಣ	: 2021
ಪುಟಗಳು	: 608+೩೨=640
ಹಕ್ಕು	: ಸಂಪಾದಕರು
ಬೆಲೆ	: ರೂ. 710/-
ಪುಸ್ತಕದ ಅಳತೆ	: 1/8 ಡೆಮ್ಮಿ
ಕಾಗದ	: 70 ಜಿ.ಎಸ್.ಎಂ.
ಮುಖಪುಟ &	
ಪರ್ಣಪುಟ	: ಮಹೇಶ್
ಡಿ.ಟಿ.ಪಿ.	: ಕಾವ್ಯಶ್ರೀ
ಮುದ್ರಕರು	: ಶಾರ್ಪ್ ಎಂಟರ್‌ಪ್ರೈಸಸ್
	ಮೈಸೂರು.

Scanned with CamScanner

೧೩.ಕೀರ್ತನ ಕುಸುಮಾಂಜಲಿ ಎಂಬ ಹೊಂಬೆಳಕು
– ಶ್ರೀಮತಿ ಲತಾಶ್ರೀ ಎಲ್.ಎಂ. ೩೪೮
೧೪.ಜೀಬಿ ಕೋಟೆ ಮಾಧವರಾಯರು – ಡಾ. ನಾಗರತ್ನಮ್ಮ ೩೫೩
೧೫.ಹರಿದಾಸರ ಜನಪ್ರಿಯ ಹಾಡುಗಳು: ಅವಲೋಕನ– ಡಾ. ಎಸ್.ಡಿ. ಶಶಿಕಲಾ ೩೫೬
೧೬.ಹೈ ಹೈ ಕುದುರೆ– ಒಂದು ಅವಲೋಕನ – ಶ್ರೀ ಕೃ.ಪಾ. ಮಂಜುನಾಥ್ ೩೬೬
೧೭.ದಾಸ ಸಾಹಿತ್ಯ ದರ್ಪಣ – ಒಂದು ಸಮೀಕ್ಷೆ – ಡಾ. ಆನಂದ ಜಿ. ೩೭೨
೧೮.ಶ್ರೀ ಕನಕದಾಸರು – ಶ್ರೀಮತಿ ಪೂರ್ಣಿಮಾ. ಸಿ. ಎಸ್. ೩೭೯
೧೯.ಶ್ರೀಪಾದರಾಜರು–ಜೀವನ ಮತ್ತು ಕೃತಿಗಳು – ಡಾ.ವಿಠಲರಾವ್ ಟಿ. ಗಾಯಕ್ವಾಡ್ ೩೮೭

ಭಾಗ –೪
ಹರಿದಾಸಸಾಹಿತ್ಯ ಸಿಂಚನ
(ಹರಿದಾಸ ಸಾಹಿತ್ಯ ಕುರಿತ ಲೇಖನಗಳು)

೧.ಹರಿದಾಸ ಸಾಹಿತ್ಯ ಸಂಪಾದನೆಯ ಸಮಸ್ಯೆಗಳು – ಡಾ. ಜಿ. ವರದರಾಜರಾವ್ ೪೦೨
೨.ಹರಿದಾಸರ ಕಾವ್ಯಶಕ್ತಿ – ಪ್ರೊ. ಶಂಕರ ಮೊಕಾಶಿ ಪುಣೇಕರ್ ೪೧೬
೩.ಅನುಭಾವಮುಖೀ ದಾಸ ಸಾಹಿತ್ಯ ಮತ್ತು ಸೂಫಿ ತಿಳುವಳಿಕೆ
– ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ೪೨೩
೪.ಹರಿದಾಸರ ಆಶುಕಾವ್ಯ ಸಂಪ್ರದಾಯ– ಡಾ. ಕೆ. ಎಲ್. ಗೋಪಾಲಕೃಷ್ಣಯ್ಯ ೪೩೦
೫.ಕನಕದಾಸರ ಮೋಹನ ತರಂಗಿಣಿಯ ಶೈಲಿ – ಪ್ರೊ. ಎ.ವಿ. ನಾವಡ ೪೪೪
೬.ದಾಸರು ಹಾಗೂ ಭಾಗವತ – ಡಾ. ವಾಸುದೇವ ಅಗ್ನಿಹೋತ್ರಿ ೪೬೭
೭.ದೇಶೀ ಅಭಿವ್ಯಕ್ತಿ ಸ್ವರೂಪದ ಹಿನ್ನೆಲೆಯಲ್ಲಿ ದಾಸಸಾಹಿತ್ಯ
– ಡಾ. ಎಚ್.ಎನ್. ಮುರಳೀಧರ ೪೭೨
೮.ಮುಂಡಿಗೆ ಎತ್ತುವ ಮುನ್ನ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ೪೯೫
೯.ಭಕ್ತಿ ಸಾಹಿತ್ಯಕ್ಕೆ ಭೀಮವ್ವನವರ ಕೊಡುಗೆ – ಡಾ. ಸರಿತಾ ಕುಸುಮಾಕರ ದೇಸಾಯಿ ೫೧೧
೧೦.ಹರಿದಾಸ ಸಾಹಿತ್ಯ ಸಂಶೋಧನೆ – ಡಾ. ಅಕ್ಕಮಹಾದೇವಿ ೫೨೯
೧೧.ಹರಿದಾಸರ ಲೋಕನೀತಿ ಕೀರ್ತನೆಗಳನ್ನು ಗ್ರಹಿಸುವಲ್ಲಿಯ ತೊಡಕುಗಳು
– ಡಾ. ಬಿ.ಎಸ್. ಅನಿಲಕುಮಾರ ೫೫೨
೧೨.ಹರಿದಾಸ ಸಾಹಿತ್ಯದಲ್ಲಿ ಆಯುರ್ವೇದ ಪರಿಕಲ್ಪನೆ
– ಡಾ. ಶ್ರೀವತ್ಸ ಮತ್ತು ಡಾ. ಬಿ.ಎಸ್. ಅನಿಲಕುಮಾರ ೫೮೮

ಭಾಗ – ೫
ಚಿತ್ರ–ಚಿತ್ತಾರ (ಛಾಯಾಚಿತ್ರಗಳು)

Scanned with CamScanner

ಶ್ರೀಪಾದರಾಜರು–ಜೀವನ ಮತ್ತು ಕೃತಿಗಳು

(ದಾಸ ಸಾಹಿತ್ಯ ಚಳವಳಿಯ ಆದ್ಯ ಆಚಾರ್ಯ: ಶ್ರೀಪಾದರಾಜರು)

– ಡಾ. ವಿಠಲರಾವ್ ಟಿ. ಗಾಯಕ್ವಾಡ್

ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ
ನಮಃ ಪುರಂದರ್ಯಾಯ ವಿಜಯಾರ್ಯಾಯ ತೇ ನಮಃ'

God is imbedded in Indian soil ಎಂಬ ಉಕ್ತಿಯೊಂದು ಇಂಗ್ಲಿಷ್‌ನಲ್ಲಿದೆ. ಅಂದರೆ ದೇವರು ನಮ್ಮ ಮಣ್ಣಿನಲ್ಲಿ ಅವಿನಾಭಾವ ಸ್ವರೂಪದಲ್ಲಿ ಬೆರೆತು ಹೋಗಿದೆ. ವ್ಯಕ್ತಿ ಮನುಷ್ಯನಾಗಿ ಕೊನೆಗೆ ಒಂದು ವ್ಯಕ್ತಿತ್ವವಾಗುವ ಒಟ್ಟು ಸಂಚಾರವೇ ಮನುಷ್ಯ ಜೀವನವಾಗಿದೆ. ಅಂದರೆ ವಾನರ ನರನಾದುದು ಒಂದು ಹಂತವಾದರೆ, ನರನು ನಾರಾಯಣನಾದುದು ಮತ್ತೊಂದು ಹಂತ. ಇಲ್ಲಿ ದೈಹಿಕ ಬದಲಾವಣೆಯೊಂದಿಗೆ ಮಾನಸಿಕ ಬದಲಾವಣೆಯ ಉನ್ನತೀಕರಣವನ್ನು ಕಾಣಬಹುದಾಗಿದೆ. ಮನುಷ್ಯನ ಜೀವನವು ಸಾಂಸ್ಕೃತಿಕವಾಗಿ ಹಲವಾರು ಸಾಧನೆಗಳ ಕಾರ್ಯರಂಗವಾಗಿರುವಂತೆ, ಹಲವಾರು ಆಂತರಿಕ ಮತ್ತು ಬಾಹ್ಯ ಶೋಧನೆಗಳ ಪ್ರಮುಖ ಪ್ರವೃತ್ತಿಯೂ ಹೌದು. ಈ ಶೋಧನೆಗಳಲ್ಲಿ ಅಂತರಂಗ ಮತ್ತು ಬಹಿರಂಗಗಳ ದಾರ್ಶನಿಕತೆಯು ಬಹಳ ಗಂಭೀರವಾದುದು. ಸುಸಂಸ್ಕೃತ ನಾಗರಿಕನಾಗುವ ನೆಲೆಯಲ್ಲಿ ಮನುಷ್ಯ ಬದುಕು ಸಾಗಿಬಂದಿರುವುದೇ ಸಮಾಜೋ ದಾರ್ಶನಿಕ ಪಥವಾಗಿದೆ. ನಿತ್ಯ ಜೀವನದ ಆವಶ್ಯಕತೆಗಳು ನಿರಂತರತೆ ಮತ್ತು ಕಾಲಾತೀತತೆಯನ್ನು ಪಡೆಯುವ ಮೂಲಕ ವಿಕಾಸಶೀಲ ಅಮೂಲ್ಯ ಜೀವನ ಮೌಲ್ಯಗಳಾದವು. ಮನುಷ್ಯ ಜೀವನ ಹುಟ್ಟು ಮತ್ತು ಸಾವುಗಳ ಒಟ್ಟು ಆವರ್ತನವಾಗಿದೆ. 'ಪುನರಪಿ ಜನನಂ ಪುನರಪಿ ಮರಣಂ, ಪುನರಪಿ ಜಠರೇ ಶಯನಂ' ಎಂಬ ಶ್ಲೋಕದಂತೆ ಹುಟ್ಟು ಸಾವುಗಳು ಸೃಷ್ಟಿಯ ಪ್ರತಿಯೊಂದು ಜೀವಿಗಳಲ್ಲಿಯೂ ಸರ್ವೆಸಾಮಾನ್ಯವಾದ ವಿಚಾರಗಳಾಗಿವೆ. ಆದರೆ ಸೃಷ್ಟಿಯಲ್ಲಿ ಉಳಿದೆಲ್ಲ ಜೀವಿಗಳಿಗಿಂತಲೂ ನರ ಅಥವಾ ಮನುಷ್ಯ ಜೀವಿಯು ಬಹಳ ಮುಖ್ಯವಾದುದು. ಉಳಿದೆಲ್ಲ ಜೀವಿಗಳು ಪ್ರಾಕೃತಿಕ ಆಯಾಮದಲ್ಲಿಯೇ ತಮ್ಮ ಬದುಕನ್ನು ಕಟ್ಟಿಕೊಂಡಿದ್ದರೆ, ಮನುಷ್ಯ ಮಾತ್ರ ಪ್ರಾಕೃತಿಕ ಆಯಾಮಗಳ ಮೂಲಕ

Scanned with CamScanner

ಪ್ರಭಾವಿತನಾಗಿ ಅಂಥದೇ ಮತ್ತೊಂದು ಸೃಷ್ಟಿಗೆ ಕಾರಣೀಭೂತನಾಗಿದ್ದಾನೆ. ಪ್ರಕೃತಿ ಮೂಲವನ್ನು ಆಧರಿಸಿ ಹೊಸ ಹೊಸ ಸಂಶೋಧನೆಗಳ ಮೂಲಕ ಪರ್ಯಾಯ ಜೀವನ ವ್ಯವಸ್ಥೆಯನ್ನು ರೂಪಿಸಿಕೊಳ್ಳುವ ಮೂಲಕ ಮನುಷ್ಯ ತನ್ನ ಅಸೀಮ ಸಾಮರ್ಥ್ಯವನ್ನು ತೋರ್ಪಡಿಸಿಕೊಂಡು ಬಂದಿರುವುದು ಭೌತಿಕ ಜೀವನದ ಇತಿಹಾಸವಾಗಿದೆ. ಎಲ್ಲಿ ಮನುಷ್ಯ ಇತರೆ ಪ್ರಾಣಿಗಳಂತೆ ಶಕ್ತಿ, ಸಾಮರ್ಥ್ಯಗಳ ಮೂಲಕ ದೌರ್ಜನ್ಯಕ್ಕೆ, ಅಮಾನುಷತೆಗೆ ಹೊರಳಿದನೋ ಆಗ ಭೂಮಂಡಲದಲ್ಲಿ ಹಲವಾರು ಮಾನವೀಯತೆಯ ಮಹಾಮಾನವರು ಜನಿಸಿ ಮಲೆತ ಮನುಷ್ಯನಿಗೆ ನಿಜವಾದ 'ಜೀವನಧರ್ಮ'ದ ಪಥವನ್ನು ತೋರಿಸಿಕೊಟ್ಟು 'ನಿಜದರ್ಶನದತ್ತ ಮುನ್ನಡೆಸಿದರು' ಎಂಬುದನ್ನು ಮರೆಯುವಂತಿಲ್ಲ. ಇಂತಹ ಹಲವಾರು ಘಟ್ಟಗಳೇ ಪ್ರಾಪಂಚಿಕವಾಗಿರುವ ಧಾರ್ಮಿಕ ಇತಿಹಾಸ. ಧರ್ಮ ಎಂಬುದು ಮನುಷ್ಯ ಜೀವನದೊಂದಿಗೆ ದಿನೇ ದಿನೇ ವಿಕಾಸವಾಗುತ್ತಿರುವಂತಹ ಜೀವನ ಮೌಲ್ಯವೇ ಹೊರತು ಯಾವತ್ತೋ ಸಿದ್ಧಪಡಿಸಲಾಗಿರುವ ಮೂರ್ತಿಮತ್ತಾದ ಸ್ವರೂಪವಲ್ಲ. ಹಾಗಾಗಿ ಮನುಷ್ಯ ಜೀವನವು ಧರ್ಮ, ವಿಜ್ಞಾನ ಮತ್ತು ವೈಚಾರಿಕತೆಗಳ ಒಟ್ಟು ಸ್ವರೂಪದ್ದಾಗಿದ್ದು ಜೀವನಾವಶ್ಯಕತೆಗೆ ಅನುಗುಣವಾಗಿ 'ವಸುದೈವ ಕುಟುಂಬಕಂ' ಎಂಬ ಪರಿಕಲ್ಪನೆಯನ್ನು ಜೀವನದ ಪ್ರಮುಖ ಮೌಲ್ಯವಾಗಿ ಮಾಡುವ ದಿಶೆಯಲ್ಲಿ ಪ್ರತಿಯೊಂದು ಸ್ತರದಲ್ಲಿಯೂ ಸಾಗುತ್ತಾ ಬಂದಿದೆ.

ಬುದ್ಧಿವಂತ ಪ್ರಾಣಿಯಾದ ಮನುಷ್ಯನಿಗೆ ಕಾಲಕಾಲಕ್ಕೆ ಧರ್ಮ ಚಿಂತನೆಗಳು ಮಾನವೀಯ ಬದುಕಿನತ್ತ ನಡೆಸುತ್ತಾ ಬಂದಿವೆ. ಮನುಷ್ಯ ನಿರ್ಮಿತ ರಾಜ್ಯ ಸಾಮ್ರಾಜ್ಯಗಳ ಭೋಗ ವೈಭೋಗಗಳೆಲ್ಲ ಕಾಲಕಾಲಕ್ಕೆ ನಾಶಗೊಳ್ಳುತ್ತಾ ಹೋಗಿರುವುದನ್ನು ಐತಿಹಾಸಿಕ ಕುರುಹುಗಳ ಮೂಲಕ ನಾವು ಇಂದಿಗೂ ಮನಗಾಣುತ್ತಿದ್ದೇವೆ. ಆದರೆ ಅಮರ ಮಾನವೀಯ ಮೌಲ್ಯಗಳಾದ ದಯೆ, ಕರುಣೆ, ಪ್ರೀತಿ, ಸಹನೆ, ಸಹಬಾಳ್ವೆ ಮತ್ತು ತ್ಯಾಗಗಳು ಮನುಷ್ಯ ಜೀವನವನ್ನು ಒಗ್ಗೂಡಿಸಿ ಅವಿನಾಭಾವತೆಯನ್ನು ಸಂರೂಪಿಸಿವೆ. ಅದಕ್ಕಾಗಿ ಅನೇಕ ಮಹಾನುಭಾವರು ತಮ್ಮ ಜೀವನವನ್ನೇ ಗಂಭೀರವಾಗಿ ಮುಡುಪಾಗಿಟ್ಟರು. ಅವರ ಜೀವನ ಸ್ವರೂಪವೇ ಮುಂದೆ ಸಂಕಥನಗಳಾಗಿ ವೇದ, ಉಪನಿಷತ್ತು, ಪುರಾಣಗಳು, ಮಹಾಕಾವ್ಯಗಳು ಹೀಗೆ ವಿವಿಧ ಸಾಹಿತ್ಯಕ ಸ್ವರೂಪದಲ್ಲಿ ರಚನೆಗೊಂಡವು. ದಾರ್ಶನಿಕ ಸ್ವರೂಪ ಸಂಕಥನ ಎಂಬುದರಿಂದ ಹಿಡಿದು ಅವು ಅಪೌರುಷೇಯವಾದುವು ಎಂಬವರೆಗೂ ವ್ಯಾಖ್ಯಾನಗೊಂಡಿವೆ. ಅವುಗಳ ಒಟ್ಟು ಆಯಾಮಕ್ಕಿಂತ ಆಂತರಿಕ ಸ್ವರೂಪವು ಹೇಗೆ ಜೀವನ ಮೌಲ್ಯಗಳ ಅಭಿವ್ಯಕ್ತಿಗಳಾಗಿವೆ, ವ್ಯಕ್ತಿಯ ವ್ಯಕ್ತಿತ್ವದ ದ್ಯೋತಕಗಳಾಗಿವೆ

ಎಂಬುದರತ್ತ ಗಮನಿಸಿದರೆ ಪರಂಪರೆಯ ನಿಜವಾದ ದರ್ಶನವು ನಮಗೆ ಸಾಧ್ಯವಾಗುತ್ತದೆ. 'ರಾಮಾಯಣ ಮತ್ತು ಮಹಾಭಾರತದಂತಹ ಮಹಾಕಾವ್ಯ'ಗಳು ಇಂತಹ ಜೀವನ ದರ್ಶನದ ಪ್ರಮುಖ ಆಗರಗಳಾಗಿವೆ. ಅಂದಿನಿಂದ ಇಂದಿಗೂ ಸಾರ್ವಕಾಲಿಕವಾದ ಜೀವನ ಮೌಲ್ಯಗಳನ್ನು ತನ್ಮೂಲಕ ಪ್ರತಿಪಾದಿಸುತ್ತಲೇ ಬಂದಿವೆ. ಎಂತಲೇ ಸ್ವಾಮಿವಿವೇಕಾನಂದರು 'ಇವೆರಡೂ ಭಾರತೀಯ ಸಂಸ್ಕೃತಿಯ ವಿಶ್ವಕೋಶಗಳು' ಎಂದಿದ್ದಾರೆ. ಇವೆರಡರಲ್ಲಿ ರಾಮಾಯಣ ಪುರಾಣವಾದರೆ, ಮಹಾಭಾರತ ಇತಿಹಾಸವೆನಿಸಿದೆ. ಮಹಾಭಾರತವನ್ನು 'ಪಂಚಮವೇದ' ಎಂದು ಕರೆಯಲಾಗಿದ್ದರೆ, ರಾಮಾಯಣವನ್ನು 'ವಿರಾಮಾಯಣ' ಎಂದು ಹೇಳಲಾಗಿದೆ. ಭಾರತಾದ್ಯಂತ ಎಲ್ಲಿ ಸಂಚರಿಸಿದರೂ ಈ ಕಾವ್ಯಗಳಲ್ಲಿನ ವ್ಯಕ್ತಿಗಳ ಕುರುಹುಗಳು ಕಾಣಸಿಕ್ಕುವುದು ಸಾಮಾನ್ಯ. ಇನ್ನು ಶ್ರೀಲಂಕಾ, ಇರಾನ್ ಮುಂತಾದ ದೇಶಗಳಲ್ಲಿಯೂ ಇದರ ಅವಶೇಷಗಳು ದೊರೆತಿವೆ. ಇಂತಹ ಮಹಾನ್ ದಾರ್ಶನಿಕ ಪರಂಪರೆಯು ಇರುವ ದೇಶದಲ್ಲಿ ಕಾಲಕಾಲಕ್ಕೆ ಕಾರಣಾಂತರಗಳಿಂದ 'ವಿಸೃತಿ'ಯು ಆವರಿಸಿ ಮನುಷ್ಯ ಬದುಕು ಚಡಪಡಿಸುವಂತಹ ಪರಿಸ್ಥಿತಿಯು ತಲೆದೋರಿತು. ಆಗ ಅಲ್ಲಿ ಹುಟ್ಟಿಬಂದ ಮಹಾನ್ ವ್ಯಕ್ತಿಗಳು ಸಮಾಜೋ-ಧಾರ್ಮಿಕತೆಯ ದರ್ಶನದ ಮೂಲಕ ಜೀವನಕ್ಕೆ ವಿಶಿಷ್ಟ ಆಯಾಮವನ್ನು ನೀಡುವುದಕ್ಕೆ ಪ್ರಯತ್ನಿಸಿದರು. ಈ ದಿಶೆಯಲ್ಲಿ ಕರ್ನಾಟಕದಲ್ಲಿ ಹುಟ್ಟಿಕೊಂಡ ದಾಸಸಾಹಿತ್ಯ ಘಟ್ಟದ ಸ್ವರೂಪ ಮತ್ತು ಸಮಾಜೋ-ಧಾರ್ಮಿಕ ಸ್ವರೂಪವನ್ನು ಕುರಿತು ಪರಿಶೀಲಿಸಬಹುದಾಗಿದೆ.

'ದಾಸೋಹಂ ಕೋಸಲೇಂದ್ರಸ್ಯ' ಎಂಬ ಪಾರಂಪರಿಕ ಪ್ರಮುಖ ಭಕ್ತಿಭಾವದೊಂದಿಗೆ ಕನ್ನಡದಲ್ಲಿ ದಾಸಸಾಹಿತ್ಯ ಪರಂಪರೆಯನ್ನು ಹುಟ್ಟುಹಾಕಿದ ದಾಸಸಾಹಿತ್ಯ ಶ್ರೇಷ್ಠರಲ್ಲಿ ಶ್ರೀಪಾದರಾಜರ ಹೆಸರು ಅವಿಸ್ಮರಣೀಯ ಮತ್ತು ಅಜರಾಮರ ವಾದುದು. ಮಾತು ಮತ್ತು ಧಾತು (ಸಂಗೀತ)ಗಳ ಒಟ್ಟು ಪಾಕವಾಗಿರುವ ದಾಸಸಾಹಿತ್ಯವು ಕನ್ನಡ ಸಂಸ್ಕೃತಿಗೆ ಅತ್ಯಂತ ಮಹತ್ವದ ಕಾಣಿಕೆಯನ್ನು ನೀಡಿದೆ. ಪರಮಾತ್ಮ ಪ್ರಾಪ್ತಿಯ ಭಕ್ತಿಭಾವದ ಪ್ರಮುಖ ಅಭಿವ್ಯಕ್ತಿಯಾದುದು ದಾಸಸಾಹಿತ್ಯ. ದಾಸಸಾಹಿತ್ಯದಲ್ಲಿ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು, ಮುಂಡಿಗೆಗಳು, ಅಷ್ಟಕಗಳು ಮುಂತಾಗಿ ಹಲವು ಪ್ರಭೇದಗಳಿವೆ. ಈ ಸಾಹಿತ್ಯದ ಸ್ವರೂಪದಲ್ಲಿ ಭೇದಗಳಿದ್ದರೂ ಎಲ್ಲದರ ಒಟ್ಟು ಆಯಾಮವೆಂದರೆ ದೇವರದರ್ಶನವನ್ನು ಪಡೆಯಲು ಪ್ರತಿಯೊಬ್ಬರೂ ಮಾಡಿರುವ ಪೂರ್ಣ ಭಕ್ತಿಭಾವನೆಗಳೇ ಆಗಿವೆ ಎಂಬುದನ್ನು ಮರೆಯುವಂತಿಲ್ಲ. ಶುದ್ಧ ಭಕ್ತಿ ಮತ್ತು ಶ್ರದ್ಧಾಪೂರ್ವಕವಾದ ಆಚರಣೆ ಮತ್ತು ಪೂಜೆಗಳ ಮೂಲಕ ದೇವರ ಆರಾಧನೆಯು

Scanned with CamScanner

ಜನಸಾಮಾನ್ಯರ ನಿತ್ಯ ಬದುಕಿನ ಪ್ರಮುಖ ಅಂಗವಾಯಿತು. ಕ್ರಮೇಣ ಅದು ಸಂಪ್ರದಾಯಶೀಲವೂ ಮತ್ತು ವ್ಯಕ್ತಿ ವ್ಯಕ್ತಿಗಳ ನಡುವೆ ಭೇದಭಾವಗಳನ್ನು ಹುಟ್ಟುಹಾಕುವಂತಹ ನೆಲೆಯನ್ನು ಮುಟ್ಟಿದಾಗ ಅದ್ವರ್ಯುಗಳು ಹುಟ್ಟಿಕೊಂಡು ತಮ್ಮದೇ ಆದ ಮತಪಂಥಗಳ ಮೂಲಕವಾಗಿ ಜನಸಾಮಾನ್ಯರ ಬದುಕಿನ ಎಲ್ಲಾ ಸಂಕೀರ್ಣತೆಗಳಿಗೆ ಪರಿಹಾರವನ್ನು ಒದಗಿಸುವ ದಿಶೆಯಲ್ಲಿ ಗಂಭೀರವಾದ ಪಾತ್ರವನ್ನು ವಹಿಸಿದರು. ಆ ಮತಪಂಥಗಳೇ ಕ್ರಮೇಣ ಮತಧರ್ಮಗಳಾಗಿ ಹೋದವು. ಉದಾಹರಣೆಗೆ ಬೌದ್ಧಧರ್ಮ, ಜೈನಧರ್ಮ, ಸಿಖ್‌ಧರ್ಮ, ಶೈವ–ವೀರಶೈವ ಅಥವಾ ಲಿಂಗಾಯತ ಧರ್ಮ ಇವುಗಳನ್ನು ಗಮನಿಸಬಹುದು. ಇವು ನಮ್ಮದೇ ಆದ ಭರತ ಖಂಡದವುಗಳೇ ಆಗಿದ್ದುದರಿಂದ ಅವುಗಳ ನಡುವೆ ವಾದವಿವಾದ, ವಾಗ್ವಾದಗಳು ಇದ್ದರೂ ಮತಾಂತರಗಳಂತಹ ಮತ್ತು ತಮ್ಮ ಮತಧರ್ಮದ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ದಿಶೆಯಲ್ಲಿ ರಾಜಪ್ರಭುತ್ವದ ಮೂಲಕ ಒತ್ತಾಯ, ಆಕ್ರಮಣಗಳು ನಡೆಯುತ್ತಿರಲಿಲ್ಲ. ಆದರೆ ಯಾವಾಗ ಯವನರು ಅರ್ಥಾತ್ ಇಸ್ಲಾಂ ಧರ್ಮಾನುಯಾಯಿ ರಾಜರು ಭಾರತವನ್ನು ಆಕ್ರಮಿಸಿಕೊಂಡು ತಮ್ಮ ಆಡಳಿತವನ್ನು ಇಲ್ಲಿ ಸ್ಥಾಪಿಸಿದರೋ ಆಗ ಮತಧರ್ಮಗಳ ನಡುವಣ ಸಂಘರ್ಷವು ತೀವ್ರವಾಯಿತು; ಮತಾಂತರ ಪ್ರಕ್ರಿಯೆಗಳೂ ಹೆಚ್ಚಾದವು. ಮಧ್ಯಕಾಲೀನ ಯುಗದ ಕರ್ನಾಟಕದಲ್ಲಿ ವೀರಶೈವ ಅಥವಾ ಲಿಂಗಾಯತ ಚಳವಳಿಯ ನಂತರ ಇಸ್ಲಾಂ ಆಕ್ರಮಣಗಳು ಹೆಚ್ಚಾದವು. ಕಂಪಲಿಯ ಕಂಪಿಲರಾಯ ಮತ್ತು ಅವನ ಮಗ ಕುಮಾರರಾಮನ ಹೋರಾಟ ಮತ್ತು ವೀರಮರಣದ ಸಂದರ್ಭವನ್ನು ಇದಕ್ಕೆ ನಿದರ್ಶನವಾಗಿ ನೀಡಬಹುದು. ಅನಂತರ ಈ ಕಾರಣವಾಗಿಯೇ ವಿಜಯ ವಿದ್ಯಾರಣ್ಯರ ನೇತೃತ್ವದಲ್ಲಿ ಹಕ್ಕರಾಯ ಮತ್ತು ಬುಕ್ಕರಾಯ ಸಹೋದರರಿಂದ ಹುಟ್ಟಿಕೊಂಡ ವಿಜಯನಗರ ಸಾಮ್ರಾಜ್ಯವು ಕ್ರಿ.ಶ. ೧೩೩೬ ರಿಂದ ಹಿಡಿದು ಕ್ರಿ.ಶ. ೧೬೫೬ರವರೆಗೆ ಒಟ್ಟು ಎರಡು ನೂರಾ ಮೂವತ್ತು ವರ್ಷಗಳವರೆಗೆ ಇಸ್ಲಾಂ ಆಕ್ರಮಣವನ್ನು ಹಿಮ್ಮೆಟ್ಟಿ ನಿಂತು ವೈದಿಕ ಮತ್ತು ವೈದಿಕೇತರ ಧರ್ಮದ ಅನುಯಾಯಿಗಳಿಗೆ ನೆರವಾಗಿತ್ತು. ವಿಜಯನಗರಕ್ಕೂ ಮತ್ತು ಎಲ್ಲ ಮುಸ್ಲಿಂ ದೊರೆಗಳು ಒಂದಾಗಿಬಿಜಾಪುರದ ಆದಿಲಶಾಹಿಯ ಸಂಸ್ಥಾನದ ನೇತೃತ್ವದಲ್ಲಿ ಕ್ರಿ.ಶ. ೧೫೬೫ರಲ್ಲಿ ನಡೆದ ರಕ್ಕಸತಂಗಡಿ ಅರ್ಥಾತ್ ತಾಳಿಕೋಟೆಯ ಕದನದಲ್ಲಿ ಯಾವಾಗ ಅಳಿಯ ರಾಮರಾಯನ ಮರಣವಾಯಿತೋ ಆಗ ಮಧ್ಯ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದತ್ತ ಮುಸ್ಲಿಂ ದೊರೆಗಳು ಮುನ್ನುಗ್ಗಿ ಬರುವುದಕ್ಕೆ ಸಾಧ್ಯವಾಯಿತು. ಹೀಗೆ ಕರ್ನಾಟಕದ ಸಮಾಜೋ–ಧಾರ್ಮಿಕ ಇತಿಹಾಸವು ಬಹಳ

ಗಂಭೀರವಾಗಿ ಇರುವುದನ್ನು ನೋಡಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಹೀಗೆ ಅನ್ಯಾಕ್ರಮಣಗಳ ಕಾರಣ ಉಂಟಾದ ಪರಿಣಾಮವನ್ನು ಕುರಿತಂತೆ ಡಾ. ಟಿ.ಎನ್. ನಾಗರತ್ನ ಅವರ ವಿಚಾರಗಳು ಇಂತಿವೆ: "ಸುಮಾರು ನಾಲ್ಕು ಸಾವಿರ ವರ್ಷಗಳಿಂದ ಜನರ ಆಲಂಬನ ಶಕ್ತಿಯಾಗಿ ಬೆಳೆದು ಬೇರುಬಿಟ್ಟಿದ್ದ ಧರ್ಮ, ದೇವರು, ದೇವಾಲಯಗಳ ಮೇಲಿನ ಆಕ್ರಮಣ, ಅತ್ಯಾಚಾರ, ಅಪವಿತ್ರತೆಗಳಿಂದ ಮಾನಸಿಕವಾಗಿ ಅತಂತ್ರರಾಗಿದ್ದ ಹಿಂದುಗಳು ಕೊಲೆ–ಸುಲಿಗೆಗಳ ಭೀತಿಯಿಂದಲೂ ತತ್ತರಿಸುವಂತಾಗಿದ್ದರು. ಅಂತಹ ಅಸಹಾಯಕ ಸ್ಥಿತಿಯಲ್ಲಿ ಭಕ್ತಿಮಾರ್ಗ ಪುನಃ ಜನರ ಸಹಾಯಕ್ಕೆ ಆಲಂಬನೆಯಾಗಿ ಬಂಡಿತು. ಭಾರತದಾದ್ಯಂತ ವಿವಿಧ ಪ್ರಾಂತ್ಯಗಳಲ್ಲಿ ಭಕ್ತ ಕವಿಗಳು ತಂಡೋಪತಂಡವಾಗಿ ಹುಟ್ಟಿಕೊಂಡು ಜನಜೀವನಕ್ಕೆ ಹತ್ತಿರವಾದ ಅನುಭವಗಳಿಂದ ತುಂಬಿದ ಜನಪ್ರಿಯ ಭಕ್ತಿ ಸಾಹಿತ್ಯ ಸೃಷ್ಟಿ ಮಾಡಿದರು. ಕೇರಳದ ಚೆರುಶ್ಶೇರಿ; ಆಂಧ್ರದ ಅನ್ನಮ–ಪೋತನರು; ಮಹಾರಾಷ್ಟ್ರದ ಜ್ಞಾನದೇವ–ನಾಮದೇವರು; ಉತ್ತರ ಭಾರತದ ಕಬೀರ್; ಗುಜರಾತಿನ ಗಾರಸೀ ಮೆಹತಾ; ಪಂಜಾಬಿನ ಗುರುನಾನಕ್; ರಾಜಾಸ್ಥಾನದ ಮೀರಾ, ಕರ್ನಾಟಕದ ಶ್ರೀಪಾದರಾಜರು–ಹೀಗೆ ಅನೇಕ ಮಂದಿ ಸಂತರು ತಮ್ಮ ತಮ್ಮ ಮಾತೃಭಾಷೆಯಲ್ಲಿ ಕೃತಿರಚನೆ ಮಾಡಿದರು. ಸಂಸ್ಕೃತ ಕವಿ ಜಯದೇವ, ಬಂಗಾಲದ ಚಂಡೀದಾಸ, ಅಸ್ಸಾಮಿನ ಶಂಕರದೇವ– ಎಲ್ಲರೂ ಈ ಭಕ್ತಿವಾಹಿನಿಯಲ್ಲಿ ಮಿಂದು ಪುನೀತರಾದವರೇ. ಒಂದು ಕಡೆ ಪರಕೀಯರಾದ ಮುಸ್ಲಿಂ ದೊರೆಗಳ ಹಾವಳಿ, ಮತ್ತೊಂದು ಕಡೆ ಚಿಕ್ಕಪುಟ್ಟ ರಾಜರುಗಳ ಅಧಿಕಾರ ಲಾಲಸೆಯಿಂದ, ರಾಜ್ಯಗಳ ಅಂತಃಕಲಹಗಳಿಂದ ಬೇಸತ್ತಿದ್ದ ಜನತೆಯನ್ನು ಶಾಂತಿ ಸಮಾಧಾನಗಳತ್ತ ಕರೆದೊಯ್ಯಲು ಈ ಭಕ್ತಿ ಪಂಥಗಳು ಅನುವಾದವು. ಭಕ್ತಿ ವೃದ್ಧಿಸಿದ್ದೇ ಕರ್ನಾಟಕದಲ್ಲಿ. ಜೈನ, ಬೌದ್ಧ, ಶೈವ, ವೀರಶೈವ ಹಾಗೂ ವೈಷ್ಣವ ಧರ್ಮಗಳೇ ಕರ್ನಾಟಕದ ಪ್ರಮುಖ ಧರ್ಮಗಳೂ ಹೌದು...." (ಶ್ರೀಪಾದರಾಜರು: ಜೀವನ ಮತ್ತು ಕೃತಿಗಳು, ಪುಟ. ೫೫,೬)

ಮಧ್ಯಕಾಲೀನ ಯುಗದಲ್ಲಿ ಜನಸಾಮಾನ್ಯರು ಆಳರಸರ ನಡುವಣ ಅಂತಃಕಲಹಗಳಿಂದ ಮತ್ತು ಅನ್ಯಧರ್ಮೀಯ ರಾಜರುಗಳಿಂದ ಎಂತಹ ಸಂಕೀರ್ಣಮಯ ಜೀವನವನ್ನು ಅತ್ಯಂತ ಸಂಕಷ್ಟಗಳಿಂದ ಎದುರಿಸಬೇಕಾಗಿತ್ತು ಎಂಬುದನ್ನು ಈ ಮೂಲಕ ಗಮನಿಸಬಹುದು. ಅಂತಹ ಸಂದರ್ಭದಲ್ಲಿ ಧಾರ್ಮಿಕ ಅದ್ವರ್ಯುಗಳು ತಮ್ಮ ನಡೆನುಡಿಗಳು ಮತ್ತು ಸದ್ಧರ್ಮೀಯ ಆಚಾರ, ವಿಚಾರಗಳಿಂದ ಜನಸಾಮಾನ್ಯರ ಮನಸ್ಸಿನಲ್ಲಿ ಆತ್ಮಸ್ಥೈರ್ಯವನ್ನು ತುಂಬುವ

Scanned with CamScanner

ಗಂಭೀರ ಕಾರ್ಯವನ್ನು ನಿರ್ವಹಿಸಿದರು. ಅವರಲ್ಲಿ ದ್ವೈತಮತದ ಸಂಸ್ಥಾಪಕರಾದ ಶ್ರೀ ಮಧ್ವಾಚಾರ್ಯರ ನಾಲ್ಕುಜನ ಶಿಷ್ಯರಲ್ಲಿ ಒಬ್ಬರಾದ ಶ್ರೀ ಸ್ವರ್ಣವರ್ಣತೀರ್ಥರು 'ತಮಿಳುನಾಡಿನ ಶ್ರೀರಂಗದಲ್ಲಿ ಮಾಧ್ವಮಠದ ಪೀಠಾಧಿಪತಿಗಳಾಗಿದ್ದರು. ಅವರು ಶ್ರೀರಂಗಂನಲ್ಲಿ ರೂಪಿಸಿದ ಧಾರ್ಮಿಕ ವಾತಾವರಣವು ತಮಿಳು ಭಾಷೆಯಲ್ಲಿ ಸ್ತೋತ್ರಗಳನ್ನು ಬರೆದು ಹಾಡುತ್ತಿದ್ದರು. ಈ ಶ್ರೀಸ್ವರ್ಣವರ್ಣತೀರ್ಥರ ಶಿಷ್ಯರೇ ಶ್ರೀಪಾದರಾಜರು (ಕಾಲ. ಕ್ರಿ.ಶ.ಸು. ೧೪೦೬). ಇವರ ಪೂರ್ವಾಶ್ರಮದ ಹೆಸರು ಶ್ರೀ ಲಕ್ಷ್ಮಿನಾರಾಯಣ. ಚನ್ನಪಟ್ಟಣದ ಬಳಿಯ ಅಬ್ಬೂರಿನಲ್ಲಿ ವಾಸವಾಗಿದ್ದ ಶೇಷಗಿರಿ ಆಚಾರ್ಯ ಮತ್ತು ಗಿರಿಯಮ್ಮ ಇವರ ತಂದೆತಾಯಿಗಳು. ಬಾಲಕನಾಗಿದ್ದಾಗ ಬಹಳ ಲವಲವಿಕೆಯಿಂದ ಮತ್ತು ಆಕರ್ಷಣೀಯವಾಗಿದ್ದ ಲಕ್ಷ್ಮಿನಾರಾಯಣನನ್ನು ನೋಡಿದರು. ಈ ಬಾಲಕ ನನ್ನ ಶಿಷ್ಯನಾಗಿ ತಮ್ಮ ಸಂಸ್ಥಾನಕ್ಕೆ ಬಂದರೆ ಧಾರ್ಮಿಕವಾಗಿ ಏನನ್ನಾದರೂ ಸಾಧಿಸುವುದಕ್ಕೆ ಸಾಧ್ಯವಂವೆಂದು ಅವರ ಅಂತರಾತ್ಮವು ನುಡಿಯಲಾರಂಭಿಸಿತು. ಅದರಂತೆ ಸ್ವರ್ಣವರ್ಣತೀರ್ಥರು ತಮ್ಮ ಧಾರ್ಮಿಕ ಸಂಕಲ್ಪವನ್ನು ಈಡೇರಿಸುವುದಕ್ಕಾಗಿ ಪುರುಷೋತ್ತಮರ ಸಹಾಯದಿಂದ ತಮ್ಮ ಶಿಷ್ಯನಾಗಿ ಕಳುಹಿಸುವುದಕ್ಕೆ ಲಕ್ಷ್ಮಿನಾರಾಯಣನ ತಂದೆತಾಯಿಗಳನ್ನು ಒಪ್ಪಿಸಿದರು. ತನ್ನೊಡನೆ ಬಂದ ಬಾಲಕನಿಗೆ ಬ್ರಹ್ಮೋಪದೇಶ ಮಾಡುವ ಮೂಲಕ ಕರ್ನಾಟಕದ ಉಜ್ವಲ ಭವಿಷ್ಯಕ್ಕೆ ಅಡಿಪಾಯ ಹಾಕಿದರು ಎಂದರೆ ತಪ್ಪಾಗುವುದಿಲ್ಲ.

ತಮ್ಮ ಗುರುಗಳೊಂದಿಗೆ ತಮಿಳುನಾಡಿನ ಶ್ರೀರಂಗಂ ಧಾರ್ಮಿಕ ಕ್ಷೇತ್ರಕ್ಕೆ ಆಗಮಿಸಿದ ಬಾಲಕ ಶ್ರೀಪಾದರಾಜರು ಸಣ್ಣ ವಯಸ್ಸಿನಲ್ಲಿಯೇ ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯದಿಂದ ಧಾರ್ಮಿಕ ಗ್ರಂಥಗಳನ್ನು ವ್ಯಾಖ್ಯಾನ ಮಾಡಿ ಹಿರಿಯ ಗುರುಗಳು ಮತ್ತು ಜನರ ಮೆಚ್ಚುಗೆ ಗಳಿಸಿದರು. ಹಾಗೆಯೇ ರಾಯಚೂರಿನ ನೃಸಿಂಹ ಕ್ಷೇತ್ರವಾದ ಕೊಪ್ಪರದಲ್ಲಿ ಚಾತುರ್ಮಾಸ ನಡೆಯುತ್ತಿದ್ದಾಗ ಬಂದಿದ್ದ ಬಾಲಕ ಶ್ರೀಪಾದರಾಜರು 'ನ್ಯಾಯಸುಧೆ' ಎಂಬ ಕೃತಿಯಲ್ಲಿನ ಒಂದು ವಾಕ್ಯವನ್ನು ವ್ಯಾಖ್ಯಾನ ಮಾಡುವಂತೆ ಹೇಳಿದಾಗ, ಆ ನೆಪದಲ್ಲಿ ಇಡೀ ಗ್ರಂಥವನ್ನೇ ಹೊಸರೂಪದಲ್ಲಿ ಅತ್ಯಂತ ವಿದ್ವತ್ಪೂರ್ಣವಾಗಿ ಮಂಡಿಸಿದಾಗ ಅಲ್ಲಿಯೇ ಇದ್ದ ಶ್ರೀ ರಘುನಾಥ ಗುರುಗಳು ಬಾಲಕನ ಪ್ರತಿಭೆಯನ್ನು ಕೊಂಡಾಡಿ 'ಶ್ರೀಪಾದರಾಜ' ಎಂಬುದು ಅನ್ವರ್ಥಕವಾಗಿದೆ ಎಂದು ಹೇಳಿದರು. ಮುಂದೆ ಶ್ರೀಪಾದರಾಜರು ತಮ್ಮ ಗುರುಗಳ ಆದೇಶದಂತೆ ವಿದ್ಯುಕ್ತವಾಗಿ ಶ್ರೀರಂಗಂನ ಪೀಠದ ಎಂಟನೆಯ ಪೀಠಾಧಿಪತಿಗಳಾದರು. ತಮ್ಮ ದೂರದೃಷ್ಟಿಯಂತೆಯೇ ಈ ಬಾಲಕನು ಅತ್ಯಂತ ತೇಜಸ್ವಿಯಾಗುತ್ತಿರುವುದನ್ನು ನೋಡಿ ತಮ್ಮ ಕಾರ್ಯ ಸಾರ್ಥಕವಾಯಿತೆಂದು

ಸಂತೃಪ್ತಗೊಂಡರು. ಶ್ರೀರಂಗಂನ ರಂಗನಾಥನನ್ನು ಆರಾಧ್ಯ ದೈವವಾಗಿ ಸ್ವೀಕರಿಸಿದ ಕಾರಣವೇ ಅವರು 'ರಂಗವಿಠಲ' ಎಂಬ ಅಂಕಿತನಾಮದಿಂದ ಕೀರ್ತನೆಗಳನ್ನು ಬರೆದುದೆನ್ನು ಗಮನಿಸಬಹುದು. ಕೆಲವಾರು ವರ್ಷಗಳ ನಂತರ ಅವರು ಸಂಚಾರ ಹೊರಟು ಕೋಲಾರದ ಮುಳಬಾಗಿಲಿಗೆ ಬಂದಾಗ ಅವರಿಗೆ ಅಲ್ಲಿನ ಪ್ರಕೃತಿ ಸಿರಿಯನ್ನು ಕಂಡು ಅತ್ಯಂತ ಸಂತಸ ಉಂಟಾಯಿತು. ಅಲ್ಲಿಯೇ ಇದ್ದ ನೃಸಿಂಹತೀರ್ಥದ ಸನ್ನಿಧಿಯಲ್ಲಿ ಒಂದು ಮಠವನ್ನು ಸ್ಥಾಪಿಸಿದರು. ಮುಂದೆ ಅದು 'ಶ್ರೀಪಾದರಾಜ ಮಠ'ವೆಂದೇ ಬಹಳ ಪ್ರಸಿದ್ಧವಾಯಿತು. ವಿಜಯನಗರ ಸಾಮ್ರಾಜ್ಯದ ಅರಸರ ಆಡಳಿತಕ್ಕೆ ಒಳಪಟ್ಟಿದ್ದ ಈ ಪ್ರದೇಶವು ಕೌಂಡಿನ್ಯ ಮುನಿಗಳು ತಪಸ್ಸು ಗೈದಿದ್ದ ಪುಣ್ಯ ಭೂಮಿಯಿದು ಎನ್ನಲಾಗಿದೆ. ಇಂತಹ ಪವಿತ್ರ ಪ್ರದೇಶದಲ್ಲಿ ಬಂದು ನೆಲೆಸಿದ ಶ್ರೀಪಾದರಾಜರು ಮುಳಬಾಗಿಲನ್ನು ದ್ವೈತ ದರ್ಶನದ ಮಹಾವಿಶ್ವವಿದ್ಯಾಲಯವನ್ನಾಗಿ ಮಾಡುವ ಮೂಲಕ ಎಲರನ್ನೂ ಆಕರ್ಷಿಸಿ ಇಲ್ಲಿಗೆ ಬರುವಂತೆ ಮಾಡಿ, ವೇದಾಂತ ಕಲಿಕೆಗೆ ಅವಕಾಶ ಒದಗಿಸಿದರು. ಅವರ ಅಗಾಧ ಪಾಂಡಿತ್ಯದಿಂದ ಹಲವಾರು ಜನರು ಶಿಷ್ಯರಾಗಿ ಅಧ್ಯಯನಕ್ಕೆ ಬರಲಾರಂಭಿಸಿದರು. ಅವರಲ್ಲಿ ವ್ಯಾಸರಾಜ ತೀರ್ಥರೂ ಒಬ್ಬರು ಎಂಬುದು ಗಮನಾರ್ಹ. ಶ್ರೀಪಾದರಾಜರು ಮತ್ತು ಶ್ರೀವ್ಯಾಸರಾಜತೀರ್ಥರ ಗುರು–ಶಿಷ್ಯ ಸಂಬಂಧವು ಗುರು ಗೋವಿಂದ–ಶಿಶುನಾಳ ಶರೀಫ ಮತ್ತಿತರೆ ಹಲವರಂತೆ ಬಹಳ ಅಪೂರ್ವವಾದುದೆಂದೇ ಹೇಳಬಹುದು. ತಮ್ಮ ಪೂಜ್ಯ ಗುರುವರ್ಯರಾದ ಶ್ರೀಪಾದರಾಜರನ್ನು ಕುರಿತು ವ್ಯಾಸರಾಜತೀರ್ಥರು ಕೆಲವು ಕೀರ್ತನೆಗಳು ಮತ್ತು 'ಪಂಚರತ್ನಮಾಲಿಕೆ' ಎಂಬ ಸ್ತುತಿ ಪ್ರಧಾನ ಕೃತಿಯನ್ನು ರಚಿಸಿ ತಮ್ಮ ಗೌರವ ಭಾವವನ್ನು ಅಭಿವ್ಯಕ್ತಿಸಿದ್ದಾರೆ:

'ಸಕಲಶಾಸ್ತ್ರ ಕಲಾಪ ಸಂನ್ಯಾಸಕುಲದೀಪ
ಸಕಲ ಸತ್ಪಸ್ಥಾಪ ಸುಜ್ಞಾನದೀಪ
ಪ್ರಕಟ ಪಾವನರೂಪ ಅರಿಕುಜನಮತ ಲೋಪ
ನಿಕಟ ವರ್ಜಿತ ಪಾಪ ಕೀರ್ತಿಪ್ರತಾಪ'
'ಮಹಿಮೆ ಸಾಲದೆ ಇಪ್ಪೇ ಮಹಿಮೆ ಸಾಲದೆ ॥೮॥

ಅಹಿಶಯನನ ಒಲುಮೆಯಿಂದ
ಮಹಿಳೆಯೊಳೆಮ್ಮ ಶ್ರೀಪಾದರಾಯರ' ॥೮.೮.॥

'ಹರಿಗೆ ಸಮರ್ಪಿಸಿದ ನಾನಾ
ಪರಿಯ ಶಾಕಗಳನು ಭುಂಜಿಸಿ
ನರರು ನಗಲು ಶ್ರೀಶ ಕೃಷ್ಣನ
ಕರುಣದಿಂದ ಪರಿಯ ತೋರಿದ' ॥೩॥

Scanned with CamScanner

ಈ ಮಾಲಿಕೆ ಮತ್ತು ಕೀರ್ತನೆಯಲ್ಲಿ ತಮ್ಮ ಗುರುಗಳಾದ ಶ್ರೀಪಾದರಾಜರ ಅಸದೃಶವಾದ ಹಿರಿಯ ವ್ಯಕ್ತಿತ್ವವನ್ನು ಕಂಡರಸಿದ್ದಾರೆ. ಸ್ವತಃ ಸಿದ್ಧಪುರುಷರಾಗಿದ್ದ ಇವರು ತಮ್ಮ ಕೀರ್ತನಾದಿ ಬರಹಗಳಿಂದ ಸಕಲ ಜನಸಮುದಾಯದ ಮೇಲೆ ಗಂಭೀರವಾದ ಪ್ರಭಾವವನ್ನು ಬೀರಿದ್ದರು ಎಂಬುದನ್ನು ಶ್ರುತಪಡಿಸಲಾಗಿದೆ. ಅವರ ಬಗೆಗೆ ಅನೇಕ ಪುರಾಣ, ದಂತಕಥೆಯಾದಿ ಆಖ್ಯಾನಗಳು ಆ ಕಾಲದಲ್ಲಿಯೇ ಕೇಳಿಬರುತ್ತಿದ್ದವು ಎಂದರೆ ಅವರ ಪ್ರಭಾವ ಎಷ್ಟು ಪ್ರಖರವಾಗಿತ್ತು ಎಂಬುದು ನಮಗೆ ಮನದಟ್ಟಾಗುತ್ತದೆ. ಇನ್ನು ಆ ಹೊತ್ತಿನ ದೊರೆ ಸಾಳುವ ನರಸಿಂಹನು ಸ್ವತಃ ಶ್ರೀಪಾದರಾಜರನ್ನು ಕರೆಸಿ ರಾಜಮನ್ನಣೆಯಿಂದ ಸನ್ಮಾನ ಮಾಡಿದನು ಎಂದರೆ ಶ್ರೀಪಾದರಾಜರ ವ್ಯಕ್ತಿತ್ವ ಎಷ್ಟು ಗಂಭೀರವಾಗಿತ್ತು ಎಂಬುದು ಅರ್ಥವಾಗುವುದು. ಶ್ರೀಪಾದರಾಜರ ಸಾರ್ವಜನಿಕೋಪಕಾರ ಪ್ರಜ್ಞೆಯೇ ಮುಂದೆ ಶ್ರೀವ್ಯಾಸರಾಜತೀರ್ಥರ ಮೇಲೆ ಉಂಟಾಗಿ ಅವರು ಸರ್ವಜನತೆಗಾಗಿ ಕೆರೆ, ಅರವಟ್ಟಿಗೆ, ಬಾವಿ ಇತ್ಯಾದಿಗಳನ್ನು ತೋಡಿಸಿ ಲಕ್ಷಾಂತರ ಕುಟುಂಬಗಳಿಗೆ ಆಸರವಾದರು. ಸ್ವತಃ ಶ್ರೀಪಾದರಾಜರೇ ತಮ್ಮ ಈ ಶಿಷ್ಯ ಮಹೋತ್ತಮನ ಕೈಂಕರ್ಯದ ಮಹತ್ವವನ್ನು ಕೀರ್ತನಾದಿ ಸಾಹಿತ್ಯದಲ್ಲಿ ಸ್ತುತಿಸಿದ್ದಾರೆ. ಜನರ ಸೇವೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದ ಶ್ರೀಪಾದರಾಜರ ರೀತಿ ಮತ್ತು ವ್ಯಕ್ತಿತ್ವಕ್ಕೆ ಜನತೆ ಮಾರುಹೋಗುವಂತಾಗಿತ್ತು.

ಹರಿದಾಸ ಪರಂಪರೆಯು ಕ್ರಿ.ಶ. ಒಂಬತ್ತನೆಯ ಶತಮಾನದಿಂದ ಅಚಲಾನಂದದಾಸರ ಕಾಲದಿಂದಲೇ ಆರಂಭವಾಗುವುದಾಗಿ ತುಕೇಕರಿ ಹಸ್ತಪ್ರತಿಯ ಆಧಾರದಿಂದ ಗುರುತಿಸಲಾಗಿದೆ. ಇನ್ನು ಬೇಲೂರು ಕೇಶವದಾಸರು ತಮ್ಮ 'ಕರ್ನಾಟಕ ಭಕ್ತವಿಜಯ' ಎಂಬ ಕೃತಿಯಲ್ಲಿ 'ಕಾಶೀತಿಸಂಖ್ಯಾ ಶಕಕಾಲಕಾಬ್ದೇ' ಎಂಬ ಪದ್ಯವೊಂದರ ಹಿನ್ನೆಲೆಯಲ್ಲಿ ಅಚಲಾನಂದರು 'ಅಚಲಾನಂದ ವಿಠಲ' ಎಂಬ ಅಂಕಿತದಲ್ಲಿ ಬರೆಯಲಾಗಿರುವ ಉಗಾಭೋಗಗಳನ್ನು ಉದಾಹರಿಸಿರುದನ್ನು ಇಲ್ಲಿ ಗಮನಿಸಬಹುದು ಎಂದು ಹೇಳಲಾಗಿದೆ. ಅವರ ಕಾಲವು ಮಧ್ವಾಚಾರ್ಯರಿಗೆ ಸ್ವಲ್ಪ ಹಿಂದೆ ಎಂಬುದಾಗಿ ಕೆಲವರು, ಅವರಿಗೂ ನಂತರದವರು ಎಂಬುದಾಗಿ ಕೆಲವರು ಸಾಧಾರವಾಗಿ ನಿರೂಪಿಸಿದ್ದಾರೆ. ಇನ್ನು ನರಹರಿತೀರ್ಥರ ಬಗೆಗೂ ಚರ್ಚಿಸಲಾಗಿದೆ. ಮತ್ತೆ ಕೆಲವರು ಈ ಹರಿದಾಸ ಪರಂಪರೆಯನ್ನು ಪೌರಾಣಿಕ ವ್ಯಕ್ತಿ ಮಹಿದಾಸರಿಂದ ಹೇಳುತ್ತಾರೆ. ಈ ಸಂಪ್ರದಾಯಕ್ಕೆ ಅರವತ್ತು ಜನ ಆದ್ಯರು, ಒಂಬತ್ತು ಜನ ಆರಾಧ್ಯರು ಪ್ರಮುಖವಾಗಿ ಇದ್ದರು ಎಂಬುದು ಇವರ ವಾದ. ಆದರೆ ಮೊದಲ ಘಟ್ಟದ ಪುರಂದರಾದಿ ಹರಿದಾಸರಾರೂ ಈ ಆದ್ಯರನ್ನು ಮತ್ತು

ಆರಾಧ್ಯರನ್ನು ನೆನೆಯದಿರುವುದರಿಂದಾಗಿ ಹರಿದಾಸ ಸಾಹಿತ್ಯದ ನಿಜವಾದ ಪ್ರವರ್ತಕರು ಶ್ರೀಪಾದರಾಜರೇ ಎಂಬುದನ್ನು ಖಚಿತವಾಗಿ ಗುರುತಿಸಿ ಒಪ್ಪಿಕೊಳ್ಳಲಾಗಿರುದನ್ನು ಪ್ರಸ್ತುತ ಕೃತಿಯಲ್ಲಿ ಗುರುತಿಸಲಾಗಿದೆ. ವಿಜಯದಾಸರಿಗೆ ಮುಂಚಿನವರಾದ ಮಹಿಪತಿದಾಸರು ತಮ್ಮ ಗುರು ಪರಂಪರೆಯ ಸ್ಮರಣೆಯಲ್ಲಿ ಶ್ರೀಪಾದರಾಜ, ವ್ಯಾಸರಾಜ, ವಾದಿರಾಜ, ಪುರಂದರದಾಸ ಮತ್ತು ಕನಕದಾಸರನ್ನೇ ಹೇಳಿರುವುದರಿಂದಲೂ ಇದು ದೃಢವಾಗುತ್ತದೆ. ಈ ಕುರಿತಂತೆ ಟಿ.ಎನ್. ನಾಗರತ್ನ ಅವರು ಹೇಳುವ ವಿಚಾರಗಳು ಇಂತಿವೆ:

"...ಇಂದು ಕನ್ನಡ ಹರಿದಾಸ ಸಾಹಿತ್ಯದಲ್ಲಿ ಕಾಣಸಿಗುವ ಉಗಾಭೋಗ, ಸುಳಾದಿ, ವೃತ್ತನಾಮ, ದಂಡಕ – ಈ ಎಲ್ಲಾ ಪ್ರಕಾರಗಳಲ್ಲೂ ಕೃತಿ ರಚಿಸುವ ಮೂಲಕ ಹರಿದಾಸ ಸಾಹಿತ್ಯಕ್ಕೆ ಒಂದು ನಿರ್ದಿಷ್ಟ ಸ್ವರೂಪ ಕೊಟ್ಟವರು ಶ್ರೀಪಾದರಾಜರು. ಆ ಪರಂಪರೆಯನ್ನು ಸಶಕ್ತವಾಗಿ ಮುಂದುವರೆಸಿದ ಅವರ ಶಿಷ್ಯ ವ್ಯಾಸರಾಯರು ತಮ್ಮ ಶಿಷ್ಯರಾದ ಪುರಂದರ–ಕನಕಾದಿ ಹರಿದಾಸರ ಮೂಲಕ ಕನ್ನಡ ಹರಿದಾಸ ಸಾಹಿತ್ಯವನ್ನು ಇನ್ನಷ್ಟು ಮತ್ತಷ್ಟು ಬೆಳೆಸಿದರು. ಕನಕ–ಪುರಂದರರಂತೂ ಹರಿಭಕ್ತಿಯನ್ನು, ಮಧ್ವ ಸಿದ್ಧಾಂತವನ್ನು ಸಂಗೀತದ ಮೂಲಕ ಜನಸಾಮಾನ್ಯರ ಮನೆಮನೆಯ ಬಾಗಿಲಿಗೆ ಕೊಂಡೊಯ್ದವರು; ಕನ್ನಡವನ್ನು ಭಕ್ತಿ ಭಾಷೆಯಾಗಿ, ತತ್ತ್ವಭಾಷೆಯಾಗಿ ಮೆರೆಸಿದವರು. ಪುರಂದರದಾಸರ ಅನಂತರ ಕಾಖಿಂಡಿಕಿ ಮಹಿಪತಿರಾಯರು ಮತ್ತು ಅವರ ಮಗ ಕೃಷ್ಣರಾಯರುಗಳಿಂದ ಜೀವಂತವಾಗಿದ್ದ ಕನ್ನಡ ಹರಿದಾಸ ಸಾಹಿತ್ಯ ವಾಹಿನಿ ವಿಜಯದಾಸರಿಂದ ಪುನರುಜ್ಜೀವನಗೊಂಡಿತೆನ್ನುವ ವಿಚಾರ ಸರ್ವವಿದಿತ. ಮುಂದೆ ಅವರ ಶಿಷ್ಯ ಪ್ರಶಿಷ್ಯರುಗಳಿಂದ ಪುಂಖನುಪುಂಖವಾಗಿ ರಚಿತವಾದ ಕೀರ್ತನೆ, ಸುಳಾದಿ, ಉಗಾಭೋಗಗಳಿಂದ ಕನ್ನಡ ಹರಿದಾಸ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. ಗೋಪಾಲದಾಸರು, ಹೆಳವನಕಟ್ಟೆ ಗಿರಿಯಮ್ಮ, ಜಗನ್ನಾಥದಾಸರು, ಪ್ರಸನ್ನ ವೆಂಕಟದಾಸರು, ಹರಪನಹಳ್ಳಿ ಭೀಮವ್ವನೇ ಮೊದಲಾದ ನೂರಾರು ಹರಿದಾಸರು ರಚಿಸಿದ ಸಾವಿರಾರು ಕೃತಿಗಳಿಂದ ಸಂಪನ್ನವಾಯಿತು. ಮೋಹನ ವಿಠಲ, ಶ್ರೀದ ವಿಠಲ, ವರದೇಂದರ ವಿಠಲ, ಏರಿವೆಂಕಟರು, ಇಂದಿರೇಶ ವಿಠಲರು, ಪ್ರಸನ್ನ ಶ್ರೀನಿವಾಸರೇ ಮೊದಲಾದ ಹರಿದಾಸರಿಂದ ಹರಿದಾಸ ಸಾಹಿತ್ಯ ಸ್ತೋತ್ರ ಇಂದಿಗೂ ಜೀವಂತವಾಗಿದ್ದು ಇಪ್ಪತ್ತನೆಯ ಶತಮಾನದಲ್ಲಿ ನಿರಂತರವಾಗಿ ಕೃತಿರಚನೆ ನಡೆದು ಈ ಇಪ್ಪತ್ತೊಂದನೆಯ ಶತಮಾನಕ್ಕೂ ಸಾಗಿಬಂದಿದೆ." (ಅದೇ, ಪುಟ: ೨೫)

Scanned with CamScanner

ಹೀಗೆ ಕನ್ನಡ ಭಾಷೆಯಲ್ಲಿ ಭಕ್ತಿ ಸ್ತೋತ್ರಕ್ಕೆ ವಿಸ್ತೃತ ಆಯಾಮದಿಂದ ಪರಂಪರಾತ್ಮಕ ಬುನಾದಿ ಹಾಕಿಕೊಟ್ಟ ಶ್ರೀಪಾದರಾಜರನ್ನು ಇಂದಿಗೂ ದಾಸ ಸಾಹಿತ್ಯದ ಆದ್ಯ ಸಾಹಿತ್ಯ ಪ್ರವರ್ತಕರು ಎಂಬುದಾಯೇ ಸ್ಮರಿಸಲಾಗುತ್ತದೆ. ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಓಡಿತವನ್ನು ಸಾಧಿಸಿದ್ದ ಶ್ರೀಪಾದರಾಜರು ಕನ್ನಡ ಪ್ರಾರ್ಥನೆಯ ಪರಿಸರಕ್ಕೆ ನಾಂದಿ ಹಾಡಿದ್ದು ಕ್ರಾಂತಿಕಾರಕ ಕಾರ್ಯವೆಂದೇ ಭಾವಿಸಬಹುದಾಗಿದೆ. ಅವರು ಹಾಕಿಕೊಟ್ಟ ಬುನಾದಿಯ ಮೇಲೆ ಶ್ರೀವ್ಯಾಸರಾಯತೀರ್ಥ, ಶ್ರೀಪುರಂದರದಾಸ ಮತ್ತು ಶ್ರೀಕನಕದಾಸರು ಸಮೃದ್ಧ ಬೆಳೆಯನ್ನು ಬೆಳೆಸಿದರು. ಅವರ ನಂತರ ಶ್ರೀವಿಜಯದಾಸರ ಶಿಷ್ಯಪರಂಪರೆಯು ದಾಸ ಸಾಹಿತ್ಯವನ್ನು ಇನ್ನೂ ಸಮೃದ್ಧಗೊಳಿಸಿತು. ಒಟ್ಟಾರೆ ಸುಮಾರು ಐದು ಶತಮಾನಗಳ ಕಾಲದಿಂದಲೂ ದಾಸ ಸಾಹಿತ್ಯವು ರಚನೆಗೊಳ್ಳುತ್ತಲೇ ಇದೆ. ಬಳ್ಳಾರಿ ಶ್ರೀಮತಿ ದೊಡ್ಡಿ ಗಂಗೂಬಾಯಿ ಗುಂಡೂರಾವ್ ಮತ್ತು ಹೊಸಪೇಟೆಯ ಶ್ರೀಮತಿ ಜಲಜ ಗಂಗೂರ ಅವರನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಹಾಗೆಯೇ ಕರ್ನಾಟಕದಾದ್ಯಂತ ಬೇರೆ ಬೇರೆ ಸ್ಥಳಗಳಲ್ಲಿ ದಾಸ ಪರಂಪರೆಯು ಇದೆ. ಇಂದಿಗೂ ಕೀರ್ತನಾದಿ ಸಾಹಿತ್ಯವು ರಚನೆಗೊಳ್ಳುತ್ತಿದೆ. ರಾಯಚೂರು ಜಿಲ್ಲೆಯ ಸುತ್ತಮುತ್ತಲೇ ನೂರಾರು ದಾಸರು ನಮಗೆ ಕಾಣಸಿಕ್ಕುತ್ತಾರೆ. ಅಷ್ಟ ದಾಸ ಕೇಂದ್ರಗಳಾದ ಉಡುಪಿ, ಹಂಪಿ, ಸೋಂದ, ಮುಳಬಾಗಿಲು, ತಿರುಪತಿ, ಪಂಢರಪುರ, ಶ್ರೀರಂಗಂ ಮತ್ತು ಮಂತ್ರಾಲಯಗಳು ದಾಸ ಭಕ್ತರನ್ನು ಇಂದಿಗೂ ಪೋಷಿಸುತ್ತಿವೆ.

ಶ್ರೀಪಾದರಾಜರಿಗೆ ಹರಿಭಕ್ತಿ ಪರಿಸರವನ್ನು ಕನ್ನಡಮಯಗೊಳಿಸುವುದಕ್ಕೆ ಆ ಹೊತ್ತಿಗೆ ಒದಗಿ ಬಂದಿರಬಹುದಾದ ಪ್ರೇರಣೆಗಳು ಅತ್ಯಂತ ಗಮನಾರ್ಹವಾದುವು. ಡಾ. ಟಿ. ಎನ್. ನಾಗರತ್ನ ಅವರು ತಮ್ಮ ಕೃತಿಯಲ್ಲಿ ಹೀಗೆ ದಾಖಲಿಸಿದ್ದಾರೆ:

"೧. ತಾವು ನಂಬಿ ನೆಚ್ಚಿದ ಮತ ತತ್ತ್ವಗಳನ್ನು ಸಾಮಾನ್ಯ ಜನರಿಗೂ ತಿಳಿಸುವ ಅವರ ಅದಮ್ಯ ಬಯಕೆ.

೨. ಶ್ರೀಪಾದರಾಜರು ಶ್ರೀರಂಗಂನಲ್ಲಿದ್ದಾಗ ಪರಿಚಯವಾಗಿದ್ದ ಅಲ್ಲಿಯ ಆಳ್ವಾರರ ತಮಿಳಿನ ಕೃತಿ ಅಳು ಸಾಮಾನ್ಯ ಜನರನ್ನು ಮುಟ್ಟಿದ್ದ, ತಟ್ಟಿದ್ದ ರೀತಿಯನ್ನು ಕಣ್ಣಾರೆ ಕಂಡು ಕೇಳಿದ್ದುದು.

೩. ಜೈನ, ಬೌದ್ಧ, ವೀರಶೈವ, ಶ್ರೀವೈಷ್ಣವರುಗಳಿಂದ ರಚಿತವಾದ ಪ್ರಾಕೃತ, ಪಾಳಿ, ಕನ್ನಡ, ತಮಿಳು ಕೃತಿಗಳಿಂದ ಸಾಮಾನ್ಯ ಜನತೆಯ ಮೇಲುಂಟಾದ ಪರಿಣಾಮ ಶ್ರೀಪಾದರಾಜರಿಗೆ ತಿಳಿದಿದ್ದುದರಿಂದ ಧರ್ಮ ಹಾಗೂ ಜನತೆಯ

ನಡುವೆ ಮಾತೃಭಾಷೆಯಲ್ಲಿ ಮಾತ್ರ ನೇರ ಸಂಪರ್ಕ ಮತ್ತು ಉದ್ದಿಶ್ಯ ಪರಿಣಾಮ ಸಾಧ್ಯವೆಂಬ ಅವರ ಅನುಭವಜನ್ಯ ತಿಳುವಳಿಕೆ.

೪. ಶ್ರೀವೈಷ್ಣವ ಮತದ ಅನುಯಾಯಿಗಳು ತಮ್ಮ ಮಾತೃಭಾಷೆಯಲ್ಲದ ಕನ್ನಡದಲ್ಲಿ ತತ್ತ್ವಪ್ರಚಾರ ಮಾಡದ ಕಾರಣ ಶಂಕರಾಚಾರ್ಯರ ಶೈವಧರ್ಮ, ಬಸವಣ್ಣನವರ ವೀರಶೈವ ಧರ್ಮಗಳೆದುರು ವೈಷ್ಣವ ಧರ್ಮ ತಲೆಯೆತ್ತಿ ನಿಲ್ಲಬೇಕಾದ ಅನಿವಾರ್ಯತೆ.

೫. ವೀರಶೈವ ಧರ್ಮದ ವಿಶಾಲ ಮನೋಭಾವದಿಂದಾಗಿ ತತ್ತರಿಸಿದ್ದ ವೈದಿಕರ ಸಾಂತ್ವನ.

೬ ಪರಧರ್ಮೀಯರ ಆಕ್ರಮಣದ ಭಯದಲ್ಲಿ ತತ್ತರಿಸುತ್ತಿದ್ದ ಜನತೆಗೆ ಶ್ರೀರಕ್ಷೆಯಾಗಿ ನಿಲ್ಲಬೇಕಾಗಿ ಬಂದ ತುರ್ತುಪರಿಸ್ಥಿತಿ.

೭ ತತ್ತ್ವಗಳನ್ನು ತಿಳಿಯುವ ಜನಸಾಮಾನ್ಯರ ಬಯಕೆಯನ್ನು ಸಂಸ್ಕೃತ ವಿದ್ವಾಂಸರು ಪೂರೈಸಲಾರದ ಪರಿಸ್ಥಿತಿ.

೮. ಆಳರಸರ ಪರಸ್ಪರ ಕಾದಾಟದಿಂದ ಪ್ರಕ್ಷುಬ್ಧಗೊಂಡಿದ್ದ ಜನತೆಯ ಮನಶ್ಯಾಂತಿಯನ್ನು ಹರಿಭಕ್ತಿಯ ಮೂಲಕ ಮರಳಿ ತಂದುಕೊಡುವ ಉದ್ದೇಶ.

೯. ಭಕ್ತಿಪರ ಭಾವಗೀತೆಯೇ ದ್ವೈತಪರ ಹರಿಸ್ತುತಿಯೂ ಆಗಿದ್ದ ಮಧ್ವಾಚಾರ್ಯರ ದ್ವಾದಶಸ್ತೋತ್ರದ ಸ್ವರೂಪ, ಪರಿಣಾಮ, ಪ್ರಭಾವಗಳು.

೧೦. ಕನ್ನಡ ಭಾಷೆಯಲ್ಲಿ ರಚಿತವಾಗಿದ್ದ ಮಧ್ಯಕಾಲೀನ ಯುಗದ ಧಾರ್ಮಿಕ ಸಾಹಿತ್ಯ.

೧೧. ಇಸ್ಲಾಂ ಧರ್ಮದ ಎದುರಿನಲ್ಲಿ ವೈಭವ ಪ್ರದರ್ಶನವಿಲ್ಲದ ಭಕ್ತಿ ಪಂಥಕ್ಕೆ ಮಾತ್ರ ಉಳಿಗಾಲವಿದ್ದದ್ದು.

೧೨. ವಿಠ್ಠಲೋಪಾಸಕರಾಗಿದ್ದ ಮಹಾರಾಷ್ಟ್ರದ ವಾರಕರಿ ಪಂಥದ ಪ್ರಭಾವ.

೧೩. ಇವೆಲ್ಲಕ್ಕೂ ಒಪ್ಪುವಿಟ್ಟಂತೆ ಶ್ರೀರಂಗನ ರಂಗನಾಥಸ್ವಾಮಿಯ ದೇವಾಲಯದಲ್ಲಿ ಉತ್ಸವ ಮೂರ್ತಿಯ ಮೆರವಣಿಗೆಯಲ್ಲಿ ತಮಿಳು ಪ್ರಬಂಧಗಳನ್ನು ಹಾಡುತ್ತಾ ನರ್ತಿಸುತ್ತಾ ಸೇವೆ ಸಲ್ಲಿಸುತ್ತಿದ್ದ 'ಇಶೈ' ಕಾರ್ಯಕ್ರಮ ಶ್ರೀಪಾದರಾಜರ ಮನಸ್ಸನ್ನು ಸೆರೆ ಹಿಡಿದಿದ್ದುದು." (ಅದೇ, ಪುಟ: ೨೬, ೨೭)

ಇಂತಹ ಗಂಭೀರ ಸಂದರ್ಭದಲ್ಲಿ ಶ್ರೀಪಾದರಾಜರು ಕನ್ನಡ ಭಾಷೆಯಲ್ಲಿ ಹರಿದಾಸ ಸಾಹಿತ್ಯ ಪರಂಪರೆಯ ಅನುಷ್ಠಾನಕ್ಕೆ ಕಾರ್ಯಪ್ರವೃತ್ತರಾದರು. ವೈದಿಕ

Scanned with CamScanner

ಮರಾಣಗಳು, ಶಿವದಾಸರ ಕೀರ್ತನೆಗಳು, ಕನ್ನಡನಾಡಿನ ಜನತೆಯಲ್ಲಿದ್ದ ಪುರಾಣ ಪ್ರಜ್ಞೆ, ಜನಸಾಮಾನ್ಯರ ಭಕ್ತಿ ಭಾವನೆಗಳು ಮತ್ತು ಧರ್ಮ ಜಾಗೃತತೆಯ ಅನಿವಾರ್ಯತೆ ಇಂಥವು ಶ್ರೀಪಾದರಾಜರಿಗೆ ಇಂತಹ ಧೈರ್ಯಯುತ ಹಾದಿಯ ನಿರ್ಮಾಣಕ್ಕೆ ಪ್ರಭಾವ ಬೀರಿವೆ ಎಂಬುದನ್ನು ಮರೆಯುವಂತಿಲ್ಲ. ಮುಂದೆ ಈ ಪರಂಪರೆಯನ್ನು ಶ್ರೀವ್ಯಾಸರಾಜತೀರ್ಥರು ಮತ್ತು ಶ್ರೀವಾದಿರಾಜರು ಮುಂದುವರೆಸಿದರು. ಎಂತಲೇ ಶ್ರೀಪಾದರಾಜ, ಶ್ರೀವ್ಯಾಸರಾಜ ಮತ್ತು ಶ್ರೀವಾದಿರಾಜ ಈ ಮೂವರನ್ನು ದಾಸ ಸಾಹಿತ್ಯದಲ್ಲಿ 'ಯತಿತ್ರಯ'ರೆಂದು ಕರೆದು ಗೌರವಿಸಲಾಗಿದೆ.

'ಬೆಂದ ಸಂಸಾರದಿ ಬಂದು ನೊಂದು ಬಳಲಿದೆನಯ್ಯ
ನಂದನಂದನ ಕಾಯೊ ರಂಗವಿಠಲ'

'ಎನ್ನಮನ ವಿಷಯಂಗಳಲಿ ಮುಣುಗಿತೊ
ಎನ್ನ ತನುವು ವೃದ್ಧಾಪ್ಯ ಏದಿತೊ...
ಅಂತಕರ ಕರೆಬಾಹೊ ಹೊತ್ತಾಯಿತು
ಕಾಲವಿಳಂಬವಿನಿತಿಲ್ಲವಯ್ಯಾ
ವ್ಯಾಳೆ ಅರಿತು ಬನ್ನಹ ಮಾಡಿದೆ'

'ನಾ ನಿನಗೇನು ಬೇಡುವುದಿಲ್ಲ ಎನ್ನ
ಹೃದಯ ಕಮಲದೊಳು ನೆಲೆಸಿರೊ ಹರಿಯೆ'

'ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದ
ಜಗಂಗಳೊಳಗೆ ಮಂಗಳ ಮೂರುತಿ
ರಂಗನ ಶ್ರೀಪಾದಂಗಳ ನೋಡದ'

'ಕರಣಗಳು ಬಿಡದೆ ತಮ್ಮ ತಮ್ಮ
ವಿಷಯಂಗಳಿಗೆ ಎಳೆಪುತಲಿವೆ
ಎನ್ನ ಹರಣ ನಿನ್ನದು ಕರುಣಾಕರನೆ'

'ಇದನಾದರು ಕೊಡದಿದ್ದರೆ ನಿನ್ನ
ಪಾದಕಮಲವ ನಂಬಿ ಭಜಿಸುವುದೆಂತೋ?'

'ಇಟ್ಟಾಂಗೆ ಇರುವೆನೋ ಹರಿಯೆ ಎನ್ನ ದೊರೆಯೇ
ಸೃಷ್ಟಿ ವಂದಿಪ ಪಾದ ಪದುಮ ಶ್ರೀಹರಿಯೇ
ಸಣ್ಣಶಾಲ್ಯೋದನ ಬೆಣ್ಣೆಕಾಸಿದ ತುಪ್ಪ
ಚಿನ್ನ ಹರಿವಾಣದಲಿ ಭೋಜನ
ಘನ ಮಹಿಮ ನಿನ್ನ ಕರುಣ ತಪ್ಪಿದ ಮ್ಯಾಲೆ'

'ಧ್ಯಾನವು ಕೃತಯುಗದಿ
ಯಜನಯಜ್ಞವು ತ್ರೇತಾಯುಗದಿ
ಪಾನವಾಂತಕನ ಚೇವತಾರ್ಚನೆ ದ್ವಾಪರಯುಗದಿ
ಆ ಮಾನವರಿಗೆಷ್ಟು ಫಲವೋ ಅಷ್ಟು ಫಲವು
ಕಲಿಯುಗದಿ ನಾನದಲಿ ಕೇಶವಯೆನಲು
ಕೈಗೂಡುವನು ರಂಗವಿಠಲ'

ಹೀಗೆ ನವವಿಧದ ಭಕ್ತಿಯಿಂದ ಆತ್ಮನಿವೇದನೆ, ದೈವಭಕ್ತಿ ನಿರೂಪಣೆ, ದ್ವೈತತತ್ತ್ವಗಳ ಪ್ರತಿಪಾದನೆ ಮತ್ತು ನೀತಿಬೋಧನೆಗಳು ಶ್ರೀಪಾದರಾಜರ ರಚನೆಗಳಲ್ಲಿ ಭಕ್ತಿಭಾವ ತುಂಬಿಕೊಂಡಿದ್ದು ಮನಸ್ಸನ್ನು ಅರಳಿಸುವಂತೆ ಮೇಳೈಸಿವೆ. ಡಾ. ಜೆ. ವರದರಾಜರಾವ್ ಅವರು ಶಾಸ್ತ್ರೀಯವಾಗಿ ಸಂಪಾದಿಸಿ ಕೊಟ್ಟ ಪ್ರಕಾರ ಶ್ರೀಪಾದರಾಜರ ಒಟ್ಟು ೧೦೧ ಕೃತಿಗಳಿವೆ. ಅವುಗಳ ಪೈಕಿ ೬೫ ಮಾತ್ರ ಅವರದೆಂದು ಹೇಳಲಾಗಿದೆ. ಉಳಿದಂತೆ ೨೬ನ್ನು ಖಚಿತವಾಗಿ ನಿರ್ಧರಿಸುವುದಕ್ಕೆ ಸಾಧ್ಯವಾಗಿಲ್ಲ ಎಂಬುದಾಗಿ ಅವರೇ ಅಭಿಪ್ರಾಯ ಪಟ್ಟಿದ್ದಾರೆ. ಏನೇ ಇರಲಿ ತಮ್ಮ ಈ ಬಗೆಯ ವೈವಿಧ್ಯಮಯ ಕೀರ್ತನ ಸಾಹಿತ್ಯದ ಮೂಲಕ ಮಧ್ಯಕಾಲೀನ ಯುಗದಂತಹ ಸಂಕೀರ್ಣ ಸಂದರ್ಭದಲ್ಲಿ ಭಕ್ತಿಭಾವವನ್ನು ಜನ ಸಮುದಾಯದಲ್ಲಿ ತುಂಬುವ ಮೂಲಕ ಮನಸ್ಸಿಗೆ ಸಾಂತ್ವನ ಉಂಟಾಗುವಂತೆ ಮಾಡಿದುದು ಅತ್ಯಂತ ಮುಖ್ಯವಾದ ಕಾರ್ಯವೇ ಹೌದು ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

ಶ್ರೀಪಾದರಾಜರು ಇಂದಿನ ದಕ್ಷಿಣ ಕರ್ನಾಟಕದ ಪೂರ್ವಭಾಗದ ಒಂದು ತುದಿಯಲ್ಲಿ ಇರುವ ಕೋಲಾರ ಜಿಲ್ಲೆಯ ಮೂಡಣಬಾಗಿಲು ಅರ್ಥಾತ್ ಮುಳಬಾಗಿಲಿನಲ್ಲಿ ನೆಲೆಸಿದ್ದರೂ ಸಮಗ್ರ ಕರ್ನಾಟಕಕ್ಕೇ ಭಕ್ತಿ ಚಳವಳಿಯು ಪಸರಿಸುವಂತೆ ತಮ್ಮ ಶಿಷ್ಯ ಪ್ರಶಿಷ್ಯರ ಮೂಲಕ ಮಾಡಿಸಿದರು ಎಂಬುದು ಗಮನಾರ್ಹ ಅಂಶ. ಜನ ಸಮುದಾಯದ ಒಳಿತಿಗಾಗಿ ಕೀರ್ತನೆ, ಸುಳಾದಿ, ಉಗಾಭೋಗ ಮುಂತಾಗಿ ಎಲ್ಲಾ ಪದ್ಯ ಪ್ರಕಾರಗಳಲ್ಲಿಯೂ ಭಕ್ತಿ ಕಾವ್ಯವನ್ನು ರಚಿಸುವ ಮೂಲಕ ಸಮಾಜೋ-ಧಾರ್ಮಿಕ ಪರಿಸರ ನಿರ್ಮಾಣ ಮಾಡಿದರು. ಟಿ.ಎನ್. ನಾಗರತ್ನ ಅವರು ಶ್ರೀಪಾದರಾಜರ ಕಾರ್ಯಸಾಧನೆಯ ಮಹತ್ವವನ್ನು ಕುರಿತು ಹೇಳಿರುವ ಸಂಗತಿಗಳು ಬಹಳ ಮುಖ್ಯವಾದುವು ಮತ್ತು ಉಲ್ಲೇಖಾರ್ಹವಾದುವು: "ಮೌಲ್ಯಯುತ ಬದುಕನ್ನು ಎತ್ತಿ ಹಿಡಿಯುವ ಮೂಲಕ ನೊಂದ ಮನಸ್ಸುಗಳನ್ನು ಸಾಂತ್ವನಗೊಳಿಸಿ ಜೀವನ ಪ್ರೀತಿಯನ್ನು ಬೆಳೆಸುವಲ್ಲಿ ಶ್ರೀಪಾದರಾಜರು ಸಫಲರಾಗಿರುವರೆಂಬುದಕ್ಕೆ ಇಂದಿಗೂ ಉಳಿದುಬಂದು ಜನರ ಮನಸ್ಸನ್ನು ಸಂತಯಿಸಿ ಸಮಾಧಾನ ಕೊಡುತ್ತಿರುವ ಅವರ ಕೀರ್ತನೆಗಳೇ ಸಾಕ್ಷಿ. ಅಂತರಂಗದ

Scanned with CamScanner

ಶೋಧನೆಗೆ ಹೆಚ್ಚು ಒತ್ತುಕೊಟ್ಟು ತೋರಿಕೆಯ ಆಚಾರವನ್ನು, ಕಂದಾಚಾರಗಳನ್ನು ಖಂಡಿಸಿದಂಥವು ಅವರ ಕೀರ್ತನೆಗಳು. ಮನುಷ್ಯನ ದುರಾಸೆ, ಸ್ವಾರ್ಥ, ಅಹಂಕಾರಾದಿಗಳನ್ನು, ಸಣ್ಣತನಗಳನ್ನು ನರಕಾಸುರ, ಕೌರವಾದಿ ಪುರಾಣ ಪಾತ್ರಗಳ ಮೂಲಕ ಎತ್ತಿತೋರಿಸಿ, ಬದುಕಿನ ಕಟು ಸತ್ಯಗಳತ್ತ ಬೊಟ್ಟುಮಾಡಿ 'ನೂರಾರು ಸಾವಿರ ದಂಡವ ತೆತ್ತರೆ ರಂಗವಿಠಲನೆ ಸರಿಯೆಂಬೊರಯ್ಯ' ಎಂಬ ವಾಸ್ತವವನ್ನು ನಮಗೆ ಮನದಟ್ಟು ಮಾಡಿಸಿರುವರು." (ಅದೇ, ಪುಟ:೭೬) ಮಾತ್ರವಲ್ಲ, ಮುಂದೆ ದಾಸ ಪರಂಪರೆಗೆ ಸ್ತೋತ್ರ ಸಾಹಿತ್ಯದ ವೈವಿಧ್ಯದ ಸ್ವರೂಪಕ್ಕೆ ಅಡಿಪಾಯವನ್ನು ಹಾಕಿಕೊಟ್ಟರು. ಶ್ರೀಪಾದರಾಜರು ಸಂಗೀತ ಮತ್ತು ಕಾವ್ಯ ಎರಡನ್ನು ಮೇಳೈಸುವುದರ ಮೂಲಕ ದಾಸ ಸಾಹಿತ್ಯದ ಮುಂದಿನ ಸಾಹಿತ್ಯ ಕೃಷಿಕ ಭಕ್ತರಿಗೆ ಪ್ರೇರಕರಾದರು. ಶ್ರೀಪುರಂದರದಾಸರು 'ಕರ್ನಾಟಕ ಸಂಗೀತ ಪಿತಾಮಹ' ಎಂದೆನಿಸಿಕೊಂಡುದರ ಮೂಲ ಬೇರುಗಳು ಇರುವುದು ಶ್ರೀಪಾದರಾಜರು ತಮ್ಮ ಸಾಹಿತ್ಯ ಕೃಷಿಯಲ್ಲಿಯೇ ಬೇರೂಸಿದ್ದರು ಎಂದರೆ ಅತಿಶಯೋಕ್ತಿಯಾಗುವುದಿಲ್ಲ. 'ದಾಸರೆಂದರೆ ಪುರಂದರದಾಸರಯ್ಯಾ' ಎಂಬ ವಿಶೇಷಣವು ಕನ್ನಡ ಸಾಹಿತ್ಯ ಲೋಕದಲ್ಲಿ ಮತ್ತೆ ಮತ್ತೆ ಅನುರಣಿಸುತ್ತಲಿದೆ. ಅವರ ಕೀರ್ತನೆಗಳು, ಉಗಾಭೋಗಗಳು ಕನ್ನಡ ಜನರ ನಾಲಿಗೆಯ ಮೇಲೆ ಇಂದಿಗೂ ನಲಿದಾಡುತ್ತಲಿವೆ. ಅವರಂತೆಯೇ ಶ್ರೀವ್ಯಾಸರಾಯತೀರ್ಥರ ಮತ್ತೊಬ್ಬ ಪ್ರಮುಖ ಶಿಷ್ಯರಾದ ಶ್ರೀಕನಕದಾಸರು ಕೀರ್ತನೆಗಳು, ಮುಂಡಿಗೆಗಳು ಮುಂತಾಗಿ ಸ್ತೋತ್ರ ಸಾಹಿತ್ಯವೇ ಅಲ್ಲದೆ ಕಾವ್ಯಗಳನ್ನೂ ಬರೆದು ಅಜರಾಮರಾಗಿದ್ದಾರೆ. ಹಾಗೆಯೇ ಶ್ರೀವಿಜಯದಾಸರ ಸುಳಾದಿಗಳು ಅತ್ಯಂತ ಪ್ರಮುಖವಾದುವುಗಳು. ಶ್ರೀಜಗನ್ನಾಥದಾಸರ 'ಹರಿಕಥಾಮೃತಸಾರ' ಕನ್ನಡದ ಪ್ರಮುಖ ಕಾವ್ಯಗಳಲ್ಲಿ ಒಂದಾಗಿದೆ. ನಂತರದ ಕಾಖಂಡಿಕ ಮಹಿಪತಿರಾಯರು, ಶ್ರೀರಾಮದಾಸರಂತಹ ಪುರುಷ ಭಕ್ತಶ್ರೇಷ್ಠರೇ ಅಲ್ಲದೆ, ಹೆಳವನಕಟ್ಟೆ ಗಿರಿಯಮ್ಮ, ಸಂಚಿಯ ಹೊನ್ನಮ್ಮ, ಹರಪನಹಳ್ಳಿ ಭೀಮವ್ವರಂತಹ ಮಹಿಳಾ ಶ್ರೇಷ್ಠ ಭಕ್ತೆಯರೂ ಆಗಿಹೋಗಿದ್ದಾರೆ. ಈ ಹಿನ್ನೆಲೆಯಿಂದ ಗಮನಿಸಿದಾಗ ಶ್ರೀಪಾದರಾಜರ ಭಕ್ತಿಮಾರ್ಗ ರೂಪಣೆಯ ಮಹತ್ವವು ನಮಗೆ ಸ್ಪಷ್ಟವಾಗಿ ಗೋಚರವಾಗುತ್ತದೆ. ಕಾವೇರಿಯಿಂದ ಹಿಡಿದು ಗೋದಾವರಿಯವರೆಗೂ ದಾಸ ಭಕ್ತಿಮಾರ್ಗವು ವಿಸ್ತರಿಸಿದೆ. ಶ್ರೀಮಧ್ವಾಚಾರ್ಯರು ಅಂದಿನ ಭಾರತದ ಉತ್ತರೋತ್ತರ ತುದಿಯವರೆಗೂ ಸಂಚರಿಸಿ ತಮ್ಮ ದ್ವೈತಮತ ಸಿದ್ಧಾಂತವನ್ನು ಪಸರಿಸಿದ್ದಾರೆ. ಶತಾಯುಷಿಗಳಾಗಿದ್ದ ಅವರ ಚಿಂತನೆಗಳು ವ್ಯಾಸಕೂಟದ ಮೂಲಕ ಇಂದಿಗೂ ಕರ್ನಾಟಕದಂತೆ ಮಹಾರಾಷ್ಟ್ರದಲ್ಲಿಯೂ ಪ್ರಚುರವಾಗಿವೆ. ಅವರ ತತ್ತ್ವಚಿಂತನೆಗಳ

ಮೇಲೆ ಹೆಮ್ಮರವು ಬೆಳೆಯುವುದಕ್ಕೆ ಶ್ರೀಪಾದರಾಜರು ಭೂಮಿಕೆಯನ್ನು ನಿರ್ಮಾಣ ಮಾಡಿದರು. ದಾಸಕೂಟದ ಅಧ್ವರ್ಯುಗಳು ಆ ಹೆಮ್ಮರವನ್ನು ಬೆಳೆಸಿದರು ಎಂಬುದನ್ನು ಮರೆಯುವಂತಿಲ್ಲ. ಹಾಗಾಗಿಯೇ ಶ್ರೀಪಾದರಾಜರು ತಮ್ಮ ಕಾಲಕ್ಕೆ ವ್ಯಾಸಕೂಟ ಮತ್ತು ದಾಸಕೂಟ ಎರಡಕ್ಕೂ ಗೌರವಮಾನ್ಯ ಮಹಾನ್ ವ್ಯಕ್ತಿಯಾಗಿದ್ದರು. ಇನ್ನು ಶ್ರೀವ್ಯಾಸರಾಜತೀರ್ಥರಂತಹ ಶಿಷ್ಯೋತ್ತಮರನ್ನು ರೂಪಿಸುವ ಮೂಲಕ ಹರಿಭಕ್ತಿ ಮತ್ತು ದಾಸ ಸಾಹಿತ್ಯ ಪರಂಪರೆಗೆ ವಿಶೇಷ ಪರಿಸರವನ್ನು ಹುಟ್ಟುಹಾಕಿ ಅವರ ಶಿಷ್ಯರ ಮೂಲಕ ಅಪಾರ ಸಾಹಿತ್ಯ ರಾಶಿಯನ್ನೇ ಬೆಳೆಸುವುದಕ್ಕೆ ಪ್ರೇರಕ ಶಕ್ತಿಯಾಗಿದ್ದರು. ಎಂತಲೇ ಹರಿಭಕ್ತರು 'ನಮಃ ಶ್ರೀಪಾದರಾಜಾಯ' ಎಂಬುದಾಗಿ ಅತ್ಯಂತ ಗೌರವದಿಂದ ಇಂದಿಗೂ ಸ್ಮರಿಸುತ್ತಾರೆ.

ಆಧಾರ ಗ್ರಂಥಗಳು:

೧. ನಾಗರತ್ನ ಟಿ. ಎನ್.: ಶ್ರೀಪಾದರಾಜರು: ಜೀವನ ಮತ್ತು ಕೃತಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪

೨. ನಾಗರತ್ನ ಟಿ. ಎನ್.: ಶ್ರೀಪಾದರಾಜರು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೭

೩. ವರದರಾಜರಾವ್ ಜಿ. : ಹರಿದಾಸ ಸಾಹಿತ್ಯ ಸಾರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೮೭

೪. ನಾವಡ ಎ.ವಿ. ಮತ್ತು ಗಾಯತ್ರಿ ನಾವಡ (ಸಂ): ಸಾವಿರಾರು ಕೀರ್ತನೆಗಳು, ಅಂಕಿತ ಪುಸ್ತಕ, ಬೆಂಗಳೂರು, ೨೦೦೨

ಡಾ. ವಿಠಲರಾವ್ ಟಿ. ಗಾಯಕ್ವಾಡ್, ಪ್ರಾಧ್ಯಾಪಕ, ಭಾಷಾಂತರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ– ೫೮೫೩ ೨೭೬, ಹೊಸಪೇಟೆ (ತಾ.), ಬಳ್ಳಾರಿ (ಜಿ.)

Scanned with CamScanner

BEST SELLER

ಭಾರತೀಯ ಉದ್ಯೋಜಕಿಯರು

ಶೂನ್ಯದಿಂದ ಶಿಖರ

ಪ್ರಕಾಶ ಬಿಯಾಣಿ

ಅನುವಾದ

ಡಾ. ವಿಠಲರಾವ್ ಟಿ. ಗಾಯಕ್ವಾಡ್

Scanned with CamScanner

ಭಾರತೀಯ ಉದ್ಯೋಜಕಿಯರು: ಶೂನ್ಯದಿಂದ ಶಿಖರ

ಪ್ರಕಾಶ ಬಯಾಣಿ

ಅನುವಾದಕರು

ಡಾ. ವಿಠಲರಾವ್ ಟಿ. ಗಾಯಕ್ವಾಡ್

Indra Publishing House
www.indrapublishing.com

Ajab Publications,
709/2 Shree Chambers,
Opp. Union Bank of India,
Ashok Nagar
Nipani - 591237.
Karnataka.
ajabpublications@gmail.com
www.ajabgroup.com

ಅಜಬ್ ಪಬ್ಲಿಕೇಶನ್ಸ್,
೭೦೯/೨ ಶ್ರೀ ಚೆಂಬರಸ್,
ಯೂನಿಯನ್ ಬ್ಯಾಂಕ್ ಆಫ್
ಇಂಡಿಯಾ ಎದುರಿಗೆ, ಅಶೋಕ ನಗರ,
ನಿಪ್ಪಾಣಿ - ೫೯೧೨೩೭.
ಕರ್ನಾಟಕ.

Scanned with CamScanner

Bharatiya Udyojakiyaru:
Shunyadinda Shikhara
written in Hindi by
Prakash Biyani

Translated in Kannada by
Dr. Vitthalarao T. Gaikwad,
Professor, Department of
Translation Studies, Kannada
University, Hampi,
Vidyaranya-583 276,
Hosapete (Tq.), Ballari (Di.)

Copyright
© Reserved

Published by
Indra Publishing House,
Bhopal 462016.
Sole Distributor (Karanataka)
Ajab Publications,
Nipani - 591237.
ajabpublications@gmail.com
www.ajabgroup.com
Cover design by
Chitramitra Publicity
Typesetted by
Ajab Graphics
Total Page - 280
Size - Demi 1/8
Printed by
Shripad Offset
First Edition
2020
Price
Rs. 325/-

ಭಾರತೀಯ ಉದ್ಯೋಜಕೆಯರು:
ಶೂನ್ಯದಿಂದ ಶಿಖರ
ಪ್ರಕಾಶ ಬಿಯಾಣಿ

ಅನುವಾದ
ಡಾ. ವಿಠಲರಾವ್ ಟಿ. ಗಾಯಕ್ವಾಡ್,
ಪ್ರಾಧ್ಯಾಪಕರು, ಭಾಷಾಂತರ
ಅಧ್ಯಯನ ವಿಭಾಗ, ಕನ್ನಡ
ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ-೫೮೩ ೨೭೬,
ಹೊಸಪೇಟೆ (ತಾ.), ಬಳ್ಳಾರಿ (ಜಿ)

ಕಾಪಿರೈಟ್
© ಸುರಕ್ಷಿತ

ಪ್ರಕಾಶಕರು
ಇಂದ್ರ ಪಬ್ಲಿಶಿಂಗ ಹೌಸ,
ಭೋಪಾಲ್ ೪೬೨೦೧೬
ಪ್ರಮುಖ ವಿತರಕರು (ಕರ್ನಾಟಕ)
ಅಜಬ್ ಪಬ್ಲಿಕೇಶನ್ಸ್,
ನಿಪ್ಪಾಣಿ - ೫೯೧೨೩೭
ajabpublications@gmail.com
www.ajabgroup.com
ಮುಖಪುಟ
ಚಿತ್ರಮಿತ್ರ ಪಬ್ಲಿಸಿಟಿ
ಛಾಯಾಕ್ಷರ ಜೋಡಣೆ
ಅಜಬ್ ಗ್ರಾಫಿಕ್ಸ್
ಪುಟಗಳು - ೨೮೦
ಆಕಾರ - ಡೆಮಿ ೧/೮
ಮುದ್ರಕರು
ಶ್ರೀಪಾದ ಆಫ್‌ಸೆಟ್
ಮೊದಲ ಆವೃತ್ತಿ
೨೦೨೦
ಬೆಲೆ
ರೂ. ೩೨೫/-

ಪುಸ್ತಕದ ವಿಷಯ ಕುರಿತು ಒಂದಷ್ಟು...

ಮಹಿಳೆಯರು ತಮ್ಮ ಭವಿಷ್ಯವನ್ನು ಸ್ವತಃ ತಾವೇ ರೂಪಿಸಿಕೊಳ್ಳಬೇಕಾಗಿದೆ!

'ಮಹಿಳೆಯರು ಮತ್ತು ಪುರುಷರ ನಡುವೆ ಯತ್ಕಿಂಚಿತ್ತೂ ವ್ಯತ್ಯಾಸವಿಲ್ಲ' ಎಂಬುದಾಗಿ ಜನರು ಏಕೆ ಹೇಳುತ್ತಾರೆ ಎಂಬುದು ನನಗಂತೂ ಸ್ವಲ್ಪವೂ ಅರ್ಥವಾಗಿಲ್ಲ. ಸ್ತ್ರೀ-ಪುರುಷರು ಸಮಾನ ಸ್ಥಾನಮಾನವುಳ್ಳವರು ಎಂಬುದಾಗಿ ಅವರು ಹೇಳುತ್ತಲೇ ಅವರಿಬ್ಬರ ನಡುವೆ ಇರುವಂತಹ ಅತ್ಯಂತ ಒಳ್ಳೆಯ, ಸುಂದರವಾದ ಅಂತರವನ್ನು ಅಮಾನ್ಯ ಮಾಡುತ್ತಾರೆ. ಈಶ್ವರನು ಪ್ರತಿಯೊಬ್ಬರಿಗೂ ಒಂದು ಭಿನ್ನ-ವಿಭಿನ್ನ ವರದಾನ ನೀಡಿಯೇ ಈ ಭೂಮಿಗೆ ಕಳುಹಿಸಿದ್ದಾನೆ. ಯಾವ ಕೆಲಸವನ್ನು ನಾನು ಮಾಡಬಲ್ಲೆನೋ. ಅದನ್ನು ಬಹುಶಃ ನೀವೆಂದೂ ಮಾಡಲಾರಿರಿ. ಇನ್ನು ನಮ್ಮ ಕೆಲಸವು ನನಗೆ ಹಿಡಿಸುವುದೇ ಇಲ್ಲ. ಪ್ರತಿಯೊಬ್ಬರಲ್ಲಿನ ಈ ಭೇದವು ನಾವು ಅವಶ್ಯವಾಗಿ ಅರ್ಥ ಮಾಡಿಕೊಳ್ಳಬೇಕು.

ಮದರ್ ಥರೇಸಾ

Scanned with CamScanner

ಸಂಪುಟ : 11 ಜೂನ್ 2020 ಸಂಚಿಕೆ-1 ಬೆಲೆ ರೂ. : 20.00 ಪುಟಗಳು : 40

ವಿಧಾತೃ

(The Creator)



ಕಾಲಜ್ಞಾನಿ ಪೋತಲೂರು ವೀರಬ್ರಹ್ಮೇಂದ್ರ ಸ್ವಾಮಿಯವರು (1608-1693)

ವಿಶ್ವಕರ್ಮ ಮತ್ತು ದೈವಜ್ಞ ಬ್ರಾಹ್ಮಣ ಎರಡೂ ಒಂದೇ ಜಾತಿ / ಧರ್ಮವೇ ಅಥವಾ ಬೇರೆಯೇ...?

ನೋಡಿ ವಿಶೇಷ ಲೇಖನ ಪುಟ-9 ರಿಂದ

Scanned with CamScanner

ಸಂಸ್ಕೃತಿ, ಸಾಹಿತ್ಯ ಹಾಗೂ ಕಲೆಗೆ ಮೀಸಲಾದ ಏಕೈಕ ಪತ್ರಿಕೆ

ಸಂಪುಟ 11 ಸಂಚಿಕೆ 1

ಗೌರವ ಸಂಪಾದಕರು
ಡಾ॥ ಜಿ. ಜ್ಞಾನಾನಂದ

ಪ್ರಧಾನ ಸಂಪಾದಕರು
ಎನ್.ಸಿ. ಛಾಯಾಪತಿ, ಬಿ.ಇ.,ಎಮ್.ಐ.ಇ.
ಮೊ: 97317 58137

ವ್ಯವಸ್ಥಾಪಕ ಸಂಪಾದಕ
ಗೋಪಾಲಕೃಷ್ಣ ಐ. ಮನುವಾಚಾರ್ಯ

ಸಹ ಸಂಪಾದಕರು
ರಾಜೇಂದ್ರ ಬಡಿಗೇರ
ಪ್ರೊ॥ ಎನ್.ವಿ. ಅಂಬಾಮಣಿಮೂರ್ತಿ
ಭೀಮಸೇನ ಬಡಿಗೇರ್ ಬಿ.ಇ.,
ಶ್ರೀ ಮಂಟೇಲಿಂಗಾಚಾರ್
ನಿವೃತ್ತ ಜಂಟಿ ನಿರ್ದೇಶಕರು, ಶಿಕ್ಷಣ ಇಲಾಖೆ
ನೀಲಕಂಠಾಚಾರ್ಯ, ಲಿಂಗಸಗೂರು
ಸುರೇಶ್ ಯು ಪತ್ತಾರ್
ಕೆ.ಎಂ. ಚಂದ್ರಶೇಖರ್ ಆಚಾರ್ಯ

ಪ್ರಕಾಶಕರು
ಎನ್.ಸಿ. ಛಾಯಾಪತಿ

ಮುದ್ರಕರು
'ಮನುಗ್ರಾಫಿಕ್ಸ್'

ನಂ. 50/1, 2ನೇ ಕ್ರಾಸ್, 2ನೇ ಮೇನ್
ಶೆಲ್ ಪೆಟ್ರೋಲ್ ಬಂಕ್ ಹಿಂಭಾಗ,
ಅಗ್ರಹಾರ ದಾಸರಹಳ್ಳಿ, ಬೆಂಗಳೂರು–70.
manuprints@gmail.com

ಸಲಹೆಗಾರರು
ಕೆ. ಎ. ವರದರಾಜು
ಕೆ. ಎನ್. ಶ್ರೀನಿವಾಸ ಬಿ.ಕಾಂ. ಎಲ್.ಎಲ್.ಬಿ.,
ಆರ್.ಬಿ.ವಿ.

ಪರಿವಿಡಿ

1. ಸಂಪಾದಕೀಯ 07
2. ವಿಶ್ವಕರ್ಮ ಮತ್ತು ದೈವಜ್ಞ ಬ್ರಾಹ್ಮಣ 09
3. ವಿಶ್ವಕರ್ಮ ಧರ್ಮ 12
4. ಜಿ.ಎಲ್. ಸ್ವರ್ಣೋದ್ಯಮಿಗಳಿಂದ ಕಿಟ್ ವಿತರಣೆ 18
5. ವಿಶ್ವಪಾಲ ವಿಶ್ವಕರ್ಮ 21
6. ಬಬಲಾದಿ ಕಾಲಜ್ಞಾನ ಪರಂಪರೆ 22
7. ರೈತರ ಬಂಧು, ಕರ್ಮಯೋಗಿ ವಿಶ್ವಕರ್ಮ ಕುಶಲಕರ್ಮಿಗಳಿಗಿಲ್ಲ ರಾಜ್ಯ ಸರ್ಕಾರದ ಸಹಾಯ ! 29
8. ಕೋರೋನ – ಬದಲಾಗೋಣ 30
9. ಶ್ರೀವೀರಬ್ರಹ್ಮೇಂದ್ರ ಸ್ಮರಣೆ, 37

ಚಂದಾ ವಿವರ

ವಾರ್ಷಿಕ	:	ರೂ. 250/–
ಪಂಚವಾರ್ಷಿಕ	:	ರೂ. 1200/–
ಪೋಷಕರು	:	ರೂ. 3,000/–
ಮಹಾ ಪೋಷಕರು	:	ರೂ. 5,000/–
ಮಹಾ ದಾನಿಗಳು	:	ರೂ. 10,000/– ಕ್ಕೆ ಮೇಲ್ಪಟ್ಟು

ಜಾಹೀರಾತು

ರಕ್ಷಾಪುಟ	ಹೊರಭಾಗ (ಕಲರ್)	ರೂ. 5,000/–
	ಹೊರಭಾಗ (ಕಪ್ಪು ಬಿಳುಪು)	ರೂ. 2,500/–
	ಒಳಭಾಗ (ಕಲರ್)	ರೂ. 4,000/–
	ಒಳಭಾಗ (ಕಪ್ಪು ಬಿಳುಪು)	ರೂ. 2,000/–
ಒಳಪುಟ	ಪೂರ್ಣ ಒಳಭಾಗ	ರೂ. 2ಥ,000/–
	ಅರ್ಧ	ರೂ. 1000/–
	ಕಾಲು	ರೂ. 500/–

ಚಂದಾ ನವೀಕರಿಸದಿದ್ದವರು / ನೀಡಿಲ್ಲದವರು ಚಂದಾಹಣ ಕಳುಹಿಸಲು ಮನವಿ.
N. C. Chayapathy
A/c No. 54018369397 IFSC Code : SBIN0015658
State Bank of India, Jayanagar 8th Block

Scanned with CamScanner
Scanned with CamScanner

ಬಬಲಾದಿ ಕಾಲಜ್ಞಾನ ಪರಂಪರೆ

ಬೆಂಕಿಗೆ ಅಧಿಪತಿಯಾದ ಬಬಲಾದಿ ಪರಂಪರೆ, ನೀರಿಗಧಿಪತಿಯಾದ ಮುರನಾಳ ಮಳಿಯಪ್ಪನ ಪರಂಪರೆ, ಮಣ್ಣಿಗಧಿಪತಿಯಾದ ಸೀತಿಮನಿ ಧರ್ಮರ ಪರಂಪರೆಗಳು ಬೇಡಿ ಬಂದ ಭಕ್ತರಿಗೆ ಭಾಗ್ಯವ ಕೊಡುತ್ತ ಬೆಳೆದ ಜನಮುಖಿ ಪರಂಪರೆಗಳಾಗಿವೆ. ಬಹುಮುಖ್ಯವಾಗಿ ಇವುಗಳಲ್ಲಿ ಬಬಲಾದಿ ಪರಂಪರೆಯು ಶಕ್ತಿಪೀಠವಾದಂತೆ ವಾಕ್‌ಸಿದ್ಧಿ ಪರಂಪರೆಯು ಆಗಿದೆ. ಸೀತಿಮನಿ ಚಂದ್ರವ್ವ ತಾಯಿಯನ್ನು(ಇಂದಿನ ಸೀತಿಮನಿ, ಆಲಮಟ್ಟಿ) ಸಾರವಾಡ ಚಿಕ್ಕಯ್ಯ ಮುತ್ಯಾ ಬಬಲಾದಿಗೆ(ಇಂದಿನ ವಿಜಯಪುರ ಜಿಲ್ಲೆಯ ಗಲಗಲಿ ಹತ್ತಿರ) ತಂದು ಸ್ಥಾಪಿಸಿದ್ದ. ಆಕೆಯಿಂದ ಆರಂಭವಾದ (ಶಕೆ 1680 ಅಂದರೆ 1756) ಈ ಪರಂಪರೆ ಚಿಕ್ಕಯ್ಯ(ಕ್ರಿ.ಶ.1758) ಸದಾಶಿವಪ್ಪ ಮುತ್ಯಾ(ಕ್ರಿ.ಶ.1864–1915) ಅವರ ವರೆಗೆ ಒಟ್ಟು ಆರು ಪೀಳಿಗೆಯವರೆಗೆ ಬೆಳೆದಿತ್ತು. ಇವರೆಲ್ಲರೂ ವಾಕ್‌ಸಿದ್ಧಿ ಪುರುಷರಾಗಿದ್ದರು ಎಂಬುದು ವಿಶೇಷ. 'ವಾಕ್‌ಸಿದ್ಧಿ' ಬಬಲಾದಿ ಪರಂಪರೆಯ ವಿಶಿಷ್ಟ ಶಕ್ತಿಯಾಗಿತ್ತು. 'ಸಾರವಾಡಧೀಶ' ಎನ್ನುವ ಅಂಕಿತದಿಂದ ಬಬಲಾದಿ ಚಿಕ್ಕಪ್ಪಯ್ಯನವರು ಸಾರಿದ ಮುಂಡಿಗೆಗಳು, ಕಾಲಜ್ಞಾನದಂತಹ ಭವಿಷ್ಯವಾಣಿಗಳು ಉತ್ತರಕರ್ನಾಟಕದ ಜನರಿಗೆ ಒಂದು ರೀತಿ ಶಕ್ತಿಯುತ ಸಂಜೀವಿನಿಗಳೂ ಅವರ ಪ್ರತಿಯೊಂದು ಕೆಲಸಗಳ ನಿರ್ಧಾರದ ಶಕ್ತಿಗಳೂ ಆಗಿದ್ದವು.

ಬಬಲಾದಿ ಪರಂಪರೆಯ ಬಹುಮುಖ್ಯ ಲಕ್ಷಣಗಳೆಂದರೆ ತೀರ್ಥ(ಸರಾಯಿ) 'ಪರ್ಯಟನ'(ಭಿಕ್ಷೆ) ಹಾಗೂ ಕಾಲಜ್ಞಾನಗಳು. ದೇಹದ ಸ್ವಾಭಾವಿಕ ಶಕ್ತಿಗಳ ಹರಣದಿಂದ ಸಾಧನೆ ಸಾಧ್ಯವಾಗದು, ಭೋಗದಲ್ಲಿಯೇ ಬುದ್ಧರಾಗಬೇಕು. ಬಬಲಾದಿ ಪ್ರಾಪಂಚಿಕ ಮಠವಾಗಿತ್ತು. ತೀರ್ಥ, ಭಂಗಿ ಮುಂತಾದ ಪಂಚಮಕಾರಗಳು ಇಲ್ಲಿ 'ಆನಂದವರ್ಧಕ' ಕ್ರಿಯೆಗಳು, ತೀರ್ಥಸೇವನೆ ಭಂಗಿ ಈ ಪರಂಪರೆಯಲ್ಲಿ 'ಆನಂದದ ಸ್ವರೂಪ', ಪರಮಾತ್ಮನ ಸ್ವರೂಪ. ತೀರ್ಥ ಮತ್ತು ಭಂಗಿ ಸೇವನೆಗೆ ಮಠದ ಮುತ್ಯಾಗಳು ಮತ್ತು ಭಕ್ತರು ಬಳಸುವ ಪರಿಭಾಷೆ ಎಂದರೆ 'ಆನಂದವಾಗುವುದು'. ಸಿದ್ಧ ಪಂಥಗಳಲ್ಲಿ ಪಂಚಮಕಾರಗಳ ಅಂತಿಮ ಗುರಿ ಎಂದರೆ 'ಮಹಾಸುಖ', 'ಮಹಾ ಆನಂದ. ಅದನ್ನೇ ಮೋಕ್ಷ ಮತ್ತು ಸಾಕ್ಷಾತ್ಕಾರವೆಂದು ಕರೆಯುತ್ತಾರೆ. ಅಂದರೆ ತೀರ್ಥ ಮತ್ತು ಭಂಗಿ ಸೇವನೆಗಳು ಶರೀರ ಸ್ವಾಧೀನದ, ಸ್ವ–ನಿಯಂತ್ರಣದ ಪರಿಕ್ರಮಗಳು, ಇದರಿಂದ ಧಾರಣಾಶಕ್ತಿ ಬಲಿಯುತ್ತದೆ ಮತ್ತು ಮಾತು ಸಮತೂಕವಾಗಿರುತ್ತದೆನ್ನುವ ನಂಬಿಕೆ ಬಲವಾಗಿದೆ.

ದೇಹ ಮತ್ತು ವಾಕ್ (ಮಾತು) ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಬಹಳ ಉಪೇಕ್ಷಿಸಲ್ಪಟ್ಟ ಎರಡು ಸಂವೇದನೆಗಳು. ದೇಹದ ಕ್ರಿಯೆ ಮತ್ತು ಮನದ ಮಾತು ಸಾಂಪ್ರದಾಯಿಕ ಧಾರ್ಮಿಕ ಸಂಸ್ಕೃತಿಗೆ ವ್ಯರ್ಜ್ಯವಾಗಿ ಅವಮಾನದ ಪ್ರತೀಕವಾಗಿತ್ತು. ಆದರೆ ಬಬಲಾದಿಯಂತಹ ಅವೈದಿಕ ಸಿದ್ಧಪರಂಪರೆ ಅವಮಾನದ ಸಂಕೇತವಾಗಿದ್ದ ದೇಹ ಮತ್ತು ಮಾತನ್ನು ಆತ್ಮಗೌರವದ ಸಂಕೇತವನ್ನಾಗಿ ಉನ್ನತೀಕರಿಸಿತು. 'ಕಾಯವಿಕಾರವ ಕಳೆದು ಕಾಯದಲಿರ್ದರೆ ಕಾಯದ ಸಂಗವೇ ಲೇಸು' ಎನ್ನುವ ಮಾತಿನಂತೆ ದೇಹಮೂಲವಾದ ಸಾಧನೆಯನ್ನು ಬಬಲಾದಿ ಪರಂಪರೆ ಎತ್ತಿ ಹಿಡಿದು ಕೆಳವರ್ಗಗಳ ಪೊಟೆನ್‌ಸಿಯಾಲಿಟಿಯ ಮಹತ್ವವನ್ನು ಜಗತ್ತಿಗೆ ಸಾರಿ ಹೇಳಿತು. ಹೀಗೆ ಸಾರಿ ಹೇಳಲು ಬಬಲಾದಿ ಪರಂಪರೆ ಬಳಸಿಕೊಂಡಿದ್ದು ವೇದ ಆಗಮ ಉಪನಿಷತ್ತಿನಂತಹ ಅಕ್ಷರ ಪ್ರಧಾನ ಆಕರಗಳನ್ನಲ್ಲ ಬದಲಾಗಿ ಸ್ವಯಂಸಿದ್ಧ ಹಾಗೂ ಸ್ವಯಂವೇದ್ಯವಾದ ಕಾಲಜ್ಞಾನದ ನುಡಿಗಳನ್ನು. ಇವು ಉದ್ದೇಶಪೂರ್ವಕವಾದ ನಿರ್ಮಿತಿಗಳಲ್ಲ. ಕಾಲ ಮತ್ತು ಸಂದರ್ಭದ ಸ್ವಯಂಪ್ರೇರಿತ ಸನ್ನಿವೇಶಗಳಲ್ಲಿ ಮಾತಿನ ರೂಪದಲ್ಲಿ ಹುಟ್ಟಿದಂತವು.

Scanned with CamScanner

ಜ್ಞಾನ ಎನ್ನುವುದು ಮನುಷ್ಯನಿಗೆ ಧ್ಯಾನಮೂಲವಾಗಿ ಬರಬಾರದು ಕ್ರಿಯಾಮೂಲವಾಗಿ ಬರಬೇಕು. ದೇಹ ಮತ್ತು ಮನಸ್ಸುಗಳ ಛಿದ್ರತೆಯಿಂದ ಹುಟ್ಟುವುದು ಜ್ಞಾನವಲ್ಲ. ದೇಹ ಮತ್ತು ಮನಸ್ಸಿನ ಸೃಷ್ಟಿಶೀಲತೆಯಿಂದ ಹುಟ್ಟುವುದೇ ನಿಜವಾದ ಜ್ಞಾನ ಅಥವಾ ಅರಿವು. ಅದೇ ಕಾಲಜ್ಞಾನ. ಪ್ರಪಂಚದ ಪಿಡ್ಕಮಾನಗಳನ್ನು ಕೇಳಿಸಿಕೊಳ್ಳುವ ಶಕ್ತಿಯನ್ನು ಪಡೆದವಳು ಶಕ್ತಿ ಅಥವಾ ಕಾಳಿ(ಕಾಲಿ). ಆಕೆ ಪರಾಶಕ್ತಿ. ಮಾತಿಗೆ 'ಕಾಲ' ಮತ್ತು 'ಜ್ಞಾನ'ದ ಕ್ರಿಯಾತ್ಮಕತೆಯನ್ನೂ ಅರ್ಥವಂತಿಕೆಯನ್ನೂ ಸಮಷ್ಟಿ ಪ್ರಜ್ಞೆಯ ಗುಣವನ್ನೂ ನೀಡಿದಾಕೆ ಶಕ್ತಿ ಅಥವಾ ದುರ್ಗೆ. ಅವಳೇ ಕಾಲಜ್ಞಾನವನ್ನು ನುಡಿಸುವಾಕೆ ಮತ್ತು ಕರ್ಮವನ್ನು ಸುಡುವಾಕೆ.

'ಕಾಲಜ್ಞಾನದ ಕಡಿಯ ಕಾಲಕ್ಕೆ। ಕಾಳಮ್ಮ ತಾಯಿ ಬಂದಾಳಣ್ಣ ಕರ್ಮಸುಡುವುದಕೆ। ಕಡಿಗೆ ಒಂದೇ ಸತ್ಯ ಉಳಿಸಿ। ಭುವನವೇ ಕೈಲಾಸವೆನಿಸಿ।' 'ಒಡೆಯ ಚಿಕ್ಕನ ಹಡದಕ್ಯಾಸಿ ಸಲುಹಿದೆ। ಭವಬಲಿಯಗೆಲಿಸಿ.' ಕಾಳಿ, ದುರ್ಗೆ ಅಥವಾ ಶಕ್ತಿ ಚಿಕ್ಕಯ್ಯನ ಲೌಕಿಕ ದೇಹ ಮತ್ತು ಅನುಭಾವಿಕ ಮಾತುಗಳಿಗೆ ಜನ್ಮ ನೀಡಿದಾಕೆ. ಚಿಕ್ಕಯ್ಯನ ಕಾಲಜ್ಞಾನದ ಪ್ರತಿಭಾವಿಲಾಸದ ಹಿಂದಿನ ಶಕ್ತಿಯೆಂದರೆ ಮೂರುಲೋಕ ತಿಳಿದ ಕಾಳಿಯೇ ಎನ್ನುವುದು ಇಲ್ಲಿನ ಅರ್ಥ.

'ನಾ ಹೆಚ್ಚು ನೀ ಹೆಚ್ಚು ನ್ಯಾಯ ಪ್ರಪಂಚವು ಕಿಂಚಿತ್ತು ಉಳಿಯದೇಳಣ್ಣ' 'ಗುಡಿಯ ಗುಮ್ಮಟ ನೋಡಿ ಬಿಡದಿನ್ನ ಕೆಡುಹುವರು। ಖಡಖಡನೆ ಶಿಡ್ಲೊರಗಿದಂತಣ್ಣ' 'ಜಗದ ಕರ್ತನ ರಾಣಿ ಜಗದಂಬಾ। ಜಗ ಹುರಿಯುವಕ್ಕೆ ಹಿಡಿಸಿ ಬಂದಳು ಬಿರುದಿನ ಕೊಂಬಾ। ಜಗದ ಪ್ರಾಣಿಗಿ ಬಂತ ಗೋಳಾ। ಕರ್ಮಸುಟ್ಟು ಹಾರುವುದು ಧೂಳಾ', 'ಸಪ್ತ ಕಡಲು ಬತ್ತಿ ಹೋಗುದು ಪೃಥ್ವಿತುಂಬಾ ಉರಿಯನೇಳುದು', ಕರ್ಮಕಾಲ ಒದಗಿತು। ಕಡಿ ಆಟದ ಮಾತು। ಕರ್ಮ ಕಾಲವು ಸನಿಹ ಬಂದೀತು।

ಜಗತ್ತು ತನ್ನ ಶ್ರೀಮಂತಿಕೆ, ಅಕ್ಷರದ ದುರಹಂಕಾರ, ಪರಸ್ಪರ ದ್ವೇಶ, ಅಸೂಯೆ, ಅಸಹನೆ, ಅವಿವೇಕದಿಂದ ಹಾಳಾಗುವ ಪರಿಯ ಕುರಿತು ಬಬಲಾದಿಯವರ ಕಾಲಜ್ಞಾನ ಪದಗಳು ಸೂಚ್ಯವಾಗಿ ಹೇಳುತ್ತವೆ. ನೂರಾರು ವರ್ಷಗಳ ಈ ಕಾಲಜ್ಞಾನ ವಚನಗಳು ಪಾರಂಪರಿಕ ಬದುಕಿನ ವಿಘಟನೆಗಳನ್ನು ಅದರ ಸಾಂಸ್ಕೃತಿಕ ಛಿದ್ರತೆಗಳನ್ನು ಬಹಳ ಸೂಕ್ಷ್ಮವಾಗಿ ಹೇಳುತ್ತವೆ.

'ಹಗರಕಾಲವು ಜಗಕೆ ಬಂತಣ್ಣ। ಅಜಹರನ ಕೋಪವು ಜಗದ ಪ್ರಾಣಿಗಳ ಮೇಲೆ ಐತಣ್ಣಾ, ಮಂಜು ಮಳೆಗಳು ಮುಗಿಲ ಸೇರ್ಯಾವು, ಬಂಜಿನಾಗ್ಯಾಳ ಭೂಮಿತಾಯಿ, ಅಂಜು ಜನರಿಗೆ ಸುಖವ ಇಲ್ಲಣ್ಣ, ಸೆರಿಗಂಜಿ ಕಾಣದೇ ಮುಂದೆ ಮನೆ ಮನೆ ತಿರುಗುತಾರಣ್ಣ' ಎನ್ನುವಲ್ಲಿ ಅಕಾಲಿಕ ಮತ್ತು ಅಲ್ಪ ಮಳೆಗಾಲಗಳು, ಅತಿವೃಷ್ಟಿ ಮತ್ತು ಅನಾವೃಷ್ಟಿಗಳು ಲೋಕದಲ್ಲಿ ಸೃಷ್ಟಿಸುವ ಅಲ್ಲೋಲ ಕಲ್ಲೋಲಗಳನ್ನು ಈ ಕಾಲಜ್ಞಾನದ ಹಾಡುಗಳು ಸಂಕೇತಿಸುತ್ತವೆ.

'ಅಡಗಟ್ಟಿ ಅಡ್ಡಗಟ್ಟೀತು, ಗದ್ದನಕೇರಿ ಮುತ್ತ ಮಾರೀತು, ಬಬಲಾದಿ ಬೊಬ್ಬೆ ಹೊಡೆಯಿತು' ಎನ್ನುವುದು ಬಬಲಾದಿಯವರು ಕ್ರಿ.ಶ.1758ರಲ್ಲಿ ಹೇಳಿದ ಮಹತ್ವದ ಮತ್ತು ಸತ್ಯವಾದ ಭವಿಷ್ಯವಾಣಿ ಆಗಿದೆ. ಅಡಗಟ್ಟಿ ಅಂದರೆ ಇಂದಿನ ಆಲಮಟ್ಟಿ. ಅದರ ಹಳೆಯ ಹೆಸರು 'ಅಡಗಟ್ಟಿ' ಎಂದು ಇತ್ತು. ಎರಡು ಗುಡ್ಡಗಳ ಸಂಧಿಯಲ್ಲಿ ನದಿ ಹರಿದು ಹೋಗಿರುವುದರಿಂದ ಬಹುಶಃ ಹಿಂದಿನ ಕಾಲದಲ್ಲಿ ನೀರಿಗೆ ಅಡ್ಡಗಟ್ಟಿ ನೀರಾವರಿ ವ್ಯವಸ್ಥೆ ಮಾಡಿಕೊಂಡಿರುವ ಸಾಧ್ಯತೆಗಳಿವೆ. ಇಂದು ಅಲ್ಲಿ ಲಾಲ್‌ಬಹದ್ದೂರ ಶಾಸ್ತ್ರಿ ಜಲಾಶಯ ನಿರ್ಮಿಸಿದ್ದು ತಿಳಿದ ವಿಷಯ. ಅದರಿಂದ ಮುಳುಗಡೆಯಾದ ಬಹಳಷ್ಟು ಊರುಗಳು ಇಂದು ಬಾಗಲಕೋಟ, ನವನಗರ

Scanned with CamScanner
Scanned with CamScanner

ಮತ್ತು ಗದ್ದನಕೇರಿ ಸುತ್ತಮುತ್ತ ಪುನರ್‌ವಸತಿ ಪಡೆದಿವೆ. ಒಂದು ಕಾಲದಲ್ಲಿ ಏನೂ ಇರದ ಗದ್ದನಕೇರಿ ಇಂದು ವ್ಯಾಪಾರ ವಹಿವಾಟುಗಳಿಂದ ಶ್ರೀಮಂತ ಪ್ರದೇಶವಾಗಿದೆ. 'ಬಬಲಾದಿ ಬೊಬ್ಬೆ ಹೊಡೆಯಿತು' ಎಂದರೆ ಕೃಷ್ಣೆ ಮತ್ತು ಘಟಪ್ರಭಾ ಹಿನ್ನೀರಿನಲ್ಲಿ ಬಬಲಾದಿಯ ಇಡೀ ಪರಿಸರ ಮುಳುಗಿ ಹೋಗಿದೆ. ಜನ ಹಾಹಾಕಾರದಿಂದ ಊರು ಬಿಟ್ಟಿದ್ದಾರೆ. ಬಬಲಾದಿ ಕಾಲಜ್ಞಾನ ಪರಂಪರೆಯ ಎಲ್ಲ ಭೌತಿಕ ಗುರುತುಗಳು ಇಂದು ಕೃಷ್ಣಾರ್ಪಣವಾಗಿವೆ. ಬಹುದೊಡ್ಡ ಮಾನವ ಸಂಸ್ಕೃತಿಯ ನಾಶವನ್ನು ಈ ಮೂರು ಕಾಲಜ್ಞಾನ ಸಾಲುಗಳು ನಿಜಾರ್ಥದಲ್ಲಿ ಇಂದು ಸತ್ಯವಾಗಿಸಿವೆ.

ಇಷ್ಟೇ ಅಲ್ಲದೆ ಮಾನವ ಕುಲವು ನಾನಾ ರೀತಿಯ ಸಂಕಟಗಳಿಗೆ ಸಿಲುಕಿ ನಾಶವಾಗಬಹುದಾದ ಹಲವು ಸಂಗತಿಗಳನ್ನು ಬಬಲಾದಿಯವರ ಕಾಲಜ್ಞಾನಗಳು ಹೇಳುತ್ತವೆ. 'ಕೂಸು ಬಸಿರು ಆಗುವುದು', ಕಾಲ(ಯಮ) ಮನಿ ಮನಿ ಕರೆಯ ಬರುವನು। ಧರಣಿಯಲ್ಲ ಗೋರಿಯಾಗುದು', 'ಬೊಬ್ಬಿಯಾಟವು ಜಗಕೆ ಬಂತಣ್ಣ। ಕೊಬ್ಬಿದ ಜನತೆ ಗಬ್ಬಸದಲಿ ಗಾಬರ್ಯಾತಣ್ಣ। ಉಣಲು ಉಡಲಾಕ ಸವಡಿಯಿಲ್ಲಣ್ಣಾ। ಪಂಡಿತ ಜನರ ಬಾಯೊಳು ಬಿತ್ತ ಎರಿಮಣ್ಣು', 'ಉತ್ತರ ದಿಕ್ಕಿಗಿ ಉರಿ ಎದ್ದ ಬಂದೀತು', 'ಹಸರ ನಾಮದ ಒಡೆಯ ಪರುಷದಿ ಬರುವಾಗ ಮುಸಲರ ದಂಡೇಳುವುದಣ್ಣ', 'ಜಂಗೊಳಿ ದನದಂತೆ ತಿರಿದುಂಬ ಜಂಗಮರ ಜಡತಿಯ ಕೇಳುವನಣ್ಣ', 'ಭಂಡಾರ ಹಚ್ಚುವ ಬಂಡಾರಕ ರಂಡೇರನ ಕುಂಡಿ ಸುಟ್ಟು ಕೇಳುವುನಣ್ಣ', 'ಸೃಷ್ಟಿಗಿ ಸಾರವಾಡಧೀಶ ಮುಟ್ಟಿ ಹೇಳಿದ ವಾಕ್ಯ ನಿಜವೆನ್ನೀರಿ'.

ತನ್ನ ಕಾಲಜ್ಞಾನ ಮತ್ತು ಜನಮುಖಿ ಹಾಗೂ ಜೀವಪರ ಆಶಯಗಳ ಮೂಲಕ ಬಬಲಾದಿ ಪರಂಪರೆ ಮನುಷ್ಯ ಕುಲದ ಸಂಘಟನೆ ಮತ್ತು ಸಂಗೋಪನೆ ಮಾಡುತ್ತ ಬಂದಿದೆ. ಧಾರ್ಮಿಕತೆ, ಆಧ್ಯಾತ್ಮಿಕತೆ ಮತ್ತು ಸಾಮಾಜಿಕತೆಯನ್ನು ಜನತೆಗೆ ಕಲಿಸಿಕೊಟ್ಟು ಜನತೆ ಪ್ರಕೃತಿ ಮತ್ತು ಪುರುಷನೊಂದಿಗೆ ವಿಮುಖವಾಗದೆ ಜೀವಪ್ರೀತಿಯಿಂದ ಸಾವಯವವಾಗಿ ಬಾಳಬೇಕೆನ್ನುವುದನ್ನು ಕಲಿಸಿಕೊಟ್ಟಿತು. ಮನುಷ್ಯ ಆಡಂಬರ ಮತ್ತು ದುರ್ವರ್ತನೆ ಕಾರಣದಿಂದಾಗಿ ಬರಬಹುದಾದ ಲೋಕ ಕಂಟಕಗಳನ್ನು ಮುಂದಾಗಬಹುದಾದ ಸಂಕಟಗಳನ್ನು ಮೂರು ನೂರು ವರ್ಷಗಳ ಮುಂಚೆಯೇ ತನ್ನ ಭವಿಷ್ಯವಾಣಿಯ ಮೂಲಕ ಬಬಲಾದಿ ಚಿಕ್ಕಪ್ಪಯ್ಯನವರು ಎಚ್ಚರಿಸಿದ್ದರು. ಆದರೆ ಮನುಷ್ಯ ಅದನ್ನು ತಿಳಿದುಕೊಳ್ಳವಲ್ಲಿ ವಿಫಲವಾದನು. ಅದರಿಂದಾಗಿ ಇಂದು ಹಲವು ರೀತಿಯ ಸಾವು ನೋವುಗಳಿಗೆ ಇಡೀ ಮಾನವ ಕುಲಕೋಟಿಯೇ ಬಲಿಯಾಗುವಂತಾಗಿದೆ. ಒಟ್ಟಿನಲ್ಲಿ ಬಬಲಾದಿ ಪರಂಪರೆ ಮನುಷ್ಯ ಕುಲದ ಅನನ್ಯತೆಯನ್ನು ತನ್ನ ಕ್ರಿಯಾಶೀಲ ಮತ್ತು ವಿವೇಕಯುತ ಕಾಲಜ್ಞಾನಗಳ ಮೂಲಕ ಮರು ಸ್ಥಾಪಿಸಲು ಪ್ರಯತ್ನಿಸಿದ್ದು ಮರೆಯುವಂತದ್ದಲ್ಲ. ಮನುಷ್ಯನ ಮಾತು ಮತ್ತು ದೇಹಕ್ಕೆ ಕಿಮ್ಮತ್ತು ನೀಡಿದ ಹಾಗೂ ಅಭೇದ ಕಲ್ಪಿಸಿದ ವಿಶಿಷ್ಟ ಕಾಲಜ್ಞಾನ ಸಂಸ್ಕೃತಿ ಬಬಲಾದಿ ಚಿಕ್ಕಪ್ಪಯ್ಯನದಾಗಿದೆ. ಈ ಕಾಲಜ್ಞಾನಗಳು ಸಾರ್ವಕಾಲಿಕ ಸತ್ಯಗಳಾಗಿವೆ.

– ಡಾ.ವೀರೇಶ ಬಡಿಗೇರ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ. ಹಂಪಿ ವಿದ್ಯಾರಣ್ಯ–583276

Scanned with CamScanner
Scanned with CamScanner

22.03.21

ಮಾಸಿಕ Monthly

ವಿಧಾತೃ

(The Creator)

ಸಂಪುಟ : 11 ಡಿಸೆಂಬರ್ 2020 ಸಂಚಿಕೆ-7 ಬೆಲೆ ರೂ. : 20.00 ಪುಟಗಳು : 40

ಲೇಖನ ಪುಟ ೨

ಹಾಸನ ದೊಡ್ಡಗದ್ದವಳ್ಳಿ ಕಾಳಿಕಾದೇವಿ ಮೂರ್ತಿ ಒಡೆದು ಹಾಕಿದ ದುಷ್ಕರ್ಮಿಗಳು

Scanned with CamScanner

ಸಂಸ್ಕೃತಿ, ಸಾಹಿತ್ಯ ಹಾಗೂ ಕಲೆಗೆ ಮೀಸಲಾದ ಏಕೈಕ ಪತ್ರಿಕೆ

ಸಂಪುಟ 11 ಸಂಚಿಕೆ 7

ಗೌರವ ಸಂಪಾದಕರು
ಡಾ॥ ಜೆ. ಜ್ಞಾನಾನಂದ

ಪ್ರಧಾನ ಸಂಪಾದಕರು
ಎನ್.ಸಿ. ಛಾಯಾಪತಿ, ಬಿ.ಇ.,ಎಮ್.ಐ.ಇ.
ಮೊ: 97317 58137

ವ್ಯವಸ್ಥಾಪಕ ಸಂಪಾದಕ
ಗೋಪಾಲಕೃಷ್ಣ ಐ. ಮನುವಾಚಾರ್ಯ

ಸಹ ಸಂಪಾದಕರು
ರಾಜೇಂದ್ರ ಬಡಿಗೇರ
ಪ್ರೊ॥ ಎನ್.ಎ. ಅಂಬಾಮಣಿಮೂರ್ತಿ
ಭೀಮಸೇನ ಬಡಿಗೇರ್ ಬಿ.ಇ.,
ಶ್ರೀ ಮಂಟೇಲಿಂಗಾಚಾರ್
ನಿವೃತ್ತ ಜಂಟಿ ನಿರ್ದೇಶಕರು, ಶಿಕ್ಷಣ ಇಲಾಖೆ
ನೀಲಕಂಠಾಚಾರ್ಯ, ಲಿಂಗಸಗೂರು
ಸುರೇಶ್ ಯು ಪತ್ತಾರ್
ಕೆ.ಎಂ. ಚಂದ್ರಶೇಖರ್ ಆಚಾರ್ಯ

ಪ್ರಕಾಶಕರು
ಎನ್.ಸಿ. ಛಾಯಾಪತಿ

ಮುದ್ರಕರು
'ಮನುಗ್ರಾಫಿಕ್ಸ್'

ನಂ. 50/1, 2ನೇ ಕ್ರಾಸ್, 2ನೇ ಮೇನ್
ಶೆಲ್ ಪೆಟ್ರೋಲ್ ಬಂಕ್ ಹಿಂಭಾಗ,
ಅಗ್ರಹಾರ ದಾಸರಹಳ್ಳಿ, ಬೆಂಗಳೂರು–70.
manuprints@gmail.com

ಸಲಹೆಗಾರರು
ಕೆ. ಎ. ವರದರಾಜು
ಕೆ. ಎನ್. ಶ್ರೀನಿವಾಸ ಬಿ.ಕಾಂ. ಎಲ್.ಎಲ್.ಬಿ.,
ಆರ್.ಬಿ.ಎ.

ಪರಿವಿಡಿ

1. 2020ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ... 02
2. ಸಂಪಾದಕೀಯ... 07
3. ದೊಡ್ಡಗದ್ದವಳ್ಳಿ ಕಾಳಿಕಾದೇವಿ ಮೂರ್ತಿ ಒಡೆದು ಹಾಕಿದ ದುಷ್ಕರ್ಮಿಗಳು 08
4. ಕನ್ನಡ ಅಚ್ಚುಮೊಳೆಗಳ ಜನಕ : ಅತ್ತಾವರದ ಅನಂತಾಚಾರಿ 11
5. ಡಾ॥ ಕೆ. ಎಸ್. ಕುಮಾರಸ್ವಾಮಿ ಇನ್ನಿಲ್ಲ! 14
6. ವಿಶ್ವಕರ್ಮ ಮಠ ಮಾನ್ಯಗಳಿಗೆ ಅನ್ಯಾಯ.!! 17
7. "ಡಾಕ್ಟರೇಟ್" ಡಾ॥ ಗೀತಾ ಬಡಿಗೇರ 18
8. ಹೇಳತೇನ ಕೇಳ 19
9. ಯಾದುಷಾಥರ್ವ ಶಿಲ್ಪವಿದ್ಯಾ ರಹಸ್ಯೋಪನಿಷತ್ತು 25
10. ಶ್ರೀ ವಿಶ್ವಕರ್ಮ ಪುರಾಣ 28
11. ನಮ್ಮ ಸಮಾಜದ ಭವ್ಯ ಪರಂಪರೆ 34
12. ಎಲ್ಲರೂ ಆರೋಗ್ಯ – ನೆಮ್ಮದಿಗಳಿಂದ ಬದುಕು ಸಾಗಿಸುವಂತಾಗಬೇಕು.....!!! 37
13. ಡಾ. ಟಿ.ಬಿ. ಸೊಲಬಕ್ಕನವರಿಗೆ ಶ್ರದ್ಧಾಂಜಲಿ 38

ಚಂದಾ ವಿವರ

ವಾರ್ಷಿಕ	:	ರೂ. 250/-
ಪಂಚವಾರ್ಷಿಕ	:	ರೂ. 1200/-
ಪೋಷಕರು	:	ರೂ. 3,000/-
ಮಹಾ ಪೋಷಕರು	:	ರೂ. 5,000/-
ಮಹಾ ದಾನಿಗಳು	:	ರೂ. 10,000/- ಕ್ಕೆ ಮೇಲ್ಪಟ್ಟು

ಜಾಹೀರಾತು

ರಕ್ಷಾಪುಟ	ಹೊರಭಾಗ (ಕಲರ್)	ರೂ. 5,000/-
	ಹೊರಭಾಗ (ಕಪ್ಪು ಬಿಳುಪು)	ರೂ. 2,500/-
	ಒಳಭಾಗ (ಕಲರ್)	ರೂ. 4,000/-
	ಒಳಭಾಗ (ಕಪ್ಪು ಬಿಳುಪು)	ರೂ. 2,000/-
ಒಳಪುಟ	ಪೂರ್ಣ ಒಳಭಾಗ	ರೂ. 2ಥ,000/-
	ಅರ್ಧ	ರೂ. 1000/-
	ಕಾಲು	ರೂ. 500/-

ಚಂದಾ ನವೀಕರಿಸದಿದ್ದವರು / ನೀಡಿಲ್ಲದವರು ಚಂದಾಪಣ ಕಳುಹಿಸಲು ಮನವಿ.
N. C. Chayapathy
A/c No. 54018369397 IFSC Code : SBIN0015658
State Bank of India, Jayanagar 8th Block

Scanned with CamScanner

ಕನ್ನಡ ಅಚ್ಚುಮೊಳೆಗಳ ಜನಕ : ಅತ್ತಾವರದ ಅನಂತಾಚಾರಿ

–ಡಾ॥ ವಿರೇಶ ಬಡಿಗೇರ
ಮುಖ್ಯಸ್ಥರು ಹಸ್ತಪದಿ ವಿಭಾಗ, ಹಂಪಿ ವಿಶ್ವವಿದ್ಯಾಲಯ

ಕೈಬರದ ಸ್ವರೂಪ ಹಾಗೂ ಅದರ ತಾಂತ್ರಿಕ ಕೌಶಲ್ಯಗಳಲ್ಲಿ ನಡೆವ ಸುಧಾರಣೆ ಹಾಗೂ ಬದಲಾವಣೆಗಳು ಕೇವಲ ಯಾಂತ್ರಿಕವಾದಂಥವಲ್ಲ. ಅವು ಒಂದು ವ್ಯಕ್ತಿ, ಸಮುದಾಯ, ಸಮಾಜ. ಕೌಶಲ್ಯ ಹಾಗೂ ಕ್ರಿಯಾತ್ಮಕ ಜ್ಞಾನದ ಸ್ವರೂಪದೊಂದಿಗೆ ಪೋಣಿಸಿಕೊಂಡಿರುತ್ತವೆ. ಬರವಣಿಗೆ ಹಾಗೂ ಮುದ್ರಣ ತಂತ್ರಜ್ಞಾನಗಳು ಆಧುನಿಕ ಸಂದರ್ಭದಲ್ಲಿ ಕೈಯ್ಯ ಕೌಶಲ್ಯದೊಂದಿಗೆ ಮನಸ್ಸಿನ ಸೌಂದರ್ಯವಾಗಿಯೂ ಅಭಿನೀತಗೊಂಡಿವೆ. ಸಾವಿರ ಕೋಟಿ ರೂಪಾಯಿಯ ವ್ಯವಹಾರವಾಗಿ ಇಂದು ಬಂಡವಾಳ ಆಕರ್ಷಿಸುತ್ತಿರುವ ಆಧುನಿಕ ಕನ್ನಡದ ಮುದ್ರಣ ತಂತ್ರಜ್ಞಾನಕ್ಕೆ ವಿಶ್ವಕರ್ಮರು ನೀಡಿದ ಕೊಡುಗೆ ಉಪೇಕ್ಷೆಗೆ ಗುರಿಯಾಗಿದ್ದು ದುರಂತವೇ ಸರಿ.

ಆಧುನಿಕಪೂರ್ವ ಹಾಗೂ ಆಧುನಿಕೋತ್ತರ ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಆರ್ಥಿಕ ಹಾಗೂ ರಾಜಕೀಯ ಅಧ್ಯಯನ ಹಾಗೂ ಚರ್ಚೆಗಳಲ್ಲಿ ಪಾಂಚಾಳ ಅಥವಾ ವಿಶ್ವಕರ್ಮ ಸಮುದಾಯದ ಕ್ರಿಯಾಶೀಲ ಕೌಶಲ್ಯಗಳ ಬಗ್ಗೆ ಗಾಢಮೌನ ಆವರಿಸಿದೆ. ಸಾಹಿತ್ಯ, ಕಲೆಗಳು ಕೇವಲ ಭಾವನಾತ್ಮಕ ಸೌಂದರ್ಯಗಳಲ್ಲ, ಅವು ಪ್ರಖರ ಪ್ರಯೋಗಶೀಲ ಗುಣವುಳ್ಳವು. ಅವುಗಳನ್ನು ಧರ್ಮ ಅಥವಾ ಪ್ರಭುತ್ವದ ಜಡಪರಿಭಾಷೆಗಳಲ್ಲಾಗಲೀ ಅಥವಾ ತೀರ ಅಕಾಡೆಮಿಕ್ ಪರಿಭಾಷೆಗಳಲ್ಲಿ ನೋಡದೆ ಸಮುದಾಯದ ಸೃಷ್ಟಿಶೀಲ ಶಕ್ತಿಯಾಗಿ ಅಧ್ಯಯನ ಮಾಡಿದಾಗ ಕರ್ನಾಟಕ ಅಲ್ಲದೇ ಭಾರತದ ಮುದ್ರಣ ಚರಿತ್ರೆಯ ಹೊಸರೂಪವೊಂದನ್ನು ಪರಿಭಾವಿಸಿಕೊಳ್ಳಲು ಸಾಧ್ಯವಿದೆ.

ಮುದ್ರಣ ಎನ್ನುವುದಕ್ಕೆ ಸುಮಾರು ಸಾವಿರ ವರ್ಷದಷ್ಟು ಹಿಂದಿನ ಇತಿಹಾಸವಿದ್ದರೂ ಅದು ಅಚ್ಚುಮೊಳೆಗಳ ಮೂಲಕ ಜಗತ್ತನ್ನು ಪ್ರಭಾವಿಸಿದ್ದು ಕ್ರಿ.ಶ.1439ರಿಂದ. ಮಧ್ಯಯುಗದ ಯುರೋಪಲ್ಲಿ ಕಮ್ಮಾರಿಕೆ ಹಾಗೂ ಅಕ್ಕಸಾಲಿಕೆಯನ್ನು ಕುಲಕಸುಬು ಮಾಡಿಕೊಂಡಿದ್ದ ಗುಟೆನ್‌ಬರ್ಗ್(ಸು.1398–1468) ಎಂಬಾತ 1439ರಲ್ಲಿ ರೋಮನ್ ಲಿಪಿಯ ಎರಕದ ಅಚ್ಚಿನ ಮೊಳೆಗಳನ್ನು ಕಂಡುಹಿಡಿದ. ಅವನು ಈ ಆವಿಷ್ಕಾರ ಮುದ್ರಣ ತಾಂತ್ರಿಕತೆಯನ್ನು ಪಸರಿಸುವುದಾಗಿತ್ತು. ಇದರ ನಂತರ ಯುರೋಪ ಭಾರತ ಹಾಗೂ ಕರ್ನಾಟಕದಲ್ಲಿ ಎರಕದ ಅಚ್ಚುಮೊಳೆಗಳ ತಯಾರಿಕೆಯ ಪ್ರಯತ್ನಗಳೂ ನಡೆದವು.

1430ರಿಂದ 1900ರ ವರೆಗಿನ ಎಪ್ಪತ್ತು ವರ್ಷದಲ್ಲಿ ಕಲ್ಲಚ್ಚು ಮುದ್ರಣ ಪ್ರಭಾವಿಯಾಗಿ ಬೆಳೆಯಿತು. ಬರವಣಿಗೆ ಹಾಗೂ ಪ್ರಕಟನೆ ಇತಿಹಾಸದಲ್ಲಿ ಕಲ್ಲಚ್ಚಿಗೆ ಒಂದು ಮಹತ್ವದ ಸ್ಥಾನವಿದೆ. ಮುತ್ತಿನಂತಹ ಕನ್ನಡಾಕ್ಷರ ಆಧಾರಿತ ಕಲ್ಲಚ್ಚು ಮುದ್ರಣ 19 ರಿಂದ 20ನೆಯ ಶತಮಾನದ ಹೊತ್ತಿಗೆ ಜ್ಞಾನ ಪ್ರಸಾರದ ಮುಖ್ಯ ಮಾಧ್ಯಮವಾಗಿ ಬೆಳೆಯಿತು. ಆಗ ಕನ್ನಡ ಲಿಪಿ ಬರೆಯುವ ಹಾಗೂ ಅಚ್ಚಿನ ಮೊಳೆಗಳನ್ನು ತಯಾರಿಸುವ ಕಲಾಕಾರರಿಗೆ ಮುದ್ರಾಕ್ಷರ

Scanned with CamScanner
Scanned with CamScanner

ಶಾಲೆಗಳಲ್ಲಿ ಬಹಳ ಬೇಡಿಕೆಯಿತ್ತು. ಮಂಗಳೂರಿನ (1828) ರೋಮನ್ ಕ್ಯಾಥೋಲಿಕ್ ಕ್ರೈಸ್ತ ಮಿಶನರಿಯ ಪಾದ್ರಿಗಳು ತಮ್ಮ ಪ್ರಸ್ಸಿನ ಅಚ್ಚು ಮೊಳೆಗಳ ಅಗತ್ಯಕ್ಕಾಗಿ ಅಂದವಾಗಿ ಬರೆಯುವ ಹಾಗೂ ಅಚ್ಚು ಮೊಳೆಗಳನ್ನು ತಯಾರಿಸುವ ಕನ್ನಡ ಲಿಪಿಕಾರರನ್ನು ಹುಡುಕುವಾಗ ಅವರ ಕಣ್ಣಿಗೆ ಬಿದ್ದವರು ಮೂಡಬಿದ್ರೆಯ ಅತ್ತಾವರದ ವಿಶ್ವಕರ್ಮ ಕುಲದ ಅನಂತಾಚಾರಿ ಅವರು.

ವಿಶ್ವಕರ್ಮ ಪ್ರಮುಖ ಗುರುಪರಂಪರೆಯ ಆನೆಗೊಂದಿ ಪೀಠದ ಅನುಯಾಯಿಗಳಾಗಿದ್ದ ಅನಂತಾಚಾರಿ ಅವರ ಹಿರಿಯರು ಕಾರ್ಕಳ ತಾಲ್ಲೂಕಿನ ಪಡಿಮಾರ್ನಾಡು ಗ್ರಾಮದ ಅಲಂಗಾರು ಎಂಬಲ್ಲಿ ನೆಲೆಸಿದ್ದರು. ಆ ಕಾಲದಲ್ಲಿ ಇದೊಂದು ಭೂಮಾಲಿಕ ಶ್ರೀಮಂತ ಕುಟುಂಬವಾಗಿತ್ತು. ಅತಂಹ ಕುಟುಂಬದಲ್ಲಿ ಕ್ರಿ.ಶ.1861ರಲ್ಲಿ ಅನಂತಾಚಾರಿ ಅವರು ಜನಿಸಿದರು. ಔಪಚಾರಿಕ ಆಧುನಿಕ ಶಿಕ್ಷಣದೊಂದಿಗೆ ಕುಲಕಸುಬಾದ ಕಮ್ಮಾರಿಕೆಯನ್ನು ಮೈಗೂಡಿಸಿಕೊಂಡು ಬೆಳೆದರು. "ಕುಲುಮೆಯಿಲ್ಲದೆ ಕುಲವಿಲ್ಲ ಗೋತ್ರವಿಲ್ಲ ಹಲವು ಪರಿಯ ಆಯುಧಗಳಿಲ್ಲ" ಎನ್ನುವ ತಿಂಥಿಣಿ ಮೌನೇಶ್ವರರ ಮಾತಾಗಲಿ "ಕಮ್ಮಾರಿಲ್ಲದೆ ಖಡ್ಗಾದಿಶಾಸ್ತ್ರಗಳಾಗವು" ಎನ್ನುವ ಕನ್ನಡದ ಪ್ರಸಿದ್ಧ ಕವಿ ನಯಸೇನನ ಮಾತಾಗಲೀ ಕಮ್ಮಾರಿಕೆಗಿದ್ದ ಕೌಶಲ್ಯ ಹಾಗೂ ಸೃಷ್ಟಿ ಶಕ್ತಿಯನ್ನು ಹೇಳುತ್ತವೆ. ಸೃಷ್ಟಿಗೆ ಮೂಲವಾದ ಹಾರೆ, ಗುದ್ದಲಿ, ಕತ್ತಿ, ಕೊಡಲಿಯಂತಹ ಬಹುಪಯೋಗಿ ಸಲಕರಣೆಗಳನ್ನು ರೂಪಿಸುವಲ್ಲಿ ಅನಂತಾಚಾರಿ ಅವರು ಚೆನ್ನಾಗಿ ಪಳಗಿದ್ದರು. ಜೊತೆಗೆ ಮುದ್ದಾದ ಹಾಗೂ ಸುಂದರವಾದ ಕನ್ನಡ ಅಕ್ಷರ ಬರೆಯುವುದಲ್ಲಿ ಸಿದ್ಧಹಸ್ತರಾಗಿದ್ದರು. ಆದರೆ ವಾಸವಿದ್ದ ಹಳ್ಳಿಯಲ್ಲಿ ಇಂಥ ಕೌಶಲ್ಯಕ್ಕೆ ಪ್ರೋತ್ಸಾಹವಿರಲಿಲ್ಲ. ತನ್ನ ಸೃಷ್ಟಿಶೀಲತೆಗೆ ತಕ್ಕ ಜಾಗ ಹುಡುಕುತ್ತ ಹೊರಟ ಅನಂತಾಚಾರಿ ಕ್ರಿ.ಶ.1874ರ ಹೊತ್ತಿಗೆ ಮಂಗಳೂರಿನ ಬಲ್ಮಠದಲ್ಲಿನ ಬಾಸೆಲ್ ಮಿಶನ್ ಕಬ್ಬಿಣ ಕಾರ್ಖಾನೆಯಲ್ಲಿ ಉದ್ಯೋಗಕ್ಕೆ ಸೇರಿಕೊಳ್ಳುತ್ತಾರೆ.

ಬಾಸೆಲ್ ಮಿಶನ್ ಪ್ರೆಸ್ಸವರು ನಡೆಸುತ್ತಿದ್ದ (1841) ಮಂಗಳೂರಿನ ಛಾಪಖಾನೆಗೆ ವಿದೇಶದಿಂದ ಕನ್ನಡದ ಮುದ್ರಣ ಮೊಳೆಗಳನ್ನು ತರಿಸಿಕೊಳ್ಳುತ್ತಿದ್ದರು. ಅನಂತಾಚಾರಿ ಅವರ ಸುಂದರ ಕನ್ನಡ ಕೈಬರಹ ಹಾಗೂ ಉಕ್ಕಿನ ಕೆಲಸದ ಕೌಶಲ್ಯವನ್ನು ಗಮನಿಸಿದ ಬಾಸೆಲ್ ಮಿಶನ್ನಿನವರು ಅನಂತಾಚಾರಿ ಅವರನ್ನು ಕಾರ್ಖಾನೆಯಿಂದ ಛಾಪಖಾನೆಗೆ ವರ್ಗಾಯಿಸುತ್ತಾರೆ. ಅತ್ತಾವರದಲ್ಲಿ ಅವರಿಗೊಂದು ವಾಸಯೋಗ್ಯ ಮನೆಯನ್ನೂ ಕಟ್ಟಿಸಿಕೊಡುತ್ತಾರೆ.

ಛಾಪಖಾನೆಗೆ ಬಂದ ಮೇಲೆ ಅನಂತಾಚಾರಿ ಅವರು ಎರಕಹೊಯ್ದು ಕನ್ನಡದ ಸುಂದರ ಅಚ್ಚಿನಮೊಳೆಗಳನ್ನು ತಯಾರಿಸುವ ಕೌಶಲ್ಯವನ್ನು ಕರಗತ ಮಾಡಿಕೊಳ್ಳುತ್ತಾರೆ. ಆದರೆ ಇದರಿಂದ ಬಾಸೆಲ್ ಮಿಶನ್ ಸಂಸ್ಥೆ ಮುದ್ರಣ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಕಾಣುತ್ತದೆ ಮತ್ತು ಆರ್ಥಿಕವಾಗಿ ಅದೃಢವೂ ಆಗುತ್ತದೆ. ಇಷ್ಟಾದರೂ ಈ ಅಚ್ಚು ಮೊಳೆಗಳ ಮೂಲಶಿಲ್ಪಿ ಅನಂತಾಚಾರಿಗೆ ಸಂಬಳದ ಹೊರತು ಯಾವ ಗೌರವವೂ ಸಿಗಲಿಲ್ಲ. ಮುಂದೆ ಮಂಗಳೂರಿನ ಕೊಡಿಯಾಲ ಬೈಲಿನಲ್ಲಿದ್ದ ಕೆಥೋಲಿಕ್ ರ ಕರೆಯಂತೆ ಅವರ ಮುದ್ರಣಾಲಯಕ್ಕೆ ಸೇರಿಕೊಳ್ಳುತ್ತಾರೆ. ಶ್ರೀಯುತರ ಕೆಲಸಕ್ಕೆ ಇಲ್ಲೊಂದು ಗೌರವ ಹಾಗೂ ಹೆಸರು ಪ್ರಾಪ್ತವಾಗುತ್ತದೆ. ಅನಂತಾಚಾರಿ ಅವರು ತಯಾರಿಸಿದ ಅಚ್ಚಿನ ಮೊಳೆಗಳಿಗೆ "ಅನಂತ ಶೇಡೆಡ್" ಎಂದು ಹೆಸರಿಡುತ್ತಾರೆ. ಇದರಿಂದ ಅಚ್ಚು ಮೊಳೆಗಳ ಮೇಲೆ ಮೊದಲಬಾರಿಗೆ ಅನಂತಾಚಾರಿ ಅವರು

Scanned with CamScanner

ತಮ್ಮ ಸ್ವಾಮ್ಯ ಪಡೆಯುತ್ತಾರೆ. ಅನಂತಾಚಾರಿ ತಯಾರಿಸುತ್ತಿದ್ದ ಅಚ್ಚಿನ ಮೊಳೆಗಳು ಹೆಚ್ಚು ಕೌಶಲ್ಯಶೀಲವು ಬೆಲೆಯುಳ್ಳವೂ ಆಗಿದ್ದವು. ಈ ಪ್ರಸಂಗ ಬಹು ವೇಗವಾಗಿ ದೇಶಾದ್ಯಂತ ಅವರ ಕೀರ್ತಿ ಪಸರಿಸಲು ಕಾರಣವಾಯಿತು.

ಅನಂತಾಚಾರಿ ಅವರು ಕನ್ನಡ ಅಚ್ಚು ಮೊಳೆಯ ತಯಾರಿಕೆ ನೈಪುಣ್ಯತೆ ಅವರನ್ನು ಕನ್ನಡೇತರ ಭಾಷೆಗಳಿಗೂ ಅಚ್ಚು ಮೊಳೆಗಳನ್ನು ತಯಾರಿಸಿ ಕೊಡುವಷ್ಟು ಬೆಳೆಸಿತು. ಇದ-ರಿಂದ ಪ್ರಭಾವಿತರಾದ ಆ ಕಾಳದಲ್ಲಿ ಮುಂಬೈನಲ್ಲಿ ಪ್ರಸಿದ್ಧವಾಗಿದ್ದ ನಿರ್ಣಯಸಾಗರ ಪ್ರಶ್ನಿ ಮಾಲೀಕ ತುಕಾರಾಮ ಜಾವಾಜಿಯವರು ಮಂಗಳೂರಿನಲ್ಲಿರುವ ಆಚಾರ್ಯರನ್ನು ಭೇಟಿ ಮಾಡಿ ಮರಾಠಿ ಅಚ್ಚು ಮೊಳೆಗಳನ್ನು ತಯಾರಿಸಿ ಕೊಡಲು ವಿನಂತಿಸಿಕೊಳ್ಳುತ್ತಾರೆ. ಕೊಡಿಯಾಲಬೈಲ ಮಾಲೀಕರ ಅನುಮತಿಯ ಮೇರೆಗೆ ಅನಂತಾಚಾರಿ ಅವರು ಮುಂಬೈಗೆ ಹೋಗಿ ಅಲ್ಲಿ ಮರಾಠಿಯೊಂದಿಗೆ ಗುಜುರಾತಿ ಅಚ್ಚುಮೊಳೆಗಳ ತಯಾರಿಕೆಯಲ್ಲಿಯೂ ನೈಪುಣ್ಯತೆಯನ್ನು ಸಾಧಿಸುತ್ತಾರೆ. ಇದು ಆಚಾರ್ಯರ ಜೀವನದಲ್ಲಿ ಮತ್ತೊಂದು ಹೊಸ ಮೈಲುಗಲ್ಲಾಗುತ್ತದೆ.

ಅನಂತಾಚಾರ್ಯರ ಅಚ್ಚು ಮೊಳೆಗಳ ಕೌಶಲ್ಯಯುತ ಹಾಗೂ ವೈಜ್ಞಾನಿಕ ತಾಂತ್ರಿಕತೆಯ ಸುದ್ದಿ ಹೈದ್ರಾಬಾದ್ ನಿಜಾಮನವರೆಗೂ ತಲುಪುತ್ತದೆ. ಹೈದ್ರಾಬಾದ್ ನಿಜಾಂನಿಂದ ಉರ್ದು ಹಾಗೂ ತೆಲಗು ಅಚ್ಚು ಮೊಳೆಗಳನ್ನು ತಯಾರಿಸಿಕೊಡಬೇಕೆಂಬ ಬೇಡಿಕೆ ಬರುತ್ತದೆ. ಅನಂತಾಚಾರಿ ಅವರು ಅದನ್ನೂ ಪೂರೈಸುತ್ತಾರೆ. ಆಚಾರ್ಯರು ಅಲ್ಲಿಂದ ಧಾರವಾಡಕ್ಕೆ ಬಂದು ಕೆಲಕಾಲ ಅಲ್ಲಿದ್ದ ಪುನಃ ಮಂಗಳೂರಿಗೆ ಬರುತ್ತಾರೆ.

ಈ ತಿರುಗಾಟ ಹಾಗೂ ನಿರಂತರ ದುಡಿಮೆಯಿಂದಾಗಿ ಅಷ್ಟೊತ್ತಿಗೆ ಅನಂತಾಚಾರಿ ಅವರಿಗೆ ವಯೋಸಹಜ ದೇಹಾಯಾಸ ಹಾಗೂ ದೃಷ್ಟಿದೋಷಗಳು ಕಾಣಿಸುತ್ತವೆ. ಆದರೂ ಛಲಬಿಡದ ವಿಕ್ರಮನಂತೆ ಸ್ವಂತ ಮುದ್ರಣಾಲಯವೊಂದನ್ನು ಕಂಕನಾಡಿಯಲ್ಲಿ ಸ್ಥಾಪಿಸುತ್ತಾರೆ. ಕೆಲಕಾಲ ನಡೆಸಿ ವಯಸ್ಸು ಮತ್ತು ಮುಗ್ಗಟ್ಟಿನ ಕಾರಣದಿಂದ ಅದನ್ನು ಮಾರಿ ಆಯುರ್ವೇದ ಔಷಧಿ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳುತ್ತಾರೆ. ಕ್ರಿಯಾಶೀಲ ಕೆಲಸ ಮಾಡುವ ಅದಮ್ಯ ಉತ್ಸಾಹವಿದ್ದರೂ ಹಾಗೂ ದೃಷ್ಟಿಗಳ ಅಸಹಕಾರ ಅವರನ್ನು ನಿಸ್ಸಹಾಯಕರನ್ನಾಗಿಸುತ್ತದೆ. ಅವಸಾನದಂಚಿನಲ್ಲಿ ಅನೇಕ ದೈಹಿಕ ಹಾಗೂ ಆರ್ಥಿಕ ತೊಂದರೆಗಳೊಂದಿಗೆ ಬಳಲಿ ಕ್ರಿ.ಶ. 1944ರಲ್ಲಿ ಮಂಗಳೂರಿನಲ್ಲಿ ತೀರಿಕೊಳ್ಳುತ್ತಾರೆ.

ವಿಶ್ವಕರ್ಮ ಧರ್ಮ, ಸಮುದಾಯ ಹಾಗೂ ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅನಂತಾಚಾರಿ ಅವರು ಅದಕ್ಕಾಗಿ ಹಲವಾರು ಯೋಜಿತ ಕಾರ್ಯಕ್ರಮಗಳನ್ನು ನಡೆಸಿದರು. ಪಂಥಭೇದ ಹಾಗೂ ಪ್ರಾದೇಶಿಕ ಭೇದಗಳನ್ನು ಮೀರಿ ವಿಶ್ವಕರ್ಮ ಸಮಾಜ ಬೆಳೆಯಬೇಕೆಂಬುದು ಅವರ ಉತ್ಕಟ ಆಶಯವಾಗಿತ್ತು. ವಿಚಿತ್ರವೆಂದರೆ ಈ ವಿಶ್ವಕುಟುಂಬಿಯ ಸಂಸಾರಿಕ ಬದುಕಿನ ಬಗ್ಗೆ ಸಿಗುವ ಮಾಹಿತಿಗಳು ತೀರ ವಿರಳ. ಆಧುನಿಕ ಕನ್ನಡ ಹಾಗೂ ಆ ಮೂಲಕ ಮರಾಠಿ, ಗುಜುರಾತಿ, ಉರ್ದು, ತೆಲಗು ಅಚ್ಚು ಮೊಳೆಗಳ ಜನಕರಾಗಿ, ಕೌಶಲ್ಯ ಹಾಗೂ ತಾಂತ್ರಿಕ ನೈಪುಣ್ಯತೆಯನ್ನು ಮೆರೆದರೂ ಈ ಯಾವ ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿಗಳಲ್ಲಿ ಅಥವಾ ಮುದ್ರಣ ತಂತ್ರಜ್ಞಾನದಲ್ಲಿ ಅನಂತಾಚಾರಿ ಅವರ ಕುರಿತು ದಾಕಲಾತಿಯಾಗಲೀ ಗಂಭೀರ ಚರ್ಚೆಗಳಾಗಲೀ ನಡೆಯದಿರುವುದು ಖೇದವೆನಿಸುತ್ತದೆ.

Scanned with CamScanner

ಕನ್ನಡ ವ್ಯಾಸಂಗ-10

Scanned with CamScanner

HASTAPRATI VYAASANGA - 20

Edited by
Dr. Veeresh Badiger
Professor
Dept. of Manuscriptology
Kannada University, Hampi
Vidyaranya 583 276

Published by
Dr. H.D. Prashanth
Director, Prasaranga
Kannada University, Hampi
Vidyaranya 583 276

Pages: 16 + ೨೩೪ Price: 220/-

www.kannadauniversity.org

First Impression: 2020

ISBN

© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೨೦

ಬೆಲೆ: ರೂ. ೨೨೦/-

ಮುಖಪುಟ: ಕೆ.ಕೆ. ಮಕಾಳಿ

ಅಕ್ಷರ ಸಂಯೋಜನೆ
ಗೌತಮಿ ಗ್ರಾಫಿಕ್ಸ್, ಕಮಲಾಪುರ

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ: ೦೮೦-೨೨೩೭೨೩೮೮

ಮುದ್ರಣ
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

ಪರಿವಿಡಿ

ಕನ್ನಡವು ಕನ್ನಡವ ಕನ್ನಡಿಸುತಿರಬೇಕು / 3
ಮುಖ್ಯಸ್ಥರ ಮಾತು / 6
ಸಂಪಾದಕರ ಮಾತು / 10

ಭಾಗ : ಒಂದು / ೧
ಉದ್ಘಾಟನಾ ಸಮಾರಂಭ

೧. ಕನ್ನಡ ಹಸ್ತಪ್ರತಿಶಾಸ್ತ್ರ ಪರಿಚಯ / ೩
ಡಾ.ಎಸ್.ಡಿ. ಶೆಟ್ಟಿ

೨. ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಯ ಬಹುಮುಖ್ಯ ಕೇಂದ್ರ: ತೋಂಡೀತನ / ೨೦
ಡಾ. ಟಿ.ಎನ್. ನಾಗರತ್ನ

೩. ಹಸ್ತಪ್ರತಿಗಳು: ಕೂಡಿಕಟ್ಟಿದ ಜ್ಞಾನದ ಪ್ರತೀಕಗಳು / ೨೭
ಡಾ. ಸ.ಚಿ. ರಮೇಶ

೪. ಹಸ್ತಪ್ರತಿ ಸಮ್ಮೇಳನಗಳು ಪ್ರಾಚೀನ ಕಾವ್ಯ, ಶಾಸ್ತ್ರ, ಗ್ರಂಥಗಳ ಅಧ್ಯಯನಾಸಕ್ತಿಗೆ ಪ್ರೇರಕ / ೩೧
ಡಾ. ಎ. ಸುಬ್ಬಣ್ಣ ರೈ

೫. ಗ್ರಂಥಸಂಪಾದನೆಯಿಂದ ಗ್ರಂಥಾವತಾರಗಳೆಡೆಗೆ / ೩೪
ಪ್ರೊ. ವಿ. ಚಂದ್ರಶೇಖರ ನಂಗಲಿ

ಭಾಗ : ಎರಡು
ಡಾ. ಆರ್.ಸಿ. ಹಿರೇಮಠ ಅವರ ಜನ್ಮ ಶತಮಾನೋತ್ಸವ ಸಂಸ್ಮರಣೆ / ೪೩

೬. ಡಾ.ಆರ್.ಸಿ. ಹಿರೇಮಠ ಅವರ ಜೀವನ ಮತ್ತು ಸಾಧನೆ / ೪೫
ಡಾ. ಧನವಂತ ಹಾಜವಗೋಳ

೭. ಡಾ.ಆರ್.ಸಿ. ಹಿರೇಮಠ ಅವರ ಕಾವ್ಯಸಂಪಾದನೆ / ೫೮
ಡಾ. ಎಫ್.ಟಿ. ಹಳ್ಳಿಕೇರಿ

Scanned with CamScanner

೮. ಡಾ.ಆರ್.ಸಿ. ಹಿರೇಮಠ ಅವರ ವಚನ ಸಾಹಿತ್ಯ ಸಂಪಾದನೆ / ೬೬
ಡಾ.ಕೆ. ರವೀಂದ್ರನಾಥ
೯. ಉರಿವುಂಡ ಜಂಗಮ ಸಂಶೋಧಕ: ಡಾ.ಆರ್.ಸಿ.ಹಿರೇಮಠ / ೭೩
ಡಾ. ಪಂಡಿತ ರಾಠೋಡ
೧೦. ಡಾ.ಆರ್.ಸಿ. ಹಿರೇಮಠ ಅವರ ಭಾಷಾಶಾಸ್ತ್ರ ಅಧ್ಯಯನ / ೮೬
ಡಾ. ಎಸ್.ಎಸ್. ಅಂಗಡಿ
೧೧. ಡಾ.ಆರ್.ಸಿ. ಹಿರೇಮಠ ಅವರ ಸೃಜನಶೀಲ ಸಾಹಿತ್ಯ / ೯೫
ಡಾ.ರಮೇಶ ಕಲ್ಲನಗೌಡರ
೧೨. ಡಾ.ಆರ್.ಸಿ. ಹಿರೇಮಠ ಅವರ ಆತ್ಮಚರಿತ್ರೆ ಮತ್ತು ಜೀವನಚರಿತ್ರೆ / ೧೦೭
ಡಾ. ಅಶೋಕ ನರೋಡೆ
೧೩. ಡಾ.ಆರ್.ಸಿ. ಹಿರೇಮಠ ಅವರ ವಿಮರ್ಶೆ ಮತ್ತು ಅನುವಾದ / ೧೨೧
ಡಾ. ಎಸ್.ಆರ್. ಚನ್ನವೀರಪ್ಪ

ಭಾಗ : ಮೂರು
ವಿಶೇಷ ಉಪನ್ಯಾಸ / ೧೩೧
೧೪. ಡಾ.ಟಿ.ಎನ್. ನಾಗರತ್ನ ಅವರ ಗ್ರಂಥಸಂಪಾದನಾ ವೈಧಾನಿಕತೆ / ೧೩೩
ಡಾ. ವೀರೇಶ ಬಡಿಗೇರ
೧೫. ಮಾನವೀಯ ಗುಣಗಳ ಆಗರ / ೧೫೪
ಡಾ. ಅಕ್ಕಮಹಾದೇವಿ

ಭಾಗ : ನಾಲ್ಕು
ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಇತ್ತೀಚಿನ ಒಲವುಗಳು / ೧೫೯
೧೬. ತಿಂತಿಣಿ ಮೌನೇಶ್ವರರ ಸಂಪಾದನೆಯ ವೈಧಾನಿಕತೆ / ೧೬೧
ಡಾ. ಲಕ್ಷ್ಮೀಕಾಂತ ಸಿ. ಪಾಂಚಾಳ
೧೭. ಜಲಶಾಸ್ತ್ರದ ಹಸ್ತಪ್ರತಿಗಳ ಓದಿನ ವಿಧಾನ / ೧೬೮
ಚಂದ್ರಶೇಖರ ಕಾಳಣ್ಣವರ
೧೮. ಸಾಂಪ್ರದಾಯಿಕ ಗ್ರಂಥಸಂಪಾದನೆಯ ಇತಿಮಿತಿಗಳು / ೧೭೩
ಆರ್. ಪ್ರವೀಣ್
೧೯. ಹಸ್ತಪ್ರತಿಗಳ ಸಾಂಸ್ಕೃತಿಕ ಓದು / ೧೭೯
ವಿಶ್ವನಾಥ ಎಸ್. ಪತ್ತಾರ
೨೦. ಹಸ್ತಪ್ರತಿಗಳ ಸಂರಕ್ಷಣೆ: ರಾಸಾಯನಿಕಗಳ ಬಳಕೆ / ೧೮೫
ಡಾ. ಕೆ.ಆರ್. ಕೇಶವಮೂರ್ತಿ

೨೧. ಹಸ್ತಪ್ರತಿಗಳ ಓದು: ಇತ್ತೀಚಿನ ಒಲವುಗಳು / ೧೯೩
ಡಾ. ಪ್ರಭುಸ್ವಾಮಿ ಎಸ್.
೨೨. ವಚನ ಸಾಹಿತ್ಯ ಸಂಪಾದನೆ : ಭಿನ್ನನೋಟ / ೧೯೮
ಡಾ. ಗಾಯಿತ್ರಿ ಟಿ.
೨೩. ಕನ್ನಡ ಗ್ರಂಥಸಂಪಾದನೆ: ಮಹಿಳಾ ಸಂವೇದನೆ / ೨೦೫
ಡಾ. ಗೀತಾ ಸಿ.
೨೪. ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ: ಇಂದಿನ ಒಲವುಗಳು / ೨೧೩
ರಾಜು ಕೂಡಗಿ
೨೫. 'ರಾಮಚಂದ್ರಚರಿತಪುರಾಣಂ' ಚಂಪೂಕಾವ್ಯದ
ಗ್ರಂಥಸಂಪಾದನ ಕಾರ್ಯ / ೨೧೬
ಚಿದಾನಂದ ಮಾಸನಕಟ್ಟಿ
೨೬. ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ: ಇಂದಿನ ಒಲವುಗಳು / ೨೨೫
ಡಾ. ವೆಂಕಟಗಿರಿ ದಳವಾಯಿ
ಲೇಖಕರ ವಿಳಾಸಗಳು / ೨೩೧

Scanned with CamScanner

ಇಲ್ಲಿನೇ ಪುಟ ಖಾಲಿ ಬಿಡಿ

Scanned with CamScanner

೧೪

ಡಾ. ಟಿ.ಎನ್. ನಾಗರತ್ನ ಅವರ ಗ್ರಂಥಸಂಪಾದನಾ ವೈಧಾನಿಕತೆ

ಡಾ. ವೀರೇಶ ಬಡಿಗೇರ

ಭಾರತೀಯ ಅಥವಾ ಕನ್ನಡ ಗ್ರಂಥಸಂಪಾದನೆಯನ್ನು ಒಂದು ಸ್ವಯಂಪೂರ್ಣ ಜ್ಞಾನಶಿಸ್ತನ್ನಾಗಿ ಏಕಘನಾಕೃತಿಯಲ್ಲಿ ಗ್ರಹಿಸುತ್ತ ಬರಲಾಗಿದೆ. ಸಾಹಿತ್ಯ, ಚರಿತ್ರೆ ಮತ್ತು ಸಮಾಜ ವಿಜ್ಞಾನಗಳಲ್ಲಿ ರೂಢಿಗೊಂಡ ಈ ಬಗೆಯ ಏಕರೂಪೀ ಪರಿಕಲ್ಪನೆಗಳು ಗ್ರಂಥಸಂಪಾದನ ಶಿಸ್ತನ್ನು ಗಾಢವಾಗಿ ಪ್ರಭಾವಿಸಿವೆ. ಇಂತಹ ಅಧ್ಯಯನ ವಿಧಾನಗಳು ಮೂಲ, ಶುದ್ಧ, ಪ್ರಮಾಣಿತ, ವಂಶಾವಳಿ, ಅಧಿಕೃತ ಎನ್ನುವ ಪಿತೃಪ್ರಧಾನ ಮತ್ತು ಶ್ರೇಣೀಕೃತ ಚಿಂತನೆಗಳನ್ನು ರೂಪಿಸಿದವು. ಈ ಚಿಂತನಾಕ್ರಮವು ಲಿಖಿತ ರೂಪವೊಂದನ್ನು ಸ್ಥಿರ ಮತ್ತು ಶುದ್ಧ ಸಾಹಿತ್ಯವೆಂದು ನಂಬಿತ್ತು ಹಾಗೂ ನಂಬಿಸಿದ್ದವು. ಸಹಜವಾಗಿ ಈ ದೃಷ್ಟಿಕೋನವು ಲಿಖಿತ ಪರಂಪರೆಯಿಂದ ಹೊರಗಿದ್ದ ಹಾಗೂ ಮೌಖಿಕ ಪರಂಪರೆಯನ್ನೇ ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ ಆಶ್ರಯಿಸಿದ್ದ ತೋಂಡಿ ಪರಂಪರೆಗಳಲ್ಲಿ ಕೀಳರಿಮೆಯನ್ನು ಹುಟ್ಟಿಸಿತು.

"ಹತ್ತೆಂಟು ನುಡಿಗೋಳ ನೆನಪಿಟ್ಟು ಕಲಿಸ್ಯಾಳ ಪಕ್ಕದ ಮನಿ ಹರದಿ ಅಕ್ಕ ಲಕ್ಕವ್ವ" ಎನ್ನುವ ಹೆಣ್ಣಿನ ತೋಂಡಿ ರೂಪದ ಹಾಡಿನ ಕ್ರಮವು, 'ಕೂಡಿ ಕಲಿಯುವ' ಸಾಮೂಹಿಕ ಗುಣ ಹೊಂದಿತ್ತು. ಸಕಲವನ್ನು ಒಳಗೊಳ್ಳುವ ಹೆಣ್ಣಿನ ಹಾಡು ಮತ್ತು ಅಭಿವ್ಯಕ್ತಿಯು ಒಂದು ರೀತಿ ಅವಳ ಸ್ವಂತಿಕೆಯ ಹುಡುಕಾಟವೂ ಆಗಿತ್ತು. ಲಿಪಿ ಪ್ರಧಾನವಾದ ಪಿತೃಸಂಸ್ಕೃತಿ ಹೆಣ್ಣಿನ ಅನುಭವ ಲೋಕವನ್ನು ಅನುಮಾನದಿಂದ ನೋಡುತ್ತದೆ.

ವಿ.ಸೂ: ಸಮ್ಮೇಳನಾಧ್ಯಕ್ಷರ ಬದುಕು ಬರಹ ಕುರಿತ ವಿಶೇಷ ಉಪನ್ಯಾಸ

ಗಂಡಿನ ಅನುಭವವನ್ನು ಅದರಲ್ಲಿಯೂ ಅಕ್ಷರವನ್ನು ಅಧಿಕೃತವೆಂದು ಸ್ವೀಕರಿಸುತ್ತದೆ. 'ಪಿತೃಪ್ರಣೀತವಾದ ವಿದ್ವತ್‌ಲೋಕವು ಹೆಣ್ಣಿನ ಕೆಂಡದಂತಹ ಅನುಭವವನ್ನು ಕಂಡು ಕಾಣದಂತೆ ನಟಿಸಿ ಅಥವಾ ಗ್ರಹಿಸುವುದರಲ್ಲಿ ಸೋತೋ ಒಟ್ಟಿನಲ್ಲಿ ಮಹಿಳೆಯ ಬದುಕು ಮತ್ತು ಅಭಿವ್ಯಕ್ತಿಯ ರೂಪಗಳನ್ನು ಉಪೇಕ್ಷಿಸುತ್ತ ಬೀಗುತ್ತ ಬಂದಿದೆ'[೧] ಎಂಬುದನ್ನು ವಿಮರ್ಶಕಿ ಡಾ.ಎಂ.ಎಸ್.ಆಶಾದೇವಿ ಅವರು ಸ್ಪಷ್ಟವಾಗಿ ಗುರುತಿಸುತ್ತಾರೆ.

ಇದಕ್ಕೆ ಕಳಸವಿಟ್ಟಂತೆ ಶಾಸ್ತ್ರ ಕ್ಷೇತ್ರವು ಘನ ಪಾಂಡಿತ್ಯದ ಕ್ಷೇತ್ರ. ಅದು ಸಾಮಾನ್ಯರಿಗೆ ನಿಲುಕಲಾರದು ಎನ್ನುವ ರೂಢಿಗತ ಊಹಾಚಿಗಳು ಪ್ರಚಿದ್ಧಿಗೆ ಬಂದವು. ಉದಾಹರಣೆಗೆ 'ಗ್ರಂಥಸಂಪಾದಕನಿಗೆ ಕೆಲವು ಅರ್ಹತೆಗಳಿರಬೇಕಾಗುತ್ತದೆ. ಪ್ರಾಚೀನ ಕನ್ನಡ ಲಿಪಿಯ ಜ್ಞಾನ, ಸಾಹಿತ್ಯದ ಪರಿಚಯ, ಛಂದಸ್ಸಿನ ಅರಿವು, ಪಾಂಡಿತ್ಯದ ಬೆಂಬಲ, ಪ್ರತಿಭೆಯ ಬೆಳಕು ಬೇಕಾಗುತ್ತದೆ. ಇವೆಲ್ಲವನ್ನೂ ಕ್ರಮಿಸಿ ಒಂದು ಪ್ರಾಚೀನ ಕೃತಿಯನ್ನು ಪರಿಷ್ಕರಿಸಿ ಮುದ್ರಣಕ್ಕೆ ಸಿದ್ಧಪಡಿಸಿದರೆ ಪ್ರಕಟಣೆಯ ಸಮಸ್ಯೆ ಎದುರಾಗುತ್ತದೆ...'.[೨] ಈ ಮಾತು ಓರಿಯಂಟಲ್ ವಿದ್ವತ್ತಿನ ಪರಿಣಾಮಗಳಿಂದ ಹುಟ್ಟಿರುವಂಥದ್ದು. ದೇಸಿ ಮತ್ತು ಜಾನಪದ ಸಾಹಿತ್ಯ ಸಂಪಾದನೆಯಲ್ಲಿ ಓರಿಯಂಟಲ್ ವಿದ್ವತ್ತಿಗಿಂತ ತುಸು ಭಿನ್ನವಾಗಿ ಆಲೋಚಿಸುವ ಡಾ.ಟಿ.ಎನ್.ನಾಗರತ್ನ, ಡಾ.ವೈ.ಸಿ.ಭಾನುಮತಿ ಅವರ ಪಾಠಪರಿಷ್ಕರಣದ್ದ ಪರಿ ಹೊಸ ರೀತಿಯದು. ಡಾ.ಟಿ.ಎನ್. ನಾಗರತ್ನ ಅವರೆ 'ದಾಸಸಾಹಿತ್ಯ ಸಂಪಾದನೆ ಎನ್ನುವುದು ಸಮಸ್ಯೆಗಳ ಹುತ್ತ, ಮೌಖಿಕ ರೂಪದಲ್ಲಿ ಹರಿದು ಬಂದ ಇವುಗಳನ್ನು ಪರಿಷ್ಕರಿಸಲು ಕಾವ್ಯಶಾಸ್ತ್ರ ಸಂಪಾದನೆಗಿಂತ ಭಿನ್ನವಾದ ಶಾಸ್ತ್ರೀಯ ವಿಧಾನ ಅಗತ್ಯ' ಎನ್ನುವ ಸ್ಪಷ್ಟ ನಿಲುವು ತಾಳುತ್ತಾರೆ. ಈ ಇಬ್ಬರೂ ವಿದ್ವಾಂಸರೊಡನೆ ಮುಖತಃ ಚರ್ಚಿಸುವಾಗಲೂ ಅವರ ಧೋರಣೆಗಳಲ್ಲಿ ಈ ರೀತಿಯ ಒಂದು ಸ್ವಾಯತ್ತ ಹಾಗೂ ದೇಸಿಚಿಂತನೆಯ ನೆಲೆ ಇರುವುದನ್ನು ಗುರುತಿಸಿದ್ದೇನೆ. ಸಾಂಪ್ರದಾಯಿಕ ಸಂಪಾದನಾ ವಿಧಾನಕ್ಕಿಂತ ಭಿನ್ನ ಆಲೋಚನ ಕ್ರಮಗಳನ್ನು ವ್ಯಕ್ತಿಗತವಾಗಿ ಹೊಂದಿದ್ದಾಗಲೂ ಓರಿಯಂಟಲ್ ವಿದ್ವತ್ತಿನ ಸಂಪಾದನ ವಿಧಾನಗಳನ್ನು ಅನುಸರಿಸುವುದನ್ನು ಕಾಣುತ್ತೇವೆ. ಇದು ಈ ಇಬ್ಬರ ವಿದ್ವಾಂಸರ ಸಮಸ್ಯೆ ಮಾತ್ರವಲ್ಲ, ನನ್ನಂತವರ ಸಮಸ್ಯೆಯೂ ಆಗಿದೆ. ನಮ್ಮ ವೈಚಾರಿಕ ಆಲೋಚನೆಗಳು ಎಷ್ಟೇ ಭಿನ್ನ ಹಾಗೂ ತೀಕ್ಷ್ಣವಾಗಿದ್ದರೂ ನಾವು ತರಬೇತಿಗೊಂಡ ಶಾಸ್ತ್ರ ವಿಧಾನಗಳಲ್ಲಿಯೇ ಈ ಸಮಸ್ಯೆ ಇದೆ. ಈ ಹಿನ್ನೆಲೆಯಲ್ಲಿ ಡಾ.ಟಿ.ಎನ್.ನಾಗರತ್ನ ಅವರ ಗ್ರಂಥಸಂಪಾದನ ವೈಧಾನಿಕತೆಯ ಕುರಿತು ಒಂದಷ್ಟು ಚರ್ಚಿಸಲು ಇಲ್ಲಿ ಪ್ರಯತ್ನಿಸಿದ್ದೇನೆ.

ವಿದ್ವತ್ತಿನ ಹಿನ್ನೆಲೆ

ಡಾ.ಟಿ.ಎನ್.ನಾಗರತ್ನ ಅವರು ಮೇ ೨೯, ೧೯೪೫ರಂದು ಮಧ್ಯಪ್ರದೇಶದಲ್ಲಿ ಜನಿಸುತ್ತಾರೆ. ತಂದೆ ಟಿ.ನಾಗಶರ್ಮ, ತಾಯಿ ಹೊನ್ನುಡಿಕೆ ರಾಜಲಕ್ಷ್ಮಿ. ಇವರು ಬೆಳೆದದ್ದು ಶಿವಮೊಗ್ಗದಲ್ಲಿ. ಪದವಿ ವರೆಗಿನ ಶಿಕ್ಷಣವನ್ನು ಶಿವಮೊಗ್ಗದಲ್ಲಿಯೇ ಪಡೆದು

ಐಚ್ಛಿಕ ಕನ್ನಡದಲ್ಲಿ ಚಿನ್ನದ ಪದಕದೊಂದಿಗೆ ಪಾಸಾಗುತ್ತಾರೆ. ನಂತರ ೧೯೬೭ರಲ್ಲಿ ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಎಂ.ಎ. ಮಾಡಿ ಹುಮ್ಯಾನಿಟಿಸ್‌ನಲ್ಲಿ ಮೊದಲ ಸ್ಥಾನ ಪಡೆಯುತ್ತಾರೆ. ಅದಕ್ಕಾಗಿ ಮೊದಲ ಕುಲಪತಿಗಳ ಹೆಸರಿನಲ್ಲಿದ್ದ ಚಿನ್ನದ ಪದಕವನ್ನು ತಮ್ಮದಾಗಿಸಿಕೊಳ್ಳುತ್ತಾರೆ. ನಂತರ ಡಾ.ಜಿ.ವರದರಾಜರಾವ್ ಅವರ ಸಮರ್ಥ ಮಾರ್ಗದರ್ಶನದಲ್ಲಿ 'ಹರಿದಾಸರ ಭಕ್ತಿ ಸ್ವರೂಪ' ಎನ್ನುವ ವಿಷಯದಲ್ಲಿ ಪಿಎಚ್.ಡಿ. ಮಾಡಿ ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಸಾಹಿತ್ಯದಲ್ಲಿ ಡಾಕ್ಟರೇಟ್ ಪಡೆದ 'ಮೊದಲ ಮಹಿಳೆ' ಎನ್ನುವ ಗೌರವ ಪಡೆಯುತ್ತಾರೆ. ಹೆಣ್ಣು ಮಕ್ಕಳು ಮನೆಯಿಂದ ಹೊರಗೆ ಬರಲು ದುಸ್ಥರವಾಗಿದ್ದ ಹೊತ್ತಿನಲ್ಲಿ ಉನ್ನತ ಶಿಕ್ಷಣ ಪಡೆದ ಚಿನ್ನದ ಮಹಿಳೆ ಎಂಬುದರ ಜೊತೆಗೆ ಕನ್ನಡ ಅಧ್ಯಾಪಕಿಯಾಗಿಯೂ ಸಾರ್ಥಕ ಸೇವೆ ಸಲ್ಲಿಸುತ್ತಾರೆ.

೧೯೭೦ ರಿಂದ ತಮ್ಮ ವೃತ್ತಿ ಜೀವನವನ್ನು ಆರಂಭಿಸುತ್ತಾರೆ. ವಿಶೇಷವಾಗಿ ದಾಸರ ಕೀರ್ತನೆಗಳ ಸಂಗ್ರಹ, ಸಂಗೋಪನೆ, ಸಂಪಾದನೆ, ಪ್ರಕಟಣೆ ಹಾಗೂ ಪ್ರಸರಣ ಕೆಲಸಗಳಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡು ಅವು ಕನ್ನಡಿಗರಿಗೆ ಲಭ್ಯವಾಗುವಲ್ಲಿ ಗಂಧದಂತೆ ಜೀವ ತೇಯ್ದು ೨೦೦೩ರಲ್ಲಿ ನಿವೃತ್ತಿಯಾಗುತ್ತಾರೆ. ಕರ್ನಾಟಕ ಸರಕಾರದ ಸಮಗ್ರದಾಸ ಸಾಹಿತ್ಯ ಪ್ರಕಟಣಾ ಯೋಜನೆಯ ಕಾರ್ಯ ನಿರ್ವಾಹಕ ಸಂಪಾದಕರಾಗಿ ಹೊಣೆಗಾರಿಕೆಯನ್ನು ನಿಭಾಯಿಸಿದ ಹೆಮ್ಮೆ ಅವರದು. ಸರಕಾರಿ, ಅರೆಸರಕಾರಿ ಹಾಗೂ ಖಾಸಗಿ ಸಂಸ್ಥೆಯ ವಿವಿಧ ಸಮಿತಿಗಳ ಸದಸ್ಯರಾಗಿ ರಚನಾತ್ಮಕವಾಗಿ ದುಡಿದಿದ್ದಾರೆ. ಅವರ ಪರಿಶ್ರಮಕ್ಕೆ ನಾಡಿನ ಹಲವು ಪ್ರಶಸ್ತಿ ಗೌರವ, ಸನ್ಮಾನಗಳು ಲಭಿಸಿವೆ.

೧೯೮೦ ರಲ್ಲಿ 'ಶ್ರೀ ವಾದಿರಾಜರ ಕೃತಿಗಳು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 'ಉತ್ತಮ ಸಂಪಾದನ ಕೃತಿ' ಬಹುಮಾನ, ೨೦೦೯ನೇ ಸಾಲಿನ ಕರ್ನಾಟಕ ಸರಕಾರದ 'ಕನಕಶ್ರೀ' ಪ್ರಶಸ್ತಿ ಗೌರವ, ೨೦೧೪ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 'ಕನಕದಾಸರ ಕೀರ್ತನೆಗಳು' ಕೃತಿಗೆ (ಪಂಡಿತ ಆವೃತ್ತಿ) ಅತ್ಯುತ್ತಮ ಸಂಪಾದಿತ ಕೃತಿ ಪ್ರಶಸ್ತಿ ಸಂಧಿರುವುದು ಅವರ ವಿದ್ವತ್ತಿಗೆ ಸಿಕ್ಕ ಮನ್ನಣೆಗಳಾಗಿವೆ.

ಔಪಚಾರಿಕ ಶಿಕ್ಷಣ ಪಡೆಯುವುದರಲ್ಲಿ ಚಾರಿತ್ರಿಕ ಹೆಜ್ಜೆಗಳನ್ನು ಮೂಡಿಸಿದಂತೆ ಕನ್ನಡ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯಲ್ಲಿಯೂ ಡಾ.ಟಿ.ಎನ್.ನಾಗರತ್ನ ಅವರು ಹೊಸ ಮೈಲುಗಲ್ಲು ನೆಟ್ಟಿದ್ದಾರೆ. ೧೮೭೨ ರಲ್ಲಿ ಕಿಟೆಲ್‌ರಿಂದ ಆರಂಭವಾದ ಕನ್ನಡ ಗ್ರಂಥಸಂಪಾದನೆಯ ಇತಿಹಾಸದಲ್ಲಿ ೧೯೪೦ರ ವರೆಗೂ ಅಂದರೆ ಸುಮಾರು ಎಪ್ಪತ್ತು ವರ್ಷ ಒಬ್ಬರೂ ಮಹಿಳಾ ಗ್ರಂಥಸಂಪಾದನಕಾರರು ಸಿಗುವುದಿಲ್ಲ. ೧೯೪೦ ರಲ್ಲಿ ಮೊದಲಬಾರಿಗೆ ಡಿ. ಚಂಪಾಬಾಯಿ ಅವರು ಮೈಸೂರು ವಿಶ್ವವಿದ್ಯಾನಿಲಯದ ಹದಿನಾಲ್ಕನೆಯ ಪ್ರಕಟಣೆಯಾಗಿ ಹದಿಬದೆಯಧರ್ಮ ಕೃತಿಯನ್ನು ಪರಿಷ್ಕರಿಸಿ

Scanned with CamScanner

ಪ್ರಕಟಿಸುತ್ತಾರೆ. ನಾವೇನಾದರೂ ಮಹಿಳಾ ಗ್ರಂಥಸಂಪಾದನ ಇತಿಹಾಸ ಬರೆಯ ಹೊರಟರೆ ಅದರ ಚರಿತ್ರೆ ಪ್ರಾರಂಭವಾಗುವುದೇ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ. ಅದರಲ್ಲಿ ಮೊದಲು ದಾಖಲಾಗುವ ಹೆಸರುಗಳೇ ನನ್ನ ಪ್ರಕಾರ ಡಿ.ಚಂಪಾಬಾಯಿ, ಡಾ.ವೈ.ಸಿ.ಭಾನುಮತಿ ಮತ್ತು ಡಾ.ಟಿ.ಎನ್.ನಾಗರತ್ನ ಅವರದು.

ಡಾ.ಟಿ.ಎನ್.ನಾಗರತ್ನ ಅವರ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಕೆಲಸಗಳ ಕುರಿತು ಮಾತನಾಡುವುದೆಂದರೆ ನನ್ನ ಪ್ರಕಾರ ಕನ್ನಡ ಮಹಿಳಾ ಶಾಸ್ತ್ರಜ್ಞಾನದ ಸ್ವರೂಪವನ್ನು ಅರಿತುಕೊಳ್ಳುವ ಕ್ರಿಯೆಯಾಗಿದೆ. ಕನ್ನಡದ ಜ್ಞಾನ ಸ್ವರೂಪ ಎನ್ನುವುದು 'ಅಕ್ಷರಜನ್ಯ' ಎನ್ನುವುದಕ್ಕಿಂತ ಅನುಭವಜನ್ಯವಾದದ್ದು. 'ಕುರಿತೋದದೆಯಂ ಕಾವ್ಯಪ್ರಯೋಗ ಪರಿಣತಮತಿಗಳ್ (ಕವಿರಾಜಮಾರ್ಗ) 'ಆನು ಒಲಿದಂತೆ ಹಾಡುವೆ' (ಬಸವಣ್ಣ) 'ನೀರಿಳಿಯದ ಗಂಟಲಲ್ಲಿ ಕಡುಬು ತುರಿಕಿದಂತೆ'(ಮುದ್ದಣ) ಎನ್ನುವಲ್ಲಿ ಗ್ರಾಂಥಿಕ ಸ್ವರೂಪಕ್ಕಿಂತ ಭಿನ್ನವಾದ, ಜ್ಞಾನದ ಸೊಬಗನ್ನು ಕಾಣುತ್ತೇವೆ. ಕವಿರಾಜ ಮಾರ್ಗಕಾರನಿಂದ ಕಂಬಾರರ ವರೆಗೂ ಮಾರ್ಗ ಮತ್ತು ದೇಸಿ ಪ್ರಜ್ಞೆಯ ಹೊಕ್ಕು ಬಳಕೆಯನ್ನು ಕಾಣುತ್ತೇವೆ. ವಚನ, ರಗಳೆ, ಷಟ್ಪದಿ, ತ್ರಿಪದಿ, ಸ್ವಾಗತ್ಯ, ಕೀರ್ತನೆ; ತತ್ವಪದ ಇವೆಲ್ಲವೂ ಅಕ್ಷರ ಸಂಸ್ಕೃತಿಗಿಂತ ಭಿನ್ನವಾದ ಜ್ಞಾನ ರೂಪಗಳು. ಇಂತಹ ಅನೌಪಚಾರಿಕ ಜ್ಞಾನ ಪರಂಪರೆಯ ಸಂಗ್ರಹ, ಸಂಗೋಪನೆ, ಸಂಪಾದನೆ, ಪ್ರಕಟಣೆ, ಪ್ರಸರಣ ಕಾರ್ಯವನ್ನು ಬದುಕಿನುದ್ದಕ್ಕೂ ಮಾಡಿದವರು ನಮ್ಮ ಇಂದಿನ ಹದಿನಾರನೆಯ ಹಸ್ತಪ್ರತಿ ಸಮ್ಮೇಳನದ ಸರ್ವಾಧ್ಯಕ್ಷರಾದ ಶ್ರೀಮತಿ ಡಾ. ಟಿ.ಎನ್.ನಾಗರತ್ನ ಅವರು.

೧೯೭೭ರಿಂದ ೨೦೨೦ರ ವರೆಗೆ ಇಪ್ಪತ್ತೈದಕ್ಕೂ ಹೆಚ್ಚು ವಿದ್ವತ್ಪೂರ್ಣ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ.

೧. ದಾಸ ಸಾಹಿತ್ಯ ಸಂಪಾದನೆ, ಪಂಡಿತ ಮತ್ತು ಜನಪ್ರಿಯ ಆವೃತ್ತಿಗಳು
೨. ದಾಸರ ಜೀವನ ಕೃತಿಗಳು
೩. ಮಕ್ಕಳ ಸಾಹಿತ್ಯ
೪. ವ್ಯಕ್ತಿ ಚಿತ್ರಣ
೫. ಬಿಡಿ ಲೇಖನಗಳು

ಇದರಲ್ಲಿ ಹೆಚ್ಚಿನ ಕೆಲಸಗಳು ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿವೆ.

೧. ಶ್ರೀ ಗೋಪಾಲದಾಸರ ಕೃತಿಗಳು: ಬಾಲ್ಯದಲ್ಲಿ ಭಾಗಣ್ಣನಾಗಿದ್ದ ಹುಡುಗ ವಿಜಯದಾಸರ ಸಂಪರ್ಕದಿಂದ ಗೋಪಾಲದಾಸರೆಂಬ ಅನ್ವರ್ಥನಾಮ ಪಡೆದು ಗೋಪಾಲವಿಠಲ ಎಂಬ ಅಂಕಿತದಲ್ಲಿ ಕೃತಿರಚನೆ ಮಾಡಿದ್ದಾರೆ. ಕೀರ್ತನೆ, ಸುಳಾದಿ, ಉಗಾಭೋಗ, ಹೀಗೆ ಮೂರು ಪ್ರಕಾರಗಳಲ್ಲಿಯೂ ತಮ್ಮ ಭಕ್ತಿಯ ಅಭಿವ್ಯಕ್ತಿಗಳನ್ನು ರಚಿಸಿದ್ದಾರೆ. ಉಗಾಭೋಗಗಳಿಗಿಂತ ಸುಳಾದಿಗಳ ಮೂಲಕ ತತ್ತ್ವಪ್ರತಿಪಾದನೆ ಮಾಡಿದ್ದು

ಗೋಪಾಲದಾಸರ ವಿಶೇಷತೆಯಾಗಿದೆ. ಈ ಕೃತಿಯನ್ನು ಪಂಡಿತ ಆವೃತ್ತಿಯಾಗಿ ೧೯೭೭ರಲ್ಲಿ ಜನಪ್ರಿಯ ಆವೃತ್ತಿಯಾಗಿ ೧೯೮೭ರಲ್ಲಿ ಪರಿಷ್ಕರಿಸಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟ ಮಾಡಿದ್ದಾರೆ. ಬಹು ಮುಖ್ಯವಾಗಿ ಗೋಪಾಲದಾಸರು ತಮ್ಮ ತತ್ತ್ವಪ್ರತಿಪಾದನೆಗಾಗಿ ಉಗಾಭೋಗ, ಕೀರ್ತನೆ, ಸುಳಾದಿಯಂತಹ ಗೇಯ ಮಟ್ಟುಗಳನ್ನು ಬಳಸಿಕೊಂಡಿರುವುದರ ಔಚಿತ್ಯ ಹಾಗೂ ಅವರ ಪ್ರಗತಿಪರ ನಿಲುವುಗಳ ಕುರಿತು ಸಂಪಾದಕರು ಗಂಭೀರವಾಗಿ ಚರ್ಚಿಸುತ್ತಾರೆ. ಮಧ್ವ ಮತದ ಸಿದ್ಧಾಂತಗಳನ್ನು ಬೋಧಿಸುವ ಹಾಗೂ ಅನ್ಯಮತ ಖಂಡನೆ ಮಾಡುವ ಕೀರ್ತನೆಗಳು ಗೋಪಾಲದಾಸರ ರಚನೆಯಲ್ಲಿರುವುದನ್ನು ಗುರುತಿಸಿದ್ದಾರೆ.

ಕನ್ನಡ ಅನುಭಾವ ಸಾಹಿತ್ಯದಲ್ಲಿ ಪ್ರಮುಖವಾಗಿ ಚರ್ಚಿತವಾದ ವಿಚಾರಗಳೆಂದರೆ ಸನ್ಯಾಸ ಮತ್ತು ಸಂಸಾರ. ಸನ್ಯಾಸಿಯಾದವನಿಗೆ ಸಂಸಾರ ನಿಷಿದ್ಧ. ಸಾಧಕನಿಗೆ ಸಂಸಾರ, ಅದರಲ್ಲಿಯೂ ಹೆಣ್ಣು ಅಡ್ಡಿ ಎಂದೇ ಭಾವಿಸಲಾಗಿತ್ತು. ಜೇಡರ ದಾಸಿಮಯ್ಯ ಅಲ್ಲಮ, ಸಿದ್ಧರಾಮ, ಉರಿಲಿಂಗಪೆದ್ದಿ, ಗೊಗ್ಗವ್ವೆ ಇವರೆಲ್ಲರೂ ಇಂತಹ ರೂಢಿಗತ ನಿಲುವುಗಳನ್ನು ಅಲ್ಲಗಳೆಯುತ್ತಾರೆ. ಅಷ್ಟೇ ಅಲ್ಲ ಹೆಣ್ಣನ್ನು ತಟಸ್ಥ ಆಕೃತಿಗಳಲ್ಲಿ ಕಟ್ಟಿಹಾಕುವ ನೆಲೆಗಳನ್ನು ಕಟುವಾಗಿ ಖಂಡಿಸುತ್ತಾರೆ. ಹೆಣ್ಣಿನ ಸ್ವಾಯತ್ತ ಮತ್ತು ಸ್ವತಂತ್ರ ಅಸ್ತಿತ್ವದ ಬಗ್ಗೆ ಮೊದಲಬಾರಿಗೆ ಧ್ವನಿ ಎತ್ತುತ್ತಾರೆ.

ಡಾ.ಟಿ.ಎನ್.ನಾಗರತ್ನ ಅವರು ಗೋಪಾಲದಾಸರ ಕೀರ್ತನೆಗಳ ಓದಿನ ಮೂಲಕ ಇಂತಹದೊಂದು ಭಿನ್ನ ಧ್ವನಿಯನ್ನು ಎತ್ತುತ್ತಾರೆ. 'ನೀರಮಡುವಿನೊಳು ಮುಳುಗಿ ಗಡಗಡ ನಡುಗುವುದೇ ಮಡಿಯಲ್ಲ, ಹರಿಸರ್ವೋತ್ತಮನೆಂದು ನಂಬಿ ಬದುಕುವುದೇ ಮಡಿ', 'ನಾರಿ ಧಾರುಣಿ ಧನ, ದ್ರವ್ಯಾದಿಗಳನ್ನು ತ್ಯಜಿಸುವುದೇ ನಿಜವಾದ ವೈರಾಗ್ಯವಲ್ಲ, ಇರುವುದನ್ನು ತೃಪ್ತಿಯಿಂದ ಅನುಭವಿಸಿ ಇಲ್ಲದುದಕ್ಕೆ ಆಶೆಪಡದಿರುವುದೆ ನಿಜವಾದ ವೈರಾಗ್ಯ' (xvii) ಎನ್ನುವ ಗೋಪಾಲದಾಸರ ವೈಚಾರಿಕ ನಿಲುವನ್ನು ಡಾ.ನಾಗರತ್ನ ಅವರು ಮಡಿ ಸುಳಾದಿ ಮತ್ತು ವೈರಾಗ್ಯ ಸುಳಾದಿಗಳ ಮೂಲಕ ಬಹಳ ಸೂಕ್ಷ್ಮವಾಗಿ ಗುರುತಿಸಿದ್ದಾರೆ. ಅಂದರೆ ದಾಸ ಸಾಹಿತ್ಯದ ಸಾಂಪ್ರದಾಯಿಕ ಹರಿವಿನಲ್ಲಿಯೂ ಹೆಣ್ಣು ಹಾಗೂ ವೈರಾಗ್ಯ ಕುರಿತು ಉಲ್ಲೇಖವಾಗಿದ್ದ ಪ್ರಗತಿಪರ ಎಳೆಗಳನ್ನು ಮರುಶೋಧಿಸುವ ಮತ್ತು ಅದನ್ನು ವೈಚಾರಿಕವಾಗಿ ಕಟ್ಟಿಕೊಳ್ಳುವ ವಿಧಾನವನ್ನು ಅನುಸರಿಸುತ್ತಾರೆ.

ಶ್ರೀ ಗೋಪಾಲದಾಸರ ೧೭೮ ರಚನೆಗಳನ್ನು ಪ್ರಸ್ತುತ ಕೃತಿಯಲ್ಲಿ ಸಂಗ್ರಹಿಸಿದ್ದಾರೆ. ೮೭ ಕೀರ್ತನೆಗಳು, ೭೧ ಸುಳಾದಿಗಳು ೨೦ ಉಗಾಭೋಗಗಳು ಈ ಪರಿಷ್ಕರಣದಲ್ಲಿ ಇವೆ. ೮೨ ಕೃತಿಗಳು ಎರಡಕ್ಕಿಂತ ಹೆಚ್ಚು ಆಕರಗಳಲ್ಲಿ ಸಿಗುವುದರಿಂದ ಅವನ್ನು ನಿಜ ಕೀರ್ತನೆಗಳೆಂದು ಪರಿಗಣಿಸುತ್ತಾರೆ. ಉಳಿದ ೯೪ ಕೃತಿಗಳು ಏಕೈಕ ಆಕರಗಳಲ್ಲಿ ದೊರೆತಿದ್ದರಿಂದ ಅವುಗಳನ್ನೇ ಒಂದು ಪ್ರತ್ಯೇಕ ವರ್ಗವಾಗಿ ಕೊಟ್ಟಿದ್ದಾರೆ. ಅಂಕಿತ ಸಂದಿಗ್ಧವಿದ್ದ ಎರಡು ರಚನೆಗಳನ್ನು ಅನುಬಂಧ-೧ ರಲ್ಲಿ ಕೊಟ್ಟಿದ್ದಾರೆ. ದಾಸ ಸಾಹಿತ್ಯ

Scanned with CamScanner

ಮಾಲೆಯ ಮೊದಲ ಪ್ರಕಟಣೆಯಾದ ಶ್ರೀಪಾದರಾಜರ ಕೃತಿ ಪರಿಷ್ಕರಣೆಗೆ ಡಾ.ಜಿ.ವರದ ರಾಜರಾವ್ ಅವರು ಅನುಸರಿಸಿದ ಸಂಪಾದನ ಮಾದರಿಯನ್ನೇ ಅನುಸರಿಸಿದ್ದಾರೆ.(xix)

ಆತ್ಮಶೋಧ, ಭಗವಂತನ ಆರಾಧನೆ, ದ್ವೈತಮತ ತತ್ತ್ವಪ್ರತಿಪಾದನೆ ಹಾಗೂ ಉಪದೇಶವಾಣಿ ಎನ್ನುವ ಉಪಶೀರ್ಷಿಕೆಗಳಲ್ಲಿ ಗೋಪಾಲದಾಸರ ಕೀರ್ತನೆಗಳನ್ನು ಎಂಗಡಿಸಿದ್ದಾರೆ. ವಿದ್ವತ್ಪೂರ್ಣ ಪ್ರಸ್ತಾವನೆಯೊಂದಿಗೆ ಅನುಬಂಧದಲ್ಲಿ ಅಪ್ಪು ಪದ್ಯಗಳಿಗೆ ಲಘು ಟಿಪ್ಪಣಿ ಬರೆದಿದ್ದಾರೆ; ಕಠಿಣ ಪದಗಳ ಅರ್ಥ ನೀಡಿದ್ದಾರೆ. ಮೂಲ ಆಕರ ಗಳೊಂದಿಗೆ ಮುದ್ರಿತ ಪ್ರತಿಗಳನ್ನೂ ಪಾಠಾಂತರ ನಿಷ್ಕರ್ಷಕ್ಕೆ ಉಪಯೋಗಿಸಿದ್ದಾರೆ. ರಾಗ, ತಾಳ, ಅಂಕಿತನಾಮ ಹಾಗೂ ಶಬ್ದಸೂಚಿ ನೀಡಿದ್ದಾರೆ. ದಾಸಸಾಹಿತ್ಯದ ಅಭ್ಯಾಸಿಗಳಿಗೆ ಇದೊಂದು ಕೈದೀವಿಗೆಯಾಗಿದೆ.

೨. **ಹರಪನಹಳ್ಳಿ ಭೀಮವ್ವನ ಹಾಡುಗಳು:** ಹೆಣ್ಣಿನ ಮಾತು, ಹಾಡು, ಪಾಡು ಹಾಗೂ ಬರಹದ ಚರಿತ್ರೆ ಎಂದರೆ ಹೆಣ್ಣು ಕಣ್ಣಿನ ಮೂಲಕ ಅನ್ಯವನ್ನು ಅನನ್ಯವಾಗಿ ನೋಡುವ ಪ್ರಕ್ರಿಯೆಯಾಗಿದೆ. ಈ ಅರ್ಥದಲ್ಲಿ ಹರಪನಹಳ್ಳಿ ಭೀಮವ್ವನ ಹಾಡುಗಳಲ್ಲಿ ಹಿಂದಿನ ಚರಿತ್ರೆ ಮತ್ತು ಪುರಾಣಗಳು ರೂಪಾಂತರ, ಮರುರೂಪಾಂತರ ಹೊಂದಿದ್ದನ್ನು ಕಾಣಬಹುದು. ಅನುಸರಣೆಗಿಂತ ಹೊಸ ಕೃಷಿಯನ್ನೇ ಭೀಮವ್ವನ ಅಭಿವ್ಯಕ್ತಿಯ ರೂಪಗಳಲ್ಲಿ ಕಾಣುತ್ತೇವೆ. ತನ್ನ ಕಣ್ಣ ಮುಂದಿನ ವಾಸ್ತವಗಳೊಂದಿಗೆ ತನ್ನನ್ನೇ ತಾನು ಕಟ್ಟಿಕೊಳ್ಳುವ ಮತ್ತು ತನ್ನನ್ನೆ ತಾನು ಶೋಧಿಸಿಕೊಳ್ಳುವುದು ಹೆಣ್ಣಿಗೆ ಸಾಧ್ಯವಾಗಿದ್ದು ಹಾಡಿನ ಸ್ವಾತಂತ್ರ್ಯದಿಂದ.

ಭೀಮವ್ವನ ಹಾಡುಗಳ ಬಗ್ಗೆ ಪಸ್ತಾವನೆ ಬರೆಯುತ್ತ ಡಾ. ಟಿ.ಎನ್.ನಾಗರತ್ನ ಅವರು 'ಮನಸ್ಸಿಗೆ ನೈತಿಕಬಲ ದೃಢತೆಗಳನ್ನು ಪಡೆಯಲು ಸಹಾಯಕವಾಗುವ ವ್ರತ ಕಥೆಗಳಿಗೇ ಅವಳ ಹಾಡುಗಳಲ್ಲಿ ಸಿಂಹಪಾಲು' ಎಂದು ಹೇಳುತ್ತಾರೆ. ನನ್ನ ಪ್ರಕಾರ ಹೆಣ್ಣಿನ ಹಾಡು ಮತ್ತು ಬರಹಗಳೆಂದರೆ ಅವಳ 'ಸ್ವ'ದ ಹುಡುಕಾಟ. ಹೆಣ್ಣಿನ ಅಭಿವ್ಯಕ್ತಿ ರೂಪದ ಮುಖ್ಯ ಶಕ್ತಿ ಎಂದರೆ ಸಕಲ ಚರಾಚರಾಗಳನ್ನು ಒಳಗೊಳ್ಳುವ ಮತ್ತು ಹಾಗೆ ಒಳಗೊಳ್ಳುವಾಗಲೂ, ತನ್ನನ್ನು ಪ್ರತ್ಯೇಕವಾಗಿಸಿಕೊಳ್ಳದ ಸಮಷ್ಠಿ ಹಾಗೂ ಸಮ ಪ್ರಜ್ಞೆ. ಒಂದು ಜಾನಪದ ತ್ರಿಪದಿಯಲ್ಲಿ

ಗಂಟಲ ದನಿಕೇಳ ಗಂಟೆ ಬಾರಿಸಿದಂಗ
ಎಂಟು ಕಿನ್ನೂರಿ ನುಡಿದಂಗ! ನನಗೆಳತಿ
ಪಂತ ನಿನಗ್ಯಾಕ ದನಿಗೂಡ

ಈ 'ದನಿಗೂಡುವಿಕೆಯೇ' ಹೆಣ್ಣಿನ ಸೃಷ್ಟಿ ಶಕ್ತಿ. ಅದನ್ನೇ ನಾನು 'ನಾದ' ಎಂದು ಕರೆದದ್ದು. ಅದು ಕೃತಕವಲ್ಲ ನಿಸರ್ಗಸಹಜವಾದದ್ದು ಹಾಗೂ ಸ್ವತಂತ್ರವಾದದ್ದು. ನಾದ ಪ್ರಾಕೃತಿಕ ಸತ್ಯ. ಶಬ್ಧ ಅಥವಾ ಭಾಷೆ ಪರಿಷ್ಕೃತ ಸತ್ಯ. ನಾದ ಹುಟ್ಟಿದ್ದು, ಶಬ್ದ ಕಟ್ಟಿದ್ದು.

ನಾರಿಯ ಸ್ವರಕೇಳ ನಾದ ಸ್ವರದಾಂಗ,
ಧ್ವನಿ ಶುದ್ಧ ಅವಳ ಮನ ಶುದ್ಧ! ನಾದಿನಿ
ನಾದವ ನಾಲಿಗ್ಗೆ ಉಣಸ್ಯಾಳ

ಹೆಣ್ಣಿನ ಈ ನಾದ ಪ್ರಜ್ಞೆ ಎಲ್ಲವನ್ನೂ ಎಲ್ಲರನ್ನೂ ಭೇದವಿಲ್ಲದೆ ಒಳಗೊಳ್ಳುವ ಸಮಷ್ಠಿ ಪ್ರಜ್ಞೆಯ ಪ್ರತೀಕ. ಭೀಮವ್ವನಂತಹ ಸಂವೇದನಶೀಲ ಅನುಭಾವಿಗಳು ಅಕ್ಷರದ ಮೂಲಕ ಶಾಬ್ದಿಕ ಕಾವ್ಯವಾಗಬಹುದಾಗಿದ್ದ ಅರಿವಿನ ನೆಲೆಗಳನ್ನು ನಾದದ ಮೂಲಕ ನಿರಚನಗೊಳಿಸುತ್ತಾರೆ. ನಾದವನ್ನೇ ನುಡಿಯಾಗಿಸುತ್ತಾರೆ.

ಭೀಮೇಶಕೃಷ್ಣ ಅಂಕಿತದಲ್ಲಿ ತನ್ನ ರಚನೆಗಳನ್ನು ಹಾಡಿದ ಹರಪನಹಳ್ಳಿ ಭೀಮವ್ವ ಅಕ್ಷರದ ವ್ಯಕ್ತಿಪ್ರಜ್ಞೆಯನ್ನು ಮೀರುತ್ತಾಳೆ. 'ಕೃತಿ' ಮತ್ತು 'ರಚನೆ' ಎನ್ನುವ ರೂಢಿಗತ ಶಿಷ್ಟ ಪರಿಭಾಷೆಗಳಿಗೆ ಪ್ರತಿಯಾಗಿ ಹಾಡಿನ ಸಮೂಹ ಪರಂಪರೆಗೆ ಭೀಮವ್ವ ಒಲಿದಾಕೆ. ಇನ್ನೊಂದು ರೀತಿ ಹೇಳುವುದಾದರೆ ವ್ಯಕ್ತಿಪ್ರಜ್ಞೆಯ ಬರವಣಿಗೆಯ ಚರಿತ್ರೆಯನ್ನು ಆತ್ಮಪ್ರಜ್ಞೆಯ ಹೆಣ್ಣು ಚರಿತೆಯಾಗಿ ಹೊಸದಾಗಿ ಹಾಡಲು ಮತ್ತು ನೋಡಲು ಕಲಿಸಿದಾಕೆ. ಮುಯ್ಯದ ಹಾಡು, ಸುಭದ್ರಕಲ್ಯಾಣ, ರತಿಕಲ್ಯಾಣ, ನಳಚರಿತ್ರೆ, ಪತಿದಾನಕ್ಕೊಟ್ಟ ಹಾಡು, ಶಕುಂತಲ ದುಷ್ಯಂತ ಮಹಾರಾಜನ ಹಾಡು ಮುಂತಾದ ದೀರ್ಘ ಮತ್ತು ಲಘು ಸ್ವರೂಪದ ಹಾಡುಗಳು ಇದಕ್ಕೆ ಉತ್ತಮ ನಿದರ್ಶನಗಳಾಗಿವೆ.

ಲಕ್ಷ್ಮೀದೇವಿ ಹಾಡು (೧೨೧ ನುಡಿ, ಹಾ. ೧೩೫) ಜಲಕ್ರೀಡೆ ಹಾಡು (೧೦೩ ನು, ಹಾ.೪೯) ಶನಿವಾರದ ಹಾಡು (೧೦೩ ನು.ಹಾ. ೫೦) ಸ್ತುತಿಮಣಿ ಮಾಲಿಕೆ (೧೧೧ ನು, ಹಾ.೩೨) ಇವು ಕಥನ ಕಾವ್ಯಗಳಾಗಿವೆ. ಪುರಾಣ ಮತ್ತು ವ್ರತಗಳೇ ಭೀಮವ್ವನ ಹಾಡಿನ ಕಥಾ ವಸ್ತುಗಳು. ವರ್ಣನಾಕೌಶಲ್ಯ, ಭೀಮವ್ವನ ಹಾಡುಗಳ ಸಹಜ ಪ್ರವೃತ್ತಿ. ಭಕ್ಷ್ಯಭೋಜಗಳು, ಹೆಣ್ಣಿನ ಅಲಂಕಾರಗಳು, ಆಭರಣಾದಿ ಉಡುಗೆ ತೊಡುಗೆಗಳು ಆಕೆಯ ವರ್ಣನಾಕೌಶಲ್ಯಕ್ಕೆ ಕಲಶಪ್ರಾಯವಾಗಿರುವುದನ್ನು ಸಂಪಾದಕರು ಗುರುತಿಸಿದ್ದಾರೆ.

ಹರಪನಹಳ್ಳಿ ಭೀಮವ್ವನ ಹಾಡುಗಳು (೧೯೮೪) ಈ ಸಂಕಲನದ ಮೊದಲ ಭಾಗದಲ್ಲಿ ೧೪೩ ಸಣ್ಣ ಹಾಡುಗಳನ್ನು ಎರಡನೆ ಭಾಗದಲ್ಲಿ ಆರು ದೊಡ್ಡ ಹಾಡುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಎರಡು ಮಂತ್ರಗಳಿವೆ (ಹಾ.೯೯ ಮತ್ತು ೧೩೪) ಇದರಲ್ಲಿನ ಹೆಚ್ಚಿನ ಹಾಡುಗಳು ನುಡಿ, ಪಲ್ಲವಿ, ಅನುಪಲ್ಲವಿ, ರಾಗ, ತಾಳಗಳಿಂದ ನಿರ್ದೇಶಿತವಾಗದೆ ಸ್ವತಂತ್ರವಾಗಿಲ್ಲದಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಇದರಲ್ಲಿ ಒಂದು ಉಗಾಭೋಗ (ಹಾಡು ೭೦) ಎರಡು ಸುಳಾದಿ (ಹಾಡು ೧೩ ಮತ್ತು ೧೨೨) ಗಳು ಸೇರಿವೆ. ಜೊತೆಗೆ ಸುಳಾದಿಯ ನುಡಿಗಳ ನಡುವೆ ಬಳಸಿರುವ ವಚನ ಎಂಬ ನಿರ್ದೇಶನ ಹೊಸದು ಎಂಬುದನ್ನು ಸಂಪಾದಕರು ಗುರುತಿಸಿದ್ದಾರೆ.

Scanned with CamScanner

ಇಲ್ಲಿನ ಹಾಡುಗಳನ್ನು ಅಭ್ಯಾಸದ ಅನುಕೂಲಕ್ಕಾಗಿ ಕಥಾವಸ್ತು, ವರ್ಣನಾ ಕುಶಲತೆ, ಸಂಭಾಷಣಾ ಚತುರತೆ, ತತ್ತ್ವನಿರೂಪಣೆ, ಭಕ್ತಿಪ್ರತಿಪಾದನೆ, ಸಂಪ್ರದಾಯ ಪ್ರಿಯತೆ, ದಶಾವತಾರ ವರ್ಣನೆ, ತೀರ್ಥಕ್ಷೇತ್ರಗಳು, ವಿಶಿಷ್ಟ ಹಾಡುಗಳು ಇತ್ಯಾದಿಯಾಗಿ ವಿಂಗಡಿಸಿ ಕೊಟ್ಟಿದ್ದಾರೆ. ಕಾವ್ಯದ ಶೈಲಿ ಮತ್ತು ಅದರ ಇತಿಮಿತಿ ಕುರಿತು ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಅಷ್ಟೇ ಅಲ್ಲದೆ ಭೀಮವ್ವನ ಮೇಲೆ ಪ್ರಭಾವಬೀರಿದ್ದ ವಿಜಯದಾಸರು, ಪುರಂದರದಾಸರು, ವಾದಿರಾಜರ ಪ್ರೇರಣೆಗಳನ್ನು ನಿದರ್ಶನಗಳ ಮೂಲಕ ವಿಶ್ಲೇಷಿಸಿದ್ದಾರೆ.

ಹರಪನಹಳ್ಳಿ ಭೀಮವ್ವನ ಮರಿಮಕ್ಕಳ ಮನೆಯಲ್ಲಿ ದೊರೆತ ಕಾಗದಪ್ರತಿಯನ್ನು ಆಧಾರವಾಗಿಟ್ಟುಕೊಂಡು ಸಂಪಾದಿಸಿದ್ದಾರೆ. ಮೂಲಪ್ರತಿಯ ಪಾಠಗಳನ್ನು ವ್ಯತ್ಯಾಸ ಮಾಡಿಕೊಂಡಿರುವ ಕಡೆಗಳಲ್ಲಿ ಪುನಾರಚಿತ ಪಾಠಗಳನ್ನು ದೊಡ್ಡ ಚೌಕ ಕಂಸಗಳಲ್ಲಿಯೂ ಮೂಲ ಪಾಠಗಳನ್ನು ಅಡಿಟಿಪ್ಪಣಿಯಲ್ಲಿಯೂ ನೀಡಿದ್ದಾರೆ. ಊಹಾತ್ಮಕ ಪಾಠಗಳನ್ನು ಅವುಗಳ ಮುಂದೆಯೇ ಸಣ್ಣ ಕಂಸಗಳಲ್ಲಿ ಪ್ರಶ್ನಾರ್ಥಕ ಚಿಹ್ನೆಯೊಂದಿಗೆ ಕೊಟ್ಟಿದ್ದಾರೆ. ಅನುಬಂಧಗಳಲ್ಲಿ ಹಾಡುಗಳಿಗೆ ಸಂಬಂಧಿಸಿದ ಪೂರ್ವಕತೆಗಳನ್ನು ನೀಡಿದ್ದಲ್ಲದೆ ಹಾಡಿಗೆ ಅರ್ಥಪೂರ್ಣ ಟಿಪ್ಪಣಿಗಳನ್ನು ಬರೆದಿದ್ದಾರೆ. ಕಠಿಣ ಪದಗಳ ಅರ್ಥ ಹಾಗೂ ಶಬ್ದಸೂಚಿ ಒದಗಿಸಿದ್ದಾರೆ. ೧೯೮೪ರಲ್ಲಿ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಿಂದ ಈ ಕೃತಿ ಪ್ರಕಟಿಸಿದ್ದಾರೆ. ನಂತರ ಸಮಗ್ರದಾಸ ಸಾಹಿತ್ಯ ಸಂಪುಟ-೧೯ ರಲ್ಲಿ ಡಾ.ಅಕ್ಕಮಹಾದೇವಿ ಅವರೊಂದಿಗೆ ಸಂಪಾದಿಸಿ ೨೦೦೩ರಲ್ಲಿ ಪ್ರಕಟಿಸಿದ್ದಾರೆ.

೩. **ಶ್ರೀ ಜಗನ್ನಾಥದಾಸರ ಕೃತಿಗಳು:** ೧೮೮೭ರಲ್ಲಿ ಪರಿಷ್ಕರಿಸಿ ಪಂಡಿತ ಮತ್ತು ಜನಪ್ರಿಯ ಆವೃತ್ತಿಗಳಲ್ಲಿ ಪ್ರಕಟಿಸಿದ್ದಾರೆ. ಸದರಿ ಸಂಪುಟವನ್ನು ೧೧೨ ಆಕರಗಳಿಂದ ಪರಿಷ್ಕರಿಸಿದ್ದಾರೆ. ಇಲ್ಲಿನ ೧೯೮ ಕೃತಿಗಳಲ್ಲಿ ನಾಲ್ಕು ಕೃತಿಗಳು ಮೊಟ್ಟ ಮೊದಲ ಬಾರಿಗೆ ಬೆಳಕು ಕಂಡಿವೆ. ಅಂಕಿತ ಸಂಧಿಗ್ಧವೆನಿಸುವ ಕೃತಿಯೊಂದನ್ನು ಅನುಬಂಧ ಒಂದರಲ್ಲಿ ಕೊಟ್ಟಿದ್ದಾರೆ. ಅನುಬಂಧ-೨ರಲ್ಲಿ ಏಕೈಕ ಆಕರವುಳ್ಳ ೨೫ ಕೃತಿಗಳನ್ನು ನೀಡಿದ್ದಾರೆ. ಜಗನ್ನಾಥದಾಸರ ಕೃತಿಗಳು ಮತ್ತು ಅವುಗಳ ಅಸಲೀತನವನ್ನು ವಿವಿಧ ವಿದ್ವಾಂಸರ ಅಭಿಪ್ರಾಯಗಳ ಮೂಲಕ ತೌಲನಿಕವಾಗಿ ಪರಾಮರ್ಶಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಗಳಲ್ಲಿ ಪಂಡಿತರಾಗಿದ್ದ ಜಗನ್ನಾಥದಾಸರು ಆಶು ಕವಿಗಳಾಗಿದ್ದುದನ್ನು ಸಂಪಾದಕರು ವಿಶೇಷವಾಗಿ ಗುರುತಿಸಿದ್ದಾರೆ. ಅಭ್ಯಾಸಪೂರ್ಣ ಪ್ರಸ್ತಾವನೆ ಹಲವು ಹೊಸ ಹೊಳವುಗಳಿಂದ ಕೂಡಿದೆ.

೪. **ಶ್ರೀ ರಾಮದಾಸರ ಕೃತಿಗಳು:** ಪಿಂಜಾರ ಕುಟುಂಬದ ಖಾಜಾಸಾಬ ಮತ್ತು ಪೀರಮ್ಮನ ಮಗನಾಗಿ ಹುಟ್ಟಿ ಬೆಳೆದ ಬಡೇಸಾಬ (ಸು. ೧೮ನೇ ಶತಮಾನ) ಹಂಪಿಯ ಶ್ರೀರಾಮಾವಧೂತರ ಸಂಪರ್ಕದಿಂದ ಆಧ್ಯಾತ್ಮಿಕ ಆಸಕ್ತಿ ಬೆಳೆಸಿಕೊಂಡರು. ಗೊಸವಾರದ ವೆಂಕಟಭೀಮಾಚಾರ್ಯ, ಹನಮಂತಾಚಾರ್ಯ ಶ್ರೀನಿವಾಸರಾವ್ ಪಟವಾರಿಯಂತಹ ಸಾತ್ವಿಕರ ಸಂಪರ್ಕದಿಂದ ಹರಿದಾಸ ಸಾಹಿತ್ಯದತ್ತ ಒಲವು ಬೆಳೆಸಿಕೊಂಡರು. ನಂತರ ಹರಿದಾಸದೀಕ್ಷೆ ಪಡೆದು ರಾಮದಾಸರಾಗಿ ಖ್ಯಾತರಾದರು. 'ರಾಮ', 'ಶ್ರೀರಾಮ' ಅಂಕಿತದಲ್ಲಿ ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಉಡುಪಿ, ತಿರುಪತಿ ಮೊದಲಾದ ಸುಕ್ಷೇತ್ರ ದರ್ಶಿಸಿ ಅಲ್ಲಿನ ಕ್ಷೇತ್ರಮೂರ್ತಿಗಳ ಕುರಿತು ಕೃತಿರಚನೆ ಮಾಡಿದ ವಿಚಾರಗಳನ್ನು ಸಂಪಾದಕರು ಚರ್ಚಿಸಿದ್ದಾರೆ.

೧೯೮೭ರಲ್ಲಿ ಸಂಪಾದಿಸಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಮಾಡಿದ್ದಾರೆ. ಇದರಲ್ಲಿ ೭೮೩ ರಚನೆಗಳಿವೆ. ಇದರಲ್ಲಿ ಎಂಟು ಕೃತಿಗಳು ದಖನಿ, ಉರ್ದು ಮಿಶ್ರ ಭಾಷೆಯಲ್ಲಿವೆ. ೪೬೦ ನುಡಿಗಳಿರುವ ಶ್ರೀರಾಮ ಭಜನೆಯೇ ಅತಿದೊಡ್ಡದು. ಜನಸಾಮಾನ್ಯರಿಗೆ ಸುಲಭವಾಗಿ ತಿಳಿಹೇಳಲು ರಾಮದಾಸರು ಬಳಸಿಕೊಂಡ ಪುರಾಣ, ಪುಣ್ಯಕಥೆಗಳು, ಆಡುಮಾತಿನ ಶೈಲಿ, ಗೇಯತೆ ಇವುಗಳ ಔಚಿತ್ಯ ಕುರಿತು ಸಂಪಾದಕರು ಸೂಕ್ಷ್ಮವಾಗಿ ಚರ್ಚಿಸಿದ್ದಾರೆ. ಏಕೈಕ ಕಾಗದದ ಹಸ್ತಪ್ರತಿಯ ಸಹಾಯದಿಂದ ರಾಮದಾಸರ ಕೃತಿಗಳನ್ನು ಪರಿಷ್ಕರಿಸಿದ್ದಾರೆ.

ಕೀರ್ತನೆ ಮತ್ತು ಉಗಾಭೋಗಗಳನ್ನು ಪ್ರಾಸಾನುಸಾರಿಯಾಗಿ ಸಾಲು ಮತ್ತು ನುಡಿಗಳನ್ನು ವಿಂಗಡಿಸಿ ಅಕಾರಾದಿಯಾಗಿ ನೀಡಿದ್ದಾರೆ. ಪುನಾರಚಿತ ಪಾಠಗಳನ್ನು ಚೌಕಕಂಸ[]ದಲ್ಲಿ, ಮೂಲಪಾಠವನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. ಪಾಠಸಂದೇಹ ಇರುವ ಕಡೆ ದುಂಡು ಕಂಸಗಳಲ್ಲಿ ಪ್ರಶ್ನಾರ್ಥಕ ಚಿಹ್ನೆಯನ್ನು ಇಟ್ಟಿದ್ದಾರೆ(?) ಊಹಾತ್ಮಕ ಪಾಠವಿದ್ದಲ್ಲಿ ಸೂಚಿತ ಪಾಠದೊಂದಿಗೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಿದ್ದಾರೆ (ನೀಂ(ನೀ) ಕೊಡುವೆ ನಾ ಪಡೆವೆ (ಕೀ. ೩೯೪) ಅನ್ಯಭಾಷೆಯ ಕೀರ್ತನೆಗಳನ್ನು ಪ್ರತ್ಯೇಕವಾಗಿ ಅನುಬಂಧ-೧ರಲ್ಲಿ ಕೊಟ್ಟಿದ್ದಾರೆ. ಪೂರ್ವಕತೆಗಳ ಟಿಪ್ಪಣಿ ಮತ್ತು ಕಠಿಣ ಪದಗಳ ಅರ್ಥ ನೀಡಿದ್ದಾರೆ.

ವಿಶೇಷವೆಂದರೆ ಪುರಂದರದಾಸರ, ವಾದಿರಾಜರ, ಕನಕದಾಸರ ಪ್ರಭಾವ ರಾಮದಾಸರ ಕೀರ್ತನೆಗಳ ಮೇಲಾಗಿದ್ದನ್ನು ಸಂಪಾದಕರು ತೌಲನಿಕವಾಗಿ ಗಮನಿಸಿದ್ದಾರೆ. ರಾಮದಾಸರ ಎಂಟು ಅನ್ಯಭಾಷಾ ಕೀರ್ತನೆಗಳನ್ನು ಮತ್ತು ರಾಮದಾಸರು ಬಳಸಿದ ವಿಶಿಷ್ಟ ಪದ ಪ್ರಯೋಗಗಳನ್ನು (ಗುಮಾನ, ಬಾಂದು, ಬಲುಜುಮ್ಮಾಸಿ ಇತ್ಯಾದಿ), ಶ್ರೀಹರಿಗೆ ಬಳಸಿರುವ ವಿಶೇಷಣಗಳನ್ನು ಹಾಗೂ ಅವರು ಸುಳಾದಿಗಳನ್ನು ರಚಿಸದೆ ಇರುವ ಹಲವು ಕಾರಣಗಳನ್ನು ಶೋಧಿಸಿರುವುದು ಸಂಪಾದಕರ ವಿಶಿಷ್ಟ ವಿದ್ವತ್ತಿನ ಪ್ರತೀಕವಾಗಿದೆ.

೫. **ಶ್ರೀ ವಾದಿರಾಜರ ದೀರ್ಘಕೃತಿಗಳು:** ಹರಿದಾಸ ಸಾಹಿತ್ಯದ ಹರಿಕಾರರಲ್ಲಿ ಶ್ರೀವಾದಿರಾಜರು ಒಬ್ಬರು. ಉಡುಪಿಯ ವಾಗೀಶ ತೀರ್ಥರಿಂದ ಬಾಲಕ ವರಾಹ ವಾದಿರಾಜ ತೀರ್ಥರೆಂಬ ಅನ್ವರ್ಥಕನಾಮ ಹೊಂದುತ್ತಾರೆ. ಕನ್ನಡ, ಸಂಸ್ಕೃತ, ತುಳು ಭಾಷೆ ಮತ್ತು ಸಾಹಿತ್ಯ, ಶಾಸ್ತ್ರಗಳಲ್ಲಿ ಪರಿಣಿತರಾಗಿದ್ದರು. ಹಯವದನ ಅಂಕಿತದಲ್ಲಿ

Scanned with CamScanner

ನೂರಾರು ಕೀರ್ತನೆಗಳನ್ನು ರಚಿಸಿದ್ದಾರೆ. ಅವರ ಕೀರ್ತನೆಗಳನ್ನು ಒಟ್ಟಾಗಿ ಡಾ.ಟಿ.ಎನ್.ನಾಗರತ್ನ ಅವರು ೧೯೮೬ರಲ್ಲಿ ಪಂಡಿತ ಮತ್ತು ಜನಪ್ರಿಯ ಆವೃತ್ತಿಯಾಗಿ ಪರಿಷ್ಕರಿಸಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಈ ಸಂಪುಟದಲ್ಲಿ ವಾದಿರಾಜರ ೧. ವೈಕುಂಠವರ್ಣನ ೨. ಅವತಾರತ್ರಯ ಮಧ್ವಸುವ್ವಾಲಿ ೩. ಭ್ರಮರಗೀತೆ ೪. ಶ್ರೀ ಲಕ್ಷ್ಮೀಶೋಭನ ಹಾಡು ಎನ್ನುವ ನಾಲ್ಕು ದೀರ್ಘ ಕೃತಿಗಳು ಅಡಕಗೊಂಡಿವೆ. ಪ್ರತಿಯೊಂದು ಘಟಕಗಳಿಗೆ ಅದರದೇ ಆದ ಸಂಪಾದನಾ ವಿಧಾನವನ್ನು ಅನುಸರಿಸಿದ್ದಾರೆ. ವೈಕುಂಠ ವರ್ಣನೆಯನ್ನು ಮೂರು ಪ್ರತಿಗಳ ಸಹಾಯದಿಂದ (ಒಂದು ಕಾಗದ ಮತ್ತೊಂದು ಮುದ್ರಿತ ಪ್ರತಿ) ಅವತಾರತ್ರಯ ಮಧ್ವಸುವ್ವಾಲಿ ಕೃತಿಯನ್ನು ಒಂದೇ ಪ್ರತಿಯಿಂದ ಪರಿಷ್ಕರಿಸಿದ್ದಾರೆ. ಭ್ರಮರಗೀತೆಯನ್ನು ಮೂರು ಪ್ರತಿ (೧ ಕಾಗದ ೨ ಮುದ್ರಿತ ಪ್ರತಿ)ಗಳಿಂದ, ಲಕ್ಷ್ಮೀಶೋಭನ ಹಾಡನ್ನು ಮೂರು ಕಾಗದ ಪ್ರತಿ ಹಾಗೂ ಐದು ಮುದ್ರಿತ ಪ್ರತಿಗಳ ಸಹಾಯದಿಂದ ಪರಿಷ್ಕರಿಸಿದ್ದಾರೆ.

ದೇವತಾಸ್ತುತಿ, ಆತ್ಮನಿವೇದನೆ, ತತ್ತ್ವಪ್ರತಿಪಾದನೆ, ಲೋಕನೀತಿ, ಪುರಾಣ, ಸಂಪ್ರದಾಯ ಹಾಗೂ ವಿಷೇಷವೆಂದು ಏಳು ಭಾಗಗಳಲ್ಲಿ ಕೃತಿಗಳನ್ನು ವರ್ಗೀಕರಿಸಿದ್ದಾರೆ. ಸಮಗ್ರ ದಾಸಸಾಹಿತ್ಯ ಸಂಪುಟ ೨ರಲ್ಲಿ ವಾದಿರಾಜರ ಕೀರ್ತನೆಗಳು ಎಂದು ೨೦೦೩ರಲ್ಲಿ ಸಮಗ್ರವಾಗಿ ಪ್ರಕಟಿಸಿದ್ದಾರೆ. ಅನುಬಂಧ ಒಂದರಲ್ಲಿ ಏಕೈಕ ಆಕರದ ೩೦ ರಚನೆಗಳನ್ನು ಕೊಟ್ಟಿದ್ದಾರೆ. ಮದ್ವಮತ ತತ್ತ್ವದೊಂದಿಗೆ ಮತೀಯ ಚೌಕಟ್ಟನ್ನು ಮೀರಿ, ಲೌಕಿಕ ಶಾಸ್ತ್ರ ಸಂಪ್ರದಾಯಗಳಿಗೆ ಪಾರಮಾರ್ಥಿಕ ಲೇಪನಕೊಡುವ ವಾದಿರಾಜರು ಸಮದೃಷ್ಟಿಕೋನವನ್ನು ವಿಶೇಷವಾಗಿ ಗುರುತಿಸಿದ್ದಾರೆ.

೬. **ಶ್ರೀ ವ್ಯಾಸರಾಯರ ಕೃತಿಗಳು:** ಕನ್ನಡ ಅಧ್ಯಯನ ಸಂಸ್ಥೆಯಿಂದ ೨೦೦೧ರಲ್ಲಿ ಪಂಡಿತ ಮತ್ತು ಜನಪ್ರಿಯ ಆವೃತ್ತಿಯಾಗಿ ಪ್ರಕಟಿಸಿದ್ದಾರೆ. ಪ್ರಸ್ತುತ ಸಂಪುಟದಲ್ಲಿ ಏಕೈಕ ಆಕರವೂ ಸೇರಿದಂತೆ ಒಟ್ಟು ೧೮೮ ಕೃತಿಗಳು ಪ್ರಕಟವಾಗಿವೆ. ೪೫ ಹೊಸ ಕೀರ್ತನೆಗಳನ್ನು ಶೋಧಿಸಿ ಮೊಟ್ಟಮೊದಲ ಬಾರಿಗೆ ಪ್ರಕಟಿಸಿದ್ದಾರೆ. ವ್ಯಾಸರಾಯರ ವಿದ್ವತ್ತಿನ ವಿವಿಧ ಮಜಲನ್ನು ಸಂಪಾದಕರು ಗುರುತಿಸಿದ್ದಾರೆ. ಕಾವ್ಯ, ನಾಟಕ, ಅಲಂಕಾರ, ವ್ಯಾಕರಣಾದಿ ಶಾಸ್ತ್ರಗಳಲ್ಲಿ ವ್ಯಾಸರಾಯರು ಮೇಧಾವಿಗಳಾಗಿದ್ದರು. ಸಂಸ್ಕೃತ ಮತ್ತು ಕನ್ನಡ ಎರಡರಲ್ಲಿಯೂ ಕೃಷಿ ಮಾಡಿದ್ದರು. ಕನ್ನಡದಲ್ಲಿ ಅನೇಕ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿದ್ದಾರೆ. ಸಂಸ್ಕೃತದಲ್ಲಿಯೂ ಅನೇಕ ಗ್ರಂಥಗಳನ್ನು ಬರೆದ ವಿಚಾರಗಳನ್ನು ಸಂಪಾದಕರು ಗುರುತಿಸಿದ್ದಾರೆ.

ಭಕ್ತ, ಭಗವಂತ, ಕಳವಳ, ನಿರಾಸೆ, ಸಿಟ್ಟು, ಸೆಡವು, ವಿರಹ, ಸಂತೋಷ, ತೃಪ್ತಿ ಮುಂತಾದ ಭಾವಗಳು ವ್ಯಾಸರಾಯರ ಕೀರ್ತನೆಗಳಲ್ಲಿ ಹೊನಲಿಟ್ಟಿವೆ. ಒಂದೊಂದು ಕೀರ್ತನೆಯಲ್ಲಿ ಹಂಚಿಹೋಗಿರುವ ದಾಸರ ಅನುಭವವನ್ನು ಇಡಿಯಾಗಿ ಹಿಡಿದಿಡಲು ಅನುಕೂಲವಾಗುವಂತೆ ವ್ಯಾಸರಾಯರ ಒಟ್ಟು ರಚನೆಗಳಲ್ಲಿ ೧. ಆತ್ಮಶೋಧನೆ, ೨. ಭಗವಂತನ ಆರಾಧನೆ ೩. ತತ್ತ್ವಪ್ರತಿಪಾದನೆ ೪. ಉಪದೇಶವಾಣಿ ಎಂದು ನಾಲ್ಕು ಗುಂಪು ಮಾಡಿಕೊಂಡಿದ್ದಾರೆ. ವ್ಯಾಸರಾಯರ ತತ್ತ್ವ ಸಿದ್ಧಾಂತಗಳನ್ನು ಪ್ರಸ್ತಾವನೆಯಲ್ಲಿ ವಿವರಿಸಿದ್ದಾರೆ. ಹರಿಭಕ್ತಿ, ಸಂಸ್ಕೃತ ಪಾಂಡಿತ್ಯ, ಮಧ್ವಶಾಸ್ತ್ರ, ರಾಜಕಾರಣ, ಶಿಷ್ಯೋದ್ಧಾರ, ಹರಿದಾಸ ಕೂಟದ ಪ್ರವರ್ತಕ ಹೀಗೆ ಜೀವನದ ಹಲವು ಆಯಾಮಗಳಲ್ಲಿ ತೊಡಗಿಸಿಕೊಂಡ ವ್ಯಾಸರಾಯರ ಉನ್ನತ ವ್ಯಕ್ತಿತ್ವವನ್ನು ಸಂಪಾದಕರು ಅಭ್ಯಾಸಪೂರ್ವವಾಗಿ ವಿಶ್ಲೇಷಿಸಿದ್ದಾರೆ. ಸಂಗೀತ ವಿದ್ವಾಂಸರ ಸಹಾಯದಿಂದ ಆಯಾ ಕೃತಿಯ ರಾಗ ಮತ್ತು ತಾಳಗಳ ಪಾಠ ನಿರ್ಣಯ ಮಾಡಿ ಕೆಲವು ಕೃತಿಗಳಿಗೆ ಸ್ವರಪ್ರಸ್ತಾರ ಹಾಕಿಸಿರುವುದು ಸಂಪಾದಕರ ಒಂದು ವಿನೂತನ ಪ್ರಯೋಗವಾಗಿದೆ. ಅನುಬಂಧ-೧ರಲ್ಲಿ ಅಂಕಿತ ಸಂದಿಗ್ಧವುಳ್ಳ ಎರಡು ಮತ್ತು ಏಕೈಕ ಆಕರವುಳ್ಳ ಎರಡು ಅಂದರೆ ಒಟ್ಟು ನಾಲ್ಕು ಕೀರ್ತನೆಗಳನ್ನು ನೀಡಿದ್ದಾರೆ. ಅನುಬಂಧ-೨ರಲ್ಲಿ ಏಕೈಕ ಆಕರದ ೫೬ ಕೀರ್ತನೆಗಳನ್ನು ನೀಡಿದ್ದಾರೆ. ಹಾಗೆ ಅನುಬಂಧ-೩ರಲ್ಲಿ ಅಂಕಿತ ಪಲ್ಲಟವಾಗಿರುವ ೨೨ ಕೀರ್ತನೆಗಳನ್ನು, ಅನುಬಂಧ-೪ರಲ್ಲಿ ಪೂರ್ವಕಥೆಗಳು ನಡುವೆ ಲಘುಟಿಪ್ಪಣಿಗಳು, ಅನುಬಂಧ-೫ರಲ್ಲಿ ಕಠಿಣ ಶಬ್ದಗಳ ಅರ್ಥ, ಅನುಬಂಧ-೬ರಲ್ಲಿ ಸ್ವರ ಪ್ರಸ್ತಾರ ಹಾಕಿದ ಕೀರ್ತನೆಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

೭. **ಶ್ರೀ ಉರಗಾದ್ರಿ ವಿಠಲದಾಸರು ಮತ್ತು ಇತರ ಕೀರ್ತನೆಗಳು:** ಸಮಗ್ರ ದಾಸ ಸಾಹಿತ್ಯದ ಹದಿನಾರನೆಯ ಸಂಪುಟವಿದು. ಹೆಚ್.ಎಸ್.ಶ್ರೀನಿವಾಸಮೂರ್ತಿ, ಎ.ಎನ್. ಅನಂತಸ್ವಾಮಿರಾವ್ ಅವರೊಂದಿಗೆ ಡಾ.ಟಿ.ಎನ್.ನಾಗರತ್ನ ಅವರು ಈ ಕೃತಿಯನ್ನು ಸಂಪಾದಿಸಿದ್ದಾರೆ(೨೦೦೩) ಉರಗಾದ್ರಿ ವಿಠಲದಾಸರ ೯೨, ರಘುರಾಮ ವಿಠಲದಾಸರ ೧೫, ಶ್ರೀಶ ಕೇಶವದಾಸರ ೧೪, ನಿಡಂಬೂರು ರಾಮದಾಸರ ೮, ಬಿ.ವೆಂಕಟರಾವ್ ಅವರ ೪೩, ಶ್ರೀ ಅಚಲಾನಂದದಾಸರ ೪೨ ಕೀರ್ತನೆಗಳು ಈ ಸಂಪುಟದಲ್ಲಿ ಅಚ್ಚಾಗಿವೆ. ಇದರಲ್ಲಿ ೩೪ ಉಗಾಭೋಗಗಳು, ಆರು ಕೀರ್ತನೆಗಳು ಎರಡು ಸುಳಾದಿಗಳು ಪ್ರಕಟವಾಗಿವೆ. ಅಚಲಾನಂದರ ಕಾಲದ ಬಗ್ಗೆ ಡಾ.ಟಿ.ಎನ್.ನಾಗರತ್ನ ಅವರು ಸುದೀರ್ಘವಾಗಿ ಚರ್ಚಿಸಿದ್ದಾರೆ.

ತೊಣ್ಣೂರು ದೇವಾಲಯದ ತಾಮ್ರಶಾಸನ (ಕ್ರಿ.ಶ.೧೭೨೨) ಮತ್ತು ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ನಲ್ಲೂರು ಶಾಸನ (೧೫ನೇ ಮತ್ತು ೧೬ನೇ ಶತಮಾನ)ಗಳನ್ನು ಪರಿಶೀಲಿಸಿ ಅಚಲಾನಂದರು ಇಬ್ಬರಿದ್ದರು. ಒಬ್ಬರು; ಕ್ರಿ.ಶ.೧೬ನೇ ಶತಮಾನದಲ್ಲಿ ಸ್ವತಃ ಮಠಾಧಿಪತಿ ಗಳಾಗಿದ್ದ ಅಚಲಾನಂದರು, ಇನ್ನೊಬ್ಬರು; ಮೈಸೂರಿನ ದೊರೆ ಮೊದಲನೆ ಕೃಷ್ಣರಾಜರಿಂದ ವೃತ್ತಿಯನ್ನು ಪಡೆದ ಅಚಲಾನಂದರು. ಈಗ ದೊರೆತಿರುವ ಅಚಲಾನಂದ ವಿಠಲಾಂಕಿತ (ಉಗಾಭೋಗ-೨೮) ಕೃತಿಗಳು ಎರಡನೇ ಅಚಲಾನಂದರವು ಅನ್ನುವುದನ್ನು ಸಂಪಾದಕರು ಖಚಿತಪಡಿಸಿದ್ದಾರೆ. ಆ ಮೂಲಕ ಅಚಲಾನಂದರ ಕಾಲದ ಬಗ್ಗೆ ಇದ್ದ ಸಂದಿಗ್ಧತೆಗಳನ್ನು ನಿವಾರಿಸಿದ್ದಾರೆ.

Scanned with CamScanner

೮. ಕನಕದಾಸರ ಕೀರ್ತನೆಗಳು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ೨೦೦೪ರಲ್ಲಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ೧೬೧ ಹಸ್ತಪ್ರತಿಗಳನ್ನು ಪಾಠಪರಿಷ್ಕರಣೆಗೆ ಆಧಾರವಾಗಿಟ್ಟುಕೊಂಡಿದ್ದಾರೆ. ಇದರಲ್ಲಿ ೧೨ ತಾಳೆಗರಿಗಳು, ೧೨೬ ಕಾಗದಪ್ರತಿ, ೨೩ ಮುದ್ರಿತ ಪ್ರತಿಗಳಿವೆ. ಸುಮಾರು ಎರಡು ಸಾವಿರಕ್ಕೂ ಹೆಚ್ಚು ಆಕರಗಳನ್ನು ಪರಿಶೀಲಿಸಿದ್ದಾರೆ. ಒಟ್ಟು ೩೩೨ ಕೀರ್ತನೆಗಳಿದ್ದು ೮೨ ಹೊಸ ಕೀರ್ತನೆಗಳನ್ನು ಹೊಸದಾಗಿ ಶೋಧಿಸಿ ಸೇರಿಸಿದ್ದಾರೆ. ವಿಸ್ತೃತವಾದ ಪ್ರಸ್ತಾವನೆ ಮತ್ತು ಉಪಯುಕ್ತ ಅನುಬಂಧಗಳನ್ನು ನೀಡಿದ್ದಾರೆ.

೯. ಹರಿದಾಸರ ಜನಪ್ರಿಯ ಹಾಡುಗಳು: ಡಾ.ಮಂದಾಕಿನಿ ಅವರೊಂದಿಗೆ ಸೇರಿ ಸಂಪಾದಿಸಿ ೧೯೯೬ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟಿಸಿದ್ದಾರೆ. ಕರ್ನಾಟಕದಾದ್ಯಂತ ಜನಪ್ರಿಯವಾಗಿದ್ದ ೩೦ ಜನ ಹರಿದಾಸರ ೩೦೦ ಹಾಡುಗಳನ್ನು ಇದರಲ್ಲಿ ಸಂಗ್ರಹ ಮಾಡಿದ್ದಾರೆ. ಕನ್ನಡದಲ್ಲಿ ಹರಿದಾಸ ಸಾಹಿತ್ಯ ಹುಟ್ಟಿದ ಚಾರಿತ್ರಿಕ ಸಂಗತಿಗಳ ಕುರಿತು ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ತತ್ತ್ವಶಾಸ್ತ್ರದ ಹರವಿನಲ್ಲಿ ಭಕ್ತಿ ತತ್ತ್ವವನ್ನು ಜನಪ್ರಿಯಗೊಳಿಸಿದ ಚಾರಿತ್ರಿಕ ಅನಿವಾರ್ಯತೆಯನ್ನು ವಿಶ್ಲೇಷಿಸಿದ್ದಾರೆ. ಹರಿದಾಸ ಸಂಕ್ಷಿಪ್ತ ಜೀವನ ವಿಚಾರಗಳೊಂದಿಗೆ ಆಯಾ ಹರಿದಾಸರ ಕೀರ್ತನೆಗಳನ್ನು ಅಕಾರಾದಿಯಾಗಿ ಕೊಟ್ಟಿದ್ದಾರೆ. ಕಠಿಣ ಪದಗಳ ಅರ್ಥ ಮತ್ತು ಪೂರ್ವಕತೆಗಳ ಲಘು ಟಿಪ್ಪಣಿಗಳನ್ನು ನೀಡಿದ್ದಾರೆ. ಇದು ಅಧ್ಯಯನಕಾರರಿಗೆ ಉಪಯುಕ್ತವಾಗಿದೆ.

೧೦. ಕೀರ್ತನಕಾರರು: ಮುತ್ತಿನಹಾರ ಮಾಲಿಕೆಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ೧೯೯೬ರಲ್ಲಿ ಪ್ರಕಟವಾಗಿದೆ. ೧೧ ಹರಿದಾಸರ ೭೦ ಹಾಡುಗಳು ಇದರಲ್ಲಿ ಸೇರಿವೆ. ಇದೊಂದು ಪ್ರಾತಿನಿಧಿಕ ಕವನ ಸಂಕಲನವಾಗಿದೆ. ಪತ್ರಿಯೊಬ್ಬ ದಾಸರ ಪರಿಚಯ ಮತ್ತು ಅಂಕಿತವನ್ನು ವಿವರಿಸಿದ್ದಾರೆ. ಕರ್ನಾಟಕ ಹರಿದಾಸ ಸಾಹಿತ್ಯದ ಒಂದು ಸ್ಥೂಲನೋಟವನ್ನು ಈ ಕೃತಿಯಲ್ಲಿ ಕಾಣಬಹುದು.

ಕನಕ ಕೀರ್ತನ ತೋರಣ: ಉಡುಪಿಯ ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರದಿಂದ ೨೦೧೫ರಲ್ಲಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಕನಕದಾಸರ ೩೧೭ ಸುಳಾದಿ, ಉಗಾಭೋಗ, ೭ ದಂಡಕಗಳು, ಈ ಸಂಗ್ರಹದಲ್ಲಿ ಜಾಗ ಪಡೆದಿದೆ. ಸಂಪಾದನೆಗೆ ಶಾಸ್ತ್ರೀಯ ಕ್ರಮವನ್ನು ಅನುಸರಿಸಿದ್ದಾರೆ. ಅಭ್ಯಾಸಯೋಗ್ಯ ಪ್ರಸ್ತಾವನೆ ಮತ್ತು ಅನುಬಂಧಗಳಿವೆ.

ಇಷ್ಟೆ ಅಲ್ಲದೆ ಹರಿದಾಸ ಸಾಹಿತ್ಯ: ಉಗಮ ವಿಕಾಸ ಸಾಧನೆ ಸಿದ್ಧಿ, ಈ ಪುಸ್ತಕ ಗುಲಬರ್ಗಾ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿದೆ. ಶ್ರೀಪಾದರಾಜರು ಜೀವನ ಮತ್ತು ಕೃತಿಗಳು, ಕನ್ನಡ ವಿಶ್ವವಿದ್ಯಾಲಯದಿಂದ,(೨೦೦೪ ಮತ್ತು ೨೦೧೪ ದ್ವಿಮು) ಹರಿದಾಸರ ಭಕ್ತಿ ಸ್ವರೂಪ (ಪಿಹೆಚ್.ಡಿ.ಮಹಾಪ್ರಬಂಧ) ಮೈಸೂರು ವಿಶ್ವವಿದ್ಯಾನಿಲಯದಿಂದ, (೧೯೮೬) ಕನಕದಾಸ ಪುಸ್ತಕವು ಭಾರತೀಯ ಸಾಹಿತ್ಯ ನಿರ್ಮಾಪಕರು ಮಾಲೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ೨೦೦೦ ಪ್ರಕಟವಾಗಿದೆ. ದಾಸ ಸಾಹಿತ್ಯದ ಪ್ರಸ್ತುತತೆ, ಶ್ರೀಪಾದರಾಜರು, ದಾಸ ಸಾಹಿತ್ಯ ವೈಭವ ಇವು ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿವೆ. ಇಷ್ಟೇ ಅಲ್ಲದೆ ಮೈಸೂರಿನ ಗಾನ ಭಾರತಿ(ರಿ) ಸಂಸ್ಥೆಯವರು ೧೯೯೧ರಲ್ಲಿ ಪ್ರಕಟಿಸಿದ ದಾಸಸಾಹಿತ್ಯ ಸುಧೆ, ಕೃತಿಯು ವಿವಿಧ ವಿದ್ವಾಂಸರ ೧೧ ಲೇಖನಗಳ ಸಂಗ್ರಹವಾಗಿದೆ. ಪುರಂದರದಾಸರನ್ನು ದೇಶದ ವಿವಿಧ ಭಾಷೆಗಳ ಸಂತಶರಣರೊಂದಿಗೆ ತೌಲನಿಕವಾಗಿ ಅಧ್ಯಯನಿಸಿದ ಲೇಖನಗಳಿವೆ. ಡಾ.ಟಿ.ಎನ್. ನಾಗರತ್ನ ಸಂಪಾದಕರಾಗಿ ಉಪಯುಕ್ತ ಪೀಠಿಕೆ ಬರೆದಿದ್ದಾರೆ. ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯ ಪ್ರಕಟಿಸಿದ ಕನ್ನಡ ಕೀರ್ತನೆ: ಸಾಹಿತ್ಯ ಸಂಗೀತ, ಅಭಿರುಚಿ ಪ್ರಕಾಶನ ೨೦೧೨ರಲ್ಲಿ ಪ್ರಕಟಿಸಿದ 'ದಾಸ ಸಾಹಿತ್ಯ ದರ್ಪಣ, (ಹದಿನಾಲ್ಕು ಲೇಖನಗಳ ಸಂಕಲನ) ಇವು ಡಾ.ಟಿ.ಎನ್.ನಾಗರತ್ನ ಅವರ ವಿದ್ವತ್ ಪರಿಶ್ರಮದ ಮುಖ್ಯ ಕೃತಿಗಳಾಗಿವೆ.

ಹೈ ಹೈ, ಕುದುರೆ ಎನ್ನುವ ಮಕ್ಕಳ ಸಾಹಿತ್ಯ ಕೃತಿ, ಜೀಬಿ ಕೋಟೆ ಮಾಧವರಾಯರು ಎನ್ನುವ ವ್ಯಕ್ತಿ ಚಿತ್ರಣ, ಸಿರಿ ಗಂಗಾಜನಕ ಕೀರ್ತನ ಕುಸುಮಾಂಜಲಿ ಎನ್ನುವ ಸ್ವರಚಿತ ಕೃತಿಯನ್ನು ಪ್ರಕಟಿಸಿದ್ದಾರೆ.

ಒಟ್ಟಿನಲ್ಲಿ ಡಾ.ಟಿ.ಎನ್.ನಾಗರತ್ನ ಅವರು ಹರಿದಾಸ ಸಾಹಿತ್ಯವನ್ನು ಸಮಗ್ರವಾಗಿ ಕಟ್ಟಿಕೊಡಲು ಮಾಡಿದ ಪ್ರಾಮಾಣಿಕ ಪ್ರಯತ್ನ ಮತ್ತು ಪಟ್ಟ ಪರಿಶ್ರಮ ಕನ್ನಡಿಗರ ಅಭಿನಂದನೆಗೆ ಪಾತ್ರವಾಗಿದೆ. ಇವರು ಸಂಪಾದಿಸಿದ ಮಹತ್ವಪೂರ್ಣ ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದ್ದು ಗ್ರಂಥಸಂಪಾದನ ಕ್ಷೇತ್ರಕ್ಕೆ ದೊರೆತ ವಿಶೇಷ ಮನ್ನಣೆಯಾಗಿದೆ.

ಸಂಪಾದನಾ ವೈಧಾನಿಕತೆ

"ದಾಸ ಸಾಹಿತ್ಯ ಸಂಪಾದನೆ ಎನ್ನುವುದು ಸಮಸ್ಯೆಗಳ ಹುತ್ತ. ಮೌಖಿಕ ರೂಪದಲ್ಲಿ ಹರಿದುಬಂದ ಕೀರ್ತನೆ, ಸುಳಾದಿ, ಉಗಾಭೋಗ, ಹಾಡು, ಭಜನೆ ಇವುಗಳನ್ನು ಪರಿಷ್ಕರಿಸಲು ಕಾವ್ಯ ಶಾಸ್ತ್ರಗಳ ಸಂಪಾದನೆಗಿಂತ ಭಿನ್ನವಾದ ಶಾಸ್ತ್ರೀಯ ವಿಧಾನ ಅಗತ್ಯ" ಎನ್ನುವ ಖಚಿತ ನಿಲುವು ಡಾ.ಟಿ.ಎನ್.ನಾಗರತ್ನ ಅವರದು. ವಾಗ್ಮಿಗಳ ಮೂಲಕ ಗಮಕಿಗಳ ಮೂಲಕ, ಕೀರ್ತನ ಪುರಾಣಕಾರರ ಮೂಲಕ, ಟೀಕು ವ್ಯಾಖ್ಯಾನಕಾರರ ಮೂಲಕ, ಪಠಣ ಮತ್ತು ಭಜನೆಗಳ ಮೂಲಕ ಬಹುವಿಧವಾಗಿ ಲಿಖಿತ ಮತ್ತು ಮೌಖಿಕ ರೂಪದಲ್ಲಿ ಬೆಳೆದುಬಂದ ಕನ್ನಡ ಸಾಹಿತ್ಯವನ್ನು ಓದುವ ಮತ್ತು ಸಂಪಾದಿಸುವ ವಿದ್ವಾಂಸರೊಬ್ಬರಿಗೆ ಇರಬೇಕಾದ ಮೂಲಭೂತ ತಿಳುವಳಿಕೆಯಿದು. 'ಮಾತೇ ಅಕ್ಷರ ನುಡಿಯೇ ಮಾತು' 'ರಾಗವಾವುದು ರಚನೆಯಾವುದು' ಎನ್ನುವ ಮೂಲಕ ಲಿಖಿತ, ಅಲಿಖಿತ, ಶಾಬ್ದಿಕ, ಶುದ್ಧ, ಶ್ರೇಷ್ಠ, ಪ್ರಮಾಣಿತ ಎನ್ನುವ ವ್ಯಕ್ತಿ ಸ್ವಾಮ್ಯಗಳನ್ನು ಮೀರಿ ಸಾಹಿತ್ಯವನ್ನು ಸಾರ್ವತ್ರಿಕವಾಗಿಸಿದ್ದು ಕನ್ನಡ ಪ್ರತಿಭೆ.

Scanned with CamScanner

ಲಿಪಿ ಮತ್ತು ನುಡಿಯನ್ನು ಅಭಿನ್ನವಾಗಿ ಪರಿಭಾವಿಸಿದ ಕನ್ನಡ ಸಂಸ್ಕೃತಿ ಬಗ್ಗೆ ಸಂವಾದಕರಲ್ಲಿ ಖಚಿತ ಅರಿವಿದೆ.

ದಾಸ ಸಾಹಿತ್ಯದ ಸ್ವರೂಪ ಕುರಿತು ಡಾ.ಟಿ.ಎನ್.ನಾಗರತ್ನ ಅವರೇ ಹೇಳುವಂತೆ "ಎರಡು ನೂರು ವರ್ಷಗಳಷ್ಟು ಹಿಂದೆ ಲಿಖಿತಗೊಂಡ ಹಸ್ತಪ್ರತಿಗಳಲ್ಲಿ ಸರಿಯಾದ ಕಾಲ ನಿರ್ದೇಶನವಿರುವುದಿಲ್ಲ, ಒಂದರ ನಕಲು ಮತ್ತೊಂದಾಗಿರುವುದಿಲ್ಲ, ವ್ಯಕ್ತಿಗಳು ತಮಗಿಷ್ಟವಾದ ಕೃತಿಗಳನ್ನು ತಮಗಿಷ್ಟವಾಗುವ ರೀತಿಯಲ್ಲಿ ಬರೆದಿಟ್ಟುಕೊಂಡಿರುತ್ತಾರೆ, ಪಾದಗಳ ವಿಂಗಡಣೆ ಇರುವುದಿಲ್ಲ, ಒಟ್ಟಾಗಿ ಒಂದೇ ಕಡೆ ದೊರೆಯುವುದಿಲ್ಲ. ಒಮ್ಮೊಮ್ಮೆ ಒಂದೇ ಚೋಪಡಿಯಲ್ಲಿ ವಿವಿಧ ದಾಸರ ವಿವಿಧ ಪದಗಳು ಸಿಗುತ್ತವೆ. ಹಲವು ಕೃತಿಗಳು ಚರ್ವಿತಚರ್ವಣವಾಗಿರುತ್ತವೆ. ಸರಿಯಾದ ವರ್ಗೀಕರಣ ಸಾಧ್ಯವಾಗುವುದಿಲ್ಲ, ಪೀಳಿಗೆ ಗುರುತಿಸುವುದು ಕಷ್ಟ. ಹೀಗಾಗಿ ದಾಸರ ಯಾವುದೇ ಒಂದು ಸಂಗ್ರಹವನ್ನು ಅಥವಾ ಸಂಕಲನವನ್ನು 'ಮೂಲಪ್ರತಿ' ಎಂದು ಕರೆಯುವುದು ಸಾಧ್ಯವಾಗುವುದಿಲ್ಲ. ಬದಲಾಗಿ ಒಂದೊಂದು, ಪ್ರತ್ಯೇಕ ಕೀರ್ತನೆಯನ್ನು ಒಂದೊಂದು ಘಟಕವಾಗಿ ಭಾವಿಸಬೇಕು" ಎನ್ನುವ ಭಿನ್ನ ಹಾಗೂ ಹೊಸ ರೀತಿಯ ನಿಲುವು ತೋರುತ್ತಾರೆ.

ಡಾ.ಟಿ.ಎನ್.ನಾಗರತ್ನ ಅವರ ಗ್ರಂಥಸಂಪಾದನ ವೈಧಾನಿಕತೆಯನ್ನು ಮೂರು ಮಾದರಿಯಲ್ಲಿ ಗುರುತಿಸಬಹುದು.

ಮೊದಲ ಮಾದರಿ: ಡಾ.ಟಿ.ಎನ್.ನಾಗರತ್ನ ಅವರ ಗ್ರಂಥ ಸಂಪಾದನೆಯ ಮೊದಲ ಮಾದರಿ ಎಂದರೆ ಒಂದೊಂದು ಕೀರ್ತನೆಯನ್ನು ಒಂದು ಪ್ರತ್ಯೇಕ ಘಟಕವಾಗಿ ಭಾವಿಸುವುದು. ಅದಕ್ಕಾಗಿ ಏಕೈಕ ಆಕರ ಮತ್ತು ಬಹು ಆಕರ ಮಾದರಿಗಳನ್ನು ಅನುಸರಿಸುತ್ತಾರೆ. ವಿಭಿನ್ನ ವ್ಯಕ್ತಿಗಳಿಂದ ವಿಭಿನ್ನ ಕಾಲಘಟ್ಟಗಳಲ್ಲಿ ಸಂಗ್ರಹವಾದ ವಿಭಿನ್ನ ಹಸ್ತಪ್ರತಿಗಳು ಸಿಗುವುದರಿಂದ ಪೀಳಿಗೆ ರಚನೆ ಅಸಾಧ್ಯ. ಯಾವ ಪ್ರತಿಯೂ ಸಗಣ್ಯವಲ್ಲ, ಹಾಗಾಗಿ ಸಂಪಾದನೆಯ ದೃಷ್ಟಿಯಿಂದ ಒಂದೊಂದು ಕೀರ್ತನೆಯನ್ನು ಒಂದೊಂದು ಪ್ರತ್ಯೇಕ ಕಾವ್ಯದಂತೆ ಭಾವಿಸಿ ಒಂದು ಆಧಾರ ಪ್ರತಿಯನ್ನು ಆಯ್ಕುಕೊಂಡು ನಂತರ ಪರಿಷ್ಕರಣಕ್ಕೆ ಅಣಿಯಾಗುತ್ತಾರೆ.

ಶ್ರೀ ವಾದಿರಾಜರ ದೀರ್ಘ ಕೃತಿಗಳ ಸಂಪಾದನೆಯಲ್ಲಿ ಈ ವಿಧಾನ ವನ್ನು ಸ್ಪಷ್ಟವಾಗಿ ಗುರುತಿಸಬಹುದು. ವೈಕುಂಠವರ್ಣನೆ, ಅವತಾರತ್ರಯ ಮಧ್ವಸುವ್ವಾಲಿ, ಭ್ರಮರಗೀತೆ, ಲಕ್ಷ್ಮೀಶೋಭನ ಹಾಡು ಕೃತಿಗಳನ್ನು ಪ್ರತ್ಯೇಕ ಘಟಕಗಳನ್ನಾಗಿಸಿಕೊಂಡು ಪ್ರತ್ಯೇಕ ಹಾಗೂ ಬಹುಮೂಲದ ಸಾಮಗ್ರಿಗಳನ್ನು ಪಾಠಪರಿಷ್ಕರಣೆಗೆ ಆಕರವಾಗಿಸಿ ಕೊಳ್ಳುತ್ತಾರೆ. ವೈಕುಂಠ ವರ್ಣನೆಯನ್ನು ಒಂದು ಕಾಗದ ಪ್ರತಿ ಎರಡು ಮುದ್ರಿತ ಪ್ರತಿಗಳ ಸಹಾಯದಿಂದ ಪರಿಷ್ಕರಿಸಿದ್ದಾರೆ. ಕಾಗದದ ಪ್ರತಿಯನ್ನು ಮೂಲಪಾಠವನ್ನಾಗಿಟ್ಟು ಕೊಂಡಿದ್ದಾರೆ. ಅವತಾರತ್ರಯ ಮಧ್ವಸುವ್ವಾಲಿಗೆ ಒಂದೇ ಮುದ್ರಿತ ಪ್ರತಿ ಬಳಸಿದ್ದಾರೆ. ಭ್ರಮರಗೀತೆಯನ್ನು ಒಂದು ಕಾಗದ ಹಾಗೂ ಎರಡು ಮುದ್ರಿತ ಪ್ರತಿ ಬಳಸಿ ಪರಿಷ್ಕರಿಸಿದ್ದಾರೆ. ೧೯೨೨ರಲ್ಲಿ ಪ್ರಕಟವಾದ ಮುದ್ರಿತ ಪ್ರತಿಯನ್ನು ಆಧಾರವಾಗಿಟ್ಟು ಕೊಂಡಿದ್ದಾರೆ. ಲಕ್ಷ್ಮೀಶೋಭನ ಹಾಡು ಕೃತಿಯನ್ನು ಐದು ಮುದ್ರಿತ ಮತ್ತು ಮೂರು ಕಾಗದ ಪ್ರತಿಗಳನ್ನು(ಒಟ್ಟು ಎಂಟು ಆಕರಗಳನ್ನು) ಆಧರಿಸಿ ಪರಿಷ್ಕರಿಸಿದ್ದಾರೆ.

ಡಾ.ಟಿ.ಎನ್.ನಾಗರತ್ನ ಅವರ "ಮೂಲಪ್ರತಿಯ" ಪರಿಕಲ್ಪನೆಯೇ ರೂಢಿಗತ ಶಾಸ್ತ್ರೀಯ ಸಂಪಾದನೆಗಿಂತ ತುಸು ಭಿನ್ನವಾದದ್ದು. ಯಾವುದೇ ಒಂದು ಸಂಗ್ರಹ ಸಂಕಲನ ಅಥವಾ ನಿರ್ದಿಷ್ಟ ಪಠ್ಯವನ್ನು ಅವರು ಮೂಲಪ್ರತಿ ಎಂದು ಒಪ್ಪುವುದಿಲ್ಲ. ತಾವು ಸಂಪಾದಿಸಬೇಕಾಗಿದ್ದ ಕೃತಿ ಮತ್ತು ಕರ್ತೃವಿನ ಲಭ್ಯ ಆಕರಗಳನ್ನೆಲ್ಲ ಒಟ್ಟುಗೂಡಿಸಿ ಅವುಗಳಲ್ಲಿ ಆಯಾ ದಾಸರು ಬದುಕಿ ಬಾಳಿದ ಸ್ಥಳದ, ಮನೆತನದ, ಪ್ರಾದೇಶಿಕ, ಪ್ರಾಚೀನ ವೈಶಿಷ್ಟ್ಯ, ಭಾಷೆಯ ಸ್ವರೂಪ, ವಿದ್ವತ್ತಿನ ಹಿನ್ನೆಲೆ ಮುಂತಾದ ಪಠ್ಯೇತರ ವಿಚಾರಗಳನ್ನಿಟ್ಟುಕೊಂಡು ರಚನೆಯೊಂದರ ಬಾಹ್ಯ ಮತ್ತು ಆಂತರಿಕ ಸ್ವರೂಪವನ್ನು ನಿರ್ಧರಿಸುವ ಪ್ರಯತ್ನ ಮಾಡುತ್ತಾರೆ. ಅಂದರೆ ಲಿಖಿತ ಮತ್ತು ಅಲಿಖಿತ, ಮೂಲ ಮತ್ತು ಶುದ್ಧ ಎನ್ನುವ ತರ್ಕಗಳಲ್ಲಿಯೇ ಸುತ್ತುತ್ತಿದ್ದ ಕನ್ನಡ ಗ್ರಂಥಸಂಪಾದನ ಶಾಸ್ತ್ರಕ್ಕೆ ಅವುಗಳಾಚೆಯೂ ಸಂಪಾದಕನಿಗೆ ಬೇಕಾದ ಆಕರಗಳ ಲಭ್ಯತೆ ಇದೆ ಎನ್ನುವುದನ್ನು ತೋರಿಸಿಕೊಡುತ್ತಾರೆ. ರಚನೆಯೊಂದನ್ನು ಕೇವಲ ಶಾಬ್ಧಿಕ ಅಥವಾ ಅಕ್ಷರ ಸಂಸ್ಕರಣೆಗೆ ಸೀಮಿತವಾಗಿಸದೆ ಅದನ್ನು ಸಾಂಸ್ಕೃತಿಕ ಪರಿಷ್ಕರಣೆಗೆ ಒಳಪಡಿಸಬೇಕಾದ ಬಹುಶಿಸ್ತೀಯ ವಿಧಾನದ ಜರೂರನ್ನು ಪ್ರತಿಪಾದಿಸುತ್ತಾರೆ. ಕಟ್ಟುವ ಕ್ರಿಯೆಗಿಂತ ಒಳಗೊಳ್ಳುತ್ತಲೇ ವಿಸ್ತಾರ ಪಡೆಯುವ ಪರಿಷ್ಕರಣ ಮಾದರಿಯೊಂದನ್ನು ನಾಗರತ್ನ ಅವರಲ್ಲಿ ಕಾಣಬಹುದು.

ಭಿನ್ನಪಾಠ ಮತ್ತು ಭಿನ್ನ ಪ್ರತಿಗಳ ರೂಪದಲ್ಲಿ ಕಾಣುವ ಕೀರ್ತನೆಗಳನ್ನು, ಸುಳಾದಿ ಉಗಾಭೋಗಗಳನ್ನು ವಿಶ್ವಾಸಾರ್ಹವಾಗಿ ಸ್ವೀಕರಿಸುತ್ತಾರೆ. ಒಂದೇ ಆಕರದಲ್ಲಿ ಸಿಗುವ ಕೀರ್ತನೆಗಳನ್ನು ಅಷ್ಟು ನಿಖರ ಪಾಠವೆಂದು ಗಣಿಸುವುದಿಲ್ಲ. ದಾಸರ ಅಂಕಿತಗಳನ್ನು ಕರ್ತೃತ್ವ ನಿರ್ಣಯದಲ್ಲಿ ಪ್ರಮುಖ ಸಾಕ್ಷಿಯಾಗಿ ಬಳಸುತ್ತಾರೆ. ರಂಗವಿಠಲ (ಶ್ರೀಪಾದರಾಜರು) ಹಯವದನ(ವಾದಿರಾಜರು) ಶ್ರೀಕೃಷ್ಣ (ವ್ಯಾಸರಾಯರು) ಆದಿಕೇಶವ (ಕನಕದಾಸರು) ಪುರಂದರ ವಿಠಲ (ಪುರಂದರದಾಸರು) ವಿಜಯ ವಿಠಲ (ವಿಜಯದಾಸರು) ಇತ್ಯಾದಿ. ಒಂದು ರಚನೆ ಅಥವಾ ಕೃತಿ ಹೆಚ್ಚಿನ ಆಕರಗಳಲ್ಲಿ ಯಾವ ಅಂಕಿತದಲ್ಲಿ ಇರುತ್ತದೋ ಅದನ್ನು ನಿಜವೆಂದು ಒಪ್ಪಿಕೊಳ್ಳುತ್ತಾರೆ. ಉದಾಹರಣೆಗೆ: 'ಮಾಯಾವಾದಿ ಗಂಡನೊಲ್ಲೆನೆ' ಎನ್ನುವ ಪದ ರಂಗವಿಠಲ ಎನ್ನುವ ಅಂಕಿತದಲ್ಲಿ ಎರಡು ಆಕರಗಳಲ್ಲಿ ದೊರೆಯುತ್ತದೆ. ಆದರೆ ಹೆಚ್ಚಿನ ಆಕರಗಳಲ್ಲಿ ಪುರಂದರವಿಠಲ ಎನ್ನುವ ಅಂಕಿತದಲ್ಲಿರುವುದನ್ನು ಗುರುತಿಸಿ ಅದು ಪುರಂದರದಾಸರ

Scanned with CamScanner

ರಚನೆ ಎಂದು ತೀರ್ಮಾನಿಸುತ್ತಾರೆ. ಅಂಕಿತದ ಮೂಲಕವೇ ಅಚಲಾನಂದ ದಾಸರು ಒಬ್ಬರಲ್ಲ ಇಬ್ಬರು ಎನ್ನುವುದನ್ನು ಅವರು ಶೋಧಿಸಿದ್ದು ಇಲ್ಲಿ ಗಮನಾರ್ಹ. ಇದನ್ನು ಅಂಕಿತ ಪಲ್ಲಟವೆಂದು ಹೇಳುತ್ತಾರೆ. ಆಕರಗಳ ಬಹುಮೂಲಗಳನ್ನು ಪಾಠಪರಿಷ್ಕರಣೆಯ ಮುಖ್ಯ ವಾಹಕವಾಗಿಸಿಕೊಳ್ಳುವುದು ಡಾ.ಟಿ.ಎನ್.ನಾಗರತ್ನ ಅವರ ಸಂಪಾದನೆಯ ವೈಶಿಷ್ಟ್ಯವಾಗಿದೆ.

ಎರಡನೆ ಮಾದರಿ: ಡಾ.ಟಿ.ಎನ್.ನಾಗರತ್ನ ಅವರ ಗ್ರಂಥಸಂಪಾದನೆಯ ಮತ್ತೊಂದು ಮಾದರಿ ಎಂದರೆ, ಅಂಕಿತ ಪ್ರಾಸ, ಅನುಪ್ರಾಸ, ಶೈಲಿ, ನಡಿ ಅರ್ಥಾನುಸಂಧಾನ ಕೃತಿಯ ಅರ್ಥ ಮತ್ತು ಭಾವದಂತಹ 'ಅಂತಃಸಂಭಾವ್ಯತೆ'ಗಳನ್ನು ಆಧಾರವಾಗಿಟ್ಟುಕೊಂಡು ಪಾಠ ನಿರ್ಣಯ ಮಾಡುವುದು. ಉದಾ: 'ತೋರೆ ಬೇಗನೆ ತೋಯಜನಯನೆ' ಎನ್ನುವ ಕೀರ್ತನೆಯು ವಾದಿರಾಜರ ಮತ್ತು ವ್ಯಾಸರಾಯರ ಕೀರ್ತನೆಗಳ ಸಂಗ್ರಹದಲ್ಲಿ ದೊರಕುತ್ತದೆ. ಹನ್ನೆಂದು ಪ್ರತಿಗಳಲ್ಲಿ 'ಹಯವದನ ಶ್ರೀಕೃಷ್ಣ ಅಂಕಿತದಲ್ಲಿದೆ. ಒಂದೇ ಒಂದು ಮುದ್ರಿತ ಪ್ರತಿಯಲ್ಲಿ ಜಗವ ಮೋಹಿಸಿ ಹಯವೇರ್ದ ಶ್ರೀಕೃಷ್ಣ ಎಂದಿದೆ. ಈ ಕೀರ್ತನೆಯ ಅರ್ಥ, ಪ್ರಾಸ ಹಾಗೂ ದಶಾವತಾರಗಳಲ್ಲಿ ಅದರ ಉಲ್ಲೇಖವನ್ನೂ ಹಾಗೂ ಕೃತಿಯ ಅಂತಃಸಂಭಾವ್ಯತೆಯನ್ನು ಮುಖ್ಯವಾಗಿ ಆಧರಿಸಿ ಅದು ವ್ಯಾಸರಾಯರ ಕೃತಿ ಎಂದು ನಿರ್ಧರಿಸುತ್ತಾರೆ. 'ಕೃಷ್ಣ ನೀ ಬೇಗನೆ ಬಾರೋ' ಎನ್ನುವ ಕೀರ್ತನೆಯ ಮೂರು ಪಾಠಗಳನ್ನು ಅವುಗಳ ಪರಸ್ಪರ ಸಂಬಂಧ ಮತ್ತು ಸಾದೃಶ್ಯಗಳನ್ನು ಗಮನಿಸಿ ಅದರ ಅಂತಃಸಂಭಾವ್ಯತೆ ನೆಲೆಯಲ್ಲಿ ಶೋಧಿಸಿ ಈ ರಚನೆ ಪುರಂದರದಾಸರದೂ ಅಲ್ಲ ವ್ಯಾಸರಾಯರದೂ ಅಲ್ಲ ಎಂದು ತೀರ್ಮಾನಿಸುತ್ತಾರೆ.[೩]

'ಶರಣೆಂಬೆ ವಾಣಿ ಪೊರೆಯೆ ಕಲ್ಯಾಣಿ' ಕೀರ್ತನೆಯ ಕೊನೆಗೆ ಬರುವ 'ಪುರಂದರ ವಿಠಲನ ಸೋದರ ಸೊಸೆಯ' ಎಂಬುದನ್ನು ಎಸ್.ಕೆ.ರಾಮಚಂದ್ರರಾಯರು ಇದು ಅಶುದ್ಧ ಪಾಠ, ವಿಷ್ಣುವಿನ ಮಗ ಬ್ರಹ್ಮ; ಬ್ರಹ್ಮನ ಹೆಂಡತಿ ಸರಸ್ವತಿ ಎಂದಾದರೆ ವಿಷ್ಣುವಿನ ಸೊಸೆಯೇ ಆಯಿತು; 'ಸೋದರ ಸೊಸೆ ಎಂಬ ನಂಟು ಕೂಡುವುದಿಲ್ಲ. ಮುಂದಿನ ಕೃತಿಯಲ್ಲಿ "ಇಂದಿರಾರಮಣನ ಹಿರಿಯಸೊಸೆಯು ನೀನು" ಎಂದಿರುವುದನ್ನು ಗಮನಿಸಿದರೆ ಇಲ್ಲಿ ಹಿರಿಯ ಎಂಬುದಕ್ಕೆ ಬದಲಾಗಿ 'ಸೋದರ' ಎಂದು ಲಿಪಿಕಾರರು ಬರೆದರು ಎಂದು ತೋರುತ್ತದೆ' ಎಂದು ಹೇಳುತ್ತಾರೆ. ಆದರೆ ಟಿ.ಎನ್. ನಾಗರತ್ನ ಅವರು ಶ್ವೇತವರಾಹ ಕಲ್ಪದಲ್ಲಿ ಶ್ರೀಹರಿ ತನ್ನ ಮಗನಾದ ಬ್ರಹ್ಮನ ಮೂಗಿನಿಂದ ಹುಟ್ಟುವನು ಎಂದು ವಾದಿರಾಜರ ಕೀರ್ತನೆಯೊಂದಕ್ಕೆ ಟಿಪ್ಪಣಿ ಬರೆಯುತ್ತಾ, 'ಪುರಂದರ ವಿಠಲನ ಸೋದರ ಸೊಸೆ ಅಲ್ಲ' 'ಪುರಂದರ ವಿಠಲನ ಸೋದರಿ ಸೊಸೆ' ಎಂದು ತಿದ್ದಿ ಓದುತ್ತಾರೆ. ಬ್ರಹ್ಮನ ಮಗಳು ವಾಣಿ, ಬ್ರಹ್ಮನ ಮೂಗಿನಿಂದ ಹುಟ್ಟಿದವ ಶ್ರೀಹರಿ, ಆದ್ದರಿಂದ ವಾಣಿ ಶ್ರೀಹರಿಗೆ ಸೋದರಿಯೂ ಹೌದು, ಬ್ರಹ್ಮನ ಹೆಂಡತಿಯಾದ ಕಾರಣ ಶ್ರೀಹರಿಗೆ ಸೊಸೆಯೂ ಹೌದು ಎಂಬುದನ್ನು ಗುರುತಿಸಿ ಸೋದ'ರ' ಎಂಬುದನ್ನು ಸೋದ'ರಿ' ಎಂದು ಓದಿ ದೊಡ್ಡ ಅಡಚಣೆಯನ್ನು ನಿವಾರಿಸುತ್ತಾರೆ.

ಮೂರನೆ ಮಾದರಿ: ಡಾ.ಟಿ.ಎನ್.ನಾಗರತ್ನ ಅವರ ಸಂಪಾದನೆಯ ಮೂರನೆಯ ಮಾದರಿ ಎಂದರೆ ಸಂಕೇತಗಳ ಸೃಷ್ಟಿ. ಅಂಕಿತ ನಿರ್ಧಾರದ ನಂತರ ದೊರೆಯುವ ಎಲ್ಲ ಆಕರಗಳನ್ನು, ಕೃತಿಗಳನ್ನು ಗುರುತಿಸಿ ಅಷ್ಟು ಪ್ರತಿಗಳಿಗೆ ಭಿನ್ನ ಸಂಕೇತಗಳನ್ನು ಕೊಡುತ್ತಾರೆ. ಓಲೆ, ಕಾಗದ, ತ್ರುಟಿತ, ಶುದ್ಧ, ಅಶುದ್ಧ ಎಂದು ತಿರಸ್ಕರಿಸದೆ ಅಸಂಖ್ಯಾತ ಸ್ಖಾಲಿತ್ಯಗಳಿಗೆ ನುಡಿ, ಸಾಲು, ಶಬ್ದ, ಅಕ್ಷರಪಲ್ಲಟ ಇವುಗಳನ್ನು ನಿರ್ದೇಶಿಸಲು ವಿಪುಲವಾದ ಸಂಕೇತಗಳನ್ನು ಸೃಷ್ಟಿಸಿಕೊಳ್ಳುತ್ತಾರೆ. ಕೃತಿಕಾರರ ಹೆಸರಿನ ಮೊದಲ ಅಕ್ಷರವನ್ನೇ ಆಯಾ ಆಕರಕ್ಕೆ ಸಂಕೇತವಾಗಿ ಬಳಸುತ್ತಾರೆ. ಸ್ಪಷ್ಟತೆಗಾಗಿ ಮೇಲೆ ನೀಡುವ ಸಂಕೇತಗಳಿಗೆ ಆಯಾ ಪುಟದ ಅಡಿಯಲ್ಲಿಯೇ ವಿವರಗಳನ್ನು ನೀಡುತ್ತಾರೆ. ಅಂದರೆ ಪ್ರತಿ ಪುಟವನ್ನು, ಪ್ರತಿ ಕೀರ್ತನೆಯನ್ನು ಪ್ರತ್ಯೇಕ ಘಟಕವಾಗಿ ಪರಿಗಣಿಸುತ್ತಾರೆ. ಹೀಗೆ ಬಹುಮೂಲಗಳಲ್ಲಿ, ಅಂತಃಸಂಭಾವ್ಯತೆಯಲ್ಲಿ ಸಂಕೇತಗಳಲ್ಲಿ ಕೈಯೂರಿ ಪರಿಷ್ಕರಣಕಾರ್ಯ ಮಾಡುವುದು ಡಾ.ಟಿ.ಎನ್.ನಾಗರತ್ನ ಅವರ ಸಂಪಾದನೆಯ ಬಹುಮುಖ್ಯ ವೈಧಾನಿಕತೆಯಾಗಿದೆ.

ಸಮಾರೋಪ: ಬರವಣಿಗೆಯೇ ಅಧಿಕೃತ ಹಾಗೂ ಶ್ರೇಷ್ಠವೆಂದು ನಂಬಿಸಿದ್ದ ಓರಿಯಂಟಲ್ ಮತ್ತು ವಸಾಹತುಶಾಹಿ ಚಿಂತನೆಗಳಿಗಿಂತ ತುಸು ಭಿನ್ನವಾಗಿ ಟಿ.ಎನ್. ನಾಗರತ್ನ ಅವರ ಆಲೋಚನೆಗಳನ್ನು ಗುರುತಿಸಲು ಸಾಧ್ಯವಿದೆ. ದಾಸರ ಕೀರ್ತನೆಗಳು ಹಾಗೂ ಹಾಡುಗಳು ಸಾಂಪ್ರದಾಯಿಕ ನೆಲೆಯಲ್ಲಿಯೂ ಹೆಣ್ಣಿನ ಹಾಡಿನ ಸೃಜನಶೀಲತೆಯನ್ನು ಅರಳಿಸಿದ ರೀತಿ ತೀರ ಹೊಸದು. ಪುರಾಣ ಪುಣ್ಯಕಥೆಗಳ ವಾಚನ ಮತ್ತು ಶ್ರವಣವು ಜೈನ ಮತ್ತು ವೈದಿಕ ಮಹಿಳೆಯರ ಬದುಕಿನ ಭಾಗವಾಗಿತ್ತು. ಸ್ತ್ರೀ ಶಿಕ್ಷಣಕ್ಕೆ ಆದ್ಯತೆ ಇಲ್ಲದ ಕಾಲದಲ್ಲಿ ಈ ಪ್ರಕ್ರಿಯೆ ಮಹತ್ವದ್ದಾಗಿತ್ತು. ವಾಸುದೇವ ಪಾರಿಜಾತದಲ್ಲಿನ ರೋಹಿಣಿ ಸ್ವಯಂವರ ಭಾಗ, ಶ್ರೀಕೃಷ್ಣ ಪಾರಿಜಾತದ ಕೃಷ್ಣ ರುಕ್ಮಿಣಿ, ಕೃಷ್ಣ ಕೊರವಂಜಿ, ಕೃಷ್ಣ ಸತ್ಯಭಾಮೆ, ರಾಧೆ ಕೃಷ್ಣ ಮುಂತಾದ ಕಥಾ ಭಾಗಗಳನ್ನು ಮನೆಯಲ್ಲಿ ಪಠಿಸಲು ವೈದಿಕ ಹೆಣ್ಣು ಮಕ್ಕಳು ಪ್ರತಿಮಾಡಿಸಿ ಅಥವಾ ಮಾಡಿ ಇಟ್ಟುಕೊಳ್ಳುತ್ತಿದ್ದರು. ಹಂಪಿ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದ(೧೯೭) ಶ್ರೀಕೃಷ್ಣ ಪಾರಿಜಾತದ ಹಸ್ತಪ್ರತಿಯನ್ನು ಜೀಜಾಬಾಯಿ(ರಮಾಬಾಯಿ) ಅವರು ನಿತ್ಯದ ಪಠಣಕ್ಕೆ ಸಚಿತ್ರವಾಗಿ ಸ್ವತಃ ಬರೆದಿಟ್ಟುಕೊಂಡಿದ್ದು ಇಲ್ಲಿ ಉಲ್ಲೇಖನೀಯ.[೪] ದಾಸರ ಎಷ್ಟೋ ಕೀರ್ತನೆಗಳನ್ನು ಮಹಿಳೆಯರ ಬಾಯಿಯಿಂದ ಹಾಡಿಸಿ ಕೇಳಿ ಲಿಪಿ ಮಾಡಿಕೊಂಡ ಸಂದರ್ಭಗಳನ್ನು ಬಹಳಷ್ಟು ಜನ ಸಂಗ್ರಾಹಕರು ಮತ್ತು ಸಂಪಾದಕರು ದಾಖಲಿಸಿದ್ದಾರೆ. ಕನ್ನಡ ಭಾಷೆ ಲಿಪಿ ಮತ್ತು ಅಭಿವ್ಯಕ್ತಿ ರೂಪಗಳು ಬಹುಸಂಖ್ಯಾತರ ಬದುಕಿನೊಂದಿಗೆ ಹೊಂದಿದ್ದ ಕರುಳ ಹಾಗೂ ಕೊರಳ ಸಂಬಂಧಗಳನ್ನು ಈ ಸಂಗತಿಗಳು ಗ್ರಹಿಕೆಗೆ ತರುತ್ತವೆ.

Scanned with CamScanner

ಈ ಅರ್ಥದಲ್ಲಿ ಡಾ.ಟಿ.ಎನ್.ನಾಗರತ್ನ ಅವರು ನುಡಿ ಅಥವಾ ಲಿಪಿ, ಸ್ವಭಾವ ಅಥವಾ ಅರ್ಥ ಎನ್ನುವುದು ವಸ್ತುವಿನಲ್ಲಿರುವುದಿಲ್ಲ, ಅವು ಮನುಷ್ಯ ರೂಪಿಸಿಕೊಳ್ಳುವ ವಸ್ತು ಸಂಬಂಧ ಹಾಗೂ ಸಂವಾದದ ಮೂಲಕ ರೂಪತಾಳುತ್ತವೆ. ಸಾಹಿತ್ಯವು ಸಮೂಹ ರಚನಾ ಕ್ರಿಯೆಯ ಭಾಗ ಎನ್ನುವ ನಂಬಿಕೆಯಿಂದ ತಮ್ಮ ಪರಿಷ್ಕರಣೆಗೆ ಬೇಕಾದ ಪರಿಭಾಷೆಗಳನ್ನು ಹಾಗೂ ವಿಧಾನಗಳನ್ನು ಟಂಕಿಸಿಕೊಳ್ಳುತ್ತಾರೆ. ನುಡಿ ಮತ್ತು ಲಿಪಿರೂಪಗಳು ಸಾಮಾಜಿಕ ಬದುಕಲ್ಲಿ ಹುಟ್ಟುಹಾಕಿದ್ದ ಬಹುರೂಪಗಳನ್ನು ಪುನಾರಚಿಸಿಕೊಳ್ಳುವಲ್ಲಿ ಡಾ.ಟಿ.ಎನ್.ನಾಗರತ್ನ ಅವರು ಒಲವು ತೋರುತ್ತಾರೆ ಎನ್ನುವುದನ್ನು ಅವರ ವೈಧಾನಿಕತೆಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಅರಿವು, ಅನುಭವ ಮತ್ತು ಕ್ರಿಯೆಯ ಸಾತತ್ಯದಲ್ಲಿ ಒಂದು ಕೃತಿಯನ್ನು ಮರುಶೋಧಿಸಿಕೊಳ್ಳುವ ಅವರ ವಿದ್ವತ್ ನೆಲೆಯೇ ವಿಶಿಷ್ಟವಾದದ್ದು. ಈ ಕಾರಣಕ್ಕಾಗಿ ಹರಪನಹಳ್ಳಿ ಭೀಮವ್ವನನ್ನಾಗಲೀ ಗೋಪಾಲದಾಸರ ಕೃತಿಗಳಲ್ಲಿ ಕಾಣುವ ಹೆಣ್ಣಿನ ಬಗೆಗಿನ ವಿನೂತ ದೃಷ್ಟಿಕೋನವನ್ನಾಗಲೀ, ಪುರಂದರ ವಿಠಲನ ಸೋದರ ಸೊಸೆ ಅಲ್ಲ 'ಸೋದರಿ ಸೊಸೆ' ಎನ್ನುವ ಹಲವು ಹೆಣ್ಣು ಸಂವೇದನೆಗಳನ್ನು ಸೂಕ್ಷ್ಮವಾಗಿ ಗ್ರಹಿಸಲು ಅವರಿಗೆ ಸಾಧ್ಯವಾಗಿದೆ.

ಡಾ.ಟಿ.ಎನ್.ನಾಗರತ್ನ ಅವರು ಬದುಕಿನುದ್ದಕ್ಕೂ ಹರಿ ದಾಸಸಾಹಿತ್ಯ ಸಂಗ್ರಹ, ಸಂಗೋಪನ, ಪರಿಷ್ಕರಣ, ಪ್ರಕಟಣ ಹಾಗೂ ಪ್ರಸರಣ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹಲವು ಹೊಸ ವಿಧಾನಗಳನ್ನು, ಭಿನ್ನ ಆಲೋಚನ ಕ್ರಮಗಳನ್ನು, ತಮ್ಮದೇ ರೀತಿಯ ಅನುಸಂಧಾನದ ನೆಲೆಗಳನ್ನು ರೂಪಿಸಿಕೊಂಡು ಶಾಬ್ದಿಕ ಸಂಸ್ಕರಣಕ್ಕಿಂತ ಸಾಂಸ್ಕೃತಿಕ ಸಂಸ್ಕರಣೆಗೆ ಆದ್ಯತೆ ನೀಡಿದ್ದಾರೆ. ಡಾ.ಟಿ.ಎನ್.ನಾಗರತ್ನ ಅವರ ಗ್ರಂಥಸಂಪಾದನ ವೈಧಾನಿಕತೆಯ ಮುಖ್ಯ ಆಶಯಗಳನ್ನು ಈ ಕೆಳಗಿನಂತೆ ಸೂತ್ರೀಕರಿಸಿಕೊಳ್ಳಬಹುದು.

೧. ನಿರ್ದಿಷ್ಟ ಪಠ್ಯಗಳಿಗೆ ಹೊರತಾದ ಭೌಗೋಳಿಕ, ಸಾಮಾಜಿಕ, ಕೌಟುಂಬಿಕ, ಧಾರ್ಮಿಕ ಮತ್ತು ವಿದ್ವತ್ಪರಂಪರೆ ಕ್ಷೇತ್ರದರ್ಶನ ಹೀಗೆ ಪಠ್ಯೇತರ ಆಕರಗಳ ಮೂಲಕ ಪ್ರತಿಯೊಂದು ರಚನೆ ಮತ್ತು ಪ್ರತಿಯೊಬ್ಬ ಕೃತಿಕಾರರನ್ನು ಮರುಶೋಧಿಸಿಕೊಳ್ಳುತ್ತಾರೆ. ಮತ್ತು ಆ ವಿಚಾರಗಳನ್ನು ಆಯಾ ಕೃತಿಗಳ ಪ್ರಸ್ತಾವನೆಯಲ್ಲಿ ವಿವರವಾಗಿ ಚರ್ಚಿಸುತ್ತಾರೆ. ಅಂದರೆ ಅಕ್ಷರ ಕೇಂದ್ರಿತ ಪರಿಷ್ಕರಣೆಗಿಂತ ಬಹುಆಕರ ಕೇಂದ್ರಿತ ಪರಿಷ್ಕರಣೆಗೆ ಒತ್ತು ನೀಡುತ್ತಾರೆ.

೨. ಕೀರ್ತನೆಗಳನ್ನು ಅವು ರಚನೆಯಾದ ಸಂದರ್ಭ, ಆ ಕೀರ್ತನೆ, ಸುಳಾದಿ, ಉಗಾಭೋಗಗಳ ಮೇಲೆ ಪ್ರಭಾವ ಬೀರಿದ್ದ ಮತ, ಧರ್ಮ ಮತ್ತು ಪೌರಾಣಿಕ ಪ್ರಸಂಗಗಳನ್ನು ಇತರೆ ಕೀರ್ತನಕಾರರು ಹಾಗೂ ಕೀರ್ತನೆಗಳನ್ನು ತೌಲನಿಕವಾಗಿ ಅಧ್ಯಸಿಸುವ ಮೂಲಕ ಮಿಶ್ರ ಪಾಠಗಳನ್ನು ವಿಚಿತವಾಗಿ ಗುರುತಿಸಲು ಅವರು ಬಳಸುವ ವೈಧಾನಿಕತೆ ಅನುಕರಣೀಯವಾದದ್ದು. ಅಂಕಿತಗಳೇ ಅವರ ಶೋಧಕಾರ್ಯದ ಮುಖ್ಯ ಕೈದೀವಿಗೆಗಳು. ಇದಕ್ಕೆ ಒಳ್ಳೆಯ ಉದಾಹರಣೆ ಎಂದರೆ 'ದ್ರೌಪದಿ ಸೀರೆ ಸೆಳೆದದ್ದು' ಹಾಡಿನ ಕರ್ತೃತ್ವದ ಸಮಸ್ಯೆಯನ್ನು ಬಗೆಹರಿಸಿದ್ದು. ಅನುಬಂಧದಲ್ಲಿ ಕೊಡುವ ಪೂರ್ವಕತೆಗಳು ಮತ್ತು ಲಘು ಟಿಪ್ಪಣಿಗಳು, ಕೀರ್ತನೆಗಳ ಆಕರಗಳ ವ್ಯಾಪ್ತಿ ಮತ್ತು ಕೀರ್ತನಕಾರರ ವ್ಯಾಪಕ ಓದು ಮತ್ತು ಲೋಕಜ್ಞಾನವನ್ನು ತಿಳಿಯುವಲ್ಲಿ ಬಹುಮುಖ್ಯ ಸಂಗತಿಗಳಾಗಿವೆ. ಕಾವ್ಯಾತ್ಮಕವಾಗಿದ್ದ ಹರಿದಾಸ ಸಾಹಿತ್ಯ ವಿಜಯದಾಸರು, ಜಗನ್ನಾಥ ದಾಸರು, ಗೋಪಾಲದಾಸರು ಮತ್ತವರ ಶಿಷ್ಯರಿಂದ ಶಾಸ್ತ್ರ ಮತ್ತು ಮಧ್ವಸಿದ್ಧಾಂತ ಪ್ರತಿಪಾದನೆಯತ್ತ ಹೊರಳಿದ ಚಾರಿತ್ರಿಕ ಸಂಗತಿಗಳನ್ನು ಗುರುತಿಸಲು ಈ ಸಂಪಾದಕರು ಶಕ್ತರಾಗಿದ್ದಾರೆ.

೩. ಮದುವೆ, ಶೋಭನ, ಮಂಗಳಾರತಿ, ಉರುಟಣೆ, ಜೋಗುಳದಂತಹ ಲೌಕಿಕ ಶಾಸ್ತ್ರ ಸಂಪ್ರದಾಯಗಳಿಗೆ ಹರಿದಾಸರು ಪಾರಮಾರ್ಥಿಕ ಲೇಪ ಕೊಡುವ ವಿಶೇಷತೆಯನ್ನು ಸಂಪಾದಕರು ಸೂಕ್ಷ್ಮವಾಗಿ ಗುರುತಿಸುತ್ತಾರೆ. ವಾದಿರಾಜರ ಲಕ್ಷ್ಮೀಶೋಭನ ಹಾಡು ಹರಪನಹಳ್ಳಿ ಭೀಮವ್ವನ ಮುಯ್ಯದ ಹಾಡುಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆ ಮೂಲಕ ಆಯಾ ಕೀರ್ತನಕಾರರ ಇತಿ ಮಿತಿಗಳನ್ನೂ ಸಂಪಾದಕರು ಗುರುತಿಸುತ್ತಾರೆ.

೪. ಕೀರ್ತನೆಗಳ ವರ್ಗೀಕರಣ, ಅಧ್ಯಯನಪೂರ್ಣ ಹಾಗೂ ಸುದೀರ್ಘ ಪ್ರಸ್ತಾವನೆಗಳು, ಬಹು ಆಕರಗಳನ್ನು ಆಧರಿಸಿ ಮಾಡುವ ಶಿಸ್ತುಬದ್ಧ ಪಾಠಾಂತರ ನಿರ್ಣಯಕ್ರಮಗಳು, ಆಕರ ಪ್ರಧಾನ ಅನುಬಂಧಗಳು, ಹೊಸ ಆಕರಗಳ ಶೋಧ ಹಾಗೂ ಅವುಗಳ ವಿವೇಕಪೂರ್ಣ ವರ್ಗೀಕರಣ ಮತ್ತು ವ್ಯಾಖ್ಯಾನಗಳು ಡಾ.ಟಿ.ಎನ್.ನಾಗರತ್ನ ಅವರ ಆಳವಾದ ವಿದ್ವತ್ತಿನ ಫಲಿತಗಳಾಗಿವೆ. ಇವೆಲ್ಲವು ಡಾ.ಟಿ.ಎನ್. ನಾಗರತ್ನ ಅವರ ಪರಿಷ್ಕರಣ ವಿಧಾನಕ್ಕೆ ಶಬ್ದಾತೀತವಾದ ಸಾಂಸ್ಕೃತಿಕ ಪರಿಷ್ಕರಣೆಯ ಆಯಾಮಗಳನ್ನು ಒದಗಿಸಿವೆ.

ದೀರ್ಘಕಾಲ ಹರಿದಾಸ ಸಾಹಿತ್ಯ ಸಂಪಾದನ ಕ್ಷೇತ್ರದಲ್ಲಿ ತೊಡಗಿಕೊಂಡು ಕಂಠಸ್ಥ ಸ್ವರೂಪದ ಹರಿದಾಸ ಸಾಹಿತ್ಯಕ್ಕೊಂದು ಹೊಸರೂಪ ಕೊಟ್ಟದ್ದನ್ನು ಕನ್ನಡ ಜಗತ್ತು ಮರೆಯಲಾರದು. ಎಷ್ಟೇ ಪರಿಶ್ರಮವಾದರೂ ಉತ್ತಮ ಪಾಠಗಳನ್ನು ಕೊಡಬೇಕೆನ್ನುವ ಡಾ.ಟಿ.ಎನ್.ನಾಗರತ್ನ ಅವರ ಸಂಕಲ್ಪ ಅವರು ಸಂಪಾದಿಸಿದ ಎಲ್ಲ ಕೃತಿಗಳಲ್ಲಿ ಎದ್ದು ಕಾಣುತ್ತದೆ. ಹಲವು ತೊಡಕುಗಳನ್ನು ಬಿಡಿಸಿ ಕೀರ್ತನೆಗಳು ಓದುಗರಿಗೆ ಸರಾಗವಾಗಿ ಅರ್ಥವಾಗಲು ತಮ್ಮ ಬಹುಶ್ರುತ ವಿದ್ವತ್ತನ್ನು ಧಾರೆ ಎರೆದಿದ್ದಾರೆ. ಮೌಲಿಕ ವ್ಯಕ್ತಿತ್ವದ ಡಾ.ಟಿ.ಎನ್.ನಾಗರತ್ನ ಅವರು ಯಾವತ್ತು ನಮಗೆ ಮಾರ್ಗದರ್ಶನ ಮಾಡುತ್ತ ಹಸ್ತಪ್ರತಿ ಮತ್ತು ಗ್ರಂಥಸಂಪಾದನ ಕ್ಷೇತ್ರ ಇನ್ನಷ್ಟು ಹೊಸರೀತಿ ಬೆಳೆಯುವ ಪ್ರೇರಣೆ ನೀಡಲಿ ಎಂದು ಆಶಿಸಿ ನನ್ನ ಮಾತು ಮುಗಿಸುತ್ತೇನೆ.

Scanned with CamScanner

ಕೊನೆ ಟಿಪ್ಪಣಿ

೧. ಡಾ.ಎಂ.ಎಸ್. ಆಶಾದೇವಿ, ಬೆಳಕಿಗಿಂತ ಬೆಳ್ಳಗಿತ್ತ, ಪುಟ.೧೧೫: ೨೦೧೬
೨. ಡಾ.ವೈ.ಸಿ. ಭಾನುಮತಿ, ಗ್ರಂಥಸಂಪಾದನೆ ಸಂಕಥನ, ಪುಟ.೪೭: ೨೦೧೩
೩. ದಾಸಸಾಹಿತ್ಯ ದರ್ಪಣ, ಪು.೧೨೯–೧೩೨; ೨೦೧೨
೪. ಪುರಂದರ ಸಾಹಿತ್ಯ ದರ್ಶನ, ಸಂ.೨, ಪದ್ಯ ೩೫; ಪು.೧೨೭; ೧೯೮೫
೫. ಡಾ.ಕೃಷ್ಣಕಟ್ಟಿ, ಶ್ರೀಕೃಷ್ಣಪಾರಿಜಾತ, ಪುಟ.೨೨; ೧೯೯೭

ಗ್ರಂಥಋಣ

೧. ಡಾ.ಟಿ.ಎನ್.ನಾಗರತ್ನ(ಸಂ), ಶ್ರೀ ಗೋಪಾಲದಾಸರ ಕೃತಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೭
೨. ಹರಪನಹಳ್ಳಿ ಭೀಮವ್ವನ ಹಾಡುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೪
೩. ಶ್ರೀಜಗನ್ನಾಥದಾಸರ ಕೃತಿಗಳು (ಪಂಡಿತ ಮತ್ತು ಜನಪ್ರಿಯ ಆವೃತ್ತಿ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೮
೪. ಶ್ರೀ ರಾಮದಾಸರ ಕೃತಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೭
೫. ಶ್ರೀ ವಾದಿರಾಜರ ದೀರ್ಘ ಕೃತಿಗಳು (ಪಂಡಿತ ಮತ್ತು ಜನಪ್ರಿಯ ಆವೃತ್ತಿ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೭
೬ ಶ್ರೀ ವ್ಯಾಸರಾಯರ ಕೃತಿಗಳು (ಪಂಡಿತ ಮತ್ತು ಜನಪ್ರಿಯ ಆವೃತ್ತಿ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೨೦೦೧
೭ ಶ್ರೀ ಉರಗಾದಿ ವಿಠಲದಾಸರ ಮತ್ತು ಇತರ ಕೀರ್ತನೆಗಳು, ಸಮಗ್ರ ದಾಸ ಸಾಹಿತ್ಯ ಸಂಪುಟ–೧೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೩
೮. ಕನಕದಾಸರ ಕೀರ್ತನೆಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೨೦೦೪
೯. ಹರಿದಾಸರ ಜನಪ್ರಿಯ ಹಾಡುಗಳು (ಮಂದಾಕಿನಿಯವರೊಂದಿಗೆ ಸಂಪಾದಿತ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೬
೧೦. ಕೀರ್ತನಕಾರರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೬
೧೧. ಹರಿದಾಸ ಸಾಹಿತ್ಯ: ಉಗಮ ವಿಕಾಸ ಸಾಧನೆ ಸಿದ್ಧಿ, ಗುಲಬರ್ಗಾ ವಿಶ್ವವಿದ್ಯಾಲಯ.
೧೨. ಶ್ರೀಪಾದರಾಜರು ಜೀವನ ಮತ್ತು ಕೃತಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪ್ರಮು.೨೦೧೪ ದ್ವಿಮು.
೧೩. ಹರಿದಾಸರ ಭಕ್ತಿ ಸ್ವರೂಪ (ಪಿಎಚ್.ಡಿ. ಮಹಾಪ್ರಬಂಧ) ಮೈಸೂರು ವಿಶ್ವವಿದ್ಯಾನಿಲಯ, ೧೯೮೬

೧೪. ಕನಕದಾಸ, ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೦೦
೧೫. ದಾಸ ಸಾಹಿತ್ಯ ಸುಧೆ, ಗಾನ ಭಾರತಿ (ರಿ) ಮೈಸೂರು, ೧೯೯೧
೧೬. ದಾಸ ಸಾಹಿತ್ಯ ದರ್ಪಣ (ಪ್ರಬಂಧಗಳು) ಅಭಿರುಚಿ ಪ್ರಕಾಶನ ಮೈಸೂರು, ೨೦೧೨
೧೭. ಕನಕ ಕೀರ್ತನ ತೋರಣ, ಕನಕ ಅಧ್ಯಯನ ಕೇಂದ್ರ, ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರ, ಉಡುಪಿ ೨೦೧೫
೧೮. ಡಾ.ವೀರೇಶ ಬಡಿಗೇರ, ಕನ್ನಡ ಹಸ್ತಪ್ರತಿಗಳ ಮೌಖಿಕ ಸಂಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭(ಮೇಲಿನ ೧ ರಿಂದ ೧೮ರ ವರೆಗಿನ ಕೃತಿಗಳ ಸಂಪಾದಕರು/ಲೇಖಕರು ಡಾ.ಟಿ.ಎನ್.ನಾಗರತ್ನ ಅವರು)
೧೯. ಡಾ.ವೈ.ಸಿ.ಭಾನುಮತಿ, ಗ್ರಂಥಸಂಪಾದನ ಸಂಕಥನ, ಸಿವಿಜಿ ಪಬ್ಲಿಕೇಷನ್, ಬೆಂಗಳೂರು, ೨೦೧೩
೨೦. ಡಾ. ಸಿ.ವೀರಣ್ಣ, ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ ಸಂಪುಟ ೧ ಮತ್ತು ೨, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೫ (ಮೊ.ಮು.)
೨೧. ಡಾ. ಕೃಷ್ಣಕಟ್ಟಿ (ಸಂ) ಶ್ರೀಕೃಷ್ಣ ಪಾರಿಜಾತ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭
೨೨. ಪ್ರೊ. ಸಾ.ಕೃ.ರಾಮಚಂದ್ರರಾವ್, ಆಧ್ಯಾತ್ಮ ದರ್ಶನ (ಪುರಂದರ ಸಾಹಿತ್ಯ ದರ್ಶನ–ಸಂಪುಟ–೨), ಕನ್ನಡ ಮತ್ತು ಸಂಸ್ಕೃತಿ ಇಲಾಖೆ–೧೯೮೫.

Scanned with CamScanner

22(i) 4

ವಿಶ್ವಕರ್ಮ ವಿಕಾಸವಾಣಿ

ವೈಶ್ವಕರ್ಮಣ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಾಸಪತ್ರಿಕೆ

(ಮಾದರಿ ಪತ್ರಿಕೆ)

ಸಂಪುಟ-4 ಫೆಬ್ರುವರಿ-2021 ಸಂಚಿಕೆ-12

ತಿಂಥಣಿ
ಶ್ರೀ ಮೌನೇಶ್ವರ
ಜಾತ್ರ
21-2-21 ರಿಂದ
26-2-21

ಡಾ॥ ಚಂದ್ರಶೇಖರ ಚಂಪಾದ ಅವರಿಗೆ
ಪದ್ಮಭೂಷಣ ಪ್ರಶಸ್ತಿ

ಶ್ರೀ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ (ರಿ) ಶಿರಸಂಗಿ - 591 126. ತಾ॥ ಸವದತ್ತಿ ಜಿ॥ ಬೆಳಗಾವಿ
www.srikalikasirsangi.org E-mail: vvikasvani@gmail.com

Scanned with CamScanner
Scanned with CamScanner

ವಿಶ್ವಕರ್ಮ ವಿಕಾಸವಾಣಿ

ವೈಶ್ವಕರ್ಮಣ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಾಸಪತ್ರಿಕೆ

(ಮಾದರಿ ಪತ್ರಿಕೆ)

ಶ್ರೀ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ(ರಿ)ಶಿರಸಂಗಿ – 591 126, ತಾ॥ ಸವದತ್ತಿ ಜಿ॥ ಬೆಳಗಾವಿ

ಸಂಪುಟ – 4 | ಫೆಬ್ರವರಿ–2021 | ಸಂಚಿಕೆ – 12

ಸಂಪಾದಕೀಯ ಮಂಡಳಿ

ಗೌರವ ಸಂಪಾದಕರು

ರಾಷ್ಟ್ರಸಂತ ಶ್ರೀ ಶಿವಾತ್ಮಾನಂದ ಸರಸ್ವತಿ ಸ್ವಾಮೀಜಿ,
ಜ್ಞಾನಾನಂದ ಆಶ್ರಮ, ನಂದಿ ಗ್ರಾಮ,
ಚಿಕ್ಕಬಳ್ಳಾಪುರ.

ಪ್ರಧಾನ ಸಂಪಾದಕರು

ಸಿ.ಪಿ. ಮಾಯಾಚಾರ ಎಂ.ಎ: ಬಿ.ಇಡಿ
+91 99456 88113, cpmayachari@gmail.com

ವ್ಯವಸ್ಥಾಪಕ ಸಂಪಾದಕರು

ಡಾ. ವಿರೂಪಾಕ್ಷ ಬಡಿಗೇರ
+91 94490 71840
ಡಾ॥ ವೀರೇಶ್ ಬಡಿಗೇರ
+91 94488 45789

ಪ್ರಕಾಶಕರು

ಪ್ರೊ. ಪಿ.ಬಿ. ಬಡಿಗೇರ
ಅಧ್ಯಕ್ಷರು : ಶ್ರೀ ವಿ.ಸ.ವಿ. ಸಂಸ್ಥೆ(ರಿ), ಶಿರಸಂಗಿ.
+ 91 94486 46012
08330-231144(ಕ)

ಸಂಪಾದಕೀಯ ಸಲಹಾ ಸಮಿತಿ

ಭೀಮಸೇನ ಬಡಿಗೇರ, ಅಶೋಕ ಕುಲ್ಲಳ್ಳಿಕರ,
ಬೈಕಾಡಿ ಜನಾರ್ಧನ ಆಚಾರ,
ಎಸ್.ಕೆ. ಪತ್ತಾರ, ಶ್ರೀಕಾಂತ ಬ. ಪತ್ತಾರ, ಎಸ್.ಎಮ್. ಕಮ್ಮಾರ,
ವೀರಣ್ಣ ಸೋಲಾಪುರ, ಗೋಪಾಲಕೃಷ್ಣ ಐ. ಮನ್ಸಾಚಾರ,
ಡಾ॥ ಗೋಪಾಲ ಮಹಾಮುನಿ,
ಸುರೇಶ ಜುಂಜರವಾಡ, ಕಾನೂನು ಸಲಹೆಗಾರರು –
ಮಹೇಶ ಬಡಿಗೇರ

: ಮುಖಪುಟ ಚಿತ್ರ :
ತಿಂಥಿಣಿ ಜಗದ್ಗುರು ಶ್ರೀ ಮೌನೇಶ್ವರರು

ಕಛೇರಿ ದೂರವಾಣಿ ಸಂಖ್ಯೆ :
08330 – 231144
ಇ-ಮೇಲ್ :
vvikasvani@gmail.com

ಕ್ರ. ಸಂ.	ವಿಷಯ	ಪುಟ
1.	ಸಂಪಾದಕೀಯ	3
2.	ಅಧ್ಯಕ್ಷರ ನುಡಿ	4
3.	ಕಾಳಿಕಾ ವೇದಿಕೆ	5
4.	ಲೇಖನ	
	ವಿಶ್ವಕರ್ಮರೇ ಶಾಸನಗಳ ಅಧಿಕಾರರು –ಸತೀಶ್ ಮುಳ್ಳೂರು, ಕೊಡಗು.	7
	ಲೋಕೋದ್ಧಾರಕ, ಕಾಲಜ್ಞಾನಿ ಶ್ರೀ ವೀರಬ್ರಹ್ಮೇಂದ್ರ ಸ್ವಾಮಿಗಳು ವಾಟ್‌ಆಪ್ ಮಾಹಿತಿ	8
	ಬಬಲಾದಿ ಕಾಲಜ್ಞಾನ ಪರಂಪರೆ ಡಾ. ವೀರೇಶ ಬಡಿಗೇರ, ಕನ್ನಡ ವಿ. ವಿ. ಹಂಪಿ.	11
	"ವಿಶ್ವಕರ್ಮ"-ಪರವೇ ವೇದಪೂರ್ವ ಡೈ ವಿಶ್ವಕರ್ಮ, (ಆಧಾರ-ಸಂಗ್ರಹ)	13
5.	ಗೌರವ	
	ಡಾ॥ ಚಂದ್ರಶೇಖರ ಕಂಬಾರರಿಗೆ ಪದ್ಮಭೂಷಣ ಪ್ರಶಸ್ತಿ – ಕೃಷ್ಣಪ್ಪ ಆರ್. ಆರ್. ನಗರ, ಬೆಂಗಳೂರು.	18
6.	ಪ್ರಾತ: ಸ್ಮರಣೀಯರು	
	ಹಾಡುನಟಿಯ ಕೊನೆಯ ಕೊಂಡಿ: ಶಾಂತಮ್ಮ ಗುಡಿಹಳ್ಳಿ ನಾಗಾರಾಜ, ಬೆಂಗಳೂರು.	19
7.	ಕಲಾ ಸಂಪನ್ನರು	
	ಬಹುಮುಖ ಪ್ರತಿಭೆಯ ಲೋಕ ಶಿಲ್ಪ ಈಶ್ವರಪ್ಪ ಲಾಳಿಕೆ ಡಾ/ಗೀತಾಬಾಯಿ ಬಡಿಗೇರ	20
8.	ನೀತಿಕತೆ	
	ಡಿ.ವಿ.ಜಿ. ಅವರ ಅದರ್ಶ ಜೀವನ –ಶ್ರೀ ವೀರೇಂದ್ರ ಸ್ವಾಮಿಗಳು, ಸವಲಗುಂದ	22
9.	ಸುತ್ತಮುತ್ತ	23
10.	ಅವಲೋಕನ	
	ಮೌನೇಶ್ವರರ ವಚನಗಳ ತಾತ್ಪರ್ಯ : ೫ ಡಾ॥ ವೀರೇಶ ಬಡಿಗೇರ	32

Scanned with CamScanner

Scanned with CamScanner

ಅವಲೋಕನ

ಮೌನೇಶ್ವರರ ವಚನಗಳ ತಾತ್ಪರ್ಯ : 19

ಕನ್ನಡ ಪುಸ್ತಕ ಪ್ರಾಧಿಕಾರ ತನ್ನ ದೇಸಿ ದರ್ಶನ ಮಾಲಿಕೆಯ ಮೊದಲ ಕೃತಿಯಾಗಿ ತಿಂತಿಣಿ ಮೌನೇಶ್ವರರ ವಚನಗಳು (ತಾತ್ಪರ್ಯ ಸಹಿತ) ಎಂಬ ಮೌನೇಶ್ವರರ ಸಮಗ್ರ ವಚನಗಳ 480 ಪುಟಗಳ ಪೊತ್ತಿಗೆಯನ್ನು 2016ರಲ್ಲಿ ಪ್ರಕಟಿಸಿದೆ. ಮೌನೇಶ್ವರರ ವಚನಗಳನ್ನು ಓದುಗರು ಅರ್ಥವತ್ತಾಗಿ ತಿಳಿಯಬೇಕೆಂಬ ದೃಷ್ಟಿಯಿಂದ ವಚನ ಹಾಗೂ ಅದರ ತಾತ್ಪರ್ಯವನ್ನು ಸರಣಿ ರೂಪದಲ್ಲಿ ನೀಡಲಾಗುತ್ತಿದೆ.

– ಸಂಪಾದಕ

(ಜನೇವರಿ 2020ರ ಸಂಚಿಕೆಯಿಂದ ಮುಂದುವರಿದುದು)

95

ಹಣಕ್ಕೆ ಹನ್ನೆರಡು ಮದ ನೆಣಕ್ಕೆ ಮೂವತ್ತಾರು ಮದ
ರಣಕ್ಕೆ ರಜತಾದ್ರಿ ಸರಿಯೆ ಮದಸೊಕ್ಕಿದರೆ ಮುಂದೆ
ಗುಣತೋರುತ್ತಿಹುದು ಬಸವಣ್ಣ

ತಾತ್ಪರ್ಯ: ಮನುಷ್ಯನ ಮದದ ವಿವಿಧ ರೂಪಗಳನ್ನು ವಚನ ಹೇಳುವಂತಿದೆ. ಹಣ ಅಂದರೆ ಸಂಪತ್ತಿನಿಂದಾಗಿ ಹನ್ನೆರಡು ಮದಗಳು ಹುಟ್ಟಿದರೆ, ಶ್ರೀಮಂತಿಕೆಯ ಸೊಕ್ಕಿನಿಂದ ಮೂವತ್ತಾರು ಮದಗಳು ಹುಟ್ಟುತ್ತವೆ. ಅದೇ ರೀತಿ ಯುದ್ಧೋನ್ಮಾದಕ್ಕೆ ರಜತಗಿರಿ ಸರಿಯಾಗದು. ಇಂಥ ಸೊಕ್ಕಿದ ಮದೋನ್ಮತ್ತರಿಗೆ ಮನುಷ್ಯನ ಸಾತ್ವಿಕ ನಡೆಗಳು ಸರಳ ಬದುಕಿನ ಕ್ರಮಗಳು ಅರ್ಥವಾಗುವುದಿಲ್ಲ.

96

ಓಜಿನ ಶರಣೆಂದು ಮೂದಲಿಸಿ ಕುರಿಗಳು
ಮೂಜಗದ ಒಡೆಯ ಮೋನಯ್ಯನ ಬಾಧೆಗೆ
ಸಿಕ್ಕುವರೆ ನರಗುರಿಗಳು, ಬಸವಣ್ಣ

ತಾತ್ಪರ್ಯ: ಮೌನೇಶ್ವರರನ್ನು ಅವಮಾನಿಸಿದ ಪ್ರಸಂಗವನ್ನು ವಚನ ಸೂಚಿಸುವಂತಿದೆ. ಪಾಂಚಾಳ ಕುಲದಲ್ಲಿ ಹುಟ್ಟಿದ ಕಾರಣವಾಗಿ (ಓಜಿನ ಶರಣ) ನರಕುರಿಗಳು ಮೂದಲಿಸಿದರು. ಅಂಥವರು ಮೂರು ಲೋಕದ ಒಡೆಯ ಮೋನಯ್ಯನ ಮಹತ್ವವನ್ನು ಅರಿಯುತ್ತಾರೆಯೆ? ಅಂತಹ ಅಜ್ಞಾನಿಗಳಿಗೆ ಶಿವಸ್ವರೂಪಿಯಾದ ಮೌನೇಶ್ವರರ ಮಹತ್ವ ಅರ್ಥವಾಗದು.

97

ತೊಗಲ ಬೊಂಬೆಯ ನೋಡಿ ನೆಗೆನೆಗೆದು ನಗುವರು
ಅಘಹರನ ವಚನ ಸೊಗಸದೆ ಇರುವವರ
ತೊಗೆಯ ಚೆಲ್ಲುವರು ಬಂದರು ಕಾಣಾ ಬಸವಣ್ಣ

ತಾತ್ಪರ್ಯ: ಈ ಮನುಷ್ಯನೆಂಬ ತೊಗಲುಗೊಂಬೆಯ ನೋಡಿ ಬಿದ್ದು ಬಿದ್ದು ಗಹಗಹಿಸಿ ಅಪಹಾಸ್ಯ ಮಾಡಿ ನಗುವವರು ಯಾರೆಂದರೆ ಅಘಹರ ಅಂದರೆ ಪಾಪನಾಶಕನಾದ ಶಿವನ ಮಾತು ರುಚಿಸದೆ ಇರುವವರು. ಮಾಡಿದ ಆಹಾರ ಪದಾರ್ಥಗಳನ್ನು ಸರಿಯಾಗಿ ಬಳಸದೆ, ಸೊಕ್ಕಿನಿಂದ ಚೆಲ್ಲುವರು ಇವರು ಅಜ್ಞಾನಿಗಳು ಅಹಂಕಾರಿಗಳು ಆದ ಜನರು ಇಂಥ ಹುಚ್ಚಾಟದಲ್ಲಿ ತಮ್ಮ ಬದುಕನ್ನೇ ನಾಶಮಾಡಿಕೊಳ್ಳುತ್ತಾರೆ. ಅಂಥವರ ವಿಚಿತ್ರ ನಡುವಳಿಕೆಗಳನ್ನು ತಿದ್ದಲು ಜ್ಞಾನಿಗಳು ಜನ್ಮವೆತ್ತಿ ಬರುತ್ತಾರೆನ್ನುವುದು ವಚನದ ಭಾವ.

98

ಕಾರಿಯ ಸೊಪ್ಪು ತಿಂದು ಅರಣ್ಯಕ್ಕೆ ಹೋಯಿತು
ಸೂಳೆಯ ಮಗ ಮಾಡಿದನು
ಅವನು ಕೊಟ್ಟ ಕೌಲು ಹೋಯಿತು ಕಾಣಾ ಬಸವಣ್ಣ

ತಾತ್ಪರ್ಯ: ವಚನ ಭ್ರಷ್ಟತೆಯನ್ನು ಈ ಪದ್ಯ ಸೂಚಿಸುವಂತಿದೆ. ಆಹಾರದ ಹಾಹಾಕಾರವನ್ನು ಅದರ ಅಭಾವವನ್ನು, ಆ ಕಾರಣಕ್ಕಾಗಿ ಲೋಕದ ಜನ ಕಾರೆಯ ಸೊಪ್ಪು ತಿಂದು ಬದುಕಲು ಅರಣ್ಯಕ್ಕೆ ಹೋದರು – ಎನ್ನುವ ಸಂಗತಿಯನ್ನು ವಚನ ಹೇಳುವಂತಿದೆ. ಅನಾಚಾರಿಗೆ ಅನೀತಿವಂತನಿಗೆ ಭೂಮಿ ಊಳಲು ಒಪ್ಪಂದ ಮಾಡಿ ಕೊಟ್ಟರೆ ಅವನು ಕೊಟ್ಟ ಮಾತು ತಪ್ಪಿದನು. ಇದರಿಂದ ಜನ ಅನ್ನ ಆಹಾರಗಳ ಸಂಕಟಕ್ಕೆ ಒಳಗಾಗಬೇಕಾಯಿತು ಎಂಬುದು ಇಲ್ಲಿನ ಭಾವ.

(ಮುಂದುವರಿಯುವುದು)

ಡಾ. ವೀರೇಶ ಬಡಿಗೇರ, ಕನ್ನಡ ವಿ.ವಿ. ಹಂಪಿ

Scanned with CamScanner

82 (1) 6

ಮಾಸಿಕ

Monthly

ವಿಧಾತೃ

(The Creator)

ಸಂಪುಟ : 11 ಜನವರಿ 2021 ಸಂಚಿಕೆ-8 ಬೆಲೆ ರೂ. : 20.00 ಪುಟಗಳು : 40

ಪದ್ಮಭೂಷಣ
ಶ್ರೀ ವಿ. ಗಣಪತಿ ಸ್ಥಪತಿ

ಉತ್ತರ ಕರ್ನಾಟಕ
"ಸಂಕ್ರಾಂತಿ ಸಮ್ಮಿಲನ"-2021
ಕರೋನ ನಿಮಿತ್ಯ ಆಚರಿಸುತ್ತಿಲ್ಲ!

ಪ್ರಕೃತಿಯ ಅಟ್ಟಹಾಸ ರೂಪವಾದ ಭೀಕರ ಸುನಾಮಿಯನ್ನು ಮೆಟ್ಟಿನಿಂತ
ಮಹಾಶಿಲ್ಪ ತಿರುವಳ್ಳುರ ದಿವ್ಯ ಪ್ರತಿಮೆ...

Scanned with CamScanner

Scanned with CamScanner

ಸಂಸ್ಕೃತಿ, ಸಾಹಿತ್ಯ ಹಾಗೂ ಕಲೆಗೆ ಮೀಸಲಾದ ಏಕೈಕ ಪತ್ರಿಕೆ

ಸಂಪುಟ 11 ಸಂಚಿಕೆ 8

ಗೌರವ ಸಂಪಾದಕರು
ಡಾ॥ ಜಿ. ಜ್ಞಾನಾನಂದ

ಪ್ರಧಾನ ಸಂಪಾದಕರು
ಎನ್.ಸಿ. ಛಾಯಾಪತಿ, ಬಿ.ಇ.,ಎಮ್.ಐ.ಇ.
ಮೊ: 97317 58137

ವ್ಯವಸ್ಥಾಪಕ ಸಂಪಾದಕ
ಗೋಪಾಲಕೃಷ್ಣ ಐ. ಮನುವಾಚಾರ್ಯ

ಸಹ ಸಂಪಾದಕರು
ರಾಜೇಂದ್ರ ಬಡಿಗೇರ
ಪ್ರೊ॥ ಎನ್.ವಿ. ಅಂಬಾಮಣಿಮೂರ್ತಿ
ಭೀಮಸೇನ ಬಡಿಗೇರ್ ಬಿ.ಇ.,
ಶ್ರೀ ಮಂಟೇಲಿಂಗಾಚಾರ್
ನಿವೃತ್ತ ಜಂಟ ನಿರ್ದೇಶಕರು, ಶಿಕ್ಷಣ ಇಲಾಖೆ
ನೀಲಕಂಠಾಚಾರ್ಯ, ಲಿಂಗಸಗೂರು
ಸುರೇಶ್ ಯು ಪತ್ತಾರ್
ಕೆ.ಎಂ. ಚಂದ್ರಶೇಖರ್ ಆಚಾರ್ಯ

ಪ್ರಕಾಶಕರು
ಎನ್.ಸಿ. ಛಾಯಾಪತಿ

ಮುದ್ರಕರು
'ಮನುಗ್ರಾಫಿಕ್ಸ್'

ನಂ. 50/1, 2ನೇ ಕ್ರಾಸ್, 2ನೇ ಮೇನ್
ಶೆಲ್ ಪೆಟ್ರೋಲ್ ಬಂಕ್ ಹಿಂಭಾಗ,
ಅಗ್ರಹಾರ ದಾಸರಹಳ್ಳಿ, ಬೆಂಗಳೂರು-70.
manuprints@gmail.com

ಸಲಹೆಗಾರರು
ಕೆ. ಎ. ವರದರಾಜು
ಕೆ. ಎನ್. ಶ್ರೀನಿವಾಸ ಬಿ.ಕಾಂ. ಎಲ್.ಎಲ್.ಬಿ.,
ಆರ್.ಬಿ.ಐ.

ಪರಿವಿಡಿ

1. ಶಾಂತಾನಂದ ಭಾರತಿ ಮಹಾಸ್ವಾಮಿಗಳು ಇನ್ನಿಲ್ಲ! 02
2. ಸಂಪಾದಕೀಯ... 07
3. ಪಾಂಚಾಳ ಸಾಹಿತ್ಯ ಮತ್ತು ಸಂಸ್ಕೃತಿ: ಒಂದು ಅವಲೋಕನ. 08
4. ದೈವಜ್ಞ ಸಮುದಾಯದ ಬಗ್ಗೆ ಒಂದಿಷ್ಟು ಮಾಹಿತಿ. 11
5. ಈ ಹೊಸ ವರ್ಷ 14
6. ಲಲಿತ ಶಿಲ್ಪಕೇಂದ್ರ-ಲಕ್ಕುಂಡಿ 15
7. ನಾಡು-ನುಡಿ ಅ 17
8. ಕಟಪಾಡಿ ಶ್ರೀ ಕಾಳಿಕಾಂಬಾ ವಿಶ್ವಕರ್ಮ ದೇವಸ್ಥಾನದ ಪ್ರತಿಷ್ಠಾವರ್ಧಂತ್ಯುತ್ಸವ 18
9. ಭೀಕರ ಸುನಾಮಿಯನ್ನು ಮೆಟ್ಟಿನಿಂತ ಮಹಾಶಿಲ್ಪ ತಿರುವಳ್ಳುರ 20
10. ಒರಸಂಗಿ ಕ್ಷೇತ್ರದಲ್ಲಿ ವಿಶ್ವಕರ್ಮ ಯುವ ಬರಹಗಾರರ ಕಾವ್ಯ ಮತ್ತು ಕಥಾ ಕಮ್ಮಟ 23
11. ಕಾ.ವಾ. ಆಚಾರ್ಯ: ನನಗೊಂದು ಬೆರಗು 24
12. ಶ್ರೀ ವಿಶ್ವಕರ್ಮ ಪುರಾಣ 26
13. ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನ 37

ಚಂದಾ ವಿವರ

ವಾರ್ಷಿಕ	:	ರೂ. 250/-
ಪಂಚವಾರ್ಷಿಕ	:	ರೂ. 1200/-
ಪೋಷಕರು	:	ರೂ. 3,000/-
ಮಹಾ ಪೋಷಕರು	:	ರೂ. 5,000/-
ಮಹಾ ದಾನಿಗಳು	:	ರೂ. 10,000/- ಕ್ಕೆ ಮೇಲ್ಪಟ್ಟು

ಜಾಹೀರಾತು

ರಕ್ಷಾಪುಟ	ಹೊರಭಾಗ (ಕಲರ್)	ರೂ. 5,000/-
	ಹೊರಭಾಗ (ಕಪ್ಪು ಬಿಳುಪು)	ರೂ. 2,500/-
	ಒಳಭಾಗ (ಕಲರ್)	ರೂ. 4,000/-
	ಒಳಭಾಗ (ಕಪ್ಪು ಬಿಳುಪು)	ರೂ. 2,000/-
ಒಳಪುಟ	ಪೂರ್ಣ ಒಳಭಾಗ	ರೂ. 2ಥ,000/-
	ಅರ್ಧ	ರೂ. 1000/-
	ಕಾಲು	ರೂ. 500/-

ಚಂದಾ ನವೀಕರಿಸದಿದ್ದವರು / ನೀಡಿಲ್ಲದವರು ಚಂದಾಹಣ ಕಳುಹಿಸಲು ಮನವಿ.
N. C. Chayapathy
A/c No. 54018369397 IFSC Code : SBIN0015658
State Bank of India, Jayanagar 8th Block

Scanned with CamScanner

Scanned with CamScanner

ಕಾ.ವಾ. ಆಚಾರ್ಯ: ನನಗೊಂದು ಬೆರಗು

–ಡಾ. ವೀರೇಶ ಬಡಿಗೇರ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಪುಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ–583266

ಕಾಸರಗೋಡ ವಾಸುದೇವ ಆಚಾರ್ಯ ಅವರು ಕಾ.ವಾ.ಆಚಾರ್ಯ ಎಂದೇ ನಾಡಿಗೆ ಚಿರಪರಿಚಿತರಾದವರು. ಬಡ ಕಂಬಾರರ ಮನೆತನದಲ್ಲಿ ಹುಟ್ಟಿ ತಮ್ಮ ಜೀವಪರ ಕಾಳಜಿ ಹಾಗೂ ಅದಮ್ಯ ಸಾಧನೆಯಿಂದಾಗಿ ಬೆಳೆದವರು. ಅವರು ವಿಶ್ವಕರ್ಮ ಸಾಹಿತ್ಯ ಸಂಸ್ಕೃತಿ ಮತ್ತು ಸಂಶೋಧಕರಿಗೆ ಜ್ಞಾನದ ನಿಧಿಯಾಗಿದ್ದರು. ನಾನು 1994ರಲ್ಲಿ ವಿಶ್ವಕರ್ಮ ಪತ್ರಿಕೆಗಳ ಮೂಲಕ ಅವರ ವಿದ್ವತ್ತಿನ ದರ್ಶನ ಪಡೆದಿದ್ದೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಸಂಶೋಧನೆ ಮಾಡುತ್ತಿದ್ದ ನನಗೆ ಕನಿಷ್ಠ ತಿಂಗಳಿಗೊಂದಾದರೂ ಪತ್ರ ಬರೆದು ನನ್ನ ಸಂಶೋಧನಾ ಪತ್ರಿಕೆಗೆ ಕಾಳಜಿ ಪೂರ್ವಕ ಮಾರ್ಗದರ್ಶನ ಮಾಡುತ್ತಿದ್ದರು, ಮಾಹಿತಿ ನೀಡಿ ಸಹಕರಿಸುತ್ತದ್ದರು, ಅವರು ಈಗಲೂ ಬದುಕಿದ್ದಾರೆ ಎನ್ನುವ ಭಾವನೆಯಲ್ಲಿಯೇ ಶಿರಸಂಗಿಯಿಂದ ಪ್ರಕಟವಾಗುತ್ತಿರುವ ವಿಶ್ವಕರ್ಮ ವಿಕಾಸವಾಣಿಯಲ್ಲಿನ ಲೇಖನಗಳನ್ನು ಓದುತ್ತಿದ್ದೆ. ಪ್ರಕಟಿತ ಪುಸ್ತಕದಲ್ಲಿ ಅವರು 6.3.2013ರಂದು ಇನ್ನಿಲ್ಲವಾದರು ಎನ್ನುವ ವಿಷಯ ನೋಡಿ ನನಗೆ ನಂಬಿಕೆಯೇ ಬರಲಿಲ್ಲ.

ಕಾಂತಾವರ ಕನ್ನಡ ಸಂಘವು "ನಾಡಿಗೆ ನಮಸ್ಕಾರ" ಎನ್ನು ಮಾಲೆಯಲ್ಲಿ ಆ ಭಾಗದ ಸಾಧಕರನ್ನು ಕಿರುಹೊತ್ತಿ ಮೂಲಕ ಅಕ್ಷರ ಜಗತ್ತಿಗೆ ನೀಡುತ್ತಿರುವುದು ಸತ್ಕಾರ್ಯ ಕೆಲಸವಾಗಿದೆ. ಈ ಮಾಲೆಯ ಕೆಲವೊಂದು ಕಿರುಹೊತ್ತಿಗೆಗಳನ್ನು ಹಿರಿಯ ವಿದ್ವಾಂಸರಾದ ಡಾ.ಪಾದೆಕಲ್ಲು ವಿಷ್ಣುಭಟ್ಟ ಅವರ ಮೂಲಕ ಓದಿದ್ದೇನೆ. ನಾಡು ಮರೆತೇ ಹೋಗಬಹುದಾದ ಅಥವಾ ಮರೆತೇ ಹೋಗಿದ್ದ ಸಾಧಕರನ್ನು ಮರುನೆನಪು ಮಾಡುವುದಲ್ಲದೇ, ಪುಸ್ತಕ ರೂಪದಲ್ಲಿ ನೀಡುತ್ತಿರುವುದು ಔಚಿತ್ಯ ಪೂರ್ಣವಾಗಿದೆ, ಇಂದಿನ ವಶೀಲಿಬಾಜಿ ಜಾತಿ ಮತದಂತಹ ಅನೈತಿಕ ನಡುವಳಿಕೆಗಳು ನಿಜವಾದ ಸಾಧಕರನ್ನು ಮರೆಮಾಡಿ, ವಿಜೃಂಭಿಸುವ ಖಾಲಿ ಮನುಷ್ಯರನ್ನು ಎಲ್ಲದಕ್ಕೂ ಅರ್ಹಗೊಳಿಸುತ್ತಿರುವ ಕಾಲದಲ್ಲಿ ನಾವಿದ್ದೇವೆ. ಇದ-ರಿಂದ ಅಗಾಧ ವಾಸ್ತವ ಮತ್ತು ನೈತಿಕ ಪ್ರಜ್ಞೆ ಇರುವವರು ತಮ್ಮ ಬಗ್ಗೆ ತಾವೇ ಅನುಮಾನ ಪಡುವಂತೆ, ಸಿನಿಕತನ ಮೈಗೂಡಿಸಿಕೊಳ್ಳವಂತಹ ಸ್ಥಿತಿ ಬಂದಿದೆ ಅಂತಹ ಹೊತ್ತಿನಲ್ಲಿ ನೈತಿಕ ಪ್ರಜ್ಞೆಯನ್ನೇ ಉಸಿರಾಗಿಸಿಕೊಂಡಿದ್ದ ಕಾ.ವಾ.ಆಚಾರ್ಯ ಅವರನ್ನು ನಾಡಿನ ಪ್ರಾಜ್ಞಾನ ವಿಚಾರಧಾರೆಯೊಂದಿಗೆ ಅರ್ಥಪೂರ್ಣವಾಗಿ ಕಟ್ಟಿಕೊಟ್ಟಿರುವುದು ಕಾಂತಾವರ ಕನ್ನಡ ಸಂಘದ ಹೆಗ್ಗಳಿಕೆಯಾಗಿದೆ.

ಪುಸ್ತಕದ ಶೀರ್ಷಿಕೆಯೇ "ಸರಳ ಸಜ್ಜನ ಚಿತ್ರಕಲಾ ಶಿಕ್ಷಕ ಕಾಸರಗೋಡು ವಾಸುದೇವಾಚಾರ್ಯ" ಎನ್ನುವ ಅಭಿಮಾನ ಹಾಗೂ ಅಭಿದಾನದೊಂದಿಗೆ ಆರಂಭವಾಗುತ್ತದೆ. ಬದುಕಿನ ಏರು ಇಳುವುಗಳಲ್ಲಿ ಎದಗುಂದದೆ ಅವುಗಳನ್ನು

Scanned with CamScanner
Scanned with CamScanner

ಎದುರಿಸುತ್ತಲೇ ತಾನು ಬೆಳೆದು ತನ್ನೊಂದಿಗೆ ಸಾಮಾಜಿಕ ಕಾಳಜಿಯುಳ್ಳ ಬಹುದೊಡ್ಡ ವಿದ್ಯಾರ್ಥಿ ಪಡೆಯನ್ನು ಸಹದ್ಯೋಗಿಗಳನ್ನು ಬೆಳೆಸಿದ ವಿವಿಧ ಬಗೆಗಳನ್ನು ಪುಸ್ತಕದಲ್ಲಿ ಸಮಾಜದ ಮತ್ತೊಬ್ಬ ಹಿರಿಯ ಪ್ರಾಜ್ಞರಾದ ಬಿ.ಎ. ಆಚಾರ್ಯ ಮಣಿಪಾಲ ಅವರು ಅಧೀಕೃತವಾಗಿ ದಾಖಲಿಸಿದ್ದಾರೆ. ವೈಯಕ್ತಿಕವಾಗಬಹುದಾಗಿದ್ದ (Biodata) ಅಲ್ಪ ಮಾಹಿತಿಗಳಿಂದಲೇ ಅಗಾಧ ಅರ್ಥಪೂರ್ಣ ಮತ್ತು ಅಪರೂಪವೆನ್ನುವಂತೆ ಕಾ.ವಾ. ಆಚಾರ್ಯ ಸಮಗ್ರ ವ್ಯಕ್ತಿತ್ವದ ಜೀವಂತ ಶಿಲ್ಪವೊಂದನ್ನು ಕಟೆದು ನಿಲ್ಲಿಸಿದ್ದಾರೆ. ಉಡುಪಿ ತಾಲೂಕಿನ ಒಂದು ಕಿರು ಹಳ್ಳಿಯಲ್ಲಿದ್ದುಕೊಂಡೇ, ಹಿರಿದಾದ ಸಾದನೆ ಮಾಡಿದ್ದಾರೆ. ತಮ್ಮ ಸರಳ, ಸಜ್ಜನ ಹಾಗೂ ಚಿಂತನಾಶೀಲ ವ್ಯಕ್ತಿತ್ವದಿಂದಾಗಿ, ಶಿಕ್ಷಕರಾಗಿ, ಕಲಾವಿದರಾದ, ಕಲಾಪೋಷಕರಾಗಿ, ಸಾಹಿತಿಗಳಾಗಿ, ಕಾದಂಬರಿಕಾರರಾಗಿ, ಅಂಕಣಕಾರರಾಗಿ ಬಹುವಿಧ ವ್ಯಕ್ತಿತ್ವವನ್ನು ಹೊಂದಿದ್ದ ಕಾ.ವಾ ಅವರ ಹೋರಾಟದ ಬದುಕನ್ನು ಪರಿಣಾಮಕಾರಿಯಾಗಿ ಲೇಖಕರು ಹಿಟಿದಿಟ್ಟಿದ್ದಾರೆ. ಕರ್ನಾಟಕದಲ್ಲಿ ಪ್ರಕಟವಾಗುತ್ತಿದ್ದ ವಿಶ್ವಕರ್ಮ ಪತ್ರಿಕೆಗಳಲ್ಲಿ ಸೃಜನಶೀಲ ಮತ್ತು ಶೋಧಗುಣವುಳ್ಳ ಲೇಖನ ಬರೆಯುವ ಮೂಲಕ ಪತ್ರಿಕೆಗಳನ್ನು ಜೀವಂತವಾಗಿಟ್ಟಿದ್ದಲ್ಲದೇ ವಿಶ್ವಕರ್ಮ ಸಾಹಿತ್ಯ ಹಾಗೂ ಸಾಹಿತಿಗಳು ಬೆಳಕು ಕಾಣುವಂತೆ ಮಾಡಿದವರಲ್ಲಿ ಕಾ.ವಾ. ಆಚಾರ್ಯ ಅವರೇ ಅಗ್ರಗಣ್ಯರೆಂಬ ಅತಿಶಯೋಕ್ತಿಯೇನಲ್ಲ. ಸ್ವತಃ ಅವರೊಂದಿಗೆ ಪತ್ರದ ಮೂಲಕ ಮಾತನಾಡುತ್ತಿದ್ದ ನನಗೆ ಈ ದರ್ಶನವಿದೆ.

ಮನುಷ್ಯ ವೈಯಕ್ತಿಕವಾಗಿ ಆದರ್ಶವಾಗಿರುವುದು ಸುಲಭ. ಆದರೆ ಸಾಮಾಜಿಕ ವಾಸ್ತವಗಳಲ್ಲಿ ಇದು ದುರ್ಲಬ ಹಾಗೂ ದುರ್ಬಲ. ಕಾ.ವಾ. ಆಚಾರ್ಯ ಅವರು ಕುಶಲ ಶಿಕ್ಷಕರಾಗಿದ್ದರು ಆದರೆ ವ್ಯವಹಾರ ಕುಶಲಿಗಳಾಗಿರಲಿಲ್ಲ. ಈ ಕಾರಣ-ಕ್ಕೆ ಹಲವು ರೀತಿಯ ಆರ್ಥಿಕ ಮುಗ್ಗಟ್ಟುಗಳನ್ನು ಎದುರಿಸಬೇಕಾಯಿತು. ಎಷ್ಟರ ಮಟ್ಟಿಗೆ ಎಂದರೆ "ವಾಸ್ತವದ ಮುಂದೆ ಆದರ್ಶ ಸೋಲುತ್ತದೆ". ಎನ್ನುವ ಮಟ್ಟಿಗೆ ಕಟುಸತ್ಯವನ್ನು ಅವರು ಜೀರ್ಣಿಸಿಕೊಂಡಿದ್ದರು. ಸಾಹಿತಿಗಳಾಗಿ, ಸಮಾಜ ಸುಧಾರಕರಾಗಿ, ಚಿಂತಕರಾಗಿ, ಸಂಘಟನಾಕಾರರಾಗಿ, ಮಾನವೀಯ ಕಳಕಳಿಯುಳ್ಳವರಾಗಿ ಅವರು ನೀಡಿದ ಸಾಧನೆ ಸಣ್ಣದೇನಲ್ಲ. ಈ ಹೊತ್ತಿಗೆ ಅವರ ಸಾಧನೆ ಮತ್ತು ಸಂಕಟಗಳ ಎಲ್ಲಾ ಸೂಕ್ಷ್ಮಗಳನ್ನು ಗರ್ಭೀಕರಿಸಿಕೊಂಡಿದೆ. ಆಚಾರ್ಯ ಅವರ ಒಪ್ಪವಾದ ಈ ನಿರೂಪಣೆ ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದೆ.

ಐವತ್ತರ ದಶಕದಿಂದ ಅಧ್ಯನ, ಅಧ್ಯಾಪನ, ಬರವಣಿಗೆ, ಅಭಿನಯ, ಸಂಗೀತ, ಚಿತ್ರ ಮೊದಲಾದ ಲಲಿತ ಕಲೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡು ತಾವೂ ಬೆಳೆದು ತಮ್ಮೊಂದಿಗೆ ಬಲವಾರು ಪ್ರತಿಭಾವಂತರನ್ನು ಬೆಳೆಸಿ ನಾಡಿಗೆ ನೀಡಿದ ಕಾ.ವಾ. ಆಚಾರ್ಯರನ್ನು ಅವರು ಪ್ರೀತಿಸುತ್ತಿದ್ದ ಸಾಹಿತ್ಯದ ಸಾಲಿನಲ್ಲೇ ಮರುಕಸಿಮಾಡಿರುವ ಹಿರಿಯರಾದ ಬಿ.ಎ. ಆಚಾರ್ಯರು ಮತ್ತು ಈ ಹೊತ್ತಿಗೆಯನ್ನು ಪ್ರಕಟಿಸಿ ಕನ್ನಡದ ಸಾರಸ್ವತ ಲೋಕಕ್ಕೆ ಕಾ.ವಾ. ಆಚಾರ್ಯರನ್ನು ಮುಟ್ಟಿಸುವ ಮಹದುಪಕಾರ ಮಾಡಿದ ಕಾಂತಾವರ ಕನ್ನಡ ಸಂಘವನ್ನು ಸಾಹಿತ್ಯ ಮತ್ತು ಸಂಸ್ಕೃತಿಯ ವಿದ್ಯಾರ್ಥಿಯಾಗಿ ಅಭಿನಂದಿಸ ಬಯಸುತ್ತೇನೆ.

Scanned with CamScanner
Scanned with CamScanner

22.(i) 7

ಅನಿಕೇತನ

ರಾಷ್ಟ್ರೀಯ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ
(ಜನವರಿ–ಡಿಸೆಂಬರ್–೨೦೧೮)
ಸಂಪುಟ ೮ ಸಂಚಿಕೆ ೨೮



ಪ್ರಧಾನ ಸಂಪಾದಕರು
ಡಾ. ಬಿ.ವಿ. ವಸಂತಕುಮಾರ್
ಸಂಪಾದಕರು
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

Scanned with CamScanner

ANIKETHANA (A Quaterly Journal of Kannada Language and Literature) - Edited by : Dr. D.K. Chittaiah Poojar, Published by : Kariyappa N., Registrar, Karnataka Sahithya Academy, Kannada Bhavana, J.C. Road, Bengaluru - 560 002.

ಪ್ರಧಾನ ಸಂಪಾದಕರು
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಂಪಾದಕರು
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

ಜನವರಿ – ಡಿಸೆಂಬರ್ – 2019 (ಸಂಯುಕ್ತ ಸಂಚಿಕೆ)

ಬೆಲೆ : ೫೦/-
ಮುದ್ರಣ : ೨೦೨೧
ಪ್ರತಿಗಳು : ೨೦೦೦
ಪುಟಗಳು : ix+೩೨೭=೩೩೬
ಮುಖಪುಟ ಚಿತ್ರ : ಏಕಾಕ್ಷರ ಪ್ರಿಂಟರ್ಸ್

ಚಂದಾವಿವರ
ಬಿಡಿಪ್ರತಿ : ೫೦/-
ವಾರ್ಷಿಕ ಚಂದಾ : ೨೦೦/-
ಅಜೀವ ಚಂದಾ : ೧೦೦೦/-

ಪ್ರಕಾಶಕರು
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
ಏಕಾಕ್ಷರ ಪ್ರಿಂಟರ್ಸ್
ನಂ. 2, 5ನೇ 'ಬಿ' ಮುಖ್ಯರಸ್ತೆ, ಬ್ಯಾಂಕ್ ಆಫ್ ಬರೋಡಾ ರಸ್ತೆ
ಕಾಮಾಕ್ಷಿಪಾಳ್ಯ, ಬೆಂಗಳೂರು – 560 079.
ಮೊಬೈಲ್ : 9844365538

Scanned with CamScanner
Scanned with CamScanner

ಪರಿವಿಡಿ

ಪ್ರಧಾನ ಸಂಪಾದಕರ ಮಾತು

ಸಂಪಾದಕರ ಮಾತು

೧. ಖಡ್ಗಶಾಸ್ತ್ರ – ಡಾ. ವೈ.ಸಿ. ಭಾನುಮತಿ

೨. ಮಂಗರಸ ಕವಿಯ 'ಸೂಪಶಾಸ್ತ್ರ' – ಮರುಓದು
– ಡಾ. ಗುರುಪಾದ ಮರಿಗುದ್ದಿ

೩. ಗಣಿತ ಶಾಸ್ತ್ರ – ಡಾ. ಕೆ. ರವೀಂದ್ರನಾಥ

೪. ಗಜಶಾಸ್ತ್ರ ಸಾಹಿತ್ಯ – ಡಾ. ಕೆ. ರವೀಂದ್ರನಾಥ

೫. ಪ್ರಶ್ನಶಾಸ್ತ್ರದ ಹಸ್ತಪ್ರತಿಗಳು: ಮನೋವೈಜ್ಞಾನಿಕ ವಿವೇಚನೆ – ಡಾ. ವೀರೇಶ ಬಡಿಗೇರ

೬. ನಿಧಿಶಾಸ್ತ್ರದ ಹಸ್ತಪ್ರತಿಗಳು: ಸಂಪತ್ತಿನ ಸ್ವಯಂ ಸಂರಕ್ಷಣೆಯ ತಂತ್ರಗಳು
– ಡಾ. ವೀರೇಶ ಬಡಿಗೇರ

೭. ಜಂಗಮ ಜನಾರ್ದನ ಮಹಾಕವಿ – ಡಾ. ಕೃಷ್ಣಮೂರ್ತಿ ಹನೂರು

೮. ವಚನಗಳಲ್ಲಿ ಯೋಗದ ಪರಿಕಲ್ಪನೆ – ಡಾ. ಎಫ್.ಟಿ. ಹಳ್ಳಿಕೇರಿ

೯. ಕಣಿ : ಭವಿಷ್ಯ ಮತ್ತು ಅಲೆಮಾರಿ ಸಮುದಾಯಗಳು
– ಡಾ. ವೀರೇಶ ಬಡಿಗೇರ

೧೦. ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ – ಡಾ. ಕಲ್ಲಯ್ಯ ಎಸ್. ಹಿರೇಮಠ

೧೧. ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರ
– ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

೧೨. ಕೈಫಿಯತ್ತುಗಳ ಚರಿತ್ರೆಯ ಆಯಾಮಗಳು – ಡಾ. ಪಂಡಿತ ಕೆ. ರಾಠೋಡ

೧೩. ಆಧುನಿಕ ಪೂರ್ವ ಕರ್ನಾಟಕದ ಮಹಿಳೆ ಮತ್ತು ಮತಾಂತರ ಕನ್ನಡ ಕಾವ್ಯ
ಮತ್ತು ದಾಖಲು ಸಾಹಿತ್ಯವನ್ನು ಅನುಲಕ್ಷಿಸಿ – ಡಾ. ಎನ್.ಆರ್. ಲಲಿತಾಂಬ

೧೪. ಶಾಸನ ಲಿಪಿಕಾರರ ಸಂಕಥನ – ಡಾ. ಪಂಡಿತ ಕೆ. ರಾಠೋಡ

೧೫. ಲಕ್ಕುಂಡಿ ಕಲ್ಯಾಣ ಚಾಲುಕ್ಯರ ಶಾಸನ ಸಾಹಿತ್ಯ –
ಪ್ರೊ. ಡಿ.ವಿ. ಪರಮಶಿವಮೂರ್ತಿ

೧೬. ಕೆಳದಿ ಅರಸರ ತಾಮ್ರ ಶಾಸನಗಳು – ಡಾ. ಶಿವರಾಜ .ಬಿ.ಇ

೧೭. ಅಪೂರ್ವ ನವವರ್ಣವೃತ್ತ ಮತ್ತು ನವಮಾತ್ರಾವೃತ್ತಗಳ ಅನ್ವೇಷಣಕಾರ
ಛಂದೋನಿಜಗುಣಿ ಕುಮಾರ ನಿಜಗುಣರು – ಡಾ.ಸಿ.ನಾಗಭೂಷಣ

Scanned with CamScanner

೧೮. ಸಮ–ಬವ ರೂಪಿ ಪದಗಳು: ಬಾಶೆ, ಇತಿಹಾಸ ಮತ್ತು ರಾಜಕಾರಣ
– ಬಸವರಾಜ ಕೋಡಗುಂಟಿ
೧೯. ಭಕ್ತಿ ಸಂಗೀತ : ಹಿಂದೂಸ್ಥಾನಿ ಗಾಯಕರ ಕೊಡುಗೆ
– ಡಾ. ಜಯದೇವಿ ಜಂಗಮಶೆಟ್ಟಿ
೨೦. ಸಂಗೀತ ಕಲೆ ಪ್ರತಿಭೆ ಮತ್ತು ವೃತ್ತಿ – ಡಾ. ಜಯದೇವಿ ಜಂಗಮಶೆಟ್ಟಿ
೨೧. ಸಾಹಿತ್ಯ ಘನಾವೃತಿ – ಶೀಲಾ ಶ್ರೀಧರ್
೨೨. ನಾಡೋಜ ಪ್ರೊ. ಕೆ.ಜಿ. ನಾಗರಾಜಪ್ಪ ಅವರ ಸಂದರ್ಶನ

Scanned with CamScanner
Scanned with CamScanner

ಪ್ರಶ್ನಶಾಸ್ತ್ರದ ಹಸ್ತಪ್ರತಿಗಳು: ಮನೋವೈಜ್ಞಾನಿಕ ವಿವೇಚನೆ

– ಡಾ. ವೀರೇಶ ಬಡಿಗೇರ

ವಾಸ್ತವವಾಗಿ ಪ್ರಶ್ನಶಾಸ್ತ್ರವೆಂದರೆ ಜ್ಯೋತಿಷ್ಯವಲ್ಲ ಅಲೌಕಿಕ ಪ್ರಜ್ಞೆಯೂ ಅಲ್ಲ, ಅದು ಜನಸಾಮಾನ್ಯರಿಗೆ ಸಾಧಿಸಲು ಹಾಗೂ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಇರುವ ತತ್ವಜ್ಞಾನ ಹಾಗೂ ಮನೋವಿಜ್ಞಾನ. ಪ್ರಶ್ನಶಾಸ್ತ್ರ ಎಂದರೆ ಮನುಷ್ಯನ ಭಾವನೆಗಳನ್ನು ವಿಕೃತ ಅಥವಾ ಅನೈತಿಕಗೊಳಿಸುವ ಸಂಗತಿಯಲ್ಲ. ಬದಲಾಗಿ ದೃಢಗೊಳಿಸುವ ಒಂದು ಮನೋವೈಜ್ಞಾನಿಕ ಪ್ರಕ್ರಿಯೆಯಾಗಿದೆ. ಕಾರಣ ಪ್ರಶ್ನಶಾಸ್ತ್ರವನ್ನು ಜ್ಯೋತಿಷ್ಯದ ಭಾಗವೆಂದು, ಮೂಢನಂಬಿಕೆಯೆಂದು ಮೂಗುಮುರಿಯುವ ಶಾಸ್ತ್ರೀಯತೆಯ ಕೈಂಕರ್ಯವನ್ನು ಬಿಟ್ಟು ಸಾವಧಾನದಿಂದ ಅರ್ಥಮಾಡಿಕೊಳ್ಳಬೇಕಾದ ಜರೂರು ಇದೆ. ಕಾಲಾಂತರದಿಂದಲೂ ಮನುಷ್ಯನ ಸೃಜನಶೀಲ ಭಾವನೆಗಳನ್ನು ಜಾಗೃತಗೊಳಿಸುತ್ತ ಬಂದಿರುವ ಇಂಥ ಜ್ಞಾನಶಿಸ್ತು ಅಧ್ಯಯನಕಾರರ ಉಪೇಕ್ಷೆಗೆ ಗುರಿಯಾಗಿದೆ.

ಪ್ರಶ್ನಶಾಸ್ತ್ರದ ಬಿಳಲುಗಳು ಬಹಳ ಹಳೆಯವಾದರೂ ಅದು ಶಾಸ್ತ್ರ ಹಾಗೂ ಸಿದ್ಧಾಂತದ ರೂಪ ಪಡೆದ ಬಗ್ಗೆ ನಿಶ್ಚಿತವಾಗಿ ಹೇಳುವುದು ಅಸಾಧ್ಯ. ಪ್ರಶ್ನ ಕೇಳುವುದನ್ನು ಹಾಗೂ ಹೇಳುವುದನ್ನು ಜೈವಿಕ ಹಾಗೂ ಸಾಮಾಜಿಕ ಭೇದಭಾವಗಳಿಲ್ಲದೇ ಯಾರಾದರೂ ಮಾಡಬಹುದಾದರೂ ಅದನ್ನು ಗಂಡಸು ಪ್ರಧಾನವಾಗಿ ನೋಡಿದ್ದೇ ಹೆಚ್ಚು. ಮಂತ್ರಕ್ಕಿಂತ ಇಲ್ಲಿ ಮಾತಿಗೆ ಪ್ರಾಮುಖ್ಯತೆ.

Scanned with CamScanner
Scanned with CamScanner

ಅನುಮಾನ ಹಾಗೂ ಅನುಸಂಧಾನ ಪ್ರಶ್ನಶಾಸ್ತ್ರದ ಮುಖ್ಯ ಲಕ್ಷಣ. ಮನುಷ್ಯನ ಭೌತಿಕ ಹಾಗೂ ಮಾನಸಿಕ ಸ್ಥರಗಳ ಅಥವಾ ಭಾವನಾತ್ಮಕ ಹಾಗೂ ಕ್ರಿಯಾಶೀಲ ಅಸ್ತಿತ್ವಗಳ ಆಧಾರದ ಮೇಲೆ ಪ್ರಶ್ನಶಾಸ್ತ್ರ ನಿಂತಿದೆ. ಮನುಸ್ಸು ಪ್ರಕ್ಷುಬ್ದವಾಗಿದ್ದಾಗ ಅಥವಾ ಹೊಯ್ದಾಡುವಾಗ ಏನೇ ಘಟನೆಗಳು ಸಂಭವಿಸಿದರೂ ಅದಕ್ಕೆ ಕಾರ್ಯ–ಕಾರಣ ಸಂಬಂಧವನ್ನು ಆರೋಪಿಸಲಾಗುತ್ತದೆ. ಹೀಗಾಗಿಯೇ ಭಾರತೀಯ ತತ್ವಚಿಂತನೆಯಲ್ಲಿ ಮನಸ್ಸಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಿಲ್ಲ. ಮನುಸ್ಸು ವಿಚಲಿತವಾದಾಗ ಘಟನೆಗಳು ಶಕುನಗಳು ಸಂಭವಿಸಬಹುದು. ಅಥವಾ ಘಟನೆಗಳು ಶಕುನಗಳು ಸಂಭವಿಸಿದ ನಂತರ ಮನಸ್ಸು ವಿಚಲಿತವಾಗಬಹುದು. ಒಟ್ಟಿನಲ್ಲಿ ಫಲಾಫಲಗಳನ್ನು ನಿರೀಕ್ಷಿಸುವ ನೆಲೆಯನ್ನು ಇಲ್ಲಿ ಕಾಣುತ್ತೇವೆ. ಎಷ್ಟೋ ವೇಳೆ ಘಟನೆಗಳು ಸ್ವಾಭಾವಿಕವಾಗಿ ನಡೆದಾಗಲೂ ಅದನ್ನು ಎಳೆದು ತಂದು ಶುಭ–ಅಶುಭಗಳ ಲೆಕ್ಕಾಚಾರ ಮಾಡಲಾಗುತ್ತದೆ. ಮನುಷ್ಯನಲ್ಲಿನ ರಜೋ ಹಾಗೂ ತಮೋ ಗುಣಗಳು ಮನಸ್ಸಿನ ಇಂಥ ಪ್ರಕ್ಷುಬ್ದತೆಗೆ ಕಾರಣವೆಂದು ಭಾರತೀಯ ಮನೋವಿಜ್ಞಾನ ಹೇಳುತ್ತದೆ. 'ಪಾಶ್ಚಾತ್ಯ ಮನೋವಿಜ್ಞಾನಿಗಳಾದ ಜಿ.ಹಾರ್ನ್ ಹಾಗೂ ಜಿ.ಬ್ಲಂಡೆರಲ್ ವಿಚಾರಗಳನ್ನಿಲ್ಲಿ ನೆನೆಯಬಹುದೆನಿಸುತ್ತದೆ. ವಿಶಿಷ್ಟ ವಸ್ತುಗಳ ಬಗ್ಗೆ ಗಮನಹರಿಸುವಾಗ ಪ್ರಾಣಿಗಳು ಮನಸ್ಸನ್ನು ತೀಕ್ಷ್ಣಗೊಳಿಸುವ ಸಾಧನಗಳನ್ನು ಬಳಸುತ್ತವೆ ಹಾಗೂ ಇವುಗಳಿಂದಾಗಿ ಅವು ಸೂಕ್ಷ್ಮಾತಿಸೂಕ್ಷ್ಮ ಭೇದಭಾವಗಳನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ' ಎಂದು ಹೇಳುತ್ತಾರೆ. ಈ ಅರ್ಥದಲ್ಲಿ ಮನುಷ್ಯನು 'ಮನುಷ್ಯನ ನಡವಳಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ ಆತನ ಸಂಕಷ್ಟಗಳಿಗೆ ಸಾಂತ್ವನ ಹೇಳುವ ಕ್ರಿಯೆಯೇ ಪ್ರಶ್ನಶಾಸ್ತ್ರದ ಮೂಲಧಾತು.

ಮನಸ್ಸಿನ ಇಂಥ ಪ್ರಕ್ಷುಬ್ದತೆಯ ಕಾರಣಗಳಲ್ಲಿ ಸಮಸ್ಯೆ ಅಥವಾ ಸಂದೇಹ ಪ್ರಮುಖ ಎನ್ನುವುದು ಪತಂಜಲಿಯ ಹೇಳಿಕೆ. 'ಅನಿಶ್ಚಿತತೆ ಹಾಗೂ ಪರ್ಯಾಯಗಳ ನಡುವಿನ ಆಯ್ಕೆ ಮನಸ್ಸನ್ನು ಅಧೀರಗೊಳಿಸುತ್ತದೆ. ಹಾಗೂ ನಿರಂತರ ಪ್ರಕ್ಷುಬ್ದತೆಗೆ ಈಡುಮಾಡುತ್ತದೆ. ಮಿಥ್ಯಾಜ್ಞಾನದಿಂದ ಹುಟ್ಟುವ ಇಂಥ ಅನಿಶ್ಚಿತತೆ ಹಾಗೂ ಅಭದ್ರ ಸ್ಥಿತಿಯಲ್ಲಿಯೇ ಮಾನವ ಪರ್ಯಾಯಗಳಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಹಾಗೇ ಅವು ತಾನು ಬಯಸಿದ ಮೌಲ್ಯಗಳನ್ನು ನೀಡುತ್ತವೆಂದು ಭಾವಿಸುತ್ತಾನೆ. ಇಂಥ ವಿಚಾರಗಳು ದೃಢಪಟ್ಟಲ್ಲಿ ಅವುಗಳ ಮೇಲೆ ನಂಬಿಕೆ ಇಡುತ್ತಾ ಹೋಗುತ್ತಾನೆ. ಇಂಥ ಸ್ಥಿರತೆ ಅಥವಾ ರೂಢಿಗೆ ಭಾರತೀಯ ಮನೋವಿಜ್ಞಾನಿಗಳು ನಂಬಿಕೆಯನ್ನು

Scanned with CamScanner

ಹೊಂದಿಸುತ್ತಾರೆ. ನಂಬಿಕೆ ಇಲ್ಲದೆ ರೂಢಿಗೆ ಅಸ್ತಿತ್ವವಿಲ್ಲ. ನಂಬಿಕೆ ಉದ್ದೀಪಕದಂತೆ ಕೆಲಸ ಮಾಡುತ್ತದೆ. ಭಗ್ನಾವಸ್ಥೆಯನ್ನು ಎದುರಿಸುವಂತೆ ಅದು ಮಾನವನನ್ನು ತಯಾರು ಮಾಡುತ್ತದೆ. ರೂಢಿಯ ಪ್ರಕ್ರಿಯೆಯಲ್ಲಿ ತಾಳ್ಮೆ ಹಾಗೂ ಸತತ ಪ್ರಯತ್ನಗಳು ಪೂರ್ವ ಷರತ್ತುಗಳಾಗಿ ಬಿಡುವುದರಿಂದ ನಂಬಿಕೆ ಇವೆರಡಕ್ಕೂ ಸಹಾಯಕವಾಗುತ್ತದೆ. (ತಂತ್ರ: ಮನೋವೈಜ್ಞಾನಿಕ ಪರಿಕಲ್ಪನೆ ಪುಟ.19, ಮೀರಾ ಚಕ್ರವರ್ತಿ ೧೯೯೬, ಅಕ್ಷರ ಪ್ರಕಾಶನ, ಹೆಗ್ಗೋಡು)

ಯಾವುದೇ ಒಂದು ವಸ್ತು ಅಥವಾ ಸಂಗತಿಯನ್ನು ಗ್ರಹಿಸುವಾಗ ಮನುಷ್ಯ ಸಾಮಾನ್ಯ ಪ್ರಜ್ಞೆಯೊಂದಿಗೆ ಒಂದಷ್ಟು ಕಲ್ಪಕತೆಯನ್ನು ಸೇರಿಸುವುದು ಸಹಜ. ಇದನ್ನು ತಾಂತ್ರಿಕ ಪರಿಭಾಷೆಯಲ್ಲಿ ಭಾವಿಸಿಕೊಳ್ಳುವಿಕೆ(Assumption) ಎಂದು ಕರೆಯಲಾಗುತ್ತದೆ. ಭಾವಿಸಿಕೊಳ್ಳುವಿಕೆ ಕ್ರಿಯೆಯೇ ಮನುಷ್ಯನ ಎಲ್ಲ ಒಳ್ಳೆಯ ಹಾಗೂ ಕೆಟ್ಟ ಕ್ರಿಯೆಗಳಿಗೆ ದಾರಿಯಾಗುತ್ತದೆ. ಉದಾ: ರಾಮ ಹಾಗೂ ರಾಕ್ಷಸರ ಕುರಿತ ಮನುಷ್ಯನ ಭಾವನೆಗಳು ಬೇರೆಯೇ ಆಗಿರುವುದು. ರಾಮನ ಗುಣಗಳು ರಾಕ್ಷಸರಿಗೂ ರಾಕ್ಷಸರ ಗುಣಗಳು ರಾಮನಿಗೂ ಇವೆ ಎಂದು ಭಾವಿಸಲಾಗುವುದಿಲ್ಲ. ನಮ್ಮ ಭಾವನೆಗಳಲ್ಲಿ ಅದು ಎಂದೂ ಸಾಧ್ಯವೂ ಇಲ್ಲ. ಈ ರೀತಿ ಭಾವಿಸಿಕೊಳ್ಳುವಿಕೆಯೇ ಸ್ಥಿರವಾಗುತ್ತ ಮುಂದೆ ಸಂಪ್ರದಾಯವಾಗಿ ಬಿಡುತ್ತದೆ. ರಾಮ ರಾಕ್ಷಸನಾಗುವುದು ರಾಕ್ಷಸರು ರಾಮರಾಗುವುದು ಎಂದಿಗೂ ಸಾಧ್ಯವಿಲ್ಲ ಎಂದು ನಂಬಲು ಆರಂಭಿಸುತ್ತೇವೆ. ಪ್ರಶ್ನ ಶಕುನಗಳ ವಿಷಯದಲ್ಲೂ ಅಷ್ಟೇ. ಗ್ರಹಗತಿಗಳ ವಿಷಯದಲ್ಲೂ ಅಷ್ಟೆ. ರಾಹು-ಕೇತುಗಳು ಯಾವತ್ತೂ ಒಳ್ಳೆಯ ಗ್ರಹಗಳಾಗಿ ಕಾಣುವುದೇ ಇಲ್ಲ. ರಾಹು-ಕೇತುಗಳು ಖಗೋಲ ವಿಜ್ಞಾನದ ಹಿನ್ನೆಲೆಯಲ್ಲಿ ಗ್ರಹಗಳೇ ಅಲ್ಲ, ಅವುಗಳಿಗೆ ಅಸ್ತಿತ್ವವೇ ಇಲ್ಲ. ಆದರೆ ಮನುಷ್ಯನ ಶುಭ-ಅಶುಭಗಳ ಭಾವನಾತ್ಮಕ ಪ್ರಪಂಚದಲ್ಲಿ ಇವುಗಳಿಗೆ ಅಸ್ತಿತ್ವವಿದೆ. ಕ್ರಮೇಣ ಇಂಥ ಭಾವಿಸುವಿಕೆಗಳೇ ಪರಿಕಲ್ಪನೆಗಳಾಗಿ ಬಿಡುತ್ತವೆ. ಈ ಪರಿಕಲ್ಪನೆಗಳನ್ನೆಲ್ಲಿ ಕಳೆದುಕೊಂಡು ಬಿಡುತ್ತೇವೆಯೋ ಎಂಬ ಭಯದಿಂದ ಅವಕ್ಕೆ ಹೊಸ ಹೊಸ ಸಾಕ್ಷ್ಯಾಧಾರಗಳನ್ನು ಹುಟ್ಟುಹಾಕುತ್ತೇವೆ. ಅದೇ ಹೊತ್ತಿಗೆ ವೈಚಾರಿಕ ಆಕೃತಿಗಳನ್ನು ನಿರ್ಲಕ್ಷಿಸುತ್ತಾ ನಿಷ್ಕ್ರಿಯರಾಗುತ್ತ ಹೋಗುತ್ತೇವೆ. ಹೀಗೆ ನಮ್ಮ ನಂಬಿಕೆಗಳು ಬಹಳಷ್ಟು ಸಲ ನಮ್ಮ ಅರಿವಿನ ವಿಧಾನದ ಮೇಲೆಯೇ ನೆಲೆಗೊಳ್ಳುತ್ತಿರುತ್ತವೆಂಬುದು ಗಮನಾರ್ಹ.

ಮನುಷ್ಯನ ಇಂದ್ರಿಯಗಳು ಹಲವು ವಿಶಿಷ್ಟ ತಥ್ಯಗಳನ್ನು ಮಾತ್ರ ಗ್ರಹಿಸುತ್ತವೆ. ಈ ಸೀಮಾಬದ್ಧತೆಯಿಂದಾಗಿ ಬಾಹ್ಯ ಜಗತ್ತಿನ ಕೆಲವನ್ನು ಮಾತ್ರ ಗ್ರಹಿಸಿ

Scanned with CamScanner

ನಿಜವಾಗಿಯೂ ಅಸ್ತಿತ್ವ ಹೊಂದಿರಬಹುದಾದದ್ದನ್ನು ಅರಿಯುವುದು ನಮಗೆ ಸಾಧ್ಯವಾಗುವುದಿಲ್ಲ. ಉದಾ: ಗುಂಪಿನಲ್ಲಿ ಹಲವು ಜನ ಒಂದೇ ಸಲ ಮಾತನಾಡುತ್ತಿರುವಾಗ ಇಷ್ಟಪಟ್ಟರೆ ಆ ಗದ್ದಲದಲ್ಲೂ ಒಬ್ಬನ ಮಾತುಗಳನ್ನು ಮಾತ್ರ ಕೇಳಿಸಿಕೊಳ್ಳುತ್ತೇವೆ ಹೊರತು ಉಳಿದ ಸ್ವರಗಳನ್ನು ಕೇಳಿಸಿಕೊಳ್ಳುವುದಿಲ್ಲ. ಪ್ರಶ್ನೆ– ಶಕುನ ಪ್ರತಿಯೊಂದೂ ಕೂಡ ಮನುಷ್ಯನ ವೈಯಕ್ತಿಕ ನಂಬಿಕೆಯ ಮೆಲೆ ಆವಿಷ್ಕಾರಗೊಳ್ಳುತ್ತಿರುತ್ತವೆ. ಅವನ ಇಚ್ಛೆಗೆ ಅನುಗುಣವಾಗಿ ಅವಶ್ಯಕತೆಗನುಗುಣವಾಗಿ ಈ ಜಗತ್ತನ್ನು ಗ್ರಹಿಸುತ್ತಾನೆ. ವಿಚಿತ್ರವೆಂದರೆ ಉತ್ತರದ ಸ್ವರೂಪಗಳು ಒಂದೇ ತೆರನಾಗಿರುತ್ತವೆ. ಕಾರಣ ಪ್ರಶ್ನ ಕೇಳುವವರು ಬಹುಜನರಾದರೂ ಹೇಳುವವರು ಮಾತ್ರ ನಿರ್ದಿಷ್ಟವಾಗಿರುತ್ತಾರೆ ಹಾಗೂ ಕಡಿಮೆ ಪ್ರಮಾಣದಲ್ಲಿರುತ್ತಾರೆ. ಯಾವಾಗಲೂ ಪ್ರತಿಯೊಬ್ಬ ವ್ಯಕ್ತಿಯ ಇಂದ್ರಿಯಗಳ ಚಲನವಲನದ ಹಾಗೂ ಅದರ ನಿಯಂತ್ರಣದ ನಿಪುಣತೆಯ ಮೇಲೆ ಒಟ್ಟು ಪ್ರಶ್ನಶಾಸ್ತ್ರ ಎನ್ನುವುದು ರೂಪಪಡೆಯುತ್ತ ಹೋಗುತ್ತದೆ. ಇದು ಸಿದ್ಧ ಹಾಗೂ ಸ್ಥಿರ ಜಗತ್ತಲ್ಲ ಎನ್ನುವುದನ್ನು ಮುಖ್ಯವಾಗಿ ಇಲ್ಲಿ ಗಮನಿಸಬೇಕು.

ಪ್ರಶ್ನಶಾಸ್ತ್ರ ಕುರಿತ ವ್ಯಾಖ್ಯಾನಗಳು

ಪ್ರಶ್ನಶಾಸ್ತ್ರ ಕುರಿತು ಹಲವು ವ್ಯಾಖ್ಯಾನಗಳು ಕಾಣುತ್ತವೆ. 'ಒಂದು ವ್ಯಕ್ತಿಯ ಜೀವಿತದಲ್ಲಿ ಹಾಗೂ ಭವಿಷ್ಯದಲ್ಲಿ ಘಟಿಸುವ ಘಟನೆಗಳನ್ನು ಹಾಗೂ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಇರುವ ವಿಶೇಷ ಅರಿವೇ ಪ್ರಶ್ನಶಾಸ್ತ್ರ' ಎನ್ನುವುದು ಪ್ರಶ್ನಶಾಸ್ತ್ರದ ಒಂದು ಮಗ್ಗುಲು. ಅದರ ಇನ್ನೊಂದು ಮಗ್ಗಲು 'ಮನಸ್ಸಿನಲ್ಲಿ ಭಾವೋದ್ರೇಕವಾಗುವುದಕ್ಕೂ ಆ ಕ್ಷಣದಲ್ಲಿ ನಡೆಯುವ ಘಟನೆಗಳಿಗೂ ಇರುವ ಸಂಬಂಧವನ್ನು ತಿಳಿಯುವ ಪ್ರಜ್ಞಾನೈಪುಣ್ಯವೇ ಪ್ರಶ್ನಶಾಸ್ತ್ರ' ಎಂದು ಹೇಳಲಾಗುತ್ತದೆ. ಎರಡೂ ವ್ಯಾಖ್ಯಾನಗಳಲ್ಲಿ ಮನುಷ್ಯನೇ ಕೇಂದ್ರಬಿಂದು. ಘಟಿಸುವ ಘಟನೆಗಳಿಗೂ ಮನುಷ್ಯನ ಮನೋಸ್ಥಿತಿಗೂ ಇರುವ ಕಾರ್ಯಕಾರಣ ಸಂಬಂಧವನ್ನು ತಿಳಿದುಕೊಳ್ಳುವ 'ಪ್ರಜ್ಞಾನೈಪುಣ್ಯತೆ' ಅಥವಾ 'ವಿಶೇಷ ಅರಿವು' ಪ್ರಶ್ನಶಾಸ್ತ್ರದ ಮೂಲಧಾತು. ಹೀಗಾಗಿ ಇದೊಂದು ಅಲೌಕಿಕ ಅಥವಾ ಅತಿಮಾನುಷ ಶಾಸ್ತ್ರವಲ್ಲ ಎಂಬುದು ನಿಶ್ಚಿತ. ಘಟಿಸುವ ಘಟನೆಗಳನ್ನಾಧರಿಸಿ ಪರಿಹಾರ ಸೂಚಿಸುವ ಪ್ರಶ್ನಶಾಸ್ತ್ರದ ಸ್ವಭಾವವೇ ಸರ್ವತಾ ಪ್ರಯೋಗಶೀಲವೂ ವಿವೇಕಶೀಲವು ಹಾಗೂ ಉಪಯುಕ್ತವೂ ಆಗಿದೆ. ಹೊರತು ನಿರ್ದಿಷ್ಟ ಸ್ವರೂಪದ ಸಿದ್ಧಶಾಸ್ತ್ರವಲ್ಲ. ಆದರೆ ಮನುಷ್ಯನ ಸಹಜ ದೌರ್ಬಲ್ಯಗಳನ್ನೇ ಬಂಡವಾಳ ಮಾಡಿಕೊಂಡು ಬದುಕುವ ಸುಲಿಗೆಕೋರ

Scanned with CamScanner
Scanned with CamScanner

ಶಾಸ್ತ್ರಜ್ಞರಿಂದಾಗಿ ಮನುಷ್ಯನ ವಿವೇಕಕ್ಕೆ ಪೂರಕವಾಗಿದ್ದ ಇಂಥ ಚಲನಶೀಲ ತಿಳಿವಿನ ನೆಲೆಗಳು ಜೀವವಿರೋಧಿಯಾದ ಶಾಸ್ತ್ರೀಯ ನೆಲೆಪಡೆದು ನಿಸ್ತೇಜಿತವಾಗಿವೆ, ಶುಷ್ಕವಾಗಿವೆ. ನಿಯಮಗಳೇ ಮುಂದಾಗಿ ನೀತಿ ಹಿಂದೆ ಸರಿದಿದೆ.

ಪ್ರಶ್ನೆಯ ವಿಧಗಳು

೧. ಮೌನ ಪ್ರಶ್ನ ೨. ಸಂಜ್ಞೆ ಪ್ರಶ್ನ ೩. ಶಾಬ್ದಿಕ ಪ್ರಶ್ನ ಅಥವಾ ಅಧ್ಯಯನದ ಅನುಕೂಲಕ್ಕಾಗಿ ಕೆಳಗಿನಂತೆಯೂ ವಿಂಗಡಿಸಬಹುದು. ೧. ಗತಕಾಲಕ್ಕೆ ಸೇರಿದ ಪ್ರಶ್ನಗಳು ೨. ಸಧ್ಯಕಾಲಕ್ಕೆ ಸೇರಿದ ಪ್ರಶ್ನಗಳು ೩. ಭವಿಷ್ಯತ್ಕಾಲಕ್ಕೆ ಸೇರಿದ ಪ್ರಶ್ನಗಳು

ಹೀಗೆ ವಿಂಗಡಿಸಿದಾಗ ಈ ವಿಂಗಡಣೆ ಪೂರ್ಣವೆಂದು ಅಲ್ಲ. ಇವು ಪರಸ್ಪರ ಸಹ ಸಂಬಂಧವನ್ನು ಹೊಂದಿರುತ್ತವೆಂಬುದನ್ನು ಮರೆಯಲಾಗದು. ಮೇಲ್ಕಾಣಿಸಿದ ಪ್ರಶ್ನೆಯ ವಿಧಗಳನ್ನು ಕೆಲವು ಪ್ರಶ್ನಶಾಸ್ತ್ರದ ಹಸ್ತಪ್ರತಿಗಳ ಸಹಾಯದಿಂದ ಈ ಕೆಳಗಿನಂತೆ ಚರ್ಚಿಸಬಹುದಾಗಿದೆ.

೧. ಗತಕ್ಕೆ ಸೇರಿದ ಪ್ರಶ್ನಗಳು

೧. ಕಳೆದು ಹೋದವ ಸಿಕ್ಕುತ್ತಾನೋ

ಉತ್ತರ: ಈತ ಸಿಗುವ ಸಂಭವ ಕಡಿಮೆ, ಹೋದವನಿಗೆ ರೋಗ ಬಡಿದಿದೆ

೨. ಮೊನ್ನೆ ಕಳೆದ ಎಮ್ಮೆ ಸಿಗಬಹುದೆ

ಉತ್ತರ: ಈಗ ತಪ್ಪಿಸಿಕೊಂಡ ಪಶು ಪೂರ್ವದಿಕ್ಕಿಗೆ ಹೋಗಿ ನಂತರ ದಕ್ಷಿಣ ದಿಕ್ಕಿಗೆ ಹೋಗುತ್ತದೆ.

೩. ಕಳೆದ ದ್ರವ್ಯ ಸಿಗುವುದೇ

ಉತ್ತರ: ಈಗ ಕಳೆದ ಹೋದ ದ್ರವ್ಯವು ದೊರೆಯುವುದು. ಪ್ರಯತ್ನಿಸು

ಹೀಗೆ ಕೇಳುವಾಗ ಸಂಜ್ಞೆ ಮೂಲಕವೂ ಪ್ರಶ್ನ ಕೇಳುವುದಿದೆ. ಪಶು ಕಳೆದಿದ್ದರೆ ಪ್ರಶ್ನ ಹೇಳುವವನ ಎದುರಿಗೆ ಹಾಲು ತುಂಬಿದ ಪಾತ್ರೆಯನ್ನಿಟ್ಟರೆ ಪಶು ಕಳೆದಿದೆ ಎಂದರ್ಥ. ಆಕಳೆಂದು ಗುರುತಿಸಲು ತಂಬಿಗೆಯಲ್ಲೂ ಎಮ್ಮೆ ಎಂದು ಗುರುತಿಸಲು ಮಣ್ಣಿನ ಮಗಿಯಲ್ಲೂ ಹಾಲು ತಂದಿಟ್ಟರೆ ಉತ್ತರ ಹೇಳುವವನಿಗೆ ಇಂಥದೇ ಸಮಸ್ಯೆ ಅಥವಾ ಪ್ರಶ್ನ ಎಂದು ಅರ್ಥವಾಗುತ್ತದೆ. ಇದನ್ನು ಮೌನಪ್ರಶ್ನ ಎಂದು ಕರೆಯಬಹುದು.

೨. ಸಧ್ಯಕಾಲಕ್ಕೆ ಸೇರಿದ ಪ್ರಶ್ನಗಳು

೧. ಯೀ ದಿವಸ ನೀನು ಎಚ್ಚರಿಕೆಯಿಂದಿರು

೨. ನಿನಗೆ ಇಂದು ಹೆಣ್ಣುಕೂಸು ಜನನವಾಗುವುದು ತೊಂದರೆಯಿದೆ.

೩. ನಿನಗೆ ಬಿದ್ದಿರುವ ಕನಸು ಸಂಕಟ ಸೂತಕ

Scanned with CamScanner

೪. ಈ ಪ್ರಯಾಣದಿಂದ ನಿನಗೆ ಸುಖವಿಲ್ಲ

೫. ಈ ವಸ್ತು ಈಗ ಖರೀದಿಸು ಧನಲಾಭವುಂಟು

೬. ಈ ಬಾವಿಯ ತೋಡಿದರೆ ಜಲ ಬೀಳುವುದು

೭. ಯೀಗ ಹೊತ್ತ ಗರ್ಭ ನಿಲ್ಲದು

೮. ಯೀಗ ಕೊಂಡ ವಸ್ತು ಪರಾಧೀನವಾದೀತು.

ಈ ಪ್ರಶ್ನಗಳನ್ನು ಸಂಜ್ಞಾ ಸ್ವರೂಪದಲ್ಲೂ ಕೇಳಬಹುದು. ರೋಗ ಗುಣವಾಗುವುದರ ಬಗ್ಗೆ ಕೇಳುವಾಗ, ಮುಸುಕು ಹಾಕಿಕೊಂಡು ನಿಸ್ತೇಜ ಸ್ಥಿತಿಯಲ್ಲಿ ಉತ್ತರ ಹೇಳುವವನ ಮುಂದೆ ಬಂದರೆ ಪ್ರಶ್ನ ಏನು ಎಂದು ಉತ್ತರ ಹೇಳುವವಗೆ ಸಂವಹನವಾಗುತ್ತದೆ.

೩. ಭವಿಷ್ಯತ್ಕಾಲಕ್ಕೆ ಸೇರಿದ ಪ್ರಶ್ನಗಳು

೧. ಯೀ ವಸ್ತುವ ಕೊಂಡರೆ ತೊಂದರೆಯಾದೀತೋ

ಉತ್ತರ: ವ್ರತಪೂಜೆಯ ಮಾಡುವುದರಿಂದ ಸಾವಕಾಶ ಫಲ ಸಿಗುವುದು

೨. ಯೀ ಕಳ್ಳತನವ ಮಾಡಿದವರ್ಯಾರು ಸಿಗುವುರೋ?

ಉತ್ತರ: ಈ ಕಳ್ಳತನವ ಶೂದ್ರರು ಮಾಡಿದ್ದಾರೆ. ಸಿಗಲಾರದು .

೩. ಹೋದ ಕಾರ್ಯವಾದೀತೆ?

ಉತ್ತರ: ಹೋದವ ಸತ್ಯನಿಷ್ಠನಿದ್ದರೂ ಆಲಸ್ಯದಿಂದ ಕಾರ್ಯ ಹಾನಿ ಮಾಡಿಕೊಂಡು ಬರುತ್ತಾನೆ

೪. ಯೀ ಕನ್ಯೆಯ ಮದುವೆಯಾದರೆ ಒಳಿತಾದೀತೆ

ಉತ್ತರ: ಈ ಕನ್ಯೆಯು ಸುಖಿಭೋಗಿಯು, ಚತುರಳು, ಸಂಸಾರಕ್ಕೆ ಯೋಗ್ಯಳು

೫. ಯೀ ಆಸ್ತಿ ಜಗಳ ಬಗೆಹರಿವುದೆ

ಉತ್ತರ: ಗರ್ವಬಿಟ್ಟು ದೇವರನ್ನು ನೆನೆಸಿದರೆ ಕೂಡಲೇ ಋಣಮುಕ್ತನಾಗುವೆ.

ಶಾಬ್ದಿಕ ಪ್ರಶ್ನಗಳನ್ನು ಮಾತಿನಲ್ಲೆ ಕೇಳುವುದರಿಂದ ಅಂತ ಸಂಕೇತಗಳೇನಿಲ್ಲ. ಮೇಲಿನ ಮೂರು ರೀತಿಯ ಪ್ರಶ್ನ ಉತ್ತರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಕೇಳುವವನ ಚಲನವಲನ ಹಾವಭಾವ ಹಾಗೂ ಭಾವತೀವ್ರತೆಯನ್ನು ಅನುಸರಿಸಿ ಜ್ಯೋತಿಷಿ ಯಾದವನು ಉತ್ತರ ಹೇಳುವುದನ್ನು ಗಮನಿಸಬೇಕು. ಮನುಷ್ಯನ ರಾಗ-ದ್ವೇಷಗಳಾದ ಪ್ರತಿಷ್ಠೆ, ಗರ್ವ, ಅಹಂಕಾರ, ಆಲಸ್ಯ, ಅವಿವೇಕ, ಅಜ್ಞಾನ, ಸಮಯ ಪ್ರಜ್ಞೆಯ ಕೊರತೆಗಳು ಆತನ ಸಮಸ್ಯೆಗಳಿಗೆ ಕಾರಣ ಹಾಗೂ ಪರಿಹಾರಗಳಾಗುವುದನ್ನು ಇಲ್ಲೆಲ್ಲ ಕಾಣಬಹು ದಾಗಿದೆ.

ಅನಿಕೇತನ

Scanned with CamScanner

ಪ್ರಶ್ನ ಕೇಳುವ ವಿಧಾನ

ಪ್ರಶ್ನಕಾರಕ ಶ್ರೀಮಂತನಾಗಿರಲಿ ಸಾಧಾರಣವಾಗಿರಲಿ ಭಯಭಕ್ತಿಯಿಂದ ಹೂ ಹಣ್ಣು ಅರ್ಪಿಸಿ ಪ್ರಾತಃಕಾಲದಲ್ಲಿಯೇ ಪ್ರಶ್ನ ಕೇಳಬೇಕು. ಪ್ರಶ್ನಶಾಸ್ತ್ರದ ಹಸ್ತಪ್ರತಿಯೊಂದರಲ್ಲಿ ಶ್ರೀ ಶಾರದಾಂಬಾಯ ನಮಃ। ತಾರಣ ಸಂವತ್ಸರದ ಕಾರ್ತಿಕ ಶು॥ ಸೋಮವಾರ ಪ್ರಶ್ನ ಬರಿಯುವುದಕ್ಕೆ ಶುಭ ಮಸ್ತು। ಯೀ ಪ್ರಶ್ನ ನೋಡುವ ಕ್ರಮ ಹ್ಯಾಂಗಂದರೆ

ಭೂಮಿಸಾರಿಸಿ ಮಂಡಲ ಮಾಡಿ ರಂಗವಲಿ ಹಾಕಿ
ಯಿ ಮಂತ್ರ ಅದರ ಮ್ಯಾಲೆ ಇಟ್ಟು ಗಂಧಾಕ್ಷತೆ ಹಾಕಿ
ಪೂಜೆಗೆ ತಾಂಬೂಲ ಇಟ್ಟು ಮಂತ್ರಾಕ್ಷತೆ ಹಾಕಿ ಬೇಡಿಕೊಂಬುದು।
ಯಿದರಲ್ಲಿ ಯಾವ ಮನೆಯಲ್ಲೂ ಬೆರಳಿಟ್ಟು ನೋಡಿಕೊಂಡರೆ
ಅದು ಸಿದ್ದಿ ಆಗೂದು। ಇಲ್ಲಾ ಎಂಬೂದು ನೋಡಿ ಹೇಳೂದು।
ಯೀ ಪ್ರಶ್ನ ಹನುಮಂತ ದೇವರು ಸೀತಾದೇವಿಯ ಕಾರ್ಯಕ್ಕೆ
ಹೋಗುವಾಗ ನೋಡಿದ ಶಕುನ। ಕೃಷ್ಣ ರುಕ್ಮಿಣಿ ತಂದ ಶಕುನ।
ಯಾ ಶಕುನ ನೋಡಿ ಅರ್ಜುನ ದೇವೇಂದ್ರನಲ್ಲಿ ಹೋಗುವಾಗ್ಗೆ
ಶ್ರೀ ರಾಮಚಂದ್ರ ದೇವರು ಅರಣ್ಯಕ್ಕೆ ಹೋಗುವಾಗ ಕೇಳಿದ ಶಕುನ

(ಮೈ ವಿವಿ ಹ ಸೂ–೬ ಕೆ.ಬಿ., ೫೮೦–೬೦೩ ಕ್ರ.ಸಂ. ೭೫೫)

ಪ್ರಶ್ನ ಕೇಳುವುದಕ್ಕೂ ಒಂದು ಕ್ರಮ ಬದ್ಧತೆಯನ್ನು ನೆಲೆಗೊಳಿಸಿರುವ ವಿಧಾನವು ಪ್ರಶ್ನಶಾಸ್ತ್ರಕ್ಕಿರುವ ಶಿಸ್ತಿನ ಸಂಕೇತವಾಗಿದೆ.

ಪ್ರಶ್ನಕಾರನ ಲಕ್ಷಣಗಳು

ಪ್ರಶ್ನ ಕೇಳುವವನ ಯಥಾರ್ಥತೆ ಮನಗಂಡು ನಿಷ್ಕರ್ಷಿಸುವುದು. ಕೀಟಲೆ ಮುಜುಗರ ತರುವಂತೆ ಉದ್ದೇಶ ಪೂರ್ವಕ ಪರೀಕ್ಷಾರ್ಥ ಪ್ರಶ್ನಗಳಿಗೆ ಪ್ರಶ್ನ ಹೇಳುವವ ಉತ್ತರಿಸಬಾರದು. ಪ್ರಶ್ನ ಕೇಳುವವನ ಅಂಗಚೇಷ್ಟೆ ಹಾಗೂ ಭಾವತೀವ್ರತೆಯನ್ನು ಅನುಸರಿಸಿ ಉತ್ತರಿಸಬೇಕು, ಧ್ವನಿ ಏರಿಳಿತ, ಪ್ರಶ್ನಿಸುವ ಸಂದರ್ಭ, ಮಾನಸಿಕ ಹಾಗೂ ಆಂಗಿಕ ಚಲನವಲನದ ಮೆಲೆ ಉತ್ತರಿಸಬೇಕು.

ಉದಾ: ನಾನು ಯಾವತ್ತಾದರೂ, ಐಶ್ವರ್ಯವಂತನಾಗುತ್ತೇನೆಯೇ? ಆರ್ಥಿಕ ಪ್ರಮೇಯಗಳನ್ನು ಮಂಡಿಸುವ ಈ ಪ್ರಶ್ನ ವ್ಯಕ್ತಿಯನ್ನು ಸಾಲ ಹಾಗೂ ಬಡತನದಿಂದ ಕಂಗಾಲು ಮಾಡಿರಬಹುದು. ಅಥವಾ ಆಸ್ತಿಯ ಆಸೆ ಹಾಗೂ ಸ್ವಾರ್ಥದಿಂದ ಕೇಳಿರಬಹುದು. ಆತನ ಚಲನವಲನ, ಆತಂಕ, ಭಯ ಮುಂತಾದ ಭಾವಗಳಿಗನುಸಾರವಾಗಿ ಉತ್ತರಿಸಬೇಕು. ವಿನಾಶಕಾರಕ ಹಾಗೂ ಪರಪೀಡಕ ಪ್ರಶ್ನ ಎಂದೆನಿಸಿದಲ್ಲಿ ಉತ್ತರಿಸಬಾರದು. ಉದಾಃ ರೋಗಿ ಗುಣಮುಖನಾಗುತ್ತಾನೆಯೇ ಆತನಿಗೆ ಗಂಡಕೂಸು ಹುಟ್ಟುತ್ತದೆಯೇ॥ ಇತ್ಯಾದಿ. ಸಂಬಂಧಿಗಳ ಕಣ್ಮರೆಯಾದ ಪ್ರಶ್ನ ಕೇಳಿದನೆಂದು ತಿಳಿಯೋಣ ಇವು ಪ್ರೀತಿ–ವಿಶ್ವಾಸ, ಸಂಬಂಧದ ಪ್ರಶ್ನಯಾದಂತೆ.

Scanned with CamScanner

ಜೀವಕ್ಕೆ ಆಪತ್ತು ತರವ ಪ್ರಶ್ನಗಳೂ ಆಗಬಹುದು. ಪರಿಸ್ಥಿತಿಯನ್ನು ತಿಳಿದು ಜ್ಯೋತಿಷಿ ಉತ್ತರಿಸಬೇಕು.

ಸ್ಥಿರಾಸ್ತಿಗೆ ಸಂಬಂಧಿಸಿದ ಪ್ರಶ್ನಗಳನ್ನು ಕೇಳುವಾಗಲೂ ಇದೇ ಕ್ರಮವನ್ನು ಅನುಸರಿಸಬಹುದು.

ಯಿ ಬಿತ್ತಿದ ಬೆಳೆ ಬರುತ್ತದೆಯೋ। ಅವರ ಹೊಲ ಬೆಳೆಯುತ್ತದೋ। ಅವನು ಈ ವ್ಯಾಪಾರದಲ್ಲಿ ಉದ್ಧಾರವಾಗುತ್ತಾನೋ। ಆ ಜಮೀನು ನನ್ನದಾಗುತ್ತದೊ। ನಮ್ಮ ತಾಯಿ ಬದುಕುತ್ತಾಳೆಯೋ॥ ನಾನು ಅಂದುಕೊಂಡಿರುವ ಆಸ್ತಿಯನು ಕೊಳ್ಳಲು ಸಾಧ್ಯವೆ। ಆ ಹೆಂಗಸಿನಿಂದ ನನಗೆ ಮಕ್ಕಳಾದಾವೆ॥ ಹುಟ್ಟಿದ ಶಿಶು ಬದುಕುತ್ತದೆಯೆ। ಇತ್ಯಾದಿ ಪ್ರಶ್ನಗಳಿಗೆ ಪ್ರಶ್ನ ಕೇಳುವವನ ಮುಖಭಾವ, ಭಾವತೀವ್ರತೆ, ಪ್ರಶ್ನಯ ಸ್ವರೂಪ ಸಂದರ್ಭ, ಇತ್ಯಾದಿ ಗಮನಿಸಿ ಪರಿಹಾರ ನೀಡಬೇಕಾಗುತ್ತದೆ. ಇನ್ನಷ್ಟು ಉದಾಹರಣೆಗಳನ್ನು ಕೆಳಗಿನಂತೆ ಗಮನಿಸಬಹುದಾಗಿದೆ.

ಯಿ ಹುಡುಗಿ ಋತುಮತಿಯಾದಳು। ಈ ಪ್ರಶ್ನ ಕೇಳಲು ಧೂತ, ನಗುತ ಬಂದರೆ ಹುಡುಗಿ ಬಿಳಿ ಸೀರಿಯ ಉಟ್ಟಾಳೆಂದು ತಿಳಿವುದು। ಧೂತನು ಸುಮ್ಮನೆ ಬಂದು ಕೇಳಿದರೆ ಕೆಂಪು ಸೀರಿಯನುಟ್ಟಾಳೆಂದು ಹೇಳುವುದು। ನಾಚುತ ಬಂದರೆ ಕರಿಯ ಸೀರೆಯನುಟ್ಟಾಳೆಂದು ಹೇಳುವುದು। ವೋಡಿ ಬಂದು ಕೇಳಿದರೆ ಕುಳಿತುಟ್ಟುದೆರ ಬಿಟ್ಟು ಬದಲು ಸೀರೆಯನುಟ್ಟಾಳೆಂದು ಹೇಳುವುದು. ಹೀಗೆ ಬರುವವನ ಭಾವನೆಗಳನ್ನು ಗಮನಿಸಿ ಉತ್ತರಿಸಬೇಕು. ವರಾಹ–ಮಿಹಿರ ಒಂದು ಕಡೆ ಜ್ಯೋತಿಷಿಗೆ ಫಲನುಡಿಯುವ ಪ್ರಯೋಗಸಿದ್ಧಿ ಉಂಟಾಗುವ ವರೆಗೂ ಖಚಿತವಾದ ಉತ್ತರ ಕೊಡುವುದು ಯುಕ್ತವಲ್ಲ' ಎಂದು .ಹೇಳುತ್ತಾನೆ. ಸಾಮಾನ್ಯವಾಗಿ ಸತ್ಯ–ಶುದ್ಧ ನಿರುಪದ್ರವಿ ಪ್ರಶ್ನಗಳು ಬೆಳಗಿನ ಜಾವದಲ್ಲಿ ಬರುತ್ತವೆ. ಉಪದ್ರವಿ ಹಾಗೂ ಸ್ವಾರ್ಥ ಪ್ರಶ್ನಗಳು ಸಂಜೆ ಹಾಗೂ ರಾತ್ರಿ ಬರುತ್ತವೆ.

ಧೂತ ಲಕ್ಷಣ ಎನ್ನುವ ಹಸ್ತಪ್ರತಿಯಲ್ಲಿ 'ಬರುತ ತಲಿಯ ಮುಟ್ಟಿದರೆ ಕಷ್ಟ ಬಲದ ಕಿವಿಯ ಮುಟ್ಟಿದರೆ ಶುಭ। ಯಡಕಿವಿ ಮುಟ್ಟಿದರೆ ದೂರಿನ ಸುದ್ದಿ। ಬಲದ ಕಣ್ಣು ಮುಟ್ಟಿದರೆ ಲಾಭ। ಯಡದ ಕಣ್ಣು ಮುಟ್ಟಿದರೆ ಹಾನಿ। ನಾಶಿಕ ಮುಟ್ಟಿದರೆ ವ್ಯಾದಿ। ಯಡದ ಕಿವಿ ತುರುಸುತ ಬಂದರೆ ಕಷ್ಟ। ಮೈ ತರುಸುತ ಬಂದು ಕೇಳಿದರೆ ವ್ಯಾದಿ। ಊಟ ಮಾಡುವ ವ್ಯಾಳೆಯಲ್ಲಿ ಬಂದು ಕೇಳಿದರೆ ಕಾರ್ಯಸಿದ್ಧಿ (ಧೂತ ಲಕ್ಷಣ; ಕ್ರಸಂ ೨೦೩, ಸಂ.ಹಿ, ಪು.೧೭೦, ಕಾಪ್ರ ೯೫೮.೯) ಎಂಬಿತ್ಯಾದಿಯಾಗಿ ಪ್ರಶ್ನಕಾರಕನ ಆಂಗಿಕ ಚಲನವಲನಗಳನ್ನು ಅನುಲಕ್ಷಿಸಿ ಉತ್ತರಿಸುವ ವಿವರಗಳು ಸಿಗುತ್ತವೆ.

'ಧೂತಪ್ರಶ್ನ ಹಾಗೂ ಪ್ರಶ್ನಶಾಸ್ತ್ರ' ಎನ್ನುವ ಹಸ್ತಪ್ರತಿಗಳಲ್ಲಿ ಈ ಕೆಳಕಂಡ ವಿವರಗಳನ್ನು ಕಾಣಬಹುದು. ಬಲದ ಮೀಸೆಯ ಮುಟ್ಟಿದರೆ ಕಾರ್ಯ। ಯಡದ ಮೀಸೆಯ ಮುಟ್ಟಿದರೆ

Scanned with CamScanner

ಕಷ್ಟ ವುಗುಳತ ಬಂದರೆ ಲಾಭ। ಗಡ್ಡ ಮುಟ್ಟಿದರೆ ಲಾಭ। ಯೋಚನೆ ಮಾಡುತ್ತ ಬಂದರೆ ಹೀನ। ಕೊರಳ ಮುಟ್ಟಿದರೆ ರೋಗ। ಬೆನ್ನು ಮುಟ್ಟಿದರೆ ಸಂತೋಷ। ಯಡದ ಮುಂಗೈತೋಳ ಮುಟ್ಟಿದರೆ ಸಂತೋಷ। ಯಡದ ಭುಜ ಮುಂಗೈತೋಳ ಮುಟ್ಟಿದರೆ ಕೇಡು। ಬೆರಳು ಮುರಿವುತ ಬಂದರೆ ಹಾನಿ। ಯಡದ ಕೈಯಲ್ಲಿ ಬೆನ್ನು ಮುಟ್ಟಿಕೊಳ್ಳುತ್ತ ಬಂದರೆ ನೋವು। ಬಲದ ಮೊಲಿಯ ಮುಟ್ಟಿದರೆ ಸುಖ। ಯಡದ ಮೊಲಿಯ ಮುಟ್ಟಿದರೆ ಕಷ್ಟವು। ಯದಿಯ ಮುಟ್ಟಿದರೆ ಅಷ್ಟಶ್ವರ್ಯ್ಯ। ಹೊಟ್ಟಿ ಮುಟ್ಟಿದರೆ ಸಂತೋಷ। ನಡವ ಮುಟ್ಟಿದರೆ ಸ್ತ್ರೀ ಸಂಭೋಗ। ಪ್ರಜಾಪತಿಯ ಮುಟ್ಟಿದರೆ ಮರಣ। ಪುಷ್ಪಕವ ಮುಟ್ಟಿದರೆ ಲಾಭ। ಕಾಲಿಗೆ ಕಾಲು ತಿಕ್ಕುತ ಬಂದರೆ ಕೇಡು। ಕಾಲಾ ಹಾಕಿ ಕೇಳೆ ಪ್ರಾಣ ನಿಲುವುದು॥ ಬಲದ ಕಾಲ ಮೇಲೆ ಯಡದ ಕಾಲು ಹಾಕಿ ಕೇಳಿದರೆ ಶುಭ। ಯಡದ ಕಾಲ ಮೇಲ ಬಲದ ಕಾಲ ಹಾಕಿ ಕೇಳಿದರೆ ಅಶುಭ। ವಂದಕಾಲ ಮೇಲ ನಿಂತು ಕೇಳಿದರೆ ಪಯಣವೋಗುವರು। ಮದುವೀಳ್ಳೆದೆಲಿಯ ಹಿಡಿದು ಕೇಳಿದಡೆ ಕಾರ್ಯಸಿದ್ಧಿ। ಕಡ್ಡಿಯಲಿ ನೆಲನ ಬರುವುತ ಕೇಳಿದರೆ ಶುಭ। ಹುಲ್ಲಕಡ್ಡಿಯ ಮುರಿದು ಕೇಳಿ ಕಾರ್ಯಹಾನ। ಕೋಲಿನಲ್ಲಿ ನೆಲವ ಬರುವುತ ಕೇಳಿದರೆ ಕಾರ್ಯ ನಿಲುವುದು। ಯಡುವುತ ಬಂದರೆ ಕಾರ್ಯಹಾನಿ। ಫಲವಸ್ತು ಹಿಡಿದು ಬಂದು ಕೇಳಿದರೆ ಕಾರ್ಯಲಾಭ। ವೀಳ್ಳೆಹಿಡಿದು ಬಂದು ಕೇಳಿದರೆ ಪುತ್ರಲಾಭ। ಎಲಿಯ ಸೀಳುತ ಬಂದರೆ ಕಾರ್ಯಹಾನಿ। ಬರುತಲೆ ಬಲದಲ್ಲಿ ನಿಂತು ಕೇಳಿದರೆ ಕಾರ್ಯಲಾಭ। ಬರುತಲೆ ಎಡದಲಿ ನಿಂತು ಕೇಳಿದರೆ ಕಾರ್ಯಾಹಾನಿ। ಬರುತಲೆ ಸೂರು ಹಿಡಿದುಕೊಂಡು ಕೇಳಿದರೆ ಕ್ಷೀಣ। ಪರಶು ಹಿಡಿದು ನಿಂದು ಕೇಳಿದರೆ ಶುಭ। (ಮೈವಿವಿ, ಸಂ.6, ಪು.143, ಪ್ರಶ್ನಶಾಸ್ತ್ರ, ಪು.289)

ಪ್ರಶ್ನಶಾಸ್ತ್ರದ ವಿಶೇಷತೆ

ಮೇಲ್ಕಾಣಿಸಿದ ವಿವರಗಳು ಗಮನಾರ್ಹವಾದಂಥವು. ಪ್ರಶ್ನ ಕೇಳುವ ಮನುಷ್ಯನ ನಡವಳಿಕೆ, ಭಾವತೀವ್ರತೆ, ಧ್ವನಿ

ಏರಿಳಿತದಂತಹ ಮಾನಸಿಕ ಹಾಗೂ ಆಂಗಿಕ ಚಲನವಲನಗಳನ್ನು ಗಮನಿಸಿ ಉತ್ತರಿಸಬೇಕೆನ್ನುವ ಪ್ರಶ್ನಶಾಸ್ತ್ರದ ಮೂಲಭೂತ ತಾತ್ವಿಕತೆಯೇ ಅದನ್ನು ಮೂಢನಂಬಿಕೆ ಹಾಗೂ ಗ್ರಹ ನಕ್ಷತ್ರದ ಬಲದಿಂದ ಉತ್ತರ ಹೇಳುವ ನೆಲೆಗಳಿಂದ ವಿಮುಖವಾಗಿಸುತ್ತದೆ. ಭಯ, ಅನುಮಾನ, ಊಹೆ, ಅಂದಾಜು ಸಾದೃಶ್ಯದೋಷ ಇತ್ಯಾದಿ ಕಾಕತಾಳೀಯ ಘಟನೆಗಳು ಇದಕ್ಕೆ ಮೂಲ ಪ್ರೇರಣೆಗಳಾದರೂ ಸಾಧ್ಯತೆ ಸಂಭಾವ್ಯತೆಗಳೇ ಇಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ಪ್ರತಿಯೊಂದಕ್ಕೂ ಕಾರ್ಯಕಾರಣ ಸಂಬಂಧವುಂಟು ಎನ್ನುವ ಈ ತರ್ಕಬದ್ಧತೆ ವೈಚಾರಿಕತೆಯ ಮೂಲ. ಸಂಶಯ, ಕುತೂಹಲ, ಆಲೋಚನೆ, ಅನ್ವೇಷಣೆಗಳೂ ವಿಜ್ಞಾನಕ್ಕೆ ಪ್ರೇರಣೆ ನೀಡುತ್ತವೆ. ಭಯ

Scanned with CamScanner

ಸಂದೇಹ, ಊಹೆ-ಕುತೂಹಲ, ಪ್ರವೃತ್ತಿಗಳು ಮನೋವಿಜ್ಞಾನಕ್ಕೂ ಪ್ರೇರಕವಾಗುತ್ತವೆ ಎನ್ನುವ ಸೆಳಕುಗಳು ಪ್ರಶ್ನಶಾಸ್ತ್ರದಲ್ಲಿ ಕಾಣುವುದು ಗಮನಾರ್ಹ. ತೋಂಟದ ಸಿದ್ಧಲಿಂಗ ಶರಣ ಹೇಳುವಂತೆ – 'ಮನಸಿನ ಸಂಶಯ ಕನಸಿನ ಭೂತವಾಗಿ ಕಾಡುವುದು ನೋಡಾ। ಮನಸಿನ ಸಂಶಯವಳಿದರೆ ಕನಸಿನ ಕಾಟ ಬಿಟ್ಟೋಡಿತ್ತು ನೋಡಾ। ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ' ಎನ್ನುವ ಮಾತು ಮನುಷ್ಯನ ಮನಸ್ಸಿನ ದೌರ್ಬಲ್ಯ, ಸಂಶಯ, ಅತೃಪ್ತಿ ದುರಾಸೆ ಹೇಗೆ ಮೂಢನಂಬಿಕೆಗೆ ಕಾರಣವಾಗುತ್ತವೆ ಎಂಬುದನ್ನು ಹೇಳುತ್ತದೆ. ಈ ಸಂಗತಿಗಳು ದೂರವಾದಲ್ಲಿ ಮನುಷ್ಯ ಮಾನಸಿಕವಾಗಿ ಆರೋಗ್ಯಕರವಾಗಿರಲು ಸಾಧ್ಯವಾಗುತ್ತದೆ. ಜಾತಕ, ಮುಹೂರ್ತ, ಜ್ಯೋತಿಷ್ಯ ಇವು ವಿಜ್ಞಾನದ ಮೂರು ಮುಖ್ಯ ಭಾಗಗಳು. ಇವುಗಳಲ್ಲಿ ಪ್ರಶ್ನಶಾಸ್ತ್ರಕ್ಕೆ ಅತ್ಯಂತ ಪ್ರಾಮುಖ್ಯತೆ ಇರುವುದು ಗಮನಾರ್ಹ. ಜಾತಕ ಹಾಗೂ ಮುಹೂರ್ತಕ್ಕಿಂತ ಪ್ರಶ್ನಶಾಸ್ತ್ರಕ್ಕಿರುವ ಅನುಕೂಲವೆಂದರೆ ಪ್ರಶ್ನೆಯ ಕಾಲವು ವಿಚಿತವಾಗಿರುತ್ತದೆ. ಸಂದರ್ಭವು ಮೂರ್ತವಾಗಿರುತ್ತದೆ. ವಾಸ್ತವವಾಗಿ ಪ್ರಶ್ನೆ ಕೇಳುವ ಕಾಲವೇ ಮನುಷ್ಯನ ಮನಸ್ಸಿನಲ್ಲಿ ಉದ್ದೇಶ ಅಥವಾ ಅಪೇಕ್ಷೆ ಹುಟ್ಟಿದ ಕಾಲ. ಆದ ಕಾರಣ ಅದಕ್ಕೆ ವಿಶೇಷ ಮಹತ್ವವಿದೆ. ಮನಸ್ಸಿನಲ್ಲಿ ಭಾವೋದ್ರೇಕವಾಗುವುದಕ್ಕೂ ಆ ಕ್ಷಣದಲ್ಲಿ ನಡೆಯುವ ಅಥವಾ ನೆನಪಾಗುವ ಘಟನೆಗಳಿಗೂ ಇರುವ ಸಾವಯವ ಸಂಬಂಧ ತಿಳಿಯುವ ವಿಶೇಷ ಪರಿಣತಿಯನ್ನು ಪ್ರಶ್ನಶಾಸ್ತ್ರವೆಂದು ಗುರುತಿಸಲಾಗುತ್ತದೆ. ಇದೇ ಪ್ರಶ್ನಶಾಸ್ತ್ರದ ವಿಶೇಷತೆ.

ಪ್ರಶ್ನಶಾಸ್ತ್ರ ಕುರಿತ ಹಸ್ತಪ್ರತಿಗಳು

ಪ್ರಶ್ನಶಾಸ್ತ್ರ ಕುರಿತಾಗಿ ಹಲವು ವಿಧದ ಹಸ್ತಪ್ರತಿಗಳು ನಮಗೆ ದೊರೆಯುತ್ತವೆ. ಪ್ರಶ್ನಶಾಸ್ತ್ರ, ಪ್ರಶ್ನಚೂಡಾಮಣಿ, ಪ್ರಶ್ನಚಿಂತಾಮಣಿ, ನಂದಿಕೇಶ್ವರನ ಪ್ರಶ್ನ, ಹನುಮಂತನ ಪ್ರಶ್ನ, ರಾಮಚಿಂತಾಮಣಿ, ಪ್ರಶ್ನಜಾತಕ, ನರಪಿಂಗಲಿ, ಸಾಮುದ್ರಿಕ, ಪ್ರಶ್ನತಂತ್ರ ಪ್ರಶ್ನರತ್ನಾಕರ, ಧೂತಲಕ್ಷಣ ಹೀಗೆ ಹಲವು ಹೆಸರುಗಳಲ್ಲಿ ಪ್ರಶ್ನಶಾಸ್ತ್ರದ ಹಸ್ತಪ್ರತಿಗಳು ದೊರೆಯುತ್ತವೆ. ಇವೆಲ್ಲವೂ ಒಂದು ರೀತಿ ದೇಶಿ ಮಾದರಿಯಲ್ಲಿರುವಂಥವು. ಇಲ್ಲಿ ಅಂಕಿ, ಸಂಖ್ಯೆ, ಗಣಿತ, ಕುಂಡಲಿ, ನಕ್ಷತ್ರ, ರಾಶಿ ಫಲಗಳ ವಿಚಾರಗಳಿಗಿಂತ ಸರಳವಾದ ಸಂವಾದ ರೀತಿಯ ಮಾತುಕತೆಯ ರೀತಿಯ ಪ್ರಶ್ನೋತ್ತರಗಳನ್ನು ಕಾಣುತ್ತೇವೆ. ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಇವು ಹುಟ್ಟಿದ್ದು ಕಂಡುಬರುತ್ತದೆ. ಶಾಸ್ತ್ರದ ನಿಯಮಬದ್ಧ ರೀತಿಗಳಿಗಿಂತ ಭಿನ್ನವಾದ ರಿವಾಜುಗಳು ಇಲ್ಲಿ ಕಾಣುತ್ತವೆ. ತೀರ ಶಾಸ್ತ್ರಬದ್ಧವಾಗಿ ಕಾಣುವ ನಕ್ಷತ್ರ ಚೂಡಾಮಣಿ, ಪ್ರಶ್ನ ಚಿಂತಾಮಣಿ, ಹೋರಾಫಲದಂಥ ಕೃತಿಗಳು ತೀರ ಶಾಸ್ತ್ರೀಯ ಚೌಕಟ್ಟಿನಲ್ಲಿ ಹುಟ್ಟಿದಂಥವು. ಸಂಸ್ಕೃತದ ಪ್ರಮುಖ ಗ್ರಂಥಗಳಾದ ವರಾಹಮಿಹಿರನ ಬೃಹತ್ ಸಂಹಿತ (೬ನೇ

Scanned with CamScanner

Scanned with CamScanner

ಶತಮಾನ) ದುರ್ಲಭರಾಜ ಜಗದೇವ ಕೃತ ಸಮುದ್ರ ತಿಲಕ (೧೨ನೇ ಶತಮಾನ) ಜಗದೇವನ ಸ್ವಪ್ನಚಿಂತಾಮಣಿ (೧೨ನೇ ಶತಮಾನ) ಇತ್ಯಾದಿ ಕೃತಿಗಳಲ್ಲಿ ಶಕುನಶಾಸ್ತ್ರದ ವಿವರಗಳಿವೆ. ಅಥರ್ವವೇದದ ಸಂಹಿತಾ ಕಾಂಡದಲ್ಲಿ (೬ ಸೂಕ್ತ ೨೬ ಮಂತ್ರ ೨ರಲ್ಲಿ) ಗೂಬೆ ಪಾರಿವಾಳಗಳನ್ನು ಯಮನ ಧೂತರೆಂದು ಕರೆದು ಅವುಗಳ ದರ್ಶನದಿಂದ ಆಪತ್ತು ಸಂಭವಿಸುತ್ತದೆನ್ನುವ ವಿವರಗಳಿವೆ. ಹಾಗೆ ಪ್ರಯಾಣ ಕಾಲದಲ್ಲಿ ಬರಿಗೊಡ ಎದುರಿಗೆ ಬಂದರೆ ಅಶುಭ (೧೬-೮-೪) ಎನ್ನುವ ಮಾಹಿತಿ ಸಿಗುತ್ತದೆ. ಹೀಗೆ ಚರಿತ್ರೆಯುದ್ದಕ್ಕೂ ಪ್ರಶ್ನ ಶಾಸ್ತ್ರದ ಹರವು ಇರುವುದನ್ನು ಗಮನಸಬಹುದಾಗಿದೆ.

* * *

ಪರಾಮರ್ಶಿಸಿದ ಹಸ್ತಪ್ರತಿಗಳು

೧. ಧೂತ ಲಕ್ಷಣ, ಕಾಪ್ರ-೯೪೪, ಪು.೧-೨, ಕನ್ನಡ ವಿಶ್ವವಿದ್ಯಾಲಯ, ಹಂಪಿ
೨. ಪ್ರಶ್ನ ಚಿಂತಾಮಣಿ, ಕಾಪ್ರ-೪೯೮ ಪು.೧-೧೦೭, ಕನ್ನಡ ವಿಶ್ವವಿದ್ಯಾಲಯ, ಹಂಪಿ
೩. ರಾಮ ಚಿಂತಾಮಣಿ, ಕಾಪ್ರ-೯೧೭, ಪು.೫-೫೦, ಕನ್ನಡ ವಿಶ್ವವಿದ್ಯಾಲಯ, ಹಂಪಿ
೪. ನಕ್ಷತ್ರ ಚೂಡಾಮಣಿ, ಕಾಪ್ರ-೭೦೨, ಪು.೧-೧೦೯, ಕನ್ನಡ ವಿಶ್ವವಿದ್ಯಾಲಯ, ಹಂಪಿ
೫. ನಕ್ಷತ್ರ ಫಲ, ಕಾಪ್ರ-೭೯೨-೧, ಪು.೧-೨೦, ಕನ್ನಡ ವಿಶ್ವವಿದ್ಯಾಲಯ ಹಂಪಿ
೬ ಜಲಶಿಲ್ಪಿ, ಕಾಪ್ರ-೩೮೬-೨, ಪು.೧-೮, ಕನ್ನಡ ವಿಶ್ವವಿದ್ಯಾಲಯ, ಹಂಪಿ
೭ ಜಲಶಿಲ್ಪಿ, ಕಾಪ್ರ-೧೧೪೨, ಪು.೧-೨, ಕನ್ನಡ ವಿಶ್ವವಿದ್ಯಾಲಯ, ಹಂಪಿ
೮. ಪ್ರಶ್ನಶಾಸ್ತ್ರ, ಕಾಪ್ರ-೧೫೭೮, ಪು.೧-೧೦, ಕನ್ನಡ ವಿಶ್ವವಿದ್ಯಾಲಯ, ಹಂಪಿ
೯. ಪ್ರಶ್ನಶಾಸ್ತ್ರ, ಕಾಪ್ರ-೫೮೦, ಪು.೭೨೫, ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೦. ನಂದಿಕೇಶ್ವರನ ಪ್ರಶ್ನ, ಕಾಪ್ರ-, ಅಪ್ರಕಟಿತ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೧. ಧೂತಪ್ರಶ್ನ, ಕಾಪ್ರ-, ಅಪ್ರಕಟಿತ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೨. ಶಕುನ, ಕಾಪ್ರ-, ಅಪ್ರಕಟಿತ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೩. ಹೋರಾಫಲ, ಕಾಪ್ರ-, ಅಪ್ರಕಟಿತ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೪. ಪ್ರಶ್ನ ಚಿಂತಾಮಣಿ, ಕಾಪ್ರ-೭೯೨, ಪು.೧-೫೦, ಕನ್ನಡ ವಿಶ್ವವಿದ್ಯಾಲಯ, ಹಂಪಿ

Scanned with CamScanner
Scanned with CamScanner

ಪೂರಕ ಗ್ರಂಥಗಳು

೧. ವೀರೇಶ ಬಡಿಗೇರ, ಎಸ್.ಆರ್.ಚನ್ನವೀರಪ್ಪ(ಸಂ) ; ೨೦೦೦ & ೨೦೦೫ ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಸೂಚಿ ಸಂಪುಟ-೨ ಹಾಗೂ ೪. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಎಫ್.ಟಿ ಹಳ್ಳಿಕೇರಿ, ಕೆ.ರವೀಂದ್ರನಾಥ (ಸಂ) ೨೦೦೦ & ೨೦೦೫, ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಸೂಚಿ ಸಂಪುಟ-೧ ಹಾಗೂ ೩. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂ.೬, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೪. ಬಿ.ವಿ.ರಾಮನ್(ಅನು) ೨೦೦೮; ಪ್ರಶ್ನತಂತ್ರ, ವಾಸನ್ ಪಬ್ಲಿಕೇಷನ್, ಬೆಂಗಳೂರು

೫. ಎನ್.ಕೆ.ಜೋಗಳೇಕರ್ ೧೯೯೦; ಶಕುನ ಜ್ಯೋತಿಷ್ಯ ಭಾಗ-೧ ತೇಜಸ್ವಿನಗರ, ಕಲಘಟಗಿ ರಸ್ತೆ, ಧಾರವಾಡ.

೬ ವೇ. ಬಸವಯ್ಯ ಶಾಸ್ತ್ರೀಗಳವರು ಹಿರೇಮಠ; ೧೯೦೮; ಬೃಹತ್ ಪ್ರಶ್ನ ರತ್ನಾಕರಂ, ಶಿವಾನಂದ ಬುಕ್ ಡಿಪೋ, ಗದಗ

೭ ಎಸ್. ಬಾಲಚಂದ್ರರಾವ್, ೨೦೦೦; ಫಲಜ್ಯೋತಿಷ್ಯ ನಂಬುವಿರಾ?, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು

೮. ಹೆಚ್.ಶೇಷ ಅಯ್ಯಂಗಾರ್ (ಸಂ) ೨೦೦೨, ಲೋಕೋಪಕಾರಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೯. ಷಣ್ಮುಖಯ್ಯ ಅಕ್ಕೂರಮಠ, ೧೯೮೩ ; ಶಕುನಶಾಸ್ತ್ರ ವಿವೇಚನೆ ಮತ್ತು ಶರಣರ ಆಲೋಚನೆ, ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ ಮೂರುಸಾವಿರ ಮಠ, ಹುಬ್ಬಳ್ಳಿ

೧೦. ಮೀರಾ ಚಕ್ರವರ್ತಿ ೧೯೯೬; ತಂತ್ರ ಮನೋವೈಜ್ಞಾನಿಕ ಪರಿಕಲ್ಪನೆ, ಅಕ್ಷರ ಪ್ರಕಾಶನ ಹೆಗ್ಗೋಡು

೧೧. ವಿದ್ವಾನ್ ಕೆ. ಚಂದ್ರಶೇಖರ್, ೨೦೦೯; ಶಕುನ ಫಲಗಳು, ಗಣೇಶ್ ಪ್ರಕಾಶನ, ಬೆಂಗಳೂರು

* * * * *

Scanned with CamScanner
Scanned with CamScanner

ಅನಿಕೇತನ

ಬಹುಭಾಷಾ ಸಾಹಿತ್ಯ ಅಧ್ಯಯನ ವಿಭಾಗ

(ಜನವರಿ–ಡಿಸೆಂಬರ್–2017)



ಪ್ರಧಾನ ಸಂಪಾದಕರು

ಡಾ. ಬಿ.ವಿ. ವಸಂತಕುಮಾರ್

ಸಂಪಾದಕರು

ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

Scanned with CamScanner

Scanned with CamScanner

Scanned with CamScanner

ANIKETHANA (A Quaterly Journal of Kannada Language and Literature) - Edited by : Dr. D.K. Chittaiah Poojar, Published by : Kariyappa N., Registrar, Karnataka Sahithya Academy, Kannada Bhavana, J.C. Road, Bengaluru - 560 002.

ಪ್ರಧಾನ ಸಂಪಾದಕರು
ಡಾ. ಬಿ.ಎ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಂಪಾದಕರು
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

ಜನವರಿ – ಡಿಸೆಂಬರ್ – 2019 (ಸಂಯುಕ್ತ ಸಂಚಿಕೆ)

ಬೆಲೆ : ೫೦/-
ಮುದ್ರಣ : ೨೦೨೧
ಪ್ರತಿಗಳು : ೨೦೦೦
ಪುಟಗಳು : ix+೩೨೭=೩೩೬
ಮುಖಪುಟ ಚಿತ್ರ : ಏಕಾಕ್ಷರ ಪ್ರಿಂಟರ್ಸ್

ಚಂದಾವಿವರ
ಬಿಡಿಪ್ರತಿ : ೫೦/-
ವಾರ್ಷಿಕ ಚಂದಾ : ೨೦೦/-
ಅಜೀವ ಚಂದಾ : ೧೦೦೦/-

ಪ್ರಕಾಶಕರು
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
ಏಕಾಕ್ಷರ ಪ್ರಿಂಟರ್ಸ್
ನಂ. 2, 5ನೇ 'ಬಿ' ಮುಖ್ಯರಸ್ತೆ, ಬ್ಯಾಂಕ್ ಆಫ್ ಬರೋಡಾ ರಸ್ತೆ
ಕಾಮಾಕ್ಷಿಪಾಳ್ಯ, ಬೆಂಗಳೂರು – 560 079.
ಮೊಬೈಲ್ : 9844365538

Scanned with CamScanner
Scanned with CamScanner

ಪರಿವಿಡಿ

ಪ್ರಧಾನ ಸಂಪಾದಕರ ಮಾತು

ಸಂಪಾದಕರ ಮಾತು

೧. ಖಡ್ಗಶಾಸ್ತ್ರ – ಡಾ. ವೈ.ಸಿ. ಭಾನುಮತಿ

೨. ಮಂಗರಸ ಕವಿಯ 'ಸೂಪಶಾಸ್ತ್ರ' – ಮರುಓದು
– ಡಾ. ಗುರುಪಾದ ಮರಿಗುದ್ದಿ

೩. ಗಣಿತ ಶಾಸ್ತ್ರ – ಡಾ. ಕೆ. ರವೀಂದ್ರನಾಥ

೪. ಗಜಶಾಸ್ತ್ರ ಸಾಹಿತ್ಯ – ಡಾ. ಕೆ. ರವೀಂದ್ರನಾಥ

೫. ಪ್ರಶ್ನಶಾಸ್ತ್ರದ ಹಸ್ತಪ್ರತಿಗಳು: ಮನೋವೈಜ್ಞಾನಿಕ ವಿವೇಚನೆ – ಡಾ. ವೀರೇಶ ಬಡಿಗೇರ

೬. ನಿಧಿಶಾಸ್ತ್ರದ ಹಸ್ತಪ್ರತಿಗಳು: ಸಂಪತ್ತಿನ ಸ್ವಯಂ ಸಂರಕ್ಷಣೆಯ ತಂತ್ರಗಳು
– ಡಾ. ವೀರೇಶ ಬಡಿಗೇರ

೭. ಜಂಗಮ ಜನಾರ್ದನ ಮಹಾಕವಿ – ಡಾ. ಕೃಷ್ಣಮೂರ್ತಿ ಹನೂರು

೮. ವಚನಗಳಲ್ಲಿ ಯೋಗದ ಪರಿಕಲ್ಪನೆ – ಡಾ. ಎಫ್.ಟಿ. ಹಳ್ಳಿಕೇರಿ

೯. ಕಣಿ : ಭವಿಷ್ಯ ಮತ್ತು ಅಲೆಮಾರಿ ಸಮುದಾಯಗಳು
– ಡಾ. ವೀರೇಶ ಬಡಿಗೇರ

೧೦. ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ – ಡಾ. ಕಲ್ಲಯ್ಯ ಎಸ್. ಹಿರೇಮಠ

೧೧. ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರ
– ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

೧೨. ಕೈಫಿಯತ್ತುಗಳ ಚರಿತ್ರೆಯ ಆಯಾಮಗಳು – ಡಾ. ಪಂಡಿತ ಕೆ. ರಾಠೋಡ

೧೩. ಆಧುನಿಕ ಪೂರ್ವ ಕರ್ನಾಟಕದ ಮಹಿಳೆ ಮತ್ತು ಮತಾಂತರ ಕನ್ನಡ ಕಾವ್ಯ
ಮತ್ತು ದಾಖಲು ಸಾಹಿತ್ಯವನ್ನು ಅನುಲಕ್ಷಿಸಿ – ಡಾ. ಎನ್.ಆರ್. ಲಲಿತಾಂಬ

೧೪. ಶಾಸನ ಲಿಪಿಕಾರರ ಸಂಕಥನ – ಡಾ. ಪಂಡಿತ ಕೆ. ರಾಠೋಡ

೧೫. ಲಕ್ಕುಂಡಿ ಕಲ್ಯಾಣ ಚಾಲುಕ್ಯರ ಶಾಸನ ಸಾಹಿತ್ಯ –
ಪ್ರೊ. ಡಿ.ವಿ. ಪರಮಶಿವಮೂರ್ತಿ

೧೬. ಕೆಳದಿ ಅರಸರ ತಾಮ್ರ ಶಾಸನಗಳು – ಡಾ. ಶಿವರಾಜ .ಬಿ.ಇ

೧೭. ಅಪೂರ್ವ ನವವರ್ಣವೃತ್ತ ಮತ್ತು ನವಮಾತ್ರಾವೃತ್ತಗಳ ಅನ್ವೇಷಣಕಾರ
ಛಂದೋನಿಜಗುಣಿ ಕುಮಾರ ನಿಜಗುಣರು – ಡಾ.ಸಿ.ನಾಗಭೂಷಣ

Scanned with CamScanner

Scanned with CamScanner

೧೮. ಸಮ-ಬವ ರೂಪಿ ಪದಗಳು: ಬಾಶೆ, ಇತಿಹಾಸ ಮತ್ತು ರಾಜಕಾರಣ
– ಬಸವರಾಜ ಕೋಡಗುಂಟಿ
೧೯. ಭಕ್ತಿ ಸಂಗೀತ : ಹಿಂದೂಸ್ಥಾನಿ ಗಾಯಕರ ಕೊಡುಗೆ
– ಡಾ. ಜಯದೇವಿ ಜಂಗಮಶೆಟ್ಟಿ
೨೦. ಸಂಗೀತ ಕಲೆ ಪ್ರತಿಭೆ ಮತ್ತು ವ್ಯತ್ಪತ್ತಿ – ಡಾ. ಜಯದೇವಿ ಜಂಗಮಶೆಟ್ಟಿ
೨೧. ಸಾಹಿತ್ಯ ಘನಾವೃತಿ – ಶೀಲಾ ಶ್ರೀಧರ್
೨೨. ನಾಡೋಜ ಪ್ರೊ. ಕೆ.ಜಿ. ನಾಗರಾಜಪ್ಪ ಅವರ ಸಂದರ್ಶನ

Scanned with CamScanner

ನಿಧಿಶಾಸ್ತ್ರದ ಹಸ್ತಪ್ರತಿಗಳು: ಸಂಪತ್ತಿನ ಸ್ವಯಂ ಸಂರಕ್ಷಣೆಯ ತಂತ್ರಗಳು

– ಡಾ. ವೀರೇಶ ಬಡಿಗೇರ

ಸಾಮಾನ್ಯವಾಗಿ ನಿಧಿ ಎನ್ನುವುದು ಎಡೆ, ರಾಶಿ, ಸಂಪತ್ತು, ಗಂಟು ಎನ್ನುವ ವಿವಿಧಾರ್ಥದಲ್ಲಿ ಕನ್ನಡ ಸಂಸ್ಕೃತಿಯಲ್ಲಿ ಬಳಕೆಯಾಗಿದೆ. ನಿಧಿ ಶಬ್ದದ ಮೂಲಧಾತು 'ಧಾ'. ಮೋನಿಯರ್ ವಿಲಿಯಮ್ಸ್ ಪ್ರಕಾರ ಧಾ ಎಂದರೆ ನಿಕ್ಷೇಪವಿಡು ಎಂದರ್ಥ. ಪುರಾಣಗಳಲ್ಲಿ ೮ ರಿಂದ ೯ ನಿಧಿಗಳ ಹೆಸರು ಬರುತ್ತವೆ. ೧. ಪದ್ಮ(ಕಮಲ), ೨.ಮಹಾಪದ್ಮ(ದೊಡ್ಡಪದ್ಮ), ೩. ಶಂಖ, ೪. ಮಕರ, ೫. ಕಶ್ಯಪ(ಆಮೆ) ಇತ್ಯಾದಿ ಸಸ್ಯ ಹಾಗೂ ಜಲಚರ ಸಂಕೇತಗಳ ಮೂಲಕ ಗುರುತಿಸಲಾಗಿದೆ. ವಾಸನೇಯ ಸಂಹಿತೆಯಲ್ಲಿ ಗಣಪತಿ ಸ್ತುತಿಸುತ್ತ ಗಣಗಳಿಗೆ ನೀನು ಗಣಪತಿ, ಪ್ರಿಯಕರನಲ್ಲಿ ಪ್ರಿಯಪತಿ, ಅಲ್ಲದೆ ನಿಧಿನಾಮ್ ನೀನು ನಿಧಿಪತಿ ಅಂದರೆ ಗಣಪತಿಯನ್ನು ಸಂಪತ್ತಿನ ನಿಧಿಪತಿಯೆಂದು ಇಲ್ಲಿ ಗುರುತಿಸಲಾಗಿದೆ. ಕನ್ನಡ ಮೌಖಿಕ ಹಾಗೂ ಲಿಖಿತ ಸಂಸ್ಕೃತಿಯಲ್ಲಿಯೂ ಇದರ ಬಳಕೆ ಕಂಡುಬರುತ್ತದೆ. ಆಧುನಿಕ ಸಂದರ್ಭ ದಲ್ಲಿಯೂ ಮಾಧ್ಯಮಗಳ ಮೂಲಕ ಇದಕ್ಕೆ ಅನಿರೀಕ್ಷಿತ ಮಹತ್ವ ಮತ್ತು ಸ್ವಾರ್ಥಪರ ಪ್ರಚಾರಸಿಕ್ಕೂ ದುರುಪಯೋಗದ ದಾರಿಗೂ ಉದ್ದೀಪಿಸಿದೆ.

ಮನುಷ್ಯ ತನ್ನ ಜೀವಿತಾವಧಿಯಲ್ಲಿ ದುಡಿಮೆಗೆ ಹಾಗೂ ಬಳಕೆಗೆ ಮೀರಿದ ಸಂಪತ್ತನ್ನು ಮುಂದಿನ ದಿನಗಳಿಗಾಗಿ ಅಥವಾ ಮುಂದಿನ ಸಂತತಿಗಾಗಿ

Scanned with CamScanner

ರಕ್ಷಣಾತ್ಮಕವಾಗಿ ಕೂಡಿಡುವುದು ಸಾಮಾನ್ಯ ಸಂಗತಿ. ಹಗೆ, ಬಳತ, ಅಡಕಲಗಳಲ್ಲಿ ಆಹಾರ ಧಾನ್ಯಗಳನ್ನೂ ಮಡಿಕೆ, ತಪಲ್ಲಿ ಇತ್ಯಾದಿಗಳಲ್ಲಿ ಹಣವನ್ನೂ ಸಂದೂಕ, ಪೆಟ್ಟಿಗೆ, ಗಂಟುಗಳಲ್ಲಿ ವಸ್ತ್ರ ವಡವೆಗಳನ್ನು ಕೂಡಿಡುವುದು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿ ಇರುವ ಸಂಗತಿ. ಇದು ಆಧುನಿಕ ಮನುಷ್ಯನ ಸ್ವಾರ್ಥ ಹಾಗೂ ಉಪಭೋಗ ಜೀವನಕ್ಕಿಂತ ಭಿನ್ನವಾಗಿದೆ. ಆಧುನಿಕ ಮನುಷ್ಯ ತನ್ನ ಅಕ್ರಮ ಸಂಪತ್ತನ್ನು ದೇಶ ವಿದೇಶಿ ಬ್ಯಾಂಕುಗಳಲ್ಲಿ ಕಪ್ಪು ಹಣದ ರೂಪದಲ್ಲಿ ಅನಧಿಕೃತ ಹಾಗೂ ಅನಾಮಧೇಯ ಹೆಸರಿನಲ್ಲಿ ಅಡಗಿಸಿಡುವ ಪ್ರವೃತ್ತಿಯಂಥಲ್ಲ.

ಅಲ್ಲಮನ ವಚನಗಳಲ್ಲಿ 'ನೆಲದ ಮರೆಯ ನಿಧಾನದಂತೆ', 'ಬೀದಿಯಲಿ ಬಿದ್ದ ಮಾಣಿಕ್ಯವು ಹೂಳಿರ್ದ ನಿಧಾನವನಾರಿಗೂ ಕಾಣಬಾರದು ನೋಡಾ' ಎಂದು ಬರುವ ಮಾತುಗಳು ಸಂಪತ್ತನ್ನು ಕಾಪಿಡುತ್ತಿದ್ದ ಚಾರಿತ್ರಿಕ ನೆಲೆಗಳನ್ನು ನೆನಪಿಸುತ್ತವೆ.

ಸರ್ವಜ್ಞನ ಒಂದು ಪದ್ಯದಲ್ಲಿ–

ಉಣ್ಣದೊಡೆವೆಯ ಗಳಿಸಿ ಮಣ್ಣಿನೊಳು ತಾನರಿಸಿ
ಸಣ್ಣಿಸಿಯೆ ನೆಲನ ಸಾರಿದನ ಬಾಳೊಳಗೆ
ಮಣ್ಣು ಕಾಣಯ್ಯ ಸರ್ವಜ್ಞ.

ನಿಧಿಶಾಸ್ತ್ರದ ಹಸ್ತಪ್ರತಿಗಳ ಮುಖ್ಯ ಗುಣಲಕ್ಷಣವೆಂದರೆ ಸಂಪತ್ತನ್ನು ಅಧಿಕೃತ ಹಾಗೂ ಜತನವಾಗಿ ಕಾಪಿಡುವುದು. ಮನುಷ್ಯ ತನ್ನ ಗಂಟು ಪರರ ಕಣ್ಣಿಗೆ ಕಾಣದಂತೆ ಹಾಗೂ ಕೈಗೆ ಸಿಗದಂತೆ ಮಾಡುವ ಸ್ವಯಂ ಸಂರಕ್ಷಣಾ ವಿಧಾನ. ಬ್ಯಾಂಕಿನ ವ್ಯವಸ್ಥೆ ಇರದ ಹೊತ್ತಿನಲ್ಲಿ ಅಥವಾ ಇದ್ದರೂ ತನ್ನ ದುಡಿಮೆಯ ಭಾಗ ಇನ್ನೊಬ್ಬರ ಕಣ್ಣಿಗೆ ಬಿದ್ದು ಅಪವ್ಯಯವಾಗದಿರಲಿ ಎನ್ನುವ ಹೊತ್ತಿನಲ್ಲಿ ಮನುಷ್ಯ ತನಗಾಗಿ ರೂಪಿಸಿಕೊಂಡ ಗುಪ್ತ ಟ್ರಜರಿ ವ್ಯವಸ್ಥೆಯ ಫಲಿತಗಳು (ಅಕೌಂಟ್ ಬುಕ್ಸ್) ಈ ನಿಧಿಶಾಸ್ತ್ರದ ಹಸ್ತಪ್ರತಿಗಳು.

ನಿಧಿಶಾಸ್ತ್ರದ ಹಸ್ತಪ್ರತಿಗಳ ಇನ್ನೊಂದು ಮುಖ್ಯ ಗುಣವೆಂದರೆ ಉದ್ದೇಶ ಪೂರ್ವಕ ಗೊಂದಲ ಹಾಗೂ ಭಯವನ್ನು ಸೃಷ್ಟಿಸುವುದು. ಸಂಪತ್ತಿನ ಅಭದ್ರತೆಯ ಸಮಸ್ಯೆ ಇಂಥ ಸನ್ನಿವೇಶಗಳಿಗೆ ಕಾರಣವಾಗಿರಬಹುದು. ಉದಾಹರಣೆಗೆ ಒಬ್ಬ ವ್ಯಕ್ತಿ ತನ್ನ ಮಿಗುತಾಯದ ಹಣ ಅಥವಾ ಒಡವೆಯನ್ನು ಒಂದು ಪಾತ್ರೆಯಲ್ಲಿ ಭದ್ರವಾಗಿ ಇಟ್ಟು ಅದನ್ನು ಮನೆಯ ಗೋಡೆ, ನೆಲ ಮತ್ತಿನ್ನಾವುದಾದರೂ ಭಾಗದಲ್ಲಿ ರಹಸ್ಯವಾಗಿ ಹೂತಿಡುವುದು ಮೊದಲ ಹಂತ. ಮನೆಯಲ್ಲಿ ಅದರ ಸುರಕ್ಷತೆಯ ಸಮಸ್ಯೆ ಎದುರಾದಾಗ ತನ್ನ ಹೊಲ ಅಥವಾ ಊರ ಹೊರಗಿನ ನಿರ್ಜನ ಭೂ ಪ್ರದೇಶದ ಅಥವಾ ಗುಡಿ ಗುಂಡಾರದಲ್ಲಿ ಹೂತಿಡುವುದು ಕ್ರಮ. ಮತ್ತೊಂದು ಅಂಥ ಹೊತ್ತಲ್ಲಿ ಸುರಕ್ಷತೆ ಹಾಗೂ ನೆನಪಿನ ಭಾಗವಾಗಿ ಲಿಖಿತ ರೂಪಕ್ಕೆ ಮೊರೆ ಹೋಗುತ್ತಾನೆ.

Scanned with CamScanner
Scanned with CamScanner

ಹೇಗೆಂದರೆ ಒಂದು ನಿಧಿಶಾಸ್ತ್ರದ ಹಸ್ತಪ್ರತಿಯಲ್ಲಿ ಸಿಗುವಂತೆ 'ಮನೆಯಿಂದ ಪೂರ್ವಕ್ಕೆ ಒಂದು ಘಳಿಗೆ ನಡೆಯಬೇಕು. ಅಲ್ಲೊಂದು ಬನ್ನಿಯ ಮರ. ಅದರಿಂದ ಎಡಕ್ಕೆ ಹತ್ತು ಹೆಜ್ಜೆ ನಡೆದು ಮೂರು ಹೆಜ್ಜೆ ಹಿಂದಕ್ಕೆ ಬರಬೇಕು. ನಂತರ ಬೆಸದಿಕ್ಕು(ದಕ್ಷಿಣ) ಬೆನ್ನು ಮಾಡಿ ಮೂರು ಹೆಜ್ಜೆ ನಡೆದರೆ ಒಂದು ಬಂಡೆಕಲ್ಲು. ಅಲ್ಲಿಂದ ಐದು ಹೆಜ್ಜೆ ಅಂತರದಲ್ಲಿ ಲಿಂಗಮುದ್ರೆಕಲ್ಲು. ಲಿಂಗಮುದ್ರೆ ಕಲ್ಲಿನ ಕೆಳಗೆ ನಿಧಿಜಾಗ. ಇದನ್ನು ಪಡೆಯಬೇಕಾದರೆ ಆಯಿತಾರ ಅಮವಾಸಿ ಸರಿ ರಾತ್ರಿ ಬೆತ್ತಲೆಯಾಗಿ ಒಬ್ಬಂಟಿಯಾಗಿ ಸಕಲ ಶಾಸ್ತ್ರ ವಿಧಿ ಪೂಜಿಸಬೇಕು. ಯಾಕೆಂದರೆ ಹತ್ತು ತಲೆ ಸರ್ಪ ಕಾವಲು ಇದೆ. ಬಲಿಯಾಗಬೇಕು. ಯಾಕೆಂದರೆ ಹತ್ತು ತಲೆ ಬ್ರಹ್ಮ ರಾಕ್ಷಸ ಹಸಿದು ಕುಳಿತಿದೆ. ಚೊಚ್ಚಲ ಮಗನ ಬಲಿಯಾದ್ರೆ ನಿಧಿ ಕೈವಶ॥ ತಪ್ಪಿದರೆ ಕಣ್ಣು ಕುರುಡು. ಕೈ ಚೊಂಚ. ಕಾಲು ಹೆಳವ ನಾನಾ ತರದ ಬ್ಯಾನಿ ಬಂದೀತು॥'

ಈ ಉಲ್ಲೇಖವು. ಒಂದು ಕಾಗದದ ಮೇಲೆ ಕ್ಯಾರೆಣ್ಣಿಯಿಂದ ಬರದಂಥದ್ದು. ಮುಖ್ಯವಾಗಿ ಇದು ನಿಧಿಯಿರುವ ಜಾಗದ ಅಧಿಕೃತತೆ ಹಾಗೂ ಹೋಗುವ ಮಾರ್ಗ ನಂತರ ಅದನ್ನು ಪಡೆಯುವ, ಪಡೆಯದಿರುವ ಬಗೆಯನ್ನು ಹೇಳುವ ಕುತೂಹಲಕರ ಸಂಗತಿಗಳಿಂದ ಕೂಡಿದ ಪಾಸ್‌ಬುಕ್.

ನಿಧಿ ಹೂತಿಡುವವನಿಗೆ ಸಹಜವಾಗಿ ಯಾರಾದರೂ ನೋಡಿಯಾರು, ನೋಡಿ ಅದನ್ನು ಕದ್ದಾರು ಎನ್ನುವ ತವಕ ಇದ್ದೇ ಇರುತ್ತದೆ. ಹೀಗಾಗಿ ಎಷ್ಟು ಸಾಧ್ಯವೋ ಅಷ್ಟು ಅದನ್ನು ಪರರು ಪಡೆಯಬಾರದೆನ್ನುವ ಇರಾದೆ ಇಲ್ಲಿನದು. ಎಡ, ಬಲ, ಮೇಲೆ, ಕೆಳಗೆ ಹಿಂದಕ್ಕೆ ಮುಂದಕ್ಕೆ ಎಂದು ಹೀಗೆ ನಿಧಿ ಇಟ್ಟ ಜಾಗದ ದಾರಿಯನ್ನು ಸಂಕೀರ್ಣ ಹಾಗೂ ಗೊಂದಲಕ್ಕೀಡು ಮಾಡುವುದು ಮತ್ತು ಅದನ್ನು ತನಗೆ ಮಾತ್ರ ತಿಳಿಯುವ ಪರಿಭಾಷೆಯಲ್ಲಿ ಬರೆದಿಡುವುದು. ಅದಕ್ಕಾಗಿ ಗಿಡ, ಮರ, ಬಂಡೆ, ಲಿಂಗಮುದ್ರೆಯಂಥ ಪ್ರಾಕೃತಿಕ ಸತ್ಯಗಳನ್ನು ಗುರುತುಗಳನ್ನಾಗಿ(ಇಂದಿನ ಮೈಲಿಕಲ್ಲಿನಂತೆ) ಪರಿಭಾವಿಸುವುದು ಇಲ್ಲಿನ ಮೊದಲ ಹಂತದ ಕೆಲಸವಾಗಿದೆ. ಮನುಷ್ಯ ಅಳಿದರೂ ಈ ಪ್ರಾಕೃತಿಕ ಸತ್ಯಗಳು ಶಾಶ್ವತ ಎನ್ನುವ ನಂಬಿಕೆ ಇಲ್ಲಿ ಮುಖ್ಯವಾಗಿದೆ.

ಹೀಗೆ ಏನೋ ಕಸರತ್ತು ಮಾಡಿ ಒಂದು ನಿರ್ದಿಷ್ಟ ಜಾಗದಲ್ಲಿ ಹೂತಿಟ್ಟ ಮೇಲೆ ಸಹಜವಾಗಿ ಅವನಿಗೆ ಮತ್ತೇ ತನ್ನ ಸಂಪತ್ತಿನ ಅಭದ್ರತೆ ಕಾಡಿರಬೇಕು. ಅದಕ್ಕಾಗಿ ಉದ್ದೇಶಪೂರ್ವಕ ಭಯ ಹುಟ್ಟಿಸುವ ತಂತ್ರವನ್ನು ಅನುಸರಿಸಿರಬೇಕು. ಆಯಿತಾರ (ರವಿವಾರ) ಅಮವಾಸ್ಸೆ, ಸರಿರಾತ್ರಿ, ಒಬ್ಬಂಟಿ, ಬೆತ್ತಲೆ ಈ ಪದ ಬಳಕೆಯೇ ಎಂಥ ಧೈರ್ಯಶಾಲಿ ಮನುಷ್ಯನ ಜಂಗಾ ಬಲವನ್ನೇ ಉಡುಗಿಸುವಂಥವು. ಅದರಲ್ಲೂ

Scanned with CamScanner
Scanned with CamScanner

ಮನುಷ್ಯ ಬೆತ್ತಲೆಯಾಗುವುದೆಂದರೆ ಅದೊಂದು ಆ ಕಾಲದಲ್ಲಿ ಅಸಾಧ್ಯವಾದ ಮಾತು. ಕತ್ತಲಲ್ಲೂ ಬೆತ್ತಲೆಯಾಗಲು ಸಾಧ್ಯವಾಗದ ನೈತಿಕತೆ ಇರುವ, ಪ್ರಾಣಕ್ಕಿಂತ ಮಾನ ದೊಡ್ಡದೆಂದು ನಂಬಿದ ಕಾಲಮಾನದ ರಚನೆಗಳಿವು. ಬೆತ್ತಲೆಯಾಗುವುದೆಂದರೆ ಘೋರ ಅಪರಾಧವೂ ಆದಂತೆ ಪ್ರಖರ ನೈತಿಕತೆಯ ಪ್ರಶ್ನೆಯೂ ಆಗಿತ್ತು. ಬಟ್ಟೆಯಲ್ಲೂ ಬೆತ್ತಲೆಯಾಗುವ ಇಂದಿನ ಅನೈತಿಕ ಹಾಗೂ ಸಾಕ್ಷಿಪ್ರಜ್ಞೆಯಿಲ್ಲದ ಜನಕ್ಕೆ ಇಂಥ ಸಂಗತಿಗಳು ಏನೂ ಅಲ್ಲ.

ಭಯ ಮತ್ತು ಶಾಪಾಶಯಗಳು

ಒಂದು ವೇಳೆ ಮನುಷ್ಯ ಸ್ವಾರ್ಥಿಯಾಗಿ ಬೆತ್ತಲೆಯಾಗಲು ಪ್ರಯತ್ನಿಸಿ ಪೂಜೆ ಪುನಸ್ಕಾರ ಮಾಡುವ ಪ್ರಯತ್ನ ಮಾಡಿದರೆ? ಎನ್ನುವ ಸಂಶಯ ನಿಧಿಗಾರನಿಗೆ ಸುಳಿದಾಗ ಮತ್ತಷ್ಟು ಕಠಿಣ ಪರೀಕ್ಷೆಗಳನ್ನು ಬರಹದಲ್ಲಿ ಅಳವಡಿಸುತ್ತಾನೆ. ಹಾವು ಎಂದರೆ ಹರಣವೇ ಹಾರುತ್ತದೆ. ಅಂಥದ್ದರಲ್ಲಿ ಹತ್ತು ತಲೆಯ ಹಾವು, ಹತ್ತು ತಲೆಯ ಬ್ರಹ್ಮ ರಾಕ್ಷಸ ನಿಧಿ ಕಾಯುತ್ತದೆ ಎಂದರೆ ಮನುಷ್ಯ ಏನಾಗಬೇಡ. ಒಂದು ವೇಳೆ ಧೈರ್ಯವಂತನಾದವನು ಹಾವು ಹಾಗೂ ರಾಕ್ಷಸನನ್ನು ಕೊಂದು ನಿಧಿಗೆ ಕೈ ಹಾಕಬಹುದೆನ್ನುವ ಸಂಶಯ ಮತ್ತೇ ಕಾಡಿದಾಗ ಆತ ಇಟ್ಟ ಇನ್ನೊಂದು ಮಹತ್ವದ ಭಯ ಭಾರತೀಯ ಮನಃಶಾಸ್ತ್ರದ ದೃಷ್ಟಿಯಿಂದ ಗಮನಾರ್ಹವಾದುದು.

ಮನುಷ್ಯ ಅದರಲ್ಲೂ ಭಾರತೀಯ ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಏನೆಲ್ಲ ಕ್ರೂರ ಪಾಪಗಳನ್ನು ಮಾಡಬಲ್ಲ. ಆದರೆ ಶಿಶುಹತ್ಯಾ ದೋಷವನ್ನು ಮಾಡಲಾರ. 'ಶಿಶು ಹತ್ಯೆ ಮಹಾಪಾಪ' ಎನ್ನುವ ಹಿನ್ನೆಲೆಯಲ್ಲಿ ಭಾವನಾತ್ಮಕ ಹೆದರಿಕೆಯನ್ನು ಇಟ್ಟ. ಇದನ್ನೂ ಮೀರಿದಾಗ ಅಂಗವೈಕಲ್ಯತೆಯ ಶಾಪಾಶಯಗಳನ್ನು ಬರೆದ. ಇಂತಹ ಶಾಪಾಶಯಗಳನ್ನು ಭಾರತೀಯ ಶಿಲಾ ಹಾಗೂ ತಾಮ್ರ ಶಾಸನ ಹಾಗೂ ಹಸ್ತಪ್ರತಿಗಳ ಅಂತ್ಯಭಾಗದಲ್ಲಿ ಪುಷ್ಕಳವಾಗಿ ಕಾಣುತ್ತೇವೆ. ಕಾರಣ ಈ ಪ್ರವೃತ್ತಿಯು ಅನ್ಯರ ಪ್ರವೇಶ ಹಾಗೂ ನಾಶ ಪ್ರವೃತ್ತಿಯಿಂದ ತನ್ನ ಸಂಪತ್ತನ್ನು ಸುರಕ್ಷಿತವಾಗಿರಿಸಿಕೊಳ್ಳುವ ದಾರಿಯೇ ಹೊರತು ಬೇರೆನೂ ಅಲ್ಲ. ಇಂಥ ಕಠಿಣವಾದ ಕ್ರಮಗಳನ್ನಿಡಬೇಕಾದರೆ ಎಂಥ ಅಭದ್ರತೆಯ ಪ್ರಶ್ನೆಗಳು ಅಂದು ಸಂಪತ್ತಿನ ವಿಷಯದಲ್ಲಿ ಎದುರಾಗಿರಬಹುದು ಎಂಬುದನ್ನು ಇದರಿಂದ ಊಹಿಸಬಹುದಾಗಿದೆ.

ಆದರೆ ಆಧುನಿಕರೂ ಮುಂದುವರೆದವರೂ ಅತ್ಯಾಧುನಿಕ ಆವಿಷ್ಕಾರಗಳ ಅಡಿಯಳಾದ ಇಂದಿನ ಜನ ತಮ್ಮ ಸ್ವಾರ್ಥ ಹಾಗೂ ಅತಿಯಾದ ಉಪಭೋಗಕ್ಕಾಗಿ ನಿಷ್ಕರುಣೆಯಿಂದ ಹೆರವರ ಮಕ್ಕಳನ್ನು ಬಲಿ ನೀಡಿ ನಿಧಿ ವಶ ಮಾಡಿಕೊಳ್ಳುವ ನಿರ್ದಯಿಗಳಾಗುತ್ತಿದ್ದಾರೆ. ಹೈಟೆಕ್ ರೂಪದಲ್ಲಿ ಫೋಟಾ ಮಂತ್ರವಾದಿಗಳಿಂದ

Scanned with CamScanner
Scanned with CamScanner

ಪ್ರಾಚೀನ ಗುಡಿಗುಂಡಾರ ಐತಿಹಾಸಿಕ ಸ್ಮಾರಕಗಳನ್ನು ನಿರ್ದಾಕ್ಷಿಣ್ಯವಾಗಿ ಒಡೆದು ಹಾಕಿ ನಿಧಿ ಕೈವಶ ಮಾಡಿಕೊಳ್ಳುವ ನಿರ್ಲಜ್ಜ ಪ್ರವೃತ್ತಿಗೆ ಇಳಿದಿರುವುದು ನಾಗರಿಕ ಸಮಾಜ ತಲೆ ತಗ್ಗಿಸಬೇಕಾದ ಸಂಗತಿಯಾಗಿದೆ. ಯಾವನೋ ಸ್ವಾಮಿಯ ಕನಸಿನಲ್ಲಿ ಯಾವುದೋ ದೇವರು ಬಂದು ಪ್ರಾಚೀನ ಸ್ಮಾರಕದ ಕೆಳಗೆ ನಿಧಿ ಇದೆ ಎಂದು ಬಡಬಡಿಸಿದರೆ ಇಡೀ ಸರ್ಕಾರವೇ ನಿಧಿ ಶೋಧನೆ ಇಳಿಯುವ ಅಸಂಗತತೆಯನ್ನು ಇವತ್ತು ನೋಡುತ್ತಿದ್ದೇವೆ. ಮಾಧ್ಯಮಗಳು ಅದನ್ನು ಇನ್ನಿಲ್ಲದಂತೆ ವೈಭವೀಕರಿಸುತ್ತಿದೆ. ಇಂದಿನ ನಮ್ಮನ್ನಾಳುವ ಮುಂದಾಳುಗಳು ವಿವೇಚನೆಯಿಲ್ಲದ ಅಕ್ಷರಸ್ಥರು, ಅಧಿಕಾರಿಗಳು, ವಾಮಾಚಾರಗಳಲ್ಲೇ ಈಸಾಡುತ್ತಿದ್ದಾರೆ. ಕರ್ನಾಟಕ ಸಂಸ್ಕೃತಿಯ ಸಾಕ್ಷಿ ಪ್ರಜ್ಞೆಯಾಗಿರುವ ವಿಧಾನ ಸೌಧವನ್ನೇ ತಮ್ಮ ವಿಕ್ಷಿಪ್ತ ಮನಸ್ಸುಗಳಿಂದ ವಿರೂಪಗೊಳಿಸುತ್ತಿರುವುದು ದುರ್ದೈವದ ಸಂಗತಿ.

ಒಂದು ಸಮಾಜ ಹಾಗೂ ವ್ಯಕ್ತಿಯ ನೈತಿಕ ಪ್ರಶ್ನೆಯ ಭಾಗಗಳಾಗಿದ್ದ ನಿಧಿಶಾಸ್ತ್ರದ ಹಸ್ತಪ್ರತಿಗಳು ಇಂದು ಅನೈತಿಕ ಮನಸ್ಸಿನ ಮನುಷ್ಯರ ಕೈಯಲ್ಲಿ ಸಿಕ್ಕು ಸುಲಿಗೆಕೋರ ದಂಧೆಗೆ ಕಾರಣವಾಗಿವೆ. ವಾಸ್ತು, ಜ್ಯೋತಿಷ್ಯ, ನಿಧಿ, ಶಕುನ, ರಸವಿದ್ಯೆ ಇಂಥ ಲೌಕಿಕಶಾಸ್ತ್ರ ಕೃತಿಗಳ ಅಂತರಾಳ ಯಾವತ್ತೂ ಸಮಾಜ ವಿರೋಧಿಯಾಗಿರಲಿಲ್ಲ. ನಲುಗಿದ ಮನುಷ್ಯನ ಮನಸ್ಸಿಗೆ ವಿವೇಕ ಹೇಳುವ, ಸಮಾಧಾನ ಹೇಳುವ, ಮನಶಕ್ತಿಯ (ಮೆಂಟಲ್ ಸ್ಟೆಬಿಲಿಟಿ) ಭಾಗವಾಗಿ ಬೆಳೆದು ಬಂದಿವೆಯೇ ಹೊರತು ಮನುಷ್ಯನ ಮನಸ್ಸನ್ನು ದುರ್ಬಲಗೊಳಿಸುವ ಸಂಗತಿಗಳಾಗಿ ಅಲ್ಲ ಎನ್ನುವುದು ಗಮನಾರ್ಹ. ಅದನ್ನೆಲ್ಲ ಮೀರಿ ಪ್ರಯೋಗ ಪ್ರಧಾನ ಕುಶಲಕರ್ಮಿ ವರ್ಗದ ಸ್ವಾವಲಂಬಿ ಸಮಾಜದ ಪ್ರತಿರೂಪಗಳಿವು.

ಆದರೆ ಜಾಗತೀಕರಣದ ರಾಜಕೀಯ ಸ್ವೇಚ್ಛೆ ಇಂಥ ಆರ್ಥಿಕ ಹಾಗೂ ಸಾಮಾಜಿಕ ಸ್ವಾವಲಂಬಿತನದ ನೆಲೆಗಳನ್ನು ದುರ್ಬಲಗೊಳಿಸುತ್ತಿವೆ. ಇಂದು ಪರಕೀಯತೆಯನ್ನೇ ಹೊಸತನವೆಂದು ನಾವು ತಿಳಿದುಕೊಂಡಿದ್ದೇವೆ. ಭಾಷೆ, ಭಾವನೆ, ವಿದ್ಯೆ, ವಿಚಾರ ಎಲ್ಲದರಲ್ಲೂ ಪರಕೀಯರಾಗಿರುವ ನಾವು ಸ್ಥಳೀಯ ಜ್ಞಾನ ಪರಂಪರೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಎಡವಿದ್ದೇವೆ. ಅವನ್ನು ಇಂದು ಸಮಾಧಾನದಿಂದ ಪರಿಶೀಲಿಸಿ ಯುಕ್ತಾಯುಕ್ತತೆಯನ್ನು ಅರ್ಥಮಾಡಿಕೊಳ್ಳುವ ಜರೂರು ಇದೆ. ೧೮ನೇ ಶತಮಾನದಲ್ಲಿ ಪರಕೀಯ ಜ್ಞಾನ ವಿಜ್ಞಾನಗಳು ಶ್ರೇಷ್ಠವಾಗಿ ಪರಂಪರೆಯ ಜ್ಞಾನ ವಿಜ್ಞಾನಗಳು ಕನಿಷ್ಠವಾಗಿ ನಿರೂಪಣೆಗೊಂಡ ಬಗ್ಗೆ ಮರು ಆಲೋಚಿಸಬೇಕಿದೆ. ಅರೆ ತಿಳುವಳಿಕೆಯ ಜನ ಹುಟ್ಟು ಹಾಕಿದ ಅವಿವೇಕಗಳು ಇಂತಹ ಜ್ಞಾನಶಾಖೆಗಳನ್ನು ಜನವಿರೋಧಿಯಾಗಿ ಮಂಡಿಸಿರುವುದನ್ನು ಸೂಕ್ಷ್ಮವಾಗಿ ಅವಲೋಕಿಸಬೇಕಿದೆ.

* * * * *

Scanned with CamScanner

22.03.9

ಅನಿಕೇತನ

ಪ್ರಧಾನ ಸಂಪಾದಕರು
ಡಾ. ಬಿ.ವಿ. ವಸಂತಕುಮಾರ್

ಸಂಪಾದಕರು
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

Scanned with CamScanner
Scanned with CamScanner

ANIKETHANA (A Quaterly Journal of Kannada Language and Literature) - Edited by : Dr. D.K. Chittaiah Poojar, Published by : Kariyappa N., Registrar, Karnataka Sahithya Academy, Kannada Bhavana, J.C. Road, Bengaluru - 560 002.

ಪ್ರಧಾನ ಸಂಪಾದಕರು
ಡಾ. ಬಿ.ಎ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಂಪಾದಕರು
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

ಜನವರಿ – ಡಿಸೆಂಬರ್ – 2019 (ಸಂಯುಕ್ತ ಸಂಚಿಕೆ)

ಬೆಲೆ : ೫೦/-
ಮುದ್ರಣ : ೨೦೨೧
ಪ್ರತಿಗಳು : ೨೦೦೦
ಪುಟಗಳು : ix+೩೨೭=೩೩೬
ಮುಖಪುಟ ಚಿತ್ರ : ಏಕಾಕ್ಷರ ಪ್ರಿಂಟರ್ಸ್

ಚಂದಾವಿವರ
ಬಿಡಿಪ್ರತಿ : ೫೦/-
ವಾರ್ಷಿಕ ಚಂದಾ : ೨೦೦/-
ಅಜೀವ ಚಂದಾ : ೧೦೦೦/-

ಪ್ರಕಾಶಕರು
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
ಏಕಾಕ್ಷರ ಪ್ರಿಂಟರ್ಸ್
ನಂ. 2, 5ನೇ 'ಬಿ' ಮುಖ್ಯರಸ್ತೆ, ಬ್ಯಾಂಕ್ ಆಫ್ ಬರೋಡಾ ರಸ್ತೆ
ಕಾಮಾಕ್ಷಿಪಾಳ್ಯ, ಬೆಂಗಳೂರು – 560 079.
ಮೊಬೈಲ್ : 9844365538

Scanned with CamScanner
Scanned with CamScanner

ಪರಿವಿಡಿ

ಪ್ರಧಾನ ಸಂಪಾದಕರ ಮಾತು

ಸಂಪಾದಕರ ಮಾತು

೧. ಖಡ್ಗಶಾಸ್ತ್ರ – ಡಾ. ವೈ.ಸಿ. ಭಾನುಮತಿ

೨. ಮಂಗರಸ ಕವಿಯ 'ಸೂಪಶಾಸ್ತ್ರ' – ಮರುಓದು
– ಡಾ. ಗುರುಪಾದ ಮರಿಗುದ್ದಿ

೩. ಗಣಿತ ಶಾಸ್ತ್ರ – ಡಾ. ಕೆ. ರವೀಂದ್ರನಾಥ

೪. ಗಜಶಾಸ್ತ್ರ ಸಾಹಿತ್ಯ – ಡಾ. ಕೆ. ರವೀಂದ್ರನಾಥ

೫. ಪ್ರಶ್ನಶಾಸ್ತ್ರದ ಹಸ್ತಪ್ರತಿಗಳು: ಮನೋವೈಜ್ಞಾನಿಕ ವಿವೇಚನೆ – ಡಾ. ವೀರೇಶ ಬಡಿಗೇರ

೬. ನಿಧಿಶಾಸ್ತ್ರದ ಹಸ್ತಪ್ರತಿಗಳು: ಸಂಪತ್ತಿನ ಸ್ವಯಂ ಸಂರಕ್ಷಣೆಯ ತಂತ್ರಗಳು
– ಡಾ. ವೀರೇಶ ಬಡಿಗೇರ

೭. ಜಂಗಮ ಜನಾರ್ದನ ಮಹಾಕವಿ – ಡಾ. ಕೃಷ್ಣಮೂರ್ತಿ ಹನೂರು

೮. ವಚನಗಳಲ್ಲಿ ಯೋಗದ ಪರಿಕಲ್ಪನೆ – ಡಾ. ಎಫ್.ಟಿ: ಹಳ್ಳಿಕೇರಿ

೯. ಕಣಿ : ಭವಿಷ್ಯ ಮತ್ತು ಅಲೆಮಾರಿ ಸಮುದಾಯಗಳು
– ಡಾ. ವೀರೇಶ ಬಡಿಗೇರ

೧೦. ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ – ಡಾ. ಕಲ್ಲಯ್ಯ ಎಸ್. ಹಿರೇಮಠ

೧೧. ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರ
– ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

೧೨. ಕೈಫಿಯತ್ತುಗಳ ಚರಿತ್ರೆಯ ಆಯಾಮಗಳು – ಡಾ. ಪಂಡಿತ ಕೆ. ರಾಠೋಡ

೧೩. ಆಧುನಿಕ ಪೂರ್ವ ಕರ್ನಾಟಕದ ಮಹಿಳೆ ಮತ್ತು ಮತಾಂತರ ಕನ್ನಡ ಕಾವ್ಯ
ಮತ್ತು ದಾಖಲು ಸಾಹಿತ್ಯವನ್ನು ಅನುಲಕ್ಷಿಸಿ – ಡಾ. ಎನ್.ಆರ್. ಲಲಿತಾಂಬ

೧೪. ಶಾಸನ ಲಿಪಿಕಾರರ ಸಂಕಥನ – ಡಾ. ಪಂಡಿತ ಕೆ. ರಾಠೋಡ

೧೫. ಲಕ್ಕುಂಡಿ ಕಲ್ಯಾಣ ಚಾಲುಕ್ಯರ ಶಾಸನ ಸಾಹಿತ್ಯ –
ಪ್ರೊ. ಡಿ.ವಿ. ಪರಮಶಿವಮೂರ್ತಿ

೧೬. ಕೆಳದಿ ಅರಸರ ತಾಮ್ರ ಶಾಸನಗಳು – ಡಾ. ಶಿವರಾಜ .ಬಿ.ಇ

೧೭. ಅಪೂರ್ವ ನವವರ್ಣವೃತ್ತ ಮತ್ತು ನವಮಾತ್ರಾವೃತ್ತಗಳ ಅನ್ವೇಷಣಕಾರ
ಛಂದೋನಿಜಗುಣಿ ಕುಮಾರ ನಿಜಗುಣರು – ಡಾ.ಸಿ.ನಾಗಭೂಷಣ

Scanned with CamScanner

Scanned with CamScanner

೧೮. ಸಮ–ಬವ ರೂಪಿ ಪದಗಳು: ಬಾಶೆ, ಇತಿಹಾಸ ಮತ್ತು ರಾಜಕಾರಣ
– ಬಸವರಾಜ ಕೋಡಗುಂಟಿ
೧೯. ಭಕ್ತಿ ಸಂಗೀತ : ಹಿಂದೂಸ್ಥಾನಿ ಗಾಯಕರ ಕೊಡುಗೆ
– ಡಾ. ಜಯದೇವಿ ಜಂಗಮಶೆಟ್ಟಿ
೨೦. ಸಂಗೀತ ಕಲೆ ಪ್ರತಿಭೆ ಮತ್ತು ವ್ಯತ್ಪತ್ತಿ – ಡಾ. ಜಯದೇವಿ ಜಂಗಮಶೆಟ್ಟಿ
೨೧. ಸಾಹಿತ್ಯ ಘನಾವೃತಿ – ಶೀಲಾ ಶ್ರೀಧರ್
೨೨. ನಾಡೋಜ ಪ್ರೊ. ಕೆ.ಜಿ. ನಾಗರಾಜಪ್ಪ ಅವರ ಸಂದರ್ಶನ

Scanned with CamScanner

ಕಣಿ : ಭವಿಷ್ಯ ಮತ್ತು ಅಲೆಮಾರಿ ಸಮುದಾಯಗಳು

– ಡಾ. ವೀರೇಶ ಬಡಿಗೇರ

ಜನಪದರ ನಂಬಿಕೆ ಹಾಗೂ ಮೂಢನಂಬಿಕೆಗಳ ಭಾಗವಾಗಿಯೇ ಕಣಿ, ಶಕುನ, ಭವಿಷ್ಯ, ಮುಂತಾದವು ರೂಪಗೊಂಡಿವೆ. ಭವಿಷ್ಯ, ಕಣಿ, ಕರ್ಮ, ಗ್ರಹನಕ್ಷತ್ರ ಇತ್ಯಾದಿ ಇವುಗಳ ಕಾರ್ಯಕಾರಣ ಸಂಬಂಧವನ್ನು ಹೇಳಲಾಗುತ್ತದೆ. ಹೀಗೆ ಹೇಳುವುದಕ್ಕೆ ಯಾವುದೇ ಖಚಿತ ಆಧಾರಗಳಿಲ್ಲ. ಜನಪದ ನಂಬಿಕೆಗಳು ಮತ್ತು ಅವುಗಳ ಆಚರಣೆಗಳನ್ನು ವಿಜ್ಞಾನಪೂರ್ವ ಯುಗದ ಜ್ಞಾನವೆಂದ ಮಾನವಶಾಸ್ತ್ರಜ್ಞರು ಹೇಳುತ್ತಾರೆ. ಈ ವಿಜ್ಞಾನವನ್ನು ಕೇವಲ ಅರ್ಥಹೀನವೆಂದು ತಳ್ಳಿಹಾಕುವುದರಲ್ಲಿ ಅರ್ಥವಿಲ್ಲ. ಮಾನವನ ಮನೋಧರ್ಮದ ವಿಕಾಸವನ್ನು ತಿಳಿಯಬೇಕಾದರೆ ಶಕುನ, ಕಣಿ, ಭವಿಷ್ಯ ಮುಂತಾದವುಗಳನ್ನು ಮನಃಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ ಇತ್ಯಾದಿ ಶಾಸ್ತ್ರಗಳ ಹಿನ್ನೆಲೆಯಲ್ಲಿ ಅಧ್ಯಯನಿಸುವ ಅಗತ್ಯವಿದೆ.

ಕಣಿ, ಭವಿಷ್ಯ, ಶಕುನ, ಹಸ್ತಸಾಮುದ್ರಿಕ, ನಾಡೀಫಲ, ಗಿಣಿಶಾಸ್ತ್ರ, ಕವಡೆ ಶಾಸ್ತ್ರ, ಹೊತ್ತಿಗೆ ಶಾಸ್ತ್ರ, ಓಲೆಗರಿ ಶಾಸ್ತ್ರ, ಕಡ್ಡಿಶಾಸ್ತ್ರ, ಜಾತಕ ಮುಂತಾದವೆಲ್ಲ ಬಹಳ ಮಟ್ಟಿಗೆ ಒಂದೇ ತರದವೇ. ಇವ್ಯಾವಕ್ಕೂ ವೈಜ್ಞಾನಿಕ ತಳಹದಿಯಿಲ್ಲ. ಜಗತ್ತಿನ ಎಲ್ಲ ಪ್ರದೇಶಗಳಲ್ಲೂ ಎಲ್ಲ ತರಹದ ಜನರಲ್ಲೂ ಇಂಥ ಸಂಗತಿಗಳ ಬಗ್ಗೆ ನಂಬಿಕೆಯಿದೆ.

ಕನ್ನಡ ಜಾನಪದ ಕೋಶ ಸಂಪುಟ–೧ರಲ್ಲಿ ಕಣಿ ಎನ್ನುವುದಕ್ಕೆ ಭವಿಷ್ಯ ಎಂದು ಅರ್ಥ ಹೇಳಲಾಗಿದೆ.[೧] ಕಿಟೆಲ್ ಕೋಶದಲ್ಲಿ 'ಕಣಿ' ಎನ್ನುವುದಕ್ಕೆ ನೋಟ, ಕಾಣ್ಕೆ,

Scanned with CamScanner
Scanned with CamScanner

ಮುಂದಿನ ಜೀವನದಲ್ಲಿ ಬರುವುದು, ಭವಿಷ್ಯಫಲ, ಪ್ರಯೋಜನ ಎಂಬ ಅರ್ಥಗಳನ್ನು ನೀಡಲಾಗಿದೆ. ಅಂದರೆ ನಿಮಿತ್ತಗಳ ಮೂಲಕ ಶುಭಾಶುಭಗಳನ್ನು ತಿಳಿವ ಶಾಸ್ತ್ರ ಎಂದು ಅರ್ಥೈಸಲಾಗಿದೆ. ಪ್ರಾದೇಶಿಕವಾಗಿ, ಜನಾಂಗಿಕವಾಗಿ, ಸಾಂದರ್ಭಿಕವಾಗಿ, ಇಂತಹ ಶಕುನ ಅಥವಾ ಭವಿಷ್ಯದ ಪ್ರಕ್ರಿಯೆಗಳಲ್ಲಿ ಪ್ರಾದೇಶಿಕ ಭಿನ್ನತೆಗಳಿವೆ. ಜಗತ್ತಿನ ಎಲ್ಲ ಪ್ರಾಚೀನ ಹಾಗೂ ಅರ್ವಾಚೀನ ಸಮಾಜಗಳಲ್ಲೂ ಭವಿಷ್ಯ ಕುರಿತು ನಂಬಿಕೆಗಳು ಆಚರಣೆಗಳು ಪ್ರಚಲಿತಯಿವೆ. ಕಾಲಜ್ಞಾನ, ಕಣಿ ಹೇಳುವುದು, ಮಂತ್ರ, ಶಕುನ ಮುಂತಾದ ನಂಬಿಕೆ ಹಾಗೂ ಆಚರಣೆಗಳು ಲೋಕಾಯತದಲ್ಲಿಯೂ ಕಂಡುಬರುತ್ತವೆ.

ಭವಿಷ್ಯದ ಬಗೆಗಳು

ಜಾನಪದ ಜ್ಯೋತಿಷ್ಯ : ಗ್ರಾಮೀಣ ಜನರು ತಮ್ಮ ದೈನಂದಿನ ಅಥವಾ ಮಾಸಿಕ ಹಾಗೂ ವಾರ್ಷಿಕ ಕೆಲಸ ಕಾರ್ಯಗಳನ್ನು ಮಾಡುವಾಗ, ಅಥವಾ ಏನಾದರೂ ಆಪತ್ತುಗಳು ಬಂದಾಗ ಊರಿನ ಜೋಯಿಸರನ್ನು, ಪೂಜಾರಿಗಳನ್ನು, ಸ್ವಾಮಿಗಳನ್ನು, ಅನುಭವಸ್ಥರನ್ನು ಕಂಡು ಪರಿಹಾರಕ್ಕಾಗಿ ಹಂಬಲಿಸುವುದನ್ನೇ ಜಾನಪದ ಜ್ಯೋತಿಷ್ಯ ಎಂದು ಕರೆಯಲಾಗುತ್ತದೆ. ಜ್ಯೋತಿಷ್ಯಶಾಸ್ತ್ರ ಎಂದರೆ ಗ್ರಹಗಳ ಗತಿ ಹಾಗೂ ಸ್ವರೂಪವನ್ನು ವಿವರಿಸುವ ಶಾಸ್ತ್ರ. ಫಲಜ್ಯೋತಿಷ್ಯವೆಂದರೆ ಗ್ರಹಗಳ ಗತಿಯ ಮೇಲೆ ಮನುಷ್ಯನ ಸ್ಥಿತಿಗತಿಗಳ ಕುರಿತು ಹೇಳುವುದು. ಸಾಮಾನ್ಯವಾಗಿ ಎರಡಕ್ಕೂ ಒಂದೇ ಹೆಸರಿನಲ್ಲಿ ವ್ಯವಹಾರ ನಡೆಯುತ್ತದೆ. ಫಲಜ್ಯೋತಿಷ್ಯಕ್ಕೆ ಇಂಗ್ಲಿಷಿನಲ್ಲಿ 'Astrology' ಎಂದೂ ಜ್ಯೋತಿಷ್ಯಶಾಸ್ತ್ರಕ್ಕೆ 'Astronomy' ಎಂದು ಅರ್ಥಭೇದವಿದೆ.

ಶಿಷ್ಟಜ್ಯೋತಿಷ್ಯಶಾಸ್ತ್ರ ಕೂಡ ಅನಂತತೆಯ ಶಕ್ತಿಯನ್ನು ಅರಿಯುವ ಆಕಾಶಮುಖಿ ಜ್ಞಾನವಾಗಿದೆ. ಕಾಲಜ್ಞಾನ ನಿಸರ್ಗಮುಖಿ ತಿಳುವಳಿಕೆಯಾದರೆ ಇದು ಅಂಬರಮುಖಿ ಅರಿವಿನ ಕಥನವಾಗಿದೆ. ನಿತ್ಯ ನಿರಂತರ ಮತ್ತು ಪರಿವರ್ತನಶೀಲವಾದ ಸೌರವ್ಯೂಹದ ಚಲನೆಯನ್ನಾಧರಿಸಿದ ಈ ಜ್ಞಾನಶಾಖೆಯು ತತ್ತ್ವಶಾಸ್ತ್ರ ಮತ್ತು ಮತಧರ್ಮಗಳನ್ನು ಆಧರಿಸಿದ ಬಳಕೆ ವ್ಯಾಖ್ಯಾನ ಹಾಗೂ ವ್ಯವಹಾರಿಕ ತೀರ್ಮಾಣಗಳಿಂದಾಗಿ ಇಂದು ಶೋಷಣೆ ಹಾಗೂ ಶುಷ್ಕಶಾಸ್ತ್ರವಾಗಿ ಪರಿಣಮಿಸಿದೆ. ಮಾನವ ಶೋಷಣೆಯ ಹಲವು ಮುಖಗಳು ಈ ಶಾಸ್ತ್ರಕ್ಕೆ ಇಂದು ಕೂಡಿಕೊಂಡಿವೆ. 'ಹಾಗೆ ನೋಡಿದರೆ ಜ್ಯೋತಿಷ್ಯಶಾಸ್ತ್ರವು ಕೇವಲ ಪದಾರ್ಥ ಜಗತ್ತಿನ ಲಕ್ಷಣಗಳನ್ನು ತಿಳಿದುಕೊಳ್ಳಲು ಸಹಕಾರಿಯಾದ ತಂತ್ರವಲ್ಲ. ಅದು ಸಂಕೀರ್ಣವಾದ ಮಾನವ ಸಮಾಜದಲ್ಲಿ ಅಂತರ್ಗತವಾದ ಸಮಸ್ಯೆಗಳನ್ನು ತಿಳಿಯಲು ಮತ್ತು ಪರಿಹರಿಸಿಕೊಳ್ಳಲು ಇರುವ

Scanned with CamScanner
Scanned with CamScanner

ಪರಿಣಾಮಕಾರಿ ಮಾಧ್ಯಮವೂ ಆಗಿದೆ. ಮನುಷ್ಯನ ಮನಸ್ಸು ಸಂಕೀರ್ಣ ಸ್ವಭಾವವುಳ್ಳದ್ದು. ಬದುಕಿನ ಮಿತಿಗಳ ಒತ್ತಡಕ್ಕೆ ಸಿಲುಕಿ ದುಃಖಿಪಡುವ ನಾವು ಅನಂತ ಪರಿಮಿತದಲ್ಲಿ ಆಶ್ರಯ ಕೋರುತ್ತೇವೆ. ನಮ್ಮ ಜೀವನದ ಅನೇಕ ಕಡೆಗಳಲ್ಲಿ ಪರಿಮಿತವಾಮದರ ಒತ್ತಡ ಕಾಣುತ್ತೇವೆ. ಜ್ಯೋತಿಷ್ಯಶಾಸ್ತ್ರದಲ್ಲಿ ನಾವು ನೋಡುವ, ಕೇಳುವ, ಹೇಳುವ, ಆಚರಿಸುವ ವಿವಿಧ ವಿವರಣೆಗಳು ಇಂತಹ ನಾನಾ ರೂಪದ ಒತ್ತಡಗಳ ಅವಿರ್ಭಾವಗಳೇ ಹೊರತು ಬೇರೆಯಲ್ಲ. ಯಾವುದೇ ಒಂದು ವ್ಯಾದಿಗೆ ಅಥವಾ ಸಮಸ್ಯೆಗೆ ಔಷಧಿ ಅಥವಾ ಪರಿಹಾರ ಹುಡುಕುವ ನೆಲೆಯೊಂದಾದರೆ, ಇದು ಎಲ್ಲರಿಗೂ ಯಾಕೆ ಲಭ್ಯವಿಲ್ಲ? ಲಭ್ಯವಾಗುವಂತೆ ಮಾಡುವುದು ಹೇಗೆ? ಇರುವ ಅಡಚಣೆಗಳನ್ನು ನಿವಾರಿಸಿಕೊಳ್ಳುವುದು ಹೇಗೆ? ಎಂದು ಮಾನವ ಸಮಸ್ಯೆಗಳಿಗೆ ಸ್ಪಂಧಿಸುವ ವಿವಿಧ ಮುಖಗಳು ಜ್ಯೋತಿಷ್ಯ ಶಾಸ್ತ್ರಕ್ಕಿವೆ.'[೨]

ಜ್ಯೋತಿಷ್ಯಶಾಸ್ತ್ರವನ್ನು ಮೂರು ವಿಧದಲ್ಲಿ ಗುರುತಿಸಬಹುದು. ೧. ಗ್ರಹಗತಿಗಳ ಸ್ವರೂಪ ಹಾಗೂ ಸ್ಥಿತಿಗತಿಗಳನ್ನು ವಿವರಿಸುವುದು; ಇದನ್ನು ಜ್ಯೋತಿಷ್ಯಶಾಸ್ತ್ರ ಎಂದು ಕರೆಯಲಾಗುತ್ತದೆ. ೨. ಗ್ರಹಗಳ ಗತಿಯ ಮೇಲೆ ಮನುಷ್ಯನ ಸ್ಥಿತಿಗತಿಗಳನ್ನು ನಿರ್ಧರಿಸುವುದು, ಇದನ್ನು ಫಲಜ್ಯೋತಿಷ್ಯ ಎಂದು ಗುರುತಿಸಲಾಗುತ್ತದೆ. ೩. ಖಗೋಳ ಲೆಕ್ಕಾಚಾರಗಳನ್ನು ಆಧರಿಸಿ ನಡೆಯುವ ಗ್ರಹಗಣಿತ, ಇದನ್ನು ಜ್ಯೋತಿಷ್ಯ ಎಂದು ಕರೆಯಲಾಗುತ್ತದೆ. ಅಂದರೆ ಗ್ರಹಗತಿಗಳ ಚಲನೆಯನ್ನು ಆಧರಿಸಿ ಮನುಷ್ಯನ ಬೇಕು ಬೇಡಿಕೆಗಳನ್ನು ನಿರ್ಧರಿಸುವುದೇ ಜ್ಯೋತಿಷ್ಯಶಾಸ್ತ್ರದ ಮೂಲತತ್ತ್ವವಾಗಿದೆ.

'ಆಧುನಿಕ ಸಂದರ್ಭದಲ್ಲಿ ಜ್ಯೋತಿಷ್ಯಶಾಸ್ತ್ರವನ್ನು ಸ್ತ್ರೀ ಜ್ಯೋತಿಷ್ಯ, ವಿವಾಹ ಜ್ಯೋತಿಷ್ಯ, ಶಿಕ್ಷಣ ಜ್ಯೋತಿಷ್ಯ, ನೌಕರಿ ಜ್ಯೋತಿಷ್ಯ, ಶಕುನ ಜ್ಯೋತಿಷ್ಯ, ಆರೋಗ್ಯ ಜ್ಯೋತಿಷ್ಯ, ಪರ್ಜನ್ಯ ಜ್ಯೋತಿಷ್ಯ, ಗೃಹ ನಿರ್ಮಾಣ ಜ್ಯೋತಿಷ್ಯ, ಅಧಿಕಾರ ಜ್ಯೋತಿಷ್ಯ, ಪರಿಹಾರ ಜ್ಯೋತಿಷ್ಯ, ಜೀವನ ಜ್ಯೋತಿಷ್ಯ ಎಂದು ಹಲವು ವಿಧಗಳಲ್ಲಿ ವಿಂಗಡಿಸಲಾಗುತ್ತದೆ'. ಲೋಕೊಪಯೋಗಿಯಾಗಬೇಕಾಗಿದ್ದ ಜ್ಯೋತಿಷ್ಯವು ಪ್ರಾರಬ್ಧಕರ್ಮಗಳನ್ನು ಕಳೆದುಕೊಳ್ಳುವುದರ ಭಾಗವಾಗಿಯೇ ಇಂದಿಗೂ ಜ್ಯೋತಿಷ್ಯ ಹೆಚ್ಚು ಬಳಕೆಯಾಗುತ್ತಿರುವುದು ದುರದೃಷ್ಟಕರ.

ಫಲ ಜ್ಯೋತಿಷ್ಯದಲ್ಲಿ ಪ್ರಶ್ನೆ, ಜಾತಕ, ರಮಲ, ಶಕುನ, ನಿಮಿತ್ತ, ಸ್ವಪ್ನ, ಹೋರ, ಸಾಮುದ್ರಿಕ, ವಿವಾಹ, ಪಂಚಾಂಗ ಎನ್ನುವ ಹತ್ತು ಅಂಗಗಳಿವೆ. ಫಲಜ್ಯೋತಿಷ್ಯಕ್ಕೆ

Scanned with CamScanner

Scanned with CamScanner

ಗ್ರಹಗಣಿತದ ಸಂಬಂಧವಾಗಲೀ ಶಾಸ್ತ್ರದ ಆಧಾರವಾಗಲೀ ಇಲ್ಲ. ಕಲ್ಪನೆ, ಅಂದಾಜು, ಊಹೆ, ನಂಬಿಕೆ, ಶ್ರದ್ಧೆಯೇ ಇದರ ಜೀವಾಳ. ಪ್ರಶ್ನೆಗೆ ಉತ್ತರ ಹೇಳುವ ಚಮತ್ಕಾರವೇ ಇದರ ಆಧಾರ. ಕೇರಳದ ಪ್ರಸಿದ್ಧ ಜ್ಯೋತಿಷಿಯೊಬ್ಬ ತನ್ನ ಜಾತಕಫಲ ಚಿಂತಾಮಣಿಯಲ್ಲಿ 'ಜ್ಯೋತಿಷ್ಯಶಾಸ್ತ್ರದಲ್ಲಿ ಶಾಸ್ತ್ರಕ್ಕಿಂತ ವ್ಯವಹಾರಿಕ ಪ್ರಜ್ಞೆಯು ಅಗತ್ಯವಿದೆ' ಎಂದು ಹೇಳುತ್ತಾನೆ.

ನಿಯಮಬದ್ಧ, ಚಲನವಲನ ಹಾಗೂ ಪರಿವರ್ತನಶೀಲ ಗುಣ ಹೊಂದಿದ ಜ್ಯೋತಿಷ್ಯವನ್ನು ಧರ್ಮ ಹಾಗೂ ಸಂಪ್ರದಾಯದ ನೆರಳಲ್ಲಿ ಬೆಳೆಸಿಕೊಂಡು ಬಂದ ಕಾರಣ ವರ್ಣಾಶ್ರಮ ಧರ್ಮದ ಎಲ್ಲ ಸಂಗತಿಗಳು ಅದರಲ್ಲಿ ಬಳಕೆಯಾದವು. ಖಗೋಳ ಕಾಯಗಳಾದ ಗ್ರಹ, ನಕ್ಷತ್ರಗಳು, ರಾಶಿಫಲಗಳೂ ಸಹ ವರ್ಗ, ವರ್ಣ ಹಾಗೂ ಲಿಂಗ ಕೆಟ್ಟ, ದುಷ್ಟ ಅಸಮಾನತೆಯ ಸಂಕೇತಗಳಾಗಿ ಸ್ಥಾಪಿತವಾದವು. ಅಂದರೆ ಭೂಗೋಳದ ಸ್ಥಿತಿಗಳನ್ನು ಖಗೋಳಕ್ಕೂ ಆರೋಪಿಸಲಾಯಿತು. ಭೂಗೋಳ, ಖಗೋಳ ಮತ್ತು ಮನುಷ್ಯ ಹಾಗೂ ಆತನ ಫಲಪ್ರಣೀತ ಗುಣದಿಂದಾಗಿ ಜ್ಯೋತಿಷ್ಯಕ್ಕೆ ಅಸ್ತಿತ್ವವಿದೆಯೇ ಹೊರತು ಅದು ತನ್ನಷ್ಟಕ್ಕೆ ತಾನೇ ಸ್ವತಂತ್ರ ಅಥವಾ ಮಾನವಾತೀತವಾದುದಲ್ಲ.

ಕಾಲಜ್ಞಾನ : ಕಾಲಜ್ಞಾನವೆಂದರೆ ಮುಂದಾಗುವುದನ್ನು ಮೊದಲೇ ಹೇಳುವುದು. ಕಾಲಜ್ಞಾನ ಎನ್ನುವಲ್ಲಿ 'ಕಾಲ' ಎನ್ನುವ ಪೂರ್ವಪದ ಕಾಲ, ಸಮಯ, ಹೊತ್ತು, ವ್ಯಾಳ್ಯೆ, ಕಾಲಗಣನೆ ಎಂಬುದನ್ನು ಸೂಚಿಸಿದರೆ, 'ಜ್ಞಾನ' ಎನ್ನುವ ಉತ್ತರ ಪದ ಅರಿವು, ತಿಳುವಳಿಕೆ ಎಂಬುದನ್ನು ಸೂಚಿಸುತ್ತದೆ. ಮುಂದೊದಗಬಹುದಾದ ಆಪತ್ತುಗಳನ್ನು ಲೋಕದ ಜನತೆಗೆ ಸರಳ ಹಾಗೂ ಸುಲಭವಾಗಿ ತಿಳಿಸಿ ಅವುಗಳಿಂದ ರಕ್ಷಿಸಿಕೊಳ್ಳಬೇಕಾದ ಉಪಾಯಗಳನ್ನೂ ಕಾಲಜ್ಞಾನ ಸಾಹಿತ್ಯ ತಿಳಿಸುತ್ತದೆ. ಕನ್ನಡದಲ್ಲಿ ಇದೊಂದು ಜನ ಸಮ್ಮುಖವಾದ ಸಾಹಿತ್ಯದ ಪ್ರಕಾರವಾಗಿದೆ.

ಕಾಲಜ್ಞಾನವು ಜ್ಯೋತಿಷ್ಯ, ಭವಿಷ್ಯ ಹಾಗೂ ಕಣಿ ಶಕುನಗಳಿಗಿಂತ ಭಿನ್ನವಾಗಿದೆ. ಜ್ಯೋತಿಷ್ಯವು ನಕ್ಷತ್ರ ಮತ್ತು ಗ್ರಹಗತಿಗಳ ಕುರಿತ ಶಾಸ್ತ್ರವಾದರೆ ಭವಿಷ್ಯ ಮುಂದೊದಗುವ ಆಪತ್ತುಗಳನ್ನು ವ್ಯಕ್ತಿಗತ ನೆಲೆಯಲ್ಲಿ ತಿಳಿಸುವ ಶಾಸ್ತ್ರವಾಗಿದೆ. 'ಕಣಿ' ಕೊರವಂಜಿಯು ಸ್ತ್ರೀಯರಿಗೆ ಪ್ರೀತಿ ಪ್ರಣಯ ಹಾಗೂ ವಿರಹಗಳ ಕುರಿತಾಗಿ ಹೇಳುವುದಾಗಿದೆ. ಕಾಲಜ್ಞಾನವು ಲೋಕಜನರೆಲ್ಲರಿಗೂ ಅನ್ವಯಿಸುವುದು. ಇದು ಗುಣಿಸುವ, ಕೂಡಿಸುವ, ಕಳೆಯುವ ಗಣಿತೀಯ ಶಾಸ್ತ್ರವಲ್ಲ. ನಿಸರ್ಗದಲ್ಲಿನ ಚಲನವಲನಗಳ ಗಾಳಿ, ಮೋಡ ಮಳೆ, ಮಿಂಚು, ಗುಡುಗು, ಬಿಸಿಲು ಹಾಗೂ ಪ್ರಾಣಿಗಳ ಕ್ರಿಯೆ ಪ್ರತಿಕ್ರಿಯೆ,

Scanned with CamScanner

ವಾತಾವರಣದಲ್ಲಿನ ವೈಪರೀತ್ಯಗಳು ಮುಂತಾದ ಸಂಗತಿಗಳನ್ನು ಸರಿಯಾದ ರೀತಿಯಲ್ಲಿ ಗ್ರಹಿಸಿ, ಅನುಭಾವಿಯೊಬ್ಬ ನುಡಿವ ನುಡಿಗಟ್ಟುಗಳು ಗೊಂಚಲು. ಇದಕ್ಕೆ ಶಾಸ್ತ್ರಜ್ಞಾನಕ್ಕಿಂತ ಲೋಕಜ್ಞಾನ ಪ್ರಮುಖವಾಗಿ ಬೇಕು. ಇದು ಕರಾರುವಕ್ಕಾದ ವಿಜ್ಞಾನವೂ ಅಲ್ಲ, ಶಾಸ್ತ್ರವೂ ಅಲ್ಲ. ಅನುಭಾವಿಗಳು, ಧಾರ್ಮಿಕ ಮಹಾಪುರುಷರು, ಕಾರಣಿಕರು ನುಡಿದ ವಾಣಿಯೇ ಕಾಲಜ್ಞಾನ. ಜನರ ಶ್ರದ್ಧೆ, ವಿಶ್ವಾಸಗಳೇ ಇದರ ಜೀವಾಳ.

'ಕಾಲ ಗಣನೆಯಲ್ಲಿ ವಿಜ್ಞಾನಿ ಮತ್ತು ಅನುಭಾವಿಗಳ ರೀತಿ ಭಿನ್ನವಾದದು. ವಿಜ್ಞಾನ ಕಾಲವನ್ನು ಬಾಹ್ಯೇಂದ್ರಿಯದ ಮೂಲಕ ಗ್ರಹಿಸಿದರೆ ಅನುಭಾವಿ ತನ್ನ ಅಂತಃಸ್ಫುರಣದಿಂದ ಅರಿಯುತ್ತಾನೆ. ಭೂಲೋಕದ ಅಖಂಡ ಅರಿವಿನ ಕಾಲಜ್ಞಾನವನ್ನೇ ತ್ರಿಕಾಲಜ್ಞಾನ ಎಂದು ಕರೆಯಲಾಗುತ್ತದೆ. ಪತಂಜಲಿಯಂಥವರು ಯೋಗಮಾರ್ಗದಿಂದ ಇದನ್ನು ಅರಿಯಲು ಸಾಧ್ಯವೆಂದರೆ, ತಿಂತಿಣಿ ಮೌನೇಶ್ವರರಂಥ ಸಂತರು ಅದನ್ನೇ ಅನುಭವ ಮೂಲದಿಂದ ಸಾಧಿಸಿ ತೋರಿಸಿದರು. ಇದು ಸಂತನೊಬ್ಬನ ಅನುಭಾವದ ಅಮೃತತ್ತ್ವವೇ ಹೊರತು ಜ್ಯೋತಿಷ್ಯವಲ್ಲ.'[೪]

ಕಾಲಜ್ಞಾನದ ಮುಖ್ಯ ಕಾಳಜಿ ಕರ್ಮಕ್ಷಯವಾಗಿ ಧರ್ಮವು ಉಳಿದು ನೀತಿಯು ನೆಲೆಗೊಳ್ಳಬೇಕೆಂಬುದು. ಸಮಾಜ ನೈತಿಕ ನೆಲೆಗಟ್ಟಿನಲ್ಲಿ ನಿರ್ಮಾಣವಾಗಬೇಕು ಎನ್ನುವ ನೀತಿ ಕಾಲಜ್ಞಾನ ಸಾಹಿತ್ಯದ ಮುಖ್ಯತತ್ತ್ವ ಬೆಡಗಿನ ರೂಪದಲ್ಲಿರುವುದು ಕಾಲಜ್ಞಾನ ಸಾಹಿತ್ಯದ ಮತ್ತೊಂದು ವಿಶೇಷ. ಕಾಲಜ್ಞಾನ ಸಾಹಿತ್ಯವು ಒಂದು ರೀತಿ ಪುರುಷ ನಿರ್ಮಿತಿಯೇ ಆಗಿದೆ. ತಿಂತಿಣಿ ಮೌನೇಶ್ವರರು, ಕೊಡೆಕಲ್ಲ ಬಸವಣ್ಣ, ಸಾಲೋಟಿಗಿ ಶಿವಯೋಗಿಗಳು ಕಾಲಜ್ಞಾನ ಸಾಹಿತ್ಯದ ಪ್ರಮುಖ ಹರಿಕಾರರು. 'ಕಾಲಜ್ಞಾನ ಸಾಹಿತ್ಯವನ್ನು ಸಾರುವಯ್ಯಗಳು ಸಂಜೆ ಹೊತ್ತು ಕೈಯಲ್ಲಿ ಕಂದೀಲು ಹಿಡಿದುಕೊಂಡು ತಲೆಮೇಲೆ ಛತ್ರಿ ಏರಿಸಿಕೊಂಡು ಓಣಿ ಓಣಿಗಳಲ್ಲಿ ಸಾರುತ್ತ ಬರುವರು. ಕಡಾವಿಗೆ, ಕಾವಿಚಣ್ಣ, ಕಾವಿ ಅಂಗಿ, ರುಮಾಲು ಇವರ ವೇಷ. ಕಂದೀಲು ಜ್ಞಾನದ ಸಂಕೇತವಾದರೆ, ಕೊಡೆ ತ್ರಿಕಾಲಜ್ಞಾನಿಗಳು ಎಂಬುದರ ಸಂಕೇತವಾಗಿದೆ.'[೫]

ಒಟ್ಟಿನಲ್ಲಿ ಕಾಲಜ್ಞಾನ ಎನ್ನುವುದು ಲೋಕ ಬದುಕಿಗೆ ಬೇಕಾದ ಎಚ್ಚರ ಮತ್ತು ನೈತಿಕ ಸಮಾಜವೊಂದರ ದರ್ಶನ ಪ್ರಜ್ಞೆಯುಳ್ಳದ್ದಾಗಿದೆ. ಇದು ನಿಸರ್ಗದಲ್ಲಾಗುವ ವೈಪರೀತ್ಯಗಳ ಆಧಾರ ಹಾಗೂ ಅನುಭವದ ಮೇಲೆ ರೂಪಗೊಳ್ಳುವ ಸಂಗತಿಯಾಗಿದ್ದು ಶಾಸ್ತ್ರಜ್ಞಾನಕ್ಕಿಂತ ನಿಸರ್ಗದ ಸೂಕ್ಷ್ಮಗ್ರಹಿಕೆಯಿಂದ ಹುಟ್ಟುವ ವಾಕ್‌ಸಿದ್ಧಿಯಾಗಿದೆ.

Scanned with CamScanner
Scanned with CamScanner

ಹಲ್ಲಿ ಶಕುನ : ಶಕುನ ಎಂಬ ಶಬ್ದಕ್ಕೆ ಭವಿಷ್ಯದಲ್ಲಿ ಆಗುವುದನ್ನು ಹೇಳುವುದು ಎಂಬರ್ಥವಿದೆ. ನಮ್ಮ ಜನ ಭವಿಷ್ಯದಲ್ಲಿ ಆಗು ಹೋಗುಗಳನ್ನು ಕಂಡುಕೊಳ್ಳಲು ಜ್ಯೋತಿಷ್ಯದ ಜೊತೆಗೆ ಹಾಲಕ್ಕಿ ಶಕುನ, ಗೂಗಿ ಶಕುನ, ಹಲ್ಲಿ ಶಕುನ ನಾಯಿ, ಬೆಕ್ಕು, ಆಡು, ಕುರಿ, ದನಕರಗಳಂಥ ಸಾಕು ಪ್ರಾಣಿಗಳ ಧ್ವನಿ ಹಾಗೂ ನಡವಳಿಕೆಗಳನ್ನು ಅವಲಂಬಿಸಿ ಬದುಕಿದವರು. ಮನೆಯ ಗೋಡೆಯ ಮೇಲೆ ವಾಸವಾಗಿರುವ ಹಲ್ಲಿಯ ಲೊಚ ಲೊಚ ನುಡಿಗೆ ಹೆಚ್ಚಿನ ಆದ್ಯತೆ ಇದೆ. ಶುಭ ಅಶುಭ ವಿಚಾರಗಳನ್ನು ಚರ್ಚಿಸುತ್ತಿರುವಾಗ ಹಲ್ಲಿ ಲೊಚಗುಟ್ಟಿದರೆ ಹಾಗೂ ಲೊಚಗುಟ್ಟುವ ಪ್ರಮಾಣದ ಮೇಲೆ ಶುಭ ಹಾಗೂ ಅಶುಭಗಳನ್ನು ಕಂಡುಕೊಳ್ಳಲಾಗುತ್ತದೆ. ಹಾಗೆ ಹಲ್ಲಿ ಮೈ ಮೇಲೆ ಬೀಳುವ ಬಗೆಯೂ ಶುಭಾಶುಭಗಳಿಗೆ ಕಾರಣವಾಗುತ್ತದೆ. ಇದಕ್ಕೆ ಯಾವುದೇ ಶಾಸ್ತ್ರದ ಹಂಗು ಇಲ್ಲ.

ಕವಡೆಶಾಸ್ತ್ರ : ಶಕುನ, ಭವಿಷ್ಯಗಳನ್ನು ತಿಳಿದುಕೊಳ್ಳಲು ಕವಡೆಗಳನ್ನು ಬಳಸುವ ಶಾಸ್ತ್ರಕ್ಕೆ ಕವಡೆಶಾಸ್ತ್ರವೆಂದು ಹೆಸರಿದೆ. ಒಂದು ಗೊತ್ತಾದ ಜನಾಂಗದವರು ಈ ಶಾಸ್ತ್ರವನ್ನು ಹೇಳುತ್ತಾರೆ. ಸಾಮಾನ್ಯವಾಗಿ ಒಂಭತ್ತು ಕವಡೆಗಳನ್ನು ಬಳಸಿ ಶಾಸ್ತ್ರ ಹೇಳುತ್ತಾರೆ. ಕವಡೆಗಳನ್ನು ಹಾಕಿದಾಗ ಅವು ಮೇಲ್ಮುಖವಾಗಿ, ಕೆಲವು ಕೆಳಮುಖವಾಗಿ ಬೀಳುವ ಸಂಖ್ಯೆಯ ಆಧಾರದ ಮೇಲೆ ಫಲಾಫಲಗಳನ್ನು ಹೇಳುತ್ತಾರೆ. ಹೀಗೆ ಕವಡೆಗಳನ್ನು ಹಾಕಿ ಅವುಗಳ ನಿರ್ದಿಷ್ಟ ಸಂಖ್ಯಾಬಲದ ಮೇಲೆ ಶುಭಾಶುಭಗಳನ್ನು ಹೇಳುವ ಈ ಪದ್ಧತಿಗೆ 'ರಮಲಶಾಸ್ತ್ರ'ವೆಂದೂ ಹೆಸರಿದೆ.

ನಾಡೀಶಾಸ್ತ್ರ : 'ಒಬ್ಬ ವ್ಯಕ್ತಿಯ ಹಿಂದಿನ ಜನ್ಮ ಈಗಿನ ಜನ್ಮ ಹಾಗೂ ಮುಂದಿನ ಜನ್ಮಗಳ ವರ್ತಮಾನಗಳನ್ನು ಕುರಿತು ಹೇಳುವ ಒಂದು ಬಗೆಯ ಜ್ಯೋತಿಷ್ಯಶಾಸ್ತ್ರ'.[1]

ಭವಿಷ್ಯ : ಜನ್ಮಕುಂಡಲಿ, ಪ್ರಶ್ನ, ಲಗ್ನಕಾಲ ಮೊದಲಾದ ಆಧಾರಗಳಿಂದ ಜಾತಕನ ಜೀವಿತದಲ್ಲಿ ಮುಂದೆ ನಡೆಯುವ ವಿಷಯಗಳನ್ನು ಹೇಳುವಶಾಸ್ತ್ರವಾಗಿದೆ.

ಶಕುನ ಶಾಸ್ತ್ರ : ನಿಮಿತ್ತಗಳ ಮೂಲಕ ಶುಭಾಶುಭ ಫಲಗಳನ್ನು ತಿಳಿಯುವ ಶಾಸ್ತ್ರ.

ಗಿಣಿಶಾಸ್ತ್ರ : ಮೊದಲೆ ಸಿದ್ಧವಿದ್ದ ವಿವಿಧ ದೇವಾನುದೇವತೆಗಳ ಚಿತ್ರ ಹಾಗೂ ವಿವಿಧ ರೀತಿಯ ಸಂಗತಿಗಳಿರುವ ದಪ್ಪ ಕಾರ್ಡನ್ನು ಗಿಣಿಯ ಮೂಲಕ ತೆಗಿಸಿ ಅದರಲ್ಲಿ ಬರುವ ಚಿತ್ರ ಅಥವಾ ಸಂಗತಿಗಳ ಮೂಲಕ ಎದುರಿಗೆ ಕುಳಿತವರಿಗೆ ಸಧ್ಯ ಬಂದಿರುವ, ಮುಂದೆ ಬರುವ ಆಪತ್ತು ಹಾಗೂ ಅದಕ್ಕೆ ಪರಿಹಾರಗಳನ್ನು ಹೇಳುವುದೇ ಗಿಣಿಶಾಸ್ತ್ರ.

Scanned with CamScanner

Scanned with CamScanner

ಕಡ್ಡಿಶಾಸ್ತ್ರ : ತಾಳೆಗರಿ ಅಥವಾ ಕೋರಿಕಾಗದದ ಗರಿಗಳ ಮಧ್ಯ ಫಲಾನುಭವಿಯ ಮೂಲಕ ಕಡ್ಡಿ ಹಾಕಿಸಿ ಕಡ್ಡಿ ಹಾಕಿದ ಮಧ್ಯದ ಗರಿಯನ್ನು ತೆಗೆದು ಅದರಲ್ಲಿರುವ ಸಂಗತಿಗಳ ಮೂಲಕ ವ್ಯಕ್ತಿಯ ಫಲಾಫಲಗಳನ್ನು ಹೇಳುವ ಶಾಸ್ತ್ರ.

ಕಣಿ ಅಥವಾ ಭವಿಷ್ಯದ ಬಗ್ಗೆ ಎಲ್ಲ ಜಾತಿ ಜನಾಂಗಗಳಲ್ಲಿ ನಂಬಿಕೆಯಿದೆ. ಪ್ರಾದೇಶಿಕ ವಾಗಿ ಭವಿಷ್ಯ ಹೇಳುವ ಮನುಷ್ಯರಲ್ಲಿ ಭಿನ್ನತೆಗಳಿವೆ. ಹೀಗೆ ಹೇಳುವವರಿಗೆ ಈ ಶಕ್ತಿಯನ್ನು ಇಷ್ಟದೇವತೆಗಳು ಪ್ರಸಾದಿಸುತ್ತಾರೆಂಬ ನಂಬಿಕೆಯಿದೆ. ಈ ನಂಬಿಕೆಯಿ ವಿವಿಧ ರೂಪಗಳಲ್ಲಿ ವಿಸ್ತರಿಸಿ ವಿಭಿನ್ನ ರೀತಿಯ ಭವಿಷ್ಯ ದರ್ಶನಗಳಲ್ಲಿ ಕೊನೆಗೊಂಡಿದೆ. ಇಂಥ ಭವಿಷ್ಯ ನುಡಿಯ ಹಲವು ಮುಖಗಳನ್ನು ಕರ್ನಾಟಕದ ಬೇರೆ ಬೇರೆ ಅಲೆಮಾರಿ ಸಮುದಾಯಗಳಲ್ಲಿಯೂ ಕಾಣಬಹುದು.

ಅಲೆಮಾರಿ ಸಮುದಾಯಗಳು ಮತ್ತು ಭವಿಷ್ಯ

ಕಾಡುಸೋಲಿಗರು : ಕಾಡು ಸೋಲಿಗರೆಂದು ಕರೆಯುವ ಇರುಳಿಗರು ಕಣಿ ಹೇಳುತ್ತಾರೆ. ಇರುಳರ ಮುಖಂಡನು ನಿರ್ದಿಷ್ಟ ದಿನದಂದು ನಿರ್ದಿಷ್ಟ ವೇಷದೊಂದಿಗೆ ತಮಟೆ ನಾದದೊಂದಿಗೆ ಕಣಿ ನುಡಿಯುತ್ತಾನೆ. ಇದು ಸಾಮಾನ್ಯವಾಗಿ ರಾತ್ರಿ ವೇಳೆಯಲ್ಲಿ ಮುಖ್ಯಸ್ಥನ ಮೈಯಲ್ಲಿ ದೇವರು ಬಂದು ದೇವರೆದುರು ನುಡಿಯುವ ಪ್ರಸಂಗವಾಗಿರುತ್ತದೆ.

ಕುರುಮಾಮಾ : ರಾಮಕೊಂಡಾಳಿ, ಕುರುಮಾಮಾ ಎಂದು ವಿವಿಧ ಪ್ರದೇಶಗಳಲ್ಲಿ ಕರೆಸಿಕೊಳ್ಳುವ ಇವರು ಊರೂರು ಅಲೆದಾಡುತ್ತ, ಭಿಕ್ಷೆ ಬೇಡುತ್ತ, ಭವಿಷ್ಯ ಹೇಳುತ್ತ ಜೀವನ ಸಾಗಿಸುತ್ತಾರೆ. ಆಂಧ್ರಪ್ರದೇಶದ ಶ್ರೀಶೈಲ ಮತ್ತು ಭದ್ರಾಚಲ ಪ್ರಾಂತ್ಯಗಳಿಂದ ಬಂದ ಕುರುಮಾಮಾಗಳು ಕನ್ನಡ ಚೆನ್ನಾಗಿ ಕಲಿತು ಜನಪ್ರಿಯ ಭವಿಷ್ಯಗಾರರೆನಿಸಿ ಕೊಂಡಿದ್ದಾರೆ. ಭವಿಷ್ಯ ಹೇಳುವುದರೊಂದಿಗೆ ಮೂಲಿಕಾ ವೈದ್ಯ ನಾಡಿವೈದ್ಯದಲ್ಲಿ ಸಿದ್ಧಹಸ್ತರು. ಇವರು ಸಂಚಾರಿ ಭವಿಷ್ಯಗಾರರು. ಹಸ್ತನೋಡಿ ಹೇಳುವುದು ಮನುಷ್ಯನ ವರ್ತನೆ ನೋಡಿ ಹೇಳುವುದು ಇವರ ಮುಖ್ಯ ಕಸುಬು.

ಗಣೆಯವರು : ಜುಂಜಪ್ಪನ ಭಕ್ತರಾದ ಗಣೆಯವರು ಗಣೆಯ ಮೂಲಕ ದೇವರು ಬಂದು ಭವಿಷ್ಯ ಹೇಳುತ್ತಾನೆಂದು ನಂಬುತ್ತಾರೆ. ಕೊಡಗಿನ ಜೋಯಿಪಾಟ್ (ಜ್ಯೋತಿಷ್ಯದ ಹಾಡು) ಜ್ಯೋತಿಷ್ಯದ ಹಾಡಾಗಿದೆ. ದಕ್ಷಯಜ್ಞದಲ್ಲಿ ಸತಿದೇವಿ ಆಹುತಿಯಾದ ಸಿಟ್ಟಿನಲ್ಲಿ ಜಗದೀಶ್ವರ ಭೂಮಿಗೆ ಜಡೆಯನ್ನು ಬಡಿದಾಗ ವೀರಭದ್ರ ಹಾಗೂ ಇತರ ಗಣಂಗಳು ಹುಟ್ಟಿ ಹಾಡಿದ ಹಾಡೆ ಜೋಯಿಪಾಟ್. ಅಂದರೆ ಜ್ಯೋತಿಷ್ಯದ ಹಾಡು.

Scanned with CamScanner

ಬುಡುಬುಡಿಕೆಯವರು : ಗ್ರಾಮ ಜೀವನದ ಜನಪ್ರಿಯ ಭವಿಷ್ಯಕಾರರಾಗಿದ್ದಾರೆ. ಇವರು ಮರಾಠಿ ಮೂಲದವರು. ಶ್ರೀ ಕೃಷ್ಣ ನುಡಿಸಿದಂತೆ ನುಡಿಯುತ್ತೇವೆ ಎಂದು ಹೇಳುವ ಬುಡುಬುಡಿಕೆಯವರ ಭವಿಷ್ಯದ ಬಗ್ಗೆ ಜಾನಪದರಿಗೆ ಅಪಾರ ನಂಬಿಕೆ. ಬುಡುಬುಡಿಕೆಯವರ ಹೇಳಿಕೆಗಳನ್ನು 'ಹಾಲಕ್ಕಿ ಶಕುನ' ಎಂದೂ ಕರೆಯಲಾಗುತ್ತದೆ. ಅಮವಾಸ್ಯೆ ರಾತ್ರಿ ಸ್ಮಶಾನದಲ್ಲಿ 'ಪಣ' ಕಟ್ಟುತ್ತಾರೆ. ಅಲ್ಲಿ ಸಿಗುವ ಸೂಚನೆಯನ್ನು ಅನುಸರಿಸಿ ಮೂರು ದಿನ ಮಧ್ಯರಾತ್ರಿಯಲ್ಲಿ ಊರತುಂಬ ಹಾಲಕ್ಕಿ ಶಕುನ ಹಾಡುತ್ತ ಬುಡುಬುಡಿಕೆ ನುಡಿಸುತ್ತಾ ತಿರುಗುತ್ತಾರೆ. ಈ ಹೊತ್ತಿನಲ್ಲಿ ಊರಿಗೆ ಬರುವ ವಿಪತ್ತುಗಳು ಅದರ ಪರಿಹಾರಗಳ ಕುರಿತು ನುಡಿಯುತ್ತಾರೆ. ಸುಡುಗಾಡು ಸಿದ್ಧರು, ಸೋಣ ಜೋಗಿಗಳು (ದಕ್ಷಿಣ ಕನ್ನಡ) ಸಾರು ಅಯ್ಯನವರು ಸಾಂದರ್ಭಿಕವಾಗಿ ಋತುಮಾನಕ್ಕನುಗುಣವಾಗಿ ಶಕುನ ಹೇಳುವುದುಂಟು.[೬]

ಬಹಳ ಮುಖ್ಯ ಪ್ರಶ್ನೆ ಎಂದರೆ ಇಂದಿನ ಆಧುನಿಕ ಜ್ಯೋತಿಷಿಗಳಿಗಿಂತ ಭಿನ್ನವಾಗಿ ಅಲೆಮಾರಿ ಸಮುದಾಯಗಳು ತನ್ನ ಅಲೆಮಾರಿ ತನದಲ್ಲಿಯೂ ಜನಹಿತದ ಉದ್ದೇಶದಿಂದ ಕಣಿ ಹಾಗೂ ಭವಿಷ್ಯ ಹೇಳುತ್ತ ಬಂದಿವೆ. ತನ್ನ ಸ್ವಂತಕ್ಕಾಗಿ, ತನ್ನ ಸಮುದಾಯಕ್ಕಾಗಿ, ನೆರೆಯ ಸಮಾಜ ಹಾಗೂ ಸಮುದಾಯಗಳಿಗೂ ಕಣಿ ಹೇಳುವ ಮೂಲಕ ಸಾಮಾಜಿಕ ಉತ್ತರದಾಯಿತ್ವವನ್ನು ಅವು ಪ್ರದರ್ಶಿಸಿವೆ. ಸಾಮಾಜಿಕವಾಗಿ ಮನ್ನಣೆ ಇರದಿದ್ದರೂ ಸಾಂಸ್ಕೃತಿಕವಾಗಿ ಇಂತಹ ಅಲೆಮಾರಿ ಸಮುದಾಯಗಳಿಗಿದ್ದ ಸ್ಥಾನಮಾನಗಳು ಹೊಸರೀತಿಯ ಅಧ್ಯಯನಕ್ಕೆ ಪ್ರೇರೇಪಿಸುತ್ತವೆ.

ಮೇಲೆ ಚರ್ಚಿಸಿದ ಒಟ್ಟು ಪರಿಕಲ್ಪನೆಗಳು ಸ್ವರೂಪದಲ್ಲಿ ಭಿನ್ನವಾಗಿ ಕಂಡರೂ ಅವುಗಳ ಒಟ್ಟು ತುಡಿತ ಇರುವುದು ಮನುಷ್ಯ ಮತ್ತು ಆತನ ಫಲಪ್ರಣೀತ ಗುಣಗಳನ್ನು ಪೋಷಿಸುವ ಹಾಗೂ ನಿರೀಕ್ಷೆಗಳನ್ನು ಪೂರೈಸುವುದರತ್ತ. ಈ ಕಾರಣದಿಂದಾಗಿಯೇ ಇವೆಲ್ಲವುಗಳಿಗೆ ಅಸ್ತಿತ್ವವಿದೆಯೇ ಹೊರತು ಅವಷ್ಟಕ್ಕೆ ಅವೇ ಸ್ವತಂತ್ರವೂ ಅಲ್ಲ ಮಾನವಾತೀತ ಸಂಗತಿಗಳೂ ಅಲ್ಲ. ಸೃಜನಶೀಲನು ಧನಾತ್ಮಕ ಚಿಂತನೆಯುಳ್ಳ ಮನುಷ್ಯ ತನ್ನ ಭವಿಷ್ಯವನ್ನು ತನ್ನ ಸ್ವಯಂ ಆಂತರಿಕ ಅರಿವಿನಲ್ಲಿ ಕಂಡರೆ, ದುರ್ಬಲನು ಇಂಥ ಕಣಿ ಅಥವಾ ಜ್ಯೋತಿಷ್ಯದ ಪರಾವಲಂಬಿ ನೆಲೆಗಳಲ್ಲಿ ಕಾಣಬಯಸುತ್ತಾನೆ. ವಿಶೇಷವಾಗಿ ಕಣಿ, ಶಕುನ, ಹಲ್ಲಿಶಾಸ್ತ್ರ, ಗಿಣಿ ಶಾಸ್ತ್ರ, ಕಡ್ಡಿಶಾಸ್ತ್ರ, ಇವೆಲ್ಲವೂ ದುರ್ಬಲಗೊಂಡ ಮನುಷ್ಯ ಅಥವಾ ಮನಸ್ಸುಗಳಿಗೆ ವಿವಿಧ ಮಾಧ್ಯಮದ ಮೂಲಕ

Scanned with CamScanner

ಸಾಂತ್ವನ ಹೇಳುತ್ತ ಅವರಲ್ಲಿ ತನ್ನ ಬದುಕಿನ ಬಗ್ಗೆ ಭವಿಷ್ಯದ ಬಗ್ಗೆ ಆಶೆ ಆಕಾಂಕ್ಷೆಗಳನ್ನು ಹುಟ್ಟಿಸುವುದಾಗಿದೆ. ಅಲೆಮಾರಿಗಳ ಭವಿಷ್ಯ ಪ್ರಜ್ಞೆ ಇಂದಿನ ಆಧುನಿಕ ಜ್ಯೋತಿಷಿಗಳಂತೆ ಲಾಭದಾಸೆಯಿಂದ ಮನುಷ್ಯನನ್ನು ಹೆದರಿಸಿ ಅವನ ಆತ್ಮಸ್ಥೈರ್ಯವನ್ನು ಕುಗ್ಗಿಸಿ ಹಣ ಮಾಡುವ ಸ್ವರೂಪದ್ದಾಗಿರಲಿಲ್ಲ ಎಂಬುದು ಮಹತ್ವದ ಸಂಗತಿಯಾಗಿದೆ.

ಕೊನೆ ಟಿಪ್ಪಣಿ

೧. ಕನ್ನಡ ಜಾನಪದ ಕೋಶ ಸಂಪುಟ-೧, ಪುಟ.೧೫೯; ೧೯೮೫

೨. ವೀರೇಶ ಬಡಿಗೇರ, ಹಸ್ತಪ್ರತಿ ಸಂಕಥನ, ಪು.೮೦-೮೧; ೨೦೧೪

೩. ವೀರೇಶ ಬಡಿಗೇರ, ಹಸ್ತಪ್ರತಿ ಸಂಕಥನ, ಪು.೮೨; ೨೦೧೪

೪. ವೀರೇಶ ಬಡಿಗೇರ(ಸಂ), ತಿಂತಿಣಿ ಮೌನೇಶ್ವರ ವಚನಗಳ ಪ್ರಸ್ತಾವನೆ, ಪು.೧೯, ೨೦೧೬

೫. ಪಿ.ಕೆ. ಖಂಡೋಬ(ಸಂ), ಹೈದ್ರಾಬಾದ್ ಕನಾಟಕದ ಸಾಂಸ್ಕೃತಿಕ ವಿಷಯ ವಿಶ್ವಕೋಶ, ಪು.೫೭-೫೮; ೨೦೧೧

೬ ಶ್ರೀಮತಿ ಉಮಾದೇವಿ ಮತ್ತು ಶ್ರೀಮತಿ ಎಂ.ಎಸ್.ಸುಜಯ(ಸಂ) ಜ್ಯೋತಿಷ್ಯ ಪದಕೋಶ, ಪು.೯೩; ೨೦೦೭

೭ ಸ.ಚಿ. ರಮೇಶ, ದಕ್ಷಿಣ ಭಾರತೀಯ ಜಾನಪದ ಕೋಶ, ಸಂಪುಟ-೧, ೨೦೧೧

* * * * *

Scanned with CamScanner

ಕರ್ನಾಟಕ ಆಯಗಾರರ ಸಂಸ್ಕೃತಿ

ಡಾ. ವೀರೇಶ ಬಡಿಗೇರ



22 (IV)

Scanned with CamScanner

KARANATAKADA AAYAGAARARA SAMSKRUTI
by
Dr. Veeresh Badiger
Professor, Dept. of Manuscriptology
Kannada University, Hampi
Vidyaranya 583 276
Published by
Dr. H.D.Prashanth
Director, Prasaranga
Kannada University, Hampi
Vidyaranya 583 276
First Impression 2020
www.kannadauniversity.org
Pp: xiv+೧೫೬, Price: 160/-
ISBN: 978-93-87135-81-9
ಬೆಲೆ ರೂ. ೧೬೦/-
© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೨೦
ಮುಖಪುಟ: ಕೆ.ಕೆ.ಮಕಾಳಿ
ಅಕ್ಷರ ಸಂಯೋಜನೆ
ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್
ನೃಪತುಂಗನಗರ, ವಿದ್ಯಾರಣ್ಯ ೫೮೩ ೨೭೬
ಸಂಚಾರಿ ೯೪೪೮೧ ೬೬೯೦
ಪುಸ್ತಕ ದೊರೆಯುವ ಸ್ಥಳ
ಪುಸ್ತಕ ಸರಸ್ವತಿ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ
ನಂ.೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ ೦೮೦-೨೨೩೭೨೩೫೮
ಮುದ್ರಕರು
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with CamScanner

ಪರಿವಿಡಿ

ಪ್ರಸ್ತಾವನೆ

೧. ಪ್ರಾಚೀನ ಭಾರತದಲ್ಲಿ ಆಯಗಾರ ವೃತ್ತಿಗಳ ಸ್ವರೂಪ / ೧

* ಜನ ಮತ್ತು ಗಣ ಪ್ರಧಾನ ವ್ಯವಸ್ಥೆ / ೧
* ಶಿಲಾಯುಗ ಮತ್ತು ಸಾಮ್ರಾಜ್ಯ ಯುಗಗಳು / ೩
* ವೈದಿಕ ಯುಗ / ೬
* ಕರ್ನಾಟಕದ ಸಂದರ್ಭ / ೭

೨. ಆಯ ಮತ್ತು ಆಯಗಾರಿಕೆ / ೧೦

* ಆಯಗಾರಿಕೆ ಅರ್ಥ ಮತ್ತು ಸ್ವರೂಪ / ೧೦
* ಆಯಗಾರ ವರ್ಗಗಳು ಮತ್ತು ಸಂಖ್ಯಾ ಪ್ರಮಾಣ / ೧೨
* ಬಾರಾಬಲೂತಿ ಪದ್ಧತಿ / ೧೭
* ಆಯದ ಪ್ರಮಾಣ / ೨೦

೩. ಹಿಟ್ಟುಕಾರ ಪದ್ಧತಿ ಮತ್ತು ಆಯಗಾರಿಕೆ / ೩೪

* ಗೌಡ / ೩೬
* ಕುಲಕರಣಿ/ಸೇನುಭೋವ / ೩೯
* ತಳವಾರ / ೪೦
* ಕ್ಷೌರಿಕ / ೪೩
* ಅಗಸ / ೪೬
* ಚಮ್ಮಾರ / ೪೭
* ಹೂಗಾರ / ೫೦
* ಕುಂಬಾರ / ೫೪

Scanned with CamScanner

೪. ಪಾಂಚಾಳರು ಮತ್ತು ಆಯಗಾರಿಕೆ / ೬೨

* ಪಾಂಚಾಳರ ಪೂರ್ವಾಪರ / ೬೨

* ಕಮ್ಮಾರ / ೬೮

* ಬಡಿಗ / ೭೫

* ಕಂಚುಗಾರ / ೮೦

* ಅಕ್ಕಸಾಲಿ / ೮೩

* ಶಿಲ್ಪಿ / ೮೭

೫. ಆಯಗಾರರ ಬಹುವಿಧ ಲೋಕದೃಷ್ಟಿ / ೯೩

* ಆಯಗಾರರ ಆಚರಣಾತ್ಮಕ ಜಗತ್ತು / ೯೪

* ಹೆಣ್ಣಿನ ಭಾಗವಹಿಸುವಿಕೆ / ೯೭

* ಭಾಷೆ ಮತ್ತು ಕೌಶಲ್ಯ / ೯೯

೬. ಆಯಗಾರರು ಮತ್ತು ಉಪಕರಣ ಸಂಸ್ಕೃತಿ / ೧೦೧

೭. ಕುಶಲಕರ್ಮಿಗಳು ಮತ್ತು ತೆರಿಗೆ ಭಾರಗಳು / ೧೦೫

* ತೆರಿಗೆ ನಿರಾಕರಣೆ ಮತ್ತು ವೃತ್ತಿ ಸಮುದಾಯಗಳು / ೧೦೮

* ವೃತ್ತಿ ಸಂಘಗಳು / ೧೧೦

೮. ವೃತ್ತಿಗಳ ಕೀಳೀಕರಣ / ೧೧೪

೯. ಸಮಾರೋಪ / ೧೨೩

ಅನುಬಂಧಗಳು / ೧೨೯

೧. ವೃತ್ತಿಗಳ ರೇಖಾಚಿತ್ರಗಳು / ೧೩೧

೨. ಛಾಯಾಚಿತ್ರಗಳು / ೧೩೮

೩. ಸಹಾಯಕ ಗ್ರಂಥಗಳು / ೧೪೪

೪. ವಕ್ತೃಗಳು / ೧೫೦

Scanned with CamScanner

ಇತಿಹಾಸ ದರ್ಶನ

೨೦೨೦

ಸಂಪಾದಕರು

ದೇವರಕೊಂಡಾರೆಡ್ಡಿ

ಜಿ.ಕೆ. ದೇವರಾಜಸ್ವಾಮಿ

ಸಂಪುಟ

೩೫

ಕರ್ನಾಟಕ ಇತಿಹಾಸ ಅಕಾದೆಮಿ (ರಿ.)

20-(-2021)

ಇತಿಹಾಸ ದರ್ಶನ

ITIHASA DARSANA - Volume 35 / 2020

ಸಂಪುಟ ೩೫ / ೨೦೨೦

೨೦೧೯ರ ಅಕ್ಟೋಬರ್ ೧೮ರಿಂದ ೨೦ರವರೆಗೆ ಕರ್ನಾಟಕ ಇತಿಹಾಸ ಅಕಾದೆಮಿ(ರಿ) ಹಾಗೂ
ಶ್ರೀ ಹೊಂಬುಜ ಜೈನ ಮಠದ ಆಶ್ರಯದಲ್ಲಿ
ಸಮಾವೇಶಗೊಂಡಿದ್ದ ಕರ್ನಾಟಕ ಇತಿಹಾಸ ಅಕಾದೆಮಿಯ ೩೩ನೆಯ ವಾರ್ಷಿಕ ಸಮ್ಮೇಳನದಲ್ಲಿ
ಅಕಾದೆಮಿಯ ಸದಸ್ಯರು ಮಂಡಿಸಿದ ವಿದ್ವತ್ ಪ್ರಬಂಧಗಳ ಸಂಪುಟ.

ಸಂಪಾದಕರು

ದೇವರಕೊಂಡಾರೆಡ್ಡಿ

ಜಿ.ಕೆ. ದೇವರಾಜಸ್ವಾಮಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

Scanned with CamScanner

ITIHĀSA DARŚANA - *Volume 35 / 2020*

The volume of the scholarly papers presented and
Proceedings of the 33nd Annual Conference

The Karnataka Ithihasa Academy (Regd.,)
Sri Hombuja Jain Math
Humcha, Hosanagara Taluk, Shimoga District

on 18th, 19th & 20th October 2019

Published by : Secretary
Karnataka Itihasa Academy (Regd.)
B.M. Sri Pratistana, 3rd Main Road,
Narasimharaja Colony, Bengaluru - 560 019.

karnatakaitihasaacademy25@gmail.com

www.karnatakaitihasaacademy.org

Edited by : **Devarakondareddy**
G.K. Devarajaswamy

© Authors. ಆಯಾ ಲೇಖಕರದು

ಪುಟಗಳು : 588 + xxiv + Col. Photos xvi

Pages : 588 + xxiv + Col. Photos xvi

Price : ₹ **900**

ಬೆಲೆ : ₹ ೯೦೦

ಆರ್ಥಿಕ ನೆರವು:

ದಿ. ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಂಗಳೂರು.
ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೇಹೊನ್ನೂರು.
ಶ್ರೀ ಪರಮಪೂಜ್ಯ ಸಂಗನಬಸವ ಮಹಾಸ್ವಾಮಿಗಳು, ಶ್ರೀ ಮದ್ವೀರಶೈವ ಶಿವಯೋಗಮಂದಿರ ಸಂಸ್ಥೆ, ಬಾದಾಮಿ.

Printed at

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA Bangalore
ISO 9001-2000
ಜಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

Scanned with CamSca

Scanned with CamScanner

೫೬.	ಹಾಡವಳ್ಳಿಯ ಚಿನ್ನಾದೇವಿ	ವಿ. ಸಂಧ್ಯಾ ೨೫೧
೫೭.	ಕನ್ನಡಿಗ ವಂಶದ ಮಾಧವ ದಂಡನಾಯಕ	ಅನಿತಾ ಗುಡಿ ೨೫೭
೫೮.	ಮರುಗೆರೆ ನಾಡಿನ ರಣವೀರ ಸಿಯಾಗೆಲ್ಲ-ಪುನರಾವಲೋಕನ	ಡಿ.ಎನ್. ಯೋಗೀಶ್ವರಪ್ಪ ೨೫೮
೫೯.	ವಿಜಯನಗರ ಸಾಮ್ರಾಜ್ಯ ಸ್ಥಾಪನೆ	ಗುರುಶಾಂತಪ್ಪ ೨೭೦
೬೦.	ಶೃಂಗೇರಿ ಮಠಸರದ 'ಸ್ಥಾನಿಕ' ಪರಂಪರೆ	ಕೆ.ಪಿ. ಪ್ರಕಾಶ ೨೭೭
೬೧.	ಶ್ರೋತ್ರೀಯ ಗುತ್ತಿಗೆ: ಕೆಲವು ಹೊಸ ಸಂಗತಿಗಳು	ಸುಂಕಂ ಗೋವರ್ಧನ ೨೭೯
೬೨.	ಶಾಸನದಲ್ಲಿ ಗೋಷ್ಠಿ ಪದದ ಅರ್ಥ ವಿವೇಚನೆ	ನಳಿನಿ ವೆಂಕಟೇಶ್ ೨೮೭
೬೩.	ಅಲಗಿಲವಾಡ ಒಂದು ಐತಿಹಾಸಿಕ ಪರಿಶೀಲನೆ	ಜೆ.ಕೆ. ಮಲ್ಲಿಕಾರ್ಜುನಪ್ಪ ೨೯೧
೬೪.	ರಾಮಗಿರಿ ಕೃಷಿಯತು: ಒಂದು ಅಪ್ರಕಟಿತ ದಾಖಲೆ	ಲಕ್ಷ್ಮಣ್ ತೆಲಗಾವಿ ೨೯೪
೬೫.	ಇಕ್ಕೇರಿ ದೇವಾಲಯದ ಅರ್ಚಕರಲ್ಲಿರುವ ನಿರೂಪಗಳು	ಕೆಳದಿ ವೆಂಕಟೇಶ್ ಜೋಯಿಸ್ ೨೯೮
೬೬.	ಅಣ್ಣಿಗೇರಿಯ ಅಪ್ರಕಟಿತ ದಾಖಲು ಪತ್ರಗಳು	ಸಂಜಯ ಎನ್. ಹಂಜಿ ೩೦೯
೬೭.	ಹುಬ್ಬಿನಭಾವಿ ಬೀರಪ್ಪದೇವರಿಗೆ ಸಂಬಂಧಿಸಿದ ದಾಖಲೆ	ಎಫ್.ಟಿ. ಹಳ್ಳಿಕೇರಿ ೩೧೩
೬೮.	ತಳಸಮುದಾಯದ ಅಪ್ರಕಟಿತ ಜಯಪತ್ರ	ರವಿಕುಮಾರ ಕೆ. ಹಿ.ಗೂ. ದುಂಡ್ಯಪ್ಪ ೩೧೯
೬೯.	ಮುಮ್ಮಡಿ ಕೃಷ್ಣರಾಜ ಒಡೆಯರ್ ಶಿವಗಂಗೆಯ ಮೇಲಣಗವಿ ಮಠಕ್ಕೆ ಕೊಟ್ಟ ನಿರೂಪ	ಬಿ. ನಂಜುಂಡಸ್ವಾಮಿ ೩೨೯
೭೦.	ಕಡತಗಳಲ್ಲಿ ವಿಧವಾ ಪ್ರಕರಣದ ದಾಖಲೆಗಳ ಅವಲೋಕನ	ಎನ್.ಆರ್. ಲಲಿತಾಂಬ ೩೩೪
೭೧.	ಹಂಡೆ ಪಾಳೆಗಾರ ಹನುಮಪ್ಪನಾಯಕನ ದಾನಪತ್ರಗಳು ಮತ್ತು ಶಾಸನಗಳು	ಎಸ್.ಸಿ. ಪಾಟೀಲ್ ೩೪೩
೭೨.	ಹೊಂಬುಜ ಮಠದ ಹಸ್ತಪ್ರತಿಗಳು: ಪರಿಚಯ	ಕೆ. ರವೀಂದ್ರನಾಥ ೩೪೭
೭೩.	ಚಿಪ್ಪಿನಕೆರೆಯಲ್ಲಿ ದೊರೆತ ಮಹಾರಥಿ ಮತ್ತು ಆನಂದ ಅರಸರ ಸೀಸದ ನಾಣ್ಯಗಳು	ಎಸ್.ವೈ. ಸೋಮಶೇಖರ್ ೩೪೯
೭೪.	ಕರೆಗುಡಿಹಳ್ಳಿ ನೊಳಂಬೇಶ್ವರ ದೇವಾಲಯದ ಐತಿಹಾಸಿಕ ವಿಶ್ಲೇಷಣೆ	ಬಿ.ಸಿ. ರಾಕೇಶ್ ೩೫೨
೭೫.	ಮಲ್ಲಂಪಳ್ಳಿ ಜನಾರ್ದನ ದೇವಾಲಯ	ಜಿ.ಎಸ್. ರಾಮಚಂದ್ರ ೩೫೬
೭೬.	ಶ್ರೀ ಸದಾಶಿವರುದ್ರ ದೇವಸ್ಥಾನ ಸುರ್ಯ	ಸನ್ಮತಿಕುಮಾರ್ ೩೫೯
೭೭.	ಮಾಳೇನಹಳ್ಳಿಯ ಚಿದಂಬರ ದೇವಸ್ಥಾನ ಪಂಥ	ಎ.ಸಿ. ಕುಮಾರ್ ೩೬೨
೭೮.	ಉಜ್ಜಯನಿ ಶ್ರೀ ಸಿದ್ಧೇಶ್ವರ ಜದ್ಗುರುಗಳು ಮತ್ತು ಯಲಿವಾಳದ ಸಾಂಸ್ಕೃತಿಕ ಅನನ್ಯತೆ	ಶಕುಂತಲಾ ಸಿಂಧೂರ ೩೬೫
೭೯.	ನಾಗಮಂಗಲದ ಪ್ರಾಚೀನ ದೇವಾಲಯ ಜೀರ್ಣೋದ್ಧಾರ	ಮಹಮ್ಮದ್ ಕಲೀಂಉಲ್ಲ ೩೬೮
೮೦.	ತುಂಗಭದ್ರಾ ನದಿಯ ಪ್ರಾಚೀನತೆ: ಚಾರಿತ್ರಿಕ ನೋಟ	ಟಿ. ಓಂಕಾರಪ್ಪ ೩೭೧
೮೧.	ಸೂರ್ಯಗ್ರಹಣ ಸಮಯದ ಆತ್ಮ ಬಲಿದಾನದ ಶಾಸನ ಶಿಲ್ಪಗಳು	ಆರ್. ಶೇಜೇಶ್ವರ ೩೭೪
೮೨.	ಹೊಂಬುಜ ಕಮಠೇಶ್ವರ ದೇವಾಲಯದ ಕಥಾನಿರೂಪಕ ಶಿಲ್ಪಗಳು	ದತ್ತಪ್ರಸನ್ನ ಎಲ್. ಪಾಟೀಲ ೩೭೭
೮೩.	ಬೇತಮ್ಮೆ ನಾರಾಯಣ ದೇವಾಲಯದ ಕಥಾನಿರೂಪಕ ಶಿಲ್ಪಗಳು	ರಂಗನಾಥರಾವ್ ಹೆಚ್. ಕರಾಡ್ ೩೮೪

Scanned with CamSca

Scanned with CamScanner

ಹುವ್ವಿನಭಾವಿ ಬೀರಪ್ಪದೇವರಿಗೆ ಸಂಬಂಧಿಸಿದ ದಾಖಲೆ

ಎಫ್.ಟಿ. ಹಳ್ಳಿಕೇರಿ*

ರಾಯಚೂರು ಜಿಲ್ಲೆಯ ಮಸ್ಕಿ ಪಟ್ಟಣ(ಲಿಂಗಸೂಗುರು ರಸ್ತೆ)ದಿಂದ ಹನ್ನೆರಡು ಕಿ.ಮೀ.ಗಳ ಅಂತರದಲ್ಲಿರುವ ಗ್ರಾಮ ಹುವ್ವಿನಭಾವಿ. ಕುರುಬ ಸಮುದಾಯದ ಜನರೇ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಗ್ರಾಮದ ಅನತಿ ದೂರದಲ್ಲಿ ಬೀರಪ್ಪನ ಪ್ರಾಚೀನ ಗುಡಿ ಇದೆ. ಆ ಗುಡಿಯ ಹಿಂದಿನ ಪೂಜಾರಿಗಳು ಬರೆಸಿಟ್ಟಿದ್ದ ದಾಖಲೆ ಪತ್ರವು ಈಗಿನ ಪೂಜಾರಿ ಅಂಬಣ್ಣನವರ ಮನೆಯಲ್ಲಿದೆ. ಇದು ಅವರ ಹಿಂದಿನ ವಂಶಸ್ಥರು ಪ್ರತಿಮಾಡಿಸಿ ಬರೆಸಿಟ್ಟಿದ್ದರು ಎಂಬುದು ಈ ಪತ್ರದಿಂದ ನಮಗೆ ತಿಳಿದುಬರುವ ಸಂಗತಿಯಾಗಿದೆ.

೧. ದಾಖಲೆಯ ಪಠ್ಯ

ಶ್ರೀಗುರು ಚನ್ನಬಸವಾಯನಮಃ । ಶ್ರೀಗಣೇಶಾಯನಮಃ । ಶ್ರೀ ಅನ್ನಪೂರ್ಣೆನಮಃ । ಶ್ರೀ ಅಮರಗುಂಡ । ಶ್ರೀಗುರುವೇ ಸರ್ವಲೋಕಾನಾಂ.....ಭವರೋಗಿನಾಂ ನಿಧಯೇ ಸರ್ವವಿದ್ಯಾನಾಂ ದಕ್ಷಿಣಾಪೂರ್ಣಯೇ ನಮಃ॥

೧. ಮಿತಿ ॥ ಏಕೃತಿನಾಮ ಸಂ॥ರದ ಆಶ್ವೀಜ ಬಹುಳ ೧೧ ಯಿಂದುವಾಸರೆ ಶಕೆ ೧೮೭೨॥ ಫ।ಸಂ ೧೩೬೦॥ ದಕ್ಷಿಣಾಯನೆ– ಶರದೃತು ರಾ॥ ರಾ॥ ನಿಲೋಗಲ್

೨. ಕುರುಬರ ಕೆಂಪಹನುಮಪ್ಪನ ಹಿರೇಸ್ವೊಸಿಯಾದ ಪಾವಡ್ಯವ್ವ ಕೋ೦। ಭೀಮಪ್ಪ ಯೀತನ ಸುಪುತ್ರನಾದ ಬೀರಪ್ಪ ಯಿವರುಗಳು ಕೂಡಿಡಿ

೩ ದಕ್ಕೆ ಗುರುಹಿರಿಯರು ಜಿಲ್ಲಾ ರಾಯಚೂರು ತಾ॥ಲಿಂಗಸೂಗಿರಿಗೆ ಹೊಂದಿದ್ದ ಹುವ್ವಿನಭಾವಿ ಬೀರಪ್ಪನ ಗುಡಿಯ ವಂಶದ ಹಿಂದಿನ ಕಾಲದ ಗುರು

೪. ಹಿರಿಯರು ಬರದಿಟ್ಟದ್ದು ಹಳೇ ನಾಂಜಾಗಿರುತ್ತದೆಯಂದು ಇವರುಗಳು ಅದೇ ನಾಂಣೆವ ವಲೇಖಿನ ನೋಡಿಕೊಂಡು ವಸನೋಟಿನಲ್ಲಿ ಅದೇ ಲೇಖಿನ ಬರ್ಸಿದ ತಪಸೀಲ್ ॥

೫. ರಾಯಿಚೂರನಾಳುತ್ತಿದ್ದ ರಾಚದಡ್ಡಿ । ಆ ಕಾಲಕ್ಕೆ ರಾಯಿಚೂರು ಭೂಮಿಯಲ್ಲಿ ಹೇರಿನಗೌಡಿಕಿ ಮಾನವಿ ಪೈಕಿ ರಾಯನ ಆಳಿಕೆಯಲ್ಲಿ

೬ ಮಾನ್ವಿ ಸೀಮಿ ಗೊಲ್ಲದಿಂನಿ ಗೌಡಕಿ । ಆ ಭೂಮಿಲಿಂದ ಮೇದಿರಾಯನಕೋಟಿ – ನವಮೇದಿರಾಯನಾಳುತಿದ್ದ ಕೋಟಿಯಂಬೋದು ಚಿಕ್ಕನಾ

೭ ಯಕನಹಳ್ಳಿಯ ನಿಸಿದಂದಿಗೆ ಗುಡಗುಂಟಿ ಪೈಕಿನ ಕಚೇರಿಯನಿಸಿದಂದಿಗೆ – ಯರಡೋಣಿ ಕೇಶವರಾಯ ಪಭೆವೆ ನಿಸಿದಂದಿಗೆ –

೮. ಆ ಕಾಲಕ್ಕೆ ಬೂದಿಹಾಳು ಕಣಿಮಿಯಲ್ಲಿರಪ್ಪೆಗಳಿಬ್ಬರು । ಪೂಜಾರಿ ಅಲ್ಲಿಗೆ –ಹಿರೇಕುಸಿರಾಯ । ಚಿಕ್ಕಕುಸಿರಾಯ ಯಿವರು ಹುವ್ವಿಭಾ

೯. ವಿ ಬೀರಪ್ಪಗೆ ಹುತ್ತಿನಗಡ್ಡೆಯ ಮೇಲೆ ಯೇಳು ತಳಕಿನ ಬೇವಿನಮರಗಳು । ಅದರ ವಳಗೆ ವುಪ್ಪಿಯಕಂಬಿ । ಅದನ್ನು ಕುಶಿ

೧೦. ರಾಯನೆಂಬ ಪೂಜಾರಿಯು । ಯೇಳು ತಳಕಿನ ಬೇವಿನಮರಗಳನ್ನು ಕಡೆದು । ಹುತ್ತಿನಗಡ್ಡೆಯ ಹೊಡೆಬರಿದು । ಆವಾಗ್ಗೆ ಸ್ವೋಮಿ

* ಪ್ರಾಧ್ಯಾಪಕ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಮೊ: ೯೪೪೮೧೧೪೦೩೨

Scanned with CamScanner

೧೧. ಹುವ್ವಿನಭಾವಿ ಕುಶಿರಾಯಗೆ ನಿಜರೂಪ ತೋರಿದ ॥ ಆಗ್ಗೆ ಆ ಗುಡಿ ಕಟ್ಟಿಸಿದಾತ ಬಡೆಡುವ್ವರಾಯ । ಆವಾಗ್ಗೆ ಗುಡಿ ಮುಂ

೧೨. ದೆ ಸಿದ್ಧರಮಠ ಹುಟ್ಟುವ ಕಾಲಕ್ಕೆ । ಇವರು ಯಂಣೆ ಭಂಡಾರ ಕಂಡರು । ಆವಾಗ್ಗೆ ಗುಡಿ ಮುಗಿದದ್ದು ಮಿತಿ ಯಾವದಂದರ

೧೩. ಶಾಲ್ವರಿನಾಮ ಸಂ॥ ಫಾಲ್ಗುಣ ಶುಕ್ಲ ೯ ಗುರುವಾರ ಮತ್ತು ಕುಂಬಾರನ ಆಳಿಕಿ । ಆ ಕಾಲಕ್ಕೆ ಭೂಮಿಗೆ ಬಂದರು । ಬೇಡರಗೌಡರು । ಅಲ್ಲಿಗೆ

೧೪. ಕುಶಿರಾಯನ ಮಕ್ಕಳು । ಹಾಗೂ ಹಿರೇಪಿಡ್ಡಪ್ಪ । ಮತ್ತು ಚಿಕ್ಕಪಿಡ್ಡಪ್ಪ – ಯಳೇಪೂಜಾರಿಯಂಬಾತನು ಹುಡೇದವರ ಮಗ । ಚಿಕ್ಕಪಿಡ್ಡ

೧೫. ಪ್ಪನ ಮಕ್ಕಳು ಯಿಲ್ಲದೆ ಹೋಗಿ । ತನ್ನ ಹೆಂಡತಿ ಕಡಿಯಲವರನ್ನು ತಂದು ಸಾಕಲಾಗಿ ಇರುಯಿರುತ್ತ ಇತ್ತಕಡಿಗೆ ನಾಡಗೌಡ.....ಸಲವನೂರು । ನಾಡಿಗತನ

೧೬. ದೇಶಗತಿಯಿತ್ತು । ಅಲ್ಲಿಂದ ಬಂದು ಮೇದಿರಾಯನಕೋಟಿ । ನವಮೇದಿರಾಯ ಆಳುತ್ತಿದ್ದ । ಆತನ ಬಳಿಯಲ್ಲಿ ಬಂದು ನಿಂತರು । ನಾಡಗೌಡ ಸಂಗ

೧೭. ರಡ್ಡಿ ಕಾಮವ್ವ । ನವಮೇದಿರಾಯಗೆ ಅಜವಾನದ ಪರಮಂನ ಮಾಡಿ । ನಾರಿಕೊಂಬಿನ ಹಿಂಡಿಪಲ್ಲೆ ಮಾಂಸವನ್ನು । ಮೇಧಿರಾಯನಿಗೆ ಊಟವನ್ನು ಮಾಡಿಸಿದಳು ।

೧೮. ಆ ಮೇಧಿರಾಯರಿಗೆ ವೂಟ ಮಾಡಿದ್ದು ಇದೇ ಪದಾರ್ಥವೆಂದು ಅವರಿಗೆ ತಿಳಿಯಲಿಲ್ಲ । ಆ ಪದಾರ್ಥಕ್ಕೆ ಮೆಚ್ಚಿ ಕೊಂಡು ನವಮೇಧಿರಾಯನು । ಏನು ಬೇಡುತಿದ್ದಿ ಬೇಡು

೧೯. ಅಂದರು । ಅದಕ್ಕೆ ಅವರು ಬೇಡಿದ್ದು । ಮೇಧಿರಾಯ ಕೊಟ್ಟದ್ದು । ಕೋಟಿಯ ಸೀಮೆ ಮತ್ತು ಹಳ್ಳಿ ನಾಡಗೌಡಕಿ । ಮತ್ತು ಬಿಳೇಹಾಳುಗೌಡಿಕಿ । ವೀರಾಪುರದ ಗೌಡಿಕಿ । ಪ

೨೦. ಡದರು । ಆ ಕಾಲಕ್ಕೆ ಸಂಗರಡ್ಡಿ ಕಾಮವ್ವ ಪಡದಳು । ಕಾಮವ್ವನ ಹೊಟ್ಟಿಯಲ್ಲಿ ಗೌಡಪ್ಪ ಹುಟ್ಟಿದನು । ನಾಡಗೌಡ ಹಿರೇತಿಮ್ಮಪ್ಪ । ಹಾಗೂ ದೇಶಾಯಿಗಳು । .....

೨೧. ದ ನಾಡಿಗರು । ...ಕೋಟಿಗೆ ಬಂದರು । ನವಮೇದಿರಾಯರು ಆಳಿಕಿಯಲ್ಲಿ । ಕೋಟಿ ಮತ್ತು ಹಳ್ಳಿದೇಶಗತಿ ಸರನಾಡಗೌಡಿಕಿ ಪಡದರು । ದೇಸಾಯಿ ಹಿರೇಸ್ವಾಮಪ್ಪ ಮತ್ತು ಚಿ

೨೨. ಕ್ಕ ಸೋಮಪ್ಪ ದೇಸಾಯಿ । ಗೌಡಪ್ಪ ಹಾಗೂ ನಾಡಕುಲಕರಣಿ । ಹಿರೇ ಬೆನಕಪ್ಪ । ಚಿಕ್ಕ ಬೆನಕಪ್ಪ । ಆವಾಗ್ಗೆ ಇವರು ಯಿದ್ದರು । ಹೀಗೆ ರಾಜಿಕೆ ಮಾಡುತ್ತ ಇರಲಾಗಿ । ಕೊಪ್ಪ

೨೩. ಳದ ಸೀಮೆ ಕಡಿಯಿಂದ । ಶಿಷ್ಯರು ದೇವರಿಗೆ ಬರಲಾಗಿ । ಹಿರೇಪಿಡ್ಡಪ್ಪನ ಹೊಟ್ಟಿಯಲ್ಲಿ । ಐದುಮಂದಿ ಗಂಡಸ ಮಕ್ಕಳು ಆಗಿದ್ದರು । ಅದಕ್ಕೆ ಚಿಕ್ಕಪಿಡ್ಡಪ್ಪ ಸಾಕಿದ ಮಗ

Scanned with CamScanner

೨೪. ಹಿರೇಪಿಡ್ಡಪ್ಪನ ಮಕ್ಕಳು । ಬಡಕಪ್ಪ । ನರಸಪ್ಪ । ಪಿಡ್ಡಪ್ಪ । ಜಟ್ಟಿಪ್ಪ । ಯಲ್ಲಪ್ಪ । ಇವರ ಸಂಗಡ ಕಲಾಪು ಬರಲಾಗಿ । ಶಿಷ್ಯಮಕ್ಕಳು ಹಾಗೂ ದೈವದವರು

೨೫. ಯಾವತ್ತು ಕಲತು । ಸಮಯ ನೊಡಿಕೊಂಡು । ನ್ಯಾಯಕ್ಕೆ ಕೂಡಲಾಗಿ । ದೈವ ಆಡಿದ್ದು । ಸಾಕಿದವನಾದರು ಮಗನು । ಸೊಕ್ಕಿನವನಾದರು ಮಗನು । ಇವನುದಾವ ಹೊ

೨೬. ತ್ತಿಗೆ ಹಚ್ಚುತಿದ್ದಿಯಂದು । ದೈವ ಕೇಳಲಾಗಿ । ಆ ಮಾತಿಗೆ ಹಿರೇಪಿಡ್ಡಪ್ಪ ವಪ್ಪಿಕೊಂಡು ವುಡೆಕ್ಕೆ ಕಳಿಸಿ ತಮ್ಮ ಮಗನ್ನು ಕರಸಿಕೊಂಡು । ತಮ್ಮನ ಮಗನೆನಿಸಿ । ಪೂಜಾರಿಕಿ

೨೭. ಕೊಟ್ಟು । ದೈವ ಮುಖಾಂತ್ರ ಅವನಿಗೆ ಪಟ್ಟವ ಕಟ್ಟಿ । ಮಗನೆನಿಸಿಕೊಂಡು । ಚಿಕ್ಕಪಗೆ ಗ್ರಾಮದ ಸ್ವೋಸ್ಥಿ ಇದ್ದವರು ಯಿಲ್ಲರು ಕೂಡಿ । ಅವರ ದಡ್ಡಿಯಲ್ಲಿ ಸಾಲು । ತೈಗದು

೨೮. ಕೊಂಡು । ಯಳೇ ಪೂಜಾರಿಗೆ ಚಿಕ್ಕಪಿಡ್ಡಪ್ಪನ ಮಗ । ಯಿವನಿಗೆ ಬೇರೆ ವಂದು । ಮನಿಯಬೇಕೆಂದು ಕೇಳಲು । ಅವರು ಅಂದದ್ದು ಏನಂದರೆ ನಿನ್ನ ತಮ್ಮನ ಮಗ । ಯೆ

೨೯. ನಿಸಿದ ಬಳಿಕ ನಿನ್ನ ಸ್ಥಲದಲ್ಲಿ ಮನಿ ಕೊಡಬೇಕೆಂದು ಆಡಲಾಗಿ । ಆ ಮಾತಿಗೆ ಹಿರೇ ಪಿಡ್ಡಪ್ಪ ಪೂಜಾರಿ ಆಡಿದ । ನನ್ನ ಹೊಟ್ಟಯಲ್ಲಿ ಐದುಮಂದಿ ಮಕ್ಕಳು । ಇವರಿಗೆ

೩೦. ಅವರಿಗೆ ಮುಂದೆ ಕಾಲಾಂತರದಲ್ಲಿ ನಡಿಯಲಾರದು । ಇವನ್ನ ನಮ್ಮ ಸಂಣವರು ನೋಡರು ಯಂದು ಕೇಳಲಾಗಿ । ಆ ಮಾತಿಗೆ ಆ ಸ್ಥಲದಲ್ಲಿದ್ದ । ಲಾಳಗೊಂಡರು । ಸ್ವೋಸ್ಥಿ

೩೧. ಯವರು । ವಳಿತುಯಂದು ತಮ್ಮ ಮನಿಯ ಹಿರೇವಡಿಯನ ಬಳಿಯಲ್ಲಿ । ಹಂನ್ಯೆರಡು ಕಂಬದ ಮನಿಯ ಪಾಯ ಹಾಕಿ ತೋಡಿಸು ಅಷ್ಯಕ್ಕೆ । ಆ ಹಿರೇಪೂಜಾರಿ

೩೨. ಪಿಡ್ಡಪ್ಪನು । ವಂದು ಮನಿಯ ಕಟ್ಟುಬೇಕಂತ ಮಾಡೋ ಅಷ್ಯಕ್ಕೆ । ಆ ಲಾಳಗೊಂಡರು । ಅಂಶವು ಯಲ್ಲಾ ಹೋಯಿತು । ವಬ್ಬ ಯಿಬ್ಬರು ಇದ್ದ ಕಾಲಕ್ಕೆ । ನಾ ದಾರಿಯಾಗಿ ಹೋ

೩೩. ಗಲು । ಬುಕ್ಕನಗೌಡ ನಾಯ್ಕತನದಗೌಡ ಆಗಲಾಗಿ । ಆತನೆ ಹೇಳಿಕೊಂಡ ವಿವರು । ನಮಗೆ ಅವರು ಹೀಗೆ ಸ್ಥಲದನಾರ್ಥ ಕೊಟ್ಟಿದ್ದರು । ನೀವು ನಡೆಸಿಕೊಡೋದು

೩೪. ಇರಬಹುದೋ ಯಿಲ್ಲವೋ । ಯಂಬೋ ಪ್ರಕಾರ ವಿಚಾರಿಸಲಾಗಿ । ಆ ಬುಕ್ಕನಾಯಕನಗೌಡನು ಅಂದದ್ದು ವಳಿತು । ಅವರ ವಚನ ನಮ್ಮದು । ಆ ಮಾತಿಗೆ ತತ್ತ

೩೫. ಳಯಿಲ್ಲಯಂದು ಹೇಳಲಾಗಿ । ಘಟ್ಟ್ಯಾಗಿ ಅಲ್ಲಿತನಕ ಬಂದು । ಜಾಗ ನೋಡಿರಿಯಂದು ಕೇಳಲಾಗಿ । ತಿರಗಿ ಮತ್ತು । ವಂದು ಕೋಟೂಡಿ ಜಾಗ .....

೩೬. ಆ ಮಾತಿಗೆ ಪೂಜಾರಿ ಹಿರೇ ಪಿಡ್ಡಪ್ಪ ವಪ್ಪಿಕೊಂಡು । ಮನಿಯ ಕಟ್ಟಿಕೊಟ್ಟು । ಮಜ್ಜನದ ಬಿಂದಿಗಿ ಅವನ ಸ್ವಾಧೀನ ಮಾಡಿಕೊಟ್ಟನು । ಆಮೇಲೆ ಆ ಯಳೇಪೂಜಾ

೩೭. ರಿ । ಆಬ್ಬಿಜಡಿ ನಾಗಮ್ಮ । ನೋಟಗಾರ ಪಿಡ್ಡಮ್ಮ ಯಿವರು ಈ ಸಂಣವನ ಜತನ ಮಾಡಿಕೊಂಡು । ಇರುಯಂದು ಕರೆಸಿ । ದೈವದವರು ಹೇಳಿದರು । ಆ ಮಾತಿಗೆ

೩೮. ಆ ಹೆಂಣುಮಕ್ಕಳು । ಇವ ವಬ್ಬ ನಿಮ್ಮವನು । ಐದುಮಂದಿ ಇವರೊಳಗೆ । ಮುಂದೆ ಹೇಗೆ ನಡದಿತುಯಂದು ವಿಚಾರಿಸಲು । ದೈವಕ್ಕೆ ಕೇಳಲಾಗಿ । ಆ ದೈವ ಮಾ

೩೯. ತು ಮುಗಿಸಿದ್ಹಾ । ಗುಡಿವಳಗೆ ಪೂಜಾರಿಕಿ ಇದೇ ಸಂಣವ ಮಾಡಬೇಕು । ವಂದ ಆದಾಯ ಆರು ಮಂದಿ ಸವನಾಗಿ । ಆರು ಪಾಲಿನಿಂದ ತೈಗದುಕೊಳ್ಳಬೇಕು ।

೪೦. ಮತ್ತು ಶಿಷ್ಯಮಕ್ಕಳು ಕರಸಿದರೆ ಈ ಸಂಣಾತನು ನಿಂಮ ಬೆಂನ ಹಿಂದೆ ಕರಕೊಂಡು ಹೋಗಬೇಕು । ಮತ್ತು ಅಗ್ನಿ ಆರುಕಿ ಬಂದ ಸ್ವೋಸ್ಥಿಗೆ । ಇವನು ಕಾರ

೪೧. ಣಯಿಲ್ಲ । ಯೇನಾದ್ದು ಹೊರಗಣದು । ನೀವು ಐದು ಮಂದಿ ಹಂಚಿಕೊಂಡು ವುಣಬೇಕು । ಯಂದು ಬುದ್ಧಿವಂತರು ಹೇಳಿ ಮನಿಯಲ್ಲಿಯಿಟ್ಟರು । ಇತ್ತಲಾಗಿ ಮೂರುಶೇರು ಜೋ

೪೨. ಳ ತುಂಬುವದರೊಳಗಾಗಿ ದೇವರು ಹಿರಿದು ಕೊಂದನು । ಅದು ಯೇನು ಕಾರಣ ಅಂದರೆ । ನಾನು ನಿನ್ನ ಭಕ್ತಿ ನೋಡಿ ಮೆಚ್ಚಿ ಬಂದರೆ ಸರಿ । ಇಲ್ಲವಾದರೆ ನಂನ ವುದಾಸೀನ ಮಾಡಿದವ ಸೊ

Scanned with CamScanner

೪೩. ಕ್ಕನವಗೆ ಕೊಟ್ಟೆಯೆಂದು ಹಿರಿದು ಕೊಂದೆನು । ಆಮೇಲೆ ಈ ಐದು ಮಂದಿ । ಮಕ್ಕಳು ಆತನ ಯಿಂದಿಟ್ಟು ಪೂರ್ವದಲ್ಲಿ
ದೈವದವರು ಮಾತಾಡಿದ ಪ್ರಕಾರ । ಇರಲಾಗಿ ಇವರು ಐದುಮಂದಿ
೪೪. ಪೈಕಿಲೆ ಮೂರುಮಂದಿ । ಆ ಹೆಂಣುಮಕ್ಕಳುನ ಮಾಡಿಸಿಕೊಂದರು । ಇತ್ತ ಕಡೆ ನರಸಪ್ಪ ಜಟ್ಯಪ್ಪ ಇವರು ಮಕ್ಕಳು
ವುಳಿದರು । ಅದರ ವಂಶಾವಳಿ ತಪಸೀಲ್ ॥
೪೫. ಬಡಕಪ್ಪನ ಸಂತತಿಯಿಲ್ಲ । ನರಸಪ್ಪ ಚಿಟ್ಟಪ್ಪ ಇವರ ವಂಶನೆಯಿಲ್ಲ । ಯಲ್ಲಪ್ಪ ಬುಡ್ಡಪ್ಪರ ಹೊಟ್ಟಯಲ್ಲಿ । ಸಕ್ಕರಪ್ಪ
ವುತ್ತಪತ್ಯೆ ಆಗೋದರೊಳಗಾಗಿ । ಬುಡ್ಡಪ್ಪನು
೪೬. ತೀರಿದನು । ನಾಲ್ವರು ಹೆಂಣುಮಕ್ಕಳು । ಆಮೇಲೆ ಆತನ ಮಗ ಸಕ್ಕರಪ್ಪನು । ತಾಯಿ ಶಿ.....ನು ಹಾನಿಗುಂದಿ
ಶೀಮಿಗೆ । ಮಗನ ತಲೆನ ತ್ಯೆಗದುಕೊಂಡು
೪೭. ತಮ್ಮ ತಂಗಿ ಮನಿಗೆ ಹೋಗಿ । ಮಗನ ದೊಡ್ಡವನ ಮಾಡಿ ಸಾಕಲಾಗಿ । ಇಲ್ಲಿ ಬಡಕಪ್ಪ ನಂನ ಅಂಶ
ಹೋಯಿತೆಂದು । ಹುಡುಕಿ ತಂದು ತನ್ನ ಬೀಜಾವರಿ ನಳಿತಕೊಂಡು ಬಂದು । ಬಡ
೪೮. ಕಪ್ಪನು । ನಿಲೋಗಲ್ಲಿಗೆ ಬಂದು । ಶ್ರೀ ದುರಗಮ್ಮನ ಪೂಜಾರಿ ಪಿಡ್ಡಪ್ಪನ । ಬಳಿಯಲ್ಲಿ ಹೆಂಣು ತ್ಯೆಗೆದನು । ಆ
ಹೆಂಣು ಮಗಳ ಹೆಸರು ನಾಗಮ್ಮ । ಈ ಪ್ರಕಾರ ಇರ
೪೯. ಲಾಗಿ । ಇವರತಾ ಲೋಕದ ಗುರುಗಳು । ಮುರಸಗೊಂಡ । ವಿಠಲರಾಯನ ಮಕ್ಕಳು । ಗದ್ದ್ಯಪ್ಪ ಲಿಂಗಪ್ಪ । ಈ
ಪ್ರಕಾರ ಏಳುಮಂದಿ ಅವರವರೊಳಗೆ ಶಿಷ್ಯರು ಹಂಚಿಕೊಂ
೫೦. ಡರು । ಶಿಷ್ಯಮಕ್ಕಳ ಹೆಸರು
೫೧. ಗದ್ದ್ಯಪ್ಪನ ಶಿಷ್ಯರು – ಸಂಕಪ್ಪ .....
೫೨. ಮುರಸಗೊಂಡಲಿಂಗನ ಶಿಷ್ಯರು – ಏಳೇ ಪೂಜಾರಿ
೫೩. ಕಾಳಾಯುಕ್ತಿನಾಮ ಸಂ॥ ಜ್ಯೇಷ್ಠ ಬ ॥ ೧೨ ಯಲ್ಲು ಮೌಜೆ ಹುವ್ವಿನಭಾವಿ ಪೂಜಾರಿ ಶಿವಪ್ಪಗೆ
೫೪. ನಾಡಗೌಡ ತಿಮ್ಮಪ್ಪನವರು । ಬರ್ಸಿಕೊಟ್ಟ ಮಿರಾಸಿನಿ ಕಾಗದ ಏನಂದ್ರೆ = ಸಂ। ೧೨೦೮ನೇ
೫೫. ಅದಾಗಿ ನಿನಗೆ --ಇದೇ ಗ್ರಾಮದ ದೇವರು ಬೀರಪ್ಪನ ಪೂಜಾರಿಕಿ । ಮಾಡಿಕೊಂಡು ಇರೋದಕ್ಕೆ .....
೫೬. ಯ್ಯನ ಭಾಗಕ್ಕೆ ಬಂದ ಪಟ್ಟ । ನಾಲ್ಕು ಮಾನದ ಹೊಲ ನಿಮಗೆ ಕೊಟ್ಟುಯಿದ್ದೀತು । ಸುಖದಲ್ಲಿ ವುಂಡುಕೊಂಡು
೫೭. ಸರಕಾರದ ಶೇವಿ ವಳಗೆ ನೆಟ್ಟಗೆ ಆಜೂರು ಇದ್ದು । ಸೂರ್ಯಚಂದ್ರಾದಿಗಳು ಯಿರುವ ಪರಿಯಂತರ ನೀನು
೫೮. ಅನುಭವ ಮಾಡುವದು॥ ಹೀಗೆಂದು ಬರದುಕೊಟ್ಟ ಕರಾರು ಸಹಿ–ಹಾಗೂ ನಿಧಿ ಮಾಡಿಕೊಡುವದು ॥
೫೯. ಭೀಮು ॥ ನರಸಪ್ಪ ॥ ಗೌಡ ಹನುಮಂತನ ವಪ್ಪಿತು ॥
೬೦. ಕಾ ॥ ಭಿವಂಣನ ವಪ್ಪಿತು ॥
೬೧. ಇಲ್ಲಿಗೆ ಬರಹ ಸಮಾಪ್ತ ಶ್ರೀಶ್ರೀಶ್ರೀಶ್ರೀಶ್ರೀಶ್ರೀ॥

೨. ದಾಖಲೆಯ ಸ್ವರೂಪ

ಉದ್ದನೆಯ ಸುರುಳಿಯಾಕಾರದ ಕಾಗದ ರೂಪದ ದಾಖಲೆಯಲ್ಲಿ ೬೧ ಸಾಲುಗಳನ್ನು ಒಳಗೊಂಡ ಪತ್ಯವಿದೆ. ಆರಂಭದಲ್ಲಿ ಚೆನ್ನಬಸವ, ಗಣೇಶ, ಅನ್ನಪೂರ್ಣೆ, ಅಮರಗುಂಡನನ್ನು ಸ್ಮರಣೆ ಮಾಡಲಾಗಿದೆ. ಶಕೆ ೧೮೭೨ (ಕ್ರಿ.ಶ. ೧೯೫೦) ವಿಕೃತಿನಾಮ ಸಂವತ್ಸರ ಆಶ್ವೀಜ ಶುದ್ಧ ಬಹುಳ ೧೧ ಇಂದು(ಸೋಮ)ವಾರದಂದು ನಿಲೋಗಲ್ ಕುರುಬರ ಕೆಂಪಹನುಮಪ್ಪನ ಹಿರೇ ಸೊಸೆ ಪಾವಡ್ಯವ್ವ ಮತ್ತು ಬೀಮಪ್ಪನ ಮಗನಾದ ಬೀರಪ್ಪ ಇವರು ಗುರುಹಿರಿಯರ ಸಮಕ್ಷಮದಲ್ಲಿ ಬರೆದಿರಿಸಿದ್ದ ಪತ್ರವನ್ನು ಮತ್ತೆ ಹೊಸ ಕಾಗದಪತ್ರದಲ್ಲಿ ಬರೆಸಿದ್ದಾರೆ.

ಆ ಪತ್ರದಲ್ಲಿರುವ ವಿವರಗಳನ್ನು ಈ ಕೆಳಗಿನಂತೆ ಕ್ರೋಢೀಕರಿಸಬಹುದು: ಆ ಕಾಲಕ್ಕೆ ರಾಯಚೂರನ್ನಾಳುತ್ತಿದ್ದವನು ರಾಚದಡ್ಡಿ. ಮಾನ್ವಿ ಸೀಮೆಯಲ್ಲಿ ಗೊಲ್ಲದಿನ್ನಿಗೌಡಕಿ, ಅಲ್ಲಿಂದ ಮೇದಿರಾಯನಕೋಟಿ, ಗುಡುಗುಂಟಿ ಪೈಕಿ ನಕಚೇರಿ, ಯರಡೋಣಿ ಕೇಶವರಾಯ, ಬೂದಿಹಾಳು ಕಣಿಮಿಯಲ್ಲಿ ಪೂಜಾರಿಗಳಾದ ಹಿರೇಕುಶಿರಾಯ ಮತ್ತು ಚಿಕ್ಕಕುಶಿರಾಯ ಇವರಿಬ್ಬರು ಹುವ್ವಿನಭಾವಿ ಬೀರಪ್ಪಗೆ ಹುತ್ತಿನಗಡ್ಡೆಯ ಮೇಲೆ ಏಳು ತಳಕಿನ ಬೇವಿನಮರಗಳು, ಅದರ ಒಳಗೆ ಉಪ್ಪಿಯ ಕಂಬಿ. ಅದನ್ನು ಕುಶಿರಾಯನೆಂಬ ಪೂಜಾರಿಯು ಏಳು ತಳಕಿನ ಬೇವಿನಮರಗಳನ್ನು ಕಡೆದು, ಹುತ್ತಿನಗಡ್ಡೆಯನ್ನು

Scanned with CamScanner

ಹೊನ್ನಯ್ಯನಿದನು. ಆಗ ಸ್ವಾಮಿ(ಶಿವ)ಯು ಕುಶಿರಾಯಗೆ ನಿಜರೂಪ ತೋರಿದನು. ಆಗ ಗುಡಿ ಕಟ್ಟಿಸಿದಾತ ಬಡೆದುವ್ವರಾಯ. ಆಗ ಗುಡಿ ಮುಂದೆ ಸಿದ್ಧರ(ರೇವಣಸಿದ್ಧೇಶ್ವರ) ಮಠ ಹುಟ್ಟುವ ಕಾಲಕ್ಕೆ ಅಲ್ಲಿ ಎಣ್ಣಿ ಭಂಡಾರ ಕಂಡರು. ಆಗ ಗುಡಿ ನುಗಿದ ಮಿತಿ ಶಾಲ್ವರಿನಾಮ ಸಂವತ್ಸರದ ಫಾಲ್ಗುಣ ಶು॥೯ ಗುರುವಾರ.

ಆ ಕಾಲಕ್ಕೆ ಬೇಡರಗೌಡರು ಭೂಮಿಗೆ ಬಂದರು. ಅಲ್ಲಿಗೆ ಕುಶಿರಾಯನ ಮಕ್ಕಳು, ಹಿರೇಪಿಡ್ಡಪ್ಪ ಮತ್ತು ಚಿಕ್ಕಪಿಡ್ಡಪ್ಪ, ಎಳೆ ಪೂಜಾರಿಯಂಬಾತನು ಹುಡೇದವರ ಮಗ. ಚಿಕ್ಕಪಿಡ್ಡಪ್ಪನಿಗೆ ಮಕ್ಕಳು ಇಲ್ಲದ್ದರಿಂದ ಹೆಂಡತಿ ಕಡೆಯವರನ್ನು ತಂದು ಸಾಕುತ್ತಿದ್ದನು. ಈ ಕಡೆ ನಾಡಗೌಡನು ನಾಡಿಗತನ ದೇಶಗತಿಯಿತ್ತು ಅಲ್ಲಿಂದ ಮೇದಿರಾಯನಕೋಟೆ, ನವಮೇದಿರಾಯನಕೋಟೆ ಆಳುತ್ತಿದ್ದನು. ಆತನ ಬಳಿಯಲ್ಲಿ ಬಂದು ನಿಂತ ನಾಡಗೌಡ ಸಂಗರಡ್ಡಿ ಕಾಮವ್ವಳು ನವಮೇದಿರಾಯನಿಗೆ ಅಜವಾನದ ಸಮಸ್ತ ನಾರಿಕೊಂಬಿನ ಹಿಂಡಿಪಲ್ಲೆ ಮತ್ತು ಮಾಂಸವನ್ನು ಮಾಡಿ ಊಣಬಡಿಸಿದಳು. ಆ ಊಟಕ್ಕೆ ಮೆಚ್ಚಿ ನವಮೇಧಿರಾಯನು "ಏನು ಬೇಡತಿ ಬೇಡು" ಎಂದನು. ಅದಕ್ಕೆ ಅವರು "ಕೋಟೆಯ ಸೀಮೆ ಮತ್ತು ಹಳ್ಳಿ ನಾಡಗೌಡಕಿ ಮತ್ತು ಬಿಳೇಹಾಳು ನೌಡಕಿ, ಏರುವಾಮರದ ಗೌಡಕಿ" ಯನ್ನು ಸಂಗರಡ್ಡಿ ಕಾಮವ್ವ ಪಡೆದರು.

ಕಾಮವ್ವಳ ಹೊಟ್ಟೆಯಲ್ಲಿ ಗೌಡಪ್ಪ ಹುಟ್ಟಿದನು. ನಾಡಗೌಡ ಹಿರೇತಿಮ್ಮಪ್ಪ ಹಾಗೂ ದೇಸಾಯಿಗಳು ಕೋಟೆಗೆ ಬಂದರು. ನವಮೇದಿರಾಯನ ಆಳಿಕೆಯಲ್ಲಿ ಕೋಟೆ, ಹಳ್ಳಿದೇಶಗತಿ ಸರನಾಡಗೌಡಕಿಯನ್ನು ಪಡೆದರು. ಆಗ ಇದ್ದವರು ದೇಸಾಯಿ ಹಿರೇಸ್ವಾಮಪ್ಪ, ಚಿಕ್ಕಪ್ಪ ಸೋಮಪ್ಪ ದೇಸಾಯಿ, ಗೌಡಪ್ಪ ಹಾಗೂ ನಾಡಕುಲಕರಣಿ, ಹಿರೇಬೆನಕಪ್ಪ, ಚಿಕ್ಕಬೆನಕಪ್ಪ.

ಹೀಗೆ ರಾಜಿಕೆ ಮಾಡುತ್ತ ಇರಲಾಗಿ, ಕೊಪ್ಪಳದ ಸೀಮೆಯಿಂದ ಶಿಷ್ಯರು ದೇವರಿಗೆ ಬಂದರು. ಹಿರೇಪಿಡ್ಡಪ್ಪನ ಹೊಟ್ಟೆಯಲ್ಲಿ ಬಡಕಪ್ಪ – ನರಸಪ್ಪ – ಪಿಡ್ಡಪ್ಪ – ಜಟ್ಟೆಪ್ಪ – ಯಲ್ಲಪ್ಪ ಹೀಗೆ ಐದು ಮಂದಿ ಗಂಡುಮಕ್ಕಳು. ಚಿಕ್ಕಪಿಡ್ಡಪ್ಪ ಸಾಕಿದ ಮಗ. ಇವರಲ್ಲಿ ಕಲಾಪು(ಜಗಳ) ಬರಲಾಗಿ ಶಿಷ್ಯಮಕ್ಕಳು ಹಾಗೂ ದೈವದವರು ಸಮಯ ನೋಡಿಕೊಂಡು ನ್ಯಾಯ ಬಗೆಹರಿಸಲು ಸೇರಿದರು. ದೈವದವರು ಹೇಳಿದ್ದು – ಸಾಕಿದವನಾದರೂ ಮಗ, ಸೊಕ್ಕಿನವನಾದರೂ ಮಗ. ಆದ್ದರಿಂದ ಇವನಿಗೆ ಏನು ಹಚ್ಚುತ್ತಿ ಎಂದು. ಆ ಮಾತಿಗೆ ಹಿರೇಪಿಡ್ಡಪ್ಪ ಒಪ್ಪಿಕೊಂಡು ತನ್ನ ಮಗನನ್ನು ಕರೆಸಿಕೊಂಡು ತಮ್ಮನ ಮಗನಿಗೆ ಪೂಜಾರಿಕಿಯನ್ನು ಕೊಟ್ಟು ದೈವದವರ ಮೂಲಕ ಪಟ್ಟವ ಕಟ್ಟಿ ಮಗನೆನಿಸಿಕೊಂಡನು. ಚಿಕ್ಕವನಿಗೆ ಗ್ರಾಮದ ಸ್ವೋಸ್ತಿ ಇದ್ದವರು, ಎಲ್ಲರೂ ಕೂಡಿ ಅವರ ದಡ್ಡಿಯಲ್ಲಿ ಸಾಲ ತೆಗೆದುಕೊಂಡು ಎಳೇ ಪೂಜಾರಿಗೆ, ಚಿಕ್ಕಪಿಡ್ಡಪ್ಪನ ಮಗನಿಗೆ ಬೇರೆ ಒಂದು ಮನೆ ಬೇಕೆಂದು ಕೇಳಿದರು. ಆಗ ದೈವದವರು "ನಿನ್ನ ತಮ್ಮನ ಮಗ ಎನಿಸಿದ ಬಳಿಕ ನಿನ್ನ ಸ್ಥಲದಲ್ಲಿ ಮನೆ ಕೊಡಬೇಕೆಂದು ಹೇಳಿದರು. ಆ ಮಾತಿಗೆ ಹಿರೇ ಪಿಡ್ಡಪ್ಪನು "ನನ್ನ ಹೊಟ್ಟೆಯಲ್ಲಿ ಐದುಮಂದಿ ಮಕ್ಕಳು, ಇವರಿಗೆ ಅವರಿಗೆ ಕಾಲಾಂತರದಲ್ಲಿ ನಡೆಯಲಾಗದು" ಎಂದಾಗ ಅಲ್ಲಿದ್ದ ಲಾಳಗೊಂಡರು ಸೊಸ್ಥಿಯವರು ಒಳ್ಳೆಯದಾಗಲಿಯೆಂದು ಒಪ್ಪಿ ತಮ್ಮ ಮನೆಯ ಹಿರೇವಡಿಯನ ಬಳಿಯಲ್ಲಿ ಹನ್ನೆರಡು ಕಂಬದ ಮನೆಯ ಪಾಯ ಹಾಕಿ ಕೋಡಿಸಿ ಮನೆಯ ಕಟ್ಟಿಕೊಟ್ಟು ಮಜ್ಜನದ ಬಿಂದಿಗಿ ಅವನ ಸ್ವಾಧೀನ ಮಾಡಿಕೊಟ್ಟನು. ಆಮೇಲೆ ಎಳೇ ಪೂಜಾರಿ, ನಾಗಮ್ಮ, ನೋಟಗಾರ ಪಿಡ್ಡಮ್ಮ ಇವರು ಸಣ್ಣವನ ಜತನ ಮಾಡಿಕೊಂಡು ಇರು ಎಂದು ದೈವದವರು ಹೇಳಿದರು. ಆ ಮಾತಿಗೆ ಆ ಹೆಣ್ಣುಮಕ್ಕಳು "ಇವ ಒಬ್ಬ, ನಿಮ್ಮವನು, ಐದು ಮಂದಿ ಇವರೊಳಗೆ ಮುಂದೆ ಹೇಗೆ ನಡದೀತು" ಎಂದು ವಿಚಾರಿಸಿದರು. ಅದಕ್ಕೆ ದೈವದವರು "ಗುಡಿವಳಗೆ ಪೂಜಾರಿಕಿ ಇದೇ ಸಣ್ಣವ ಮಾಡಬೇಕು. ಒಂದು ಆದಾಯ ಆರುಮಂದಿ ಸಮನಾಗಿ ಆರು ಪಾಲಿನಿಂದ ತೆಗೆದುಕೊಳ್ಳಬೇಕು. ಮತ್ತು ಶಿಷ್ಯಮಕ್ಕಳು ಕರೆಸಿದರೆ ಈ ಸಣ್ಣತನು ನಿಮ್ಮ ಬೆನ್ನ ಹಿಂದೆ ಕರೆದುಕೊಂಡು ಹೋಗಬೇಕು. ನೀವು ಐದು ಮಂದಿ ಹಂಚಿಕೊಂಡು ಉಣ್ಣಬೇಕು" ಎಂದು ಬುದ್ಧಿವಂತರು ಹೇಳಿ ಮನೆಯಲಿಟ್ಟರು. ಈ ಐದು ಮಂದಿ ಪೈಕಿ ಬಡಕಪ್ಪನ ಸಂತತಿಯಿಲ್ಲ. ನರಸಪ್ಪ ಜಟ್ಟೆಪ್ಪ ಇವರ ವಂಶಾನೂ ಇಲ್ಲ. ಯಲ್ಲಪ್ಪ ಬುಡ್ಡಪ್ಪರ ಹೊಟ್ಟೆಯಲ್ಲಿ ಸಕ್ಕರಪ್ಪ ಹುಟ್ಟುವುದರ ಒಳಗಾಗಿ ಬುಡ್ಡಪ್ಪನು ತೀರಿದನು. ಬಡಕಪ್ಪನು ನಿಲೋಗಲ್ಲಿಗೆ ಬಂದು ದುರುಗಮ್ಮನ ಪೂಜಾರಿ ಪಿಡ್ಡಪ್ಪನ ಬಳಿಯಲ್ಲಿ ಹೆಣ್ಣು ತೆಗೆದನು. ಆ ಹೆಣ್ಣುಮಗಳ ಹೆಸರು ನಾಗಮ್ಮ. ಈ ಪ್ರಕಾರವಾಗಿ ಲೋಕದ ಗುರುಗಳು, ವಿಠಲರಾಯನ ಮಕ್ಕಳು, ಗದ್ಯಪ್ಪ ಲಿಂಗಪ್ಪ ಈ ಪ್ರಕಾರ ಏಳು ಮಂದಿ ಅವರವರೊಳಗೆ ಶಿಷ್ಯರು ಹಂಚಿಕೊಂಡರು. ಶಿಷ್ಯಮಕ್ಕಳ ಹೆಸರು ಗದ್ಯಪ್ಪ > ಆತನ ಶಿಷ್ಯರು ಸಂಕಪ್ಪ > ಮುರಗೊಂಡಲಿಂಗನ ಶಿಷ್ಯರು > ಎಳೇ ಪೂಜಾರಿ.

ಹೀಗೆ ಹುವ್ವಿನಭಾವಿ ಪೂಜಾರಿ ಶಿವಪ್ಪಗೆ ನಾಡಗೌಡ ತಿಮ್ಮಪ್ಪನವರು ಬರಿಸಿಕೊಟ್ಟ ಮಿರಾಸಿನಿ ಕಾಗದ. ಇದೇ ಗ್ರಾಮದ ದೇವರು ಬೀರಪ್ಪನ ಪೂಜಾರಿಕಿ ಮಾಡಿಕೊಂಡು ಇರೋದಕ್ಕೆ ನಾಲ್ಕು ಮಾನದ ಹೊಲ ಕೊಟ್ಟುಯಿದ್ದಿತು. ಸುಖದಲ್ಲಿ ಉಂಡುಕೊಂಡು ಸರಕಾರದ ಸೇವೆಯೊಳಗೆ ನೆಟ್ಟಗೆ ಆಜೂರ ಇದ್ದು ಸೂರ್ಯಚಂದ್ರಾದಿಗಳು ಇರುವತನಕ

Scanned with CamScanner

ನೀನು ಅನುಭವ ಮಾಡುವುದು. ಹೀಗೆಂದು ಬರೆದುಕೊಟ್ಟ ಕರಾರು ಪತ್ರ. ಸಹಿ ಹಾಕಿದವರು ಭೀಮು – ನರಸಪ್ಪ – ಗೌಡ ಹನಮಂತ – ಭೀಮಣ್ಣ ಇಲ್ಲಿಗೆ ಈ ಬರಹ ಸಮಾಪ್ತವಾಗಿದೆ.

೩. ಕಾಗದ ಪತ್ರದ ವಿಶ್ಲೇಷಣೆ

ಅರುವತ್ತೊಂದು ಸಾಲಿನ ಈ ಕಾಗದಪತ್ರವನ್ನು ಪರಿಶೀಲಿಸಿದಾಗ ಹುವ್ವಿನಭಾವಿ ಬೀರಪ್ಪನ ಗುಡಿಯ ಪೂಜಾರಿಕೆಗೆ ಸಂಬಂಧಿಸಿದ್ದು ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಜೊತೆಗೆ ಆ ಕಾಲದ ಅನೇಕ ಸಂಗತಿಗಳನ್ನು ಇದು ಬಿಚ್ಚಿಡುತ್ತದೆ. ಆ ಸಂಗತಿಗಳನ್ನು ಹೀಗೆ ಗುರುತಿಸಲಾಗಿದೆ.

೧. ಆ ಕಾಲಕ್ಕೆ ರಾಯಚೂರನ್ನು ಆಳುತ್ತಿದ್ದವನು ರಾಚದಡ್ಡಿ. ಮಾನ್ವಿ ಸೀಮೆಯ ಗೊಲ್ಲದಿನ್ನಿ, ಮೇದಿರಾಯನಕೋಟೆ, ಚಿಕ್ಕನಾಯಕನಹಳ್ಳಿ, ಗುಡಗುಂಟಿ, ಯರಡೋಣಿ ಬೂದಿಹಾಳು ಪ್ರದೇಶಗಳ ಗೌಡಕಿಯ ಕುರಿತು ಉಲ್ಲೇಖಗಳಿವೆ. ಮೇದಿರಾಯನಕೋಟೆಯನ್ನು ಆಳುತ್ತಿದ್ದವನು ಸಂಗರಡ್ಡಿ. ಆತನ ಹೆಂಡತಿ ಕಾಮವ್ವ, ಜೊತೆಗೆ ಬಿಳೇಹಾಳು, ವಿರುಪಾಪುರ ಗೌಡಕಿಯೂ ಈತನಿಗೆ ಇದ್ದದ್ದು ಗೊತ್ತಾಗುತ್ತದೆ. ಹಿರೇಸೋಮಪ್ಪ – ಚಿಕ್ಕ ಸೋಮಪ್ಪ ದೇಸಾಯಿತನ ಮಾಡುತ್ತಿದ್ದರು. ಹಿರೇ ಬೆನಕಪ್ಪ – ಚಿಕ್ಕ ಬೆನಕಪ್ಪ ನಾಡಕುಲಕರ್ಣಿಯಾಗಿ ಕಾರ್ಯನಿರ್ವಹಿಸುತ್ತಿದ್ದುದನ್ನು ಸೂಚಿಸುತ್ತದೆ.

೨. ಹುವ್ವಿನಭಾವಿ ಬೀರಪ್ಪನ ಗುಡಿ ಕಟ್ಟಿಸಿದವನು ಬಡೆಡುವ್ವರಾಯ. ಗುಡಿ ಮುಗಿದದ್ದು ಶಾಲ್ವರಿನಾಮ ಸಂವತ್ಸರ ಫಾಲ್ಗುಣ ಶುಕ್ಲಪಕ್ಷ ೯ ಗುರುವಾರ ಎಂದು ಈ ಪತ್ರದಲ್ಲಿ ದಾಖಲಾಗಿದೆ. ಇದಕ್ಕೆ ಪೂರಕವಾಗಿ ಗುಡಿಯ ಮಧ್ಯಭಾಗದ ಕಲ್ಲಿನ ತೊಲೆಯಲ್ಲಿ ೧೮೯೮ ಎಂದು ಕೆತ್ತಲಾಗಿದೆ.

೩. ಬೀರಪ್ಪನ ಗುಡಿಯ ಮೊದಲ ಪೂಜಾರಿ ಕುಶಿರಾಯ. ಆತನಿಗೆ ಹಿರೇಪಿಡ್ಡಪ್ಪ ಮತ್ತು ಚಿಕ್ಕಪಿಡ್ಡಪ್ಪ ಎಂಬ ಇಬ್ಬರು ಮಕ್ಕಳು. ಹಿರೇಪಿಡ್ಡಪ್ಪನಿಗೆ ಬಡಕಪ್ಪ – ನರಸಪ್ಪ – ಪಿಡ್ಡಪ್ಪ – ಜಟ್ಟೆಪ್ಪ – ಯಲ್ಲಪ್ಪ = ಐದು ಜನ ಮಕ್ಕಳು. ಚಿಕ್ಕಪಿಡ್ಡಪ್ಪನಿಗೆ ಮಕ್ಕಳಿಲ್ಲ.

೪. ಬೀರಪ್ಪನ ಗುಡಿಯ ಪೂಜಾರಿಕೆ ಸಂಬಂಧ ಅಣ್ಣತಮ್ಮಂದಿರಲ್ಲಿ ನ್ಯಾಯ ಬಂದಾಗ ಹಿರಿಯರು ಬಗೆಹರಿಸಿದ ವಿವರಗಳು ಇಲ್ಲಿವೆ. ಒಂದು ಆದಾಯ ಆರು ಮಂದಿ ಸಮನಾಗಿ ಆರು ಪಾಲು ಮಾಡಿಕೊಳ್ಳಬೇಕು ಎಂದು ಕೂಡಿದ ಹಿರಿಯರು ತಿರ್ಮಾನ ಕೊಟ್ಟರು.

೫. ಹಿರೇಪಿಡ್ಡಪ್ಪನ ಐದು ಜನ ಮಕ್ಕಳಲ್ಲಿ ಬಡಕಪ್ಪ, ನರಸಪ್ಪ ಜಟ್ಟೆಪ್ಪ ಇವರಿಗೆ ಮಕ್ಕಳಿಲ್ಲ. ಯಲ್ಲಪ್ಪ – ಬುಡ್ಡಪ್ಪರ ಹೊಟ್ಟೆಯಲ್ಲಿ ಸಕ್ಕರಪ್ಪ ಮತ್ತು ನಾಲ್ಕುಜನ ಹೆಣ್ಣುಮಕ್ಕಳು.

೬. ಮುರಸಗೊಂಡ, ವಿಠಲರಾಯನ ಮಕ್ಕಳು, ಗದ್ಯಪ್ಪ – ಲಿಂಗಪ್ಪ ಹೀಗೆ ಏಳುಮಂದಿ ಶಿಷ್ಯರನ್ನು ಹಂಚಿಕೊಂಡರು.

೭. ಕಾಳಯುಕ್ತಿನಾಮ ಸಂವತ್ಸರ ಜೇಷ್ಠ ಬಹುಳ ೧೨ ರಲ್ಲು ಹುವ್ವಿನಭಾವಿ ಪೂಜಾರಿ ಶಿವಪ್ಪಗೆ ನಾಡಗೌಡ ತಿಮ್ಮಪ್ಪನು ಈ ಕಾಗದವನ್ನು ಬರಸಿಕೊಟ್ಟಿದ್ದಾನೆ.

೮. ಹುವ್ವಿನಭಾವಿ ಬೀರಪ್ಪನ ಗುಡಿಯ ಅನತಿ ದೂರದ ಗುಡ್ಡದಲ್ಲಿ (ರೇವಣ)ಸಿದ್ಧರ ಮಠವಿದೆ. ಆ ಮಠದಲ್ಲೊಂದು ಗವಿ ಇದ್ದ ಕಾರಣದಿಂದ ಅದಕ್ಕೆ "ಗವಿಸಿದ್ಧ ಮಠ" ಎಂದು ಈಗ ಕರೆಯಲಾಗುತ್ತದೆ. ಮೂಲತಃ ಇದು ರೇವಣಸಿದ್ಧೇಶ್ವರ ಮಠ. ಅಲ್ಲಿನ ಪೂಜಾರಿಗಳು ಸಹ ಕುರುಬ ಕುಲದ ಒಡೆಯರು. ಅಲ್ಲಿ ಒಂದು ಬತ್ತಲಾರದ ಒಂದು ಹೊಂಡವಿದೆ.

೯. ಊರಿನ ಕುರುಬರ ಓಣಿಯಲ್ಲಿ ಒಂದು ಮನೆಯಲ್ಲಿ ಬೀರಪ್ಪನ ಗುಡಿಗೆ ಸಂಬಂಧಿಸಿದ ಕಳಸ, ಕುದುರೆಯೇರಿದ ಬೀರಪ್ಪನ ಐದು ಮೂರ್ತಿಗಳು, ಕುರಿಕಾಯುವ ಕೋಲು, ಉಣ್ಣೆ ಕತ್ತರಿಸುವ ಕತ್ತರಿ, ಡೊಳ್ಳು ಇತ್ಯಾದಿ ವಸ್ತುಗಳಿವೆ. ಊರ ಭಕ್ತರು ಈ ಮನೆಗೆ ಬಂದು ಅಲ್ಲಿರುವ ಮೂರ್ತಿಗಳಿಗೆ ಭಕ್ತಿ ಸಲ್ಲಿಸುತ್ತಾರೆ. ಪ್ರತಿವರ್ಷ ದೀಪಾವಳಿಯಲ್ಲಿ ಬೀರಪ್ಪನ ಪಲ್ಲಕ್ಕಿಗಳ ಮೆರವಣಿಗೆ ಪ್ರಸಾದ ವಿತರಣೆ ಇರುತ್ತದೆ. ಅಂದು ನಾನಾ ಕಡೆಯಿಂದ ಭಕ್ತಾದಿಗಳು ಆಗಮಿಸಿ ಭಕ್ತಿಕಾಣಿಕೆಯನ್ನು ಸಲ್ಲಿಸುತ್ತಾರೆ.

೧೦. ಹೀಗೆ ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಹುವ್ವಿನಭಾವಿ ಗ್ರಾಮವು ಕುರುಬರ ಆರಾಧ್ಯ ದೈವ ಬೀರಪ್ಪ ಮತ್ತು ಗುರು ರೇವಣಸಿದ್ಧೇಶ್ವರನ ನೆಲೆಯಾಗಿ ಪ್ರಸಿದ್ಧಿಯನ್ನು ಹೊಂದಿದೆ. .

[೧೨.೧೦.೨೦೧೯ರಂದು ಹುವ್ವಿನಭಾವಿ ಗ್ರಾಮಕ್ಕೆ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಬೀರಪ್ಪನ ಗುಡಿಯ ಪೂಜಾರಿ ಶ್ರೀ ಅಂಬಣ್ಣ ಅವರು ಉಪಯುಕ್ತ ಮಾಹಿತಿ ನೀಡಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಗಳಾದ ಶ್ರೀ ನಾಗಪ್ಪ ಹುವ್ವಿನಭಾವಿ, ಶ್ರೀ ಹನುಮೇಶ, ಕಛೇರಿ ಸಹಾಯಕ ಶ್ರೀ ತಾಯಪ್ಪ ಇವರೆಲ್ಲರಿಗೆ ನನ್ನ ಧನ್ಯವಾದಗಳು.]

Scanned with CamScanner

ISBN. 978-81-950402-1-6

www.karnatakaitihasaacademy.org
karnatakaitihasaacademy25@gmail.com
youtube.com/c/karnatakaitihasaacademy
karnatakaitihasaacademy

Scanned with CamSca

Scanned with CamScanner

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

22-6
(2)

ಹಸ್ತಪ್ರತಿ ವ್ಯಾಸಂಗ-೨೦

ಸಂಪಾದಕ
ಡಾ. ವೀರೇಶ ಬಡಿಗೇರ

Scanned with CamSca
Scanned with CamScanner

ಹಸ್ತಪ್ರತಿ ವ್ಯಾಸಂಗ - ೨೦

ಸಂಪಾದಕರು

ಡಾ. ವೀರೇಶ ಬಡಿಗೇರ

ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

Scanned with CamScanner

HASTAPRATI VYAASANGA - 20

Edited by
Dr. Veeresh Badiger
Professor
Dept. of Manuscriptology
Kannada University, Hampi
Vidyaranya 583 276

Published by
Dr. H.D. Prashanth
Director, Prasaranga
Kannada University, Hampi
Vidyaranya 583 276

Pages: 16 + ೨೩೪ Price: 220/-

www.kannadauniversity.org

First Impression: 2020

ISBN 978-93-87135-85-7

© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೨೦

ಬೆಲೆ: ರೂ. ೨೨೦/-

ಮುಖಪುಟ: ಕೆ.ಕೆ. ಮಕಾಳಿ

ಅಕ್ಷರ ಸಂಯೋಜನೆ
ಗೌತಮಿ ಗ್ರಾಫಿಕ್ಸ್, ಕಮಲಾಪುರ

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೪ ೨೭೬

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ: ೦೮೦-೨೨೩೭೩೫೮೮

ಮುದ್ರಣ
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with CamScanner

ಪರಿವಿಡಿ

ಕನ್ನಡವು ಕನ್ನಡವ ಕನ್ನಡಿಸುತಿರಬೇಕು / 3

ಮುಖ್ಯಸ್ಥರ ಮಾತು / 6

ಸಂಪಾದಕರ ಮಾತು / 10

ಭಾಗ : ಒಂದು / ೧

ಉದ್ಘಾಟನಾ ಸಮಾರಂಭ

೧. ಕನ್ನಡ ಹಸ್ತಪ್ರತಿಶಾಸ್ತ್ರ ಪರಿಚಯ / ೩
ಡಾ.ಎಸ್.ಡಿ. ಶೆಟ್ಟಿ

೨. ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಯ ಬಹುಮುಖ್ಯ ಕೇಂದ್ರ: ತೋಂಡೀತನ / ೨೦
ಡಾ. ಟಿ.ಎನ್. ನಾಗರತ್ನ

೩. ಹಸ್ತಪ್ರತಿಗಳು: ಕೂಡಿಕಟ್ಟಿದ ಜ್ಞಾನದ ಪ್ರತೀಕಗಳು / ೨೭
ಡಾ. ಸ.ಚಿ. ರಮೇಶ

೪. ಹಸ್ತಪ್ರತಿ ಸಮ್ಮೇಳನಗಳು ಪ್ರಾಚೀನ ಕಾವ್ಯ, ಶಾಸ್ತ್ರ, ಗ್ರಂಥಗಳ ಅಧ್ಯಯನಾಸಕ್ತಿಗೆ ಪ್ರೇರಕ / ೩೧
ಡಾ. ಎ. ಸುಬ್ಬಣ್ಣ ರೈ

೫. ಗ್ರಂಥಸಂಪಾದನೆಯಿಂದ ಗ್ರಂಥಾವತಾರಗಳೆಡೆಗೆ / ೩೪
ಪ್ರೊ. ವಿ. ಚಂದ್ರಶೇಖರ ನಂಗಲಿ

ಭಾಗ : ಎರಡು

ಡಾ. ಆರ್.ಸಿ. ಹಿರೇಮಠ ಅವರ ಜನ್ಮ ಶತಮನೋತ್ಸವ ಸಂಸ್ಮರಣೆ / ೪೩

೬ ಡಾ.ಆರ್.ಸಿ. ಹಿರೇಮಠ ಅವರ ಜೀವನ ಮತ್ತು ಸಾಧನೆ / ೪೫
ಡಾ. ಧನವಂತ ಹಾಜವಗೋಳ

೭ ಡಾ.ಆರ್.ಸಿ. ಹಿರೇಮಠ ಅವರ ಕಾವ್ಯಸಂಪಾದನೆ / ೫೮
ಡಾ. ಎಫ್.ಟಿ. ಹಳ್ಳಿಕೇರಿ

Scanned with CamScanner

೭

ಡಾ. ಆರ್.ಸಿ. ಹಿರೇಮಠ ಅವರ ಪ್ರಾಚೀನ ಕಾವ್ಯ ಪರಿಷ್ಕರಣಗಳ ವೈಧಾನಿಕತೆ

ಡಾ. ಎಫ್.ಟಿ. ಹಳ್ಳಿಕೇರಿ

ನನ್ನ ವಿಷಯ ಮಂಡನೆಯನ್ನು ಆರಂಭಿಸುವುದಕ್ಕೂ ಮುನ್ನ ಆರ್.ಸಿ.ಹಿರೇಮಠ ಅವರನ್ನು ನೋಡಿದ್ದು, ಅವರ ಉಪನ್ಯಾಸವನ್ನು ಕೇಳಿದ್ದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ಸೂಕ್ತವೆಂದು ನಾನು ಭಾವಿಸಿದ್ದೇನೆ. ನಾನು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಎಂ.ಎ. ಓದುವಾಗಿನ ಸಂದರ್ಭ. ೧೯೮೭-೮೮ನೆಯ ಶೈಕ್ಷಣಿಕ ವರ್ಷದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಕ್ರೀಡೆ-ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಪ್ರದಾನ-ಇಂಥ ಎಲ್ಲ ಕಾರ್ಯಕ್ರಮಗಳನ್ನು ವಾರ್ಷಿಕ ದಿನೋತ್ಸವದಂದು ಹಮ್ಮಿಕೊಳ್ಳಲಾಗಿತ್ತು. ಆ ದಿನೋತ್ಸವದ ಮುಖ್ಯ ಅತಿಥಿಯಾಗಿ ಆರ್.ಸಿ.ಹಿರೇಮಠ ಅವರನ್ನು ಆಹ್ವಾನಿಸಲಾಗಿತ್ತು. ನಾನು ಕ್ರಿಕೆಟ್‌ನಲ್ಲಿ ವಿಕೆಟ್ ಕೀಪರ್ ಆಗಿ ಆಟವಾಡಿದ್ದೆ, ನಮ್ಮ ತಂಡ ಅಂತಿಮ ವರ್ಷದ ತಂಡವನ್ನು ಸೋಲಿಸಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿತ್ತು. ಆ ಸಂದರ್ಭದಲ್ಲಿ ಆರ್.ಸಿ.ಹಿರೇಮಠ ಅವರಿಂದ ಬಹುಮಾನವನ್ನು ಸ್ವೀಕರಿಸಿದ ಛಾಯಾಚಿತ್ರ ಈಗಲೂ ನನ್ನ ಹತ್ತಿರವಿದೆ. ಆ ದಿನ ಆರ್. ಸಿ. ಅವರು ನಿರರ್ಗಗಳವಾಗಿ ಒಂದು ಗಂಟೆಗೂ ಹೆಚ್ಚು ಕಾಲ ಭಾಷಣ ಮಾಡಿದ್ದರು. ಕನ್ನಡ ಭಾಷೆ-ಸಾಹಿತ್ಯದ ಪ್ರಾಚೀನತೆ, ಸಂಸ್ಕೃತ ಸಾಹಿತ್ಯದ ಇತಿಹಾಸ, ಕನ್ನಡ ಸಾಹಿತ್ಯದ ಮೇಲಾದ ಅದರ ಪ್ರಭಾವ, ವಿದ್ಯಾರ್ಥಿಗಳು ಭವಿಷ್ಯತ್ತಿಗಾಗಿ ಹೇಗೆ ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು, ಇಂಥ ಅನೇಕ ವಿಚಾರಗಳ ಬಗ್ಗೆ ಮಾತನಾಡಿದ್ದರು. ಇಷ್ಟು ನೆನಪುಗಳು ನನ್ನೊಂದಿಗಿವೆ. ಈಗ ನೇರವಾಗಿ ನಾನು ಆರ್.ಸಿ. ಅವರ ಪ್ರಾಚೀನ

ಕಾವ್ಯ ಪರಿಷ್ಕರಣಗಳ ವೈಧಾನಿಕತೆ ಕುರಿತು ಕೆಲವೊಂದಿಷ್ಟು ಸಂಗತಿಗಳನ್ನು ಇಲ್ಲಿ ತಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

ಧಾರವಾಡ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾಗಿ-ಮುಖ್ಯಸ್ಥರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾಗಿ ಸುದೀರ್ಘವಾಗಿ ಸೇವೆ ಸಲ್ಲಿಸಿದ ಆರ್.ಸಿ.ಹಿರೇಮಠ ಅವರು ಬಹುಮುಖ ವಿದ್ವತ್ತನ್ನು ಹೊಂದಿದವರು. ಭಾಷೆ, ಸಾಹಿತ್ಯ, ಸಂಸ್ಕೃತಿ, ಧರ್ಮ, ಜಾನಪದ, ಶಾಸನ, ಹಸ್ತಪ್ರತಿ, ಗ್ರಂಥಸಂಪಾದನೆ-ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಅವರು ವಿದ್ವತ್ತಿನ ಗಣಿಯಾಗಿದ್ದರು. ಬೋಧನೆ-ಸಂಶೋಧನೆ-ಪ್ರಕಟಣೆಗಳ ಮೂಲಕ ಕನ್ನಡ ಅಧ್ಯಯನ ಪೀಠದ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿದ ಶ್ರೇಯಸ್ಸು ಆರ್.ಸಿ. ಅವರಿಗೆ ಸಲ್ಲುತ್ತದೆ. ವಿಶೇಷವಾಗಿ ವಚನ-ಕಾವ್ಯ ಗ್ರಂಥಗಳ ಶೋಧ ಪರಿಷ್ಕರಣೆಯ ಕೆಲಸ ವ್ಯಾಪಕವಾಗಿ ನಡೆದಿದ್ದು ಇವರ ಅವಧಿಯಲ್ಲಿಯೇ ಎಂಬುದು ಕನ್ನಡ ಅಧ್ಯಯನ ಪೀಠದ ಇತಿಹಾಸದಿಂದ ನಮಗೆ ತಿಳಿದುಬರುತ್ತದೆ.

ಕಳೆದ ಶತಮಾನದ ೫-೬-೭ನೆಯ ದಶಕ ಕನ್ನಡ ಅಧ್ಯಯನ ಪೀಠದ ಉಚ್ಛ್ರಾಯ ಕಾಲ. ಆರ್. ಸಿ.ಹಿರೇಮಠ ಅವರ ನೇತೃತ್ವದಲ್ಲಿ ಎಂ.ಎಸ್.ಸುಂಕಾಪುರ, ಎಂ.ಎಂ.ಕಲಬುರ್ಗಿ, ವಿಲಿಯಂ ಮಾಡ್ತಾ, ಎಂ.ಬಿ.ಕೊಟ್ರಶೆಟ್ಟಿ ಮೊದಲಾದ ವಿದ್ವಾಂಸರು ಬೋಧನೆಯ ಜೊತೆಜೊತೆಗೆ ಕನ್ನಡ ಸಾಹಿತ್ಯ ಸಮಾಜ ಸಂಸ್ಕೃತಿ ಕುರಿತು ಆಕರಗಳ ಶೋಧ-ಸಂಗ್ರಹ-ಪರಿಷ್ಕರಣ-ಅಧ್ಯಯನ ಕಾರ್ಯದಲ್ಲಿ ನಿರತರಾದರು. ಈ ಪರಂಪರೆಯ ವಾರಸುದಾರರಾಗಿ ವೀರಣ್ಣ ರಾಜೂರ, ಬಿ.ಆರ್.ಹಿರೇಮಠ, ಬಿ.ವಿ.ಶಿರೂರ ಅವರಂಥ ಯುವಕರು ಆ ಕಾಲಕ್ಕೆ ಆರ್.ಸಿ.ಅವರ ಕಾರ್ಯಕ್ಷೇತ್ರಗಳಾದ ಹಸ್ತಪ್ರತಿ-ಗ್ರಂಥಸಂಪಾದನೆ-ಶಾಸನ ಅಧ್ಯಯನವನ್ನು ಮುಂದುವರೆಸಿದರು.

ಪ್ರಾಚೀನ ಕಾವ್ಯಗಳ ಪರಿಷ್ಕರಣೆ-ಪ್ರಕಟಣೆಗಾಗಿ "ಕವಿಕಾವ್ಯ ಮಾಲೆ", ವಚನಗಳ ಪ್ರಕಟಣೆಗಾಗಿ "ವಚನ ವಾಙ್ಮಯ ಸಂಶೋಧನ ಸಂಪಾದನ ಪ್ರಕಟಣ ಯೋಜನೆ"ಗಳು ಆರಂಭವಾದವು. ಆ ಮೂಲಕ ಕನ್ನಡದ ಪ್ರಾಚೀನ ಕಾವ್ಯ-ಪುರಾಣ-ಶಾಸ್ತ್ರ ಗ್ರಂಥಗಳು, ವಚನ ಸಂಗ್ರಹ-ಸಂಕಲನ ಸಂಪಾದನ ಗ್ರಂಥಗಳು ಪರಿಷ್ಕರಣಗೊಂಡು ಬೆಳಕು ಕಾಣತೊಡಗಿದವು. ಪ್ರಸ್ತುತ ಸಂಪ್ರಬಂಧದಲ್ಲಿ ಆರ್.ಸಿ.ಹಿರೇಮಠ ಅವರ ಪ್ರಾಚೀನ ಕಾವ್ಯಗಳ ಪರಿಷ್ಕರಣೆಯ ವಿಶೇಷತೆ ಕುರಿತು ಕೆಲವು ಸಂಗತಿಗಳನ್ನು ಮಾತ್ರ ನಾನಿಲ್ಲಿ ಚರ್ಚಿಸಬಯಸುತ್ತೇನೆ.

ಆರ್.ಸಿ.ಯವರಿಗೆ ಕನ್ನಡ ಭಾಷೆಯ ಜ್ಞಾನದ ಜೊತೆಗೆ ಸಂಸ್ಕೃತ-ಪ್ರಾಕೃತಗಳಂಥ ಪ್ರಾಚೀನ ಭಾಷೆಗಳನ್ನು ಚೆನ್ನಾಗಿ ಓದಿಕೊಂಡಿದ್ದರು. ಆ ಭಾಷೆಯ ಸಾಹಿತ್ಯವನ್ನು ಬಲ್ಲವರಾಗಿದ್ದರು. ಹೀಗಾಗಿ ಪ್ರಾಚೀನ ಕನ್ನಡ ಕಾವ್ಯಗಳನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಆ ತಿಳುವಳಿಕೆ ಅವರಿಗೆ ತುಂಬ ಅನುಕೂಲಕರವಾಯಿತೆಂದೇ ಹೇಳಬೇಕು. ಮೇಲಾಗಿ ಕರ್ನಾಟಕದಲ್ಲಿ ಗ್ರಂಥಸಂಪಾದನೆಯ ಕಾರ್ಯ ಚುರುಕಾಗಿ ವೇಗವಾಗಿ ನಡೆಯುತ್ತಿದ್ದ

Scanned with CamScanner

ಕಾಲವು. ಮೈಸೂರಿನ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ, ವಿದ್ಯಾ ಸಂಶೋಧನಾಲಯಗಳಲ್ಲಿ ಗ್ರಂಥಸಂಪಾದನ ಕೆಲಸದಲ್ಲಿ ಅನೇಕ ಸಂಶೋಧಕರು ವ್ಯಾಪಕರು ತೊಡಗಿಕೊಂಡಿದ್ದರು. ವಿಶೇಷವಾಗಿ ಡಿ.ಎಲ್.ನರಸಿಂಹಾಚಾರ್ ಅವರು ವಡ್ಡಾರಾಧನೆ, ವಂಪರಾಮಾಯಣಗಳಂಥ ಪ್ರಾಚೀನ ಕಾವ್ಯಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದರು. ಹೀಗಾಗಿ ಈ ಕೆಲಸವನ್ನು ಗಮನಿಸಿದ ಆರ್.ಸಿ.ಹಿರೇಮಠ ಅವರು ಕರ್ನಾಟಕ ವಿಶ್ವವಿದ್ಯಾಲಯವಲ್ಲಿಯೂ ಹಸ್ತಪ್ರತಿಗಳ ಸಂಗ್ರಹ, ಪರಿಷ್ಕರಣ ಕಾರ್ಯವನ್ನು ಆರಂಭಿಸಿಯೇ ಬಿಟ್ಟರು. ೧೯೫೩ರಲ್ಲಿ ಭೀಮಕವಿಯ ಬಸವ ಪುರಾಣ ಭಾಗ ೧ನ್ನು ಪರಿಷ್ಕರಿಸಿ ಪ್ರಕಟಿಸುವುದರ ಮೂಲಕ ಆರ್.ಸಿ. ಅವರು ಗ್ರಂಥಸಂಪಾದನ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದರು. ಅಲ್ಲಿಂದ ಆರಂಭವಾದ ಅವರ ಗ್ರಂಥ ಪರಿಷ್ಕರಣ ಕಾರ್ಯ ೧೯೯೦ರಲ್ಲಿ ವೀರಶೈವಾಮೃತ ಮಹಾಪುರಾಣವನ್ನು ಪ್ರಕಟಿಸುವವರೆಗೆ ನಿರಂತರವಾಗಿತ್ತು. ಅವರು ಪರಿಷ್ಕರಿಸಿದ ಕಾವ್ಯಗಳನ್ನು ಅನುಕೂಲತೆಯ ದೃಷ್ಟಿಯಿಂದ ಈ ಕೆಳಗಿನಂತೆ ವಿಂಗಡನೆ ಮಾಡಿಕೊಳ್ಳಬಹುದು.

ಚಂಪೂ ಕಾವ್ಯಗಳು :

೧. ಪಡಕ್ಕರ ಕವಿಯ ಬಸವರಾಜ ವಿಜಯಂ	– ೧೯೬೮
೨. ಪಡಕ್ಕರ ಕವಿಯ ರಾಜಶೇಖರವಿರವಿಲಾಸ ಸಂಗ್ರಹ	– ೧೯೭೦
೩. ನಾಗಚಂದ್ರನ ರಾಮಚಂದ್ರಚರಿತ ಪುರಾಣಂ	– ೧೯೭೫
೪. ಸುರಂಗ ಕವಿಯ ತ್ರಿಷಷ್ಟಿ ಪುರಾತನರ ಚಾರಿತ್ರ	– ೧೯೬೬
೫. ಪಡಕ್ಕರ ಕವಿಯ ರಾಜಶೇಖರ ವಿಲಾಸಂ	– ೧೯೭೪

ರಗಳೆ ಕಾವ್ಯಗಳು :

೧. ಪರಿಕರನ ನೂತನ ರಗಳೆಗಳು	– ೧೯೭೨
೨. ಪರಿಕರ ಕವಿಯ ಪುರಾತನರ ರಗಳೆಗಳು	– ೧೯೭೩
೩. ಪರಿಕರ ಕವಿಯ ಪುರಾತನರ ಆರು ರಗಳೆಗಳು	– ೧೯೭೪

ಷಟ್ಪದಿ ಕಾವ್ಯಗಳು :

೧. ಭೀಮಕವಿಯ ಬಸವಪುರಾಣ ಭಾಗ : ೧	– ೧೯೫೩
೨. ಭೀಮಕವಿಯ ಬಸವಪುರಾಣ ಭಾಗ : ೨	– ೧೯೫೫
೩. ಮಹಲಿಂಗರೀಲೆ	– ೧೯೫೪
೪. ಪದ್ಮಣಾಂಕ ಕವಿಯ ಪದ್ಮರಾಜ ಪುರಾಣ	– ೧೯೫೮
೫. ರಾಘವಾಂಕನ ಸೋಮನಾಥ ಚಾರಿತ್ರ	– ೧೯೬೧
೬. ಬಸವರಿಂಗ ಕವಿಯ ಕೊಟ್ಟೂರು ಬಸವೇಶ್ವರ ಚಾರಿತ್ರ	– ೧೯೬೧
೭. ಡಾಲರೀಲಾ ಮಹಾಂತೇಶ್ವರ ಪುರಾಣ	– ೧೯೬೪

೮. ರಾಘವಾಂಕನ ಸೋಮನಾಥ ಚಾರಿತ್ರ ಸಂಗ್ರಹ	– ೧೯೬೪
೯. ಡಾಂತಲಿಂಗದೇಶಿಕನ ಧೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ:೧	– ೧೯೬೪
೧೦.ಭೀಮಕವಿಯ ಬಸವಪುರಾಣ (ಸಮಗ್ರ)	– ೧೯೬೧
೧೧.ಚಾಮರಸ ಕವಿಯ ಪ್ರಭುಲಿಂಗರೀಲೆ	– ೧೯೭೩
೧೨.ಕನಕದಾಸನ ಮೋಹನ ತರಂಗಿಣಿ	– ೧೯೭೩
೧೩.ಡಾಂತಲಿಂಗದೇಶಿಕನ ಧೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ:೨	– ೧೯೮೮
೧೪.ಗುಬ್ಬಿ ಮಲ್ಲಣಾರ್ಯ ಕವಿಯ ವೀರಶೈವಾಮೃತ ಮಹಾಪುರಾಣ	– ೧೯೯೦

ಈ ಕಾವ್ಯಗಳ ಪರಿಷ್ಕರಣ ವಿಧಾನವನ್ನು ಅವಲೋಕಿಸಿದಾಗ ಆರ್.ಸಿ.ಅವರ ಗ್ರಂಥಸಂಪಾದನೆಯ ವೈಧಾನಿಕತೆಯನ್ನು ಈ ಕೆಳಗಿನಂತೆ ಗುರುತಿಸಬಹುದು. ೧. ಹಸ್ತಪ್ರತಿಗಳ ಸಂಗ್ರಹದಲ್ಲಿ ಪರಿಶ್ರಮ ಪ್ರವೃತ್ತಿ, ೨.ಸಂಶೋಧನ ವಿಚಿಕ್ಷಣತೆ ೩ ತೌಲನಿಕ ವಿಮರ್ಶಾ ದೃಷ್ಟಿಕೋನ ೪. ಪಾಠ ಪರಿಷ್ಕರಣೆಯಲ್ಲಿ ಜಾಗೃತೆ ೫. ಪ್ರಸ್ತಾವನೆಯಲ್ಲಿ ಸಮಗ್ರತೆ ೬ ವಿವಿಧ ಮೂಲಗಳಿಂದ ಮಾಹಿತಿ ಕ್ರೋಢೀಕರಣ

ಹಸ್ತಪ್ರತಿಗಳ ಸಂಗ್ರಹದಲ್ಲಿ ಪರಿಶ್ರಮ ಪ್ರವೃತ್ತಿ :

ಆರ್.ಸಿ.ಯವರು ಗ್ರಂಥಸಂಪಾದನೆಗೆ ತೊಡಗಿಕೊಂಡಾಗ ಹಸ್ತಪ್ರತಿಗಳ ಸಂಗ್ರಹ ಕಾರ್ಯ ಸಾಂಸ್ಥಿಕವಾಗಿ ಅಷ್ಟೇನೂ ಸಮಗ್ರವಾಗಿ ಸಂಗ್ರಹಗೊಂಡಿರಲಿಲ್ಲ. ವ್ಯಕ್ತಿಗಳ ಒಡೆತನದಲ್ಲಿಯೇ ಹೆಚ್ಚು ಹಸ್ತಪ್ರತಿಗಳು ಸಂಗ್ರಹಗೊಂಡಿದ್ದವು. ಹೀಗಾಗಿ ಅವರು ವಿವಿಧ ಮೂಲದ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮೊದಲು ಅವುಗಳನ್ನು ಸಂಗ್ರಹ ಮಾಡುತ್ತಿದ್ದರು. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ, ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯ, ನಾಡಿನ ಮಠಮಾನ್ಯಗಳು ಹಾಗೂ ಕೆಲವು ವ್ಯಕ್ತಿಗಳ ಮೂಲಕ ಅವುಗಳನ್ನು ದೊರಕಿಸಿಕೊಳ್ಳುತ್ತಿದ್ದರು ಎಂಬುದು ಅವರ ಪ್ರಸ್ತಾವನೆಯ ಮಾತುಗಳಿಂದಲೇ ನಮಗೆ ಗೊತ್ತಾಗುತ್ತದೆ.

"ಹಳಗನ್ನಡ ಕಾವ್ಯಗಳನ್ನು ಸಾಮ್ಗ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸುವ ಕಾರ್ಯವೇನೂ ಸಣ್ಣದಲ್ಲ. ಮೊದಲು ವಿವಿಧ ಪ್ರದೇಶಗಳಿಂದ ಸಂಗ್ರಹಿಸಬೇಕಾದ ತಾಡಪೋಲೆ, ಕೋರಿಕಾಗದ ಹಸ್ತಪ್ರತಿಗಳನ್ನು ಸಂಗ್ರಹಿಸುವುದು ಅಗತ್ಯವಾಗುತ್ತದೆ. ಅದಕ್ಕಾಗಿ ಮೈಸೂರು, ಹೈದರಾಬಾದ ಹಾಗೂ ಉತ್ತರ ಕರ್ನಾಟಕದ ವಿಶಿಷ್ಟ ಸ್ಥಳಗಳಿಂದ ತಾಡಪೋಲೆಯ ಹಸ್ತಪ್ರತಿಗಳನ್ನು ದೊರಕಿಸಲಾಯಿತು."

ಉದಾಹರಣೆಗೆ, ಬಸವರಾಜ ವಿಜಯಂ ಕಾವ್ಯವನ್ನು ಪರಿಷ್ಕರಣೆಗೆ ಕೈಗೆತ್ತಿಕೊಂಡಾಗ ಅವರು ವಿವಿಧ ಮೂಲಗಳಿಂದ ಆರು ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದರು. ಅರಭಾವಿಯ

Scanned with CamScanner

ಮುರಗೋಡಮಠ, ಕಲಬುರ್ಗಿಯ ಡಾ. ಗದ್ದಗಿಮಠ, ಡಾ. ದ.ರಾ.ಬೇಂದ್ರೆ, ಹುಮನಾ
ದಾದರ ಮುರುಘಾಮಠದ ಟ್ರಸ್ಟಿಗಳಾದ ಶ್ರೀ ಭೀಮರಾವ್ ವಕೀಲರು-ಹೀಗೆ ನಾಡಿನ
ಬೇಕೆಡೆಗೆ ಸ್ಥಳಗಳಿಂದ ಹಸ್ತಪ್ರತಿಗಳನ್ನು ತರಿಸಿಕೊಂಡು ಬಸವರಾಜವಿಜಯಂ ಕಾವ್ಯವನ್ನು
ಪರಿಷ್ಕರಣೆ ಮಾಡಿದ್ದಾರೆ.

ಇನ್ನೊಂದು ಉದಾಹರಣೆ ನೋಡಬೇಕೆಂದರೆ, ಷಡಕ್ಷರ ಕವಿಯ ರಾಜಶೇಖರ
ವಿಳಾಸದ ಪರಿಷ್ಕರಣಕ್ಕೆ ಒಂಭತ್ತು ಹಸ್ತಪ್ರತಿಗಳನ್ನು ಸಂಗ್ರಹ ಮಾಡಿಕೊಂಡಿದ್ದರು
ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ. ಎಸ್.ಸಿ.ನಂದಿಮಠ, ಮಲ್ಲಾಪಾದಿ
ವೀರಬದ್ರಪ್ಪ, ಬಾಗಲಕೋಟೆಯ ಟೀಕಿನಮಠ, ಹುಬ್ಬಳ್ಳಿಯ ಮೂರುಸಾವಿರಮಠ,
ಪ್ರಾಚ್ಯವಿದ್ಯಾ ಸಂಶೋಧನಾಲಯ ಮೈಸೂರು, ಕನ್ನಡ ಸಂಶೋಧನ ಸಂಸ್ಥೆಯ
ಹಸ್ತಪ್ರತಿಗಳನ್ನು ಬಳಸಿಕೊಂಡು ಶಾಸ್ತ್ರಶುದ್ಧವಾಗಿ ಪರಿಷ್ಕರಣೆ ಮಾಡಿದ್ದಾರೆ.

ಹಸ್ತಪ್ರತಿಗಳ ವರ್ಗೀಕರಣದಲ್ಲಿ ತೋರಿಬರುವ ಜಾಣ್ಮೆ

ಒಂದು ಕಾವ್ಯಕ್ಕೆ ಸಂಗ್ರಹಿಸಿದ ಹಸ್ತಪ್ರತಿಗಳನ್ನು ವರ್ಗೀಕರಣ ಮಾಡಿ ಅವುಗಳ
ವಂಶಪರಂಪರೆಯನ್ನು ಗುರುತಿಸುವುದು ಮಹತ್ತರ ಕಾರ್ಯವಾಗಿದೆ. ಮೂಲಪ್ರತಿ-
ಮಾತೃಕಪ್ರತಿ-ಪುತ್ರಿಕಾಪ್ರತಿ-ಸೋದರಪ್ರತಿ-ಸದಸ್ಯಪ್ರತಿ ಎಂದು ಅವುಗಳನ್ನು ಕರೆಯ
ಲಾಗುತ್ತದೆ. ಈ ವಂಶಾವಳಿಯನ್ನು ಗುರುತಿಸುವಲ್ಲಿ ಸಂಪಾದಕ ತುಂಬ ಜಾಣ್ಮೆ ಅಥವಾ
ಎಚ್ಚರಿಕೆಯನ್ನು ಹೊಂದಿರಬೇಕಾಗುತ್ತದೆ. ಅಂಥ ಜಾಣ್ಮೆ-ಎಚ್ಚರಿಕೆ ಆರ್.ಸಿ. ಅವರಲ್ಲಿತ್ತು
ಎಂಬುದಕ್ಕೆ ಅವರ ಪರಿಷ್ಕರಣ ಗ್ರಂಥಗಳಲ್ಲಿ ಅನೇಕ ನಿದರ್ಶನಗಳಿವೆ.

ಪಾಠ ಪರಿಷ್ಕರಣ

ಗ್ರಂಥಸಂಪಾದನೆಯಲ್ಲಿ ಪಾಠ ಪರಿಷ್ಕರಣ ಅತ್ಯಂತ ಮಹತ್ವದ ಭಾಗ. ಕಾವ್ಯದ
ಕಥಾವಸ್ತು, ಪಾತ್ರಗಳು, ಶೈಲಿ, ಅಲಂಕಾರ, ಭಾಷೆಯ ಬಳಕೆ, ಛಂದಸ್ಸಿನ ತಿಳುವಳಿಕೆ
ಸರಿಯಾಗಿದ್ದರೆ ಮಾತ್ರ ಪರಿಷ್ಕರಣ ಕೆಲಸ ಸುಲಭವಾಗುತ್ತದೆ. ಇಲ್ಲದಿದ್ದರೆ ದೋಷಪೂರಿತ
ಪಾಠಗಳನ್ನು ಸರಿಪಡಿಸಲಿಕ್ಕೆ ತುಂಬ ಕಷ್ಟವಾಗುತ್ತದೆ.

ಪದ್ಮಣಾಂಕ ಕವಿಯ ಪದ್ಮರಾಜ ಪುರಾಣವನ್ನು ಪರಿಷ್ಕರಿಸುವಾಗ ವೇದ ಆಗಮ
ಉಪನಿಷತ್ತುಗಳಲ್ಲಿ ಉಕ್ತವಾದ ಶ್ಲೋಕಗಳನ್ನು ಶೋಧಿಸಿ ಅಡಿಟಿಪ್ಪಣಿಯಲ್ಲಿ ಕೊಟ್ಟಿರುವುದು
ಆರ್. ಸಿ. ಅವರ ಪಾಂಡಿತ್ಯಕ್ಕೆ ಉದಾಹರಣೆಯಾಗಿದೆ. ತ್ರಿಭುವನತಾತನನ್ನು ವಾದದಲ್ಲಿ
ಸೋಲಿಸುವ ಸಂದರ್ಭದಲ್ಲಿ ಲೈಂಗ್ಯ ಪುರಾಣ, ಸೂತಗೀತಾ, ಸ್ಕಾಂದಪುರಾಣ,
ಪಾರಾಶರ, ಆಥರ್ವ, ಋಗ್ವೇದ, ಯಜುರ್ವೇದ, ಸೌರಪುರಾಣ ಇತ್ಯಾದಿ ಗ್ರಂಥಗಳಲ್ಲಿ
ರುವ ಶ್ಲೋಕಗಳನ್ನು ಶೋಧಿಸಿ ಪೂರಕವಾಗಿ ಕೊಡಲಾಗಿದೆ. ಇದು ಆರ್.ಸಿ.ಅವರಿಗಿದ್ದ
ಬಹುಶ್ರುತ ಗ್ರಂಥಗಳ ಓದು, ಅಪಾರ ಜ್ಞಾನ ನಮಗೆ ತಿಳಿಸಿಕೊಡುತ್ತದೆ. ಇದರಿಂದ
ಅವರಿಗೆ ಸರಿಪಾಠವನ್ನು ಕೊಡಲಿಕ್ಕೆ ಸಾಧ್ಯವಾಗಿದೆ.

ಹಾಗೆಯೇ ಬಸವರಾಜ ವಿಜಯದ ಪಾಠಗಳನ್ನು ಅತ್ಯಂತ ಜಾಗರೂಕತೆಯಿಂದ
ಎಚ್ಚರಿಕೆಯಿಂದ ಪರಿಷ್ಕರಿಸಿರುವುದು ಗೊತ್ತಾಗುತ್ತದೆ. ಕೆಲವು ಹಸ್ತಪ್ರತಿಗಳಲ್ಲಿ ಬಸವರಾಜ
ವಿಜಯದ ಮಧ್ಯಮಧ್ಯ ಅನ್ಯಕಾವ್ಯದ ಪದ್ಯಗಳು ಸೇರಿರುವುದನ್ನು ಗುರುತಿಸುವಲ್ಲಿ
ಅವರ ಜ್ಞಾನದ ವಿಸ್ತಾರ, ತಿಳುವಳಿಕೆ ಓದುಗನಿಗೆ ಗೊತ್ತಾಗುತ್ತದೆ.

ಪಾಂಡಿತ್ಯಪೂರ್ಣವಾದ ಪ್ರಸ್ತಾವನೆ

ಗ್ರಂಥಸಂಪಾದನೆಯಲ್ಲಿ ಉನ್ನತ ವಿಮರ್ಶೆ ಎಂಬುದು ಮಹತ್ವದ ಭಾಗ. ಸಂಪಾದಕ
ತಾನು ಕೈಕೊಂಡ ಪರಿಷ್ಕರಣ ಕಾವ್ಯಕ್ಕೆ ಸಂಬಂಧಿಸಿದಂತೆ ಕವಿಯ ಇತಿವೃತ್ತ, ಕಾವ್ಯದ
ರಸವಿಮರ್ಶೆ, ತೌಲನಿಕ ದೃಷ್ಟಿಕೋನ ಇತ್ಯಾದಿ ಸಂಗತಿಗಳನ್ನು ಒಳಗೊಂಡ ಪ್ರಸ್ತಾವನೆ
ಮತ್ತು ಪೂರಕ ಮಾಹಿತಿಗಳನ್ನು ಒಳಗೊಂಡ ಅನುಬಂಧ ಭಾಗಗಳು ಅತ್ಯಂತ ಮುಖ್ಯ
ಇವು ಆ ಕಾವ್ಯದ ಕರ್ತೃ, ಕಾವ್ಯದ ವಸ್ತುವಿಷಯವನ್ನು ಅರಿತುಕೊಳ್ಳಲು ಓದುಗರಿಗೆ
ಮತ್ತು ಅಧ್ಯಯನಕಾರರಿಗೆ ಬಹಳ ಸಹಾಯಕಾರಿಯಾಗುತ್ತವೆ. ಇಂಥ ಪ್ರಸ್ತಾವನೆ
ಮತ್ತು ಅನುಬಂಧಗಳನ್ನು ಒಳಗೊಂಡಿರುವ ಭಾಗವನ್ನು ಗ್ರಂಥ ಸಂಪಾದನಶಾಸ್ತ್ರದ
ಪರಿಭಾಷೆಯಲ್ಲಿ "ಉನ್ನತ ವಿಮರ್ಶೆ" ಎಂದು ಕರೆಯಲಾಗುತ್ತದೆ. ಆರ್.ಸಿ.ಹಿರೇಮಠ
ಅವರ ಬಹುತೇಕ ಸಂಪಾದನ ಗ್ರಂಥಗಳಲ್ಲಿನ ಪ್ರಸ್ತಾವನೆ ಮತ್ತು ಅನುಬಂಧಗಳು ಕವಿಯ
ಜೀವನ ಚರಿತ್ರೆ ಹಾಗೂ ಕಾವ್ಯದ ವಿಶೇಷತೆಯನ್ನು ತಿಳಿದುಕೊಳ್ಳಲು ನೆರವಾಗುವಂತಿವೆ.

ರಾಜಶೇಖರ ವಿಳಾಸಕ್ಕೆ ಬರೆದ ಪ್ರಸ್ತಾವನೆಯನ್ನು ಗಮನಿಸಬಹುದಾದರೆ, ಕನ್ನಡದಲ್ಲಿ
ಷಡಕ್ಷರಿ ಹೆಸರಿನ ಕವಿಗಳಿವೆ ಎಂಬುದನ್ನು ಚರ್ಚಿಸಿ, ಐದು ಜನ ಕವಿಗಳಿದ್ದುದನ್ನು
ಉಲ್ಲೇಖಿಸಿ ಮಾಡಿದ್ದಾರೆ. ರಾಜಶೇಖರವಿಳಾಸ, ಶಬರಶಂಕರವಿಳಾಸ, ಬಸವರಾಜ
ವಿಜಯಂ ಕಾವ್ಯಗಳನ್ನು ರಚಿಸಿ ಮಾಡಿದ ಷಡಕ್ಷರ ಕವಿಯ ಕಾಲ, ಸ್ಥಳ-ವಾಸಸ್ಥಳ,
ಇಳಾಪತಿಪೂಜಿತ, ಗುರುಪರಂಪರೆ, ಇಷ್ಟದೇವತೆ, ಪೂರ್ವಕವಿ ಸ್ತವನ, ಕೃತಿಗಳು,
ಶಬರಶಂಕರವಿಳಾಸ, ಬಸವರಾಜ ವಿಜಯ, ಇತರೆ ಕೃತಿಗಳು, ಕೃತಿರಚನೆಯ ಕಾಲ,
ಕವಿಪ್ರಶಸ್ತಿ, ರಾಜಶೇಖರ ವಿಳಾಸದ ಕಥಾಸಾರ, ಕಥೆಯಮೂಲ, ಮಾಪಾಡು, ಔಚಿತ್ಯ,
ಕಾವ್ಯ ವಿಮರ್ಶೆ, ಕೃತಿಯ ಪ್ರಭಾವ ಹೀಗೆ ಅನೇಕ ಸಂಗತಿಗಳನ್ನು ಆರ್.ಸಿ.ಅವರು
ಚರ್ಚಿಸಿದ್ದಾರೆ. ಇದು ಅವರ ಆಳವಾದ ಅಧ್ಯಯನಕ್ಕೆ ಹಾಗೂ ಪ್ರತಿಭಾಪೂರ್ಣವಾದ
ಪಾಂಡಿತ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಅನುಬಂಧವಲ್ಲಿರುವ ಪದ್ಯಗಳ ಅಕಾರಾದಿ,
ಶಬ್ದಕೋಶಗಳು ಕಾವ್ಯದ ಓದಿಗೆ ಅನುಕೂಲವಾಗುತ್ತವೆ.

ಆರ್.ಸಿ. ಅವರ ಪ್ರಸ್ತಾವನೆಗೆ ಇನ್ನೊಂದು ಅತ್ಯುತ್ತಮ ನಿದರ್ಶನ ತ್ರಿಪದ್ಮಿ ಪುರಾತನರ
ಚಾರಿತ್ರಂ. ಮುನ್ನೂರು ಮೂವತ್ತಾರು ಪುಟಗಳ ಸುದೀರ್ಘ ಪ್ರಸ್ತಾವನೆಯು ಮೂರು
ಭಾಗಗಳನ್ನು ಒಳಗೊಂಡಿದ್ದನ್ನು ಶ್ರೀ ಬಸವಾರಾಧ್ಯ ಅವರು ವೀಣಿನವೊಂದರಲ್ಲಿ
ಗುರುತಿಸಿದ್ದಾರೆ. "ಮೊದಲನೆಯ ಭಾಗದಲ್ಲಿ ತ್ರಿಪದ್ಮಿ ಪುರಾತನರ ಕಾಲವಿಚಾರ,
ಸ್ಥಳ, ವೃತ್ತಿ, ಕಾಲನಿರ್ದೇಶ, ಧಾರ್ಮಿಕ-ಸಾಮಾಜಿಕ ಪರಿಸ್ಥಿತಿ, ಪುನರುತ್ಥಾನ, ಸಂದೇಶ

Scanned with CamScanner

ಮತ್ತು ಕ್ಷಾವ ಮುದ್ರಿಗಳನ್ನು ವಿವೇಚಿಸಲಾಗಿದೆ. ಎರಡನೆಯ ಭಾಗದಲ್ಲಿ ಕವಿ ಕಾಲ, ಕಾವ್ಯವಸ್ತು, ಕಾವ್ಯ ನಿರೂಪಣೆ, ಕಾವ್ಯವಿಮರ್ಶೆಗಳನ್ನು ಪ್ರಸ್ತಾಪಿಸಲಾಗಿದೆ. ಮೂರನೆಯ ಭಾಗದಲ್ಲಿ ಸುರಂಗ, ಹರಿಹರ, ಶೇಕ್ಕಿಳಾರರ ಆನ್ವಯ ಕಥಾಸಾರವನ್ನು ನೀಡಲಾಗಿದೆ. ಆಯಮ್ತು ಮೂರು ಮರಾತನರ ಚರಿತ್ರೆಗೆ ಸಂಬಂಧಿಸಿದ ಒಂದು ತೌಲನಿಕ ಅಧ್ಯಯನವನ್ನು ಪ್ರಸ್ತಾವನೆಯಲ್ಲಿ ಕಾಣಬಹುದಾಗಿದೆ. ತ್ರಿಷಷ್ಟಿ ಮರಾತನರ ಬಗೆಗೆ ವಿಶೇಷ ಮಾಹಿತಿಯನ್ನು ನೀಡುವಲ್ಲಿ ಒಂದು ಅಧಿಕೃತ ಆಕರಗ್ರಂಥ ಕನ್ನಡ ಸಂಸ್ಕೃತ ತಮಿಳು ಮತ್ತು ಇನ್ನಿತರ ಹಲವಾರು ಗ್ರಂಥಗಳನ್ನು ಪರಿಶೀಲಿಸಲಾಗಿದೆ. .....ಡಾ. ಆರ್.ಸಿ. ಬಯಮುಳವಾವ ವಾಂಙ್ಮಯಕ್ಕೆ ರನ್ನಗನ್ನಡಿಯನ್ನು ಹಿಡಿದಂತಿವೆ ಈ ಕೃತಿ."(ಬೆಳ್ಳೂರ ಪುಟ:೧೧೦)

ಹೀಗೆ ಒಂದೊಂದು ಕಾವ್ಯಕ್ಕೆ ಬರೆದಿರುವ ಪ್ರಸ್ತಾವನೆಯು ನೂರು, ನೂರೈವತ್ತು, ಎರಡುನೂರು ಪುಟಗಳವ್ಯಾಗಿರುವುದನ್ನು ನೋಡಿದರೆ, ಆರ್.ಸಿ. ಅವರಿಗೆ ಕವಿ ಕಾವ್ಯ, ಕಾವ್ಯದ ಕಥಾವಸ್ತು, ಪಾತ್ರಗಳು, ಭಾಷೆಯ ಪರಿಕರಗಳಾದ ಶೈಲಿ–ಛಂದಸ್ಸು, ಅಲಂಕಾರ–ವರ್ಣನೆಗಳು–ಹೀಗೆ ಒಂದು ಕಾವ್ಯವನ್ನು ವಿವಿಧ ಆಯಾಮಗಳಿಂದ ಅವಲೋಕನ ಮಾಡಿರುವುದು ಸ್ಪಷ್ಟವಾಗುತ್ತದೆ. ಆರ್. ಸಿ. ಅವರ ಈ ಪ್ರಸ್ತಾವನೆಗಳೇ ಸಂಶೋಧಕರಿಗೆ ಆಧುನಿಕಾರಿಗೆ ವಿದ್ಯಾರ್ಥಿಗಳಿಗೆ ಅನೇಕಾನೇಕ ಮಾಹಿತಿಗಳನ್ನು ಬಿಚ್ಚಿಡುತ್ತ ಬಂದಿರುವುದು ಗೋಚರವಾಗುತ್ತದೆ.

ತೌಲನಿಕ ವಿಮರ್ಶಾ ದೃಷ್ಟಿಕೋನ

ಆರ್.ಸಿ.ಅವರ ಗ್ರಂಥಸಂಪಾದನೆಯ ಮತ್ತೊಂದು ವಿಶೇಷತೆ ಅಂದರೆ ಪ್ರತಿಯೊಂದು ಕಾವ್ಯವನ್ನು ತೌಲನಿಕ ವಿಮರ್ಶಾ ದೃಷ್ಟಿಕೋನದಿಂದ ಅವಲೋಕನ ಮಾಡಿರುವಂಥದ್ದು. ಉದಾಹರಣೆಗೆ ಬಸವರಾಜವಿಜಯದೊಂದಿಗೆ ಇತರೆ ಬಸವಣ್ಣನ ಕುರಿತು ಬಂದ ಕಾವ್ಯಗಳೊಡನೆ ತುಲನೆ ಮಾಡಿರುವಂಥದ್ದು. ಬಸವಣ್ಣನ ಜನ್ಮಕಾರಣ, ಜನನ, ಬಾಲ್ಯ, ಉಪನಯನ, ಕೂಡಲಸಂಗಮದಲ್ಲಿ, ಕೂಡಲಸಂಗಮದಿಂದ ಮುಂದೆ, ಕಲ್ಯಾಣದಲ್ಲಿ ಮಂತ್ರಿಪದವಿ, ಶರಣ ಸಮಾಗಮ, ವಿರಸ, ಕೊನೆಯ ಘಟನೆ – ಈ ಎಲ್ಲ ಸಂಗತಿಗಳು ಪರಿವರ, ಪಾಲ್ಕುರಿಕೆ ಸೋಮನಾಥ–ಭೀಮಕವಿ, ಚಾಮರಸ, ಲಕ್ಕಣ್ಣ ದಂಡೇಶ, ಸಿಂಗಿರಾಜ, ಚೆನ್ನಪ್ಪಕವಿಯ ಕೃತಿಗಳಲ್ಲಿ ಚಿತ್ರಣಗೊಂಡ ರೀತಿಯನ್ನು ಚರ್ಚಿಸುತ್ತ, ಇವುಗಳಿಗಿಂತ ಷಡಕ್ಷರಕವಿಯ ಬಸವರಾಜವಿಜಯದಲ್ಲಿ ಮೂಡಿಬಂದ ಬಸವಣ್ಣನ ಜೀವನ ಮತ್ತು ವ್ಯಕ್ತಿತ್ವವನ್ನು ವಿಮರ್ಶೆಗೊಳಪಡಿಸಿದ್ದಾರೆ.

ಪ್ರತಿಯೊಂದು ಕಾವ್ಯವನ್ನು ಕುರಿತು ಅವಲೋಕನ ಮಾಡುವಾಗ ಕಾವ್ಯದ ಕಥೆಯ ಮೂಲ, ಅದು ಹೇಗೆ ಮಾರ್ಪಾಡಾಗುತ್ತ ಬಂತು ಎಂಬುದನ್ನು ಅನೇಕ ಆಕರಗಳ ನೆರವಿನಿಂದ ವಿಶ್ಲೇಷಣೆ ಮಾಡಿದ್ದಾರೆ. ರಾಜಶೇಖರ ವಿಳಾಸದ ಕಥೆಯ ಮೂಲ, ಮಾರ್ಪಾಡು ಮತ್ತು ಅದರ ಔಚಿತ್ಯವನ್ನು ಕುರಿತು ಚರ್ಚಿಸುವಾಗ ಆರ್.ಸಿ. ಅವರು ವಿವಿಧ ಭಾಷೆಯ ಆಕರಗಳನ್ನು ಹೆಕ್ಕಿ ತೆಗೆದಿದ್ದಾರೆ. ತಮಿಳಿನ ಶಿಲಪ್ಪದಿಗಾರಂ ಕೃತಿ

ಈ ಕಥೆಗೆ ಮೂಲ ಎಂಬುದನ್ನು ಸ್ಪಷ್ಟಪಡಿಸುತ್ತ "ತಮಿಳಿನಿಂದ ಕನ್ನಡಕ್ಕೂ, ಕನ್ನಡದಿಂದ ತೆಲುಗಿಗೂ ಹೋಗಿರುವುದು ಇವರ ಜನಪ್ರಿಯತೆಯನ್ನು ತೋರಿಸುತ್ತದೆ". ಕನ್ನಡದ ಕವಿಗಳಲ್ಲಿ ಈ ಕಥೆ ಮಾರ್ಪಾಡಾಗುತ್ತ ಬಂದ ಬಗೆಯನ್ನು ಕೂಲಂಕಷವಾಗಿ ಹೇಳುತ್ತಾ ಹೋಗುತ್ತಾರೆ. ಹರಿಹರ(ಮನುಚೋಳ ರಗಳೆ), ಗುಬ್ಬಿಯ ಮಲ್ಲಣಾರ್ಯ(ಧಾವಚಿಂತಾರತ್ನ), ಧೂವದ ಶಾಂತಕವಿ(ಸಕ್ಯೇಂದ್ರಚೋಳನ ಸಾಂಗತ್ಯ), ಷಡಕ್ಷರ(ರಾಜಶೇಖರ ವಿಳಾಸ), ಕೋಳೂರು ಶಂಕರಕವಿ(ಮಾಧವಾಂಕ ಚರಿತೆ) ಮೊದಲಾದವರು ತಮ್ಮ ಕಾವ್ಯಕ್ಕೆ ಕಥಾವಸ್ತುವನ್ನಾಗಿ ಮಾಡಿಕೊಂಡು ಬಂದಿರುವುದನ್ನು ಕಾಣುತ್ತೇವೆ.

ಕಥಾಸಾರವನ್ನು ನೀಡಿರುವುದು

ಆರ್.ಸಿ. ಅವರು ಪರಿಷ್ಕರಿಸಿದ ಪ್ರತಿಯೊಂದು ಕಾವ್ಯಗಳ ಪ್ರಸ್ತಾವನೆಯ ಜೊತೆಗೆ ಕಥಾಸಾರವನ್ನು ನೀಡಿರುವುದನ್ನು ಕಾಣುತ್ತೇವೆ. ಈ ಕಥಾಸಾರಗಳು ಆಯಾ ಕಾವ್ಯದ ವಸ್ತು ಏನು, ಅದು ಬೆಳೆದು ಬಂದ ಬಗೆ, ಅಲ್ಲಿನ ಪಾತ್ರಗಳನ್ನು ತಿಳಿದುಕೊಳ್ಳಲು ಓದುಗರಿಗೆ ತುಂಬ ಅನುಕೂಲಕರವಾಗುತ್ತವೆ. ಪ್ರತಿಯೊಂದು ಸಂಧಿಯಲ್ಲಿ ಬರುವ ವಿಷಯವನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಹೀಗಾಗಿ ಒಂದು ಕಾವ್ಯದ ಪರಿಷ್ಕರಣೆಯಲ್ಲಿ ಏನೇನು ಅಂಶಗಳು ಒಳಗೊಳ್ಳಬೇಕು ಎಂಬುದರ ಸ್ಪಷ್ಟತೆ ಅವರಲ್ಲಿತ್ತು.

ಮಾಹಿತಿಪೂರ್ಣವಾದ ಅನುಬಂಧಗಳು

ಒಂದು ಕಾವ್ಯದ ಪರಿಷ್ಕರಣೆಯಲ್ಲಿ ಅನುಬಂಧಗಳು ಬಹಳ ಮುಖ್ಯ. ಕಾವ್ಯಕ್ಕೆ ಸಂಬಂಧಿಸಿದ ಹೆಚ್ಚುವರಿ ಆಥವಾ ಪೂರಕ ಮಾಹಿತಿಯನ್ನು ಕೊಡುವುದು. ಪದ್ಯಸೂಚಿ, ವ್ಯಕ್ತಿ–ಸ್ಥಳನಾಮಸೂಚಿ, ಪಾರಿಭಾಷಿಕ ಪದಕೋಶ ಇತ್ಯಾದಿ ವಿವರಗಳು ಕಾವ್ಯದ ಅಧ್ಯಯನ, ಓದಿನ ಸಹಾಯಕ್ಕೆ ಬರುತ್ತವೆ. ಆರ್.ಸಿ.ಯವರು ತಮ್ಮ ಕಾವ್ಯ ಪರಿಷ್ಕರಣಗಳ ಅನುಬಂಧಗಳಲ್ಲಿ ಅನೇಕ ವಿವರಗಳನ್ನು ಕೊಟ್ಟಿರುವುದನ್ನು ಗಮನಿಸಬಹುದು. ಬಸವರಾಜ ವಿಜಯದ ಹಸ್ತಪ್ರತಿಗಳಲ್ಲಿ ಅಲ್ಲಲ್ಲಿ ಸೇರ್ಪಡೆಗೊಂಡಿದ್ದ ಪಲವಾರು ಪದ್ಯಗಳನ್ನು ಹೆಕ್ಕಿ ತೆಗೆದು ನೋಡಿದಾಗ ಅವು ಬಸವಕೃತಿ ಎಂಬ ಒಂದು ಕಿರುಕೃತಿಗೆ ಸಂಬಂಧಿಸಿದವು ಎಂಬುದನ್ನು ಆರ್.ಸಿಯವರು ಗುರುತಿಸಿ, ಆ ಕಾವ್ಯಕ್ಕೆ ಸಂಬಂಧಿಸಿದ ಪದ್ಯಗಳನ್ನು ಅನುಬಂಧದಲ್ಲಿ ಕೊಟ್ಟಿದ್ದಾರೆ. ಹಾಗೆಯೇ ಶಬ್ದಸೂಚಿ, ಪಾರಿಭಾಷಿಕ ಪದಕೋಶಗಳನ್ನು ಕೊಟ್ಟಿರುವುದನ್ನು ಆರ್.ಸಿ.ಯವರ ಸಂಪಾದನ ಕಾವ್ಯಗಳಲ್ಲಿ ಕಾಣುತ್ತೇವೆ.

ಒಟ್ಟಿನಲ್ಲಿ ಕನ್ನಡ ಗ್ರಂಥಸಂಪಾದನೆಯಲ್ಲಿ ಆರ್.ಸಿ.ಯವರು ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಮೈಸೂರು ಭಾಗವಲ್ಲಿ ಡಿ.ಎಲ್.ಎನ್ ಹೇಗೆ ಶಾಸ್ತ್ರಬದ್ಧ ಗ್ರಂಥ ಸಂಪಾದನೆಯಲ್ಲಿ ಕೆಲಸ ಮಾಡಿದ್ದಾರೋ, ಅದೇ ರೀತಿಯಲ್ಲಿ ಧಾರವಾಡ ಭಾಗದಲ್ಲಿ ಶಾಸ್ತ್ರೀಯ ಕ್ರಮದಲ್ಲಿ ಗ್ರಂಥಸಂಪಾದನ ಕ್ಷೇತ್ರವು ಬೆಳವಣಿಗೆ ಹೊಂದಲು ಆರ್.ಸಿ. ಹಿರೇಮಠ ಅವರು ಕಾರಣರಾಗಿದ್ದಾರೆ.

Scanned with CamScanner

ಹಸ್ತಪ್ರತಿಶಾಸ್ತ್ರ ವಿಭಾಗ ಕಳೆದ ಎರಡು ದಶಕಗಳಿಂದ ಹಸ್ತಪ್ರತಿ ಸರ್ವೇಕ್ಷಣೆ, ಸಂಗ್ರಹ, ಸಂಪಾದನೆ ಹಾಗೂ ಪ್ರಕಟಣೆಯಲ್ಲಿ ನಿರಂತರವಾಗಿ ತನ್ನನ್ನು ತೊಡಗಿಸಿಕೊಂಡಿದೆ. ರಾಷ್ಟ್ರೀಯ ಸಂಪತ್ತಾದ ಹಸ್ತಪ್ರತಿಗಳನ್ನು ಸಂರಕ್ಷಿಸುವ, ಅಧ್ಯಯನ ಮಾಡುವ ದೃಷ್ಟಿಯಿಂದ ವಿಭಾಗದ ಪ್ರಾಧ್ಯಾಪಕರು ಹಸ್ತಪ್ರತಿ ತರಬೇತಿ ಶಿಬಿರದಂಥ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದ್ದಾರೆ. ವಿಶೇಷವೆಂದರೆ ಸಾಹಿತ್ಯ ಸಮ್ಮೇಳನ, ಜನಪದ ಸಮ್ಮೇಳನಗಳಂತೆ ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನವನ್ನು ರೂಪಿಸಿಕೊಂಡು ಅದನ್ನು ಪ್ರತಿವರ್ಷ ನಾಡಿನ ಬೇರೆ ಬೇರೆ ಭಾಗಗಳಲ್ಲಿ ನಡೆಸಿಕೊಂಡು ಬರುತ್ತಿರುವುದನ್ನು ನಾನು ಗಮನಿಸಿದ್ದೇನೆ. ಈ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳನ್ನು 'ಹಸ್ತಪ್ರತಿ ವ್ಯಾಸಂಗ' ಎಂಬ ಹೆಸರಿನಲ್ಲಿ ದಾಖಲಿಸುತ್ತಾ ಬರಲಾಗುತ್ತಿದೆ. ಇದೀಗ ಕಳೆದ ವರ್ಷ ವಿದ್ಯಾರಣ್ಯ ಅವರಣದಲ್ಲಿ ನಡೆದ ೧೬ನೇ ಹಸ್ತಪ್ರತಿ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳನ್ನು 'ಹಸ್ತಪ್ರತಿ ವ್ಯಾಸಂಗ-೨೦' ಈ ಸಂಪುಟ ಒಳಗೊಂಡಿದೆ. ಈ ಸಂಪುಟವನ್ನು ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟ ಹಸ್ತಪ್ರತಿ ವಿಭಾಗದ ಪ್ರಾಧ್ಯಾಪಕರು ಹಾಗೂ ಭಾಷಾನಿಕಾಯದ ಡೀನರೂ ಆದ ಪ್ರೊ. ವೀರೇಶ ಬಡಿಗೇರ ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಡಾ. ಸ.ಚಿ. ರಮೇಶ
ಕುಲಪತಿ

₹ ೨೨೦/-

ISBN: 978-93-87135-85-7

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

Scanned with CamScanner

ಪ್ರಾದೇಶಿಕತೆ :
ಕರ್ನಾಟಕದ ಪಾಳೆಯಗಾರರು

ಪ್ರಾ. ಡಿ.ಎಸ್.ಯೋಗೀಶ್ವರಪ್ಪ
ಸಂಪಾದಕ



Scanned with CamSca

Scanned with CamScanner

ಪ್ರಗತಿ ಪುಸ್ತಕಮಾಲೆ-205

ಪ್ರಾದೇಶಿಕತೆ

ಕರ್ನಾಟಕದ ಪಾಳೆಯಗಾರರು

ಡಾ. ಡಿ.ಎನ್.ಯೋಗೀಶ್ವರಪ್ಪ



ಪ್ರಗತಿ ಗ್ರಾಫಿಕ್ಸ್, ಬೆಂಗಳೂರು

Scanned with CamScanner

Pradeshikate : Karnatakada Palegararu, collection of Research Articals, Edited Dr. D.N. Yogeeswrappa, Researcher and Retired Principal, Sri Siddaganga College for Women, B.H.Road, Tumakuru. Chitkala, 8th Cross, 4th Main, Someshwara Puram, Tumakuru-572102. Mob : 9448680920

Publisher: Dr. M.Byregowda for Pragathi Graphics, Bengaluru, #119, 3rd Cross, 8th Main, Hampinagar, RPC Layout, Bengaluru-104.

ISBN	:	978-93-81441-15-2
First Impression	:	2020
Pages	:	348
Price	:	Rs. 400/-
Paper	:	NS Maplitho 80 GSM
Size	:	1/8 Demmy
Copy right	:	ಡಾ. ಡಿ.ಎನ್.ಯೋಗೀಶ್ವರಪ್ಪ
ಮೊದಲ ಆವೃತ್ತಿ	:	2020
ಕಾಗದ	:	ಎನ್.ಎಸ್.ಮ್ಯಾಪ್ಲಿತೊ 80 ಜಿ.ಎಸ್.ಎಂ.
ಬೆಲೆ	:	ರೂ. 400/-
ಪುಟಗಳು	:	348
ಸೈಜ್	:	1/8 ಡೆಮ್ಮಿ
ಪ್ರತಿಗಳು	:	1000
ರಕ್ಷಾಪುಟ ವಿನ್ಯಾಸ	:	ಬೆನಕ ಗ್ರಾಫಿಕ್ಸ್, ತುಮಕೂರು.
ಪ್ರಕಾಶಕರು	:	ಡಾ. ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು. ಮನೆ ನಂ. 119, 3ನೇ ತಿರುವು, 8ನೇ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು-104. ದೂರವಾಣಿ : 9448102158
ಮುದ್ರಣ	:	ಶ್ರೀರಂಗ ಗ್ರಾಫಿಕ್ಸ್, ಬೆಂಗಳೂರು.

Scanned with CamScanner

15. ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಯ ಪಾಳೇಗಾರರ ಕಾಲದ ಸಾಹಿತ್ಯ
ಹಂಡೆ-ಹರಪನಹಳ್ಳಿ ಪಾಳೇಗಾರರು] – ಡಾ. ಎಫ್.ಟಿ. ಹಳ್ಳಿಕೇರಿ 215

16. ಪಾಳೇಗಾರರ ರಕ್ಷಣಾ ವಾಸ್ತುಶಿಲ್ಪ – ಬದಲಾವಣೆಗಳು
– ಡಾ. ಶಿವಕುಮಾರಿ ಎಂ.ಎಸ್. 223

17. ಪಾಳೇಗಾರರ ದೇವಾಲಯ ವಾಸ್ತುಶಿಲ್ಪ – ದೇಶೀಯ ಅಂಶಗಳ
ಪ್ರಭಾವ – ಡಾ. ಶಕುಂತಲ ಎನ್. 238

18. ಪಾಳೇಗಾರರ ಗಿರಿದುರ್ಗಗಳ ಜಾನಪದ ಐತಿಹ್ಯಗಳು :
ತುಮಕೂರು ಜಿಲ್ಲೆ – ಡಾ. ಕೆ.ಮುದ್ದುವೀರಪ್ಪ 255

19. ಪಾಳೇಗಾರರ ಕಾಲದ ಆಹಾರ ಪಾನೀಯಗಳು
– ಡಾ. ಎನ್. ನಂದೀಶ್ವರ 265

20. ಪಾಳೇಗಾರರ ಕಾಲದ ದೇವಾಲಯ ವಿಸ್ತರಣೆ
[ಹಾಗಲವಾಡಿ ನಾಯಕರು] – ಶ್ರೀಮತಿ ಶಿಲ್ಪಕಲಾ ಸಿ.ಟಿ. 288

21. ಪಾವಗಡ ಪಾಳೇಗಾರರ ಸಮಾಧಿ ಮಂಟಪಗಳು – ಚೆಲುವರಾಜು 292

22. ಪಾಳೇಯಗಾರರ ಬೇಟೆಯ ಚಿತ್ರಣ – ಡಾ. ಎಸ್.ಶಿವಣ್ಣ ಬೆಳವಾಡಿ 297

23. ಪಾಳೇಗಾರರ ಕಾಲದ ಕೆರೆಗಳು – ಜಾನಪದ ವಿಶೇಷತೆ – ಅನಿತ ಟಿ. 302

24. ಪಾಳೆಯಗಾರರ ಕೋಟೆ – ಭಸ್ಮಾಂಗಿ ದುರ್ಗ – ಮಂಜುಳ 310

25. ಗುಮ್ಮನಾಯಕನ ಕೋಟೆ – ಒಂದು ಪರಿಚಯ
– ಡಾ. ಡಿ.ವಿ.ಪರಮಶಿವಮೂರ್ತಿ 317

Scanned with CamScanner

ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಯ ಪಾಳೇಗಾರರ ಕಾಲದ ಕನ್ನಡ ಸಾಹಿತ್ಯ

ಡಾ. ಎಫ್.ಟಿ. ಹಳ್ಳಿಕೇರಿ

ಕರ್ನಾಟಕದಲ್ಲಿ ವಿಜಯನಗರೋತ್ತರ ಕಾಲದ ಇತಿಹಾಸ ಅಂದರೆ ಅದು ಪಾಳೇಗಾರರ ಇತಿಹಾಸ. ಅಷ್ಟರ ಮಟ್ಟಿಗೆ ಪಾಳೇಗಾರರು ಇಲ್ಲಿ ಆಡಳಿತ ಮಾಡಿರುವುದನ್ನು ನಾವು ಇತಿಹಾಸದಿಂದ ಅರಿತುಕೊಳ್ಳಬಹುದು. ಈ ಹಿನ್ನಲೆಯಲ್ಲಿ ಬಳ್ಳಾರಿ ಹಾಗೂ ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಅನೇಕ ಪಾಳೇಗಾರರು ಆಗಿ ಹೋಗಿದ್ದಾರೆ. ಅವರಲ್ಲಿ ಬಹುಮುಖ್ಯವಾಗಿ ಬಳ್ಳಾರಿಯನ್ನು ಮುಖ್ಯಕೇಂದ್ರವನ್ನಾಗಿ ಮಾಡಿಕೊಂಡು ಆಳಿದ ಹಂಡೆ ಪಾಳೇಗಾರರು ಹಾಗೂ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಬಾಗಳಿಯನ್ನು ಕೇಂದ್ರಸ್ಥಾನವನ್ನು ಮಾಡಿಕೊಂಡು ಆಳಿದ ಹರಪನಹಳ್ಳಿ ಪಾಳೇಗಾರರ ಕಾಲದ ಸಾಹಿತ್ಯವನ್ನು ಕುರಿತು ಚರ್ಚಿಸುವುದು ಈ ಸಂಪ್ರಬಂಧದ ಆಶಯ.

ಕರ್ನಾಟಕದ ಇತಿಹಾಸ ಪುಟಗಳನ್ನು ತಿರುವಿ ಹಾಕಿದಾಗ ದೊಡ್ಡ ದೊಡ್ಡ ಅರಸು ಮನೆತನಗಳು ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಗಳನ್ನು ನೀಡಿರುವುದನ್ನು ಕಾಣುತ್ತೇವೆ. ಆದರೆ ಈ ಪಾಳೇಗಾರರೂ ಸಹ ತಮ್ಮ ಶಕ್ತ್ಯಾನುಸಾರ ಸಾಹಿತ್ಯ ಕ್ಷೇತ್ರವನ್ನು ಪೋಷಣೆ ಮಾಡಿವೆ. ಈ ಎರಡು ಪಾಳೇಗಾರರ ಕಾಲದ ಸಾಹಿತ್ಯವನ್ನು ಶಾಸನ ಸಾಹಿತ್ಯ ಹಾಗೂ ಶಿಷ್ಟಸಾಹಿತ್ಯ ಎಂದು ವರ್ಗೀಕರಣ ಮಾಡಿಕೊಂಡು ಇಲ್ಲಿ ಅವಲೋಕಿಸಲಾಗಿದೆ.

1. ಹಂಡೆ ಪಾಳೇಗಾರರ ಕಾಲದ ಸಾಹಿತ್ಯ

ಬಂಕಾಪುರ, ಅನಂತಪುರ, ಕುರುಗೋಡು ಹಾಗೂ ಬಳ್ಳಾರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡಿದವರು ಹಂಡೆ ಪಾಳೇಗಾರರು. ಇವರನ್ನು ಬಳ್ಳಾರಿ ಪಾಳೇಗಾರರು ಎಂದೂ ಕರೆಯಲಾಗುತ್ತಿದೆ. ಶಾಸನ ಕೈಫಿಯತ್ತು ಮೊದಲಾದ ಆಕರಗಳನ್ನು ಗಮನಿಸಿ ಹೇಳುವುದಾದರೆ ಬಳ್ಳಾರಿ ಪಾಳೇಗಾರರು ಕ್ರಿ.ಶ.1537ರಿಂದ ಕ್ರಿ.ಶ.1775ರವರೆಗೆ ಸರಿಸುಮಾರು 238 ವರ್ಷಗಳ ಕಾಲ ಆಳ್ವಿಕೆ

ಪ್ರಾಧ್ಯಾಪಕ, ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ – 583 276, ಬಳ್ಳಾರಿ ಜಿಲ್ಲೆ.

Scanned with CamScanner

ಮಾಡಿದ್ದರೆಂಬುದು ಸ್ಪಷ್ಟವಾಗುತ್ತದೆ. ಈ ಪಾಳೇಗಾರರಲ್ಲಿ ಆಗಿ ಹೋದ ಅರಸರ ಹೆಸರುಗಳು ಹೀಗಿವೆ : 1. ಬಾಲದಹನುಮಪ್ಪನಾಯಕ 2. ಹಿರೇಮಲುಕಪ್ಪನಾಯಕ 3. ಸಿದ್ದಪ್ಪನಾಯಕ 4. ಹಿರೇರಾಮಪ್ಪನಾಯಕ 5. ಚಿಕ್ಕಮಲುಕಪ್ಪನಾಯಕ 6. ಚಿಕ್ಕನಾಯಕ 7. ದ್ಯಾವಪ್ಪನಾಯಕ 8. ಹನುಮಪ್ಪನಾಯಕ 9. ಹಿರೇರಾಮಪ್ಪನಾಯಕ 10. ಚಿಕ್ಕರಾಮಪ್ಪನಾಯಕ.

ಶಾಸನ ಸಾಹಿತ್ಯ

ಹಂಡೆ ಅರಸರು ತಾವು ಮಾಡಿದ ಸಾಮಾಜಿಕ-ಧಾರ್ಮಿಕ ಕಾರ್ಯಗಳನ್ನು, ಮಠಮಾನ್ಯಗಳಿಗೆ ನೀಡಿದ ದಾನದತ್ತಿಗಳ ವಿವರಗಳನ್ನು ಶಾಸನಗಳ ಮೂಲಕ ದಾಖಲಿಸಲಾಗಿದೆ. ಅವುಗಳಲ್ಲಿ ಕೆಲವು ಶಾಸನಗಳನ್ನು ಇಲ್ಲಿ ಗಮನಿಸಲಾಗಿದೆ.

1. ಪೆನುಗೊಂಡೆಯ ವೆಂಕಟಪತಿದೇವರಾಯನ ಸಾಮಂತನಾದ ಹಂಡೆ ಹನುಮಿನಾಯಕ ಅಂಕುಶರಾಯನು ಬಳ್ಳಾರಿ ಸೀಮೆಯ ಮಣ್ಣೂರ ಗ್ರಾಮವನ್ನು ತನ್ನ ಮಗನಾದ ರಾಮಪ್ಪನಾಕನಿಗೆ ಪುಣ್ಯವಾಗಲಿಯೆಂದು ಕರಿಯವೀರಣ್ಣೊಡೆಯನ ಶಿಷ್ಯನಾದ ಚನ್ನಮಲ್ಲಿಕಾರ್ಜುನದೇವನ ಶಿಷ್ಯನಾದ ಕೇದಾರದೇವರಿಗೆ ದಾನವಾಗಿ ನೀಡುತ್ತಾನೆ(ಕನ್ನಡ ವಿ.ವಿ.ಶಾಸನ ಸಂಪುಟ-1 ಬಳ್ಳಾರಿ ಜಿಲ್ಲೆ, ಎಸ್. ಮಣೂರು ಶಾಸನ, ಪುಟ:135).

2. ಹಂಡೆ ಹಿರೇರಾಮಪ್ಪನಾಯಕನು ಶಾ.ಶ.1648(1726)ರಲ್ಲಿ ಬಳ್ಳಾರಿಯ ಅಮ್ಮವ್ವನಮಠದಲ್ಲಿ ದಾಸೋಹ ನಡೆಸಲು ಕೊಟ್ಟೂರುಸ್ವಾಮಿ ಮಠಕ್ಕೆ ಭೂದಾನ ನೀಡುತ್ತಾನೆ (ಕನ್ನಡ ವಿ.ವಿ.ಶಾಸನ ಸಂಪುಟ-1 ಬಳ್ಳಾರಿ ಜಿಲ್ಲೆ, ಕೊಟ್ಟೂರು ಮಠದ ಸನ್ನದು ಪುಟ:141).

3. ಹಂಡೆ ಹಿರೇರಾಮಪ್ಪನಾಯಕನು ತೊಲಮಾಮಿಡಿ, ಸಂಗನಕಲ್ಲು ಹಾಗೂ ಚಾಗನೂರು ಗ್ರಾಮಗಳನ್ನು ಕೊಟ್ಟೂರುಸ್ವಾಮಿ ಮಠದಲ್ಲಿ ದಾಸೋಹ ನಡೆಸಲು ದಾನ ಕೊಟ್ಟಿದ್ದಾನೆ (ಕನ್ನಡ ವಿ.ವಿ.ಶಾಸನ ಸಂಪುಟ-1 ಬಳ್ಳಾರಿ ಜಿಲ್ಲೆ, ಕೊಟ್ಟೂರು ಮಠದ ಸನ್ನದು ಪುಟ:143).

ಶಿಷ್ಟ ಸಾಹಿತ್ಯ

ಹಂಡೆ ಅರಸರು ಧಾರ್ಮಿಕ - ಸಾಮಾಜಿಕ ಕಾರ್ಯಚಟುವಟಿಕೆಗಳಿಗೆ ನೀಡಿದ ಪ್ರೋತ್ಸಾಹ-ಪ್ರೇರಣೆ, ಸಹಾಯ-ಸಹಕಾರ ದೊಡ್ಡದು. ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಷ್ಟೊಂದು ಪ್ರಮಾಣದಲ್ಲಿ ಇಲ್ಲವೆಂದೇ ಹೇಳಬೇಕು. ಆದರೆ ಹಂಡೆ ಮಲುಕಪ್ಪನಾಯಕನಲ್ಲಿ ಮಂತ್ರಿಯಾಗಿದ್ದ ಕೊಂಡಲಗಿರಿಯು **ರಸಿಕ ಮನೋರಂಜನ ವಿಲಾಸ** ಎಂಬ ಚಂಪೂಕಾವ್ಯವನ್ನು ರಚನೆ ಮಾಡಿದ್ದನೆಂಬ ಸಂಗತಿ ತಿಳಿದು ಬರುತ್ತದೆ. ಈ ಕಾವ್ಯದ ಎರಡು ಹಸ್ತಪ್ರತಿಗಳು ಈಗ ಲಭ್ಯವಿದ್ದು, ಅವುಗಳ ವಿವರಗಳು ಹೀಗಿವೆ:

Scanned with CamScanner

1. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ 301ನೆಯ ಕ್ರಮಾಂಕದ ಪ್ರತಿ. 13*2 ಉದ್ದ ಹಾಗೂ 8*4 ಅಗಲ ಆಕಾರದ ಕಾಗದ ಪ್ರತಿ. 207 ಪುಟಗಳನ್ನು ಒಳಗೊಂಡಿದೆ. ಒಂದೊಂದು ಪುಟದಲ್ಲಿ 25 ಸಾಲುಗಳಿದ್ದು, ಒಂದು ಸಾಲಿನಲ್ಲಿ 22 ಅಕ್ಷರಗಳಿವೆ.

ಆದಿ ಭಾಗ

ರಸಿಕ ಮನೋರಂಜನ ವಿಲಾಸ ಕಾವ್ಯಮ್
ಶ್ರೀ ಗೌರೀಭುಜ ವಲ್ಲರೀ ಪರಿವೃತ ಸ್ಕನ್ದಂ ನಮತ್ಪದ್ಮಜಾ
ತಾಗಾರಾತಿ ಕಿರೀಟ ರತನರುಚಿ ತೋಯಾಕ್ರಾಂತಪಾದಂ ಫಲಾ
ಭೋಗ ಸ್ಪರ್ಶನ ಲೋಲಬಾಹುವರಂ ಶಾಖಿಂ ಶ್ರೀ ವಿರೂಪಾಕ್ಷ ಕ
ಲ್ಪಾಗಂ ಭಕ್ತರಭೀಷ್ಟಮಂ ಕೊಡುತಮಿರ್ಕೆನ್ನಂತರಾರಾಮದೋಳ್॥1॥

ಅಂತ್ಯ ಭಾಗ

ವಿಲಸತ್ತುದ್ಗುಣಶಾಲಿ ಕೊಂಡಲಗಿರಿ ಪ್ರಖ್ಯಾತನಾನುಂ ಮಹಾ
ಬಲವದ್ಭೂರಿ ತುರುಷ್ಕ ಕಾನ್ತಸಮರ ಕೃಷ್ಟಾಶ್ವದಂತಾವಲಾ
ವಲಿಭೂಮಿ ಪ್ರಭುತೀಷ್ಪದಾನ ವಿಧಿ ಭೂಪಾಲೀಕೃತಾರ್ಥವುಜೋ
ಜ್ವಲನಂ [ಹಂ]ಡೇ ಮಲುಕೇಂದ್ರಮಾನ್ಯ ಸಚಿವಂ ಪಂಪಾಧಿಪಂಗಿಷ್ಟಮ
ಪ್ಪೊಲೆ ಪೇಳ್ದಂ ಕವಿಸೇವ್ಯ ಸಕಲವಿದ್ವಚ್ಛಾವ್ಯಮಂ ಕಾವ್ಯಮಂ ॥154॥

ಇದು ನಿಯತ ಸುರಾಸುರ ಪಟಲ ನಿಟಿಲತಟಘಟಿತ ಕಸ್ತೂರಿಕಸಾರ ಷಟ್ಪದ ವಿರಾಜಿತ ಪಂಪಾವಿರೂಪಾಕ್ಷ ಶ್ರೀಪಾದಪದ್ಮ ಪರಾಗತಿಲಕ ವಿಭ್ರಾಜಿತ ಫಾಲಫಲಕ ಜಾಯಮಾತ್ಯ ಗೌರಾಂಬಿಕಾ ಗರ್ಭಪಾರಾವಾರ ಸುಧಾಕರ ಮಂತ್ರಿಮಾಣಿಕ್ಯ ಮಕುಟಾಲಂಕಾರ ಕೊಂಡಲಗಿರಿ ವಿರಚಿತ ರಸಿಕಮನೋರಂಜನ ಮಹಾಪ್ರಬಂಧದೊಳೇಕಾದಶೋಧ್ಯಾಯಃ ಸಂಪೂರ್ಣಃ ॥ ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ ಶಾಲಿವಾಹನ ಶಕಾಬ್ದಾಃ ಸಾವಿರದೇಳ್ನೂರ ಎಪ್ಪತ್ತೆಂಟನೆಯ ನಳನಾಮ ಸಂವತ್ಸರ ಜೇಷ್ಠ ಶುದ್ಧ ತ್ರಯೋದಶಿ ಇಂದುವಾಸರೇ ಶುಭನಕ್ಷತ್ರೇ ಶುಭಯೋಗೇ ಶೂಭಕರಣೇ ಶುಭತಿಥೌ ಶುಭಲಗ್ನದಲ್ಲಿ ಬರೆದಂಥಾವರು ಕ ॥ ಸಿರಿಗೇರಿಮತದ ವೃಷಭೇಂದ್ರಾಖ್ಯರವರ ಪತ್ನಾಃ ನೀಲಮ್ಮನವರ ಗರ್ಭಾಬ್ಧಿ ಚಂದ್ರಮನಾದ ರಾಚಪ್ಪನವರ ಅರ್ಧಾಂಗಿನಿಯಳಾದ ಬಸಮ್ಮನವರ ಒಡಲಾಬ್ಧಿ ಚಂದ್ರೋದಯನಾದ ಬಸಪ್ಪನವರು ಬರಕೊಂಡ ಪುಸ್ತಕಂ ಸಂಪೂರ್ಣಂ ॥

(ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ಸಂಪುಟ–3, ಪುಟ:380)

ಈ ಕೃತಿಯ ಇನ್ನೊಂದು ಕಾಗದ ಹಸ್ತಪ್ರತಿ(ಕ್ರ.ಸಂ.722)ಯು ಮೈಸೂರು ವಿಶ್ವವಿದ್ಯಾಲಯದಲ್ಲಿದೆ (ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ

Scanned with CamScanner

ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ಸಂಪುಟ-7, ಪುಟ:528). ಬಹುಶಃ ಇದು ಮೇಲೆ ಸೂಚಿಸಿದ ಪ್ರತಿ(301)ಯ ಮರುಪ್ರತಿಯಾಗಿರಬಹುದು.

ಕವಿಯ ವಿಚಾರ

ಕವಿ ಕೊಂಡಲಗಿರಿಯು ಹೈದ್ರಾಬಾದ ಕರ್ನಾಟಕ ಪ್ರಾಂತ್ಯದ ಚಿತ್ತಾಪುರ ತಾಲೂಕಿನ ದಿಗ್ಗಾವಿ ಗ್ರಾಮದವನು. ಧರ್ಮಾಮಾತ್ಯನ ಪೌತ್ರನೂ ಮಹೇಶ್ವರ ಪೂಜಾನಿರತನಾದ ತಿಮ್ಮಮಾತ್ಯನ ಪುತ್ರನೂ ಆದ ಜಾಯರಸ ಮತ್ತು ಗೌರಾಂಬಿಕೆಯರ ಪುತ್ರ, ಗೌತಮೀಕಾಂತನಾದ ವಿರೂಪಣ್ಣನ ತಮ್ಮ, ವಶಿಷ್ಠಗೋತ್ರದವ ಎಂದು ಕವಿ ತನ್ನ ಪರಿಚಯವನ್ನು ಒಂದು ಪದ್ಯದಲ್ಲಿ ಹೇಳಿಕೊಂಡಿದ್ದಾನೆ. ಇನ್ನೊಂದು ಪದ್ಯದಲ್ಲಿ ಹಂಡೇಮಲುಕೇಂದ್ರನ ಆಸ್ಥಾನದಲ್ಲಿ ಮಂತ್ರಿಯಾಗಿದ್ದನೆಂಬ ಸಂಗತಿಯನ್ನು ಕವಿ ಕಾವ್ಯದ ಕೊನೆಯಲ್ಲಿ ತಿಳಿಸಿದ್ದಾನೆ.

ಈತನ ಕಾಲವನ್ನು ಕವಿಚರಿತೆಕಾರರು ಕ್ರಿ.ಶ. 1590 ಎಂದು ನಿರ್ಧರಿಸಿದ್ದಾರೆ. ಹಂಡೇ ಅರಸು ಮನೆತನದ ಹನುಮ್ಪನಾಯಕನ ಮಗ ಮಲುಕಪ್ಪನು ಶಾ.ಶ. 1506-1518 ರವರೆಗೆ ಅಂದರೆ ಕ್ರಿ.ಶ.1584-1596ವರೆಗೆ ರಾಜ್ಯಭಾರ ಮಾಡಿದವನು. ಬಹುಶಃ ಕೊಂಡಲಗಿರಿಯು ಈ ಅವಧಿಯಲ್ಲಿ ಮಲುಕಪ್ಪನಾಯಕನಲ್ಲಿ ಮಂತ್ರಿಯಾಗಿದ್ದಾಗ ರಸಿಕ ಮನೋರಂಜನ ವಿಲಾಸ ಕಾವ್ಯವನ್ನು ರಚನೆ ಮಾಡಿರಬಹುದು. ವೀರಶುವ ಮತಾವಲಂಬಿತಾಗಿದ್ದನೆಂಬುದಕ್ಕೆ ಕಾವಯದಲ್ಲಿ ಅನೇಕ ಆಧಾರಗಳಿವೆ. ವಿರೂಪಾಕ್ಷನ ಸ್ತುತಿ, ಹರಿಹರಕವಿಯ ಸ್ಮರಣೆ, ಇಷ್ಟಲಿಂಗ-ಪ್ರಾಣಲಿಂಗ-ರುದ್ರಾಕ್ಷಿ ವಿಭೂತಿ ಮೊದಲಾದವುಗಳ ಮಹಿಮೆಯನ್ನು ವರ್ಣಿಸಲಾಗಿದೆ. ಹೀಗಾಗಿ ಕವಿ ವೀರಶೈವನೆಂದು ಹೇಳಬಹುದು.

ಈ ಅವಧಿಯಲ್ಲಿ ವಿಜಯನಗರದ ಶ್ರೀರಂಗರಾಯನ ಮೇಲೆ ಆದಿಲ್ಷಾಹಿ ಸುಲ್ತಾನರು ದಂಡೆತ್ತಿ ಬಂದಾಗ ಮಲುಕಪ್ಪನಾಯಕನು ಶ್ರೀರಂರಾಯನಿ ಸಹಾಯಕ್ಕಾಗಿ ದೊಡ್ಡ ಸೈನ್ಯದೊಡನೆ ಸುಲ್ತಾನರನ್ನು ಸದೆಬಡಿದು ಬುಕ್ಕರಾಯಸಮುದ್ರ ಎಂಬ ಪಟ್ಟಣವನ್ನು ಸ್ಥಾಪಿಸಿ ಅದನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದನು. ಈ ನಡುವೆ ಸುಲ್ತಾನರು ಪುನಃ ದಂಡೆತ್ತಿ ಬಂದು ಶ್ರೀರಂಗರಾಯನ್ನು ಸೋಲಿಸುತ್ತಾರೆ. ಆಗ ಮಲುಕಪ್ಪನು ಸುಲ್ತಾನರ ಆಶ್ರಯವನ್ನು ಬಯಸುತ್ತಾನೆ. ಇದರಿಂದ ಸುಪ್ರೀತರಾದ ಸುಲ್ತಾನರು ವಿಸ್ತಾರವಾದ ರಾಜ್ಯವನ್ನು ನೀಡಿ ಪಾದಷಹಾ ವಜೀರ ಎಂಬ ಬಿರುದನ್ನು ನೀಡಿ ಗೌರವಿಸುತ್ತಾರೆ.

ಕಾವ್ಯ ವಿಚಾರ

ರಸಿಕ ಮನೋರಂಜನ ವಿಲಾಸವು ಹನ್ನೊಂದು ಆಶ್ವಾಸಗಳನ್ನು ಒಳಗೊಂಡ ಚಂಪೂಕಾವ್ಯ(ಅಲ್ಲಲ್ಲಿ ಷಟ್ಪದಿ ಪದ್ಯಗಳೂ ಇವೆ). ಆರಂಭದಲ್ಲಿ ಶಿವ-ಪಾರ್ವತಿ-ವಿನಾಯಕ-ಷಣ್ಮುಖ-ಸರಸ್ವತಿ ಪ್ರಾರ್ಥನೆಯಿದೆ. ಪ್ರತಿಯೊಂದು ಆಶ್ವಾಸದ ಕೊನೆಯಲ್ಲಿ

Scanned with CamScanner

ವಿರೂಪಾಕ್ಷನ ಸ್ತುತಿಯಿದೆ. ಈ ಕಾವ್ಯದ ಕತೆಯನ್ನು ಶಂಕರನು ತನ್ನ ಅರ್ಧಾಂಗಿಯಾದ ಪಾರ್ವತಿಗೆ ಹೇಳಿದನೆಂದೂ, ಅದನ್ನೇ ತಾನು ಕನ್ನಡದಲ್ಲಿ ಸೊಗಸಾಗಿ ರಚಿಸಿರುವೆನೆಂದು ಕವಿಯ ಅಭಿಮತ. ಕಾಶಿಯ ರತ್ನೇಶ್ವರನ ಮಹಿಮೆಯನ್ನು ವಿವರಿಸುವುದು ಈ ಕಾವ್ಯದ ಉದ್ದೇಶ. (ವಾರಣಾಸಿಯ ಗಂಗಾನದಿಯ ತಟದಲ್ಲಿರುವ ರತ್ನೇಶ್ವರ ಮಹಾದೇವ ದೇವಾಲಯವೇ ಈ ಕಾವ್ಯದಲ್ಲಿ ಬರುವ ಕಾಶಿ ರತ್ನೇಶ್ವರ. ಈಗ ಇದನ್ನು ಮಂಡಿಯಾ ಘಾಟ ಎಂದು ಕರೆಯುತ್ತಾರೆ). ವೇಶ್ಯೆಯೊಬ್ಬಳು ಜನರನ್ನು ಮುಗ್ಧಗೊಳಿಸಿ ಅವರಿಂದ ಸಂಪತ್ತನ್ನು ಗಳಿಸಬೇಕೆಂಬ ಉದ್ದೇಶದಿಂದ ಶಿವರಾತ್ರಿಯ ದಿವಸ ಕಾಶಿಯ ರತ್ನೇಶ್ವರ ದೇವಾಲಯಕ್ಕೆ ಹೋಗಿ ಅಲ್ಲಿ ನೆರೆದಿದ್ದ ಜನರ ಮಧ್ಯದಲ್ಲಿ ಹಾವಭಾವವಿಲಾಸಗಳಿಂದ ಹಾಡುತ್ತಾಳೆ. ಇದೂ ತನ್ನ ಸೇವೆಯೆಂದು ಗಮನಿಸಿದ ರತ್ನೇಶ್ವರನು ಆಕೆಗೆ ಸದ್ಗತಿಯನ್ನಿತ್ತು ಸಕಲ ಸೌಭಾಗ್ಯಗಳನ್ನು ದಯಪಾಲಿಸಿದ ವರ್ಣನೆ ಇಲ್ಲಿದೆ. ಆ ಮೂಲಕ ರತ್ನೇಶ್ವರ ಲಿಂಗದ ಮಹಾತ್ಮೆಯನ್ನು ವಿವರಿಸುವುದು ಈ ಕಾವ್ಯದ ಉದ್ದೇಶವಾಗಿದೆ. ರತ್ನೇಶ್ವರನ ಅನುಗ್ರಹದಿಂದ ವೇಶ್ಯಾಜನ್ಮವನ್ನು ನೀಗಿ ರಾಜಕುಮಾರಿಯಾಗಿ ಹುಟ್ಟಿದ ರತ್ನಾವಳಿಯ ಶೃಂಗಾರಕಥೆ ಈ ಕಾವ್ಯದ ಪ್ರಧಾನ ಕಥಾವಸ್ತುವಾಗಿದೆ. ಆ ಕಥೆ ಹೀಗಿದೆ :

ಶ್ರೀವಿಲಾಸಪುರದ ರಾಜನಾದ ವಸುಭೂತಿಗೆ ಕಾಶಿಯ ರತ್ನೇಶ್ವರನ ಅನುಗ್ರಹದಿಂದ ರತ್ನಾವಳಿ ಎಂಬ ಮಗಳು ಜನಿಸುವಳು. ಈಕೆಗೆ ಶಶಿಲೇಖೆ-ಚಿತ್ರಲೇಖೆ-ಅನಂಗಲೇಖೆ ಎಂಬ ಮೂರು ಗೆಳತಿಯರು. ರತ್ನಾವಳಿಯು ಪ್ರಾಪ್ತವಯಸ್ಸಿಗೆ ಬರಲು, ಒಂದು ದಿನ ಕನಸಿನಲ್ಲಿ ಒಬ್ಬ ರಾಜಕುಮಾರನೊಂದಿಗೆ ಮೋಹಿತಳಾಗುತ್ತಾಳೆ. ವಿರಹವೇದನೆಯಿಂದ ಬಳಲಿದ ಆಕೆ ಅವನ್ನು ಎಲ್ಲೆಂದರಲ್ಲಿ ಹುಡುಕಾಡಿಸುತ್ತಾಳೆ, ಆದರೆ ಆತ ಸಿಗುವುದಿಲ್ಲ. ಗೆಳತಿ ಚಿತ್ರಲೇಖೆಯು ಮೂರುಲೋಕಗಳಲ್ಲಿರುವ ರಾಜಕುಮಾರರನ್ನು ಚಿತ್ರದ ಮೂಲಕ ಬರೆದು ತೋರಿಸುವಳು. ಆಗ ನಾಗಲೋಕದ ಶಂಖಚೂಡನ ಮಗನಾದ ರತ್ನಚೂಡನೇ ರತ್ನಾವಳಿಯ ಪ್ರಿಯಕರನೆಂದು ತಿಳಿಯುತ್ತದೆ. ಆತನನ್ನು ಹುಡುಕುತ್ತ ರತ್ನಾವಳಿಯು ತನ್ನ ಗೆಳತಿಯರೊಂದಿಗೆ ನಾಗಲೋಕವನ್ನು ಪ್ರವೇಶ ಮಾಡುತ್ತಾಳೆ. ರತ್ನಚೂಡನೊಂದಿಗೆ ರತ್ನಾವಳಿಯ ವಿವಾಹವಾಗುತ್ತದೆ. ಇದು ಕಾವ್ಯದ ಕಥಾವಸ್ತು.

ಈ ಕೃತಿಯನ್ನು ಕುರಿತಂತೆ ಅನಂತರಂಗಾಚಾರ್ ಅವರು ಹೇಳಿದ ಮಾತುಗಳು ಹೀಗಿವೆ : "ಕಥೆ ಕಿರಿದಾದರೂ ಕವಿಯು ತನ್ನ ವರ್ಣನಾವೈಖರಿಯಿಂದಲೂ ವಾಗ್ಧೋರಣೆಯಿಂದಲೂ ಗ್ರಂಥವನ್ನು ಮಹಾಕಾವ್ಯವನ್ನಾಗಿ ಮಾಡಬೇಕೆಂಬ ಕುತೂಹಲದಿಂದಲೂ ಹಿರಿದಾಗಿ ಬೆಳೆಸಿದ್ದಾನೆ. ಕವಿಯ ಶೈಲಿಯು ಪ್ರೌಢವಾಗಿದೆ. ತಿಳಿಯಾಗಿ ರಸವತ್ತಾಗಿ ಹೃದಯಂಗಮವಾಗಿ ಬರೆಯಲು ಶಕ್ತಿಯಿದ್ದರೂ ಪಾಂಡಿತ್ಯ ಪ್ರದರ್ಶನದ ದೃಷ್ಟಿಯಿಂದ ಶಬ್ದಾಲಂಕಾರ ಮತ್ತು ಚಿತ್ರಕವಿತೆಗಳಿಗೆ ಮನಸೋತಿದ್ದಾನೆ. ಕಥೆಯಲ್ಲಿ ಕಾವ್ಯಮಯವಾದ ಸನ್ನಿವೇಶಗಳು ಕಡಿಮೆ. ಕನ್ನಡ-ಸಂಸ್ಕೃತ ಭಾಷೆಗಳೆರಡರಲ್ಲಿಯೂ ಈತನಿಗೆ ಉದ್ದಾಮ ಪಾಂಡಿತ್ಯವೇನೋ ಇದೆ. ಆದುದರಿಂದಲೇ ಅವನ ಗ್ರಂಥದಲ್ಲಿ ಸಾಮಾನ್ಯವಾಗಿ ಕನ್ನಡ ಗ್ರಂಥಗಳಲ್ಲಿ ಉಪಯೋಗವಾಗುವ ಕಂದ-ವೃತ್ತಗಳೇ ಅಲ್ಲದೆ ಅಪೂರ್ವವಾದ ಮಹೀವೃತ್ತ, ತರಳ, ಲಯಗ್ರಾಹಿ, ಉತ್ಸಾಹ,

Scanned with CamScanner

ವಸಂತತಿಲಕ, ಮತ್ತಕೋಕಿಲ, ಸ್ಫೋಟಕ, ಪರಿವರ್ಧಿನಿ, ಸೀಸಪದ್ಯ, ಗೀತಿಕೆ ಮೊದಲಾದ ವೃತ್ತಜಾತಿಗಳೂ ವಿಶೇಷವಾಗಿ ಉಪಯೋಗವಾಗಿವೆ. ಸಂಸ್ಕೃತ ಪದಪ್ರಯೋಗವು ಕಾವ್ಯಕ್ಕೆ ಶೋಭಾಯಮಾನವಾದುದೆಂದು ಆತನ ಅಭಿಪ್ರಾಯ. ಆದುದರಿಂದ ಆತನ ಅನೇಕ ಕನ್ನಡ ಪದ್ಯಗಳಲ್ಲಿ ಸಂಸ್ಕೃತ ಪದಗಳು ಅತಿಯಾಗಿವೆ. .....ಚಂಪೂಗ್ರಂಥದಲ್ಲಿ ಷಟ್ಪದಿಯನನ್ನು ಉಪಯೋಗಿಸಿರುವುದು ಈತನ ವೈಶಿಷ್ಟ್ಯ. ....ಕುಂಡಲಗಿರಿಯ ಗದ್ಯವು ಕನ್ನಡಮಯವಾಗಿದೆ;ಭಾವಗರ್ಭಿತವಾಗಿದೆ. ಸರಾಗವಾಗಿ ಓಡುತ್ತದೆ, ಅದರಲ್ಲಿ ಪೂರ್ಣವಾದ ಓಜಸ್ಸಿದೆ."(ಅನಂತನಿಧಿ, ಪುಟ:182–183)

ಶಿವಗಂಗೆಯ ಹಿರಿಯ ಸಿಂಹಾಸನದ ಸಂಗಮೇಶ್ವರನ ಕರಕಮಲಸಂಜಾತನಾದ ತರಳ ಚರಪತಿ ಕವಿಯು ಗಂಗೆ ಗೌರಿ ಸಂವಾದ ಎಂಬ ಕಾವ್ಯವನ್ನು ರಚನೆ ಮಾಡಿದ್ದಾನೆ. "ಹಂಡಮಲುಕಗೊಡೆಯ ಕೇಳು ಎಲೆ ತಂಗಿ । ಆತ ಉಂಡ ಮನೆಗೆ ಎರಡು ಬಗೆಯನೆಲೆ ತಂಗಿ" ಎಂದು ಮಲುಕಪ್ಪನಾಯಕನ ವ್ಯಕ್ತಿತ್ವವನ್ನು ಇಲ್ಲಿ ಚಿತ್ರಿಸಲಾಗಿದೆ. ಕವಿ ತರಳ ಚಲಪತಿಯ ಕಾಲ 1750.

ಹೀಗೆ ಹಂಡೆ ಅರಸನಾದ ಮಲುಕಪ್ಪನಾಯಕನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಕುಂಡಲಗಿರಿಯು ರಸಿಕ ಮನೋರಂಜನ ವಿಲಾಸ ಎಂಬ ಕಾವ್ಯವನ್ನು ರಚನೆ ಮಾಡಿದ್ದಾನೆ. ಆ ಮೂಲಕ ಹಂಡೆ ಅರಸರು ಸಾಹಿತ್ಯ ಸಂವರ್ಧನೆಗೆ ಪ್ರೋತ್ಸಾಹ ನೀಡಿದ್ದರೆಂಬುದು ಇದರಿಂದ ತಿಳಿದುಬರುತ್ತದೆ.

2. ಹರಪನಹಳ್ಳಿ ಪಾಳೇಗಾರರ ಕಾಲದ ಸಾಹಿತ್ಯ

ವಿಜಯನಗರೋತ್ತರ ಕಾಲದ ಇತಿಹಾದಲ್ಲಿ ಹರಪನಹಳ್ಳಿ ಪಾಳೇಗಾರರೂ ಪ್ರಸಿದ್ಧರು. ದಾದೇನಾಯಕ(1488–1514)ನಿಂದ ಹಿಡಿದು ಎರಡನೇ ಸೋಮಶೇಖರನಾಯಕ(1709–1721)ರವರೆಗೆ ಹದಿನಾರು ಜನ ಅರಸರು ಈ ಪಾಳೇಗಾರ ಮನೆತನದಲ್ಲಿ ಆಗಿ ಹೋಗಿದ್ದಾರೆ. ಇವರಲ್ಲಿ ಕೆಲ ಅರಸರು ಸಾಹಿತ್ಯ ಸಂಸ್ಕೃತಿ ಸಂವರ್ಧನೆಗೆ ಸಾಕಷ್ಟು ಪ್ರೋತ್ಸಾಹ ನೀಡಿದ್ದರೆಂಬುದಕ್ಕೆ ಅನೇಕ ಶಾಸನಗಳು ಹಾಗೂ ಕೆಲವು ಕಾವ್ಯಗಳು ನಮ್ಮ ಮುಂದಿವೆ.

ಶಾಸನ ಸಾಹಿತ್ಯ

ಹರಪನಹಳ್ಳಿ ಪಾಳೇಗಾರರ ಕಾಲದಲ್ಲಿ ಮೂವತ್ತಕ್ಕೂ ಹೆಚ್ಚು ಶಾಸನಗಳು ರಚನೆಗೊಂಡಿವೆ. ಅವುಗಳಲ್ಲಿ ಕೆಲವು ಶಾಸನಗಳ ಬಗ್ಗೆ ನೋಡಬಹುದು.

1. ದಾದಯ್ಯನಾಯಕನು ಬಾಗುಳಿಯ ಕಲ್ಲಿನಾಥದೇವರ ಸನ್ನಿಧಿಯಲ್ಲಿ ಕೊಟ್ಟೂರು ಸೀಮೆಯ ಕುರುಬ ಕುಲದ ಸಿದ್ಧಪ್ಪ ಒಡೆಯರು ಮೊದಲಾದವರಿಗೆ ಕುರಿತೆರಿಗೆಯನ್ನು ಮನ್ನಾ ಮಾಡಿದ್ದನ್ನು ಕೊಟ್ಟೂರು ಗ್ರಾಮದ ಶಿಲಾಶಾಸನ ತಿಳಿಸುತ್ತದೆ.

Scanned with CamScanner

2. ಮುಮ್ಮಡಿ ಬಸಪ್ಪನಾಯಕನ ಕಾಲದಲ್ಲಿ ಉಚ್ಚಂಗೆಮ್ಮನ ಗುಡಿಯನ್ನು ಜೀರ್ಣೋದ್ಧಾರ ಮಾಡಿಸಿ,ಒಂದು ಗಂಟೆಯನ್ನು ದಾನ ಮಾಡಿದ್ದನ್ನು ಶಾಸನವೊಂದು ತಿಳಿಸುತ್ತದೆ. ಈ ಗಂಟೆಯ ತೂಕ ಒಂದು ಮಣ ಗಲಜಕ್ಕೊಂದು ಸೇರು ಎಂದು ಉಲ್ಲೇಖಿಸಿದೆ.

3. ವೀರಬಸಪ್ಪನಾಯಕನು ಭೂಮಿಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಶಿಷ್ಟ ಸಾಹಿತ್ಯ

1. ದೇವಕವಿಯ ಮರುಳಸಿದ್ಧ ಕಾವ್ಯ

ಪಂಚಾಚಾರ್ಯರಲ್ಲಿ ಒಬ್ಬನಾದ ಮರುಳಸಿದ್ಧನನ್ನು ಕುರಿತು ದೇವಕವಿಯು 1509ರಲ್ಲಿ ಮರುಳಸಿದ್ಧ ಕಾವ್ಯ ಬರೆದಿದ್ದಾನೆ. ಎ.ನ.ಕೃಷ್ಣರಾಯರು ಈ ಕೃತಿಯ ಸಂಪಾದಕರು. ಧಾರವಾಡದ ಕರ್ನಾಟಕ ಸಾಹಿತ್ಯ ಮಂದಿರದಿಂದ ಪ್ರಕಟಣೆ. 6 ಸಂಧಿ 480 ವಾರ್ಧಕ ಷಟ್ಪದಿ ಪದ್ಯಗಳನ್ನು ಒಳಗೊಂಡಿದೆ. 1950 ? ರಲ್ಲಿ ಪ್ರಕಟವಾಗಿರಬಹುದು. "ಈ ಗ್ರಂಥವು ಬರೀ ಕಾವ್ಯವಲ್ಲ, ಅನೇಕ ಐತಿಹ್ಯಾಕ ಅಂಶಗಳನ್ನು ಒಳಗೊಂಡ ವೀರಶೈವ ಪುರಾಣ. ಕನ್ನಡ ನಾಡಿನಲ್ಲಿ ಜನಿಸಿ ನಾಡಿಗರನ್ನು ತನ್ನ ನಡೆನುಡಿಗಳಿಂದ ಬೋಧಿಸಿದ ಮಹಾಪುರುಷನೊಬ್ಬನ ಜೀವನ ಚರಿತ್ರೆಯಿದು".

ಎಸೆವಷ್ಟದಶವರ್ಣದರ್ಥಲಂಕಾರರಸ
ಪೊಸಕಾವ್ಯ ಚದುರು ಲಕ್ಷಣ ಪ್ರಾಸ ಪದರೀತಿ
ವಿಷಮ ಸಮ ಗಣನೇಮವೆಸೆವ ವರ್ಣಂಗಳೊಳಗೆಸೆವ ಪ್ರಕಾರಂಗಳ
"ಪಶುಪತಿ ಸ್ವಯಂಭು ಬಾಳ್ಗುಳಿಯ ಕಲಿದೇವನಿಂ"
ತುಸುರಿದೊಲು ದೇವ ಪೇಳ್ದ ಹರನ ಕೃತಿರಸವ 1-16

ಪೇಳಿದನು ದೇವಸುತ ಪೇಳೆನುತಲೀಕೃತಿಯ
ಶಾಲಿವಾಹನ ಶಕಂ ಸಾಗುತಿರೆ ಸಾವಿರದ
ಮೇಲೆ ಐನೂರು ಒಂಭತ್ತನೆಯ ಸರ್ವಜಿತು ಸಂವತ್ಸರೆಂದೆನಿಸುವ
ಕಾಲದೊಳು ವೈಶಾಖ ಶುದ್ಧ ಪೌರ್ಣಮಿಯೊಳಗಾ
ವೇಳೆಯೊಳು ಜೀವವಾರ ಶುಭತಿಥಿಯೊಳಗೆ
ಬಾಲಶಶಿಧರ ಮರುಳಸಿದ್ಧೇಶ್ವರನ ಕೃತಿಯ ಕೇಳಿ ಶರಣರು ಸಂತತ 6-82

ಪಂಚಾಚಾರ್ಯರಲ್ಲಿ ಒಬ್ಬನಾದ ಮರುಳಸಿದ್ಧನ ಚರಿತ್ರೆಯನ್ನು ನಿರೂಪಿಸುವ ಕಾವ್ಯ ಇದಾಗಿದೆ.

2. ಹರಿಯಣ್ಣ ಕವಿಯ ಹಯರತ್ನಶ್ರೇಣಿ

7 ಸಂಧಿ 142 ಷಟ್ಪದಿ ಪದ್ಯಗಳನ್ನು ಒಳಗೊಂಡ ಒಂದು ಕಿರು ಲೌಕಿಕಶಾಸ್ತ್ರ ಕೃತಿಯಿದು. 1-4 ಭಾಮಿನಿ ಷಟ್ಪದಿ ಹಾಗೂ 5-7 ಸಂಧಿಗಳು ವಾರ್ಧಕ ಷಟ್ಪದಿಯಲ್ಲಿವೆ.

Scanned with CamScanner

ಉಚ್ಚಂಗಿದುರ್ಗದ ದುರ್ಗಾಂಬಿಕೆಯನ್ನು ಸ್ತುತಿಸಿದ್ದಾನೆ. ಹಿರಿಯಣ್ಣ ಕವಿಯು ಉಚ್ಚಂಗಿದುರ್ಗದ ದುರ್ಗಾಂಬಿಕೆಯ ಪರಮಭಕ್ತನು. ಪ್ರತಿಸಂಧಿಯ ಕೊನೆಯಲ್ಲಿ "ಧರೆಗಧಿಕವುತ್ಸಂಗಿ ಗಿರಿಯಲಿ । ಮೆರೆವ ದುರ್ಗಾಂಬಿಕೆಯ ಸರಿಪದ । ಸರಸಿಜ ಭ್ರಮರಾಯಮಾನ ಕವೀಂದ್ರ ಹಿರಿಯಣ್ಣ । ವಿರಚಿಸಿದ ಹಯರತ್ನಶ್ರೇಣಿಯಲೊರದ....." 1-29

ಕೃತಿಯ ಕೊನೆಯಲ್ಲಿ ತನ್ನ ಆಶ್ರಯದಾತನನ್ನು ಕೃತಿರಚನೆ ಮಾಡಿದ ಕಾಲವನ್ನು ಹೇಳಿಕೊಂಡಿದ್ದಾನೆ. ಆ ಪದ್ಯ ಹೀಗಿದೆ :

ಶಾಲಿವಾಹನ ಶಕವು ಸಂದೊಂದು ಸಾವಿರದ
ಏಳುನೂರು ವರುಷಕ್ಕೆ ವಿಳಂಬಿ ಸಂವತ್ಸರದ ವನ
ಮಾಲೆ ಪೆಸರಾಂತ ಮಾಸ ಶುಕ್ಲಪಂಚಮಿಯ ಭೃಗುವಾರಲೀಕ್ಷಿತಿಯೊಳೊ
ಲೀಲೆಮಿಗೆ ಹರಪುರವನಾಳ್ದ ಬಾಗುಳಿಯ ಭೂ
ಪಾಲಮಣಿ ಬಸವೇಂದ್ರ ನೃಪಾಲ ಪುರೋಹಿತಂ
ಪೇಳಿದ ಹಯರತ್ನಶ್ರೇಣಿಯೆಂಬ ತುರಗಲಕ್ಷನರ್ಥಿಯಿಂದಾ " 7-57

ಅಂದರೆ, 1690-17-9ರವರೆಗೆ ಹರಪನಹಳ್ಳಿ ಪಾಳೇಗಾರ ಬಾಗುಳಿಯ ಬಸಪ್ಪನಾಯಕನಲ್ಲಿ ಪುರೋಹಿತನಾಗಿದ್ದವನು ಹಿರಿಯಣ್ಣ ಕವಿ. ಈತ 1700(ಕ್ರಿ.ಶ.1778)ರಲ್ಲಿ ಕುದುರೆಗಳ ಲಕ್ಷಣ, ಸ್ವರೂಪ, ಪ್ರಕಾರ, ಅವುಗಳಿಗೆ ಬರುವ ಕಾಯಿಲೆಗಳು, ಔಷಧಿಗಳು ಇತ್ಯಾದಿ ಸಂಗತಿಗಳನ್ನು ತಿಳಿಸುವ ಹಯರತ್ನಶ್ರೇಣಿಯೆಂಬ ಹೆಸರನ್ನುಳ್ಳ ಅಶ್ವಶಾಸ್ತ್ರವನ್ನು ರಚನೆ ಮಾಡಿದ್ದಾನೆಂಬುದು ಮೇಲಿನ ಪದ್ಯದಿಂದ ತಿಳಿದು ಬರುತ್ತದೆ.

ಹೀಗೆ ಹಂಡೆ – ಹರಪನಹಳ್ಳಿ ಪಾಳೇಗಾರರು ಸಾಹಿತ್ಯ ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಆ ಮೂಲಕ ಕನ್ನಡ ಸಾಹಿತ್ಯ ಸಂವರ್ಧನೆಯಲ್ಲಿ ಕೈಜೋಡಿಸಿರುವುದು ಗಮನಿಸಬೇಕಾದ ಸಂಗತಿ.

ಸಹಾಯಕ ಗ್ರಂಥಗಳು

1. ಹಳ್ಳಿಕೇರಿ ಎಫ್.ಟಿ., (ಸಂ), ಹಿರಿಯಣ್ಣ ಕವಿಯ ಹಯರತ್ನಶ್ರೇಣಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2003.
2. ದೇವರಕೊಂಡಾರೆಡ್ಡಿ(ಸಂ), ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ-I, (ಬಳ್ಳಾರಿ ಜಿಲ್ಲೆ), ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ, 1998
3. ಸದಾಶಿವಪ್ಪ ಕುಂಬಾ, ಹರಪನಹಳ್ಳಿ ಪಾಳೇಗಾರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

Scanned with CamScanner

ವಿಜಯನಗರೋತ್ತರ ಕಾಲದ ಇತಿಹಾಸ ಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಿರುವ ನಾಡಿನ ಸಂಶೋಧಕರಲ್ಲಿ ಒಬ್ಬರಾದ ಡಾ. ಡಿ.ಎನ್.ಯೋಗೀಶ್ವರಪ್ಪ ತುಮಕೂರಿನ ಪ್ರತಿಷ್ಠಿತ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಮಹಿಳಾ ಪದವಿ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಇವರ ಇತ್ತೀಚಿನ ಕೃತಿಯಾದ "ನಾಯಕತನ ಪದ್ಧತಿ" ಕರ್ನಾಟಕದ ಸಂಶೋಧನಾ ವಲಯದಲ್ಲಿ ಸಂಚಲನವುಂಟುಮಾಡಿದೆ. ಹಾಗಲವಾಡಿ ನಾಯಕರು, ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು, ಪಾವಗಡ ನಾಯಕರು ಎಂಬ ಕೃತಿಗಳೆಲ್ಲಾ ವಿಜಯನಗರೋತ್ತರ ಕಾಲದ ಚರಿತ್ರೆಯನ್ನು ಅರಿಯಲು ಸಹಾಯವಾಗುತ್ತವೆ. ತುಮಕೂರು ಜಿಲ್ಲೆಗೇ ಸೀಮಿತವಾದ "ಕಲ್ಪಶೋಧ" ಎಂಬ ಇವರ ಕೃತಿ ಸ್ಥಳೀಯ ಇತಿಹಾಸ ಅಧ್ಯಯನಕಾರರಿಗೆ ಕೈಗನ್ನಡಿಯಂತಿದೆ.

ಯು.ಜಿ.ಸಿ., ಐ.ಸಿ.ಹೆಚ್.ಆರ್. ಹಲವು ವಿಶ್ವವಿದ್ಯಾನಿಲಯಗಳು ಮತ್ತು ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳ ಸಹಯೋಗದೊಂದಿಗೆ ಅನೇಕ ವಿಚಾರ ಸಂಕಿರಣಗಳನ್ನು ಸಂಘಟಿಸಿರುವ ಇವರು ಅವುಗಳಲ್ಲಿ ಮಂಡಿತವಾದ ಪ್ರಬಂಧಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಎಲ್ಲ ವಿದ್ವಾಂಸರಿಂದ ಸಂಗ್ರಹಿಸಿ ಪ್ರಕಟಣೆ ಮಾಡುತ್ತಿರುವುದು ಸಂತಸದ ವಿಷಯ. ಈ ಹಿನ್ನೆಲೆಯಲ್ಲಿ ಐ.ಸಿ.ಹೆಚ್.ಆರ್. ನೆರವಿನಿಂದ ಏರ್ಪಡಿಸಿದ್ದ "ಪ್ರಾದೇಶಿಕತೆ : ಕರ್ನಾಟಕದ ಪಾಳೆಯಗಾರರು" ಎಂಬ ವಿಚಾರ ಸಂಕಿರಣದಲ್ಲಿ ಮಂಡಿತವಾದ ಆಯ್ದ ಒಟ್ಟು 26 ವಿದ್ವತ್ ಪ್ರಬಂಧಗಳನ್ನು ಸಂಗ್ರಹಿಸಿ ಈ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಇದು ಕರ್ನಾಟಕದ ಪಾಳೆಯಗಾರರ ಎಲ್ಲ ಮಗ್ಗುಲುಗಳನ್ನು ತಿಳಿಯಲು ಸಹಾಯಕವಾಗಿದೆ. ಅಲ್ಲದೆ ಈ ಕೃತಿಯ ಮೊದಲ ಎರಡು ಲೇಖನಗಳು ವಿಜಯನಗರ ಚರಿತ್ರೆಗೆ ಸಂಬಂಧಪಟ್ಟಿದ್ದರೂ ಆ ಪ್ರಬಂಧಗಳು ಚರಿತ್ರೆಯ ಬಗ್ಗೆ ಹೊಸ ಬೆಳಕನ್ನು ನೀಡಿವೆ.

ಈ ಕೃತಿ ಕ್ರಿ.ಶ. 1565 ರಿಂದ ಕ್ರಿ.ಶ. 1800 ರವರೆಗಿನ ಕರ್ನಾಟಕದ ಚರಿತ್ರೆಯ ಅಲ್ಲಲ್ಲಿ ಅಸ್ಪಷ್ಟವಾಗಿದ್ದ ಸಂಗತಿಗಳನ್ನು ತುಂಬಲು ಪ್ರಯತ್ನಿಸಿದೆಯಲ್ಲದೆ ಸ್ಥಳೀಯ ವಿಶಿಷ್ಟ ಸಂಗತಿಗಳನ್ನು ತಿಳಿಸಿಕೊಡುವಲ್ಲಿ ಯಶಸ್ವಿಯಾಗಿದೆ. ಇದು ಈ ಕ್ಷೇತ್ರದಲ್ಲಿ ಮತ್ತಷ್ಟು ಸಂಶೋಧನೆ ಕೈಗೊಳ್ಳಲು ಭವಿಷ್ಯದ ಸಂಶೋಧನೆಗೆ ಹಾದಿ ತೋರಿಸುತ್ತದೆ.

ಡಾ. [illegible]



205

ಪ್ರಗತಿ ಗ್ರಾಫಿಕ್ಸ್ ಬೆಂಗಳೂರು

PRAGATI GRAPHICS

Rs. 400/-

Scanned with CamScanner

ಸಾರಿಪಾಠ

ಡಾ. ಶ್ರೀರಾಮ ಇಟ್ಟಣ್ಣವರ
ಅಭಿನಂದನ ಗ್ರಂಥ

Scanned with CamSca

Scanned with CamScanner

ಪಾರಿಜಾತ

ಡಾ. ಶ್ರೀರಾಮ ಇಟ್ಟಣ್ಣನವರ ಅಭಿನಂದನ ಗ್ರಂಥ

ಪ್ರಧಾನ ಸಂಪಾದಕರು

ಡಾ. ಎಂ.ಎಸ್. ಮದಭಾವಿ

ಸಂಪಾದಕರು

ಡಾ. ಎಂ.ಎಂ. ಪಡಶೆಟ್ಟಿ

ಡಾ. ಎಸ್.ಕೆ. ಕೊಪ್ಪಾ

ಡಾ. ಚನ್ನಪ್ಪ ಕಟ್ಟಿ

ಶ್ರೀ ಶಿವಾನಂದ ಶೆಲ್ಲಿಕೇರಿ

ಪ್ರಕಾಶಕರು

ಡಾ. ಎಂ.ಎಂ.ಕಲಬುರ್ಗಿ ಲಿಂಗಾಯತ ಅಧ್ಯಯನ ಸಂಸ್ಥೆ

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ

ಡಂಬಳ – ಗದಗ

Scanned with CamSca

Scanned with CamScanner

PARIJATA	:	*A Felicitation book on Dr. Sriram Ittannavar*
Editors	:	Dr. M.S.Madabhavi, Dr. M.M.Padashatti, Dr. S.K.Koppa, Dr.Channappa Katti, Shri Shivanand Shellikeri
Published by	:	Dr. M.M.Kalaburgi Lingayat Adhyayana Samsthe, Sri Jagadguru Tontadarya Math, Gadag–582101
©	:	Publishers
First Edition	:	2021
Pages	:	xxxii + 808 = 840
Copies	:	1000
Paper used	:	70 GSM, N.S.Light Weight Maplitho
Price	:	₹ 600.00
Printer	:	**The Print Point**, Bangaluru-44. M – 9739067355
ಪಾರಿಜಾತ	:	ಡಾ. ಶ್ರೀರಾಮ ಇಟ್ಟಣ್ಣವರ ಅಭಿನಂದನ ಗ್ರಂಥ
ಸಂಪಾದಕರು	:	ಡಾ. ಎಂ.ಎಸ್.ಮದಭಾವಿ, ಡಾ. ಎಂ.ಎಂ.ಪದಶೆಟ್ಟಿ, ಡಾ. ಎಸ್.ಕೆ.ಕೊಪ್ಪಾ, ಡಾ. ಚನ್ನಪ್ಪ ಕಟ್ಟಿ, ಶ್ರೀ ಶಿವಾನಂದ ಶೆಲ್ಲಿಕೇರಿ
ಪ್ರಕಾಶಕರು	:	ಡಾ. ಎಂ.ಎಂ.ಕಲಬುರ್ಗಿ ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ–೫೮೨೧೦೧
ಹಕ್ಕುಗಳು	:	ಪ್ರಕಾಶಕರವು
ಪ್ರಥಮ ಮುದ್ರಣ	:	೨೦೨೧
ಪುಟಗಳು	:	xxxii+೮೦೮=೮೪೦
ಪ್ರತಿಗಳು	:	೧೦೦೦
ಬಳಸಿದ ಕಾಗದ	:	೭೦ ಜಿ.ಎಸ್.ಎಮ್. ಎನ್.ಎಸ್. ಲೈಟ್‌ವೇಟ್ ಮ್ಯಾಪ್‌ಲಿಥೊ
ಬೆಲೆ	:	₹ ೬೦೦.೦೦
ಅಕ್ಷರ ಜೋಡಣೆ	:	ಶ್ರೀಮತಿ ವಿಜಯಲಕ್ಷ್ಮೀ ಥಾಲಬಾವಡಿ
ಮುಖಪುಟ ವಿನ್ಯಾಸ	:	ಕೆ.ಕೆ.ಮಕಾಳಿ, ಹೊಸಪೇಟೆ ಮೋ:೯೪೪೯೨೨೫೧೧೩
ಮುದ್ರಕರು	:	ದಿ ಪ್ರಿಂಟ್ ಪಾಯಿಂಟ್, ಬೆಂಗಳೂರು-೪೪, ಮೊ – ೯೭೩೯೦೬೭೩೫೫

Scanned with CamScanner

೩೫. ಭೂಮಿ ತೂಕದ ಅಪ್ಪ – ವಿಜಯಶ್ರೀ ಇಟ್ಟಣ್ಣವರ / ೨೦೨
೩೬. ಅಪ್ಪನೆಂಬ ಒರತೆ – ನಿರಂಜನ ಇಟ್ಟಣ್ಣವರ / ೨೦೬

ಎಸಳು-೩

ಗ್ರಂಥಾವಲೋಕನ

೧. ಹೊಳಸಾಲ ಬಳ್ಳಿ- ರಾಜಶೇಖರ ಮಠಪತಿ(ರಾಗಂ) / ೨೧೩
೨. ಹಾಡುಣು ಬಾಧ ಪ್ರೇಮದ ಹಾಡ- ರಾಜಶೇಖರ ಬಸುಪಟ್ಟದ / ೨೨೦
೩. ಗಾಲಿ ಉಳ್ಳತೈತಿ- ಮಲ್ಲಿಕಾರ್ಜುನ ಹಿರೇಮಠ / ೨೩೨
೪. ನೂರು ಶಿಶು ಗೀತೆಗಳು- ಗುರುರಾಜ ಲೂತಿ / ೨೩೫
೫. ಹೊತ್ತು ಮೂಡುವ ಸಮಯ- ವಿಷ್ಣು ಎಂ. ಶಿಂದೆ / ೨೪೫
೬ ಪಾರಿಜಾತದವರು- ಎಸ್.ಕೆ.ಕೊನೆಸಾಗರ / ೨೫೨
೭ ಸೃಜನ ವಿಧಾನ – ಎಸ್.ಕೆ.ಕೊಪ್ಪಾ / ೨೫೮
೮. ಲಾವಣಿ- ರಾಮಕೃಷ್ಣ ಮರಾಠೆ / ೨೭೦
೯. ಶ್ರೀಕೃಷ್ಣ ಪಾರಿಜಾತ; ಒಂದು ಅಧ್ಯಯನ – ಬಸವರಾಜ ಮಲಶೆಟ್ಟಿ / ೨೮೦
೧೦. ಸಣ್ಣಾಟ- ಸಂಜೀವಕುಮಾರ ಅತಿವಾಳೆ / ೨೮೮
೧೧. ಕೊಣ್ಣೂರು ಶ್ರೀ ಕರಿಸಿದ್ಧೇಶ್ವರ ದೇವಸ್ಥಾನ- ವಾಯ್.ಎಂ.ಯಾಕೊಳ್ಳಿ / ೨೯೧
೧೨. ಹಲಗಲಿ: ಗ್ರಾಮ ಜಾನಪದ- ಅರ್ಜುನ ಗೊಳಸಂಗಿ / ೨೯೯
೧೩. ಜಾನಪದ ಪರಿಕ್ರಮ – ಚಂದ್ರಪ್ಪ ಸೊಬಟಿ / ೩೦೨
೧೪. ಹಾಲ ಹರವಿ- ಎಫ್.ಟಿ.ಹಳ್ಳಿಕೇರಿ / ೩೧೧
೧೫. ಬಯಲಾಟ ಲೇಖನಗಳು – ಸಿ.ಕೆ.ನಾವಲಗಿ / ೩೧೯
೧೬. ಬೂದಿಹಾಳ ಶ್ರೀ ಫಕೀರೇಶ್ವರ ಮಠ – ಎಸ್.ಡಿ.ಕೆಂಗಲಗುತ್ತಿ / ೩೩೦
೧೭. ಜಾನಪದ ಪಶುವೈದ್ಯ; ಬೀಳಗಿ ಸಿದ್ದಪ್ಪ – ವನಂ. ಶಿವರಾಮು / ೩೪೦
೧೮. ಕೌಜಲಗಿ ನಿಂಗವ್ವ – ಗುರುಪಾದ ಮರಿಗುದ್ದಿ / ೩೪೫
೧೯. ಲೋಕಾಪುರ ಕೃಷ್ಣಾಜಿ ದೇಶಪಾಂಡೆ – ಮಹಾಲಿಂಗ ಪೋಳ / ೩೫೨

Scanned with CamScanner

೧೪. ಹಾಲಹರವಿ

• ಎಫ್.ಟಿ. ಹಳ್ಳಿಕೇರಿ

ಕರ್ನಾಟಕದ ಹಿರಿಯ ಜನಪದ ವಿದ್ವಾಂಸರಲ್ಲಿ ಒಬ್ಬರಾದ ಡಾ.ಶ್ರೀರಾಮ ಇಟ್ಟಣ್ಣವರ ಅವರು ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದ ಸಂಶೊಧನ ಸಂಪ್ರಬಂಧಗಳ ಸಂಕಲನವಾಗಿದೆ. ಹಾಲಹರವಿ.ಈ ಸಂಶೋಧನ ಸಂಕಲನವನ್ನು ಪರಾಮರ್ಶಿಸುವ ಮುನ್ನ ಡಾ.ಶ್ರೀರಾಮ ಇಟ್ಟಣ್ಣವರ ಜೊತೆಗಿನ ನನ್ನ ಒಡನಾಟದ ಕೆಲವು ಸಂಗತಿಗಳನ್ನು ಹಂಚಿಕೊಳ್ಳುವುದು ಸೂಕ್ತ. ಏಕೆಂದರೆ ಈ ಲೇಖನ ಅವರ ಅಭಿನಂದನ ಗ್ರಂಥದಲ್ಲಿ ಪ್ರಕಟಗೊಳ್ಳುತ್ತಿದೆ. ಹೀಗಾಗಿ ಅವರ ಜೊತೆಗಿನ ಕೆಲವು ಸಂದರ್ಭಗಳನ್ನು ನನಗೆ ನೆನಪಿಸಿಕೊಳ್ಳಲು ಮತ್ತು ದಾಖಲಿಸಲು ಇದೊಂದು ಸದವಕಾಶವೆಂಬುದು ನನ್ನ ಭಾವನೆ.

ನಾನು ೧೯೮೯-೯೨ರ ಅವಧಿಯಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪಿಎಚ್.ಡಿ ಅಧ್ಯಯನ ಮಾಡುತ್ತಿರುವ ಸಂದರ್ಭ. ಗ್ರಂಥಾಲಯದಲ್ಲಿ ಪಿಎಚ್.ಡಿ. ಗ್ರಂಥಗಳನ್ನು ಪರಿಶೀಲಿಸುವಾಗ 'ಶ್ರೀ ಕೃಷ್ಣ ಪಾರಿಜಾತ : ಒಂದು ಅಧ್ಯಯನ' ಗಮನಕ್ಕೆ ಬಂತು. ಕನ್ನಡದ ಪ್ರಸಿದ್ಧ ಸಂಶೋಧಕರು ಹಾಗೂ ನಮ್ಮೆಲ್ಲರಿಗೂ ಗುರುಗಳೂ ಆಗಿದ್ದ ಎಂ.ಎಂ.ಕಲಬುರ್ಗಿ ಅವರ ಮಾರ್ಗದರ್ಶನದಲ್ಲಿ ಶ್ರೀರಾಮ ಇಟ್ಟಣ್ಣವರ ಅವರು ಸಿದ್ಧಪಡಿಸಿದ ಮಹಾಪ್ರಬಂಧ ಅದಾಗಿತ್ತು. ಮುನ್ನುಡಿಯ ಕೊನೆಯಲ್ಲಿ ಕಲಬುರ್ಗಿಯವರು 'ಉತ್ತಮ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದು ಅಧ್ಯಾಪಕನಿಗೂ ಒಂದು ಶೈಕ್ಷಣಿಕ ತರಬೇತಿ. ಮಾರ್ಗದರ್ಶನ ಸಂದರ್ಭದಲ್ಲಿ ಅಂಥ ಅನುಭವವನ್ನು ನನ್ನದಾಗಿಸಿದ ಶ್ರೀರಾಮ ಇಟ್ಟಣ್ಣವರ ಅವರಿಗೆ ಮುನ್ನುಡಿಯ ಮುಕ್ತಾಯದಲ್ಲಿ ಶುಭವನ್ನು ಹಾರೈಸುತ್ತೇನೆ' ಎಂಬ ಮಾತನ್ನು ಹೇಳಿದ್ದರು. ಈ ಮಾತನ್ನು ಗಮನಿಸಿದಾಗ ನನಗೆ ಶ್ರೀರಾಮ ಇಟ್ಟಣ್ಣವರ ಜೊತೆ ಮಾತನಾಡಬೇಕು ಎಂಬ ತವಕ ಇದ್ದೇ ಇತ್ತು. ಆದರೆ ಹಲವು ವರ್ಷಗಳವರೆಗೆ ಅವಕಾಶ ಕೂಡಿಬರಲಿಲ್ಲ. ಮುಂದೆ ೨೦೦೬ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಹಾಲುಮತ ಅಧ್ಯಯನ ಪೀಠ ಆರಂಭವಾದ ಸಂದರ್ಭ. ನಾನು ಆ ಪೀಠದ ಸ್ಥಾಪಕ ಸಂಚಾಲಕನಾಗಿದ್ದೆ.ಆಗ ಪೀಠದ ಮೊದಲ ಸಲಹಾ ಸಮಿತಿಯ ಬಾಹ್ಯ ಸದಸ್ಯರಲ್ಲಿ ಶ್ರೀರಾಮ ಇಟ್ಟಣ್ಣವರ ಅವರನ್ನು ಕುಲಪತಿಗಳು ನೇಮಕ ಮಾಡಿದ್ದರು.

Scanned with CamScanner

ಸಲಹಾಸಮಿತಿ ಸಭೆಯಲ್ಲಿ ಹಾಲುಮತ ಪೀಠವು ಕೈಕೊಳ್ಳಬಹುದಾದ ವಿವಿಧ ಯೋಜನೆಗಳು, ವಿಚಾರಸಂಕಿರಣ, ಪುಸ್ತಕ ಪ್ರಕಟಣೆ, ವಿಶೇಷ ಉಪನ್ಯಾಸ ಇತ್ಯಾದಿ ವಿಚಾರಗಳ ಕುರಿತು ಚರ್ಚೆ ಮಾತುಕತೆ ನಡೆಯಬಹುದಿದ್ದವು. ಅಲ್ಲಿಂದ ಅವರ ಜೊತೆ ಒಡನಾಟ ಆರಂಭವಾಯಿತು. ಹಾಲುಮತ ಅಧ್ಯಯನ ಪೀಠವು ಪ್ರತಿವರ್ಷ ನಡೆಸುತ್ತಿರುವ ಹಾಲುಮತ ಸಂಸ್ಕೃತಿ ಸಮ್ಮೇಳನ, ವಿಶೇಷ ಉಪನ್ಯಾಸ ಸರಣಿ ಕಾರ್ಯಕ್ರಮ, ಪುಸ್ತಕ ಪ್ರಕಟಣೆ ಮೊದಲಾದ ಯೋಜನೆಗಳ ಅನುಷ್ಠಾನದಲ್ಲಿ ಇಟ್ಟಣ್ಣವರ ಅವರ ಸಲಹೆ-ಸೂಚನೆ-ಮಾರ್ಗದರ್ಶನ ಇದೆ ಎಂಬುದನ್ನು ಇಲ್ಲಿ ಹೇಳಲಿಕ್ಕೆ ನನಗೆ ಅತೀವ ಸಂತೋಷವೆನಿಸುತ್ತದೆ. ಅಷ್ಟೇ ಅಲ್ಲ, ಇಂಥ ಕಾರ್ಯಕ್ರಮಗಳಿಗೆ ಆಹ್ವಾನಿಸಿದಾಗ ಶ್ರೀಯುತರು ಸಂತೋಷದಿಂದ ಒಪ್ಪಿ ಸಂಪ್ರಬಂಧ ಮಂಡನೆ-ಅಧ್ಯಕ್ಷತೆ-ಸರ್ವಾಧ್ಯಕ್ಷತೆಯನ್ನು ವಹಿಸಿಕೊಂಡು ನನಗೆ ಸದಾ ಪ್ರೋತ್ಸಾಹ ನೀಡುತ್ತ ಬರುತ್ತಿದ್ದಾರೆ.

ಈವರೆಗೆ ನಡೆದ ಬಹುತೇಕ ಹಾಲುಮತ ಸಂಸ್ಕೃತಿ ಸಮ್ಮೇಳನಕ್ಕೆ ನಾನು ಆಹ್ವಾನಿಸಿದಾಗ ಶ್ರೀಯುತರು ಸಂತೋಷದಿಂದ ಪಾಲ್ಗೊಂಡು ಸಂಪ್ರಬಂಧಗಳನ್ನು ಮಂಡಿಸಿದ್ದಾರೆ. ಬೀರದೇವರು (೨೦೦೮), ಕುಡುಪೊಕ್ಕಲಿಗರು (೨೦೦೯), ಕೊಣ್ಣೂರು-ಅಲಕನೂರು (೨೦೧೦), ಬಾಗಲಕೋಟ ಪರಿಸರದ ಹಾಲುಮತ ಸಂಪ್ರದಾಯಗಳು (೨೦೧೨) ವಿಷಯಗಳ ಬಗ್ಗೆ ಮೊದಲ ಬಾರಿಗೆ ಬೆಳಕು ಚಲ್ಲಿದ್ದಾರೆ.

ಅಲ್ಲದೇ ೨೦೧೪ರಲ್ಲಿ ವಿಜಯಪುರದಲ್ಲಿ ನಡೆದ ಹಾಲುಮತ ಸಂಸ್ಕೃತಿ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸಿಕೊಳ್ಳಬೇಕೆಂದು ಕೇಳಿಕೊಂಡಾಗ ಶ್ರೀಯುತರು 'ಹಾಲುಮತ ಸಂಸ್ಕೃತಿ ಬಗ್ಗೆ ನಾನೇನೂ ಹೇಳಿಕೊಳ್ಳುವಷ್ಟು ಕೆಲಸ ಮಾಡಿಲ್ಲ. ಆದ್ದರಿಂದ ನನಗಿಂತಲೂ ಹೆಚ್ಚಿನ ಕೆಲಸ ಮಾಡಿದವರನ್ನು ಆಯ್ಕೆ ಮಾಡಿ' ಎಂದು ಹೇಳಿದ್ದನ್ನು ನೋಡಿದರೆ ಅವರ ಸೌಜನ್ಯ-ಸರಳತೆ ಎಂಥದ್ದು ಎಂಬುದು ನಮಗೆ ಗೊತ್ತಾಗುತ್ತದೆ. ಕೊನೆಗೆ ನಾನು ಮತ್ತು ನಮ್ಮ ಕುಲಪತಿಗಳು 'ನೀವು ಸರ್ವಾಧ್ಯಕ್ಷತೆಗೆ ಅರ್ಹರಿದ್ದೀರಿ, ವಹಿಸಿಕೊಳ್ಳಲೇಬೇಕು ಎಂದು ಒತ್ತಾಯ ಮಾಡಿದೆವು.ಆಗ ವಿಶ್ವವಿದ್ಯಾಲಯದ ಈ ಆಹ್ವಾನವನ್ನು ಪ್ರೀತಿಯಿಂದ ಒಪ್ಪಿಕೊಂಡು ಸಮ್ಮೇಳನವನ್ನು ಯಶಸ್ವಿಗೊಳಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಲು ನನಗೆ ಹರ್ಷವೆನಿಸುತ್ತದೆ. ಹಾಲುಮತ ಅಧ್ಯಯನ ಪೀಠದ ಕಾರ್ಯಕ್ರಮಗಳನ್ನು ತುಂಬ ಹತ್ತಿರದಿಂದ ಗಮನಿಸಿದ ಇಟ್ಟಣ್ಣವರ ಅವರು ತಮ್ಮ ಸರ್ವಾಧ್ಯಕ್ಷತೆಯ ಭಾಷಣದಲ್ಲಿ 'ವಿಶ್ವವಿದ್ಯಾಲಯವೊಂದು ಕಲ್ಪಿಸಿಕೊಂಡ ಸಮುದಾಯ ಅಧ್ಯಯನದ ಆಶಯಗಳನ್ನು ನಿಜವಾದ ಅರ್ಥದಲ್ಲಿ ಸಾಕ್ಷಾತ್ಕರಿಸಿದ ಕೀರ್ತಿ ಹಾಲುಮತ ಪೀಠಕ್ಕೆ ಸಲ್ಲುತ್ತದೆ. ಇದನ್ನು ಪ್ರೋತ್ಸಾಹಿಸಿದ ಇಲ್ಲಿವರೆಗಿನ ಎಲ್ಲ ಕುಲಪತಿಗಳು, ಕುಲಸಚಿವರು, ಸಿಂಡಿಕೇಟ್ ಸದಸ್ಯರು ಅಭಿನಂದನಾರ್ಹರು.ಇಷ್ಟೂ ವರ್ಷಗಳ ಕಾಲ ಹಾಲುಮತ ಅಧ್ಯಯನ ಪೀಠದ ಅಭ್ಯುದಯಕ್ಕಾಗಿ ದಣಿವೆನ್ನದೆ ದುಡಿಯುತ್ತಿರುವ ಡಾ. ಎಫ್.ಟಿ.ಹಳ್ಳಿಕೇರಿಯವರು ನಿಜವಾಗಿಯೂ ಅಭಿನಂದನಾರ್ಹರು' ಎಂದು ಹೇಳಿದ್ದನ್ನು ನೋಡಿದರೆ ನಾವು ಮಾಡುತ್ತಿರುವ ಪೀಠದ ಕಾರ್ಯಯೋಜನೆಗಳು ಸಾರ್ಥಕವಾಗಿವೆ ಎಂಬ ಸಂತೋಷ ನನ್ನದಾಗಿದೆ.

Scanned with CamScanner

ಇನ್ನು ೨೦೧೮ ಜನೇವರಿ ೩೦-೩೧ರಂದು ವಿಶ್ವವಿದ್ಯಾಲಯದಲ್ಲಿ ಹಾಲುಮತ ಅಧ್ಯಯನ ಪೀಠದ ದಶಮಾನೋತ್ಸವ ಸಮಾರಂಭವನ್ನು ವಿಶೇಷವಾಗಿ ಆಯೋಜಿಸಲಾಗಿತ್ತು. ಕುರುಬರ ಕುಲವೃತ್ತಿಗಳು:ಪರಂಪರೆ ಮತ್ತು ಆಧುನಿಕತೆ-ವಿಚಾರ ಸಂಕಿರಣ, ಹಾಲುತೇನ: ದಶಮಾನೋತ್ಸವ ನೆನಪಿನ ಸಂಪುಟ ಹಾಗೂ ಹತ್ತು ಪುಸ್ತಕಗಳ ಲೋಕಾರ್ಪಣೆ, ಛಾಯಾಚಿತ್ರ ಪ್ರದರ್ಶನ, ಡಿಜಿಟಲ್ ಅಲ್ಬಮ್ ಬಿಡುಗಡೆ, ನಾಟಕ ಪ್ರದರ್ಶನ-ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಲು ಆಹ್ವಾನ ನೀಡಿದಾನ ಶ್ರೀಯುತರು ಸಂತೋಷದಿಂದ ಒಪ್ಪಿಕೊಂಡು ಎರಡೂ ದಿನ ನಮ್ಮೊಂದಿಗಿದ್ದು, ತಮ್ಮ ಭಾಷಣದಲ್ಲಿ ವಿವಿಧ ಸಮುದಾಯ, ಅವರ ವೃತ್ತಿಗಳು, ವಿಶೇಷವಾಗಿ ಕುರುಬರ ಪಾರಂಪರಿಕವಾದ ಕುಲವೃತ್ತಿಗಳು, ಅವುಗಳ ಈಗಿನ ಸ್ಥಿತಿಗತಿ, ಆಧುನಿಕತೆ -ಹೀಗೆ ಅನೇಕ ಮೌಲಿಕವಾದ ಮಾತುಗಳನ್ನಾಡಿದ್ದು ಇಂದಿಗೂ ನನ್ನಲ್ಲಿ ಅಚ್ಚೊತ್ತಿದಂತಿದೆ. ಜೊತೆಗೆ ತಮ್ಮ ಭಾಷಣದಲ್ಲಿ ಹಾಲುಮತ ಅಧ್ಯಯನ ಪೀಠದ ಜೊತೆಗಿನ ಸಂಬಂಧವನ್ನು ಹೇಳುತ್ತ 'ಡಾ. ಹಳ್ಳಿಕೇರಿ ಅವರ ಕಾರ್ಯವೈಖರಿಯನ್ನು ನಾನು ಅತ್ಯಂತ ಸಮೀಪದಿಂದ ಕಂಡಿದ್ದೇನೆ. ಏಕೆಂದರೆ, ನಾನು ಈ ಹಿಂದೆ ಕೆಲವು ವರ್ಷ ಹಾಲುಮತ ಅಧ್ಯಯನ ಪೀಠದ ಸಲಹಾ ಸಮಿತಿಯ ಸದಸ್ಯನಾಗಿದ್ದೆ. ಆದ್ದರಿಂದ ಡಾ. ಹಳ್ಳಿಕೇರಿಯವರು ಹಾಕಿಕೊಳ್ಳುವ ಯೋಜನೆಗಳು, ಆ ಯೋಜನೆಗಳನ್ನು ಪೂರೈಸುವ ಬಗೆ, ಆ ಮೇಲೆ ಪುಸ್ತಕಗಳ ಪ್ರಕಟಣೆ, ಎಲ್ಲರೊಂದಿಗೆ ಸಮಾಲೋಚಿಸುವ ಒಂದು ವಿಧಾಯಕ ಕ್ರಮ. ಅದನ್ನು ನಾನು ತುಂಬ ಹತ್ತಿರದಿಂದ ಕಂಡಿದ್ದೇನೆ. ಹೀಗಾಗಿ ಪೀಠದ ಎಲ್ಲ ಕೆಲಸ ಕಾರ್ಯಗಳನ್ನು ಕುಲಪತಿ-ಕುಲಸಚಿವರ ಸಲಹೆ-ಸಹಕಾರ-ಮಾರ್ಗದರ್ಶನದೊಂದಿಗೆ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಕ್ಕಾಗಿ ಡಾ. ಹಳ್ಳಿಕೇರಿಯವರನ್ನು ನಾನು ತಮ್ಮೆಲ್ಲರ ಸಮ್ಮುಖದಲ್ಲಿ ಹಾರ್ದಿಕವಾಗಿ ಅಭಿನಂದಿಸುತ್ತೇನೆ' ಎಂದು ಹೇಳಿರುವ ಮಾತುಗಳು ನನಗೆ ಇನ್ನೂ ಹೆಚ್ಚುಹೆಚ್ಚು ಕೆಲಸ ಮಾಡಲು ಪ್ರೇರೇಪಣೆಯಾಗಿವೆ ಎಂದು ಹೇಳಬಯಸುತ್ತೇನೆ. ಇವು ಅವರ ಜೊತೆಗಿನ ಕೆಲವು ಒಡನಾಟದ ಸಂದರ್ಭಗಳು.

ಈಗ ನೇರವಾಗಿ 'ಹಾಲಹರವಿ' ಕೃತಿಯ ಅವಲೋಕನ ಕುರಿತು ಬರೆಯುತ್ತೇನೆ. ಈ ಕೃತಿ ಹೊಸಪೇಟೆಯ ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದಿಂದ ಪ್ರಕಟವಾಗಿದೆ (೨೦೧೫). ಲೇಖಕರು ಹಾಲುಮತ ಸಮಾಜ ಸಂಸ್ಕೃತಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳಲ್ಲಿ ಮಂಡಿಸಿದ, ನಿಯತಕಾಲಿಕೆ\ಅಭಿನಂದನ ಗ್ರಂಥಗಳಲ್ಲಿ ಪ್ರಕಟಿಸಿದ ಹತ್ತು ಸಂಪ್ರಬಂಧಗಳನ್ನು ಈ ಸಂಕಲನದಲ್ಲಿ ಅಳವಡಿಸಿದ್ದಾರೆ.ಮೊದಲ ನಾಲ್ಕು ಸಂಪ್ರಬಂಧಗಳು ವೀರದೇವರ ಜನನ ವೃತ್ತಾಂತ, ತಂದೆ-ತಾಯಿ-ಪರಿವಾರ, ಅತ ಸ್ಥಿತ್ಯಂತರಗೊಂಡ ರೀತಿ, ಕಾವ್ಯ-ಪುರಾಣಗಳಲ್ಲಿ ವ್ಯಕ್ತಗೊಂಡ ವೀರಪ್ಪನ ಇತಿವೃತ್ತ ವಿಚಾರಗಳನ್ನು ಕೂಲಂಕುಷವಾಗಿ ಚರ್ಚಿಸಿದ್ದಾರೆ. ಆ ಮೂಲಕ ವೀರಪ್ಪನಿಗೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ಒಂದೆಡೆ

Scanned with CamScanner

ಕಟ್ಟಿಕೊಡುವ ಪ್ರಯತ್ನ ಮೆಚ್ಚುವಂಥದ್ದಾಗಿದೆ. ಮರಾಠಿ ಜನಪದ ಸಾಹಿತ್ಯದಲ್ಲಿ ನಿರೂಪಗೊಂಡ ಬೀರಪ್ಪನ ಚರಿತ್ರೆಯನ್ನು ಸಾಧ್ಯಂತವಾಗಿ ವಿಶ್ಲೇಷಣೆಗೊಳಪಡಿಸಿದ ಒಂದು ಸಂಪ್ರಬಂಧ ಕುತೂಹಲಕಾರಿಯಾಗಿದೆ. ಕುರುಬರ ಆರಾಧ್ಯ ದೈವಗಳಲ್ಲಿ ಮೊದಲಿಗನಾದ ಬೀರಪ್ಪ ಕೇವಲ ಕರ್ನಾಟಕ ಅಷ್ಟೇ ಅಲ್ಲದೇ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮುಂತಾದ ಪ್ರದೇಶದಲ್ಲಿಯೂ ಪೂಜಿಸಲ್ಪಡುವ ಸಂಗತಿಯನ್ನು ಈ ಸಂಪ್ರಬಂಧ ನಮಗೆ ತಿಳಿಸುತ್ತದೆ. ಕನ್ನಡದ ಜನಪದ ಹಾಲುಮತ ಮಹಾಕಾವ್ಯ, ರಸ್ತಾಪುರ ಭೀಮಕವಿಯ ಹಾಲುಮತ್ತೋತ್ತೇಜಕ ಪುರಾಣ, ಚನ್ನಬಸವಶಾಸ್ತ್ರೀಗಳ ಹಾಲುಮತ ಪುರಾಣ, ಡೊಳ್ಳಿನ ಹಾಡುಗಳಲ್ಲಿ ಬರುವ ಬೀರದೇವರ ಸಂಕಥನವನ್ನು ತೌಲನಿಕ ದೃಷ್ಟಿಕೋನದಿಂದ ಪರಾಮರ್ಶಿಸಿ, ಬೀರಪ್ಪನ ಬದುಕಿನ ವಿವಿಧ ಘಟನಾವಳಿಗಳನ್ನು ವಿಶ್ಲೇಷಣೆ ಮಾಡಿದ್ದಾರೆ.

ಕೊಣ್ಣೂರು-ಅಲಕನೂರು, ಬೀರಪ್ಪನ ಪ್ರಸಿದ್ಧ ಸಾಂಸ್ಕೃತಿಕ ಕೇಂದ್ರಗಳು.ಈ ಎರಡೂ ಕೇಂದ್ರಗಳ ಅಧಿದೈವ ಕರಿಸಿದ್ಧೇಶ್ವರ. ಬೀರದೇವರ ಇನ್ನೊಂದು ಹೆಸರು ಕರಿಸಿದ್ಧೇಶ್ವರ ಎಂದು ಕರೆಯಲಾಗುತ್ತದೆ. ಜಮಖಂಡಿ ತಾಲೂಕಿನ ಕೊಣ್ಣೂರು ಗ್ರಾಮದಲ್ಲಿರುವ ಕರಿಸಿದ್ಧೇಶ್ವರ ದೇವಸ್ಥಾನದ ಭೌತಿಕ ಸ್ವರೂಪ, ಅಲ್ಲಿರುವ ಮೂರ್ತಿಶಿಲ್ಪಗಳು, ಅಲ್ಲಿ ವಾಷಿಕಾವರ್ತನ ನಡೆಯುವ ಆಚರಣೆ-ಸಂಪ್ರದಾಯ-ಜಾತ್ರೆ-ಉತ್ಸವಗಳ ಬಗ್ಗೆ ಸ್ಥೂಲವಾಗಿ ಲೇಖಕರು ಪರಿಚಯಿಸಿದ್ದಾರೆ. ಕಟ್ಟಿನೂಟ-ಹಬ್ಬದೂಟ-ಹೂವಿನೂಟ ಎಂಬ ಮೂರು ಸಂಪ್ರದಾಯಗಳ ಬಗ್ಗೆ ಗಮನಸೆಳೆಯಲಾಗಿದೆ. ನಿಗದಿತ ಪ್ರಮಾಣದ ಅಡುಗೆ ಮಾಡಿ ಕರಿಸಿದ್ಧೇಶ್ವರನಿಗೆ ನೈವೇದ್ಯ ಸಲ್ಲಿಸುವುದು; ಆ ನೈವೇದ್ಯವನ್ನು ಪೂಜಾರಿಗಳಷ್ಟೇ ಉಣ್ಣುತ್ತಾರೆ. ಇದು ಕಟ್ಟಿನೂಟ ಸಂಪ್ರದಾಯ. ಭಕ್ತರು ಕೊಣ್ಣೂರು ಕರಿಸಿದ್ಧೇಶ್ವರನ ಗುಡಿಗೆ ಬಂದು ಇಡೀ ಕೊಣ್ಣೂರಿನ ಜನರನ್ನು ಉಣ್ಣಿಸುವುದು ಹಬ್ಬದೂಟ ಸಂಪ್ರದಾಯ. ಹರಕೆ ಹೊತ್ತ ಭಕ್ತರು ಬೇಡಿಕೊಂಡಷ್ಟು ಭಕ್ತರನ್ನು ಉಣ್ಣಿಸುವುದು ಹೂವಿನೂಟ.

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಅಲಕನೂರು, ಕರಿಸಿದ್ಧೇಶ್ವರನ ಮತ್ತೊಂದು ಸಾಂಸ್ಕೃತಿಕ ಕೇಂದ್ರ. ಕರಿಸಿದ್ಧನ ಅರಮನೆಯೆಂದು ಪ್ರಸಿದ್ಧವಾದ ಇಲ್ಲಿನ ದೇವಾಲಯ ಎರಡು ಎಕರೆಯಷ್ಟು ಭೌಗೋಳಿಕ ವ್ಯಾಪ್ತಿಯನ್ನು ಹೊಂದಿದೆ. ದೇವಾಲಯದ ಸ್ವರೂಪ, ಅಲ್ಲಿನ ಮೂರ್ತಿಗಳು, ಆಚರಣೆ-ಸಂಪ್ರದಾಯಗಳನ್ನು ಸಂಕ್ಷಿಪ್ತವಾಗಿ ದಾಖಲಿಸಲಾಗಿದೆ. ಮದುವೆ-ವಾಸ್ತುಶಾಂತಿ-ಹಬ್ಬ ಮುಂತಾದ ಸಂದರ್ಭಗಳಲ್ಲಿ ಭಕ್ತರು ತಮ್ಮ ಮನೆಗಳಿಗೆ ದೇವರ ಕೊತ್ವಾಲರೆಂದು ಹೇಳಿಕೊಳ್ಳುವ ಆನೆ-ಕುದುರೆಗಳನ್ನು ಆಹ್ವಾನಿಸುವ ಸಂಪ್ರದಾಯ ಇಲ್ಲಿನ ವಿಶೇಷತೆಯಾಗಿದೆ. ಅಲ್ಲದೇ ಬೀರೇಶ್ವರನು ಕೋಣಾಸುರನೆಂಬ ರಾಕ್ಷಸನನ್ನು ಸಂಹರಿಸಿದ ಬಳಿಕ ಕರಿಸಿದ್ಧ ಎಂಬ ಹೆಸರು ಚಾಲ್ತಿಯಲ್ಲಿ ಬಂದಿತು ಎಂದು ಹೇಳಲಾಗುತ್ತದೆ. ಆದರೆ ಇನ್ನೂ ಇದಕ್ಕೆ ಸ್ಪಷ್ಟವಾದ ಆಧಾರಗಳು ಬೇಕಾಗುತ್ತವೆ ಎಂಬ ವಿಚಾರವನ್ನು ಇಟ್ಟಣ್ಣವರ ಅವರು ಸ್ಪಷ್ಟಪಡಿಸುತ್ತಾ ಖರೇಸಿದ್ಧ, ಕರಿಯಬಣ್ಣದ ಸಿದ್ಧ ಎಂಬಂತಹ ಇದುವರೆಗಿನ ಯಾವ ವಿವರಣೆಯೂ ಇಲ್ಲಿ ಸಮಾಧಾನಕರವೆನ್ನಿಸುವುದಿಲ್ಲ. ಕರಿಸಿದ್ಧೇಶ್ವರ

ಸ್ಪಷ್ಟ ಚಿತ್ರಣ ಸಂಶೋಧನೆಗಾಗಿ ಕಾದಿದೆ ಎಂದಿದ್ದಾರೆ. ಈ ಮಾತುಗಳನ್ನು ಗಮನಿಸಿದಾಗ ಸಂಶೋಧಕರ ಹೆಗಲು, ಆತನಿಗೆ ಸಂಬಂಧಿಸಿದ ಐತಿಹ್ಯ ಸಂಪ್ರದಾಯಗಳನ್ನು ವೈಜ್ಞಾನಿಕವಾಗಿ ಸಂಸೋಧಿಸಿಕೊಳಪಡಿಸುವ ಅವಶ್ಯಕತೆಯಿದೆ.

ಕುರುಬ ಜನಸಮುದಾಯದ ಕಲೆಗಳಲ್ಲಿ ಡೊಳ್ಳುಕುಣಿತ, ಡೊಳ್ಳಿನ ಹಾಡಿನ ಮೇಳಗಳಿಗೆ ವಿಶೇಷ ಮಹತ್ವವಿದೆ. ಕುರುಬ ಜನಾಂಗದ ಪ್ರಾಚೀನ ಪರಂಪರೆ, ಕುಲದೇವರು, ಒಂದು ಸಂಪ್ರದಾಯವೆನ್ನುವಂತೆ ಬೆಳೆದು ಬಂದ ಡೊಳ್ಳಿನ ಹಾಡುಗಳ ಸ್ವರೂಪ, ಅವುಗಳ ಸೃಷ್ಟಿ ಮತ್ತು ಪ್ರಸಾರ, ಡೊಳ್ಳಿನ ಹಾಡುಗಳ ಗೋಷ್ಠಿ, ಹಾಡುಗಳ ವೈವಿಧ್ಯತೆಗಳನ್ನು 'ಡೊಳ್ಳಿನ ಪದ' ಸಂಪ್ರಬಂಧದಲ್ಲಿ ಲೇಖಕರು ಚರ್ಚಿಸಿದ್ದಾರೆ. ಇಂಥ ಡೊಳ್ಳಿನ ಹಾಡುಗಳ ಸಂಗ್ರಹ-ಸಂಪಾದನೆ-ಪ್ರಕಟಣೆಯ ಕೆಲಸ ಆಮೆಗತಿಯಲ್ಲಿ ನಿಧಾನವಾಗಿ ನಡೆಯುತ್ತ ಬಂದಿರುವುದನ್ನು ನಾವು ಕಾಣಬಹುದು. ಆದ್ದರಿಂದ ನಾಡಿನಾದ್ಯಂತ ಮೌಖಿಕ ರೂಪದಲ್ಲಿರುವ ಡೊಳ್ಳಿನ ಪದಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ಪ್ರಕಟಿಸುವುದು ಅವಶ್ಯವಾಗಿ ನಡೆಯಬೇಕಾದ ಕಾರ್ಯವಾಗಿದೆ ಎಂಬುದನ್ನೂ ಲೇಖಕರು ಸೂಚಿಸಿದ್ದಾರೆ. ಈ ಸೂಚನೆಯನ್ನು ಸರಕಾರ-ಸಮುದಾಯ ವಿಶ್ವವಿದ್ಯಾಲಯಗಳು ಗಮನಿಸಿ ಕಾರ್ಯಪ್ರವೃತ್ತವಾಗಬೇಕಾಗಿದೆ. ಇನ್ನು 'ಹಸರಂಬಲಿ' ಎಂಬ ಸಂಪ್ರಬಂಧ ಕುರಿಗಾರರಿಗೆ ಸಂಬಂಧಿಸಿದ್ದಾಗಿದೆ. ಬೆಳಗಾವಿ ಜಿಲ್ಲೆಯ ಪೂರ್ವಭಾಗದಲ್ಲಿರುವ ಕುರಿಗಾರಿಕೆ ಮಾಡುವ ಕುರುಬರೆಲ್ಲ ಸೇರಿಕೊಂಡು ಶ್ರಾವಣ ಮಾಸದಲ್ಲಿ ಮಾಡುವ ಒಂದು ಸಂಪ್ರದಾಯವಾಗಿದೆ. ಕುರುಬರು ತಮ್ಮ ಬದುಕಿನ ಆರ್ಥಿಕ ರಕ್ಷಣೆಯಾಗಿರುವ ಕುರಿಯನ್ನು ಸಾಕ್ಷಾತ್ ಲಕ್ಷ್ಮೀ ಎಂದು ಭಾವಿಸುತ್ತಾರೆ. ಆದ್ದರಿಂದ ಆ ಕುರಿಗಳನ್ನು ಪೂಜೆಮಾಡುವ ಪದ್ಧತಿ ಹಿಂದಿನಿಂದಲೂ ಬೆಳೆದು ಬಂದಿದೆ. ಹೀಗಾಗಿ ಕುರಿಗಳನ್ನು ಪೂಜಿಸುವ ಕಾರ್ಯಕ್ರಮವೇ ಹಸರಂಬಲಿ. ಊರಿನ ಎಲ್ಲ ಕುರುಬರು ಸಭೆ ಸೇರಿ ಹಸರಂಬಲಿ ಆಚರಣೆ ಮಾಡುವ ದಿನ ನಿಗದಿ, ಅದಕ್ಕೆ ವೆಚ್ಚವಾಗುವ ಹಣವನ್ನು ವಂತಿಗೆ ಮೂಲಕ ಸಂಗ್ರಹಿಸಿ, ನಿಗದಿಪಡಿಸಿದ ಸ್ಥಳದಲ್ಲಿ ಈ ಹಬ್ಬವನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಣೆ ಮಾಡುವ ಪದ್ಧತಿಯನ್ನು ಇಟ್ಟಣ್ಣವರ ಅವರು ಲೇಖನವೊಂದರಲ್ಲಿ ವಿವರಿಸಿದ್ದಾರೆ. ಪ್ರಾದೇಶಿಕತೆಗನುಗುಣವಾಗಿ ಹಸರಂಬಲಿಗೆ ಪರ್ಯಾಯವಾಗಿ ಹೋಳಿಗೆ ಹಬ್ಬ, ಹಾಲುಗ್ಗಿ ಎಂದೂ ಕರೆಯಲಾಗುತ್ತಿದೆ.

ಕರ್ನಾಟಕದ ಜನಸಮುದಾಯಗಳಲ್ಲಿ ಒಂದಾದ ಕುಡುವೊಕ್ಕಲಿಗರ ಮೂಲ, ಸಂಪ್ರದಾಯ, ಮತ, ವೃತ್ತಿ, ಕುರುಬರೊಂದಿಗಿನ ಸಂಬಂಧ ಇತ್ಯಾದಿ ವಿಷಯಗಳ ಕುರಿತು 'ಕುಡುವೊಕ್ಕಲಿಗರ' ಸಂಪ್ರಬಂಧವು ತಿಳಿಸಿಕೊಡುತ್ತದೆ. ಕುರುಬರು ಮತ್ತು ಕುಡುವೊಕ್ಕಲಿಗರು ಭಿನ್ನರಲ್ಲ, ಅವರಿಬ್ಬರೂ ಅಣ್ಣತಮ್ಮಂದಿರಾಗಬೇಕೆಂಬ ಜನರಲ್ಲಿರುವ ಅಲಿಖಿತ ಹೇಳಿಕೆಯನ್ನು ಆಧರಿಸಿ ಲೇಖಕರು ವಿವಿಧ ಮೂಲಗಳಿಂದ ಅನೇಕ ಮಾಹಿತಿಗಳನ್ನು ಕಲೆಹಾಕಿದ್ದಾರೆ. ವಿಶೇಷವಾಗಿ ತಗರ ಪವಾಡ, ಹಾಲುಮತೋತ್ಪತ್ತೇಜಕ ಪುರಾಣ ಹಾಗೂ ಹೆಳವರ ಹೇಳಿಕೆಗಳನ್ನು ಬಳಸಿಕೊಂಡು ಕುಡುವೊಕ್ಕಲಿಗರು ಮತ್ತು ಕುರುಬರಲ್ಲಿರುವ ಸಾಮ್ಯತೆ

Scanned with CamScanner

ಮತ್ತು ಭಿನ್ನತೆಗಳನ್ನು ಗುರುತಿಸುತ್ತಾ 'ಇಂದು ಕುಡುವೊಕ್ಕಲಿಗರು ಕುರುಬ ಸಮಾಜದ ಒಂದು ಪಂಗಡವೆನ್ನುವುದಕ್ಕಿಂತ ಅವರನ್ನು ಕುರುಬರ ಸೋದರ ಸಂಬಂಧದ ಸಮುದಾಯವೆನ್ನುವುದು ಹೆಚ್ಚು ಸೂಕ್ತ' ಎಂಬ ಅಭಿಪ್ರಾಯಕ್ಕೆ ಬಂದಿರುವುದು ಸರಿಯೆನಿಸುತ್ತದೆ.

ಹಾಲಹರವಿ ಸಂಕಲನದ ಮತ್ತೊಂದು ಸಂಪ್ರಬಂಧವೆಂದರೆ 'ಕುರುಬರ ಹುಡುಗರಿಗೆ ಮುಂಜಿವೆ'. ಮುಂಜಿವೆ ಆಚರಣೆ ಬಹುತೇಕವಾಗಿ ವೈದಿಕ ಸಂಪ್ರದಾಯದ ಬ್ರಾಹ್ಮಣ ಸಮುದಾಯದಲ್ಲಿ ಮಾತ್ರ ಕಂಡುಬರುತ್ತದೆ. ಆದರೆ ಇಲ್ಲಿ ಕುರುಬ ಸಮುದಾಯದ ಮಕ್ಕಳಿಗೆ ಮುಂಜಿವೆ ಮಾಡುವ ಸಂಪ್ರದಾಯವು ಕುತೂಹಲವನ್ನು ಮೂಡಿಸುತ್ತದೆ.ಬಾಗಲಕೋಟ ಜಿಲ್ಲೆಯ ಸೀಮಿಕೇರಿ ಗ್ರಾಮದ ಕುರುಬ ಕುಲದ ಭರಮದೇವರ ಪೂಜಾರಿ ಮನೆತನದ ಹುಡುಗರಿಗೆ ಮುಂಜಿವೆ ಮಾಡುವ ಸಂಪ್ರದಾಯ ಬಹುಹಿಂದಿನಿಂದಲೂ ನಡೆದುಕೊಂಡು ಬಂದಿದೆ.ಕುರುಬರ ಈ ಮುಂಜಿವೆ ಆಚರಣೆಯನ್ನು ಲೇಖಕರು ಸ್ವತಃ ವೀಕ್ಷಣೆ ಮಾಡಿ ಅನೇಕ ಮಾಹಿತಿಗಳನ್ನು ಕಲೆಹಾಕಿ ಕ್ರಮಬದ್ಧವಾಗಿ ಇಲ್ಲಿ ವಿಶ್ಲೇಷಣೆ ಮಾಡಿದ್ದಾರೆ.ವೈದಿಕರಲ್ಲಿ ಮುಂಜಿವೆ ಎನ್ನುವುದು ಎರಡನೆಯ ಹುಟ್ಟು,ಆದರೆ ಕುರುಬರಿಗೆ ಮುಂಜಿವೆ ಎಂಬುದು ಮೊದಲನೆಯ ಮದುವೆಯನ್ನು ಸೂಚಿಸುತ್ತದೆ. ಹಂದರ ಹಾಕಿ ಹಾಲಗಂಬ ನೆಡುವುದು, ಲಗ್ನದ ಅಕ್ಕಿಗಂಟುಕಟ್ಟುವುದು ಮೊದಲಾದ ಕ್ರಿಯಾಚರಣೆಗಳು ಮದುವೆ ಸಂಭ್ರಮವನ್ನು ನೆನಪಿಸುತ್ತವೆ. ಅಡುಗೆ ಮಾಡುವ 'ಹುಟ್ಟು'ದೊಂದಿಗೆ ಹುಡುಗನಿಗೆ ಮದುವೆ ಮಾಡುವ ಸಂಪ್ರದಾಯವೇ ಇಲ್ಲಿನ ಮುಂಜಿವೆಯಾಗಿದೆ. ಮುಂಜಿವೆಯ ದಿನನಿಗದಿ ಮಾಡಿ ಬೀಗರು-ಬಿಜ್ಜರನ್ನು ಆಹ್ವಾನಿಸುವುದು, ಅಗತ್ಯ ಸಾಮಾನು ಸರಂಜಾಮುಗಳ ಖರೀದಿ, ಎಣ್ಣೆಹೋಳಿಗೆ-ಬಾಳೆಹಣ್ಣಿನ ಸೀಕರಣೆಯೇ ವಿಶೇಷ ಅಡುಗೆ, ಮುಂಜಿವೆಯಾಗುವವನ ಕೇಶಮುಂಡನ, ಸ್ನಾನ ಮಾಡಿಸಿ ಕೈಯಲ್ಲಿ ಒಂದು ಹುಟ್ಟನ್ನು ಕೊಡುತ್ತಾರೆ.ಈ ಹುಟ್ಟಿಗೆ ಆತ ತಾಳಿಕಟ್ಟುವುದು, ಹೆಂಡತಿ ಹೆಸರು ಹುಟ್ಟವ್ವ ಎಂದು ಹೇಳುವುದು, ಬಂದಂಥ ಜನರು ಊಟ ಮಾಡುವುದು, ಈ ಎಲ್ಲ ಕಾರ್ಯಕ್ರಮಗಳು ಹಿರಿಯ ಪೂಜಾರಿಯ ನೇತೃತ್ವದಲ್ಲಿಯೇ ನಡೆಯಲ್ಪಡುತ್ತವೆ. ಇಂಥ ಎಲ್ಲ ಆಚರಣೆ-ಸಂಪ್ರದಾಯಗಳನ್ನು ಕೂಲಂಕುಷವಾಗಿ ಗಮನಿಸಿ ಲೇಖನರೂಪದಲ್ಲಿ ಕಟ್ಟಿಕೊಟ್ಟಿರುವುದು ಲೇಖಕರ ಅಧ್ಯಯನಾಸಕ್ತಿಗೆ ನಿದರ್ಶನವಾಗಿದೆ.

ಬಾಗಲಕೋಟೆ ಪರಿಸರದ ಹಾಲುಮತ ಸಮುದಾಯದವರ ಜೀವನ ಪದ್ಧತಿ, ವೃತ್ತಿ, ಆಚರಣೆ, ಸಂಪ್ರದಾಯಗಳನ್ನು ಸಂಪ್ರಬಂಧವೊಂದರಲ್ಲಿ ಅವಲೋಕನ ಮಾಡಿದ್ದಾರೆ.ಈ ಪರಿಸರದ ಬೀರಪ್ಪ-ಮಾಳಿಂಗರಾಯ-ಭರಮಪ್ಪ ದೈವಗಳ ಆರಾಧನೆ, ಆಚರಣೆ, ನಂಬಿಕೆಗಳು ಕಾಲದಿಂದ ಕಾಲಕ್ಕೆ ಪರಿವರ್ತನೆಗೊಂಡ ಬಗೆ, ಕೃಷ್ಣನದಿ ಹಿನ್ನೀರಿನೊಂದಿಗೆ ಮುಳುಗಡೆಯಾದ ಪ್ರದೇಶದಲ್ಲಿ ಕುರುಬರ ಗುಡಿಗುಂಡಾರಗಳ ನಾಶ, ಅದರಿಂದಾದ ಆರಾಧನೆಗಳಿಗಾದ ಹಿನ್ನೆಡೆ, ಅವುಗಳೊಂದಿಗೆ ನಾಶವಾದ ಅನೇಕ ಆಚರಣೆ-ಸಂಪ್ರದಾಯಗಳನ್ನು ಕುರಿತು ಚರ್ಚಿಸಲಾಗಿದೆ.

Scanned with CamScanner

ಈ ಸಂಶೋಧನ ಕೃತಿಯ ಸಂಪ್ರಬಂಧ, ಸರ್ವಾಧ್ಯಕ್ಷ ಭಾಷಣ.ಕನ್ನಡ ವಿಶ್ವವಿದ್ಯಾಲಯದ ಸಾಲುಮಠ ಅಧ್ಯಯನ ಪೀಠವು ವಿಜಯಪುರದಲ್ಲಿ ಆಯೋಜಿಸಿದ್ದ ಆರನೆಯ ಹಾಲುಮತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಗೆ ಶ್ರೀರಾಮ ಇಟ್ಟಣ್ಣವರ ಅವರನ್ನು ಆಯ್ಕೆ ಮಾಡಿಲಾಗಿತ್ತು. ಆ ಸಮ್ಮೇಳನದ ಸರ್ವಾಧ್ಯಕ್ಷತೆಯ ಭಾಷಣದಲ್ಲಿ ಹಾಲುಮತ ಸಾಹಿತ್ಯ ಸಂಸ್ಕೃತಿ, ಸಂಘಟನೆ ಮುಂತಾದ ಅನೇಕ ವಿಷಯಗಳನ್ನು ಚರ್ಚಿಸಿದ್ದಾರೆ. ಹಾಲುಮತ ಸಮುದಾಯವು ದೈವಕೇಂದ್ರಿತ (ಸಿದ್ಧಪ್ಪ, ಮಾಳಿಂಗರಾಯ, ರೇವಣಸಿದ್ಧ, ಆಮೋಘಸಿದ್ಧ ಇತ್ಯಾದಿ), ವ್ಯಕ್ತಿಕೇಂದ್ರಿತ (ಮಾನಾಳ) ಮತ್ತು ಸಮುದಾಯ ಕೇಂದ್ರಿತ (ಹಾಲುಮತ ಅಧ್ಯಯನ ಪೀಠ, ಕಾಗಿನೆಲೆ ಅಳಗುನ್ನಿ ಸ್ವಾಧಿಕಾರ) ಎಂಬ ಮೂರು ನೆಲೆಗಳಲ್ಲಿ ತನ್ನ ಅಸ್ಮಿತೆಯನ್ನು ಕಂಡುಕೊಂಡಿದ್ದನ್ನು ವಿವರಿಸಿದ್ದಾರೆ. ಜೊತೆಗೆ ಈ ಸಮ್ಮೇಳನದ ಪ್ರಮುಖ ವಿಷಯವಾದ ಬೀರಪ್ಪನ ಪರಂಪರೆ ಬಗ್ಗೆ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಿದ್ದಾರೆ. ವಿಶೇಷವಾಗಿ ಬೀರಪ್ಪನ ತಂದೆಯಾದ ಬರಮಪ್ಪನ ಬಗ್ಗೆ ಈವರೆಗೆ ಅಸ್ಪಷ್ಟತೆಯಿದೆ. ಆ ಅಸ್ಪಷ್ಟತೆಯನ್ನು ದೂರಮಾಡಲು ಇಟ್ಟಣ್ಣವರ ಅವರು ಬರಮದೇವರ ಗುಡಿ, ಅಲ್ಲಿ ನಡೆಯುವ ಆಚರಣೆ-ಸಂಪ್ರದಾಯಗಳನ್ನು ಪೀಕ್ಷಿಸಿ ಕೆಲವು ವಿಚಾರಗಳನ್ನು ಮಂಡಿಸುತ್ತ 'ವೈಷ್ಣವರು ವಿಷ್ಣುವಿನ ಮೂಲದವರಾದಂತೆ, ಶೈವರು ಶಿವನ ಮೂಲದವರಾದಂತೆ ಹಾಲುಮತದವರು ಬರಮದೇವನ ಅಥವಾ ಬ್ರಹ್ಮದೇವನ ಮೂಲದವರೆಂದು ಊಹಿಸಲು ಸಧ್ಯಕ್ಕೆ ಯಾವುದೇ ಅಡ್ಡಿ ಇರುವಂತೆ ತೋರುವುದಿಲ್ಲ' ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಈ ಅಭಿಪ್ರಾಯವನ್ನು ಇನ್ನೂ ಕೂಲಂಕಷವಾಗಿ ಒರೆಗೆ ಹಚ್ಚಬೇಕೆಂದರೆ ಭರಮದೇವರ ಕುರಿತು ಆಳವಾದ ಅಧ್ಯಯನದ ಅಗತ್ಯವಿದೆ.

ಹಾಲಹರವಿ ಕೃತಿಯ ಓದಿನಿಂದ ಕಂಡುಕೊಂಡ ಸಂಗತಿಗಳನ್ನು ಹೀಗೆ ಕ್ರೋಢೀಕರಿಸಿ ಹೇಳಬಹುದು: ೧. ಹಾಲುಮತದವರ ಆರಾಧ್ಯದೈವ ಬೀರಪ್ಪನ ಪರಿವಾರ, ವಿಶೇಷವಾಗಿ ತಂದೆ ಬರಮಪ್ಪನ ಬಗ್ಗೆ ಅನೇಕ ಮಾಹಿತಿಗಳನ್ನು ಕಲೆಹಾಕಿ ಕೊಟ್ಟಿರುವುದು. ೨. ಬೀರಪ್ಪನ ಪ್ರಸಿದ್ಧ ನೆಲೆಗಳಾದ ಕೊಣ್ಣೂರು-ಅಲಕನೂರು ನೆಲೆಗಳ ಸಮಗ್ರ ವಿವರಗಳನ್ನು ನೀಡಿರುವುದು. ೩. ಕುರುಬರ ಕಲೆಯೆಂದೇ ಹೆಸರಾದ ಡೊಳ್ಳುಕಲೆ, ಡೊಳ್ಳಿನ ಹಾಡುಗಳ ವೈಶಿಷ್ಟ್ಯ ಮತ್ತು ವೈವಿಧ್ಯತೆಗಳನ್ನು ಗುರುತಿಸಿರುವುದು. ೪. ಪ್ರತಿವರ್ಷ ಕುರಿಗಾಹಿಗಳು ಪ್ರಕೃತಿಯನ್ನು ಆರಾಧಿಸುವ ಒನ್ನೆಲೆಯಲ್ಲಿ ಹಸರಂಬಲಿ ಆಚರಣೆಯ ವಿಧಾನಗಳು ಮತ್ತು ಅದರ ಮಹತ್ವವನ್ನು ತಿಳಿಸಿರುವುದು.೫. ಒಂದು ಕಾಲದಲ್ಲಿ ಕುರುಬ ಸಮುದಾಯದ ಸಮೀಪವರ್ತಿಯಾದ ಕುಡವೊಕ್ಕಲಿಗ ಸಮಾಜದ ಒನ್ನೆಲೆ, ವೃತ್ತಿ, ಆಚಾರ-ವಿಚಾರ, ಸಂಪ್ರದಾಯಗಳನ್ನು ತೌಲನಿಕವಾಗಿ ಚರ್ಚಿಸಿರುವುದು. ೬. ಕುರುಬರ ಹುಡುಗರಿಗೆ ಮುಂಜಿವೆ ಮಾಡುವ ಸಂಪ್ರದಾಯವನ್ನು ವಿವರಿಸಿರುವುದು. ೭. ಬಾಗಲಕೋಟೆ ಪರಿಸರದ ಹಾಲುಮತ ಸಮುದಾಯದ ಉಪಪಂಗಡಗಳು, ವೃತ್ತಿ ಪಲ್ಲಟಗಳು, ಮುಂಜಿವೆ-ಮದುವೆ-ಮರಣದ ಸಂದರ್ಭಗಳಂಥ ಸಾಮಾಜಿಕ-ಧಾರ್ಮಿಕ ಆಚರಣೆ-ಸಂಪ್ರದಾಯಗಳ ಪ್ರಸ್ತುತತೆಯನ್ನು

Scanned with CamScanner

ವಿಶ್ಲೇಷಣೆಗೊಳಪಡಿಸಿರುವುದು. ಲಿ. ದೈವಕೇಂದ್ರಿತ-ವ್ಯಕ್ತಿಕೇಂದ್ರಿತ-ಸಮುದಾಯ ಕೇಂದ್ರಿತ ನೆಲೆಗಳಲ್ಲಿ ಹಾಲುಮತ ಸಮುದಾಯದ ಅಸ್ಮಿತೆಯನ್ನು ಕಂಡುಕೊಂಡಿರುವುದು.

ಒಟ್ಟಿನಲ್ಲಿ ಹಾಲುಮತ ಸಮಾಜ ಮತ್ತು ಸಂಸ್ಕೃತಿಯ ವಿವಿಧ ಮಗ್ಗುಲುಗಳ ಅಧ್ಯಯನಕ್ಕೊಳಪಡಿಸಿದ ಕೃತಿ ಇದಾಗಿದೆ. ಇಲ್ಲಿನ ಲೇಖನಗಳಲ್ಲಿ ವ್ಯಕ್ತವಾದ ಅನೇಕ ಸಂಗತಿಗಳ ನಾದನ್ನು ಹಿಡಿದು ಸಂಶೋಧಕರು ವಿಸ್ತೃತವಾದ ಅಧ್ಯಯನ ನಡೆಸಲು ಅವಕಾಶಗಳಿವೆ. ಅಂಥ ಅವಕಾಶಗಳತ್ತ ಯುವ ಸಂಶೋಧಕರು ಗಮನಹರಿಸಲಿ ಎಂಬುದು ನನ್ನ ಆಶಯ.

❖❖

Scanned with CamScanner

ಸತ್ಯಂಪೇಟ ವರದಾಚಾರ್ಯುಲು

ಹಾಲುಮತ ಮಹಾಕಾವ್ಯ

(ಭಾವಾರ್ಥ ಸಹಿತ)



Scanned with CamScanner

ಹಾಲುಮತ ಮಹಾಕಾವ್ಯ

ಭಾವಾರ್ಥ ಸಹಿತ

ರಚನೆ

'ಸತ್ಯವಿಠಲ' ಡಾ. ಬಿ.ವಿ. ಸತ್ಯನಾರಾಯಣರಾವ್

ಮೊಬೈಲ್ : 96634 51144

ಭಾವಾರ್ಥ ಸಹಯೋಗ

ಆರ್. ನರೇಂದ್ರಬಾಬು

ಮೊಬೈಲ್ : 94487 17147

ಪ್ರಕಟಣೆ ಮತ್ತು ಪ್ರಕಾಶನ

ಶ್ರೀಯುತ ಚಿಕ್ಕರೇವಣ್ಣನವರು

ಪ್ರಮುಖ ಉದ್ಯಮಿಗಳು ಮತ್ತು ಸಮಾಜ ಸೇವಕರು

ಸಂಘಟಕರು – ಕುರುಬ ಸಮಾಜ

ಚಿಕ್ಕೇಗೌಡನಪಾಳ್ಯ, ಬೆಂಗಳೂರು

ಮೊಬೈಲ್ : 98453 89281

Scanned with CamScanner

Haalumatha Mahakavya Vyakhyana Sahita : Written by Sathyavitala Dr. Satyanarayanarao B.V., # 16, 5th Cross, Vijaya Bank Colony Doddabanasavadi, Bengaluru, Mob: 96634 51144

Published by : Sri Chikkarevanna, Bengaluru, Mob : 98453 89281

© ಲೇಖಕರು

ಪ್ರಥಮ ಮುದ್ರಣ : 2021

ಬೆಲೆ : ರೂ. 450/-

ಪುಟಗಳು : xiv + 410 ಡೆಮಿ 1/8

ಪ್ರತಿಗಳು : 2000

ಕಾಗದ ಬಳಕೆ : 70 G.S.M. White Maplitho

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೬೧೨೬, ೨೬೬೧ ೮೬೫೨

Scanned with CamScanner

ಡಾ. ಎಫ್.ಟಿ. ಹಳ್ಳಿಕೇರಿ, ಮುಖ್ಯಸ್ಥರು
ಹಾಲುಮತ ಅಧ್ಯಯನ ಪೀಠ
ಹಂಪಿ ವಿಶ್ವವಿದ್ಯಾನಿಲಯ, ಹಂಪಿ

ಕಾವ್ಯ ನಮನ

ಹೊಸದುರ್ಗ ಬಳಿಯ ಬುಕ್ಕಾಪಟ್ಟಣದವರಾದ ಸತ್ಯವಿಠಲ ಕಾವ್ಯಾಂಕಿತ ಶ್ರೀ ಬಿ.ವಿ. ಸತ್ಯನಾರಾಯಣರಾವ್ ಅವರು ಹಾಲುಮತ ಮಹಾಕಾವ್ಯದ ಭಾಮಿನೀ ಷಟ್ಪದಿಯ ೧೧೨೩ ಪದ್ಯಗಳ ಕರಡು ಪ್ರತಿಯನ್ನು ತಂದುಕೊಟ್ಟಾಗ ಅದನ್ನು ಓದಿ ವಿಸ್ಮಿತನಾದೆ. ಕಾರಣ ಹಾಲುಮತದ ಬಗೆಗಿನ ಆಳವಾದ ಅಧ್ಯಯನ ಮಾನವತಾವಾದ, ಸಮತತ್ತ್ವ ವಿಚಾರಧಾರೆ, ಜಾನಪದ ಪುರಾಣಕಾವ್ಯಗಳ ಸಮ್ಮಿಲನದಲ್ಲಿ ಹಾಲುಮತದ ಪರಿವೀಕ್ಷಣಾ ಅಧ್ಯಯನ.

"ಕುರು" ಪದದ ಮಹದರ್ಥ ಜ್ಞಾನವು
ಕುರುಬನೆಂದರೆ ಜ್ಞಾನಬದ್ಧನು
ಕುರುಬ ದಿವ್ಯತೆ ಮಹತಿನಲಿ ಪಶುಪಾಲನಾ ವಿಭವ
ಕುರುಬ ಜನ ಸಜ್ಜನರು ಸಭ್ಯರು
ಅರಿಯರೈ ವಂಚನೆಯ ಮೋಸವ
ಪರಮತೆಯ ಕುರುಬತ್ತ್ವ ದೀಪಿಕೆ ಹಾಲುಮತ ಬೆಡಗು

ಕುರುಬ ಪದದ ಅರ್ಥವನ್ನು ಅನೇಕ ಪದ್ಯಗಳಲ್ಲಿ ವಿಸ್ತರಿಸಿ ಮಹಾ ಭಾರತದ ಕುರು ಪರಂಪರೆಯ ಮೂಲ ಅಜಮೀಢ ಪರಂಪರೆಯನ್ನು ಗಣಿಸಿ 'ಮೀಢ' ಪದದ ಅರ್ಥ ಟಗರು ಎಂಬುದನ್ನು ಗಮನಿಸಿ ಚಂದ್ರ ವಂಶದ ಕುರು ಕುಲದ ಮೂಲ ಸಂಸ್ಕೃತಿ ಹಾಲುಮತ ಸಂಸ್ಕೃತಿ ಎಂದು ವಿಸ್ತರಿಸಿರುವುದು ಸತ್ಯಕ್ಕೆ ಮೂಲವಾದ ವಿಷಯ 'ಅಜಾಯತೆ ಇತಿಅಜ" ಎಂದು ಹೇಳುತ್ತಾ ಅಜ ಪದಕ್ಕೆ ಇರುವ ಹಲವಾರು ಅರ್ಥವನ್ನು ನಿರೂಪಿಸಿ ಅಜಪಮಂತ್ರ, ಅಜಾನಿಕ, ಅಜ ಜೀವ ಮೊದಲಾದ ಸಂಸ್ಕೃತಾರ್ಥಗಳನ್ನು ಗಮನಿಸಿರುವುದು ಕುತೂಹಲಕರ ಮತ್ತು ಕವಿಯ ಆಳವಾದ ಅಧ್ಯಯನಕ್ಕೆ ಸಾಕ್ಷಿ.

Scanned with CamScanner

ಕುರುಬರಲಿ ಧನಗರರು ಹೆಗ್ಗಡೆ
ಕುರುಬರಲಿ ಹಲವೃತ್ತಿ ಪಂಗಡ
ಕುರುಬರೊಳಗಡೆ ಬೀರದಾರರು ಪೊಡವರಾಂಡವರು
ಗೊರವ ಅತ್ತಿಯ ಗೊಂಡ ಕಳವರು
ಕುರುಮ ಗಾವಳಿ ಪಾಲ್‌ಗಡಾರಿಯ
ಕರ್ಮಿ ಕಡ್ಡೀ ಭೇರವಾಡರು ನಾಮಸಾಸಿರವು

ಎಂದು ಕುರುಬ ಜನರ ನೂರಾರು ಪಂಗಡದ ಬಗೆಗೆ ತಿಳಿಸಿ ಹೇಳುತ್ತಾರೆ ನಮ್ಮ ಅತ್ಮೀಯರಾದ ಮಹಾಕವಿ ಸತ್ಯವಿಠಲರು ಈಗಾಗಲೇ ಹಾಲುಮತದ ಬಗೆಗೆ ಕನಕ ಶತಕಂ (ಭೋಗಷಟ್ಪದಿ ಕಾವ್ಯ), ಅಹಿಲ್ಯಾಬಾಯಿ ಹೋಳ್ಕರ್ (ನಾಟಕ), ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಸುದೀರ್ಘ ೬೫೦ ಪದ್ಯಗಳ ಲಾವಣಿ)ಮ ಬರೆದಿರುವುದಲ್ಲದೆ ಹಾಲುಮತದ ಪ್ರಪ್ರಥಮ "ಹಾಲುಮತ ಆರಾಧನಾ ಮಂಜರಿ"ಯನ್ನು ಬರೆದು ತಿಂಥಿಣಿಯ ಕನಕ ಪೀಠದ ವತಿಯಿಂದ ಪ್ರಕಟಿಸಿರುವುದು ಅಭಿನಂದನೀಯ.

ಈ ಕಾವ್ಯದಲ್ಲಿ ಮಾನವತೆ, ಸಮತತ್ತ್ವಕ್ಕೆ ಪ್ರಾಶಸ್ತ್ಯವಿದೆ. ಸಹಬಾಳ್ವೆ, ಸಚ್ಚಿಂತನ, ಮನುಷ್ಯತ್ವದಿಂದ ದೈವತ್ವಕ್ಕೇರುವ ಧರ್ಮ ವಿವರಣೆ ಇದೆ. ಹಾಲುಮತದ ಜನಪದ ಕಥನಗಳು ಇಲ್ಲಿ ಕಾವ್ಯರೂಪವನ್ನು ಪಡೆದಿದೆ. ಶ್ರೀ ಕನಕದಾಸರ ಕೀರ್ತನೆಗಳು ಇಲ್ಲಿ 'ಕನಕ ಸಂಹಿತೆಯಾಗಿ ಬಿಂಬಿತವಾಗಿದೆ.

ಬೀರೇಶ್ವರ, ಮೈಲಾರಲಿಂಗ, ರೇವಣ್ಣಸಿದ್ಧ, ಕನಕದಾಸ, ಮಾಳಿಂಗರಾಯ ಚರಿತಗಳು ವಿಶೇಷವಾಗಿ ರೂಪುಗೊಂಡರೆ ನಮ್ಮ ಹೊಸದುರ್ಗದ ಬಳಿಯ ಶ್ರೀರಾಮಪುರದ ಸಿರುಮನಾಯಕನ ಚರಿತ್ರೆ ಪ್ರಬುದ್ಧವಾಗಿ ಮೂಡಿ ಬಂದು ಇತಿಹಾಸ ಪುರುಷ ಸಿರುಮ ಇಲ್ಲಿ ಕಾವ್ಯ ಪುರುಷನಾಗಿದ್ದಾನೆ. ಬಹುಷಃ ಸತ್ಯವಿಠಲರು ಮೂಲತಃ ಸಮೀಪದ ಬುಕ್ಕಾಪಟ್ಟಣದವರಾಗಿದ್ದು ಸಿರುಮನಾಯಕನನ್ನು ಸ್ವಾಭಿಮಾನ ಪುರುಷನಾಗಿ ಬಿಂಬಿಸಿರುವುದು ಕವಿಯ ಸ್ಥಳಾಭಿಮಾನಕ್ಕೆ ಸಾಕ್ಷಿಯಾಗಿದೆ.

೧೭ ಮಂದಾರ ಪುಷ್ಪಗಳಾಗಿ ಮೂಡಿಬಂದಿರುವ ಈ ಮಹಾಕಾವ್ಯ ಹಾಲುಮತಕ್ಕೆ ಸಂಬಂಧಿಸಿದ ಪ್ರಪ್ರಥಮ ಮಹಾಕಾವ್ಯ. ಸಾಧಾರವಾಗಿ ಪೌರಾಣಿಕ ವಿಶೇಷಗಳ ಅಧ್ಯಯನ ನಡೆಸಿ ಅಜಮೀಢ ಪರಂಪರೆಯ ಚಂದ್ರವಂಶದ ಕಥಾನಕದ ಅಡಿಪಾಯ ಹಾಲುಮತವೆಂದು ಬಿಂಬಿಸಿರುವುದು ವಿಶೇಷ. ಹಿಂದೊಮ್ಮೆ ಹಾಲುಮತ ಸಂಸ್ಕೃತಿ ವಿಶ್ವವ್ಯಾಪಾರವಾಗಿತ್ತೆಂಬ ನಿರೂಪಣೆ ಕುತೂಹಲಕರವಲ್ಲದೆ ಅಪ್ಪಟ ಸತ್ಯಬಿಂಬವೆ. ತಿರುಪತಿಯ ವೆಂಕಟರಮಣ ದೇವರು ಮೂಲತಃ ವೀರಭದ್ರನೆಂಬ ವಾದಕ್ಕೆ ಕವಿಯು

ವಿಶೇಷತೆಯನ್ನು ನೀಡಿದ್ದಾರೆ. ಮೂಲ ಸತ್ಯವನ್ನು ಅರಸಿದ್ದಾರೆ. ಮಹಾಬಲ ಪರ್ವತ ಕುರುಬ ವೀರಿಣಿ ಚಾಮುಂಡಿಯ ಆಶಯದಂತೆ ಚಾಮುಂಡಿ ಬೆಟ್ಟದ ಹೆಸರು ತಳೆದ ಜನಪದರ ಬಗೆ ಬೆಳಕು ಚೆಲ್ಲಿದ್ದಾರೆ.

ಭಾರತ ಹಾಗೂ ವಿಶ್ವದ ಮೂಲಸಂಸ್ಕೃತಿಯೇ ಹಾಲುಮತ ಸಂಸ್ಕೃತಿ ಎಂಬ ವಿಷಯವನ್ನು ಸಾದಾರವಾಗಿ ನಿರೂಪಿಸಿರುವುದು ವಿಶೇಷ. ಹಾಲುಮತದ ಬಗೆಗೆ ಅಧ್ಯಯನ ಮತ್ತು ಸಂಶೋಧನೆ ಮಾಡುವವರಿಗೆ ಈ ಹಾಲುಮತ ಮಹಾಕಾವ್ಯ ಒಂದು ಆಕರ ಗ್ರಂಥವೆಂಬುದರಲ್ಲಿ ಸಂದೇಹವಿಲ್ಲ.

ಎಡಪಂಥ-ಬಲಪಂಥ ವಾದಕ್ಕೆ ಬೆಲೆ ಕೊಡದೆ ಸತ್ಯ ನಿಷ್ಠುರತೆಯನ್ನು ಕವಿ ಮೆರೆದಿದ್ದಾರೆ. ಹಾಲುಮತದ ಕಾವ್ಯ ಕೃತಿಗಳಲ್ಲಿ ಈ ಮಹಾಕಾವ್ಯ ತನ್ನದೇ ಆದ ವಿಶೇಷ ಸ್ಥಾನವನ್ನು ಪಡೆದಿರುವುದು ಅಭಿಮಾನದ ವಿಷಯ. ಕವಿಯ ಚಿಂತನತ್ತ್ವ, ಪ್ರಬುದ್ಧತ್ತ್ವ, ಪರಾಮರ್ಷೆ, ನಿರೂಪಣೆ, ಅಧ್ಯಯನ ನಮ್ಮ ಸಮಾಜದ ಸಂಶೋಧಕರಿಗೆ ಮಾರ್ಗದರ್ಶನವಾಗಿ ಹಾಲುಮತ ಮೂಲ ಸಂಸ್ಕೃತಿಯನ್ನೇ ಮರೆಮಾಚಿದ್ದರೂ ಸಹ ಇಂದಿನ ಹಿಂದೂ ಸಂಪ್ರದಾಯದ ನೂರಾರು ಆಚರಣೆಗಳು ಹಾಲುಮತ ಸಂಸ್ಕೃತಿಯ ಕೊಡುಗೆಯಾಗಿದೆ.

ಹಾ ಕರತೆ ಶುದ್ಧತೆಯ ಬದ್ಧತೆ
ಲು ಕಾರವು ಲುಬ್ಧತೆಯ ಲಬ್ಧತೆ
ಮ ಕಾರವು ಮಹಧೀರ ಶೂರತೆ ಬೀರ ಭಾಸ್ವರತೇ
ತ ಕಾರವು ತತ್ತ್ವಮಸಿ ಭೌಮತೆ
ಧ ಕಾರವು ಧರ್ಮತ್ತ್ವ ಬಿಂಬ ಸುಕ
ರ್ಮ ನಿಷ್ಠೆಯ ಧೀ ಪ್ರಕಾಶವೆ ಹಾಲುಮತ ಧರ್ಮ

ಹಾಲುಮತ ಒಂದು ಜಾತಿಯಲ್ಲ – ಅದೊಂದು ಭಾರತೀಯ ಭವ್ಯ ಸಾಂಸ್ಕೃತಿಕ ಮೂಲ ಪರಂಪರೆ ಎಂಬ ಸುದೀರ್ಘ ಅಧ್ಯಯನ ಸಾರವೇ ೧೧೧೧ ಭಾಮಿನಿ ಷಟ್ಪದಿಗಳ "ಹಾಲುಮತ ಮಹಾಕಾವ್ಯ".

ಮೂಲತಃ ಭಾರತೀಯ ಸಂಸ್ಕೃತಿ ಪಶುಪಾಲನಾ ಮೂಲವಾಗಿದ್ದು ತದನಂತರ ಪ್ರಕೃತಿಪೂಜಕರಾಗಿ ದೈವತ್ತ್ವಕಲ್ಪನೆ, ಧರ್ಮಚಿಂತನೆ, ಮಾನವತಾವಾದ ಪರಂಪರೆಯ, ಹಾಲುಮತ ವಿಶ್ವಸ್ಥವಾದ ಜಾನಪದ, ಪುರಾಣ, ಐತಿಹಾಸಿಕ ಪ್ರತಿಬಿಂಬವೇ ಈ ಕಾವ್ಯವಾಗಿದ್ದು ಹಾಲುಮತ ಕ್ಷೀರ ಸಾಗರದ ಒಂದು ಬಿಂದುವನ್ನು ಮಾತ್ರ ಇಲ್ಲಿ ವಿಸ್ತರಿಸಲಾಗಿದೆಯೆಂಬ

Scanned with CamScanner

ಕವಿಯ ಹೇಳಿಕೆ ಹಾಲುಮತ ಧರ್ಮದ ವ್ಯಾಪಕತೆಯನ್ನು ಸೂಚಿಸುತ್ತದೆ ಬಹು ಹಿಂದೆ ಹಾಲುಮತ ಸಂಸ್ಕೃತಿಯ ಪ್ರಬುದ್ಧ ಚಿಂತಕ ಪ್ರಾಜ್ಞರೇ ಆರ್ಯರು. ದಕ್ಷಿಣ ಭಾಗದವರು ದ್ರಾವಿಡರು ಎಲ್ಲರ ಮೂಲ ಸಂಸ್ಕೃತಿಯೂ ಸಹ ಹಾಲುಮತ ಸಂಸ್ಕೃತಿಯೆಂಬುದನ್ನು ಕವಿ ವಿಮರ್ಶಿಸಿರುವುದು ಕುತೂಹಲಕರ.

ಕವಿಯು ಈ ಕಾವ್ಯವನ್ನು ೧೭ ಮಂದಾರಗಳಾಗಿ ವಿಂಗಡಿಸಿದ್ದಾರೆ. ಮಂದಾರವೆಂದರೆ ಎಂದೂ ಬಾಡದ ಪುಷ್ಪ. ಇದು ಹಾಲುಮತ ಸಂಸ್ಕೃತಿಗೆ ಅರ್ಥಪೂರ್ಣ ಅನ್ವಯ.

ಕುರುಬ ಪದದ ಆಳವಾದ ಅರ್ಥ ವಿವೇಚನೆ, ಮಹಾಭಾರತದ ರಾಜಪುರುಷರಾದ ಅಜಮೀಢ, ಸುಮೀಢ, ಪುರಮೀಢ, ದೇವಮೀಢ ಪದಗಳಲ್ಲಿ ಬರುವ ''ಮೀಢ'' ಪದದ ಅರ್ಥ ಟಗರು ಎಂಬುದನ್ನು ಪರಿಗಣಿಸಿ ಅಗ್ನಿ ಆರಾಧಕರಾದ, ಪಶುವನ್ನೇ ಧನವಾಗಿಸಿದ ಚಂದ್ರ ವಂಶದವರ ಸಂಸ್ಕೃತಿ ಹಾಲುಮತ ಸಂಸ್ಕೃತಿಯನ್ನು ಸಾಧಾರವಾಗಿ ಬಿಂಬಿಸಿರುವುದು ಕುತೂಹಲಕರ ಹಾಗೂ ಆಶ್ಚರ್ಯಕರ.

ಈ ವಂಶದ ರಾಜ ಪ್ರಿಯವ್ರತ ಸಮಸ್ತ ಭೂಮಂಡಲವನ್ನು ಆಳುತ್ತಿದ್ದು ಆತ ಈ ಸಮಸ್ತ ಭೂಮಂಡಲವನ್ನು ಸಪ್ತದ್ವೀಪಗಳಾಗಿ ಪರಿವರ್ತಿಸಿ ತನ್ನ ಮಕ್ಕಳಿಗೆ ಹಂಚಿದ ವಿಷಯವನ್ನು ಹೆಕ್ಕಿದ ಕವಿ ಆ ಸಪ್ತದ್ವೀಪಗಳಿಗೆ ಶಾಲ್ಮಲೀ ದ್ವೀಪ (ಆಸ್ಟ್ರೇಲಿಯಾ) ಕ್ರೌಂಚ ದ್ವೀಪ (ಆಫ್ರಿಕಾ) ಜಂಬೂದ್ವೀಪ (ಭರತವರ್ಷ) ಪ್ಲೋಕ ಮಶ್ತು ಪುಷ್ಕರ (ಇಂದಿನ ಉತ್ತರ ಹಾಗೂ ದಕ್ಷಿಣ ಅಮೇರಿಕ), ಶಕದ್ವೀಪ (ಯೂರೋಪು) ಕುಶದ್ವೀಪ (ಏಶಿಯಾ) ಎಂಬ ಮಹತ್ವಗಳನ್ನು ಎತ್ತಿ ತೋರಿಸುತ್ತಾ ಹಿಂದೆ ಹಾಲುಮತ ಸಂಸ್ಕೃತಿ ವಿಶ್ವ ಸಂಸ್ಕೃತಿಯಾಗಿದ್ದ ಬಗೆಗೆ ಬೆಳಕು ಚೆಲ್ಲುತ್ತಾರೆ.

ಪ್ರಾಕೃತಿಕ ಪದಗಳು ಸಾಂಸ್ಕೃತೀಕರಣಗೊಂಡಿರುವ ಬಗೆ ವೀರ-ವೀರ, ಭೀರಭದ್ರ-ವೀರಭದ್ರ ಮೊದಲಾದುವುಗಳ ಬಗೆಗೆ ವಿಮರ್ಶಾತ್ಮಕವಾಗಿ ವಿವೇಚಿಸಿದ್ದಾರೆ. ಹಿಂದಿನ ಮಹಾಬಲ ಪಶು ಇಂದು ಜಾಮುಂಡಿ ಬೆಟ್ಟವಾಗಿರುವುದು ಮಹಾಬಲ ಬಾಲಾಜಿಯಾಗಿ ವೆಂಕಟೇಶನಾಗಿರುವುದರ ಹಿಂದಿನ ಘಟನೆಗಳ ಬಗ್ಗೆ ಬೆಳಕು ಚೆಲ್ಲುತ್ತಾ ದೈವಮೂಲದ ಬಗೆಗೆ ಜಾನಪದ ಪುರಾಣಗಳ ತುಲನೆ ಅಚ್ಚರಿ ಹುಟ್ಟಿಸುತ್ತದೆ. ದೇವಮೂಲ, ನದಿ ಮೂಲ, ಋಷಿ ಮೂಲವನ್ನು ಹುಡುಕಬಾರದೆಂಬುದನ್ನು ಈ ಕಾವ್ಯ ಸಾರಿಹೇಳುತ್ತದೆ.

ನೂರಾರು ಮರಗಳ, ಗಿಡಮೂಲಿಕೆಗಳ, ಪ್ರಾಣಿ ಪಕ್ಷಿಗಳ, ಪುಷ್ಪಗಳ, ನಿರೂಪಣೆ ಕುರುಬ ಸಂಪ್ರದಾಯ ಹಿಂದಿನ ಆಟಗಳ ಬಗೆಗೆ ಬೆಳಕು ಚೆಲ್ಲಿರುವುದು ಗಮನಿಸಬೇಕಾದ ಅಂಶವಾಗಿದೆ. ಮೃತ್ತಿಕಾವತಿ (ಇಂದೂರು) ಕಶ್ಯಪಮೇರು (ಕಾಶ್ಮೀರ) ಜಂಬುವರ್ಧನನಿಂದ ಜಮ್ಮು, ಬಾರಮುಲ್ಲಾ – ಹಿಂದಿನ ವರಾಹಮೂಲ, ದ್ರೋಣಧಾರ (ಡೆಹರಾಡೂನ್) ಮೊದಲಾದ ಐತಿಹಾಸಿಕ ವಿವೇಚನೆಗಳು ಈ ಕೃತಿಯಲ್ಲಿ ಬಂದಿರುವುದು ಹಿಂದಿನ ಸಾಂಸ್ಕೃತಿಕ ವೈಭವವನ್ನು ಎತ್ತಿ ತೋರಿಸುತ್ತದೆ.

ವೇದವ್ಯಾಸರ, ಧರ್ಮಚಿಂತನೆ, ಭಗವದ್ಗೀತೆ, ಕಾಳಿದಾಸನ ಸುಭಾಷಿತ ಸಂಗ್ರಹಗಳು ಇಲ್ಲಿ ಧರ್ಮಸಾರವಾಗಿ ಬಿಂಬಿತವಾದರೆ ಸಂತ ಕನಕದಾಸರ ಕೀರ್ತನೆಗಳು ಕವಿಗೆ 'ಕನಕ ಸಂಹಿತೆ'ಯಾಗಿ ಧರ್ಮ ಸಿಂಧುವಾಗಿ ಗೋಚರಿಸುತ್ತದೆ. ದಾರ್ಶನಿಕ ಕುರುಬರ ರೇಣಾಸಿದ್ಧರ ಹಾಗೂ ಬ್ರಾಹ್ಮಣ ಯತಿ ಅಂದಿನ ಶಂಕರಾಚಾರ್ಯರ ಆತ್ಮೀಯತೆ ಜ್ಞಾನಸಮತೆಯ ಬಗೆಗೆ ಹೇಳುತ್ತಾ ಶೃಂಗೇರಿಯಲ್ಲಿ ಇಂದಿಗೂ ಪೂಜಿಸಲ್ಪಡುತ್ತಿರುವ ಸ್ಫಟಿಕಲಿಂಗ ಚಂದ್ರಮೌಳೀಶ್ವರ ಲಿಂಗ ಗುರು ರೇಣುಕರು ಆತ್ಮೀಯತೆಯಿಂದ ನೀಡಿದ ಲಿಂಗವೆಂಬುದರ ಬಗೆಗೆ ತಿಳಿಸುತ್ತಾ ಆತ್ಮ ಸಮತೆಯ ಬಗೆಗೆ ವಿವೇಚಿಸಿರುವುದು ಕುತೂಹಲಕರ.

ಮಹೆಂಜೋದಾರೋ, ಬಾಬಿಲೋನಿಯ ಸಂಸ್ಕೃತಿಗೂ ಮುಂಚೆಯೇ ದಕ್ಷಿಣ ಭಾರತದಲ್ಲಿ ''ಮು'' ಎಂಬ ಪ್ರಬುದ್ಧ ಸಂಸ್ಕೃತಿ ಇದ್ದ ಬಗ್ಗೆ ಬೆಳಕು ಚೆಲ್ಲಿರುವುದು ವಿಶೇಷ. ಒಟ್ಟಿನಲ್ಲಿ ಈ ಕಾವ್ಯವು ಮಾನವತೆ, ಸಮಾನತೆ, ಪ್ರಾಮಾಣಿಕತೆ, ಆತ್ಮೀಯತೆ, ಶುದ್ಧ ಚಾರಿತ್ರಗಳನ್ನು ಮನುಷ್ಯನು ಅಳವಡಿಸಿಕೊಂಡು ಮಾನವತ್ವದಿಂದ ದೇವತ್ವಕ್ಕೆ ಏರಬೇಕೆಂಬ ಧ್ಯೇಯವನ್ನು ಬಿಂಬಿಸುವುದು, ಈ ಧ್ಯೇಯಗಳು ಹಾಲುಮತ ಸಂಸ್ಕೃತಿಯ ಮೂಲಶತ್ವಗಳೆಂದು ಬಿಂಬಿಸಿರುವುದು ಸತ್ಯ ಮಾತ್ರವಲ್ಲದೆ ಹಾಲುಮತ ಧ್ಯೇಯವೂ ಆಗಿದೆ. ಇದೊಂದು ಜಾನಪದ, ಐತಿಹಾಸಿಕ, ಪೌರಾಣಿಕ ತುಲನಾತ್ಮಕ ಭಾಮಿನೀ ಷಟ್ಪದಿಯ ಮಹಾಕಾವ್ಯ. ಕವಿಯೇ ಹೇಳಿದಂತೆ ಈ ಕಾವ್ಯ

'ಮಾಟದಾ ಕಥೆಯಲ್ಲ ದುಷ್ಕರ
ಕೂಟಚರಿತವಿದಲ್ಲ ಪೂಜ್ಯರ
ಪಾಟಲಿಕೆ ಪೌರಾಣ ಚರಿತೆಯ ಧರ್ಮ ಕುಸುಮವಿದು

Scanned with CamScanner

ನಾಟಿಯಿಲ್ಲದ ಸಂತ ಮಹಿಮರ
ಹಾಟಕದ ಸೌಭಾಸ ಕ್ಷೀರವಿ
ರಾಟುತೆಯ ಶ್ರೀ ಹಾಲುಮತ ಶ್ರೀ ಕ್ಷೀರ ಬಿಂದುವಿದು

ಹಾಲುಮತ ಸಮುದ್ರವ ಒಂದು ಬಿಂದು ಮಾತ್ರವೇ ಈ ಕಾವ್ಯವೆಂದು ಹೇಳುವುದರ ಮುಖಾಂತರ ಹಾಲುಮತದ ವಿಶ್ವವ್ಯಾಪಕತೆಯನ್ನು ಆಧಾರಪೂರ್ವಕವಾಗಿ ವಿವೇಚಿಸಿರುವ ಕವಿ ''ಸತ್ಯವಿಠಲ'' ಕಾವ್ಯಾಂಕಿತ ಸತ್ಯನಾರಾಯಣರಾವ್ ಅವರು ನಮ್ಮ ಸಮಾಜದ ಬಗೆಗೆ ಕನಕ ಶತಕ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಸುದೀರ್ಘ ಲಾವಣಿ, ಅಹಿಲ್ಯಾಬಾಯಿ ಹೋಳ್ಕರ್ ನಾಟಕಗಳನ್ನು ಬರೆದು ಪ್ರಕಟಿಸಿದ್ದಾರಲ್ಲದೆ ತಿಂಥಿಣಿಯ ಕನಕ ಪೀಠದ ಶ್ರೀ ಶ್ರೀ ಸಿದ್ಧರಾಮಾನಂದ ಸ್ವಾಮೀಜಿಯವರ ಕೋರಿಕೆಯ ಮೇರೆಗೆ 'ಹಾಲುಮತ ಆರಾಧನಾ ಮಂಜರಿ'ಯನ್ನು ಸಂಸ್ಕೃತ ಶ್ಲೋಕ ವ್ಯಾಖ್ಯಾನ ಸಮೇತ ಪ್ರಕಟಿಸಿ ನಮ್ಮ ಸಮಾಜಕ್ಕೆ ಸಮರ್ಪಿಸಿರುವುದು ವಿಶೇಷ.

ಮಹಾಕಾಳಿಯ ಭಕ್ತರಾದ ಇವರು ಶಾರದೆ ಹೇಳಿದುದನ್ನು ನಾನು ಬರೆದ ಲಿಪಿಕ ಮಾತ್ರನೆಂದು ನಮ್ರತೆಯನ್ನು ತೋರಿ ಕೃತಿಯಲ್ಲಿ ತಪ್ಪುಗಳಿದ್ದರೆ ತಿದ್ದಿಕೊಳ್ಳುವ ಸೌಜನ್ಯವನ್ನು ತೋರುತ್ತಾರೆ.

ಈ ಕೃತಿಯನ್ನು ಪ್ರಕಟಿಸಿದ ಉದ್ಯಮಿಗಳಾದ ಶ್ರೀಯುತ ಚಿಕ್ಕರೇವಣ್ಣನವರಿಗೂ, ಈ ಕೃತಿಗೆ ವ್ಯಾಖ್ಯಾನವನ್ನು ಬರೆದ ಶ್ರೀಯುತ ಆರ್. ನರೇಂದ್ರಬಾಬುರವರಿಗೂ ಕಾವ್ಯವನ್ನು ರಚಿಸಿದ ಸತ್ಯವಿಠಲ ಅವರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು.

–ಎಫ್.ಟಿ. ಹಳ್ಳಿಕೇರಿ

ಪರಿವಿಡಿ

ಮಂದಾರ	ಪುಟಸಂಖ್ಯೆ	ಪದ್ಯಗಳು
ಕಾವ್ಯ ನಮನ	೪	೧೪
ಸ್ಮರಣ ಮಂದಾರ	೧	೧೪
ಅಧ್ಯಯನ ಮಂದಾರ	೭	೨೫
ಹಾಲುಮತ ಚಿಂತನಮಂದಾರ	೧೨	೫೧
ಕುರುಂಬಕುಲ ಮಂದಾರ	೨೧	೫೧
ಸಪ್ತದ್ವೀಪ ವಸುಂಧರ ಮಂದಾರ	೩೯	೩೯
ಹಾಲುಮತ ಧರ್ಮಮಂದಾರ	೫೩	೭೮
ಬಿರುಪಾಕ್ಷ ಮಂದಾರ	೮೦	೫೩
ಬೀರೇಶ್ವರ ಮಂದಾರ	೯೯	೬೯
ಮೈಲಾರಲಿಂಗ ಮಂದಾರ	೧೨೩	೧೬೭
ರೇವಣಸಿದ್ಧ ಮಂದಾರ	೧೭೯	೧೩೪
ಗುರುಕನಕ ಮಂದಾರ	೨೨೭	೨೧೩
ಕದರೀ ನಾರಸಿಂಹ ಮಂದಾರ	೩೦೪	೪೩
ಮಹಾಲಕ್ಷ್ಮೀ ಮಂದಾರ	೩೩೪	೭೨
ಮಹಾಬಲ ಮಂದಾರ	೩೬೨	೩೪
ಚಾಮುಂಡೀ ಮಂದಾರ	೩೭೪	೩೯
ಮಾಳಿಂಗರಾಯ ಮಂದಾರ	೪೪೪	೩೯
ಮಂಗಳ ಮಂದಾರ	೪೯೪	೨೭

Scanned with CamScanner

ವೀರಪ್ಪ ಸಂಪ್ರದಾಯ

ಸಾಂಸ್ಕೃತಿಕ ಅಧ್ಯಯನ







■ ಡಾ. ರಾಜಶ್ರೀ ಬ. ಪಾಟೀಲ

Scanned with CamScanner

ಪಿಎಚ್.ಡಿ ಮಹಾಪ್ರಬಂಧ ಮಾಲೆ ೨

ಬೀರಪ್ಪ ಸಂಪ್ರದಾಯ

ಸಾಂಸ್ಕೃತಿಕ ಅಧ್ಯಯನ

ಡಾ. ರಾಜಶ್ರೀ ಬ. ಪಾಟೀಲ

ವಿಶ್ವಪಥ ಹಾಲುಮತ ಸಂಸ್ಕೃತಿ ಭಂಡಾರ ಮಾಲಿಕೆ
ಶ್ರೀ ಕಾಗಿನೆಲೆ ಕನಕಗುರು ಪೀಠ, ಕಲಬುರ್ಗಿ ವಿಭಾಗ
ವೀರಗೋಟ(ತಿಂಥಿಣಿ ಬ್ರಿಡ್ಜ್), ದೇವದುರ್ಗ ತಾ. ರಾಯಚೂರು ಜಿ.

Scanned with CamScanner

BEERAPPA SAMPRADAAYA

Samskrtika Adhyayana

by

Dr. Rajashree B. Patil

PDF Research Scholar

Dept. of Kannada

SRJV College, Shiggon

Cell: 9663483851

Published by

VISWAPATHA HALUMATA BHANDAR MAALIKE

Pujya Shri Siddaramananda Mahaswamigalu

Shri Kaginele Kanaka Gurupeeth, Kalburgi Division

Veergota(Tinthini Bridge)

Devadurga Tq, Raichur Dt, Karnataka

Cell: 94496 15600

Pages: 14 + 394 + 8 Photos = 416, Price: 300/-

Paper Used: 70 GSM NS Book Print

First Edition: 2020

© ಶ್ರೀ ಕಾಗಿನೆಲೆ ಕನಕಗುರುಪೀಠ, ಕಲಬುರ್ಗಿ ವಿಭಾಗ, ವೀರಗೋಟ

ಬೆಲೆ: ರೂ. ೩೦೦/–

ಪ್ರಕಾಶಕರು

ವಿಶ್ವಪಥ ಹಾಲುಮತ ಸಂಸ್ಕೃತಿ ಭಂಡಾರ ಮಾಲಿಕೆ

ಶ್ರೀ ಕಾಗಿನೆಲೆ ಕನಕಗುರು ಪೀಠ, ಕಲಬುರ್ಗಿ ವಿಭಾಗ

ವೀರಗೋಟ(ತಿಂಥಿಣಿ ಬ್ರಿಡ್ಜ್), ದೇವದುರ್ಗ ತಾ., ರಾಯಚೂರು ಜಿ.

ಮುಖಪುಟ: ರವೀಂದ್ರ ವಿಶ್ವಜ್ಞ, ಧಾರವಾಡ

ಅಕ್ಷರ ಜೋಡಣೆ

ಯಾಜಿ ಪ್ರಕಾಶನ, ಹೊಸಪೇಟೆ

ಮೊ. 70196 37741

ಮುದ್ರಣ

ತ್ವರಿತ ಮುದ್ರಣ, ಗದಗ

Scanned with CamScanner

ಮುನ್ನುಡಿ

ಡಾ. ಎಫ್.ಟಿ.ಹಳ್ಳಿಕೇರಿ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪಸ್ತಪ್ರತಿಶಾಸ್ತ್ರ ವಿಭಾಗ

ದಕ್ಷಿಣ ಭಾರತದ ಜನಪ್ರಿಯ ದೇಶಿ ದೈವಗಳಲ್ಲಿ ಬೀರಪ್ಪ ಒಬ್ಬನು. ಮಹಾರಾಷ್ಟ್ರ ಕರ್ನಾಟಕ ಆಂಧ್ರಪ್ರದೇಶ ತಮಿಳುನಾಡು ರಾಜ್ಯಗಳಲ್ಲಿ ಈತನು ಬೇರೆ ಬೇರೆ ಹೆಸರುಗಳಿಂದ ಪ್ರಸಿದ್ಧಿ ಹೊಂದಿದ್ದಾನೆ. ಬೀರಣ್ಣ, ವೀರಣ್ಣ, ಬೀರದೇವರು, ಬೀರೋಬಾ, ಬೀರಲಿಂಗೇಶ್ವರ, ಸಿದ್ಧಬೀರಪ್ಪ, ಮುರಸಿದ್ಧ, ಕರಿಸಿದ್ಧೇಶ್ವರ ಇತ್ಯಾದಿಯಾಗಿ ಈತನನ್ನು ಕರೆಯಲಾಗುತ್ತಿದೆ. ವಿಶೇಷವಾಗಿ ಮೌಖಿಕ ಪರಂಪರೆಯಲ್ಲಿ ಈತನ ಚರಿತ್ರೆ ಹೆಚ್ಚು ಅನಾವರಣಗೊಂಡಿದೆ. ಕುರುಬ ಸಮುದಾಯಕ್ಕೆ ಈತ ಸಾಂಸ್ಕೃತಿಕ ನಾಯಕನಾಗಿದ್ದಾನೆ; ಕುಲದೈವವಾಗಿ ಆರಾಧನೆಗೊಳ್ಳುತ್ತಿದ್ದಾನೆ. ಇಂಥ ಸಾಂಸ್ಕೃತಿಕ ದೈವದ ಬಗ್ಗೆ ನಮ್ಮಲ್ಲಿ ಪೂರ್ಣಪ್ರಮಾಣದ ಅಧ್ಯಯನಗಳ ಕೊರತೆ ಇತ್ತು. ಅಂಥ ಕೊರತೆಯನ್ನು ನಿವಾರಿಸುವ ನಿಟ್ಟಿನಲ್ಲಿ ಡಾ. ರಾಜಶ್ರೀ ಪಾಟೀಲ ಅವರು "ಬೀರಪ್ಪ ಸಂಪ್ರದಾಯ: ಸಾಂಸ್ಕೃತಿಕ ಅಧ್ಯಯನ" ಎಂಬ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಆ ಮೂಲಕ ಬೀರಪ್ಪನ ಸಂಪ್ರದಾಯದ ಬಗ್ಗೆ ಹೊಸ ಬೆಳಕನ್ನು ಚೆಲ್ಲಲು ಪ್ರಯತ್ನಿಸಿದ್ದಾರೆನ್ನಬಹುದು. ಅವರ ಈ ಪ್ರಯತ್ನಕ್ಕೆ ಪಂಪ ಕನ್ನಡ ವಿಶ್ವವಿದ್ಯಾಲಯವು ಪಿಎಚ್.ಡಿ. ಪದವಿಯನ್ನು ನೀಡಿ ಗೌರವಿಸಿದೆ. ಈಗ ಇದು ಪುಸ್ತಕ ರೂಪದಲ್ಲಿ ಪ್ರಕಟಗೊಂಡು ಸಾಹಿತ್ಯ-ಸಮಾಜ ಲೋಕಕ್ಕೆ ಲಭ್ಯವಾಗುತ್ತಿದೆ. ಈ ಕಾರಣಗಳಿಗಾಗಿ ಡಾ. ರಾಜಶ್ರೀ ಪಾಟೀಲ ಅವರನ್ನು ಆರಂಭದಲ್ಲಿಯೇ ನಾನು ಹಾರ್ದಿಕವಾಗಿ ಅಭಿನಂದಿಸಿ, ಕೆಲವು ಮುನ್ನುಡಿರೂಪದ ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ.

ಆರು ಅಧ್ಯಾಯಗಳಲ್ಲಿ ಬೀರಪ್ಪನ ಅಧ್ಯಯನದ ಆಕರಗಳು, ಆತನ ಇತಿವೃತ್ತ ವಿಚಾರ, ಆತನ ಹೆಸರಿನಲ್ಲಿರುವ ಕ್ಷೇತ್ರಗಳು, ಆಚರಣೆ-ನಂಬಿಕೆ-ಕಲೆ ಇತ್ಯಾದಿ ವಿಷಯಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಇದಕ್ಕಾಗಿ ರಾಜಶ್ರೀ ಅವರು ಮಾಡಿದ

Scanned with CamScanner

ಮೊದಲ ಕೆಲಸವೆಂದರೆ ಬೀರಪ್ಪನನ್ನು ಕುರಿತು ಲಭ್ಯವಾಗುವ ಲಿಖಿತ-ಮೌಖಿಕ-ದಾಖಲು ರೂಪದ ಆಕರಗಳನ್ನು ಸಮಗ್ರವಾಗಿ ಸಂಗ್ರಹಿಸಿರುವುದು. ಈವರೆಗೆ ಗಮನಿಸಿದಂತೆ ಬೀರಪ್ಪನ ವಿಷಯದಲ್ಲಿ ಶಾಸನೋಲ್ಲೇಖಗಳು ಸಿಕ್ಕಿರುವುದು ತುಂಬಾ ಕಡಿಮೆ. ಆದರೆ ರಾಜಶ್ರೀ ಅವರು ಎಲ್ಲ ಶಾಸನ ಸಂಪುಟಗಳನ್ನು ತಿರುಬಿ ಹಾಕಿ ಒಂಭತ್ತು ಶಾಸನಗಳಲ್ಲಿರುವ ಮಾಹಿತಿಗಳನ್ನು ಹೊರತೆಗೆದಿದ್ದಾರೆ. ಇದು ಅವರ ಸಂಶೋಧನಾಸಕ್ತಿ, ಪರಿಶ್ರಮ ಮತ್ತು ಶ್ರದ್ಧೆಯನ್ನು ತೋರಿಸುತ್ತದೆ. ಜೊತೆಗೆ ಹಾಲುಮತ ಪುರಾಣಗಳು, ಡೊಳ್ಳಿನ ಹಾಡುಗಳನ್ನು ಸಂಗ್ರಹಿಸಿ, ಬೀರಪ್ಪನ ಇತಿವೃತ್ತವನ್ನು ಮೊದಲ ಬಾರಿಗೆ ಸಮಗ್ರವಾಗಿ ನಿರೂಪಿಸಿರುವ ರೀತಿಯೂ ಮೆಚ್ಚುವಂಥದ್ದಾಗಿದೆ.

ಬೀರಪ್ಪ ಸಾಂಸ್ಕೃತಿಕ ನಾಯಕನಾಗಿದ್ದರಿಂದ ಒಂದೆ ಕಡೆ ನೆಲೆ ನಿಂತವನಲ್ಲ. ಹೀಗಾಗಿ ಆತ ಹೋದಡೆಯಲ್ಲೆಲ್ಲಾ ಆರಾಧನೆಗೆ ಒಳಪಟ್ಟಿದ್ದಾನೆ. ಜೊತೆಗೆ ಜನಮಾನಸದಲ್ಲಿ ಆಳವಾಗಿ ನೆಲೆಯೂರಿದ್ದಾನೆ. ಆದ್ದರಿಂದ ಆತನ ಹೆಸರಿನಲ್ಲಿ ಗುಡಿ-ಗುಂಡಾರ ದೇವಾಲಯಗಳು ದಕ್ಷಿಣ ಭಾರತದಾದ್ಯಂತ ಕಂಡುಬರುತ್ತವೆ. ಅಂಥವುಗಳಲ್ಲಿ ಪ್ರಾತಿನಿಧಿಕ ಕ್ಷೇತ್ರಗಳಿಗೆ ಭೇಟಿ ನೀಡಿ ಅನೇಕ ಕುತೂಹಲಕಾರಿ ಸಂಗತಿಗಳನ್ನು ಕಲೆಹಾಕಿ ಅವುಗಳನ್ನು ವಿಶ್ಲೇಷಣೆಗೊಳಪಡಿಸಿರುವುದು ಈ ಮಹಾಪ್ರಬಂಧದ ಮತ್ತೊಂದು ವಿಶೇಷತೆಯಾಗಿದೆ. ಅಲಕನೂರು, ನಾಗಠಾಣ, ಬೀರೂರು, ಕಡಕೋಳ, ಹಿರೇನಲ್ಲೂರು, ಸಾತನೂರು ಮೊದಲಾದ ಸ್ಥಳಗಳಲ್ಲಿರುವ ಬೀರಪ್ಪನ ನೆಲೆಗಳ ವಿವರಗಳು ಇಲ್ಲಿವೆ. ಅಲ್ಲದೇ ಅಲ್ಲಿ ಜರುಗುವ ಜಾತ್ರೆ-ಉತ್ಸವ-ಪಲ್ಲಕ್ಕಿ ಮೆರವಣಿಗೆ, ಆಚರಣೆಗಳನ್ನು ಕೂಲಂಕಷವಾಗಿ ಚರ್ಚೆ ಮಾಡಲಾಗಿದೆ. ಆತನ ಹೆಸರಿನಲ್ಲಿ ಜರುಗುವ ಆಚರಣೆ-ಸಂಪ್ರದಾಯಗಳು ಪ್ರಾದೇಶಿಕವಾಗಿಯೂ ಭಿನ್ನವಾಗಿವೆ. ಶ್ರಾವಣ-ಶಿವರಾತ್ರಿ-ಯುಗಾದಿಗಳಲ್ಲಿ ಬೀರಪ್ಪನ ದೇವಾಲಯ-ಗುಡಿ-ಗುಂಡಾರಗಳಲ್ಲಿ ಭಕ್ತಸಮೂಹ ಸೇರಿ ವಿಶೇಷವಾಗಿ ಆಚರಿಸುವ ಹಬ್ಬಗಳು ಆಕರ್ಷಕವಾಗಿವೆ. ಅವುಗಳಲ್ಲಿ ಬೀರಪ್ಪನಿಗೆ ಅರ್ಪಿಸುವ ಹಾಲುಬಾನ ಸೇವೆ, ಆತನ ಹೆಸರಿನಲ್ಲಿ ಜರುಗುವ ಅಗ್ನಿಸೇವೆ, ಹಾಲರವಿ ಸೇವೆ, ಅಂಬಲಿ ಸೇವೆ, ಕುರಿಮರಿ ಹರಕೆ ಮೊದಲಾದ ಆಚರಣೆಗಳ ಸಂದರ್ಭದಲ್ಲಿ ರಾಜಶ್ರೀ ಅವರು ಸ್ವತಃ ವೀಕ್ಷಿಸಿ ಮಾಹಿತಿಯನ್ನು ಸಂಗ್ರಹಿಸಿದ್ದಾರೆ; ಆ ಆಚರಣೆ-ಸಂಪ್ರದಾಯಗಳ ಹಿಂದಿರುವ ವೈಜ್ಞಾನಿಕ ಮನೋಧರ್ಮವನ್ನು ವಿಶ್ಲೇಷಿಸಿದ್ದಾರೆ. ಇನ್ನು ಈತನ ಹೆಸರಿನಲ್ಲಿ ಪ್ರದರ್ಶನಗೊಳ್ಳುವ ಕಲೆಗಳಂತೂ ಪ್ರದೇಶಕ್ಕನುಗುಣವಾಗಿ ವೈವಿಧ್ಯಮಯವಾಗಿವೆ. ಡೊಳ್ಳು ಕುಣಿತ, ಈರಗಾರರ ಕುಣಿತ, ದಟ್ಟಿಕುಣಿತ, ಕದಳಿ ಕುಣಿತ ಇತ್ಯಾದಿ ಕಲೆಗಳು ಬೀರಪ್ಪನ ಜನಪ್ರಿಯತೆಯನ್ನು ಸಾಕ್ಷೀಕರಿಸುವಂತಿವೆ. ಅಂಥ ಎಲ್ಲ ಕಲೆಗಳು, ನಂಬಿಕೆಗಳು ಆಚರಣೆಗಳು ಮೊದಲ ಬಾರಿಗೆ ಇಲ್ಲಿ ಅಧ್ಯಯನಕ್ಕೆ ಒಳಪಟ್ಟಿವೆ. ಹೀಗಾಗಿ ಈ ಮಹಾಪ್ರಬಂಧಕ್ಕೆ ಒಂದು ಸಮಗ್ರತೆ ಪ್ರಾಪ್ತವಾಗಿದೆ.

Scanned with CamScanner

ಒಟ್ಟಿನಲ್ಲಿ ದೇಶಿ ದೈವ ಬೀರಪ್ಪನ ಸಂಪ್ರದಾಯವನ್ನು ಸಮಗ್ರವಾಗಿ ಅಧ್ಯಯನಕ್ಕೊಳಪಡಿಸುವಲ್ಲಿ ಸಂಶೋಧಕರು ಸಾಕಷ್ಟು ಶ್ರಮವಹಿಸಿದ್ದಾರೆ. ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಹೊಸ ಸಂಗತಿಗಳನ್ನು ಮೊದಲ ಬಾರಿಗೆ ದಾಖಲಿಸುವ ಕೆಲಸ ಇಲ್ಲಿ ನಡೆದಿದೆ. ಅಲ್ಲದೇ ಅನುಬಂಧದಲ್ಲಿರುವ ಶಾಸನಗಳ ಪಠ್ಯ, ದೇವಸ್ಥಾನಗಳ ಸೂಚಿ ಹಾಗೂ ಛಾಯಾಚಿತ್ರಗಳು ಬೀರಪ್ಪನ ಸಂಪ್ರದಾಯವನ್ನು ಅರ್ಥ ಮಾಡಿಕೊಳ್ಳಲು ಪೂರಕವೆನ್ನುವಂತಿವೆ. ಇಲ್ಲಿರುವ ಬೀರಪ್ಪನ ಕ್ಷೇತ್ರಗಳು ಹಾಗೂ ಆಚರಣೆ–ನಂಬಿಕೆ–ಕಲೆಗಳು ಎಂಬ ನಾಲ್ಕು ಮತ್ತು ಐದನೆಯ ಅಧ್ಯಾಯಗಳು ಸ್ವತಂತ್ರ ಅಧ್ಯಯನ ಕೈಕೊಳ್ಳುವಷ್ಟು ವಿಸ್ತಾರವನ್ನು ಪಡೆದುಕೊಂಡಿವೆ.

ಕೊನೆಯದಾಗಿ ಒಂದು ಮಾತು: ಡಾ. ರಾಜಶ್ರೀ ಬ. ಪಾಟೀಲ ಅವರು ನನ್ನ ನೆಚ್ಚಿನ ವಿದ್ಯಾರ್ಥಿಗಳಲ್ಲಿ ಒಬ್ಬರು. ಎಂ.ಫಿಲ್. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ "ಹಾಲುಮತಗುರು ಸರೂರ ಶಾಂತಮುತ್ತಯ್ಯ" ಎಂಬ ವಿಷಯದ ಮೇಲೆ ಕಿರುಪ್ರಬಂಧ ರಚಿಸಿದವರು. ಆಗಲೇ ನಾನು ಅವರ ಹಾಲುಮತ ಸಾಹಿತ್ಯ–ಸಂಸ್ಕೃತಿ ಬಗೆಗಿನ ಆಸಕ್ತಿಯನ್ನು ಗಮನಿಸಿದ್ದೆ. ನಂತರದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಹಾಲುಮತ ಕುಲದೈವ ಬೀರಪ್ಪನ ಬಗ್ಗೆ ಅಧ್ಯಯನ ಮಾಡಬಹುದು ಎಂಬ ಸೂಚನೆಯನ್ನು ಕೊಟ್ಟಿದ್ದೆ. ಆ ಸೂಚನೆಯ ಎಳೆಯನ್ನು ಹಿಡಿದುಕೊಂಡು ರಾಜಶ್ರೀ ಅವರು ಬೀರಪ್ಪನ ಸಂಪ್ರದಾಯದ ಬಗ್ಗೆ ಸಾಂಸ್ಕೃತಿಕ ಅಧ್ಯಯನವನ್ನು ಪೂರೈಸಿದ್ದಾರೆ. ವಿಷಯದ ಮೇಲಿನ ಆಸಕ್ತಿ, ಆಕರಗಳನ್ನು ಸಂಗ್ರಹಿಸುವಲ್ಲಿನ ಪರಿಶ್ರಮ, ಬರವಣಿಗೆಯಲ್ಲಿನ ಸರಳತೆ ಕಾರಣವಾಗಿ ಈ ಮಹಾಪ್ರಬಂಧ ಒಂದು ಸುಂದರ ಚೌಕಟ್ಟಿಗೆ ಒಳಪಟ್ಟು ಪ್ರಕಟವಾಗುತ್ತಿರುವುದು ಮಾರ್ಗದರ್ಶಕನಾದ ನನಗೆ ಸಂತೋಷವನ್ನುಂಟು ಮಾಡಿದೆ. ಮುಂದಿನ ದಿನಗಳಲ್ಲಿ ರಾಜಶ್ರೀ ಪಾಟೀಲ ಅವರು ಹಾಲುಮತ ಸಾಹಿತ್ಯ–ಸಂಸ್ಕೃತಿ–ಇತಿಹಾಸ ಕುರಿತು ಇನ್ನೂ ವಿಸ್ತೃತ ಸಂಶೋಧನೆ ಕೈಕೊಂಡು ಉತ್ತಮೋತ್ತಮ ಗ್ರಂಥಗಳನ್ನು ಹೊರತರಲಿ ಎಂದು ಹಾರೈಸುತ್ತೇನೆ.

Scanned with CamScanner

ಹಾಲುಮತ ಸಾಂಸ್ಕೃತಿಕ ಅಧ್ಯಯನದಲ್ಲಿ ತಮ್ಮನ್ನು ಆಳವಾಗಿ ತೊಡಗಿಸಿಕೊಂಡಿರುವ ಡಾ.ರಾಜಶ್ರೀ ಪಾಟೀಲ ಅವರು ಆ ಕುರಿತು ಈಗಾಗಲೇ ಮೂರಾಲ್ಕು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಹಾಲುಮತ ಸಂಸ್ಕೃತಿಯ ಮೂಲದಲ್ಲಿ ಗೋಚರಿಸುವ ಬಹುದೊಡ್ಡ ಶಾಖೆಯಾದ ಬೀರದೇವರ ಪರಂಪರೆಯ ಕುರಿತಾಗಿ ಅವರು ನಡೆಯಿಸಿದ ಅಧ್ಯಯನದ ಫಲವಾಗಿ "ಬೀರಪ್ಪ ಸಂಪ್ರದಾಯ" ಸಂಶೋಧನ ಮಹಾಪ್ರಬಂಧವು ಮಹತ್ವದ ಸಾಂಸ್ಕೃತಿಕ ಅಧ್ಯಯನದ ಕೃತಿಯಾಗಿ ಪ್ರವೇಶ ಪಡೆಯುತ್ತಿದೆ.

ಬೀರದೇವರ ಕುರಿತು ಈಗಾಗಲೇ ಲಭ್ಯವಿರುವ ಲಿಖಿತ ಹಾಗೂ ಮೌಖಿಕ ಆಕರಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ, ಅವುಗಳನ್ನು ವ್ಯವಸ್ಥಿತವಾಗಿ ವರ್ಗೀಕರಿಸಿಕೊಂಡು, ತಾವು ಕೈಕೊಂಡ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಮೂಲ ಆಕರಕ್ಕೆ ಜೋಡಿಸುತ್ತ, ತಮ್ಮದೇ ಆದ ವಿಶಿಷ್ಟ ಒಳನೋಟಗಳೊಂದಿಗೆ ಅವನ್ನೆಲ್ಲ ವಿಶ್ಲೇಷಿಸಿ ಡಾ. ರಾಜಶ್ರೀ ಪಾಟೀಲ ಅವರು ಬೀರಪ್ಪ ಪರಂಪರೆಯ ಅಧ್ಯಯನದ ವ್ಯಾಪ್ತಿಯನ್ನು ವಿಸ್ತೃತಗೊಳಿಸಿದ್ದಾರೆ.

ಕರ್ನಾಟಕದ ತುಂಬಾ ಹಾಗೂ ಕರ್ನಾಟಕದ ಗಡಿಭಾಗದಲ್ಲಿ ಆರಾಧನೆ ಗೊಳ್ಳುತ್ತಿರುವ ಬೀರದೇವರ ಸುತ್ತಲೂ ಹಬ್ಬಿಕೊಂಡಿರುವ ನಂಬಿಕೆ ಆಚರಣೆಗಳನ್ನು ತುಷ್ಟವಾಗಿ ವರದಿ ಮಾಡದೆ ಅವುಗಳನ್ನು ಸಮುದಾಯವೊಂದರ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಸ್ಮಿತೆಯ ಶೋಧಕ್ಕಾಗಿ ಬಳಸಿಕೊಂಡಿರುವುದು ಪ್ರಸ್ತುತ ಸಂಶೋಧನ ಮಹಾಪ್ರಬಂಧದ ವೈಶಿಷ್ಟ್ಯವಾಗಿದೆ. ಈ ಸಂಪ್ರದಾಯದಲ್ಲಿ ಕಂಡು ಬರುವ ಅಲಗು ಅಡುವ, ಹಲ್ಕರಿ ಸಿಗಿಯುವ, ಕಾಗೆ ಪರೇವು, ಮೀಸಲು ಆಚರಣೆ, ಬಿಲ್ಲಾಸುರ ತಲೆ ಆಚರಣೆ ಇತ್ಯಾದಿಗಳನ್ನು ಮೌಢ್ಯಗಳೆಂದು ಉಪೇಕ್ಷೆ ಮಾಡದೆ ಅವುಗಳನ್ನು ಕಸಬುಸಂಘರ್ಷ ಹಾಗೂ ಕುಲಸಂಘರ್ಷದ ಕಥನಗಳ ಸ್ಮೃತಿಗಳು ಎನ್ನುವ ಹಾಗೆ ಗ್ರಹಿಸಿದ್ದಾರೆ. ಬೀರಪ್ಪ, ಬೀರೋಬ, ಕರಿಸಿದ್ಧ, ದೊಡ್ಡದೇವರು ಇತ್ಯಾದಿ ಹೆಸರುಗಳಿಂದ ಕರೆಯಿಸಿಕೊಳ್ಳುವ ಈತ ಸ್ಥಾವರ ಸಂಸ್ಥೆಗಳ ಎದಿರು ನೆಟೆದು ನಿಂತ ಪರಿಯನ್ನು ಶೋಧಿಸುವ ನಿಟ್ಟಿನಲ್ಲಿ ಹೊಸ ಹಾದಿಯನ್ನು ಅವರು ತುಳಿದಿದ್ದಾರೆ. ಈ ಪಯಣ ಹೀಗೆಯೇ ಮುಂದುವರೆಯಲಿ.

ಡಾ. ಚನ್ನಪ್ಪ ಕಟ್ಟಿ
ಸಂಸ್ಕೃತಿ ಚಿಂತಕರು, ಸಿಂದಗಿ

ಶ್ರೀ ಕಾಗಿನೆಲೆ ಕನಕಗುರು ಪೀಠ, ಕಲಬುರ್ಗಿ ವಿಭಾಗ
ವೀರಗೋಟ(ತಿಂಥಿಣಿ ಬ್ರಿಡ್ಜ್), ದೇವದುರ್ಗ ತಾ. ರಾಯಚೂರು ಜಿಲ್ಲೆ

ಬೆಲೆ : ₹ 300/-

Scanned with CamScanner

ಹಾಲುಮತ
ಆರಾಧನಾ ಮಂಜರಿ



ರಚನೆ: ಸತ್ಕವಿತಲ

ಪ್ರಕಟಣೆ: ಮದ್ದಯ್ಯನವರ ಕುಟುಂಬಸ್ಥರು, ದೇವನಹಳ್ಳಿ

Scanned with CamScanner

"ಹಾಲುಮತ"

* ಆರಾಧನಾ ಮಂಜರಿ *

ನಿತ್ಯಾರ್ಚನ ಪಾರಾಯಣ ಕೃತಿ

ಮೂಲ ರಚನೆ ಮತ್ತು ವ್ಯಾಖ್ಯಾನ

'ಸತ್ಯವಿಠಲ' ಡಾ. ಬಿ.ವಿ. ಸತ್ಯನಾರಾಯಣರಾವ್

ಮೊಬೈಲ್: 96634 51144

ಸಹಯೋಗ

ಆರ್. ನರೇಂದ್ರಬಾಬು

ಮೊಬೈಲ್ : 94487 17147

* ಪ್ರಕಟಣೆ *

ಮದ್ದಯ್ಯನವರ ಕುಟುಂಬ ವರ್ಗ

ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಮೊಬೈಲ್ : 94483 93400

ಪ್ರಕಾಶಕರು

ಶ್ರೀ ಕಾಗಿನೆಲೆ ಮಹಾಸಂಸ್ಥಾನ

ಶ್ರೀ ಕನಕ ಗುರುಪೀಠ-ಕಲಬುರಗಿ ವಿಭಾಗ

ವೀರಗೋಟ, ತಿಂಥಣಿ ಬ್ರಿಡ್ಜ್

ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ.

ದೂರವಾಣಿ : 9449615600

ಇ-ಮೇಲ್ : kanaka.glbg@gmail.com

Scanned with CamSca

Scanned with CamScanner

Haalumatha Aaradhana Manjari : Written by Sathyavitala Dr. Satyanarayanarao B.V., # 16, 5th Cross, Vijaya Bank Colony, Doddabanasavadi, Bengaluru-43. Mob: 9663451144
Sponsered by: Maddiah Family, Devanahalli, Bengaluru Rural Dist. Mob : 94483 93400

Published by : Sri Sri Siddharamananda Swamiji, Sri Kaginele Mahasamsthana, Kanaka Gurupeetha, Veeragota, Devadurga taluk, Mobile: 9449615600.

© ಲೇಖಕರದು

ಪ್ರಥಮ ಮುದ್ರಣ : 2020

ಬೆಲೆ : ರೂ. 250/-

ಪುಟಗಳು : viii + 248 = 256 Demmy 1/8

ಕಾಗದ ಬಳಕೆ : 70 G.S.M. Maplitho

ಮುಖಪುಟ ಮತ್ತು ರೇಖಾಚಿತ್ರ : ಶ್ರೀ ಕೆ.ಕೆ. ಮಕಾಳಿ, ಹೊಸಪೇಟೆ
ಮೊಬೈಲ್ : 94492 25113

ಕರ್ನಾಟಕ ಸರ್ಕಾರದ 2018ನೇ ಸಾಲಿನ 'ಮುದ್ರಣ ಸೊಗಸು' ಪ್ರಶಸ್ತಿ ಪುರಸ್ಕೃತ

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

Scanned with CamScanner

ಡಾ. ಎಫ್.ಟಿ. ಹಳ್ಳಿಕೇರಿ

ಪ್ರಾಧ್ಯಾಪಕ, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ದೂರವಾಣಿ : 94481 84022

ಹೊನ್ನುಡಿ

ಹಾಲುಮತ ಆರಾಧನ ಮಂಜರಿ

[ನಿತ್ಯಾರ್ಚನ ಪಾರಾಯಣ ಕೃತಿ]

ಲೇಖಕರು : ಸತ್ಯವಿಠಲ ಡಾ. ಬಿ.ವಿ. ಸತ್ಯನಾರಾಯಣರಾವ್

ಭಾರತೀಯ ಪರಂಪರೆಯಲ್ಲಿ ಮಾನವ ತಾನು ನಂಬಿಕೊಂಡು ಬಂದ ಭಗವಂತನಿಗೆ ಪೂಜೆ-ಪುನಸ್ಕಾರ, ಪ್ರಾರ್ಥನೆ-ಆರಾಧನೆಯ ಮೂಲಕ ಭಕ್ತಿಯನ್ನು ಸಮರ್ಪಿಸುವ ಪದ್ಧತಿ ಬಹು ಹಿಂದಿನಿಂದಲೂ ರೂಢಿಯಲ್ಲಿದೆ. ಜೊತೆಗೆ ತನ್ನ ಇಷ್ಟದೈವ-ಮನೆದೈವ-ಸಮೂಹದೈವ ಅಥವಾ ಇನ್ನಿತರೆ ದೈವವನ್ನು ಪೂಜೆ ಪ್ರಾರ್ಥನೆಯ ಜೊತೆಗೆ ಸ್ತೋತ್ರರೂಪದಲ್ಲಿ ಪಾರಾಯಣ ಮಾಡಿ ಪ್ರಾಂಜಲ ಮನಸ್ಸಿನಿಂದ ಭಕ್ತಿಯನ್ನು ಸಲ್ಲಿಸುವುದನ್ನು ಈಗಲೂ ನಾವು ನೋಡುತ್ತೇವೆ. ಈ ಸ್ತೋತ್ರಗಳನ್ನು ಕವಿಗಳು ಶ್ಲೋಕ-ಹಾಡು-ಪದ್ಯರೂಪಗಳಲ್ಲಿ ರಚನೆ ಮಾಡುತ್ತ ಬಂದಿದ್ದಾರೆ ; ಬರುತ್ತಲಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಮಧ್ಯಕಾಲೀನ ಸಂದರ್ಭದಿಂದಲೂ ಕರಣಹಸುಗೆ, ಸ್ತೋತ್ರ, ದಂಡಕ, ಅಷ್ಟಕ, ಶತಕ, ತಾರಾವಳಿ, ದ್ವಿಪದಿ, ತ್ರಿಪದಿ, ಚೌಪದಿ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ಕವಿಗಳು ಕಿರುಕೃತಿಗಳನ್ನು ರಚನೆ ಮಾಡಿದ್ದಾರೆ. ಬಹುತೇಕವಾಗಿ ಈ ಸ್ತೋತ್ರರೂಪದ ಸಂಸ್ಕೃತ ಮತ್ತು ಕನ್ನಡ ಕಿರುಕೃತಿಗಳಿಗೆ ಭಾವಾರ್ಥ ಮತ್ತು ವ್ಯಾಖ್ಯಾನಗಳು ಬಂದಿವೆ. ಈ ಸ್ತೋತ್ರಗಳ ರಚನಾ ಕಾರ್ಯ ಇಂದಿಗೂ ನಿರಂತರವಾಗಿ ನಡೆದುಕೊಂಡು ಬರುತ್ತಿದೆ ಎಂಬುದಕ್ಕೆ ಪ್ರಸ್ತುತ "ಹಾಲುಮತ ಆರಾಧನ ಮಂಜರಿ" ಗ್ರಂಥವೂ ಒಂದು ನಿದರ್ಶನವಾಗಿದೆ.

ಹಾಲುಮತ ಆರಾಧನ ಮಂಜರಿಯ ಕರ್ತೃಗಳಾದ "ಸತ್ಯವಿಠಲ" ಕಾವ್ಯನಾಮದಿಂದ ಪ್ರಸಿದ್ಧರಾದವರು ಡಾ. ಬಿ.ವಿ.ಸತ್ಯನಾರಾಯಣರಾವ್ ಅವರು ಓದಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಪದವೀಧರರಾಗಿ, ವೃತ್ತಿಯಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ(ಬೆಸ್ಕಾಂ)ಯಲ್ಲಿ

Scanned with CamScanner

ಎಲೆಕ್ಟ್ರಿಕಲ್ ಇಂಜನೀಯರ್ ಆಗಿ, ಉಪಪ್ರಧಾನ ವ್ಯವಸ್ಥಾಪಕರಾಗಿ ಪ್ರವೃತ್ತಿಯಲ್ಲಿ ಕನ್ನಡ ಸಾಹಿತ್ಯ ಕಾವ್ಯ ಸಾಧಕರಾಗಿ, ಸಾಹಿತ್ಯ ರಚನೆ ಮತ್ತು ಪ್ರಕಟಣೆಗಾಗಿ ಸ್ವಯಂ ನಿವೃತ್ತಿ ಪಡೆದಿರುವುದು ಆಶ್ಚರ್ಯ. ಸತ್ಯವಿಠಲರ ಸಮಗ್ರ ಭಾಮಿನೀ ಕೃತಿಸಂಪುಟ–೧, ದ್ವಾದಶ ಶತಕಗಳ ಕೃತಿಸಂಪುಟ–೨, ಕರ್ನಾಟಕ ಲಾವಣಿ ಸಂಪುಟ–೩, ಸಂಗೀತ ಭಾರತಿ ಸಂಪುಟ–೪, ವ್ಯಾಖ್ಯಾನ ಸಂಪುಟ–೫ ಮತ್ತು ೬. ಕರ್ನಾಟಕ ದರ್ಶನ, ಕಾಳಿ ಮಚನಗಳು, ಸಂಗೀತ ಶಾರದೆ, ಸಂಶೋಧನ ಕೃತಿ – ಹೀಗೆ ಸಂಪುಟಗಳ ರೂಪದಲ್ಲಿ ಅವರ ಕೃತಿಗಳು ಪ್ರಕಟಗೊಂಡಿವೆ. ಭಾಮಿನೀ ಷಟ್ಪದಿಯಲ್ಲಿ ಶ್ರೀ ದೇವಿ, ರಾಘವೇಂದ್ರಸ್ವಾಮಿ, ಬಾಹುಬಲಿ, ಸತ್ಯನಾಥೇಶ್ವರ, ಸ್ವಯಂಭೂ ಗಣಪ, ಧರ್ಮಸ್ಥಳ, ಲಲಿತಾಂಬಿಕೆ, ಬಸವಣ್ಣ, ಶಿವಕುವಾರಸ್ವಾಮಿ, ಶಿರಡಿಸಾಯಿಬಾಬಾ ಮೊದಲಾವ ಮಹಾತ್ಮರ ಚರಿತ್ರೆಯನ್ನು ರಚನೆ ಮಾಡಿದ್ದಾರೆ. ಇನ್ನು ಬುದ್ಧ, ಕನಕದಾಸ, ಮಹದೇವಿಯಕ್ಕ, ವಿವೇಕಾನಂದ, ಶಾರದಾಂಬಾ, ಅಂಬೇಡ್ಕರ, ಕೆಂಪೇಗೌಡ ಅವರಂಥ ಮಹಾನ್ ಸಾಧಕರ ಸಾಧನೆಗಳನ್ನು ಪದ್ಯರೂಪದಲ್ಲಿ ಎರಕ ಹೊಯ್ದಿದ್ದಾರೆ. ಲಾವಣಿ ಪ್ರಕಾರದಲ್ಲಿ ಬಸವಣ್ಣ, ವೀರರಾಣಿ ಕೆಳದಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಬುದ್ಧ, ಪಿರಿಯಾಪಟ್ಟಣ ಮಸಣಿಕಮ್ಮ ಮೊದಲಾದವರ ವೀರಗಾಥೆಯನ್ನು ಚಿತ್ರಿಸಿದ್ದಾರೆ. ೧೩೫೦ ಪದ್ಯಗಳ ಕನ್ನಡದ ಪ್ರಪ್ರಥಮ ಭೋಗಷಟ್ಪದಿ ಮಹಾಕಾವ್ಯ ಸೊನ್ನಲಿಗೆ ಸಿದ್ಧರಾಮ ವಿಲಾಸ ಸತ್ಯವಿಠಲರ ಲೇಖನಿಯಿಂದ ಹೊರಬಿದ್ದಿದೆ. ಇಂತಹ ಕಾವ್ಯಪ್ರತಿಭೆಯನ್ನು ಹೊಂದಿದ ಸತ್ಯವಿಠಲ ಅವರು ಅನೇಕ ಮಹಾತ್ಮರ ಸಂತರ ಕುರಿತು ಸ್ತೋತ್ರ, ವ್ಯಾಖ್ಯಾನ ಕೃತಿಗಳನ್ನು ರಚನೆ ಮಾಡುತ್ತ ಬಂದಿದ್ದಾರೆ. ಈಗ ಈ ಸ್ತೋತ್ರ – ವ್ಯಾಖ್ಯಾನಗಳ ಸಾಲಿಗೆ ಸೇರ್ಪಡೆಯಾಗುವ ಮತ್ತೊಂದು ಕೃತಿಸಂಪುಟವಾಗಿದೆ, ಹಾಲುಮತ ಆರಾಧನಾ ಮಂಜರಿ. ವಿಶೇಷವೇನೆಂದರೆ ಮಹಾತ್ಮರ ಕಥನಚಾರಿತ್ರ್ಯಗಳು ಸೂತ್ರೀಕರಣಗೊಂಡು ನಾಮಾವಳಿಗಳಾಗಿರುವುದು.

* ನಡೆದಾಡುವ ದೇವರೆಂದು ಹೆಸರಾದ ಸಿದ್ಧಗಂಗೆಯ ಶ್ರೀ ಶಿವಕುವಾರ ಸ್ವಾಮಿಗಳಿಂದ ಕಾವ್ಯನಾಡೋಜ, ಮುರುಘಾ ಮಠದವರಿಂದ ಕಾವ್ಯಶ್ರೀ, ದೆಹಲಿಯಿಂದ ರಾಷ್ಟ್ರೀಯ ರತ್ನ, ಕನಕಶ್ರೀ ಪಂಜಲಿ ರತ್ನ, ಭಾಮಿನಿ ಭಾಸ್ಕರ, ಹೊಯ್ಸಳ ರತ್ನ ಮೊದಲಾದ ೨೫ಕ್ಕೂ ಹೆಚ್ಚು ಪ್ರಶಸ್ತಿ ಭಾಜನರಾದ ಇವರು ವಿಜಯನಗರ ಸಾಮ್ರಾಜ್ಯದ

ಸಂಸ್ಥಾಪನಾ ಕಾರಣರಾದ ಗುರು ವಿದ್ಯಾರಣ್ಯರವರ ಮನೆತನದ ಪರಂಪರೆಯವರೆಂಬುದು ಕುತೂಹಲಕಾರಿ ವಿಷಯ.

ಈ ಕೃತಿಯಲ್ಲಿ ಹಾಲುಮತ ಸಮುದಾಯದ ಆರಾಧ್ಯ ದೈವಗಳಾದ ಮೈಲಾರಲಿಂಗೇಶ್ವರ, ಬೀರಲಿಂಗೇಶ್ವರ, ರೇವಣಸಿದ್ದೇಶ್ವರ, ಕನಕದಾಸರು ಮಾಳಿಂಗರಾಯ ಹಾಗೂ ರಾಷ್ಟ್ರಮಾತಾ ಅಹಿಲ್ಯಾದೇವಿಯರ ಕುರಿತು ಅಷ್ಟೋತ್ತರ ಶತನಾಮಾವಳಿ ಸ್ತೋತ್ರಗಳಿವೆ. ಮತ್ತು ಅವುಗಳಿಗೆ ವ್ಯಾಖ್ಯಾನವನ್ನು ಕೊಡಲಾಗಿದೆ. ಮಲ್ಲಾರಿ, ಮೈಲಾರಿ, ಮಲ್ಲಯ್ಯ, ಮಲ್ಲಣ್ಣ, ಮಲ್ಲಾರಿನಾಥ, ಮೈಲಾರಲಿಂಗ, ಮಲ್ಲಿಕಾರ್ಜುನ, ಮಾಲತೇಶ, ಮಲ್ಲೂಖಾನ್, ಖಂಡೋಬಾ ಎಂಬ ನಾನಾ ಹೆಸರಿನಿಂದ ಕರ್ನಾಟಕ–ಮಹಾರಾಷ್ಟ್ರ–ಆಂಧ್ರಪ್ರದೇಶಗಳಲ್ಲಿ ಮೈಲಾರಲಿಂಗೇಶ್ವರನು ಪ್ರಸಿದ್ಧನಾಗಿದ್ದಾನೆ. ಕೇವಲ ಹಾಲುಮತ ಸಮುದಾಯಕ್ಕೆ ಮಾತ್ರ ಸೀಮಿತನಾಗದೇ ಅನ್ಯ ಸಮುದಾಯದವರಿಂದಲೂ ಆರಾಧನೆಗೊಳ್ಳುವ ದೈವ ಮೈಲಾರಲಿಂಗ. ಹೀಗಾಗಿ ಮತಭೇದವಿಲ್ಲದೇ ಮೈಲಾರ–ದೇವರಗುಡ್ಡ–ಜೇಜೂರಿ ಮುಂತಾದ ಹಲವು ಕ್ಷೇತ್ರಗಳಲ್ಲಿ ಸರ್ವಧರ್ಮೀಯರಿಂದ ಆರಾಧನೆಗೊಳ್ಳುತ್ತಿರುವ ವಿವರಗಳು ಇಲ್ಲಿವೆ. ಬೇಡಿದ ವರವನ್ನು ಕೊಡುವ ಮೈಲಾರನಿಗೆ ಭಕ್ತರು ನಾನಾ ಸೇವೆಗಳಿಂದ ಪೂಜೆಯನ್ನು ಸಲ್ಲಿಸುತ್ತಾರೆ. ಆ ಪೂಜೆಗಳಲ್ಲಿ ಭಂಡಾರ ಸೇವೆ, ತಾಯೂಲ ಸೇವೆ, ಹಾಲು ಸೇವೆ, ಹೆಡಗೆ ಸೇವೆ, ಮೀಸಲು ಸೇವೆ, ಅಂಬಲಿ ಸೇವೆ, ಸರಪಣಿ ಸೇವೆ ಬಹುಮುಖ್ಯವಾಗಿವೆ. ಹೀಗೆ ವಿಶಿಷ್ಟ ಸೇವೆಗಳಿಂದ ಆರಾಧನೆಗೊಳ್ಳುವ ಮೈಲಾರಲಿಂಗನ ಚರಿತ್ರೆಯನ್ನು ಹದಿಮೂರು ಚಮತ್ಕಾರದ ಸ್ತೋತ್ರಗಳಲ್ಲಿ ಸತ್ಯವಿಠಲ ಅವರು ಕಟ್ಟಿಕೊಡುವ ಪ್ರಯತ್ನ ಶ್ಲಾಘನೀಯವಾಗಿದೆ.

ಹಾಲುಮತದವರಿಗೆ ಪರವಾರಾಧ್ಯ ದೈವವಾಗಿ ಪೂಜೆಗೊಳ್ಳುತ್ತಿರುವವನು ಬೀರಪ್ಪ ಬೀರಲಿಂಗ, ಬೀರಲಿಂಗೇಶ್ವರ, ಸಿದ್ದೇಶ್ವರ, ಕರಿಸಿದ್ಧ, ಕರಿಸಿದ್ದೇಶ್ವರ, ಬೀರೋಬಾ ಎಂದು ಕರೆಮಿಸಿಕೊಳ್ಳುವ ಈತ ಶಿವನ ಸಾಕ್ಷಾತ್ ಸ್ವರೂಪವೆಂಬ ನಂಬಿಕೆಯಿದೆ. ಒಂಬತ್ತು ಚಮತ್ಕಾರದ ಸ್ತೋತ್ರಗಳಲ್ಲಿ ಬೀರಲಿಂಗೇಶ್ವರನ ಮಹಿಮೆಗಳನ್ನು ವರ್ಣಿಸಲಾಗಿದೆ. ಶಿವಚಿದ್ರೂಪ, ಪಂಚಭೂತ ಪರಾತ್ಪರ, ದಕ್ಷಯಜ್ಞ ವಿನಾಶಕ, ವೀರಭದ್ರ ವಿರೂಪಾಕ್ಷ, ಪೃಥ್ವಿಲಿಂಗ ಸ್ವರೂಪ, ದೊಳ್ಳಾಸುರ–ಕೋಣಾಸುರರನ್ನು ಕೊಂದವ, ಲೋಕಪಾಲಕನೂ ಆದ ಬೀರಪ್ಪ ಸರ್ವರಿಗೂ

Scanned with CamScanner

ಸನ್ಮಂಗಲವನ್ನುಂಟು ಮಾಡಿ ರಕ್ಷಿಸಲಿ ಎಂಬ ಪ್ರಾರ್ಥನೆ ಈ ಸ್ತೋತ್ರಗಳ ಆಶಯವಾಗಿದೆ.

ಹಾಲುಮತ ಗುರುಪರಂಪರೆಯಲ್ಲಿ ರೇವಣಸಿದ್ಧ–ಸಿದ್ಧರಾಮ–ಅಮೋಘಸಿದ್ಧ ಎಂಬ ಮೂರು ಸಂಪ್ರದಾಯಗಳು ಬಹುಮುಖ್ಯವಾಗಿವೆ. ಇವುಗಳಲ್ಲಿ ಒಂದಾದ ರೇವಣಸಿದೇಶ್ವರ ಹಾಲುಮತ ಸಮುದಾಯಕ್ಕೆ ಪರಮಗುರು. ರೇವಣ್ಣ, ರೇವಣ್ಣಸಿದ್ಧ, ರೇವಣಸಿದ್ಧೇಶ್ವರ ಎಂಬ ಹೆಸರಿನಿಂದ ಪ್ರಸಿದ್ಧನಾದ ಈತನ ಹೆಸರಿನಲ್ಲಿ ಸಾವಿರಾರು ಮಠ–ಮಂದಿರಗಳು ಅಸ್ತಿತ್ವದಲ್ಲಿವೆ. ಮೂವತ್ತೊಂದು ಸ್ತೋತ್ರಗಳಲ್ಲಿ ರೇವಣಸಿದ್ಧೇಶ್ವರನನ್ನು ಸಿದ್ಧ ಸಾಗರದ ಬೆಳದಿಂಗಳು, ಕಂಥಾಪಟಲಧಾರಿ, ವಿಭೂತಿಧಾರಣ ಮಹಾಮರುಷ, ಶಿವಾದ್ವೈತ ಜ್ಞಾನಪೂರ್ಣ, ರಸವಿದ್ಯೆ–ಯೋಗವಿದ್ಯೆಯ ಮಹಾನಿಧಿ ಎಂದು ನಾನಾ ರೀತಿಯಾಗಿ ವರ್ಣಿಸಲಾಗಿದೆ.

ಸಂತ ಕನಕದಾಸರ ಅಷ್ಟೋತ್ತರ ಶತನಾಮಾವಳಿ, ಚಾಲೀಸ್ ಮತ್ತು ಅವುಗಳ ವ್ಯಾಖ್ಯಾನವು ಸಾಲ್ಕನೆಯ ಭಾಗವು ಒಳಗೊಂಡಿದೆ. ಕೀರ್ತನೆಗಳ ಜೊತೆಗೆ ಮೋಹನ ತರಂಗಿಣಿ, ರಾಮಧಾನ್ಯ ಚರಿತೆ, ನಳಚರಿತೆಗಳಂಥ ಕೃತಿಗಳನ್ನು ರಚನೆ ಮಾಡುವುದರ ಮೂಲಕ "ಕವಿಗಳಲ್ಲಿ ದಾಸ – ದಾಸರಲ್ಲಿ ಕವಿ" ಎಂಬ ಹೆಗ್ಗಳಿಕೆಗೆ ಕನಕದಾಸರು ಭಾಜನರಾಗಿದ್ದಾರೆ. ಮೂವತ್ತೊಂದು ದ್ವಿಪದಿ ಸ್ತೋತ್ರಗಳ ಮೂಲಕ ಕನಕದಾಸರ ವ್ಯಕ್ತಿತ್ವ ಮತ್ತು ಕತೃತ್ವಶಕ್ತಿಯನ್ನು ಕವಿ ಕೊಂಡಾಡಿದ್ದಾನೆ. ಸಮತತ್ವದ ಮಹಾಮೂರ್ತಿ, ಪುರಾಣಶಾಸ್ತ್ರ ಕೋವಿದ, ಕ್ಷಾತ್ರವಿದ್ಯೆಯ ಪರಮಧೀರ, ಶತ್ರುಮರ್ದನ ವಿಕ್ರಮ, ಧರ್ಮಲಕ್ಷಣ ಸಂಪನ್ನ, ಪ್ರಪೂರ್ಣ ವೈರಾಗ್ಯಭಾವದ ಜ್ಞಾನಸೂರ್ಯ, ಹರಿದಾಸ ಪಥಾಂಬುಜ, ಲೋಕಾನುಭವ ಸಂಸಿದ್ಧ, ಸರ್ವೋದ್ಧಾರ ಮಹಾಮಂತ್ರ, ಕಾವ್ಯಕೀರ್ತನ ಸಂಪನ್ನ, ಕೇಶವಾಂಕಿತ ಕೌಸ್ತುಭ, ಕಾಗಿನೆಲೆ ನಿತ್ಯವಾಸ ಎಂದು ಕನಕದಾಸರನ್ನು ಕವಿ ಹೃದಯಂಗಮವಾಗಿ ಕೊಂಡಾಡಿರುವನು.

ದೇಶದ ಸರ್ವಾಂಗೀಣ ಬೆಳವಣಿಗೆಯಲ್ಲಿ ಪುರುಷರಂತೆ ಮಹಿಳೆಯರ ಕೊಡುಗೆಯೂ ಅನನ್ಯವಾಗಿದೆ. ದಾನಚಿಂತಾಮಣಿ ಅತ್ತಿಮಬ್ಬೆ, ವೀರ ಮಾಹೇಶ್ವರಿ ಕಂಚಿಕಬ್ಬೆ, ಶಿವಶರಣೆ ಅಕ್ಕಮಹಾದೇವಿ, ಸಂಚಿ ಹೊನ್ನಮ್ಮ, ರಾಣಿ ಅಬ್ಬಕ್ಕ, ಕಿತ್ತೂರ ರಾಣಿ ಚನ್ನಮ್ಮ ಮೊದಲಾದ ಮಹಿಳೆಯರ ಸೇವೆ ಚರಿತ್ರಾರ್ಹವಾಗಿದೆ. ಈ ಅರ್ಹರ ಜೊತೆಗೆ ಸೇರಿರುವ

ಮಹಿಳೆಯರಲ್ಲಿ ರಾಷ್ಟ್ರಮಾತೆ ಅಹಿಲ್ಯಾದೇವಿಯರೂ ಒಬ್ಬಳು. ಮಹಾರಾಷ್ಟ್ರದ ಚೌಂಡಿ ಗ್ರಾಮದಲ್ಲಿ ಹುಟ್ಟಿ, ಹೋಳ್ಕರ ರಾಜಮನೆತನದ ರಾಣಿಯಾಗಿ, ತನ್ನ ಕಾಯಕ ಮತ್ತು ದಾನಧರ್ಮದ ಮೂಲಕ ಜನಮಾನಸದಲ್ಲಿ ನೆಲೆನಿಂತ ಮಹಾಮಾತೆ. ಆ ಮಾತೆಯನ್ನು ಕುರಿತು ಕೃತಿಯ ಐದನೆಯ ಭಾಗವು ವಿವರಿಸುತ್ತದೆ, ಸತ್ಯಧರ್ಮ ಸ್ವರೂಪಳೂ, ಧರ್ಮಕಾರ್ಯ ಸಮುದ್ಯತಳೂ, ರಾಜಧರ್ಮ ವಿಶಾರದಳೂ, ಪ್ರಜಾಹಿತ ವತ್ಸಲಳೂ, ವೀರಶ್ರೇಷ್ಠಳೂ ರಣಭೈರವೀ, ಧರ್ಮಸಾಮ್ರಾಜ್ಯ ಶಾಲಿನಿಯೆಂದು ಅಭಿಮಾನದಿಂದ ಕವಿಯು ಅಹಿಲ್ಯಾದೇವಿಯನ್ನು ಸ್ಮರಿಸಿದ್ದಾನೆ.

ಬೀರಪ್ಪನ ಶಿಷ್ಯರಲ್ಲಿ ಪರಮಶಿಷ್ಯ ಮಾಳಿಂಗರಾಯ. ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಭಾಗದ ಜತ್ತ ತಾಲೂಕಿನ ಹುಲಜಂತಿ ಗ್ರಾಮವು ಈತನ ಮೂಲ ನೆಲೆ. ಪ್ರತಿವರ್ಷ ನಡೆಯುವ ಜಾತ್ರೆಯ ಸಂದರ್ಭದಲ್ಲಿ ಶಿವ ಬಂದು ದೇವಸ್ಥಾನದ ಕಳಸಕ್ಕೆ ರುಮಾಲು ಸುತ್ತುತ್ತಾನೆ ಎಂಬ ನಂಬಿಕೆ ಭಕ್ತಾದಿಗಳಲ್ಲಿ ದಟ್ಟವಾಗಿದೆ. ಇಂಥ ಗುರುಭಕ್ತ ಮಾಳಿಂಗರಾಯನನ್ನು ನಾಲ್ವತ್ತು ದ್ವಿಪದಿ ಸ್ತೋತ್ರಗಳಲ್ಲಿ ನಾನಾ ರೀತಿಯಾಗಿ ಗುಣಗಾನ ಮಾಡಲಾಗಿದೆ. ಭಂಡಾರ ವಿಭೂಷಿತ, ಆತ್ಮಬಂಧುರ, ಗುರುವಾಜ್ಞಾ ಶಿರೋಧಾರಕ, ಲೋಕಕಲ್ಯಾಣಪ್ರಿಯ, ಹಾಲುಮತ ಸಂತೋಷದಾಯಕ ನಾದ ಮಾಳಿಂಗರಾಯ ಸಮಸ್ತರಿಗೂ ಸನ್ಮಂಗಲವನ್ನುಂಟು ಮಾಡಲಿ ಎಂದು ಪ್ರಾರ್ಥಿಸಲಾಗಿದೆ.

ಹೀಗೆ ಮೈಲಾರಲಿಂಗೇಶ್ವರ, ಬೀರಲಿಂಗೇಶ್ವರ, ರೇವಣಸಿದ್ದೇಶ್ವರ, ಕನಕದಾಸ, ಮಾಳಿಂಗರಾಯ, ಅಹಿಲ್ಯಾದೇವಿಯರ ವ್ಯಕ್ತಿತ್ವ, ಸಾಧನೆ ಹಾಗೂ ಮಹಿಮೆಗಳನ್ನು ಸತ್ಯವಿಠಲರು ಸ್ತೋತ್ರರೂಪದಲ್ಲಿ ಹೆಣೆದುಕೊಟ್ಟಿರುವುದು ಈ ಕೃತಿಯ ವಿಶೇಷತೆಯಾಗಿದೆ. ಇಲ್ಲಿನ ಎಲ್ಲ ಸ್ತೋತ್ರಗಳು ತುಂಬ ಸರಳ ಹಾಗೂ ಸಹಜತೆಯಿಂದ ಕೂಡಿವೆ. ಜೊತೆಗೆ ಆ ಸ್ತೋತ್ರಗಳಿಗೆ ಮಾಡಿದ ವ್ಯಾಖ್ಯಾನಗಳು ಸಹ ಓದುಗರಿಗೆ ಆಯಾ ದೈವಗಳ ಬಗ್ಗೆ ಪರಿಪೂರ್ಣವಾದ ಮಾಹಿತಿಯನ್ನು ನೀಡುತ್ತವೆ. ಮೈಲಾರಲಿಂಗ–ಬೀರಪ್ಪ–ರೇವಣಸಿದ್ಧ–ಕನಕದಾಸ–ಮಾಳಿಂಗರಾಯ–ಅಹಿಲ್ಯಾಬಾಯಿಯ ಸ್ತೋತ್ರ ರಚನೆಗೆ ಮತ್ತು ವ್ಯಾಖ್ಯಾನಕ್ಕೆ ಸತ್ಯವಿಠಲರು ವಿವಿಧ ಮೂಲಗಳಿಂದ ಆಕರಗಳನ್ನು ಗಮನಿಸಿದ್ದಾರೆ.

Scanned with CamScanner

ಉದಾಹರಣೆಗೆ ರೇವಣಸಿದ್ದೇಶ್ವರನ ಸ್ತೋತ್ರಗಳ ವ್ಯಾಖ್ಯಾನಕ್ಕಾಗಿ ಉಪನಿಷತ್ತುಗಳು, ಅಮರಕೋಶ, ಹಿಂದೂ ಶಾಸ್ತ್ರಾರ, ಭವಿಷ್ಯ ಪುರಾಣ, ಶಿವಾನುಭವ ಶಬ್ದಕೋಶ, ಲಿಂಗಪುರಾಣ, ತಂತ್ರಸಾರ, ವಿವೇಕ ಚಿಂತಾಮಣಿ ಅಜಿತಪುರಾಣ ಮೊದಲಾದ ಕೃತಿಗಳನ್ನು ಬಳಸಿಕೊಂಡಿದ್ದರೆ ಅಹಲ್ಯಾದೇವಿಯ ಸ್ತೋತ್ರ ವ್ಯಾಖ್ಯಾನಕ್ಕೆ ಚಾಣಕ್ಯನ ಅರ್ಥಶಾಸ್ತ್ರ ರಾಜನೀತಿ, ಮಹಾಭಾರತದ ನೀತಿಸಾರಗಳನ್ನು ಬಳಸಿಕೊಂಡಿರುವುದು ಕವಿಯ ಓದಿನ ವಿಸ್ತಾರಕ್ಕೆ ಸಾಕ್ಷಿಯಾಗಿವೆ.

ಒಟ್ಟಾರೆ ಭಕ್ತಸಂಕುಲವು ಪ್ರತಿನಿತ್ಯ ಪೂಜೆ-ಆರಾಧನೆ-ಅರ್ಚನೆ ಮಾಡುವ ಸಂದರ್ಭದಲ್ಲಿ ಈ ಸ್ತೋತ್ರಗಳನ್ನು ಪಠಣ ಅಥವಾ ಪಾರಾಯಣ ಮಾಡಲಿಕ್ಕೆ ಈ ಕೃತಿ ತುಂಬ ಅನುಕೂಲಕರವಾಗಿ ಪರಿಣಮಿಸುತ್ತವೆ. ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದು ಕೊಂಡಿರುವ ಸತ್ಯವಿಠಲರು ಸ್ತೋತ್ರ ರಚನೆಯಲ್ಲಿ ಅಗಾಧವಾದ ಅನುಭವ ವನ್ನು ಹೊಂದಿದ್ದಾರೆ. ಹೀಗಾಗಿ ಯಾವುದೇ ದೈವದ ಪ್ರಾರ್ಥನೆಗೆ ನಿರರ್ಗಳವಾಗಿ ಸ್ತೋತ್ರಗಳನ್ನು ರಚನೆ ಮಾಡುತ್ತಾರೆ. ಆ ಸ್ತೋತ್ರಗಳಿಗೆ ತಾವೇ ಸರಳವಾದ ವ್ಯಾಖ್ಯಾನವನ್ನು ಮಾಡುತ್ತಾರೆ. ಈವರೆಗೆ ಹಾಲುಮತ ಸಮುದಾಯದ ಭಕ್ತರಿಗೆ ನಿತ್ಯ ಪಾರಾಯಣಕ್ಕೆ ಈ ತರಹದ ಸ್ತೋತ್ರಗಳು ರಚನೆಗೊಂಡಿರಲಿಲ್ಲ. ಈ ಕೊರತೆಯನ್ನು ಹೋಗಲಾಡಿಸಿದ ಸತ್ಯವಿಠಲ ಎಂದು ಕಾವ್ಯಾಂಕಿತರಾದ ಡಾ. ಬಿ.ವಿ. ಸತ್ಯನಾರಾಯಣರಾವ್ ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈ ಕೃತಿ ಬೆಳಕು ಕಾಣಲು ಕಾರಣರಾದವರು, ಸಮಾಜ-ಸಂಸ್ಕೃತಿ-ಪರಿಸರ ಕಾಳಜಿಯುಳ್ಳವರಾದ ಶ್ರೀ ನರೇಂದ್ರಬಾಬು. ವೃತ್ತಿಯಲ್ಲಿ ಇಂಜಿನಿಯರ್, ಪ್ರವೃತ್ತಿಯಲ್ಲಿ ರಂಗಕಲಾವಿದರು. ಶ್ರೀಯುತರ ಮತ್ತು ನನ್ನ ಗೆಳೆತನ ಕಳೆದ ಇಪ್ಪತ್ತು ವರ್ಷಗಳಷ್ಟು ಹಿಂದಿನದು. ಹೊಸಪೇಟೆಯ ತುಂಗಭದ್ರಾ ಜಲಾಶಯದಲ್ಲಿ ಇಂಜನೀಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಶ್ರೀ ನರೇಂದ್ರಬಾಬು ಅವರು ಡ್ಯಾಮಿನ ಉದ್ಯಾನವನವನ್ನು ಚಂದಗೊಳಿಸಿದವರು. ಅಲ್ಲಿನ ಕನ್ನಡ ಕಲಾ ಸಂಘಕ್ಕೆ ಮಾರ್ಗದರ್ಶನ ನೀಡಿದವರಲ್ಲಿ ನರೇಂದ್ರಬಾಬು ಅವರ ಕೊಡುಗೆ ದೊಡ್ಡದು. ಕಲಾ ಸಂಘದ ಮೂಲಕ ಅನೇಕ ನಾಟಕಗಳ ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿ, ರಾಜ್ಯ-ರಾಷ್ಟ್ರ ಮಟ್ಟದ ಪ್ರಶಸ್ತಿಗೆ

ಭಾಜನರಾಗಿದ್ದಾರೆ. ಈ ಹೊತ್ತು ಸಹೃದಯರಲ್ಲಿ ಅವರಿಗೆ ಪ್ರೋತ್ಸಾಹ ನೀಡಿ "ಹಾಲುಮತ ಆರಾಧನ ಮಂಜರಿ" ಪ್ರಕಟಗೊಳ್ಳಲು ಕಾರಣರಾದ ಶ್ರೀ ನರೇಂದ್ರಬಾಬು ಅವರೂ ಅಭಿನಂದನಾರ್ಹರು.

ಈ ವಿಶಿಷ್ಟ ಕೃತಿಯನ್ನು ಪ್ರಕಟಿಸಿ ಲೋಕಾರ್ಪಣೆ ಮಾಡಿದವರು ಹಾಲುಮತ ಸಂಸ್ಕೃತಿಯಲ್ಲಿ ಅಪಾರ ಅಭಿಮಾನವಿರುವ ಸಮಾಜ ಗಣ್ಯರಾದ ದೇವನಹಳ್ಳಿ ಮದ್ದಯ್ಯನವರ ಕುಟುಂಬದ ಶ್ರೀಯುತ ಶ್ರೀ ನರಸಿಂಹರಾಜು ಎಸ್. ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

ಕಾಗಿನೆಲೆ ಕನಕಗುರುಪೀಠದ ಕಲಬುರ್ಗಿ ವಿಭಾಗದ ಕನಕಪೀಠ (ತಿಂಥಿಣಿ ಸೇತುವೆ ಹತ್ತಿರ, ದೇವದುರ್ಗ ತಾಲೂಕು)ದ ಹಾಲುಮತ ವಿಶ್ವಪಥ ಮಾಲಿಕೆಯಲ್ಲಿ ಈ ಕೃತಿ ಪ್ರಕಾಶನಗೊಳ್ಳುತ್ತಿರುವುದು ಔಚಿತ್ಯಪೂರ್ಣವಾಗಿದೆ. ಏಕೆಂದರೆ ಮಠ-ಮಂದಿರ, ಸ್ವಾಮೀಜಿಯವರ ಮೂಲಕ ಇಂಥ ಪುಸ್ತಕಗಳು ಭಕ್ತಸಮೂಹಕ್ಕೆ ಸಲೀಸಾಗಿ ತಲುಪಲು ಸಾಧ್ಯವಾಗುತ್ತವೆ. ಮೇಲಾಗಿ ಪರಮಪೂಜ್ಯ ಶ್ರೀ ಸಿದ್ಧರಾಮಾನಂದ ಮಹಾಸ್ವಾಮಿಗಳು ಸಾಹಿತ್ಯ-ಸಮಾಜ-ಸಂಸ್ಕೃತಿ ಚಿಂತಕರು, ಪುಸ್ತಕ ಪ್ರಿಯರು. ಹಾಲುಮತ ಸಮಾಜ-ಸಾಹಿತ್ಯ-ಸಂಸ್ಕೃತಿ ಕುರಿತು ವ್ಯಾಪಕ ಅಧ್ಯಯನಗಳಾಗಬೇಕು; ಗ್ರಂಥಗಳು ಪ್ರಕಟಗೊಳ್ಳಬೇಕೆಂಬ ಉತ್ಕಟವಾದ ಆಶಯವನ್ನು ಹೊಂದಿದವರು. ಇಂಥ ವಿಶೇಷ ಪುಸ್ತಕವನ್ನು ಶ್ರೀಮಠದಿಂದ ಪ್ರಕಾಶನಗೊಳಿಸಿದ ಪೂಜ್ಯರಿಗೂ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತೇನೆ,

ಕೊನೆಯದಾಗಿ ಒಂದು ಮಾತು: ನಾಡಿನಾದ್ಯಂತ ಇರುವ ಹಾಲುಮತ ಸಮುದಾಯದ ಪ್ರತಿಯೊಂದು ಮನೆಗಳಲ್ಲಿಯೂ ಈ ಕೃತಿ ಇರುವಂತಾಗಬೇಕು. ಭಕ್ತಸಮೂಹವು ಈ ಕೃತಿಯನ್ನು ನಿತ್ಯ ಪಠಣ - ಪಾರಾಯಣ ಮಾಡಬೇಕು. ಆ ಮೂಲಕ ಮೈಲಾರಲಿಂಗ-ಬೀರಲಿಂಗ-ರೇವಣಸಿದ್ಧ-ಕನಕದಾಸ-ಮಾಳಿಂಗರಾಯ-ಅಹಲ್ಯಾದೇವಿಯರ ಚಿಂತನೆ ಮತ್ತು ಅವರ ಮಹತ್ಕಾರ್ಯಗಳನ್ನು ತಿಳಿದುಕೊಳ್ಳಬೇಕು ಈ ಕೃತಿಯು ಹಾಲುಮತ ಅಧ್ಯಯನಕಾರರಿಗೆ ಆಕರ ಗ್ರಂಥಗಳಲ್ಲಿ ಒಂದು ಎಂದು ಹೇಳುತ್ತ ನನ್ನ ಮುನ್ನುಡಿ ರೂಪದ ಈ ಮಾತುಗಳಿಗೆ ವಿರಾಮವನ್ನು ನೀಡುತ್ತೇನೆ.

-ಎಫ್.ಟಿ. ಹಳ್ಳಿಕೇರಿ

Scanned with CamScanner

ಹಾಲುಮತ ಸಮುದಾಯದ ಆರಾಧ್ಯದೈವಗಳಾದ ಮೈಲಾರಲಿಂಗೇಶ್ವರ, ವೀರಲಿಂಗೇಶ್ವರ, ರೇವಣಸಿದ್ಧೇಶ್ವರ, ಕನಕದಾಸರು, ಮಾಳಿಂಗರಾಯ ಹಾಗೂ ರಾಷ್ಟ್ರಮಾತೆ ಅಹಿಲ್ಯಾದೇವಿಯರ ವ್ಯಕ್ತಿತ್ವ, ಸಾಧನೆ ಹಾಗೂ ಮಹಿಮೆಗಳನ್ನು ಸತ್ಯವಿಠಲರು ಸ್ತೋತ್ರರೂಪದಲ್ಲಿ ಹೆಣೆದುಕೊಟ್ಟಿರುವುದು ಈ ಕೃತಿಯ ವಿಶೇಷತೆಯಾಗಿದೆ. ಇಲ್ಲಿನ ಎಲ್ಲ ಸ್ತೋತ್ರಗಳು ತುಂಬ ಸರಳ ಹಾಗೂ ಸಹಜತೆಯಿಂದ ಕೂಡಿವೆ. ಜೊತೆಗೆ ಈ ಸ್ತೋತ್ರಗಳಿಗೆ ಮಾಡಿದ ವ್ಯಾಖ್ಯಾನಗಳು ಸಹ ಓದುಗರಿಗೆ ಆಯಾ ದೈವಗಳ ಬಗೆಗೆ ಪರಿಪೂರ್ಣವಾದ ಮಾಹಿತಿಯನ್ನು ನೀಡುತ್ತವೆ. ಇಲ್ಲಿನ ಸ್ತೋತ್ರಗಳ ರಚನೆಗೆ ಮತ್ತು ವ್ಯಾಖ್ಯಾನಕ್ಕೆ ಸತ್ಯವಿಠಲರು ವಿವಿಧ ಮೂಲಗಳಿಂದ ಆಕರಗಳನ್ನು ಗಮನಿಸಿದ್ದಾರೆ. ಉದಾಹರಣೆಗೆ ರೇವಣಸಿದ್ಧೇಶ್ವರನ ಸ್ತೋತ್ರಗಳ ವ್ಯಾಖ್ಯಾನಕ್ಕಾಗಿ ಉಪನಿಷತ್ತುಗಳು, ಅಮರಕೋಶ, ಹಿಂದೂ ಶಾಸ್ತ್ರಸಾರ, ಭವಿಷ್ಯ ಪುರಾಣ, ಶಿವಾನುಭವ ಶಬ್ದಕೋಶ, ಲಿಂಗಪುರಾಣ, ಅಜಿತಪುರಾಣ, ವಿವೇಕ ಚಿಂತಾಮಣಿ ಮೊದಲಾದ ಕೃತಿಗಳನ್ನು ಬಳಸಿಕೊಂಡಿರುವುದು ಕವಿಯ ಓದಿನ ವಿಸ್ತಾರಕ್ಕೆ ಸಾಕ್ಷಿಯಾಗಿವೆ.

ಭಕ್ತಸಂಕುಲವು ಪ್ರತಿನಿತ್ಯ ಪೂಜೆ-ಆರಾಧನೆ-ಅರ್ಚನೆ ಮಾಡುವ ಸಂದರ್ಭದಲ್ಲಿ ಈ ಸ್ತೋತ್ರಗಳನ್ನು ಪಠಣ ಅಥವಾ ಪಾರಾಯಣಕ್ಕೆ ಈ ಕೃತಿ ತುಂಬ ಅನುಕೂಲಕರವಾಗಿ ಪರಿಣಮಿಸುತ್ತದೆ. ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದುಕೊಂಡಿರುವ ಸತ್ಯವಿಠಲರು ಸ್ತೋತ್ರರಚನೆಯಲ್ಲಿ ಅಗಾಧವಾದ ಅನುಭವವನ್ನು ಹೊಂದಿದ್ದಾರೆ. ಹೀಗಾಗಿ ಯಾವುದೇ ದೈವದ ಪ್ರಾರ್ಥನೆಗೆ ನಿರರ್ಗಳವಾಗಿ ಸ್ತೋತ್ರಗಳನ್ನು ರಚನೆ ಮಾಡುತ್ತಾರೆ. ಆ ಸ್ತೋತ್ರಗಳಿಗೆ ತಾವೇ ಸರಳವಾದ ವ್ಯಾಖ್ಯಾನವನ್ನು ಮಾಡುತ್ತಾರೆ.

ಈವರೆಗೆ ಹಾಲುಮತ ಸಮುದಾಯದ ಭಕ್ತರಿಗೆ ನಿತ್ಯ ಪಾರಾಯಣಕ್ಕೆ ಈ ತರಹದ ಸ್ತೋತ್ರಗಳು ರಚನೆಗೊಂಡಿರಲಿಲ್ಲ. ಈ ಕೊರತೆಯನ್ನು ಹೋಗಲಾಡಿಸಿದ ಸತ್ಯವಿಠಲ ಕಾವ್ಯಾಂಕಿತರಾದ ಡಾ.ಬಿ.ವಿ.ಸತ್ಯನಾರಾಯಣರಾವ್ ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಡಾ. ಎಫ್.ಟಿ.ಹಳ್ಳಿಕೇರಿ
ಪ್ರಾಧ್ಯಾಪಕ
ಕನ್ನಡ ವಿಶ್ವವಿದ್ಯಾಲಯ ಹಂಪಿ

ಪ್ರಕಾಶಕರು
ಶ್ರೀ ಶ್ರೀ ಸಿದ್ಧರಾಮಾನಂದ ಮಹಾಸ್ವಾಮಿಗಳು
ಕನಕ ಗುರುಪೀಠ ಕಲಬುರಗಿ ವಿಭಾಗ
ವೀರಗೋಟ, ತಿಂಥಣಿ ಬ್ರಿಡ್ಜ್
ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ.

Scanned with CamScanner

ಡಾ. ಶೋಭಾ ತ. ತಪಶಿ

ಬೆಳಗಾವಿ ಜಿಲ್ಲೆಯ ಸ್ಥಳನಾಮಗಳು



Scanned with CamScanner

ಬೆಳಗಾವಿ ಜಿಲ್ಲೆಯ ಸ್ಥಳನಾಮಗಳು

ಲೇಖಕರು

ಡಾ॥ ಶೋಭಾ ತ. ತಪಶಿ

ಎಂ.ಎ., ಬಿ.ಇಡಿ., ಪಿ.ಹೆಚ್‌ಡಿ.

ಈ ಕೃತಿಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ
ಧನ ಸಹಾಯದಲ್ಲಿ ಮುದ್ರಣಗೊಂಡಿದೆ

ಪ್ರಕಾಶಕರು

ಬಿತ್ತಿಚಿತ್ರ ಪ್ರಕಾಶನ
ಬಸವೇಶ್ವರ ಪ್ರಚಾರ ಸಮಿತಿ
ಕಮಲಾನಗರ, ಬೆಂಗಳೂರು

Scanned with CamScanner

Belagavi Jilleya Stalanamagalu
a Research work on place names in Belgaum district, written by
Dr. Shobha T Tapashi, M.A., B.Ed., Phd.,
Lolasura, Gokak Tq, Belagavi Dist.

Published by
Bithi Chitra Prakashana
Basaveshwara Prachara Samiti, Kamalanagara, Bengaluru.

First Print : November 2020
Pages : xviii + 292
Cover Page : Swamy Bhadri
Price : Rs. 210/-
Paper used : 70 Gsm Maplitho ; Size: Demy 1/8

ISBN No : 978-93-5416-840-6

ಬೆಳಗಾವಿ ಜಿಲ್ಲೆಯ ಸ್ಥಳನಾಮಗಳು

ಬೆಳಗಾವಿ ಜಿಲ್ಲೆಯ ಸ್ಥಳನಾಮಗಳ ಸಂಶೋಧನ ಮಹಾಪ್ರಬಂಧ
ಲೇಖಕರು : ಡಾ. ಶೋಭಾ ತ. ತಪಶಿ,
ಲೋಳಸುರ, ಗೋಕಾಕ ತಾ. ಬೆಳಗಾವಿ ಜಿಲ್ಲೆ.

ಪ್ರಕಾಶಕರು : ಬಿತ್ತಿಚಿತ್ರ ಪ್ರಕಾಶನ
ಬಸವೇಶ್ವರ ಸೇವಾ ಸಮಿತಿ, ಕಮಲಾನಗರ, ಬೆಂಗಳೂರು.
ಹಕ್ಕುಗಳು : ಲೇಖಕರದು
ಮೊದಲ ಮುದ್ರಣ : ನವೆಂಬರ್ 2020
ಪುಟಗಳು : xviii + 292
ಮುಖಪುಟ : ಸ್ವಾಮಿ ಬದ್ರಿ
ಬೆಲೆ : ರೂ. 210/-
ಮುದ್ರಣ : ಪದ್ಮಶ್ರೀ ಪ್ರಿಂಟರ್ಸ್
ರಾಜಾಜಿನಗರ, ಬೆಂಗಳೂರು-10, ಮೊ.: 9880083321

ಪುಸ್ತಕಗಳಿಗಾಗಿ : 9448021388 / 7349235569 – ಸಂಪರ್ಕಿಸಿ

Scanned with CamScanner

೨

ತರ್ಕಬದ್ಧ ಅಧ್ಯಯನ ಕೃತಿ

ಡಾ. ಶೋಭಾ ತ.ತಪಸಿ ಅವರು ಬೆಳಗಾವಿ ಜಿಲ್ಲೆಯ ಸ್ಥಳನಾಮಗಳ ಕುರಿತು ಸಂಶೋಧನೆ ಕೈಕೊಂಡು ಮಹಾಪ್ರಬಂಧವನ್ನು ರಚಿಸಿದ್ದಾರೆ. ಸ್ಥಳನಾಮಗಳ ಕುರಿತು ಈವರೆಗಾದ ಅಧ್ಯಯನವನ್ನು ಗಮನಿಸಿ ಸೊಗಸಾದ ಕೃತಿ ರಚಿಸಿದ್ದಾರೆ.ಗ್ರಂಥದ ತುಂಬ ಇವರ ಅಧ್ಯಯನದ ಶಿಸ್ತು, ಸರಿಯಾದ ತರ್ಕಬದ್ಧ ವಿವರಣೆ, ವಿಚಿತವಾದ ನಿಲುವು ಎದ್ದು ಕಾಣಿಸುತ್ತವೆ. ಒಳ್ಳೆ ಸಂಶೋಧಕನಲ್ಲಿ ಇರಬೇಕಾದ ಎಲ್ಲ ಗುಣಲಕ್ಷಣಗಳು ಇವರಲ್ಲಿ ಇದ್ದದ್ದು ಅವರು ಬಳಸಿಕೊಂಡ ಸಮಗ್ರ ಆಕರ ಸಾಮಗ್ರಿಗಳಿಂದ ತಿಳಿದು ಬರುತ್ತದೆ.

ಡಾ.ಶೋಭಾ ಅವರ ಪ್ರಸ್ತುತ ಕೃತಿ ಕನ್ನಡ ಸಾಹಿತ್ಯ ಕೃತಿಗಳಲ್ಲಿ ತನ್ನದೇ ಆದ ಸ್ಥಾನವನ್ನು ಪಡೆಯುತ್ತದೆಂಬುದರಲ್ಲಿ ಸಂದೇಹವಿಲ್ಲ. ಇವರಿಂದ ಇನ್ನಷ್ಟು ಕೃತಿಗಳು ಹೊರಬರಲೆಂದು ಹಾರೈಸುತ್ತೇನೆ.

– ಡಾ. ಎಂ.ಬಿ. ಹೂಗಾರ
ನಿವೃತ್ತ ಪ್ರಾಧ್ಯಾಪಕರು, ಕಾಗವಾಡ

೩

ಸ್ಥಳನಾಮಗಳ ವೈಜ್ಞಾನಿಕ ಅಧ್ಯಯನ

ಕನ್ನಡದಲ್ಲಿ ಇಂದು ನಾಮವಿಜ್ಞಾನ ಕುರಿತು ಹೆಚ್ಚೆಚ್ಚು ಸಂಶೋಧನೆಗಳು ನಡೆಯುತ್ತಿರುವುದು ಆಶಾದಾಯಕ ಸಂಗತಿ. ಇದರಲ್ಲಿ ವ್ಯಕ್ತಿ-ಕುಟುಂಬ-ಸ್ಥಳನಾಮಗಳು ಬಹುಮುಖ್ಯವಾಗಿವೆ. ಇವುಗಳಲ್ಲಿಯೇ ಸ್ಥಳನಾಮಗಳು ಕರ್ನಾಟಕದ ಭೌಗೋಳಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ಗುರುತಿಸುವಲ್ಲಿ ನೆರವಾಗುತ್ತವೆ. ಹೀಗಾಗಿ ಕಳೆದ ನಲವತ್ತು ವರ್ಷಗಳಿಂದ ಸ್ಥಳನಾಮಗಳ ಕುರಿತು ವೈವಿಧ್ಯಮಯವಾದ ಅಧ್ಯಯನಗಳು ನಡೆದಿವೆ. ಸಿ. ಹಯವದನರಾಯ, ಶಂಬಾ ಜೋಶಿ, ಆರ್.ಸಿ. ಹಿರೇಮಠ, ಕೆಮ್ಮೂರು ರಘುಪತಿಭಟ್ಟ, ದೇ.ಜವರೇಗೌಡ, ಎಂ.ಚಿದಾನಂದಮೂರ್ತಿ, ವಿ.ಗೋಪಾಲಕೃಷ್ಣ, ಎಂ.ಎಂ.ಕಲಬುರ್ಗಿ ಮೊದಲಾದ ವಿದ್ವಾಂಸರು ಸ್ಥಳನಾಮಗಳ ಅಧ್ಯಯನದ ವಿವಿಧ ಆಯಾಮಗಳನ್ನು ಗುರುತಿಸಿದ್ದಾರೆ. ಪರಿಣಾಮವಾಗಿ ಆ ಕ್ಷೇತ್ರದತ್ತ ಯುವ ಸಂಶೋಧಕರು ಆಸಕ್ತಿ ಹೊಂದಿ ಈ ಹೊತ್ತು ಅನೇಕ ಮಹಾಪ್ರಬಂಧಗಳು ಪ್ರಕಟಗೊಳ್ಳಲು ಕಾರಣರಾಗಿದ್ದಾರೆ.ಅಂಥ ಮಹಾಪ್ರಬಂಧಗಳ ಸಾಲಿಗೆ ಹೊಸ ಸೇರ್ಪಡೆಯಾಗಿದೆ, ಡಾ.ಶೋಭಾ ತಪಸಿ ಅವರ "ಬೆಳಗಾವಿ ಜಿಲ್ಲೆಯ ಸ್ಥಳನಾಮಗಳು".

ಬೆಳಗಾವಿ ಪ್ರದೇಶವು ಭೌಗೋಳಿಕವಾಗಿ ಸಾಂಸ್ಕೃತಿಕವಾಗಿ ವಿಶಿಷ್ಟವಾದುದು.

ಮಹಾರಾಷ್ಟ್ರ-ಕರ್ನಾಟಕದ ಗಡಿಭಾಗವಾಗಿದ್ದರಿಂದ ಇಲ್ಲಿನ ಭಾಷೆ-ಸಂಸ್ಕೃತಿಯಲ್ಲಿ ವಿಶೇಷತೆಯನ್ನು ಕಾಣುತ್ತೇವೆ. ಈ ವಿಶೇಷತೆ ಸ್ಥಳನಾಮಗಳಲ್ಲಿಯೂ ಕಂಡುಬರುತ್ತದೆ. ಸಂಶೋಧಕರು ಲಿಖಿತ ಮತ್ತು ಮೌಖಿಕ ಆಕರಗಳನ್ನು ಬಳಸಿಕೊಂಡು ಈ ಮಹಾಪ್ರಬಂಧವನ್ನು ಅಚ್ಚುಕಟ್ಟಾಗಿ ರೂಪಿಸಲು ಪ್ರಯತ್ನಿಸಿರುವುದಕ್ಕೆ ಇಲ್ಲಿನ ಅಧ್ಯಾಯಗಳೇ ಸಾಕ್ಷಿ. ಲಿಖಿತವಾಗಿ ಶಾಸನ-ಕಾವ್ಯಗಳು, ಮೌಖಿಕವಾಗಿ ಐತಿಹ್ಯ, ಜಾನಪದ ಕಥೆ ಹಾಡುಗಳು ಹಾಗೂ ಶ್ರೀಸಾಮಾನ್ಯರ ಗ್ರಹಿಕೆಗಳನ್ನು ಬಳಸಿಕೊಂಡು ವೈಜ್ಞಾನಿಕವಾಗಿ ಸ್ಥಳನಾಮಗಳನ್ನು ಅಧ್ಯಯನಕ್ಕೊಳಪಡಿಸಿರುವುದು ಈ ಮಹಾಪ್ರಬಂಧದ ಹೆಚ್ಚುಗಾರಿಕೆಯಾಗಿದೆ. ವಿವಿಧ ಮೂಲಗಳಿಂದ ಆಕರಗಳನ್ನು ಸಂಗ್ರಹಿಸಿರುವುದು, ಕ್ಷೇತ್ರಕಾರ್ಯದ ಮೂಲಕ ಸ್ಥಳನಾಮಗಳ ಆಸ್ಮಿತೆಯನ್ನು ಗುರುತಿಸಿರುವುದು, ಬರವಣಿಗೆಯಲ್ಲಿ ಸಹಜತೆ-ಸರಳತೆಯನ್ನು ಉಳಿಸಿಕೊಂಡಿರುವುದು ಈ ಮಹಾಪ್ರಬಂಧವು ಓದುಗರಿಗೆ ಆಸಕ್ತಿಯನ್ನು ಮೂಡಿಸುತ್ತದೆ.

ಡಾ. ಶೋಭಾ ತಪಸಿ ಅವರು ಈ ಮಹಾಪ್ರಬಂಧಕ್ಕಷ್ಟೇ ತೃಪ್ತಿಪಟ್ಟುಕೊಳ್ಳದಾರದು. ನಾಮವಿಜ್ಞಾನದಲ್ಲಿ ಇನ್ನೂ ಹೆಚ್ಚು ಹೆಚ್ಚು ಅಧ್ಯಯನ ಕೈಕೊಳ್ಳಲು ಅವಕಾಶಗಳಿವೆ. ಅಂಥ ಅವಕಾಶಗಳತ್ತ ಗಮನಹರಿಸಲಿ ಎಂದು ಹೇಳುತ್ತ, ಅವರಿಗೆ ಎಲ್ಲಂದದ ಶುಭಕೋರುತ್ತೇನೆ.

– ಡಾ. ಎಫ್.ಟಿ. ಹಳ್ಳಿಕೇರಿ
ಪ್ರಾಧ್ಯಾಪಕ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೪

ತಲಸ್ಪರ್ಶಿ ಅಧ್ಯಯನ

'ಬೆಳಗಾವಿ ಜಿಲ್ಲೆಯ ಸ್ಥಳನಾಮಗಳು' ಎಂಬ ಹೆಸರಿನಲ್ಲಿ ಶ್ರೀಮತಿ ಶೋಭಾ ತ.ತಪಸಿಯವರು ರಚಿಸಿದ ಸಂಶೋಧನಾ ಮಹಾಪ್ರಬಂಧ ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದಂತೆ ಈ ಬಗೆಯ ಸಂಶೋಧನೆಗಳಲ್ಲಿ ಸಂಪೂರ್ಣವಾಗಿ ಹೊಸದು.ಆಲ್ಲೊಂದು ಇಲ್ಲೊಂದು ಕೆಲವು ಲೇಖನಗಳಲ್ಲಿ, ಪ್ರಾಸಂಗಿಕವಾಗಿ ಕೆಲವು ಕೃತಿಗಳ ಪ್ರಸ್ತಾವನೆಯಲ್ಲಿ, ಕೆಲವು ಊರುಗಳ ಬಗೆಗೆ ವಿವರಣೆ ಬಂದಿರಬಹುದಾದರೂ ಈ ಬಗೆಯ ತಲಸ್ಪರ್ಶಿ, ಸಮಗ್ರ ಅಧ್ಯಯನವನ್ನು ಯಾರೂ ಕೈಗೊಂಡಿರಲಿಲ್ಲ. ನಮ್ಮ ಮೂಲ ಬೇರನ್ನು ಅರಿಯುವ ಯತ್ನವಾಗಿ ಈ ಸಂಶೋಧನೆಗೆ ಮಹತ್ವದ ಸ್ಥಾನವಿದೆ. ಹಿರಿಯ ಸಂಶೋಧಕರಾದ ಶಂ.ಬಾ.ಜೋಷಿ, ಡಾ. ಚಿದಾನಂದ ಮೂರ್ತಿ, ಸೇಡಿಯಾಪು ಕೃಷ್ಣಭಟ್ಟ, ದೇಜಗೌ, ಡಾ.ಎಂ.ಎಂ. ಕಲಬುರ್ಗಿ ಮೊದಲಾದ ಹಿರಿಯರು ಈ ಕ್ಷೇತ್ರದಲ್ಲಿ ಕೆಲಸವನ್ನು ಮಾಡಿದ್ದರು.

ಶ್ರೀಮತಿ ಶೋಭಾರವರು ಬೆಳಗಾವಿ ಜಿಲ್ಲೆಯ ಸ್ಥಳನಾಮಗಳನ್ನು ಕುರಿತು ಅಧ್ಯಯಿಸುವಾಗ ಕೇವಲ ಅವುಗಳ ಇತಿಹಾಸಕ್ಕೆ ಮಾತ್ರ ಗಮನ ಕೊಡದೇ, ಸ್ಥಳಿಯ ಪ್ರಚಲಿತ ಐತಿಹ್ಯಗಳು, ಜಾನಪದೀಯ ಸಂಗತಿಗಳು ಇವೆಲ್ಲವನ್ನು ಗಮನಿಸಿ ಕೇವಲ ಊರ ಹೆಸರಿನ

Scanned with CamScanner

ಡಾ. ಶೋಭಾ ಟಿ. ತಪಶಿಯವರು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಲೋಳಸೂರ ಗ್ರಾಮದವರು.ಕೃಷಿ ಕುಟುಂಬದ ತಮ್ಮಣ್ಣ ಮತ್ತು ಶ್ರೀಮತಿ ಸಿದ್ದವ್ವ ದಂಪತಿಗಳ ಮಗಳು.ಅಣ್ಣ ಲಕ್ಷ್ಮಣ ಹಾಗೂ ಅತ್ತಿಗೆ ಶ್ರೀಮತಿ ಸುಲೋಚನ ಇವರ ಪ್ರೋತ್ಸಾಹಕ ಕಾಳಜಿಯಿಂದ ಇವರು ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಯಿತು.

ಕನ್ನಡ ಎಂ.ಎ.ಪದವಿಯನ್ನು 2005 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದು, ಅದೇ ವಿಶ್ವವಿದ್ಯಾಲಯದಿಂದ ಡಾ.ಧನವಂತ ಹಾಜವಗೋಳ ಅವರ ಮಾರ್ಗದರ್ಶನದಲ್ಲಿ "ಬೆಳಗಾವಿ ಜಿಲ್ಲೆಯ ಸ್ಥಳನಾಮಗಳು" ಎಂಬ ವಿಷಯ ಕುರಿತು ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡರು.

ಕಥೆ, ಕವನಗಳನ್ನು ಹವ್ಯಾಸಿಯಾಗಿ ಬರೆಯುವ ಇವರು ಸಂಶೋಧನೆ, ವಿಮರ್ಶೆ, ವೈಚಾರಿಕತೆಯನ್ನು ಜೀವಾಳವಾಗಿಸಿಕೊಂಡಿದ್ದಾರೆ. ನಾಡಿನ ವಿದ್ವತ್ ಪತ್ರಿಕೆಗಳಲ್ಲಿ 25ಕ್ಕೂ ಹೆಚ್ಚು ಲೇಖನಗಳು ಪ್ರಕಟವಾಗಿವೆ. ಕೆಲವು ಪತ್ರಿಕೆಗಳ ಸಂಪಾದ ಮಂಡಳಿ, ಗೌರವ ಸಂಪಾದಕರೂ ಆಗಿದ್ದಾರೆ.

ಅನೇಕ ರಾಜ್ಯ, ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡಿಸಿ, ಸಂಘ, ಸಂಸ್ಥೆಗಳಿಂದ ಸನ್ಮಾನಿತಗೊಂಡಿದ್ದಾರೆ. ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾವೇರಿ (ಗಾಂಧಿಪುರ) ಇಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದು, ಹಾವೇರಿಯಲ್ಲಿ ನೆಲೆಸಿದ್ದಾರೆ.

ಡಾ. ಜಗನ್ನಾಥ್. ಆರ್. ಗೇನಣ್ಣವರ
ಸಂಶೋಧಕರು, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ
ಕಾಗಿನೆಲೆ

ಪ್ರಕಾಶನ

ರೂ. 210/-

Scanned with CamScanner

ಕೋಳೂರು ಶಂಕರ ಕವಿಯ

ಮಾಧವಾಂಕ ಚರಿತೆ

ಸಂಪಾದಕ

■ ಡಾ. ಎಫ್. ಟಿ. ಹಳ್ಳಿಕೇರಿ



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಕ್ಷಿಣ ಭಾರತದ ಭಾಷೆ ಸಾಹಿತ್ಯ ಮತ್ತು ಶಿಲ್ಪಗಳಲ್ಲಿ ಸತ್ಯೇಂದ್ರಚೋಳನ ಕಥೆ ಪ್ರಸಿದ್ಧವಾಗಿದೆ. ವಿಶೇಷವಾಗಿ ತಮಿಳು ಸಾಹಿತ್ಯದಲ್ಲಿ ಹುದುಗಿಹೋದ ಈ ಕಥೆ ಮುಂದೆ ಕನ್ನಡ ತೆಲುಗು ಮಲಯಾಳ ಸಾಹಿತ್ಯದ ಅನೇಕ ಕವಿಗಳ ಕಾವ್ಯಕ್ಕೆ ವಸ್ತುವಾಗಿದೆ. ಕನ್ನಡದ ಮಧ್ಯಕಾಲೀನ ಸಾಹಿತ್ಯ ಸಂದರ್ಭದಲ್ಲಿಯಂತೂ ಈ ಕಥೆ ವೈವಿಧ್ಯಮಯವಾಗಿ ಬೆಳವಣಿಗೆಯಾಗಿದೆ, ಹರಿಹರ(ಮನುಚೋಳ ರಗಳೆ). ಗುಬ್ಬಿ ಮಲ್ಲಣಾರ್ಯ(ಭಾವಚಿಂತಾರತ್ನ). ಷಡಕ್ಷರದೇವ(ರಾಜಶೇಖರ ವಿಳಾಸ). ಧೂಪದಹಳ್ಳಿ ಶಾಂತಕವಿ(ಸತ್ಯೇಂದ್ರಚೋಳ ಚಾರಿತ್ರ). ಕೋಳೂರು ಶಂಕರಕವಿ(ಮಾಧವಾಂಕ ಚರಿತೆ) ಮೊದಲಾದವರು ಈ ಕಥೆಯನ್ನಾಧರಿಸಿ ಕಾವ್ಯಗಳನ್ನು ರಚನೆ ಮಾಡಿದ್ದಾರೆ. ಮನುಷ್ಯನು ನ್ಯಾಯ ನೀತಿ ಧರ್ಮ ಸತ್ಯ ಸಾಧನಗಳಿಂದ ಪಾರಮಾರ್ಥಿಕ ಬದುಕನ್ನು ಪರಿಪೂರ್ಣವಾಗಿ ಅನುಭವಿಸುತ್ತಾನೆ ಎಂಬುದನ್ನು ಮಾಧವಾಂಕ ಚರಿತೆ ಚೆನ್ನಾಗಿ ತಿಳಿಸಿಕೊಡುತ್ತದೆ. ನಡುಗನ್ನಡ ಭಾಷೆ ಮತ್ತು ದೇಶೀಯ ಸೊಗಡಿನಿಂದ ಕೂಡಿದ ಈ ಕಾವ್ಯ ಕವಿಯ ಸಮಕಾಲೀನ ಸಂದರ್ಭದ ಸಾಮಾಜಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ಅನಾವರಣಗೊಳಿಸಿರುವುದನ್ನು ಓದುಗರು ಗಮನಿಸಬಹುದು.

ಈವರೆಗೆ ಅಪ್ರಕಟಿತ ರೂಪದಲ್ಲಿದ್ದ ಕೋಳೂರು ಶಂಕರಕವಿಯ ಮಾಧವಾಂಕ ಚರಿತೆಯನ್ನು ಮೂರು ಹಸ್ತಪ್ರತಿಗಳ ನೆರವಿನಿಂದ ಪರಿಷ್ಕರಿಸಿದ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಎಫ್.ಟಿ. ಹಳ್ಳಿಕೇರಿ ಅವರಿಗೆ ಹಾರ್ದಿಕ ಅಭಿನಂದನೆಗಳು.

ಡಾ. ಸ.ಚಿ.ರಮೇಶ
ಕುಲಪತಿ

ರೂ. ೩೬೦/-

978-93-87135-60-4

Scanned with CamScanner

ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆ–೫೭

ಕೋಳೂರು ಶಂಕರಕವಿಯ

ಮಾಧವಾಂಕ ಚರಿತೆ

ಸಂಪಾದಕ
ಡಾ. ಎಫ್.ಟಿ. ಹಳ್ಳಿಕೇರಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಗೌರವ ಪ್ರತಿ
ವಿದ್ಯಾರಣ್ಯ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

Scanned with CamScanner

KOOLUURU SHANKARA KAVIYA

MAADHAVAANKA CHARITE

Edited by
Dr. F.T. Hallikeri
Professor, Dept. of Manuscriptology
Kannada University Hampi
Vidyaranya 583 276
Cell: 94481 84022

Published by
H.D. Prashanth
Director, Prasaranga
Kannada University Hampi
Vidyaranya 583 276

Pages: 48+350 Price: 360/-

ISBN : 978-93-87135-60-4

First Impression: 2020

© ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೆಲೆ: ರೂ. ೩೬೦/-

ಮುಖಪುಟ: ಕೆ. ಕೆ. ಮಕಾಳಿ

ಅಕ್ಷರ ಜೋಡಣೆ

ಯಾಜಿ ಪ್ರಕಾಶನ, ಹೊಸಪೇಟೆ

Cell: 94810 42400

ಪುಸ್ತಕ ದೊರೆಯುವ ಸ್ಥಳ

ಸರಸ್ವತಿ ಪುಸ್ತಕ ಮಾರಾಟ ಮಳಿಗೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ಪಿನ್ ೫೮೩ ೨೭೬

ದೂರವಾಣಿ: ೦೮೫೩೯-೨೮೦೪೧೦

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ

ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ

ಮೈಸೂರು ಬ್ಯಾಂಕ್ ವೃತ್ತ, ಆರಮನೆ ರಸ್ತೆ

ಬೆಂಗಳೂರು ೫೬೦ ೦೦೯

ದೂರವಾಣಿ: ೦೮೦-೨೨೩೭೨೩೩೮

ಮುದ್ರಣ

ಮಾರ್ಕೆಟಿಂಗ್ ಕಮ್ಯುನಿಕೇಷನ್ ಆ್ಯಂಡ್ ಆಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with CamScanner

ಪರಿವಿಡಿ

ಕನ್ನಡವು ಕನ್ನಡವ ಕನ್ನಡಿಸುತಿರಬೇಕು / 3
ಮುಖ್ಯಸ್ಥರ ಮಾತು / 6
ಪ್ರಸ್ತಾವನೆ / 8
೧. ಪಂಚಾಸ್ಯ ರಾಮೇಶ ಶರಣು / ೧
೨. ಸಂತತಿಗೆಲ್ಲಪೂರ್ವ ಕುವರ ಪುಟ್ಟಿಹನು / ೧೧
೩. ಮಾಧವ ಪೇಳ್ದ ಕಲಿತುದನೆಲ್ಲವ / ೨೪
೪. ಮಾಧವ ಶಿವಧ್ಯಾನನಾಗಿ ರಾಜಿಸುತಿರ್ದ / ೩೦
೫. ಕುವರನಂ ಕೊಲಲು ದೂತರನು ಕಳುಹೆ / ೪೮
೬ ಪೊಡವಿಯೊಳ್ ಸುತರಿಂದ ಸದ್ಗತಿ / ೫೭
೭ ನೃಪನ ಕುವರಿ ಸೌಂಧರಿ ಮೆರೆದಳು / ೬೪
೮. ದೇಶಂಗಳೊಳಧಿಕ ಪೂಜಿತರು ವಿದ್ವಾಂಸರು / ೭೪
೯. ಧೀರಪ್ರತಾಪದಿಂ ರಾಜ್ಯಮಂ ಪಾಲಿಸುತಿರ್ದ / ೮೪
೧೦. ಶಿಶುವಿಂಗೆ ಪಟ್ಟಾಭಿಷೇಕಂಗೈದು / ೯೬
೧೧. ಉತ್ತಮೋತ್ತಮವೆನಿಪ ಗೋಕರ್ಣಮಂಡಲ / ೧೧೧
೧೨. ಪ್ರೌಢಂಗೆ ಈ ರಾಜ್ಯಪಟ್ಟ ಸಲ್ವುದು / ೧೨೯
೧೩. ಪೊಡವೀಶ ಮಾಧವಾಂಕಗುಸುರ್ದ ವರಮಹಿಮೆಯನು / ೧೩೯
೧೪. ಪೇಳ್ವೆ ಶಿವನಯಿಪ್ಪತ್ತೈದು ಲೀಲೆಗಳ / ೧೫೪
೧೫. ಪ್ರಾಣಾಯಾಮಮಂ ಮಾಡುತ / ೧೬೭
೧೬. ಪನ್ನಗವಿಭೂಷಣನ ಭಜಿಸುವದು ಭಕ್ತಿಯಿಂ / ೧೮೪
೧೭. ಮೂವೇಳೆ ಲಿಂಗಾರ್ಚನಾಸಕ್ತನಾಗಬೇಕು / ೧೯೪
೧೮. ಮಾಧವಾಂಕಂಗೆ ಲಿಂಗದೀಕ್ಷೆಯನಿತ್ತು / ೨೦೮
೧೯. ಅಷ್ಟವಿಧದರ್ಚನೆಯನೆಸಗಿ ಲಿಂಗಕೆ / ೨೨೯

Scanned with CamScanner

೨೦. ಜೊಜೊಜೋ ಗುರುಲಿಂಗಸಂಗ ಮಹೇಶ / ೨೩೭
೨೧. ಸತ್ಪುತ್ರನಂ ಕೊಡುಗೆಂದುನತಿಸಿನುತಿಸಿ / ೨೫೫
೨೨. ಶಿವಶಿವಾ ಶಿಶುಹತ್ಯೆ ಸಮನಿಸಿತು / ೨೭೪
೨೩. ಕಂದಾ ನಿನ್ನಂ ನೋಡಿ ಮರದಿರ್ದೆನಕಟ ಹಾಹಾ / ೨೯೫
೨೪. ಸಾವತಪ್ಪದು ಶಿಶುವನೊಧೆ ಬಿಡದು / ೩೦೬
ಅನುಬಂಧಗಳು / ೩೨೨
೧. ಪದ್ಯಗಳ ಅಕಾರಾದಿ ಸೂಚಿ
೨. ವ್ಯಕ್ತಿನಾಮ ಸೂಚಿ
೩. ಸ್ಥಳನಾಮ ಸೂಚಿ

Scanned with CamScanner

ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೨೨

ಕಾವ್ಯ ಸಾಹಿತ್ಯ : ಭಾಗ-೪



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

Scanned with CamScanner

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೨೨ : ಕಾವ್ಯ ಸಾಹಿತ್ಯ : ಭಾಗ-೪

❖

- ೨೨ಯೋಗ ಪ್ರದೀಪಿಕಾ
- ಷಟ್ಸ್ಥಲ ೨೨ಾಯಣ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಎಫ್. ಟಿ. ಹಳ್ಳಿಕೇರಿ

ಹಂಪಿ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

Scanned with CamSca

Scanned with CamScanner

COMPLETE WORK OF DR. M.M.KALBURGI
VOLUME - 22 : KAVYA SAHITY : BHAGA : 4
Edited by : Dr. F.T. Hallikeri, Hampi

Published by : Dr. P.G. Halakatti Research Centre
B.L.D.E. Association, Vijayapur, Karnatak

©

First Edition : 2020
Pages : xxxvi + 532=568

Copies: 1000
Price Rs: 300/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Saraswatidevi Bhagawati, Dharwad.
Printer : **The Print Point**, No. 9/8 6th Cross, 4th Main, Rajajinagar, Industrial Town, Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರ

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೨೨–ಕಾವ್ಯ ಸಾಹಿತ್ಯ : ಭಾಗ–೪

ಸಂಪಾದಕರು : ಡಾ. ಎಫ್.ಟಿ.ಹಳ್ಳಿಕೇರಿ, ಹಂಪಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ

ಪ್ರಥಮ ಮುದ್ರಣ: ೨೦೨೦
ಪುಟಗಳು: xxxvi + ೫೩೨=೫೬೮

ಪ್ರತಿಗಳು: ಒಂದು ಸಾವಿರ
ಬೆಲೆ ರೂ: ೩೦೦/-

❖❖

ಮುಖಪುಟ ವಿನ್ಯಾಸ: ಕೆ.ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: ಪ್ರಿಂಟ್ ಪಾಯಿಂಟ್, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ಫೋನೆ : ೯೭೩೯೦ ೬೭೩೫೯

Scanned with CamSca

Scanned with CamScanner

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣಾ ಯೋಜನೆ

ಸಂಪಾದಕ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡ್ಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

Scanned with CamScanner

*

ಸಂಪಾದಕರ ನುಡಿ

ಡಾ. ಎಫ್. ಟಿ. ಹಳ್ಳಿಕೇರಿ

ಕನ್ನಡದ ಹತ್ತುಹಲವು ಅಧ್ಯಯನ ಶಿಸ್ತುಗಳಲ್ಲಿ "ಗ್ರಂಥಸಂಪಾದನೆ"ಯೂ ಒಂದು. ಆಧುನಿಕವಾಗಿ ಹತ್ತೊಂಬತ್ತನೆಯ ಶತಮಾನದ ನಡುಗಾಲದಲ್ಲಿ ಜನ್ಮ ತಳೆದ ಇದು ಇಂದು ಶಾಸ್ತ್ರಶುದ್ಧವಾಗಿ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡು ಬೆಳೆದು ನಿಂತಿದೆ. ಮಿಷನರಿಗಳು ಬ್ರಿಟಿಷ ಅಧಿಕಾರಿಗಳು, ದೇಶಿ ಪಂಡಿತರು, ವಿದ್ವಾಂಸರು, ಸಂಶೋಧಕರ ಗ್ರಂಥಸಂಪಾದನೆಯ ಮೇಲಿನ ಆಸಕ್ತಿ, ವಿಸ್ತಾರವಾದ ಓದು ಕಾರಣವಾಗಿ ಭಾರತೀಯ ನೆಲೆಯಲ್ಲಿ ಕನ್ನಡ ಗ್ರಂಥಸಂಪಾದನೆಗೆ ವಿಶೇಷತೆ ಪ್ರಾಪ್ತವಾಗಿದೆ. ಹರ್ಮನ್ ಮೋಗ್ಲಿಂಗ್, ಬಿ.ಎಲ್.ರೈಸ್, ಎಫ್. ಕಿಟೆಲ್, ಎಸ್.ಜ. ನರಸಿಂಹಾಚಾರ್, ಫ.ಗು.ಹಳಕಟ್ಟಿ, ಡಿ.ಎಲ್. ನರಸಿಂಹಾಚಾರ್, ಎಂ.ಎಂ.ಕಲಬುರ್ಗಿ, ಬಿ.ಎಸ್. ಸಣ್ಣಯ್ಯ, ವೀರಣ್ಣ ರಾಜೂರ, ವೈ.ಸಿ.ಭಾನುಮತಿ ಮೊದಲಾದ ವಿದ್ವಾಂಸರು ಕನ್ನಡ ಗ್ರಂಥಸಂಪಾದನೆಯಲ್ಲಿ ಕೃಷಿ ಮಾಡಿದ್ದಾರೆ. ಆ ಮೂಲಕ ಕನ್ನಡ ಗ್ರಂಥಸಂಪಾದನೆ ಕ್ಷೇತ್ರದ ಕ್ಷಿತಿಜದ ವೈವಿಧ್ಯತೆಗೆ-ವಿಸ್ತಾರಕ್ಕೆ ಕಾರಣರಾಗಿದ್ದಾರೆ.

ಎಂ.ಎಂ.ಕಲಬುರ್ಗಿ, ಕನ್ನಡ ಗ್ರಂಥಸಂಪಾದನಶಾಸ್ತ್ರದಲ್ಲಿ ಬಹು ದೊಡ್ಡ ಹೆಸರು. ಕನ್ನಡ ಭಾಷೆ-ಸಾಹಿತ್ಯ-ಸಮಾಜ-ಸಂಸ್ಕೃತಿ-ಇತಿಹಾಸ ಮೊದಲಾದ ಕ್ಷೇತ್ರಗಳಲ್ಲಿ ಅಧ್ಯಯನ ಕೈಕೊಂಡು ಅನೇಕ ಹೊಸ ಹೊಸ ಸಂಗತಿಗಳನ್ನು ಶೋಧಿಸಿದವರು. ಆ ಮೂಲಕ ಕನ್ನಡ-ಕನ್ನಡಿಗ-ಕರ್ನಾಟಕತ್ವದ ಮಹತ್ವವನ್ನು ಜಗತ್ತಿಗೆ ತೋರಿಸಿಕೊಟ್ಟ ಮಹಾನ್ ಸಂಶೋಧಕ. ಕಳೆದ ಐವತ್ತು ವರ್ಷಗಳಲ್ಲಿ ಅವರು ಕೈಕೊಂಡ ಸಂಶೋಧನೆಯ ವ್ಯಾಪ್ತಿ ವಿಶಿಷ್ಟವಾದುದು. ಗ್ರಂಥಸಂಪಾದನೆ, ಕಲಬುರ್ಗಿಯವರಿಗೆ ಪ್ರಥಮ ಆದ್ಯತೆ. ಗ್ರಂಥಸಂಪಾದನ ವಿಧಾನಗಳನ್ವಯ ಪ್ರಾಚೀನ ಕಾವ್ಯ-ಪುರಾಣಗಳ ಪರಿಷ್ಕರಣೆ, ವಿಶೇಷವಾಗಿ ಸ್ಥಳೀಯ ಚರಿತ್ರೆಯನ್ನು ನಿರೂಪಿಸುವಂಥ ಕೃತಿ(ಕುಮಾರರಾಮನ ಸಾಂಗತ್ಯಗಳು, ಸಿರುಮನ ಚರಿತೆಗಳು)ಗಳನ್ನು ಶೋಧಿಸಿ ಪರಿಷ್ಕರಿಸಿರುವುದು, ಕನ್ನಡ ಗ್ರಂಥಸಂಪಾದನೆಯನ್ನು ಶಾಸ್ತ್ರೀಯ ನೆಲೆ(ಕನ್ನಡ ಗ್ರಂಥಸಂಪಾದನಶಾಸ್ತ್ರ)ಯಲ್ಲಿ ರಚನೆ ಮಾಡಿರುವುದು ಕಲಬುರ್ಗಿಯವರ ವಿಶೇಷತೆಯಾಗಿದೆ.

ಕಲಬುರ್ಗಿಯವರ ಒಟ್ಟು ಕೃತಿಗಳ ಸಂಖ್ಯೆ ನೂರನ್ನು ದಾಟಿದೆ. ಈ ನೂರರಲ್ಲಿ ನಾಲ್ವತ್ತು ಪ್ರಾಚೀನ ಕಾವ್ಯ-ಪುರಾಣಗಳು ಗ್ರಂಥಸಂಪಾದನೆಗೆ ಸಂಬಂಧಿಸಿವೆ. ಈ ಸಂಖ್ಯೆಯನ್ನು ಗಮನಿಸಿದರೆ

Scanned with CamScanner

ಕಲಬುರ್ಗಿಯವರಿಗೆ ಗ್ರಂಥಸಂಪಾದನಶಾಸ್ತ್ರದತ್ತ ಹೆಚ್ಚು ಒಲವಿತ್ತು ಎಂಬುದು ಮೇಲ್ನೋಟಕ್ಕೆ ವೇದ್ಯವಾಗುತ್ತದೆ. ಇವು ಚಂಪೂ-ವಚನ-ದೇಶಿ-ಚಾರಿತ್ರಿಕ-ಕುರುಬ ಸಮುದಾಯ-ಸ್ಥಳೀಯ ಇತಿಹಾಸವನ್ನು ನಿರೂಪಿಸುವ ಕೃತಿಗಳಾಗಿವೆ.

ಈ ಎಲ್ಲ ಕೃತಿಗಳು ಒಂದೆಡೆ ಲಭ್ಯವಾಗಬೇಕೆನ್ನುವ ಉದ್ದೇಶದಿಂದ ವಿಜಯಪುರದ ಬಿ.ಎಲ್.ಡಿ.ಇ. ಸಂಸ್ಥೆಯ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನದಲ್ಲಿ ಡಾ.ವೀರಣ್ಣ ರಾಜೂರ ಅವರ ಪ್ರಧಾನ ಸಂಪಾದಕತ್ವದಲ್ಲಿ "ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ"ಯನ್ನು ಅನುಷ್ಠಾನಗೊಳಿಸಿದೆ. ಈ ಯೋಜನೆಯನ್ವಯ ಸಂಪುಟ-೧೦, ಕಾವ್ಯ ಸಾಹಿತ್ಯ : ಭಾಗ-೨ನ್ನು ಸಂಪಾದಿಸಿ ಸಿದ್ಧಪಡಿಸಿಕೊಡುವ ಜವಾಬ್ದಾರಿ ನನ್ನದಾಗಿದೆ. ಈ ಸಂಪುಟವು ಚನ್ನಸದಾಶಿವಯೋಗಿ ವಿರಚಿತ ಶಿವಯೋಗ ಪ್ರದೀಪಿಕೆ ಹಾಗೂ ಪುರಾಣದ ಸಿದ್ಧಲಿಂಗ ಕವಿಯ ಷಟ್ಸ್ಥಲ ಶಿವಾಯಣ -ಹೀಗೆ ಎರಡು ಕೃತಿಗಳನ್ನು ಒಳಗೊಂಡಿದೆ. ಉಪೇಕ್ಷಿತ ಮತ್ತು ಅಪ್ರಕಟಿತ ಕಾವ್ಯಪುರಾಣಗಳ ಶೋಧ, ಪರಿಷ್ಕರಣೆ ಮತ್ತು ಪ್ರಕಟಣೆಯಲ್ಲಿ ಕಲಬುರ್ಗಿಯವರಿಗೆ ತುಂಬ ಆಸಕ್ತಿ ಮತ್ತು ಕುತೂಹಲ. ಅದರಲ್ಲಿಯೂ ಸ್ಥಳೀಯ ಇತಿಹಾಸ, ಸಮುದಾಯ ಸಂಸ್ಕೃತಿಯನ್ನು ವಿವರಿಸುವಂಥ ಕೃತಿಗಳೆಂದರೆ ಕಲಬುರ್ಗಿಯವರಿಗೆ ಎಲ್ಲಿಲ್ಲದ ಉತ್ಸಾಹ. ಹೀಗಾಗಿ ಕುಮಾರರಾಮ, ಸಿರುಮನಾಯಕ, ಇಮ್ಮಡಿ ಚಿಕ್ಕಭೂಪಾಲ, ನಿಂಬಸಾಮಂತ, ಕೊಡೇಕಲ್ ಬಸವಣ್ಣ, ಸಿದ್ಧಮಂಕ ಚರಿತೆ, ತಗರ ಪವಾಡ, ಗುಂಡಬಸವಣ್ಣ, ಚೀಲಾಳಸ್ವಾಮಿ ಮೊದಲಾದ ಚಾರಿತ್ರಿಕ ವ್ಯಕ್ತಿಗಳ ಕುರಿತು ರಚನೆಗೊಂಡಿರುವ ಕಾವ್ಯಗಳು ಕಾಲನ ಗರ್ಭದಲ್ಲಿ ಅಡಗಿಕುಳಿತಿದ್ದವು. ಅಂಥ ಕೃತಿಗಳತ್ತ ಪಂಡಿತರಾಗಲಿ, ವಿದ್ವಾಂಸರಾಗಲಿ ಯಾರೊಬ್ಬರೂ ಗಮನಹರಿಸಿರಲಿಲ್ಲ. ಆದರೆ ಕಲಬುರ್ಗಿಯವರಿಗೆ ಮಾತ್ರ ಇಂಥ ಮಹತ್ವದ ಕೃತಿಗಳನ್ನು ಶೋಧಿಸಿ ಪರಿಷ್ಕರಿಸಲು ಸಾಧ್ಯವಾಗಿದೆ ಎಂಬುದು ಇಲ್ಲಿ ಬಹುಮುಖ್ಯವಾಗುತ್ತದೆ. ಈಗ ಈ ಎರಡು ಕೃತಿಗಳ ಕುರಿತು ಕೆಲವು ಸಂಗತಿಗಳನ್ನು ತಿಳಿದುಕೊಳ್ಳೋಣ.

೧. ಚನ್ನಸದಾಶಿವಯೋಗಿಯ ಶಿವಯೋಗ ಪ್ರದೀಪಿಕಾ :

ಭಾರತೀಯ ದರ್ಶನಗಳಲ್ಲಿ "ಯೋಗ ದರ್ಶನ"ವೂ ಒಂದು. ಈ ಯೋಗ ದರ್ಶನದ ಬಗ್ಗೆ ಪ್ರಾಚೀನ ಕಾಲದಿಂದಲೂ ಋಷಿಮುನಿಗಳು, ಕವಿಗಳು, ಚಿಂತಕರು ಅಧ್ಯಯನ ಮಾಡಿ ಕಾವ್ಯಗಳನ್ನು ರಚನೆ ಮಾಡುತ್ತ ಬಂದಿದ್ದಾರೆ. ವೇದ ಉಪನಿಷತ್ತು, ಮಹಾಭಾರತ-ರಾಮಾಯಣ-ಭಗವದ್ಗೀತೆ, ಶಾಕ್ತತಂತ್ರ ಮೊದಲಾದವುಗಳಲ್ಲಿ ಯೋಗ ಪದದ ನಿಷ್ಪತ್ತಿ, ಅರ್ಥ, ವ್ಯಾಖ್ಯಾನ, ಪ್ರಕಾರಗಳು ಹಾಗೂ ಮಹತ್ವವನ್ನು ತಿಳಿಸಲಾಗಿದೆ. ಪತಂಜಲಿ ಮುನಿಯ "ಯೋಗಸೂತ್ರ" ಗ್ರಂಥವು ಯೋಗವನ್ನು ಕುರಿತು ಬಂದ ಗ್ರಂಥಗಳಲ್ಲಿ ಮೊದಲನೆಯದು. ನಂತರದಲ್ಲಿ ಸ್ವಾತ್ಮಾರಾಮರ ಹಠಯೋಗ ಪ್ರದೀಪಿಕೆ, ಚನ್ನಸದಾಶಿವಯೋಗಿಯ ಶಿವಯೋಗ ಪ್ರದೀಪಿಕೆ ಮುಂತಾದ ಕೃತಿಗಳು ಸಂಸ್ಕೃತದಲ್ಲಿ ರಚನೆಗೊಂಡಿವೆ. ಈ ಕೃತಿ ರಚನೆಗಳ ಪ್ರಭಾವ-ಪ್ರೇರಣೆಯಾಗಿರಬಹುದು ಅಥವಾ ಯೋಗ ದರ್ಶನದ ಆಳವಾದ ಅಧ್ಯಯನದ ಹಿನ್ನೆಲೆಯಲ್ಲಿ ಭಾರತೀಯ ಭಾಷೆಗಳಲ್ಲಿ ಕೃತಿಗಳು ರಚನೆಗೊಳ್ಳುತ್ತ ಬಂದಿವೆ;ಬರುತ್ತಲಿವೆ. ಇನ್ನು ಕೆಲವು ಕೃತಿಗಳಿಗೆ ಆಯಾ ಭಾಷೆಯಲ್ಲಿ ಟೀಕು-ವ್ಯಾಖ್ಯಾನ ಗ್ರಂಥಗಳು ರಚನೆಗೊಂಡಿವೆ. ಅಂಥ ಟೀಕುಗಳಲ್ಲಿ ಚನ್ನಸದಾಶಿವಯೋಗಿಯ ಶಿವಯೋಗ ಪ್ರದೀಪಿಕೆ ಗ್ರಂಥವು ಒಂದು.

Scanned with CamScanner

ಶಿವಯೋಗ ಪ್ರದೀಪಿಕೆಯ ಕರ್ತೃ ಚನ್ನಸದಾಶಿವಯೋಗಿ. ಈತನ ಕಾಲ ಅಂದಾಜು ಹದಿನೈದನೆಯ ಶತಮಾನ. ಗುರು ಸದಾಶಿವಯೋಗಿ. ಈತ ಶಿವಯೋಗ ಎಂಬ ಕೃತಿಯನ್ನು ರಚಿಸಿರಬಹುದೆಂದು ಅಭಿಪ್ರಾಯಪಡಲಾಗುತ್ತಿದೆ. ಆ ಶಿವಯೋಗ ಕೃತಿಗೆ ಟೀಕೆ ಅಥವಾ ವ್ಯಾಖ್ಯಾನ ಬರೆದವನು ಚನ್ನಸದಾಶಿವಯೋಗಿ. ಈತನಿಗೆ ನೂಕನಾ(ಬಸವಾ)ರಾಧ್ಯ ಎಂಬ ಹೆಸರು ಇದೆ ಎಂಬುದು ತೆಲುಗಿನ ಕೊಲನಿ ಗಣಪತಿದೇವನ ಶಿವಯೋಗಸಾರಮು ಗ್ರಂಥದಿಂದ ವ್ಯಕ್ತವಾಗುತ್ತದೆ. ಈ ಗಣಪತಿದೇವ ಚನ್ನಸದಾಶಿವಯೋಗಿಯ ಶಿಷ್ಯನೆಂದೂ ಹೇಳಲಾಗುತ್ತಿದೆ.

ಹೆಸರೇ ಹೇಳುವಂತೆ ಶಿವಯೋಗ ಪ್ರದೀಪಿಕೆಯು ಶಿವಯೋಗದ ಬಗ್ಗೆ ವಿವರಿಸುತ್ತದೆ;ವಿವೇಚನೆ ಮಾಡುತ್ತದೆ. ಇಪ್ಪತ್ತೆಂಟು ಶಿವಾಗಮಗಳು ಹಾಗೂ ಸಿದ್ಧಸಿದ್ಧಾಂತಪದ್ಧತಿ ಎಂಬ ಕೃತಿಯ ಸಾರವನ್ನು ನಿರೂಪಿಸುವ ಇದು ಐದು ಪಟಲ(ಅಧ್ಯಾಯ)ಗಳಲ್ಲಿ ಕ್ರಮವಾಗಿ ೨೮೭ ಶ್ಲೋಕಗಳನ್ನು ಒಳಗೊಂಡಿದೆ. ಮಂತ್ರಯೋಗ ಲಯಯೋಗ ಹಠಯೋಗ ರಾಜಯೋಗಗಳ ಲಕ್ಷಣಗಳನ್ನು ತಿಳಿಸುತ್ತ, ಇವುಗಳಿಗೆ ಶಿಖರಪ್ರಾಯವಾದ "ಶಿವಯೋಗ" ಕುರಿತು ಸವಿವರವಾಗಿ ಚರ್ಚಿಸಲಾಗಿದೆ. ಹೀಗೆ ಶಿವಯೋಗವನ್ನೇ ಪ್ರಮುಖ್ಯವಾಗಿ ಪ್ರತಿಪಾದಿಸುವ ಈ ಕೃತಿ ಯೋಗ ಪ್ರಭೇದಗಳು, ಯೋಗದ ಅಷ್ಟಾಂಗಗಳನ್ನು, ಬಂಧ-ಮುದ್ರೆಗಳನ್ನು ಹಾಗೂ ಇನ್ನಿತರೆ ಯೋಗ ವಿಚಾರಗಳನ್ನೂ ನಿರೂಪಿಸುವಲ್ಲಿ ಯಶಸ್ವಿಯಾಗಿದೆ.

ಈ ಕೃತಿಯನ್ನು ಎಂ.ಎಂ.ಕಲಬುರ್ಗಿಯವರು ಪರಿಷ್ಕರಿಸಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ೧೯೭೬ರಲ್ಲಿ ಪ್ರಕಟಿಸಿದ್ದಾರೆ. ಸಹಸಂಪಾದಕರಾಗಿದ್ದವರು ಪಂಡಿತ ನಾಗಭೂಷಣಶಾಸ್ತ್ರಿಗಳು. ಪ್ರಸ್ತಾವನೆಯಲ್ಲಿ ಯೋಗ, ಯೋಗದ ಪ್ರಕಾರಗಳಾದ ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗ ಹಾಗೂ ಶಿವಯೋಗಗಳ ಕುರಿತು ಚರ್ಚಿಸಿದ್ದಾರೆ. ಅಲ್ಲದೇ ಯಮ-ನಿಯಮ-ಆಸನ-ಪ್ರಾಣಾಯಾಮ-ಪ್ರತ್ಯಾಹಾರ-ಧಾರಣ-ಧ್ಯಾನ-ಸಮಾಧಿ ಎಂಬ ಎಂಟು ಯೋಗಾಂಗಗಳ ಬಗ್ಗೆಯೂ ಸ್ಥೂಲವಾದ ವಿವರಗಳಿವೆ. ನಂತರ ಶಿವಯೋಗ ಪ್ರದೀಪಿಕೆಯ ಕರ್ತೃ, ಕೃತಿ-ಕೃತಿ ಟೀಕುವಿನ ವಿಶೇಷತೆ ಸಂಕ್ಷಿಪ್ತವಾಗಿ ಮೂಡಿಬಂದಿದೆ. ಶಿವಯೋಗ ಪ್ರದೀಪಿಕೆಗೆ ಕನ್ನಡದಲ್ಲಿಯೂ ಕೆಲವು ಟೀಕೆ, ವ್ಯಾಖ್ಯಾನ ಕೃತಿಗಳು ಹುಟ್ಟಿಕೊಂಡಿವೆ. ತೆಲುಗಿನ ಶಿವಯೋಗ ಸಾರಮು ಕೃತಿಯನ್ನು ಬಿಟ್ಟರೂ ಇದಕ್ಕೆ ನಿಜಗುಣ ಶಿವಯೋಗಿಗಳು ಮಾಲಾರೂಪದ ಕನ್ನಡ ಟೀಕೆಯನ್ನು, ಬಸವಾರಾಧ್ಯರು ಪ್ರತಿಪದಾರ್ಥ ಕನ್ನಡ ಟೀಕೆಯನ್ನು ಬರೆದಿದ್ದನ್ನು ಗುರುತಿಸಿ, ಅದರ ಮಹತ್ವವನ್ನು ಸಾಹಿತ್ಯಲೋಕಕ್ಕೆ ಸಂಪಾದಕದ್ವಯರು ತಿಳಿಸಿಕೊಟ್ಟಿದ್ದಾರೆ. ಅನುಬಂಧದಲ್ಲಿ ಶ್ಲೋಕಗಳ ವರ್ಣಾನುಕ್ರಮಣಿಕೆ ಕೃತಿಯ ಓದಿಗೆ ಸಹಾಯಕಾರಿಯಾಗಿದೆ. ಆದರೆ ಪರಿಷ್ಕರಣಕ್ಕೆ ಬಳಸಿಕೊಂಡ ಹಸ್ತಪ್ರತಿಗಳ ಬಗ್ಗೆ ಇದರಲ್ಲಿ ಮಾಹಿತಿಯಿಲ್ಲ. ಒಟ್ಟಿನಲ್ಲಿ ಯೋಗ ದರ್ಶನಕ್ಕೆ ಸಂಬಂಧಿಸಿದ ಸಂಸ್ಕೃತ ಕೃತಿಯ ಕನ್ನಡ ಟೀಕಾ ಗ್ರಂಥ "ಶಿವಯೋಗ ಪ್ರದೀಪಕೆ"ಯನ್ನು ಪರಿಷ್ಕರಿಸಿ ಕೊಡುವುದರ ಮೂಲಕ ಯೋಗಾಭ್ಯಾಸಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

೨. ಪುರಾಣದ ಸಿದ್ಧಲಿಂಗ ಕವಿಯ ಪಟ್ಟಣ ಶಿವಾಯಣ :

ಆಧುನಿಕಪೂರ್ವ ಕನ್ನಡ ಸಾಹಿತ್ಯದಲ್ಲಿ ಪುರಾಣವನ್ನು ಚರಿತ್ರೆಗೊಳಿಸಿ, ಚರಿತ್ರೆಯನ್ನು ಪುರಾಣಗೊಳಿಸಿ ರಚಿಸಿದ ಕಾವ್ಯಗಳಿವೆ. ಉದಾಹರಣೆಗೆ ಪಂಪಕವಿಯ ಪಂಪಭಾರತ, ರನ್ನನ

Scanned with CamScanner

ಗದಾಯುದ್ಧಗಳಂಥ ಕೃತಿಗಳು ಪುರಾಣದ ಚರಿತ್ರೀಕರಣವಾದರೆ, ಹರಿಹರನ ಬಸವರಾಜದೇವರ ರಗಳೆ, ರಾಘವಾಂಕನ ಸಿದ್ಧರಾಮ ಚರಿತ್ರೆಗಳಂಥ ಕೃತಿಗಳು ಚರಿತ್ರೆಯ ಪುರಾಣೀಕರಣವಾಗಿವೆ. ಪ್ರಸ್ತುತ ಸಿದ್ಧಲಿಂಗ ಕವಿಯ "ಷಟ್ಸ್ಥಲ ಶಿವಾಯಣ"ವು ಚರಿತ್ರೆಯನ್ನು ಪುರಾಣಗೊಳಿಸಿದ ಕಾವ್ಯವಾಗಿದೆ. ೨೫ ಸ್ಕಂದ(ಸಂಧಿ), ೧೨೯೯ ಛಾಮಿನಿ ಷಟ್ಪದಿ ಪದ್ಯಗಳನ್ನು ಒಳಗೊಂಡ ಒಂದು ದೀರ್ಘ ಕಾವ್ಯ.

ಹನ್ನೆರಡನೆಯ ಶತಮಾನದಿಂದ ಅಸ್ತಿತ್ವಕ್ಕೆ ಬಂದ ವಿರಕ್ತ ಪರಂಪರೆಯ ಪ್ರಥಮ ವ್ಯಕ್ತಿ ಅಲ್ಲಮಪ್ರಭು. ಅಲ್ಲಿಂದ ಮುಂದೆ ಚನ್ನಬಸವಣ್ಣ, ಸಿದ್ಧರಾಮ, ತದನಂತರದಲ್ಲಿ ತೋಂಟದ ಸಿದ್ಧೇಶ್ವರ ಈ ಪರಂಪರೆಯ ವಾರಸುದಾರರೆಂಬುದು ಇತಿಹಾಸವು ತಿಳಿಸುತ್ತದೆ. ಈ ವಾರಸುದಾರಿಕೆಯನ್ನು ಮುನ್ನಡೆಸಿಕೊಂಡು ಬಂದವರಲ್ಲಿ ಚೀಲಾಳಸ್ವಾಮಿಯೂ ಒಬ್ಬ. ಆತನ ಪರ್ಯಟನವೇ ಈ ಕೃತಿಯ ಮುಖ್ಯ ವಿಷಯ. ಶಿವನು ಪಾರ್ವತಿಗೆ, ನಂದೀಶನು ಶಿವಗಣಂಗಳಿಗೆ, ಅಲ್ಲಮಪ್ರಭುವು ಬಸವಾದಿ ಪ್ರಮಥರಿಗೆ ಹೇಳಿದ ಈ ಕಥೆಯನ್ನು ಚೀಲಾಳಸ್ವಾಮಿಯು ತನ್ನ ಶಿಷ್ಯನಾದ ಕುಮಾರಪ್ರಭುವಿಗೆ ಹೇಳಿದಂತೆ ಇಲ್ಲಿ ಕಥಾಶಿಲ್ಪವನ್ನು ರೂಪಿಸಲಾಗಿದೆ. ಕೃತಿಯು ಇವರೆಲ್ಲರ ಸಂಭಾಷಣೆಗಳಿಂದ ಮುನ್ನಡೆದಿದೆ. ಚಿಲಾಳಸ್ವಾಮಿಯ ದೇಶ ಪರ್ಯಟನವನ್ನು ಈ ಕೃತಿ ಕ್ರಮಬದ್ಧವಾಗಿ ಹೇಳುತ್ತ ಹೋಗುತ್ತದೆ. ಕೂಡಲಸಂಗಮ, ರಾಚೋಟಿ, ಕೊಲ್ಲಿಪಾಕಿ, ದಿಲ್ಲಿ, ವಿಜಯಪುರ, ಮೈಲಾಪುರ, ಕಾಳಹಸ್ತಿ, ನೀಲಗಿರಿ, ಶಿವಗಂಗೆ, ಎಡೆಯೂರು, ಸೋದೆ, ಜರಿಮಲೆ, ಉಜ್ಜೈನಿ, ಕೊಟ್ಟೂರು ಮುಂತಾದ ಕ್ಷೇತ್ರಗಳನ್ನು ಸುತ್ತಾಡಿ ಕೊನೆಗೆ ಹರಪನಹಳ್ಳಿಗೆ ಬಂದು ಷಟ್ಸ್ಥಲಪೀಠಸ್ಥನಾಗಿ ಯೋಗಸಮಾಧಿ ಹೊಂದಿದನು ಎಂಬುದನ್ನು ಈ ಕೃತಿಯು ಸ್ಥೂಲವಾಗಿ ಚಿತ್ರಿಸುತ್ತದೆ. ಅನುಬಂಧದಲ್ಲಿರುವ ನಾಮಸೂಚಿ ಕಾವ್ಯದಲ್ಲಿ ಉಲ್ಲೇಖವಾದ ವ್ಯಕ್ತಿ ಮತ್ತು ಸ್ಥಳಗಳನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ.

ಇಂಥ ಚಾರಿತ್ರಿಕ ಕಾವ್ಯಗಳ ಬಗ್ಗೆ ಎಂ.ಎಂ.ಕಲಬುರ್ಗಿಯವರಿಗೆ ತುಂಬ ಕುತೂಹಲ. ಹೀಗಾಗಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ಲಭ್ಯವಾದ ಏಕೈಕ ಪ್ರತಿಯಿಂದ ಷಟ್ಸ್ಥಲ ಶಿವಾಯಣ ಕೃತಿಯನ್ನು ಸಿ.ಪಿ.ಕೃಷ್ಣಕುಮಾರ ಅವರೊಂದಿಗೆ ೧೯೯೯ರಲ್ಲಿ ಪರಿಷ್ಕರಿಸಿ, ಗದುಗಿನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ವೀರಶೈವ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಪ್ರಸ್ತಾವನೆಯು ಅನೇಕ ಚಾರಿತ್ರಿಕ ಸಂಗತಿಗಳತ್ತ ನಮ್ಮ ಗಮನವನ್ನು ಸೆಳೆಯುತ್ತದೆ. ಕರ್ತೃವಿನ ವಿಚಾರ, ಕೃತಿಯ ಐತಿಹಾಸಿಕ ಮಹತ್ವ, ಚೀಲಾಳಸ್ವಾಮಿ–ಚೀಲಾಳ ಸಮಯ, ಆತನ ವ್ಯಕ್ತಿತ್ವ, ಕಾವ್ಯಶಿಲ್ಪ–ಕವಿತ್ವ, ಪ್ರಭಾವ, ಪರಿಷ್ಕರಣ ವಿಧಾನಗಳನ್ನು ಚರ್ಚಿಸಲಾಗಿದೆ. ವಿರಕ್ತ ಪರಂಪರೆಯಲ್ಲಿ ಮುರುಗಾ–ಚೀಲಾಳ–ಸಂಪಾದನ ಸಮಯಭೇದಗಳು ಹುಟ್ಟಿಕೊಂಡ ಬಗೆ, ಚೀಲಾಳ ಸ್ವಾಮಿಯ ಹೆಸರಿನಲ್ಲಿ ಚೀಲಾಳಸಮಯದ ಮಠಗಳು, ಮಠಾಧಿಪತಿಗಳ ಸಂಪ್ರದಾಯ ಇದ್ದ ಬಗ್ಗೆ ಸಂಪಾದಕರು ಕೂಲಂಕಷವಾಗಿ ಚರ್ಚೆ ಮಾಡಿದ್ದಾರೆ. ಅಷ್ಟೇ ಏಕೆ, ಚೀಲಾಳ ಸಮಯದ ಮುಂದುವರಿಕೆಯಾಗಿ ಹರಪನಹಳ್ಳಿ ಬಳ್ಳಾರಿ ಹೊಸಪೇಟೆ ಉರವಕೊಂಡ ಕೊಪ್ಪಳ ಮುಂತಾದೆಡೆ ಮಠಗಳಿರುವುದನ್ನು ಗುರುತಿಸಲಾಗಿದೆ. ಒಟ್ಟಿನಲ್ಲಿ ವಿರಕ್ತ ಪರಂಪರೆಯಲ್ಲಿ ಬರುವ ಚೀಲಾಳ ಸಮಯ, ಆ ಸಮಯದ ಸ್ಥಾಪಕ ಚೀಲಾಳಸ್ವಾಮಿಯ ಚರಿತ್ರೆಯನ್ನು ನಿರೂಪಿಸುವ ಈ ಕೃತಿಯು ಇನ್ನೂ ಹೆಚ್ಚಿನ ಸಂಶೋಧನೆಗೆ ಬಹುಮುಖ್ಯ ಆಕರಗ್ರಂಥವಾಗಿದೆ.

Scanned with CamScanner

ಕೃತಜ್ಞತೆ :

ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂಶೋಧನೆಯನ್ನು ಮುಖ್ಯವಾಗಿಟ್ಟುಕೊಂಡು ವಿಜಯಪುರದ ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಸ್ಥಾಪನೆಯಾಗಿದೆ. ಈಗಾಗಲೇ 'ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣೆ' ಹಾಗೂ 'ಆದಿಲಶಾಹಿ ಸಾಹಿತ್ಯ ಪ್ರಕಟಣ ಯೋಜನೆ'ಗಳನ್ನು ಯಶಸ್ವಿಯಾಗಿ ಕೈಕೊಂಡ ಈ ಕೇಂದ್ರವು ಈಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನದಿಂದ "ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ"ಯನ್ನು ರೂಪಿಸಿದೆ. ಈ ಯೋಜನೆಯಲ್ಲಿ ಇಪ್ಪತ್ತೆರಡನೆಯ ಸಂಪುಟ(ಕಾವ್ಯ ಸಾಹಿತ್ಯ–ಭಾಗ : ೪)ವಾಗಿ ಗುರುಗಳಾದ ಎಂ.ಎಂ. ಕಲಬುರ್ಗಿಯವರು ಪರಿಷ್ಕರಿಸಿದ ಚನ್ನಸದಾಶಿವಯೋಗಿಯ 'ಶಿವಯೋಗ ಪ್ರದೀಪಿಕೆ' ಹಾಗೂ 'ಪುರಾಣದ ಸಿದ್ಧಲಿಂಗ ಕವಿಯ ಷಟ್ಸ್ಥಲ ಶಿವಾಯಣ' ಕೃತಿಗಳನ್ನು ಇಲ್ಲಿ ಸಂಪಾದಿಸಿಕೊಟ್ಟಿದ್ದೇನೆ. ಈ ಯೋಜನೆಯಲ್ಲಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಟ್ಟ ನನ್ನ ಗುರುಗಳು ಹಾಗೂ ಈ ಯೋಜನೆಯ ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ ಅವರಿಗೆ ಗೌರವಪೂರ್ವಕ ನಮನಗಳು. ಸಂಪಾದನೆಯ ಸಂದರ್ಭದಲ್ಲಿ ಸೂಕ್ತ ಸಲಹೆ–ಸಹಕಾರ ನೀಡಿದ ಮಾತೋಶ್ರೀ ಉಮಾದೇವಿ ಎಂ. ಕಲಬುರ್ಗಿ ಹಾಗೂ ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರಿಗೆ, ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್.ಮದಭಾವಿ ಅವರಿಗೆ ಕೃತಜ್ಞತೆಗಳು.

❖❖

Scanned with CamScanner

*

ಪರಿವಿಡಿ

೧. ಶಿವಯೋಗ ಪ್ರದೀಪಿಕೆ	೧-೧೮೦
೨. ಷಟ್ಸ್ಥಲ ಶಿವಾಯಣ	೧೮೧-೫೨೯

Scanned with CamScanner



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅವಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಪ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಧಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಧಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

Scanned with CamScanner

ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೨೩

ಕಾವ್ಯ ಸಾಹಿತ್ಯ : ಭಾಗ-೫



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ವಿ.ವಿ.ಸಂಘ, ವಿಜಯಪುರ - ೫೧೬೧೦೯

Scanned with CamScanner

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ–೨೩ : ಕಾವ್ಯ ಸಾಹಿತ್ಯ : ಭಾಗ–೫

❖

- ತಗರ ಪವಾಡ • ಸಿದ್ಧಮಂಕ ಚರಿತೆ • ಗುಂಡಬಸವೇಶ್ವರ ಚರಿತ್ರೆ
- ಕೊಡೇಕಲ್ಲ ವಚನ ವಾಕ್ಯ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಎಫ್. ಟಿ. ಹಳ್ಳಿಕೇರಿ

ಹಂಪಿ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

Scanned with CamScanner

COMPLETE WORK OF DR. M.M.KALBURGI
VOLUME - 23 : KAVYASAHITY : BHAGA:V
Edited by : Dr. F.T. Hallikeri, Hampi

Published by : Dr. P.G Halakatti Research Centre
B.L.D.E. Association, Vijayapur, Karnatak

©

First Edition : 2019
Pages : xxxvi + 740=776

Copies: 1000
Price: Rs: 390/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Saraswatidevi Bhagawati, Dharwad.
Printer : The Print Point, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರ

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೨೩–ಕಾವ್ಯ ಸಾಹಿತ್ಯ : ಭಾಗ–೫

ಸಂಪಾದಕರು : ಡಾ. ಎಫ್.ಟಿ.ಹಳ್ಳಿಕೇರಿ, ಹಂಪಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ

ಪ್ರಥಮ ಮುದ್ರಣ: ೨೦೧೯
ಪುಟಗಳು: xxxvi + ೭೪೦=೭೭೬

ಪ್ರತಿಗಳು: ಒಂದು ಸಾವಿರ
ಬೆಲೆ ರೂ: ೩೯೦/–

❖❖

ಮುಖಪುಟ ವಿನ್ಯಾಸ: ಕೆ.ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: ಪ್ರಿಂಟ್ ಪಾಯಿಂಟ್, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ದೂ : ೯೭೩೯೦ ೬೭೩೫೯

Scanned with CamScanner

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡ್ಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

Scanned with CamScanner

ಸಂಪಾದಕರ ನುಡಿ

ಡಾ. ಎಫ್.ಟಿ.ಹಳ್ಳಿಕೇರಿ

ಕನ್ನಡವ ಹತ್ತುಹಲವು ಅಧ್ಯಯನ ಶಿಸ್ತುಗಳಲ್ಲಿ "ಗ್ರಂಥಸಂಪಾದನೆ"ಯೂ ಒಂದು. ಆಧುನಿಕವಾಗಿ ಹತ್ತೊಂಬತ್ತನೆಯ ಶತಮಾನದ ನಡುಗಾಲದಲ್ಲಿ ಜನ್ಮ ತಳೆದ ಇದು ಇಂದು ಶಾಸ್ತ್ರಶುದ್ಧವಾಗಿ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡು ಬೆಳೆದು ನಿಂತಿದೆ. ಮಿಷನರಿಗಳು ಬ್ರಿಟಿಷ ಅಧಿಕಾರಿಗಳು, ದೇಶಿ ಪಂಡಿತರು, ವಿದ್ವಾಂಸರು, ಸಂಶೋಧಕರ ಗ್ರಂಥಸಂಪಾದನೆಯ ಮೇಲಿನ ಆಸಕ್ತಿ, ವಿಸ್ತಾರವಾದ ಓದು ಕಾರಣವಾಗಿ ಭಾರತೀಯ ನೆಲೆಯಲ್ಲಿ ಕನ್ನಡ ಗ್ರಂಥಸಂಪಾದನೆಗೆ ವಿಶೇಷತೆ ಪ್ರಾಪ್ತವಾಗಿದೆ. ಹರ್ಮನ್ ಮೋಗ್ಲಿಂಗ್, ಬಿ.ಎಲ್.ರೈಸ್, ಎಫ್.ಕಿಟೆಲ್, ಎಸ್.ಜಿ.ನರಸಿಂಹಾಚಾರ್, ಫ.ಗು.ಹಳಕಟ್ಟಿ, ಡಿ.ಎಲ್. ನರಸಿಂಹಾಚಾರ್, ಎಂ.ಎಂ.ಕಲಬುರ್ಗಿ, ಬಿ.ಎಸ್.ಸಣ್ಣಯ್ಯ, ವೀರಣ್ಣ ರಾಜೂರ, ವೈ.ಸಿ.ಭಾನುಮತಿ ಮೊದಲಾದ ವಿದ್ವಾಂಸರು ಕನ್ನಡ ಗ್ರಂಥಸಂಪಾದನೆಯಲ್ಲಿ ಕೃಷಿ ಮಾಡಿದ್ದಾರೆ. ಆ ಮೂಲಕ ಕನ್ನಡ ಗ್ರಂಥಸಂಪಾದನೆ ಕ್ಷೇತ್ರದ ಕ್ಷಿತಿಜದ ವೈವಿಧ್ಯತೆಗೆ-ವಿಸ್ತಾರಕ್ಕೆ ಕಾರಣರಾಗಿದ್ದಾರೆ.

ಎಂ.ಎಂ.ಕಲಬುರ್ಗಿ, ಕನ್ನಡ ಗ್ರಂಥಸಂಪಾದನಶಾಸ್ತ್ರದಲ್ಲಿ ಬಹು ದೊಡ್ಡ ಹೆಸರು. ಕನ್ನಡ ಭಾಷೆ-ಸಾಹಿತ್ಯ-ಸಮಾಜ-ಸಂಸ್ಕೃತಿ-ಇತಿಹಾಸ ಮೊದಲಾದ ಕ್ಷೇತ್ರಗಳಲ್ಲಿ ಅಧ್ಯಯನ ಕೈಕೊಂಡು ಅನೇಕ ಹೊಸ ಹೊಸ ಸಂಗತಿಗಳನ್ನು ಶೋಧಿಸಿದವರು. ಆ ಮೂಲಕ ಕನ್ನಡ-ಕನ್ನಡಿಗ-ಕರ್ನಾಟಕತ್ವದ ಮಹತ್ವವನ್ನು ಜಗತ್ತಿಗೆ ತೋರಿಸಿಕೊಟ್ಟ ಮಹಾನ್ ಸಂಶೋಧಕ. ಕಳೆದ ಐವತ್ತು ವರ್ಷಗಳಲ್ಲಿ ಅವರು ಕೈಕೊಂಡ ಸಂಶೋಧನೆಯ ವ್ಯಾಪ್ತಿ ವಿಶಿಷ್ಟವಾದುದು. ಗ್ರಂಥಸಂಪಾದನೆ, ಕಲಬುರ್ಗಿಯವರಿಗೆ ಪ್ರಥಮ ಆದ್ಯತೆ. ಗ್ರಂಥಸಂಪಾದನ ವಿಧಾನಗಳನ್ವಯ ಪ್ರಾಚೀನ ಕಾವ್ಯ-ಪುರಾಣಗಳ ಪರಿಷ್ಕರಣೆ, ವಿಶೇಷವಾಗಿ ಸ್ಥಳೀಯ ಚರಿತ್ರೆಯನ್ನು ನಿರೂಪಿಸುವಂಥ ಕೃತಿ(ಕುಮಾರರಾಮನ ಸಾಂಗತ್ಯಗಳು, ಸಿರುಮನ ಚರಿತೆಗಳು)ಗಳನ್ನು ಶೋಧಿಸಿ ಪರಿಷ್ಕರಿಸಿರುವುದು, ಕನ್ನಡ ಗ್ರಂಥಸಂಪಾದನೆಯನ್ನು ಶಾಸ್ತ್ರೀಯ ನೆಲೆ(ಕನ್ನಡ ಗ್ರಂಥಸಂಪಾದನಶಾಸ್ತ್ರ)ಯಲ್ಲಿ ರಚನೆ ಮಾಡಿರುವುದು ಕಲಬುರ್ಗಿಯವರ ವಿಶೇಷತೆಯಾಗಿದೆ.

ಕಲಬುರ್ಗಿಯವರ ಒಟ್ಟು ಕೃತಿಗಳ ಸಂಖ್ಯೆ ನೂರನ್ನು ದಾಟಿದೆ. ಈ ನೂರರಲ್ಲಿ ನಾಲ್ವತ್ತು ಪ್ರಾಚೀನ ಕಾವ್ಯ-ಪುರಾಣಗಳು ಗ್ರಂಥಸಂಪಾದನೆಗೆ ಸಂಬಂಧಿಸಿವೆ. ಈ ಸಂಖ್ಯೆಯನ್ನು ಗಮನಿಸಿದರೆ ಕಲಬುರ್ಗಿಯವರಿಗೆ ಗ್ರಂಥಸಂಪಾದನಶಾಸ್ತ್ರದತ್ತ ಹೆಚ್ಚು ಒಲವಿತ್ತು ಎಂಬುದು ಮೇಲ್ನೋಟಕ್ಕೆ

Scanned with CamScanner

ನೇಮ್ಯವಾಗುತ್ತದೆ. ಇವು ಚಂಪೂ-ವಚನ-ದೇಶಿ-ಚಾರಿತ್ರಿಕ-ಕುರುಬ ಸಮುದಾಯ-ಸ್ಥಳೀಯ ಇತಿಹಾಸವನ್ನು ನಿರೂಪಿಸುವ ಕೃತಿಗಳಾಗಿವೆ.

ಈ ಎಲ್ಲ ಕೃತಿಗಳು ಒಂದೆಡೆ ಲಭ್ಯವಾಗಬೇಕೆನ್ನುವ ಉದ್ದೇಶದಿಂದ ವಿಜಯಪುರದ ಬಿ.ಎಲ್.ಡಿ.ಇ. ಸಂಸ್ಥೆಯ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನದಲ್ಲಿ ಡಾ.ವೀರಣ್ಣ ರಾಜೂರ ಅವರ ಪ್ರಧಾನ ಸಂಪಾದಕತ್ವದಲ್ಲಿ "ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣಾ ಯೋಜನೆ"ಯನ್ನು ಅನುಷ್ಠಾನಗೊಳಿಸಿದೆ. ಈ ಯೋಜನೆಯನ್ವಯ ಸಂಪುಟ-೧೦, ಕಾವ್ಯ ಸಾಹಿತ್ಯ : ಭಾಗ-ಮೂರನ್ನು ಸಂಪಾದಿಸಿ ಸಿದ್ಧಪಡಿಸಿಕೊಡುವ ಜವಾಬ್ದಾರಿ ನನ್ನದಾಗಿದೆ. ಈ ಸಂಪುಟವು ಗುಂಡ ಬಸವೇಶ್ವರ ಪುರಾಣ, ಕೊಡೆಕಲ್ಲ ವಚನ ವಾಕ್ಯ, ಸಿದ್ಧಮಂಕ ಚರಿತೆ, ತಗರ ಪವಾಡ -ಹೀಗೆ ನಾಲ್ಕು ಕೃತಿಗಳನ್ನು ಒಳಗೊಂಡಿದೆ. ಉಪೇಕ್ಷಿತ ಮತ್ತು ಅಪ್ರಕಟಿತ ಕಾವ್ಯಪುರಾಣಗಳ ಶೋಧ, ಪರಿಷ್ಕರಣೆ ಮತ್ತು ಪ್ರಕಟಣೆಯಲ್ಲಿ ಕಲಬುರ್ಗಿಯವರಿಗೆ ತುಂಬ ಆಸಕ್ತಿ ಮತ್ತು ಕುತೂಹಲ. ಅದರಲ್ಲಿಯೂ ಸ್ಥಳೀಯ ಇತಿಹಾಸ, ಸಮುದಾಯ ಸಂಸ್ಕೃತಿಯನ್ನು ವಿವರಿಸುವಂಥ ಕೃತಿಗಳೆಂದರೆ ಕಲಬುರ್ಗಿಯವರಿಗೆ ಎಲ್ಲಿಲ್ಲದ ಉತ್ಸಾಹ. ಹೀಗಾಗಿ ಕುಮಾರರಾಮ, ಸಿರುಮ, ಇಮ್ಮಡಿ ಚಿಕ್ಕಭೂಪಾಲ, ನಿಂಬಸಾಮಂತ, ಕೊಡೇಕಲ್ ಬಸವಣ್ಣ, ಗುಂಡಬಸವಣ್ಣ ಮೊದಲಾದ ಚಾರಿತ್ರಿಕ ವ್ಯಕ್ತಿಗಳ ಕುರಿತು ರಚನೆಗೊಂಡಿರುವ ಕಾವ್ಯಗಳು ಕಾಲನ ಗರ್ಭದಲ್ಲಿ ಅಡಗಿಕುಳಿತಿದ್ದವು. ಅಂಥ ಕೃತಿಗಳತ್ತ ಪಂಡಿತರಾಗಲಿ, ವಿದ್ವಾಂಸರಾಗಲಿ ಯಾರೊಬ್ಬರೂ ಗಮನಹರಿಸಿರಲಿಲ್ಲ. ಆದರೆ ಕಲಬುರ್ಗಿಯವರಿಗೆ ಮಾತ್ರ ಇಂಥ ಮಹತ್ವದ ಕೃತಿಗಳನ್ನು ಶೋಧಿಸಿ ಪರಿಷ್ಕರಿಸಲು ಸಾಧ್ಯವಾಗಿದೆ ಎಂಬುದು ಇಲ್ಲಿ ಬಹುಮುಖ್ಯವಾಗುತ್ತದೆ. ಈಗ ಈ ನಾಲ್ಕು ಕೃತಿಗಳ ಕುರಿತು ಕೆಲವು ಸಂಗತಿಗಳನ್ನು ತಿಳಿದುಕೊಳ್ಳೋಣ.

೧. ತಗರ ಪವಾಡ :

ತಗರ ಪವಾಡ, ಕುರುಬ ಸಮುದಾಯದ ಸಂಸ್ಕೃತಿಯನ್ನು ಅನಾವರಣಗೊಳಿಸುವ ಮತ್ತೊಂದು ಕಾವ್ಯ ೮ ಸಂಧಿ ೬೪೯ ಸಾಂಗತ್ಯ ಪದ್ಯಗಳನೊಳಗೊಂಡ ಈ ಕಾವ್ಯವು ಕುರುಬರ ಗುರುಪರಂಪರೆಯಲ್ಲಿ ಒಂದಾದ ರೇವಣಸಿದ್ಧ ಸಂಪ್ರದಾಯದ ಶಾಂತಮುತ್ತಯ್ಯನ ಚರಿತ್ರೆಯನ್ನು ತಿಳಿಸಿಕೊಡುತ್ತದೆ. ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆಯನ್ನು ನೀಡಿದ್ದು, ಆತ ಸತ್ತ ಕುರಿಯನ್ನು ಬದುಕಿಸಿದ್ದು, ಕಲ್ಯಾಣದಿಂದ ಹೊರಹಾಕಲ್ಪಟ್ಟಿದ್ದ ಕುರುಬರನ್ನು ಒಳಗೆ ಕರೆದುಕೊಂಡದ್ದು, ಬಸವಣ್ಣನು ಕುರುಬರಿಗೆ ಶಾಂತಮುತ್ತಯ್ಯನು ಗುರು ಎಂದು ನೇಮಕಮಾಡಿದ್ದು, ಗುರುತನದ ಕುರುಹಾಗಿ ಮೂರೇಣಿನ ಕಂಥೆಯನ್ನು ನೀಡಿದ್ದು-ಈ ಎಲ್ಲ ಸಂಗತಿಗಳನ್ನು ತಗರ ಪವಾಡ ಕೃತಿಯು ಸ್ಥೂಲವಾಗಿ ನಿರೂಪಿಸುತ್ತದೆ.

ಸಿದ್ಧಮಂಕ ಚರಿತೆ ಮತ್ತು ತಗರ ಪವಾಡ ಕೃತಿಗಳ ವಿಷಯ ಒಂದೇ ಆಗಿದ್ದರೂ ಕುರುಬ ಸಮುದಾಯದ ಎರಡು ಭಿನ್ನ ಗುರುಪರಂಪರೆಗಳ ಚರಿತ್ರೆ ಈ ಎರಡೂ ಕಾವ್ಯಗಳಲ್ಲಿ ಅಡಗಿದೆ. ತಗರ ಪವಾಡದಲ್ಲಿ ಶಾಂತಮುತ್ತಯ್ಯ, ಸಿದ್ಧಮಂಕ ಚರಿತ್ರೆಯಲ್ಲಿ ಸಿದ್ಧಮಂಕ ಮುಖ್ಯ ನಾಯಕರಾಗಿ ಕಾಣಿಸಿಕೊಳ್ಳುತ್ತಾರೆ. ಈಗಲೂ ಸಹ ಕುರುಬ ಸಮುದಾಯದಲ್ಲಿ ಈ ಎರಡೂ ಸಂಪ್ರದಾಯಗಳು ಅಸ್ತಿತ್ವದಲ್ಲಿರುವುದನ್ನು ನಾವು ಕಾಣಬಹುದು. ಈ ಎರಡೂ ಕಾವ್ಯಗಳ ಮುಖ್ಯ ಕೇಂದ್ರ ಸರೂರ. ಇದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಒಂದು ಗ್ರಾಮ. ಈ ಗ್ರಾಮದಲ್ಲಿ ಎರಡೂ ಸಂಪ್ರದಾಯಗಳ ಗುರುಪರಂಪರೆ ಈಗಲೂ ಇದೆ. ಹೀಗಾಗಿ ಮಂಕೊಡೆಯರು(ಸಿದ್ಧರಾಮ),

Scanned with CamScanner

ಶಾಂತೊಡೆಯರು(ರೇವಣಸಿದ್ಧ) ಕುರುಬರಿಗೆ ಗುರುಸ್ಥಾನದಲ್ಲಿದ್ದಾರೆ. ಈ ಸಂಪ್ರದಾಯದ ಮುಂದುವರಿಕೆಯಾಗಿ ಒಡೆಯರು(ಗುರುವಿನವರು) ಕುರುಬರಿಗೆ ಗುರುಗಳಾಗಿ ಧಾರ್ಮಿಕ-ಸಾಮಾಜಿಕ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ಇಂಥ ಎಲ್ಲ ವಿವರಗಳು ಈ ಎರಡೂ ಕಾವ್ಯಗಳಿಂದ ಗೊತ್ತಾಗುತ್ತವೆ. ತಗರ ಪವಾಡ ಕಾವ್ಯವನ್ನು ಎಂ.ಎಂ.ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಎಫ್.ಟಿ.ಹಳ್ಳಿಕೇರಿ ಅವರು ಮೂರು ಹಸ್ತಪ್ರತಿಗಳ ನೆರವಿನಿಂದ ಪರಿಷ್ಕರಿಸಿದ್ದಾರೆ. ಪ್ರಸ್ತಾವನೆಯಲ್ಲಿ ಕೃತಿಯ ಕಥಾಸಾರ, ಕಾವ್ಯದ ಚಾರಿತ್ರಿಕ ಮಹತ್ವವನ್ನು ಚರ್ಚೆ ಮಾಡಲಾಗಿದೆ. ಅನುಬಂಧದಲ್ಲಿರುವ ಶಾಸನಗಳು ತಗರ ಪವಾಡ ಕಥಾವಸ್ತುವಿಗೆ ಪೂರಕವಾದ ಮಾಹಿತಿಗಳನ್ನು ಒದಗಿಸುತ್ತವೆ.

೨. ಸಿದ್ಧಮಂಕ ಚರಿತೆ :

ಕುರುಬ ಸಮುದಾಯದ ಗುರುಪರಂಪರೆಯಲ್ಲಿ ಬಹುಮುಖ್ಯವಾಗಿ ರೇವಣಸಿದ್ಧ-ಸಿದ್ಧರಾಮ-ಅಮೋಘಸಿದ್ಧ ಸಂಪ್ರದಾಯಗಳಿವೆ. ಈ ಸಂಪ್ರದಾಯಗಳನ್ನು ಕುರಿತಂತೆ ಕನ್ನಡದಲ್ಲಿ ಕಾವ್ಯಪುರಾಣಗಳು ರಚನೆಗೊಂಡಿವೆ. ಜನಪದ ಹಾಲುಮತ ಮಹಾಕಾವ್ಯ, ತಗರ ಪವಾಡ, ಸಿದ್ಧಮಂಕ ಚರಿತೆ, ಮರುಳಸಿದ್ಧನ ಕಾವ್ಯ, ಹಾಲುಮತೋತ್ತೇಜಕ ಪುರಾಣ, ಮಾಳಿಂಗರಾಯನ ಕಾವ್ಯ ಮೊದಲಾದ ಕಾವ್ಯ-ಪುರಾಣಗಳು ರಚನೆಗೊಂಡಿವೆ. ಹೀಗಿದ್ದೂ ಇವು ಪ್ರಕಟಗೊಳ್ಳುತ್ತ ಬಂದಿರುವುದು ಇತ್ತೀಚಿನ ದಶಕಗಳಿಂದ.

ಸಿದ್ಧರಾಮ ಸಂಪ್ರದಾಯದ ಗುರುಪರಂಪರೆಯನ್ನು ತಿಳಿಸುವ ಆಕರಗಳಲ್ಲಿ ಸಿದ್ಧಮಂಕ ಚರಿತೆಗೆ ವಿಶೇಷ ಮಹತ್ವವಿದೆ. ನಾಲ್ಕು ಸಂಧಿ ೬೨೬ ಸಾಂಗತ್ಯ ಪದ್ಯಗಳನ್ನು ಒಳಗೊಂಡಿದೆ. ಸಿದ್ಧರಾಮನ ಸೊಲ್ಲಾಪುರ, ಬಸವಣ್ಣನ ಕಲ್ಯಾಣ, ಮಂಕಸಿದ್ಧನ ಸರೂರು ಕ್ಷೇತ್ರಗಳಲ್ಲಿ ಈ ಕಾವ್ಯದ ಕಥೆ ವ್ಯಾಪಿಸಿಕೊಂಡಿದೆ. ಕಥಾನಾಯಕನಾದ ಮಂಕಸಿದ್ಧ ಅಥವಾ ಸಿದ್ಧಮಂಕನು ಸೊಲ್ಲಾಪುರ ಸಿದ್ಧರಾಮನ ಪರಮ ಶಿಷ್ಯನು. ಈ ಶಿಷ್ಯನ ಗುರುಭಕ್ತಿ, ಸಮಾಜ ಪ್ರೇಮವನ್ನು ಈ ಕಾವ್ಯ ವಿವರಿಸುತ್ತದೆ. ಕುರುಬರಿಗೆ ಗುರು ಯಾರು ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಈ ಕಾವ್ಯ ಮುನ್ನಡೆಯುತ್ತದೆ. ಸೊಲ್ಲಾಪುರದ ಸಿದ್ಧರಾಮ, ಆತನ ಶಿಷ್ಯ ಸಿದ್ಧಮಂಕ, ಆತನ ಅನುಯಾಯಿಗಳಾದ ಮಂಕೊಡೆಯರು ಈ ಪರಂಪರೆಯ ವಾರಸುದಾರರು ಎಂಬುದನ್ನು ಎಳೆಎಳೆಯಾಗಿ ಈ ಕಾವ್ಯ ನಮ್ಮ ಮುಂದೆ ಬಿಚ್ಚಿಡುತ್ತದೆ.

ಕನ್ನಡದ ಪ್ರಸಿದ್ಧ ವಿದ್ವಾಂಸರಾಗಿದ್ದ ಡಿ.ಎಲ್.ನರಸಿಂಹಾಚಾರ್ ಅವರು ಸಿದ್ಧರಾಮ ಚಾರಿತ್ರದ ಪೀಠಿಕೆಯಲ್ಲಿ ಇನ್ನೊಂದು ಸಿದ್ಧರಾಮ ಚರಿತ್ರೆಯ ಬಗ್ಗೆ ಉಲ್ಲೇಖಿಸಿದ್ದರು. ಆ ಉಲ್ಲೇಖವನ್ನು ಗಮನಿಸಿ ಎಂ.ಎಂ. ಕಲಬುರ್ಗಿಯವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರದ ಏಕೈಕ ಹಸ್ತಪ್ರತಿಯ ಸಹಾಯದಿಂದ ಸಿದ್ಧಮಂಕ ಚರಿತೆ ಕಾವ್ಯವನ್ನು ವೈ.ಸಿ.ಭಾನುಮತಿ ಅವರೊಂದಿಗೆ ಪರಿಷ್ಕರಿಸಿ ಪ್ರಕಟಿಸಿದ್ದಾರೆ(೨೦೦೪). ಪ್ರಸ್ತಾವನೆಯಲ್ಲಿ ಕವಿಯ ಇತಿವೃತ್ತ, ಕೃತಿಯ ಕಥಾಸಾರ, ಕೃತಿಯಲ್ಲಿರುವ ಚಾರಿತ್ರಿಕ ಸಾಮಾಜಿಕ ಧಾರ್ಮಿಕ ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ಶಾಸನ-ಸನದುಗಳಲ್ಲಿರುವ ಸಂಗತಿಗಳನ್ನು ಬಳಸಿಕೊಂಡು ಸಿದ್ಧರಾಮ ಸಂಪ್ರದಾಯದ ವಿಶೇಷತೆಯನ್ನು ಗುರುತಿಸಲಾಗಿದೆ. ಅನುಬಂಧದಲ್ಲಿ ಕೊಟ್ಟಿರುವ ಟಗರ ಪವಾಡ ಹೆಸರಿನ ದಾಖಲೆ(ಸನದು)ಯು ಕೃತಿಯ ಕಥೆಗೆ ಪೂರಕವಾಗಿದೆ.

Scanned with CamScanner

೩. ಗುಂಡ ಬಸವೇಶ್ವರ ಚರಿತ್ರೆ :

ಧರ್ಮಕಲ್ಯಾಣದ ಸ್ಥಾಪಕನಾದ ಗುಂಡಬಸವಣ್ಣನ ಚರಿತ್ರೆಯನ್ನು ಗುಂಡಬಸವೇಶ್ವರ ಪುರಾಣ ನಿರೂಪಿಸುತ್ತದೆ. ಏಳು ಸಂಧಿ ೭೯ ಕಂದಪದ್ಯಗಳಲ್ಲಿ ಗುಂಡಬಸವಣ್ಣನು ಶಿವಸನ್ನಿಧಿಯಲ್ಲಿದ್ದುದು, ಅಲ್ಲಿಂದ ಭೂಲೋಕಕ್ಕೆ ಬಂದುದು, ಶಿವನ ಅವತಾರವಾಗಿ ಗುಂಡಬಸವ ಹುಟ್ಟಿದುದು, ಮನಸ್ಸಿಲ್ಲದ ಮನಸ್ಸಿನಿಂದ ಮದುವೆಯಾಗಿ ಸಂಸಾರ ನಡೆಸುತ್ತ ಕದಳಿಯಲ್ಲಿ ತಪಸ್ಸು ಮಾಡಿ ಮರಳಿ ಗ್ರಾಮಕ್ಕೆ ಬಂದುದು, ಮುಂದಿನ ದಿನಗಳಲ್ಲಿ ಕೇಡು ಬರುವುದನ್ನು ಸಾರುತ್ತ ಪವಾಡ ಮೆರೆಯುತ್ತ ದೀಕ್ಷೆ ನೀಡಲು ಕರ್ತೃರೂಪದಲ್ಲಿ ಬಂದುದು. ಊರ ಹೊರಗೆ ಮಠವನ್ನು ಕಟ್ಟಿ ಅದಕ್ಕೆ ಧರ್ಮಕಲ್ಯಾಣ ಎಂದು ಹೆಸರಿಟ್ಟು ಭಕ್ತಾದಿಗಳಿಗೆ ಬೋಧಿಸುತ್ತ ಅಂತರಂಗ ಬಹಿರಂಗ ಪೂಜೆ ಮಾಡುತ್ತ ಡಂಗುರ ಸಾರುತ್ತ ತಪಸ್ಸು ಮಾಡಿದ ಕಥನಗಳನ್ನು ವಿವರವಾಗಿ ಕವಿ ಹೇಳುತ್ತ ಹೋಗುತ್ತಾನೆ, ಮರ್ತ್ಯದಲ್ಲಿದ್ದದ್ದು ಸಾಕು ಮರಳಿ ಬಾ ಎಂದು ಶಿವನು ಆದೇಶ ನೀಡುತ್ತಾನೆ. ಆ ಆದೇಶದಂತೆ ಗುಂಡ ಬಸವೇಶ ಹೆಂಡಂದಿರು ಮಕ್ಕಳನ್ನು ಕರೆದು ಬುದ್ಧಿವಾದ ಹೇಳಿ ಲಿಂಗದೊಳಗೆ ಐಕ್ಯನಾದನು. ಗುಂಡಯ್ಯನ ಗದ್ದುಗೆ ವರ ನೀಡುವ ತಾಣವಾಯಿತು. ಒಟ್ಟಿನಲ್ಲಿ ಪ್ರಾದೇಶಿಕ ಚರಿತ್ರೆಯನ್ನು ನಿರೂಪಿಸುವ ಈ ಕೃತಿಯು ಭೌಗೋಲಿಕ-ಸಾಂಸ್ಕೃತಿಕ ಮತ್ತು ಧಾರ್ಮಿಕ ದೃಷ್ಟಿಯಿಂದ ಮಹತ್ವವನ್ನು ಪಡೆದುಕೊಂಡಿದೆ. ಇಂಥ ವಿಶಿಷ್ಟ ಕೃತಿಯನ್ನು ಏಕೈಕ ಕಾಗದ ಹಸ್ತಪ್ರತಿಯಿಂದ ಕಲಬುರ್ಗಿಯವರು ಮತ್ತು ಸಂಗಪ್ಪಯ್ಯನವರು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಪ್ರಸ್ತಾವನೆಯಲ್ಲಿ ಗುಂಡಬಸವೇಶ್ವರ ಕಾವ್ಯದ ವಿಶೇಷತೆಯನ್ನು ಸ್ಥೂಲವಾಗಿ ಚರ್ಚಿಸಿದ ಸಂಪಾದಕರು, ಈ ಕುರಿತು ಕೈಕೊಳ್ಳಬಹುದಾದ ಅಧ್ಯಯನದ ಸಾಧ್ಯತೆಗಳ ಬಗ್ಗೆಯೂ ಸೂಚನೆ ಕೊಟ್ಟಿದ್ದಾರೆ.

೪. ಕೊಡೇಕಲ್ಲ ವಚನ ವಾಕ್ಯ (ಸಂಪುಟ:೪):

ಕಡೆಯ ಕಲ್ಯಾಣದ ನಾಯಕನದ ಕೊಡೆಕಲ್ಲ ಬಸವಣ್ಣನ ಕುರಿತು ಈವರೆಗೆ ಕೊಡೇಕಲ್ಲ ಸಂಪ್ರದಾಯ(ಪಿಎಚ್.ಡಿ.ಮಹಾಪ್ರಬಂಧ), ಕೊಡೇಕಲ್ಲ ವಚನ ವಾಕ್ಯ ಸಂಪುಟ:೧(ಬಸವಲಿಂಗ ಸೊಪ್ಪಿಮಠ), ಕೊಡೇಕಲ್ಲ ವಚನ ವಾಕ್ಯ ಸಂಪುಟ:೨ ಮತ್ತು ೩(ಶಿವಾನಂದ ವಿರಕ್ತಮಠ) ಪ್ರಕಟವಾಗಿದ್ದವು. ಅವುಗಳ ಮುಂದುವರಿಕೆಯಾಗಿ ಕೊಡೇಕಲ್ಲ ವಚನವಾಕ್ಯ(ಸಂಪುಟ:೪) ಕೃತಿಯನ್ನು ಎಂ.ಎಂ. ಕಲಬುರ್ಗಿಯವರು ಸಂಗಪ್ಪಯ್ಯನವರೊಂದಿಗೆ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಇದು ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಯ ಸ್ವರವಚನಗಳು ಹಾಗೂ ಶಹಪೂರ ಹಸ್ತಪ್ರತಿಯ ಸ್ವರವಚನಗಳು ಎಂಬ ಎರಡು ಭಾಗಗಳನ್ನು ಒಳಗೊಂಡಿದೆ. ಮೊದಲನೆಯ ಭಾಗದಲ್ಲಿ ೬೩, ಎರಡನೆಯ ಭಾಗದಲ್ಲಿ ೬೨ ಹೀಗೆ ೧೨೫ ಸ್ವರವಚನಗಳ ಸಂಪುಟ ಇದಾಗಿದೆ. ಈ ಸ್ವರವಚನಗಳಲ್ಲಿ ನೀತಿ ತತ್ವ ಕಾಲಜ್ಞಾನ ಹಾಗೂ ಚಾರಿತ್ರಿಕ ವಿಷಯಗಳ ನಿರೂಪಣೆಯಿದೆ. ಪ್ರಸ್ತಾವನೆಯಲ್ಲಿ ಕಡೆಯ ಕಲ್ಯಾಣ ಅಥವಾ ಕೊಡೇಕಲ್ ಸಂಪ್ರದಾಯದ ಬಗ್ಗೆ ಸ್ಥೂಲವಾಗಿ ವಿವರಿಸುತ್ತ, ಇಲ್ಲಿ ಉಕ್ತವಾಗಿರುವ ಸ್ವರವಚನಗಳ ವಿಶೇಷತೆಯನ್ನು, ಬಳಸಿಕೊಂಡ ಹಸ್ತಪ್ರತಿಗಳನ್ನು ಕುರಿತು ಸಂಪಾದಕರು ಚರ್ಚಿಸಿದ್ದಾರೆ.

ಕೃತಜ್ಞತೆ :

ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂಶೋಧನೆಯನ್ನು ಮುಖ್ಯವಾಗಿಟ್ಟುಕೊಂಡು ವಿಜಯಪುರದ ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಸ್ಥಾಪನೆಯಾಗಿದೆ. ಈಗಾಗಲೇ ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣೆ ಹಾಗೂ ಆದಿಲಶಾಹಿ ಸಾಹಿತ್ಯ ಪ್ರಕಟಣ ಯೋಜನೆಗಳನ್ನು

Scanned with CamScanner

ಯಶಸ್ವಿಯಾಗಿ ಕೈಗೊಂಡ ಈ ಕೇಂದ್ರವು ಈಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನದಿಂದ "ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣಾ ಯೋಜನೆ"ಯನ್ನು ರೂಪಿಸಿದೆ. ಈ ಯೋಜನೆಯಲ್ಲಿ ೨೩ನೆಯ ಸಂಪುಟ(ಕಾವ್ಯ ಸಾಹಿತ್ಯ-ಭಾಗ:೫)ವಾಗಿ ಗುರುಗಳಾದ ಎಂ.ಎಂ. ಕಲಬುರ್ಗಿಯವರು ಪರಿಷ್ಕರಿಸಿದ ತಗರ ಪವಾಡ, ಸಿದ್ಧಮಂಕ ಚರಿತೆ, ಗುಂಡ ಬಸವೇಶ್ವರ ಪುರಾಣ ಹಾಗೂ ಕೊಡಕಲ್ಲ ವಚನ ವಾಕ್ಯ ಕೃತಿಗಳನ್ನು ಇಲ್ಲಿ ಸಂಪಾದಿಸಿಕೊಟ್ಟಿದ್ದೇನೆ. ಈ ಯೋಜನೆಯಲ್ಲಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಟ್ಟ ನನ್ನ ಗುರುಗಳು ಹಾಗೂ ಈ ಯೋಜನೆಯ ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ ಅವರಿಗೆ ಗೌರವಪೂರ್ವಕ ನಮನಗಳು. ಸಂಪಾದನೆಯ ಸಂದರ್ಭದಲ್ಲಿ ಸೂಕ್ತ ಸಲಹೆ-ಸಹಕಾರ ನೀಡಿದ ಮಾತೋಶ್ರೀ ಉಮಾದೇವಿ ಎಂ. ಕಲಬುರ್ಗಿ ಹಾಗೂ ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್.ಮದಭಾವಿ ಅವರಿಗೆ ಕೃತಜ್ಞತೆಗಳು.

❖❖

Scanned with CamScanner

*

ಪರಿವಿಡಿ

೧. ತಗರ ಪವಾಡ	೧-೧೬೬
೨. ಸಿದ್ಧಮಂಕ ಚರಿತೆ	೧೬೭-೩೧೬
೩. ಗುಂಡಬಸವೇಶ್ವರ ಚರಿತ್ರೆ	೩೧೭-೪೯೦
೪. ಕೊಡೆಕಲ್ಲ ವಚನ ವಾಕ್ಯ	೪೯೧-೫೩೯

Scanned with CamScanner



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಕ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಧಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಧಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ಶುಂಬಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

Scanned with CamScanner

ಕೋಳೂರು ಶಂಕರ ಕವಿಯ

ಮಾಧವಾಂಕ ಚರಿತೆ

ಸಂಪಾದಕ
■ ಡಾ. ಎಫ್. ಟಿ. ಹಳ್ಳಿಕೇರಿ



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಕ್ಷಿಣ ಭಾರತದ ಭಾಷೆ ಸಾಹಿತ್ಯ ಮತ್ತು ಶಿಲ್ಪಗಳಲ್ಲಿ ಸತ್ಯೇಂದ್ರಚೋಳನ ಕಥೆ ಪ್ರಸಿದ್ಧವಾಗಿದೆ. ವಿಶೇಷವಾಗಿ ತಮಿಳು ಸಾಹಿತ್ಯದಲ್ಲಿ ಕುದಿಯೊಡೆದ ಈ ಕಥೆ ಮುಂದೆ ಕನ್ನಡ ತೆಲುಗು ಮಲಯಾಳ ಸಾಹಿತ್ಯದ ಅನೇಕ ಕವಿಗಳ ಕಾವ್ಯಕ್ಕೆ ವಸ್ತುವಾಗಿದೆ. ಕನ್ನಡದ ಮಧ್ಯಕಾಲೀನ ಸಾಹಿತ್ಯ ಸಂದರ್ಭದಲ್ಲಿಯಂತೂ ಈ ಕಥೆ ವೈವಿಧ್ಯಮಯವಾಗಿ ಬೆಳವಣಿಗೆಯಾಗಿದೆ, ಹರಿಹರ(ಮನುಚೋಳ ರಗಳೆ). ಗುಪ್ಪೆ ಮಲ್ಲಣಾರ್ಯ(ಭಾವಚಿಂತಾರತ್ನ). ಷಡಕ್ಷರದೇವ(ರಾಜಶೇಖರ ವಿಳಾಸ). ಧೂಪದಹಳ್ಳಿ ಶಾಂತಕವಿ(ಸತ್ಯೇಂದ್ರಚೋಳ ಚಾರಿತ್ರ). ಕೋಳೂರು ಶಂಕರಕವಿ(ಮಾಧವಾಂಕ ಚರಿತೆ) ಮೊದಲಾದವರು ಈ ಕಥೆಯನ್ನಾಧರಿಸಿ ಕಾವ್ಯಗಳನ್ನು ರಚನೆ ಮಾಡಿದ್ದಾರೆ. ಮನುಷ್ಯನು ನ್ಯಾಯ ನೀತಿ ಧರ್ಮ ಸತ್ಯ ಸಾಧನೆಗಳಿಂದ ಪಾರಮಾರ್ಥಿಕ ಬದುಕನ್ನು ಪರಿಪೂರ್ಣವಾಗಿ ಅನುಭವಿಸುತ್ತಾನೆ ಎಂಬುದನ್ನು ಮಾಧವಾಂಕ ಚರಿತೆ ಚೆನ್ನಾಗಿ ತಿಳಿಸಿಕೊಡುತ್ತದೆ. ನಡುಗನ್ನಡ ಭಾಷೆ ಮತ್ತು ದೇಶೀಯ ಸೊಗಡಿನಿಂದ ಕೂಡಿದ ಈ ಕಾವ್ಯ ಕವಿಯ ಸಮಕಾಲೀನ ಸಂದರ್ಭದ ಸಾಮಾಜಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ಅನಾವರಣಗೊಳಿಸಿರುವುದನ್ನು ಓದುಗರು ಗಮನಿಸಬಹುದು.

ಈವರೆಗೆ ಅಪ್ರಕಟಿತ ರೂಪದಲ್ಲಿದ್ದ ಕೋಳೂರು ಶಂಕರಕವಿಯ ಮಾಧವಾಂಕ ಚರಿತೆಯನ್ನು ಮೂರು ಹಸ್ತಪ್ರತಿಗಳ ನೆರವಿನಿಂದ ಪರಿಷ್ಕರಿಸಿದ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಎಫ್.ಟಿ. ಹಳ್ಳಿಕೇರಿ ಅವರಿಗೆ ಹಾರ್ದಿಕ ಅಭಿನಂದನೆಗಳು.

◆ ಡಾ. ಸ.ಚಿ.ರಮೇಶ
ಕುಲಪತಿ

ರೂ. ೩೬೦/-

978-93-87135-60-4

Scanned with CamScanner

ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆ–೫೭

ಕೋಳೂರು ಶಂಕರಕವಿಯ

ಮಾಧವಾಂಕ ಚರಿತೆ

ಸಂಪಾದಕ
ಡಾ. ಎಫ್.ಟಿ. ಹಳ್ಳಿಕೇರಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

Scanned with CamScanner

KOOLUURU SHANKARA KAVIYA

MAADHAVAANKA CHARITE

Edited by
Dr. F.T. Hallikeri
Professor, Dept. of Manuscriptology
Kannada University Hampi
Vidyaranya 583 276
Cell: 94481 84022

Published by
H.D. Prashanth
Director, Prasaranga
Kannada University Hampi
Vidyaranya 583 276

Pages: 48+350 Price: 360/-

ISBN : 978-93-87135-60-4

First Impression: 2020

© ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೆಲೆ: ರೂ. ೩೬೦/-

ಮುಖಪುಟ: ಕೆ. ಕೆ. ಮಕಾಳಿ

ಅಕ್ಷರ ಜೋಡಣೆ
ಯಾಜಿ ಪ್ರಕಾಶನ, ಹೊಸಪೇಟೆ
Cell: 94810 42400

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ದೂರವಾಣಿ: ೦೮೫೩೯-೨೮೦೪೧೦

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಆರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ: ೦೮೦-೨೨೩೭೨೩೩೮

ಮುದ್ರಣ
ಮಾರ್ಕೆಟಿಂಗ್ ಕಮ್ಯುನಿಕೇಷನ್ ಆ್ಯಂಡ್ ಆಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with CamScanner

ಪರಿವಿಡಿ

ಕನ್ನಡವು ಕನ್ನಡವ ಕನ್ನಡಿಸುತಿರಬೇಕು / 3
ಮುಖ್ಯಸ್ಥರ ಮಾತು / 6
ಪ್ರಸ್ತಾವನೆ / 8
೧. ಪಂಚಾಸ್ಯ ರಾಮೇಶ ಶರಣು / ೧
೨. ಸಂತತಿಗೆಲ್ಲಪೂರ್ವ ಕುವರ ಪುಟ್ಟಿಹನು / ೧೧
೩. ಮಾಧವ ಪೇಳ್ದ ಕಲಿತುದನೆಲ್ಲವ / ೨೪
೪. ಮಾಧವ ಶಿವಧ್ಯಾನನಾಗಿ ರಾಜಿಸುತಿರ್ದ / ೩೦
೫. ಕುವರನಂ ಕೊಲಲು ದೂತರನು ಕಳುಹೆ / ೪೮
೬ ಪೊಡವಿಯೊಳ್ ಸುತರಿಂದ ಸದ್ಗತಿ / ೫೭
೭ ನೃಪನ ಕುವರಿ ಸೌಂಧರಿ ಮೆರೆದಳು / ೬೪
೮. ದೇಶಂಗಳೊಳಧಿಕ ಪೂಜಿತರು ವಿದ್ವಾಂಸರು / ೭೪
೯. ಧೀರಪ್ರತಾಪದಿಂ ರಾಜ್ಯಮಂ ಪಾಲಿಸುತಿರ್ದ / ೮೪
೧೦. ಶಿಶುವಿಂಗೆ ಪಟ್ಟಾಭಿಷೇಕಂಗೈದು / ೯೬
೧೧. ಉತ್ತಮೋತ್ತಮವೆನಿಪ ಗೋಕರ್ಣಮಂಡಲ / ೧೧೧
೧೨. ಪ್ರೌಢಂಗೆ ಈ ರಾಜ್ಯಪಟ್ಟ ಸಲ್ವುದು / ೧೨೯
೧೩. ಪೊಡವೀಶ ಮಾಧವಾಂಕಗುಸುರ್ದ ವರಮಹಿಮೆಯನು / ೧೩೯
೧೪. ಪೇಳ್ವೆ ಶಿವನಯಿಪ್ಪತ್ತೈದು ಲೀಲೆಗಳ / ೧೫೪
೧೫. ಪ್ರಾಣಾಯಾಮಮಂ ಮಾಡುತ / ೧೬೭
೧೬. ಪನ್ನಗವಿಭೂಷಣನ ಭಜಿಸುವದು ಭಕ್ತಿಯಿಂ / ೧೮೪
೧೭. ಮೂವೇಳೆ ಲಿಂಗಾರ್ಚನಾಸಕ್ತನಾಗಬೇಕು / ೧೯೪
೧೮. ಮಾಧವಾಂಕಂಗೆ ಲಿಂಗದೀಕ್ಷೆಯನಿತ್ತು / ೨೦೮
೧೯. ಅಷ್ಟವಿಧದರ್ಚನೆಯನೆಸಗಿ ಲಿಂಗಕೆ / ೨೨೯

Scanned with CamScanner

೨೦. ಜೊಜೊಜೋ ಗುರುಲಿಂಗಸಂಗ ಮಹೇಶ / ೨೩೭
೨೧. ಸತ್ಪುತ್ರನಂ ಕೊಡುಗೆಂದುನತಿಸಿನುತಿಸಿ / ೨೫೫
೨೨. ಶಿವಶಿವಾ ಶಿಶುಹತ್ಯೆ ಸಮನಿಸಿತು / ೨೭೪
೨೩. ಕಂದಾ ನಿನ್ನಂ ನೋಡಿ ಮರದಿರ್ದೆನಕಟ ಹಾಹಾ / ೨೯೨
೨೪. ಸಾವತಪ್ಪದು ಶಿಶುವನೊಧೆ ಬಿಡದು / ೩೦೬
ಅನುಬಂಧಗಳು / ೩೨೨
೧. ಪದ್ಯಗಳ ಅಕಾರಾದಿ ಸೂಚಿ
೨. ವ್ಯಕ್ತಿನಾಮ ಸೂಚಿ
೩. ಸ್ಥಳನಾಮ ಸೂಚಿ

Scanned with CamScanner

ಇತಿಹಾಸ ದರ್ಶನ

೨೦೨೦

ಸಂಪಾದಕರು

ದೇವರಕೊಂಡಾರೆಡ್ಡಿ

ಜಿ.ಕೆ. ದೇವರಾಜಸ್ವಾಮಿ

ಸಂಪುಟ ೩೫

ಕರ್ನಾಟಕ ಇತಿಹಾಸ ಅಕಾದೆಮಿ (ರಿ.), ಬಂಗಳೂರು

Scanned with CamScanner

ITIHĀSA DARŚANA - *Volume 35* / 2020

The volume of the scholarly papers presented and
Proceedings of the 33nd Annual Conference

The Karnataka Ithihasa Academy (Regd.,)
Sri Hombuja Jain Math
Humcha, Hosanagara Taluk, Shimoga District
on 18th, 19th & 20th October 2019

Published by : Secretary
Karnataka Itihasa Academy (Regd.)
B.M. Sri Pratistana, 3rd Main Road,
Narasimharaja Colony, Bengaluru - 560 019.

karnatakaitihasaacademy25@gmail.com

www.karnatakaitihasaacademy.org

Edited by : **Devarakondareddy**
G.K. Devarajaswamy

© **Authors.** ಆಯಾ ಲೇಖಕರದು

ಪುಟಗಳು : 588 + xxiv + Col. Photos xvi

Pages : 588 + xxiv + Col. Photos xvi

Price : ₹ **900**

ಬೆಲೆ : ₹ ೯೦೦

ಆರ್ಥಿಕ ನೆರವು:

ದಿ. ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಂಗಳೂರು.
ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೇಹೊನ್ನೂರು.
ಶ್ರೀ ಪರಮಪೂಜ್ಯ ಸಂಗನಬಸವ ಮಹಾಸ್ವಾಮಿಗಳು, ಶ್ರೀ ಮದ್ವೀರಶೈವ ಶಿವಯೋಗಮಂದಿರ ಸಂಸ್ಥೆ, ಬಾದಾಮಿ.

Printed at

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA Bangalore
ISO 9001-2000
ಚಾಮರಾಜಪೇಟೆ, ಬೆಂಗಳೂರು-೫೮
ದೂರವಾಣಿ : [illegible]

Scanned with CamScanner

ಪರಿವಿಡಿ

೧.	ತುರುವನಹಳ್ಳಿಯ ಕರ್ನಾಟಕದ ಮೊದಲ ಪ್ರಾಗೈತಿಹಾಸಿಕ ಜಿಂಕೆ ಪ್ರಸವದ ವರ್ಣಚಿತ್ರ	ರೇಣುಕಾಸ್ವಾಮಿ ಒಡೆಯರ್	೧
೨.	ತಾಯಮ್ಮ ಬಂಡ ನೆಲೆಯ ವರ್ಣಚಿತ್ರ ಶೋಧ: ಏಣಿಯ ಪ್ರಾಚೀನತೆ	ಆರ್. ಮೋಹನ	೪
೩.	ಮೆಟ್ರಿ ಗ್ರಾಮದ ನವಶೋಧಿತ ಬೂದಿದಿಬ್ಬ ಹಾಗೂ ಬಯಲುಬಂಡೆ ಚಿತ್ರಗಳು	ಕೆ. ಲಿಂಗಣ್ಣಸ್ವಾಮಿ	೧೦
೪.	ಗಂಗಾವತಿ ಪ್ರದೇಶದ ರಾಮದುರ್ಗ ಬೂದಿದಿಬ್ಬ: ಹೊಸ ಶೋಧನೆ	ಶರಣಬಸಪ್ಪ ಕೋಲ್ಕಾರ್	೧೬
೫.	ಎತಲಾಪುರದ ಬೂದಿದಿಬ್ಬ ಶೋಧ	ಗೀತಾ ಪಾಟೀಲ	೨೧
೬.	ಅರ್ಕಾವತಿ ನದಿ ಕಣಿವೆಯ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳು ಮತ್ತು ಭೂದೃಶ್ಯ	ಕೆ. ಪ್ರವೀಣ್‌ಕುಮಾರ್	೨೫
೭.	ಚಾಮರಾಜನಗರ ಜಿಲ್ಲೆಯಲ್ಲಿನ ಬೃಹತ್ ಶಿಲಾಯುಗ ಸಮಾಧಿಗಳು: ಹೊಸ ಶೋಧ	ಎಚ್. ಶಾಂತರಾಜು	೩೪
೮.	ಕುಮ್ಮಟದುರ್ಗ ಮತ್ತು ಅಚಲಾಪುರ ಪರಿಸರದ ಬೃಹತ್ ಶಿಲಾಯುಗದ ಸಮಾಧಿಗಳು	ಹೆಚ್.ಎಂ. ತಿಪ್ಪೇಶ	೩೮
೯.	ತುಮಕೂರು ಜಿಲ್ಲೆಯ ಕೆಲವು ಪ್ರಾಚೀನ ಕಬ್ಬಿಣ ತಯಾರಿಕಾ ನೆಲೆಗಳು	ಕೆ.ಪಿ. ಶಶಿಕುಮಾರ ನಾಯ್ಕ	೪೪
೧೦.	ಹಾಡೋನಹಳ್ಳಿಯ ನೂತನ ಶಿಲಾಯುಗ ಪ್ರಾಚ್ಯಾವಶೇಷಗಳ ಶೋಧ	ಪ್ರವೀಣ್ ದೊಡ್ಡಗೌಡ್ರ	೪೭
೧೧.	ಬಂಡೀಪುರ ರಾಷ್ಟ್ರೀಯ ಉದ್ಯಾನವನ ಹಾಗೂ ನಾಗರಹೊಳೆಯಲ್ಲಿನ ಶಿಲಾಯುಗ ಸಂಸ್ಕೃತಿ	ಎಸ್.ಜಿ. ರಾಮದಾಸ ರೆಡ್ಡಿ	೫೨
೧೨.	ಜಡಮಡುಗು ಅಕ್ಕಮ್ಮ ಬೆಟ್ಟದಲ್ಲಿ ಬೃಹತ್ ಶಿಲಾಯುಗದ ನೆಲೆ ಶೋಧ	ಬಿ.ಆರ್. ಕೃಷ್ಣ	೫೭
೧೩.	ಅಮ್ಮನಘಟ್ಟ ಪರಿಸರದ ಪ್ರಾಗೈತಿಹಾಸಿಕ ನೆಲೆಗಳು	ಎ.ಜಿ. ಶ್ರೀನಿವಾಸ	೬೨
೧೪.	ಕರಾವಳಿ ಕೊಡಗು ಮತ್ತು ಮಲೆನಾಡಿನ ಪುರಾತತ್ವ ಶೋಧಗಳು	ಮುರುಗೇಶಿ	೬೫
೧೫.	ಅಂಕೋಲಾ ತಾಲ್ಲೂಕಿನ ಮೂರು ಅಪ್ರಕಟಿತ ಶಾಸನಗಳು	ಶ್ಯಾಮಸುಂದರ ಟಿ. ಗೌಡ	೭೦
೧೬.	ಶಿಕಾರಿಪುರ ತಾಲ್ಲೂಕಿನ ಅಪ್ರಕಟಿತ ಶಾಸನಗಳು	ರಮೇಶ ಬಿ. ಹಿರೇಜಂಬೂರು	೭೫
೧೭.	ಸಾದೇಹಳ್ಳಿಯ ಅಪ್ರಕಟಿತ ಶಾಸನ	ಎಂ. ಕಾವ್ಯಶ್ರೀ	೭೯
೧೮.	ಹಾರೋಗುಳಿಗೆಯ ಇಮ್ಮಡಿ ಬುಕ್ಕನ ಅಪ್ರಕಟಿತ ಶಾಸನ	ಮೇಕನಗದ್ದೆ ಲಕ್ಷ್ಮಣಗೌಡ	೮೧
೧೯.	ಕಳಸದ ಬಸದಿಯಲ್ಲಿನ ಅಪ್ರಕಟಿತ ಶಾಸನಗಳು	ಕೆ.ಎನ್. ಸುಪ್ರೀತ	೮೫
೨೦.	ಕಳಸದ ಚಂದ್ರನಾಥ ಬಸದಿಯ ಅಪ್ರಕಟಿತ ಶಾಸನಗಳು	ಹೆಚ್.ಆರ್. ಪಾಂಡುರಂಗ	೮೮
೨೧.	ಅಜ್ಜವಾರದ ಮನ್ನಾರ್‌ಪುರ ಅಪ್ರಕಟಿತ ಶಾಸನ	ಎಸ್.ವೈ. ನಿರ್ಮಲಾ	೯೫
೨೨.	ಕಲ್ಲೂರು ಹಾಗೂ ಮುದುವತ್ತಿಯ ಅಪ್ರಕಟಿತ ಶಾಸನ ಹಾಗೂ ವೀರಗಲ್ಲು ಸ್ಮಾರಕಗಳು	ಕೆ.ಆರ್. ನರಸಿಂಹನ್	೯೬
೨೩.	ಅಮಟೆಕೊಪ್ಪ ಗ್ರಾಮದ ಎರಡು ಹೊಸ ಶಾಸನಗಳು	ಮಧುಗಣಪತಿರಾವ್ ಮಡೆನೂರು	೧೦೩
೨೪.	ಕಲಸಿಂದ ಗ್ರಾಮದ ಅಪ್ರಕಟಿತ ಶಾಸನ	ಎಂ. ಯೋಗೇಶ್ವರಿ	೧೦೬
೨೫.	ಬಾಡಗಂಡಿಯ ಬಾವಿಯ ಅಪ್ರಕಟಿತ ಶಾಸನ	ಸುಮಂಗಲಾ ಮೇಟಿ	೧೦೮

Scanned with CamScanner

೨೬.	ಹಿರೇಮಲ್ಲನಕೆರೆಯ ಅಪ್ರಕಟಿತ ಶಾಸನ	ಎ. ನಾಗವೇಣಿ	೧೧೧
೨೭.	ಗೇರುಸೊಪ್ಪೆಯ ಅಪ್ರಕಟಿತ ಶಾಸನ ಜೈನ ವೀರಗಲ್ಲು	ಹೆಚ್.ಪಿ. ನಿತಿನ್	೧೧೩
೨೮.	ನಿಜಗನಹಳ್ಳಿಯ ಅಪ್ರಕಟಿತ ಶಾಸನ	ಎಂ. ಸುನೀಲ್‌ಕುಮಾರ್	೧೧೬
೨೯.	ಹಳ್ಳೂರಿನ ಅಪ್ರಕಟಿತ ಗೋಸಾಸ ಶಾಸನ	ಎಚ್.ಜಿ. ಕೃಷ್ಣಪ್ಪ	೧೧೭
೩೦.	ಜಯರೇಖೆ ಶಾಸನಗಳಲ್ಲಿ ದೇಶಾಚಾರ ಮತ್ತು ಕುಲಾಚಾರ ನ್ಯಾಯಪದ್ಧತಿ	ಸ್ಮಿತಾರೆಡ್ಡಿ	೧೨೧
೩೧.	ಮಾಗಡಿ ಕೋನಪ್ಪನಾಯಕನ ಶಾಸನದ ಪುನರ್ ವಿಮರ್ಶೆ	ನಾಗೇಂದ್ರ	೧೩೦
೩೨.	ಮಾಕನೂರಿನ ಬೊಪ್ಪಣ ಶಾಸನದ ಹೊಸಹೊಳವು	ಬಿ.ಟಿ. ಚಾರುಲತಾ	೧೩೩
೩೩.	ಹೊಯ್ಸಳ ೧ನೆಯ ನರಸಿಂಹನು ಕೊಂದ ತೈಲಪನು ಯಾರು?	ಬಿ. ರಾಜಶೇಖರಪ್ಪ	೧೩೬
೩೪.	ಕಲ್ಯಾಣ ಚಾಲುಕ್ಯ ಇಮ್ಮಡಿ ಮತ್ತು ಮುಮ್ಮಡಿ ಜಗದೇಕಮಲ್ಲರು ಅಭಿನ್ನರು – ಕಾಲದ ವಿದ್ಯಮಾನಗಳು	ಹೆಚ್.ವಿ. ಇಂದುಶೇಖರ್ ಚಿನಿವಾರ್	೧೪೧
೩೫.	ಮನಗುಂಡಿಯ ಶಾಸನೋಕ್ತ ಶೈವ ಸ್ಥಾನಾಚಾರ್ಯರು	ಮಂಗಲಾ ಎಂ. ಗೌಡ	೧೫೧
೩೬.	ಹುನಗುಂದ ತಾಲ್ಲೂಕಿನ ಶಾಸನೋಕ್ತ ಮಹಿಳೆಯರು	ಓಜರಾಜ ನದಾಫ್	೧೫೩
೩೭.	ಮೈಲಾರನ ಪ್ರಾಚೀನತೆ : ಶಾಸನಗಳನ್ನು ಅನುಲಕ್ಷಿಸಿ	ಪಿ. ನವೀನ್‌ಕುಮಾರ್	೧೫೬
೩೮.	ಕಾಲಕಾಲೇಶ್ವರ ಕ್ಷೇತ್ರದ ಶಾಸನೋಕ್ತ ದತ್ತಿ ಮತ್ತು ಭೂದಾನ	ಮಲ್ಲಿಕಾರ್ಜುನ ಕುಂಬಾರ	೧೬೦
೩೯.	ಮಂಡ್ಯ ಪ್ರದೇಶದ ಶಾಸನೋಕ್ತ ಗಾವುಂಡರು	ಎಸ್. ಶಿವರಾಮು	೧೬೪
೪೦.	ಶಾಸನಗಳ ಹಿನ್ನೆಲೆಯಲ್ಲಿ ಮಾಗಡಿಯ ಸಾಂಸ್ಕೃತಿಕ ಚರಿತ್ರೆ	ಎಂ.ಕೆ. ಮಂಜುನಾಥ/ಕೆ.ವಿ.ಮುರಳಿ	೧೭೦
೪೧.	ಕೊಂಡರಾಜ ಮಹಾ ಅರಸು	ಸಿ.ಎಂ. ತಿಪ್ಪೇಸ್ವಾಮಿ	೧೭೪
೪೨.	ನಂಜನಗೂಡು ತಾಲ್ಲೂಕಿನ ಹೊಸವೀಡು ಹೊಯ್ಸಳರ ರಾಜಧಾನಿಯಾಗಿತ್ತೆ?	ಎಸ್.ಪಿ. ಮಂಜುಶ್ರೀ	೧೮೨
೪೩.	ಜೋಗಲಕಾಷ್ಠಿ ಶಾಸನ ಹೊಸ ವಿಚಾರಗಳು	ವಸುಧಾ ವಿದ್ಯಾಧೀಶ	೧೮೫
೪೪.	ಹೊಯ್ಸಳ ಮಹಾಪ್ರಧಾನಿ ದೇವರಾಜ ಮತ್ತು ಅವನ ವಂಶೀಯರು	ಎಸ್. ಗಂಗಾಂಬಿಕೆ ಗೋವರ್ಧನ	೧೮೮
೪೫.	ಮಂಡ್ಯ ಜಿಲ್ಲೆಯ ಶಾಸನೋಕ್ತ ಜೈನ ಬಸದಿಗಳು	ಲಿಂಗರಾಜು	೧೯೩
೪೬.	ಕರ್ನಾಟಕದ ಸಾಮಂತ ಅರಸು ಮನೆತನಗಳ ಕಾಲದ ಜೈನಧರ್ಮ	ಮಹೇಶಕುಮಾರ ಹ. ಪಾಟೀಲ	೨೦೦
೪೭.	ಬಾಗಲಕೋಟೆ ಜಿಲ್ಲೆಯ ಶಾಸನಗಳಲ್ಲಿ ಶ್ರಮಿಕ ವರ್ಗ	ಸುನೀಲ ಕುಸ್ತಿ	೨೦೫
೪೮.	ಬಾಗಲಕೋಟೆಯ ಶಾಸನೋಕ್ತ ಧಾರ್ಮಿಕ ಕೇಂದ್ರಗಳು	ವೀಣಾ ಕಲ್ಮಠ	೨೧೦
೪೯.	ರಾಯಚೂರು ಜಿಲ್ಲೆಯ ನೀರಾವರಿ ಚೌಕಟ್ಟು ಒಂದು ಚಾರಿತ್ರಿಕ ಪರಿಶೀಲನೆ	ಟಿ.ವಿ. ನಾಗರಾಜ	೨೧೪
೫೦.	ವಿಜಯನಗರ ಪಟ್ಟಣದ ನೈರ್ಮಲ್ಯ ವ್ಯವಸ್ಥೆ	ಪಿ. ಮಲ್ಲೇಶಪ್ಪ	೨೧೯
೫೧.	ಕಡೂರು, ತರೀಕೆರೆ ತಾಲ್ಲೂಕಿನ ಶಾಸನಗಳಲ್ಲಿ ವ್ಯಕ್ತಿನಾಮಗಳ ಕೆರೆಗಳು	ಡಿ.ಎಂ. ನಾಗರಾಜು	೨೨೪
೫೨.	ಕೃಷ್ಣದೇವರಾಯನ ಕಾಲದ ಶಾಸನೋಕ್ತ ಚನ್ನಪಟ್ಟಣ ಸೀಮೆ	ಎಸ್.ಜಿ. ಬೋರೇಗೌಡ	೨೨೯
೫೩.	ಅಣ್ಣಿಗೇರಿ ತಲೆಬುರುಡೆಗಳು ಹತ್ಯಾಕಾಂಡದ ಅವಶೇಷಗಳೇ?	ಜೆ.ಎಂ. ನಾಗಯ್ಯ	೨೩೨
೫೪.	ಎರುಮರೈನಾಡು	ಆದಪ್ಪ ಪಾಸೋಡಿ	೨೩೬
೫೫.	ಅಂಬಕ್ಕಿನಾಡು–ಕೈವಾರ ನಾಡಿನ ಒಂದು ಅಂತರ್ವಿಭಾಗ	ಪಿ.ವಿ. ಕೃಷ್ಣಮೂರ್ತಿ	೨೪೬

Scanned with CamScanner

೧೬.	ಹಾಡವಳ್ಳಿಯ ಚೆನ್ನಾದೇವಿ	ವಿ. ಸಂಧ್ಯಾ	೨೫೧
೧೭.	ಕನ್ನಡಿಗ ವಂಶದ ಮಾಧವ ದಂಡನಾಯಕ	ಅನಿತಾ ಗುಡಿ	೨೫೭
೧೮.	ಮರುಗೆರೆ ನಾಡಿನ ರಣವೀರ ಸಿಯಾಗೆಲ್ಲ–ಪುನರಾವಲೋಕನ	ಡಿ.ಎನ್. ಯೋಗೀಶ್ವರಪ್ಪ	೨೫೮
೧೯.	ವಿಜಯನಗರ ಸಾಮ್ರಾಜ್ಯ ಸ್ಥಾಪನೆ	ಗುರುಶಾಂತಪ್ಪ	೨೭೦
೨೦.	ಶೃಂಗೇರಿ ಪರಿಸರದ 'ಸ್ಥಾನಿಕ' ಪರಂಪರೆ	ಕೆ.ಪಿ. ಪ್ರಕಾಶ	೨೭೭
೨೧.	ಶ್ರೋತ್ರೀಯ ಗುತ್ತಿಗೆ: ಕೆಲವು ಹೊಸ ಸಂಗತಿಗಳು	ಸುಂಕಂ ಗೋವರ್ಧನ	೨೭೯
೨೨.	ಶಾಸನದಲ್ಲಿ ಗೋಷ್ಠಿ ಪದದ ಅರ್ಥ ವಿವೇಚನೆ	ನಳಿನಿ ವೆಂಕಟೇಶ್	೨೮೭
೨೩.	ಅಲಗಿಲವಾಡ ಒಂದು ಐತಿಹಾಸಿಕ ಪರಿಶೀಲನೆ	ಜೆ.ಕೆ. ಮಲ್ಲಿಕಾರ್ಜುನಪ್ಪ	೨೯೧
೨೪.	ರಾಮಗಿರಿ ಕೈಫಿಯತು: ಒಂದು ಅಪ್ರಕಟಿತ ದಾಖಲೆ	ಲಕ್ಷ್ಮಣ್ ತೆಲಗಾವಿ	೨೯೪
೨೫.	ಇಕ್ಕೇರಿ ದೇವಾಲಯದ ಅರ್ಚಕರಲ್ಲಿರುವ ನಿರೂಪಗಳು	ಕೆಳದಿ ವೆಂಕಟೇಶ್ ಜೋಯಿಸ್	೨೯೮
೨೬.	ಅಣ್ಣಿಗೇರಿಯ ಅಪ್ರಕಟಿತ ದಾಖಲು ಪತ್ರಗಳು	ಸಂಜಯ ಎನ್. ಹಂಜಿ	೩೦೯
೨೭.	ಹುವ್ವಿನಭಾವಿ ಬೀರಪ್ಪದೇವರಿಗೆ ಸಂಬಂಧಿಸಿದ ದಾಖಲೆ	ಎಫ್.ಟಿ. ಹಳ್ಳಿಕೇರಿ	೩೧೩
೨೮.	ತಳಸಮುದಾಯದ ಅಪ್ರಕಟಿತ ಜಯಪತ್ರ	ರವಿಕುಮಾರ ಕೆ. ಹಿ.ಗೂ. ದುಂಡ್ಯಪ್ಪ	೩೧೯
೨೯.	ಮುಮ್ಮಡಿ ಕೃಷ್ಣರಾಜ ಒಡೆಯರ್ ಶಿವಗಂಗೆಯ ಮೇಲಣಗವಿ ಮಠಕ್ಕೆ ಕೊಟ್ಟ ನಿರೂಪ	ಬಿ. ನಂಜುಂಡಸ್ವಾಮಿ	೩೨೯
೩೦.	ಕಡತಗಳಲ್ಲಿ ವಿಧವಾ ಪ್ರಕರಣದ ದಾಖಲೆಗಳ ಅವಲೋಕನ	ಎನ್.ಆರ್. ಲಲಿತಾಂಬ	೩೩೪
೩೧.	ಹಂಡೆ ಪಾಳೆಗಾರ ಹನುಮಪ್ಪನಾಯಕನ ದಾನಪತ್ರಗಳು ಮತ್ತು ಶಾಸನಗಳು	ಎಸ್.ಸಿ. ಪಾಟೀಲ್	೩೪೩
೩೨.	ಹೊಂಬುಜ ಮಠದ ಹಸ್ತಪ್ರತಿಗಳು: ಪರಿಚಯ	ಕೆ. ರವೀಂದ್ರನಾಥ	೩೪೭
೩೩.	ಚಿಪ್ಪಿನಕೆರೆಯಲ್ಲಿ ದೊರೆತ ಮಹಾರಥಿ ಮತ್ತು ಆನಂದ ಅರಸರ ಸೀಸದ ನಾಣ್ಯಗಳು	ಎಸ್.ವೈ. ಸೋಮಶೇಖರ್	೩೪೯
೩೪.	ಕೆರೆಗುಡಿಹಳ್ಳಿ ನೊಳಂಬೇಶ್ವರ ದೇವಾಲಯದ ಐತಿಹಾಸಿಕ ವಿಶ್ಲೇಷಣೆ	ಬಿ.ಸಿ. ರಾಕೇಶ್	೩೫೨
೩೫.	ಮಲ್ಲಂಪಳ್ಳಿ ಜನಾರ್ದನ ದೇವಾಲಯ	ಜಿ.ಎಸ್. ರಾಮಚಂದ್ರ	೩೫೬
೩೬.	ಶ್ರೀ ಸದಾಶಿವರುದ್ರ ದೇವಸ್ಥಾನ ಸುರ್ಯ	ಸನ್ಮತಿಕುಮಾರ್	೩೫೯
೩೭.	ಮಾಳೇನಹಳ್ಳಿಯ ಚಿದಂಬರ ದೇವಸ್ಥಾನ ಪಂಥ	ಎ.ಸಿ. ಕುಮಾರ್	೩೬೨
೩೮.	ಉಜ್ಜಯನಿ ಶ್ರೀ ಸಿದ್ದೇಶ್ವರ ಜದ್ಗುರುಗಳು ಮತ್ತು ಯಲಿವಾಳದ ಸಾಂಸ್ಕೃತಿಕ ಅನನ್ಯತೆ	ಶಕುಂತಲಾ ಸಿಂಧೂರ	೩೬೫
೩೯.	ನಾಗಮಂಗಲದ ಪ್ರಾಚೀನ ದೇವಾಲಯ ಜೀರ್ಣೋದ್ಧಾರ	ಮಹಮ್ಮದ್ ಕಲೀಂಉಲ್ಲ	೩೬೮
೪೦.	ತುಂಗಭದ್ರಾ ನದಿಯ ಪ್ರಾಚೀನತೆ: ಚಾರಿತ್ರಿಕ ನೋಟ	ಟಿ. ಓಂಕಾರಪ್ಪ	೩೭೧
೪೧.	ಸೂರ್ಯಗ್ರಹಣ ಸಮಯದ ಆತ್ಮ ಬಲಿದಾನದ ಶಾಸನ ಶಿಲ್ಪಗಳು	ಆರ್. ಶೇಜೇಶ್ವರ	೩೭೪
೪೨.	ಹೊಂಬುಜ ಕಮಠೇಶ್ವರ ದೇವಾಲಯದ ಕಥಾನಿರೂಪಕ ಶಿಲ್ಪಗಳು	ದತ್ತಪ್ರಸನ್ನ ಎಲ್. ಪಾಟೀಲ	೩೭೭
೪೩.	ಖೇತಪೈ ನಾರಾಯಣ ದೇವಾಲಯದ ಕಥಾನಿರೂಪಕ ಶಿಲ್ಪಗಳು	ರಂಗನಾಥರಾವ್ ಹೆಚ್. ಕರಾಡ್	೩೮೪

Scanned with CamScanner

ಹೊಂಬುಜ ಮಠದ ಹಸ್ತಪ್ರತಿಗಳು: ಪರಿಚಯ

ಕೆ. ರವೀಂದ್ರನಾಥ*

ಭಾರತದ ಪ್ರಮುಖ ಧರ್ಮಗಳಲ್ಲಿ ಜೈನಧರ್ಮವೂ ಒಂದು. ವೃಷಭನಿಂದ ಆರಂಭವಾದ ಜೈನಧರ್ಮ ೨೪ನೇ ತೀರ್ಥಂಕರನಾದ ಮಹಾವೀರನಿಂದ ಪುನರುಜ್ಜೀವನಗೊಂಡು ಕ್ರಿ.ಶ. ಪೂರ್ವ ೫೦೦೦ ವರ್ಷಗಳಷ್ಟು ಪ್ರಾಚೀನ ಚರಿತ್ರೆಯನ್ನು ಹೊಂದಿದೆ. ಉತ್ತರಭಾರತದಿಂದ ಮುನಿಗಳ ಸಂಘ ಕರ್ನಾಟಕಕ್ಕೆ ಬರುವ ಮೊದಲೇ ಜೈನಧರ್ಮ ಕರ್ನಾಟಕದಲ್ಲಿ ಪ್ರಭಾವಶಾಲಿಯಾಗಿತ್ತು. ಕ್ರಿ.ಶ. ಪೂರ್ವ ಎರಡು ಮತ್ತು ಮೂರು ಶತಮಾನಗಳ ಆಚೆ ಕರ್ನಾಟಕದಲ್ಲಿ ಜೈನಸಂಸ್ಕೃತಿಯ ಹೆಜ್ಜೆಗುರುತುಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. 'ಶ್ರವಣರ' ತಂಗುದಾಣವೆನಿಸಿದ ಶ್ರವಣಬೆಳಗೊಳವೇ ಈ ಮಾತಿಗೆ ನಿದರ್ಶನವಾಗಿದೆ. ಜೈನರು ಜಿನೋಪಾಸಕರು. ಅವರ ಪ್ರಕಾರ ಜಿನನೆಂದರೆ ದೇವರಲ್ಲ! ಎಲ್ಲವನ್ನು ಗೆದ್ದು ನಿಂತ ದೊಡ್ಡ ಶಕ್ತಿ. ಸ್ವಂತದ ಆತ್ಮವನ್ನು ಅತಿಯಾಗಿ ನಂಬುವ ಧೋರಣೆ ಜೈನರದು. ವಿಪರೀತ ಕಟ್ಟುನಿಟ್ಟಿನ ಆಚರಣೆಗಳನ್ನು ಸ್ವಲ್ಪ ಸಡಿಲಿಸಿಕೊಂಡು ಧಾರ್ಮಿಕ ಸಂಘಟನೆಗಾಗಿ ಮಠ-ಮಂದಿರ-ಬಸದಿಗಳನ್ನು ಅಸ್ತಿತ್ವಕ್ಕೆ ತಂದಿರಬೇಕೆನಿಸುತ್ತದೆ. ಅದೇನೇ ಆದರೆ ಇತರ ಮಠಗಳಂತೆ ಜೈನಮಠಗಳಿಗೂ ತಮ್ಮದೇ ಆದ ಜವಾಬ್ದಾರಿಗಳಿದ್ದವೆಂಬುದನ್ನು ಮಹಾರಾಷ್ಟ್ರದ ವಿದ್ವಾಂಸರಾದ ಸಂಘವಿ ಅವರು ಹೀಗೆ ಹೇಳುತ್ತಾರೆ. "His Responsibility to provide religious education to students and others by various means like conducting pathashalas ie Religious schools, mentaing shastra Bhandars ie religious scripture houses, delivering Dharma pravachanas…."

ಈ ಮೇಲಿನ ಸಂಘವಿಯವರ ಹೇಳಿಕೆಯಲ್ಲಿ ಒಬ್ಬ ಜೈನಯತಿ ಅಥವಾ ಮಠಾಧಿಪತಿಯ ಕಾರ್ಯಗಳಲ್ಲಿ ಮುಖ್ಯವಾಗಿ ಅಮಿನಿಸಬೇಕಾದ ಸಂಗತಿಯೆಂದರೆ 'ಧರ್ಮಶಾಸ್ತ್ರ ಸಂರಕ್ಷಣೆಯ ಭಂಡಾರ' ಎಂಬುದು. ಇಂಥ ಧರ್ಮಶಾಸ್ತ್ರ ಸಂರಕ್ಷಣೆಯ ಮಹತ್ವವನ್ನು ಹೊತ್ತ ಯತಿಗಳು 'ವರಕವಿ ಗಮಕಿ, ವಾದಿಗಳು, ವಾಗ್ಮಿಗಳಿಂದ ಪರಮ ತಪಗಿರಿ ವಜ್ರರೆನಿಪಾ ಗುರುಗಳಿಂದಾ ಪ್ರಭುಕೋವಿದ ಜನಗಳಿಂ ಕರಮೆಸೆದಿಹುದು ಆ ಮಠವು' ಎಂಬ ಗೊಮ್ಮಟಸಾರ ಕೃತಿಯ ೨ನೇ ಸಂಧಿ ೬೮ನೇ ಪದ್ಯದ ಈ ಉಲ್ಲೇಖ ಶ್ರವಣಬೆಳಗೊಳ ಮಠದಂತೆ ಜೈನಧರ್ಮದ ಎಲ್ಲ ಮಠಗಳಿಗೂ ಅನ್ವಯಿಸುತ್ತದೆ.

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲೂಕಿನ ಹೊಂಬುಜ ಜೈನಮಠವು ಶ್ರೀಮತ್ ಕುಂದಕುಂದಾನ್ವಯಕ್ಕೆ ಸೇರಿದ್ದಾಗಿದೆ. ಆಚಾರ್ಯ ಕುಂದಕುಂದರು ಇಲ್ಲಿಯ ಬೆಟ್ಟದಲ್ಲಿ ತಪಸ್ಸನ್ನಾಚರಿಸಿದ ಕಾರಣವಾಗಿ ಇಲ್ಲಿಯ ಬೆಟ್ಟಕ್ಕೆ ಕುಂದಾದ್ರಿ ಎಂಬ ಸಾರ್ಥಕ ಹೆಸರು ಬಂದಿದೆ. ಕನ್ನಡದ ಆದಿಕವಿ ಪಂಪ ತನ್ನ ಆದಿಪುರಾಣದ ಸಂಧಿ ೧ ಪದ್ಯ ೧೪ರಲ್ಲಿ ತನ್ನನ್ನು ಕುಂದಕುಂದಾನ್ವಯ ವನಶುಕನೆಂದು ಎಂದು ಕರೆದುಕೊಂಡಿದ್ದಾನೆ. ಇದಲ್ಲದೆ ಪಂಪನ ಗುರು ಶ್ರೀ ದೇವೇಂದ್ರ ಮುನಿಗಳು. ಪ್ರಾಚೀನಕಾಲದಿಂದಲೂ ಶ್ರೀಮಠದ ಭಟ್ಟಾರಕರು ಶ್ರೀಮತ್‌ದೇವೇಂದ್ರಕೀರ್ತಿಗಳೆಂಬ ಅಭಿನಾಮದಿಂದಲೇ ಧರ್ಮಪೀಠವನ್ನು ಅಲಂಕರಿಸಿದ್ದಾರೆ. ಇದರ ಜೊತೆಗೆ ಪಂಪನ ಬನವಾಸಿ ವರ್ಣನೆಯನ್ನು ಸ್ಮರಿಸಿಕೊಂಡು ಕುಂದಾದ್ರಿ ಪರಿಸರದ ಹೊಂಬುಜ ಮಠದ ಶಿಷ್ಯ ಪರಂಪರೆಗೆ ಆದಿಕವಿ ಪಂಪ ಸೇರಿದವರಾಗಿರಬೇಕು ಎಂದು ಹೇಳಲು ಅವಕಾಶವಿದೆ. ಹೀಗೆ ವೋಜ-ಪ್ರಾಣಿಗಳಿಂದ, ಮೂಲತಃ ಜೈನಭಟ್ಟಾರಕರು ಸ್ವಾಧ್ಯಾಯಿಗಳಾದ ಕಾರಣದಿಂದ ಹೊಂಬುಜ ಮಠದ ಹಸ್ತಪ್ರತಿಭಂಡಾರ ಸಂಪಿರಬಹುದು. ಅದೇರೀತಿ ಜೈನಧರ್ಮದ ಗಣ-ಗಚ್ಚಾ-ಬಳಿ-ಅನ್ವಯಗಳಂಥ ಧಾರ್ಮಿಕ ಶಾಖೆಗಳು ಹಸ್ತಪ್ರತಿಭಂಡಾರಗಳ ನಿರ್ಮಾಣಕ್ಕೆ ಕಾರಣವಾಗಿರಬಹುದು. ನಿದರ್ಶನಕ್ಕೆ 'ಪುಸ್ತಕ ಗಚ್ಚದ ಬಸದಿ' ಮಾಡಿಸಿದ ಉಲ್ಲೇಖಗಳು ಪ್ರಾಚೀನ ಶಾಸನಗಳಿಂದ ಕಂಡುಬರುತ್ತದೆ. ಕ್ರಿಸ್ತಶಕ ೧೦೬೦ರ ಎಡತೊರೆಯ ೨೨ನೆಯ ಶಾಸನದಲ್ಲಿ ಪುಸ್ತಕಗಚ್ಚದ ಬಸದಿ ಮಾಡಿಸಿದ್ದನ್ನೂ ಕ್ರಿ.ಶ. ೧೧೪೨ರ ಬೇಲೂರಿನ ಶಾಸನದಲ್ಲಿ ಹಳೇಬೀಡಿನ ಹತ್ತಿರದ ಬಸ್ತಿಹಳ್ಳಿಯಲ್ಲಿ ಮೂಲ ಸಂಘ ಪುಸ್ತಕಗಚ್ಚದ ಬಸದಿ ಇದ್ದ ಬಗ್ಗೆ ತಿಳಿಸುತ್ತದೆ. ಪುಸ್ತಕ ಗಚ್ಚ ಎಂಬುದು ಜೈನಮುನಿ ಸಂಘದ ಒಂದು ಶಾಖೆಯ ಮುನಿಗಳು ಪುಸ್ತಕ ಹಿಡಿದುಕೊಂಡು ಬರುತ್ತಿದ್ದರೆಂದೂ, ಇವರನ್ನು ಸರಸ್ವತಿಗಚ್ಛದವರೆಂದೂ,

* ಸಂಶೋಧಕರು, ಹಸ್ತಪ್ರತಿ ಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

Scanned with CamScanner

ಶಾರದಾಗಚ್ಚದವರೆಂದೂ ಕರೆಯುತ್ತಾರೆ. ಇವರೂ ಸಹ ಹಸ್ತಪ್ರತಿ ಭಂಡಾರದ ಅಸ್ತಿತ್ವಕ್ಕೆ ಕಾರಣವಾಗಿರಬೇಕು. ಧರ್ಮದಲ್ಲಿ ಓಲೆಮತಗಳಿದ್ದಂತೆ; ಜೈನರಲ್ಲಿ ಪುಸ್ತಕಗಚ್ಚದ ಬಸಿದಿಗಳಿದ್ದವೆಂಬುದಕ್ಕೆ ಇನ್ನೂ ಒಂದು ಕ ನೋಡಬಹುದು. ಶ್ರವಣಬೆಳಗೊಳದಲ್ಲಿ ಜೈನಸಿದ್ಧಾಂತ ಬಸದಿಗಳಿರುವುದು ವಿದ್ವಾಂಸರಿಗೆ ತಿಳಿದ ಸಂಗತಿ ಬಸದಿಗಳು ಜೈನಸಿದ್ಧಾಂತ ಗ್ರಂಥಗಳ ರಚನೆ, ಸಂರಕ್ಷಣೆ ಹಾಗೂ ಪ್ರತೀಕರಣ ಮತ್ತು ಪ್ರಸರಣ ಕಾರ್ಯವನ್ನು ಹುಟ್ಟಿಕೊಂಡ ಸಿದ್ಧಾಂತ ಬಸದಿಗಳಾಗಿವೆ. ಈ ಸಿದ್ಧಾಂತ ಬಸದಿಗಳಿಗೂ ಪುಸ್ತಕಗಚ್ಚಕ್ಕೂ ಸಂಬಂಧವಿರುವ ಆಕರಗಳನ್ನು ಶೋಧಿಸಬೇಕಾಗಿದೆ.

ಹೊಂಬುಜ ಮಠದ ಹಸ್ತಪ್ರತಿಗಳನ್ನು ಕುರಿತು ಪ್ರಬಂಧ ಮಂಡಿಸಲಿಕ್ಕೆ ನನಗೆ ಎರಡು ಕಾರಣಗಳಿವೆ. ಬಂದ ಇಲ್ಲಿರುವ ನಾಲ್ಕುನೂರು ಹಸ್ತಪ್ರತಿಗಳನ್ನು ಕುರಿತು ಇದುವರೆಗೂ ಹಸ್ತಪ್ರತಿಸೂಚಿ ಆಗದಿರುವುದು. ಈಗ ಸೂಚಿ ಕಾ ಶ್ರೀಮಠವು ಕೈಗೆತ್ತಿಕೊಂಡಿದೆ. ಇನ್ನೊಂದು ಕಾರಣ ಕನ್ನಡ ಸಾಹಿತ್ಯಕ್ಕೆ ಮಠ–ಮಾನ್ಯಗಳ ಸೇವೆ ಎಂಬ ವಿ ಪಿಎಚ್.ಡಿ. ಮೇಲೆ ಅಧ್ಯಯನ ಮಾಡುತ್ತಿರುವಾಗ ೧೯೯೩ರಲ್ಲಿ ಕ್ಷೇತ್ರಕಾರ್ಯಕ್ಕಾಗಿ ಶ್ರೀಮಠಕ್ಕೆ ಬಂದಿದ್ದೆನು. ಹಿಂದೆ ಆದಿ ಸಾಗರವರ್ಣಿ ಎಂಬ ಶ್ರೀಮಠದಲ್ಲಿದ್ದ ಒಬ್ಬ ವ್ಯಕ್ತಿಯ ಸಹಾಯದಿಂದ ಹೊಂಬುಜ ಮಠದ ಗ್ರಂಥಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಹೋಗಿದ್ದೆನು. ಆ ಪಟ್ಟಿಯ ಪ್ರಕಾರ ಶ್ರೀಮಠದ ಹಸ್ತಪ್ರತಿಗಳು ಜೈನಧರ್ಮಶಾಸ್ತ್ರ, ವ್ಯಾಕರಣ ನಿಘಂಟು, ಸ್ತುತಿ, ತರ್ಕಶಾಸ್ತ್ರ, ವೈದ್ಯಶಾಸ್ತ್ರ, ಕಾಲಚಕ್ರ,(ಉತ್ಸರ್ಪಿಣಿ–ಅವಸರ್ಪಿ ನ್ಯಾಯಶಾಸ್ತ್ರ ಇತ್ಯಾದಿ ವಿಶಿಷ್ಟ ಕೃತಿಗಳ ಸಂಗ್ರಹವನ್ನು ಇಲ್ಲಿ ಕಾಣಬಹುದು. ಅಂದು ನಾನು ೧೧೩ ಕೃತಿಗಳ ವಿವ ಸಿದ್ಧಪಡಿಸಿ ಕೊಂಡಿದ್ದೆನು. ಈಗ ಶ್ರೀಮಠದ ಭಂಡಾರದಲ್ಲಿ ೪೦೦ ಹಸ್ತಪ್ರತಿ ಕಟ್ಟುಗಳು ಸಂಗ್ರಹವಾಗಿರುವುದು ಶ್ರೀ ಪೂಜ್ಯರ ಐತಿಹಾಸಿಕ ಮತ್ತು ಸಾಹಿತ್ಯಿಕ ಪ್ರೀತಿಗೆ ಕಾರಣವಾಗಿದೆ.

ಶ್ರೀಮಠದ ಹಸ್ತಪ್ರತಿಗಳು ಗ್ರಂಥಭಾಷೆ, ಕನ್ನಡ, ಸಂಸ್ಕೃತ, ಪ್ರಾಕೃತ ಮತ್ತು ಗ್ರಂಥಲಿಪಿ ಕನ್ನಡ, ಗ್ರಂಥಲಿಪಿ ಕೂಡಿವೆ. ಗ್ರಂಥಲಿಪಿ ಎಂದರೆ ತಮಿಳು ಭಾಷೆಗೆ ಮೂಲವಾದ ಲಿಪಿಯನ್ನು ಸಾಮಾನ್ಯವಾಗಿ ಗ್ರಂಥಲಿಪಿ ಎ ಮೂಲತಃ ಶ್ರೀ ಮಠದ ಪೂಜ್ಯರು ತಮಿಳುನಾಡು ಮೂಲದವರೇ ಹೆಚ್ಚಾಗಿದ್ದ ಕಾರಣ ಗ್ರಂಥಲಿಪಿ ಬರಹ ಪ್ರತಿಕರಣವಾಗಿರುವ ಸಾಧ್ಯತೆಯನ್ನು ಈಗಿನ ಪೂಜ್ಯರು ಸಮರ್ಥಿಸಿಕೊಳ್ಳುತ್ತಾರೆ. ಅದೇನೇ ಇರಲಿ ಈಗಿನ ಅಂಕಿ–ಅಂ ಪ್ರಕಾರ ಶ್ರೀಮಠದಲ್ಲಿ ೨೪೩ ಕನ್ನಡ ಮತ್ತು ೧೫೦ ಗ್ರಂಥಲಿಪಿಯಲ್ಲಿರುವುದಾಗಿ ಸೂಚಿ ರಚನೆಯಲ್ಲಿ ತೊಡಗಿಸಿಕೊಂಡಿ ಕುಮಾರಿ ಅರ್ಪಿತಾ ಅವರು ಮಾಹಿತಿ ನೀಡುತ್ತಾರೆ. ಶ್ರೀಮಠದ ಭಂಡಾರದಲ್ಲಿರುವ ಕುಂದಕುಂದಾಚಾರ್ಯರ ಅಷ್ಟಪಾ ನೇಮಿಚಂದ್ರ ಆಚಾರ್ಯರ ದ್ರವ್ಯಸಂಗ್ರಹ ಇತ್ಯಾದಿ ಕೃತಿಗಳು ಪ್ರಕಟವಾಗಿವೆ. ಸಂಖ್ಯಾಜ್ಞಾನಪ್ರದೀಪ ಎಂಬ ಗಣಿತ ೩೯ ಜೈನ ಕಥಾಗುಚ್ಛ ವಾಗಿರುವ ಬೃಹತ್ಕಥಾ ಸಂಗ್ರಹದಂತಹ ಅಪರೂಪದ ಕಾವ್ಯಗಳು ಭಂಡಾರದಲ್ಲಿವೆ. ಹಸ್ತಪತಿ ಕಟ್ಟುಗಳನ್ನು ಗಮನಿಸಿದಾಗ ಕಾಲಕಾಲಕ್ಕೆ ಅವುಗಳನ್ನು ಪರಿಶೀಲಿಸಿರುವುದು ಕಟ್ಟುಗಳ ಮೇಲೆ ಆ ಚೀಟಿಗಳಿಂದ ತಿಳಿದುಬರುತ್ತದೆ. ಕೃತಿಕಾರರ ಪ್ರತಿಕಾರರ ವ್ಯತ್ಯಾಸದ ತಿಳುವಳಿಕೆಯಿಲ್ಲದೆ ಕೃತಿಕಾರರ ಜಾಗದಲ್ಲಿ ಪ್ರತಿಕಾ ಬಂದು ಕುಳಿತಿರುವುದು ಕಂಡುಬರುತ್ತದೆ. ಉದಾಹರಣೆಗೆ ಕರ್ನಾಟಕ ಶಬ್ದಾನುಶಾಸನದ ಕರ್ತೃ ಭಟ್ಟಾಕಳಂಕನ ಕೃತಿ ೧೭೩೮ರಲ್ಲಿ ಪ್ರತಿಗೊಂಡ ನಿಳಿಂಪಸಾಧ ಎಂಬ ವ್ಯಕ್ತಿಯ ಹೆಸರಲ್ಲಿ ದಾಖಲಾಗಿದೆ. ಇಂಥ ದೋಷಗಳನ್ನೆಲ್ಲ ಬಹುಮೂಲ ಆಕರಗಳಿಂದ ಸರಿಪಡಿಸಿಕೊಂಡು ಹಸ್ತಪ್ರತಿಸೂಚಿ ತಯಾರಿಸುವ ಅಗತ್ಯವಿದೆ. ಒಟ್ಟಿನಲ್ಲಿ ಜೈನಸಾಹಿತ್ಯ, ಸಂಸ್ಕೃತಿ, ಸ್ಥಳೀ ಚಾರಿತ್ರಿಕ ಸಂಗತಿಗಳಿಂದ ಶ್ರೀಮಠದ ಹಸ್ತಪ್ರತಿಗಳು ಮಹತ್ವದ್ದಾಗಿವೆ ಎಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

Scanned with CamScanner

ಅಖಿಲ ಭಾರತ
ಎಳನೇ ಕನ್ನಡ ಸಾಹಿತ್ಯ
ಸಮ್ಮೇಳನ
ಕಲಬುರಗಿ - ೨೦೨೦

ಕವಿಜನಮಾರ್ಗ

ನೆನಪಿನ ಹೊತ್ತಿಗೆ

ಸಂಪಾದಕರು
ಡಾ. ಕಲ್ಯಾಣರಾವ ಜಿ. ಪಾಟೀಲ
ಡಾ. ಈಶ್ವರಯ್ಯ ಮಠ

Scanned with CamScanner

KAVIJANAMARGA

Chief Editors
Dr. Swamirao Kulkarani
Dr. Nagabai Bulla

Editors
Dr. Kalyanarao G. Patil
Dr. Eshwarayya Math

Published by
Swagata Samiti
85th Akhila Bharata Kannada Sahithya Sammelana
Kannada Bhavan, Sardar Vallabhai Patel Circle
Kalaburagi-585 102 Ph: 08472 277411

First impression: 2020
© Author
Pages: xvi + 24 + 654
Price: ₹ 500/-
ISBN : 978-93-81718-62-9
Cover Page : Manjunath S.
Inner Page : Shwetha B.S.

ಈ ನೆನಪಿನ ಹೊತ್ತಿಗೆಯಲ್ಲಿ ಪ್ರಕಟವಾದ ವಿಚಾರ ಮತ್ತು ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬ್ದಾರರು.
– ಸಂಪಾದಕರು

ಸ್ವಾನ ಪ್ರಿಂಟರ್ಸ್
svanprint@gmail.com
☎ 080-26742233

Scanned with CamScanner

ಪರಿವಿಡಿ

ಸಂದೇಶಗಳು
ಪ್ರಮುಖ ಭಾವಚಿತ್ರಗಳು
ಜಿಲ್ಲಾ ಅಧ್ಯಕ್ಷರ ನುಡಿ / v
ಸಂಪಾದಕರ ನುಡಿ / vii

ಭಾಗ – ಒಂದು : ಕರ್ನಾಟಕ ಜನಮಾರ್ಗ

ಅ. ಕನ್ನಡ ನಾಡು–ನುಡಿ

೦೧. ಕನ್ನಡ ಸಂಘ–ಸಂಸ್ಥೆಗಳು – ಗೊ.ರು. ಚನ್ನಬಸಪ್ಪ / ೩
೦೨. ಕನ್ನಡ ಚಾರಿತ್ರಿಕ ಕಾಲಘಟ್ಟ ಮತ್ತು ಸಾಹಿತ್ಯ ಸಮ್ಮೇಳನ – ಡಾ. ವೀರಣ್ಣ ರಾಜೂರ / ೭
೦೩. ಕನ್ನಡ ನುಡಿ : ಕನ್ನಡಿಗರ ರಕ್ಷಣಾ ಕವಚ – ಡಾ. ವಿ. ಚಂದ್ರಶೇಖರ ನಂಗಲಿ / ೧೧
೦೪. ಕನ್ನಡ ಕಾಪಾಡಲು ನಾವೇನು ಮಾಡಬೇಕು – ಡಾ. ಕೆ.ಬಿ. ಬ್ಯಾಳಿ / ೧೫
೦೫. ಕನ್ನಡ ಸಮಕಾಲೀನ ಸವಾಲುಗಳು – ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ) / ೧೮
೦೬. ಕನ್ನಡ ಶಾಲೆಗಳು, ಸರ್ಕಾರ ಮತ್ತು ಕನ್ನಡಿಗರ ಹೊಣೆಗಾರಿಕೆ – ಡಾ. ಬಸವರಾಜ ಡೋಣೂರ / ೨೧
೦೭. ಕನ್ನಡ ಬಳ್ಳಿ ಹಬ್ಬಿದ ಬಗೆ – ಡಾ. ವಿಕ್ರಮ ವಿಸಾಜಿ / ೩೦
೦೮. ಇಂಗ್ಲಿಷಿನ ಅರ್ಜುನ ; ಕನ್ನಡದ ಏಕಲವ್ಯ – ಡಾ. ರಂಗರಾಜ ವನದುರ್ಗ / ೩೪
೦೯. ಆಡಳಿತ ಭಾಷೆಯಾಗಿ ಕನ್ನಡ – ಡಾ. ಬಸವರಾಜ ಪೂಜಾರ / ೩೮
೧೦. ಕನ್ನಡ ನಾಡು ಮತ್ತು ಸವಾಲುಗಳು – ಡಾ. ಲಕ್ಷ್ಮಣ ಕೌಂಟಿ / ೪೦
೧೧. ಕನ್ನಡ ಭಾಷೆ ಕೇವಲ ಮಾಧ್ಯಮವಲ್ಲ – ಪ್ರೊ. ಸುಮಾ ಸಾವಂತ / ೪೪
೧೨. ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ನಿಧಿಗಳು – ಡಾ. ತಿಪ್ಪೇರುದ್ರ ಸಂಡೂರು / ೫೦
೧೩. ಮುಂಬೈ ಮಹಾನಗರದಲ್ಲಿ ಕನ್ನಡದ ಪರಿಚಾರಿಕೆ – ಡಾ. ಜಿ.ಎನ್. ಉಪಾಧ್ಯ / ೫೪
೧೪. ಗಡಿನಾಡು : ಕನ್ನಡ ಸ್ಥಿತಿಗತಿ – ಡಾ. ಗುರುಲಿಂಗಪ್ಪ ಧಬಾಲೆ / ೬೩
೧೫. ಹೊರನಾಡ ಕನ್ನಡಿಗರ ಸ್ಥಿತಿಗತಿ – ಡಾ. ಲಿಂಗಪ್ಪ ಗೋನಾಲ / ೭೦

ಆ. ಚರಿತ್ರೆ ಮತ್ತು ಸಂಸ್ಕೃತಿ

೧೬. ಕರ್ನಾಟಕ ಸಂಸ್ಕೃತಿಗೆ ರಾಷ್ಟ್ರಕೂಟರ ಕೊಡುಗೆ – ಮುಡಬಿ ಗುಂಡೇರಾವ / ೭೩
೧೭. ಭರತವರ್ಷ ಮತ್ತು ಮಿತಾಕ್ಷರ – ಶ್ರೀನಿವಾಸ ಸಿರನೂರಕರ್ / ೭೬
೧೮. ಮಿತಾಕ್ಷರ : ನ್ಯಾಯದಾನ ಪದ್ಧತಿಯ ಪರಿಕಲ್ಪನೆ – ಡಾ. ಶಿವಾನಂದ ಎಚ್. ಲೇಂಗಟಿ / ೮೧
೧೯. ಬೀರಗೂಳೆತ್ತಿ ಕಲ್ಲನಿರಿಸಿ..... – ಡಾ. ಶಿವಗಂಗಾ ರುಮ್ಮಾ / ೮೮

ಇ. ಸಾಹಿತ್ಯ ಮತ್ತು ಜನಜೀವನ

೨೦. ಕವಿರಾಜಮಾರ್ಗ ಮತ್ತು ಕವಿಜನಮಾರ್ಗ – ಡಾ. ಕಲ್ಯಾಣರಾವ ಜಿ. ಪಾಟೀಲ / ೯೦
೨೧. ಕವಿರಾಜಮಾರ್ಗಕಾರನ ನುಡಿ ಭಾಷ್ಯ – ಡಾ. ಬಿ. ಶರಣಪ್ಪ ಸತ್ಯಂಪೇಟಿ / ೯೬

Scanned with CamScanner

೨೨. ಗಿರಮಿಟಿಯಾ ಕಾದಂಬರಿಯಲ್ಲಿ ಗಾಂಧೀಜಿ – ಪ್ರೊ. ಶಿವರಾಮಯ್ಯ / ೧೦೧
೨೩. ಸಾಹಿತ್ಯ ನಿರ್ಮಿತಿಯ ವಾಸ್ತವ ನೆಲೆ-ಬೆಲೆ – ಡಾ. ಬಸವರಾಜ ಸಾದರ / ೧೦೬
೨೪. ಮುಸ್ತಕ ಸಂಸ್ಕೃತಿ – ಅಪ್ಪಾರಾವ ಅಕ್ಕೋಣೆ / ೧೧೧
೨೫. ಕಥೆ ಕಟ್ಟುವ ಬಿಕ್ಕಟ್ಟುಗಳು – ಡಾ. ಅಮರೇಶ ನುಗಡೋಣಿ / ೧೧೩
೨೬. ಶ್ರೀರಂಗರ ಆತ್ಮಚರಿತ್ರೆ : ಚಾರಿತ್ರಿಕ ಬರಹಗಳು – ಡಾ. ಶ್ರೀಕಂಠ ಕೂಡಿಗೆ / ೧೧೭
೨೭. ಷೇಕ್ಸ್‌ಪಿಯರ್ ಅನುಸೃಷ್ಟಿ : ಕೆಲವು ಕಿರಣಗಳು – ಕೆ.ಎಸ್. ಭಗವಾನ್ / ೧೨೧
೨೮. ಇತಿಹಾಸವನ್ನು ಸೃಷ್ಟಿಸುವಲ್ಲಿ ಗ್ರಂಥಗಳ ಪಾತ್ರ – ಎಚ್.ಎಸ್. ಬೇನಾಳ / ೧೨೮
೨೯. ಗ್ರಂಥಾಲಯಗಳ ಮೇಲೆ ಮಾಧ್ಯಮಗಳ ಪ್ರಭಾವ – ಸಂಗಮನಾಥ ರೇವತಗಾಂವ / ೧೩೧

ಈ. ವಚನ – ಕೀರ್ತನ – ತತ್ವಪದ

೩೦. ವಚನಗಳಲ್ಲಿ ಕೃಷಿ ಸಂಸ್ಕೃತಿ – ಡಾ. ಸೋಮನಾಥ ಯಾಳವಾರ / ೧೩೫
೩೧. ವಚನ ಸಾಹಿತ್ಯ ಮತ್ತು ಭಾರತದ ಸಂವಿಧಾನ – ಕುಪೇಂದ್ರ ಪಾಟೀಲ / ೧೩೯
೩೨. ದಾನ-ದಾಸೋಹ – ಡಾ. ಜಯಶ್ರೀ ದಂಡೆ / ೧೪೬
೩೩. ಕಾಯಕ ನಿಷ್ಠೆ – ಡಾ. ಪುಷ್ಪಾವತಿ. ಚಂ. ಶಲವಡಿಮಠ / ೧೫೧
೩೪. ಶಿವಶರಣರು ಮತ್ತು ಜಾಗತಿಕ ದಾರ್ಶನಿಕರು – ರಾಜಶೇಖರ ಬಿರಾದಾರ ಬೋನ್ಹಾಳ / ೧೫೪
೩೫. ವಚನ ಸಾಹಿತ್ಯ ಮತ್ತು ಲಿಂಗ ಸಮಾನತೆ – ನಬಿಲಾಲ ಮಕಾನದಾರ / ೧೬೦
೩೬. ವಚನ ಸಂಸ್ಕೃತಿ : ಸಮಾನತೆಯ ಆಯಾಮಗಳು – ಡಾ. ನಾಗಪ್ಪ ಟಿ. ಗೋಗಿ / ೧೬೪
೩೭. ಜೇಡರ ದಾಸಿಮಯ್ಯನ ವಚನಗಳ ತಾತ್ವಿಕತೆ – ಡಾ. ಚನ್ನಪ್ಪ ಕಟ್ಟಿ / ೧೬೬
೩೮. ಉರಿಲಿಂಗದೇವ, ಉರಿಲಿಂಗಪೆದ್ದಿ ಮತ್ತು ಕಾಳವ್ವೆಯರು – ಡಾ. ನಂಜುಂಡಸ್ವಾಮಿಗಳು / ೧೭೨
೩೯. ನೂರೊಂದು ವಿರಕ್ತರು : ಸಾಂಸ್ಕೃತಿಕ ಕೊಡುಗೆ – ಡಾ. ರಣಧೀರ / ೧೭೭
೪೦. ನಾಲತವಾಡದ ಶ್ರೀ ವೀರೇಶ್ವರ ಶರಣರು – ಡಾ. ಬಿ.ಬಿ. ಪೂಜಾರಿ / ೧೮೬
೪೧. ಶ್ರೀ ಶಿವಕುಮಾರಸ್ವಾಮಿಗಳು – ಪ್ರದೀಪಕುಮಾರ ಹೆಬ್ರಿ / ೧೮೯
೪೨. ಹರಿದಾಸರ ಜನಪರ ದೃಷ್ಟಿ – ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ / ೧೯೪
೪೩. ವೈದಿಕ ತತ್ವಶಾಸ್ತ್ರ ಕೃತಿಗಳು – ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ / ೧೯೯
೪೪. ಕೊಡೇಕಲ್ : ಅಮರಕಲ್ಯಾಣ ಪರಂಪರೆ – ಡಾ. ಶಿವಾನಂದ ಎಸ್. ವಿರಕ್ತಮಠ / ೨೦೫
೪೫. ಕಾಲುದಾರಿ ಪರಂಪರೆ : ಅನಂತದ ನೆನಹು – ಡಾ. ಚೆನ್ನಬಸಪ್ಪ ಚಿಲ್ಕರಾಗಿ / ೨೧೩
೪೬. ತತ್ವಪದಗಳ ಗಾಯನ ಪರಂಪರೆ – ಮಲ್ಲಿಕಾರ್ಜುನ ಕಡಕೋಳ / ೨೨೦
೪೭. ತತ್ವಪದಗಳಲ್ಲಿ ಕುಂಡಲಿನಿ ಶಕ್ತಿ – ಡಾ. ಮೀನಾಕ್ಷಿ ಬಾಳಿ / ೨೨೫

ಉ. ಜನಪರ – ಜನಪದ

೪೮. ಜನಪದ ವೃತ್ತಿ ರಂಗಕಲೆ – ಡಾ. ಶ್ರೀರಾಮ ಇಟ್ಟಣ್ಣವರ್ / ೨೨೮
೪೯. ಜನಪದ ಕಲಾವಿದರ ಅನುಭವ ಕಥನ – ಡಾ. ಅಪ್ಪಗೆರೆ ಸೋಮಶೇಖರ್ / ೨೩೪
೫೦. ಗಾದೆಗಳಲ್ಲಿ ಜನಪದ ವೈದ್ಯ – ಸಿದ್ಧರಾಮ ಪೊಲೀಸ್ ಪಾಟೀಲ / ೨೪೦
೫೧. ಗಾದೆಗಳು – ಡಾ. ವಿಶಾಲಾಕ್ಷಿ ಕರೆಡ್ಡಿ / ೨೪೪
೫೨. ಜನಪದ : ಸಂವಹನ ಮಾಧ್ಯಮ – ಡಾ. ಶರಣಬಸಪ್ಪ ವಡ್ಡನಕೇರಿ / ೨೪೮
೫೩. ಮೌಖಿಕ ಹಾಲುಮತ ಮಹಾಕಾವ್ಯಗಳು – ಡಾ. ಮಹಾದೇವಪ್ಪ ಎಸ್. ಪೂಜಾರಿ / ೨೫೧

Scanned with CamScanner

೮೧. ವಿಕಾಸ : ಒಂದು ಚಿಂತನೆ – ಕೃಷ್ಣಾ ಇಟ್ನಾಳ್ / ೩೮೭
೮೨. ಅಭಿವೃದ್ಧಿ ಮತ್ತು ರಾಜಕೀಯ ಇಚ್ಛಾಶಕ್ತಿ – ಡಾ. ಶ್ರೀಮಂತ ಬಿ. ಹೋಳಕರ / ೩೮೯
೮೩. ನ್ಯಾಯಾಂಗ ವ್ಯವಸ್ಥೆ – ಮಲ್ಲಿಕಾರ್ಜುನಯ್ಯ ಎಸ್. ಹಿರೇಮಠ / ೩೯೫

ಈ. ಸಾಹಿತ್ಯ ವೈವಿಧ್ಯ

೮೪. ಆಧುನಿಕ ಕಾವ್ಯ ಪರಂಪರೆ – ಡಾ. ಬಸವರಾಜ ಸಬರದ / ೩೯೯
೮೫. ಸಂಶೋಧನೆ – ಡಾ. ಎಸ್.ಎಂ. ಹಿರೇಮಠ / ೪೦೫
೮೬. ಮಕ್ಕಳ ಸಾಹಿತ್ಯ – ಎ.ಕೆ. ರಾಮೇಶ್ವರ / ೪೧೧
೮೭. ವೈದ್ಯ ಸಾಹಿತ್ಯ – ಡಾ॥ ಪಿ.ಎಸ್. ಶಂಕರ್ / ೪೧೨
೮೮. ಮಹಿಳಾ ಕಾವ್ಯ ಧ್ವನಿ – ಡಾ. ನೀಲಾಂಬಿಕಾ ಪೊಲೀಸ್‌ಪಾಟೀಲ / ೪೨೨
೮೯. ಗಜಲ್ ಸಾಹಿತ್ಯ – ಮಹಿಪಾಲರೆಡ್ಡಿ ಮುನ್ನೂರ್ / ೪೨೪
೯೦. ಪ್ರಬಂಧ ಸಾಹಿತ್ಯ – ಶ್ರೀನಿವಾಸ ಜಾಲವಾದಿ / ೪೨೮
೯೧. ನಾಟಕ ಸಾಹಿತ್ಯ – ಡಾ. ಅಮೃತಾ ಆರ್. ಕಟಕೆ / ೪೩೨
೯೨. ಸಾಹಿತ್ಯ : ಹೆಜ್ಜೆ ಗುರುತುಗಳು – ಶೈಲಜಾ ಶರಣಗೌಡ / ೪೩೫
೯೩. ವಿಶಿಷ್ಟ ಪ್ರತಿಭೆ : ಶಾಂತರಸ – ನಾಡೋಜ ಚೆನ್ನವೀರ ಕಣವಿ / ೪೩೯

ಉ. ಸೌಹಾರ್ದ ಸಂಸ್ಕೃತಿ

೯೪. ಭಿತ್ತಿಚಿತ್ರ ಪರಂಪರೆ – ಡಾ. ಬಸವರಾಜ ಎಸ್. ಕಲೆಗಾರ / ೪೪೩
೯೫. ಸೌಹಾರ್ದತೆಯ ನೆಲೆಗಳು – ಲಕ್ಷ್ಮೀಕಾಂತ ಚ. ಪಂಚಾಳ / ೪೪೮
೯೬. ಜಾತ್ರೆ – ಉತ್ಸವಗಳು – ಡಾ. ಜಗನ್ನಾಥ ಹೆಬ್ಬಾಳೆ / ೪೫೩
೯೭. ದೇಗುಲಗಳು – ನಿಂಗನಗೌಡ. ಹ. ದೇಸಾಯಿ / ೪೫೮
೯೮. ಸಗರ ನಾಡು – ಸಿದ್ಧರಾಮ ಹೊನ್ಕಲ್ / ೪೬೯
೯೯. ಬುರ್ರಕಥಾ ಈರಮ್ಮ – ಡಾ. ಸಾರಿಕಾದೇವಿ ಎಲ್. ಕಾಳಗಿ / ೪೭೦

ಊ. ಮಾಧ್ಯಮ

೧೦೦. ಮುದ್ರಣ ಮಾಧ್ಯಮ : ಒಂದು ನೋಟ – ಡಾ. ಶಿವರಾಮ ಅಸುಂಡಿ / ೪೭೫
೧೦೧. ವಿದ್ಯುನ್ಮಾನ ಮಾಧ್ಯಮಗಳು – ಎಂ.ಬಿ. ಪಾಟೀಲ / ೪೮೭

ಭಾಗ – ಮೂರು : ಕಲಬುರಗಿ ಜನಮಾರ್ಗ

ಅ. ಚರಿತ್ರೆ

೧೦೨. ಚಾರಿತ್ರಿಕ ಕಲಬುರಗಿ – ಡಾ. ಎಸ್. ಕೆ. ಅರುಣಿ / ೪೯೫
೧೦೩. ಕನ್ನಡ ಭಾಷೆ – ಡಾ. ನಾಗೇಂದ್ರ ಮಸೂತಿ / ೫೦೫
೧೦೪. ಪ್ರವಾಸೋದ್ಯಮ – ಡಾ. ಶಂಭುಲಿಂಗ ಎಸ್. ವಾಣಿ / ೫೧೦
೧೦೫. ಸೂಫಿ ಪರಂಪರೆ – ಪರ್ವಿನ್ ಸುಲ್ತಾನಾ / ೫೧೮
೧೦೬. ದಾಸೋಹ ಪೀಠ ಪರಂಪರೆ – ಅನಿತಾ ಕೃಪಾಸಾಗರ / ೫೨೩
೧೦೭. ಆಲಂದೆ ಸಾಸಿರ – ಧರ್ಮಣ್ಣ ಧನ್ನಿ / ೫೨೬
೧೦೮. ಗಡಿಗ್ರಾಮ ಮಾಶ್ಯಾಳ – ಹಣಮಂತರಾಯ ಎಂ. ಸಲಗರ / ೫೨೮

Scanned with CamScanner

ಅ. ಸಾಹಿತ್ಯ

೧೦೯. ಪ್ರಾಚೀನ ಕನ್ನಡ ಸಾಹಿತ್ಯ ಪರಂಪರೆ – ಡಾ. ಮಹಾದೇವ ಬಡಿಗೇರ / ೫೩೦
೧೧೦. ಹೊಸಗನ್ನಡ ಸಾಹಿತ್ಯ – ಡಾ. ಸುರೇಂದ್ರಕುಮಾರ ಕೆರಮಗಿ / ೫೩೫
೧೧೧. ಮಹಿಳಾ ಸಾಹಿತ್ಯ – ಡಾ. ಮಲ್ಲಿನಾಥ ತಳವಾರ / ೫೪೩
೧೧೨. ಆಧುನಿಕ ವಚನ ಸಾಹಿತ್ಯ – ಡಾ. ವಿಜಯಕುಮಾರ ಪರುತೆ / ೫೪೬
೧೧೩. ಭಾಷಾಂತರ ಸಾಹಿತ್ಯ – ಡಾ. ಶಾರದಾದೇವಿ ಎಸ್. ಜಾಧವ / ೫೫೧

ಆ. ಜಾನಪದ – ಕಲೆ – ಸಮಾಜ

೧೧೪. ಜಾನಪದ – ಡಾ. ಚಿ.ಸಿ. ನಿಂಗಣ್ಣ / ೫೫೯
೧೧೫. ಬಯಲಾಟಗಳು – ಡಾ. ಹನುಮಂತರಾವ ದೊಡ್ಡಮನಿ / ೫೬೬
೧೧೬. ಜನಪದ ಕಲೆಗಳು – ಡಾ. ಶ್ರೀಶೈಲ ನಾಗರಾಳ / ೫೭೧
೧೧೭. ಸಂಗೀತ – ಡಾ. ರೇಣುಕಾ ಹಾಗರಗುಂಡಗಿ / ೫೭೬
೧೧೮. ಕಲಾವಿದರು – ಡಾ. ಸತೀಶಕುಮಾರ ವಲ್ಲೇಪುರೆ / ೫೭೮
೧೧೯. ಸಾಮಾಜಿಕ ಸ್ಥಿತಿ–ಗತಿ – ಡಾ. ಶಿವಲೀಲಾ ಬಸವರಾಜ / ೫೮೪

ಇ. ಕೃಷಿ – ಶಿಕ್ಷಣ – ಚಳುವಳಿ

೧೨೦. ಕೃಷಿ ಮತ್ತು ನೀರಾವರಿ – ಚಂದ್ರಶೇಖರ ಎಸ್. ಕಟ್ಟಿಮನಿ / ೫೮೯
೧೨೧. ವಾಣಿಜ್ಯ ಬೆಳೆ – ತೊಗರಿ – ಹಣಮಂತರಾವ ಭೈರಾಮಡಗಿ / ೫೯೬
೧೨೨. ಶೈಕ್ಷಣಿಕ ಸ್ಥಿತಿ–ಗತಿ – ಭೀಮಾಶಂಕರ ಎಂ. ಫಿರೋಜಾಬಾದ / ೫೯೮
೧೨೩. ರೈತ – ಕಾರ್ಮಿಕ ಚಳುವಳಿ – ನಾಗೇಂದ್ರಪ್ಪ ಅವರಾದ / ೬೦೦

ಭಾಗ – ನಾಲ್ಕು : ಪರಿಷತ್ತು ಮತ್ತು ಸಮ್ಮೇಳನಾಧ್ಯಕ್ಷರು

೧೨೪. ಕಲಬುರಗಿ ಕ.ಸಾ.ಪ. ನಡೆದು ಬಂದ ದಾರಿ – ಡಾ. ಸೂರ್ಯಕಾಂತ ಪಾಟೀಲ / ೬೦೭
೧೨೫. ನನ್ನ ಬಾಲ್ಯ ಕಾಲದ ಮಾಸ್ತರು – ಪ್ರೊ. ಎಚ್.ಎಸ್. ವೆಂಕಟೇಶಮೂರ್ತಿ / ೬೧೩
೧೨೬. ಎಚ್.ಎಸ್.ವಿ. ಕಾವ್ಯಾನುಸಂಧಾನ – ಪ್ರೊ. ರಾಘವೇಂದ್ರ ಪಾಟೀಲ / ೬೧೬
೧೨೭. ಎಸ್.ಎಸ್.ವಿ. ಸಂದರ್ಶನ – ಡಾ. ಚಿಂತಾಮಣಿ ಕೊಡ್ಲೆಕೆರೆ / ೬೨೦

ಅನುಬಂಧಗಳು

೧೨೮. ಸಮ್ಮೇಳನ ಸ್ವಾಗತ ಸಮಿತಿ ಮತ್ತು ಉಪಸಮಿತಿಗಳು / ೬೨೯
೧೨೯. ಲೇಖಕರ ವಿಳಾಸ / ೬೪೫

Scanned with CamScanner

ಕೃಷಿ : ಸ್ಥಿತಿಗತಿ
ರೈತರ ಆತ್ಮಹತ್ಯೆ : ಐತಿಹಾಸಿಕ ಕಥನ – ಡಾ. ವೀರಣ್ಣ ದಂಡೆ / ೨೫೭
ರೈತರ ಆತ್ಮಹತ್ಯೆ : ಕಾರಣ ಹಾಗೂ ಪರಿಹಾರಗಳು – ಪ್ರೊ. ರವೀಂದ್ರ ವ್ಹಿ. ಪಾಟೀಲ / ೨೬೨
ಪಾಳೇಗಾರಿ ಸಮಾಜದಿಂದ ರೈತಾಪಿ ಸಮಾಜದೆಡೆಗೆ – ರಂಜಾನ್ ದರ್ಗಾ / ೨೬೭
ಹೊಗಿಲ ಯೋಗಿ – ವೀರಯ್ಯ ಸ್ವಾಮಿ ಮಠಪತಿ / ೨೭೩

ವಿಚಾರ – ವಿಜ್ಞಾನ
ಬುದ್ಧದರ್ಶನ ಮಹಾಯೋಗ – ಪ್ರೊ. ಎಚ್.ಟಿ. ಪೋತೆ / ೨೭೬
ದಲಿತರು ಮತ್ತು ಸಮಕಾಲೀನ ಸಮಸ್ಯೆಗಳು – ಪ್ರೊ. ಶಿವಾನಂದ ಕೆಳಗಿನಮನಿ / ೨೮೧
ಕನ್ನಡದಲ್ಲಿ ದಲಿತ ಚಳವಳಿ – ಡಾ. ಎಂ.ಬಿ. ಕಟ್ಟಿ / ೨೮೬
ಮಹಿಳಾ ಸಬಲೀಕರಣ ಮತ್ತು ವಿಜ್ಞಾನ – ಪ್ರೊ. ಶಕುಂತಲಾ ಚನ್ನಪ್ಪ ಸಿಂಧೂರ / ೨೯೧
ಮಹಿಳಾ ಚಳುವಳಿ : ಗೊತ್ತು-ಗುರಿ – ನೀಲಾ ಕೆ. / ೨೯೫
ಮಹಿಳೆ : ಅಸ್ಮಿತೆಯ ನೆಲೆಗಳು – ಎ.ಜಿ. ರತ್ನ ಕಾಳೇಗೌಡ / ೨೯೯
ವೈಚಾರಿಕತೆ ಮತ್ತು ವೈಜ್ಞಾನಿಕತೆ – ಡಿ.ಎಮ್. ನದಾಫ್ / ೩೦೩
ಜಮ್ಮ ಮಿದುಳಿನೊಳಗೊಂದು ಗಡಿಯಾರ – ಡಾ. ಸಿ.ಆರ್. ಚಂದ್ರಶೇಖರ / ೩೦೮

ಭಾಗ – ಎರಡು : ಕಲ್ಯಾಣ ಜನಮಾರ್ಗ

ಜನ-ಮನ : ಸ್ಥಿತಿ-ಗತಿ
ವಿನೋಜನಾ ಚಳುವಳಿ – ವಸಂತ ಕುಷ್ಟಗಿ / ೩೨೧
ಪೀಕರಣ ಚಳುವಳಿ – ಡಾ. ಗಾಂಧೀಜಿ ಸಿ. ಮೋಳಕೆರೆ / ೩೨೩
ಕನ್ನಡ ಕಟ್ಟಿದ ಮಠಗಳು – ಡಾ. ಕೆ. ರವೀಂದ್ರನಾಥ / ೩೨೭
ಕನ್ನಡ ಕಟ್ಟಿದ ಮಹನೀಯರು – ಡಾ. ರಘುಶಂಖ ಭಾತಂಬ್ರಾ / ೩೩೧
ಕನ್ನಡಪರ ಸಂಘಟನೆಗಳು – ಸೋಮನಾಥ ಕಟ್ಟಿಮನಿ / ೩೪೦
ಜನ-ಮನ : ಸ್ಥಿತಿ-ಗತಿ – ಶಿವರಂಜನ ಸತ್ಯಂಪೇಟೆ / ೩೪೩

ಸಾಹಿತ್ಯ – ಸಾಹಿತ್ಯ
ಶಾಸನಗಳು – ಡಾ. ಚೆನ್ನಬಸವಯ್ಯ ಹಿರೇಮಠ / ೩೪೬
ಮಹಿಳಾ ವಚನ ಸಾಹಿತ್ಯ – ಡಾ. ಚಿತ್ಕಳಾ ಜೆ. ಮಠಪತಿ / ೩೫೩
ಮಹಿಳಾ ಕೀರ್ತನ ಸಾಹಿತ್ಯ – ಡಾ. ಶೀಲಾಕುಮಾರಿ ದಾಸ / ೩೫೮
ಅನುಭಾವಿ ಕವಿಗಳು – ಎಚ್. ಕಾಶೀನಾಥರೆಡ್ಡಿ / ೩೬೨
ಮುಸ್ಲಿಂ ತತ್ವಪದಕಾರರು – ಡಾ. ಸುಭಾಶ್ಚಂದ್ರ ಕೌಲಗಿ / ೩೬೮
ಸೂಫಿ ಸಂತರು – ಡಾ. ಶಾಂತಾ ಮಠ / ೩೭೧
ಆಧುನಿಕ ಕೀರ್ತನಕಾರರು– ಡಾ. ಸುರೇಶ ಎಲ್. ಜಾಧವ / ೩೭೪

ಸಂಪನ್ಮೂಲ – ಅಭಿವೃದ್ಧಿ
ಖನಿಜ ಸಂಪತ್ತು – ಎಚ್. ಚಂದ್ರಶೇಖರ / ೩೮೦
ಶೈಕ್ಷಣಿಕ ಗುಣಮಟ್ಟ – ಶಿವರಾಜ ಪಾಟೀಲ / ೩೮೨

Scanned with CamScanner

೬೮

ಕನ್ನಡ ಕಟ್ಟಿದ ಮಠಗಳು

ಡಾ. ಕೆ. ರವೀಂದ್ರನಾಥ

ಮಠ–ಎಂಬ ಪದ ಮೂಲತಃ ಸಂಸ್ಕೃತದಿಂದ ಬಂದಿದ್ದು. ಮಠ–ಮಠತಿ ಎಂದರೆ ವಾಸಿಸು ಎಂಬ ಅರ್ಥವನ್ನು ಹೇಳಲಾಗಿದೆ. ಮೂಲತಃ ವಾಸಸ್ಥಾನ ಎಂಬ ಅರ್ಥದ ಈ ಪದ ತದನಂತರದಲ್ಲಿ ವಿದ್ಯಾರ್ಥಿ ಇಲ್ಲವೆ ಗುರುಗಳ ವಾಸಸ್ಥಾನ ಎಂದು ಅರ್ಥ ವ್ಯಾಪ್ತಿ ಪಡೆದಿದೆ. ಆದುದರಿಂದಲೇ ಈ ಪದಕ್ಕೆ ಶಾಲೆ, ಕಾಲೇಜು, ವಿದ್ಯಾಕೇಂದ್ರ, ದೇವಾಲಯ ಎಂಬ ಅರ್ಥಗಳು ಅಂಟಿಕೊಂಡವು. ಪಾವಿತ್ರ್ಯವನ್ನು ಕಾಪ್ಪಾಡಿಕೊಂಡು ಬರುವ ಸ್ಥಳವೆಂಬ ಅರ್ಥವನ್ನು ಹೇಳಲಾಗಿದೆ. ಅಮರಕೋಶದ ಪ್ರಕಾರ 'ಮಠ:ಛಾತ್ರಾದಿ ನಿಲಯಂ', ಎಂದು ವಿದ್ಯಾರ್ಥಿಗಳು ವಾಸಿಸುವ ಸ್ಥಳವೆಂದು ಹೇಳಲಾಗುತ್ತಿದೆ. ೧೨ನೇ ಶತಮಾನದ ಶರಣರ ದೃಷ್ಟಿಯಲ್ಲಿ ಮಠದ ವ್ಯಾಪ್ತಿ ವಿಸ್ತಾರಗೊಂಡು ಮನೆ ಅರ್ಥದಿಂದ ಮಹಾಮನೆ ಎಂಬ ಅಂದರೆ ಅನುಭವ ಮಠವೆಂಬ ಅರ್ಥಪಡೆದುಕೊಂಡಿತು. ಚನ್ನಬಸವಣ್ಣ ತನ್ನ ವಚನದಲ್ಲಿ "ಜಡರುಗಳ ಮನದ ಕತ್ತಲೆಯ ಕಳೆಯಬೇಕೆಂದು ಕಲ್ಯಾಣದಲ್ಲಿ ನಿರ್ಮಿತವಾಗಿತ್ತು ಮಹಾಮಠವು" ಎಂದು ಹೇಳುತ್ತಾನೆ. ಒಟ್ಟಿನಲ್ಲಿ ಒಂದು ಧರ್ಮದ ನೈಷ್ಠಿಕರ ಅನುಕೂಲಕ್ಕಾಗಿ ಸ್ಥಾಪಿತವಾದ ಮಠ ತನ್ನ ಕಾರ್ಯವ್ಯಾಪ್ತಿ ಹೆಚ್ಚಾದಂತೆ ಅರ್ಥವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದೆ. ಮಠಗಳು ಒಂದೇ ಆದರೂ ಸ್ವರೂಪದಲ್ಲಿ ವ್ಯತ್ಯಾಸಗಳಿವೆ. ಜೈನರಲ್ಲಿ ಬಸದಿಗಳು, ಸಿದ್ಧಾಂತಬಸದಿಗಳು ಇತ್ಯಾದಿಯಂತೆ ವೈದಿಕರಲ್ಲಿ ಅಗ್ರಹಾರ, ಬ್ರಹ್ಮಪುರಿಗಳು ಆ ವ್ಯಾಪ್ತಿಯಲ್ಲೇ ಮಾನ್ಯತೆ ಹೊಂದಿದೆ. ಲಿಂಗಾಯತರಲ್ಲಿ ಸಾಲಿಮಠ, ಓದಿಸೋಮಠ ಹಾಗೂ ವಿರಕ್ತಮಠಗಳೆಂದು ವಿದ್ಯಾಭ್ಯಾಸದ, ಸಾಹಿತ್ಯಚಟುವಟಿಕೆಯ ಹಾಗೂ ಚರ್ಚಾಗೋಷ್ಠಿಯ ವೇದಿಕೆಗಳಂತೆ ರೂಪಗೊಂಡಿರುವುದನ್ನು ಕಾಣುತ್ತೇವೆ. ಒಟ್ಟಿನಲ್ಲಿ ಧಾರ್ಮಿಕ ವಿಧಿವಿಧಾನಗಳನ್ನು, ಸಾಮಾಜಿಕ ನೀತಿನಿಯಮಗಳನ್ನು, ಸಾಹಿತ್ಯಿಕ ಚಟುವಟಿಕೆಗಳನ್ನು ಸಮಾಜಮುಖಿಯಾಗಿ ಅನುಷ್ಠಾನಕ್ಕೆ ತರುವ ಕೇಂದ್ರಗಳಾಗಿ ಮಠಗಳು ಅಸ್ತಿತ್ವಕ್ಕೆ ಬಂದವು.

ಕಲ್ಯಾಣ ಕರ್ನಾಟಕದಲ್ಲಿ ಕನ್ನಡ ಕೆಲಸ ಮಾಡಿದ ನೂರಾರು ಮಠಗಳಿವೆ. ಎಲ್ಲವನ್ನೂ ಪರಿಚಯಿಸುವುದು ಈ ಲೇಖನದ ಪರಿಮಿತಿಯಲ್ಲಿ ಅಸಾಧ್ಯವಾದದ್ದು. ಕೆಲವು ಪ್ರಮುಖ ಮಠಗಳ ಸಾಧನೆಯನ್ನು ದಾಖಲಿಸುವುದು ಅನಿವಾರ್ಯವಾಗಿದೆ. ಕರ್ನಾಟಕದಲ್ಲಿ ಬಸವಾದಿ ಪ್ರಮಥರಿಂದ ಸಾಮಾಜಿಕ–ಧಾರ್ಮಿಕ ಹಾಗೂ ಸಾಹಿತ್ಯಿಕ ಭಾಗವಾಗಿ ಚಳುವಳಿ ಹುಟ್ಟಿಕೊಂಡಿತು. ಈಗಾಗಲೇ ಅವರ ಸಾಮಾಜಿಕ ಹಾಗೂ ಧಾರ್ಮಿಕ ಚಳುವಳಿಯ ಸ್ವರೂಪ ಸಾಕಷ್ಟು ಚರ್ಚೆಮಾಡಲಾಗಿದೆ. ಉಳಿದಂತೆ ಸಾಹಿತ್ಯಿಕವಾಗಿ ಹಸ್ತಪ್ರತಿಗಳ ಸಂರಕ್ಷಣೆ, ಕಾಲಕಾಲಕ್ಕೆ

Scanned with CamScanner

ಅವುಗಳು ನಾಶವಾಗದಂತೆ ಪ್ರತಿಮಾಡಿಸುವುದು, ಸಾಹಿತ್ಯ ಪ್ರಸಾರಕ್ಕೆ ಇಂಬು ಕೊಟ್ಟಿರುವುದು ತಿಳಿದುಬರುತ್ತದೆ. ಪ್ರಾಯಶಃ ಈ ಕಾರ್ಯಕ್ಕೆ ಮುಂದಾದವರು ಬಸವಾದಿ ಪ್ರಮಥರ ಪರಂಪರೆಯಾದ ವಿರಕ್ತಮಠಗಳ ಕಾರ್ಯ ದಾಖಲಾರ್ಹವಾದದ್ದು. ಇಲ್ಲಿ ಕನ್ನಡದ ಕೆಲಸವೆಂದರೆ ಭಾಷೆಯನ್ನು ಒಳಗೊಂಡಂತೆ ಸಾಹಿತ್ಯ ಹಾಗೂ ಕನ್ನಡಿಗರ ಆಶೋತ್ತರಗಳನ್ನು ಅನುಪಾಲನೆಗೆ ತರುವುದಾಗಿದೆ.

ಕ್ರಿ.ಶ.ಸುಮಾರು ೧೮ ನೇ ಶತಮಾನದ ಷಣ್ಮುಖ ಶಿವಯೋಗಿಗಳು ಒಬ್ಬ ವಚನಕಾರ. ಈತನ ಗುರು ಅಖಂಡೇಶ್ವರರು. ತಮ್ಮ ಪ್ರಗತಿಪರ ವಿಚಾರಗಳಿಂದ ಮೂಢಸಂಪ್ರದಾಯಗಳನ್ನು ಮುರಿದುಹಾಕಿ ಸಾಹಿತ್ಯಿಕವಾಗಿ "ಸೂರ್ಯ ನಿರಾಲಂಬ ಶರಣ್ಯನ ಅರುಹಿನ ಷಟ್ಸ್ಥಲದ ವಚನಗಳು" ಎಂಬ ಹೆಸರನಿಟ್ಟು ವಚನಗ್ರಂಥ ರಚಿಸಿದ್ದಾರೆ. ಕನ್ನಡ ಸಾಹಿತ್ಯ-ಸಂಸ್ಕೃತಿಯ ಪ್ರಸಾರದಲ್ಲಿ ತೊಡಗಿಸಿಕೊಂಡಿರುವ ಶ್ರೀಮಠದ ಷಣ್ಮುಖ ಶಿವಯೋಗಿಗಳ ಹೆಸರಿನ ಪ್ರಕಾಶನದಡಿಯಲ್ಲಿ ಮಹತ್ವದ ಕೃತಿಗಳು ಪ್ರಕಟವಾಗಿವೆ. ರಾಯಚೂರು ಭಾಗದಲ್ಲಿ ಅಂದರೆ ಸಿಂಧನೂರು-ಮಸ್ಕಿ ನಡುವೆ ಇರಬಹುದಾದ ಪಗಡದಿನ್ನಿ ಮಠದ ನನ್ನಪ್ಪಶಾಸ್ತ್ರಿಗಳು ತ್ರಿಷಷ್ಟಿಪುರಾತನ ಚರಿತ್ರೆ, ನವಮುನ್ದಲೀಲೆ ಇತ್ಯಾದಿ ಕೃತಿಗಳನ್ನು ಬರೆದುದು ತಿಳಿದುಬರುತ್ತದೆ. ಕಡಕೋಳ ಮಡಿವಾಳಪ್ಪ ಕ್ರಿ.ಶ. ೧೭೮೦ ರಿಂದ ೧೮೫೫ರ ಕಾಲಘಟ್ಟದಲ್ಲಿ ಅಫಜಲ್ಪುರ ತಾಲೂಕಿನ ಬಿದನೂರಿನವನು. ಈತನ ತತ್ವಪದಗಳು ಕನ್ನಡ ಸಾಹಿತ್ಯದ ದೇಶಿ ಸತ್ವವನ್ನು ಗಟ್ಟಿಗೊಳಿಸಿದ ಅಪರೂಪದ ಸಾಹಿತ್ಯ ಪ್ರಕಾರವಾಗಿದೆ. ಈತನ ಹೆಸರಿನಲ್ಲಿರುವ ಕಡಕೋಳಮಠ ಸಾಹಿತ್ಯ-ಸಂಸ್ಕೃತಿ ಪರಿಚಲನೆಯ ಕೇಂದ್ರವಾಗಿತ್ತೆಂದು ಹೇಳಬಹುದು. ಸಂತೆಕೆಲೂರಿನ ಘನಮಠಶಿವಯೋಗಿಗಳ "ಕೃಷಿಜ್ಞಾನ ಪ್ರದೀಪಿಕೆ" ಒಕ್ಕಲುತನವನ್ನು ಕುರಿತು ಹೇಳುವ ಶಾಸ್ತ್ರಕೃತಿ. ಲೌಖಿಕ ವ್ಯವಸಾಯ ಪದ್ಧತಿಯನ್ನು ಆಧ್ಯಾತ್ಮಿಕವಾದ ಅಂತರಂಗದ ಕೃಷಿಯನ್ನು ನಿರೂಪಿಸುವ ಈ ಕೃತಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಆಧುನಿಕ ಕೃಷಿವಿಜ್ಞಾನಕ್ಕೆ ನೀಡಿದ ಅಪರೂಪದ ಗ್ರಂಥವಾಗಿದೆ. ಈಗಲೂ ಘನಮಠ ಶಿವಯೋಗಿಗಳ ಮಠದ ಚಟುವಟಿಕೆಗಳು-ಜೀವಂತವಾಗಿವೆ. ಹೀಗೆ ಪ್ರಾಚೀನ ಕಾಲದ ಕೆಲವು ಈ ಭಾಗದ ಮಠಗಳು ಸಾಹಿತ್ಯ-ಸಂಸ್ಕೃತಿ-ಭಾಷೆಯ ನೆಲೆಯಲ್ಲಿ ಕೆಲಸಮಾಡಿದ ನಿದರ್ಶನಗಳು ದೊರೆಯುತ್ತವೆ.

ಇನ್ನು ಆಧುನಿಕವಾಗಿ ಹೊಸಪೇಟೆಯ ಕೊಟ್ಟೂರು ಸ್ವಾಮಿಮಠ, ಸೊಂಡೂರಿನ ಪ್ರಭುದೇವರಮಠ, ಕೊಪ್ಪಳದ ಗವಿಸಿದ್ಧೇಶ್ವರಮಠ, ಕಲ್ಬುರ್ಗಿಯ ಶರಣಬಸವೇಶ್ವರ ಸಂಸ್ಥಾನ, ಬಾಲ್ಕಿ ಹಿರೇಮಠ, ಗುಲ್ಬರ್ಗಾದ ಚೌದಾಪುರ ಹಿರೇಮಠ, ರಾವೂರು ಸಿದ್ಧೇಶ್ವರ ಮಠ, ಭರತನೂರು ಗುರುನಂಜೇಶ್ವರ ಮಠ, ರಟಗಲ್‌ವಿರಕ್ತಮಠ, ಹುಲಸೂರು ವಿರಕ್ತಮಠ, ಹಾರಕೂಡ ಮಠ, ಯಲಬುರ್ಗಿಯ ಸಿದ್ಧೇಶ್ವರಮಠ, ಭಾತಂಬ್ರಾವಿರಕ್ತಮಠ, ದೇವದುರ್ಗ ತಾಲೂಕಿನ ದೇವರಗುಡ್ಡದ ಅಮತೇಶ್ವರ ಮಠ, ಒಳಬಳ್ಳಾರಿ ಸುವರ್ಣಗಿರಿಯ ವಿರಕ್ತಮಠ, ಮುಂತಾದ ಮಠಗಳಲ್ಲಿ ಕೆಲವು ಶಿಕ್ಷಣ ಸಂಸ್ಥೆಗಳನ್ನು ಪ್ರಸಾದ ನಿಲಯಗಳನ್ನು, ಪ್ರಕಾಶನ ಸಂಸ್ಥೆಗಳನ್ನು ತೆರೆಯುವುದರ ಮೂಲಕ ಜ್ಞಾನದಾಸೋಹ-ಅನ್ನದಾಸೋಹ ಹಾಗೂ ಪುಸ್ತಕ ದಾಸೋಹಗಳನ್ನು ಮಾಡಿರುವುದು ತಿಳಿದುಬರುತ್ತದೆ. ಹಂಪಿಹೇಮಕೂಟ-ಬಳ್ಳಾರಿ ಹಾಗೂ ಹೊಸಪೇಟೆ ಕೊಟ್ಟೂರು ಸ್ವಾಮಿಮಠಕ್ಕೆ ಸುಧೀರ್ಘ ಇತಿಹಾಸವಿದೆ. ನಾಡಿನಾದ್ಯಂತ ಅನೇಕ ಶಾಖಾಮಠಗಳನ್ನು ಹೊಂದಿದೆ. ಶ್ರೀಮಠದ ಗುರುಪರಂಪರೆ ಶ್ರೀಕಪ್ಪಿನ ಚನ್ನಬಸವೇಶ್ವರ ಸ್ವಾಮಿಗಳಿಂದ ಆರಂಭವಾಗಿ ಜ॥ ಸಂಗನಬಸವ ಮಹಾಸ್ವಾಮಿಗಳವರೆಗೆ ವಿಸ್ತಾರಗೊಂಡಿದೆ. ಶ್ರೀ ಜ॥ ಕೊಟ್ಟೂರಸ್ವಾಮಿ ಸಂಸ್ಥಾನಮಠ ಹಂಪೆ-ಹೊಸಪೇಟೆ-ಬಳ್ಳಾರಿ ಹೆಸರಿನ ಪ್ರಕಾಶನದ ಹೆಸರಿನಲ್ಲಿ ಮೌಲಿಕ ಕೃತಿಗಳನ್ನು ಪ್ರಕಟಿಸಲಾಗಿದೆ. ಹರಿಹರನ ರಗಳೆಗಳು, ವಿಜಯಕಲ್ಯಾಣ ಮುಂತಾದ ಕೃತಿಗಳನ್ನು ಹೆಸರಿಬಹುದು. ಗಡಿಭಾಗದ ಬಳ್ಳಾರಿಯಲ್ಲಿ ಶ್ರೀ ಮಠವು ಹಸ್ತಪ್ರತಿ ಸಂಗ್ರಹ ಹಾಗೂ ಸಂರಕ್ಷಣೆಗೆ ಮುಂದಾಗಿದೆ. ಶ್ರೀ ಮಠದ ಹಸ್ತಪ್ರತಿಗಳನ್ನು ಬಳಸಿಕೊಂಡು ಕನ್ನಡ ಸಾಹಿತ್ಯ

Scanned with CamScanner

ಪರಿಷತ್ತು ಆರಂಭದ ಕಾಲಮಾನದಲ್ಲಿ ಪುಸ್ತಕ ಪ್ರಕಟಿಸಿದ ಸಂಗತಿಯನ್ನು ಈ ಭಾಗದ ವಿದ್ವಾಂಸರು ಹೇಳುತ್ತಾರೆ. ಗಡಿಭಾಗದ ಹೊಳಗುಂದಿಯಲ್ಲಿ ಕನ್ನಡಶಾಲೆಗಳನ್ನು ಆರಂಭಿಸಿ ಆ ಭಾಗದ ಕನ್ನಡ ಬಡಮಕ್ಕಳಿಗೆ ಶಿಕ್ಷಣ ಕೊಡುವಲ್ಲಿ ಈ ಮಠದ ಪಾತ್ರ ದಾಖಲಾರ್ಹವಾದದ್ದು.

ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಹಾಕೊಪಣ ನಗರ, "ತಿರುಳ್ಗನ್ನಡ ನಾಡು" ಎಂದು ಪ್ರಸಿದ್ಧವಾಗಿರುವ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಮಠವು ಅನೇಕ ಶಿಕ್ಷಣ ಸಂಸ್ಥೆಗಳನ್ನು ತೆರೆದಿದೆ. ಬಳ್ಳಾರಿ ಜಿಲ್ಲೆಯ ತೀರ್ಥದ್ವಯರೆನಿಸಿದ್ದ ಪಂ.ವೈ. ನಾಗೇಶಶಾಸ್ತ್ರಿಗಳು, ವ್ಯಾಕರಣತೀರ್ಥ ಚಂದ್ರಶೇಖರಶಾಸ್ತ್ರಿಗಳು ಶ್ರೀ ಮಠದಲ್ಲಿಯೇ ಶಿಕ್ಷಣ ಪಡೆದವರು. ಪಂ.ವೈ. ನಾಗೇಶಶಾಸ್ತ್ರಿಗಳು 'ಶ್ರೀ ಗವಿಸಿದ್ದೇಶ್ವರ ಪುರಾಣ'ವನ್ನು ರಚಿಸಿದ್ದಾರೆ. ಶ್ರೀ ಗವಿಸಿದ್ದೇಶ್ವರ ಕೃಪಾಪೋಷಿತ ವಿದ್ಯಾರ್ಥಿ ಬಳಗದ ಹೆಸರಿನಲ್ಲಿ ಕನ್ನಡ ಗ್ರಂಥಗಳನ್ನು ಪ್ರಕಟಿಸಲಾಗಿದೆ. ನಿಜಾಂಪ್ರಾಂತದಲ್ಲಿ ಶಿಕ್ಷಣದ ಬಗ್ಗೆ ಅದರಲ್ಲೂ ಕನ್ನಡ ಕಲಿಕೆ ಬಗ್ಗೆ ಅನೇಕ ಬಿಕ್ಕಟ್ಟುಗಳಿದ್ದಾಗ ಕನ್ನಡ ಶಾಲೆಗಳನ್ನು ತೆರೆದು ಈ ಭಾಗದ ಜನರ ಬದುಕನ್ನು ಸುಧಾರಿಸಿದ ಹೆಗ್ಗಳಿಕೆ ಶ್ರೀ ಮಠದ್ದಾಗಿದೆ.

ಕಲಬುರ್ಗಿಯ ಶ್ರೀ ಶರಣ ಬಸವೇಶ್ವರ ಸಂಸ್ಥಾನ ದಾಸೋಹ ಪರಂಪರೆಯ ಮಠ. ಶ್ರೀ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘವನ್ನು ಹುಟ್ಟುಹಾಕಿ ಜೀವನಾನುಭವದ ಎಲ್ಲಾ ವೃತ್ತಿಪರ ಶಿಕ್ಷಣವನ್ನು ನೀಡುವಲ್ಲಿ ಈ ಸ್ಥಾನಮಠ ಶ್ರಮವಹಿಸಿದೆ. ಮೂಲತಃ ಪೂಜ್ಯ ಶ್ರೀ ಶರಣಬಸಪ್ಪ ಅಪ್ಪನವರು ಸ್ವತಃ ಸಾಹಿತಿಗಳಾಗಿದ್ದು "ಮಾಹಾದಸೋಹ ಸೂತ್ರಗಳು" ಎಂಬ ಕೃತಿಯನ್ನು ಬರೆದಿದ್ದಾರೆ. ಈ ಸೂತ್ರಗಳಿಗೆ ವಿದ್ವಾಂಸರಾದ ದಿ॥ ಎಲ್. ಬಸವರಾಜು ಅವರು ವ್ಯಾಖ್ಯಾನ ಬರೆದಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗದ ಕೇಂದ್ರಸ್ಥಾನವಾಗಿರುವ ಬೀದರ್ ಜಿಲ್ಲೆಯ ಭಾಲ್ಕಿಯ ಹಿರೇಮಠ ಸಂಸ್ಥಾನ ಬಸವತತ್ವ ಪ್ರತಿಪಾದನೆಯ ಮೂಲಕ ಗಡಿನಾಡಿನಲ್ಲಿ ಕನ್ನಡದ ಕೆಲಸ ಮಾಡಿದ ಕೀರ್ತಿಗೆ ಪಾತ್ರವಾಗಿದೆ. ಉರ್ದು ಭಾಷೆಯ ಎದುರಿಗೆ ಹೇಳ ಹೇಸರಿಲ್ಲದಂತೆ ಹೋಗುತ್ತಿದ್ದ ಕನ್ನಡ ಭಾಷೆಗೆ ಕಾಯಕಲ್ಪ ನೀಡಿದ ಡಾ. ಚನ್ನಬಸವ ಪಟ್ಟದೇವರ ಸಾಧನೆ ಅತ್ಯಂತ ಮಹತ್ವದ್ದಾಗಿದೆ. "ಶರಣರು ಮತ್ತು ಕನ್ನಡ" ಈ ಮಠದ ಮೂಲ ಮಂತ್ರವಾಗಿದೆ. ಕನ್ನಡ ಬಾರದಿರುವ ಜನರಿಗೆ ಮೋಡಿ ಹಾಗೂ ದೇವನಾಗರಿ ಲಿಪಿಯಲ್ಲಿ ಶರಣರ ವಚನಗಳನ್ನು ಬರೆದುಕೊಟ್ಟು ಬಾಯಿಪಾಠ ಮಾಡಿಸಿದ್ದು ಇವರ ಶರಣ ತತ್ವದ ಪ್ರಸಾರಕ್ಕೆ ಉದಾಹರಣೆಯಾಗಿದೆ. ಅದೇ ರೀತಿ ಹೊರಗಡೆ ಉರ್ದು ಬೋರ್ಡನ್ನು ನೇತುಹಾಕಿ. ಒಳಗಡೆ ಕನ್ನಡ ಕಲಿಸುತ್ತಿದ್ದ ಡಾ. ಚನ್ನಬಸವ ಪಟ್ಟದೇವರ ಕನ್ನಡ ಮನುತೆಗೆ ಉದಾಹರಣೆಯಾಗಿದೆ. ೧೯೪೮ರ ಪೊಲೀಸ್ ಕಾರ್ಯಾಚರಣೆಯ ಸಮಯದಲ್ಲಿಯೂ ಕೂಡ ಸೊಲ್ಲಾಪುರದಲ್ಲಿ ಹೈದರಾಬಾದ್ ನಿರ್ವಾಸಿತರ ಜನರಿಗೆ ಹೈಸ್ಕೂಲನ್ನು ಪ್ರಾರಂಭಿಸಿದರು. ವಿದ್ಯಾರ್ಥಿಗಳ ಪ್ರಸಾದದ ನಿಲಯಕ್ಕಾಗಿ ಕನ್ನಡಾಭಿಮಾನಿಗಳ ಮನೆಮನೆಗೂ ಒಂದೊಂದು ಜೋಳಿಗೆಯನ್ನು ಕಟ್ಟಿ ದಿನಾಲು ಆ ಮನೆಯವರು ಬೀಸುವುದಕ್ಕೆ ಕುಳಿತುಕೊಳ್ಳುವ ಮೊದಲು 'ಒಂದು ಮುಷ್ಟಿ' ಧಾನ್ಯವನ್ನು ಜೋಳಿಗೆಗೆ ಹಾಕಿ ಕಾಯಕ ಆರಂಭಿಸುತ್ತಿದ್ದರು. ಇದನ್ನು "ಶಾಂತಿವರ್ಧಕ ಮುಷ್ಟಿ ಫಂಡ್" ಎಂದು ಕರೆದರು. ಇದರಿಂದ ಅನ್ನದಾಸೋಹ ನಡೆಯಿತು. ಇತ್ತೀಚೆಗೆ ಡಾ. ಬಸವಲಿಂಗ ಪಟ್ಟದೇವರ ನೇತೃತ್ವದಲ್ಲಿ ಗಡಿಭಾಗದಲ್ಲಿ ಶರಣಸಾಹಿತ್ಯ ಪರಿಷತ್ತು, ಕನ್ನಡ ರಥಗಳಂತಹ ಕನ್ನಡಪರ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಸಾವಿರಾರು ಸಮಾರಂಭಗಳನ್ನು ಆಯೋಜಿಸಿ ಗಡಿಭಾಗದಲ್ಲಿ ಕನ್ನಡ ಗಟ್ಟಿಯಾಗಿ ನಿಲ್ಲುವಂತೆ ಮಾಡಿದ ಶ್ರೇಯಸ್ಸು ಶ್ರೀಮಠಕ್ಕೆ ಸಲ್ಲುತ್ತದೆ.

ಕಲಬುರ್ಗಿಯ ಬ್ರಹ್ಮಪುರದಲ್ಲಿರುವ ಚೌಡಾಪುರದ ಹಿರೇಮಠ. ಕ್ರಿ.ಶ. ೧೯೨೮ರಲ್ಲಿ ಪೀಠಾಧಿಕಾರಿಗಳಾಗಿದ್ದ ಶ್ರೀ ಷಟ್ಸ್ಥ ಶಾಂತವೀರ ಶಿವಾಚಾರ್ಯರು, ಶ್ರೀ ಚನ್ನಬಸವಸ್ವಾಮಿಗಳ ಪುರಾಣ, ಶ್ರೀ ಸಿದ್ಧೇಶ್ವರ ಪುರಾಣ, ಶ್ರೀ ಶಿವನಗುಂಡೇಶ್ವರನ ಪುರಾಣಗಳನ್ನು ರಚಿಸಿದ್ದಾರೆ. ಶ್ರೀ ಶರಣಬಸವೇಶ್ವರ ಚರಿತ್ರೆ, ಕರಿಬಸವೇಶ್ವರ

Scanned with CamScanner

ನಾಟಕ ಬರೆದಿದ್ದಾರೆ. ಸುಮಾರು ೩೦೦ ವರ್ಷಗಳ ಇತಿಹಾಸವಿರುವ ರಾವೂರು ಸಿದ್ಧೇಶ್ವರ ಸ್ವಾಮಿಮಠ ೧೯೫೮ರಲ್ಲಿಯೇ ಗೋಳೂರು ಸಿದ್ದವೀರಣ್ಣೊಡೆಯರ ಶೂನ್ಯಸಂಪಾದನೆಯನ್ನು ಪ್ರಕಟಿಸಿದರು. ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ರಟಗಲ್ಲಿನ ಶ್ರೀ ಮುರುಗೇಂದ್ರ ವಿರಕ್ತಮಠ ಅನೇಕ ಪುರಾಣಿಕರಿಗೆ, ಕವಿಗಳಿಗೆ, ಕೀರ್ತನಕಾರರಿಗೆ ಆಶ್ರಯ ನೀಡಿದೆ. ಶ್ರೀ ಮಠದಲ್ಲಿ ಹಸ್ತಪ್ರತಿಗಳಿದ್ದು ಅವುಗಳ ದುರಸ್ತಿಕಾರ್ಯ ನಡೆಯಬೇಕಾಗಿದೆ. ಶಾಸ್ತ್ರ, ಪುರಾಣ, ಕಾವ್ಯ, ಛಂದಸ್ಸು, ಅಲಂಕಾರ, ನಿಘಂಟು, ಜ್ಯೋತಿಷ್ಯ, ವ್ಯಾಕರಣ ಮುಂತಾದ ಶಾಸ್ತ್ರಸಾಹಿತ್ಯ ಕೃತಿಗಳ ಸಂಗ್ರಹ ಇಲ್ಲಿ ಕಾಣಬಹುದು. ರಟಗಲ್ ಮಠಕ್ಕೂ ಹಾಗೂ ಬಳ್ಳಾರಿಯ ಸಕ್ಕರೆ ಕರಡೆಪ್ಪನವರ ಪಾಠಶಾಲೆಗೂ ಸಾಹಿತ್ಯಿಕ ಅವಿನಾಭಾವ ಸಂಬಂಧವಿದ್ದು ಅಲ್ಲಿಯ ಗ್ರಂಥಗಳು ಇಲ್ಲಿಗೂ, ಇಲ್ಲಿಯ ಗ್ರಂಥಗಳೂ ಅಲ್ಲಿಗೂ ವಿನಿಮಯಗೊಂಡ ಮಾಹಿತಿ ತಿಳಿದುಬರುತ್ತದೆ. ಭರತನೂರು ಗುರುನಂಜೇಶ್ವರ ಮಠ ಚಿತ್ತಾಪುರ ತಾಲೂಕಿನಲ್ಲಿದೆ. ಶ್ರೀ ಮಠದಲ್ಲಿ ಹಸ್ತಪ್ರತಿಗಳ ಸಂಗ್ರಹವಿದೆ. ಬಾಲ್ಕಿ ತಾಲೂಕಿನ ಹುಲಸೂರು ವಿರಕ್ತಮಠ ಶ್ರೀ ಮಠದ ಶಿವಾನಂದ ಸ್ವಾಮಿಗಳು ಶಿವಯೋಗ ಮಂದಿರದಲ್ಲಿ ಶಿಕ್ಷಣ ಪಡೆದು ಶಿವಾನಂದಪ್ರಿಯ ಗುರುಬಸವ ಪ್ರಭುವೆ ಎಂಬ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾರೆ.

ಬಸವಕಲ್ಯಾಣ ತಾಲೂಕಿನ ಶ್ರೀ ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ ಹಾರಕೂಡಮಠ ಕನ್ನಡ ಸಾಹಿತ್ಯ–ಸಂಸ್ಕೃತಿಗಳ ನೆಲೆಯಲ್ಲಿ ಗುರುತರವಾದ ಕೆಲಸ ಮಾಡಿದೆ. ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಪ್ರಕಾಶನದ ವಚನ ಸಾಹಿತ್ಯದಲ್ಲಿ ಜೀವನಮೌಲ್ಯಗಳು, ಶರಣರ ಕಾಯಕ ಮತ್ತು ದಾಸೋಹ, ಶರಣರ ವಚನಗಳಲ್ಲಿ ಸಮಾಜಕಾರ್ಯ, ಶೂನ್ಯಸಂಪಾದನೆಯ ಮುಖಿಗಳು, ಕಡಕೋಳ ಮಡಿವಾಳೇಶ್ವರ ಶಿಷ್ಯರ ತತ್ವಪದಗಳು, ಶಿವಶರಣರು ಮತ್ತು ವೈಚಾರಿಕತೆ, ಸಿದ್ಧರಾಮ : ಒಂದು ಸಮೀಕ್ಷೆ ವಿಷಯ ವಚನಸಂಪುಟ ೧೫ ಸಂಪುಟಗಳನ್ನು ಪ್ರಕಟಿಸಿದೆ.

ಯಲಬುರ್ಗಾದ ಸಿದ್ಧರಾಮೇಶ್ವರ ಹಿರೇಮಠದಲ್ಲಿ ಹಸ್ತಪ್ರತಿಗಳ ಸಂಗ್ರಹವಿದ್ದು ಡಾ. ಬಿ.ವ್ಹಿ.ಶಿರೂರ ಅವರ ಸಂಪಾದಕತ್ವದಲ್ಲಿ ಈ ಮಠದಲ್ಲಿ ಇದ್ದ ಚಾರಿತ್ರಿಕ 'ಮೊಲ್ಲೆಬೊಮ್ಮಯ್ಯಗಳ ಕಾವ್ಯ' ಎಂಬ ಶರಣ ಚಳುವಳಿಯ ಕಾಲಘಟ್ಟದಲ್ಲಿ ರಚನೆಯಾದ ಕೃತಿ ಪ್ರಕಟವಾಗಿದೆ.

ಕಲ್ಯಾಣ ಕರ್ನಾಟಕದ ಭಾಗದಲ್ಲಿ ಕನ್ನಡದ ಕೆಲಸ ಮಾಡಿದ ನೂರಾರು ಮಠಗಳಿವೆ. ಆ ಮಠಗಳಿಗೆ ಒಂದು ಪರಂಪರೆಯಿದೆ. ಈ ಹೊತ್ತಿನ ಪಾಠಬೋಧನೆಯ ಸ್ವರೂಪದ ಶಿಕ್ಷಣವಲ್ಲದಿದ್ದರೂ ಪ್ರಾದೇಶಿಕ ತಿಳುವಳಿಕೆಯನ್ನು ಪ್ರಾದೇಶಿಕ ಭಾಷೆಯಲ್ಲಿ ನೀಡಬೇಕೆಂಬ ಮಹತ್ವದ ಉದ್ದೇಶವನ್ನು ಈ ಭಾಗದ ಮಠ–ಮಾನ್ಯಗಳು ಹೊಂದಿದ್ದವು. ಆ ಮೂಲಕ ಕೀರ್ತನಕಾರರಿಗೆ, ಪ್ರವಚನಕಾರರಿಗೆ, ಸಂಗೀತಗಾರರಿಗೆ ಪ್ರೋತ್ಸಾಹನೀಡಿ ಕನ್ನಡ ಸಾಹಿತ್ಯದ ಪ್ರಸಾರಕ್ಕೆ ಮುಂದಾಗಿರುವುದನ್ನು ಗುರುತಿಸಬಹುದು. ಈ ಹೊತ್ತು ಸರಕಾರಿ ಶಾಲೆಗಳು, ಸರಕಾರಿ ಆಸ್ಪತ್ರೆಗಳು, ಸರಕಾರಿ ವಿದ್ಯಾರ್ಥಿ ನಿಲಯಗಳಿವೆ, ಒಂದು ಕಾಲಕ್ಕೆ ಇಂಥ ಎಲ್ಲ ಸೌಲಭ್ಯಗಳನ್ನು ನೀಡಿ ಸಾಕ್ಷರತೆ, ಆರೋಗ್ಯ ಮತ್ತು ಧಾರ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ಮಠ–ಮಾನ್ಯಗಳ ಕರ್ತವ್ಯ ವಿನೂತನ ಪ್ರಯೋಗವಾಯಿತು, ಅಂಥ ಪ್ರಯೋಗವನ್ನು ಕಲ್ಯಾಣ–ಕರ್ನಾಟಕದ ಮಠ–ಮಾನ್ಯಗಳು ಮಾಡಿ ಈ ಭಾಗದ ಸಾಂಸ್ಕೃತಿಕ ಇತಿಹಾಸಕ್ಕೆ ನಾಂದಿ ಹಾಡಿದವು. ❑

Scanned with CamScanner

ಸಾರ್ಥಕ ಬದುಕು

ವಚನಗಳು - ವಚನಕಾರರು : ಸಂಶೋಧನಾತ್ಮಕ ದೃಷ್ಟಿಕೋನ

ನ್ಯಾಯಮೂರ್ತಿ **ಶಿವರಾಜ ವಿ. ಪಾಟೀಲ**

ಅಪರ ಎಂಬತ್ತರ ಸಂಭ್ರಮ

ಗೌರವ ಸಂಪುಟ

ಸಂಪಾದಕ

ಡಾ. ಅಮರೇಶ ಯತಗಲ್

Scanned with CamScanner

SAARTHAKA BADUKU

A Felicitation Volume-1
In Honour of Justice Shivaraj V. Patil

Editor
Dr. Amaresh Yatagal
HOD, Dept. of Epigraphy
Kannada University, Hampi
Vidyaranya -583276
Mob: 9972841256
E-mail: dryatagal@gmail.com

Published by
Justice Shivaraj V. Patil Foundation (Reg.), Rayachur
Mob : 9845083177

First Edition : January 2020

Copyright : Publishers

Pages : xvi+748+28

Price : Rs. 1000/-

Size : Crown 1/4

Paper used : 70 GSM NS Maplitho

ISBN : 978-93-5406-223-0

Anubhavamantapa Photo Art : Nadoja Dr. J.S. Khande Rao

Cover Page Design : S. Manjunath

Inner Layout : Sunitha V.D., K.L. Rajashekhar

ಸ್ವಾನ್ ಪ್ರಿಂಟರ್ಸ್
www.svanprinters.com
☎ 080-26742233

Scanned with CamScanner

ಸಾರ್ಥಕ ಬದುಕಿನ ಪುಟಗಳಲ್ಲಿ...

ಸಂಪಾದಕೀಯ

ಕೃತಜ್ಞತಾನುಡಿ

ಸಂದೇಶಗಳು

ವಚನ ಸಾಹಿತ್ಯ ಮತ್ತು ಸಂಸ್ಕೃತಿ : ವಿಭಿನ್ನ ಆಯಾಮಗಳು

೧. ಶಿವ-ಶರಣ ಸಂಸ್ಕೃತಿಯ ಪಾರಂಪರಿಕ ವಿಕಾಸ – ಡಾ. ಎಂ.ಜಿ. ನಾಗರಾಜ್ / ೧

೨. ವಚನ ಸಾಹಿತ್ಯ: ಉಗಮ, ಸ್ವರೂಪ-ಲಕ್ಷಣ – ಡಾ. ವೀರಣ್ಣ ದಂಡೆ / ೧೧

೩. ವಚನ ಸಂಸ್ಕೃತಿ: ಬೆಡಗು-ಬೆರಗು-ಸೃಷ್ಟಿಯ ವಿನ್ಯಾಸಗಳು– ಡಾ. ವಿ.ಎಸ್. ಮಾಳಿ / ೩೬

೪. ವಚನ ಧರ್ಮದ ಅನನ್ಯತೆ – ಡಾ. ವೀರಣ್ಣ ರಾಜೂರ / ೪೧

೫. ವಚನ ಸಾಹಿತ್ಯದ ಬೆಳಕಿನಲ್ಲಿ ಜಾಗತೀಕರಣದ ನೆಲೆ – ಡಾ. ಜಯಶ್ರೀ ದಂಡೆ / ೪೯

೬. ವಚನ ಸಾಹಿತ್ಯದಲ್ಲಿ ಸ್ಥಾವರ-ಜಂಗಮ ಪರಿಕಲ್ಪನೆ – ಡಾ. ಸಿ. ನಾಗಭೂಷಣ / ೬೧

೭. ವಚನ ಸಾಹಿತ್ಯದಲ್ಲಿ ದೇಹದ ಪರಿಕಲ್ಪನೆ – ಡಾ. ಮೃತ್ಯುಂಜಯ ರುಮಾಲೆ / ೭೩

೮. ವಚನ ಸಾಹಿತ್ಯದಲ್ಲಿ ಅಂತರಂಗ-ಬಹಿರಂಗ ಶುದ್ಧಿ – ಡಾ. ಕೆ. ರವೀಂದ್ರನಾಥ / ೮೫

೯. ವಚನ ಸಾಹಿತ್ಯದಲ್ಲಿ ಆಹಾರ ಸಂಸ್ಕೃತಿ – ಶ್ರೀ ಈರಪ್ಪ ಎಂ. ಉಪ್ಪಲದಿನ್ನಿ / ೮೯

೧೦. ವಚನ ಸಾಹಿತ್ಯದಲ್ಲಿ ಮಾನವತಾವಾದದ ವಿಭಿನ್ನ ಆಯಾಮಗಳು– ಡಾ. ಮಲ್ಲೇಶಪ್ಪ ಸಿದ್ರಾಂಪೂರ / ೯೪

೧೧. ವಚನ ಸಾಹಿತ್ಯದಲ್ಲಿ ದೇವಾಲಯಗಳ ನಿರ್ವಚನ – ಡಾ. ಬಿ.ವ್ಹಿ. ಶಿರೂರ / ೧೦೪

೧೨. ವಚನ ಸಾಹಿತ್ಯದಲ್ಲಿ ಶರಣಸತಿ-ಲಿಂಗಪತಿ ಪರಿಕಲ್ಪನೆ – ಡಾ. ಬಿ.ಎಸ್. ಬಿರಾದಾರ / ೧೧೨

೧೩. ವಚನ ಸಾಹಿತ್ಯದಲ್ಲಿ ಕ್ರಿಯೆಯ ಸ್ವರೂಪ – ಡಾ. ಎಂ.ಬಿ. ಹೂಗಾರ / ೧೨೫

೧೪. ವಚನ ಸಾಹಿತ್ಯದಲ್ಲಿ ನ್ಯಾಯ ಪರಿಕಲ್ಪನೆ – ಶ್ರೀ ಐ.ಜಿ. ಚಂದ್ರಶೇಖರಯ್ಯ / ೧೩೧

೧೫. ವಚನ ಸಾಹಿತ್ಯದಲ್ಲಿ ಆತ್ಮನಿವೇದನೆ – ಡಾ. ಹನುಮಂತ ಮೇಲಿನಮನಿ / ೧೩೭

೧೬. ವಚನ ಸಾಹಿತ್ಯದಲ್ಲಿ ದಾರ್ಶನಿಕತೆ – ಡಾ. ಗುರುಪಾದ ಮರಿಗುದ್ದಿ / ೧೪೭

೧೭. ವಚನ ಸಾಹಿತ್ಯದಲ್ಲಿ ವಿಜ್ಞಾನದ ಅರಿವು – ಡಾ. ಸವಿತಾ ಸಿರಗೋಜಿ / ೧೫೮

೧೮. ವಚನ ಸಾಹಿತ್ಯದಲ್ಲಿ ದಲಿತೋದ್ಧಾರ – ಡಾ. ಅರ್ಜುನ ಗೊಳಸಂಗಿ / ೧೭೩

೧೯. ವಚನ ಸಾಹಿತ್ಯದಲ್ಲಿ ಸದಾಚಾರದ ವಿವೇಚನೆ – ಡಾ. ವಿಜಯಕುಮಾರ ಎಸ್. ಕಟಗಿಹಳ್ಳಿಮಠ / ೧೭೭

೨೦. ವಚನ ಸಾಹಿತ್ಯದಲ್ಲಿ ಸ್ವರ್ಗ-ನರಕಗಳ ಪರಿಕಲ್ಪನೆ – ಡಾ. ಎಚ್.ಎಂ. ಚನ್ನಪ್ಪಗೋಳ / ೧೮೬

೨೧. ವಚನ ಸಾಹಿತ್ಯದಲ್ಲಿ ಆತ್ಮವಿಮರ್ಶೆಯ ಅಭಿವ್ಯಕ್ತಿ – ಡಾ. ಸಿ.ಯು. ಮಂಜುನಾಥ್ / ೧೯೨

Scanned with CamScanner

೨೨. ವಚನ ಸಾಹಿತ್ಯದಲ್ಲಿ ಸಹಕಾರದ ನೆಲೆಗಳು – ಡಾ. ಗಂಗಾಂಬಿಕೆ ಪಾಟೀಲ / ೨೦೫
೨೩. ವಚನ ಸಾಹಿತ್ಯದಲ್ಲಿ ಯೋಗದ ಪರಿಕಲ್ಪನೆ – ಡಾ. ಎಫ್.ಟಿ. ಹಳ್ಳಿಕೇರಿ / ೨೧೧
೨೪. ವಚನ ಸಾಹಿತ್ಯದಲ್ಲಿ ವ್ಯಯ ಮತ್ತು ದಾಸೋಹ – ಡಾ. ಲಿಂಗಪ್ಪ ಗೋನಾಲ / ೨೧೯
೨೫. ವಚನ ಸಾಹಿತ್ಯ: ಸಾಮಾಜಿಕತೆ ಹಾಗೂ ಮಹಿಳಾ ಸಂಕಥನ – ಡಾ. ಅಪ್ಪಗೆರೆ ಸೋಮಶೇಖರ್ / ೨೩೫
೨೬. ವಚನ ಸಾಹಿತ್ಯ: ವಿಶಿಷ್ಟ ಸಾಂಸ್ಕೃತಿಕ ಆಯಾಮಗಳು – ಡಾ. ನಿಂಗಪ್ಪ ಮುದೇನೂರು / ೨೪೮
೨೭. ವಚನ ಸಾಹಿತ್ಯ–ದಾಸ ಸಾಹಿತ್ಯ: ದೃಷ್ಟಿ–ಸೃಷ್ಟಿ – ಡಾ. ಸ್ವಾಮಿರಾವ್ ಕುಲಕರ್ಣಿ / ೨೬೪
೨೮. ವಚನ ಸಾಹಿತ್ಯ ಮತ್ತು ಸಂಸ್ಕೃತಿ: ವರ್ತಮಾನದ ಅವಲೋಕನ – ಡಾ. ಸುರೇಶ ಹನಗಂಡಿ / ೨೭೭
೨೯. ವಚನ ಸಾಹಿತ್ಯ ಮತ್ತು ಜಾಗತೀಕರಣ – ಡಾ. ಸಿ.ಕೆ. ನಾವಲಗಿ / ೨೮೪
೩೦. ವಚನ ಸಾಹಿತ್ಯ ಮತ್ತು ವ್ಯಕ್ತಿತ್ವ ವಿಕಸನ – ಪ್ರೊ. ಬಿ.ಎಂ. ಹಿರೇಮಠ / ೨೯೨
೩೧. ವಚನ ಸಾಹಿತ್ಯ ಬೆಳಗಿದ ಹೊರನಾಡ ಶರಣರ ಚಿಂತನೆಗಳು – ಶ್ರೀ ಯ.ರು. ಪಾಟೀಲ / ೨೯೮
೩೨. International Understanding And Vachana Literature - **Nadoja Dr. Manu Baligar** / 324
೩೩. ಬೆಡಗಿನ ವಚನ ಸಾಹಿತ್ಯ – ಶ್ರೀ ಪ್ರಕಾಶ ಗಿರಿಮಲ್ಲನವರ / ೩೨೯
೩೪. ಶಾಸನಗಳಲ್ಲಿ ವಚನ ಸಾಹಿತ್ಯ – ಡಾ. ಜಯರಾಮಯ್ಯ ವಿ. / ೩೪೦
೩೫. ವಚನಗಳ ಇಂಗ್ಲಿಷ್ ಅನುವಾದ: ಚಾರಿತ್ರಿಕ ನೋಟ – ಡಾ. ಎಸ್.ಎಸ್. ಪಾಟೀಲ / ೩೪೬
೩೬. ವಚನಗಳಲ್ಲಿ ಗಣಿತ – ಡಾ. ಮಲ್ಲಿಕಾರ್ಜುನ ಯಾಳವಾರ / ೩೬೧
೩೭. ವಚನಗಳಲ್ಲಿ ಹಾಸ್ಯ – ಡಾ. ಬಸವರಾಜ ಜಗಜಂಪಿ / ೩೭೨
೩೮. ವಚನಗಳಲ್ಲಿ ಸಂಗೀತ – ಪಂ. ಸಿದ್ಧರಾಮಯ್ಯ ಮಠಪತಿ / ೩೭೭
೩೯. ವಚನಗಳಲ್ಲಿ ಚಿತ್ರಕಲೆಯ ಪರಿಕಲ್ಪನೆ – ಡಾ. ಬಸವರಾಜ ಅನಗವಾಡಿ / ೩೮೭
೪೦. ವಚನಗಳು ಕನ್ನಡದ ದರ್ಶನಗಳು – ಡಾ. ಶಿವಾಜಿ ಜ್ಯೋತಿ / ೩೯೫
೪೧. ವಚನಗಳು ಮತ್ತು ಮಾನಸಿಕ ಆರೋಗ್ಯ – ಡಾ. ಸಿ.ಆರ್. ಚಂದ್ರಶೇಖರ್ / ೪೦೩
೪೨. ವಚನಕಾರರ ಪರತ್ರಯಗಳ ಕುರಿತು ಚಿಂತನೆ – ಡಾ. ಬಸವರಾಜ ಸಾದರ / ೪೧೩
೪೩. ವಚನಕಾರರ ಅಭಿವ್ಯಕ್ತಿ ಸ್ವರೂಪ ಮತ್ತು ತಾತ್ವಿಕತೆ – ಡಾ. ನಂದೀಶ್ವರ ದಂಡೆ / ೪೨೩
೪೪. ವಚನಕಾರರ ಆರ್ಥಿಕ ಚಿಂತನೆ – ಡಾ. ಟಿ.ಆರ್. ಚಂದ್ರಶೇಖರ / ೪೩೯
೪೫. ವಚನಕಾರರ ದೃಷ್ಟಿಯಲ್ಲಿ ಪುರಾಣ – ಡಾ. ವಿಜಯಕುಮಾರಿ ಎಸ್. ಕರಿಕಲ್ / ೪೭೦
೪೬. ವಚನಕಾರರ ಕಾಯಕ–ದಾಸೋಹ: ಅರ್ಥಶಾಸ್ತ್ರದ ದೃಷ್ಟಿ – ಡಾ. ಟಿ.ಆರ್. ಗುರುಬಸವಪ್ಪ / ೪೭೮
೪೭. ವಚನಕಾರರ ಪ್ರಭಾವಳಿಯಲ್ಲಿ ಕಲ್ಯಾಣ ಕರ್ನಾಟಕದ ತತ್ವಪದಕಾರರು – ಡಾ. ಸಿ.ಬಿ. ಚಿಲ್ಕರಾಗಿ / ೪೮೪
೪೮. ವಚನಕಾರರ ನೆಲೆಯಲ್ಲಿ ಉಪಸಂಸ್ಕೃತಿ – ಡಾ. ಬಸವರಾಜ ಸಬರದ / ೪೯೯
೪೯. ವಚನಕಾರರ ಬದುಕಿನ ನೆಲೆ–ಬೆಲೆ – ಡಾ. ಎಂ.ಜಿ. ಈಶ್ವರಪ್ಪ / ೫೧೦
೫೦. ವಚನಕಾರರ ವೃತ್ತಿಮೌಲ್ಯಗಳು – ಡಾ. ರಘುಶಂಖ ಭಾತಂಬ್ರಾ / ೫೧೮
೫೧. ವಚನಕಾರರ ವೈಚಾರಿಕ ಕ್ರಾಂತಿ – ಶ್ರೀ ಮಾಳಪ್ಪ / ೫೩೦
೫೨. ವಚನಕಾರರ ಜಾತಿಯ ಪರಿಕಲ್ಪನೆಯ ಹೊಸ ಆಯಾಮಗಳು – ಡಾ. ಕಿರಣ್‌ಕುಮಾರ್ ಸ. ರಾಯರ್ / ೫೩೯

Scanned with CamScanner

[illegible] ಅನ್ವೇಷಿಸಿದ ದೇವರು – ಡಾ. ಜೆ.ಎಸ್. ಪಾಟೀಲ / ೫೫೧
[illegible] ಮತ್ತು ಕ್ವಾಂಟಂ ಜಗತ್ತು – ಡಾ. ಎಂ.ಎಸ್. ಹುಲ್ಲೋಳಿ / ೫೫೬
[illegible] ಮತ್ತು ಜ್ಯೋತಿಷ್ಯಶಾಸ್ತ್ರ – ಶ್ರೀ ಷಣ್ಮುಖಯ್ಯ ಅಕ್ಕೂರಮಠ / ೫೬೨
[illegible] ನೀತಿಸಂಹಿತೆ – ಡಾ. ಶೀಲಾಕಾಂತ ಪತ್ತಾರ / ೫೮೦
[illegible] ಸಂತರ ಚಳವಳಿಯ ನೆಲೆಗಳು – ಡಾ. ವಿಜಯ ಆರ್. ಕಾಂಬಳೆ / ೫೮೩
[illegible] ಚಿರಿತ ಪ್ರಾತಿನಿಧಿಕ ನಾಟಕಗಳು – ಡಾ. ಚಂದ್ರಕಾಂತ ಆರ್.ಬಿ. / ೫೯೬
[illegible] ಕಂಡ ಸಹಜ ಧರ್ಮ – ಡಾ. ಶಶಿಕಾಂತ ಪಟ್ಟಣ / ೬೧೭
[illegible] ಕಂಡ ಶಿವತತ್ವ – ಡಾ. ಇಂದುಮತಿ ಪಾಟೀಲ / ೬೨೭
[illegible] ಹೆಳ್ಳಗಳಿಗೆ ನೀಡಿದ ಜಂಗಮದೀಕ್ಷೆ – ಡಾ. ಎಚ್.ಜಿ. ಹನ್ನೆರಡುಮಠ / ೬೩೬
[illegible] ಮತ್ತು ಪರಿಸರ – ಡಾ. ಬಸವರಾಜ ಬಲ್ಲೂರ / ೬೪೭
[illegible] ಮತ್ತು ಜನಪದ ಸಾಹಿತ್ಯ – ಡಾ. ಬಸವರಾಜ ಪೋಲಿಸ ಪಾಟೀಲ / ೬೫೦
[illegible] ಮತ್ತು ಇಸ್ಲಾಂಧರ್ಮ: ತತ್ವ ಸಾಮ್ಯತೆ – ಶ್ರೀ ಅಬ್ಬಾಸ್ ಮೇಲಿನಮನಿ / ೬೫೮
[illegible] ಸಮಾಧಾನ: ಒಂದು ಚಿಂತನೆ – ಡಾ. ಗೊ.ರು. ಚನ್ನಬಸಪ್ಪ / ೬೭೫
[illegible] ಸಮಾಧಾನೆಯಲ್ಲಿ ಕುರುಹು ಮತ್ತು ಅರಿವಿನ ಪರಿಕಲ್ಪನೆ – ಡಾ. ಅಮರೇಶ ನುಗಡೋಣಿ / ೬೮೦
[illegible] ವಿರಕ್ತರು ಮತ್ತು ಅವರ ಸ್ವರವಚನಗಳು – ಪ್ರೊ. ಡಿ.ವಿ. ಪರಮಶಿವಮೂರ್ತಿ / ೬೮೭
[illegible] ಒಂದು ವಿಶ್ಲೇಷಣೆ – ಡಾ. ಗುರುಲಿಂಗಪ್ಪ ಧಬಾಲೆ / ೭೦೦
[illegible] – ವಚನಾಜ್ಞೆಯ: ತೌಲನಿಕ ನೋಟ – ಡಾ. ಎಸ್. ಎಂ. ಹಿರೇಮಠ / ೭೧೨
[illegible] ಸಹನಶೀಲವಾಗುವ ಪರಿ – ಡಾ. ಪಿ.ವಿ. ನಾರಾಯಣ / ೭೨೫
[illegible] ಅಮಿತ ಅಭಿಮಾನ – ಪ್ರೊ. ಎಸ್.ಜಿ. ಸಿದ್ಧರಾಮಯ್ಯ / ೭೨೯
[illegible] ಎಮ್ಮೆವರು ವ್ಯಕ್ತಿಗಳಲ್ಲ – ಶ್ರೀ ಬಸವರಾಜಸ್ವಾಮಿ / ೭೩೪
[illegible] ವಾಚ್ಯಯ ಮತ್ತು ಪದಕೋಶಗಳು – ಶ್ರೀ ಸುಂಕಂ ಗೋವರ್ಧನ / ೭೩೮

Scanned with CamScanner

80 ಸಾರ್ಥಕ ಬದುಕು

ವಚನ ಸಾಹಿತ್ಯದಲ್ಲಿ ಅಂತರಂಗ-ಬಹಿರಂಗ ಶುದ್ಧಿ

ಡಾ. ಕೆ ರವೀಂದ್ರನಾಥ

'ವಚನ ಸಾಹಿತ್ಯ' ಕನ್ನಡಿಗರು ಜಾಗತಿಕ ಸಾಹಿತ್ಯಕ್ಕೆ ನೀಡಿದ ಅಪೂರ್ವ ಕೊಡುಗೆ. ಈ ಸಾಹಿತ್ಯದ ಮೂಲಕ ಸಾಮಾಜಿಕ ಚಳವಳಿಯನ್ನು ಹುಟ್ಟುಹಾಕಿದ ವಚನಕಾರರ ಸಾಧನೆ ಅನನ್ಯವಾದುದು. ಧರ್ಮವನ್ನು ತತ್ವವೆಂದು ಪರಿಭಾವಿಸಿಕೊಂಡು, ತತ್ವವನ್ನು ಬದುಕಿನ ಮೌಲ್ಯವೆಂದು ಪ್ರತಿಪಾದಿಸಿದ ವಿನೂತನ ಉಪಕ್ರಮವನ್ನು ಅನುಸರಿಸಿ, ಅನುಷ್ಠಾನಕ್ಕೆ ತಂದ ಈ ಚಳವಳಿಯ ಅರ್ಥವ್ಯಾಪ್ತಿಯನ್ನು ಎಲ್ಲ ಮಗ್ಗಲುಗಳಿಂದ ವಿಸ್ತರಿಸಿದರು. ಕ್ರಿಯೆ-ಭಾವ, ಲಿಂಗ-ಜಂಗಮ, ಕಾಯಕ-ದಾಸೋಹ, ಸ್ಥಾವರ-ಜಂಗಮ, ಭಕ್ತ-ಭವಿ, ಲಿಂಗಾಂಗ ಸಾಮರಸ್ಯ, ಶಿವಯೋಗ-ಶಿವಯೋಗ ಮುಂತಾದ ತಾತ್ವಿಕ ಸಿದ್ಧಾಂತಗಳಿಗೆ ಸರಳಸೂತ್ರವನ್ನು ಒದಗಿಸಿದ ಪ್ರಸ್ತುತ ಲೇಖನದಲ್ಲಿ ವಚನಕಾರರು ತಮ್ಮ ವಚನಗಳಲ್ಲಿ ಪ್ರತಿಪಾದಿಸಿದ ಅಂತರಂಗ-ಬಹಿರಂಗ ಶುದ್ಧಿಯ ಸ್ವರೂಪವನ್ನು ವಿಶ್ಲೇಷಿಸುವುದಾಗಿದೆ.

ಉದಾಹರಣೆಗೆ ಪ್ರಸಿದ್ಧ ವಚನವೊಂದು ಹೀಗಿದೆ:

ಸಿಡಿದ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ
ಇದು ಕಾರಣ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ
ಇದು ನಮ್ಮ ಕೂಡಲಸಂಗಮದೇವರನೊಲಿಸುವ ಪರಿ

Scanned with CamScanner

ಇದುವರೆಗೆ ವಿದ್ವಾಂಸರು, ಚಿಂತಕರು, ಅನುಭಾವಿಗಳು ಬಸವಣ್ಣನವರ ಈ ವಚನವನ್ನು ಸಪ್ತ ಆದೇಶ ಇವುಗಳ ಪಾಲನೆಯಿಂದ ಜೀವನ ಪಾವನವಾಗುತ್ತದೆಂದೂ ವಿವೇಚನೆ ಮಾಡಿದ್ದಾರೆ. ಶರಣ ಸಿದ್ಧಾಂತ ಸಿದ್ಧಾಂತ. ಅವರ ಪ್ರಕಾರ ಎಲ್ಲವೂ ಒಂದೇ. ಎಲ್ಲರೂ ಒಂದೇ. ಹೀಗಾಗಿ ಅಂತರಂಗ-ಬಹಿರಂಗ, ದೇವ ಮೃತ್ಯ್ಯಲೋಕ, ಇಹ-ಪರ ಎಂಬ ಎರಡೆರಡು ನೆಲೆಗಳಿಲ್ಲ. ಎಲ್ಲವೂ ಒಂದೇ ಎಂಬ ಸಿದ್ಧಾಂತವೇ ಏಕದೇವೋಪಾಸನೆಯ ತತ್ವವಾಗಿದೆ. ಹೀಗಾಗಿ ಈ ಮೇಲಿನ ವಚನದಲ್ಲಿಯ ತತ್ವಗಳನ್ನು ಅನುಸರಿಸಿದರೆ ಅಂತ ಅಂದರೆ ನನ್ನ ಉದ್ಧಾರದ ಜೊತೆಗೆ ಬಹಿರಂಗಶುದ್ಧಿ ಅಂದರೆ ಇಡೀ ಸಮಾಜ ಅಥವಾ ಪರಿಸರ ಉದ್ಧಾರವಾ ಆಶಯವಿದೆ. ಇದೊಂದು ವಿಶಿಷ್ಟವಾದಂತಹ ಜೀವನಕ್ರಮ. ನಾನು ಶುದ್ಧಿಯಾದರೆ ತೀರದು ನನ್ನ ಸುತ್ತಲಿನ ಪ ಶುದ್ಧಿಯಾಗಿರಬೇಕು. ಹಾಗಾಗದಿದ್ದರೆ ನಾನು ಮಾತ್ರ ಸ್ನಾನ ಮಾಡಿ ಶುಚಿಯಾದ ಉಡುಪು ಧರಿಸಿಕೊಂಡು ಹೋಗಿ ಕುಳಿತುಕೊಂಡ ಹಾಗೆ ಆಗುತ್ತದೆ. ಹೀಗಾಗಿ ವಚನ ಸಿದ್ಧಾಂತ ಹೇಳುವುದೇನೆಂದರೆ ಬಹಿರಂ ಅಂತರಂಗದ ನುಡಿಯಾಗಬೇಕು; ಅಂತರಂಗದ ನುಡಿ ಬಹಿರಂಗದ ನಡೆಯಾಗಬೇಕು. ಇದನ್ನೇ ವಚನಕಾರ ಮತ್ತು ಜ್ಞಾನ ಎಂದು ಹೇಳಿದ್ದಾರೆ.

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆ ಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ

ಬೇರೆಯವರ ಕಷ್ಟಗಳಿಗೆ ಸ್ಪಂದಿಸಬಾರದೆಂಬುದು ಈ ವಚನದ ಅರ್ಥವಲ್ಲ. ನಿಮ್ಮ ಮನ(ಅಂತರಂ ನಿಮ್ಮ ತನು(ಬಹಿರಂಗವನ್ನು) ಸಂತೈಸಿಕೊಳ್ಳದ, ಸರಿ ಮಾಡಿಕೊಳ್ಳದ ವ್ಯಕ್ತಿತ್ವ ಎಲ್ಲಿಯವರೆಗೆ ನಿಮ್ಮಲ್ಲಿ ಇರುತ್ತ ಅಂಥವರಿಗೆ ಲೋಕದ ಡೊಂಕನ್ನು ತಿದ್ದುವ ಯಾವ ಅರ್ಹತೆಯೂ ಇಲ್ಲವೆಂಬುದು ಈ ವಚನದ ಆಶಯ

ವಚನಗಳು ಅಂತರಂಗ-ಬಹಿರಂಗ ಪರಿಕಲ್ಪನೆಯನ್ನು ಲೌಕಿಕ ನೆಲೆಯಲ್ಲಿ ಮಾತ್ರ ಸಮೀಕರಿಸಲು ಬದಲಾಗಿ ಅಂತರಂಗದಲ್ಲಿ ಬೆಳಗುವ ಪ್ರಾಣಲಿಂಗಕ್ಕೂ, ಬಹಿರಂಗದಲ್ಲಿ ಧರಿಸಿಕೊಳ್ಳುವ ಇಷ್ಟಲಿಂಗಕ್ಕೂ ಸಾವಯವ ಸಂಬಂಧವನ್ನು ನಿರೂಪಿಸುವ ಪ್ರಯತ್ನ ಮಾಡಿದ್ದಾರೆ.

ಇಷ್ಟಲಿಂಗ ಪ್ರಾಣಲಿಂಗವೆಂಬ ಭೇದವನಾರು ಬಲ್ಲರು ಹೇಳಾ?
ಅಂತರಂಗವೆಂಬ ಶಬ್ದಕ್ಕೆ ಬಹಿರಂಗ ಮುಂದುಗೊಂಡಿಪ್ಪುದು
ಬಹಿರಂಗವೆಂಬ ಶಬ್ದಕ್ಕೆ ಅಂತರಂಗ ಮುಂದುಗೊಂಡಿಪ್ಪುದು
ಮನವ ನಡೆಗೊಂಡ ಲಿಂಗದ ಅರಿವು ವಿಚಾರವ್ಯಾಕುಲಕ್ಕೊಳಗಾಗಬಾರದೆಂದು
ಮನ ಭಾವ ಜ್ಞಾನ ನೋಟವ ತಂದು ಕರಸ್ಥಲದಲ್ಲಿ ನಿಕ್ಷೇಪಿಸಿ
ಅಂತರಂಗ ಬಹಿರಂಗವೆಂದರಿಯದೆ ಅನಿಮಿಷನಾಗಿಪ್ಪನಾ ಶರಣನು.

ಕರಸ್ಥಲದಲ್ಲಿಯ ಇಷ್ಟಲಿಂಗವೆಂದರೆ ಅದು ಮನ, ಭಾವ, ಜ್ಞಾನ ಮತ್ತು ನೋಟ ಎಲ್ಲವೂ ಆದ ಮತ್ತು ಬಹಿರಂಗವನ್ನು ವ್ಯಾಪಿಸಿದ ನಿಕ್ಷೇಪದಂತೆ;

Scanned with CamScanner

ಕ್ಕ ಪಾಯಿದೆ ತನ್ನ ತಾ ನೋಡದೆ
ಕ್ಕ ಪಾ ನುಡಿಯದೆ ಅನ್ಯರ ಸುದ್ದಿಯ ನುಡಿದಾಡುವ
ಇವ್ವಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ
ಪ್ರಸಾದವಿಲ್ಲ, ಪ್ರಸಾದವಿಲ್ಲ ಅವನು ಸರ್ವಾಪರಾಧಿ
ಕಪಟ ಮುಖವ ನೋಡಲಾಗದು ಬಸವಪ್ರಿಯ ಕೂಡಲ ಚನ್ನಬಸವಣ್ಣ.

ಚೆನ್ನಬಸವಣ್ಣನ ಈ ವಚನ ಅಂತರಂಗದಲ್ಲಿ ಕಪಟವನ್ನಿಟ್ಟುಕೊಂಡು, ಅನೇಕ ಹುಳುಗಳನ್ನು ತುಂಬಿಕೊಂಡು ಬಹಿರಂಗದಲ್ಲಿ ಮಾಡಾಡುವವನಿಗೆ ಗುರುಲಿಂಗ-ಲಿಂಗ-ಜಂಗಮವಿಲ್ಲ. ಅಂದರೆ ಷಟ್ಸ್ಥಲ ಮಾರ್ಗದಲ್ಲಿ, ಅಷ್ಟಾವರಣದಲ್ಲಿ ಯಾವ ನೈತಿಕತೆ ಇರುವುದಿಲ್ಲವೆಂದು ನೇರವಾಗಿ ನುಡಿಯುತ್ತಾಳೆ. ಉರಿಲಿಂಗದೇವ ಅಂಕಿತದ ಈ ವಚನ:

ಅಂತರಂಗದಲ್ಲಿ ಆವರಿಸಿ ಬಹಿರಂಗದಲ್ಲಿ ತೋರುವೆ
ಕಿರಿಯ ಕೊನೆಯಲ್ಲಿ ಮೂರ್ತಿಯಾಗಿ ಮನದ ಕೊನೆಯಲ್ಲಿ
ಹೋಗುವೆ!

ಅಂದರೆ ಅಂತರಂಗದಲ್ಲಿ ಆವರಿಸಿದ್ದ ಭಾವವನ್ನು ಬಹಿರಂಗದಲ್ಲಿ ವ್ಯಕ್ತಪಡಿಸಬೇಕು. ಹೇಗೆಂದರೆ ಕಣ್ಣಿನ ಮುಂದೆ ನೋಡಿದ್ದನ್ನು ಮನಸ್ಸಿನ ಕೊನೆಯಲ್ಲಿ ತುಂಬಿಕೊಳ್ಳುವ ಸ್ಥಿತಿಯಂತೆ ಅಂತರಂಗ-ಬಹಿರಂಗ ಎಲ್ಲವೂ ಸಮವಾಗಿರಬೇಕು. ಕ್ರಿಯಾತ್ಮಕವಾಗಿರಬೇಕು ಎಂಬುದನ್ನು ತಿಳಿಸಿದ್ದಾಳೆ.

ಹೀಗೆ ಜ್ಞಾನವಳಿದು ಲಿಂಗದೇಹಿಯಾದ ಶರಣನು ಬಹಿರಂಗ ಮಾಯಾ ಮೋಹವನ್ನು ಜಡೆಯುತ್ತಾನೆ. ಮನುಷ್ಯ ಸಹಜವಾದ ರಾಜಸ, ತಾಮಸ ಕಳೆಗಳೆಲ್ಲ ಹೋಗಿ ಎಲ್ಲರನ್ನು ಸಮಾನವಾಗಿ ನೋಡುವ ಗುಣ ಹಾಗಾಗಿ ಬೆಳೆದು ಬರುತ್ತದೆ. ೧೨ನೇ ಶತಮಾನದ ಶಿವಶರಣರು ಮನುಷ್ಯನಲ್ಲಿ ಚಿಗುರೊಡೆವ ಹುಸಿಯನ್ನು ಹಾಸೆಯನ್ನು ನೋವು-ಮರಣಗಳನ್ನು ಒಟ್ಟಿನಲ್ಲಿ ಬಹಿರಂಗದಲ್ಲಿಯ ಮಾಯಾ ಮೋಹವನ್ನು ಕಿತ್ತು, ಪಡಿ ಪಸನುಮಾಡಿ ಅಂತರಂಗ-ಬಹಿರಂಗವೆನ್ನದೆ ಸರ್ವಾಂಗದಲ್ಲಿ ಎಲ್ಲ ಕಾಲ-ದೇಶ-ಜಾತಿ-ಜನಾಂಗಕ್ಕೆ ಪೂರಕವಾಗಿ ಪೀಡಾಮುಕ್ತಿಯ ತತ್ವವನ್ನು ಸಾರಿದರು. ಆ ತತ್ವಗಳು ದೇವಲೋಕ-ಮರ್ತ್ಯಲೋಕ ಬೇರಿಲ್ಲ. ನಡೆಯೊಳಗೆ ನುಡಿಯೊಳಗೆ ನಡೆತುಂಬಿ ನಡೆ-ನುಡಿ ಎರಡನ್ನೂ ಪರಿಪೂರ್ಣಗಳಿಸಿಕೊಂಡಾತನೆ ಶರಣ! ಹೀಗಾಗಿ ಅಂದಿನ ತಂಫಾಜಾರಗಳನ್ನು ನಿರಾಕರಿಸಿದ ಶರಣರು, ಅಂತರಂಗದ ಕಪಟವನ್ನು ಬಯಲು ಮಾಡಿದ್ದಾರೆ.

ಬಾಯ ಶತಗನ ಭಕ್ತಿ ದಿಟವೆಂದು
ಪಚ್ಚಲುಬೇಡ ಮಠದೊಳಗಣ ಬೆಕ್ಕು
ಇಲಿಯ ಕಂಡು ಪುಟನೆಗೆದಂತಾಯ್ತು ರಾಮನಾಥ

ಇಲ್ಲಿ ಮೇಲಿನ ಆಸೆಯಿಂದ ಕುಳಿತ ಮಠದೊಳಗಿನ ಬೆಕ್ಕಿಗೆ ದೇವರ ಬಗೆಗಿನ ಭಕ್ತಿ ಹೇಗೆ ಬಂದೀತು? ಬಹಿರಂಗದಲ್ಲಿ ಪ್ರಾಮಾಣಿಕನಂತೆ ನಟಿಸುವುದಕ್ಕಿಂತ ಅಂತರಂಗದಲ್ಲಿಯೇ ಆ ಸಂಸ್ಕಾರವಿರಬೇಕೆಂಬುದನ್ನು ಇಲಿ-ಬೆಕ್ಕು-ಇಲಿಗಳ ರೂಪದಲ್ಲಿ ನಿರೂಪಿಸಲಾಗಿದೆ. ಅಂತರಂಗ-ಬಹಿರಂಗ ಶುದ್ಧಿ ಕುರಿತಂತೆ ಇದಕ್ಕೂ ಮುಂದು ಹೋಗಿ

ಅಂತರಂಗ ಬಹಿರಂಗ ಶುದ್ಧವಿಲ್ಲದೆ ನುಡಿವರು
ಸಂತೆಯ ಸೂಳೆಯರಂತೆ!
ಅಂತರಂಗ ಬಹಿರಂಗವೆಂಬುದಿಲ್ಲ ನಮ್ಮ ಶಿವಶರಣರಿಗೆ

Scanned with CamScanner

ಎಂದು ಹಡಪದ ಅಪ್ಪಣ್ಣನ ಪತ್ನಿ ಹಡಪದ ಲಿಂಗಮ್ಮ ಹೇಳುತ್ತಾಳೆ. ಶರಣರ ದೃಷ್ಟಿಯಲ್ಲಿ ಅಂತರಂಗವೆಂಬುದು ಬಹಿರಂಗವೆಂಬುದು ಲಿಂಗದ ಕುರುಹು. ಹೀಗಾಗಿ ದೇಹವನ್ನು ದಂಡಿಸುವುದಲ್ಲ, ಜೊತೆಗೆ ಮನಸ್ಸನ್ನು ನಿಗ್ರಹಿಸಿ ಇಲ್ಲದಿದ್ದರೆ

ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ?
ಅಘೋರ ತಪವ ಮಾಡಿದೊಡೇನು?
ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು
ನಂಬುವನೆಯ್ಯಾ ಕೂಡಲಸಂಗಮದೇವ!

ಎಂದು ಹುತ್ತ-ಹಾವುಗಳ ರೂಪದಲ್ಲಿ ವಿಶ್ಲೇಷಿಸಿದ್ದಾರೆ ಬಸವಣ್ಣನವರು.

ಒಟ್ಟಿನಲ್ಲಿ ವಚನಕಾರರ ದೃಷ್ಟಿಯಲ್ಲಿ ದೇವಲೋಕ-ಮರ್ತ್ಯಲೋಕ, ಗಂಡು-ಹೆಣ್ಣು, ಬಲ್ಲಿದ-ಬಡವ, ಕುಲಜ ಎಂಬ ಭೇದಗಳಿಲ್ಲವೆಂಬ ಸಾಮಾಜಿಕ ಪ್ರಜ್ಞೆಯ ತಾತ್ವಿಕತೆಯಂತೆ ಅಂತರಂಗ ಶುದ್ಧಿ-ಬಹಿರಂಗ ಶುದ್ಧಿ ಅಭೇದ್ಯವಾದ ತತ್ವವಾಗಿದೆಯೆಂಬುದನ್ನು ಪ್ರತಿಪಾದಿಸಿದ್ದಾರೆ.

❑ ❑ ❑

ಅಂತರಂಗ ಸನ್ನಹಿತ ಬಹಿರಂಗ ನಿಶ್ಚಿಂತವೋ
ಅಯ್ಯ
ತನು ತನ್ನ ಸುಖ ಮನ ಪರಮಸುಖವೋ
ಅದು ಕಾರಣ ಕಾಯ ವಾಯವೋ
ಗುಹೇಶ್ವರ ನಿರಾಳವೋ
ಅಯ್ಯ

- ಅಲ್ಲಮಪ್ರಭು

❑ ❑ ❑

ನಮ್ಮ ಹೃದಯವೇ ಮಾನವೀಯ ಮೌಲ್ಯಗಳ ಹಾಗೂ ಸದ್ಗುಣಗಳ
ಅತ್ಯಂತ ಸುರಕ್ಷಿತ ಸಂಗ್ರಹಾಗಾರ.

- ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ

ಡಾ. ಕೆ. ರವೀಂದ್ರನಾಥ, ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬
ತಾ: ಹೊಸಪೇಟೆ, ಜಿ: ಬಳ್ಳಾರಿ, ಮೊ: ೯೫೯೧೧೦೯೭೯೦.

Scanned with CamScanner

ಪ್ರಾದೇಶಿಕತೆ :
ಕರ್ನಾಟಕದ ಪಾಳೆಯಗಾರರು

ಡಾ. ಡಿ.ಎನ್.ಯೋಗೀಶ್ವರಪ್ಪ
ಸಂಪಾದಕ



Scanned with CamScanner

Pradeshikate : Karnatakada Palegararu, collection of Research Articals, Edited Dr. D.N. Yogeeswrappa, Researcher and Retired Principal, Sri Siddaganga College for Women, B.H.Road, Tumakuru. Chitkala, 8th Cross, 4th Main, Someshwara Puram, Tumakuru-572102. Mob : 9448680920

Publisher: Dr. M.Byregowda for Pragathi Graphics, Bengaluru, #119, 3rd Cross, 8th Main, Hampinagar, RPC Layout, Bengaluru-104.

ISBN	:	978-93-81441-15-2
First Impression	:	2020
Pages	:	348
Price	:	Rs. 400/-
Paper	:	NS Maplitho 80 GSM
Size	:	1/8 Demmy
Copy right	:	ಡಾ. ಡಿ.ಎನ್.ಯೋಗೀಶ್ವರಪ್ಪ
ಮೊದಲ ಆವೃತ್ತಿ	:	2020
ಕಾಗದ	:	ಎನ್.ಎಸ್.ಮ್ಯಾಪ್ಲಿತೊ 80 ಜಿ.ಎಸ್.ಎಂ.
ಬೆಲೆ	:	ರೂ. 400/-
ಪುಟಗಳು	:	348
ಸೈಜ್	:	1/8 ಡೆಮ್ಮಿ
ಪ್ರತಿಗಳು	:	1000
ರಕ್ಷಾಪುಟ ವಿನ್ಯಾಸ	:	ಬೆನಕ ಗ್ರಾಫಿಕ್ಸ್, ತುಮಕೂರು.
ಪ್ರಕಾಶಕರು	:	ಡಾ. ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು. ಮನೆ ನಂ. 119, 3ನೇ ತಿರುವು, 8ನೇ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು-104. ದೂರವಾಣಿ : 9448102158
ಮುದ್ರಣ	:	ಶ್ರೀರಂಗ ಗ್ರಾಫಿಕ್ಸ್, ಬೆಂಗಳೂರು.

Scanned with CamScanner

ಪರಿವಿಡಿ

1. ಕರ್ನಾಟಕ ಸಾಮ್ರಾಜ್ಯದ ಪ್ರಾರಂಭಿಕ ಸಮಯ
   – ಡಾ. ವಸುಂಧರಾ ಕವಲಿ ಫಿಲಿಯೋಜ್ಞಾ 01

2. ವಿಜಯನಗರ ರಾಜಧಾನಿ ನಿರ್ಮಾಣದಲ್ಲಿ ವಿದ್ಯಾರಣ್ಯರು :
   ದಾಖಲೆಗಳ ಪುನರಾವಲೋಕನ – ಡಾ. ಡಿ.ಎನ್.ಯೋಗೀಶ್ವರಪ್ಪ 17

3. ಬಳ್ಳಾರಿ ಜಿಲ್ಲೆಯ ಪಾಳೇಗಾರರು – ಪ್ರಾದೇಶಿಕತೆ ಮತ್ತು
   ರಾಜಕೀಯ ಸಂಬಂಧಗಳು
   – ಡಾ. ವಿರೂಪಾಕ್ಷಿ ಪೂಜಾರಿಹಳ್ಳಿ 42

4. The Political History of Ummatturu Kingdom
   - Dr. Nirmal Raju 58

5. ಸುಗುಟೂರು ಪಾಳೇಗಾರರು – ಡಾ. ಪಿ.ವಿ.ಕೃಷ್ಣಮೂರ್ತಿ 76

6. ಹಂಡೆ ಪಾಳೆಯಗಾರರು – ಪ್ರೊ. ಸಿ.ಎಸ್.ಪಾಟೀಲ್ 99

7. ಯಲಹಂಕ ನಾಡಪ್ರಭುಗಳು– ಪರಿಶೀಲನೆ – ಹಂ.ಗು.ರಾಜೀಶ್ 121

8. ಪಾಳೇಗಾರರ ಬಗೆಗಿನ ಹೈದರ್ – ಟಿಪ್ಪು ನೀತಿ
   – ಡಾ. ಬಿ.ರಾಜಶೇಖರಪ್ಪ 138

9. ಸಂತೆಬೆನ್ನೂರು ನಾಯಕರ ಆರ್ಥಿಕ ಸ್ಥಿತಿಗತಿ – ಕೃಷಿಯನ್ನು
   ಅನುಲಕ್ಷಿಸಿ – ಪ್ರೊ. ಎನ್.ಜಿ.ಪ್ರಕಾಶ 148

10. Economic Condition During Hadinadu Polegars
    - Dr. Nirmal Raju 157

11. ಪಾಳೇಗಾರರ ಕಾಲದ ಧಾರ್ಮಿಕ ಆಚರಣೆಗಳು
    [ಚಿತ್ರದುರ್ಗ–ಹರತಿ–ಸಂತೆಬೆನ್ನೂರು] 170
    – ಡಾ. ಮಂಜುನಾಥ ಟಿ.

12. ಹಾಗಲವಾಡಿ ಮತ್ತು ಮಧುಗಿರಿ ಮಹಾನಾಡ ಪ್ರಭುಗಳ
    ಕಾಲದ ಸಾಹಿತ್ಯ – ಡಾ. ಸಿ.ನಾಗಭೂಷಣ 184

13. ಸೋದೆ ಮತ್ತು ಬೀಳಗಿ ಅರಸರ ಕಾಲದ ಸಾಹಿತ್ಯ
    – ಡಾ. ಕೆ.ರವೀಂದ್ರನಾಥ್ 195

14. ಯಲಹಂಕ ನಾಡಪ್ರಭುಗಳ ಕಾಲದ ಸಾಹಿತ್ಯ – ಡಾ. ಬಿ.ನಂಜುಂಡಸ್ವಾಮಿ 203

Scanned with CamScanner

15. ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಯ ಪಾಳೇಗಾರರ ಕಾಲದ ಸಾ[illegible] ಹಂಡೆ–ಹರಪನಹಳ್ಳಿ ಪಾಳೇಗಾರರು] – **ಡಾ. ಎಫ್.ಟಿ. ಹಳ್ಳಿಕೇರಿ**

16. ಪಾಳೇಗಾರರ ರಕ್ಷಣಾ ವಾಸ್ತುಶಿಲ್ಪ – ಬದಲಾವಣೆಗಳು
– **ಡಾ. ಶಿವಕುಮಾರಿ ಎಂ.ಎಸ್.**

17. ಪಾಳೇಗಾರರ ದೇವಾಲಯ ವಾಸ್ತುಶಿಲ್ಪ – ದೇಶೀಯ ಅಂಶಗಳ ಪ್ರಭಾವ – **ಡಾ. ಶಕುಂತಲ ಎನ್.**

18. ಪಾಳೇಗಾರರ ಗಿರಿದುರ್ಗಗಳ ಜಾನಪದ ಐತಿಹ್ಯಗಳು : ತುಮಕೂರು ಜಿಲ್ಲೆ – **ಡಾ. ಕೆ.ಮುದ್ದುವೀರಪ್ಪ**

19. ಪಾಳೇಗಾರರ ಕಾಲದ ಆಹಾರ ಪಾನೀಯಗಳು
– **ಡಾ. ಎನ್. ನಂದೀಶ್ವರ**

20. ಪಾಳೇಗಾರರ ಕಾಲದ ದೇವಾಲಯ ವಿಸ್ತರಣೆ
[ಹಾಗಲವಾಡಿ ನಾಯಕರು] – **ಶ್ರೀಮತಿ ಶಿಲ್ಪಕಲಾ ಸಿ.ಟಿ.**

21. ಪಾವಗಡ ಪಾಳೇಗಾರರ ಸಮಾಧಿ ಮಂಟಪಗಳು – **ಚೆಲುವರಾಜು**

22. ಪಾಳೇಯಗಾರರ ಬೇಟೆಯ ಚಿತ್ರಣ – **ಡಾ. ಎಸ್.ಶಿವಣ್ಣ** [illegible]

23. ಪಾಳೇಗಾರರ ಕಾಲದ ಕೆರೆಗಳು – ಜಾನಪದ ವಿಶೇಷತೆ – [illegible] ಟಿ.

24. ಪಾಳೆಯಗಾರರ ಕೋಟೆ – ಭಸ್ಮಾಂಗಿ ದುರ್ಗ – **ಮಂಜುಳ**

25. ಗುಮ್ಮನಾಯಕನ ಕೋಟೆ – ಒಂದು ಪರಿಚಯ
– **ಡಾ. ಡಿ.ವಿ.ಪರಮಶಿವಮೂರ್ತಿ**

Scanned with CamScanner

ಸೋದೆ ಮತ್ತು ಬಿಳಿಗಿ ಅರಸರ ಕಾಲದ ಸಾಹಿತ್ಯ

ಡಾ. ರವೀಂದ್ರನಾಥ ಕೆ.

ಉತ್ತರ ಕನ್ನಡ ಜಿಲ್ಲೆ, ಸೊರಬ ತಾಲೂಕಿನ ಕೆಲವು ಭಾಗಗಳು ಮತ್ತು ಶಿವಮೊಗ್ಗೆಯ ಕೆಲವು ಭಾಗಗಳನ್ನು ಎರಡು ಶತಮಾನಗಳ ಕಾಲ ಅಂದರೆ ೧೫೫೫ ರಿಂದ ೧೭೬೩ರವರೆಗೆ ಆಳ್ವಿಕೆ ನಡೆಸಿದವರು ಸೋದೆ ಅರಸರು. ಅದೇರೀತಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಬಿಳಿಗಿ ೧೫ನೇ ಶತಮಾನದ ಪೂರ್ವಾರ್ಧದಿಂದ ೧೬ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ ಅರಸು ಮನೆತನ. ಸ್ವಲ್ಪ ಹೆಚ್ಚು ಕಡಿಮೆ ಒಂದೇ ಕಾಲಮಾನದಲ್ಲಿದ್ದ ಈ ಎರಡು ಅರಸು ಮನೆತನಗಳ ಸಾಹಿತ್ಯ ಚಟುವಟಿಕೆಗಳನ್ನು ಪರಿಚಯಿಸುವುದು ಈ ಲೇಖನದ ಉದ್ದೇಶವಾಗಿದೆ. ಈ ಅರಸು ಮನೆತನಗಳ ಸಾಹಿತ್ಯದ ಪೋಷಣೆಯು ವೇದ-ಪುರಾಣಗಳಂಥ ಶಿಷ್ಟ ಸಾಹಿತ್ಯ ರೂಪದಿಂದಲೂ, ಜಾನಪದ ಮೂಲದ ಸಾಹಿತ್ಯ ರೂಪದಿಂದಲೂ, ಶಾಸನ ಮತ್ತು ವಿದೇಶಿ ಬರಹಗಳಂಥ ದಾಖಲೆಗಳ ರೂಪದಿಂದಲೂ ದೊರೆಯುತ್ತವೆ. ಬಹುಶಃ ಈ ರೂಪದ ಸಾಹಿತ್ಯ ರಚನೆಯ ಹಿಂದೆ ಇರುವ ಕಾರಣವೆಂದರೆ ವಿಜಯ ನಗರದಂಥ ಪ್ರಬಲ ಸಾಮ್ರಾಜ್ಯಶಾಹಿ ಕೇಂದ್ರಿಯ ಆಡಳಿತ ಹೊಂದಿದ್ದು, ದೇಶೀ ಸಂಸ್ಥಾನಿಕರ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಆಸ್ಥಾನ ಸಾಹಿತ್ಯ ಚಟುವಟಿಕೆ ಕಡಿಮೆಯಾಗಿ ಶ್ರೀಸಾಮಾನ್ಯರೂ, ಪ್ರವಾಸಿಗರೂ ಅಧ್ಯಕ್ತಿಯನ್ನು

ಪ್ರಭಾವದ ಪರಿಣಾಮವಿರಬಹುದು. ಅದೇನೆ ಇರಲಿ ಸೋದೆ ಮತ್ತು ಬಿಳಿಗಿ ಅರಸರ ಕಾಲದ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ, ಸಾಂಸ್ಕೃತಿಕ ದೃಷ್ಟಿಯಿಂದ ತುಂಬಾ ಮುಖ್ಯವೆಂಬುದನ್ನು ಅಲ್ಲಗಳೆಯಲಾಗದು. ಸೋದೆ ವಿಷಯ ಪಿಎಚ್:ಡಿ ಅಧ್ಯಯನ ಮಾಡಿರುವ ಡಾ.ಎಂ.ಜಿ. ವಾರಿ ಅವರು;

1. ಸೋದೆ ಅರಸರನ್ನು ಕುರಿತು ರಚಿತವಾದ ಸಾಹಿತ್ಯ
2. ಸೋದೆ ಅರಸರಿಂದ ರಚಿತವಾದ ಸಾಹಿತ್ಯ
3. ಸೋದೆ ಅರಸರ ಆಶ್ರಯದಲ್ಲಿ ರಚಿತವಾದ ಸಾಹಿತ್ಯ

ಮುಖ್ಯರು, ಹಸ್ತಪ್ರತಿ ಶಾಸ್ತ್ರ ವಿಭಾಗ, ಕನ್ನಡ ವಿ.ವಿ., ಹಂಪಿ.

ಕರ್ನಾಟಕದ ಪಾಳೆಯಗಾರರು

Scanned with CamScanner

ಎಂದು ವರ್ಗೀಕರಿಸಿಕೊಂಡಿದ್ದಾರೆ. ಅಧ್ಯಯನದ ಸಮಗ್ರತೆಯ ದೃಷ್ಟಿಯಿಂದ ಈ ವಿಭಾಗ ಕ್ರಮ ಸರಿಯಾಗಿದೆ.

೧. **ಸೋದೆ ಅರಸರನ್ನು ಕುರಿತು ರಚಿತವಾದ ಸಾಹಿತ್ಯ :** ಸೋದೆ ಅರಸರನ್ನು ಕುರಿತು ರಚನೆಯಾದ ಸಾಹಿತ್ಯದಿಂದ ಅವರ ರಾಜಕೀಯ ಇತಿಹಾಸ, ಧಾರ್ಮಿಕ ನಿಷ್ಠೆ ಹಾಗೂ ಅವರ ಸಾಂಸ್ಕೃತಿಕ ಚಹರೆಗಳನ್ನು ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ.

ಭಕ್ತಿಚಂದ್ರೋದಯ

ಬನವಾಸಿ ಹಿರೇಮಠದ ಮಲೆಯ ಮಲ್ಲೇಶನ ಶಿಷ್ಯನಾದ ಶಾಂತಬಸವರಾಜೇಂದ್ರನೆಂಬ ಕವಿ ಸೋದೆ ಸದಾಶಿವರಾಯ ಮತ್ತು ಬಸವಲಿಂಗರಾಯರ ಸಮಕಾಲೀನ. ಈತ ರಚಿಸಿದ ಭಕ್ತಿಚಂದ್ರೋದಯ ಲಘುಕಾವ್ಯ ಒಂದು ಪಲ್ಲವಿ ಒಳಗೊಂಡಂತೆ ಹದಿನಾರು ವಾರ್ಧಕ ಶಟ್ಪದಿಯಿಂದ ರಚನೆಯಾಗಿದೆ. ಸೋದೆಯ ಪ್ರಸಿದ್ಧ ಅರಸ ಸದಾಶಿವರಾಯನ ಸಾವಿನ ನಂತರ ಅರಮನೆಯ ಆವರಣದಲ್ಲಿ ನಡೆದ ಧಾರ್ಮಿಕ ವಿಧಿಗಳನ್ನು ಈ ಕೃತಿ ನಿರೂಪಿಸುತ್ತದೆ. ಆ ಕಾಲದ ಊಟೋಪಚಾರ–ಧಾರ್ಮಿಕ ಕ್ರಿಯೆಗಳನ್ನು ದೇಶಿಭಾಷೆಯಲ್ಲಿ ನಿರೂಪಿಸುವುದು ಈ ಕೃತಿಯ ವಿಶೇಷವಾಗಿದೆ.

ಶ್ರೀಸದಾಶಿವರಾಜ ಶಿವನೊಳಗೆ ಬೆರೆಯಲು ಮ
ಹೇಶ್ವರ ಚರಮಂ ಪಿಡಿದು ಹರುಳದೊಳು ಬಹು
ಲೇಸಾಗಿ ಅರ್ಘ್ಯಪಾದ್ಯಾಚಾಮಾನವ ಕೊಟ್ಟು ಜಲವೆರೆದು ಭಸಿತವಿಟ್ಟು ।
ಮೂಸಗಂಧಾಕ್ಷತೆಯ ಮುಳ್ಪತತಿಗಳ ಧರಿಸಿ
ವಾಸಿಸುವ ಧೂಪದೀಪಾರತಿಗಳಂ ಬೆಳಗಿ
ಈಶ ಓಂ ಜಯ ಜಯಜಯೆನುತ್ತ ಘಂಟಿಯ ನುಡಿಸಿ ತರ್ಪಣವ ಪಿಡಿದರ್ಪಿಸಿ॥
ಚಾರುತರ ಮಿಸುನಿಯಂಬರ ಛತ್ರ ಚಾಮರವು
ಚೀರುತಿಹ ಕಹಳೆ ಸಪ್ತಸ್ವರಗಳಿಂ ಆವ
ನಾರಿಯರ ಶೋಭಾನ ಪಾಠಕರು ಕೈಯತ್ತಿ ಮೊಗಳಾನಂದದಿಂದಾ ।
ನಾರಾಯಣಾಕ್ಷಿ ಚರಣದೊಳು ರಾಜಿಸುವ ಗಂ
ಧೀರ ಶಿವಬಿರದ ನೋಡುವಾ ಕಲಕೇತರುಕೆ
ಸಾರಿ ಡಂಗುರ ಹೊಯ್ಯೆ ಸರ್ವಸಂತೋಳದಿಂ ಭೂರಿಜನ ನೋಡುತಿಹರು ॥

ರಾಜ ಪರಿವಾರದವರೆಲ್ಲ ಸೇರಿ ಸದಾಶಿವರಾಯನ ಧಾರ್ಮಿಕ ಕ್ರಿಯೆಯಲ್ಲಿ ಪಾಲ್ಗೊಂಡಿದ್ದನ್ನು ಕಣ್ಣಿಗೆ ಕಟ್ಟುವಂತೆ ಈ ಕೃತಿ ಚಿತ್ರಿಸುತ್ತದೆ.

ಸ್ವರವಚನಗಳು

ಕ್ರಿಶ ೧೬೭೬–೧೭೫೦ರ ಕಾಲಾವಧಿಯಲ್ಲಿದ್ದ ಮರಿಶಾಂತ ಬಸವದೇವನು ಒಬ್ಬ ಸ್ವರವಚನಕಾರ. ಈತ ತನ್ನ ಗುರುವಾದ ಮಲೆಯ ಮಲ್ಲೇಶನ ಅಂಕಿತದಲ್ಲಿ

ಸ್ವರವಚನಗಳನ್ನು ಬರೆದಿದ್ದಾನೆ. ಈತನ ಸ್ವರವಚನಗಳು ಸೋದೆ ಸದಾಶಿವರಾಯ ಹಾಗೂ ಬಸವಲಿಂಗ ಭೂಪಾಲನ ಕಾರ್ಯ ವಿಧಾನಗಳನ್ನು ವಿವರಿಸುತ್ತದೆ. ಬಸವಲಿಂಗ ಭೂಪಾಲನ ಕಾಲದಲ್ಲಿ ಬಿದ್ದ ಭೀಕರ ಬರಗಾಲದ ಚಿತ್ರಣವನ್ನಲ್ಲದೆ ಅದಕ್ಕೆ ಬಸವಲಿಂಗ ಭೂಪಾಲ ಕೈಗೊಂಡ ಪರಿಹಾರ ಕಾರ್ಯ, ಕಾಮಗಾರಿಗಳನ್ನು ಇಲ್ಲಿಯ ಸ್ವರವಚನಗಳು ದಾಖಲಿಸಿವೆ.

ಕರುಣಿಸು ಮಳೆರಾಯ ಕರುಣಸಾಗರನೇ
ಧರಣಿಯಲ್ಲವು ಉರಿವುತಲಿದೆ ಹರನೇ ॥ಪ॥

ಪರಾಭವನಾಮ ವರುಳ ಬರಲಿಲ್ಲ
ಧರೆಗೆಲ್ಲವೂ ಬರಗಾಲ ಬಂದಿತಲ್ಲ
ಪರಿಪರಿಗಡ್ಡೆಗೆಣಸು ಸೊಪ್ಪನೆಲ್ಲ
ಉರಿಯೆದ್ದು ಒಡಲಗಿಚ್ಚಿಗೆ ತಿಂದರಲ್ಲ ॥

ಪರಮಶ್ರೀಗುರು ಮಳೆಯನಂದೀಶ್ವರನ
ವರದಿ ಧರೆಯೊಳಗೆ ಶ್ರೀಸದಾಶಿವ ಭೂಪಾಲನ
ವರಪತ್ನಿ ಶಾಂತಮ್ಮಾಜಿಯ ಗರ್ಭದೊಳು ಜನಿಸಿ
ಉರುತರವ ಭಕ್ತಿಯನು ಮಾಡಿದಂಥವನಿನ್ನು ॥

ವಾಲೆ ಮುಗುತಿ ಕಂಡ ಮಾಲೆಯನೆಲ್ಲ
ಮೇಲಾದ ಹರದರಲ್ಲಡವಿಟ್ಟರಲ್ಲ
ಸಾಲವ ಬೇಡಹೋದರೆ ಹುಟ್ಟದಲ್ಲ
ಬಾಲೆಯರುಗಳ ಹಂಬಲ ಬಿಟ್ಟರೆಲ್ಲ ॥

ರೊಕ್ಕವ ಕೊಟ್ಟುಕೊಂಬರೆ ಗತಿಯಿಲ್ಲ
ಮಕ್ಕಳ ಮಾರಿಕೊಂಡರು ಜನರೆಲ್ಲ
ಸೊಕ್ಕಿದವರ ಹಲ್ಲ ಮುರಿಸಿದೆಯಲ್ಲ
ಮುಕ್ಕಣ್ಣಶಿವ ಮಡದೀತು ಲೋಕವೆಲ್ಲ ॥

ಗುರುಚರ ಳಡುಸ್ಥಲದ ಜಂಗಮವನರ್ಚಿಸುತ
ಹರುಳದಲಿ ಳಡುರಸ್ನಾನದ ನೀಡಿಸಿ
ಪರಿಪರಿಯ ವಸ್ತು ವಾಹನವನತ್ತು ಕೀರ್ತಿಯನು
ನರೆ ಪಡೆದ ನಗೆ ಸರಿಯಾರಯ್ಯ ಜೀಯಾ ॥
(ಮರಿಶಾಂತ ಬಸವ ದೇವರ ಸ್ವರವಚನಗಳು ; ಸಂ. ಎಸ್. ಶಿವಣ್ಣ ೧೯೮೮)

ಬಸವಲಿಂಗ ಭೂಪಾಲನ ಜಂಗಮಸೇವೆ, ಪ್ರಜಾಪಾಲನೆ, ನಿಳ್ಳೂರ ಸ್ವಭಾವಗಳನ್ನು ವಿವರಿಸುವ ಈ ಸ್ವರವಚನಗಳು ಕೇವಲ ಧಾರ್ಮಿಕ ಪರಿವೇಕ್ಷೆಯಿಂದ ಕೂಡಿಲ್ಲ ; ಚಾರಿತ್ರಿಕ ಸಂಗತಿಗಳನ್ನು ಪ್ರತಿನಿಧಿಸುತ್ತವೆ.

ಪ್ರಾದೇಶಿಕತೆ : ಕರ್ನಾಟಕದ ಪಾಳೆಯಗಾರರು

Scanned with CamScanner

ಮಹಾಲಿಂಗೇಂದ್ರ ವಿಜಯ : ಮಹಾದೇವ ಕವಿ ಬರೆದ ಈ ಕೃತಿಯ ಪೀಠಿಕಾ ಭಾಗದಲ್ಲಿ ಇದರ ಸಂಪಾದಕರಾದ ಡಾ. ಎಲ್.ಬಸವರಾಜು ಅವರು ತಿಳಿಸುವುದೇನೆಂದರೆ ಚಿತ್ರದುರ್ಗದ ಬೃಹನ್ಮಠದ ಇಮ್ಮಡಿ ಮುರಘಾ ಗುರುಸಿದ್ಧರ ಬಗ್ಗೆ ಸೋದೆ ಸದಾಶಿವರಾಯನು ಅಪಕಲ್ಪನೆಯಿಂದ ಮನಸ್ಸನ್ನು ಕಲುಷಿತಗೊಂಡಾಗ,

ಸ್ವತಃ ಶ್ರೀಗಳೇ ಸೋದೆಗೆ ಬಂದು ಅರಸನಿಗೆ ತಿಳಿಹೇಳಿದ್ದಲ್ಲದೆ, ಕೆಲಕಾಲ ಅಲ್ಲಿಯೇ ನೆಲಸಿ ಸದಾಶಿವರಾಯನಿಗೆ ರಾಜಕೀಯ-ಧಾರ್ಮಿಕ ಕೆಲಸಗಳ ನಿರ್ವಹಣೆಗಾಗಿದ್ದರೆಂಬುದನ್ನು ತಿಳಿಸುವುದು ಈ ಕೃತಿಯ ಆಶಯವೆಂದು ಅಭಿಪ್ರಾಯಪಡುತ್ತಾರೆ. (ಮಹಾದೇವನ ಮಹಾಲಿಂಗೇಂದ್ರ ವಿಜಯ, ಸಂ: ಎಲ್.ಬಸವರಾಜು. ಪೀಠಿಕಾ ಭಾಗ, ೧೯೭೧)

ಹೀಗೆ ಸೋದೆ ಅರಸರನ್ನು ಕುರಿತಾದ ಸಾಹಿತ್ಯದಲ್ಲಿ ಆ ಕಾಲದ ಸ್ಥಿತಿ, ಜನರ ಪರಿಸ್ಥಿತಿಗಳಲ್ಲದೆ, ರಾಜರ ಗುಣಸ್ವಭಾವಗಳನ್ನು ವಿವರಿಸುತ್ತವೆ.

೨. ಸೋದೆ ಅರಸರಿಂದ ರಚಿತವಾದ ಸಾಹಿತ್ಯ : ಸೋದೆ ಅರಸರಲ್ಲಿ ಪ್ರಖ್ಯಾತಿ ಹೊಂದಿದ ಅರಸ ಸೊದೆ ಸದಾಶಿವರಾಯ. ಈತ ಸ್ವತಃ ಕವಿಯೂ ಆಗಿದ್ದನೆಂಬುದಕ್ಕೆ ಈತನ ಕೃತಿಗಳೇ ಸಾಕ್ಷಿಯಾಗಿವೆ. ಸ್ವರವಚನಗಳು, ಸದಾಶಿವನೀತಿ, ವೃತ್ತಗಳು, ಮಹಾತ್ಮೆಗಳು, ರಗಳೆ, ಜೋಗುಳ ಪದಗಳು ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದು. ಸೋದೆ ಸದಾಶಿವರಾಯನನ್ನು ಕುರಿತು ಸದ್ಯ ೧೬೨ ಸ್ವರವಚನಗಳು ಲಭ್ಯವಿದೆ. ಇವು ಮಲೆಯಗುರು ನಂದೀಶನ ಅಂಕಿತದಲ್ಲಿ ರಚನೆಯಾಗಿವೆ. ರಾಗ-ತಾಳಗಳ ನಿರ್ದೇಶನದೊಂದಿಗೆ ಭಕ್ತಿ-ಶೃಂಗಾರ ಪ್ರಧಾನವಾದ ಸ್ವರವಚನಗಳನ್ನು ಈತ ರಚಿಸಿದ್ದಾನೆ. ಧರ್ಮ, ಸಂಸಾರ, ಸಂಕಲ್ಪ, ನೀತಿಬೋಧೆ, ಸ್ತ್ರೀಸಮಾಜ, ಶಿವಮಾಹಾತ್ಮೆ, ಸ್ತುತಿ ಪರವಾದ ಹಾಡುಗಳಲ್ಲದೆ ಸಮಕಾಲೀನ ರಾಜಕೀಯ ಘಟನೆಗಳಿಂದ ಕೂಡಿವೆಯೆಂದು ಸೋದೆ ಸದಾಶಿವರಾಯನ ಕೃತಿಗಳನ್ನು ಸಂಪಾದನೆ ಮಾಡಿದ ಡಾ. ಬಿ.ಆರ್.ಹಿರೇಮಠರು ಅಭಿಪ್ರಾಯಪಡುತ್ತಾರೆ. ಕನಕಾವತಿ ಸದಾಶಿವಲಿಂಗ, ಹರಳಯ್ಯತೀರ್ಥ, ಮಹಾಮನೆಯ ಗವಿ, ಮಧುಕೇಶ್ವರ ಶಿಲಾಮಂಟಪಗಳ ವರ್ಣನೆ ವರದಾನದಿಯ ಮಹಾತ್ಮೆಗಳನ್ನು ವಿವರಿಸುವ ಸಮಸ್ಯಾಪೂರ್ಣವೃತ್ತ-ಕಂದ ಕೃತಿಯು ಇಪ್ಪತ್ನಾಲ್ಕು ಹಾಡುಗಳ ಶ್ಲೋಕ-ಕಂದ-ವೃತ್ತ-ಳಟ್ಟದಿಗಳಿಂದ ರಚನೆಯಾಗಿದೆ. ಸದಾಶಿವರಾಯನ ಸಂಗೀತ ಜ್ಞಾನವನ್ನು ತಿಳಿಸುವ ಸುದೀರ್ಘ ಮೂರು ನುಡಿಗಳಿಂದ ಕೂಡಿದ ಲಘುಕಾವ್ಯ ರಾಗಮಾಲಿಕೆಯಲ್ಲಿ ಗೌಳ-ಕಾಂಬೋದಿ ಇತ್ಯಾದಿ ರಾಗಗಳ ವಿವರಣೆಯನ್ನೊಳಗೊಂಡಿದೆ. ಪಂಶವಿಶಂತಿ ಲೀಲೆಗಳ ರಗಳೆ ಎಂಬ ಕೃತಿ ಶಿವನ ೨೫ ಲೀಲೆಗಳನ್ನು ವರ್ಣಿಸುವ ಕಾವ್ಯ ೨೭ ಪದ್ಯಗಳ ಶಿವಸ್ತುತಿಯನ್ನೊಳಗೊಂಡ ಕೃತಿ ತ್ರಿವಿಧಿ. ಲಿಂಗಾಯತದಲ್ಲಿ ಗಂಡುಮಗು ಇಲ್ಲವೆ ಹೆಣ್ಣುಮಗು ಹುಟ್ಟಿನಿಂದ ನಾಮಕರಣದವರೆಗೆ ನಡೆಯುವ ಆಚರಣೆಗಳನ್ನು ವಿವರಿಸುವ ಹಾಡುಗಬ್ಬ ಕೃತಿ ಜೋಗುಳ ಪದಗಳು. ನವರಸ ಜಕ್ಕಣಿ ಎಂಬುದು ಸಂಗೀತ ಪ್ರಧಾನವಾದ ಕಾವ್ಯ. ಇದರಲ್ಲಿ ಒಂಭತ್ತು ರಸಗಳನ್ನು ವಿವರಿಸಲಾಗಿದೆ.

ದಾಸರ ಕೃತಿಗಳಲ್ಲಿ, ಶ್ರೀಕೃಷ್ಣ ಪಾರಿಜಾತದಲ್ಲಿ ಬಳಕೆಯಾದ ಜಾವಳಿ ಹಾಡುಗಳ ಪ್ರಕಾರಕ್ಕೆ ಸೇರುವ ಪ್ರಭುಲಿಂಗಲೀಲೆಯ ಜಾವಡಿ ಸೂತ್ರದ ಗೊಂಬೆಯಾಟದ ದೃಶ್ಯಕಾವ್ಯ. ಶುದ್ಧ ಚಾರಿತ್ರಿಕ ಅಂಶವನ್ನು ಒಳಗೊಂಡ ಉಳುಮೆಯ ಮಹಾತ್ಮೆ, ೭೩ ಪದ್ಯಗಳಲ್ಲಿ ಕಲ್ಯಾಣ ಕ್ರಾಂತಿಯ ನಂತರ ಶಿವಶರಣರ ದಂಡಿನ ದಾರಿಯನ್ನು ಉಳುವೆಯಲ್ಲಿನ ಚಾರಿತ್ರಿಕ ಕುರುಹುಗಳನ್ನು ನಿರೂಪಿಸುವ ಕೃತಿಯಾಗಿದೆ.

ಸದಾಶಿವ ನೀತಿ ಎಂಬ ಕೃತಿಯಲ್ಲಿ ನೀತಿಪ್ರಧಾನವಾದ ಸಂಗತಿಗಳನ್ನು ಸದಾಶಿವ ನೀತಿ ಕೃತಿ ಪ್ರತಿಪಾದಿಸಿದರೆ, ಗಜಾಶ್ವಲಕ್ಷಣ ಕೃತಿ ಆನೆ-ಕುದುರೆಗಳ ಗುಣಲಕ್ಷಣಗಳನ್ನು ವಿವರಿಸುವ ಕೃತಿಯಾಗಿದೆ. ಒಟ್ಟಿನಲ್ಲಿ ದೇಶಿ ಛಂದೋಬಂಧಗಳಿಂದ ಕೂಡಿದ ತಾತ್ವಿಕ ಹಾಗೂ ಚಾರಿತ್ರಿಕ ಕೃತಿಗಳನ್ನು ರಚಿಸಿದ ಹೆಗ್ಗಳಿಕೆ ಸೋದೆ ಸದಾಶಿವರಾಯನಿಗೆ ಸಲ್ಲುತ್ತದೆ. ಶಿಷ್ಟ ಸಾಹಿತ್ಯದಂತೆ ಪರಿಶಿಷ್ಟ ಸಾಹಿತ್ಯವೆನಿಸಿದ ಜಾನಪದದಲ್ಲಿ ಹಾಲಕ್ಕಿ ಜನಾಂಗದ ಧಾರ್ಮಿಕ ಕರವಸೂಲಿ ಕುರಿತು ಸದಾಶಿವರಾಯ ಜಿರಂಗಜೇಬನನ್ನು ಸಂದರ್ಶಿಸಿದ ಬಗ್ಗೆ ಜಾನಪದ ಕಥೆಗಳೂ ಹುಟ್ಟಿಕೊಂಡಿವೆ. ಅದೇ ರೀತಿ ದಾಖಲು ಸಾಹಿತ್ಯ ಪ್ರಕಾರಗಳಿಗೆ ಸೇರುವ ಕೈಫಿಯತ್ತುಗಳು, ಶಾಸನಗಳು ಸೋದೆ ಅರಸರನ್ನು ಕುರಿತು ಉಲ್ಲೇಖಿಸುತ್ತವೆ. ಸೋದೆ ಅರಸರಿಗೆ ಸೋದೆ ಮಠದ ಕೈಫಿಯತ್ತು, ರಾಜವಂಶಾವಳಿ ಕೈಫಿಯತ್ತು, ಬನವಾಸಿ ಸ್ಥಳದ ಕೈಫಿಯತ್ತು, ಶಿರಸಿ ಕೈಫಿಯತ್ತು ಹಾಗೂ ಶೃಂಗೇರಿ ಮಠದಲ್ಲಿ ಲಭ್ಯವಿರುವ ಕಡತಗಳಲ್ಲಿ ೧೧ ಕಡತಗಳು ಸೋದೆ ಅರಸು ಮನೆತನದ ಪ್ರಸ್ತಾಪವನ್ನು ಮಾಡುತ್ತವೆ. ಅದೇರೀತಿ ಸೋದೆ ಅರಸರು ಪೋರ್ಚುಗೀಸರೊಂದಿಗೆ ಮಾಡಿಕೊಂಡ ಒಪ್ಪಂದಗಳು- ಒಡಂಬಡಿಕೆಗಳು ಕೂಡ ಈ ಅರಸು ಮನೆತನದ ಚರಿತ್ರೆಯನ್ನು ನಿರೂಪಿಸುವ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ. ಶಾಸನಗಳಿಗೆ ಸಂಬಂಧಿಸಿದಂತೆ ಸೋದೆ ಅರಸರಿಗೆ ಸಂಬಂಧಿಸಿದ ೨೯ ಶಾಸನಗಳು ಬೆಳಕಿಗೆ ಬಂದಿವೆ. ಅವುಗಳಲ್ಲಿ ಒಂದನೇ ಅರಸಪ್ಪ ನಾಯಕನ ಕಾಲದ ೯ ಶಾಸನಗಳು, ರಘುನಾಥನಾಯಕನ ಕಾಲದ ೨ ಶಾಸನ, ಮಧುಲಿಂಗನಾಯಕನ ೧ ಶಾಸನ, ರಾಮಚಂದ್ರನಾಯಕನ ೨ ಶಾಸನ, ಸದಾಶಿವರಾಯನ ಕಾಲದ ೪ ಶಾಸನ, ಸವಾಯಿ ರಾಮಚಂದ್ರನಾಯಕನ ೨ ಶಾಸನಗಳು, ಸೋದೆ ಅರಸರ ದಾನ-ದತ್ತಿ, ಯುದ್ಧ-ಸಾಮಾಜಿಕ ಕಾರ್ಯಗಳನ್ನು ಉಲ್ಲೇಖಿಸುತ್ತವೆ.

೩. ಸೋದೆ ಅರಸರ ಆಶ್ರಯದಲ್ಲಿ ರಚಿತವಾದ ಸಾಹಿತ್ಯ : ಕನ್ನಡ ಸಾಹಿತ್ಯ ಮೊದಲಿನಿಂದಲೂ ಅರಮನೆ- ಗುರುಮನೆಗಳ ಪರಿಸರದಲ್ಲಿ ಸೃಷ್ಟಿಯಾಗಿದೆ. ಕವಿ-ಗಮಕಿ-ವಾಗ್ಮಿ-ವಾದಕರನ್ನು ಬೆಳಕಿಗೆ ತಂದಿದೆ. ಈ ಹಿನ್ನೆಲೆಯಲ್ಲಿ ಸೋದೆ ಅರಸರು ತಮ್ಮ ಕಾಲದಲ್ಲಿ ಕವಿಗಳಿಗೆ ಆಶ್ರಯ ನೀಡಿದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಅಂಥ ಕವಿಕಾವ್ಯಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ಭಟ್ಟಕಳಂಕ

ದೇವಚಂದ್ರನ ರಾಜಾವಳಿ ಕಥೆಯಲ್ಲಿ "ಸುಧಾಮರದೊಳ್ ಭಟ್ಟಕಳಂಕ ಸ್ವಾಮಿಗಳ ಶಾಕಟಾಯನ ಜಿನೇಂದ್ರ ಕೌಮಾರ ಮೊದಲಾಗಿ, ನವವ್ಯಾಕರಣಮುಮನ್, ಅಮರ

Scanned with CamScanner

ಧನಂಜಯ, ವಿಶ್ವವೈದ್ಯಯಂತಿ, ರತ್ನಮಾಲೆ, ಶಬ್ದಮಾಲೆ, ರಭಸಕೋಶ, ಮೊದಲಾದ ಛಂದಸ್ಸುಗಳ; ಭರತಾದಿ ನೀತಿಶಾಸ್ತ್ರಮನ್, ಸ್ವಸಮಯ, ಪರಸಮಯ, ಪುರಾಣಾಗಮತತ್ವಗಳಂ, ಆಯುರ್ವೇದ, ಶಿಲ್ಪ, ವಾಸ್ತುಶಾಸ್ತ್ರಮನ್, ಫಲಭಾಗೆ, ಪ್ರಶ್ನೆಭಾಗೆ, ಜಾತಕಭಾಗೆಯಿಳ್ಕೆ, ಜ್ಯೋತಿಷ್ಯಶಾಸ್ತ್ರಮನ್, ಅದಾನ, ನಿದಾನ ಚಿಕಿತ್ಸಾರೂಪ ವೈದ್ಯ ಶಾಸ್ತ್ರಮನ್–ಇಂತನೇಕವಾದ ಶಾಸ್ತ್ರಗಳನ್ನು ಕಲ್ತು ಮಹಾವಿದ್ವಾಂಸರೆನಿಸಿ ಪ್ರಾಕೃತ,

ಸಂಸ್ಕೃತ, ಮಾಗಧ, ಶೂರಸೇನ, ಅಪಭ್ರಂಶಗಳೆಂಬ ಳಟ್‌ಭಾಳಾ ಕವಿಗಳಾಗಿ ಕರ್ನಾಟಕ ವ್ಯಾಕರಣಮಂ ರಚಿಸಿ ಕೀರ್ತಿಯನ್ ಪಡೆದರ್–ಎಂಬುದರಿಂದ ಭಟ್ಟಕಳಂಕ ಅರಸಪ್ಪನಾಯಕನ ಕಾಲದಲ್ಲಿ ಸೋದೆಯೊಳಗೆ ಇದ್ದು, ರಾಜಗುರುವಾಗಿ, ತನ್ನ ಉತ್ತರಾರ್ಧದ ಬದುಕನ್ನು ಅಲ್ಲಿಯೇ ಕಳೆದನೆಂದು ಭಟ್ಟಕಳಂಕ ಮಠದಿಂದ ಹಾಗೂ ನಿಳಿದಿ ಶಾಸನದಿಂದ ತಿಳಿದುಬರುತ್ತದೆ.

ವಾದಿರಾಜರು

ಸೋದೆಮಠದ ಅಧಿಪತಿ ವಾದಿರಾಜರು ಲಕ್ಷ್ಮೀಶೋಭಾನೆ, ಸಪ್ತಪದ, ಕೀಚಕವಧೆ, ಕೇಶವನಾಮ, ಗುಂಡಕ್ರಿಯೆ, ಹಯವದನ, ಮುಂತಾದ ಅಂಕಿತಗಳೊಂದಿಗೆ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿದವರು. ಅಡಿಗಾಧಾರವಿಲ್ಲ ಹಿಡಿವುದಕೆ ಕೊಂಬಿಲ್ಲ ಕಡೆಹಾಯಿಸುವರಿಲ್ಲ ಕಳ್ಪಪಟ್ಟೆನಲ್ಲ ಕಣ್ಣೀರು ತಪ್ಪಲಿಲ್ಲ ಕಾಯ ಸುಖಪಡಲಿಲ್ಲ

ಉಂಡು ಸುಖಿಸಲಿಲ್ಲ ಉಟ್ಟುಕೊಟ್ಟ ಪರಿಣಾಮವಿಲ್ಲ ಕೊಂಡುಕೊಟ್ಟು ಹರಿಸೇವೆ ಮಾಡಲಿಲ್ಲ ಎಂಬ ಆತ್ಮನಿವೇದನೆಯನ್ನು ಹೇಳುವ ವಾದಿರಾಜರು ಸಂಸ್ಕೃತದಲ್ಲೂ ಕಾವ್ಯ ಕೃಷಿ ಮಾಡಿದ್ದಾರೆ.

2. ಬಿಳಗಿ ಅರಸರ ಕಾಲದ ಸಾಹಿತ್ಯ

ಬಿಳಗಿ ಅರಸರ ಕಾಲದ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದ ಚಾರಿತ್ರಿಕ, ಆಧ್ಯಾತ್ಮ, ಜನಪದ ಮತ್ತು ಶಾಸ್ತ್ರ ಸಾಹಿತ್ಯವೆಂದು ವರ್ಗೀಕರಿಸಬಹುದಾಗಿದೆ. ಪ್ರಮುಖವಾಗಿ ಬಿಳಗಿ ಅರಸರ ಸಾಹಿತ್ಯಿಕ ಇತಿಹಾಸವನ್ನು ಕಟ್ಟಿಕೊಡಲು ಸಹಾಯಕ್ಕೆ ಬರುವ ಪ್ರಮುಖ ಆಕರವೆಂದರೆ ಬಿಳಗಿ ಅರಸರ ವಂಶಾವಳಿ. ಈ ಅರಸು ಮನೆತನದಲ್ಲಿ ಘಟೇಂದ್ರ, ಬಸವೇಂದ್ರ ಮತ್ತು ಸೋಮಶೇಖರರಂಥ ವಿದ್ವಾಂಸರು ಇದ್ದ ಬಗ್ಗೆ ಮಾಹಿತಿಗಳನ್ನು ಬಿಳಗಿ ಅರಸರ ವಂಶಾವಳಿಯಿಂದ ತಿಳಿದುಬರುತ್ತದೆ.

ಉದಾ

ಪ್ರದ್ಯುಮ್ನಸಂಕಿರ್ದು
ವಿದ್ಯಂಗಳ ಪೇಳಿ ಕಲಿತನಾ ಕ್ಷಣದಿಂದಂ
ಸದ್ಯಃ ಫಲ ಮಾಯ್ತವನೊಳ್
ಸಾಧ್ಯಂ ಶಾಮುಂಟೆ ಕಲೆಗಳ ನಿತರೊಳಿಂ।

ಘಟಪೂರಿತ ಸುಧೆಯಂ
ಘಟ್ಟಕ್ಕೆ ಪೊಯ್ದಂತಿ ರಾಯ್ತು ಶಾಸ್ತ್ರಂಗಳೆಲ್ಲಂ
ನುತಿಸಿ ವಾಗ್ದೇವಿ ಇವನೊಳ್
ಪಟು ತರಧಿಳಣಂಗ ಸಾಧ್ಯಮಾಡುವುದು ಜಗದೊಳ್ ।

ಘಟೇಂದ್ರನ ವಿದ್ವತ್ತನ್ನು ವಿವರಿಸುವ ಈ ಮೇಲಿನ ಪದ್ಯದಿಂದ ಕ್ಷಣಮಾತ್ರದಲ್ಲಿ ಎಲ್ಲವನ್ನು ಕಲಿಯುವ ಈತನಲ್ಲಿ ಶಾರದೆ ತಾನೇ ನಟಿಸಿದ್ದಾಳೆಂದು ತಿಳಿದುಬರುತ್ತದೆ.

ಭರತದೊಳಂ ಗಣಿತದೊಳಂ
ಗುರುತರ ಛಂದೋ ವಿಶೇಳ ಕೃತಿ ರಚನೆಯೊಳಂ
ವರಚಾಪ ವಿದ್ಯೆಯೊಳಂ
ಧುರಧೀರಂ ಸೋಮಶೇಖರಂ ನೆರೆನಿಪುಣಂ ॥

ಎನ್ನುವಲ್ಲಿ ಇಮ್ಮಡಿ ಸೋಮಶೇಖರ ಸಾಹಿತ್ಯ ರಚಿಸಿರಬೇಕೆಂಬುದರ ಕಡೆಗೆ ಈ ಮೇಲಿನ ಪದ್ಯ ಸೂಚನೆಯನ್ನು ನೀಡುತ್ತದೆ. ಈತ ಗಣಿತಶಾಸ್ತ್ರ, ಛಂದೋವಿಶೇಷಗಳಂಥ ಕಾವ್ಯಗಳನ್ನು ರಚಿಸಿರಬಹುದಾಗಿದೆ. ಕೃತಿಗಳು ಉಪಲಬ್ಧವಿಲ್ಲ. ವಿದ್ಯಾನಂದನೆಂಬ ಕವಿಯನ್ನು ವರ್ಧಮಾನ ಮುನಿಯ ಬಹುವಾಗಿ ಸ್ಮರಿಸಿದ್ದನ್ನು ಹೊಂಬುಜ ಶಾಸನ ವಿವರಿಸುತ್ತದೆ. ಶಾಸನದ ಪ್ರಕಾರ ವಾದಿವಿದ್ಯಾನಂದನೆಂದು ಕರೆಯಲಾಗಿದೆ. ಗೇರುಸೊಪ್ಪೆ

ಮುನಿವಂಶಕ್ಕೆ ಸೇರಿದ ಈತನಿಂದ 'ಕರ್ನಾಟಕ ದಕ್ಷ' ಕೃತಿ ರಚನೆಯಾಗಿದೆ. ನಂಜರಾಯ ಪಟ್ಟಣದ ನಂಜದೇವನ ಆಸ್ಥಾನದಲ್ಲಿ ನಂದನಮಲ್ಲಿ ಭಟೋದಾನಮಸುರಿ ಕೆಡಿಸಿದನು, ಶ್ರೀರಂಗಪಟ್ಟಣದಲ್ಲಿ ಪೇರಂಗಿಯ ಮನೆತನವನುಳಿದು ಶಾರದೆಯನ್ನು ವಶಪಡಿಸಿಕೊಂಡನು. ಶಾಂತವೇಂದ್ರನ ಆಸ್ಥಾನದಲ್ಲಿ ಸಾಹಿತ್ಯವನ್ನು ಊರ್ವರೆ ಘೋಷಿಸುವಂತೆ ಉಸುರಿದನು. ಸಾಳ್ವ ಮಲ್ಲಿರಾಯನ ಆಸ್ಥಾನದಲ್ಲಿ ಕರ್ನಾಟಕ ದಕ್ಷಕೃತಿಯನ್ನು ವರ್ಣಿಸಿದನೆಂಬ ವಿವರಗಳು ತಿಳಿದುಬರುತ್ತವೆ. ಬಿಳಗಿ ಅರಸರ ಕಾಲದ ಶಾಸನ ಸಾಹಿತ್ಯ ಕುರಿತಂತೆ ೨೫ ಶಾಸನಗಳು ರಚನೆಯಾಗಿವೆ. ಸಾಹಿತ್ಯದ

ದೃಷ್ಟಿಯಿಂದ ಬಿಳಗಿಯ ರತ್ನತ್ರಯ ಬಸದಿಯಲ್ಲಿಯ ಭಟ್ಟಕಳಂಕ ರಚಿಸಿದ ಎರಡು ಶಾಸನಗಳು ಪ್ರಮುಖವಾದವುಗಳು. ಗುರುಪರಂಪರೆಯಲ್ಲಿ ಈತ ಕುಂದಕುಂದಾಚಾರ್ಯರನ್ನು ಬಣ್ಣಿಸುವುದಲ್ಲದೆ; ಈತನ ಮಹಿಮೆಯನ್ನು ಕುರಿತಂತೆ

ಕ್ಷಮೆಗಂ ಸ್ವಕೀಯದಿವ್ಯಂ
ಕ್ಷಮೆ ನಾಲ್ಕೆರಳಧಿಕವೆಂದು ತೋರ್ಪವೋಲಂತಾ
ಕ್ಷಮೆಯಂ ಮೆಟ್ಟದೆ ನಡೆವಂ
ಕ್ಷಮಾಮಯಂ ಕುಂದಕುಂದಾಚಾರಣ ಮುನಿಪಂ ॥

ಶಾಸ್ತ್ರ ಕೃತಿಯಾಗಿ ಭಟ್ಟಕಳಂಕನ ಕರ್ನಾಟಕ 'ಶಬ್ದಾನುಶಾಸನ' ಎಂಬ ವ್ಯಾಕರಣ

Scanned with CamScanner

ಕೃತಿ ಪ್ರಮುಖವಾದದ್ದು. ಕ್ರಿ.ಶ. ೧೬೦೪ರಲ್ಲಿ ಶಬ್ದಾನುಶಾಸನಕ್ಕೆ ವ್ಯಾಖ್ಯಾನ ಬಿಳಿಗಿ ಅರಸರ ಆಶ್ರಯದಲ್ಲಿ ಎಂಬುದು ಗಮನಿಸತಕ್ಕ ಸಂಗತಿಯಾಗಿದೆ. ಅರಸರ ಕಾಲದಲ್ಲಿಯೇ ಸೃಷ್ಟಿಯಾಯಿತೆಂದು ಹೇಳಲಾದ ಹೊರಗುಪ್ಪೆ ಕುಮಾರಸ್ವಾಮಿಯ 'ಕನ್ನಡ ಶ್ರೀಮದ್ ಭಗವದ್ಗೀತೆ' ರಚನೆಯಾಗಿದೆ. ಶಂಕರಭಾಷ್ಯದ ಸಹಾಯದಿಂದ ಸಂಸ್ಕೃತ ಭಗವದ್ಗೀತೆಯನ್ನು ಕನ್ನಡದಲ್ಲಿ ಅರ್ಥೈಸಲು ಪ್ರಯತ್ನಿಸಿದ್ದಾನೆ. ಭಗವದ್ಗೀತೆಯನ್ನು ಕುರಿತು ಒಬ್ಬ ಉತ್ಕಟ ದೈವಭಕ್ತನಾಗಿ, ನಿಷ್ಕಾಮಕರ್ಮ ಭಗವದ್ಗೀತೆ ಹಾಗೂ ಶಂಕರಭಾಷ್ಯಗಳ ಬಗ್ಗೆ ಶ್ರದ್ಧೆಯುಳ್ಳವನಾಗಿ ಅವುಗಳನ್ನು ತಿಳಿಸಿಕೊಡುವ ಜನಪದ ಕಾಳಜಿಯುಳ್ಳವನು ಈ ಹರಿದಾಸ. ಈ ಅನುವಾದ ಪ್ರತಿಷ್ಠೆಯಲ್ಲ ಅದೊಂದು ಜವಾಬ್ದಾರಿಯಾಗಿತ್ತೆಂದು ವಿದ್ವಾಂಸರಾದ ಕೂಡಿಗೆ ಅಭಿಪ್ರಾಯಪಡುತ್ತಾರೆ.

೧೭ ಮತ್ತು ೧೮ನೇ ಶತಮಾನದಲ್ಲಿ ಸಣ್ಣಪುಟ್ಟ ಅರಸು ಮನೆತನಗಳ ಚಾರಿತ್ರಿಕ ಕಾವ್ಯಗಳು ಹುಟ್ಟಿಕೊಂಡಿವೆ. ಅವರು ಎದುರಿಸಿದ ಯುದ್ಧಗಳು, ರಾಜ್ಯವಿಸ್ತಾರವನ್ನು, ಸಂರಕ್ಷಣೆಯ ಬದುಕನ್ನು, ಮದುವೆ ಉತ್ಸವಾದಿಗಳ ವಿವರಗಳು ಕೃತಿಗಳಂತೆ ಬಿಳಿಗಿ ಅರಸರ ಕಾಲದಲ್ಲಿ ರಚನೆಯಾದ ಬಿಳಿಗಿ ಕವಿಯ ಬಿಳಿಗಿ ಅರಸರುಗಳ ಚೆರಿತ್ರೆ ಎಂಬ ಎರಡು ಕೃತಿಗಳು ತತ್ಕಾಲೀನ ಇತಿಹಾಸ ಚಾರಿತ್ರಿಕ ಗ್ರಂಥಗಳೆಂದು ರಂ.ಶ್ರೀ.ಮುಗಳಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಸಮಾರೋಪ

ಸೋದೆ ಮತ್ತು ಬಿಳಿಗಿ ಅರಸರ ಕಾಲದ ಸಾಹಿತ್ಯವನ್ನು ಗಮನಿಸಿದಾಗ

೧. ಚಂಪೂ, ವಚನ, ಷಟ್ಪದಿಯಂಥ ಪ್ರಮುಖ ಪ್ರಕಾರಗಳ ಜೊತೆಗೆ ಸಂದರ್ಭದಲ್ಲಿ ಕನ್ನಡ ಭಾಷೆಯ ಅಗಾಧ-ಅದಮ್ಯ-ಆಕರ್ಷಕ ಲಘುಕಾವ್ಯ ಕೃತಿಗಳು ಹುಟ್ಟಿಕೊಂಡಿರುವುದನ್ನು ಗಮನಿಸಬಹುದು.

೨. ಮತ-ಧರ್ಮಗಳ ಉತ್ಕರ್ಷದ ಕಾಲ ಮುಗಿದು ಸಂಘರ್ಷಾತ್ಮಕ ಪರಿಸರದಲ್ಲಿ ಸಾಹಿತ್ಯ ರಚನೆಯಾಗಿರುವುದು ಕಂಡುಬರುತ್ತದೆ.

೩. ಸಂಗೀತ-ಸ್ಥಳನಾಮ-ಸೂತ್ರಗೊಂಬೆಯಾಟ-ಮಹಾಭಾರತ ಮುಂತಾದ ಕುಡಿದ ಮನೋರಂಜನೆಯ ಸಾಹಿತ್ಯ ಈ ಅರಸುಮನೆತನಗಳಲ್ಲಿ

೪. ಪ್ರಾಚೀನ ಕಾವ್ಯಗಳಂತೆ ತಗುಳ್ದಿ ಹೇಳುವ ಕ್ರಮವನ್ನು ಬಿಟ್ಟು ಚರಿತ್ರೆಯನ್ನು ನಿರೂಪಿಸುವುದರಿಂದ ಇವುಗಳಲ್ಲಿ ಕಾವ್ಯ ಗುಣಗಳು

Scanned with CamScanner

ರಂಗದಿಗ್ಗಜ
ಕೋಗಿಲು ಪಂಪಣ್ಣ

ಎಂ. ಎಂ. ಶಿವಪ್ರಕಾಶ



Scanned with CamScanner

RANGADIGGAJA KOGALI PAMPANNA
Life Story of the Veteran Theatre Person
Narration
M.M. Shivaprakasha
Prajwal Nilaya
Nahar colony, M.P. Prakash Nagar
Hosapete - 583 201, Bellary Dist.
Mo: 94496 54489
email: mmsprakash68@gmail.com

Published by
Avva Prakashana
Prajwal Nilaya
Nahar colony, M.P. Prakash Nagar
Hosapete - 583 201, Bellary Dist.

First Impression: 2020

Pages : 22 + ೨೩೬ Price : **Rs. 200/-**

© ಲೇಖಕರದ್ದು ೨೦೨೦

ಕಾಗದ: ೭೦ ಜಿ.ಎಸ್.ಎಂ. ಎನ್.ಎಸ್. ಬುಕ್ ಪ್ರಿಂಟ್
ಸೈಜ್: ೧/೮ ಡೆಮಿ
ಮುಖಪುಟ: ಕೆ.ಕೆ. ಮಕಾಳಿ
ಬೆಲೆ: ರೂ. ೨೦೦/-
ಅಕ್ಷರ ಸಂಯೋಜನೆ
ಸವಿತ ಗ್ರಾಫಿಕ್ಸ್
ಕಮಲಾಪುರ
ಮೊ. ೯೪೮೦೨ ೫೭೩೯೨
ಮುದ್ರಣ
ಎಲ್ ಕೆ ಪ್ರೆಸ್ ಇಂಕ್
ಬೆಂಗಳೂರು
ಮೊ. ೮೭೬೨೯೬೬೭೬೦

Scanned with CamScanner

ಪರಿವಿಡಿ

ನಾಂದಿಗೆ ಮುನ್ನ ನಾಲ್ಕು ಮಾತು /5

ಪ್ರಾರ್ಥನೆ /12

ಭಾಗ : ಒಂದು

ನಾಂದಿ ಮಾತು /೧

೧. ವ್ಯಕ್ತಿ-ವ್ಯಕ್ತಿತ್ವ /೩

ಭಾಗ : ಎರಡು

ಅಂತರಂಗ /೪೫

೨. ರಂಗಪ್ರವೇಶ /೪೭

ಭಾಗ : ಮೂರು

ರಂಗಾನುಬಂಧಗಳು /೯೯

(ಪಂಪಣ್ಣನವರನ್ನು ಅವರ ಒಡನಾಡಿಗಳು ಕಂಡಂತೆ)

೧. ಸಮರ್ಥ ನಟ, ನಿರ್ದೇಶಕ /೧೦೧

೨. ಅಂತಃಕರುಣೆಯ ಅಣ್ಣ /೧೦೩

೩. ರಂಗಭೂಮಿಯ ಅಣ್ಣ /೧೦೮

೪. ಎಲ್ಲರನ್ನು ಗೌರವಿಸುವ ಅಣ್ಣ /೧೧೧

೫. ರಂಗಭೂಮಿಯ ಮಾಣಿಕ್ಯ /೧೧೩

೬. ಗ್ರಾಮ್ಯರಂಗದ ಪಂಪಣ್ಣ /೧೧೬

೭. ಕಲಾ ಸಾಮ್ರಾಟ್ ಕೋಗಳಿ ಪಂಪಣ್ಣ /೧೨೦

೮. ನಾನು ಕಂಡ ಅಣ್ಣ /೧೨೪

೯. ರಂಗಭೂಮಿಯ ಅನುಭವಿ ನಿರ್ದೇಶಕರು /೧೨೮

೧೦. "ಅಭಿನವ ಭೀಮ" /೧೩೦

೧೧. ನಾನು ಕಂಡಂತೆ ಕೋಗಳಿ ಪಂಪಣ್ಣ /೧೩೨

Scanned with CamScanner

೧೨. ನಾ ಕಂಡಂತೆ ಕೋಗಳಿ - 'ಕೋಗಿಲೆ' /೧೩೫
೧೩. ನಾನು ನೋಡಿದ ಪಂಪಣ್ಣ /೧೩೮
೧೪. ಗ್ರಾಮೀಣ ಕಲಾ ಪ್ರತಿಭೆ /೧೪೧
೧೫. ಕೋಗಳಿ ಕಲಾ ಕಂಪಿನ ಪಂಪಣ್ಣ /೧೪೬
೧೬. ದಣಿವರಿಯದ ರಂಗದಿಗ್ಗಜ /೧೫೦
೧೭. ನಾನು ಕಂಡಂತೆ ಕಲಾವಿದ ಅಣ್ಣ /೧೫೫
೧೮. ಲಲಿತ ಕಲೆಯಾಗಸದ ಬಾನಾಡಿ ಪಂಪಣ್ಣ /೧೬೩
೧೯. ಕೋಗಳಿ ಪಂಪಣ್ಣ /೧೬೭
೨೦. ರಂಗಭೂಮಿಯ ಸಿರಿವಂತ ಹೃದಯ /೧೭೦
೨೧. ಪ್ರಭಾವದ ವ್ಯಕ್ತಿತ್ವ /೧೭೪
೨೨. 'ಬಹುರೂಪಿ' ಪಂಪಣ್ಣ /೧೯೪
೨೩. ಅಪ್ರತಿಮ ಕಲಾವಿದ ಈ 'ಭೀಮ' /೧೯೭
೨೪. ನಮ್ಮ ಸೀಮೆಯ 'ರಂಗ ಕೇಸರಿ' /೨೦೧
೨೫. ನಾನು ಕಂಡ 'ರಂಗ ತಪಸ್ವಿ' /೨೦೬

ಅನುಬಂಧ-೧

ಕೆಲವು ಕವಿತೆಗಳು /೨೧೧

೧. ಶ್ರೀ ಪುಟ್ಟಜ್ಜ /೨೧೩
೨. ಸಂಗೀತದೊಳ್ ಶಿವಯೋಗಿ /೨೧೪
೩. ಕೃಪೆಯಾಗು /೨೧೫
೪. ವಿಶ್ವದ ಮೂಲಾಧಾರ /೨೧೬
೫. ಸಂಕುಚಿತ ತೊರೆದು ಒಂದಾಗು /೨೧೭
೬. ನಾಡುಗಳರಸ ಕೋಗಳಿ ನಾಡು /೨೧೮
೭. ಜೈ ಜೈ ಜೈ ಭಾರತ ಮಾತೆ! /೨೨೦
೮. ವಿಜಯದ ಕಹಳೆ /೨೨೧
೯. ಗುರುವೆ ಪುಟ್ಟಯ್ಯ /೨೨೨

ಅನುಬಂಧ-೨

೧. ಜೀವನದ ವಿವರ /೨೨೩
೨. ರಂಗಭೂಮಿ /೨೨೪
೩. ಸ್ಥಾಪಿಸಿದ ಸಂಘ-ಸಂಸ್ಥೆಗಳು /೨೨೫
೪. ಜನ ಪ್ರತಿನಿಧಿಯಾಗಿ /೨೨೬
೫. ಗೌರವಗಳು /೨೨೭

ಛಾಯಾಚಿತ್ರಗಳು /೨೨೯

Scanned with CamScanner

೧೪

ಗ್ರಾಮೀಣ ಕಲಾ ಪ್ರತಿಭೆ

ಡಾ. ಕೆ. ರವೀಂದ್ರನಾಥ

ಬಳ್ಳಾರಿ ಜಿಲ್ಲಾ ಕೊಟ್ಟೂರು ತಾಲೂಕಿನ 'ಕೋಗಳಿ' ನಾಡಿನ ಧಾರ್ಮಿಕ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ 'ಕೋಗಳಿನಾಡು' ಎಂದೇ ಪ್ರಸಿದ್ಧಿ ಪಡೆದಿದೆ.

ನಾಡುಗಳೊಳೆಗೆಲ್ಲ
ಗಾಡಿಮತ್ತೆಸಮದ
ನಾಡಗಳರಸಹತಿ ಚೆಲ್ವ ಕೋಗಳಿ
ನಾಡು ನೋಡಲ್ಕೆ ಸೊಗಯಿಕ್ಕಂ

ಎಂಬ ಕ್ರಿ.ಶ. ೧೦೭೯ರ ನೀಲಗುಂದದ ಶಾಸನೋಕ್ತ ಈ ಪದ್ಯ ನಾಡುಗಳಿಗೆಲ್ಲ ಅತಿಸುಂದರವಾದ ಕೋಗಳಿನಾಡು ನಾಡುಗಳರಸನಂತೆ ಕಂಗೊಳಿಸುತ್ತಿತ್ತಂತೆ. ಪ್ರಾಯಶಃ ಈ ಪರಂಪರೆಯ ವಾರಸುದಾರಿಕೆ ಎನ್ನುವಂತೆ ಈಗಲೂ ಜೈನ ಬಸದಿಗಳು, ಶೈವ ದೇವಾಲಯಗಳು, ಗ್ರಾಮದೇವತೆಗಳು, ಕವಿ–ನಾಟಕ–ಗಮಕಿಗಳು, ರಾಜಕೀಯ ಮುತ್ಸದ್ದಿಗಳು ಕೋಗಳಿಯಲ್ಲಿರುವುದನ್ನು ಕಾಣುತ್ತೇವೆ. ಈ ಸಾಲಿನಲ್ಲಿ ಪ್ರಮುಖವಾಗಿ ಹೆಸರಿಸಬೇಕಾದ ಹೆಸರು ದಿವಂಗತ ಶ್ರೀ ಎಂ. ಪಂಪಣ್ಣನವರು.

ಎಂ.ಪಿ. ಕೋಗಿಲೆ ಎಂಬ ಅಂಕಿತದಿಂದ ಕಾವ್ಯ ರಚಿಸಿದ ಶ್ರೀ ಎಂ. ಪಂಪಣ್ಣನವರಿಗೂ ನನಗೂ ಮೂವತ್ತು ವರ್ಷಗಳ ಒಡನಾಟ. ೧೯೭೮–೭೯ ಇರಬೇಕು. ಹಗರಿಬೊಮ್ಮನ ಹಳ್ಳಿ ತಾಲೂಕು ಬೋರ್ಡು ಚುನಾವಣೆ. ಶ್ರೀ ಅಂಬಳಿ ಗಡ್ಡಿಕೊಟ್ರಗೌಡ ಮತ್ತು ಕೋಗಳಿ ಹಲಗಣ್ಣನವರ ಗುರುಸಿದ್ಧಯ್ಯನವರು ಕಾಂಗ್ರೆಸ್ ಅಭ್ಯರ್ಥಿಗಳು. ನಮ್ಮ ತಂದೆಯವರಾದ ಶ್ರೀ ಕೆ. ಮೂಗಪ್ಪನವರು ಮತ್ತು ಶ್ರೀ ಎಂ. ಪಂಪಣ್ಣನವರು ಪಕ್ಷೇತರ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದರು. ಮತದಾನದ ದಿನ ಹಗರಿಬೊಮ್ಮನಹಳ್ಳಿಯ ರಾಮನಗರದಲ್ಲಿರುವ ಗಂಗಾವತಿ ವೆಂಕೋಬಣ್ಣನವರ ಛತ್ರದಲ್ಲಿ ಶ್ರೀ ಎಂ. ಪಂಪಣ್ಣ

Scanned with CamScanner

ನವರನ್ನು ಮೊದಲ ಬಾರಿಗೆ ನೋಡಿದ್ದು. ನಂತರ ೧೯೧೧ರಲ್ಲಿ ನಾನು ಬಳ್ಳಾರಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಧ್ಯಾಪಕನಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಒಂದು ದಿನ ಗಣೇಶೋತ್ಸವದ ಅಂಗವಾಗಿ ಕೋಗಳಿಗೆ ಭಾಷಣಕ್ಕೆ ಬರಬೇಕೆಂದು ಗೆಳೆಯ ದಿವಂಗತ ಕೆ. ಶಿವಕುಮಾರ ಮತ್ತು ಶ್ರೀ ಎಂ. ಪಂಪಣ್ಣನವರು ಬಳ್ಳಾರಿಗೆ ಆಹ್ವಾನಿಸಲು ಬಂದಿದ್ದರು. ಶ್ರೀ ಮಾರುತಿ ಭಜನಾ ಸಂಘದ ಬಗ್ಗೆ ನನಗೆ ಅಲ್ಲಿಯವರೆಗೆ ತಿಳಿದಿರಲಿಲ್ಲ. ರಾಷ್ಟ್ರಮಟ್ಟದಲ್ಲಿ ಕಲ್ಕತ್ತಾದ ಮಹರ್ಷಿ ರವೀಂದ್ರನಾಥ ಟಾಗೋರರ ವಿಶ್ವಭಾರತಿ(ಶಾಂತಿನಿಕೇತನ)ಯಲ್ಲಿ ನಡೆದ ಸಂಗೀತ ವಿಭಾಗದ ಕಲಾಪಗಳನ್ನು ಕೇಳಿ ತಿಳಿದಿದ್ದೇನೆ. ಅಲ್ಲಿಯ ಕಲಾವಿದರ ಬಡತನದ ಬೇಗುದಿಯೋ? ಅವರ ಕಂಠಸಿರಿಯೋ? ಎಲ್ಲವೂ ಸಂಗೀತಮಯ. ಹಾಗೆಯೇ ಗ್ರಾಮಾಂತರ ಪ್ರದೇಶದಲ್ಲಿ ಶ್ರೀ ಮಾರುತಿ ಭಜನ ಸಂಘವನ್ನು ಸ್ಥಾಪಿಸಿ ಶ್ರೀ ಶಂಕ್ರಯ್ಯ ಹೆಚ್.ಎಂ. ಶ್ರೀ ಚಂದ್ರಯ್ಯ ಇನ್ನೂ ಅನೇಕ ಪ್ರತಿಭೆಗಳನ್ನು ಬೆಳೆಸುವಲ್ಲಿ ಶ್ರೀ ಮಾರುತಿ ಭಜನಾ ಸಂಘದ ಪಾತ್ರ ಬಹುದೊಡ್ಡದು. ತಾಳ-ತಬಲ-ಹಾರ್ಮೋನಿಯಂ-ನಾಟಕ ಕೃತಿಗಳು ಒಳಗೊಂಡಂತೆ ಎಲ್ಲವೂ ಸಮ್ಮಿಳಿತಗೊಂಡ ಕಲಾಕೇಂದ್ರವನ್ನಾಗಿ ಈ ಸಂಘವನ್ನು ಕಟ್ಟಿ ಬೆಳೆಸಿದವರಲ್ಲಿ ಮುಖ್ಯರಾದವರು ಶ್ರೀ ಎಂ. ಪಂಪಣ್ಣನವರು. ಇದು ಅವರ ಸಾಂಸ್ಕೃತಿಕ ಮನಸ್ಸಿನ ದ್ಯೋತಕವಾಗಿದೆ. ಗ್ರಾಮಸ್ಥರು ಸೇರಿ ಶ್ರೀ ವೀರಭದ್ರ ಗುಡಿಯ ಆವರಣದಲ್ಲಿ ಗಣೇಶ ಹಬ್ಬದ ಸಮಾರಂಭವನ್ನು ಏರ್ಪಡಿಸಿದ್ದರು. ಉಪನ್ಯಾಸ ಆರಂಭವಾಗುವುದೇ ತಡ ಮಳೆ ಸುರುವಾಯಿತು. ಬಯಲಲ್ಲಿದ್ದ ಕಾರ್ಯಕ್ರಮ ಗುಡಿಯ ರಂಗಮಂದಿರಕ್ಕೆ ಸ್ಥಳಾಂತರವಾಯಿತು. ಕೇಳುಗರು ಆಜುಬಾಜಿನ ಮನೆಯ ತುದಿಗಟ್ಟಿಯಲ್ಲಿ, ಅಟವಾಳಿಗೆಯಲ್ಲಿ ಕುಳಿತು ಧ್ವನಿವರ್ಧಕದ ಸಹಾಯದಿಂದ ಉಪನ್ಯಾಸ ಕೇಳಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಎಂ. ಪಂಪಣ್ಣನವರು ಸೊಗಸಾಗಿ ನನ್ನ ವಚನಸಾಹಿತ್ಯ ಉಪನ್ಯಾಸದ ಮೇಲೆ ಅಧ್ಯಕ್ಷೀಯ ಮಾತುಗಳನ್ನಾಡಿದರು. ರಾತ್ರಿ ಹೊತ್ತಾದ್ದರಿಂದ ಶ್ರೀ ಮಾರುತಿ ಭಜನಾ ಮಂಡಳಿಯಲ್ಲಿ ನಾವಿಬ್ಬರೂ ತಂಗಿದ್ದೆವು. ಬೆಳಿಗ್ಗೆ ಎದ್ದಾಗ ಪಕ್ಕದಲ್ಲೇ ಇರುವ ಅವರ ಮನೆಯಲ್ಲಿ ಉಪಹಾರದ ಆತಿಥ್ಯ. ಪ್ರೀತಿ-ವಾತ್ಸಲ್ಯ-ಸ್ನೇಹಪರತೆಯಿಂದ ಕೂಡಿದ ಅವರ ಮಾತುಗಳಲ್ಲಿ ನಾಟಕ-ಸಂಗೀತ-ಕಲೆ-ಇತಿಹಾಸದ ಮರುಪುಟಗಳನ್ನು ತಿರುವಿ ಹಾಕಿದ ಕ್ಷಣಗಳು ಬದುಕಿನ ಮತ್ತು ನನ್ನ ಬೆಳವಣಿಗೆಯ ಮಹತ್ವದ ದಿನವೆಂದರೆ ಅತಿಶಯೋಕ್ತಿಯಲ್ಲ.

ಈ ಸ್ನೇಹ-ಸಲುಗೆ-ಒಡನಾಟದ ನಿರಂತರತೆಯಿಂದ ಪ್ರತಿವರ್ಷ ಕೋಗಳಿಯ ಶ್ರೀ ಮಾರುತಿ ಭಜನಾ ಸಂಘ ಮತ್ತು ಗ್ರಾಮಸ್ಥರ ನೆರವಿನಿಂದ ಒಂದು ರಾತ್ರಿವಿಡೀ ಶಾಸ್ತ್ರೀಯ ಸಂಗೀತೋತ್ಸವವನ್ನು ಸ್ಥಳೀಯ ಪಂಡಿತರಾದ ಶ್ರೀ ಜೆ.ಎಂ. ಗುರುಸಿದ್ಧಯ್ಯನವರ ಮತ್ತು ಗದುಗಿನ ಗಾನಯೋಗಿ ಪಂಚಾಕ್ಷರಿ ಗವಾಯಿಗಳವರ ಸ್ಮರಣಾರ್ಥ ನೆಡೆಸಿಕೊಂಡು ಬರುತ್ತಿದ್ದ ಸಂಗತಿಯನ್ನು ಶ್ರೀ ಪಂಪಣ್ಣನವರು ನನಗೆ ತಿಳಿಸಿದರು.

ಇದಕ್ಕೂ ಪೂರ್ವದಲ್ಲಿ ಕೋಗಳಿಯ ಜೆ.ಎಂ. ಗುರುಸಿದ್ಧಯ್ಯನವರ ಶಿಷ್ಯರಾದ ಶ್ರೀ ಈಶ್ವರ ಮೋರಗೇರಿಯವರು ಮತ್ತು ಅವರ ಸಂಗಡಿಗರಿಂದ ಇಟಗಿಯ ಮಾಜಿ ಶಾಸಕ ದಿವಂಗತ ಸಿ. ಅಂದಾನಪ್ಪ ಅವರ ಆಫೀಸಿನಲ್ಲಿ ಕೆಲವೆರಡು ವರ್ಷ ಸಂಗೀತೋತ್ಸವ ನಡೆಯಿತಂತೆ. ನಂತರದಲ್ಲಿ ಸಿ. ಅಂದಾನಪ್ಪನವರೇ ಇದು ಕೋಗಳಿಯಂಥ ಕಲಾಗ್ರಾಮದಲ್ಲಿ ನಡೆಯುವುದು ಉಚಿತವೆಂದು ಶ್ರೀ ಪಂಪಣ್ಣನವರಿಗೆ ತಿಳಿಸಿ ಸ್ವತಃ ಅವರೇ ಪ್ರತಿವರ್ಷ ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದನ್ನು ವಿವರಿಸಿದ್ದರು. ಇದನ್ನು ಕೇಳಿದ ಮೇಲೆ ಶ್ರೀ ಪಂಪಣ್ಣನವರಿಗೆ ಒಂದು ರಾತ್ರಿ ಬರೀ ಸಂಗೀತ ಇನ್ನೊಂದು ದಿನ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಿ ಎರಡು ದಿನಗಳ ಅವಧಿಗೆ ಈ ಪುಣ್ಯಸ್ಮರಣೆಯನ್ನು ವಿಸ್ತರಿಸಲು ಸೂಚಿಸಿದೆ. ಅದಕ್ಕೆ ಅತ್ಯಂತ ಪ್ರೀತಿಯಿಂದ ಒಪ್ಪಿ ಕಾರ್ಯಪ್ರವೃತ್ತರಾದ ಪಂಪಣ್ಣನವರು ಮತ್ತು ಲೈನ್‌ಮ್ಯಾನ್ ಹುದ್ದೆಯಲ್ಲಿದ್ದಂಥ, ಗ್ರಾಮಸ್ಥರ ಕುಟುಂಬ ಸದಸ್ಯರಲ್ಲಿ ಒಬ್ಬರಂತೆ ನಡೆದುಕೊಂಡು ಕೋಗಳಿಯವರೇ ಆಗಿದ್ದಂಥ ಹದಡಿಯ ಶ್ರೀ ಶಿವಣ್ಣನವರು, ಶ್ರೀ ಹೆಚ್.ಎಂ. ಶಂಕ್ರಯ್ಯ, ಶ್ರೀ ಚಂದ್ರಯ್ಯ ಮುಂತಾದ ಗ್ರಾಮಸ್ಥರೆಲ್ಲ ಸೇರಿ ಅತ್ಯಂತ ವ್ಯವಸ್ಥಿತವಾಗಿ ಉಪನ್ಯಾಸ ಮಾಲೆ ಮತ್ತು ಸಂಗೀತೋತ್ಸವ ನಡೆಸಿಕೊಂಡು ಬಂದಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಲೇಬೇಕು. ಶ್ರೀ ಈಶ್ವರ ಮೋರಗೇರಿ, ಮರಿಸ್ವಾಮಿ ಮಧುರೆ, ಸುಭದ್ರಮ್ಮ ಮನ್ಸೂರು, ಜಬೇದಾಬಾಯಿ ಸವಣೂರು, ಅನಂತಪುರದ ನಾಗೇಶ, ಸೋಗಿ ನಾಗರತ್ನಮ್ಮ, ಹರಾಳು ನಿಂಗಜ್ಜ, ಮರಿಯಮ್ಮನಹಳ್ಳಿ ನಾಗರತ್ನಮ್ಮ ಹೀಗೆ ಪ್ರಖ್ಯಾತ ನಾಟಕಕಾರರು, ಕಲಾವಿದರು ಸಂಗೀತಗಾರರು, ವಿದ್ವಾಂಸರು ಶ್ರೀ ಪಂಪಣ್ಣ ಕಲಾ ಪ್ರತಿಭೆ ಮತ್ತು ಆಸಕ್ತಿಗೆ ಮನಸೋತು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು. ಗಾನಯೋಗಿಗಳ ಪುಣ್ಯತಿಥಿ ಆರಂಭವಾದ ಕೂಡಲೇ ಗದುಗಿನ ಡಾ. ಪುಟ್ಟರಾಜ ಗವಾಯಿಗಳಿಗೆ ಅರಿಕೆ ಮಾಡಿಕೊಂಡು ಬಂದು ಉಪನ್ಯಾಸಕರಿಗಾಗಿ ಕೊಟ್ಟೂರು, ಹರಪನಹಳ್ಳಿ, ಹಡಗಲಿ, ಹೊಸಪೇಟೆ ಹೀಗೆ ಸುತ್ತಾಡಿ ರಾತ್ರಿ ಕೊನೆಯ ಬಸ್ಸಿಗೊ, ಖಾಸಗಿ ವಾಹನಗಳನ್ನೂ ಏರಿ ಬಂದು ಅಡ್ಡರಸ್ತೆಗೆ ಇಳಿದು ನನ್ನೂರಾದ ಅಂಬಳಿಯಲ್ಲಿ ಉಳಿದುಕೊಂಡ ನೆನಪೂ ಇದೆ. ಬಂದ ಅತಿಥಿಗಳಿಗೆಲ್ಲ ಶ್ರೀ ಪಂಪಣ್ಣನವರ ಮತ್ತು ಶ್ರೀ ಶಿವಣ್ಣನವರ ಮನೆಯಲ್ಲಿ ಊಟೋಪಚಾರ. ಕನ್ನಡ ವಿಶ್ವವಿದ್ಯಾಲಯದ ಅನೇಕ ವಿದ್ವಾಂಸರೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಶ್ರೀ ಪಂಪಣ್ಣನವರು ನೋಡಿಕೊಂಡರು.

೧೯೯೩ರಲ್ಲಿ ಹಗರಿಬೊಮ್ಮನಹಳ್ಳಿಯಲ್ಲಿ ಲೇಖಕ, ನ್ಯಾಯಾಧೀಶ ದಿವಂಗತ ಶ್ರೀ ಕೋ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಜಿಲ್ಲಾ ೮ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಆ ಸಂದರ್ಭದಲ್ಲಿಯೂ ಪಂಪಣ್ಣನವರು ಸಾಹಿತ್ಯ ಸಂಗೀತ, ರಂಗಭೂಮಿಯ ಕುರಿತು ಸುದೀರ್ಘವಾಗಿ ಚರ್ಚೆ ಮಾಡಿದರು. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದವತಿಯಿಂದ ಬಳ್ಳಾರಿ ಜಿಲ್ಲೆಯ ಆಯ್ದ

Scanned with CamScanner

ಗ್ರಾಮಗಳಲ್ಲಿ ಉಪನ್ಯಾಸ ಏರ್ಪಡಿಸಬೇಕೆಂದು ಪ್ರಸಾರಾಂಗದ ನಿರ್ದೇಶಕರಾಗಿದ್ದ ಲಿಂ. ಡಾ. ಎಂ.ಎಸ್. ಲಠ್ಠೆ ಅವರು ಸೂಚಿಸಿದರು. ಇದರ ಅಂಗವಾಗಿ ಮಾಜಿ ಉಪಮುಖ್ಯಮಂತ್ರಿಗಳಾಗಿದ್ದ ಎಂ.ಪಿ. ಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ಸ್ನಾತಕೋತ್ತರ ಕೇಂದ್ರದ ಪ್ರಾಧ್ಯಾಪಕರಾಗಿದ್ದ ಶ್ರೀ ನಿಜಗುಣಪ್ಪನವರು 'ಭೂಕಂಪನ' ಕುರಿತು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮವನ್ನು ಗ್ರಾಮಮಟ್ಟದಲ್ಲಿ ರೂಪಿಸಿದವರೇ ಶ್ರೀ ಪಂಪಣ್ಣನವರು. ೨೦೧೦ ಕೋಗಳಿಯ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಸಂದರ್ಭ. ಆ ನೆನಪಿಗಾಗಿ ಸ್ಮರಣ ಸಂಚಿಕೆ ತರಬೇಕೆಂಬ ಉದ್ದೇಶದಿಂದ ಊರಲ್ಲಿ ಸಭೆ ಕರೆದು 'ಕೋಗಳಿ ನಾಡು' ಸಂಚಿಕೆಯ ಸಂಪಾದಕತ್ವದ ಹೊಣೆಗಾರಿಕೆಯನ್ನು ನನಗೆ ವಹಿಸಿಕೊಡುವಲ್ಲಿ ಶ್ರೀ ಪಂಪಣ್ಣನವರಿಗೆ ನನ್ನ ಮೇಲಿನ ಶೈಕ್ಷಣಿಕ ಪ್ರೀತಿ ಮತ್ತು ಒತ್ತಾಸೆ ಕಾರಣವೆಂಬುದನ್ನು ನೆನಪು ಮಾಡಿಕೊಳ್ಳುವುದು ನನ್ನ ಕರ್ತವ್ಯವಾಗಿದೆ. ಅವರ ಮಗಳು ಮಲ್ಲಮ್ಮ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯಲು ಅಂಬಳಿಗೆ ಬಂದಾಗ ದಿನಾಲು ಓಡಾಡುವುದು ಬೇಡವೆಂದು ನಮ್ಮ ಮನೆಯಲ್ಲಿಯೇ ಉಳಿದುಕೊಂಡು ಹೋದ ನೆನಪನ್ನು ಸದಾ ನೆನಪಿಸುತ್ತಿದ್ದರು. ಇದರಿಂದ ಶ್ರೀ ಪಂಪಣ್ಣನವರು ನನಗೆ ಮತ್ತು ನಮ್ಮ ಮನೆಗೆ ಅನ್ಯರಾಗಿದ್ದಿಲ್ಲ. ಕೂಡು ಕುಟುಂಬದ ಸದಸ್ಯರಾಗಿದ್ದರು. ನಾನು ಕನ್ನಡ ವಿಶ್ವವಿದ್ಯಾಲಯ ಸೇರಿದ ಮೇಲೆ ಹಸ್ತಪ್ರತಿ ಸಂಗ್ರಹಕ್ಕಾಗಿ ಹೋದಾಗ ಮತ್ತು 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ಪಾರ್ಶ್ವನಾಥ ಬಸದಿಯ ಆವರಣದಲ್ಲಿಯೇ ಏರ್ಪಡಿಸಿ ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುವಂತೆ ಎಲ್ಲ ಸೌಲಭ್ಯಗಳನ್ನು ಮಾಡಿಕೊಡುತ್ತಿದ್ದ ಅವರು ಕೋಗಳಿಯ ಸಾಂಸ್ಕೃತಿಕ ನಾಯಕರಾಗಿದ್ದರು. ಇತ್ತೀಚೆಗೆ ಅವರು ನಿಧನರಾಗುವ ಮೂರ್ನಾಲ್ಕು ತಿಂಗಳು ಪೂರ್ವದಲ್ಲಿ ಅಲಬೂರಿನಲ್ಲಿ ನಡೆದ ಶ್ರೀ ಹರಾಳು ನಿಂಗಜ್ಜನವರ ಪುಣ್ಯತಿಥಿಯಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿತ್ತು. ಈ ಕಾರ್ಯಕ್ರಮಕ್ಕೆ ಪಂಪಣ್ಣವರು ಆಗಮಿಸುವವರಿದ್ದರು. ನಾನು ದೂರವಾಣಿ ಕರೆ ಮಾಡಿ ಕೋಗಳಿಯಲ್ಲಿಯೇ ಇರಿ ನಾನೇ ಕಾರು ತೆಗೆದುಕೊಂಡು ಬರುತ್ತೇನೆ. ಅಲಬೂರಿಗೆ ಹೋಗೋಣ ಎಂದೆ. ತಯಾರಾಗಿ ಗುಡಿಯ ಕಟ್ಟಿಗೆ ಕುಳಿತಿದ್ದರು. ಕರೆದುಕೊಂಡು ಬಂದೆ. ಹಿರಿಯರಾದ ತಂಬ್ರಹಳ್ಳಿಯ ಅಕ್ಕಿ ಕೊಟ್ರಪ್ಪ ದಂಪತಿಗಳು ಮೇಟಿ ಕೊಟ್ರಪ್ಪನವರ ಸಂಪಾದಿತ 'ವಿಚಾರ ಕುಸುಮಾಂಜಲಿ' ಕೃತಿಯನ್ನು ಬಿಡುಗಡೆ ಮಾಡಿದರು. ಹರಾಳ ನಿಂಗಜ್ಜನವರ ಒಡನಾಟದಲ್ಲಿದ್ದ ಶ್ರೀ ಪಂಪಣ್ಣನವರು ಅವರ ಸಾಹಿತ್ಯ ಕುರಿತು ಅದ್ಭುತವಾಗಿ ಮಾತನಾಡಿದರು. ನನಗೆ ಇದು ಪಂಪಣ್ಣನವರ ಕೊನೆಯ ಭೇಟಿ. ಹೀಗೆ ನಾವು ಸೇರಿದಾಗಲೆಲ್ಲ ನಲವಡಿ ಶ್ರೀಕಂಠಶಾಸ್ತ್ರಿ, ಮಾರುತೇಶ ಮಾಂಡ್ರೆ, ಕಂದಗಲ್ಲ ಹನುಮಂತರಾಯ, ಅರಿಶಿಣಗೋಡಿ, ದುತ್ತರಗಿ, ಗದುಗಿನ ವೀರಶೈವ ಪುಣ್ಯಾಶ್ರಮ ಕುರಿತು ಹರಟೆ ಹೊಡೆಯುವುದು ಸಾಮಾನ್ಯವಾಗಿತ್ತು.

ದೂರದರ್ಶನ, ಸಿನಿಮಾ, ಮೊಬೈಲ್ ಮಾಧ್ಯಮಗಳಿಂದ ನಾಟಕ, ಜಾತ್ರೆ, ಹಬ್ಬ-ಹರಿದಿನಗಳು, ಉತ್ಸವಗಳು ಸೊರಗಿ ಹೋಗಿದ್ದ ನೋವು ರಂಗಭೂಮಿಯನ್ನು ಪ್ರೀತಿಸುತ್ತಿದ್ದ ಶ್ರೀ ಪಂಪಣ್ಣನವರನ್ನು ಕಾಡುತ್ತಿತ್ತು. ಕಾಲನ ನಿರ್ಣಯದ ಮುಂದೆ ನಾವೆಲ್ಲ ಶೂನ್ಯ ಎಂಬ ನಿಟ್ಟುಸಿರು ಅವರಿಗರಿವಿಲ್ಲದಂತೆ ಬರುತ್ತಿತ್ತು. ಹೆಚ್ಚು ಓದದ, ನಾಗರೀಕ ಬದುಕನ್ನು ಕಾಣದ ಶ್ರೀ ಪಂಪಣ್ಣನವರು ಸಾಂಸ್ಕೃತಿಕವಾಗಿ ಮತ್ತು ನಾಗರಿಕರಾಗಿ ಯಾರಿಗೂ ಕಡಿಮೆ ಇದ್ದಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕು. ತನ್ನ ಸಾರ್ಥಕ ಬದುಕಿನ ಹೆಜ್ಜೆ ಗುರುತುಗಳನ್ನು ನಮ್ಮೊಂದಿಗೆ ಬಿಟ್ಟು ಹೋದ ಗ್ರಾಮೀಣ ಕಲಾ ಪ್ರತಿಭೆಗೆ ನನ್ನ ಹೃದಯಪೂರ್ವಕ ನಮನಗಳು. ನೆನಪುಗಳನ್ನು ಬಿಚ್ಚಿಡಲು ಕಾರಣರೂ ಹಾಗೂ ಎಂ.ಪಿ. ಪ್ರಕಾಶ್, ಮಾಗಳದ ಚಂದ್ರಶೇಖರ ಶಾಸ್ತ್ರಿ, ಮುದೇನೂರು ಸಂಗಣ್ಣ ಮುಂತಾಗಿ ಸ್ಥಳೀಯ ಪ್ರತಿಭೆಗಳನ್ನು ಕೃತಿ ರೂಪದಲ್ಲಿ ದಾಖಲಿಸಿ ಜಿಲ್ಲೆಯ ಸಾಂಸ್ಕೃತಿಕ ಚರಿತ್ರೆಯನ್ನು ವಿಸ್ತರಿಸಿದ ಆತ್ಮೀಯರಾದ ಎಂ.ಎಂ. ಶಿವಪ್ರಕಾಶ ಅವರು ಇದೀಗ ಕೋಗಳಿಯ ಶ್ರೀ ಪಂಪಣ್ಣನವರನ್ನು ಕುರಿತಾದ ಕೃತಿಗೆ ಲೇಖನ ಬರೆದು ಕೊಡಲು ತೋರಿದ ಸೌಜನ್ಯವನ್ನು ಪ್ರೀತಿಯಿಂದ ಸ್ಮರಿಸಿಕೊಳ್ಳುತ್ತೇನೆ.

ಪ್ರಾಧ್ಯಾಪಕರು ಹಾಗೂ ಡೀನ್
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೫ ೨೭೬

◆◆

Scanned with CamScanner

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

ಹಸ್ತಪ್ರತಿ ವ್ಯಾಸಂಗ-೧೯

ಸಂಪಾದಕ: ಡಾ. ಕೆ. ರವೀಂದ್ರನಾಥ



Scanned with CamScanner

HASTAPRATI VYAASANGA-19

Edited by
Dr. K.Ravindranatha
Professor, Dept. of Manuscriptology
Kannada University, Hampi
Vidyaranya 583 276

Published by
Dr. H.D.Prasant
Director, Prasaranga
Kannada University, Hampi
Vidyaranya 583 276

First Impression 2020

www.kannadauniversity.org

Pp: xii+248 Price: 220/-

ISBN: 978-93-87135-58-1

ಬೆಲೆ ರೂ. ೨೨೦/-

© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೨೦

ಮುಖಪುಟ: ಕೆ.ಕೆ.ಮಕಾಳಿ

ಅಕ್ಷರ ಸಂಯೋಜನೆ
ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್
ನೃಪತುಂಗನಗರ, ವಿದ್ಯಾರಣ್ಯ ೫೮೩ ೨೭೬
ಸಂಚಾರಿ ೯೪೪೮೧ ೬೯೯೦

ಪುಸ್ತಕ ದೊರೆಯುವ ಸ್ಥಳ
ಪುಸ್ತಕ ಸರಸ್ವತಿ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ದೂರವಾಣಿ ೦೮೫೪-೨೫೦೪೧೦

ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ
ನಂ.೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ ೦೮೦-೨೨೩೭೨೩೫೮

ಮುದ್ರಕರು
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with CamScanner

ಪರಿವಿಡಿ

ಕನ್ನಡವು ಕನ್ನಡವ ಕನ್ನಡಿಸುತಿರಬೇಕು / 3

ಮುಖ್ಯಸ್ಥರ ಮಾತು / 6

ಭಾಗ: ಒಂದು

ಉದ್ಘಾಟನಾ ಸಮಾರಂಭ / ೧

೧. ಪ್ರಾಸ್ತಾವಿಕ ಮಾತು / ೩
ಡಾ.ಕೆ.ರವೀಂದ್ರನಾಥ

೨. ಹಸ್ತಪ್ರತಿಗಳು ನಮ್ಮ ಪರಂಪರೆಯ ಪ್ರತೀಕ! / ೮
ಡಾ.ಜಿನದತ್ತ ದೇಸಾಯಿ

೩. ಹಸ್ತಪ್ರತಿಗಳು: ಅರಿವಿನ ಅರವಂಟಿಗೆಗಳು / ೧೦
ಡಾ.ಹಂಪ ನಾಗರಾಜಯ್ಯ

೪. ಹಸ್ತಪ್ರತಿಗಳ ಅಧ್ಯಯನ ನಿರಂತರವಾಗಬೇಕು / ೨೮
ಡಾ.ಮಂಜುನಾಥ ಬೇವಿನಕಟ್ಟಿ

ಭಾಗ: ಎರಡು

ಗ್ರಂಥಸಂಪಾದನೆ: ವಿದ್ವಾಂಸರ ಸಾಧನೆ: ೧ / ೩೧

೫. ಟಿ.ಎಸ್.ವೆಂಕಣ್ಣಯ್ಯ / ೩೩
ಡಾ.ರಾಜೇಶೇಖರ ಇಚ್ಚಂಗಿ

೬. ಎಸ್.ಎಂ.ಹುಣಸ್ಯಾಳ / ೫೪
ಡಾ.ಸಿ.ನಾಗಭೂಷಣ

೭. ಪಂಡಿತ ಎಸ್.ಬಸಪ್ಪ / ೭೫
ಡಾ.ಪಿ.ಕೆ.ರಾಠೋಡ

Scanned with CamScanner

೮. ಸ.ಸ.ಮಾಳವಾಡರ ಸಂಪಾದನೆ / ೮೫
ಡಾ.ಪಿ.ಕೆ.ರಾತೋಡ
೯. ಗುಣವ ಬಿಡದ ಸುವರ್ಣ / ೯೩
ಡಾ.ಗುರುಪಾದ ಮರಿಗುದ್ದಿ

ಗ್ರಂಥಸಂಪಾದನೆ: ವಿದ್ವಾಂಸರ ಸಾಧನೆ–೨ / ೧೦೫
೧೦. ಕ.ವೆಂ.ರಾಘವಾಚಾರ್ / ೧೦೭
ಡಾ.ಬಿ.ನಂಜುಂಡಸ್ವಾಮಿ
೧೧. ಡಿ.ಕೆ.ಭೀಮಸೇನರಾವ್ / ೧೧೬
ಡಾ.ಎಸ್.ಆರ್.ಚನ್ನವೀರಪ್ಪ
೧೨. ಜಿ.ವೆಂಕಟಸುಬ್ಬಯ್ಯ / ೧೨೭
ಡಾ.ಚಿತ್ತಯ್ಯ ಪೂಜಾರ್
೧೩. ವಿ.ಶಿವಾನಂದ / ೧೩೬
ಡಾ.ಹನುಮಂತ ಮೇಲಿನಮನಿ
೧೪. ಅಧ್ಯಕ್ಷರ ನುಡಿ / ೧೪೬
ಡಾ.ಎಸ್.ಕೆ.ಕೊಪ್ಪಾ

ಭಾಗ: ಮೂರು
ಪ್ರಾಚೀನ ಅಲಂಕಾರಶಾಸ್ತ್ರ ಸಾಹಿತ್ಯ:
ಪರಿಷ್ಕರಣೆ ಮತ್ತು ಅಧ್ಯಯನ / ೧೫೧
೧೫. ಕಾವ್ಯಾವಲೋಕನ / ೧೫೩
ಡಾ.ಬಿ.ಎಸ್.ಗಂಗನಹಳ್ಳಿ
೧೬. ಉದಯಾದಿತ್ಯಾಲಂಕಾರ / ೧೬೬
ಡಾ.ಎಫ್.ಟಿ.ಹಳ್ಳಿಕೇರಿ
೧೭. ರಸರತ್ನಾಕರ / ೧೭೯
ಡಾ.ವೀರೇಶ ಬಡಿಗೇರ
೧೮. ಮಾಧವಾಲಂಕಾರ / ೧೯೨
ಡಾ.ಎಸ್.ಎಸ್.ಅಂಗಡಿ

ಭಾಗ: ನಾಲ್ಕು
ಬೆಳಗಾವಿ ಜಿಲ್ಲೆ ಬಯಲಾಟದ ಹಸ್ತಪ್ರತಿಗಳು:
ಸರ್ವೇಕ್ಷಣೆ ಮತ್ತು ಅಧ್ಯಯನ / ೧೯೯

೧೯. ವಿಷಯ ಮಂಡನೆ / ೨೦೧
ಡಾ.ಸಿ.ಕೆ.ನಾವಲಗಿ
೨೦. ವಿಷಯ ವಿಸ್ತರಣೆ / ೨೧೫
ಡಾ.ವೈ.ಎಂ.ಯಾಕೊಳ್ಳಿ
೨೧. ಅಧ್ಯಕ್ಷೀಯ ನುಡಿ / ೨೧೯
ಡಾ.ಬಸವರಾಜ ಜಗಜಂಪಿ

ಭಾಗ: ಐದು / ೨೨೩
ವಿಶೇಷ ಉಪನ್ಯಾಸ
೨೨. ಹಸ್ತಪ್ರತಿ–ಗ್ರಂಥಸಂಪಾದನೆ:
ಡಾ.ಹಂಪನಾ ಕೊಡುಗೆ / ೨೨೫
ಡಾ.ಕೆ.ರವೀಂದ್ರನಾಥ

ಭಾಗ: ಆರು
ಸಮಾರೋಪ ನುಡಿ / ೨೩೩
೨೩. ಹಸ್ತಪ್ರತಿಗಳು ನಾಡಿನ ಸಂಸ್ಕೃತಿ / ೨೩೫
ಡಾ. ಶ್ರೀರಾಮ ಇಟ್ಟಣ್ಣವರ
೨೪. ಅಖಿಲ ಕರ್ನಾಟಕ ೧೫ನೇ ಹಸ್ತಪ್ರತಿ
ಸಮ್ಮೇಳನ ವರದಿ / ೨೪೧
ಡಾ. ಕಾಂತೇಶರೆಡ್ಡಿ ಗೋಡಿಹಾಳ

ಲೇಖಕರ ವಿಳಾಸ / ೨೪೭

Scanned with CamScanner

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

ಹಸ್ತಪ್ರತಿ ವ್ಯಾಸಂಗ-೨೦

ಸಂಪಾದಕ
ಡಾ. ವೀರೇಶ ಬಡಿಗೇರ

Scanned with CamScanner

HASTAPRATI VYAASANGA - 20

Edited by
Dr. Veeresh Badiger
Professor
Dept. of Manuscriptology
Kannada University, Hampi
Vidyaranya 583 276

Published by
Dr. H.D. Prashanth
Director, Prasaranga
Kannada University, Hampi
Vidyaranya 583 276

Pages: 16+೨೩೪ Price: 220/-

www.kannadauniversity.org

First Impression: 2020

ISBN - 978-93-87135-85-7

© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೨೦

ಬೆಲೆ: ರೂ. ೨೨೦/-

ಮುಖಪುಟ: **ಕೆ.ಕೆ. ಮಕಾಳಿ**

ಅಕ್ಷರ ಸಂಯೋಜನೆ
ಗೌತಮಿ ಗ್ರಾಫಿಕ್ಸ್, ಕಮಲಾಪುರ

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ: ೦೮೦-೨೨೩೭೨೩೮೮

ಮುದ್ರಣ
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with CamScanner

ಪರಿವಿಡಿ

ಕನ್ನಡವು ಕನ್ನಡವ ಕನ್ನಡಿಸುತಿರಬೇಕು / 3

ಮುಖ್ಯಸ್ಥರ ಮಾತು / 6

ಸಂಪಾದಕರ ಮಾತು / 10

ಭಾಗ : ಒಂದು / ೧

ಉದ್ಘಾಟನಾ ಸಮಾರಂಭ

೧. ಕನ್ನಡ ಹಸ್ತಪ್ರತಿಶಾಸ್ತ್ರ ಪರಿಚಯ / ೩
ಡಾ.ಎಸ್.ಡಿ. ಶೆಟ್ಟಿ

೨. ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಯ ಬಹುಮುಖ್ಯ ಕೇಂದ್ರ: ತೋಂಡೀತನ / ೨೦
ಡಾ. ಟಿ.ಎನ್. ನಾಗರತ್ನ

೩. ಹಸ್ತಪ್ರತಿಗಳು: ಕೂಡಿಕಟ್ಟಿದ ಜ್ಞಾನದ ಪ್ರತೀಕಗಳು / ೨೭
ಡಾ. ಸ.ಚಿ. ರಮೇಶ

೪. ಹಸ್ತಪ್ರತಿ ಸಮ್ಮೇಳನಗಳು ಪ್ರಾಚೀನ ಕಾವ್ಯ, ಶಾಸ್ತ್ರ, ಗ್ರಂಥಗಳ ಅಧ್ಯಯನಾಸಕ್ತಿಗೆ ಪ್ರೇರಕ / ೩೧
ಡಾ. ಎ. ಸುಬ್ಬಣ್ಣ ರೈ

೫. ಗ್ರಂಥಸಂಪಾದನೆಯಿಂದ ಗ್ರಂಥಾವತಾರಗಳೆಡೆಗೆ / ೩೪
ಪ್ರೊ. ವಿ. ಚಂದ್ರಶೇಖರ ನಂಗಲಿ

ಭಾಗ : ಎರಡು

ಡಾ. ಆರ್.ಸಿ. ಹಿರೇಮಠ ಅವರ ಜನ್ಮ ಶತಮನೋತ್ಸವ ಸಂಸ್ಮರಣೆ / ೪೩

೬. ಡಾ.ಆರ್.ಸಿ. ಹಿರೇಮಠ ಅವರ ಜೀವನ ಮತ್ತು ಸಾಧನೆ / ೪೫
ಡಾ. ಧನವಂತ ಹಾಜವಗೋಳ

೭. ಡಾ.ಆರ್.ಸಿ. ಹಿರೇಮಠ ಅವರ ಕಾವ್ಯಸಂಪಾದನೆ / ೫೮
ಡಾ. ಎಫ್.ಟಿ. ಹಳ್ಳಿಕೇರಿ

Scanned with CamScanner

೮. ಡಾ.ಆರ್.ಸಿ. ಹಿರೇಮಠ ಅವರ ವಚನ ಸಾಹಿತ್ಯ ಸಂಪಾದನೆ / ೬೬
ಡಾ.ಕೆ. ರವೀಂದ್ರನಾಥ
೯. ಉರಿವುಂಡ ಜಂಗಮ ಸಂಶೋಧಕ: ಡಾ.ಆರ್.ಸಿ.ಹಿರೇಮಠ / ೭೩
ಡಾ. ಪಂಡಿತ ರಾಠೋಡ
೧೦. ಡಾ.ಆರ್.ಸಿ. ಹಿರೇಮಠ ಅವರ ಭಾಷಾಶಾಸ್ತ್ರ ಅಧ್ಯಯನ / ೮೬
ಡಾ. ಎಸ್.ಎಸ್. ಅಂಗಡಿ
೧೧. ಡಾ.ಆರ್.ಸಿ. ಹಿರೇಮಠ ಅವರ ಸೃಜನಶೀಲ ಸಾಹಿತ್ಯ / ೯೫
ಡಾ.ರಮೇಶ ಕಲ್ಲನಗೌಡರ
೧೨. ಡಾ.ಆರ್.ಸಿ. ಹಿರೇಮಠ ಅವರ ಆತ್ಮಚರಿತ್ರೆ ಮತ್ತು ಜೀವನಚರಿತ್ರೆ /
ಡಾ. ಅಶೋಕ ನರೋಡೆ
೧೩. ಡಾ.ಆರ್.ಸಿ. ಹಿರೇಮಠ ಅವರ ವಿಮರ್ಶೆ ಮತ್ತು ಅನುವಾದ /
ಡಾ. ಎಸ್.ಆರ್. ಚನ್ನವೀರಪ್ಪ

ಭಾಗ : ಮೂರು
ವಿಶೇಷ ಉಪನ್ಯಾಸ / ೧೩೧
೧೪. ಡಾ.ಟಿ.ಎನ್. ನಾಗರತ್ನ ಅವರ ಗ್ರಂಥಸಂಪದನಾ ವೈಧಾನಿಕತೆ /
ಡಾ. ವೀರೇಶ ಬಡಿಗೇರ
೧೫. ಮಾನವೀಯ ಗುಣಗಳ ಆಗರ / ೧೫೪
ಡಾ. ಅಕ್ಕಮಹಾದೇವಿ

ಭಾಗ : ನಾಲ್ಕು
ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಇತ್ತೀಚಿನ ಒಲವುಗಳು / ೧೫೯
೧೬. ತಿಂತಿಣಿ ಮೌನೇಶ್ವರರ ಸಂಪಾದನೆಯ ವೈಧಾನಿಕತೆ / ೧೬೧
ಡಾ. ಲಕ್ಷ್ಮೀಕಾಂತ ಸಿ. ಪಾಂಚಾಳ
೧೭. ಜಲಶಾಸ್ತ್ರದ ಹಸ್ತಪ್ರತಿಗಳ ಓದಿನ ವಿಧಾನ / ೧೬೮
ಚಂದ್ರಶೇಖರ ಕಾಳಣ್ಣವರ
೧೮. ಸಾಂಪ್ರದಾಯಿಕ ಗ್ರಂಥಸಂಪಾದನೆಯ ಇತಿಮಿತಿಗಳು / ೧೭೩
ಆರ್. ಪ್ರವೀಣ್
೧೯. ಹಸ್ತಪ್ರತಿಗಳ ಸಾಂಸ್ಕೃತಿಕ ಓದು / ೧೭೯
ವಿಶ್ವನಾಥ ಎಸ್. ಪತ್ತಾರ
೨೦. ಹಸ್ತಪ್ರತಿಗಳ ಸಂರಕ್ಷಣೆ: ರಾಸಾಯನಿಕಗಳ ಬಳಕೆ / ೧೮೫
ಡಾ. ಕೆ.ಆರ್. ಕೇಶವಮೂರ್ತಿ

Scanned with CamScanner

೨೧. ಹಸ್ತಪ್ರತಿಗಳ ಓದು: ಇತ್ತೀಚಿನ ಒಲವುಗಳು / ೧೯೩
ಡಾ. ಪ್ರಭುಸ್ವಾಮಿ ಎಸ್.
೨೨. ವಚನ ಸಾಹಿತ್ಯ ಸಂಪಾದನೆ : ಭಿನ್ನನೋಟ / ೧೯೮
ಡಾ. ಗಾಯಿತ್ರಿ ಟಿ.
೨೩. ಕನ್ನಡ ಗ್ರಂಥಸಂಪಾದನೆ: ಮಹಿಳಾ ಸಂವೇದನೆ / ೨೦೫
ಡಾ. ಗೀತಾ ಸಿ.
೨೪. ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ: ಇಂದಿನ ಒಲವುಗಳು / ೨೧೩
ರಾಜು ಕೂಡಗಿ
೨೫. 'ರಾಮಚಂದ್ರಚರಿತಪುರಾಣಂ' ಚಂಪೂಕಾವ್ಯದ
ಗ್ರಂಥಸಂಪಾದನ ಕಾರ್ಯ / ೨೧೬
ಚಿದಾನಂದ ಮಾಸನಕಟ್ಟಿ
೨೬. ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ: ಇಂದಿನ ಒಲವುಗಳು / ೨೨೫
ಡಾ. ವೆಂಕಟಗಿರಿ ದಳವಾಯಿ
ಲೇಖಕರ ವಿಳಾಸಗಳು / ೨೩೧

Scanned with CamScanner

೮

ಡಾ. ಆರ್.ಸಿ. ಹಿರೇಮಠ ಅವರ ವಚನಸಾಹಿತ್ಯ ಸಂಪಾದನೆ

ಡಾ. ಕೆ. ರವೀಂದ್ರನಾಥ

ಹನ್ನೆರಡನೆಯ ಶತಮಾನದಲ್ಲಿ ಹುಟ್ಟಿದ ವಚನಸಾಹಿತ್ಯ ಆ ನಂತರದ ದಿನಗಳಲ್ಲಿ ಬೇರೆ ಬೇರೆ ಆಶಯಗಳಿಂದ ಅಧ್ಯಯನಕ್ಕೆ ಒಳಪಟ್ಟಿರುವುದನ್ನು ಕಾಣುತ್ತೇವೆ. ಹೀಗೆ ಅಧ್ಯಯನಕ್ಕೆ ಒಳಪಟ್ಟ ಉಪಕ್ರವವನ್ನು ಪ್ರಾಚೀನಯುಗ ಮತ್ತು ಆಧುನಿಕಯುಗ ಎಂದು ವಿದ್ವಾಂಸರು ವರ್ಗೀಕರಿಸುತ್ತಾರೆ. ಪ್ರಾಚೀನ ಯುಗದಲ್ಲಿ ನೂರೊಂದು ವಿರಕ್ತರು ಅಥವಾ ಪ್ರೌಢರಾಯನ ಕಾಲದ ಅಧ್ಯಯನ ಇತಿಹಾಸ ಒಂದಾದರೆ; ಏಳುನೂರೊಂದು ವಿರಕ್ತರ ಅಥವಾ ತೋಂಟದ ಸಿದ್ಧಲಿಂಗಯತಿಗಳ ಕಾಲದ ಅಧ್ಯಯನ ಇತಿಹಾಸ ಇನ್ನೊಂದು. ಸ್ಥೂಲವಾಗಿ ಇವರ ಕಾರ್ಯವನ್ನು ವಚನ ಸಂಕಲನಸಾಹಿತ್ಯ ಮತ್ತು ವಚನ ಸಂಪಾದನ ಸಾಹಿತ್ಯ ಎಂದು ಕರೆಯಬಹುದು. ಈ ಎರಡೂ ಸ್ವರೂಪದ ಅಧ್ಯಯನಕ್ಕೂ ಪೂರ್ವದಲ್ಲಿ ವಚನಸಂಗ್ರಹಗಳ ಕಾರ್ಯವು ದಾಖಲಾರ್ಹವಾದದ್ದು. ಅಂದರೆ ಕಲ್ಯಾಣಕ್ರಾಂತಿಯ ಪರಿಣಾಮವಾಗಿ ಪ್ರಜಾಸತ್ತಾತ್ಮಕವಾದ ಆಶಯದಿಂದ ಹುಟ್ಟಿದ ವಚನಸಾಹಿತ್ಯವನ್ನು ನೆಲದಮರೆಯ ನಿಧಾನದಂತೆ ಸಂರಕ್ಷಿಸಿಕೊಂಡು ಬಂದ ಕಾರಣವಾಗಿ "ವಚನ ಸಂಯೋಜನಸಮಯ" ನಿರ್ಮಾಣವಾಯಿತು. ಹೀಗೆ ವಚನ ಸಂಗ್ರಹ–ಸಂಕಲನ–ಸಂಪಾದನ ಜೊತೆಗೆ ವಚನಗಳನ್ನಾಧರಿಸಿ ವಚನಕಾರರ ಚರಿತ್ರೆಯನ್ನು ನಿರೂಪಿಸುವ ಇನ್ನೊಂದು ರೀತಿಯ ಸೃಜನಶೀಲವಾದ ಕಾವ್ಯಪುರಾಣಗಳ ರಚನ ಕಾರ್ಯವು ನಡೆಯಿತು. ಒಟ್ಟಿನಲ್ಲಿ ವಚನಸಾಹಿತ್ಯ ಸೃಷ್ಟಿಯ ಬೆನ್ನಹಿಂದೆಯೇ ವಚನ ಸಾಹಿತ್ಯ ಅಧ್ಯಯನದ ಹಲವು ಆಯಾಮಗಳು ತೆರೆದುಕೊಂಡವೆಂಬುದು ಈ ಸಾಹಿತ್ಯಕ್ಕಿರುವ ವಿಶೇಷತೆಯಾಗಿದೆ.

ಇನ್ನು ಆಧುನಿಕಯುಗದಲ್ಲಿ ನಡೆದ ಕಾರ್ಯವನ್ನು ವಿದ್ವಾಂಸರು ವಚನಪಿತಾಮಹ ಫ.ಗು.ಹಳಕಟ್ಟಿ ಅವರನ್ನು ಕೇಂದ್ರವಾಗಿಟ್ಟುಕೊಂಡು ವಚನಸಾಹಿತ್ಯ ಅಧ್ಯಯನ ಮತ್ತು ಪ್ರಕಟಣೆಯನ್ನು ಫ.ಗು.ಹಳಕಟ್ಟಿ ಪೂರ್ವಕಾಲ, ಫ.ಗು.ಹಳಕಟ್ಟಿಕಾಲ ಮತ್ತು ಫ.ಗು.ಹಳಕಟ್ಟಿ ನಂತರದ ಕಾಲವೆಂದು ಗುರುತಿಸುತ್ತಾರೆ. ಕ್ರಿ.ಶ ೧೮೮೩ ರಿಂದ ೧೯೧೪ರ ಅವಧಿಯಲ್ಲಿ ಬಳ್ಳಾರಿ ಸೆಟ್ಟರು ಮತ್ತು ಕೆಲವು ಜನ ದೇಶಿವಿದ್ವಾಂಸರು ಮಾಡಿದ ಕಾರ್ಯ ಫ.ಗು. ಹಳಕಟ್ಟಿ ಪೂರ್ವಕಾಲವೆಂದೂ, ಈ ಕಾಲಘಟ್ಟದಲ್ಲಿ ಗ್ರಂಥಸಂಪಾದನೆಯ ಯಾವುದೇ ಶಾಸ್ತ್ರೀಯವಾದ ವೈಧಾನಿಕತೆ ಇಲ್ಲದ ಸಂದರ್ಭದಲ್ಲಿ ಪ್ರಕಾಶಕರೇ ಸಂಪಾದಕರಾಗಿ, ತಾವು ಬಳಸಿಕೊಂಡ ಹಸ್ತಪ್ರತಿಗಳ ಮಾಹಿತಿನೀಡದೆ; ಪಾಠಾಂತರ ಶೋಧವಿಲ್ಲದೆ; ಪ್ರಸ್ತಾವನೆಗಳಿಲ್ಲದೆ ಕೇವಲ ಸಿಕ್ಕ ಪ್ರತಿಯನ್ನು ಅಚ್ಚು ಮಾಡಬೇಕೆಂಬ (ಮುದ್ರಿಸಬೇಕೆಂಬ) ಏಕೈಕ ಉದ್ದೇಶವನ್ನು ಈ ಯುಗದ ಸಂಪಾದನೆಯಲ್ಲಿ ಕಾಣುತ್ತೇವೆ.

೧೯೧೫ ರಿಂದ ೧೯೪೨ರ ಅವಧಿಯಲ್ಲಿ ಫ.ಗು.ಹಳಕಟ್ಟಿ ಅವರು ವಚನಸಾಹಿತ್ಯ ಶೋಧ, ಪರಿಷ್ಕರಣೆ ಮತ್ತು ಪ್ರಕಟಣೆಯಲ್ಲಿ.ಗುರುತರವಾದ ಕಾರ್ಯ ಮಾಡಿದರು. ಹಿತಚಿಂತಕ ಹೆಸರಿನ ಮುದ್ರಣಾಲಯ, ಶಿವಾನುಭವ ಪತ್ರಿಕೆ ಮತ್ತು ಶಿವಾನುಭವ ಗ್ರಂಥಮಾಲೆಯನ್ನು ಸ್ಥಾಪಿಸಿ ೭೭ ವಚನ ಗ್ರಂಥಗಳನ್ನು ಬೆಳಕಿಗೆತಂದ ಕೀರ್ತಿ ಫ.ಗು. ಹಳಕಟ್ಟಿ ಅವರಿಗೆ ಸಲ್ಲುತ್ತದೆ. ಅದೇರೀತಿ ಇವರ ಸಮಕಾಲೀನರಾದ ಶಿರಾಳಕೊಪ್ಪದ ಚನ್ನಮಲ್ಲಿಕಾರ್ಜುನ ಮಾಸ್ತರ ಅವರು ಶಿವಲಿಂಗವಿಜಯ ಹೆಸರಿನ ಮುದ್ರಣಾಲಯ, ಸದ್ಧರ್ಮದೀಪಿಕೆ ಪತ್ರಿಕೆ ಮತ್ತು ಸದ್ಧರ್ಮಗ್ರಂಥಮಾಲೆಯನ್ನು ಸ್ಥಾಪಿಸಿ ೧೨ ವಚನಗ್ರಂಥಗಳನ್ನು ಬೆಳಕಿಗೆ ತಂದರು. ಪ್ರಾಯಶಃ ಈ ಕಾಲಘಟ್ಟದ ವಿದ್ವಾಂಸರು ಮಾಡಿದ ಕಾರ್ಯವನ್ನು ಆಧುನಿಕ ವಿಶ್ವವಿದ್ಯಾಲಯಗಳ ಬೋಧನಾಂಗ, ಶೋಧನಾಂಗ ಮತ್ತು ಪ್ರಸಾರಾಂಗ ಮಾದರಿಯ ಕೆಲಸವೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ಈ ಕಾರಣದಿಂದಲೇ ಫ.ಗು.ಹಳಕಟ್ಟಿ ಅಂಥವರು, ಚನ್ನಮಲ್ಲಿಕಾರ್ಜುನ ಮಾಸ್ತರಂಥವರು ಮಾಡಿದ ಕಾರ್ಯವನ್ನು ಸಾಂಸ್ಥಿಕ ಪ್ರಜ್ಞೆ ಮತ್ತು ಶ್ರಮದ ದುಡಿಮೆಯೆಂದು ಹೇಳಬಹುದು.

೧೯೪೨ ರಿಂದ ೧೯೭೩ ರ ಅವಧಿಯಲ್ಲಿ ವಚನಸಾಹಿತ್ಯ ಶೋಧ–ಪರಿಷ್ಕರಣೆ ಮತ್ತು ಸಂಪಾದನೆಗೆ ಹೊಸ ದಿಕ್ಕುದೆಸೆ ಮೂಡಿತು. ಈ ಕಾಲಘಟ್ಟವನ್ನು ಫ.ಗು.ಹಳಕಟ್ಟಿ ನಂತರದ ಕಾಲವೆಂದು ಹೇಳುತ್ತೇವೆ. ಮುಖ್ಯವಾಗಿ ಶಿ.ಶಿ.ಬಸವನಾಳರ ಕಾರ್ಯ ಈ ಕಾಲಘಟ್ಟದಲ್ಲಿ ದಾಖಲಾರ್ಹವಾದದ್ದು. ಶಿ.ಶಿ.ಬಸವನಾಳರ ಮಾರ್ಗದಲ್ಲಿಯೇ ನಡೆದು ವಚನಸಾಹಿತ್ಯ ಸಂಪಾದನೆಯಲ್ಲಿ ಹೊಸದಾಖಲೆ ಮಾಡಿದ ವಿದ್ವಾಂಸರಲ್ಲಿ ಮುಖ್ಯರಾದವರು ಡಾ. ಆರ್.ಸಿ.ಹಿರೇಮಠ ಅವರು.

* * *

Scanned with CamScanner

ವಚನಸಾಹಿತ್ಯ ಅಧ್ಯಯನ ಹಾಗೂ ಪ್ರಕಟಣಾ ಚರಿತ್ರೆಯಲ್ಲಿ ಆರ್.ಸಿ ಹಿರೇಮಠರ ಹೆಸರನ್ನು ಉಲ್ಲೇಖಿಸದಿದ್ದರೆ ಆ ಚರಿತ್ರೆಗೆ ಪರಿಪೂರ್ಣತೆ ಪ್ರಾಪ್ತವಾಗುವುದಿಲ್ಲ. ಅಥವಾ ಅವರನ್ನು ಹೊರತಾಗಿ ಚರಿತ್ರೆ ನಿರ್ಮಾಣ ಸಾಧ್ಯವಿಲ್ಲ. ೧೯೮೮ ರಲ್ಲಿ ಗದುಗಿನ ತೋಂಟದಾರ್ಯ ಸಂಸ್ಥಾನ ಮಠದಲ್ಲಿ ನಡೆದ "ವಚನಸಾಹಿತ್ಯ ಪ್ರಕಟಣ ಇತಿಹಾಸ" ವಿಚಾರಸಂಕಿರಣದ ಅಧ್ಯಕ್ಷತೆಯ ಮಾತುಗಳನ್ನಾಡಿದ ಡಾ.ಎಂ.ಎಂ ಕಲಬುರ್ಗಿ ಅವರು "ವಚನಸಾಹಿತ್ಯ ಪ್ರಕಟಣೆ ಕೈಸ್ತಮಿಷನರಿಗಳಿಂದ ಉಪೇಕ್ಷೆಗೊಂಡಾಗ ಬಳ್ಳಾರಿ ನೆಟ್ಟರ ಕೈಯಲ್ಲಿ, ಬಳ್ಳಾರಿ ನೆಟ್ಟರು ಕೈಚೆಲ್ಲಿದಾಗ ಫ.ಗು.ಹಳಕಟ್ಟಿಯವರ ತೋಳಲ್ಲಿ, ಹಳಕಟ್ಟಿಯವರ ತೋಳು ಸೋತಾಗ ಆರ್.ಸಿ.ಹಿರೇಮಠರ ಹೆಗಲಲ್ಲಿ; ಆರ್.ಸಿ.ಹಿರೇಮಠರ ಹೆಗಲಿನಿಂದ ಜಾರಿಬೀಳುವಾಗ ಗದುಗಿನ ತೋಂಟದಾರ್ಯ ಸಂಸ್ಥಾನ ಮಠದ ತಲೆಯಲ್ಲಿ ನೆಲೆಯನ್ನು ಪಡೆಯಿತು. ಹೀಗಾಗಿ ವಚನಸಾಹಿತ್ಯ ಪ್ರಕಟಣೆ ಸ್ಥಾವರವಾಗಿ ತಡೆದು ನಿಂತಿಲ್ಲ! ಜಂಗಮವಾಗಿ ನಡೆದು ಬಂದಿದೆ" ಎನ್ನುತ್ತಾರೆ. ಅವರ ಈ ಹೇಳಿಕೆಯಲ್ಲಿ ಫ.ಗು.ಹಳಕಟ್ಟಿಯವರ ನಂತರ ವಚನಸಾಹಿತ್ಯ ಸಂಗ್ರಹ–ಸಂಪಾದನೆ–ಪ್ರಕಟಣೆಯಲ್ಲಿ ಒಂದು ಸಾಂಸ್ಥಿಕ ಶಕ್ತಿಯಾಗಿ ದುಡಿದವರು ಡಾ. ಆರ್.ಸಿ ಹಿರೇಮಠರು ಎಂಬುದು ಮನವರಿಕೆಯಾಗುತ್ತದೆ.

೧೯೬೨ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ "ಸಮಗ್ರ ವಚನವಾಙ್ಮಯ ಸಂಗ್ರಹ, ಸಂಸ್ಕರಣ, ಪ್ರಕಟಣೆ" ಯೋಜನೆಯನ್ನು ಹಾಕಿಕೊಂಡು ವಚನಸಾಹಿತ್ಯ ಸಂಪಾದನೆಯಲ್ಲಿ ಮಹತ್ತರವಾದ ಕೆಲಸ ಮಾಡಿದವರು; ಡಾ. ಆರ್.ಸಿ ಹಿರೇಮಠರು. ಇವರ ವಚನಸಾಹಿತ್ಯ ಸಂಪಾದನೆಯನ್ನು ಅಧ್ಯಯನದ ದೃಷ್ಟಿಯಿಂದ ಎರಡು ರೀತಿಯಿಂದ ವರ್ಗೀಕರಿಸಬಹುದು. ಒಂದು ವಚನಕೃತಿಗಳು ಇನ್ನೊಂದು ವಚನಸೈದ್ಧಾಂತಿಕ ಕೃತಿಗಳು. ವಚನಕೃತಿಗಳಲ್ಲಿ ಬಸವಣ್ಣನವರ ವಚನಗಳು, ಚನ್ನಬಸವಣ್ಣನವರ ವಚನಗಳು, ಸಿದ್ಧರಾಮೇಶ್ವರನ ವಚನಗಳು, ಮಹಾದೇವಿಯಕ್ಕನ ವಚನಗಳು, ಷಣ್ಮುಖಶಿವಯೋಗಿಯ ಅಖಂಡೇಶ್ವರ ವಚನಗಳು, ಅಮುಗೆರಾಯಮ್ಮ ಮತ್ತು ಅಕ್ಕಮ್ಮನ ವಚನಗಳು, ಇಪ್ಪತ್ತೇಳು ಶಿವಶರಣರ ವಚನಗಳು, ನೀಲಮ್ಮನ ಮತ್ತು ಲಿಂಗಮ್ಮನ ವಚನಗಳು, ಅಲ್ಲಮಪ್ರಭುದೇವರ ವಚನಗಳು, ಜೇಡರದಾಸಿಮಯ್ಯನ ವಚನಗಳು ಪ್ರಮುಖವಾಗಿವೆ. ಇನ್ನು ವಚನಸೈದ್ಧಾಂತಿಕ ಕೃತಿಗಳಲ್ಲಿ ವಿಶೇಷಾನುಭವ ಷಟ್ಸ್ಥಲ, ಮುಕ್ತಿಕಂಠಾಭರಣ, ವೀರಶೈವ ಚಿಂತಾಮಣಿ, ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ, ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ, ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯಸಂಪಾದನೆ, ಷಟ್ಸ್ಥಲಜ್ಞಾನ ಸಾರಾಮೃತ, ಸಕಲಪುರಾತನರ ವಚನಗಳು–೧ ಪ್ರಮುಖವಾಗಿವೆ.

ಆರ್.ಸಿ.ಹಿರೇಮಠ ಅವರ ವಚನಸಾಹಿತ್ಯ ಸಂಪಾದನೆಗೆ ಪ್ರೇರಣೆ ಅಥವಾ ಮಾದರಿಯಾದದ್ದು ಪುಣೆಯ ಭಂಡಾರಕರ್ ಸಂಶೋಧನ ಸಂಸ್ಥೆಯಲ್ಲಿ ಡಾ. ಸುಕ್ತಂಕರ್

ಅವರು ಮಹಾಭಾರತವನ್ನು ಹಾಗೂ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಕಂಬ ರಾಮಾಯಣವನ್ನು ಸಂಪಾದಿಸಿದ ರೀತಿಯಲ್ಲಿ ಕನ್ನಡ ನಾಡಿನ ವಚನಸಾಹಿತ್ಯವನ್ನು ಸಂಪಾದಿಸಬೇಕೆಂಬುದು ಇವರ ಯೋಜನೆಯ ಉದ್ದೇಶವಾಗಿತ್ತು. ಆದರೆ ಈ ಯೋಜನೆಯು ಅಷ್ಟು ಸರಳವಾಗಿರಲಿಲ್ಲ. ಮೊದಲು ನಾಡಿನಾದ್ಯಂತ ಮೂಲೆ ಮೂಲೆಯಲ್ಲಿರುವ ವಚನಗಳ ಹಸ್ತಪ್ರತಿಗಳನ್ನು ಸಂಗ್ರಹಿಸುವುದು; ಸಂಗ್ರಹಿಸಿದ ನಂತರ ಅವುಗಳಲ್ಲಿ ವಚನಸಂಗ್ರಹ ಕಟ್ಟುಗಳು, ವಚನಸಂಕಲನ ಕಟ್ಟುಗಳು ಮತ್ತು ವಚನ ಸಂಪಾದನಾ ಕಟ್ಟುಗಳೆಂದು ಬೇರ್ಪಡಿಸುವುದು, ನಂತರದಲ್ಲಿ ಪರಿಷ್ಕರಿಸಿ ಸಂಪಾದಿಸಬೇಕೆಂಬ ಗುರುತರವಾದ ಜವಾಬ್ದಾರಿ ಯೋಜನೆಯದಾಗಿತ್ತು. ಆ ಕಾಲಕ್ಕೆ ಸಂಶೋಧನ ಸಹಾಯಕರ ನೆರವಿನಿಂದ, ಸಹೋದ್ಯೋಗಿಗಳ ಸಹಾಯದಿಂದ ಮತ್ತು ತಮ್ಮ ವರ್ಚಸ್ಸಿನಿಂದ ಈ ಯೋಜನೆಗಾಗಿ ಸಂಗ್ರಹಿಸಿದ ಹಸ್ತಪ್ರತಿಕಟ್ಟುಗಳ ಸಂಖ್ಯೆ ಐದುಸಾವಿರ. ಈ ವಚನಕಟ್ಟುಗಳನ್ನು ಎದುರಿಗಿಟ್ಟುಕೊಂಡು ಮತ್ತು ಆಗಾಗಲೇ ಫ.ಗು.ಹಳಕಟ್ಟಿ ಅವರಿಂದ ಹಾಗೂ ಕರ್ನಾಟಕದಲ್ಲಿ ಬೇರೆ ಬೇರೆ ಕಡೆಯಿಂದ ಪ್ರಕಟಗೊಂಡ ಕೃತಿಗಳ ಆಕರಗಳನ್ನು ಬಳಸಿಕೊಂಡು ವಚನಸಾಹಿತ್ಯ ಪರಿಷ್ಕರಣೆ ಮತ್ತು ಪ್ರಕಟಣೆಗೆ ಆರ್.ಸಿ. ಹಿರೇಮಠರು ಮುಂದಾದರು.

ಆರ್.ಸಿ. ಹಿರೇಮಠರ ವಚನಸಾಹಿತ್ಯ ಸಂಪಾದನ ವೈಧಾನಿಕತೆ

ಡಾ. ಆರ್.ಸಿ. ಹಿರೇಮಠರು ೧೯೬೫ರಲ್ಲಿ 'ಷಟ್ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ವಚನಗಳು' ಕೃತಿಯನ್ನು ಪ್ರಕಟಿಸಿದರು. ಈ ಮೊದಲು ಈ ಕೃತಿಯನ್ನು ೧೯೧೪ ರಲ್ಲಿ ಬಳ್ಳಾರಿಯ ಶಿವಲಿಂಗಶೆಟ್ರು ಹಾಗೂ ೧೯೩೨ರಲ್ಲಿ ಫ.ಗು.ಹಳಕಟ್ಟಿಯವರು ಸೇರಿದಂತೆ ೩೨೩ ವಚನಗಳನ್ನು ಮಾತ್ರ ಸಂಪಾದಿಸಿಕೊಟ್ಟಿದ್ದರು. ಆರ್.ಸಿ.ಹಿರೇಮಠರು ತಾವು ಸಂಗ್ರಹಿಸಿದ್ದ ೪೭ ತಾಡೋಲೆಗಳನ್ನು, ೧೯ ಕಾಗದ ಪ್ರತಿಗಳನ್ನು ಮತ್ತು ೪ ಮುದ್ರಿತ ಕೃತಿಗಳ ಸಹಾಯದಿಂದ ೧೫೦೪ ವಚನಗಳನ್ನು ಪರಿಷ್ಕರಿಸಿ ಸಂಪಾದಿಸಿಕೊಟ್ಟರು. ಅಂದರೆ ೧೧೮೧ ಹೆಚ್ಚಿನ ವಚನಗಳನ್ನು ಚನ್ನಬಸವಣ್ಣನವರ ಷಟ್ಸ್ಥಲದ ವಚನಕಟ್ಟುಗಳಿಂದ, ವಚನ ಸಂಕಲನ ಕಟ್ಟುಗಳಿಂದ ಪರಿಶೋಧಿಸಿ ಹೆಚ್ಚಿನ ವಚನಗಳನ್ನು ಸಂಗ್ರಹಿಸಿದರು. ಸಂಪಾದನೆಯ ನೆಪದಲ್ಲಿ ವಚನಗಳ ಶೋಧವನ್ನು ಆರ್.ಸಿ.ಹಿರೇಮಠರು ಮಾಡಿದ್ದಾರೆ. ಈ ಆವೃತ್ತಿಯ ಪ್ರತಿ ಪುಟದ ಕೆಳಗೆ ಪಾಠಾಂತರಗಳನ್ನು ನೀಡಿದ್ದಾರೆ. ಈ ಪಾಠಾಂತರಗಳಲ್ಲಿ ಪ್ರತಿಕಾರರ ಒಂದೊಂದು ಪಾಠಾಂತರಗಳನ್ನೇ ಕುರಿತು ಅರ್ಧಪುಟದ ವ್ಯಾಪ್ತಿಯಲ್ಲಿ ಟಿಪ್ಪಣಿಗಳ ರೂಪದಲ್ಲಿ ಚರ್ಚಿಸಿದ್ದಾರೆ. ಇಷ್ಟಾಗಿಯೂ ಕವಿ ಮತ್ತು ಸಹೃದಯರ ಪಾಠಾಂತರಗಳ ಬಗ್ಗೆ ಅವರು ಏನನ್ನೂ ಹೇಳುವ ಪ್ರಯತ್ನ ಮಾಡಿಲ್ಲ. ಪ್ರಸ್ತುತ ಕೃತಿಗೆ ೧೧೨ ಪುಟದ ವ್ಯಾಪ್ತಿಯಲ್ಲಿ ಬರೆದ ಆರ್.ಸಿ.ಹಿರೇಮಠರ ಗ್ರಂಥಪರಿಷ್ಕರಣದ ಮಾಹಿತಿ ಒಂದು ಸ್ವತಂತ್ರ ಕೃತಿಯ ವ್ಯಾಪ್ತಿಯುಳ್ಳದ್ದು. ಗ್ರಂಥ ಸಂಸ್ಕರಣ ಕುರಿತಾಗಿ ಮಾಡಿರುವ ಚರ್ಚೆ ಆರ್.ಸಿ.ಹಿರೇಮಠರ ಆಳವಾದ ಅಧ್ಯಯನಕ್ಕೆ

Scanned with CamScanner

ಸಾಕ್ಷಿಯಾಗಿದೆ. ಈ ಸಂಪುಟಕ್ಕೆ ಬಳಸಿಕೊಂಡ ಆಕರಗಳನ್ನು ೭೫ ಪುಟಗಳಷ್ಟು ಸುದೀರ್ಘವಾಗಿ ಒಂದು ಕ್ರಮದಲ್ಲಿ ನೀಡಿರುವುದು ಇವರ ಗ್ರಂಥಸಂಪಾದನ ವೈಧಾನಿಕತೆಗೆ ಮಾದರಿಯಾಗಿದೆ. ಮೊದಲ ಹಂತವಾಗಿ ವಚನಪಠ್ಯ ನೀಡಿರುವುದು; ಎರಡನೆಯ ಹಂತದಲ್ಲಿ ಆ ವಚನಕ್ಕೆ ಸಂಬಂಧಿಸಿದ ಪಾಠಾಂತರಗಳನ್ನು ಗುರುತಿಸುವುದು; ಮೂರನೆಯ ಹಂತದಲ್ಲಿ ಪ್ರತಿಯೊಂದು ವಚನದ ಆಕರಸೂಚಿಕೊಟ್ಟಿರುವುದು. ಅಂದರೆ ಒಂದು ವಚನ ಸಂಗ್ರಹ–ಸಂಕಲನ–ಸಂಪಾದನ ಕೃತಿಗಳಲ್ಲಿ ಎಲ್ಲೆಲ್ಲಿ ತನ್ನ ಖಾತೆಯನ್ನು ತೆರೆದಿದೆ ಅಥವಾ ಉಲ್ಲೇಖಿಗೊಂಡಿದೆ ಎಂಬುದನ್ನು ದಾಖಲಿಸಿದ್ದಾರೆ. ಬಹುಶಃ ಆರ್.ಸಿ.ಹಿರೇಮಠರ ಈ ಆಕರಸೂಚಿಯೇ ಗದುಗಿನ ಮಠದಿಂದ ಪ್ರಕಟವಾದ ವಚನ ಸಾಹಿತ್ಯ ಆಕರಕೋಶಕ್ಕೆ ಮಾದರಿಯಾಗಿರಬೇಕು; ಪ್ರೇರಣೆಯಾಗಿರಬೇಕು. ಚನ್ನಬಸವಣ್ಣನವರು ಬರೆದ ಕರುಣಹಸಿಗೆ, ಮಿಶ್ರಾರ್ಪಣ, ಹಿರಿಯ ಮಂತ್ರಗೋಪ್ಯ, ಪದಮಂತ್ರ ಗೋಪ್ಯ ತೊಂಬತ್ತಾರು ಸಕೀಲಗಳು ಮತ್ತು ವಚನಗಳ ಅಕಾರಾದಿಗಳನ್ನು ಕೊನೆಯಲ್ಲಿ ನೀಡಿದ್ದಾರೆ.

ಚನ್ನಬಸವಣ್ಣನವರ ವಚನಸಂಪಾದಿತ ಕೃತಿಗೆ ಬರೆದ ೨೬೨ ಪುಟದ ಪ್ರಸ್ತಾವನೆ ಮತ್ತು ೧೯೬ಳರಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಷಟ್ಸ್ಥಲ ಜ್ಞಾನಸಾರಾಮೃತ ಕೃತಿಯನ್ನು ಮುರುಘಾಮಠದಿಂದ ಪ್ರಕಟಿಸಿದ್ದ ಕೃತಿಯ ೨೩೮ ಪುಟದ ಪ್ರಸ್ತಾವನೆಯನ್ನು ಸೇರಿಸಿ 'ಷಟ್ಸ್ಥಲಪ್ರಭೆ' ಹೆಸರಿನ ಪ್ರತ್ಯೇಕವಾದ ಸಂಶೋಧನ ಕೃತಿಯನ್ನು ಆರ್.ಸಿ.ಹಿರೇಮಠರು ರಚಿಸಿದ್ದಾರೆ. ಷಟ್ಸ್ಥಲಜ್ಞಾನಸಾರಾಮೃತದಲ್ಲಿ ೧೦೧ ವಿರಕ್ತರು, ೭೦೧ ವಿರಕ್ತರೂ, ತೋಂಟದ ಸಿದ್ಧಲಿಂಗ ಶಿಷ್ಯವೃಂದ ಅಂದರೆ ಕಟ್ಟಿಗಿನಹಳ್ಳಿ ಸಂಪ್ರದಾಯ ಮತ್ತು ವಚನಗಳ ತಾತ್ವಿಕತೆಯನ್ನು ಕುರಿತು ವಿದ್ವತ್‌ಪೂರ್ಣವಾಗಿ ಚರ್ಚಿಸಿದ್ದಾರೆ.

ಇದೇ ಮಾದರಿಯಲ್ಲಿ ಬಸವಣ್ಣನ ವಚನಗಳು, ಅಲ್ಲಮಪ್ರಭುದೇವರ ವಚನಗಳು, ೨೭ ಶಿವಶರಣರ ವಚನಗಳು, ಸಿದ್ಧರಾಮೇಶ್ವರ ವಚನಗಳು ಮುಂತಾದ ಕೃತಿಗಳನ್ನು ಪರಿಷ್ಕರಿಸಿ ಸಂಪಾದಿಸಿಕೊಟ್ಟಿದ್ದಾರೆ. ೨೨೯೩ ವಚನಗಳನ್ನು ಕ್ರೋಢೀಕರಿಸಿ ಸಂಪಾದಿಸಿದ ಕೃತಿ ಸಕಲಪುರಾತನರ ವಚನಗಳು. ಆದರೆ ವಚನಗಳ ಮಿಶ್ರಣದ ದೃಷ್ಟಿಯಿಂದ, ಸಂಪಾದನ ವಿಧಾನದ ದೃಷ್ಟಿಯಿಂದ ಆರ್.ಸಿ.ಹಿರೇಮಠರ ಈ ಕೃತಿಯ ಸಂಪಾದನ ಮಿತಿಯನ್ನು ಅವರ ಶಿಷ್ಯರಾದ ಡಾ. ಎಂ.ಎಂ.ಕಲಬುರ್ಗಿ ಅವರು ಎತ್ತಿಹೇಳುತ್ತಾರೆ. ಸಕಲಪುರಾತನರ ವಚನಗಳು ಹೆಸರಿನ ಸಂಗ್ರಹಕೃತಿಗಳು ಸಕಲಪುರಾತನರ ವಚನಗಳು, ಸರ್ವಪುರಾತನರ ವಚನಗಳು ಮತ್ತು ಎಲ್ಲಾ ಪುರಾತನರ ವಚನಗಳು ಎಂಬ ಮೂರು ಹೆಸರಿನಲ್ಲಿ ಸಿಗುತ್ತವೆ. ಇವು ಪ್ರತಿಕಾರರು ಕೊಟ್ಟ ಹೆಸರುಗಳು. ಈ ಮೂರು ಕಟ್ಟುಗಳಲ್ಲಿ ಕೋಲಶಾಂತಯ್ಯನ ವಚನಗಳಿಂದ ಆರಂಭವಾಗುವ ಮೂರುಸಾವಿರ ವಚನಗಳ ಒಂದುಕಟ್ಟು, ಬಸವಣ್ಣನ ವಚನಗಳಿಂದ ಆರಂಭವಾಗುವ ಸಾವಿರವಚನಗಳ ಇನ್ನೊಂದುಕಟ್ಟು, ಗೊಗ್ಗವ್ವೆಯವಚನಗಳಿಂದ ಆರಂಭವಾಗುವ ಸಾವಿರದ ಐದನೂರು

ವಚನಗಳಕಟ್ಟು ದೊರೆಯುತ್ತವೆ. ಒಟ್ಟು ೫೫೦೦ ವಚನಗಳಿರುವ ಈ ಮೂರು ಕಟ್ಟುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪ್ರಕಟಿಸಬೇಕಾಗಿತ್ತು. ಆದರೆ ಆರ್.ಸಿ.ಹಿರೇಮಠರು ಈ ಸಿವುಡನ್ನು ಬಿಚ್ಚಿ ಕೋಲಶಾಂತಯ್ಯ ಮೊದಲಾದ ೧೬ ವಚನಕಾರರ ೨೨೯೩ ವಚನಗಳನ್ನು ಮಾತ್ರ ಸಂಪುಟ ೧ರಲ್ಲಿ ಸಂಪಾದಿಸಿಕೊಟ್ಟರು. ಇದರಿಂದ ವಚನಗಳ ಮಿಶ್ರಣವಾದವು. ಇದನ್ನು ಸಂಪಾದಿಸುವ ಉದ್ದೇಶದಿಂದ ಮೈಸೂರಿನ ಸುತ್ತೂರು ಶಿವರಾತ್ರೀಶ್ವರ ಸಂಸ್ಥಾನ ಮಠದಿಂದ ಡಾ. ರಾಜೂರ ಅವರ ಸಂಪಾದಕತ್ವದಲ್ಲಿ ಕೋಲಶಾಂತಯ್ಯನಿಂದ ಆರಂಭ ವಾದ ವಚನಕಟ್ಟನ್ನು, ಡಾ. ಮಧುವೆಂಕಾರಡ್ಡಿ ಅವರ ಸಂಪಾದಕತ್ವದಲ್ಲಿ ಗೊಗ್ಗವ್ವೆಯ ಕಟ್ಟನ್ನು, ಡಾ. ಬಿ.ವ್ಹಿ.ಶಿರೂರ ಅವರ ಸಂಪಾದಕತ್ವದಲ್ಲಿ ಬಸವಣ್ಣನ ವಚನ ಕಟ್ಟನ್ನು ಬೇರೆ ಬೇರೆಯಾಗಿ "ಎಲ್ಲಾ ಪುರಾತನರ ವಚನಗಳು" ಹೆಸರಿನಲ್ಲಿ ಪ್ರಕಟಿಸಿದರು.

ಆರ್.ಸಿ.ಹಿರೇಮಠರು ಸಂಪಾದಿಸಿದ ವಚನಸೈದ್ಧಾಂತಿಕ ಕೃತಿಗಳಲ್ಲಿ ವಿಶೇಷಾನುಭವ ಷಟ್ಸ್ಥಲ, ಮುಕ್ತಿಕಂಠಾಭರಣ, ವೀರಶೈವಚಿಂತಾಮಣಿ, ಬ್ರಹ್ಮದ್ವೈತಸಿದ್ಧಾಂತ ಷಟ್ಸ್ಥಲಾಭರಣ ಮುಂತಾದ ಕೃತಿಗಳು ಪ್ರಮುಖವಾಗಿವೆ. ಮುಖ್ಯವಾಗಿ ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯಸಂಪಾದನೆ ಮತ್ತು ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆಗಳನ್ನು ಆರ್.ಸಿ.ಹಿರೇಮಠರ ಸಂಪಾದನೆಯ ವೈಖರಿಯಿಂದ ಗಮನಿಸಲೇ ಬೇಕಾದ ಕೃತಿಗಳು. ಈ ಕೃತಿಗಳಿಗೆ ಬರೆದ ಸುದೀರ್ಘವಾದ ಪ್ರಸ್ತಾವನೆಯಲ್ಲಿ ಶೂನ್ಯ ಸಂಪಾದನೆಗಳು ನಾಲ್ಕು ಎಂದು ತಿಳಿಸಿ, ಆ ಶೂನ್ಯಸಂಪಾದನೆಗಳಲ್ಲಿ ಉಕ್ತವಾಗಿರುವ ವಚನ, ಸ್ವರವಚನ ಹಾಗೂ ಸಂಪಾದನೆ ವೈಶಿಷ್ಟ್ಯ ಕುರಿತು ಸುದೀರ್ಘವಾಗಿ ಪ್ರಸ್ತಾಪಿಸುತ್ತಾರೆ.

ಒಟ್ಟಿನಲ್ಲಿ ೧. ವಚನಸಾಹಿತ್ಯ ಸಂಪಾದನೆಯಲ್ಲಿ ಬಹುಮೂಲದ ಆಕರಗಳನ್ನು ಸಂಗ್ರಹಿಸುವುದು ಆರ್.ಸಿ ಹಿರೇಮಠರಲ್ಲಿ ಎದ್ದುಕಾಣುವ ಸಂಗ್ರಹಗುಣವೆನಿಸಿದೆ. ಪ್ರಕಟವಾದ ವಚನ ಕೃತಿಗಳನ್ನು ಪರಿಷ್ಕರಿಸಲು ಮತ್ತು ವಚನಕಾರರ ವಚನಗಳ ಪ್ರಮಾಣ ವನ್ನು ಖಚಿತವಾಗಿ ಗುರುತಿಸುವ ಉದ್ದೇಶದಿಂದ ಹೆಚ್ಚು ಆಕರಗಳನ್ನು ಸಂಗ್ರಹಿಸುವುದು ಸೂಕ್ತವೆಂಬುದು ಅವರ ಆಲೋಚನೆಯಾಗಿತ್ತು.

೨. ಈ ಮೊದಲು ಪ್ರಕಟವಾಗದೇ ಇರುವ ಮತ್ತು ಹೆಸರು ಗೊತ್ತಿಲ್ಲದ ವಚನ ಸಂಕಲನ ಗ್ರಂಥಗಳನ್ನು ಮೊದಲಬಾರಿಗೆ ಬೆಳಕಿಗೆ ತಂದವರಲ್ಲಿ ಆರ್.ಸಿ.ಹಿರೇಮಠರು ಮೊದಲಿಗರೆ ನಿಸಿದ್ದಾರೆ. ಉದಾ: ಮುಕ್ತಿಕಠಾಭರಣದಂಥ ಕೃತಿ ಸಂಪಾದನೆಯನ್ನು ಗಮನಿಸಬಹುದು.

೩. ಗ್ರಂಥಸಂಪಾದನೆಯೆಂದರೆ ಕೇವಲ ಹತ್ತು ಪ್ರತಿಗಳನ್ನಿಟ್ಟುಕೊಂಡು ಒಂದು ಪ್ರತಿಯನ್ನಾಗಿ ರೂಪಿಸುವ ಯಾಂತ್ರಿಕವಾದ ಕಾರ್ಯವಲ್ಲ. ವಿದ್ವತ್ತನ್ನು ಪಣಕ್ಕೊಡ್ಡುವ ಸಂಶೋಧನೆಯೂ ಹೌದು. ಹೀಗಾಗಿ ಆರ್.ಸಿ. ಹಿರೇಮಠರ ವಿದ್ವತ್ತು ಢಾಳವಾಗಿ

Scanned with CamScanner

ಕಾಣಿಸುವುದು. ಅವರು ಸಂಪಾದನಾ ಕೃತಿಗಳಿಗೆ ಬರೆದ ನೂರಾರು ಪುಟಗಳ ಪ್ರಸ್ತಾವನೆಗಳಲ್ಲಿ. ಉದಾಹರಣೆಗೆ ಸಿದ್ಧಾರಾಮೇಶ್ವರ ವಚನ ಕೃತಿಗಳಲ್ಲಿ ಸಿದ್ಧರಾಮನ ಅಂಕಿತ ಮತ್ತು ಯೋಗಿನಾಥನ ಅಂಕಿತದ ಚರ್ಚೆ ಇರಬಹುದು. ಅದೇರೀತಿ ಸಿದ್ಧರಾಮನನ್ನು ಕುರಿತ ಶಾಸನಗಳ ಪಠ್ಯವನ್ನು ಒದಗಿಸಿರುವುದಿರಬಹುದು. ಇವರ ಅಧ್ಯಯನ ಶಿಸ್ತು ಮತ್ತು ವಿದ್ವತ್ತನ್ನು ಪ್ರತಿನಿಧಿಸುತ್ತವೆ.

ಎಷ್ಟೇ ಎಚ್ಚರ ವಹಿಸಿದರೂ ವಚನಸಾಹಿತ್ಯ–ಕೀರ್ತನ ಸಾಹಿತ್ಯದಂಥ ದೇಸೀ ಸಾಹಿತ್ಯದಲ್ಲಿ ಪ್ರಕ್ಷಿಪ್ತಗಳ ಹಾವಳಿ ತಪ್ಪಿದ್ದಲ್ಲ. ಇಂಥ ಪ್ರಕ್ಷಿಪ್ತ ಮತ್ತು ಸ್ಖಾಲಿತ್ಯಗಳಿಂದ ಆರ್.ಸಿ.ಹಿರೇಮಠರು ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಇವುಗಳನ್ನು ಗ್ರಂಥಸಂಪಾದನೆಯ ಮಿತಿಗಳೆನ್ನಬಹುದೇ ಹೊರತು ಬಸವಣ್ಣನವರು ಹೇಳುವಂತೆ "ನಿಮಿಷದ ಉದಾಸೀನ ಕೆಡಿಸಿತ್ತು" ಎಂಬ ಭಾವನೆಯಿಂದ "ದೋಷ" ಎಂದು ಜರಿಯುವುದು ಸರಿಯಲ್ಲ. ದೊಡ್ಡ ಕೆಲಸ ಮಾಡುವಾಗ ಸಣ್ಣಕೊರತೆಗಳು ಕೊರತೆಗಳೆ ಅಲ್ಲ ಎಂಬುದನ್ನು ಆರ್.ಸಿ.ಹಿರೇಮಠರ 'ವಚನಸಾಹಿತ್ಯ ಪರಿಷ್ಕರಣೆ–ಪ್ರಕಟಣೆ' ಯೋಜನೆಗೆ ನಾವು ತಾಳಬಹುದಾದ ನಿರ್ಣಯವಾಗಿದೆ. ಇದರಿಂದಾಗಿ ಗ್ರಂಥಸಂಪಾದನಾಶಾಸ್ತ್ರದ ಅದರಲ್ಲೂ ದೇಸೀಸಾಹಿತ್ಯ ಸಂಪಾದನಾ ಕುರಿತಾದ ಯಾವುದೇ ವೈಧಾನಿಕತೆ ಇಲ್ಲದ ಕಾಲದಲ್ಲಿ ಆರ್.ಸಿ.ಹಿರೇಮಠರು ಮಾಡಿದ ಈ ಕಾರ್ಯ ಗ್ರಂಥಸಂಪಾದನಶಾಸ್ತ್ರಕ್ಕೆ ನೀಡಿದ ಬಹುದೊಡ್ಡ ಕೊಡುಗೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

Scanned with CamScanner

ಲಿಂಗಣ್ಣ ಕವಿಯ
ವರರಮ್ಯ ರತ್ನಾಕರ

ಸಂಪಾದಕ: ಡಾ. ಕೆ. ರವೀಂದ್ರನಾಥ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

Scanned with CamScanner

LINGANNA KAVIYA VARARAMYA RATNAAKARA

Edited by
Dr. K.Ravindranatha
Professor, Dept. of Manuscriptology
Kannada University, Hampi
Vidyaranya 583 276

Published by
Dr. H.D.Prashant
Director, Prasaranga
Kannada University, Hampi
Vidyaranya 583 276

Pp. [illegible] **Price: 360/-**

First Impression 2020

ISBN: [illegible]-87135-67-3

www.kannadauniversity.org

[illegible]

[illegible] ವಿಶ್ವವಿದ್ಯಾಲಯ, ಹಂಪಿ, ೨೦೨೦

[illegible] ಕೆ.ಕೆ.ಮಕಾಳಿ

[illegible]

[illegible] ಶಿವಲಿಂಗೇಶ್ವರ ಗ್ರಾಫಿಕ್ಸ್

[illegible] ವಿದ್ಯಾರಣ್ಯ ೫೮೩ ೨೭೬

[illegible]

[illegible] ಸ್ಥಳ

[illegible] ಮಳಿಗೆ

[illegible] ಹಂಪಿ

[illegible]

[illegible]-೨೧೦೪೧೦

[illegible] ಪ್ರಾದೇಶಿಕ ಕಚೇರಿ

[illegible] ಕಾಲೇಜಿನ ಹಳೆಯ ಕಟ್ಟಡ

[illegible] ವೃತ್ತ, ಅರಮನೆ ರಸ್ತೆ

[illegible]

[illegible]

[illegible]

[illegible] ಅಂಡ್ ಅಡ್ವರ್ಟೈಸಿಂಗ್ ಲಿ., ಬೆಂಗಳೂರು

[illegible] ಕವಿಯ ವರರಮ್ಯ ರತ್ನಾಕರ

Scanned with CamScanner

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

ಹಸ್ತಪ್ರತಿ ವ್ಯಾಸಂಗ-೧೯

ಸಂಪಾದಕ: ಡಾ. ಕೆ. ರವೀಂದ್ರನಾಥ



Scanned with CamScanner

HASTAPRATI VYAASANGA-19

Edited by
Dr. K.Ravindranatha
Professor, Dept. of Manuscriptology
Kannada University, Hampi
Vidyaranya 583 276

Published by
Dr. H.D.Prasant
Director, Prasaranga
Kannada University, Hampi
Vidyaranya 583 276

First Impression 2020

www.kannadauniversity.org

Pp: xii+248 Price: 220/-

ISBN: 978-93-87135-58-1

ಬೆಲೆ ರೂ. ೨೨೦/-

© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೨೦

ಮುಖಪುಟ: **ಕೆ.ಕೆ.ಮಕಾಳಿ**

ಅಕ್ಷರ ಸಂಯೋಜನೆ
ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್
ನೃಪತುಂಗನಗರ, ವಿದ್ಯಾರಣ್ಯ ಜಿಲ್ಲಾ ೨೭೬
ಸಂಚಾರಿ ೯೪೪೮೧ ೬೯೯೦

ಪುಸ್ತಕ ದೊರೆಯುವ ಸ್ಥಳ
ಪುಸ್ತಕ ಸರಸ್ವತಿ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ಜಿಲ್ಲಾ ೨೭೬
ದೂರವಾಣಿ ೦೮೫೯೪-೨೧೦೪೧೦

ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ
ನಂ.೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ ೦೮೦-೨೨೩೭೨೩೪೮

ಮುದ್ರಕರು
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with CamScanner

ಪರಿವಿಡಿ

ಕನ್ನಡವು ಕನ್ನಡವ ಕನ್ನಡಿಸುತಿರಬೇಕು / 3
ಮುಖ್ಯಸ್ಥರ ಮಾತು / 6

ಭಾಗ: ಒಂದು
ಉದ್ಘಾಟನಾ ಸಮಾರಂಭ / ೧

೧. ಪ್ರಾಸ್ತಾವಿಕ ಮಾತು / ೩
ಡಾ.ಕೆ.ರವೀಂದ್ರನಾಥ

೨. ಹಸ್ತಪ್ರತಿಗಳು ನಮ್ಮ ಪರಂಪರೆಯ ಪ್ರತೀಕ! / ೮
ಡಾ.ಜಿನದತ್ತ ದೇಸಾಯಿ

೩. ಹಸ್ತಪ್ರತಿಗಳು: ಅರಿವಿನ ಅರವಂಟಿಗೆಗಳು / ೧೦
ಡಾ.ಹಂಪ ನಾಗರಾಜಯ್ಯ

೪. ಹಸ್ತಪ್ರತಿಗಳ ಅಧ್ಯಯನ ನಿರಂತರವಾಗಬೇಕು / ೨೮
ಡಾ.ಮಂಜುನಾಥ ಬೇವಿನಕಟ್ಟಿ

ಭಾಗ: ಎರಡು
ಗ್ರಂಥಸಂಪಾದನೆ: ವಿದ್ವಾಂಸರ ಸಾಧನೆ: ೧ / ೩೧

೫. ಟಿ.ಎಸ್.ವೆಂಕಣ್ಣಯ್ಯ / ೩೩
ಡಾ.ರಾಜೇಶೇಖರ ಇಚ್ಚಂಗಿ

೬ ಎಸ್.ಎಂ.ಹುಣಸ್ಯಾಳ / ೫೪
ಡಾ.ಸಿ.ನಾಗಭೂಷಣ

೭ ಪಂಡಿತ ಎಸ್.ಬಸಪ್ಪ / ೭೫
ಡಾ.ಪಿ.ಕೆ.ರಾಠೋಡ

Scanned with CamScanner

೮. ಸ.ಸ.ಮಾಳವಾಡರ ಸಂಪಾದನೆ / ೮೫
ಡಾ.ಪಿ.ಕೆ.ರಾಠೋಡ
೯. ಗುಣವ ಬಿಡದ ಸುವರ್ಣ / ೯೩
ಡಾ.ಗುರುಪಾದ ಮರಿಗುದ್ದಿ

ಗ್ರಂಥಸಂಪಾದನೆ: ವಿದ್ವಾಂಸರ ಸಾಧನೆ–೨ / ೧೦೫
೧೦. ಕ.ವೆಂ.ರಾಘವಾಚಾರ್ / ೧೦೭
ಡಾ.ಬಿ.ನಂಜುಂಡಸ್ವಾಮಿ
೧೧. ಡಿ.ಕೆ.ಭೀಮಸೇನರಾವ್ / ೧೧೬
ಡಾ.ಎಸ್.ಆರ್.ಚನ್ನವೀರಪ್ಪ
೧೨. ಜಿ.ವೆಂಕಟಸುಬ್ಬಯ್ಯ / ೧೨೭
ಡಾ.ಚಿತ್ತಯ್ಯ ಪೂಜಾರ್
೧೩. ವಿ.ಶಿವಾನಂದ / ೧೩೬
ಡಾ.ಹನುಮಂತ ಮೇಲಿನಮನಿ
೧೪. ಅಧ್ಯಕ್ಷರ ನುಡಿ / ೧೪೬
ಡಾ.ಎಸ್.ಕೆ.ಕೊಪ್ಪಾ

ಭಾಗ: ಮೂರು
ಪ್ರಾಚೀನ ಅಲಂಕಾರಶಾಸ್ತ್ರ ಸಾಹಿತ್ಯ:
ಪರಿಷ್ಕರಣೆ ಮತ್ತು ಅಧ್ಯಯನ / ೧೫೧
೧೫. ಕಾವ್ಯಾವಲೋಕನ / ೧೫೩
ಡಾ.ಬಿ.ಎಸ್.ಗಂಗನಹಳ್ಳಿ
೧೬. ಉದಯಾದಿತ್ಯಾಲಂಕಾರ / ೧೬೬
ಡಾ.ಎಫ್.ಟಿ.ಹಳ್ಳಿಕೇರಿ
೧೭. ರಸರತ್ನಾಕರ / ೧೭೯
ಡಾ.ವೀರೇಶ ಬಡಿಗೇರ
೧೮. ಮಾಧವಾಲಂಕಾರ / ೧೯೨
ಡಾ.ಎಸ್.ಎಸ್.ಅಂಗಡಿ

ಗ: ನಾಲ್ಕು
ಗಾವಿ ಜಿಲ್ಲೆ ಬಯಲಾಟದ ಹಸ್ತಪ್ರತಿಗಳು:
ರ್ಶೀಕ್ಷಣೆ ಮತ್ತು ಅಧ್ಯಯನ / ೧೯೯

ಹಸ್ತಪ್ರತಿ ವ್ಯಾಸಂಗ–೧೯

೧೯. ವಿಷಯ ಮಂಡನೆ / ೨೦೧
ಡಾ.ಸಿ.ಕೆ.ನಾವಲಗಿ
೨೦. ವಿಷಯ ವಿಸ್ತರಣೆ / ೨೧೫
ಡಾ.ವೈ.ಎಂ.ಯಾಕೊಳ್ಳಿ
೨೧. ಅಧ್ಯಕ್ಷೀಯ ನುಡಿ / ೨೧೯
ಡಾ.ಬಸವರಾಜ ಜಗಜಂಪಿ

ಭಾಗ: ಐದು / ೨೨೩
ವಿಶೇಷ ಉಪನ್ಯಾಸ
೨೨. ಹಸ್ತಪ್ರತಿ–ಗ್ರಂಥಸಂಪಾದನೆ:
ಡಾ.ಹಂಪನಾ ಕೊಡುಗೆ / ೨೨೫
ಡಾ.ಕೆ.ರವೀಂದ್ರನಾಥ

ಭಾಗ: ಆರು
ಸಮಾರೋಪ ನುಡಿ / ೨೩೩
೨೩. ಹಸ್ತಪ್ರತಿಗಳು ನಾಡಿನ ಸಂಸ್ಕೃತಿ / ೨೩೫
ಡಾ. ಶ್ರೀರಾಮ ಇಟ್ಟಣ್ಣವರ
೨೪. ಅಖಿಲ ಕರ್ನಾಟಕ ೧೫ನೇ ಹಸ್ತಪ್ರತಿ
ಸಮ್ಮೇಳನ ವರದಿ / ೨೪೧
ಡಾ. ಕಾಂತೇಶರೆಡ್ಡಿ ಗೋಡಿಹಾಳ

ಲೇಖಕರ ವಿಳಾಸ / ೨೪೭

Scanned with CamScanner

೨೦

ಹಸ್ತಪ್ರತಿ–ಗ್ರಂಥಸಂಪಾದನೆ: ಡಾ.ಹಂಪನಾ ಕೊಡುಗೆ

ಡಾ. ಕೆ. ರವೀಂದ್ರನಾಥ

ಹಂಪಸಂದ್ರ ಪದ್ಮನಾಭಯ್ಯ ನಾಗರಾಜ ಅವರು ಕನ್ನಡಿಗರಿಗೆ ಹಂಪನಾ ಎಂದೇ ಚಿರಪರಿಚಿತರು. ನಿವೃತ್ತಿಯ ನಂತರವೂ ತಮ್ಮನ್ನು ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಶ್ರೀಯುತರು ಮೌಲಿಕ ಕೃತಿ ರಾಶಿಯನ್ನು ಕನ್ನಡಕ್ಕೆನೀಡಿ ಕನ್ನಡದ ಕಣಜವನ್ನು ಸಂಪದ್ಭರಿತವಾಗಿ ತುಂಬಿಸಿದವರು. ಕನ್ನಡ–ಇಂಗ್ಲಿಷ್– ಪ್ರಾಕೃತ– ತೆಲಗು ಭಾಷೆಗಳಲ್ಲಿ ಪ್ರಭುತ್ವ ಹೊಂದಿರುವ ಡಾ.ಹಂಪನಾ ಅವರು ಸಂಶೋಧನೆ, ಸೃಜನ, ವಿಮರ್ಶೆ, ಅನುವಾದ, ಶಾಸನ, ಸಂಪಾದನೆ, ಭಾಷೆ, ಧರ್ಮ, ಇತಿಹಾಸ ಮತ್ತು ಜಾನಪದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಧ್ಯಯನ, ಅಧ್ಯಾಪನ ಮತ್ತು ಸಂಶೋಧನೆಯನ್ನು ಮಾಡಿದ್ದಾರೆ. ಜೈನ ಸಾಹಿತ್ಯ ಸಂಶೋಧನೆಯಲ್ಲಿ ಆ.ನೇ.ಉಪಾಧ್ಯೆ, ಎಸ್.ಶಾಂತರಾಜಶಾಸ್ತ್ರಿ, ಮಿರ್ಜಿ ಅಣ್ಣರಾಯರಂಥ ಹಲಕೆಲವು ಜನ ವಿದ್ವಾಂಸರ ನಂತರದ ದೊಡ್ಡ ಹೆಸರು ಡಾ.ಹಂಪನಾ ಅವರದು.

ಹಸ್ತಪ್ರತಿ ಸಂಗ್ರಹ ಕಾರ್ಯದಲ್ಲಿ ಅಷ್ಟಾಗಿ ತಮ್ಮನ್ನು ತೊಡಗಿಸಿಕೊಂಡಿರದ ಹಂಪನಾ ಅವರು ಸಂಗ್ರಹಿಸಿದ ಕೆಲವೇ ಹಸ್ತಪ್ರತಿಗಳು ಅಧ್ಯಯನದ ದೃಷ್ಟಿಯಿಂದ ಸಂಪಾದನೆಯ ದೃಷ್ಟಿಯಿಂದ ಮಹತ್ವದ ಪ್ರತಿಗಳಾಗಿವೆ. ಉದಾಹರಣೆಗೆ ಇವರು ಕೊಪ್ಪಳ ಸಂಗ್ರಹಿಸಿದ ವಡ್ಡಾರಾದನೆ ಹಸ್ತಪ್ರತಿಯನ್ನೇ ಗಮನಿಸಬಹುದು. ಅದೇನೇ ಇದ್ದರೂ ಸಂಶೋಧನೆ ಮತ್ತು ಗ್ರಂಥಸಂಪಾದನೆಗೆ ಇವರ ಕೊಡುಗೆ ಅತ್ಯಂತ ಮಹತ್ವಪೂರ್ಣವಾಗಿದೆ. ಜೈನ ಅರಸು ಮನೆತನಗಳ ಶಾಸನೋಕ್ತಶೋಧ, ಕವಿ ಪರಂಪರೆ

Scanned with CamScanner

ಹಾಗೂ ವಂಶಾವಳಿಯಲ್ಲಿಯ ಗೊಂದಲಗಳ ನಿವಾರಣೆ, ಕವಿಗಳ ಕಾಲನಿರ್ಣಯ, ಜೈನ ಕಥಾಪರಂಪರೆ, ಆ ಸಮಸ್ಯೆಗೆ ಪರಿಹಾರ ಹುಡುಕುವಲ್ಲಿ ಇವರ ಸಂಶೋಧಿತ ಹಾಗೂ ಸಂಪಾದಿತ ಕೃತಿಗಳು ಅಪರೂಪದ ಆಕರಗಳೆನಿಸಿವೆ. ಈ ದೃಷ್ಟಿಕೋನದಿಂದ ಶ್ರೀಯುತರ ಕೆಲವು ಕೃತಿಗಳನ್ನು ಪರಿಶೀಲಿಸುವ ಪ್ರಯತ್ನ ಮಾಡಿದ್ದೇನೆ.

ವಿಷ್ಣುವರ್ಧನ–ವಿಜಯಾದಿತ್ಯ–ಕೀರ್ತಿವರ್ಮ ಎಂಬ ಕೃತಿ ಗಾತ್ರದಿಂದ ಚಿಕ್ಕ ದಾದರೂ, ಚಾರಿತ್ರಿಕ ಹಾಗೂ ಸಾಹಿತ್ಯದ ದೃಷ್ಟಿಯಿಂದ ದೊಡ್ಡಕೃತಿ. ಶಾಸನ ಹಾಗೂ ಸಾಹಿತ್ಯ ಕೃತಿಯ ಆಧಾರದಿಂದ ವಿಷ್ಣುವರ್ಧನ–ವಿಜಯಾದಿತ್ಯ–ಕೀರ್ತಿವರ್ಮನ ಒಟ್ಟು ವ್ಯಕ್ತಿತ್ವವನ್ನು ಶೋಧಿಸಿದ ಕೃತಿ ಇದಾಗಿದೆ. ಕ್ರಿ.ಶ.೧೦೪೨ರಲ್ಲಿದ್ದ ಕಲ್ಯಾಣ ಚಾಲುಕ್ಯ ತ್ರೈಲೋಕ್ಯಮಲ್ಲ ೧ನೇ ಸೋಮೇಶ್ವರನಿಗೆ(ನಾಗಾವಿ ೧೦೫೮ರ ಶಾಸನ ಹಾಕಿಸಿದ ಸೋಮೇಶ್ವರ) ಭುವನೈಕಮಲ್ಲ ಸೋಮೇಶ್ವರ, ೬ನೇ ವಿಕ್ರಮಾದಿತ್ಯ ಹಾಗೂ ವೀರನೊಳಂಬ ಪಲ್ಲವ ಜಯಸಿಂಹ ಎಂಬ ಮೂರು ಜನ ಮಕ್ಕಳಿರುವುದು ಆಗಾಗಲೇ ಚರಿತ್ರೆಯಲ್ಲಿ ನಿರೂಪಿತವಾಗಿತ್ತು. ಆದರೆ ಪ್ರಸ್ತುತ ಕೃತಿಯಲ್ಲಿ ಡಾ.ಹಂಪನಾ ಅವರು ತ್ರೈಲೋಕ್ಯಮಲ್ಲ ೧ನೇ ಸೋಮೇಶ್ವರನಿಗೆ ವಿಷ್ಣುವರ್ಧನ ವಿಜಯಾದಿತ್ಯ ಕೀರ್ತಿವರ್ಮನೆಂಬ ಮತ್ತೊಬ್ಬ ಮಗನಿದ್ದನೆಂಬುದನ್ನೂ, ಆತ ಪಶುಸಂಗೋಪನೆ ಕುರಿತಾಗಿ ಗೋವೈದ್ಯ ಬರೆದ ರಾಜಕವಿಯೆಂಬುದನ್ನೂ ಈ ಕೃತಿಯಲ್ಲಿ ಶೋಧಿಸಿದ್ದಾರೆ.

ವಿಷ್ಣುವರ್ಧನ–ವಿಜಯಾದಿತ್ಯ–ಕೀರ್ತಿವರ್ಮನ ರಾಜಕೀಯ ಹಾಗೂ ಸಾಂಸ್ಕೃತಿಕ ಆನನ್ಯತೆಯನ್ನು ನಿರೂಪಿಸುವುದಕ್ಕೆ ಡಾ.ಹಂಪನಾ ಅವರು ಆಂಧ್ರಪ್ರದೇಶದ ಕೊಲ್ಲೂರು ತಾಲೂಕು ಮಲ್ಲೇಶ್ವರಂನ ೧೦೫೧ರ ಶಾಸನದಿಂದ ಹಿಡಿದು ಚನ್ನಗಿರಿ ತಾಲೂಕಿನ ಮದುಗೆರೆ, ಹರಪನಹಳ್ಳಿ ತಾಲೂಕಿನ ಉಚ್ಚಂಗಿದುರ್ಗ, ಗುಡಿಹಳ್ಳಿ, ಚಿತ್ರದುರ್ಗ ಜಿಲ್ಲೆಯ ಜಟಿಂಗರಾಮೇಶ್ವರ, ಹಗರಿಬೊಮ್ಮನಹಳ್ಳಿ ತಾಲೂಕಿನ ಮೋರಗೇರಿ, ಕೂಡ್ಲಿಗಿ ತಾಲೂಕಿನ ಹಾರಕನಾಳ, ಆಂಧ್ರದ ತೆನ್ನಾಲಿ ತಾಲೂಕಿನ ಕೊಲ್ಲೂರು ಇತ್ಯಾದಿ ಶಾಸನಾಧಾರಗಳಿಂದ ಈತ ಸಂಚರಿಸಿದ ಭೌಗೋಳಿಕ ವ್ಯಾಪ್ತಿ, ಕೈಗೊಂಡ ನಿರ್ಣಾಯಕ ಯುದ್ಧಗಳು, ಚೈತ್ರಯಾತ್ರೆಯ ಕಾಲಾವಧಿ, ಕ್ರಮಿಸಿದ ಮಾರ್ಗ, ತಂಗಿದ ಸ್ಥಳ, ನೀಡಿದ ದಾನ–ದತ್ತಿಗಳು, ದಾನ ಪಡೆದ ಗುರುಗಳು, ಜೊತೆಗಿದ್ದ ದಂಡನಾಯಕರು ಎಲ್ಲವನ್ನೂ ಸಾಧಾರಪೂರ್ವಕವಾಗಿ ಈ ಕೃತಿಯಲ್ಲಿ ಮೊದಲ ಬಾರಿಗೆ ನಿರೂಪಿಸಿದ್ದಾರೆ.

ನಾಗಚಂದ್ರನ ಕಾಲ–ಸ್ಥಳ–ಇತಿವೃತ್ತ ಕುರಿತಂತೆ ಪಂಪರಾಮಾಯಣ, ಮಲ್ಲಿನಾಥ ಪುರಾಣ ಕೃತಿಗಳನ್ನು ಬರೆದ ನಾಗಚಂದ್ರನ ಕಾಲ, ಸ್ಥಳ ಕುರಿತು ವಿದ್ವಾಂಸರಲ್ಲಿ ಒಂದುನೂರು ವರ್ಷಗಳ ಕಾಲ ಚರ್ಚೆ ನಡೆದಿತ್ತು. ಡಾ.ಹಂಪನಾ ಅವರು ಸಾಧಾರಪೂರ್ವಕವಾಗಿ ಆಕರಗಳನ್ನು ಮಂಡಿಸಿ ಈ ಕೃತಿಯ ಮೂಲಕ ಆ ಎಲ್ಲ ಚರ್ಚೆಗೆ ಪೂರ್ಣ ವಿರಾಮವನ್ನು ಹಾಕಿದ್ದಾರೆ. ಈ ಕೃತಿಯಲ್ಲಿ ನಾಗಚಂದ್ರನ ಆಂತರಿಕ ಮತ್ತು ಬಾಹ್ಯ ಪ್ರಮಾಣಗಳಿಂದ ಹಲವಾರು ಹೊಸ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ಅವುಗಳನ್ನು ಹೀಗೆ ಕ್ರೋಢೀಕರಿಸಿ ಹೇಳಬಹುದು.

೧. ನಾಗಚಂದ್ರನ ಜನ್ಮಸ್ಥಳ ಈಗಿನ ಹೈದ್ರಾಬಾದ್ ಸಮೀಪದ ಪೊಚ್ಚಲಗೆರೆ ಅಂದರೆ ಆದಿಕವಿ ಪಂಪ ರಾಜಾಶ್ರಯ ಪಡೆದು ಬದುಕಿದ್ದ ಪ್ರದೇಶಗಳ ಶುದಿಭಾಗ.

೨. ಪಂಪ ಮತ್ತು ನಾಗಚಂದ್ರರು ದೂರದ ಸಂಬಂಧಿಗಳಾಗಿರಬೇಕು. ಹಾಗಾಗಿ ಕನ್ನಡದ ಬೇರಾವ ಕವಿಗಳೂ ಇಟ್ಟುಕೊಳ್ಳದೆ ನಾಗಚಂದ್ರ ಮಾತ್ರ 'ಅಭಿನವ ಪಂಪ' ಎಂದು ಇಟ್ಟಕೊಂಡಿರುವ ಹೆಸರಿನ ಔಚಿತ್ಯ ಕುರಿತು ಈ ಕೃತಿಯಲ್ಲಿ ಚರ್ಚಿಸುತ್ತಾರೆ.

೩. ಅದೇ ರೀತಿ ಕನ್ನಡದ ಬೇರಾವ ಕವಿಗಳಿಗೂ ಇರದ ಸುದೀರ್ಘ ಗುರುಪರಂಪರೆ ನಾಗಚಂದ್ರನಿಗಿದೆ. ವರ್ಧಮಾನ, ಬಾಲಚಂದ್ರ, ಮೇಘಚಂದ್ರ, ಶುಭಕೀರ್ತಿ, ಶ್ರುತಕೀರ್ತಿ, ವಾಸುಪೂಜ್ಯ, ವೀರಣಂದಿ– ಈ ಏಳು ಜನ ಗುರುಗಳ ಪರಂಪರೆಯನ್ನು ಶೋಧಿಸಿದ್ದಾರೆ.

೪. ನಾಗಚಂದ್ರನಿಗೆ ಶಾಂತಿನಾಥ, ದೇವಣ್ಣ, ಸಿಂಗಿರಾಜ ಹೆಸರಿನ ಮೂರುಜನ ಮಕ್ಕಳು. ಮಲ್ಲಿನಾಥ, ನಾಗಚಂದ್ರ ಕೂಚಿರಾಜ, ಸಿಂಗಿರಾಜ ಹೆಸರಿನ ನಾಲ್ಕು ಜನ ಮೊಮ್ಮಕ್ಕಳು. ಕೂಚಿರಾಜನ ಮಗ 'ಕಪ್ಪಣಯ್ಯ ಒಬ್ಬ ಮರಿಮೊಮ್ಮಗ.

೫. ನಾಗಚಂದ್ರ ಬದುಕಿದ್ದು ೧೨ನೇ ಶತಮಾನವಲ್ಲ. ೧೦೪೩ರಿಂದ ೧೧೦೦ರ ವರೆಗೆ ಬದುಕಿದ್ದನೆಂದು ನಿರ್ಣಯಿಸುತ್ತಾರೆ.

ಈ ಕೃತಿಗೆ ವಿದ್ವಾಂಸರಾದ ಡಾ.ಎಂ.ಎಂ.ಕಲಬುರ್ಗಿ ಅವರು ಮುನ್ನುಡಿ ಬರೆದಿದ್ದಾರೆ. "ಶಾಖೋಪ ಶಾಖೆಯಾಗಿ ಹಬ್ಬಿರುವ ಜೈನಪರಂಪರೆಯ ಅಧ್ಯಯನ ದಿಕ್ಕು ತಪ್ಪಿಸುವಷ್ಟು ಜಟಿಲವಾಗಿದೆ. ಇದಕ್ಕೆ ನಾಗಚಂದ್ರನ ಗುರುಪರಂಪರೆ ಪರಮಾವಧಿ ನಿದರ್ಶನ. ಹೀಗಿದ್ದಾಗ ಎಲ್ಲ ಎಳೆಗಳನ್ನು ಬಿಡಿಸಿಕೊಂಡು, ಗಟ್ಟಿಯಾಗಿ ಅವುಗಳನ್ನು ಜೋಡಿಸಿಕೊಳ್ಳುವಲ್ಲಿ ವಹಿಸಿದ ಶ್ರಮ, ತೋರಿದ ಸಂಯಮ, ಮರೆದ ಚಾರಿತ್ರಿಕ ಪ್ರಜ್ಞೆ ಡಾ.ಹಂಪನಾ ಅವರಿಗೆ ಮಾತ್ರ ಸಾಧ್ಯ" ಎಂದು ಹೇಳುತ್ತಾರಲ್ಲದೆ; ಈ ಕೃತಿ ಆರ್.ನರಸಿಂಹಾಚಾರ್ ಅವರ ಕವಿಚರಿತೆಗಳಿಗೆ ಒಂದು ಯೋಗ್ಯ ತಿದ್ದುಪಡಿಯಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ಅಂದರೆ ಈಗಾಗಲೇ ಸ್ಥಾಪಿತವಾದಂಥ ಅಭಿಪ್ರಾಯವನ್ನು ನಿರಾಕರಿಸಿ, ಇಲ್ಲವಾಗಿಸಿ ತೊಡೆದು ಹಾಕಲಿಕ್ಕೆ ಅಧ್ಯಯನಕಾರರಿಗೆ ಆಕರಗಳ ಶೋಧ–ಸಂಗ್ರಹ–ಪರಿಶೀಲನೆ–ವರ್ಗೀಕರಣ–ವ್ಯಾಖ್ಯಾನ ಮತ್ತು ಅವುಗಳ ಸಹಾಯದಿಂದ ಚರಿತ್ರೆಯ ನಿರ್ಮಾಣದಂಥ ಗುಣಗಳು ಅವಶ್ಯ ಬೇಕಾಗುತ್ತವೆ. ಈ ಕಾರಣಗಳಿಂದ ಕವಿಚರಿತೆಯಲ್ಲಿ ಆಗಬೇಕಾದ ತಿದ್ದುಪಡಿಗೆ ಪರಿಷ್ಕರಣೆಗೆ ಇಂಥ ಕೃತಿಗಳನ್ನು ರಚಿಸುವುದರ ಮೂಲಕ ವಿನಮ್ರವಾಗಿ ಸ್ಪಂದಿಸುತ್ತಾ ಡಾ.ಹಂಪನಾ ಅವರು ಬಂದಿದ್ದಾರೆ. ಅದೇ ರೀತಿ ಅತ್ತಿಮಬ್ಬೆಯ ವ್ಯಕ್ತಿತ್ವದ ಮೂಲಕ ಕರ್ನಾಟಕ ಸಾಂಸ್ಕೃತಿಕ ಚರಿತ್ರೆಗೆ ಮಹಿಳೆಯರ ಕೊಡುಗೆಯನ್ನು ವಿವರಿಸುವ ಕವಿಕಾಮಧೇನು ಅತ್ತಿಮಬ್ಬೆ ಕೃತಿಯಲ್ಲಿ ಪ್ರಮುಖವಾಗಿ ಜೈನ ಕವಿ, ಸಾಹಿತ್ಯ, ಆಡಳಿತ, ಧಾರ್ಮಿಕತೆಗೆ ಅವಳ ಪ್ರೇರಣೆ ಹೇಗಿತ್ತೆಂಬುದನ್ನು

Scanned with CamScanner

ತಲಸ್ಪರ್ಶಿಯಾಗಿ ವಿಶ್ಲೇಷಿಸಿದ್ದಾರೆ. ಕವಿ ಬಂಧುವರ್ಮನ ಜಿಜ್ಞಾಸೆ ಎಂಬ ಕೃತಿಯಲ್ಲಿ ಆತನ ಇತಿವೃತ್ತ, ಆತ ಬರೆದ ಜೀವ ಸಂಬೋಧನೆಯಲ್ಲಿ ಸಗರನ ಕಥೆ, ಜೀವ ಸಂಬೋಧನೆಯಲ್ಲಿ ಸಗರನಕಥೆ, ಜೀವಸಂಬೋಧನೆ–ಧನ್ಯಕುಮಾರ ಚರಿತೆ, ಬಂಧುವರ್ಮ–ಮೊನ್ನನ ಸಂಕುಲ ಇತ್ಯಾದಿ ಲೇಖನಗಳೂ ಅಧ್ಯಯನಪೂರ್ಣ ವಾಗಿವೆ. ಡಾ.ಹಂಪನಾ ಅವರ 'ಯಕ್ಷ–ಯಕ್ಷಿಯರು' ಎಂಬುದು ವಿಶಿಷ್ಟವಾದ ಕೃತಿ. ಜೈನ ತೀರ್ಥಂಕರರ ಪ್ರತಿಯೊಬ್ಬರಿಗೂ ಇರುವ ಪರಿವಾರ ದೇವತೆಗಳನ್ನು ಯಕ್ಷ–ಯಕ್ಷಿಯರು ಎಂದು ಜೈನಪರಂಪರೆಯಲ್ಲಿ ಕರೆಯುತ್ತಾರೆ. ಯಕ್ಷ–ಯಕ್ಷಿಯರ ಉಗಮ–ಬೆಳವಣಿಗೆಯ ಇತಿಹಾಸವನ್ನು ಸಂಸ್ಕೃತ– ಪ್ರಾಕೃತ ಸಾಹಿತ್ಯದ ಜೊತೆಗೆ ದೇವಾಲಯಗಳ ಮೂರ್ತಿ ಶಿಲ್ಪಗಳಲ್ಲಿಯ ಉಲ್ಲೇಖಗಳ ಸಹಾಯದಿಂದ ವಿವರಿಸುತ್ತಾರೆ. ನೂರಾರು ರೇಖಾ ಚಿತ್ರಗಳಿಂದ ಕೂಡಿದ ಈ ಕೃತಿ ಯಕ್ಷಣಿಯರನ್ನು ಕುರಿತಾಗಿ ಕನ್ನಡದಲ್ಲಿ ಬಂದ ಮೊದಲ ಗ್ರಂಥವಾಗಿದೆಂದು ಡಾ.ಚಂದ್ರಶೇಖರ ಕಂಬಾರ ಅವರು ಅಭಿಪ್ರಾಯ ಪಡುತ್ತಾರೆ.

ಚಂದ್ರಕೂಡೆ ಎಂಬ ಕೃತಿ ೬೫ ಸಂಪ್ರಬಂಧಗಳ ಸಂಶೋಧನ ಕೃತಿ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಾಸ್ತುಶಿಲ್ಪ, ಕಲೆ, ಧರ್ಮ, ಚರಿತೆ ಕುರಿತು ಶಾಸನಗಳನ್ನೇ ಪ್ರಧಾನ ಆಕರಗಳನ್ನಾಗಿ ಬಳಸಿಕೊಂಡು ಬರೆದ ಕೃತಿ. ಜೈನರಲ್ಲಿ ನೋಂಪಿಯೆಂದರೆ ವ್ರತ. ಇಂಥ ವ್ರತಗಳನ್ನು ವಿವರಿಸುವ ಕಥೆಗಳು ಜೈನಸಾಹಿತ್ಯದಲ್ಲಿ ವಿಶಿಷ್ಟ ಪ್ರಕಾರವಾಗಿ ಬೆಳೆದುಬಂದಿದೆ. ಈ ಕಥೆಗಳನ್ನು ಸಂಗ್ರಹಿಸಿ–ಪರಿಷ್ಕರಿಸಿ ವಿಸ್ತಾರವಾದ ಪ್ರಸ್ತಾವನೆ ಯೊಂದಿಗೆ ರಚನೆಯಾದ ಡಾ.ಹಂಪನಾ ಅವರ ಇನ್ನೊಂದು ಕೃತಿ "ಕೆಲವು ನೋಂಪಿ ಕಥೆಗಳು". ಕಮ್ಮಟದ ಕಡಿಗಳು ಹೆಸರಿನ ೪೫ ಲೇಖನಗಳ ಸಂಕಲನದಲ್ಲಿ ಅಪರೂಪದ ಕೆಲವು ಕನ್ನಡ ಶಬ್ದಗಳು ಹಳಗನ್ನಡ ಕಾವ್ಯಗಳಲ್ಲಿ ಎಲ್ಲೆಲ್ಲಿ ಬಳಕೆಯಾಗಿವೆ. ಅವುಗಳ ಶಬ್ದಾರ್ಥ ವಿಶೇಷತೆಯೇನು? ಕಾಲಕಾಲಕ್ಕೆ ಅವುಗಳ ಅರ್ಥವ್ಯತ್ಯಾಸ ಹೇಗೆ ಆಗಿದೆಂಬುದರ ವಿವೇಚನೆಯನ್ನು ಇಲ್ಲಿ ಮಾಡಿದ್ದಾರೆ. ಉದಾಹರಣೆಗೆ ಅತ್ತಪರ ಪರದ ಅರ್ಥ ಡಾಲು, ಗುರಣಿ ಅದು ಪ್ರಾಕೃತದಲ್ಲಿ ಹಸ್ತಫಲಕ ಎಂದಾಗುತ್ತದೆ. ಶಾಸನಗಳನ್ನೇ ಆಧರಿಸಿ ಸಾಂತರ, ವಾಜಿ ಹಾಗೂ ಸಗರ ವಂಶಗಳ ಚರಿತ್ರೆಯನ್ನು ಸಾಂತರರು: ಒಂದು ಅಧ್ಯಯನ ಮತ್ತು ಶಾಸನಗಳಲ್ಲಿ ಎರಡು ವಂಶಗಳು ಎಂಬ ಕೃತಿಗಳು ನಿರೂಪಿಸುತ್ತವೆ. ಬಹಳ ಮುಖ್ಯವಾಗಿ ಇವರ ಅಧ್ಯಯನದ ವೈಶಿಷ್ಟ್ಯವೆಂದರೆ ಕೈಗೆತ್ತಿಕೊಂಡ ವಿಷಯವನ್ನು ಕುರಿತು ಹಿಂದೆ ಮಾಡಿದ ವಿದ್ವಾಂಸರ ಹೆಜ್ಜೆ ಗುರುತುಗಳನ್ನು ಸವಿಸ್ತಾರವಾಗಿ ವಿವರಿಸುತ್ತಾರೆ. ಈ ಮಾದರಿ ಸಂಶೋಧನೆಯಲ್ಲಿ Revew of Letreture ಎಂದು ಕರೆಸಿಕೊಳ್ಳುತ್ತದೆ. ಅದೇ ರೀತಿ ಸಾಹಿತ್ಯ–ಶಿಲ್ಪ–ಶಾಸನಗಳ ಮೂಲಕ ಒಂದು ವಿಷಯ ವನ್ನು ಬಹುಶಿಸ್ತೀಯ ಆಕರಗಳ ನೆಲೆಯಲ್ಲಿ ಪರಿಶೋಧಿಸು ವುದು ಡಾ. ಹಂಪನಾ ಅವರ ಅಧ್ಯಯನದ ವಿಶೇಷತೆಯಾಗಿದೆ.

ಹಸ್ತಪ್ರತಿ ಗ್ರಂಥಸಂಪಾದನೆಗೆ ಡಾ.ಹಂಪನಾಗರಾಜಯ್ಯನವರ ಕೊಡುಗೆಯನ್ನು ನೋಡುವುದಾದರೆ ೧೯೬೩ರ ಕಾಲಮಾನದಲ್ಲಿ ಶ್ರೀಯುತರು ಗ್ರಂಥಸಂಪಾದನ ಕ್ಷೇತ್ರವನ್ನು ಪ್ರವೇಶಿಸಿದರು. ಮುಖ್ಯವಾಗಿ ಡಾ.ಡಿ.ಎಲ್.ನರಸಿಂಹಾಚಾರ್ ಹಾಗೂ ತೀ.ನಂ.ಶ್ರೀಕಂಠಯ್ಯ ಅವರ ನಿಕಟ ಸಂಪರ್ಕದಲ್ಲಿದ್ದವರು. ಹೀಗಾಗಿ ಆ ಪೂರ್ವ ಸೂರಿಗಳ ಮಾದರಿಯನ್ನು ತಮ್ಮ ಸಂಪಾದನೆಯಲ್ಲಿ ಅಳವಡಿಸಿಕೊಂಡಿದ್ದಾರೆ. ೧೯೬೭ರಲ್ಲಿ ಜಿ.ಬ್ರಹ್ಮಪ್ಪ ಹಾಗೂ ಡಾ.ಕಮಲಾಹಂಪನಾ ಅವರೊಂದಿಗೆ ಕೂಡಿ 'ಭರತೇಶ ವೈಭವ' ಕೃತಿಯನ್ನು ಸಂಪಾದಿಸಿದರು. ಭೋಗವಿಜಯ, ದಿಗ್ವಿಜಯ, ಯೋಗ ವಿಜಯ ಎಂಬ ಮೂರು ವಿಭಾಗಗಳಲ್ಲಿ ಸಂಪಾದಿಸಿದ್ದಾರೆ. ಮೂರು ಅಪ್ರಕಟಿತ ಹಸ್ತಪ್ರತಿಗಳ ಜೊತೆಗೆ ಉಗ್ರಾಣದ ಮಂಗೇಶರಾಯರ ಪ್ರಕಟಿತ ಕೃತಿಯನ್ನು ಪರಿಷ್ಕರಣೆಗೆ ಬಳಸಿಕೊಂಡಿದ್ದಾರೆ. ೧೨೦ ಪುಟಗಳ ಸುದೀರ್ಘ ಪ್ರಸ್ತಾವನೆಯಲ್ಲಿ ಕವಿಕಾಲ ಕೃತಿ ವಿಚಾರಗಳನ್ನು, ಚಾರಿತ್ರಿಕ ಸಂಗತಿಗಳನ್ನು ಚರ್ಚಿಸಿದ್ದಾರೆ. ೧೯೮೧ರಲ್ಲಿ ಎಸ್.ಶಿವಣ್ಣ ಅವರೊಂದಿಗೆ ಸೇರಿ 'ಚಂದ್ರಸಾಗರ ವರ್ಣಿಯ ಕೃತಿಗಳು' ಸಂಪಾದಿಸಿದ್ದಾರೆ. ಇದರಲ್ಲಿ ಚಂದ್ರಸಾಗರ ವರ್ಣಿಯ ೧೮ ಕೃತಿಗಳು ಸಂಯೋಜನೆಗೊಂಡಿವೆ. ಕವಿಯ ಪೂರ್ವಾಶ್ರಮದ ಹೆಸರು ಬ್ರಹ್ಮಣಾಂಕ. ಈತ ಕೊರಟಗೆರೆ ತಾಲೂಕಿನ ತೋವಿನಕೆರೆಯವನು. ಈತನ ಪೂರ್ವಜರು ಕೊಪ್ಪಳ ಜಿಲ್ಲೆ ಹುಲಿಗೆಯ ಹೆಗ್ಗಡೆಗಳ ಮನೆತನದವರು. ಚಂದ್ರಪ್ಪ–ಪೊಂಬುಜೆ ಈತನ ತಂದೆ–ತಾಯಿಗಳು ಎಂಬುದನ್ನು ವಿಕ್ರಮಂಧರ ಎಂಬ ಅಪ್ರಕಟಿತ ಕೃತಿಯ ಸಹಾಯದಿಂದ ಕವಿಯ ಇತಿವೃತ್ತವನ್ನು ಮೊದಲಬಾರಿಗೆ ನಿರೂಪಿಸಿದ್ದಾರೆ. ೧೯೬೭ರಲ್ಲಿ ಮಂಗರಸನ ಜಯನೃಪಕಾವ್ಯವನ್ನು ೨೩೬ ಪರಿವರ್ಧಿನಿ ಷಟ್ಪದಿಗಳಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಯಾವುದೇ ಕೃತಿಯನ್ನು ಸಂಗ್ರಹಿಸಿಕೊಡುವಾಗ ಸಂಗ್ರಹಕಾರನಿಗೆ ಹೆಚ್ಚಿನ ಹೊಣೆಗಾರಿಕೆ ಇರಬೇಕಾಗುತ್ತದೆ. ಕಥೆಗೆ ಭಂಗಬಾರದಂತೆ ಒಂದು ಪರಿಮಿತಿ ವ್ಯಾಪ್ತಿಯಲ್ಲಿ ಕವಿ–ಕೃತಿಯ ನಿಜಸ್ವರೂಪವನ್ನು ಪ್ರಕಟಿಸಬೇಕಾಗುತ್ತದೆ. ಆ ಕೆಲಸವನ್ನು ಜಯನೃಪಕಾವ್ಯ ಸಂಗ್ರಹದಲ್ಲಿ ಡಾ.ಹಂಪನಾ ತುಂಬ ಸಮರ್ಥವಾಗಿ ನಿರ್ವಹಿಸಿದ್ದಾರೆ.

ಆದಿಯಪ್ಪ ಬರೆದ ಧನ್ಯಕುಮಾರ ಚರಿತೆ ೧೯೭೩ರಲ್ಲಿ ಡಾ.ಹಂಪನಾ ಅವರು ಮೊದಲು ಶೋಧಿಸಿ ಮತ್ತು ಸಂಪಾದಿಸಿದ ಕೃತಿಯಾಗಿದೆ. ೧೭೮೬ರಲ್ಲಿ ಪ್ರತಿಗೊಂಡ ಮೂಡಬಿದ್ರಿಯ ಪ್ರತಿ ಹಾಗೂ ೧೯೪೦ರಲ್ಲಿ ಪ್ರತಿಗೊಂಡ ೨ ಪ್ರತಿಗಳು ೧ ತಮ್ಮ ಸಂಗ್ರಹದಲ್ಲಿದ್ದ ತಾಡೋಲೆಗಳನ್ನು ಬಳಸಿಕೊಂಡು ಸಂಪಾದಿಸಿದ್ದಾರೆ. ಕವಿಕಾಲ ಕೃತಿಯ ಸಾಂಸ್ಕೃತಿಕ ಅನನ್ಯತೆಯನ್ನು ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಸಾಹಿತ್ಯ ಚರಿತ್ರೆಯಲ್ಲಿ ಕಳೆದು ಹೋಗುತ್ತಿದ್ದ ಆದಿಯಪ್ಪ ಕವಿಯನ್ನು ಶೋಧಿಸಿದ ಹೆಗ್ಗಳಿಕೆ ಡಾ.ಹಂಪನಾ ಅವರಿಗೆ ಸಲ್ಲುತ್ತದೆ. ೧೯೭೬ರಲ್ಲಿ ಸಂಪಾದನೆಗೊಂಡ 'ಕೆಲವು ನೋಂಪಿ ಕಥೆಗಳು'

Scanned with CamScanner

ಕೃತಿಯಲ್ಲಿ ೨೦ ಕಥೆಗಳು ಅಡಕಗೊಂಡಿವೆ. ಜೈನರ ವ್ರತಗಳನ್ನು ತಿಳಿಸುವ ಈ ಕಥೆಗಳ ಇತಿಹಾಸ, ಉಗಮ, ಬೆಳವಣಿಗೆ, ಆಚರಣೆಗಳನ್ನು ಕನ್ನಡ ಕಾವ್ಯಗಳ ಮೂಲಕ ನಿರೂಪಿಸುವ ಪ್ರಯತ್ನ ಮಾಡಿದ್ದಾರೆ. ಈ ವ್ರತಗಳ ಹಿಂದೆ ಪೌರೋಹಿತ ಪ್ರಜ್ಞೆಯ ಪಾತ್ರ, ಭಾಷಾ ವಿಜ್ಞಾನದ ದೃಷ್ಟಿಯಿಂದ ನೋಂಪಿಕಥೆಗಳ ಅನನ್ಯತೆಯನ್ನು ೩೬ ಪುಟಗಳ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ೧೯೭೫ರಲ್ಲಿ ಪ್ರಕಟಗೊಂಡ ಅಪ್ರತಿಮ ವೀರಚರಿತೆಯನ್ನು ಮೈಸೂರು ಆಸ್ಥಾನ ಕವಿ ತಿರುಮಲಾರ್ಯನು ಬರೆದ ಅಲಂಕಾರ ಗ್ರಂಥ. ನಾಲ್ಕು ಪ್ರಕರಣಗಳಲ್ಲಿ ಕಾವ್ಯ ಲಕ್ಷಣ, ಶಬ್ದಗುಣ, ಅರ್ಥಗುಣ, ರೀತಿ, ವೃತ್ತಿ, ಪ್ರಾಸ ಹಾಗೂ ಅಲಂಕಾರಗಳನ್ನು ತಿಳಿಸುವ ಕಾವ್ಯ ಸಂಸ್ಕೃತದ ಲಕ್ಷಣ ಕೃತಿಗಳಿಗೆ ಕನ್ನಡದಲ್ಲಿ ವೃತ್ತಿ ಬರೆಯಲಾಗಿದೆ. ಹೊಸಗನ್ನಡ ಅರುಣೋದಯದ ಚುಮುಚುಮು ಮಸುಕಿನಲ್ಲಿ ಶಾಸ್ತ್ರ ಕೃತಿಗಳು ವಿರಳವಾಗುತ್ತಿದ್ದ ದಿನಮಾನದಲ್ಲಿ ರಚನೆಯಾದ ಈ ಕಾವ್ಯವನ್ನು ಅತ್ಯಂತ ಶ್ರದ್ಧೆ ಹಾಗೂ ಶಾಸ್ತ್ರೀಯತೆಯಿಂದ ಡಾ.ಹಂಪನಾ ಅವರು ಸಂಪಾದಿಸಿ ಕೊಟ್ಟಿದ್ದಾರೆ. ೩೪೩೭ ಬೇರೆ ಬೇರೆ ಷಟ್ಪದಿಯಿಂದ ಕೂಡಿದ ೬೪ ಸಂಧಿಗಳ ಬೃಹತ್ ಕಾವ್ಯ ಸಾಳ್ವಭಾರತವನ್ನು ೧೯೭೬ರಲ್ಲಿ ತುಮಕೂರು ಜಿಲ್ಲೆ ಕೊರಟಗೆರೆಯಲ್ಲಿ ದೊರೆತ ಏಕೈಕ ಹಸ್ತಪ್ರತಿಯಿಂದ ಸಂಪಾದಿಸಿದ್ದಾರೆ. ಸಾಳ್ವನ ಈ ಕಾವ್ಯ ನೇಮಿನಾಥ ಪುರಾಣ ಎಂದು ಜನಜನಿತವಾಗಿದೆ. ಈ ಕಾವ್ಯವಲ್ಲದೆ ವೈದ್ಯಶಾಸ್ತ್ರ, ರಸರತ್ನಾಕರ, ಶಾರದಾ ವಿಲಾಸ ಎಂಬ ಶಾಸ್ತ್ರ ಕೃತಿಗಳನ್ನು ಸಾಳ್ವ ಬರೆದಿದ್ದಾನೆ. ಈ ಕೃತಿಯ ಪ್ರಸ್ತಾವನೆಯಲ್ಲಿ ಡಾ.ಹಂಪನಾಗರಾಜಯ್ಯ ಅವರು ಮಹಾಭಾರತದಲ್ಲಿ ವ್ಯಾಸಪರಂಪರೆ ಮತ್ತು ಹರಿವಂಶ ಪರಂಪರೆಗಳಿರುವುದನ್ನು ಗುರುತಿಸಿ ಜೈನರು ಈ ಎರಡೂ ಪರಂಪರೆಯನ್ನು ಅನುಸರಿಸಿದವರು. ಇದಕ್ಕೆ ನಿದರ್ಶನವಾಗಿ ಬಂಧುವರ್ಮನ ಹರಿವಂಶಾಭ್ಯುದಯ, ನೇಮಿನಾಥ ಜೈನಭಾರತ ಪುರಾಣಗಳಿರುವುದನ್ನು ಉಲ್ಲೇಖಿಸುತ್ತಾರೆ.

೧೯೭೭ರಲ್ಲಿ ಬೊಮ್ಮಣ್ಣ ಕವಿಯ ನಾಗಕುಮಾರ ಷಟ್ಪದಿಯನ್ನು ಡಾ.ಹಂಪನಾ ಸಂಪಾದಿಸುತ್ತಾರೆ. ಕಾಮದೇವ ನಾಗಕುಮಾರನನ್ನು ಕುರಿತು ೩೨ ಸಂಧಿಗಳಲ್ಲಿ ೨೯೮೮ ಭಾಮಿನಿ ಪದ್ಯಗಳಿಂದ ರಚನೆಯಾದ ಕೃತಿ. ಈ ಕೃತಿಗೆ ಸಾಲಿಗ್ರಾಮದ ಒಂದು ಪ್ರತಿ ಮತ್ತು ಗುಬ್ಬಿ ತಾಲೂಕಿನ ಅದಲಗೆರೆಯಲ್ಲಿ ಸಿಕ್ಕ ೨ ಓಲೆ ಪ್ರತಿಗಳನ್ನು ಬಳಸಿಕೊಂಡು ಪರಿಷ್ಕರಿಸಿದ್ದಾರೆ. ಬೊಮ್ಮಣ್ಣಕವಿ ತುಮಕೂರು ಜಿಲ್ಲೆಯ ಬಿದಿರಿಯವನು. ನಾಗಕುಮಾರ ಕಥೆಯು ಕನ್ನಡ, ಪ್ರಾಕೃತ, ಸಂಸ್ಕೃತ ಭಾಷೆಯಲ್ಲಿ ರಚನೆಯಾದ ಕಾವ್ಯಗಳನ್ನು ಕುರಿತು ೧೫೦ ಪುಟಗಳ ವಿಸ್ತಾರವಾದ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಸಂಪಾದಕರಾಗಿ ಅನುವಾದಕರಾಗಿ ಶಾಂತಿಪುರಾಣವನ್ನು ಪ್ರಕಟಿಸಿದ್ದಾರೆ. ಪುರಾಣ ತಿಲಕ ಎಂಬ ಹೆಗ್ಗಳಿಕೆಗೆ ಪಾತ್ರವಾದ ಈ ಕಾವ್ಯದ ಪ್ರಸ್ತಾವನೆ ೧೯೭ ಪುಟಗಳ

ವ್ಯಾಪ್ತಿ ಹೊಂದಿದ್ದು ೪೬ ಜನ ಹಿರಿಕಿರಿಯ ಕವಿಗಳು ಪೊನ್ನನನ್ನು ಕುರಿತು ಕೊಂಡಾಡಿದ ಪದ್ಯಗಳು, ಆತನ ಕೌಟುಂಬಿಕ ಪರಿಸರ, ಆತನಿಗಿರಬಹುದಾದ ಶಾಸ್ತ್ರ ಕೃತಿಗಳ ತಿಳುವಳಿಕೆಯನ್ನು ವಿವರಿಸಿದ್ದಾರೆ.

ವಡ್ಡಾರಾಧನೆ ಎಂದಾಕ್ಷಣ ಡಿ.ಎಲ್.ಎನ್. ನೆನಪಾಗುತ್ತಾರೆ. ಹಂಪನಾ ಅವರಿಗೆ ಡಿ.ಎಲ್.ಎನ್.ಬಗ್ಗೆ ಅಪಾರ ಗುರುಭಕ್ತಿ. ಹೀಗಾಗಿ ವಡ್ಡಾರಾಧನೆ ಕೃತಿ ಸಂಪಾದಿಸುವುದರ ಮೂಲಕ ಆ ಕೃತಿಯ ಸಂಸ್ಕರಣೆ ಮತ್ತು ಸಂಶೋಧನೆಗೆ ಸಂಬಂಧಿಸಿದಂತೆ ಗುರುವನ್ನು ಮೀರಿಸುವ ರೀತಿಯಲ್ಲಿ ವಡ್ಡಾರಾಧನೆ ಸಮಗ್ರ ಅಧ್ಯಯನ ಕೃತಿ ಮೂಡಿಬಂದಿದೆಂದು ಡಾ.ಎಂ.ಎಂ.ಕಲಬುರ್ಗಿ ಅವರು ಪ್ರಶಂಸೆ ಮಾಡಿದ್ದಾರೆ. ಏಳು ಹಸ್ತಪ್ರತಿಗಳ ಸಹಾಯದಿಂದ ಡಿ.ಎಲ್.ಎನ್.೧೯ ಕಥೆಗಳನ್ನು ಸಂಪಾದಿಸಿದ ಕಾವ್ಯ ವಡ್ಡಾರಾಧನೆ, ಕವಿ ಶಿವಕೋಟಾಚಾರ್ಯ ಕಾಲ ೯೭೦, ಸ್ಥಳ ಬಳ್ಳಾರಿ ಜಿಲ್ಲೆಯ ಕೋಗಳಿ ಎಂಬ ನಿಲುವನ್ನು ತಾಳಿದ್ದರು. ಡಾ.ಹಂಪನಾ ಅವರು ತಮಗೆ ದೊರೆತ ಅಪರೂಪದ ಹಸ್ತಪ್ರತಿಯಿಂದ ಕಾವ್ಯದ ಹೆಸರು ವಡ್ಡಾರಾಧನೆಯಲ್ಲ; ಆರಾಧನಾ ಕರ್ನಾಟಕ ಟೀಕು. ಕವಿ ಶಿವಕೋಟಾಚಾರ್ಯನಲ್ಲ; ಬ್ರಾಜಿಷ್ಣು. ಕಾಲ ೯೨೦ ಅಲ್ಲ, ೮೦೦. ಸ್ಥಳ ಕೋಗಳಿಯಲ್ಲ; ಕುಂದಣಗಾರ ಹೇಳಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲ; ಬೀದರ ಜಿಲ್ಲೆಯ ಹಳ್ಳಿಖೇಡ ಎಂಬುದನ್ನು ನಿರೂಪಿಸಿದ್ದಾರೆ. ಡಾ.ಡಿ.ಎಲ್.ಎನ್. ಆದಿಯಾಗಿ ಡಾ.ಎಂ.ಎಂ.ಕಲಬುರ್ಗಿಯವರ ವರೆಗೆ ವಿದ್ವಾಂಸರು ಈ ಶೋಧದಲ್ಲಿ ಎಲ್ಲಿ? ಹೇಗೆ? ದಾರಿತಪ್ಪಿದರು ಎಂಬುದನ್ನು ಸಾಧಾರಪೂರ್ವಕವಾಗಿ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಇದೇ ರೀತಿ ಹಂಪನಾ ಅವರು ಸೂತ್ರಾನುಗತ ಕರ್ನಾಟಕ ಲಘುವೃತ್ತಿ, ಜೈನಕಥಾ ಕೋಶ, ನೇಮಿನಾಥ ಪುರಾಣ ಇನ್ನೂ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ.

ಗ್ರಂಥಸಂಪಾದನೆಯಲ್ಲಿ ಕವಿಕಾಲ ಹಾಗೂ ಕೃತಿಕಾಲ ನಿರ್ಣಯವನ್ನು ನಿರ್ಧರಿಸುವಾಗ ಸಂಪಾದಕ ಸಂಶೋಧಕನೂ ಆಗಬೇಕಾಗುತ್ತದೆ. ಹೀಗಾಗಿ ಉನ್ನತ ವಿಮರ್ಶೆ ಗ್ರಂಥಸಂಪಾದನೆಯಲ್ಲಿ ಸಂಶೋಧನೆಯ ಎಲ್ಲ ಲಕ್ಷಣವನ್ನು ಹೊಂದಿರುವಂಥ ವಿದ್ವತ್‌ಪೂರ್ಣವಾದ ವಿಭಾಗವಾಗಿದೆ. ಬಹುತೇಕ ಡಾ.ಹಂಪನಾ ಅವರ ಸಂಪಾದಿತ ಕೃತಿಗಳಲ್ಲಿ ಉನ್ನತ ವಿಮರ್ಶೆ ಸಂಪದ್ಭರಿತವಾಗಿ ಮೂಡಿಬಂದಿದೆ. ಉದಾಹರಣೆಗೆ ವಡ್ಡಾರಾಧನೆಯು ಸಂಶೋಧನೆಯ ವೈಧಾನಿಕತೆಯ ಎಲ್ಲ ಮಗ್ಗುಲುಗಳಿಂದ ನಿರೂಪಿತವಾದ ಸಂಪಾದಿತ ಗ್ರಂಥ. ದೇಶಿ ಛಂದಸ್ಸಿನಿಂದ ಕೂಡಿದ ಟೀಕು, ವ್ಯಾಖ್ಯಾನ, ಅಲಂಕಾರಶಾಸ್ತ್ರಗಳಂಥ ಕೃತಿ ಸಂಪಾದನೆಯನ್ನು ಮಾಡುವುದು ತುಂಬ ಕಷ್ಟದ ಕೆಲಸ. ಸ್ವಾಲಿತ್ಯಗಳಿಂದ ಆವೃತ್ತವಾಗಿರುವ ಇವುಗಳ ಪರಿಷ್ಕರಣೆಗೆ ವ್ಯಾಪಕವಾದ ಅಭ್ಯಾಸ ಬೇಕಾಗುತ್ತದೆ. ಭಾಷಾ ತಿಳುವಳಿಕೆ, ಜನಪದ ಅಶಯ ಮತ್ತು ವ್ಯವಧಾನಗಳು ಇಲ್ಲಿ ಅವಶ್ಯ. ಈ ಎಲ್ಲ ಗುಣಗಳನ್ನು ಡಾ.ಹಂಪನಾ ಅವರಲ್ಲಿ ಕಾಣುತ್ತೇವೆ.

ವಿಶೇಷವಾಗಿ ಡಾ.ಹಂಪನಾ ಅವರ ಕಾವ್ಯ ವಿಮರ್ಶೆ ರಂಜನೀಯವಾಗಿ, ಸೃಜನಶೀಲವಾಗಿ ಮತ್ತು ವಾಸ್ತವ ಪ್ರಜ್ಞೆಯಿಂದ ಕೂಡಿರುತ್ತದೆ. ಉದಾಹರಣೆಗೆ

Scanned with CamScanner

ನಾಗಕುಮಾರ ಚರಿತೆ ಬರೆದ ಬೊಪ್ಪಣ್ಣನನ್ನು ಕುರಿತು ಹೀಗೆ ಹೇಳುತ್ತಾರೆ. "ಈ ಅನುಕರಣೆಯಲ್ಲಿ ಆನಂದವೇನೂ ಇಲ್ಲ. ಮೂಲದ ಸೊಗಸು ಸುಮಾರು ಸೋರಿ ಹೋಗಿದೆ. ಎಲ್ಲಿಯ ಬಾಹುಬಲಿ! ಎಲ್ಲಿಯ ಬೊಮ್ಮಣ್ಣ! ಬಾಹುಬಲಿಗೆ ತಕ್ಕ ಶಿಷ್ಯನಲ್ಲ!, ಶಿಷ್ಯನಲ್ಲಿ ಬಂಕವಾಳವಿಲ್ಲ! ಹೆಚ್ಚು ಸರಕು ಇಲ್ಲದೆ ಕೇವಲ ಕಡ ತಂದಿಟ್ಟುಕೊಂಡ ಮಾಲನ್ನು ಒಣಗಿಸಿ, ಬಾಡಿಸಿ, ಬಿಕರಿ ಮಾಡುವ ದೂಸಿಗನಂತಿದ್ದಾನೆ. ಪಂಪನಿಂದ ಎರವಲು ಪಡೆದುದನ್ನು ರನ್ನಕವಿ ಸ್ವಂತಿಕೆಯ ಎರಕ ಹಾಕಿ ಹೊಸ ಮೆರಗುಕೊಟ್ಟು ಶ್ರೀಮಂತಗೊಳಿಸಿದ್ದಾನೆ. ಬಡ್ಡಿ ಸಹಿತ ಪಂಪನಿಗೆ ಗೌರವ ತಂದಿದ್ದಾನೆ! ಬೊಮ್ಮಣ್ಣ ನಾದರೋ ಬಡ್ಡಿ ಹಾಗಿರಲಿ ಅಸಲಿನಲ್ಲಿಯೇ ನಷ್ಟ ಮಾಡಿದ್ದಾನೆ; ದಿವಾಳಿಯಾಗಿದ್ದಾನೆ" ಎನ್ನುತ್ತಾರೆ. ಸಾಂತರ ಅರಸುಮನೆತನದ ಬಗ್ಗೆ ಹೇಳುವಾಗಲೂ ಅಷ್ಟೇ. "ಗಂಗರ ಹಾಗೆ ಕರ್ನಾಟಕದ ಅರಸೊತ್ತಿಗೆಯನ್ನು ಅಭೂತಪೂರ್ವವಾದ ಉನ್ನತ ಶಿಖರ ವನ್ನೇರಿಸಲು ಆಗದಿರಬಹುದು ಅಥವಾ ಕದಂಬರರ ಹಾಗೆ ಕರ್ನಾಟಕದಲ್ಲಿ ಮಹಾವೈಭವವನ್ನು ವಿಜೃಂಭಿಸಲು ಸಾಧ್ಯವಾಗದಿರಬಹುದು. ಆದರೆ ಅಖಿಲ ಭಾರತದ ರಾಜಕೀಯ ಜೀವನದ ಸೆರಗನ್ನು ಹಿಡಿಯದಿದ್ದರೂ ದಕ್ಷಿಣ ಭಾರತ, ಕರ್ನಾಟಕ ಚರಿತ್ರೆ–ಸಂಸ್ಕೃತಿಯನ್ನು ಹುರುಪಿನಿಂದ ನಮ್ರವಾಗಿ ಕಾಪಾಡಿದರು. ಹೀಗೆ ಡಾ.ಹಂಪನಾ ಅವರ ಮಾತುಗಳಲ್ಲಿ ಓದುಗರ ಎದೆಯನ್ನು ತಟ್ಟನೆ ತಟ್ಟುವ ಶಕ್ತಿ ಇರುವುದನ್ನು ಗುರುತಿಸಬಹುದು.

ವಿದ್ವತ್ತು–ವಿನಯಗಳ ಸಂಗಮವಾಗಿರುವ ಡಾ.ಹಂಪನಾ ಅವರ ಗ್ರಂಥಸಂಪಾದನೆ ಮತ್ತು ಹಸ್ತಪ್ರತಿ ಕ್ಷೇತ್ರಕ್ಕೆ ನೀಡಿದ ಕೊಡುಗೆ ಬಹುಕಾಲ ನಿಲ್ಲುವಂಥದ್ದು.

Scanned with CamScanner

ಕಿತ್ತೂರು ರುದ್ರಮ್ಮನ ಕಥೆ

ಸಂಪಾದಕ
■ ಡಾ. ಕೆ. ರವೀಂದ್ರನಾಥ

Scanned with CamScanner

KITTURU RUDARAMMANA KATHE

Edited by
Dr. K.Ravindranatha
Professor, Dept. of Manuscriptology
Kannada University, Hampi
Vidyaranya 583 276

Published by
Dr. H.D.Prashanth
Director, Prasaranga
Kannada University, Hampi
Vidyaranya 583 276

Pp: xviii+84, **Price: 80/-**

First Impression 2020

ISBN: 978-93-87135-79-6

www.kannadauniversity.org

ಬೆಲೆ ರೂ. ೮೦/-

© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೨೦

ಮುಖಪುಟ: **ಕೆ.ಕೆ.ಮಕಾಳಿ**

ಅಕ್ಷರ ಸಂಯೋಜನೆ
ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್
ನೃಪತುಂಗನಗರ, ವಿದ್ಯಾರಣ್ಯ ೫೮೩ ೨೭೬
ಸಂಚಾರಿ ೯೪೪೮೧ ೬೬೯೦

ಪುಸ್ತಕ ದೊರೆಯುವ ಸ್ಥಳ
ಪುಸ್ತಕ ಸರಸ್ವತಿ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ದೂರವಾಣಿ ೦೮೫೩೪-೨೧೦೪೧೦

ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ
ನಂ.೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ ೦೮೦-೨೨೩೭೨೩೪೮

ಮುದ್ರಕರು
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಆಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with CamScanner

ಅಧ್ಯಯನದ ವಿಧಿವಿಧಾನಗಳು

■ ಸಂಪಾದಕ: ಡಾ. ಕೆ. ರವೀಂದ್ರನಾಥ

Scanned with CamScanner

ADHYAYANADA VIDHIVIDHANAGALU

Edited by
Dr. K.Ravindranatha
Professor
Dept. of Manuscriptology
Kannada University, Hampi
Vidyaranya 583 276

Published by
Dr. H.D. Prashanth
Director, Prasaranga
Kannada University, Hampi
Vidyaranya 583 276

Pp: XVI+192, **Price: ₹ 180/-**

ISBN 978-93-81645-17-8

First Impression 2008
Second Impression 2011
Third Impression 2020

www.kannadauniversity.org

© ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೨೦

ಬೆಲೆ : ₹ ೧೮೦/-

ಮುಖಪುಟ : ಕೆ.ಕೆ.ಮಕಾಳಿ

ಅಕ್ಷರ ಸಂಯೋಜನೆ
ವಿದ್ಯಾರಣ್ಯ ಗಣಕಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ ೫೮೩ ೨೭೬

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ : ೦೮೦-೨೨೩೭೨೩೮೮

ಮುದ್ರಣ
ಮಾರ್ಕೆಟಿಂಗ್ ಕಮ್ಯುನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿ., ಬೆಂಗಳೂರು

Scanned with CamScanner

ಪರಿವಿಡಿ

ಭಾಗ ಒಂದು

ವೈಚಾರಿಕ

೧. ಸಂಶೋಧನೆ : ಸ್ವರೂಪ-ದೇಶಿವಾದ / ೩
ಡಾ. ಎಂ.ಎಂ. ಕಲಬುರ್ಗಿ

೨. ಸಂಶೋಧನೆ : ಒಂದು ಪರಿಚಯ / ೧೧
ಡಾ. ಎಂ.ವಿ. ನಾಡಕರ್ಣಿ

೩. ಕನ್ನಡ ಅಧ್ಯಯನ : ಸ್ಥಿತಿ-ಗತಿ / ೧೯
ಡಾ. ತಾಳ್ತಜೆ ವಸಂತಕುಮಾರ

೪. ಕನ್ನಡ ಸಾಂಸ್ಕೃತಿಕ ಅಧ್ಯಯನ : ಕೆಲವು ಟಿಪ್ಪಣಿಗಳು / ೨೯
ಡಾ. ರಹಮತ್ ತರೀಕೆರೆ

೫. ಸಮಾಜಶಾಸ್ತ್ರ ಅಧ್ಯಯನ : ವೈಧಾನಿಕ ಪ್ರಶ್ನೆ / ೪೦
ಡಾ. ಟಿ.ಆರ್. ಚಂದ್ರಶೇಖರ್

೬. ಮಹಿಳಾ ಅಧ್ಯಯನ ವೈಧಾನಿಕತೆ: ಒಂದು ಟಿಪ್ಪಣಿ / ೫೧
ಡಾ. ಎಚ್.ಎಸ್. ಶ್ರೀಮತಿ

೭. ಅಧ್ಯಯನ ಮತ್ತು ಆಕರಗಳ ಅರ್ಥಕಲ್ಪನೆ / ೫೯
ಡಾ. ಶಿವರಾಮ ಪಡಿಕ್ಕಲ್

೮. ಅಧ್ಯಯನದ ವಸ್ತು-ಭಾಷೆ : ತಾಂತ್ರಿಕ ಸಂಗತಿಗಳು / ೬೯
ಪ್ರೊ. ಸೋಮಶೇಖರಗೌಡ

೯. ಅಧ್ಯಯನದ : ಪ್ರಬಂಧ ಸಿದ್ಧತಾ ವಿಧಾನ / ೭೬
ಡಾ. ಜಾಜಿ ದೇವೇಂದ್ರಪ್ಪ

ಭಾಗ ಎರಡು

ಕ್ರಿಯಾತ್ಮಕ

೧೦. ಅಧ್ಯಯನ : ಪಾಂಡಿತ್ಯಕ್ಕೆ ಸಮರ್ಥನೆ / ೮೭
ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ

Scanned with CamScanner

೧೧. ಅಧ್ಯಯನ : ದೇಶೀದತ್ತಕಣಜ ಬಳಕೆಗೊಳ್ಳಬೇಕು / ೯೮
ಡಾ. ಬಿ.ಎ. ವಿವೇಕ ರೈ
೧೨. ಅಧ್ಯಯನ : ಕ್ರಿಯಾವಿನ್ಯಾಸ ವೈಜ್ಞಾನಿಕವಾಗಿರಬೇಕು / ೧೦೧
ಪ್ರೊ. ಎ.ವಿ. ನಾವಡ
೧೩. ಅಧ್ಯಯನ: ಸಮಷ್ಟಿಪ್ರಜ್ಞೆ ಅಗತ್ಯ / ೧೦೬
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
೧೪. ಅಧ್ಯಯನ : ತಾಳ್ಮೆ ಮತ್ತು ಶಿಸ್ತು ಅಗತ್ಯ / ೧೦೯
ಡಾ. ದೇವರಕೊಂಡಾರೆಡ್ಡಿ
೧೫. ಅಧ್ಯಯನ : ಸೂಕ್ಷ್ಮ ನಿರೀಕ್ಷೆಗಳಿರಬೇಕು / ೧೧೨
ಡಾ. ಕರೀಗೌಡ ಬೀಚನಹಳ್ಳಿ

ಭಾಗ ಮೂರು

ಪ್ರಾಯೋಗಿಕ

೧೬. ಕಪಟರಾಳರ ಸಾಂಸ್ಕೃತಿಕ ಶೋಧಗಳು / ೧೧೭
ಡಾ. ವಿ.ಜಿ. ಪೂಜಾರ
೧೭. ಸಿಮಿಯಾಟಿಕ್ಸ್ ಮತ್ತು ಶಂಬಾರವರ ಅಧ್ಯಯನ ವಿಧಿವಿಧಾನ / ೧೨೭
ಡಾ. ಕೆ.ವಿ. ನಾರಾಯಣ
೧೮. ಡಾ. ಶಂಬಾ ಅಧ್ಯಯನ : ಅರ್ಥ ಗ್ರಹಣ ಪದ್ಧತಿ / ೧೩೯
ಡಾ. ಜೆ. ಶ್ರೀನಿವಾಸ ಮೂರ್ತಿ
೧೯. ಎಂ. ಗೋವಿಂದ ಪೈಯವರ ಸಂಶೋಧನೆಯ ನೆಲೆಗಳು / ೧೬೬
ಡಾ. ಕೆ. ಚನ್ನಪ್ಪಗೌಡ
೨೦. ಪ್ರೊ. ಎಂ.ಎನ್. ಶ್ರೀನಿವಾಸರ ಸಂಶೋಧನ ವಿಧಾನಗಳು / ೧೭೪
ಡಾ. ಕೆ.ಜಿ. ಗಾಯತ್ರಿದೇವಿ

ಲೇಖಕರ ವಿಳಾಸಗಳು / ೧೯೦

ಭಾಗ ಒಂದು

ವೈಧಾನಿಕ

* ಸಂಶೋಧನೆ : ಸ್ವರೂಪ-ದೇಶಿವಾದ
* ಸಂಶೋಧನೆ : ಒಂದು ಪರಿಚಯ
* ಕನ್ನಡ ಅಧ್ಯಯನ : ಸ್ಥಿತಿ-ಗತಿ
* ಕನ್ನಡ ಸಾಂಸ್ಕೃತಿಕ ಅಧ್ಯಯನ : ಕೆಲವು ಟಿಪ್ಪಣಿಗಳು
* ಸಮಾಜಶಾಸ್ತ್ರ ಅಧ್ಯಯನ : ವೈಧಾನಿಕ ಪ್ರಶ್ನೆ
* ಮಹಿಳಾ ಅಧ್ಯಯನ ವೈಧಾನಿಕತೆ : ಒಂದು ಟಿಪ್ಪಣಿ
* ಅಧ್ಯಯನ ಮತ್ತು ಆಕರಗಳ ಅರ್ಥಕಲ್ಪನೆ
* ಅಧ್ಯಯನದ ವಸ್ತು-ಭಾಷೆ : ತಾಂತ್ರಿಕ ಸಂಗತಿಗಳು
* ಅಧ್ಯಯನದ : ಪ್ರಬಂಧ ಸಿದ್ಧತಾ ವಿಧಾನ

Scanned with CamScanner

ಕಿತ್ತೂರು ರುದ್ರಮ್ಮನ ಕಥೆ

ಸಂಪಾದಕ
ಡಾ. ಕೆ. ರವೀಂದ್ರನಾಥ

Scanned with CamScanner

KITTURU RUDARAMMANA KATHE

Edited by
Dr. K.Ravindranatha
Professor, Dept. of Manuscriptology
Kannada University, Hampi
Vidyaranya 583 276

Published by
Dr. H.D.Prashanth
Director, Prasaranga
Kannada University, Hampi
Vidyaranya 583 276

Pp: xviii+84, **Price: 80/-**

First Impression 2020

ISBN: 978-93-87135-79-6

www.kannadauniversity.org

ಬೆಲೆ ರೂ. ೮೦/-

© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೨೦

ಮುಖಪುಟ: **ಕೆ.ಕೆ.ಮಕಾಳಿ**

ಅಕ್ಷರ ಸಂಯೋಜನೆ
ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್
ನೃಪತುಂಗನಗರ, ವಿದ್ಯಾರಣ್ಯ ೫೮೩ ೨೭೬
ಸಂಚಾರಿ ೯೪೪೮೧ ೬೬೯೦

ಪುಸ್ತಕ ದೊರೆಯುವ ಸ್ಥಳ
ಪುಸ್ತಕ ಸರಸ್ವತಿ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ದೂರವಾಣಿ ೦೮೫೯೪-೨೧೦೪೧೦

ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ
ನಂ.೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ ೦೮೦-೨೨೩೭೩೩೮೮

ಮುದ್ರಕರು
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಆಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು

Scanned with CamScanner

ಅಭಿಜ್ಞಾನ

ಪ್ರೊ. ಎಸ್. ರಾಜಶೇಖರ ಅಭಿನಂದನಾ ಗ್ರಂಥ



ಪ್ರಧಾನ ಸಂಪಾದಕರು
ಡಾ. ಕೆ. ರವೀಂದ್ರನಾಥ

ಸಂಪಾದಕರು
ಡಾ. ವಾಸುದೇವ ಬಡಿಗೇರ
ಡಾ. ರಮೇಶ ನಾಯಕ
ಡಾ. ಎಲ್. ಪಿ. ಮಾರುತಿ

Scanned with CamScanner

ABHIJNANA

(Prof. S. Rajasekhara Festschrift)

Chief Editor

Dr. K. Ravindranatha

Prof. Kannada University, Hampi

Editors

Dr. Vasudeva Badigera

Prof. Kannada University, Hampi

Dr. Ramesh Nayak

Prof. Kannada University, Hampi

Dr. L.P. Maruthi

Prof. Karnataka University, Dharwad

Published by

Department of History and Archaeology

Karnataka University, Dharwad

and

Chiraga Publication, Dharwad

ಪುಟಗಳು: 16 + ೨೮೬ +12=314 Price: 500/-

First Impression: 2021

ISBN: 978-81-920676-8-1

© ಪ್ರಕಾಶಕರು

ಬೆಲೆ: ರೂ. ೫೦೦/-

ಮುಖಪುಟ: ಮಾರುತಿ .ಬಿ ಚಿತ್ತಾರ ಕಲಾಬಳಗ, ಧಾರವಾಡ

ಪುಟವಿನ್ಯಾಸ

ಸವಿತ ಗ್ರಾಫಿಕ್ಸ್, ಕಮಲಾಪುರ

ಮೊ: ೯೪೮೦೨ ೫೭೩೯೨

ಮುದ್ರಣ

ಎಲ್ ಕೆ ಪ್ರೆಸ್ ಇಂಕ್

ಬೆಂಗಳೂರು

ಮೊ. ೮೭೬೨೯೬೬೭೭೦

Scanned with CamScanner

೩೦

ಪಂಪಾಸ್ಥಾನ ವರ್ಣನಂ : ಒಂದು ಅಧ್ಯಯನ

ಡಾ. ಕೆ. ರವೀಂದ್ರನಾಥ

ಕನ್ನಡದಲ್ಲಿ ಸ್ಥಳನಾಮಗಳನ್ನು ಕುರಿತು ಅಧ್ಯಯನ ಮಾಡುವ ನಾಮವಿಜ್ಞಾನ ಇಂದು [illegible] ಬೆಳೆದು ಬಂದಿದೆ. ಆದರೆ ಈ ಶಾಸ್ತ್ರ ಒಂದು ಕಾಲಕ್ಕೆ "ಸ್ಥಳ ಮಹಾತ್ಮೆಗಳು" ಎಂಬ ಹೆಸರಿನಿಂದ [illegible] ಚರಿತ್ರೆಯಲ್ಲಿ ಒಂದು ಸಾಹಿತ್ಯ ಪ್ರಕಾರವಾಗಿ ಗುರುತಿಸಿಕೊಂಡಿದೆ. ಅದರಲ್ಲೂ ಮೈಸೂರು [illegible] ತಲಕಾವೇರಿಮಾಹಾತ್ಮ್ಯೆ, ಕಕುದ್ಗಿರಿಮಾಹಾತ್ಮ್ಯೆ, ಶ್ರೀ ಪರ್ವತಮಾಹಾತ್ಮ್ಯೆ, ಬಿಳಿಗಿರಿ ರಂಗ[illegible] ಹತ್ತಾರು ಕೃತಿರಚನೆಯಾಗುವುದರ ಮೂಲಕ "ಸ್ಥಳಮಹಾತ್ಮೆಯ" ಸುಗ್ಗಿಕಾಲವೆನಿಸಿತ್ತು. ಒಂದು [illegible] ಮಾಹಾತ್ಮ್ಯೆಗಳು ಹುಟ್ಟಿಕೊಂಡಿರುವುದಕ್ಕೆ ಪ್ರಾಚೀನ ಸಾಹಿತ್ಯದಲ್ಲಿ ಅನೇಕ ನಿದರ್ಶನಗಳಿವೆ. [illegible] ಇದು ಸೋದೆ ಸದಾಶಿವರಾಯರ ಕೃತಿ. ಕಲ್ಯಾಣ ಕ್ರಾಂತಿಯಿಂದ ಚದುರಿಹೋದ ಶರಣರು [illegible] ಯಾವ ಮಾರ್ಗವಾಗಿ ಬಂದರೆಂಬುದನ್ನು ತಿಳಿಸುವ ಈ ಕೃತಿ 'ದಂಡಿನದಾರಿ' ಯನ್ನು ತನ್ನೊಡಲಲ್ಲಿ [illegible] ಐತಿಹಾಸಿಕ ಕಾವ್ಯ. ಅದೇ ರೀತಿ ಹರಿಹರ ಕವಿಯ ಪಂಪಾಶತಕ, ಪಂಪಾಕ್ಷೇತ್ರರಗಳೆ, ಹಿರಿಯೂರು [illegible] ವಿರೂಪಾಕ್ಷಶತಕಗಳಂತೆ ಹಂಪಿಯ ವಿರೂಪಾಕ್ಷನನ್ನು, ಆ ಪರಿಸರದ ಭೌಗೋಳಿಕ [illegible] ಮಹತ್ವದ ಸಂಗತಿಗಳನ್ನು ಬಿಚ್ಚಿಡುವ ಕೃತಿಯೆಂದರೆ ಅಷ್ಟಭಾಷಾ ಕವಿ ಚಂದ್ರಶೇಖರನ 'ಪಂಪಾ[illegible]

ಕ್ರಿ.ಶ ೧೪೩೦ರಲ್ಲಿ ರಚನೆಯಾದ ಈ ಕೃತಿ ಚಂಪೂ ಪ್ರಕಾರದಲ್ಲಿದೆ. ಹೀಗಿದ್ದೂ [illegible] ಪದ್ಯಗಳಿಂದ ೩೪ ಗದ್ಯಗಳಿಂದ ಕೂಡಿದ ಈ ಕೃತಿ ಚಂಪೂ ಖಂಡಕಾವ್ಯ.

ಚಂದ್ರಶೇಖರ ಕವಿಯ ಇತಿವೃತ್ತ : ಪಂಪಾಸ್ಥಾನ ವರ್ಣನಂ ಕೃತಿಯ ಕರ್ತೃ ಚಂದ್ರಶೇಖರನ [illegible] ದೊರೆಯುವುದಿಲ್ಲ. ಆದರೆ ಈತ ವಿಜಯನಗರದ ಪ್ರೌಢದೇವರಾಯನ ಆಸ್ಥಾನದಲ್ಲಿ ಕವಿಯೆಂ[illegible] ಆಂತರಿಕ ಉಲ್ಲೇಖಗಳಿಂದ ತಿಳಿಯಲು ಸಾಧ್ಯವಿದೆ. ಈ ಕವಿಗೆ ಪ್ರೇರಣೆಯೆಂದರೆ ಮಹಾಕವಿ [illegible] ಗಿ[illegible] ಕಲ್ಯಾಣದ ಸಂಧಿ ೮ ಪದ್ಯ ೫೩ರ ಈ ಕೆಳಗಿನ ಪದ್ಯ ನೇರವಾಗಿ ಕೃತಿಯಲ್ಲಿ ಬಳಕೆ[illegible]

ಪೊಗೆದುದು ಪೊತ್ತಿದತ್ತು ಕಿಡಿಯಿಟ್ಟುದು ನಾಲಗೆ ದೋರೆದತ್ತು ಬಾನ್
ಗೊಗೆದುದು ನೀಳ್ದುದೆಣ್ದೆಸೆಗೆ ಹೊಂಬೆಳಗಂ ಹರಡಿತ್ತು ದಂ ಧಗಿಲ್
ಧಗಿಲೆನುತಾರ್ದುದಟ್ಟಿದುದು ಮುಟ್ಟಿತು ಸುಟ್ಟಿತು ತಿಂದು ತೇಗಿದ
ತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣಿರಿ ಪೆಂಪೆಯಾಳ್ದಾನಾ

ಅಂದರೆ ಚಂಪೂ ಕಾವ್ಯ ಪರಂಪರೆಯನ್ನೂ, ಶಂಕರಶತಕ ಎಂಬ ಇನ್ನೊಂದು ಕೃತಿಯನ್ನು [illegible] ಶತಕಪರಂಪರೆಯನ್ನು ಹರಿಹರನಂತೆ ಮುಂದುವರೆಸಿದ ಕವಿ ಚಂದ್ರಶೇಖರ. [illegible]

ವಿಳಾಸ : ಡಾ. ಕೆ. ರವೀಂದ್ರನಾಥ, ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

Scanned with CamScanner

ಗುರು ಗುರುರಾಯ. ಈತನ ಪ್ರೇರಣೆಯಿಂದಲೇ ಶ್ರೀ ವಿರೂಪಾಕ್ಷಸ್ಥಾನ ಅಥವಾ ಪಂಪಾಸ್ಥಾನ [illegible] ಹಾಗೂ 'ಶಂಕರಶತಕ' ಹೆಸರಿನ ಎರಡು ಕೃತಿಗಳನ್ನು ರಚಿಸಿದ್ದೇನೆಂದು ಕವಿ ಹೇಳಿಕೊಂಡಿದ್ದಾನೆ.

ಸೊರಹುತಲಿಂದ್ರ ಚಂದ್ರನಿವನೆಂಬ ನರಸ್ತುತಿಯಲ್ಲಿ ಚಂದ್ರಶೇ
ಖರ ಕವಿರಾಜ। ಭಕ್ತಿಗೆ ವಿರಕ್ತಿಗೆ ಮುಕ್ತಿಗೆ ಬೀಜಮಾಗೆ ಶಂ
ಕರ ಶತಕ ಪ್ರಬಂಧಮನೆ ಪೇಳಿದನೆಂದುಪದೇಶವಿತ್ತಮ
ದ್ದುರು ಗುರುರಾಯ ನಿಚ್ಚವಡೆ ತೀರ್ಚುವೆನಚ್ಚರಿ ಪೆರ್ಚುವಂದದಿಂ॥

ಎಂಬ ಶಂಕರ ಶತಕದ ೬ನೇ ಪದ್ಯದಲ್ಲಿ ಹಾಗೂ

ಆ ಗುರುರಾಯನೆನ್ನನೊಲವಿಂ ನಡೆನೋಡುತೆ ಬಾ ವಚಸ್ಸುಧಾ
ಸಾಗರ ಚಂದ್ರಶೇಖರ ಕವೀಶ್ವರ ನೀಂ ನೆಗಳ್ದಷ್ಟಭಾಷೆಗ
ಳ್ಗಾಗರಮಾದ ಕನ್ನಡದ ಬಿನ್ನಾಣಮಂ ನೆರೆ ತೋರವೇಳ್ವುದಿಂ
ಪಾಗಿರೆ ಹಂಪೆಯಾಳ್ದನೆಸೆವೋಲಗಮಂ ರಚಿಸೆಂದನಳ್ತಿಯಿಂ॥

ಎಂಬ ಪಂಪಾಸ್ಥಾನ ವರ್ಣನಂ ಕೃತಿಯ ಪದ್ಯ ೧೧ ರಿಂದ ತಿಳಿದುಬರುತ್ತದೆ. ಈ ಪ್ರೌಢರಾಯನ [illegible] ಗುರುರಾಯ ಮಂತ್ರಿಯಾಗಿ, ಜ್ಞಾನಿಯಾಗಿ, ದಾನಿಯಾಗಿ, ವಿವಿಧ ಭಾಷಾ ವಿಶೇಷ ವಿಖ್ಯಾತ ಕವಿಕುಲ [illegible] ಭೂಜನಂ ಮಾನಿನೀ ಮಾನಸ ಮಾನಪಹರಣ ಮಾನವಮೀನಾಂಕಮೆನಿಸಿ ನೆಗಳ್ತೆವೆತ್ತ ಗು[illegible] ಮಂತ್ರಿಯೊಪ್ಪುತ್ತಿರ್ಪನಂತಲ್ಲದೆಯು (ಪಂಪಾಸ್ಥಾನ ವರ್ಣನಂ ವಚನ ೮) ಎಂದು ವರ್ಣಿಸಿಕೊಂಡ[illegible] 'ರಾಯಭಂಡಾರಿ ನಾರಾಯಣ' ಎಂಬ ಬಿರುದು ಇತ್ತಂತೆ. ಈ ಗುರುರಾಯ ಯಾರು ಎಂಬುದಕ್ಕೆ ವಿದ್ವಾ[illegible] ಜಿಜ್ಞಾಸೆಗಳಿವೆ. ಡಾ. ಎಸ್. ಶ್ರೀಕಂಠಶಾಸ್ತ್ರಿಗಳು ಕ್ರಿ.ಶ. ೧೪೫೮ರಲ್ಲಿ ರಚನೆಯಾಗಿರುವ ಶಾಸನದಲ್ಲಿ ಗುರು[illegible] ಹೆಸರಿನಿಂದ ಬಾರಕೂರಿನಲ್ಲಿ ಆಳುತ್ತಿದ್ದ ಬಗ್ಗೆ ಉಲ್ಲೇಖವಿದೆ. ಆತನೇ ಚಂದ್ರಶೇಖರ ಕವಿಯ ಕಾವ್ಯಪ್ರೇರಣೆಗೆ ಕಾರಣನಾದ ಗುರುರಾಯನಿರಬಹುದೆಂದು ಊಹಿಸುತ್ತಾರೆ. (Indian Antiquary vol LVII-1928 page 71-[illegible]) ಈ ಕೃತಿಯನ್ನು ಸಂಪಾದಿಸಿದ ವಿದ್ವಾನ್ ಶಿವಮೂರ್ತಿ ಶಾಸ್ತ್ರಿಗಳು ಜಕ್ಕಣಾಚಾರ್ಯನೇ ಗುರುರಾಯನಾಗಿರಬಹುದೆಂದು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯವನ್ನು ನಿರಾಕರಿಸಿದ ವಿದ್ವಾಂಸರಾದ ಸಿ. ಮಹಾದೇವಪ್ಪನವರು [illegible]. ೧೫೨೦ರಲ್ಲಿ ರಚನೆಯಾಯಿತೆನ್ನಲಾದ ವೈಭೋಗ ರಾಜಸ್ಥಾನ ಎಂಬ ಚಂಪೂಕಾವ್ಯ ರಚನೆಗೆ [illegible] ಸಂದರ್ಭವನ್ನು ವಿವರಿಸುತ್ತಾ "ಹಿಂದೆ ಗುರುರಾಯನ ಆಜ್ಞೆಯಿಂದ ಚಂದ್ರಕವಿ ವಿರೂಪಾಕ್ಷಸ್ಥಾನ [illegible] ನೀನೂ ನಾನಾಲಂಕಾರ ಚಿತ್ರಭಾವರಸಗಳಿಂದ ವೈಭೋಗ ರಾಜಸ್ಥಾನವನ್ನು ರಚಿಸಬೇಕೆಂದು" ಎಂಬ ಹೇಳಿಕೆಯಲ್ಲಿ ಗುರುರಾಯ ಎಂಬ ಉಲ್ಲೇಖ ಸ್ಪಷ್ಟವಾದ ಹಿನ್ನೆಲೆಯಲ್ಲಿ ಹಾಗೂ ಪ್ರಭುಗ ಮತ್ತು ಮಲ್ಲಣಾರ್ಯನಂಥ ಕವಿಗಳು ಜಕ್ಕಣಾರ್ಯನೇ ಗುರುರಾಯ ಆಗಿದ್ದರೆ ಅವರು ಉಲ್ಲೇಖಿಸುತ್ತಿದ್ದರು ಎಂದು ಹೇಳಿ ಗುಬ್ಬಿ ಮಲ್ಲಣಾರ್ಯನ ವೀರಶೈವ ಪುರಾಣದಲ್ಲಿ ಗುರುರಾಯನೆಂದು ಕರೆಯದೆ ಭಂಡಾರಿ ಜಕ್ಕಪ್ಪನೆಂದು ಕರೆದಿರುವುದನ್ನು ಉಲ್ಲೇಖಿಸಿ ವಿದ್ವಾನ್ ಬಿ.ಶಿವಮೂರ್ತಿಶಾಸ್ತ್ರಿಗಳ ಅಭಿಪ್ರಾಯವನ್ನು ತಳ್ಳಿಹಾಕುತ್ತಾರೆ. ವೀರಪ್ರತಾಪ ದೇವರಾಯನ [illegible] ೧೪೪೭ರ ಕುಂದಾಪುರದ ಸಮೀಪದ ಕೋಟಿನಾಥ ದೇವಾಲಯದಲ್ಲಿನ ಶಾಸನದ ಉಲ್ಲೇಖ (SII 9 [illegible] 451) ಪ್ರಕಾರ "ದೇವರಾಯ ಮಹಾರಾಯರ ಹೆಸರ ಧರ್ಮವಾಗಿ ಭಂಡಾರದ ಗುರುರಾಯ ಒಡೆಯರು ಶ್ರೀ ಕೋಟಿನಾಥ ದೇವರಿಗೆ ದರುಶನಕೆ ಬಂದಲ್ಲಿ ಮಾಡಿದ ಧರ್ಮದ ವಿವರವೂ ಎಂಬ ಉಲ್ಲೇಖದಿಂದ ಭಂಡಾರದ ಗುರುರಾಯ ಒಡೆಯ ಹಾಗೂ ಗುರುರಾಯ ಮಂತ್ರಿ ಒಬ್ಬನೇ ಎಂದು ತೀರ್ಮಾನಿಸುತ್ತಾರೆ. ಈತ ಭಂಡಾರದ ಸಚಿವನಾಗುವ ಮೊದಲು ಗೋವೆ ಚಂದ್ರಗುತ್ತಿಯನ್ನಾಳುತ್ತಿದ್ದನೆಂಬ ಅಭಿಪ್ರಾಯವನ್ನು ಶೃಂಗೇರಿಯ ೧೪೫೬ರ ಶಾಸನ (MAR 1934 NO 27P 193) ಹಾಗೂ ಶಿಕಾರಿಪುರದ (E C VOI 7 SK 40)ಶಾಸನಗಳಿಂದ ಪ್ರಮಾಣೀಕರಿಸುತ್ತಾರೆ.

ಮುಖ್ಯವಾಗಿ ಈ ಗುರುರಾಯ ಕಾವ್ಯರಚನೆಯಲ್ಲಿಯೂ ತನ್ನನ್ನು ತೊಡಗಿಸಿಕೊಂಡಂತೆ ತೋರುತ್ತದೆ. ಗುರುರಾಜನ ಹೆಸರಿನಲ್ಲಿ "ಷಟ್ಸ್ಥಲ ಜ್ಞಾನ ಚಾರಿತ್ರ" ಎಂಬ ಕೃತಿ ಈತನದೇ ಆಗಿರಬೇಕೆಂದು ವಿಮರ್ಶಿಸುತ್ತಾರೆ.

Scanned with CamScanner

ಆದರೂ ಲಕ್ಕಣ್ಣನಂತೆ, ಜಕ್ಕಪ್ಪನಂತೆ ಇತರೆ ಆ ಪರಿಸರದ ಅಧಿಕಾರಿಗಳಂತೆ ಗುರುರಾಯನ ಉಲ್ಲೇಖ ಕಾವ್ಯೋಕ್ತ ಸ್ಥಾನಗಳು ಇಲ್ಲದಿರುವುದು ಸೋಜಿಗವೇ ಸರಿ.

ಪಂಪಾಸ್ಥಾನವರ್ಣನಂ ಕೃತಿ ವೀರೂಪಾಕ್ಷನ ಓಲಗ, ಪೂಜಾವೈಭವ, ಪಂಪಾಕ್ಷೇತ್ರದ ಸುತ್ತಲಿನ ವಿವರಗಳು, ತುಂಗಭದ್ರಾನದಿಯ ಹಿರಿಮೆ, ದೇವರಾಜೇಂದ್ರನ ಒಡ್ಡೋಲಗ, ವೀರೂಪಾಕ್ಷಸ್ಥಾನದ ಗಾಯಕ, ವಾದಕ, ನರ್ತಕಿಯರ ರಾಗರಮ್ಯಗಳನ್ನು, ವಾದ್ಯವಿಶೇಷಗಳನ್ನು ಕವಿ ಚಂದ್ರಶೇಖರ ವರ್ಣಿಸಿದ್ದಾನೆ. "ಬೆಳದಿಂಗಳ ರಸಸೋನೆಯಂತೆ ಇಂಗಡಲಿನ ಅಮೃತ ರಸಧಾರೆಯಂತೆ, ಮನ್ಮಥನ ಇಕ್ಷುಜಾಪದ ರೋಮಾಂಚಕ ಧ್ವನಿಯಂತೆ ಸಂಗೀತದ ಲಹರಿಗಳು ಹರಿದುಬಂತೆಂದು" ಹೇಳುವಲ್ಲಿ ವಿಜಯನಗರದ ಕಲಾಪ್ರಪಂಚದ ಮೇಲೆ ಈ ಕೃತಿ ಬೆಳಕು ಚಲ್ಲುತ್ತದೆ. ಪಂಪಾ ಕ್ಷೇತ್ರದ ವ್ಯಾಪ್ತಿಯನ್ನು ತಿಳಿಸುವ ಈ ಕೃತಿ "ಸಾರ್ಧಯೋಜನ ವಿಸ್ತಾರದಿಂ ಸಾರ್ಧಯೋಜನಾಯಾಮದಿಂ ಪರಗಿಪ್ಪಡೆದು ಪೂರ್ವ ದಕ್ಷಿಣ ಪಶ್ಚಿಮೋತ್ತರ ದ್ವಾರಂಗಳಲ್ಲಿ ಕಿನ್ನರೇಶ್ವರ, ಜಂಭುಕೇಶ್ವರ, ಸೋಮೇಶ್ವರ ವಾಲಿಭದ್ರೇಶ್ವರೆಂಬುವರೇ ಪರಿವಿಡಿಯಿಂ ದ್ವಾರಪಾಲಕರಾಗಿ ನೆಲೆಸಿರೆ ತನಗಧಿದೇವತೆಯಾಗಿ ಪಂಪಾಭವಾನಿ ಪಾಲಿಸುತಿರ್ಪುದರಿಂ ಪಂಪಾಕ್ಷೇತ್ರವೆಂಬ ಪೆಸರಂ ಪಡೆದು ಆವಡೆಯಲಿ ನೋಳ್ಪಡಂ ಅನೇಕ ಸಿದ್ಧಲಿಂಗಗಳಿಂ ಆನಂತತೀರ್ಥಗಳಿಂ, ಅರಣ್ಯ ಪುಣ್ಯಾಶ್ರಮಗಳಿಂ, ಅಗಾಧ ಕುಂಡಗಳಿಂ ಅಮಲ ಕಮಲಾಕರಣಗಳಿಂ ಅನುಪಮ ಸೋವನಗಳಿಂ ಅತ್ಯಂತ ಪಾವನವಾಗಿರ್ಪುದು" ಎಂದು ಕವಿ ಹೇಳುತ್ತಾನೆ. ಗಂಗೆ, ಯಮುನೆ, ಸರಸ್ವತಿಯರು ಸಂಗಭದ್ರೆಗೆ ಸಾಟಿಯಲ್ಲ! ಇದು ಹಂಪೆಗೆ ಅಲಂಕಾರವಾದುದು. ಇದರ ದಕ್ಷಿಣ ದಿಕ್ಕಿಗೆ ಮೋಕ್ಷದ ಏಳ್ಗೆಯಂತಿರುವ ಮಾಲ್ಯವಂತ, ಮತಂಗ, ಹೇಮಕೂಟ ಶಿಖರತ್ರಯಗಳು ನಿಂತಿವೆಯಂತೆ. ಅದೇ ರೀತಿ ವಿವಿಧ ಪಾವನತೀರ್ಥಗಳು ವಾಲ್ಯವಂತ ಬೆಟ್ಟದಲ್ಲಿವೆಯಂತೆ. ಋಣಮೋಚನ ಯಕ್ಷಮುಖಾಗಣಿತವಾದ ಮಹಾತೀರ್ಥರಿಂದ ಮಾಲ್ಯವಂತ ಶೋಭಿಸುತ್ತದೆ. ಹೇಮವರ್ಣದಿಂದ ಮೆರೆಯುವ ಹೇಮಕೂಟ ಪರ್ವತ ಮೆರೆಯುತ್ತಿದೆ. ಕುಸುರಿ ಕೆಲಸಗಳಿಂದ ಮಿನಿವ ಮಣಿಗಳಿಂದೊಪ್ಪುವ ಸೂಳೆಗೇರಿ ಓಲಗದಲ್ಲಿ "ವೇಳೆಯರಿತು ಕರವೆತ್ತಿ ಕರೆವ ಸೂಳಾಯತದವರ ಸೇಳಿಸುತ್ತಿತ್ತಂತೆ" ಪೊಸಮಿಂಡರ್ ನಡೆನೋಡೆ ಕಣ್ಬೆಗೆವ ಮತ್ತಂ ಮೇಳದಿಂ ಮಾತನಾಡಿಸೆ..... ಏರು ಸದ, ಮೀರುವ ಲಾವಣ್ಯದ, ತೋರು ವಿಲಾಸದ, ಮೊಲೆಯ ಪೊಗರೇರುವ ಗೆಳತಿಯರನ್ನು ಮುಟ್ಟಲು ಸಿದರೆ, ಮುಟ್ಟಿದಡೆ ಮೈದೆಗೆವ, ನುಡಿಸಿದೊಡೆ ನಾಚುವ ಕಿರುವೆಂಡಿರ ತಂಡ ಇತ್ತಂತೆ. ಪಂಪಾಕ್ಷೇತ್ರದಲ್ಲಿ ನ ಯುವ ಶಿವರಾತ್ರಿ ಮುಂತಾದ ಹಬ್ಬಗಳ ವರ್ಣನೆಯನ್ನು ಕವಿ ಮಾಡಿದ್ದಾನೆ.

ಒಟ್ಟಿನಲ್ಲಿ ಪಂಪಾಕ್ಷೇತ್ರದ ಭೌಗೋಳಿಕ ಸ್ವರೂಪವನ್ನು ತಿಳಿದುಕೊಳ್ಳಲು ಈ ಕೃತಿ ಪ್ರಮುಖ ಆಕರವಾಗಿದೆ. ಪಿ. ತೀರ್ಥರಂಥ ಆಧುನಿಕ ವಿದ್ವಾಂಸರ 'ಪಂಪಾಮಾಹಾತ್ಮ್ಯ' ಕೃತಿಗೆ ಚಂದ್ರಶೇಖರ ಕವಿಯ ಈ ಕೃತಿ ವಾಗಿರಬೇಕು. ವಿಶೇಷವಾಗಿ ಹರಿಹರನ ಪಂಪಾಶತಕ, ಅನುಪಲಬ್ಧ ಕೃತಿಯಾದ ೧೬೫೦ರ ಹಿರಿಯೂರು ಕವಿಯ ವಿರೂಪಾಕ್ಷಶತಕ ಕೃತಿಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡುವುದರಿಂದ ಪಂಪಾಕ್ಷೇತ್ರದ ಣಿಕ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ನಿರೂಪಿಸಬಹುದಾಗಿದೆ. ಈ ಕೃತಿಯನ್ನು ೧೯೫೫ ರಲ್ಲಿ ಶರಣಸಾಹಿತ್ಯ ೇ ಗ್ರಂಥ ಮಾಲೆಯಾಗಿ ವಿದ್ವಾನ್ ಬಿ.ಶಿವಮೂರ್ತಿಶಾಸ್ತ್ರಿಗಳು ಸಂಪಾದಿಸಿ ಪ್ರಕಟಿಸಿದ್ದಾರೆ.

◆◆

Scanned with CamScanner

ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೩೩

ಲೇಖನ ಸಾಹಿತ್ಯ : ಭಾಗ-೧



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

Scanned with CamScanner

COMPLETE WORK OF DR. M.M.KALBURGI
VOLUME - 33 : LEKHANA SAHITY : BHAGA-1
Edited by : Dr. K. Ravindranatha, Hampi

Published by : Dr. P.G. Halakatti Research Centre
B.L.D.E. Association, Vijayapur, Karnatak

©

First Edition : 2020
Pages : xxxxiii + 429=472

Copies: 1000
Price Rs:250/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೩೩–ಲೇಖನ ಸಾಹಿತ್ಯ : ಭಾಗ–೧

ಸಂಪಾದಕರು : ಡಾ. ಕೆ. ರವೀಂದ್ರನಾಥ, ಹಂಪಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ

ಪ್ರಥಮ ಮುದ್ರಣ: ೨೦೨೦
ಪುಟಗಳು: xxxxiii + ೪೨೯=೪೭೨

ಪ್ರತಿಗಳು: ೧೦೦೦
ಬೆಲೆ ರೂ: ೨೫೦/–

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: ಪ್ರಿಂಟ್ ಪಾಯಿಂಟ್, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನ್ : ೯೭೩೯೦ ೬೭೩೫೯

Scanned with CamScanner

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ–೩೩ : ಲೇಖನ ಸಾಹಿತ್ಯ : ಭಾಗ–೧

❖

- ಶಾಸನ ಸಾಹಿತ್ಯ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಕೆ. ರವೀಂದ್ರನಾಥ

ಹಂಪಿ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೨೦

Scanned with CamScanner

*

ಪರಿವಿಡಿ

೧.	ಹಲ್ಮಿಡಿ ಶಾಸನದ ಪ್ರೇಮಾಲಯಸುತನ್	೧
೨.	ಕಪ್ಪೆ ಅರಭಟ್ಟನ್	೫
೩.	ಗೋಸಾಸ	೭
೪.	ಓವನಿಗೆ	೧೪
೫.	ಕವಿರಾಜಮಾರ್ಗ ವರೆಗಿನ ಶಾಸನಸಾಹಿತ್ಯ	೧೬
೬	ಶಾಸನಗಳಲ್ಲಿ ಆದಿಗುಣವರ್ಮನ ಪದ್ಯ	೨೯
೭	ಶಾಸನದಲ್ಲಿ ಆದಿಪುರಾಣದ ಪದ್ಯ	೩೨
೮.	ಶಾಸನದಲ್ಲಿ ಮದನತಿಲಕದ ಪದ್ಯ	೩೪
೯.	ಕರೀಂನಗರ ಶಾಸನದಲ್ಲಿ ಪಂಪಭಾರತದ ಪದ್ಯಗಳು	೩೬
೧೦.	ಶಾಸನಗಳಲ್ಲಿ ಸೂಕ್ತಿಸುಧಾರ್ಣವ ಪದ್ಯಗಳು	೪೪
೧೧.	ಅರ್ಜುನವಾಡ ಶಾಸನದ ತ್ರುಟಿತಪದ್ಯ	೪೭
೧೨.	ಗಂಗಾಧರಂ ಶಾಸನ : ಒಂದು ತಿದ್ದುಪಡಿ	೫೦
೧೩.	ಗಂಗಾಧರಂ ಶಾಸನ : ಒಂದು ಉತ್ತರ	೫೩
೧೪.	ಗಂಗಾಧರಂ ಶಾಸನ : ಕೆಲವು ಹೊಸ ವಿಚಾರಗಳು	೫೫
೧೫.	ಅಬ್ಬಣಬ್ಬೆ : ಮಗಳಲ್ಲ – ಮೊಮ್ಮಗಳು	೬೧
೧೬.	ಪಂಪನ ಅಗ್ರಹಾರ – ರನ್ನನ ಬತ್ತಗಾವೆ	೬೩
೧೭.	ಶ್ರವಣಬೆಳ್ಗೊಳ ಶಾಸನದ ಮೇಲೆ ರನ್ನನ ಪ್ರಭಾವ	೬೯
೧೮.	ಕಿಳ್ಗುಂಟೆ–ವೇಳೆವಾಳಿ–ಲೆಂಕವಾಳಿ–ಗರುಡ	೭೨
೧೯.	ಕೊಂಡಗುಳಿ ಕೇಶಿರಾಜನ ಒಂದು ಶಾಸನ	೭೫
೨೦.	ಕೊಂಡಗುಳಿ ಕೇಶಿರಾಜನ ಇನ್ನೊಂದು ಶಾಸನ	೮೨
೨೧.	ನೆಲುವಿಗೆಯ ಶಾಂತಯ್ಯನ ಒಂದು ಶಾಸನ	೮೭
೨೨.	ಶಾಸನಗಳಲ್ಲಿ ಶಿವಶರಣರು	೯೦
೨೩.	ಶಿಲ್ಪಗಳಲ್ಲಿ ಶಿವಶರಣರು	೧೦೦

Scanned with CamScanner

೨೪. ಶರಣರನ್ನು ಕುರಿತು ಒಂದು ಶಾಸನ ೧೦೫
೨೫. ಶರಣರನ್ನು ಕುರಿತು ಇನ್ನಷ್ಟು ಶಾಸನಗಳು ೧೧೨
೨೬ ಬಸವಣ್ಣನವರ ವಿಗ್ರಹ ೧೧೬
೨೭ ವಾಟಿಯಾವು ೧೧೮
೨೮. ಅಂ+ಗಜೇಶ್ವರ ಮಸಣಯ್ಯ ೧೨೩
೨೯. ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳು ೧೨೫
೩೦. ಉಳಿಯು(=ಪುಳಿಯು)ಮೇಶ್ವರ ಚಿಕ್ಕಯ್ಯನ ಶಾಸನ ೧೨೭
೩೧. ಗುಂಡಬ್ರಹ್ಮಯ್ಯಗಳ ವಿಗ್ರಹ ೧೩೪
೩೨. ಚಿತ್ರದುರ್ಗದಲ್ಲಿಯ ಗುಂಡಬ್ರಹ್ಮಯ್ಯಗಳ ವಿಗ್ರಹ ೧೩೬
೩೩. ಶ್ರೀಶೈಲದಲ್ಲಿ ಶರಣರ ಶಿಲ್ಪಗಳು ೧೩೮
೩೪. ಅತ್ತಿಮಬ್ಬೆಯ ಬಗ್ಗೆ ಇನ್ನಷ್ಟು ಸಂಗತಿಗಳು ೧೪೧
೩೫. ಅಹವಮಲ್ಲನುಪ್ಪಳನುಂ ೧೪೫
೩೬ ಕವಡೆಯ ಬೊಪ್ಪ ೧೪೭
೩೭ ಪುಲಿಗೆರೆಯ ಒಂದು ವೀರಶೈವ ಪೀಠಪರಂಪರೆ ೧೪೯
೩೮. ಬಾಬಾನಗರದಲ್ಲಿ ನಾಗಚಂದ್ರ ಕಟ್ಟಿಸಿದ ಬಸದಿ ೧೫೪
೩೯. ವಿಜಾಪುರದಲ್ಲಿ ನಾಗಚಂದ್ರನ ಮಲ್ಲಿನಾಥನ ಬಸದಿ ೧೫೫
೪೦. ಚಿತ್ರದುರ್ಗದ ಪ್ರಾಚೀನ ಹೆಸರು ೧೫೯
೪೧. ಆಗ್ಗಳನನ್ನು ಕುರಿತು ೧೬೩
೪೨. ಶಾಸನೋಕ್ತ ಕೆಲವು ಪದಗಳು ೧೬೬
೪೩. ರಾಜಧಾನಿ : ಒಂದು ಸ್ಪಷ್ಟನೆ ೧೭೦
೪೪. ಶಾಸನದಲ್ಲಿ ಭಾಮಿನಿ ೧೭೪
೪೫. ಶಾಸನ ಕವಿಗಳು ೧೭೭
೪೬ ಶಾಸನ ಲಿಪಿಕಾರರು ೧೮೪
೪೭ ಶಾಸನ ರೂವಾರಿಗಳು ೧೯೩
೪೮. ಶಾಸನಸಾಹಿತ್ಯ ೧೯೪
೪೯. ಶಾಸನ ಛಂದಸ್ಸು ೨೩೭
೫೦. ಶಾಸನ ಭಾಷೆ ೨೪೪
೫೧. ಶಾಸನ ಪರಿಭಾಷೆ ೨೪೭
೫೨. ಶಾಸನ ಲಿಪಿ ೨೬೮

೫೩. ಶಾಸನಾಧ್ಯಯನದ ಇತಿಹಾಸ
೫೪. ಕಾವ್ಯದಲ್ಲಿ ಬಾಚರಸನ ವಚನ–ಶಾಸನದಲ್ಲಿ ಸಿದ್ಧರಾಮನ ವಚನ
೫೫. ಅತ್ತಿಮಬ್ಬೆಯ ಶಾಸನ ಮತ್ತು ಬುಕ್ಕರಾಯನ ಶಾಸನ
೫೬ ಅಣ್ಣಿಗೆರೆಶಾಸನೋಕ್ತ ವೀರಗೊಗ್ಗಿದೇವ
೫೭ ವಿಜ್ಞಾನೇಶ್ವರನ ಮರ್ತೂರು ಶಾಸನ : ಮೂರು ಸಂದೇಶಗಳು
೫೮. ಚೌಡದಾನಪುರ ಶಾಸನಗಳು : ಇನ್ನಷ್ಟು ವಿವರಣೆ
೫೯. ಬಸವನ ಬಾಗೇವಾಡಿಯ ಕಳೆದು ಹೋದ ಶಾಸನ
೬೦. ಚಾಗದ ಕಂಬ–ಬೀರದ ಶಾಸನ
೬೧. ಶಾಸನಗಳಲ್ಲಿ ಬಸವಪೂರ್ವ–ಬಸವೋತ್ತರ ಕಾಲದ ಶೈವ ಸ್ವರೂಪ
೬೨. ಶಾಸನೋಕ್ತ ಶೈವ ಪ್ರಶಸ್ತಿ ಪಠ್ಯಗಳು
೬೩. ಶಾಸನೋಕ್ತ ಶೈವರ ವ್ಯಾಸಂಗ: ಸಿದ್ಧಾಂತ ಮತ್ತು ಪಠ್ಯ
೬೪. ಕೊಲ್ಲಿಪಾಕೆಯ ಕನ್ನಡ ಶಾಸನಗಳು : ಧಾರ್ಮಿಕತೆ
೬೫. ಶಾಸನಗಳಲ್ಲಿ ಬಾದುಬ್ಬೆ : ಇನ್ನಷ್ಟು ವಿಚಾರಗಳು
೬೬ ಶಾಸನ ಬರವಣಿಗೆ : ತರತಮ ಧೋರಣೆ
೬೭ ನಿಂಬಣ ದಂಡನಾಥ : ಇನ್ನಷ್ಟು ಶಾಸನಗಳು
೬೮. ಶಾಸನಗಳಿಂದ ಬಸವಣ್ಣನ ಬಗ್ಗೆ ಇನ್ನಷ್ಟು ಸಂಗತಿಗಳು
೬೯. ಮೊಲ್ಲೆ ಬೊಮ್ಮಯ್ಯಗಳ ಕಾವ್ಯ ಮತ್ತು ಶಾಸನಗಳು
೭೦. ಕೃಷ್ಣದೇವರಾಯನ ಹಂಪಿಶಾಸನಗಳು
೭೧. ಅಮೃತ ಮಥನಪುರಾಣ : ಶಾಸನೋಕ್ತ ಷಟ್ಪದಿ ಕಾವ್ಯ
೭೨. ಶಾಸನಗಳಲ್ಲಿ ಇನ್ನಷ್ಟು ಅಂಶವೃತ್ತ–ಮಾತ್ರಾವೃತ್ತಗಳು
೭೩. ಉರಿಯ ಉಯ್ಯಲೆ
೭೪. ಶಂಕರಗಂಡ
೭೫. ಶಂಕರಗಂಡ ಇನ್ನಷ್ಟು ಸಂಗತಿಗಳು
೭೬ ಪಂಚಮಠ
೭೭ ಅಸಂಖ್ಯಾತರು – ಗಣಮಠ
೭೮. ಚೌರಂಗಿಮಠ>ಸಾರಂಗಮಠ
೭೯. ಚಾಲುಕ್ಯರು ಇನ್ನಷ್ಟು ಚರ್ಚೆ

■■

Scanned with CamScanner

ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೩೪

ಲೇಖನ ಸಾಹಿತ್ಯ : ಭಾಗ-೨



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩.

Scanned with CamScanner

COMPLETE WORK OF DR. M.M.KALBURGI
VOLUME - 34 : LEKHANA SAHITY : BHAGA-2
Edited by : Dr. K. Ravindaranatha, Hampi

Published by : Dr. P.G. Halakatti Research Centre
B.L.D.E. Association, Vijayapur, Karnatak
©
First Edition : 2020
Pages : xlii + 538 = 580

Copies: 1000
Price Rs: 270/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೩೪–ಲೇಖನ ಸಾಹಿತ್ಯ: ಭಾಗ–೨

ಸಂಪಾದಕರು : ಡಾ. ಕೆ. ರವೀಂದ್ರನಾಥ, ಹಂಪಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೨೦
ಪುಟಗಳು: xlii + ೫೩೮ = ೫೮೦

ಪ್ರತಿಗಳು: ೧೦೦೦
ಬೆಲೆ ರೂ: ೨೭೦/–

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: ಪ್ರಿಂಟ್ ಪಾಯಿಂಟ್, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನ್ : ೯೭೩೯೦ ೬೭೩೫೯

Scanned with CamScanner

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ–೩೪ : ಲೇಖನ ಸಾಹಿತ್ಯ : ಭಾಗ–೨

❖

• ಶಾಸ್ತ್ರ ಸಾಹಿತ್ಯ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಕೆ. ರವೀಂದ್ರನಾಥ

ಹಂಪಿ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೨೦

Scanned with CamScanner

*

ಪರಿವಿಡಿ

೧.	ನೃಪತುಂಗಾಭ್ಯುದಯ	೧
೨.	ಧವಲ–ಜಯಧವಲ–ಮಹಾಧವಲ	೩
೩.	ಪಂಪನ ಧರ್ಮಪುರ : ಕ್ಷೇತ್ರಕಾರ್ಯ	೧೦
೪.	ಪಂಪಭಾರತದ ಮಂಗಲ ಪದ್ಯ	೧೬
೫.	ಪೊನ್ನನ ಭುವನೈಕ ರಾಮಾಭ್ಯುದಯ : ಅಲಂಕಾರಶಾಸ್ತ್ರ?	೨೦
೬.	ಗದಾಯುದ್ಧದ ಒಂದು ಪದ್ಯ	೨೨
೭	ರನ್ನನ ಒಂದು ಪದ್ಯದ ಅರ್ಥಸಮಸ್ಯೆ	೨೫
೮.	ಶಾಸ್ತ್ರಕಾವ್ಯ–ಶ್ಲೇಷಕಾವ್ಯ–ಸಮಸ್ತಕಾವ್ಯ	೨೮
೯.	ವಾಙ್ಮಯ–ಕಾವ್ಯ–ಸಾಹಿತ್ಯ	೩೪
೧೦.	ಉಪೇಕ್ಷಿತ ಪ್ರಾಚೀನ ಕನ್ನಡಸಾಹಿತ್ಯ	೩೯
೧೧.	ರನ್ನನಿಘಂಟು	೪೪
೧೨.	ಮಾನಸೋಲ್ಲಾಸದಲ್ಲಿ ಕನ್ನಡ ಪದ್ಯಗಳು	೫೫
೧೩.	ಪಾಂಡುರಂಗವಿಠ್ಠಲ–ಪುರಂದರವಿಠ್ಠಲ	೬೦
೧೪.	ಮಹಾಪುರಾಣ : ಶಾಂತಿರಾಜ ಶಾಸ್ತ್ರಿಗಳ ಆವೃತ್ತಿ	೬೩
೧೫.	ಶಬರಶಂಕರ ವಿಳಾಸ ಸಂಗ್ರಹ	೬೭
೧೬.	ಚಂಪೂ–ಪ್ರಬಂಧ–ಪ್ರಸಂಗ	೭೦
೧೭.	ಶಿವಮಾರಮತ–ನೃಪತುಂಗದೇವಮತ–ರಟ್ಟಮತ	೭೩
೧೮.	ಶಬ್ದಮಣಿದರ್ಪಣ : ಅರ್ಥವೃತ್ತಿ ಮತ್ತು ಅನ್ವಯವೃತ್ತಿ	೭೬
೧೯.	ಶಬ್ದಮಣಿದರ್ಪಣದ ಸಮುಚ್ಚಯಗಳು	೮೩
೨೦.	ಶಬ್ದಮಣಿ ದರ್ಪಣದ ತದ್ಧಿತ ಪ್ರಕರಣ	೯೦
೨೧.	ದರ್ಪಣಾವಲೋಕನ – ೧	೯೩
೨೨.	ದರ್ಪಣಾವಲೋಕನ – ೨	೧೧೯

Scanned with CamScanner

೨೩. ಕ್ಷಳಸೂತ್ರ ೧೩೨
೨೪. ಕನ್ನಡ ಹಸ್ತಪ್ರತಿಸೂಚಿಗಳು ೧೪೫
೨೫. ಪ್ರಭುಗೀತೆಯ ಹಸ್ತಪ್ರತಿ ೧೫೫
೨೬ ಹಸ್ತಪ್ರತಿಶಾಸ್ತ್ರ : ಅದರ ವಿವಿಧ ಮುಖಗಳು ೧೫೭
೨೭ ಹಸ್ತಪ್ರತಿ ಕ್ಷೇತ್ರಕಾರ್ಯ : ವಿಧಾನ–ಸಾಧನೆ ೧೬೭
೨೮. ಇಂಗ್ಲೆಂಡಿನಲ್ಲಿ ಕನ್ನಡ ಹಸ್ತಪ್ರತಿಗಳು ೧೭೬
೨೯. ಕನ್ನಡ ಅಧ್ಯಯನಪೀಠದ ಹಸ್ತಪ್ರತಿಭಂಡಾರ ೧೮೩
೩೦. ವಚನಸಾಹಿತ್ಯ : ಸಂಪಾದನೆಯ ವಿಧಾನ–ಇತಿಹಾಸ ೨೦೨
೩೧. ವಚನಪರಿಷ್ಕರಣ ೨೦೮
೩೨. ವಚನಪರಿಷ್ಕರಣ : ಈವರೆಗಿನ ಎರಡು ತಪ್ಪು ವಿಧಾನಗಳು ೨೧೩
೩೩. ಕೆಲವು ವಚನಕಾರರು–ವಚನ ಮುದ್ರಿಕೆಗಳು ೨೧೮
೩೪. ಪರಿಷ್ಕರಣ–ಪರಿಷ್ಕರಣದ ಪರಿಷ್ಕರಣ ೨೨೧
೩೫. ಕನ್ನಡದಲ್ಲಿ ಗ್ರಂಥಸಂಪಾದನೆಯ ಸಾಧನೆ ೨೨೯
೩೬ ಶಾಸನ ಪಾಠಪರಿಷ್ಕರಣ ೨೩೯
೩೭ ಪ್ರಾಚೀನ ಕನ್ನಡದ ಒಂದು ಉಚ್ಚಾರ ೨೪೨
೩೮. ಕನ್ನಡ ಉಚ್ಚಾರ ಪದ್ಧತಿ ಮತ್ತು ಸಂಸ್ಕೃತ ಪ್ರಭಾವ ೨೪೫
೩೯. ವಚನಕಾರರು : ಭಾಷೆ, ಕನ್ನಡಭಾಷೆ ಮತ್ತು ವಚನಭಾಷೆ ೨೫೨
೪೦. ಮಾತೃಭಾಷೆ : ಮರುವ್ಯಾಖ್ಯಾನ ೨೬೬
೪೧. ಕನ್ನಡಿಗರ ಮಾತೃಭಾಷಾ ಪ್ರಜ್ಞೆಯ ಇತಿಹಾಸ ೨೭೪
೪೨. ಆಡಳಿತದಲ್ಲಿ ಅನುವಾದಿತ ಭಾಷೆ–ಪ್ರಾದೇಶಿಕ ಭಾಷೆ ೨೮೦
೪೩. ಪ್ರದರ್ಶನ–ಸಂದರ್ಭ–ಪ್ರಯೋಗ ೨೮೩
೪೪. ಯಾದಸ್ತು ಘಟ್ಟದ ಕೆಳಗಿನ ಭಾಷೆಗಳು ೨೮೬
೪೫. ಸಂಶೋಧನೆಯ ಸ್ವರೂಪ ೨೯೧
೪೬ ಸಂಶೋಧನೆಯಲ್ಲಿ ದೇಸೀವಾದ ೨೯೪
೪೭ ಸೂಳ್ನುಡಿ ಎಂದರೇನು? ೨೯೬
೪೮. ಅಡ್ಡಹೆಸರು ೩೦೨
೪೯. ಪುಣೆ : ಸ್ಥಳನಾಮ ವಿವೇಚನೆ ೩೦೬
೫೦. ಬನವಾಸಿ : ಸ್ಥಳನಾಮ ವಿವೇಚನೆ ೩೦೯
೫೧. ಧಾರವಾಡ : ಗ್ರಾಮನಾಮ ವಿವೇಚನೆ

೫೨. ಕುಂತಳ–ಕರ್ನಾಟಕ : ನಿಷ್ಪತ್ತಿ
೫೩. ಕುಂತಳದ ಮೂಲ ರೂಪ ಕುಂತಳಹಳ್ಳಿಯೇ?
೫೪. ವೀರಶೈವ ವರ್ತಕ ವರ್ಗದ ಅಡ್ಡಹೆಸರುಗಳು
೫೫. ಕೆಲವು ಪ್ರಾಚೀನ ವ್ಯಕ್ತಿನಾಮ–ಗ್ರಾಮನಾಮಗಳು
೫೬ ಊರ ಹೆಸರುಗಳ ಕೊನೆಯ–ವರ, ವಾರ
೫೭ ಹರಿಹರ ಹೆಸರಿನ ನಿಜರೂಪ
೫೮. ಹರಿಹರದೇವನ ಹೆಸರು : ಮರುಸಮರ್ಥನೆ
೫೯. ಅರಿಕೇಸರಿ ಹೆಸರಿನ ನಿಜರೂಪ
೬೦. ಪ್ರೌಢದೇವರಾಯ : ಹೆಸರಿನ ನಿಜರೂಪ
೬೧. ಬಸವಣ್ಣನವರ ಅಡ್ಡಹೆಸರು
೬೨. ಸ್ತ್ರೀನಾಮಗಳ ಕೊನೆಯಲ್ಲಿ ಕಂಡುಬರುವ 'ಬಾಯಿ'
೬೩. –ಕೇಸಿ,–ಕೇರಿ
೬೪. –ಕೆ–ಗೆ,–ಕಿ–ಗಿ
೬೫. ವಿರೂಪಾಕ್ಷ
೬೬ ಹುಕ್ಕಬುಕ್ಕ
೬೭ ಕುಮಾರರಾಮ
೬೮. ಕೊಂಡೆಯ ಮಂಚಣ್ಣ
೬೯. ಪಟ್ಟಣಶೆಟ್ಟಿ
೭೦. ಪಂಚಮಸಾಲಿ : ಹಾಗೆಂದರೇನು?
೭೧. ಮಿಂಡಗುದ್ದಲಿ–ಮೆಂಡೆಗಾರ–ಮಟಗೊಡ್ಲಿ
೭೨. ಕಮ್ಮೆ ಬ್ರಾಹ್ಮಣರು
೭೩. ಹುಡುಗ–ಹುಡುಗಿ
೭೪. ವಾಕ್ಪಲ್ಲವಿ
೭೫. ಮೇಣಬಸದಿ
೭೬ ಮಲ್ಲೇಶ=ಅದ್ರೀಶ>ಅದೃಶ್ಯ
೭೭ ಭೈರವ, ಜುಂಜಪ್ಪ ಮತ್ತು ಮೈಲಾರ
೭೮. ಮುದಿಮಲ್ಲಯ್ಯ–ಮುದಿವೀರಣ್ಣ–ಮುದಿಸಂಗಯ್ಯ
೭೯. ಹನ್ನಿಬ್ಬರು–ಬೋಳುಕರು
೮೦. ತೊಲಗದ ಕಂಬ–ಬಾವನ್ನವೀರ

Scanned with CamScanner